1936

for Quality Snuff
H. Rama Rao and Sons.
High Class Snuff Manufacturers
RAMA SNUFF
The charm of Snuff Users

SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in the
THE BOMBAY LIFE
Kochikar Brothers,

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ।
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವು ಸುಡುತ ಬರುತಿರುವ ॥
ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೦. ಮಂಗಳೂರು ತಾ. ೩ನೇ ಶುಕ್ರವಾರ ಜನವರಿ ೧೯೩೬. (3–1–'36) ಸಂಚಿಕೆ ೧

ಕೊಂಗ್ರೆಸ್ಸಿನ ಪ್ರಥಮ ಅಧಿವೇಶನ, 1885 ಮುಂಬಯಿ.

ಅಧ್ಯಕ್ಷರು: ಉಮೇಶ ಚಂದ್ರ ಬೆನರ್ಜೀ.



ಕೊಂಗ್ರೆಸ್ಸಿನ ಪ್ರಥಮ ಅಧಿವೇಶನದ ಸಮಯ ತೆಗೆದ ಭಾವಚಿತ್ರ. ಈ ಪ್ರಥಮ ಅಧಿವೇಶನವು ಬೊಂಬಾಯಿ ನಗರದಲ್ಲಿ ಜರಗಿತು. ಬರೇ ೭೨ ಪ್ರತಿನಿಧಿಗಳಿದ್ದರು. ಕ್ರಮಶಃ ಪ್ರತಿನಿಧಿಗಳ ಈ ಸಂಖ್ಯೆ ವೃದ್ಧಿಹೊಂದುತ್ತ ಇವತ್ತಿಗೆ ಅಸಂಖ್ಯಾತ ಪ್ರತಿನಿಧಿಗಳಿಂದ ಕೂಡಿದ ಎಲ್ಲಾ ಭಾರತೀಯರ ಪ್ರೀತಿಗೆ ಮತ್ತು ಪ್ರೋತ್ಸಾಹಕ್ಕೆ ಪಾತ್ರವಾದ ಒಂದು ಮಹಾರಾಷ್ಟ್ರೀಯ ಸಂಸ್ಥೆಯಾಗಿ ಮಹಾತ್ಮಾ ಗಾಂಧಿಯವರ ಸತ್ಯ ಅಹಿಂಸೆವೆಂಬ ಪವಿತ್ರ ತತ್ವಗಳನ್ನನುಸರಿಸಿ, ಸತ್ಯಾಗ್ರಹವೆಂಬ ಶಾಂತಿಮಯ ಶಸ್ತ್ರದಿಂದ ಸ್ವರಾಜ್ಯವನ್ನು ಸಾಧಿಸಲು, ಭಾರತೀಯರಲ್ಲಿ ಐಕ್ಯವನ್ನುಂಟುಮಾಡಲು ಸಾಹಸಪಡುತ್ತಿದೆ. ಇದಕ್ಕೆ ಜಯವಾಗಲಿ.

Registered No. M. 498

for Quality Snuff
H. Rama Rao and Sons.
High Class Snuff Manufacturers
Mangalore
Ask for –
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

LIFE ASSURANCE
IS
NO EXPENSE
BUT
AN INVESTMENT
Safeguard yourself & your family TODAY
Buy a policy in
THE BOMBAY LIFE
Kochikar Brothers

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾಃ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಪಡೆತು ಕೃತಾರ್ಥರ ತೆರದಿ ಕುಳಿತರೆ । ತೆರಳಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೦. ಮಂಗಳೂರು ತಾ. ೩ನೇ ಶುಕ್ರವಾರ ಜನವರಿ ೧೯೩೬ (3–1–'36) ಸಂಚಿಕೆ ೧

ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ, 1885 ಮುಂಬಯಿ.

ಅಧ್ಯಕ್ಷರು: ಉಮೇಶ ಚಂದ್ರ ಬೆನರ್ಜಿ.

ಕಾಂಗ್ರೆಸ್ಸಿನ ಪ್ರಥಮ ಅಧಿವೇಶನದ ಸಮಯ ತೆಗೆದ ಭಾವಚಿತ್ರ. ಈ ಪ್ರಥಮ ಅಧಿವೇಶನವು ಮುಂಬಯಿ ನಗರದಲ್ಲಿ ಜರಗಿತು. ಬರೇ ೭೨ ಪ್ರತಿನಿಧಿಗಳಿದ್ದರು. ಕ್ರಮಶಃ ಪ್ರತಿನಿಧಿಗಳ ಈ ಸಂಖ್ಯೆ ವೃದ್ಧಿಹೊಂದುತ್ತ ಇವತ್ತಿಗೆ ಅಸಂಖ್ಯಾತ ಪ್ರತಿನಿಧಿಗಳಿಂದ ಕೂಡಿದ ಎಲ್ಲಾ ಭಾರತೀಯರ ಪ್ರೀತಿಗೆ ಮತ್ತು ಪ್ರೋತ್ಸಾಹಕ್ಕೆ ಪಾತ್ರವಾದ ಒಂದು ಮಹಾರಾಷ್ಟ್ರೀಯ ಸಂಸ್ಥೆಯಾಗಿ ಮಹಾತ್ಮಾ ಗಾಂಧಿಯವರ ಸತ್ಯ ಅಹಿಂಸೆವೆಂಬ ಪವಿತ್ರ ತತ್ವಗಳನ್ನನುಸರಿಸಿ, ಸತ್ಯಾಗ್ರಹವೆಂಬ ಶಾಂತಮಯ ಚಳವಳಿಯಿಂದ ಸ್ವರಾಜ್ಯವನ್ನು ಸಾಧಿಸಲು, ಭಾರತೀಯರಲ್ಲಿ ಐಕ್ಯವನ್ನುಂಟುಮಾಡಲು ಸಾಹಸಪಡುತ್ತಿದೆ. ಇದಕ್ಕೆ ಜಯವಾಗಲಿ.

ನೋಟುಗಳು.

NOTE . .S.

ಒಂದೊಂದು ಏಟಿಗೆ ಒಂದೊಂದು ಸಲ ಬೈದು ಗರ್ಜಿಸುತ್ತಿದ್ದ ಒಬ್ಬ ಗಂಡ ಪೆಟ್ಟೆಲ್ಲಾ ಬಿದ್ದುದು ಅವನಿಗೆ, ಮನೆ ಹೊರಗೆ ನಿಂತು ಗರ್ಜನೆ ಕೇಳಿದವರು ಎಣಿಸಿದ್ದು ಮಾತ್ರ, ಅವನ 'ಪಾಪದ ಹೆಂಡತಿ'ಗೆಂದು!

× × × × ×

ಹೊರಗಿದ್ದವರು, ಕಸಬರಿಕೆಯ ಹೊಡತದ ಸದ್ದು ಕೇಳಿದರು, ಅದರೊಡನೆ ಕ್ರೋಧದಿಂದ ಆರ್ಭಟಿಸಿ ಬೈದ ಗಂಡನ ಸ್ವರ ಕೇಳಿದರು,— ಅಷ್ಟು ಸಹಿಸುತ್ತಿದ್ದ ಹೆಂಡತಿಯನ್ನು ಕುರಿತು ಸಂತಾಪ, ಸಹತಾಪ, ಪರಿತಾಪ, ಅನುತಾಪ, ಇತ್ಯಾದಿ ಸೂಚಿಸಿದರು.

\+ \+ \+ \+

ಒಬ್ಬ ತುಂಟನೇನೊ ಹೀಗೆ ಒಮ್ಮೆ ಕಾಳಗ ನಡೆವಾಗ ಕುತೂಹಲದಿಂದ ಬಾಗಿಲು ತೆರೆದು ಇಣಿಕಿದನು —ಮೂಲೆಯಲ್ಲಿ ಕಲ್ಲಾಗಿ ಬಿದ್ದಿದ್ದ ಗಂಡನನ್ನು ಕಂಡು,—'ಇವನ ಹಾಳು ಬಾಯಿ! ಬಾಯಿ ತುಂಬ ಆರ್ಭಟೆ, ಅಬ್ಬರ; ಮೈತುಂಬ ನಡುಕ, ಪೆಟ್ಟು,—ಹೇಡಿ'' ಎಂದು ಚೀರಿದ ನಂತೆ.

\+ \+ \+ \+

ಜಸ್ಟಿಸ್ ಪಕ್ಷದ ವಿಜಯ ಯಾತ್ರೆ ಈ ತೆರ ವಾಗಿದೆ ಅಪಜಯ ಜಸ್ಟಿಸ್ ಪಕ್ಷಕ್ಕೆ, ಆದರೆ, ಕಾಂಗ್ರೆಸ್ ಪಕ್ಷವು ಸೋತುದೆಂದೇ 'ಅವರ ಜಯಭೇರಿ'

× × × × ×

ಕಾಂಗ್ರೆಸ್ ಪಕ್ಷವು ಸೋತುದೆಂದು ಎಷ್ಟು ಸಲ ಬೊಬ್ಬಿಲಿರಾಜರ ಬೊಬ್ಬೆ ಕೇಳಿಸುವುದೋ ಅಷ್ಟು ಸಲ ಗೆದ್ದವರು ಜಸ್ಟಿಸ್ ಪಕ್ಷವಲ್ಲೆಂದು ಈಗ ಜನತೆಗೆ ತಿಳಿದೇ ಹೋಗುವಂತಾಗಿದೆ

\+ \+ \+ \+

ನಾಲ್ಕು ಜಿಲ್ಲಾ ಬೋರ್ಡುಗಳು ಅಧ್ಯಕ್ಷ ರನ್ನು ಕಳೆದ ತಾ 21ರಲ್ಲಿ ಚುನಾಯಿಸಿದುವು ಕಾಂಗ್ರೆಸ್ ಪಕ್ಷದವರೆಂದು ಚುನಾವಣೆಗೆ ನಿಂತು ಬೋರ್ಡ್ ಮೆಂಬರರಾದ ಕೆಲವರು ಲಾಗ ಹಾಕಿದರೂ, ನಾಲ್ಕೂ ಕಡೆ ಅಧ್ಯಕ್ಷರಾದ ವರು ಕಾಂಗ್ರೆಸ್ ಸದಸ್ಯರೇ ಆದರೆ, ಕಾಂಗ್ರೆಸು ಈ ರೀತಿಯಾಗಿ ಸೋತರೆಂದು ಬೊಬ್ಬಿಲಿರಾಯರು ಗರ್ಜಿಸಿರುವರು!

\+ \+ \+ \+

ಈ ಗರ್ಜನೆಯು ಅಡಗುವಷ್ಟರಲ್ಲಿ ದಕ್ಷಿಣಾ ರ್ಕಾಡು ಜಿಲ್ಲಾ ಬೋರ್ಡು ಚುನಾವಣೆಗಳು ನಡೆದುವು ಚುನಾವಣೆ ಹೊಂದಿದವರಲ್ಲಿ ಕೆಲವರು ಲಾಗ ಹಾಕಿದರು ಅಧ್ಯಕ್ಷರಾಗಲು ಉಮೇದುವಾರರಾಗಿದ್ದ ಇಬ್ಬರಿಗೂ ಸರಿ ವೋಟು ದೊರೆವಂತಾಯಿತು ಆಗ ದೈವ ವಶಾತ್ ಆದರೂ,— ಗೆದ್ದವರು ಕಾಂಗ್ರೆಸ್ ಪಕ್ಷದವರು.

\+ \+ \+ \+

ಇದೇ ರೀತಿಯಾಗಿ ಇಟಲಿಗೆ ಜಯವಾಗುತ್ತ ಲಿದೆ. ಇಟಲಿಯ ಸೈನ್ಯಗಳು ಮುಂದರಿಸಿ ಮುಂದರಿಸಿ 60000 ಚದರ ಮೈಲು ಸ್ಥಳ ಆಕ್ರಮಿಸಿವೆ, ಸಾವಿರಕ್ಕೆ ಕಡಿಮೆ ಎದುರಾಳಿಗ ಳನ್ನು ದಿನವೂ ಕೊಲ್ಲದೆ ಅಥವಾ ಗಾಯಪಡಿ ಸದೆ ಇಲ್ಲ.

\+ \+ \+ \+

ಆದರೆ, ಜಗತ್ತಿನ ಶಾಂತಿಸ್ಥಾಪನೆಗಾಗಿ ಅವ ತರಿಸಿದ ಯೇಸುಸ್ವಾಮಿಯ ಜನ್ಮಸಪ್ತಾಹದಲ್ಲಿ ಕಠಿಣ ಯುದ್ಧಗಳಾಗಿ ೨೦ ಟೇಂಕು, ನೂರಾರು ಮೆಶಿನ್ ಗನ್‌ಗಳು, ೨೦೦ ಸಿಪಾಯರು ಎಲ್ಲ ಸೇರಿಬಿದ್ದವು—ಎಥಿಯೋಪಿಯನ್ ದಂಡಾಳು ಗಳಿಗೆ!

× × × × × ×

ಮೊದಲು ಇದರ ಸುದ್ದಿ ಯಾರೂ ನಂಬ ಲಿಲ್ಲ, ಸುಳ್ಳೆಂದರು. ಈಗ ಇಟಲಿಯೂ ಹೌದು ಹಾಗಾದುದು ನಿಜ ಎನ್ನತೊಡಗಿದೆ.

× × × × \+ ×

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY.

ನಿಸ್ತೇಜಗೊಂಡ ಚರ್ಮ.

ಪ್ರಾಯವಾಗುವ ಮೊದಲೇ ಸ್ತ್ರೀಯು ಮುದುಕಿಯಂತೆ ತೋರುವಳು

ಇಷ್ಟು ಬೇಗನೇ ಮುಪ್ಪನ್ನು ಪಡೆಯುವುದೆಂದರೆ ಜೀವನ ಸೌಂದರ್ಯವನ್ನೇ ಕಳಕೊಂಡಂತಾಗುತ್ತದೆ ಇದರಿಂದ ನಿಮ್ಮನ್ನು ರಕ್ಷಿಸಿ, ನಿಮ್ಮ ಚರ್ಮವನ್ನು ನಯವಾಗಿಯೂ ಸುಂದರವಾಗಿಯೂ ಮಾಡಿ, ನಿಮ್ಮ ಮುಖಕ್ಕೆ ಸೌಂದರ್ಯವನ್ನು ತರುವ ಒಂದು ಔಷಧಿಯು ಇದೆ ಅದು ಕಲೆಗಳನ್ನೂ, ಹುಣ್ಣು ಗಳನ್ನೂ, ಬೊಕ್ಕೆಗಳನ್ನೂ, ಮೊಡವೆಗಳನ್ನೂ ನಾಶಮಾಡು ತ್ತದೆ

ಅಫ್ಘಾನ ಸ್ನೋ.

ನಿತ್ಯವೂ ಉಪಯೋಗಿಸಿದರೆ ಸೌಂದ ರ್ಯವೂ ಆರೋಗ್ಯವೂ ವೃದ್ಧಿ ಯಾಗುವುದು.

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಇ. ಎಸ್ ಪಟಾನ್‌ವಾಲಾ,
182 84 ಎ ಅಬ್ದುಲ್‌ರಹಿಮಾನ್ ಸ್ಟ್ರೀಟ್, ಬೊಂಬಾಯಿ, ೩

ಬಹು ಪರೀಕ್ಷೆಯ ಅನುಭವಸಿದ್ಧನಾದ ರಸಾಯನ ಶಾಸ್ತ್ರಜ್ಞನು ಈ ಮೇಲಿನ ವೃತ್ತಪಡಿಸುವುದೇನೆಂದರೆ ಅಫ್ಘಾನ ಸ್ನೋ ಎಂಬ ಕ್ರೀಮನ್ನು ಪರೀಕ್ಷಿಸಿ ಇದರಲ್ಲಿ ಯಾವುದೇ ಕೆಡುಕು ಪದಾರ್ಥಗಳು ಇಲ್ಲ ಆದುದರಿಂದ ಈ ಕ್ರೀಮನ್ನು ಸರ್ವದಾ ಸೌಂದರ್ಯಕ್ಕಾಗಿ ಏನೂ ಹಾನಿಯಿಲ್ಲದೆ ಉಪಯೋಗ ಮಾಡಬಹುದು (ಫ್ರಾನ್ಸ್)

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK

LIMITED.

ಒಟ್ಟಾವಾ ಕರಾರಿನಿಂದ ಇಂಡಿಯಕ್ಕೆ ದೊರೆತ ಲಾಭವೂ ಹೀಗೆಯೇ ಯಥೇಷ್ಟವಾಗಿದೆ ಸರ ಕಾರವು ಹೊರಡಿಸಿರುವ ಮಿಾರ್ಕ್ ರಿಪೋರ್ಟನ್ನು ತೀಕ್ಷ್ಣವಾಗಿ ನೋಡಿರಿ

× × × × × ×

ನಮ್ಮ ರಫ್ತು ೫ ಕೋಟಿ (ನೇಕಡಾ ೩॥) ಹೆಚ್ಚಿತು, ಇದರಲ್ಲಿ ಇಂಗ್ಲೆಂಡಿಗೆ ೩೩ ಲಕ್ಷ ಮಾತ್ರ, ಆದರೆ ನಾವು ಇಂಗ್ಲೆಂಡಿನಿಂದ ತರಿಸಿದ ಸಾಮಾನು ಬೆಲೆ ೬ ಕೋಟಿ ರೂಪಾಯಿ—ಎಂದರೆ ೫॥ ಕೋಟಿ ರೂಪಾಯಿ ಇಂಗ್ಲೆಂಡಿಗೆ ನಾವು ಕೆತ್ತರಾಯಿತು!

\+ \+ \+ \+

ಸಾಮ್ರಾಜ್ಯದ ಹೊರಗೆ ಇಂಗ್ಲೆಂಡಿನ ಗಿರಾಕಿ ಗಳು ಕಡಿಮೆಯಾಗುತ್ತಾ ಬರುತ್ತಾರೆ ಬಡಾ ಗಿರಾಕಿಯು ಬಡಾಯಿಸುತ್ತಾ ಬರುವುದು ಇದೊಂದೇ-ಇಂಡಿಯಾ! ಒಟ್ಟಾವಾ ಕೀ ಜೈ!

ಜರ್ಮನ್ ಹಿಂದೀಯ ಸಂಬಂಧ.

ಹಿಂದೂದೇಶದ ವ್ಯಾಪಾರ ಸ್ಥಿತಿ.

ಜರ್ಮನ್-ಹಿಂದೀಯ ಸಂಬಂಧ

ಪಾಶ್ಚಾತ್ಯ ದೇಶಗಳಲ್ಲಿ ಜರ್ಮನಿಗೆ ಭಾರತೀಯರ ಸ್ನೇಹಾಚಾರವು ವಿಶೇಷವಾಗಿರುವುದೆಂದು ಗೌರವವಿತ್ತು. ಭಾರತೀಯ ವಿದ್ಯಾರ್ಥಿಗಳಿಗೆ ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ತುಂಬಾ ಅನುಕೂಲಗಳಿದ್ದುವು ಅಲ್ಲಿನ ಎಲ್ಲಾ ವರ್ತಮಾನ ಪತ್ರಗಳು ಹಿಂದೂದೇಶಕ್ಕೆ ಹಿತಕರವಾಗುವಂತೆ ಪ್ರಸಾರಣಾ ಕಾರ್ಯವನ್ನು ಮಾಡುತ್ತಿದ್ದುವು. ಆದರೆ ಹಿಟ್ಲರನ ಅಧಿಕಾರದಲ್ಲಿ ಜರ್ಮನಿಯು ಹಿಂದೂದೇಶವನ್ನು ಧಿಕ್ಕರಿಸಲು ಪ್ರಾರಂಭಮಾಡಿರುತ್ತದೆ. ಮೊದಲಿನ ಅನುಕೂಲತೆಗಳು ಅಲ್ಲಿನ ವಿಶ್ವವಿದ್ಯಾಲಯಗಳಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಈಗ ಒದಗುತ್ತಿಲ್ಲ. ವರ್ತಮಾನ ಪತ್ರಗಳು ಹಿಂದೂದೇಶಕ್ಕೆ ಹಿತಕರ ಪ್ರಸಾರಣೆಯನ್ನು ನಿಲ್ಲಿಸಿದುದು ಮಾತ್ರವಲ್ಲದೆ ಹಿಂದೂದೇಶದ ವಿರೋಧವಾದ ಪ್ರಸಾರಣೆಯನ್ನು ಪ್ರಾರಂಭಮಾಡಿರುತ್ತವೆ ಈಗಿನ ಜರ್ಮನ್ ಸರಕಾರವು ಬ್ರಿಟಿಷರ ಕಡೆಗೆ ತಿರುಗಿರುತ್ತದೆ

ಈ ರೀತಿಯಲ್ಲಿ ನಮ್ಮನ್ನು ಧಿಕ್ಕರಿಸುತ್ತಿರುವ ಜರ್ಮನಿಯು ನಮ್ಮೊಡನೆ ವ್ಯಾಪಾರವನ್ನು ಕೈಬಿಡುವ ಆಲೋಚನೆಯನ್ನು ಮಾಡಲಿಲ್ಲ. ಜರ್ಮನಿಗೆ ವ್ಯಾಪಾರಕ್ಕೆ ಯೋಗ್ಯ ಅನುಕೂಲತೆಗಳು ದೊರಕುವಂತೆ ಭರತಖಂಡದಲ್ಲೆಲ್ಲಾ ಪ್ರಸಾರಣಾ ಕಾರ್ಯವು ನಡೆಯುತ್ತದೆ ಜರ್ಮನ್ ಪ್ರಸಾರಕರು ಬಹುಶಃ ಅವರ ದೇಶದಲ್ಲಿ ನಡೆದ ಮೇಲಿನ ಘಟನೆಗಳು ಹಿಂದೂದೇಶವು ಅರಿತಿಲ್ಲವೆಂದು ನಂಬಿರಬಹುದು. ಜರ್ಮನಿಯ ಮೇಲಿನ ವರ್ತನೆಯು ಎಲ್ಲಾ ಭಾರತೀಯರು ತಿಳಿಯತಕ್ಕದು ಜರ್ಮನಿ ಕಡೆಗೆ ಈಗಲೂ, ಅನೇಕ ಭಾರತೀಯರಿಗೆ ಪ್ರೇಮವಿದ್ದರೂ ಈಗ ಜರ್ಮನಿಯ ವರ್ತನೆಯಿಂದ ಅದು ಸಂಪೂರ್ಣ ನಾಶಹೊಂದಬಹುದು. ಭಾರತೀಯರು, ಬಹಳ ವ್ಯಸನಕರವಾಗಿ ತಮಗುಂಟಾದ ಮಾನ ಹಾನಿಯನ್ನು ಯಾವ ರೀತಿಯಲ್ಲಾದರೂ ಹಿಂದೆ ಸಲಹಿಕೊಳ್ಳುವರೆಂದು ಜರ್ಮನಿಯವರೊಡನೆ ವ್ಯಾಪಾರ ಬೆಳೆಯಿಸಬೇಕೆಂಬ ನಮ್ಮ ಇಚ್ಛೆಯಲ್ಲ ಆದರೆ ಜರ್ಮನಿಯರು ನಮ್ಮೊಡನೆ ಅವರ ವ್ಯಾಪಾರ ಉದ್ಧರಣೆಯಾಗುವಂತೆ, ಹಿಂದೂದೇಶದೊಡನೆ ಸ್ನೇಹಭಾವದಿಂದಿರತಕ್ಕದು ಹಿಂದೂದೇಶದೊಡನೆ ಲಂಕಶಯರಿನ ವ್ಯಾಪಾರ ನಿರ್ನಾಮವಾಗಲು, ನಮ್ಮ ವಸ್ತ್ರದ ಗಿರಣಿಗಳೆ ಕಾರಣವಲ್ಲ ಬ್ರಿಟಿಷರ ಹಿಂದೀಯರ ಕಡೆ ವರ್ತನೆಯೆ, ಇದಕ್ಕೆ ಕಾರಣವು. ಆದರೆ ಬ್ರಿಟಿಷ ಸರಕಾರವು ಹಿಂದೂದೇಶವನ್ನು ಆಳುತ್ತಿದೆ. ಹೀಗಿದ್ದೂ ಲಂಕಶಯರನ್ನು ರಕ್ಷಿಸಲು ಅವರಿಗೆ ಸಾಧ್ಯವಾಗಲಿಲ್ಲ ಹಾಗಾದರೆ ಜರ್ಮನಿಯರು, ನಮ್ಮ ಸೌಮನಸ್ಯವಿಲ್ಲದೆ ಬೇರೆ ರೀತಿ ತಮ್ಮ ಹಿತ ಸಾಧಿಸುವುದು ಸಾಧ್ಯವೆ ಆದುದರಿಂದ, ಮೇಲಿನ ಜರ್ಮನಿಯರ ವರ್ತನೆಯ ವಾರ್ತೆಗಳು ಹಿಂದೂದೇಶದಲ್ಲಿ ಸಂಪೂರ್ಣ ಪ್ರಚಾರವಾದರೆ, ಜರ್ಮನಿಯ ವ್ಯಾಪಾರವು ಕುಂದುವುದರಲ್ಲಿ ಏನೂ ಸಂದೇಹಗಳಿಲ್ಲ ಜರ್ಮನಿಯರ ಒಡವೆಗಳೂ ಅತಿ ಸುಲಭ ದರದಲ್ಲಿ ದೊರಕುತ್ತವೆಂದು ಈಗ ಪ್ರಸಿದ್ಧವಾಗಿರುತ್ತದೆ ನಮಗೆ ಇಲ್ಲಿ ತಯಾರಾಗದ ಸಾಮಾನುಗಳನ್ನು ಒದಗಿಸುವ ಅನೇಕ ಜನಾಂಗಗಳಿವೆ, ಈಗ ಸಾಂಪತ್ತಿಕ ದುರ್ದಶೆಯಿಂದ, ದರಗಳಲ್ಲಿ ಬಹಳ ಸ್ಪರ್ಧೆಯು ಕೂಡ ನಡೆಯುತ್ತದೆ. ಹಾಗಿರುವಾಗ ಜರ್ಮನಿಯು, ತಮ್ಮ ವರ್ತನೆಯನ್ನು ಬದಲಾಯಿಸದಿದ್ದರೆ ಅವರು ಬೇಗನೆ ದುಃಖಿತರಾಗಬೇಕಾಗುವುದು

ಜರ್ಮನಿಯಲ್ಲಿ ನಡೆದಂತೆ, ಅನೇಕ ಬಹಿರ್‌ಪ್ರದೇಶಗಳಲ್ಲಿ ಹಿಂದೂದೇಶದ ಕುರಿತು ವಿರೋಧ ಪ್ರಸಾರಣೆಯು ನಡೆಯುತ್ತದೆ. ನಮ್ಮ ಸರಕಾರದೊಡನೆ, ಈ ಪ್ರಸಾರಣಾ ಕಾರ್ಯಗಳನ್ನು ಬೇಗನೆ ನಿಲ್ಲುವಂತೆ, ಆ ದೇಶಗಳ ಸರಕಾರಗಳೊಡನೆ ವ್ಯವಹರಿಸಬೇಕಾಗಿ, ಮಾಡಿದ ಮನವಿಗಳು ಫಲಕಾರಿಯಾಗಲಿಲ್ಲ ನಮ್ಮ ದೇಶವು ಈ ವಿಚಾರದಲ್ಲಿ ಸಂಪೂರ್ಣ ನಿಸ್ಸಹಾಯಕವಾಗಲಿಲ್ಲ ಕೊಂಗ್ರೆಸ್ಸಿನವರು ಮುಂದೆ ಬಂದರೆ ಸರಿ. ಇವರ ಒಂದೆ ಒಂದು ಮಾತಿನಿಂದ ಹಿಂದೂದೇಶದಲ್ಲಿ ಬಹಿರ್ ದೇಶದವರ ವ್ಯಾಪಾರಕ್ಕೆ ವಿಶೇಷ ಹಾನಿಯನ್ನು ತರಬಹುದು ಸಾಂಪತ್ತಿಕ ಉದ್ಧರಣೆ ಹೊಂದಬೇಕಾದರೆ, ಜನಾಂಗಗಳಲ್ಲಿ ಪರಸ್ಪರ ಸೌಮನಸ್ಯವಿರತಕ್ಕದು

ಈಗಿನ ವ್ಯಾಪಾರಕ್ಕಂತೂ ತುಂಬಾ ಕಡೆಗಳಿವೆ ಸಾಗುವಳಿಯು ಆದಾಯವು ಅರ್ಧಕ್ಕರ್ಧ ಇಳಿದ ದರಿಂದ, ಹಿಂದೂದೇಶದ ಜನರ ಸಾಮಾನುಗಳನ್ನು ಪಡೆಯುವ ಶಕ್ತಿಯು ತುಂಬಾ ಕಡಿಮೆಯಾಗಿರುತ್ತದೆ ಇವುಗಳೊಡನೆ ಹೊಸದೊಂದು ಆತಂಕವನ್ನು ಸೇರಿಸಿದರೆ ವ್ಯಾಪಾರದಭ್ಯುದಯವಾಗುವುದೆಂತು?

ಹಿಂದೂದೇಶದ ವ್ಯಾಪಾರ ಸ್ಥಿತಿ.

"ಮೋಡಗಳಿಂದ ಸೂರ್ಯನು ಪ್ರಕಾಶಿಸುತ್ತಿದ್ದಾನೆ, ಹಿಂದೂದೇಶದ ವ್ಯಾಪಾರವು ದಿನೆದಿನೆ ವೃದ್ಧಿ ಹೊಂದುತ್ತಿದೆ" ಎಂದು ನಮ್ಮ ಮಾನ್ಯ ವ್ಯೆಸರಾಯರು, ಮೊನ್ನೆ ಕಲ್ಕತ್ತ ನಗರದಲ್ಲಿ ಮಾಡಿದ ಭಾಷಣದಲ್ಲಿ ಸೂಚಿಸಿರುವರು. ಆದರೆ ಹಿಂದೂದೇಶದ ವರ್ತಕವರ್ಗವು ಬೇರೆ ಅಭಿಪ್ರಾಯಪಡುತ್ತಿದೆ ವ್ಯಾಪಾರ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ನಿರೀಕ್ಷಣೆ ಕುರುಹುಗಳು ಕಾಣಿಸುತ್ತವೆ "ಈ ಸ್ಥಿತಿಯು ಬದಲಾಗಲು, ಅವಕಾಶಗಳೆ ದೊರಕುವ ಬದಲಾಗಿ, ವ್ಯಾಪಾರ ಅಭ್ಯುದಯದ ಹಾದಿಯಲ್ಲಿ ಅನೇಕ ಆತಂಕಗಳು ಬರುತ್ತಿವೆ" ಎಂದು ಇವರ ಮಾತಾಗಿರುತ್ತದೆ ೧೯೩೨ನೇ ಇಸವಿ ವ್ಯಾಪಾರದ ವರದಿಯಲ್ಲಿ ಧೈರ್ಯಶಾಲಿ ಜನರಲ್ಲಿರು ಸಮೃದ್ಧಿಯನ್ನು ತೋರಿಬಹುದೇನೋ, ನಿಜ ಆದರೆ ನಮ್ಮ ವ್ಯಾಪಾರದ ಸ್ಥಿತಿಯು ಬಿಗಡಾಯಿಸಿಯೂ ಹಾಗಿಲ್ಲ ಹಿಂದೂದೇಶದ ಕೈಗಾರಿಕೆಗಳು ಕೂಡ, ಅಷ್ಟು ಯಶಸ್ವಿಯಾಗಿ ನಡೆಯಲಿಲ್ಲ ಸರ್ವ ಪ್ರಪಂಚವು ಕಳೆದ ಸಾಂಪತ್ತಿಕ ದುರ್ದಶೆಯ ಹೊರೆಯಿಂದ ತಲೆ ಎತ್ತುತ್ತಿರುವಾಗ, ಹಿಂದೂದೇಶವು ಇನ್ನೂ ಈ ಹೊರೆಯ ಅಡಿಯಲ್ಲಿ ಇರಬೇಕಾಗಿದೆ. ಕಾರಣ ಹಿಂದೂದೇಶದ ವ್ಯಾಪಾರಕ್ಕೆ ಅನೇಕ ಆತಂಕಗಳು ಜನಿಸಿವೆ, ಒಟ್ಟಾವಾಪೆಕ್ಟು ಅವುಗಳಲ್ಲೊಂದು ಜನಾಂಗಸಭೆಯ, ಸಂಕ್ಷನು ಪ್ರತಿಕ್ರಿಯೆಗಳು ಮತ್ತೊಂದು ಈ ಪ್ರತಿಕ್ರಿಯೆಗಳಿಂದ ಹಿಂದೂದೇಶಕ್ಕೆ ಇಟಲಿಯಿಂದಾಗುವ ವ್ಯಾಪಾರವು ಸಂಪೂರ್ಣ ನಿಂತಿರುತ್ತದೆ ಈ ವ್ಯಾಪಾರ ಬದಲಾಗಿ ಜನಾಂಗಸಭೆಯು ಹಿಂದೂದೇಶಕ್ಕೆ ಬೇರೆ ಕಡೆಯಿಂದ ವ್ಯಾಪಾರ ಸಲ್ಲುವಂತೆ ಮಾಡುವುದೆಂದು ಹೇಳಿದ ಮಾನ್ಯ ವ್ಯೆಸರಾಯರ ವಚನವು ಸಮಾಧಾನಕರವು ಬ್ರಿಟಿಷರ ಹಿತಕ್ಕಾಗಿ ಹಿಂದೂದೇಶದ ವ್ಯಾಪಾರದ ಉದ್ಧರಣೆಯು ಧಿಕ್ಕರಿಸಲ್ಪಡುತ್ತಿದೆ ಬ್ರಿಟಿಷರು ತಮಗೆ ಹಿತವಾಗುವ ರೀತಿ ಹಿಂದೂದೇಶದ ವ್ಯಾಪಾರ ಕ್ರಮಗಳನ್ನು ರೂಪಿಸಿದ್ದಾರೆ ತಮ್ಮ ಅಧಿಕಾರದ ಭರದಿಂದಲೆ ಇಲ್ಲಿ ವ್ಯಾಪಾರ ನಡೆಯಿಸಬೇಕೆಂದಿದ್ದಾರೆ ಆದರೆ ವ್ಯಾಪಾರ ಸಂಬಂಧಗಳು ಈ ರೀತಿ ಬೆಳೆಯುವುದು ಅಸಾಧ್ಯ ಭಾರತೀಯರು, ಬ್ರಿಟಿಷರು ಯೋಗ್ಯ ರೀತಿಯಲ್ಲಿ ವರ್ತಿಸಿದರೆ ಅವರೊಡನೆ ಸಹಕರಿಸಲು ಸಿದ್ಧರಿದ್ದಾರೆ

ಕೊಂಗ್ರೆಸ್ಸಿನ ಕೆಲವು ಆಂಗ್ಲೇಯ ಬೆಂಬಲಗಳು.

ಕೊಂಗ್ರೆಸ್ಸೆಂಬ ಈ ಮಹಾ ಸಂಸ್ಥೆಯು ಜನಿಸುವ ಆರು ವರ್ಷಗಳ ಮೊದಲು, ಲಂಡನಿನಲ್ಲಿ ಭಾರತೀಯ ರಾಷ್ಟ್ರೀಯ ವಿಚಾರಗಳಲ್ಲಿ ಹೆಚ್ಚಿನ ಶ್ರಮಪಟ್ಟವರು, ಡಬ್ಲ್ಯು ಎಸ್ ಕೈನ್ ರೆಂಬವರು. ಇವರು ತಾನು ಪಾರ್ಲಿಮೆಂಟನ್ನು ಸೇರುವ ಒಂದು ವರ್ಷದ ಮೊದಲು, ಭರತಖಂಡದ ಅನೇಕ ರಾಷ್ಟ್ರೀಯ ಪ್ರಶ್ನೆಗಳನ್ನೂ, ಆಗಿನ ವೈಸರಾಯರ, ಗವರ್ನರುಗಳ ಕಡೆಯ ವರ್ತನೆಯನ್ನು ಸರಿಯಾಗಿ ಪರಿಶೀಲಿಸಿದ್ದರು. ಇವರು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ನಮ್ಮ ರಾಷ್ಟ್ರೀಯ ಹಿತಗಳ ವಿಚಾರ ಬಹಳ ಶ್ರಮಪಟ್ಟಿರುತ್ತಾರೆ

ಪ್ರಥಮ ಬಾರಿಯ ಅಧಿವೇಶನದಲ್ಲಿ ಅನೇಕ ಪ್ರಾಮುಖ್ಯ ಸರಕಾರದ ಉದ್ಯೋಗಸ್ಥರು ಆಗಂತುಕರಾಗಿದ್ದರು. ಇವರಲ್ಲಿ ಕೊಂಗ್ರೆಸ್ಸನ್ನು ಸ್ಥಿರವಾಗಿ ಸ್ಥಾಪಿಸಿ, ಅದಕ್ಕೋಸ್ಕರ ಬಹಳ ಶ್ರಮಪಟ್ಟ ಎ ಓ ಹ್ಯೂಮರೆಂಬವರೊಬ್ಬರು. ಬ್ರಿಟಿಷ ಸರಕಾರ ಮತ್ತು ಭಾರತೀಯರಲ್ಲಿ ಸೌಮನಸ್ಯ ಉಂಟಾಗುವಂತೆ, ಇಂಥಾ ಸಂಸ್ಥೆಯ ಅಗತ್ಯವನ್ನು ಸರಕಾರಕ್ಕೆ ಸೂಚಿಸಿದವರು ಇವರು ತಮ್ಮ ಉದ್ಯೋಗ ಕಾಲದ ನಂತರ ನಿವೃತ್ತರಾಗಿ, ಸಿಮ್ಲಾದಲ್ಲಿ ನೆಲೆಸಿದವರಾಗಿ, ಕೊಂಗ್ರೆಸ್ಸಿನ ಕಾರ್ಯಗಳಲ್ಲಿ ನಿರತರಾದರು ಕೊಂಗ್ರೆಸ್ಸಿನೊಡನೆ ಸರಕಾರವು ಸಹಕರಿಸುವಂತೆ ಅನೇಕ ಯೋಜನೆಗಳನ್ನು ಮಾಡಿದರಲ್ಲದೆ, ಕೈಕೊಂಡ ಮಹಾಕಾರ್ಯದಲ್ಲಿ ಅನೇಕ ಭಾವಿ ಜಯಶೀಲರಾಗಿರುವರು

ಪ್ರಾರಂಭದ ಕಾಂಗ್ರೆಸ್ಸಿನ ಜೀವಮಾನವನ್ನು-ಅಂದರೆ, ಪ್ರಾರಂಭದ ಕೆಲವು ವರ್ಷಗಳ ಅಧಿವೇಶನಗಳ ವರದಿಯನ್ನು ಪರಿಶೀಲಿಸಿದರೆ, ಆಗ್ಗೆ ಈ ಮಹಾಸಂಸ್ಥೆಯು ಒಂದು ಸಾಧಾರಣ ಸಂಸ್ಥೆಯಾಗಿದ್ದು, ಸಾಧಾರಣ ತರದ ಠರಾವುಗಳನ್ನು ಮಾಡಿ, ಸಾಧಾರಣ ತರದ ಕೋರಿಕೆಗಳನ್ನು ಸರಕಾರದ ಕಡೆ ಮಾಡುತ್ತಿದ್ದರು. ಕ್ರಮಶಃ ಈ ಸಂಸ್ಥೆಯು ಅಭ್ಯುದಯ ಹೊಂದಿದಾಗಿ, ಇವತ್ತಿಗೆ ಸಂಪೂರ್ಣ ಸ್ವಾತಂತ್ರ್ಯವೆ ತಮ್ಮ ಮುಖ್ಯ ಧ್ಯೇಯವೆಂದು ಹವಣಿಸುತ್ತಿದೆ ಭಾರತೀಯರ ಮುಖಂಡರ ಈ ಶ್ರಮಗಳೊಡನೆ, ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಅನೇಕ ಮುಖಂಡರು ಶ್ರಮಪಟ್ಟರು.

ಪ್ರಾರಂಭದಲ್ಲಿ ಅಂದರೆ, ವೈಸರಾಯರಾದ ಲೋರ್ಡ್ ಡಫ್ರಿನರ ಕಾಲದಲ್ಲಿ ಕೊಂಗ್ರೆಸ್ಸಿನ ವಿಚಾರ ಸರಕಾರದ ವರ್ತನೆಯು ಉಭಯಸಮ್ಮತವಾಗಿದ್ದರೂ, ಕೊಂಗ್ರೆಸ್ಸಿನ ಬೆಳವಣಿಗೆಯಿಂದ ಬ್ರಿಟಿಷರಿಗೆ ಹಾನಿ ಬರುವುದೆಂದು ಕೊಂಗ್ರೆಸ್ಸಿನ ಸ್ಥಾಪನಾ ಮುಹೂರ್ತದ ಕಿಲ್ಲಿದ ಆಂಗ್ಲೇಯ ಪತ್ರಿಕೆಗಳಂತೆ, ಸರಕಾರವು ಬರಬರುತ ವರ್ಷಗಳಲ್ಲಿ ಈ ಸಂಸ್ಥೆಯು ಹಾನಿಕರವಾಗುವುದೆಂಬ ಭಾವನೆಯಿಂದ, ಅದರ ಉದ್ಯೋಗಸ್ಥರು ಈ ಸಂಸ್ಥೆ ಹತ್ತಿರ ಹೋಗಬಾರದಂತೆ ಕ್ರಮಗಳನ್ನು ಮಾಡಿ ಈ ಸಂಸ್ಥೆಯನ್ನು ದೂರವಿಡುವ ಪ್ರಯತ್ನಗಳಾಗಿ, ಅವುಗಳು ಕ್ರಮಶಃ ಬಲಪಡೆದು ಇವತ್ತಿಗೆ ಈ ಎರಡು ಸಂಸ್ಥೆಗಳು ಬಹಳ ದೂರಕ್ಕೆ ಸಾಗಿರುತ್ತವೆ

ಆದುದರಿಂದ, ಇಂಗ್ಲಾಂಡಿನಲ್ಲಿ ಯಾವನಾದರೂ ಒಬ್ಬ ಬ್ರಿಟಿಷ ಪುರುಷನು ಭಾರತೀಯರ ಹಿತಕಾರ್ಯ ಮಾಡತೊಡಗಿದರೆ, ಅವನನ್ನು ಇತರರು ಮಹಾ ಪಾಪಿಯಾಗಿ ಕಾಣುತ್ತಿದ್ದರು. ಆದರೂ, ಕೈನರಂತಾ ಮಹಾಪುರುಷರು, ಇವರ ಮತ್ತು ಅಲ್ಲಿನ ಪತ್ರಿಕೆಗಳ ಹೀಯಾಳಿಕೆಗಳಿಗೆ ಹೆದರದೆ, ಹಿಂದೂದೇಶದ ರಾಷ್ಟ್ರೀಯ ಅಭ್ಯುದಯಕ್ಕಾಗಿ, ವರ್ತಮಾನ ಪತ್ರಗಳ ಮೂಲಕವೂ, ಪಾರ್ಲಿಮೆಂಟಿನಲ್ಲೂ ಬಾರಿ ಹೆಣಗಾಡಿದರು. ಇವರಿಗೆ ನಮ್ಮ ದಿವ್ಯ ವಂದನೆಗಳು.

ಪ್ರಾರಂಭದಲ್ಲಿ ಕಾಂಗ್ರೆಸ್ ಮುಖಂಡರು ಲಂಡನಿನಲ್ಲೂ ಹಿಂದೂದೇಶದ ರಾಜಕೀಯ ವಿಚಾರಕಾರ್ಯ ನಡೆಯಿಸಲು ಒಂದು ಸಂಸ್ಥೆಯಾಗಬೇಕೆಂದು ತಿಳಿದಿದ್ದರು. ಈ ಸಮಯದಲ್ಲಿ ಹ್ಯೂಮರು ಕಾಂಗ್ರೆಸ್ ಕಾರ್ಯದರ್ಶಿಗಳಾಗಿದ್ದರು ಆಗ್ಗೆ ಸರ್. ವಿಲಿಯಮ್ಸ್ ವೆಡ್ಡರ್‌ಬರ್ನರೆಂಬ ಹಿಂದೂದೇಶದ ಸರಕಾರಿ ಮಹಾ ಉದ್ಯೋ

ಸರ್ ವಿಲಿಯಂ ವೆಡ್ಡರ್ ಬರ್ನರವರು

ಗಸ್ಥರೊಬ್ಬರು ನಿವೃತ್ತರಾಗಿ ಇಂಗ್ಲಾಂಡನ್ನು ಸೇರಿದ್ದರು. ಇವರು ಲಂಡನನ್ನು ಬಿಟ್ಟು ಬಹಳ ದೂರವಿದ್ದರೂ, ಅನೇಕ ವಾರ ಲಂಡನಿಗೆ ಬಂದು ಪೆಡಿಂಗ್‌ಟನ್ ಹೋಟೆಲ್ ಎಂಬ ಸ್ಥಳದಲ್ಲಿ ಹಿಂದೂದೇಶದಿಂದ ಬಂದಿಳಿದ ಅನೇಕ ಪ್ರಮುಖರ ಭೇಟಿ ಮಾಡುತ್ತಿದ್ದರು. ದಿ ಇಂಡಿಯನ್ ಪೊಲಿಟಿಕಲ್ ಏಜನ್ಸಿ ಎಂಬ, ಭಾರತೀಯರ ರಾಜಕೀಯ ಹಿತಸಾಧಿಸುವ ಸಂಸ್ಥೆಯು ಮಿ। ಎಲಿಯಟ್ ಡಿಗ್ಬಿಯೆಂಬವರಿಂದ ಸ್ಥಾಪನೆಯಾಯಿತು ಇಲ್ಲಿ ಎಲ್ಲಾ ಭಾರತೀಯರಿಗೆ ಸ್ವಾಗತವಿತ್ತು

ಡಿಗ್ಬಿಯವರು ಭಾರತೀಯರಂತೆ, ನಮ್ಮ ರಾಜಕೀಯ ಹಿತಕ್ಕಾಗಿ ಅನೇಕ ಶ್ರಮಪಟ್ಟರು. ಹಿಂದೂದೇಶದ ವಿಚಾರದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು. ಹಿಂದೂದೇಶಕ್ಕೆ ಅನೇಕ ಸಾರ್ವಜನಿಕ ಹಿತನೀಸುವ ಕಾರ್ಯಗಳಲ್ಲಿ ಕೆಲಸಮಾಡಿದರು

ಮಿ। ಜೋರ್ಜ್ ಯೂಲರವರು.

ಸರ್ ವಿಲಿಯಮ್ ವೆಡ್ಡರ್ ಬರ್ನರು ೧೮೯೦ರಲ್ಲಿ ಕೊಂಗ್ರೆಸ್ಸಿನ ಅಧಿವೇಶನಗಳನ್ನು ನೋಡಿ ಹಿಂತಿರುಗಿದವರಾಗಿ, ಕೊಂಗ್ರೆಸ್ಸಿಗಾಗಿ ಹವಣಿಸಲು ಬಂದು ಶಾಶ್ವತವಾದ ಸಂಸ್ಥೆಯ ಸ್ಥಾಪನೆಯಲ್ಲಿ ನಿರತರಾದರು ಇವರ ಜತೆ ಮೆಹರೆಗೆ, ತ್ರಿಗಳಾದ ಹ್ಯೂಮು, ಡಬ್ಲ್ಯು ಎಸ್. ಕೈನ್, ಜೋನ್ ಇ. ಎಲ್ಲಿಸ್ (ಪಾರ್ಲಿಮೆಂಟಿನ ಸಭ್ಯರು) ನಂತರ ಹಿಂದೂದೇಶದ ವ್ಯವಹಾರಗಳಿಗೆ ಸಹಾಯಕ ಕಾರ್ಯದರ್ಶಿ

(೯ನೇ ಪುಟಕ್ಕೆ ಮುಂದುವರಿಯುತ್ತದೆ.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೋಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಪಂಡಿತರ ಅವಗಾಹನೆ ಬಗ್ಗೆ—
ನಮ್ಮ ಫಾರ್ಮೆಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರುಗಳಿಂದ ರಚಿಸಲ್ಪಟ್ಟ ಸಿದ್ಧೌಷಧಿಗಳ ಉದಾರದಿಂದ ಸಾವು ನಿಶ್ಚಯಿಸಿ ಸ್ವಾನುಭವಹೊಂದಿದ. ಎಲ್ಲಾ ಔಷಧಿ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಈ ಉದ್ದಿಷ್ಟಕ್ಕೆ ಎಲ್ಲಾ ಆಯುರ್ವೇದಿಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಕಾರ್ಯದರ್ಶಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಕೊಡಿಯಾಲಬೈಲ್, ಮಂಗಳೂರು.

ಚಿತ್ರಾಯುತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ಯಜ್ಞೋಪವೀತ-ಊರ್ಧ್ವಪುಂಡ್ರ-ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ-ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಆವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು.

ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Ested 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯುಳ್ಳ ಸಾಲಗಳ ಕೊಡಲ್ಪಡುವವು
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು
ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur, Dated 10—4—1935

G N Lakshman Pai,
Secretary

ವಜ್ರಗಳು ——— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ್'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1868ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು, ಇದು ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯ ದೆಸೆಯಿಂದ ಕೇಲಾಹಿಡಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು ಸೇವಿಸುವುದಕ್ಕೆ ಹಿತಕರ

ಕ್ರಯ—ದೊಡ್ಡ ಬಾಟ್ಲಿಗೆ ರೂ. 4 ಮಧ್ಯಮ 2—4—0 ಚಿಕ್ಕದು 1—2—0

ತಯಾರಿಸುವವರು — ಲಸ್ಟರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್:—ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

'ಸ್ವದೇಶಾಭಿಮಾನಿ'

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡೆಕೊಳ್ಳಿರಿ—ಓದಿರಿ!

ಗಳಾದರು. (೧೮೯೩) ಡಬ್ಲ್ಯು ಎಸ್ ಬಿ. ಮೆಕ್‌ಲೆರೆನ್ನ, ಪಾರ್ಲಿಮೆಂಟಿನ ಸದಸ್ಯರು, ದಾದಾಬಾಯಿ ನೌರೋಜಿ, ಮತ್ತು ಜಾರ್ಜ್ ಯ್ಯೂಲ, ನಂತರ ಕಾಂಗ್ರೆಸ್ಸಿನ ಅಧ್ಯಕ್ಷರಾದ ವರು ಕೂಡಿದ ಒಂದು ಕಮಿಟಿಯು ರಚನೆಯಾಯಿತು. ಇದಕ್ಕೆ ಬ್ರಿಟಿಷರ ಕಮಿಟಿ ಒಫ್ ಇಂಡಿಯನ್ ನೇಶನಲ್ ಕಾಂಗ್ರೆಸೆಂದು ಹೆಸರಾಯಿತು ೧೮೯೦ರಲ್ಲಿ ಇಂಡಿಯಾ ಎಂಬ ಪತ್ರಿಕೆಯು ಈ ಕಮಿಟಿಯ ಕಾರ್ಯದರ್ಶಿಗಳಾದ ವಿಲಿಯಮ್ ದಿಗ್ಬಿಗಳವರ ಸಂಪಾದಕತ್ವದಲ್ಲಿ ಹೊರಟಿತು ಈ ಪತ್ರದ ಮೂಲಕ ಪತ್ರಿಕಾ ವ್ಯವಸಾಯದಲ್ಲಿ ಜಾಣರಾದ ದಿಗ್ಬಿಗಳವರು, ಅನೇಕ ವರ್ಷಗಳ ತನಕ, ಎಂದರೆ, ಕಾಂಗ್ರೆಸ್ಸು ತಮ್ಮ ಲಂಡನಿನ ಪ್ರಾತಿನಿಧ್ಯವನ್ನು ನಿಲ್ಲಿಸಿದ ವರೆಗೆ ಹಿಂದೂದೇಶದ ಕುರಿತು ಪ್ರಸಾರಣಾ ಕಾರ್ಯವನ್ನು ನಡೆಯಿಸಿದರು

ಚಾರ್ಲ್ಸ್ ಬ್ರೇಡಲಾಫ್ ರೆಂಬವರು ಮೇಲಿನ ಕಮಿಟಿಯ ಹೊರಗಿದ್ದವರಾದರೂ ಅವರೂ ಭಾರತೀಯರ ಓರ್ವ ಮಹಾ ಹಿತವಾದಿಗಳಾಗಿದ್ದರು ಇವರೂ ಕೈನ ಮತ್ತು ಎನಿಬಿಸೆಂಟರೊಡನೆ, ಬ್ರಿಟಿಷ ಸರಕಾರದ ಮೂಲಸ್ಥಾನವಾಗಿರುವ ವೆಸ್ಟ್ ಮಿನಿಸ್ಟರ್‌ನಲ್ಲಿ ಹಿಂದೂದೇಶದ ಕುರಿತು ಒಂದು ಚಳವಳವನ್ನು ಎಬ್ಬಿಸಲು ಕಾರಣರಾದರು

೧೮೯೦ರಲ್ಲಿ ಬ್ರೇಡಲಾಫ್‌ರ ಹಿಂದೂದೇಶದ ಕೌನ್ಸಿಲುಗಳಿಗೆ ಸುಧಾರಣೆಗಳನ್ನು ಸಂಪಾದಿಸುವ ಒಂದು ಬಿಲ್ಲನ್ನು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ತಂದರು. ಈ ಬಿಲಿಗೆ ಜಸ್ಟಿಸ್ ಮೆಕ್‌ಕಾರ್ತಿ, ಕೈನ, ಮೆಕ್‌ಲಾರೆನ, ಎಲನ್ಸನ್ ಇವೇ ಮೊದಲಾದ ಮಹಾಪುರುಷರ ಬೆಂಬಲವು ಸಿಕ್ಕಿತು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಹಿಂದೂದೇಶಕ್ಕಾಗಿ ಶ್ರಮಪಟ್ಟವರು ಸ್ವಿಷ್ಟ ಮೇಸಿಯಲ್ ರೆಂಬ ಐರಿಸ್ ಸದಸ್ಯರೊಬ್ಬರು ಈ ಬಿಲು ಪ್ರಾಂತಿಕ ಸಭೆಗಳ ಸದಸ್ಯರ ಚುನಾವಣೆಯನ್ನು ಸಂಪಾದಿಸಿತು. ಮತ್ತು ಅದರಲ್ಲಿ ಪ್ರಾಂತಿಕ ಕೌನ್ಸಿಲುಗಳಿಗೆ ಹೆಚ್ಚಿನ ಹಕ್ಕುಗಳು ದೊರಕುವ ಸೂತ್ರಗಳಿದ್ದವು ಈ ಬಿಲು ಸಾಧಾರಣ ತರದ್ದಾದರೂ, ಹಿಂದೂದೇಶವನ್ನು ಬಂಧನದಲ್ಲಿಡಲು ಉದ್ದೇಶಗೊಂಡ ಹಲವರು ಪಾರ್ಲಿಮೆಂಟಿನಲ್ಲಿದ್ದುದರಿಂದ, ಬ್ರೇಡಲಾಫ್‌ರ ಮಸೂದೆಯು ಬಿದ್ದು ಹೋಗಬೇಕಾಯಿತು

ಪ್ರಾರಂಭದಲ್ಲಿ ಕಾಂಗ್ರೆಸ್ಸಿನಲ್ಲಿ ಹಿಂದೂ ಸದಸ್ಯರ ಸಂಖ್ಯೆಯು ಅಧಿಕವಾಗಿರುವುದರಿಂದ ಈ ಸಂಸ್ಥೆಯಲ್ಲಿ ಮುಸ್ಲಿಮರಿಗೆ ಮತ್ತು ಇತರ ಅಲ್ಪಸಂಖ್ಯಾಕರಿಗೆ ಹೆಚ್ಚಿನ ಆಸಕ್ತಿಯಿಲ್ಲೆಂಬ ಭಾವನೆಯು ಇಂಗ್ಲಾಂಡಿನಲ್ಲಾಯಿತು. ಇಂಗ್ಲಾಂಡಿಗೆ ತೆರಳಿದ ಪ್ರಾತಿನಿಧ್ಯ ಮಂಡಳದಲ್ಲಿ



ದಾದಾಭಾಯಿ ನೌರೋಜಿಯವರು

ಓರ್ವ ಮುಸ್ಲಿಮರನ್ನು ಕೂಡಿಸುತ್ತಿದ್ದರೆ ಈ ಭಾವನೆಯು ಹುಟ್ಟುತ್ತಿರಲಿಲ್ಲ. ಆದರೆ ಈ ಪ್ರಾತಿನಿಧ್ಯ ಮಂಡಲದಲ್ಲಿ ಹಿಂದೂಗಳಲ್ಲಿದ ಶ್ರೇಷ್ಠ ದಾದಾಭಾಯಿ ನೌರೋಜಿ, ಎಲಿನ್ ಹ್ಯೂಮ ಇಯರ್ಡ್ಲಿ ನೊರ್ಟನ್‌ರೆಂಬವರು ಸದಸ್ಯರಾಗಿದ್ದರು.

ದಾದಾಭಾಯಿ ನೌರೋಜಿ, ಸರ್ ವಿಲಿಯಮ್ ವೆಡ್ಡರ್ ಬರ್ನ್, ಮತ್ತು ಭಾರತೀಯ ಹಿತಚಿಂತಕರು ಕೂಡಿದ ಮೇಲಿನ ಪ್ರಾತಿನಿಧ್ಯ ಮಂಡಳವು ಸಿನ್ನಬರಿ ಎಂಬಲ್ಲಿನ ಫೊರೆಸ್ಟರ್ ಹೋಲಿನಲ್ಲಿ ಶ್ರೀ। ಸುರೇಂದ್ರನಾಥ ಬೆನರ್ಜಿ, ಎಂಬ ಪ್ರಸಿದ್ಧ ಭಾರತೀಯ ವಾಕ್ಚತುರರಿಂದ ಅವರ ಕಾರ್ಯಗಳಾರಂಭ ಮಾಡಿದರು. ಹಲವೆಡೆಗಳಲ್ಲಿ ಹಿಂದೂದೇಶದ ವಿಚಾರ ಪ್ರಸಾರಣೆ ನಡೆಯಿಸಲು ಸಭೆಗಳನ್ನು ಜರಗಿಸಲಾಯಿತು. ಎಲ್ಲಾ ಪಾರ್ಲಿಮೆಂಟ್ ಸದಸ್ಯರು ಇವರ ಭಾಷಣಗಳನ್ನು ಕೇಳುವವರಾದರು ಕೈನರ ಸಹಕಾರದಿಂದ ಎಲ್ಲಾ ಪ್ರಾಮುಖ್ಯ ಸ್ಥಳಗಳಲ್ಲಿ ಇವರ ಸಭೆಗಳು ಜರಗಿ, ಜಯಶಾಲಿಗಳಾಗಿ ಕಾರ್ಯ ನಡೆಯಿಸಿದರು. ಈ ಕಮಿಟಿಗೆ ಅಲ್ಲಿನ ಲಿಬರಲ್ ಪಂಗಡದ ಆಧಾರ ಸಿಕ್ಕಿತು. ಯಾವತ್ತೂ ಪಂಗಡಗಳ ಮೇಲೆ ಆಧರಿಸುವ ಇಚ್ಛೆಯು ಅವರಿಗಿರಲಿಲ್ಲ ಆದರೂ ಆಗ ರೂಢಿಯಲ್ಲಿರುವ ಬ್ರಿಟಿಷ ಪಾರ್ಲಿಮೆಂಟಿನ ಹಲವು ರಾಷ್ಟ್ರೀಯ ಪಂಗಡಗಳು ಇವರ ಭಾಷಣಗಳನ್ನು ಕೇಳಿ ಇವರೊಡನೆ ಸಹಕರಿಸಲು ಲೀನರಾದರು. ಈ ಸಭೆಗೆ ಅವರ ಪಶ್ಚಿಮ ಇಂಗ್ಲಾಂಡಿನ ಸಂಚಾರದಲ್ಲಿ ನಂತರ ಇಂಡಿಯಾ ಸರಕಾರದಲಿ ಮೆಂಬರರಾಗಿ ಪ್ರಸಿದ್ಧರಾದ ಸಯ್ಯದ್ ಅಲಿ ಇಮಾಮರು ಸೇರಿದರು ಕೆಲವು ಭಾಷಣಗಳನ್ನು ಮಾಡಿದರು ಇದರಿಂದ ಬ್ರಿಟನ್‌ರಲ್ಲಿ ಈ ಮೊದಲು ಉಂಟಾದ ಭಾವನೆಯು ಹೋಗುವಂತಾಯಿತು ಸುರೇಂದ್ರನಾಥ ಬೆನರ್ಜಿಗಳ ಭಾಷಣಗಳು ಅನೇಕರನ್ನು ಆಕರ್ಷಿಸಿತು ಅವರು ಮಹಾ ಭಾಷಣಕರ್ತರೆಂಬ ಕೀರ್ತಿಯು ಎಲ್ಲೆಲ್ಲೂ ಹರಡಿತು ಒಕ್ಸ್‌ಫೋರ್ಡ್‌ನ ಯೂನಿಯನ್, ಮೆಂಚೆಸ್ಟರ್ ಯೂನಿಯನ್ ಇವೇ ಮೊದಲಾದ ಯೂನಿಯನ್‌ಗಳು ಸರ್ ವಿಲಿಯಮ್ ವೆಡ್ಡರ ಬರ್ನರ ದ ಹಿಂದೂದೇಶಕ್ಕೆ ಸುಧಾರಣೆಗಳನ್ನು ಸೂಚಿಸುವ ಅನೇಕ ಠರಾವುಗಳನ್ನು ಮಾಡ ನವರಾದರು. 'ಮೆಂಚೆಸ್ಟರ್ ಗಾರ್ಡಿಯನ್'ವೆಂಬ ಪ್ರಸಿದ್ಧ ಪತ್ರಿಕೆ ಈಗಿನಂತೆ ಆಗ್ಯೂ ಈ ಕಮಿಟಿಯನ್ನು ಹಾರೈಸಿ, ಲೇಖಗಳನ್ನು ಬರೆಯಿತು

ಒಟ್ಟಾರೆ, ಇಂಗ್ಲಾಂಡಿನಲ್ಲಿ ನಡೆದ ಕಾಂಗ್ರೆಸ್ ಪ್ರಸಾರಣೆಯು ಸಾರ್ವಜನಿಕ ಸಭೆಗಳ ರೂಪಗಳಲ್ಲೂ, ಕೊನ್ಫರೆನ್ಸ್, ಗಾರ್ಡನ್ ಪಾರ್ಟಿ ಇತ್ಯಾದಿ ಹಲವು ರೂಪಗಳಲ್ಲಿ ನಡೆಯಿತು ಈ ಕಮಿಟಿಯು ಆಗಿನ ಲಿಬರಲ್ ಪಂಗಡದ ನಾಯಕರಾದ ಗ್ಲೇಡ್‌ಸ್ಟನ್‌ರ ಭೇಟಿಯನ್ನು ಮಾಡಿತು ಅವರಿಗೆ ಮೇಲಿನ ಕಾರ್ಯಕ್ರಮಗಳ ಅರಿವನ್ನು ಮಾಡಿತ ಸ್ಯಾಮ್ಯುಲ ಇವರಿಗೆ ಕಾಂಗ್ರೆಸ್ಸಿನ್ನ ಕಥೆಯನ್ನು ವಿವರಿಸಿದರು ಮತ್ತು ಮುಸ್ಲಿಮರ ಕುರಿತು ಕೇಳಿದ ಹಲವು ಪ್ರಶ್ನೆಗಳಿಗೆ ಸಮಾಧಾನಕರ ಉತ್ತರವಿತ್ತರು ಗ್ಲೇಡ್‌ಸ್ಟನ್ನರೆ ಹಿಂದೂದೇಶಕ್ಕೆ ಸುಧಾರಣೆ ಕೊಡುವ ಅನೇಕ ಯೋಜನೆಗಳಲ್ಲಿ ಬಹಳ ಆಸಕ್ತಿಯನ್ನು ತೋರಿಸಿದರು.

ಜೋಸೆಫ್ ಚೇಂಬರ್‌ಲೇನರು ಪಾರ್ಲಿಮೆಂಟಿನ ಸದಸ್ಯರು ಈ ಯೋಜನೆಗಳನ್ನು ಸೇರಿಸುವ ಮಹಾಕಾರ್ಯಗಳನ್ನು ಮಾಡಲು ಸಿದ್ಧರಿದ್ದರು. ಇವರಿಗೆ ಗೊನರೆಂಬವರ (ಆಗಿನ ಅಧಿಕ ... ದರ್ಶಿಗಳ) ಸಹಕಾರವಿತ್ತು ಇವರು ಎಲ್ಲೆಲ್ಲೂ ಕಾಂಗ್ರೆಸ್ಸಿನ ವಿರೋಧ ಪ್ರಸಾರಣೆಯನ್ನು ನಡೆಯಿಸಿದರು ಬ್ರಾಡ್‌ಲಾಫರ ಮಸೂದೆಯ ಕುರಿತು ಆಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆಯು ನಡೆಯುತ್ತಿತ್ತು ಗ್ಲೇಡಸ್ಟನ್‌ರ ಕಾಂಗ್ರೆಸ್ ಪ್ರತಿನಿಧಿಗಳ ಕೂಡೆ ಭಾವಪೂರ್ವಕ ಮಾತಾಡಿದರೇನೋ ನಿಜ ಆದರೆ ಈ ಮಸೂದೆಗೆ ಇವರ ಬೆಂಬಲವು ಸಿಕ್ಕದೆ ಹೋಯಿತು

ಆಗಿನ ದಿವಸಗಳು, ಅಂದರೆ (೧೮೯೦) ಆಂದೋಳನ ದಿವಸಗಳಾಗಿದ್ದವು ಅಸಮಾಧಾನ ಹೊಂದಿದ ಹಿಂದೂದೇಶದ ಹಲವು ಪ್ರಾಂತ್ಯಗಳಿಂದ ಮತ್ತು ಅನೇಕ ಕಡೆಗಳಿಂದ ಸುಮಾರು ೭೭೫ ಅರ್ಜಿಗಳು ಪಾರ್ಲಿಮೆಂಟಿಗೆ ಬಂದಿದ್ದವು.

೧೮೯೦ರಲ್ಲಿ ಕೈನರರಿಗೆ ಅವರ ಪಾರ್ಲಿಮೆಂಟಿನ ಸದಸ್ಯತನವು ತಪ್ಪಿಹೋಯಿತು. ಆದರೂ, ಹಿಂದೂದೇಶದ ಕುರಿತು ಮತ್ತು ಚಳವಳವನ್ನು ನಡೆಯಿಸಿದರು. ಪ್ರಸಾರಣೆಗಾಗಿ ಸಮಸ್ತ ಇಂಗ್ಲಾಂಡಿನ ಪ್ರಯಾಣವನ್ನು ಮಾಡಿದರು. ಹಿಂದೂದೇಶದ ಸ್ಥಿತಿಯನ್ನು ಆಗಿಂದಾಗ್ಗೆ ಅರಿತುಕೊಳ್ಳಲು, ಇಲ್ಲಿನ ಅನೇಕ ಮುಖಂಡರೊಡನೆ ಪತ್ರವ್ಯವಹಾರ ನಡೆಯಿಸಿದರು. ಓಕ್ಸ್‌ರೆಸ್ಟ ಇಂಡಿಯಾವೆಂಬ ಪುಸ್ತಕವನ್ನು ಪ್ರಕಟಿಸಿದರು. ಇದರಲ್ಲಿ ಸದಿನಾದಿನ ಪ್ರಾಂತ್ಯಗಳ

(ಮುಂದೆ ಪುಟ ೯ ರಲ್ಲಿ ಮುಂದುವರಿಯುವುದು)

ವಾತವು ಅವಳ ಇಡೀ ಜೀವಮಾನವನ್ನು ವೇದನೆಗೀಡುಮಾಡಿತು.

ಕ್ರುಶ್ಚನ ಲವಣ ಸೇವನೆಯಿಂದ ಕಡೆಗೆ ಗುಣವಾಯಿತು.

ಇವಳೆನ್ನ ಇಷ್ಟರ ವರೆಗೆ ಈ ವಾತ ಸಂಕಟದಿಂದ ನರಳಲು ಬಿಡಬಾರದಾಗಿತ್ತು ಯಾರಾದರೂ ಆಪ್ತೇಷ್ಟರು ಕ್ರುಶ್ಚೆನ್ ಲವಣವನ್ನು ಉಪಯೋಗಿಸಲು ಮೊದಲೆ ಹೇಳುತ್ತಿದ್ದರೆ ಎಷ್ಟೋ ವಾಸಿಯಾಗುತ್ತಿತ್ತು

ಅವಳ ಚರಿತ್ರೆಯನ್ನು ಕೇಳಿ —

"ಕೆಲವು ವರುಷಗಳಿಂದ ಈ ವಾತರೋಗವು ನನ್ನನ್ನು ಪೀಡಿಸಲಾಗ ಮಾಡಿತ್ತು ಮೊಣಕಾಲಿನಲ್ಲಿ ತೀಕ್ಷ್ಣವಾದ ವೇದನೆ ಇದ್ದುದರಿಂದ ಕಾಲುಗಳಿದ್ದೂ ನನಗೆ ಪ್ರಯೋಜನವಿರಲಿಲ್ಲ ರಾತ್ರಿಂದಿವವೂ ನಿದ್ರೆ ಬರುತ್ತಿದ್ದಿಲ್ಲ ಈ ನೋವಿನಿಂದಾಗಿ ೨೫ ವರುಷಗಳ ವರೆಗೂ ನಾನು ಭಯಂಕರ ವೇದನೆಯನ್ನು ಸಹಿಸಿದೆನು ಆಗ ನನ್ನ ಸಂಗಾತಿಯೊಬ್ಬಳು ಕ್ರುಶೆನ್ ಲವಣವನ್ನು ಸೇವಿಸಲು ಆಗ್ರಹ ಮಾಡಿದಳು ಇಷ್ಟರ ವರೆಗೆ ಮದ್ದಿಗಾಗಿ ದುಡ್ಡನ್ನು ಸುರಿದು ಫಲಿತಾಂಶವೇನೂ ದೊರಕದ ನನಗೆ ಮೊದಲು ಆ ಮದ್ದಿನಲ್ಲಿ ವಿಶ್ವಾಸವಾಗಲಿಲ್ಲ. ಆದರೆ ಅದನ್ನು ಸೇವಿಸಿದ ನಂತರ ನನ್ನ ನೋವು ಕ್ರಮಶಃ ಗುಣವಾಯಿತು ಕ್ರುಶ್ಚನ ಲವಣದ ಪರಿಣಾಮವನ್ನು ಕಂಡು ಬಹಳ ಸಂತೋಷವಾಯಿತು ಈಗ ನನಗೆ ವಾತಸಂಕಟವೇ ಇಲ್ಲವೆಂದು ಖಾತ್ರಿಯಾಗಿ ಹೇಳಬಲ್ಲೆನು

Mrs A G

ವಾತ ಸಂಕಟವು ಉಂಟಾಗಲು ಕಾರಣವೇನೆಂದು ಬಲ್ಲಿರಾ? ದೇಹದೊಳಗಿನ ಕಶ್ಮಲಗಳನ್ನು ಸರಿಯಾಗಿ ಹೊರಗೆ ಹಾಕದೆ ಇದ್ದುದೆ ಇದರ ಕಾರಣ ಕ್ರುಶ್ಚೆನ ಲವಣದ ಪ್ರಧಾನ ಕೆಲಸವು ದೇಹದೊಳಗಿನ ಅಂಗಾಂಗಗಳನ್ನು ಸ್ವಚ್ಛವಾಗಿರಿಸುವುದಾಗಿರುತ್ತದೆ ಕ್ರುಶ್ಚೆನ ಲವಣದಲ್ಲಿರುವ ಅನೇಕಾನೇಕ ಧಾತುಗಳು ದೇಹದೊಳಗೆ ಹೋದ ಕೂಡಲೆ ಕರಗಿ ವಿಷಕರವಾದ ಈ ಕಶ್ಮಲಗಳನ್ನು ಬಹುಬೇಗನೆ ಹೊರಗೆ ತಳ್ಳುತ್ತವೆ ಅನಂತರ ನಿಮಗೆ ಸದಾಕಾಲವೂ ಸುಖಪ್ರಾಪ್ತಿ ಎಂಬುದರಲ್ಲಿ ಸಂಶಯವು



ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ, ಕ್ರುಶ್ಚೆನ್ ಸೋಲ್ಟ್ ದೊರೆಯುತ್ತದೆ.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಜಯಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಸಂಹಾರಮಾಡುವ ಟಾನಿಕ್ಕು.

34 ಔನ್ಸ್ ರೂ 2 16 ಔನ್ಸ್ ರೂ. 1–6–0 8 ಔನ್ಸ್ ರೂ 0–14–0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಆಯೊಡ್ಯಾಸ್ಟ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ಶೀಘ್ರ ಗುಣದಾಯಿ

4 ಔನ್ಸ್ ರೂ. 1—0—0. 8 ಔನ್ಸ್ ರೂ. 1—8—0.

ದಕ್ಷಿಣ ಕನ್ನಡದ ಏಜಂಟರು—ಫೆರ್ನಾಂಡಿಸ್‌ರ ಸ್ಟೋರ್ಸ್, ಮಂಗಳೂರು.

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು.—

ಸಂಜೆ ಚಳಿ ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠಸ್ವರ ಬಿಳುಪಾದ, ಗುಂಡಿಗಿಳಿದ ನೀರು ತುಂಬಿದ ಕಣ್ಣು ಇಳಿದ ಪಕ್ಕೆ ಮುಖದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ಕಲೆಸಿದಿಕ, ಉಸಿರು ಕಟ್ಟುವಿಕೆ ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಮೆಯಾಗುವುದು

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ ದೇಹವರ್ಧನೆಗೆ ಔಷಧಿಗಳೂ ವಾತಕ್ಕೆ ಕ್ಷೀರಬಲವೂ ಮುಟ್ಟಾಗುವ ಗರ್ಭಸ್ರಾವಾಗುವುದಕ್ಕೆ ಗುಹ್ಯ ರೋಗಗಳಿಗೆ ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ

ನೋಟೀಸು

ಕಾರ್ಕಳ ತಾಲೂಕು ಮಾಳಾ ಗ್ರಾಮದ ಯೆಡಪಾಡಿ ವಾಳ್ಯದಲ್ಲಿರುವ ಬರ್ವೆ ಮಹಾದೇವ ಭಟ್ಟರ ವಿಧವೆ 1ನೇ ಗೌರಿಬಾಯಿ ಸದರಿ ಮಹಾದೇವ ಭಟ್ಟರ ಖಾಸಾ ಅಣ್ಣ 2ನೇ ಭರ್ವೆ ಕೃಷ್ಣ ಭಟ್ಟ ಕೂಡಾ 2 ಜನರು ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ—

ನಮ್ಮ ಪೈಕಿ 1ನೇಯ ವಳ ಗಂಡ ಮತ್ತು 2ನೇಯವನ ತಮ್ಮ ಬರ್ವೆ ಮಹಾದೇವ ಭಟ್ಟರು ಇದೇ ಕಳೆದ ತಾ 26-12-35ರಲ್ಲಿ ಮೃತಪಟ್ಟ ನಮ್ಮ ಪೈಕಿ 1ನೇಯವಳು ಸದರಿ ಮಹಾದೇವ ಭಟ್ಟರ ವ್ಯಾರೀಸುದಾರಳಾಗಿರುತ್ತಾಳೆ ನಮ್ಮ ಪೈಕಿ 2ನೇಯವನು ಸದರಿ ಮಹಾದೇವ ಭಟ್ಟರ ಖಾಸಾ ಅಣ್ಣನಾಗಿರುತ್ತಾನೆ ಸದರಿ ಮಹಾದೇವ ಭಟ್ಟರು ಮೃತಪಟ್ಟನಂತರ ಸದರಿ ಮಹಾದೇವ ಭಟ್ಟರ ತಂಗಿಯ ಮಗ ಸದರಿ ಎಡಪಾಡಿಯಲ್ಲಿರುವ ಜ್ಯೋತಿ ಗಣಪತಿ ಭಟ್ಟರ ಮಗ ಕೃಷ್ಣಭಟ್ಟನು 2 ಖಾಲಿ ಕಾಗದಗಳಿಗೆ ಸದರಿ ಮಹಾದೇವ ಭಟ್ಟರ ಎಡಕೈ ಹೆಬ್ಬೆಟ್ಟಿನ ಮುದ್ರೆಗಳನ್ನು ಮಾಡಿಸಿರುವದಾಗಿಯೂ ಸದರಿ 2 ಕಾಗದಗಳಲ್ಲಿ ಏನೋ ಸುಳ್ಳು ರಿಕಾರ್ಡು ಕಲ್ಪಿಸುವ ಇರಾದೆಯಲ್ಲಿರುವದಾಗಿಯೂ ನಮ್ಮಿಬ್ಬರಿಗೂ ತಿಳಿದು ಬಂದಿರುವುದರಿಂದ ಈ ನೋಟೀಸು ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ

ಸದ್ರಿ ಕೃಷ್ಣಭಟ್ಟನು ತೆಗೆದುಕೊಂಡಿರುವ 2 ಹೆಬ್ಬೆಟ್ಟಿನ ಮುದ್ರೆಗಳುಳ್ಳ ಕಾಗದಗಳ ಮೇಲೆ ಸದರಿ ಕೃಷ್ಣಭಟ್ಟನು ಅಗಲೀ ಇನ್ನು ಯಾರೇ ಆಗಲೀ ಏನೆಂದರೂ ರಿಕಾರ್ಡು ಕಲ್ಪಿಸಿದ ಪಕ್ಷದಲ್ಲಿ ಸದರಿ ರಿಕಾರ್ಡುಗಳ ಆಧಾರದಿಂದ ಯಾರಿಗೂ ಸದರಿ ಮಹಾದೇವ ಭಟ್ಟರ ಸ್ಥಿರ ಚರ ಸೊತ್ತುಗಳು ಜೋಡಿಯಾಗಲಿಕ್ಕಿಲ್ಲ ವ ಸದರಿ ಕಲ್ಪಿಸಿರುವ ಯಾ ಕಲ್ಪಿಸಲ್ಪಡುವ ರಿಕಾರ್ಡುಗಳು ಸಿಂಧಾಗತಕ್ಕವುಗಳೂ ಅಲ್ಲ ಸದರಿ ಮಹಾದೇವ ಭಟ್ಟರು ಅವರ ಸ್ಥಿರಚರ ಸೊತ್ತುಗಳ ಕುರಿತು ವೀಲ್, ಯಾ ದಾನಪತ್ರ ಯಾ ದತ್ತವಿಧಾನ ವಗೈರೆ ಮಾಡಿಟ್ಟಿದ್ದೂ ಇಲ್ಲ ವ ಇತರರಿಗೆ ರಿಜಿಸ್ತ್ರಿ ಶಿವಾಯಿ ನೋಟು ವಗೈರೆ ಸನದುಗಳನ್ನು ಬರಕೊಟ್ಟದ್ದೂ ಇಲ್ಲ ನಮ್ಮ ಪೈಕಿ 2ನೇಯವರು ಕೂಡಾ ಸದರಿ ಮಹಾದೇವ ಭಟ್ಟರ ಒಟ್ಟಿನಲ್ಲಿಯೇ ಈಗ ಕೆಲವು ವರುಷಗಳಿಂದ ಜೀವಿಸಿಬರುವದರಿಂದ ಮೇಲೆ ಹೇಳಿರುವ ಸಂಗ್ತಿಗಳು ನಮಗೆ ಸ್ವತಹಾ ಗೊತ್ತಿರುತ್ತವೆ ಸದರಿ ಮಹಾದೇವ ಭಟ್ಟರು ನಿಸ್ಸಂತತಿಯಾಗಿ ಮೃತಪಟ್ಟಿದ್ದಾಗಿರುತ್ತದೆ ಈ ಸಂಗ್ತಿಗಳನ್ನು ಸರ್ವ ಜನರಿಗೂ ತಿಳಿಯುವಂತೆ ಜ್ಯಾಹೀರು ಮಾಡಿಕೊಂಡಿದ್ದೇವೆ

ಸ್ಥ. ಕ್ಯಾಂಪ ಕಾರ್ಕಳ ತಾಲೂಕು ಮಾಳ ಗ್ರಾಮ 9-12-35	||| ಈ ಮೂರು ಗೆರೆ ಗೌರಿ ಬಾಯಿ ರುಜು. X ಬರ್ವೆ ಕೃಷ್ಣ ಭಟ್ಟನ ರುಜು.

Shiromani Narayanacharya & Co ,
S k Lace & Cloth Manufacturers
Choukhamba Benares City

WISHES HE HAD
THIS MAN

THIS MAN
OUR CUSTOMER

ಕೃಷ್ಣರಾಯರ ಸ್ವಾಮಿ ಆನಂದರಾಯರೆ ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಿಕ್ಕಾಗ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರ — ಅದರ ಕ್ರಯವೆಷ್ಟು?

ಆನಂದರಾಯರು — ಎಲ್ಲಾ ಕಡೆಗಳಿಗಿಂತ ಕೇಳದ 25 ಕಡಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಒಂದಿಕ ಜರಿ ರಂಗು ನೇಯಲ ದ ಶೀರೆಗಳು ಸಿಗುತ್ತವೆ 18 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ಪದಲು ಬಟ್ಟೆ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪದಲು ಸದ ಶೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1-8 ರಿಂದ 4ರ ವರೆಗೆ ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಸಾಪುಡಿ 1ಕ್ಕೆ ರೂ 7ರಿಂದ 15ರ ವರೆಗೆ 8 ಮೊಳದ ಪಾಪುಡಿ 1ಕ್ಕೆ ರೂ 10ರಿಂದ 35ರ ವರೆಗೆ 5 ಮೊಳದ ಗಮುಛ 1ಕ್ಕೆ ರೂ 4ರಿಂದ 16ರ ವರೆಗೆ 6 ಮೊಳದ ಪಮುಛ 1ಕ್ಕೆ ರೂ 6ರಿಂದ 35ರ ವರೆಗೆ ಬೇರೆಯೆಲ್ಲಾ ತರದ ಮ್ಹಾಲುಗಳ ಕ್ರಯದ ಪಟ್ಟಿ ಇನಾಂ 1 ಅಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್

LOOK SHARP! LOOK AHEAD

Murdeshwar's Banking Institute.

Pioneer Institute of the West Coast

Opens out Careers for Business men Graduates, Under graduates and S S L Cs and also for those who have not passed any University examination

Coaches students for the Specialised Banking Courses (C A I B & C A I I B) and also for Accountancy, Secretarial and Insurance Courses (L A A, A C R A, F C R A, F I S A, A C I I etc)

Classes for the Cambridge School Certificate (Senior Cambridge) Examination for 1936 and for the Bombay Advocates Examination are also held

Ladies are also admitted

Enrol yourself NOW Classes are in full swing Expert tuition (Oral or Postal) by well qualified and experienced Lecturers

FEES VERY MODERATE

For further particulars apply to —

D R Murdeshwar,
Dip Econ F R Econ, S (Lond.)
Principal
Ganapathy High School Street,
Mangalore

೧೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಶಾಂತಿಯುತವಾದುದು ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ ಇನ್ಸ್ಟಿಟ್ಯೂಟ್ ದಾಸರರಾಗಿ ಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ ಬೆಲೆ ರೂ ೨ ಮಾತ್ರ

೦೧ 1 6 Bengal Mesmarism House
5-7 Panchpota, Bengal (E. B

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ಹೊಸ ರಾಶಿ ಅಕ್ಕಿ	3— 5	3— 12
ಹೊಸ ಮುಸ್ಕಿ	3—10	4—10
ಗುಡ್ಡ ಸುಗ್ಗಿ	3—12	4— 0
ಊರ ಅವ್ವಲ್ ಬೆಳ್ತಿಗೆ	4— 4	4—10
ರಂಗೂನು ಬೆ ಗೋ ಅಕ್ಕಿ	6— 4	7— 0
ಎಲ್ಲೂರು ಬೆ ಮು ಗಕ್ಕೆ	4— 4	4— 8
ಗೋದಿ ಗೋಣಿ ಗಕ್ಕೆ	8 — 8	10— 4
ತೊಗರಿ ಗೋಣಿ ಗಕ್ಕೆ	9 —[illegible]	9 — 8
ಹುರುಳಿ ಗೋಣಿ ಗಕ್ಕೆ	5— 6	—
ಕಡಲೆ ಗೋಣಿ ಗಕ್ಕೆ	7 — 4	9 — 8
ನೆಲಗಡಲೆ ಗೋಣಿಗಕ್ಕೆ	11— 0	15— 8
ಉದ್ದು ಗೋಣಿ ಗಕ್ಕೆ	9— 8	10 — 0
ಹೆಸರು ಗೋಣಿ ಗಕ್ಕೆ	9— 4	9—12
ಊರುಬೆಲ್ಲ ಖಂಡಿ ಗಕ್ಕೆ	35—	40— 6
ಉಪ್ಪು ಗೋಣಿ ಗಕ್ಕೆ	4— 8	4— 8
ಕೊಬ್ರಿ ಖಂಡಿ ಗಕ್ಕೆ	47— 6	50— 0
ಕೊಬ್ರಿ ಹಿಂಡಿ ಖಂಡಿ ಗಕ್ಕೆ	28— 0	28— 0
ಎಳ್ಳಿಂಡಿ ಖಂಡಿ ಗಕ್ಕೆ	35 — 0	30— 0
ಕೊಬ್ರಿ ಎಣ್ಣೆ ಕುಡ ಗಕ್ಕೆ	4—10	5 10
ಎಳ್ಳೆಣ್ಣೆ ಮುಡ ಗಕ್ಕೆ	7— 0	7— 0
ಬಿಮುಲಿಎಣ್ಣೆ ಪಟ್ಟಿಗೆ ಗಕ್ಕೆ	6 5	6— 5
ಮೋಂಬತ್ತಿ ಮು ಗಕ್ಕೆ	2—10	3 —10
ಮೆಣಸು	2— 6	4— 0
ಸಾಸಿವೆ ಮುಡಿ ಗಕ್ಕೆ	5 — 8	6 — 0
ಕಾಳುಮೆಣಸು ಖ. ಗಕ್ಕೆ	102— 8	105—
ಮೆಂತ್ಯೆ ಬೀಜ ಮುಡಗಕ್ಕೆ	38— 0	39— 0
ಗೇರುಬೀಜ ಮು. ಗಕ್ಕೆ	4— 6	4 — 8
ಕಪ್ಪು ಖಂಡಿ ಗಕ್ಕೆ	36— 0	37— 8
ತಾಂಬ್ರತಗಡು ಮು. ಗಕ್ಕೆ	9— 12	9— 14
ತಾಂಬ್ರಪಾತ್ರಗಳು ಮು ಗಕ್ಕೆ	13— 8	14— 0
ಚೀಟಿಬೆಲ್ಲ ಸೇರು ಗಕ್ಕೆ	17— 6	18— 0
ಹಿತ್ತಾಳೆ ತಗಡು ಮು. ಗಕ್ಕೆ	10— 0	10— 8
ಸವಸು ಗಕ್ಕೆ	22— 8	22— 8
ಮೆಣಸಿ ಹುಳಿ ಖಂಡಿ ಗಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಗಕ್ಕೆ	150— 0	155— 0
ಫಿಬೇರಿ ಕಾಫಿ ಖಂಡಿ ಗಕ್ಕೆ	180— 0	152— 8
ಮುಡಿಕೇರಿ ಏಲಕ್ಕಿ	20— 0	26 — 0
ಸಕಲೇಶಪುರ ಏಲಕ್ಕಿ	28— 0	30 — 0
ಹಳತು ಅಡಿಕೆ	100—0	110—0

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಪುಷ್ಯ ಶು ೧೧ ಶನಿವಾರದಿಂದ ಪುಷ್ಯ ಬಾ ೨ ಶುಕ್ರವಾರದ ವರೆಗಿನ ಪಂಚಾಂಗ (೧೯೩೬ನೇಯ ಧನು ಪೆರಾರ್ದೆ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
4	ಶನಿ	೧೧	೫೨	ಭರಣೀ	೨೮	೨೧	[illegible]
5	ರವಿ	೧೨	೪೯	ಕೃತ್ತಿಕಾ	೨೫	೨೧	
6	ಸೋಮ	೧೪	೪೬	ರೋಹಿಣಿ	೨೪	೨೨	
7	ಮಂಗಳ	೧೪	೪೫	ಮೃಗಶಿರ	೨೪	೨೪	
8	*ಬುಧ	೧೫	೪೪	ಆರ್ದ್ರಾ	೨೪	೨೪	
9	ಗುರು	೧	೪೫	ಪುನರ್ವಸು	೨೬	೨೫	
10	ಶುಕ್ರ	೨	೪೮	ಪುಷ್ಯ	೨೯	೨೬	

ನಮ್ಮ ಸಾಪ್ತಾಹಿಕ ಕಥೆ.

ಲಕ್ಷಾಧೀಶನ ಪೂರ್ವಾರ್ಜಿತ

ಲೇಖಕ – ಶ್ರೀ "ರಸಿಕ ರಂಜನ"

'ಲಕ್ಷಾಧೀಶನ ಮಗನು ಲಕ್ಷಾಧೀಶನೆ?'

ನಾಮಣಿಯೂ, ನಾನೂ ಎರಡು ಘಂಟೆಗಳ ಸಮಯ ಬಾಯಲ್ಲಿ ನೊರೆ ಬರುವಷ್ಟರ ತನಕ ಆ ಮಾತು ಈ ಮಾತು ಆಡಿ, ಕಡೆಗೆ ಚರ್ಚೆಗೆ ಯೋಗ್ಯವಾದ ಪ್ರಸಂಗವನ್ನು ನೆನೆಯಲಾರದೆ ಸುಮ್ಮನಿರುವಾಗ, ನಾಮಣಿಯ ಬಾಯಿಂದ ಈ ಪ್ರಶ್ನೆ ಹೊರಟಿತು.

'ಹೌದು, ಲಕ್ಷಾಧೀಶ' ನಾನೆಂದೆ 'ಏಕೆ, ಮಿಲಿಯಾಧೀಶನೂ ಯಾಕಾಗಲಾರನು? ಲಕ್ಷಾಧಿಪತಿಯ ಮಗನು ಮಿಲಿಯಾಧೀಶನಾಗುವುದು ಸಹಜವಲ್ಲವೇ? ಹಾಗಾಗಲು ಅವನಿಗಿರುವಷ್ಟು ಸರ್ವತೋಮುಖವಾದ ಅನುಕೂಲತೆಗಳು ಮತ್ತೆ ಯಾರಿಗಿವೆ? ಲಕ್ಷಾಧೀಶನ ಮಗನಿಗೆ ಲಕ್ಷಾಧೀಶನೇ ಆಗಿಯಾದರೂ ಇರಲು ಯಾರ ಆತಂಕವಿದೆ?'

'ಅತಂಕ ಯಾರದೇ?' ಎಂದನು ವೀರಮಣಿ ನಾಮಣಿ 'ವಿಧಿಯನ್ನು ಅಲ್ಲಗಳೆದೆಯಾ? 'ಹಣೆಬರಹ'ವೆಂಬುದೊಂದು ಇರುವುದೆಂದು ಮರೆತೆಯಾ? 'ಪೂರ್ವಾರ್ಜಿತ'ವೆಂಬುದು ಅಷ್ಟು ತುಚ್ಛವೇ?

'ನೀನೇನೂ ಹೇಳು, ನಾನೆಂದೆ, ನನಗೆ ಅದರಲ್ಲಿ ರವಷ್ಟು ನಂಬಿಕೆಯಿಲ್ಲ.

ಹಾಗಾದರೆ ನೀನು ನಮ್ಮೂರ ಲಕ್ಷಾಧೀಶ ವಾಮನ ನಾಯಕರ ವಿಷಯ ಕೇಳಿಲ್ಲವೆಂದು ಕಾಣುತ್ತದೆ ನಾಮಣಿಯ ಪ್ರಶ್ನೆ.

'ಯಾವ ವಾಮನ ನಾಯಕರು?' ವಜ್ರಕಂಠಿ ವಾಮನನಾಯಕರೇ? ಅವರಿಗೇನಾಯಿತು?' ನಾನು ಆತುರದಿಂದ ಕೇಳಿದೆ. ನಿಜವಾಗಿಯೂ ನಾನು ವೈದ್ಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ನಮ್ಮೂರಾದ ಮಂಗಳೂರನ್ನು ಬಿಟ್ಟು ಇಷ್ಟು ದೂರದ ಕಲ್ಕತ್ತಾ ನಗರದಲ್ಲಿ ವೈದ್ಯವೃತ್ತಿಯನ್ನಾರಂಭಿಸಿದಂದಿನಿಂದ ಈ ವರೆಗೆ ಸುಮಾರು ಹತ್ತು ವರ್ಷ ನಮ್ಮೂರವರ ಅದೃಷ್ಟದ ಸ್ವಲ್ಪವೂ ಪರಿಚಯ ನನಗಿರಲಿಲ್ಲ.

'ಹೌದು, ಹೌದು ಅವರೇ, ನಾಮಣಿಯು ಉಬ್ಬಿಕೊಂಡು ಎಂದನು. 'ಈ ಹೊತ್ತು ನಾನು ಪೇಟೆಯಲ್ಲಿ ಹೋಗುತ್ತಿದ್ದಾಗ ಒಂದು ಚಿಕ್ಕ ಪ್ರಸಂಗ ನಡೆಯಿತು. ಅದೇ ನನಗೆ 'ಪೂರ್ವಾರ್ಜಿತ'ವನ್ನು ನೆನಪಿಗೆ ತಂದಿತು. ಅದನ್ನು ಅಷ್ಟು ತುಚ್ಛೀಕರಿಸುತ್ತಿರುವ ನೀನಾದರೂ ಈ ದಿನ ನಡೆದ ಸಂಗತಿಯ ಸಮೂಲ ವೃತ್ತಾಂತವನ್ನು ಕೇಳಿದರೆ ನಿನ್ನ ಅಭಿಪ್ರಾಯವನ್ನು ಮಾರ್ಪಡಿಸದೆ ಇರಲಾರಿ.'

'ಹಾಗಾದರೆ ನಿನ್ನ ವಾದವನ್ನು ಸ್ಥಾಪಿಸಲು ಸುಲಭವಾದ ಉಪಾಯವೇ ದೊರಕಿದಂತಾಯಿತು, ಕಾರಿಬಿಡು ನಿನ್ನ ಅಂತರಂಗವನ್ನು, ನಾನು ಸಹಜವಾಗಿ ಹೇಳಿದೆ.

ನಾಮಣಿಯು ಒಂದು ಸಿಗರೇಟನ್ನು ಹೊತ್ತಿಸಿ ಹೊಗೆಯ ದಮ್ಮನ್ನು ತೆಗೆದುಕೊಳ್ಳುತ್ತ ಮೊದಲು ಮಾಡಿದನು.

'ವಜ್ರಕಂಠಿ ನಾಯಕರಿಗೆ ರಾಮಚಂದ್ರನು ಒಬ್ಬನೇ ಮಗನಾಗಿದ್ದನೆಂಬುದನ್ನು ನೀನು ಮರೆತಿರಲಿಕ್ಕಿಲ್ಲ. ಅವರು ಆತನನ್ನು ಎಷ್ಟು ಪ್ರೀತಿಯಿಂದ, ಎಷ್ಟು ಜಾಗರೂಕತೆಯಿಂದ ಸಲಹುತ್ತಿದ್ದರೆಂಬುದು ಎಲ್ಲರಿಗೆ ತಿಳಿದ ವಿಷಯವಷ್ಟೆ. ಹತ್ತು ವರ್ಷಗಳ ಕೆಳಗೆ, ಆತನು ಬರೇ ಎಂಟು ವರ್ಷದವನಿರುವಾಗ, ಆತನು ಕೇಳಿ ಹಟ ಮಾಡಿದ ತಿಂಡಿಯನ್ನೋ, ಆಟದ ಸಾಮಾನನ್ನೋ ಇತರ ಎಂತಹ ಬಯಕೆಯನ್ನೋ ಒದಗಿಸಿಕೊಡದ ದಿನವೇ ಇರಲಿಲ್ಲ. ನಾಯಕರಿಗೆ ಯಾವುದರ ಕೊರತೆಯಿತ್ತು, ಹಾಗೆ ಮಾಡಲು?

'ಊರಲ್ಲಿ ಯಾವ ನಾಟಕ, ಸಿನೆಮಾ ಅಥವಾ ಸರ್ಕಸ್ ಬರಲಿ, ನಾಯಕರು ಮಗನನ್ನು ಅವುಗಳ ಪ್ರತಿಯೊಂದು ಪ್ರದರ್ಶನಕ್ಕೂ ತೆಗೆದುಕೊಂಡು ಹೋಗುತ್ತಿದ್ದರು. ಎಂತಹ ಜಾತ್ರೆಯಾಗಲಿ ಅಲ್ಲಿ ನಾಯಕರು ಮಗನೊಡನೆ ಹಾಜರು. ಎಂತಹ ಸಭೆ, ಟೀಪಾರ್ಟಿ, ವರ್ಧಂತಿ ನಡೆಯಲಿ ನಾಯಕರ ಸವಾರಿ ಮಗನ ಸಮೇತವಾಗಿ ಅದರಲ್ಲಿ ಭಾಗವಹಿಸುತ್ತಿತ್ತು. ಎಲ್ಲಿ ಮಧುವೆ, ಎಲ್ಲಿ ಮುಂಜಿ, ಅಲ್ಲಿ ನಾಯಕರೂ ಅವರ ಮಗನೂ ಆಮಂತ್ರಿತರಾಗಿಯೇ ಮೆರೆಯುತ್ತಿದ್ದರು.

'ಊರಲ್ಲಿ ಮಹಾನವಮಿ, ಮೊಹರಂ ಮತ್ತು ಕ್ರಿಸ್‌ಮಸ್ ಸಮಯದಲ್ಲಿ ಆಯಾ ಜಾತಿಯವರು ಹಾಕುತ್ತಿದ್ದ ವೇಷಗಳ ಕೂಟಗಳಿಗೆ ನಾಯಕರ ಮನೆಯೊಂದು ಮಾಮೂಲಿನ ರಂಗಸ್ಥಳವಾಗಿತ್ತು.

'ಊರೊಳಗೆ ಬಂದ ಪರದೇಶಿಗಳಿಗೆಲ್ಲಾ ನಾಯಕರ ಮನೆಯೊಂದು ಮಹದಾಶ್ರಯಸ್ಥಾನ. ಗಾರುಡಿಗರೂ, ಡೊಂಬರೂ, 'ಬೆಕ್ಕಿನ ಕೊಂದವರೂ', ದಾಸರವರೂ, ಶಂಖದಾಸರೂ, ಗಿಡಿಬಿಡಿ ನರ್ಸಣ್ಣನವರೂ, ಹಾವಾಡಿಗರೂ, ಬಸವಾಡಿಗರೂ ಮಂಗಾಡಿಗರೂ, ಸರ್ವಸಾಧಾರಣ ಎಲ್ಲಾ ತರದ ಭಿಕ್ಷೋಪಜೀವಿಗಳೂ ಆಗಿಂದಾಗ ನಾಯಕರಲ್ಲಿ ಹೋಗಿ ತಂತಮ್ಮ ಕೌಶಲ್ಯಗಳ ಪರೀಕ್ಷೆ ಕೊಟ್ಟು ನಾಯಕರನ್ನೂ ಮುಖ್ಯವಾಗಿ ಅವರ ಮಗನನ್ನೂ ಆನಂದಗೊಳಿಸಿ ಕೈತುಂಬ ದಕ್ಷಿಣೆ ಪಡೆದು, ಹರಸುತ್ತಾ ಹೋಗುತ್ತಿದ್ದರು.

'ಇಷ್ಟೆಲ್ಲ ರೀತಿಯ ನಾಯಕರ ಮಗನ ಮೇಲಿನ ಮಮತೆಯಾದರೂ ಪರಿಣಾಮಕಾರಿಯಾಗದೇ ಇರಲಿಲ್ಲ. ಮಗನಂತೂ ದಿನಾಲು ಒಂದಿಲ್ಲ ಒಂದ ತರದಲ್ಲಿ ಮನಸ್ಸನ್ನು ಸಂತೋಷಗೊಳಿಸದಿದ್ದಲ್ಲಿ ದೊಡ್ಡ ರಂಭಾರುಟಿಯನ್ನೇ ಹೂಡುತ್ತಿದ್ದನು.

ರಾಮಚಂದ್ರನು ನೋಡಿ ಆನಂದಿಸುತ್ತಿದ್ದ ಆಟಗಳೆಲ್ಲೆಲ್ಲಾ ಗಾರುಡಿಗರ ಇಂದ್ರಜಾಲವಿದ್ಯೆಯು ಅವನಿಗೆ ವಿಶೇಷ ಕೌತುಕವನ್ನುಂಟುಮಾಡುತ್ತಿತ್ತು. ಪ್ರತಿಯೊಬ್ಬ ಗಾರುಡಿಗನನ್ನೂ ಅವನ ಆತನ ಆಟಗಳನ್ನು ಎಣಿಕೆಯಿಲ್ಲದಷ್ಟು ಸಲ ಮಾಡಿ ತೋರಿಸುವಂತೆ ಹೇಳುತ್ತಿದ್ದನು. ಮಾವಿನ ಬೀಜ ನೆಟ್ಟು ಕ್ಷಣದೊಳಗೆ ಹೂಕಾಯಿ ಬಿಟ್ಟ ಮರವಾಗಿ ಮಾಡುತ್ತಿದ್ದುದು, ಬುಟ್ಟಿಯೊಳಗೆ ಅಡಗಿಸಿ ಕಟ್ಟಿ ಹಾಕಲ್ಪಟ್ಟ ಮನುಷ್ಯನನ್ನು ಪ್ರೇಕ್ಷಕರೊಳಗಿಂದ ಬರುವಂತೆ ಮಾಡುತ್ತಿದ್ದುದು, ಕೊಂದ ಕೋಳಿಗೆ ಜೀವ ತರುತ್ತಿದ್ದುದು, ಇಸ್ಪೀಟ್ ಎಲೆಗಳಿದ್ದುದನ್ನು ನೋಟುಗಳಾಗಿ ಮಾಡುತ್ತಿದ್ದುದು, ಹರಿತ ಕತ್ತಿಯನ್ನು ಎದೆಯೊಳಗೆ ನಟ್ಟು ತೆಗೆದ, ರಕ್ತ ಬಂದರೂ ಎದೆಯಲ್ಲಿ ಗಾಯವೇ ಆಗದಿರುವುದನ್ನು ತೋರಿಸುತ್ತಿದ್ದುದು, ಇವೇ ಮೊದಲಾದ ಅಸಂಖ್ಯಾತ ಪ್ರದರ್ಶನಗಳನ್ನು ಕಂಡು ರಾಮಚಂದ್ರನು ಅವರು ಅವುಗಳನ್ನು ಹೇಗೆ ಮಾಡುತ್ತಿದ್ದರೆಂದು ಎಷ್ಟೋ ಸಲ ಕೇಳಿ ಒಬ್ಬರಿಂದಲೂ ಸಮಾಧಾನಕರ ಉತ್ತರ ಪಡೆಯದಿದ್ದನು.

'ಒಂದು ಸಲ ನಾಯಕರಲ್ಲಿ ಒಬ್ಬ ಉತ್ತರ ಹಿಂದೂಸ್ಥಾನದ ಗಾರುಡಿಗನು ಬಂದು ತನ್ನ ಅಗಾಧವಾದ ಪಾಂಡಿತ್ಯವನ್ನು ಪ್ರದರ್ಶಿಸಿದನು. ಆತನು ಇತರ ಗಾರುಡಿಗರು ಮಾಡುತ್ತಿದ್ದ ಎಲ್ಲಾ ಬಗೆಯ ಇಂದ್ರಜಾಲಗಳನ್ನೂ ಮಾಡಿದನಲ್ಲದೆ, ಇನ್ನೂ ಕೆಲವು ಅತ್ಯದ್ಭುತಕರವಾದ ಪ್ರದರ್ಶನಗಳನ್ನೂ ಮಾಡಿ ತೋರಿಸಿದನು. ಅವನು ಸ್ವಲ್ಪವೂ ಕಣ್ಣು ಕಟ್ಟಿಲ್ಲದೆ, ಉರಿಯುವ ಕೆಂಡಗಳನ್ನು ಪ್ರೇಕ್ಷಕರ ಕೈಯಿಂದಲೇ ಬಾಯಿಗೆ ಹಾಕಿಸಿಕೊಂಡು ಕರಕರನೆ ಜಗಿದು ನುಂಗಿದನು. ಭಯಂಕರವಾದ ಎಸಿಡ್‌ಗಳನ್ನು ಕುಡಿದನು. ಕಣ್ಣುಗಳನ್ನು ಕಿತ್ತು, ಕೈಯಲ್ಲಿ ಜಡಿಸಿ, ತಿರುಗಿ ಇಟ್ಟುಕೊಂಡನು, ಹೆಚ್ಚೇಕೆ ತನ್ನ ಕುತ್ತಿಗೆಯನ್ನೇ ಕಡಿದು, ಜುಟ್ಟಿನ ಮೂಲಕ ರುಂಡವನ್ನು ಒಂದು ಗೇಣು ಎತ್ತರಕ್ಕೆ ಎತ್ತಿ ತಿರುಗಿ ಮುಂಡಕ್ಕೆ ಜೋಡಿಸಿಬಿಟ್ಟನು. ಇತರರೆಲ್ಲರನ್ನೂ ಕಂಗಾಲಾಗಿ ಮಾಡಿದ ಈ ಮಹದದ್ಭುತ ದೃಶ್ಯಗಳು ರಾಮಚಂದ್ರನನ್ನಂತೂ ಬಹಳ ಕುತೂಹಲಿಯಾಗಿ ಮಾಡಿತು.

"ನಾಯಕರು ಆ ಗಾರುಡಿಗನಿಗೆ ನೂರು ರೂಪಾಯಿಯ ಥೈಲಿಯನ್ನೇ ಒಪ್ಪಿಸಿ ಸಂತೋಷಪಡಿಸಿದರು.

"ಮರುದಿನ ಬೆಳಿಗ್ಗೆ ಮಾತ್ರ ವಾಮನ ನಾಯಕರ ಮನೆಯು ಹಾಹಾಕಾರದಿಂದ ಪ್ರತಿಧ್ವನಿಸುತ್ತಿತ್ತು. ರಾತ್ರಿ ಎಂದಿನಂತೆ ಮಲಗಿದ್ದ ರಾಮಚಂದ್ರನು ಬೆಳಿಗ್ಗೆ ನೋಡುವಾಗ ಕಾಣೆಯಾಗಿದ್ದನು.

"ವಾಮನನಾಯಕರು ಅಂದು ಪ್ರದರ್ಶಿಸಿದ ಗೋಳಾಟವನ್ನು ಯಾರೂ ಎಂದೂ ನೋಡಿರಲಿಕ್ಕಿಲ್ಲ. ಅವರು ಸುರಿಸಿದ ಕಣ್ಣೀರು ಹಲವು ಪ್ರವಾಹಗಳಾಗಿ ಹರಿಯಿತು.

"ಮಗನ ಹುಡುಗಾಟಿಕ್ಕಾಗಿ ಅವರು ಮಾಡಿದ ವೆಚ್ಚಕ್ಕೆ ಮಿತಿಯಿಲ್ಲ. ಪಟ್ಟ ಪ್ರಯತ್ನಗಳಿಗೆ ಚ್ಯುತಿಯಿಲ್ಲ. ಎಲ್ಲರಿಗೂ ರಾಮಚಂದ್ರನ ಗಾರುಡಿವಿದ್ಯೆಯ ಮೇಲಿನ ಪ್ರೀತಿಯು ತಿಳಿದಿದ್ದುದರಿಂದ ಆತನು ಆ ಗಾರುಡಿಗನನ್ನೇ ಹಿಂಬಾಲಿಸಿರಬೇಕೆಂದು ಎಲ್ಲರಿಗೂ ಖಚಿತವಾಗಿತ್ತು. ಎಷ್ಟು ಪ್ರಯತ್ನಮಾಡಿದರೂ ಆ ಗಾರುಡಿಗನಾಗಲೀ ರಾಮಚಂದ್ರನಾಗಲೀ ಕಾಣಸಿಕ್ಕಲಿಲ್ಲ. ಇಬ್ಬರೂ ಆ ಗಾರುಡಿಗನ ವಿದ್ಯೆಯ ಬಲದಿಂದ ಥಕ್ಕನೇ ಭೂಲೋಕದಿಂದಲೇ ಮಾಯವಾದಂತೆ ತೋರಿತು. ಯಾಕೆ, ಅಂದ ಅವನ ಅದ್ಭುತ ಪ್ರದರ್ಶನದಲ್ಲಿ ಪ್ರೇಕ್ಷಕರಾಗಿದ್ದವರೆಲ್ಲರೂ ಇದನ್ನೇ ಸತ್ಯವೆಂದು ನಂಬಿದರು. ವಾಮನನಾಯಕರ ಮಾತ್ರ, ಪಾಪ, ಪುತ್ರಶೋಕದಿಂದ ಕೊರಗಿ ಕೊರಗಿ ಎರಡು ವರುಷದೊಳಗೆ ಆ ಕಥಾಂತವನ್ನು ಸೇರಿದರು.

ನಾಮಣಿಯು ಒಂದು ನಿಟ್ಟುಸಿರು ಬಿಟ್ಟು 'ಅವರನ್ನು ಇನ್ನು ಯಾವ ವಿಧದಿಂದ ಹಡಕಲಿ ಎಂಬ ಯೋಚನೆಯಲ್ಲಿ ಮಗ್ನನಾಗಿದ್ದಂತೆ ನೀರವವಾಗಿ ಕುಳಿತನು.

'ಆ ಕಡೆಗಾದರೂ ಸತ್ಯವು ಬಯಲಿಗೆ ಬಂತೇ?' ನಾನು ಹತಾಶನಾಗಿ ಕೇಳಿದೆನು.

'ಬಾರದೆ ಇರುವುದೇ? ಆದರೆ ಅದಕ್ಕೆ ಇಷ್ಟು ಸಮಯ ತಾಗಿತು. ಅಂದಿನ ಆ ದುರ್ಘಟನೆಯ ಸತ್ಯಾಂಶವು ಇಂದು ತಾನೇ ಪ್ರಕಟವಾಗಿರುವುದು. ಅದೂ ನನಗೊಬ್ಬನಿಗೇ.'

'ಎಂದರೆ?'

ಹಾಗೆಂದರೆ ಇಷ್ಟು ಕೇಳಿದ ಮೇಲೆ ಅದನ್ನೂ ಕೇಳಿಬಿಡು.

ನಾಮಣಿಯು ಇನ್ನೊಂದು ಸಿಗರೇಟನ್ನು ಸೇದುತ್ತಾ ಮುಂದುವರಿಸಿದನು.

'ಈ ದಿನ ನಾನು ಧರ್ಮತೋಲಾ ಮಾರ್ಗವಾಗಿ ಹೋಗುತ್ತಿದ್ದೆನು. ಅಚೆ ಈಚೆ ನೋಡುತ್ತಾ ಸಾಗುತ್ತಿರಲು ಒಂದು ಕಡೆ ಜನರ ಗುಂಪು ಸೇರಿದುದನ್ನು ನೋಡಿ ಕುತೂಹಲದಿಂದ ಆ ಕಡೆ ಹೋದೆನು. ದಟ್ಟವಾದ ಜನಸಂದಣಿಯಲಿ ಕಷ್ಟದಿಂದ ದಾರಿಮಾಡಿಕೊಂಡು ನಡುವೆ ನಡೆಯುತ್ತಿದ್ದುದನ್ನು ನೋಡಲು ಪ್ರಯತ್ನಿಸಿದೆನು.

ಒಳಹೊಕ್ಕು ನೋಡಲು ಒಬ್ಬ ಗಾರುಡಿಗನು ತನ್ನ ಹೆಂಡತಿ ಮಕ್ಕಳೊಡನೆ ಇಂದ್ರಜಾಲಗಳನ್ನು ಮಾಡಿ ತೋರುತ್ತಿದ್ದನು. ಗಾರುಡಿಗನು ಮಾದರಿಕನಾಗಿದ್ದನು. ಅವನ ಸಹಾಯಕರಲ್ಲಿ ಒಬ್ಬನನ್ನು ನೋಡುತ್ತಲೇ ನನ್ನ ಎದೆಯಲ್ಲಿ ಧಸಕ್ಕೆಂದಿತು. ಒಡನೆಯೇ ನಾನು 'ರಾಮಾ' ಎಂದು ಅವನ ಕಡೆಗೆ ಹೋಗಲು ದಾರಿಮಾಡಿಕೊಳ್ಳತೊಡಗಿದೆ. ಅಷ್ಟರಲ್ಲಿ ಆತನು ಒಮ್ಮೆ ನನ್ನ ಕಡೆಗೆ ನೋಡಿದನು. ನಮ್ಮಿಬ್ಬರ ದೃಷ್ಟಿಗಳೂ ಕೂಡಿದುವು. ಅವನನ್ನು ಮೊದಲು ನೋಡಿದಾಗ ನನ್ನ ಮನಸ್ಸಿನಲ್ಲಿದ್ದ ಅಲ್ಪಸ್ವಲ್ಪ ಸಂಶಯವೂ ಮರೆಯಾಯಿತು. 'ಕಡೆಗಾದರೂ ದೊರೆತನಲ್ಲ, ದೂರದ ಸಂಬಂಧಿಕರು ತಿಂದು ತೇಗುತ್ತಿರುವ ಅಪಾರ ಆಸ್ತಿಯು ಸಹಜ ವಾರಿಸುದಾರರಿಗೆ' ಎಂದು ಸಂತೋಷಪಡುತ್ತಿರುವಷ್ಟರಲ್ಲಿ, ಯಾರೋ ಪುಣ್ಯಾತ್ಮರು ಹಿಂದಿನಿಂದ ಒಂದೇ ಸವನೆ ಜನರನ್ನು ದೂಡಲಾರಂಭಿಸಿ ಗೊಂದಲವೆಬ್ಬಿಸಿದರು. ನಾನು ಹತೋಟಿ ತಪ್ಪಿ ಮುಂದೆ ಬಿದ್ದೆನಲ್ಲದೆ, ಹಿಂದಿನವರನೇಕರು ನನ್ನ ಮೇಲೆ ಬಿದ್ದರು.

ಅಂತೂ, ನಾನು ಕಷ್ಟಪಟ್ಟು ಎದ್ದು ನೋಡುವಾಗ ಹಕ್ಕಿಯು ಹಾರಿ ಹೋಗಿದ್ದಿತು. ಆ ಗಾರುಡಿಗರ ಪರಿವಾರವೇ ಕಾಣೆಯಾಗಿತ್ತು.

ಎಂತಹ ಇಂದ್ರಜಾಲ ಪ್ರೇಮವೋ ಅವನದು, ತನ್ನ ಐಶ್ವರ್ಯವೆಲ್ಲವನ್ನೂ ತ್ಯಾಗಮಾಡಿ, ಈ ರೀತಿ ಭಿಕ್ಷುಕನಾಗಿ ಅಂಡಲೆಯುತ್ತಿರುವುದಕ್ಕೆ ಕಾರಣವಾಗಿ ಇದು ಪೂರ್ವಾರ್ಜಿತವಲ್ಲವೆನ್ನುವೆಯಾ?' ನಾಮಣಿಯು ಕೇಳಿದನು.

'ನೀನು ಅನ್ನುವುದು ನಿಜವೆ? ಅವನ ತನ್ನ ಕಲ್ಪಸ್ತ್ರೀ ದಿನ ಅದರ ಅಭಿರುಚಿಗಾಗಿ ಉಪವಾಸ ಕೂಡ ಮಾಡುವ ಕಂದವರಂತೆಯೇ ಡಾಗಿ ದೇಶಾಟನೆ ಮಾಡುತ್ತಿದ್ದವನು ಅಲ್ಲದಿದ್ದರೆ ಅವನ ತನ್ನ ಆಸ್ತಿಯ ಮೇಲ್ವಿಚಾರದಲ್ಲಿ ಮಗ್ನನಾದರೆ ಇಂದ್ರಜಾಲ ವಿದ್ಯೆಯ ಉನ್ನತಿ ಸಾಧನೆಗೆ ಎಲ್ಲಿಯ ಆಸ್ಪದವಿದೆ? ಇದರಲ್ಲಿ 'ಪೂರ್ವಾರ್ಜಿತ'ಕ್ಕೆ ಎಲ್ಲಿಯ ಸ್ಥಾನ?'

'ಬೇಡ, ನಿನ್ನ ಚರ್ಚಾಸಕ್ತಿಗೆ ನಾನೇನು ಮಾಡಲಿ? ಈ ರಸಾಯನಿಕ ಯುಗದಲ್ಲಿ 'ಟೆಸ್ಟ್ ಟ್ಯೂಬ್' ನೊಳಗೆ ಕಾಣಸಿಕ್ಕದುದನ್ನು ನಂಬದಿರುವ ಮಾನಸಿಕತೆಯನ್ನು ತಳೆದಿರುವ ನಿನಗೆ ಸತ್ಯವಾದುದೆಲ್ಲವೂ ಅಸತ್ಯವು, ಅಸತ್ಯವಾದುದೆಲ್ಲವೂ ಸತ್ಯವು. ಆದರೆ ಆತ್ಮಹೀನವಾದ ಈ ರಸಾಯನಿಕ ಮಾನಸಿಕತೆಯ ಸೋಗನ್ನು ತೆಗೆದೆಸೆದು ಸಾತ್ವಿಕನಾಗಿ ಹೇಳು ನೋಡೋಣ, ಇದು 'ಲಕ್ಷಾಧೀಶನ ಪೂರ್ವಾರ್ಜಿತ' ಹೌದೋ ಅಲ್ಲ?' ನಾಮಣಿಯು ಗಂಭೀರವಾಗಿ ಕೇಳಿದನು.

'ನನಗೇ ಗೊತ್ತು, ಮಹಾರಾಯ'' ಎಂದು ನಾನು ಸೋಲಿಗೆ ಅಸ್ತಿಭಾರ ಹಾಕಿದೆ.

ರಣರಂಗದ ವಾರ್ತೆ.

ಹಬಸಿಗಳು ಎಲ್ಲೆಲ್ಲೂ ಜಯಶಾಲಿಗಳಾಗುತ್ತಿದ್ದಾರೆ.

ಇಟೇಲಿಯಾನರು ಹಠಾತ್ತಾಗಿ ಬೋಂಬು, ಗೇಸು, ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದಾರೆ. ನಿಷ್ಕರುಣಿಗಳಾಗಿ ಹಬಸಿಗಳ ಹಳ್ಳಿಹಳ್ಳಿಗಳನ್ನೂ ಇಗರ್ಜಿಗಳನ್ನೂ ಸುಟ್ಟು ಕೆಡಹುತ್ತಿದ್ದಾರೆ.

ಧಾರಳ ಇಟೇಲಿಯಾನರ ಜೇಶಿಸ್ಕನಿಕರು ಹಬಸಿಯವರ ಕಡೆಗೆ ಸೇರುತ್ತಿದ್ದಾರೆ. ಹಬಸಿಯವರ ಮಹಾರಾಣಿಯು ದೇಶದಜನರೆಲ್ಲಾ ಜನವರಿ ೭ರವರೆಗೆ ಉಪವಾಸಗೈದು ದೇವರ ಪ್ರಾರ್ಥನೆ ಮಾಡಲು ಅಪ್ಪಣೆಕೊಟ್ಟಿದ್ದಾರೆ. ಜನವರಿ ೭ರಲ್ಲಿ ಹಬಸಿಯವರು ತಮ್ಮ ಕ್ರಿಸ್‌ಮಸ್ ಹಬ್ಬವನ್ನು ತವಗೆ ಒದಗಿದ ವಿವಿಧ ಜಯಗಳ ಸಂತೋಷಸೂಚಕವಾಗಿ ಬಹಳ ಆಡಂಬರದಿಂದ ಆಚರಿಸಬೇಕೆಂದು ನಿರ್ಧಾರಮಾಡಿರುತ್ತಾರೆ. ಹಬಸಿ ಚಕ್ರವರ್ತಿಯವರು ತನ್ನ ಸೈನಿಕರೊಡನೆ ಯುದ್ಧಕಾರ್ಯಗಳಲ್ಲಿ ಬಹಳ ಸಾಹಸಪಡುತ್ತಿದ್ದಾರೆ. ಗಾಯಗೊಂಡ ಸೈನಿಕರ ಉಪಶಮನವು ಸರಿಯಾಗಿ ನಡೆಯುವಂತೆ ತಾವು ಜಾಗ್ರತೆಯಾಗಿ ವ್ಯವಸ್ಥೆ ಮಾಡುತ್ತಿದ್ದಾರೆ. ಇತ್ತಲಾಗಿ ಮಿ. ಎಡೆನ್ನರು ಬ್ರಿಟಿಷ್ ಬರ್ಮೀಸ್ ವ್ಯವಹಾರ ಕಾರ್ಯದರ್ಶಿಗಳಾಗಲು ಇತರ ಜನಾಂಗಗಳೂ ಜನಪದಮಂಡಳದ ಗೌರವವನ್ನು ಕಾಯಲು ಬ್ರಿಟಿಷರೊಡನೆ ಸಹಕರಿಸಲು ಒಪ್ಪಿಕೊಂಡಿದ್ದಾರೆ. ಈ ಪ್ರದೇಶದ ಚೀನದ ಎಣ್ಣೆ, ಕಲ್ಲಿದ್ದಲು ಇತ್ಯಾದಿ ಯುದ್ಧ ಕಾರಣ ಸಾಮಗ್ರಿಗಳು ಇಟೇಲಿಗೆ ಒದಗದಂತೆ ಕಠಿಣತರದ ನಿರ್ಬಂಧ ಪ್ರತಿಕ್ರಿಯೆಗಳು ಜ್ಯಾರಿಯಾಗುವ ಸಂಭವವಿದೆ. ಇಟೇಲಿಯು ಕೆಣಕಿದ ಸಿಂಹದಂತೆ ಗರ್ಜಿಸಿ ಬ್ರಿಟಿಷರ ಮೇಲೆ ಬೀಳುವಂತಾಗಿದೆ. ಎಬಿಸಿನಿಯಾದ ಉತ್ತರದಿಕ್ಕಿನ ಅನೇಕ ಪ್ರಾಂತ್ಯಗಳನ್ನು ವಶೀಕರಿಸಿ ಇಟೇಲಿಯಾನರು ಮುಂದುವರಿಯುತ್ತಿದ್ದರಷ್ಟೆ. ಹೊಸ ಕ್ರಿಸ್ಮಸ್ ದಿನ ಅನೇಕ ಪ್ರಾಂತ್ಯಗಳ ಹಬಸಿಗಳು ಹಿಡಿದಿದ್ದಾರೆ. ಇಟೇಲಿಯಾನರನ್ನು ಅನೇಕ ಕಡೆಗಳಿಂದ ಹೊಡೆದೋಡಿಸಿದ್ದಾರೆ. ಕಳೆದುಹೋದ ಮಕಾಲೆ ಪ್ರಾಂತ್ಯವು ಬೇಗನೆ ಹಬಸಿಯವರ ಕೈಸೇರುವ ಸಂಭವವಿದೆ. ಈ ಕೆಳಗಿನವುಗಳು ಹಬಸಿ ಚಕ್ರವರ್ತಿಯವರ ಸಂಧಿ ಶರ್ತಗಳಾಗಿರುತ್ತವೆ.

(೧) ಇಟೇಲಿಯ ಸಂಪೂರ್ಣ ಸೈನ್ಯ ಸಮೂಹವು ಎಬಿಸೀನಿಯಾದ ಗಡಿಯ ಹೊರಗೆ ಹೋಗತಕ್ಕದ್ದು. (೨) ಇಟೇಲಿಯು ಹಬಸಿಯವರಿಗೆ ಉಂಟಾದ ನಷ್ಟವನ್ನು ತೆರತಕ್ಕದ್ದು. (೩) ಎಬಿಸೀನಿಯಾವನ್ನು ಒಂದು ಸ್ವತಂತ್ರ ಜನಾಂಗವಾಗಿ ಕಾಣತಕ್ಕದ್ದು. (೪) ಜನಾಂಗ ಸಭೆಯಲ್ಲಿ ಎಬಿಸೀನಿಯದ ಗಡಿ ನಿರ್ಣಯವಾಗತಕ್ಕದ್ದು. (೫) ಹಬಸಿಗಳು ಪಾಶ್ಚಾತ್ಯದ ಇತರ ಜನಾಂಗಗಳೊಡನೆ ಯಾವತ್ತೂ ವ್ಯಾಪಾರ ಇತ್ಯಾದಿ ಸಂಬಂಧಗಳನ್ನು ಬೆಳೆಸುವರೆ ಇಟೇಲಿಯು ಬೇರೆ ಅವರ ಮೇಲೆ ಧಾವಿಸಬಾರದು.

ಜರ್ಮನಿ ಮತ್ತು ಫ್ರಾನ್ಸ್

ಜರ್ಮನಿಯ ಸಂಗ್ರಾಮ ಸಿದ್ಧತೆಗಳು ಬಹಳ ಭರದಿಂದ ಮುಂದುವರಿಯುತ್ತಿವೆ. ಇದರಿಂದ ಒಂದು ವೇಳೆ ಇವರಿಗೂ ಫ್ರಾನ್ಸಿಗೂ ಯುದ್ಧ ಸಂಭವಿಸುವುದಾದರೆ ಫ್ರೆಂಚರು ೮ ಲಕ್ಷ ಜರ್ಮನಿ ಸೈನಿಕರನ್ನು ಎದುರಿಸಬೇಕಾಗುವುದು. ಫ್ರಾನ್ಸಿನ ಸಂಗ್ರಾಮ ಸಚಿವರ ವರದಿಯ ಪ್ರಕಾರ ಜರ್ಮನಿಯು ಎದುರಿಸಲು ಫ್ರಾನ್ಸಿನೊಡನೆ ೪ ಲಕ್ಷ ಸೈನಿಕರು ಮಾತ್ರ ಇರುವರು. ಈ ಕಾರಣಗಳಿಂದ ಫ್ರೆಂಚ ಸರಕಾರವು ಯುದ್ಧಸಿದ್ಧತೆಗಾಗಿ ಹೆಚ್ಚಿನ ಹಣವನ್ನು ಸಲೆಕ್ಕಾಗಿ ಏರ್ಪಡಿಸಿದೆ.

ಇಟಲಿಯು ಇಂಗ್ಲಾಂಡಿನ ಮೇಲೆ ಬಿದ್ದರೆ

ತಾವು ಬಿಟಿಷರು ಇದೆ ಸಹಕರಿಸುವೆವೆಂದೂ ಹೇಳಿಗನೆ ಸಾಲ್ವ ಮೆಡಿಟರೇನಿಯನ್ ದೇಶಗಳು ಸಮ್ಮತಿಯನ್ನಿತ್ತಿವೆ. ಇವುಗಳ ಫ್ರಾನ್ಸ್ ಜೊಗೊಸ್ಲೇವಿಯಾ ಗ್ರೀಸ್ ಮತ್ತು ಟರ್ಕಿ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

೩೨ನೇ ಕೊಂಗ್ರೆಸ್: ೧೯೧೭— ಕಲ್ಕತ್ತಾ;

ಅಧ್ಯಕ್ಷೆಯರು: ಮಿಸೆಸ್ ಎನ್ನಿಬಿಸೆಂಟ್ ರವರು.

ಬಿಸೆಂಟರವರ ಅಧ್ಯಕ್ಷ ಭಾಷಣವು ಇತರ ಎಲ್ಲಾ ಅಧ್ಯಕ್ಷರ ಭಾಷಣಗಳಿಗಿಂತ ದೀರ್ಘವಾದ-ದಾಗಿತ್ತೆನ್ನಬಹುದು ಇವರು ಪಕ್ಷಭೇದದಿಂದ ದೂರದಲ್ಲಿದ್ದ ನಾಯಕರ ನ್ನೆಲ್ಲಾ ಪುನಃ ಕೊಂಗ್ರೆಸ್ಸಿನೊಳಕ್ಕೆ ಸೇರಿದ ಭೂಷಣಕ್ಕೆ ಪಾತ್ರರಾದರು. ಆಗ ತಾನೇ ಆಲಿ ಸಹೋದರರು ಕಾರಾವಾಸಕ್ಕೆ ಗುರಿ ಮಾಡಲ್ಪಟ್ಟಿದ್ದರು ಹಿಂದೀ ರಾಜಕೀಯ ವಾತಾವರಣವನ್ನೇ ಪುನರ್ನಿರ್ಮಾಣ ಮಾಡಲು ಅದೃಷ್ಟಗೊಂಡ ಪ್ರಖ್ಯಾತ ರೌಲೆಟ್ ಫಿಕ್ತಿನ ನಿಯಮಗಳನ್ನು ರೌಲೆಟ್ ಕಮಿಟಿಯು ನಿರ್ಣಯಿಸುತಿತ್ತು ಇ ಎಸ್ ಮೊಂಟೆಗ್ಯುರವರು ಸರಕಾರದ ರೀತಿಯನ್ನು ಸುಧಾರಿಸುವುದರ ಹಿತಾಹಿತಗಳನ್ನು ಪರಿಶೀಲಿಸಲು ಹಿಂದೂಸ್ಥಾನಕ್ಕೆ ಬರುವುದರಲ್ಲಿದ್ದರು ಬ್ರಿಟಿಷ್ ಸರಕಾರವು ಒಂದು ಮಹಾ ಚಳವಳಿವನ್ನು ರಾಜಕೀಯ ಚಳವಳಿಕ್ಕೆ ಎದುರಾಗಿ ಹೂಡುವುದರಲ್ಲಿದ್ದರೆಂದು ಬಹಳವಾಗಿ ನಿರೀಕ್ಷಿಸಲ್ಪಟ್ಟಿತ್ತು. ಇವೆಲ್ಲ ವಿಷಯಗಳನ್ನು ಕೊಂಗ್ರೆಸ್ಸು ಯಥಾಪ್ರಕಾರ ಚರ್ಚಿಸಿ ಠರಾವುಗಳನ್ನು ಮಂಜೂರು ಮಾಡಿತು

೩೩ನೇ ಕೊಂಗ್ರೆಸ್: ೧೯೧೮— ಡಿಲ್ಲಿ

ಅಧ್ಯಕ್ಷರು: ಪಂಡಿತ ಮದನಮೋಹನ ಮಾಲವೀಯರು.

ಯುದ್ಧವು ಅಂತ್ಯಗೊಳ್ಳುವುದರಲ್ಲಿದ್ದು ಕೈಸರರೇ ಮೊದಲಾದ ಅರಸರು ಸಿಂಹಾಸನ ಭ್ರಷ್ಟರಾಗಿದ್ದರು ಮೊಂಟಫರ್ಡ್ ಸೂಚನೆಗಳು ಇಷ್ಟರಲ್ಲೇ ಪ್ರಕಟವಾಗಿದ್ದವು ಕೊಂಗ್ರೆಸ್ಸು ಒಂದು ವಿಶಿಷ್ಟ ಅಧಿವೇಶನ ಮುಖಾಂತರ ಈ ಯೋಜನೆಗೆ ತನ್ನ ಸಂರಕ್ಷಿತ ಸಮರ್ಥನೆಯನ್ನು ಕೊಟ್ಟಿತ್ತು ಕೊಂಗ್ರೆಸ್ಸಿನ ಈ ಅಧಿವೇಶನವು ಸೂಚಿತವಾದ ಸುಧಾರಣೆಗಳಿಗೆ ತನ್ನ ಅಸಂತುಷ್ಟಿಯನ್ನು ವ್ಯಕ್ತಪಡಿಸಿತು ಇದಕ್ಕೆ ವಿರುದ್ಧವಾಗಿ ಶಾಸ್ತ್ರಿಯವರು ಬಹಳವಾಗಿ ವಾದಿಸಿದರೂ ವ್ಯರ್ಥವಾಯಿತು ಶಾಂತಿ ಪರಿಷತ್ತಿಗೆ ಹಿಂದೂಸ್ಥಾನವೂ ತನ್ನ ಸ್ವಂತ ಪ್ರತಿನಿಧಿಗಳನ್ನು ಕಳುಹಿಕೊಡಬೇಕೆಂದು ಇತ್ಯರ್ಥವಾಗಿ ಸರ್ ಅಲಿ ಇಮಾಮ್, ತಿಲಕ ಮತ್ತು ಗಾಂಧಿಯವರನ್ನು ಇದಕ್ಕಾಗಿ ಆರಿಸಲಾಯಿತು ಪ್ರಿನ್ಸ್ ಒಫ್ ವೇಲ್ಸರನ್ನು ಸುಸ್ವಾಗತಿಸುವ ಠರಾವಿನ ಚರ್ಚೆಯು ಮುಂದರಿಸಲ್ಪಟ್ಟಿತು

೩೪ನೇ ಕೊಂಗ್ರೆಸ್: ೧೯೧೯— ಅಮೃತಸರ

ಅಧ್ಯಕ್ಷರು ಪಂಡಿತ ಮೋತಿಲಾಲ ನೆಹರೂರವರು

ರೌಲೆಟ್ ಎಕ್ಟು ವಿರೋಧವನ್ನು ಲಕ್ಷಿಸದೆ, ಮಂಜೂರಾತಿಯನ್ನು ಹೊಂದಿ ದೇಶದಲ್ಲೆಲ್ಲಾ ಕ್ಷೋಭೆಯುಂಟಾಗಿತ್ತು ಎಲ್ಲಾ ಕಡೆಗಳಲ್ಲಿಯೂ ನಿಷೇಧ ಸೂಚಕ ಚಳವಳವುಂಟಾಗಿತ್ತು ಜುಲಿಯನ್‌ವಾಲಾ ಬಾಗಿನಲ್ಲಿ ಈ ಚಳವಳದ ಸಂಬಂಧವಾಗಿ ಅನಾಹುತವುಂಟಾಗಿತ್ತು ಕೇಂದ್ರ ನ್ಯಾಯ ವಿಧಾಯಕ ಸಭೆಯ 9 ಮಂದಿ ಸಭಿಕರ ಮನೋರಂಜನವನ್ನು ಸರಕಾರವು ನಿರಾಕರಿಸಿತ್ತು ಮೊಂಟ್‌ಫರ್ಡ್ ಸ್ಕೀಮು ಪಾರ್ಲಿಮೆಂಟಿನಲ್ಲಿ ಮುಂದೊತ್ತಿಕೊಂಡು ಬರುತಿತ್ತು ಟರ್ಕಿಸ್ಥಾನದಲ್ಲಿ ನಡೆಯುತ್ತಿದ್ದ ಇನ್ನೊಂದು ಯುದ್ಧದ ಮೂಲಕ ನಾಶಹೊಂದುವುದರಲ್ಲಿದ್ದ ಖಿಲಾಫತ್ತಿನ ಉದ್ದೇಶವನ್ನು ಕೊಂಗ್ರೆಸ್ಸು ಪುಷ್ಟೀಕರಿಸಿತು ಹಿಂದೂಗಳೊಡನೆ ಮುಸಲ್ಮಾನ ಮುಖಂಡರು ರಾಷ್ಟ್ರೀಯ ಚಳವಳದಲ್ಲಿ ಕೈಕೊಡಲಿಲ್ಲ. ಸುಧಾರಣೆಗಳ ಮೇಲಿನ ಮುಖ್ಯ ಠರಾವನ್ನು ಗಾಂಧಿಯವರು ಸಮರ್ಥಿಸಿದರು ಪಂಜಾಬಿನಲ್ಲಿ ನಡೆದ ಅಕೃತ್ಯಗಳನ್ನು ಖಂಡಿಸಿಯೂ ಠರಾವಾಯಿತು

ವಿಶಿಷ್ಟ ಕೊಂಗ್ರೆಸ್ ಅಧಿವೇಶನ ೧೯೨೦— ಕಲ್ಕತ್ತಾ.

ಅಧ್ಯಕ್ಷರು: ಶ್ರೀ ಲಾಲಾ ಲಜಪತರಾಯರವರು

ಈ ವಿಶಿಷ್ಟ ಅಧಿವೇಶನವು ಗಾಂಧಿಯವರ ಅಸಹಕಾರ ಚಳವಳದ ಮೂಲವನ್ನು ಸೂಚಿಸಿತು. ಖಿಲಾಫತ್ತು, ಕ್ರೂರ ಶಾಸನ ಕಾರ್ಯ, ಪಂಜಾಬಿನಲ್ಲಿ ಮಾರ್ಶಲ್ ಲೊ ಮುಂದೊರಿಯಾತಿಯಿಂದ ನಡೆದ ಅತಿರೀಕ ಶಿಕ್ಷಾದಿಗಳು ಮತ್ತು ನವ ಸುಧಾರಣೆಗಳ ಅತೃಪ್ತಿಕರ ಗುಣ ಮುಂತಾದುವೇ ಈ ಚಳವಳವನ್ನು ಹೂಡುವಂತಾದವು. ಸಕಲ ನ್ಯಾಯ ಸಮ್ಮತ ಮತ್ತು ಶಾಂತಕರ ಸಾಧನಗಳಿಂದ ಸ್ವರಾಜ್ಯವನ್ನು ಸಾಧಿಸಬೇಕೆಂದು ಕೊಂಗ್ರೆಸ್ಸಿನ ಧ್ಯೇಯವು ಬದಲಾವಣೆ ಹೊಂದಿತು.

೩೫ನೇ ಕೊಂಗ್ರೆಸ್: 1920— ನಾಗಪುರ;

ಅಧ್ಯಕ್ಷರು ಲಾಲಾ ವಿಜಯರಾಘವಾಚಾರ್ಯರವರು

ಕಳೆದ ವಿಶಿಷ್ಟ ಅಧಿವೇಶನದಲ್ಲಿ ಮಂಜೂರಾದ ಠರಾವುಗಳೆಲ್ಲಾ ಈ ಅಧಿವೇಶನದಲ್ಲಿ ಸಮರ್ಥನೆ ಹೊಂದಿದುವು ರಾಷ್ಟ್ರೀಯ ಮುಖಂಡರೊಳಗೆ ಅಧ್ಯಕ್ಷತೆಯಿಂದ ವಂಚಿತರಾದ ಒಬ್ಬರೇ ಮುಖಂಡರಾದ ತಿಲಕರ ಸ್ಮಾರಕವನ್ನು ನಿರ್ಮಿಸಲು ಒಂದು ನಿಧಿಯೂ ಸ್ಥಾಪಿತವಾಯಿತು

೩೬ನೇ ಕೊಂಗ್ರೆಸ್: 1921 ಅಹಮದಾಬಾದ್

ಅಧ್ಯಕ್ಷರು ಹಕೀಮ್ ಅಜ್ಮಲ್ ಖಾನ್‌ರವರು

ಅಸಹಕಾರವು ಪ್ರತಿಷ್ಠಿತವಾಯಿತು ಗಾಂಧಿಯವರು ಅದನ್ನು ತಾನು ಬಾರ್ಡೋಲಿಯಲ್ಲಿ ಪ್ರಯೋಗಿಸುವೆನೆಂದೂ ವ್ಯಕ್ತಪಡಿಸಿದರು ಪ್ರಿನ್ಸ್ ಒಫ್ ವೇಲ್ಸರು ಹಿಂದ ಸ್ಥಾನವನ್ನು ಸಂದರ್ಶಿಸುವರಾಗಿ ಪ್ರಕಟವಾಗಿತ್ತು ಖಾದಿ ಕಾರ್ಯಕ್ರಮವು ರಚಿತವಾಗಿ, ಉಜ್ಜೀವನಗೊಳಿಸಲು ಅದನ್ನು ತಿಲಕ ನಿಧಿಯ ಮೂಲಕ ಉಪಯೋಗಿಸಲ್ಪಟ್ಟಿತು ಈ ವರ್ಷ ಮಲಬಾರಿನಲ್ಲಿ ಮಾಪಿಳ್ಳೆಯವರ ದಂಗೆಯೂ, ಗುಜರಾತಿನವರ ಚಳವಳವೂ ಪ್ರಾರಂಭವಾದುವು ದೇಶಾಟನಕ್ಕಾರಂಭಿಸಿದ ಪ್ರಿನ್ಸ್ ಒಫ್ ವೇಲ್ಸರನ್ನು ಕೊಂಗ್ರೆಸ್ ಬೊಯ್‌ಕೊಟ್ ಮಾಡಿತು

37ನೇ ಕೊಂಗ್ರೆಸ್: 1922— ಗಯಾ;

ಅಧ್ಯಕ್ಷರು ಚಿತ್ತರಂಜನದಾಸರು

ಈ ವರ್ಷ ಗಾಂಧಿಯವರ ಜೆರುಸಲೇಮಲ್ಲಾದ ಜೀಸಸ್ ಕ್ರಿಸ್ತನ ವಿಚಾರಣೆಯನ್ನು ಸ್ಮರಣೆಗೆ ತರಿಸುವಂತಹ ಪ್ರಖ್ಯಾತ ವಿಚಾರಣೆಯ ನಂತರ ಆರು ವರ್ಷದ ಕಾರಾವಾಸಕ್ಕೆ ಗುರಿಮಾಡಲ್ಪಟ್ಟರು ಕೊಂಗ್ರೆಸ್ಸು ತನ್ನ ಕ್ರಮವನ್ನು ಬದಲಾಯಿಸಬೇಕೆಂದು ಅಧ್ಯಕ್ಷರು ಸೂಚಿಸಿದರು ರಾಜ್ಯಾಂಗವನ್ನು ಒಳಗಿಂದೊಳಗೇ ನಾಶಪಡಿಸುವುದನ್ನೇ ಉದ್ದೇಶವಾಗಿಟ್ಟುಕೊಂಡು "ಸ್ವರಾಜ್ಯ ಪಕ್ಷ"ವು ನಿರ್ಮಿತವಾಯಿತು ಸ್ವರಾಜ್ಯ ಸಾಧನೆಯನ್ನು ಶೀಘ್ರಗೊಳಿಸುವುದಕ್ಕಾಗಿ ನ್ಯಾಯವಿಧಾಯಕ ಸಭೆಗಳನ್ನು ಈ ಪಕ್ಷದವರು ಪ್ರವೇಶಿಸಬೇಕೆಂದು ನಿರ್ಣಯವಾಯಿತು

38ನೇ ಕೊಂಗ್ರೆಸ್: 1923- ಕೊಕನಾಡಾ

ಅಧ್ಯಕ್ಷರು ಮೌಲಾನಾ ಮಹಮ್ಮದ್ ಅಲಿಯವರು

ಅಧ್ಯಕ್ಷರು ಅಸಹಕಾರ ತತ್ವವನ್ನು ಸುದೀರ್ಘವಾಗಿ ಪ್ರಸ್ತಾಪಿಸಿ, ಅದು ಹೇಗೆ ಕಾರ್ಯಕಾರಿಯೂ, ಆವಶ್ಯಕವೂ ಎಂಬುದನ್ನು ಸ್ಪಷ್ಟೀಕರಿಸಿದರು

39ನೇ ಕೊಂಗ್ರೆಸ್ 1924— ಬೆಳಗಾಂ,

ಅಧ್ಯಕ್ಷರು ಮೋಹನದಾಸ ಕರಮಚಂದ ಗಾಂಧಿಯವರ

ಜೈಲಿನಲ್ಲಿ "ಎಪೆಂಡಿಸೈಟಿಸ್" ರೋಗಕ್ಕಾಗಿ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಗಾಂಧಿಯವರು ಈ ವರ್ಷ ಕಾರಾಗೃಹದಿಂದ ವಿಮುಕ್ತರಾಗಿದ್ದರು ಈ ಅಧಿವೇಶನದಲ್ಲಿ ಸ್ವರಾಜ್ಯ ಪಕ್ಷದವರೊಂದಿಗೆ ಒಂದು ಒಪ್ಪಂದವಾಯಿತು ಎರಡು ಪಕ್ಷದವರೂ ಕೆಲವು ಕಾಲ ವಿಪಕ್ಷದವರ ಗೊಡವೆಗೆ ಹೋಗದೆ ತಂತಮ್ಮ ಮಾರ್ಗಗಳಲ್ಲೇ ಮುಂದುವರಿಯಲು ನಿರ್ಧಾರವಾಯಿತು ಅಸಹಕಾರ ಚಳವಳವು ಸದ್ಯಕ್ಕೆ ನಿಲ್ಲಿಸಲ್ಪಟ್ಟು ಗಾಂಧಿಯವರು ಶಾಂತಿವ್ರತವನ್ನು ಅಂಗೀಕರಿಸಿದರು. ಬಂಗಾಳ, ಮಧ್ಯಪ್ರಾಂತ್ಯ ಮತ್ತು ಮದ್ರಾಸು ನ್ಯಾಯವಿಧಾಯಕ ಸಭೆಗಳಲ್ಲಿ ಬಹುಪಕ್ಷದ ಸ್ವರಾಜ್ಯ ಪಕ್ಷೀಯರು ಚುನಾಯಿಸಲ್ಪಟ್ಟರು. ಆದರೆ ಈ ಸ್ಥಾನಗಳನ್ನು ಸ್ವೀಕರಿಸಬಾರದೆಂಬ ನಿಷೇಧವು ಅದರ ಲಾಭವನ್ನು ಪಡೆಯದಂತೆ ಮಾಡಿತು. ಪರಿಣಾಮವಾಗಿ ಶೌರ್ಯ, ಯೋಗ್ಯತೆ, ಕಾರ್ಯದೃಷ್ಟಿಗಳಿಲ್ಲದಂತಹ ಇತರ ಪ್ರತಿನಿಧಿಗಳಿಗೆ ಪ್ರವೇಶ ದೊರೆಯುತಲ್ಲದೆ, ಇಂದಿಗೂ ಅಂತಹವರು ಸ್ಥಿರವಾಗಿ ಅಲ್ಲೇ ಉಳಿಯುವಂತಾಯಿತು.

(ಮುಂದುವರಿಯುವುದು)





ಪ್ರಪಂಚ ಪರಿಚಯ:

'ಅದು ರಾಷ್ಟ್ರೀಯ ಐಕ್ಯವನ್ನು ಉಂಟುಮಾಡತಕ್ಕುದು.'

ಸರ್ ತೇಜಬಹದ್ದೂರ್ ಸಪ್ರೂರವರು, ಕಾಂಗ್ರೆಸ್ಸಿನ ಕುರಿತು ಹೀಗೆ ಅಭಿಪ್ರಾಯಪಡುತ್ತಿದ್ದಾರೆ

ಒಂಬಾನೆಯೊಂದು ಕಾಲದಲ್ಲಿ [illegible] ಸಣ್ಣದಾಗಿರುವ ಈ ಸಂಸ್ಥೆಯು ಇವತ್ತಿಗೆ ಒಂದು ಮಹಾರಾಷ್ಟ್ರೀಯ ಸರ್ವಜನ ಸಂಸ್ಥೆಯಾಗಿರುವುದು ನಮಗೊಂದು ಮಹಾ ಗೌರವವು. ಸ್ವಾತಂತ್ರ್ಯ, ಏಕೀಭವನೆ ಮತ್ತು ಸ್ವರಾಜ್ಯದ ಅನುರಾಗವನ್ನು ಭಾರತೀಯರಲ್ಲಿ ಉತ್ಪಾದಿಸುವುದರಲ್ಲಿ, ಇದರ ವರ್ಚಸ್ಸು ಎಲ್ಲೆಲ್ಲೂ ಹಬ್ಬಿಕೊಂಡಿರುತ್ತದೆ. ಅದೊಂದು ಮಹಾರಾಷ್ಟ್ರೀಯ ಅನುರಾಗದ [illegible]ದಾಗಿರುತ್ತದೆ. ಹೀಗೆ ಅನೇಕ ವರ್ಷ ಕಾಂಗ್ರೆಸ್ಸು ಶ್ರೇಯೋವಂತವಾಗಿ ನಡೆದಿರುತ್ತದೆ. ಜನರಲ್ಲಿ ದೇಶಸೇವಾ ಉತ್ಸಾಹಗಳನ್ನು ತಂದಿರುತ್ತದೆ. ಆದರೆ ರಾಷ್ಟ್ರೀಯ ಐಕ್ಯವನ್ನು ಇನ್ನೂ ಉಂಟುಮಾಡಲಿಲ್ಲವೆಂದೇ ಅವರ ಹಾದಿಯಲ್ಲಿ ಒಂದು ಅತಂಕವಾಗಿರುತ್ತದೆ. ನಮ್ಮಲ್ಲಿ ಐಕ್ಯತೆಯ ಸ್ಫೂರ್ತಿ ಇಲ್ಲದಿರುವುದರಿಂದಲೇ, ನಮ್ಮ ಮಾತುಗಳಿಗೆ ಗಮನವು ದೊರಕಾವುದಿಲ್ಲ. ರಾಷ್ಟ್ರೀಯ ಮತ್ತು ಸಾಂಪತ್ತಿಕ ವಿಚಾರಗಳಲ್ಲಿ ಯಾವುದೆ ತರದ ಭಿನ್ನಾಭಿಪ್ರಾಯಗಳಿದ್ದರೂ ಈ ಸಂಸ್ಥೆಯು ದೇಶದಲ್ಲಿ ಐಕ್ಯತೆಯನ್ನು ಸಾಧಿಸುವ ಕಾರ್ಯದಲ್ಲಿ ಎಲ್ಲರೂ ಸಹಕರಿಸಿ ಪ್ರೋತ್ಸಾಹಿಸತಕ್ಕುದು.

ಕಾಂಗ್ರೆಸ್ಸಿನ ಮಹಾಪಾಡು

ಶ್ರೀ। ಡಾ॥ ಅನ್ಸಾರಿಗಳು ಹೀಗೆನ್ನುತ್ತಿದ್ದಾರೆ

[illegible]ವಾಗಿರುವ ಅನೇಕ ಕಾರ್ಯಕ್ಷೇತ್ರಗಳಿಂದ ಕಾಂಗ್ರೆಸ್ಸು ವೃದ್ಧಿಹೊಂದಿರುತ್ತದೆ. ಆದರೆ ಅದರ ಇಡೀ ಜೀವಮಾನದಲ್ಲಿ [illegible] ದುದು—ಮಹಾತ್ಮಾ ಗಾಂಧಿಯವರು ಮತ್ತು ಅವರ ಪ್ರಸಿದ್ಧ ಸತ್ಯಾಗ್ರಹ ಚಳವಳಿಯು [illegible] ಇಸವಿಯ ಕಾಂಗ್ರೆಸ್ಸಧಿವೇಶನ ಮತ್ತು [illegible] ವಿಶೇಷ ಅಧಿವೇಶನಗಳು ಈಗಲೂ ನನ್ನ ಕಣ್ಣಮುಂದೆ ಕಾಣುತ್ತವೆ. ಮಹಾತ್ಮ ಗಾಂಧಿಯವರ ಪ್ರೇರಣೆಯಿಂದ ಈ ಸಂಸ್ಥೆಯು ಸಂಪೂರ್ಣ [illegible]ವಾಗಿ ಅಂದಿನಿಂದ ಇವತ್ತಿನ ವರೆಗೆ ಈ ಸಂಸ್ಥೆ ಅಧಿವೇಶನಗಳಲ್ಲಿ [illegible] ಮಾನವು ವ್ಯಕ್ತವಾಗುತ್ತಿದೆ.

[illegible] ಹಿಂದೆ [illegible] ಕಳೆದ ಮಹಾಯುದ್ಧದಿಂದ ಬಳಲಿದ ಪ್ರಪಂಚಕ್ಕೆ ಒಂದು ಹೊಸ [illegible]ನ್ನು ತೋರಿಸಿದರು. ಪ್ರೇಮ, ಸತ್ಯ, ಅಹಿಂಸೆಗಳೆಂಬ ಸೂತ್ರಗಳನ್ನು ಆಧರಿಸಿಕೊಂಡಿರುವ ಒಂದು ಪ್ರಬಲ ಶಕ್ತಿಯನ್ನು ಇವರಿಗೆ ಒದಗಿಸಿದರು.

ಸತ್ಯಾಗ್ರಹದ [illegible] ಕಾಂಗ್ರೆಸ್ಸಿನದಾಯಿತು. ಅದರಿಂದಾಗ ಇಡೀ ಭರತಖಂಡದ ಮೇಲೆ ಬೀರಿದ ವರ್ಚಸ್ಸು ಅಸ್ಪಷ್ಟ. ಈ ಅಗಾಧ ಸೂತ್ರದಿಂದಲೇ ಕಾಂಗ್ರೆಸ್ಸು ಎಂಬ ಈ ಸಂಸ್ಥೆಯು ಒಂದು ಮಹಾ ರಾಷ್ಟ್ರೀಯ ಸಂಸ್ಥೆಯಾಗಿ ಸಂಭವಿಸಿತು. ಕಾಂಗ್ರೆಸ್ಸು ಎಲ್ಲಾ ಜಾತಿ ಮತ, ಮತ್ತು ಇಡಿ ಭರತಖಂಡದ ಹಿತವನ್ನು ಸಾಧಿಸುತ್ತದೆಂದು ಅದರ ಕಳೆದ ಅರ್ಧ ಶತಮಾನದ ಜೀವಮಾನದಿಂದ ಪ್ರಕಟವಾಗುತ್ತದೆ. [illegible] ಇಸವಿಯ ನಂತರ ಕಾಂಗ್ರೆಸ್ ಚಳವಳಿಯು ಅದರ ಕಾರ್ಯಕ್ರಮದಿಂದ ಮತ್ತು ವರ್ತನೆಯಿಂದ ಅದು ಈಗ ಭರತಖಂಡದ ಸಮಸ್ತ ಜನರ ಸೇವೆಮಾಡುವ ಸಂಸ್ಥೆಯಾಗಿರುತ್ತದೆಂದು ವ್ಯಕ್ತವಾಗುತ್ತದೆ. ಅದು ಭಾರಿ ಶ್ರದ್ಧಾವಂತ ರಾಷ್ಟ್ರೀಯ ಸಂಸ್ಥೆಯಾಗಿರುವುದು ಉಚಿತವು.

ಆ ಹಿಂದಿನ ದಿವಸಗಳನ್ನು ಸ್ಮರಿಸಿದರೆ ಮತ್ತು [illegible] ನಂತರ ಮಹಾತ್ಮ ಗಾಂಧಿಗಳು ಮತ್ತು ಅವರ ಪ್ರಸಿದ್ಧ ಸಹವಾಸಿಗಳು ಸ್ವಾರ್ಥತ್ಯಾಗ ಮಾಡಿ ಸರ್ವಸ್ವವನ್ನೂ ದೇಶಸೇವೆಗಾಗಿ ತ್ಯಜಿಸಿ, ವಿಶೇಷ ಅದ್ವಂತರಗಳನ್ನು ಅನುಭವಿಸಿ ಸ್ವಾತಂತ್ರ್ಯ ಸಾಧನೆಯ ಒಂದೊಂದೆ ಸೋಪಾನವನ್ನು ಹತ್ತಿದ ಈ ಸಂಸ್ಥೆಯ ಜೀವಮಾನವನ್ನು ಸ್ಮರಿಸಿದರೆ ಈ ಚಳವಳಿಗೆ ದೊರೆತ ಸರ್ವಜನ ಪ್ರೋತ್ಸಾಹವನ್ನೂ ಅಸಹಕಾರ ಮತ್ತು ಅಹಿಂಸಾದಿಂದ ಸ್ಫೂರ್ತಿಗೊಂಡಿದ ಭರತಖಂಡದ ಭವಿಷ್ಯ ಮುಂದಾಳುಗಳಾಗಿರುವ ಉತ್ಸಾಹಿಕ ತರುಣ ತರುಣಿಯರನ್ನೂ, ಮಕ್ಕಳು ಮುದಿಗಳನ್ನೂ ನೋಡಿದರೆ ನನ್ನಲ್ಲಿ ಮಹಾ ಗೌರವವು ಉತ್ಪಾದನೆಯಾಗುತ್ತಿದೆ ಮಾತ್ರವಲ್ಲದೆ, ನಮ್ಮ ದೇಶವು, ತನ್ನ ಉದ್ದೇಶವನ್ನು ಸಾಧಿಸಿ ಸಂತುಷ್ಟವೂ ಶ್ರೇಯಸ್ಕರವೂ ಆಗಿರುವ ಜೀವಮಾನವನ್ನು ಪ್ರಾರಂಭಿಸುವುದೆಂದು ನಾನು ಪ್ರತೀಕ್ಷಿಸಿಕೊಳ್ಳುವವನಾಗಿದ್ದೇನೆ.

ಕೆಲವು ವಿಚಿತ್ರ ಘಟನೆಗಳು.

ಪಾಶ್ಚಾತ್ಯದ ಒಂದು ನಗರದಲ್ಲಿ ಆಡಲಿಕ್ಕೆ ಹೋದ ಹುಡುಗಿಯೋರ್ವಳು ಮಾಯವಾದಳು. ಪೋಲೀಸರಿಗೆ ತಿಳಿಸಲಾಯಿತು, ಹುಡುಗಿಯ ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಕೊನೆಗೆ ದುಃಖಿತಳಾದ ತಾಯಿಯು ಪೋಲೀಸರನ್ನು ಸಮೀಪಿಸಿ, ತನ್ನ ಹುಡುಗಿಯು ಯಾವದೋ ಒಂದು ರೈಲ್ವೆ ಸ್ಟೇಶನಿನ ವೈಟಿಂಗ್ ರೂಮಿನಲ್ಲಿರುವಳೆಂದು ತಿಳಿಸಿದಳು. ಇವಳ ಮಾತನ್ನನುಸರಿಸಿ ಆ ರೈಲ್ವೆ ಸ್ಟೇಶನಿಗೆ ಹೋಗಲು ತಾಯಿಯು ವಿವರಿಸಿದಂತೆ ಆ ಹುಡುಗಿಯ ಶವವು ಆ ಕೋಣೆಯಲ್ಲಿ ದೊರಕಿತು! ಎಲ್ಲಿಯೂ ಸಂಚರಿಸದ ಆ ತಾಯಿಗೆ ಇದು ಹೇಗೆ ತಿಳಿಯಿತು? ಹೀಗೆಯೆ ಅನೇಕ ಪ್ರಸಂಗಗಳಲ್ಲಿ ಕೆಲವು ಮಾಯಾ ಘಟನೆಗಳು ನಡೆಯುತ್ತವೆ.

\+ \+ \+ \+

ಲಂಡನಿನ ಓರ್ವ ಗುಮಾಸ್ತ ವೃತ್ತಿಯನ್ನು ನಡೆಯಿಸುವವನು ಒಂದು ವಿಚಿತ್ರ ಶಕ್ತಿಯಿಂದ ಕೂಡಿದವನು. ಮರಣದ ಸಮಯವನ್ನು ಮೊದಲಾಗಿ ಹೇಳಬಲ್ಲನು. ಈ ಶಕ್ತಿಯು ಅವನಲ್ಲಿ ಅತೀ ಸಣ್ಣ ಪ್ರಾಯದಿ [illegible] ದಿರುತ್ತದೆ. ಅವನಿಗೆ ಇದರಲಿ ಯಾವ [illegible] ಸುವುದಿಲ್ಲ. ಆದರೆ ಇದರಿಂದ ಭಯಾವಹ ಮಾತ್ರವಾಗ [illegible] ಯಾಕೆಂದರೆ [illegible] ತನು [illegible] ನೋಡುವುದೆಂದು ಇವನಲಿ ಜ್ಞಾನೋದಯವಾಗುತ್ತದೆ. ಆದರೆ ಜ್ಞಾನೋದಯದ ಕಾರಣವನ್ನು ಇವನಿಗೆ ವಿವರಿಸಲು ಸಾಧ್ಯವಾಗುವುದಿಲ್ಲ. ಆದರೆ, [illegible] ಮನುಷ್ಯನ ಸಂಪೂರ್ಣ ಚರಿತ್ರೆಯು ಅತನ [illegible] ಅತನ ಮನಸ್ಸಿನಲ್ಲಿ [illegible]ವಾಗಿ ಸಾಗುವುದು. ಪ್ರಥಮದಲ್ಲಿ ಇದೇನೋ ಸಂಭವಗಳು [illegible] ಗುವುದೆಂದು ಇವನು ನಂಬಿದ್ದನು. ಆದರೆ ಅನಂತರ ಅನೇಕ ಅನುಭವಗಳಿಂದ ತನ್ನಲ್ಲಿ ಇರುವುದು ವಿಚಿತ್ರ ಶಕ್ತಿಯು ಹುಟ್ಟಿರುವುದೆಂದು ಖಚಿತಮಾಡಿಕೊಂಡನು.

\+ \+ \+ \+

ಹೀಗೆಯೇ [illegible] ನಗಳನ್ನು [illegible] ಒಂದು ವಿಚಿತ್ರ ವಸ್ತುಗಿಂತದೆ. ಈ ಕೋಲಿನಿಂದ ಭೂಮಿಯ ಗರ್ಭದಲ್ಲಿರುವ [illegible] ಗೊತ್ತುಹಚ್ಚಬಹುದು. ಇದು ಹೇಗೆ ಸಾಧ್ಯವಾಗುತ್ತದೆಂದು ಹೇಳಲು ಯಾರಿಂದಲೂ ಸಾಧ್ಯವಾಗುವುದಿಲ್ಲ. [illegible] ಮಾತ್ರವಲ್ಲ ಇತ್ತೀಚೆಗೆ ಭೂಮಿಯ ಅಡಿಯಲ್ಲಿರುವ ಲೋಹಗಳನ್ನೂ [illegible] ಇತ್ಯಾದಿಗಳನ್ನೂ ಇದರಿಂದ ಕಂಡುಹಿಡಿದಿರುತ್ತಾರೆ. ಇದರಿಂದ ಅನೇಕ ನಿಧಿಗಳನ್ನು ಹುಡುಕುವ ಕಾರ್ಯವು ನಡೆಯುವುವಂತೆ.

\+ \+ \+ \+

ಹೀಗೆಯೇ ಅತಿ ದೂರವಿರುವ ದೇಶಗಳಲ್ಲಿರುವ ಮನುಷ್ಯನ ಸ್ವರವು ಕೆಲವರಿಗೆ ಕೇಳಿಸುತ್ತದೆ. ಒಬ್ಬನು ತನ್ನ ಮಗನು ಒಂದು ಮಹತ್ವದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದುದನ್ನು ಈ ರೀತಿಯಲ್ಲಿ ತಿಳಿದವನಾದನು. ಇಂಥ ಅನೇಕ ಘಟನೆಗಳು ನಡೆದಿವೆ. ಈ ವಿಚಾರದಲ್ಲಿ ಅನೇಕ ಪರಿಶೋಧನೆಗಳನ್ನು ನಡೆಯಿಸಿ, ಇದೊಂದು — "ಮನೋಭಾವಗಳು ಯಾವ ಯಂತ್ರಸಾಧನೆಗಳ ಸಹಕಾರವಿಲ್ಲದೆ ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸುವ, ವಿಚಿತ್ರ ಘಟನೆ"ಯೆಂದು ಕಂಡುಹಿಡಿದಿರುತ್ತಾರೆ.

\+ \+ \+ \+

ಕಳೆದ ಮಹಾಯುದ್ಧದ ಮುಂಚೆ ನಡೆದ ಘಟನೆ ಇದು. ಇಂಗ್ಲಾಂಡಿನಿಂದ ಇಬ್ಬರು ತರುಣಿಯರು ಫ್ರಾನ್ಸಿಗೆ ಹೋಗಿದ್ದರು. ಅವರಿಗೆ ಚರಿತ್ರಜ್ಞಾನವು ಬಹಳ ಕಡಿಮೆ. ಫ್ರಾನ್ಸಿನ ಚರಿತ್ರೆಯ ಅರಿವೇ ಅವರಿಗಿರಲಿಲ್ಲ. ಅಲ್ಲಿನ ಒಂದು ಮಾರ್ಗದಲ್ಲಿ ಸಂಚರಿಸುತ್ತಿದ್ದರು. ಆಗ ಹದಿನೆಂಟನೆ ಶತಮಾನದ ಉಡುವನ್ನು ಧರಿಸಿದ ಓರ್ವ ಹುಡುಗಿಯನ್ನು ದಾರಿಯಲ್ಲಿ ಕಂಡರು. ಹಾಗೆಯೆ ಸ್ವಲ್ಪ ಮುಂದಕ್ಕೆ ಹದಿನೆಂಟನೆ ಶತಮಾನದ ಉಡುವನ್ನು ಧರಿಸಿದ ಪುರುಷನನ್ನು ಕಂಡರು. ಏನೊ ಹಬ್ಬಕ್ಕಾಗಿ ವೇಶಬದಲಾಯಿಸಿದ್ದಾರೆಂದು ಭಾವಿಸಿದರು. ಅವರು ಇನ್ನೂ ಮುಂದಕ್ಕೆ ಸಂಚರಿಸಿ, ಸೌಂದರ್ಯಮಯವಾದ ಒಂದು ಸರೋವರದ ಹತ್ತಿರ ಬಂದರು. ಅದರ ಮೇಲೆ ಒಂದು ಸಂಕವು ಇತ್ತು. ಈ ಸರೋವರದ ಸೌಂದರ್ಯಕ್ಕೆ ಮೆಚ್ಚಿದವರಾಗಿ, ಆ ಸಂಕವನ್ನು ದಾಟಿ, ಆಚೆ ಬದಿಗೆ ಹೋಗಿ, ಅಲ್ಲಿ ಬಹಳ ಸಮಯ ಆರಾಮಪಟ್ಟರು. ಹಿಂತಿರುಗಿ ಬಂದು ತಮ್ಮ ಈ ಅನುಭವವನ್ನು ಇತರರೊಡನೆ ವಿವರಿಸಲು, ಸಂಕದಿಂದ ಕೂಡಿದ ಆ ಸೌಂದರ್ಯಮಯ ಸರೋವರವು ಒಂದು ಶತಮಾನದ ಹಿಂದಿನದೆಂದೂ, ಅವರಿಗೆ ತಿಳಿದು ಬಂತು. [illegible] ನ ತೃಪ್ತಿಗೆ ಅವರು ಆ ಕಡೆಗೆ ಹೋಗಲು ಅವರಿಗೆ ಆ ಸರೋವರವು ಕಾಣಿಸಲಿಲ್ಲ. ಅವರಿಗೆ ಹಾದಿಯಲ್ಲಿ ಸಿಕ್ಕಿದ ಆ ಎರಡು ವಿಚಿತ್ರ ವ್ಯಕ್ತಿಗಳಿ [illegible]. ಈ ಸರೋವರದಿಂದ [illegible] ಅವರಿಗೆ ಹದಿನೆಂಟನೆ ಶತಮಾನದ [illegible] ದಿವಸದ [illegible] ದ ವಿಚಿತ್ರ [illegible]

[illegible] ಕಾರಣಗಳಿಂದ [illegible] ಹೋಗಲು ಸಾಧ್ಯವಾಗಲಿಲ್ಲ. ಅವನ [illegible] ಅತಿಥಿಗಳು [illegible] [illegible]ನಾಗಿ ಮನೆಗೆ ನಡೆಯುತ್ತಿದ್ದನು. ಇದೇ ಸಮಯದಲ್ಲಿ ಅವನ ಮನೆಯಲ್ಲಿ ಒಂದು ವಿಚಿತ್ರ ಘಟನೆಯು ನಡೆಯಿತು. [illegible] ಶಬ್ದವಾಯಿತು. [illegible] ಅತನ [illegible] ಭಾವಿಸಿದರು. ಆದರೆ ಅತನ ದರ್ಶನ ಮಾತ್ರ ಆಗಲಿಲ್ಲ. ಸ್ವಲ್ಪ ಸಮಯದ ನಂತರ ಅತನು ಮನೆಯನ್ನು ಸೇರಿದನು.

ಏನೂ ಆಯಾಸವಿಲ್ಲದೆ ವ್ಯಾಯಾಮವು ಪಡೆಯುವುದು

ದೇಲಿನ ವಿಚಿತ್ರ ಯೋಜನೆಯನ್ನು [illegible]ನೊಬ್ಬನು ಕಂಡುಹಿಡಿದಿರುವನು. ಈ ಯೋಜನೆಯಿಂದ ವ್ಯಾಯಾಮದ ಸಮಯ ನೀವು ಯಾವ ಕೆಲಸವನ್ನೂ ಮಾಡಬೇಕಾದದಿಲ್ಲ. ವ್ಯಾಯಾಮ ತೆಗೆದುಕೊಳ್ಳುವವರು ಆರಾಮದಲ್ಲಿ [illegible] ಮೇಲೆ ಮಲಗಿದರೆ [illegible] ಅತನ ಕೈಕಾಲುಗಳು ಮತ್ತು ದೇಹವು ಚಲಿಸುವಂತೆ ಒಂದು ಯಂತ್ರವು ಕಾರ್ಯಮಾಡುವುದು. ಹೀಗೆಯೇ [illegible] ಒಬ್ಬನು ಏನೂ ಆಯಾಸವಿಲ್ಲದೆ ಅನೇಕ ಕೆಲಸಗಳನ್ನು ಮಾಡುವ ಯೋಜನೆಯನ್ನು ಕಂಡುಹಿಡಿದಿರುತ್ತಾನೆ. ಇಂಥ ಯೋಜನೆಗಳಿಂದ ಮನುಷ್ಯರು ಯಾವ ಶ್ರಮಗಳನ್ನು ಪಡೆಯಬೇಕಾಗಿಲ್ಲ.

ಆಧುನಿಕ ಯುದ್ಧವು ಆಧುನಿಕವೆ!

ಈಗ ಕಂಡುಹಿಡಿಯಲ್ಪಟ್ಟ ಅನೇಕ ಆಧುನಿಕ ಯುದ್ಧ ಕ್ರಮಗಳೆಲ್ಲಾ ಭಾರಿ ಸಮಯದ ಹಿಂದೆ ಸೃಷ್ಟಿಗೆ ತಿಳಿದಿತ್ತಂತೆ. ಯುದ್ಧಕ್ರಮವು ಪ್ರಾಣಿಗಳಲ್ಲೂ ಕ್ರಮವಾಗಿದೆ. ಮನುಷ್ಯನು ರಚಿಸಿದ ಕೊಲೆಮಾಡುವ ಯೋಜನೆಗಳಿಗಿಂತ ಶ್ರೇಷ್ಠವಾಗಿರುವ ಯೋಜನೆಗಳು ಪ್ರಾಣಿಗಳಲ್ಲಿವೆ. ಈ ಆಧುನಿಕ ಕಾಲದಲ್ಲಿ ಕ್ರಮದಲ್ಲಿರುವ ಟೆಂಕುಗಳಿಂದ ಯುದ್ಧಸನ್ನಾಹ, ಬೋಂಬುಗಳಿಂದ ಯುದ್ಧಸನ್ನಾಹ, ಗೇಸುಗಳಿಂದ ಯುದ್ಧಸನ್ನಾಹ ಇತ್ಯಾದಿಗಳು ತರತರದ ಪ್ರಾಣಿಗಳಲ್ಲಿ ವಾಡಿಕೆಯಲ್ಲಿವೆ.

ಭೂಮಿಯ ತಿರುಗುವಿಕೆ ನಿಲ್ಲುವುದೆ?

ಚಕ್ರಗಳಿಂದ ಕೂಡಿದ ಎಲ್ಲಾ ವಾಹನಗಳಿಗೆ ಅವುಗಳ ಚಲನೆಯನ್ನು ನಿಲ್ಲಿಸಲು 'ಬ್ರೇಕ್' ಎಂಬ ಯೋಜನೆಯು ಇದೆ. ಆದರೆ, ತನ್ನಷ್ಟಕ್ಕೆ ಸುತ್ತುತ್ತಿದ್ದು ಅನಂತರದಲ್ಲಿ ಚಲಿಸುತ್ತಿರುವ ನಮ್ಮ ಭೂಮಿಗೆ ತಡೆಯುವ ಬ್ರೇಕ್‌ಗಳಿವೆಯೆ? ಈ ಚಲನೆಗಳಿಗೆ ಒಂದು ತರದ ಖಗೋಲ ಶಕ್ತಿಯು ತಡೆಯುವಂತಿದ್ದರೂ ಭೂಮಿಯ ಚಲನವು ಸಂಪೂರ್ಣ ನಿಲ್ಲುವ ಸಂಭವಗಳಿಲ್ಲ. ಬೇರೆ ಮಹಾಕಾರಣಗಳಿಂದಾಗಬೇಕಲ್ಲದೆ, ತನ್ನಷ್ಟಕ್ಕೆ ಭೂಮಿಯು ತನ್ನ ಚಲನವನ್ನು ನಿಲ್ಲಿಸಲು ಸಾಧ್ಯವಿಲ್ಲ.

ಎಲ್ಯೂಮಿನಿಯಮಿನಿಂದ ರಚಿಸಿದ ಪಾತ್ರೆಗಳು ಆರೋಗ್ಯಕ್ಕೆ ಹಾನಿಕರವಲ್ಲ.

ಒಂದಾನೊಂದು ದಿವಸ ಎಲ್ಯೂಮಿನಿಯಮ್ ಪಾತ್ರೆಗಳಲ್ಲಿ ತಯಾರಿಸಿದ ತಿಂಡಿಯು ಆರೋಗ್ಯಕ್ಕೆ ಹಾನಿಕರವೆಂದು ಸಾರಲಾಗಿತ್ತು. ಆದರೆ ಬ್ರಿಟನಿನ ಆರೋಗ್ಯ ಖಾತೆಯವರು ಅದರಲ್ಲಿ ಯಾವ ಹಾನಿಯೂ ಇರುವುದಿಲ್ಲವೆಂದು ಪ್ರಚಾರ ಮಾಡುತ್ತಿದ್ದಾರೆ. ಈ ಪಾತ್ರೆಗಳಲ್ಲಿ ಅಡಿಗೆಯನ್ನು ಮಾಡುತ್ತಿರುವಾಗ [illegible] ಲೋಹವು ಆಹಾರವನ್ನು ಸೇರುವುದು ನಿಜ. ಆ ಆಹಾರವನ್ನು ಸೇವಿಸುವಾಗ ಅದರಲ್ಲಿದ್ದ ಲೋಹವು ನಮ್ಮ ದೇಹವನ್ನು ಸೇರಿ ಅನೇಕ ಅಪಾಯಗಳಿಗೆ [illegible] ದೆಂದು [illegible]. ಆದರೆ ಈ ವಿಚಾರದಲ್ಲಿ [illegible] ಆರೋಗ್ಯ ಖಾತೆಯವರು [illegible] ನಡೆಯಿಸಿ [illegible] ಆರೋಗ್ಯಕ್ಕೆ ಯಾವ ಹಾನಿಯೂ ಒದಗುವುದಿಲ್ಲವೆಂದು ಖಚಿತಮಾಡಿರುತ್ತಾರೆ. ಇದರಿಂದ ಇನ್ನು [illegible] ಅತೀ ಸುಲಭ ದರದಲ್ಲಿ [illegible] ಈ ಪಾತ್ರೆಗಳ ಉಪಯೋಗವಾದ [illegible]

ಸೂರ್ಯನು ಬೇಗನೆ ತಣ್ಣನೂರಾಗಿ ಹೋಗುವನು!

ಓರ್ವ ಪ್ರಸಿದ್ಧ ಖಗೋಲ ಶಾಸ್ತ್ರಜ್ಞರು ಬಹಳ ಶೋಧೆಗಳನ್ನು ನಡೆಯಿಸಿ ಅನೇಕ ವರ್ಷಗಳ ತನಕ ಶ್ರಮಪಟ್ಟು, ನಮಗೆ [illegible] ಮತ್ತು ಬೆಳಕು ಕೊಡುವ ಸೂರ್ಯನು ಇನ್ನು ಕೆಲವು ಸಾವಿರ ವರ್ಷಗಳ ನಂತರ [illegible]ವಾಗಿ ಹೋಗುವ ಸಂಭವವು ಉಂಟಾಗುವುದೆಂದು ಕಂಡುಹಿಡಿದಿರುವರು. ಈ ಸಂಘಟನೆ ಯಾರಿಗೂ ಅನುಭವಿಸಲು ಸಾಧ್ಯವಾಗಲಿಕ್ಕಿಲ್ಲ. ಕಾರಣ, [illegible] ವಿಶೇಷ ಕಾಲವು ಉಂಟಾಗಿ ಮನುಷ್ಯನು ಈ ಅವಸ್ಥೆಯ [illegible] ಅತನು [illegible]

ಭಯಂಕರ ಸಾಹಸ.

[illegible] ಬ್ರೇನಸ್ ಎಂಬವನಿಗೆ ಒಂದು [illegible] ಸಮುದ್ರದ ಕಡೆ ವಿಹಾರಕ್ಕೆ [illegible] ಓರ್ವ [illegible] ಸಮುದ್ರದಲ್ಲಿ ಸ್ನಾನಕ್ಕಾಗಿ ಇಳಿದವಳು ಅಲೆಗಳ [illegible] ಸಮುದ್ರಪಾಲಾಗುವುದನ್ನು [illegible] ಕೂಡಲೆ ತನ್ನ [illegible] ಗಳ ಸಮೇತ ಸಮುದ್ರವನ್ನು ಸೇರಿ ಅನಂತರ ಅವುಗಳನ್ನು ತ್ಯಜಿಸಿ, ಸಮುದ್ರದಲ್ಲಿ [illegible] ಈಜಾಡಿ ಸಮುದ್ರದ ಸೆಳೆತಕ್ಕೆ ಸಿಕ್ಕಿದ ಆ ಹತಾಶ ಸ್ತ್ರೀಯನ್ನು ರಕ್ಷಿಸಿದನು. ಈತನಿಗೆ ಈ ಸಾಹಸಕ್ಕಾಗಿ ಮಹಾ ಗೌರವವೆನಿಸುವ ಒಂದು ಪ್ರಖ್ಯಾತ ಸಂಸ್ಥೆಯ ಬಂಗಾರದ ಪದಕವು ದೊರಕಿರುತ್ತದೆ.

ಅನುಕ್ರಮಣಿಕೆ.

ಟಿಪ್ಪಣಿಗಳು ೨
ಜರ್ಮನ್ ಹಿಂದೀಯ ಸಂಬಂಧ ೩
ಕಾಂಗ್ರೆಸ್ಸಿನ ಕೆಲವು ಆಂಗ್ಲೇಯ ಬೆಂಬಲಿಗರು ೪
ಲಕ್ನಾಧೀಶನ ಪೂರ್ವಾರ್ಚಿತ ೬
ಕಾಂಗ್ರೆಸ್ಸಿನ ಚರಿತ್ರಾಸಾರ ೮
ಪ್ರಪಂಚ ಪರಿಚಯ ೯
ಅಗ್ರಲೇಖ
೧೯೩೬ ೧೦
ಸ್ಫುಟವಿಚಾರಗಳು ೧೧
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ಸಮಸ್ತ ಭರತಖಂಡವು ಕಾಂಗ್ರೆಸ್ಸ ಸುವರ್ಣೋತ್ಸವ ೧೪
ವನಿತಾ ವಿಭಾಗ ೧೬
ಸಂಸ್ಕೃತಿ ಪ್ರಚಾರ ೧೮

ಸ್ವದೇಶಾಭಿಮಾನಿ.

ತಾ. ೩ನೇ ಶುಕ್ರವಾರ ಜನವರಿ ೧೯೩೬

೧೯೩೬

೧೯೩೫ ಮುಳುಗಿ ೧೯೩೬ ಮೂಡಿತು ಭೂಪೃಷ್ಠ, ಜನಮನ ಎರಡರಲ್ಲೂ ಕಂಪನ, ಆಂದೋಲನ, ಚಳವಳಗಳನ್ನು ಉಂಟುಮಾಡಿದ ೧೯೩೫, ಸಮ್ರಾಜರ ಆಳಿಕೆಯ, ರಾಷ್ಟ್ರಸಭೆಯ ವಿಶೇಷೋತ್ಸವಗಳ ಆನಂದ ಸಂದರ್ಭವನ್ನೊದಗಿಸಿದ ೧೯೩೫,–ಇನ್ನಿಲ್ಲ ೧೯೩೧ರಿಂದ ೧೯೩೫ರ ತನಕವೂ ಒಂದೇ ಕಿರುದಾರಿ, ಸಂಕುಚಿತ ಧೋರಣೆಯಿಂದಲೇ ನಮ್ಮ ನಾಡಿನ ಜೀವನವು ಸಾಗುತ್ತಲೇ ಬಂದಿದೆ ಮುಗ್ಗಟ್ಟು ಕಡಿಮೆಯಾಗದೆಯಾದರೂ ಅದರ ಹಿಡಿತದಿಂದ ನಾವು ಪಾರಾಗಿಲ್ಲ ಜನಾಂಗದಲ್ಲಿ ಕೀಳು ಮೇಲು ಇಲ್ಲದಂತೆ ಸಾಧಿಸುವವರು ಜನಾಂಗವೊಂದಾಗಲು ಪ್ರಯತ್ನಿಸಿ, ಅರೆಹೊಟ್ಟೆಯವರಿಗಾದರೂ ಬಾಯ್ತುಂಬ ಉಣ್ಣುಣಿಸಲು ಯತ್ನಿಸುವಾಗ, ಅಂತರ್ಸಾಮಾಜಿಕ ಭೇದಬುದ್ಧಿಯು ಇನ್ನಷ್ಟು ವ್ಯಕ್ತವಾಗಿ ವಿಪರ್ಯಾಸವನ್ನು ಉಂಟುಮಾಡುತ್ತಲಿದೆ ಎಂಬುದು ಎಷ್ಟು ಶೋಚನೀಯವಾಗಿಲ್ಲ

ಈ ಮಧ್ಯೆ, ಅಬಿಸೀನಿಯ–ಇಟಲಿಗಳೊಳಗೆ ಯುದ್ಧವೊಂದು ಉಂಟಾಗಿ, ಆ ಯುದ್ಧರಂಗದಿಂದ ಹಾರಬಹುದಾದ ಕಿಡಿಯೊಂದರಿಂದ ಇಡೀ ಭೂಮಂಡಲವೇ ಉರಿದುಹೋಗಬಹುದೆನ್ನುವಂತಹ ಸಂದರ್ಭವುಂಟಾಗಿದೆ ದೇವರ ಪ್ರೇರಣೆಯೂ ಜನಾಂಗಗಳಲ್ಲಿ ಶಕ್ತರಾದವರ ವಿವೇಕವು ಅಲ್ಲಿಂದಲ್ಲಿಗೇ ಈ ಉರಿಯನ್ನು ಶಾಂತಗೊಳಿಸಿದರೆ ಸಾಕಾಗಿದೆ

೧೯೩೬ರಲ್ಲಿ ಏನನ್ನು ನಿರೀಕ್ಷಿಸಬಹುದೋ, ಎಂದರೆ ಆಳವಾದ ಅಗಾಧವಾದ ಕಣವೆಯ ಮೇಲೆ ನಿಂತು ಕೆಳಕ್ಕೆ ನೋಡುತ್ತಿರುವಂತೆ ತೋರುತ್ತಿದೆ ಮೊದಲನೆಯದಾಗಿ ಮುಸಲೋನಿಯ ಮನಸ್ಸು ಪಲ್ಲಟಗೊಂಡು, ಮುನಿಸು ತಣಿವಂತಾದರೆ, ಶಾಂತಪವನವು ಬೀಸಲು ಅನುಕೂಲವಾಗುವುದು ಹಾಗಾಗಲೆಂದೇ ಸರ್ವರ ಕೋರಿಕೆ, ಪ್ರಾರ್ಥನೆ

ಒಂದಕ್ಕಿಂತ ಮತ್ತೊಂದು ಪ್ರಬಲವಾಗಿ ತೋರುವ ರಾಷ್ಟ್ರೀಯ ಅಗತ್ಯ ಕರ್ತವ್ಯಗಳನ್ನು ಕುರಿತು ರಾಷ್ಟ್ರ ಸಭಾಧ್ಯಕ್ಷರು ಎಂದುದಕ್ಕಿಂತ [illegible]ನ್ನಾಗಿ ನಾವು ಹೇಳಲಾರೆವು ಐವತ್ತು [illegible]ರ್ಷಗಳ ಹಿಂದೆ ಬಿತ್ತಿದ ಬೀಜವು ಈಗ ದೃಢ[illegible]ವಾದ ಮರವಾಗಿ ಬೆಳೆದ ಸಾಮ್ಯವನ್ನು ಕೊಟ್ಟು [illegible]ಷ್ಟ್ರಸಭೆಯನ್ನು ಕುರಿತಾಗಿ ಹೇಳುತ್ತ,–ದೇ[illegible]ವು ಪೂರ್ಣ ಸ್ವರಾಜ್ಯದ ಕಡೆಗೆ ಸಾಗುವ [illegible]ಗೆ, ನಮ್ಮಲ್ಲಿ ಜನತೆಯ ಪ್ರತಿನಿಧಿಗಳಾಗಿರುವ ಮುಂದಾಳುಗಳೇ ಕೆಲಸಕ್ಕೆ ಕೈಹಚ್ಚುವವರಾಗಬೇಕು. ಮತ, ಜಾತಿ, ಇತ್ಯಾದಿಗಳ ಗಣನೆ ಇರದೆ, ಯೋಗ್ಯತೆ ಸೇವಾತತ್ಪರತೆಗಳೇ ಈ ಮುಂದಾಳನ್ನು ನಿರ್ಣಯಿಸುವವಾಗಬೇಕು ಎಂದರು.

'ಪೂರ್ಣಸ್ವರಾಜ್ಯ'ವೇ ಭಾರತೀಯರ ಆಶಯವೆಂದೂ, ಜನಾಂಗದ ಪ್ರತಿನಿಧಿಗಳ ಕೈಯಲ್ಲೇ ದೇಶದ ಆಡಳಿತವಿರಬೇಕೆಂದೂ ಎಲ್ಲೆಲ್ಲಿಯೂ ಹೇಳುತಲಿದ್ದಾರೆ. ಆದರೆ, ಇದನ್ನು ಸಾಧ್ಯಗೊಳಿಸಲು ಎಷ್ಟೋ ವಿಧಾನಗಳನ್ನು ಕೈಕೊಳ್ಳಬೇಕಾಗಿದೆ. ಎಲ್ಲರೂ, ಪ್ರತಿಯೊಬ್ಬನೂ, ನಿರಾತಂಕವಾಗಿ ತನ್ನ ಜೀವನವನ್ನು ಅರಳಿಸಲು ಅನುಕೂಲತೆ ಪಡೆಯಬೇಕು ಸಾಂಪತ್ತಿಕ ವಿಚಾರಗಳಲ್ಲಿಯೂ ಸ್ವಾತಂತ್ರ್ಯವಿರುವ ಹಾಗೆ, ಶಾಂತವಾಗಿ ಪರದ್ವೇಷವಿಲ್ಲದೆ ದೇಶೀಯ ವ್ಯಾಪಾರ, ಕೈಗಾರಿಕೆಗಳು ಅಭಿವೃದ್ಧಿ ಹೊಂದಬೇಕು

ಸರಕಾರಗಳ ಆಡಳಿತ ಸಭೆಗಳಲ್ಲಿ ಪ್ರಜಾಪಕ್ಷವು ಪ್ರಾತಿನಿಧ್ಯವನ್ನು ಹೊಂದಿ, ದೇಶೀಯ ಕೈಗಾರಿಕೆಗಳಿಗೂ ಸಾಮಾನ್ಯ ಗುಡಿ ಕೈಗಾರಿಕೆಗಳಿಗೂ, ಗ್ರಾಮಾಭ್ಯುದಯಕ್ಕೂ ವಿದ್ಯಾ ವೈದ್ಯಕೀಯ ಸಹಾಯಗಳ ಪ್ರಚಾರಕ್ಕೂ ಅಸ್ಪೃಶ್ಯತಾ ನಿವಾರಣೆಗೂ, ಪ್ರೌಢರಲ್ಲಿ ಸಾಮಾನ್ಯ ತಿಳುವಳಿಕೆ ಹೆಚ್ಚುವುದಕ್ಕೂ, ತೀರ ಬಡಬಗ್ಗರಲ್ಲಿ ಒಕ್ಕಟ್ಟು ಜೀವನಾನಂದಗಳು ವೃದ್ಧಿಗೊಳುವುದಕ್ಕೂ ಸಹಾಯಕವಾದ ಸಕಲ ಸಲಕರಣೆಗಳನ್ನು ಒದಗಿಸಿಕೊಡುವಂತಾಗಬೇಕು

ಇಷ್ಟೆಲ್ಲ, ಒಂದೆರಡು ಭಾಷಣಗಳಿಂದಾಗಲೀ, ಲೇಖಗಳಿಂದಾಗಲೀ ಕೇವಲ ದಿನಗಳಲ್ಲಿ ಕೈಗೂಡಿ ಬರಲಾರದು ಸತತವೂ ನಿರಂತರವೂ ಪ್ರಯತ್ನಗಳು ನಡೆಯದೆ ಅವಿಶ್ರಾಂತಶ್ರಮದ ಮತ್ತು ತ್ಯಾಗಶೀಲ ಸೇವೆಯ ಫಲವಾಗಿ ಮಾತ್ರ ಇವೆಲ್ಲ ಸಾಧ್ಯವಾಗುವುವು

ಸರಕಾರದ ಮನಸ್ಸಿನ ಇಂಗಿತವನ್ನು ಪ್ರಜೆಗಳೂ, ಪ್ರಜೆಗಳ ಮನೋಭಿಪ್ರಾಯವನ್ನು ಸರಕಾರವೂ ಪರಸ್ಪರವಾಗಿ ಅರಿತುಕೊಂಡು, ಧೈರ್ಯದಿಂದ ಸಹಕರಿಸಿ ನಡೆದರೇ ಇದು ಸುಲಭಸಾಧ್ಯವಲ್ಲದೆ ಪರಸ್ಪರ ಆತಂಕಗಳುಂಟಾದಲ್ಲಿ ಸಾಧ್ಯವಾಗದು ಅದಕ್ಕಾಗಿ ಇಂತಹ ಸಹಕಾರದ ಯುಗವನ್ನು ಹೊಸ ವೈಸರಾಯರ ಹೊಸ ಕೌನ್ಸಿಲುಗಳ ಮತ್ತು ಹೊಸ ರಾಜ್ಯಶಾಸನದ ಮೂಲಕವಾಗಿ, ೧೯೩೬ನೇ ಇಸವಿಯು ಪ್ರಾರಂಭಿಸುವಂತಾದರೆ ಮಾತ್ರ ೧೯೩೫ನೆಯ ನಂತರದಲ್ಲಿ ಮೂಡಿದುದಕ್ಕೆ ಇದನ್ನು ಅಭಿನಂದಿಸಬಹುದಲ್ಲದೆ,–ಹಾಗಿಲ್ಲದಿರುವಲ್ಲಿ ೧೯೩೫ ಇನ್ನೂ ನಡೆಯುತ್ತಲೇ ಇದೆ ಎನ್ನುವುದಕ್ಕೆ ಆಕ್ಷೇಪವಿದ್ದೀತೆ?

ಪರಮಾತ್ಮನು ೧೯೩೬ರಲ್ಲಿ ಜನಾಂಗವನ್ನು ಮುನ್ನಡೆಯಿಸಿ, ಭಾರತಭಾಗ್ಯವಿಧಾತನಾದುದಕ್ಕೆ ಮಂಗಳಗೀತಗಳನ್ನೇ ಕೇಳಲಿ

ಸ್ಫುಟವಿಚಾರಗಳು

ಅಬಿಸೀನಿಯವು ರಾಜಿಯಾಗಲು ಸಿದ್ಧವಿದೆ–

ಯಾವಾಗ? ಈ ಶರ್ತಗಳಿಗೆ ಒಪ್ಪಿಗೆಯಿದ್ದರೆ ಮಾತ್ರ. ಅಬಿಸೀನಿಯದ ನಾಡಿನೊಳಗಿಂದ ಇಟಲಿಯ ಸೈನಿಕರೆಲ್ಲರು ಹಿಂತೆರಳಬೇಕು, ಇದುವರೆಗೆ ನಡೆದ ನಷ್ಟಕ್ಕೆಲ್ಲ ಇಟಲಿಯು ಪರಿಹಾರ ದ್ರವ್ಯ ಕೊಡಬೇಕು, ಅಬಿಸೀನಿಯವು ಸ್ವತಂತ್ರ ರಾಜ್ಯವೆಂದು ಲೀಗ್ ಒಫ್ ನೇಶನ್ಸ್‌ಗೆ ಸೇರಿರುವ ಎಲ್ಲ ರಾಷ್ಟ್ರಗಳು ಒಪ್ಪಬೇಕು, ಲೀಗ್ ನೇಮಕ ಮಾಡುವ ಕಮಿಶನು ಗಡಿಗಳನ್ನು ಸರಿಗೊಳಿಸಿ ಕೊಡಬೇಕು, ಪರರಾಷ್ಟ್ರಗಳಿಂದ ಅಬಿಸೀನಿಯವು ಸಾಂಪತ್ತಿಕ ಮೊದಲಾದ ಎಲ್ಲ ಸಲಕರಣೆಗಳನ್ನು ಪಡೆಯಬೇಕು, ಆದರೆ ಇಟಲಿಯು ಇದರ ಸೂತ್ರಕ್ಕೂ ಬರಬಾರದು ಇಷ್ಟನ್ನು ಇಟಲಿಯು ಒಪ್ಪಿದರೆ ಚಂದ. ಇಲ್ಲವಾದಲ್ಲಿ ತೀರ ಅಪಜಯವಾಗುವ ವರೆಗೂ ಯುದ್ಧ ನಡೆಯಲೀ ಬೇಕು ಎಂದು ಅಬಿಸೀನಿಯದ ಸಮ್ರಾಜರ ಮತ.

ಶಾಲೆಗಳಲ್ಲಿ ಹಿಂದೀ ಪಾಠಗಳು

ಬೇಕಾಗುವ ಸ್ಥಳಾವಕಾಶ, ಆರೋಗ್ಯದ ಏರ್ಪಾಡು, ಸಾಹಿತ್ಯಗಳು, ಉಪಕರಣಗಳು, ವ್ಯಾಯಾಮ ಶಿಕ್ಷಣಕ್ಕೆ ಅಗತ್ಯವಾದ ಸಲಕರಣೆಗಳು ಇವಿಷ್ಟೂ ಒಂದು ಶಾಲೆಯಲ್ಲಿ ಇರುವವೆಂದ ಬಳಿಕ ಹಿಂದೀ ಪಾಠ ಕಲಿಸಲು ಶಾಲೆಗಳು ಹಣ ಖರ್ಚು ಮಾಡಬಹುದು ಹಿಂದೀ ಪಾಠಗಳು ಬರೀ ಐಚ್ಛಿಕವಾಗಬೇಕು, ಮಕ್ಕಳಿಗೆ ಸೇರಲೂ ಯಾವ ಒತ್ತಾಯವೂ ಇರಬಾರದು; ಪಾಠಪಟ್ಟಿಯಲ್ಲಿರುವ ಇತರ ವಿಷಯಗಳ ಪಾಠ ಕಡಿಮೆಮಾಡಿ, ಅಥವಾ ದೇಶಭಾಷೆಯ ಪಾಠಗಳನ್ನು ಕಡಿಮೆಮಾಡಿ ಹಿಂದೀ ಪಾಠಗಳನ್ನು ಕಲಿಸಬಾರದು ಸಂಸ್ಕೃತ ಕಲಿಸುವಲ್ಲಿ ಅದರ ಸ್ಥಾನದಲ್ಲಿ ಮಕ್ಕಳ ಹೆತ್ತವರ ಸ್ಪಷ್ಟ ಅಪೇಕ್ಷೆಯಿಲ್ಲದೆ ಹಿಂದಿಯನ್ನು ಕಲಿಸಬಾರದು–ಹೀಗೆಂದು ಸರಕಾರವು ಒಂದು ಆಜ್ಞಾ ಪತ್ರವನ್ನು ಹೊರಡಿಸಿದೆ

ಮಹಿಳಾ ಸಮ್ಮೇಲನ

ಅಖಿಲಭಾರತ ಮಹಿಳಾ ಸಮ್ಮೇಲನವು ತ್ರಿವೇಂದ್ರಮಿನಲ್ಲಿ ಸೇರಿತು ತಿರುವಾಂಕೋರು ಮಹಾರಾಣಿಯವರೇ ಅಧ್ಯಕ್ಷಸ್ಥಾನ ವಹಿಸಿದರು ಆ ರಾಜ್ಯವು ಸ್ತ್ರೀ ಮಲಿಯಾಳವೆಂದೇ ಹೆಸರುಗೊಂಡಿದೆ ಸ್ತ್ರೀಯರು ಅಲ್ಲಿ ಸರ್ವ ಪ್ರಕಾರಗಳಲ್ಲೂ ಪುರುಷರಿಗೆ ಸಮಾನರು ಸ್ತ್ರೀ ವಿದ್ಯಾಭ್ಯಾಸವು ಇಲ್ಲಿ ಹರಡಿರುವಷ್ಟು ಚೆನ್ನಾಗಿ ಮತ್ತೆಲ್ಲಿಯೂ ಇಲ್ಲ ಪ್ರೈಮರಿ, ಹೈಸ್ಕೂಲ್ ಕಾಲೇಜ ತರಗತಿಗಳಲ್ಲಿ ಹೆಣ್ಣುಮಕ್ಕಳೂ ಗಂಡುಮಕ್ಕಳೊಡನೆ ವಿದ್ಯಾಭ್ಯಾಸವನ್ನು ಒಂದೇ ಕ್ಲಾಸಿನಲ್ಲಿ ಒಳ್ಳೆ ಪಡೆಯುವುದು ಹೆಚ್ಚಾಗುತ್ತ ಬಂದಿದೆ ಹೆಣ್ಣುಮಕ್ಕಳು ಇತರರಷ್ಟೆ ಪೂರ್ಣ ಸಂಬಳವನ್ನು ಕಾಲೇಜುಗಳಲ್ಲೂ, ಮೂರನೆಯಂಶವನ್ನು ಇತರ ತರಗತಿಗಳಲ್ಲೂ ತೆರ [illegible] ಪ್ರತಿಯೊಂದು [illegible] ಶಿಕ್ಷಿತ ಸ್ತ್ರೀಯರು [illegible] ಉಮೇದುವಾರರಾಗುತ್ತ ಬರುತ್ತಾರೆ ಸಹಕಾರ ಸಂಘಗಳಲ್ಲಿ ೨೮೦೦೦ ಸ್ತ್ರೀಯರ ಮೆಂಬರರು ದೇವದಾಸಿಗಳ [illegible] ರಾಜ್ಯದಲ್ಲಿಲ್ಲ ಪರದಾ ಪದ್ಧತಿಯೂ, ಬಾಲವಿವಾಹಗಳೂ ಇಲ್ಲಿಲ್ಲ ಇಂಡಿಯದಲಿ [illegible] ಶಿಕ್ಷಿತೆಯರಿರುವಾಗ ಇಲ್ಲಿ ೧೬ರಂತಿದ್ದಾರೆ [illegible] ಬಾಲವಿಧವೆಯರ [illegible] ಇಂಡಿಯದಲ್ಲಿರುವಾಗ ಇಲ್ಲಿ ೮೨೧

ಅಖಿಲಭಾರತ ಕೆಥೊಲಿಕರ ಸಭೆ

ಶ್ರೀ ಜೋರ್ಜ್ ಜೊಸೆಫರು ಅಧ್ಯಕ್ಷರು, ಪ್ರಾಂತೀಯ ಬಿಶಪರು ಹಾಜರಿದ್ದರು ಕ್ರೈಸ್ತಧರ್ಮವನ್ನು ಪ್ರಚಾರಗೊಳಿಸುವುದಕ್ಕೆ ವಿದೇಶೀಯ ಜನರೂ ಹಣವೂ ಇನ್ನು ತೀರಿಯಲಾರದೆಂದೂ ದೇಶೀಯ ವೈದಿಕರೇ ಈ ಕಾರ್ಯವನ್ನು ಕೈಗೊಳ್ಳಬೇಕೆಂದೂ ಸೂಚಿಸಲಾಯಿತು ಮತಾಂತರಗೊಳಿಸುವುದೊಂದೇ ಕೆಲಸವನ್ನು ಮಿಶನೆರಿಗಳು ಇಟ್ಟುಕೊಳ್ಳದೆ, ವಿದ್ಯಾಪ್ರಚಾರ ಗ್ರಾಮಸಂಘಟನೆ ಮೊದಲಾದುವನ್ನು ಸಹ [illegible] ಕೈಕೊಳ್ಳಬೇಕಾಗಿದೆ ಲಕ್ಷಗಟ್ಟಲೆಯಾಗಿ ಹಣವನ್ನು ವ್ಯಯಿಸಿ, ಹರಿಜನರನ್ನು ಮಾತ್ರ ಮತಾಂತರಗೊಳಿಸುವ ಬದಲು, ಅಥವಾ ಕ್ರೈಸ್ತರಲ್ಲದವರಿಗೆ ವಿದ್ಯಾದಾನ ಮಾಡುವ ಬದಲ ಕ್ರೈಸ್ತರಿಗೇ ಹಿತವನ್ನುಂಟುಮಾಡಲು ಈ ಹಣವನ್ನು ಉಪಯೋಗಿಸುವ ಹಾಗೆ ಪ್ರಯತ್ನಿಸಬೇಕೆಂದೂ ಸೂಚಿಸಲಾಯಿತು. ಬಡವರನ್ನು ಮತಾಂತರಗೊಳಿಸಿ ಅವರ ಸಾಂಪತ್ತಿಕ ಸ್ಥಿತಿಯನ್ನೂ ಅವರ ಮಕ್ಕಳ ವಿದ್ಯಾಭ್ಯಾಸವನ್ನೂ ಉತ್ತಮಗೊಳಿಸಲು ಪ್ರಯತ್ನಗಳು ನಡೆಯಬೇಕೆಂದಾಗಿದೆ

ಒಂದು ಕೋಟಿ ರೂಪಾಯಿ

ಗ್ರಾಮೋದ್ಧಾರಕ್ಕೆಂದು ಸರಕಾರವು ಒಂದು ಕೋಟಿ ರೂಪಾಯಿಗಳನ್ನು ಈ ವರ್ಷ ವಿನಿಯೋಗಿಸಿ ಪ್ರಜೆಗಳ ಕೃತಜ್ಞತೆ ಹೊಂದಿಲ್ಲವೆ? ಅದರಂತೆ ವಿದ್ಯಾಭ್ಯಾಸದ ಪ್ರಚಾರಕ್ಕಾಗಿ ವರ್ಷವೂ ಒಂದು ಕೋಟಿ ರೂಪಾಯಿಗಳನ್ನು, ಸರಕಾರವು ಕೆಲವು ವರ್ಷಗಳ ವರೆಗೆ ವಿನಿಯೋಗಿಸಿದರೆ, ನಿರುದ್ಯೋಗತೆಯ ನಿವಾರಣೆಗಾಗಿ ನಮ್ಮಲ್ಲಿ ಪ್ರೈಮರಿ ಮತ್ತು ಸೆಕೆಂಡರಿ ಶಿಕ್ಷಣಕ್ರಮಗಳನ್ನೆ ಬದಲಾಯಿಸಬಹುದೀತು. ಇಷ್ಟು ವ್ಯಯದಿಂದ, ಜನಾಂಗದ ಜೀವನದಲ್ಲಿ ಹೊಸ ಚೇತನಸಂಪತ್ತು ಉಂಟುವಂತಾಗುವುದು ಇತರ ಯಾವ ವಿಧಾನಗಳಿಂದಲೂ ಚೇತನವು ಹುಟ್ಟಲಾರದ ಸ್ಥಿತಿಗೆ ನಾವು ಇಳಿದಿದ್ದೇವೆ. ಆಗಾಗ ರಿಪೋರ್ಟುಗಳನೂ ನಿರ್ಧಾರಗಳನ್ನೂ ಸ್ಕೀಮುಗಳನ್ನೂ ಹರಡಿಸುವುದಕ್ಕಾಗಿ ಒಂದು ಸೆಂಟ್ರಲ್ ಬೋರ್ಡನ್ನು ನೇಮಿಸಿದರೆ, ಸರಕಾರವು ವಿದ್ಯಾಪ್ರಚಾರವನ್ನು ಮಾಡಿದಂತೇನೂ ಆಗುವುದಿಲ್ಲ ಎಂದು ಅಖಿಲ ಭಾರತ ಶಿಕ್ಷಣ ಪರಿಷತ್ತಿನ ಅಧ್ಯಕ್ಷರ ಭಾಷಣ.

ಐ ಸಿ ಎಸ್

ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಈ ವರ್ಷ ಬರೀ ಕೆಲವು ಮಂದಿ ಯುರೋಪಿಯರು ಮಾತ್ರ ದೊರೆತರು ಇದು ನಮ್ಮ ಭಾವೀ ವೈಸ್ರಾಯರಿಗೂ ಕನ್ಸರ್ವೇಟಿವ್ ಪಕ್ಷಕ್ಕೂ ದುಃಖದ ಸಂಗತಿಯಾಗಿದೆ ಯೋಗ್ಯ ವಿದ್ಯಾರ್ಥಿಗಳಿಗೆ ಇದೊಂದು ಸರ್ವಿಸು ಇದೆ ಎಂದು ಇಂಗ್ಲಿಷ ಶಾಲೆಗಳು ತಿಳಿಸಬೇಕಾಗಿ ನಮ್ಮ ಮುಂದಣ ವೈಸ್ರಾಯರ ಭಾಷಣವಾಗಿದೆ ಜಗತ್ತಿನ ಯಾವ ರಾಜ್ಯದಲ್ಲೂ ಇಂತಹ ಸಂಬಳ ರಿಯಾಯತಿ ಗೌರವಗಳುಳ್ಳ ಸರ್ವಿಸು ಇಲ್ಲ 'ಈ ದೇಶದ ಆಡಳಿತವು ಅತ್ಯುತ್ತಮವಾಗಿ ಸಾಗುವ ಹಾಗೆ, ಬ್ರಿಟಿಷ ಯುವಕರು ಈ ಸರ್ವಿಸಿಗೆ ಸೇರಬೇಕು'' ಎಂಬುದು ಎಂದಿನಿಂದಲೂ ಬಂದಿರುವ ತತ್ವ ಯಾವಲ್ಲಿನ ಪರಿಸ್ಥಿತಿಯು ಎಂಥದೇ ಇರಲಿ, ಐ ಸಿ ಎಸ್. ಯಾವಾಗಲೂ [Sea, Yes' ಎನ್ನುತ್ತ ಇಲ್ಲಿನ ಆಡಳಿತ ಬಲಪಡಿಸಲು ಸಿದ್ಧವಾಗುವಂತಾದರಾಯಿತು

ಶಿಕ್ಷಿತರಿಗೆ

ನಮ್ಮ ಏಳು ಲಕ್ಷ ಗ್ರಾಮಗಳಲ್ಲಿ ಶಿಕ್ಷಿತರು ನೆಲೆಸಲ್ಲಬೇಕು ಅರ್ಧತ್ತು ಮಿಲ್ಲಿಯ [illegible] ನಮ್ಮ ದೇಶದಲ್ಲಿ, ೧೫೫ ಮಿಲ್ಲಿಯ ಎಕ್ರೆ ಸಾಗುವಳಿ ಮಾಡಬಹುದಾಗಿ ಇನ್ನೂ ಬರಿದಿರುವ ಜಮೀನನ್ನು ಕೃಷಿಗೆ ಒಳಪಡಿಸಬೇಕು ಇದೊಂದೇ ಉಪಾಯದಿಂದ ನಿರುದ್ಯೋಗಿಗಳು ಇಲ್ಲದಂತೆ ಮಾಡಬಹುದು ಒಂದೊಂದು ಕುಟುಂಬವು ಒಂದೊಂದು ಮಿಲ್ಲಿ[illegible] ವಾರ್ಷಿಕವಾಗಿ ತೆತ್ತರೆ [illegible] ಲಕ್ಷ ರೂಪಾಯಿ ಭಾಂಡವಾಳವು ಈ ಕೃಷಿಗೆ ಸಿಗುವುದು ಅಲ್ಲಲ್ಲಿಗೆ ಅಗತ್ಯತೋರುವ ಗುಡಿಕೈಗಾರಿಕೆಗಳನ್ನು ಸರಕಾರವು ಪ್ರಾರಂಭಿಸಬೇಕಾಗಿದೆ ವಹಾರಾಷ್ಟ್ರದಲ್ಲಿ ಸೈಸಾಫಂಡಿಸಿಂದ ಆದ ಪ್ರಗತಿಯು ಇಲ್ಲಿಯೂ ಎಲ್ಲೆಲ್ಲಿಯೂ ಆಗ ಸಾಧ್ಯವಾದೀತು ಇಂತಹ ಸಮಾಜಸೇವೆಯ ಕಾರ್ಯಕ್ರಮವನ್ನು ೫–೧೦ ವರ್ಷಗಳಲ್ಲಿ ಎಲ್ಲರೂ ಅಂಗೀಕರಿಸುವಂತಾಗಬೇಕು–ಎಂಬುದಿದು ರಾವ ಕೃಷ್ಣ ಸೇವಾಸಂಘದ ವಾರ್ಷಿಕೋತ್ಸವದ ತಾತ್ಪರ್ಯ

ಲೋರ್ಡ ರೀಡಿಂಗರು

ಡಿಸಂಬರ ೩೦ರಲ್ಲಿ ಲಂಡನಿನಲ್ಲಿ ಹೃದ್ರೋಗದಿಂದ ತಮ್ಮ ೭೫ನೇ ವಯಸ್ಸಿನಲ್ಲಿ ಕಾಲವಾದರು ಇಂಡಿಯದಲ್ಲಿ ೧೯೨೧ರಿಂದ ಶಾಸನಭಂಗ ಚಳವಳವು ಹೊರಡುವಾಗ ಇವರೇ ೫ ವರ್ಷದ ವರೆಗೆ ವೈಸರಾಯರಾಗಿದ್ದು, ವೊಡರೇಟರನ್ನು ಸರಕಾರಕ್ಕೆ ಒಲಿಸಿಕೊಂಡು ಗಾಂಧಿಜಿಯವರನ್ನೂ ಆಲಿ ಸಹೋದರರನ್ನೂ ಜೈಲಿಗೊಪ್ಪಿಸಿ, ಶಾಂತಿಯನ್ನು ಒದಗಿಸಿಕೊಟ್ಟರು. ಇವರ ಕಾಲದಲ್ಲಿ, ಹಳೆಯ ಬಾಧಕಕರವಾದ ಕಾನೂನಗಳನ್ನೆಲ್ಲ ಮೊದಲು ರದ್ದುಮಾಡಲಾಯಿತು, ನಂತರ ಓರ್ಡಿನೆನ್ಸುಗಳ ಯುಗವು ಮೂಡಿತು ಆದರೂ, ಅಪ್ರತಿಮ ನ್ಯಾಯಶಾಸ್ತ್ರ ಬಲ್ಲವರು ಮೊಂಟೆಗ್ಯು ಸುಧಾರಣೆಗಳು ಉತ್ತಮವಾಗಿ ರೂಢಿಗೆ ಬರುವಂತೆ, ಇವರನ್ನು ತಮ್ಮ ಪಂಥದಲ್ಲಿ ಅತಿ ಪ್ರವೀಣರೆಂದೇ ಮೊಂಟೆಗ್ಯುರವರು ವೈಸರಾಯರಾಗಿ ನೇಮಿಸಿ ಕಳಿಸಿದ್ದರು ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಶಾಲೆಯಿಂದ ತಪ್ಪಿಸಿಕೊಂಡು ಹಡಗದ ಖಲಾಸಿಯಾಗಿ ಇವರು ಹಿಂದೂದೇಶಕ್ಕೆ ಬಂದಿದ್ದರು, ಇದನ್ನು ಮುಂದೆ ವೈಸರಾಯರಾಗಿ ಬಂದುದಾಗ ಇವರು ಮರೆತಿರಲಿಲ್ಲ ಅತಿ ಪ್ರಸಿದ್ಧ ವಕೀಲರು, ಅತಿ ನಿಪುಣ ನ್ಯಾಯಾಧೀಶರು. ಇವರು ಮೊಂಟೆಗ್ಯುರಿಗೆ ಕಳಿಸಿದ ಒಂದು ತಂತೀವಾರ್ತೆಯು ಅವರು ಪ್ರಕಟಿಸಿದ ಕಾರಣ ಅವರು ಇಂಡಿಯಾ ಸೆಕ್ರೆಟರಿ ಹುದ್ದೆಯನ್ನು ತ್ಯಜಿಸಬೇಕಾಗಿ ಬಂದಿತ್ತು. ಭಾರತ ವರ್ಷದ ವಿಚಾರಗಳಲ್ಲಿ ಮೊನ್ನೆಯ ವರೆಗೂ ಶ್ರದ್ಧೆಯುಳ್ಳವರಾಗಿದ್ದರು

ಮಂಗಳೂರು

ಶ್ರೀ ಕೃಷ್ಣಾಪುರದ ಮುಂದಿರ—ಕಾಶೀ ಮಠಾಧೀಶ್ವರ ರಾದ ಶ್ರೀ ಸುಕೃತೀಂದ್ರ ಸ್ವಾಮಿಯವರ ರಾವೇಶ್ವರದ ಶ್ರೀಮದ ಶ್ರೀ ಕೋದಂಡರಾಮ ದೇವಸ್ಥಾನದ ಜೀರ್ಣೋದ್ಧಾರ ಫಂಡಿಗಾಗಿ ಹಿಂದಿನಿಂದ ಕನ್ನಡ ನಾಡಿನ ಪ್ರಸಿದ್ಧ ನಟರಾದ ಸುಬ್ಬಯ್ಯನಾಯುಡು, ತ್ರಿಪುರಾಂಟ ಮುಂತಾದವರಿಂದ್ರ ಅಭಿನಯಿಸಲ್ಪಟ್ಟ, ಭರತಖಂಡದಲ್ಲೇ ಹೆಸರು ಪಡೆದ "ಸೌತ್ ಇಂಡಿಯನ್ ಮೂವಿಟೋನ್"ನವರಿಂದ ತಯಾರಿಸಲ್ಪಟ್ಟ ಉತ್ತಮ ಪೌರಾಣಿಕ ಚಿತ್ರವು ಪ್ರದರ್ಶಿಸಲ್ಪಡುವುದು, ಪತಿವ್ರತಾ ಶಿರೋಮಣಿಯಾದ ಚಂದ್ರಮತಿಯವಿನ ಪತಿ ಸುಲೋಚನೆಳ ಕತೆ ಅದ್ಭುತಕರ ದೃಶ್ಯಗಳು, ಆಶ್ಚರ್ಯಕರ ವಿನೋದವಟ್ಟು, ದುಃಖಕರ, ಭೀಕರ ದೃಶ್ಯಗಳು ಮನಸೆಳೆಯುವ ೨೫ ಹಾಡುಗಳು, ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಪ್ರದರ್ಶಿಸಲ್ಪಡುವ ಇದನ್ನು ಪ್ರೋತ್ಸಾಹಿಸಿ, ಮಹತ್ವವೂ ಪುಣ್ಯಪ್ರಧಾನವೂ ಆದ ಒಂದು ಸೇವೆಯನ್ನು ಕೈಕೊಳ್ಳುವುದು ಎಲ್ಲರ ಕರ್ತವ್ಯ

ಇದೇ ತಾ ೬ರಿಂದ ಮನಸೆಳೆಯುವ ಮೂರ್ತಿ ಕೋಕಿಲಗಾನೆ, ಅಭಿನಯ ಕಲಾಕುಶಲೆ ಸುಲೋಚನಳೂ, ಡಿ ಬಿಲ್ಲಿಮೋರಿಯಾ, ಜಿಲ್ಲೂ ಮುಂತಾದ ಪ್ರಸಿದ್ಧ ನಟರೂ ಅಭಿನಯಿಸಿದ—ಪ್ರೇಮಮಯ ಸೌಂದರ್ಯದಾಕಾರ, ಚೆಲುವಿನ ಚೆಲುವು, ನೈಜಪ್ರೇಮದ ನೃತ್ಯ, ಬೆರಗುಗೊಳಿಸುವ ನರ್ತನ, ಮನಮುಗ್ಧಕರ ಹಾಡುಗಳಿಂದ ಕೂಡಿದ ಇಂಪೀರಿಯಲ್ ಕಂಪೆನಿಯವರ "ಪೂಜಾರಿಣಿ" ಅಥವಾ "ಡಾನ್ಸರ್ ಒಫ್ ಟೆಂಪಲ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು ಪ್ರತಿಯೊಬ್ಬನು ನೋಡಿ ಆನಂದಿಸಬೇಕಾದ ಚಿತ್ರ

ಸಿಟಿ ಆರ್ಯ ಸಮಾಜ ಮಂಗಳೂರು

ಇದೇ ತಿಂಗಳ ತಾ ೨೯ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮-೩೦ಕ್ಕೆ ಅಳಪೆ ರಕ್ಷೆ (ಬಸವನಗುಡಿ ಬಳಿ ಇ ಕ್ಲಿ ರುಧ ಮಂಗಳೂರು ಸಿಟಿ ಆರ್ಯಸಮಾಜ ಮಂದಿರದಲ್ಲಿ "ಸತ್ಯಾರ್ಥ ಪ್ರಕಾಶದ ಮಹತ್ವ" ಎಂಬ ಕುರಿತು ಭಾಷಣವು ಜರಗಿತು

ಈ ಸಮಾಜದ ಕಾರ್ಯನಿರ್ವಾಹಕ ಕಮಿಟಿಯ ಒಂದು ಸಭೆಯು ಇದೇ ಕಳೆದ ತಾ ೨೯ನೇ ಆದಿತ ವಾರ ಪ್ರಾತಃಕಾಲ ಗಂಟೆ ೯ ೩೦ಕ್ಕೆ ಸಮಾಜ ಮಂದಿರದಲ್ಲಿ ಜರಗಿತು ಹತ್ತು ಮಂದಿ ಸದಸ್ಯರು ಹಾಜರಿದ್ದರು ಕೆಳಗಿನ ವಿಷಯಗಳು ಚರ್ಚಿಸಲ್ಪಟ್ಟವು ೧ ಸಾರ್ವದೇಶಿಕ ಸಭೆಯಿಂದ ಬಂದಿದ್ದ ಸೂಚನೆಗಳನ್ನು ಕಾರ್ಯದರ್ಶಿಯವರು ಓದಿಹೇಳಲಾಗಿ ಅವುಗಳ ಪೈಕಿ "ಸೀಮಾಪ್ರಾಂತ್ಯದ ಸರಕಾರವು ಅಲ್ಲಿಯ ಶಿಕ್ಷಣಾಲಯಗಳಲ್ಲಿ ಹಿಂದಿ ಹೆಸರು ಗುರುಮುಖಿಯನ್ನು ರದ್ದುಗೊಳಿಸಿ ಉರ್ದುಭಾಷೆಯನ್ನು ಪ್ರಚಾರಗೊಳಿಸುವ ಕುರಿತು ಕೊಟ್ಟಿರುವ ನೋಟೀಸ ... ಈ ಸಮಾಜವು ಸನ್ನ ಅಸಮ್ಮತಿಯನ್ನು ಸೂಚಿಸುತ್ತದೆ ಮತ್ತು ಸದರಿ ನೋಟೀಸನ್ನು ರದ್ದುಗೊಳಿಸಬೇಕೆಂದು ಸೀಮಾಪ್ರಾಂತ್ಯದ ಮತ್ತು ಕೇಂದ್ರಸರಕಾರದೊಂದಿಗೆ ಕೇಳಿಕೊಳ್ಳುತ್ತದೆ ಈ ಠರಾವು ಬಹುಮತದಿಂದ ಸ್ವೀಕೃತವಾಗಿ ಇದರ ಒಂದೊಂದು ಪ್ರತಿಯನ್ನು ಹಿಂದೂಸ್ಥಾನದ ಕೇಂದ್ರ ಸರಕಾರಕ್ಕೆ ಸೀಮಾಪ್ರಾಂತ್ಯದ ಸರಕಾರಕ್ಕೆ ಮತ್ತು ಸಾರ್ವದೇಶಿಕ ಸಭೆಗೂ ರವಾನಿಸಬೇಕೆಂದು ನಿಶ್ಚಯಿಸಲಾಯಿತು ೨ ಸಾರ್ವದೇಶಿಕ ಸಭೆಯ ಸೂಚನೆಯನ್ನು ಅಂಗೀಕರಿಸಿ ಆರ್ಯಸಮಾಜದ ಜನ್ಮದಿನವನ್ನು ಇದೇ ಬರುವ ೧೯೩೬ನೇ ಮಾರ್ಚ್ ತಿಂಗಳ ತಾ ೨೨ಕ್ಕೆ ಆಚರಿಸಬೇಕೆಂದು ನಿಶ್ಚಯಿಸಲಾಯಿತು ೩ ಸಿಟಿ ಆರ್ಯಸಮಾಜದ ವಾರ್ಷಿಕ ಉತ್ಸವವನ್ನು ೧೯೩೬ನೇ ಮಾರ್ಚ್ ತಿಂಗಳ ತಾ ೨೨ಕ್ಕೆ ಆಚರಿಸುವಂತೆಯೂ ಈ ಸಂದರ್ಭದಲ್ಲಿ ಬಲ್ಲ ಉಪದೇಶಕರನ್ನು ತರಿಸಿ ಪ್ರಚಾರ ಮಾಡಿಸುವ ಮತ್ತು ಉತ್ಸವಕ್ಕೆ ಸಂಬಂಧಪಟ್ಟ ಇತರ ವೆಚ್ಚಗಳಿಗೆ ರೂ ೮೦ನ್ನು ಖರ್ಚು ಮಾಡುವ ಅಧಿಕಾರವನ್ನು ಸದರಿ ಉತ್ಸವದ ಕಮಿಟಿಗೆ ಕೊಡಲಾಯಿತು

ಖಾದಿ ಮತ್ತು ಗ್ರಾಮಕೈಗಾರಿಕೆ ಪ್ರದರ್ಶನ

ತಾ ೩೦—೧೨—೩೫ನೇ ಸೋಮವಾರ ಬೆಳಗ್ಗೆ ೮-೩೦ ಗಂಟೆಗೆ ಒಕ್ಕಲಿಗರ ಸಂಘದ ಕಟ್ಟಡದಲ್ಲಿ ಖಾದಿ ಮತ್ತು ಗ್ರಾಮಕೈಗಾರಿಕೆ ಪ್ರದರ್ಶನದ ಆರಂಭೋತ್ಸವವನ್ನು ಶ್ರೀ ಕರ್ನಾಟಕ ಕೇಸರಿ ಗಂಗಾಧರರಾವ್ ದೇಶಪಾಂಡೆಯವರು ನೆರವೇರಿಸುತ್ತಾರೆ ಪ್ರದರ್ಶನವು ತಾರೀಖು ೩೦—೧೨—೩೫ನೇ ಸೋಮವಾರದಿಂದ ತಾ ೬—೧—೩೬ ಭಾನುವಾರದ ವರೆಗೆ ನಡೆಯುವುದು ಬೆಳಗ್ಗೆ ೮ರಿಂದ ೧೨ರ ವರೆಗೆ ಮತ್ತು ಅಪರಾಹ್ನ ೩ರಿಂದ ರಾತ್ರಿ ೮ರ ವರೆಗೆ ತೆರೆಯಲ್ಪಡುವುದು ಪ್ರದರ್ಶನದಲ್ಲಿ ನೂಲುವುದು, ನೇಯುವುದು, ಅಚ್ಚುಹಾಕುವುದು, ಜೇನುಹುಳ ಸಾಕುವುದು, ಕಂಬಳಿ ನೇಯುವುದು, ಬುಟ್ಟಿ ಹೆಣೆಯುವುದು, ಬಾಚಣಿಗೆ ಮಾಡುವುದು ಮುಂತಾದ ಅನೇಕ ಕಸಬುಗಳ ಕಾರ್ಯತಃ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದೆ ಬೊಂಬೆ ಆಟಗಳು ಒಂದು ವಿಶೇಷ ವಿನೋದ, ಮೈಸೂರು ಸಂಸ್ಥಾನದ ಎಲ್ಲಾ ಖಾದಿ ಕೇಂದ್ರಗಳ ಬಟ್ಟೆಗಳು ಬರುತ್ತವೆ.

ನಗರದ ಆರೋಗ್ಯ.

ಇದೇ ದಶಂಬರ ತಾ ೨೮ರಿಂದ ಜನವರಿ ತಾ ೩ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೫೦ ಜನನಗಳೂ, ೨೬ ಮರಣಗಳೂ ಆಗಿರುತ್ತವೆಂದು ತಿಳಿದುಬರುತ್ತದೆ

ಸ್ಥಳೀಯ ಈಶ್ವರಾನಂದ ಮಹಿಳಾ ಸೇವಾಶ್ರಮದಲ್ಲಿಯ ಸಾರಸ್ವತ ಮಹಿಳೆಯಾದ ಬಿ ಶಾಂತಾಬಾಯಿ ಎಂಬವರನ್ನು ವೆನ್‌ಲೊಕ್ ಆಸ್ಪತ್ರೆಯಲ್ಲಿ ನರ್ಸಿಂಗ ಕೆಲಸಕ್ಕೆ ತಾ ೧ —೧—೩೬ರಿಂದ ನೇಮಿಸಿದ್ದಾರೆಂದು ಪ್ರಕಟಿಸಲು ತುಂಬಾ ಸಂತೋಷ ಇಂತಹ ಪುಣ್ಯದಾಯಕ ಕೆಲಸವನ್ನು ಕೈಕೊಂಡ ಸಾರಸ್ವತ ಮಹಿಳೆಯರಲ್ಲಿ ಇವರೇ ಮೊದಲನೇಯವರು ಇವರು ತಮ್ಮ ಕೆಲಸದಲ್ಲಿ ಕೀರ್ತಿಯನ್ನಾಂತು ಮಹಿಳಾವೃಂದಕ್ಕೆ ಯಶಸ್ಸನ್ನು ತರಲೆಂದು ನಾವು ಹಾರೈಸುತ್ತೇವೆ

ಸ್ವಾಮಿ ಸತ್ಯದೇವರ ಆಗಮನ.

ಸ್ವಾಮಿ ಸತ್ಯದೇವರು ಇದೇ ಬರುವ ಜನವರಿ ತಿಂಗಳ ತಾ ೬ಕ್ಕೆ ಮಂಗಳೂರಿಗೆ ಬಂದು, ಒಂದೆರಡು ದಿನ ಜಿಲ್ಲೆಯಲ್ಲಿ ಹಿಂದೀಪ್ರಚಾರದ ಅಭಿವೃದ್ಧಿಯನ್ನು ನೋಡುವುದಕ್ಕಾಗಿ ಪ್ರವಾಸಮಾಡಲಿರುವರು ಇವರು ಯುರೋಪು, ಅಮೇರಿಕಾ ಜಪಾನು ಮೊದಲಾದ ದೇಶಗಳಲ್ಲಿದ್ದವರಾಗಿಯೂ ಕಾಂಗ್ರೆಸು ಧುರೀಣರಲ್ಲೊಬ್ಬರಾಗಿಯೂ ಇದ್ದು ಸರ್ವ ಜನಾದರಣೀಯರಾಗಿರುತ್ತಾರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ಇವರು ನಮ್ಮ ಜಿಲ್ಲೆಗೆ ಬರುವಾಗ ಅವರಿಗೆ ಯೋಗ್ಯ ಸ್ವಾಗತವಿತ್ತು ಇವರು ನೋಡಬಯಸುವ ಹಿಂದೀ ಪ್ರಚಾರದ ಪರಿಸ್ಥಿತಿಯನ್ನು ಇವರಿಗೆ ಸರಿಯಾಗಿ ಪ್ರದರ್ಶಿಸಲು ಅನುಕೂಲತೆಗಳನ್ನು ಏರ್ಪಡಿಸಬೇಕಾಗಿ ಹಿಂದೀ ಪ್ರೇಮಿಗಳಲ್ಲಿಯೂ, ಮಹಾಜನರಲ್ಲಿಯೂ ನಮ್ಮ ವಿನಂತಿ— ಜಿಲ್ಲೆಯಲ್ಲಿಯ ಇವರ ಸಂಚಾರಕ್ರಮವು ಹಿಂದಿನಿಂದ ಪ್ರಕಟಿಸಲಾಗುತ್ತದೆ ಎಂದು ಕೆ ದೇವಪ್ಪ ಆಳ್ವ ಹಿಂದೀ ಪ್ರಚಾರಕ ಇವರು ತಿಳಿಸುತ್ತಾರೆ.

ಮಂಗಳೂರಿನ ವಸ್ತು ಪ್ರದರ್ಶನ

ಬಂಗಾರದ ಬೆಲೆ ಏರಿದರೂ ಈ ಬಾರಿಯ ಇಲ್ಲಿಯ ವಸ್ತುಪ್ರದರ್ಶನದಲ್ಲಿ ಬಂಗಾರದ ಪದಕಗಳು ಧಾರಾಳವಾಗಿವೆ ಆ ಪದಕಗಳ ಸಂಖ್ಯೆ ಸುಮಾರು ೬೪ ೬೫ ಇಷ್ಟು ಪದಕಗಳನ್ನು ತಾನೇ ದಾನಮಾಡಲು ನಮ್ಮ ಪ್ರದರ್ಶನ ಸಮಿತಿ ಸಮರ್ಥವಾಗಿದ್ದರೆ ಬಹಳ ಸಂತೋಷ ಈ ಬಂಗಾರದ ಪದಕಗಳಿಗೆ ಪಾತ್ರರಾದವರಲ್ಲಿ ಈ ಕೆಳಗಿನ ಸಂಸ್ಥೆಗಳವರೂ ಕೆಲವರು ಮೊ ಗಳಾದ ಕೇರಳ ಸೋಪು ಇನ್ಸ್‌ಟಿಟ್ಯೂಟ್ ಕಲ್ಲಿಕೋಟೆ, ಪಾ ಕಂಪೆನಿ, ಸುಟೀರ ವರ್ಕ್ಸ್ ಟ್ರೈಬ್‌ವರ್ಕ್ಸ್ ಲಿಮಿಟೆಡ್, ಗೋವರ್ಧನ್ ದಾಸ್ ಸೇ ಓ ಡಿ ಕೆ ಆರ್ ಕೆ ಸೇಟ್, ಪುತ್ತು ಸ್ವಾಕ ಅಡ ಸೇಟ್ ಗಣಪತಿ ಅಂಡ್ ಸನ್ಸ್ ಕೃಷ್ಣ ಒಯಿಲ್ ಮಿಲ್ಸ್ ಲಿಮಿಟೆಡ್‌ನವರ ಸಾಬೂನುಗಳಿಗೆ (ಸ್ಥಳೀಯ ಏಜಂಟರು ಕೂಡೇರ್ ರ್ರಾಯಪ್ಪ ಬ್ಯಾಂಕ್ ಎಂಡ್ ಕೋ)

ತಾಲೂಕುಗಳಿಂದ

ಬೆಳ್ಳಾರೆ:—ಬೆಳ್ಳಾರೆ ಪಂಚಾಯತ ಬೋರ್ಡಿನ ಅಧ್ಯಕ್ಷರಾಗಿ ಶ್ರೀ ಗಣೇಶ ಸುಬ್ರಹ್ಮಣ್ಯನವರು ಚುನಾಯಿಸಲ್ಪಟ್ಟಿರುತ್ತಾರೆ

ಮಿತ್ತೂರು:—ಸ್ಥಳೀಯ ಬೋರ್ಡು ಶಾಲೆಯಲ್ಲಿ ಕಳೆದ ದಶಂಬರ ತಿಂಗಳಿಂದ ಆಗಾಗ್ಗೆ ಊರವರ ಮತ್ತು ನೆರೆಗ್ರಾಮಸ್ಥರ ಕೂಡುವಿಕೆಯಿಂದ "ತಾಳಮದ್ದಳೆ" ಕೂಟ ಕೂಡುವುದೆಂದು ನಿರ್ಣೈಸಿರುತ್ತದೆ ಪ್ರಥಮ ಕೂಟವು ಕಳೆದ ತಾ ೧೧—೧೨—೩೫ರಲ್ಲೂ ಎರಡನೇ ಕೂಟವು ತಾ ೨೧—೧೨—೩೫ರಲ್ಲೂ ರಾತ್ರಿ ಕಾಲದಲ್ಲಿ ಜರಗಿತು ಮೂರನೇ ಕೂಟವು ಬರುವ ೧೯೩೬ನೇ ಇಸವಿ ಜನವರಿ ತಿಂಗಳ ೪ನೇ ತಾರೀಕಿನ ಶನಿವಾರ ರಾತ್ರಿ ಗಂಟೆ ೮ಕ್ಕೆ ಜರಗಲಿಕ್ಕಿದೆ, ಸರ್ವರಿಗೂ ಸುಸ್ವಾಗತವಿದೆ ಎಂದು ಮುಖ್ಯೋಪಾಧ್ಯಾಯರಾದ ಕೂವೆಚಿತ್ತಿಲ ವೆಂಕಟ್ರಮಣ ಭಟ್ಟರು ತಿಳಿಸುತ್ತಾರೆ

ಮೂಡಬಿದ್ರಿ:—ಈ ಸೆಂಟರಿನ ಉಪಾಧ್ಯಾಯರ ಸಂಘದ ೩ನೇ ಸಭೆಯು ಇದೇ ಕಳೆದ ೧೯೩೫ನೇ ದಶಂಬರ ತಾ ೨೧ನೇ ಶನಿವಾರ ೨ ಗಂಟೆಗೆ ಬೋರ್ಡು ಎಲಿಮೆಂಟರಿ ಹುಡುಗರ ಶಾಲೆಯಲ್ಲಿ ದಿಗಂಬರ ಜೈನ ಹಾ ಎ ಸಹಾಯಕ ಉಪಾಧ್ಯಾಯರಾದ ಮ, ರಾ, ಎಂ, ಶ್ರೀಪಾಲ ಜೈನಿಯವರ ಅಧ್ಯಕ್ಷತೆಯಲ್ಲಿ ಜರಗಿತು ೨೦ ಶಾಲೆಗಳ ೪೬ ಮಂದಿ ಅಧ್ಯಾಪಕರು ಹಾಜರಿದ್ದರು, ಅಂದು ಮಿಜಾರು ಬೋರ್ಡುಶಾಲಾ ಸಹಾಯಕರಾದ ಮ ರಾ, ಎ ಭೋಜರಾಯರು ೩ನೇ ಕ್ಲಾಸಿನ ಮಕ್ಕಳಿಗೆ ಮಾನಸಿಕ ಲೆಕ್ಕದಲ್ಲಿ ಮಾದರಿ ಪಾಠವನ್ನು ಬಹುಸೊಗಸಾಗಿ ಕೊಟ್ಟರು, ಬರುವ ಸಭೆಯು ೧೯೩೬ನೇ ಜನವರಿ ೨೫ಕ್ಕೆ ಜರಗಿಸಲ್ಪಡುವುದೆಂದು ಈ ಮೂಲಕ ತಿಳಿಸೋಣಾಗಿಯದೆ.

ಕಾರ್ಕಳ:—ತಾ. ೨೮—೧೨—೩೫ನೇ ದಿನ ಕಾಂಗ್ರೆಸ್ಸಿನ ಸುವರ್ಣೋತ್ಸವವು ಕಾರ್ಕಳದಲ್ಲಿಯೂ ತಾಲೂಕಿನ ಮೂಡಬಿದ್ರಿ, ಹಿರಿಯಡ್ಕ, ಮುಂಡ್ಕೂರು, ಬೈಲೂರು ಮತ್ತು ಹೆಬ್ರಿ ಮೊದಲಾದ ಗ್ರಾಮಗಳಲ್ಲಿ ಸಹಾ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಕಾರ್ಕಳದಲ್ಲಿ ಬೆಳಗುಜಾವ ೫ ಗಂಟೆಗೆ ಪ್ರಭಾತಫೇರಿ ಮೆರವಣಿಗೆಯು ಸಾಲ್ಮರದಿಂದ ಪ್ರಾರಂಭವಾಗಿ "ಸ್ವರಾಜ್ಯ ಮೈದಾನಿಗೆ" ಹೋಗಿ ಅಲ್ಲಿ ೮ ಗಂಟೆಗೆ ರಾಷ್ಟ್ರಧ್ವಜಾರೋಹಣ ಸಮಾರಂಭವು ನಡೆಯಿತು ೯ ಗಂಟೆಗೆ ಬಂಟರ ಹೋಸ್ಟೇಲಿನಲ್ಲಿ ಮೈಸೂರಿನ ಇಬ್ಬರು ಮಹರ್ಷಿಯರ ಯೋಗಾಸನಗಳ ವಿಷಯ ಭಾಷಣ ಮತ್ತು ಪ್ರದರ್ಶನವು ಆಯಿತು ಕಾರ್ಕಳ ಹರಿಜನಸೇವಾ ಸಂಘಕ್ಕೆ ಶ್ರೀಯುತ ಕ ಸಿ ಮಂಜುನಾಥ ಕಾಮತರು ದಾನವಾಗಿ ಕೊಟ್ಟಿರುವ ಸ್ಥಳದಲ್ಲಿ ಕಾಂಗ್ರೆಸಿನ ಸುವರ್ಣೋತ್ಸವದ ಸ್ಮಾರಕಾರ್ಥವಾಗಿ ಹರಿಜನ ಹೋಸ್ಟೇಲ್ ಕಟ್ಟಿಸಲಿಕ್ಕೆ ಅಸ್ತಿಕಲ್ಲು ಹಾಕುವ ಸಮಾರಂಭವು ಹರಿಜನ ಸೇವಾ ಸಂಘಕ್ಕೆ ಹೆಚ್ಚಿನ ಸಹಾಯ ಮಾಡುತ್ತಾ ಇರುವ ಶ್ರೀಯುತ ಕೆ ಪಿ ಶೇಷಗಿರಿ ಪ್ರಭುಗಳು ಮತ್ತು ಇತರ ಮಹನೀಯರ ಸಮಕ್ಷಮದಲ್ಲಿ ಶ್ರೀಯುತ ಕೆ ಸುಬ್ರಾಯ ಕಾಮತರಿಂದ ಮಾಡಲ್ಪಟ್ಟಿತು ಸಾಯಂಕಾಲ ೫ ಗಂಟೆಗೆ ಸುವರ್ಣೋತ್ಸವ ಕಮಿಟಿಯ ಅಧ್ಯಕ್ಷರಿಂದ ಶ್ರೀಯುತ ಎಚ್ ಎಸ್ ಹುಸೇನ್ ಬಿ ಎ ಬಿ ಎಲ್ ರವರ ಮತ್ತು ಇತರ ಪ್ರಮುಖ ವಕೀಲರೂ ಡಾಕ್ಟರರೂ ವರ್ತಕರೂ ಮತ್ತು ವರ್ಗದಾರರ ಮುಂದಾಳುತನದಲ್ಲಿ ಪುರಮೆರವಣಿಗೆಯು ಸಾಲ್ಮರದಿಂದ ಹೊರಟು ಸ್ವರಾಜ್ಯ ಮೈದಾನಿಗೆ ಹೋಗಿ ಅಲ್ಲಿ ೬ ಗಂಟೆಗೆ ಶ್ರೀಯುತ ಎಚ್ ಎಸ್ ಹುಸೇನ್ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಕಾಂಗ್ರೆಸ್ ಅಧ್ಯಕ್ಷರ ಸಂದೇಶವನ್ನು ಓದಿದ ತರುವಾಯ ಶ್ರೀಗಳಾದ ಅಟವಾಡಿ ಶ್ರೀನಿವಾಸ ಶೆಣೈ ಮತ್ತು ಎಂ ಎಸ್ ಅಧಿಕಾರಿ ಇವರು ಕಾಂಗ್ರೆಸಿನ ಚರಿತ್ರೆ ಮತ್ತು ಅದು ಇದುವರೆಗೆ ಮಾಡಿದ ಕಾರ್ಯಕ್ರಮಗಳು ವಗೈರೆಗಳ ವಿಷಯ ಭಾಷಣಮಾಡಿದರು ನಂತರ ಹರಿಜನ ಶಾಲಾಮಕ್ಕಳ ವಿನೋದ ಆಟಗಳ ಪ್ರದರ್ಶನ ಮತ್ತು ಶ್ರೀಯುತ ಕೆ ಪಿ ಶೇಷಗಿರಿ ಪ್ರಭುಗಳು ದಾನವಾಗಿ ಕೊಟ್ಟ ವಸ್ತ್ರವಸ್ತುಗಳನ್ನು ಹರಿಜನ ಶಾಲಾಮಕ್ಕಳಿಗೆ ಹಂಚೋಣ ಮುಂತಾದ ಸಮಾರಂಭವು ನಡೆಯಿತು ಅಧ್ಯಕ್ಷರ ಭಾಷಣವಾದ ತರುವಾಯ ಸಭೆಯು ಮುಕ್ತಾಯವಾಯಿತು ರಾತ್ರಿ ೧೦ ಗಂಟೆಯಿಂದ ೫ ಗಂಟೆಯ ವರೆಗೆ ಬಂಟರ ಹೋಸ್ಟೆಲಿನಲ್ಲಿ ಶ್ರೀಯುತ ಕೆ ಬಾಬುರಾಯ ಜೋಯಿಸರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಕೆಲವು ಪ್ರಮುಖರ ಪಾತ್ರವಿದ್ದ "ಸುಧನ್ವ ಕಾಳಗ"ವೆಂಬ ಪ್ರಸಂಗದ ಯಕ್ಷಗಾನ ಸಭೆಯು ಜರಗಿತು ಈ ಕಾರ್ಯಕ್ರಮಗಳ ನಡುವೆ ಬಡಜನರಿಗೆ ಅಕ್ಕಿ ಹಂಚೋಣ ಖಾದಿ ಮತ್ತು ರಾಷ್ಟ್ರಧ್ವಜಗಳ ಮಾರಾಟ ವಗೈರೆ ಕೆಲಸಗಳೂ ನಡೆದಿವೆ ರಸ್ತೆಗಳು ಮತ್ತು ಮನೆಗಳು ತಳಿರುತೋರಣಗಳಿಂದಲೂ ರಾಷ್ಟ್ರಧ್ವಜಗಳಿಂದಲೂ ಅಲಂಕೃತವಾಗಿದ್ದುವು. ಅಂತೂ ಸುವರ್ಣೋತ್ಸವ ಕಮಿಟಿಯವರು ನಿಶ್ಚಯಿಸಿದ ಎಲ್ಲಾ ಕಾರ್ಯಕ್ರಮಗಳು ತರುಣ ಸ್ವಯಂಸೇವಕರು ಮತ್ತು ಸ್ವಯಂಸೇವಕಿಯರ ಉತ್ಸಾಹಪೂರ್ವಕವಾದ ಕೆಲಸದಿಂದಲೂ ಮಹಾಜನರ ಪ್ರೋತ್ಸಾಹದಿಂದಲೂ ಬಹಳ ಯಶಸ್ವಿಯಾಗಿ ನಡೆದದ್ದು ಸರ್ವರಿಗೂ ಸಂತೋಷವನ್ನುಂಟುಮಾಡತಕ್ಕ ಸಂಗತಿಯಾಗಿದೆ

ಮೂಲ್ಕಿ:—ಇಲ್ಲಿಯ ಸುವರ್ಣಮಹೋತ್ಸವವು ಭಾರತ ರಾಷ್ಟ್ರೀಯ ವ ಹಾಸಭೆಯವರ ಕಾರ್ಯಕ್ರಮದಂತೆ ನಿನ್ನೆ ದಿನ ಇಲ್ಲಿಯ ಪ್ರಮುಖ ಜನಿಹನಮಾರಂಡಾ ಬಂಗ್ಲೆ ಕಾಲ್ ಸೀತಾರಾಮ ಕಿಣ್ಣಿರ ಮನೆಯಿಂದ ಸುಮಾರು ೮೦ ಜನರ ಪ್ರಭಾತಫೇರಿಯು ಬೆಳಗ್ಗೆ ೫ ೩೦ ಗಂಟೆಗೆ ಹೊರಟು ಮುಖ್ಯ ಮುಖ್ಯ ಮಾರ್ಗಗಳಲ್ಲಿ ಸಂಚರಿಸಿ ಗಾಂಧಿಮೈದಾನಿಗೆ ಬಂದು ಸೇರಿತು ಆ ಸಮಯ ಸ್ವಲ್ಪ ಮಳೆ ಬರುತ್ತಿದ್ದರೂ ತರುಣರ ಉಲ್ಲಾಸದಿಂದ ಲಕ್ಷ್ಯಮಾಡದೆ ನಿಶ್ಚಿತ ಸ್ಥಳಕ್ಕೆ (ಗಾಂಧಿಮೈದಾನಿಗೆ) ಹೋಗಿ ಮುಟ್ಟಿತು ಆಗ ತಾನೇ ಮಂಗಳೂರಿನಿಂದ ಚಿತ್ತೈಸಿದ ಶ್ರೀ ನಾರಾಯಣ ಕಿಲ್ಲೆಯವರು ಗಾಂಧಿಮೈದಾನಿನ ವರೆಗೆ ಪ್ರಭಾತಫೇರಿ ಮೆರವಣಿಗೆಯಲ್ಲಿ ಭಾಗಿಗಳಾಗಿ ರಾಷ್ಟ್ರಧ್ವಜವನ್ನು ೬-೩೦ಕ್ಕೆ ಏರಿಸುವ ವಿಧಾನವನ್ನು ಡಾ ಪಾಂಡುರಂಗ ಶೆಣೈಯವರು ಮಾಡಿಸಿದರು, ಅಲ್ಲದೆ ಕೂಡಿದ ಸಭಿಕರಿಗೆ ರಾಷ್ಟ್ರಧ್ವಜದ ಮಹಾತ್ಮೆ ಅದರ ಆಗತ್ಯ ಮುಂತಾದುದರ ವಿಷಯ ಅರ್ಥಗರ್ಭಿತವಾಗಿ ಭಾಷಣಮಾಡಿದರು.

ನಂತರ ಸ್ಥಳೀಯ ಕಾರ್ಯಕ್ರಮದಂತೆ ಶ್ರೀ ಪೂಂಜರ ಮೇಲ್ವಿಚಾರದಲ್ಲಿ ನೆರೆದ ಹರಿಜನರಿಗೂ ಅತೀ ಬಡವರಿಗೂ ಸುಮಾರು ೧೬ ಮುಡಿ ಅಕ್ಕಿಯನ್ನು ಹಂಚಲಾಯಿತು, ನಂತರ ಸ್ಥಳೀಯ ತರುಣಸಮುದಾಯವು ಖಾದಿಯನ್ನು ಮನೆಮನೆಗೆ ತೆಗೆದುಕೊಂಡುಹೋಗಿ ಅತೀ ಅಲ್ಪ ಸಮಯದಲ್ಲಿ ಸುಮಾರು ೧೦೦ ರೂಪಾಯಿ ಖಾದಿಯನ್ನು ಮಾರಾಟಮಾಡಿದರು.

ಸಾಯಂಕಾಲ ೫ ಗಂಟೆಯ ಸಮಯ ಪ್ರಭಾತ ಊರ ಪ್ರಮುಖರೊಡಗೂಡಿ ತರುಣರೇ ಮೊದಲಾದ ೩೦೦ ಮಂದಿಯ ಮೆರವಣಿಗೆಯು ಬೇಂಡುವಾದ್ಯ ಜಯಘೋಷದಿಂದ ಗಾಂಧಿಮೈದಾನದ ವರೆಗೆ ಹೊರಟಿತು, ಮೆರವಣಿಗೆಯಲ್ಲಿ ಹರಿಜನರೂ ಭಾಗಿಗಳಾದದ್ದು ಸಂತೋಷ ನಿಶ್ಚಿತ ಸ್ಥಳಕ್ಕೆ ಸಭೆಯು ಮುಟ್ಟುವಾಗ ಸಂಖ್ಯೆಯು ಸುಮಾರು ಸಾವಿರಕ್ಕೆ ಮುಟ್ಟಿತು

ಗಾಂಧಿಮೈದಾನದಲ್ಲಿ ಮಹಾತ್ಮಾ ಗಾಂಧಿಜಿ, ಶ್ರೀ ಬಾಬೂರಾಜೇಂದ್ರ ಪ್ರಸಾದ (ಕಾಂಗ್ರೆಸ್ ಅಧ್ಯಕ್ಷರು)ರ ಚಿತ್ರಪಟಗಳನ್ನು ಇಟ್ಟು ಜಯಘೋಷ ಮಾಡಲ್ಪಾಯಿತು, ನಂತರ ಇಲ್ಲಿಯ ಡಾ ಎಂ ರಾಯಪ್ಪ ಕಿಣ್ಣಿರ ಅಧ್ಯಕ್ಷತೆಯಲ್ಲಿ ನೆರೆದ ಸಭೆಗೆ ಕಾಂಗ್ರೆಸ್ ಅಧ್ಯಕ್ಷರ ಸಂದೇಶವನ್ನು ಓದಿಹೇಳಲಾಯಿತು. ಶ್ರೀ ಸತ್ಯಮಿತ್ರ ಬಂಗೇರ ಶ್ರೀ ಟಿ ನಾರಾಯಣ ಶೆಟ್ಟರ ಭಾಷಣಗಳಾದುವು, ಬೆಳಗ್ಗೆ ಏರಿಸಿದ ರಾಷ್ಟ್ರಧ್ವಜವನ್ನು ಇಳಿಸಿದ ನಂತರ ಬಾರೀ ಮೆರವಣಿಗೆ ಹೊರಟಿತು ಸುಮಾರು ರಾತ್ರಿ ೮-೩೦ಕ್ಕೆ ನಿಶ್ಚಿತ ಸ್ಥಳಕ್ಕೆ ಮುಟ್ಟಿ ಸಭೆಯು ಬರಕಾಸ್ತಾಯಿತು

ಈ ದಿನ ಬೆಳಗ್ಗೆ ಶಾಲಾ ಮಕ್ಕಳಿಗೆ ತಿಂಡಿ ಹಂಚೋಣ ಮಕ್ಕಳ ಆಟಕ್ಕಾಗಿ ಪಾಂತೋಷಗಳನ್ನು ಕೊಡೋಣವು ನಡೆಯಿತ ಈ ದಿನವೂ ಖಾದಿಮಾರಾಟವಾಯಿತು ಒಟ್ಟಿಗೆ ಸುಮಾರು ೧೦೦ ರೂಪಾಯಿಯ ಖಾದಿಮಾರಾಟವಾದದ್ದು ಮೂಲ್ಕಿಗೆ ಭೂಷಣವೇ ಸರಿ

ಅಂತೂ ನಿನ್ನೆ ಇಲ್ಲಿಯ ಎಲ್ಲಾ ಜನಸಮುದಾಯವು ಸಮಾರಂಭದಲ್ಲಿ ಭಾಗಿಗಳಾದರೆಂದು ಹೇಳಬಹುದು ಪ್ರತೀ ಮಾರ್ಗಗಳ ಅಂಗಡಿ ಮನೆಗಳ ಎದುರು ತಳಿರು ತೋರಣಗಳನ್ನು ಕಟ್ಟಿರುವರಲ್ಲದೆ, ರಾತ್ರಿ ದೀಪಗಳಿಂದ ಅಲಂಕರಿಸಿದ್ದರು ನಿನ್ನೆ ಸಮಾರಂಭದಲ್ಲಿ ಮುಲ್ಕಿ ಪಟ್ಟಣವು ಕಾಂಗ್ರೆಸ್ಸಿನ ಇತಿಹಾಸವನ್ನು ಚೆನ್ನಾಗಿ ತಿಳಿಯತಕ್ಕದೆ ಜಾಗ್ರತೆಯನ್ನು ಕೂಡಾ ಹೊಂದಿತೆಂದು ಹೇಳಬಹುದು ಇದೇ ರೀತಿ ಮುಂದಕ್ಕೂ ಇಂಥಾ ಸಮಾರಂಭಗಳಲ್ಲಿ ಭಾಗಿಗಳಾಗಿ ದೇಶಸೇವೆಯನ್ನು ಮಾಡಲೆಂದೇ ಹಾರೈಕೆ

ಉಡುಪಿ:—ಎಲ್ಲೆಲ್ಲಿಯೂ ಕಾಂಗ್ರೆಸ್ ಸುವರ್ಣ ಮಹೋತ್ಸವವನ್ನು ಆಚರಿಸುವಂತೆಯೇ ಉಡುಪಿಯಲ್ಲಿಯೂ ಕಂಡ ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ತಾ ೨೮—೧೨—೩೫ನೇ ಶನಿವಾರ ದಿನ ಪ್ರಾತಃಕಾಲ ಕಾಂಗ್ರೆಸ್ ಸ್ವರ್ಣಮಹೋತ್ಸವದ ಸ್ಮರಣಾರ್ಥವಾಗಿ ಪ್ರಭಾತಫೇರಿಯನ್ನು ಹೊರಡಿಸಿ ಪಟ್ಟಣದಲ್ಲೆಲ್ಲಾ ಸುತ್ತಾಡಿದರು ಸಂಜೆ ಗಂಟೆ ೪ಕ್ಕೆ ಸರಿಯಾಗಿ ಮಹಾಜನರ ಮೆರವಣಿಗೆಯೊಂದು ಆನೆ ಬೇಂಡುವಾದ್ಯಗಳಿಂದೊಡಗೂಡಿ ವೈಭವಾತಿಶಯದಿಂದ ಊರ ಪ್ರಮುಖ ರಸ್ತೆಗಳಲ್ಲೆಲ್ಲಾ ಸಂಚರಿಸಿ ಗಂಟೆ ೬ಕ್ಕೆ ಸರಿಯಾಗಿ ಶ್ರೀ ರಾಮಕೃಷ್ಣ ಥಿಯೇಟರಿಗೆ ಬಂದು ತಲ್ಪಿತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಡಾ ಪಿ ಗುರುರಾಜ ಆಚಾರ್ಯರವರು ಗದ್ದುಗೆಯನ್ನೇರಿದ ತರುವಾಯ ಕಾಂಗ್ರೆಸ ಪ್ರೆಸಿಡೆಂಟರ ಬಾಬೂರಾಜೇಂದ್ರರ ದಿವ್ಯ ಸಂದೇಶವನ್ನು ಶ್ರೀ ಕೆ ಆ ಕಾರಂತರು ಓದಿದರು ಸಂದೇಶದ ಭಾಷಾ ಪ್ರತಿಗಳನ್ನು ಮಹಾಜನರಿಗೆಲ್ಲಾ ಹಂಚಿದ ತರುವಾಯ ಕಾಂಗ್ರೆಸ್ಸಿನ ಉತ್ಪತ್ತಿಯೇ ಅಭಿವೃದ್ಧಿಯನ್ನು ಬಣ್ಣಿಸುವ ಶಬ್ದಗಳು ವಕೀಲರು ವಾಸುದೇವರಾಯರಿಂದ ಮಾಡಲ್ಪಟ್ಟು ಸರ್ವರಿಂದಲೂ ಅನುಮೋದಿಸಲ್ಪಟ್ಟವು ಸಭಿಕರಲ್ಲಿ ಕೆಲವರು ಸಮಯೋಚಿತ ಭಾಷಣಗಳನ್ನಾಡಿದರು ಧನ್ಯವಾದ ಸಮರ್ಪಣೆಗಳಾದ ತರುವಾಯ ಅಂದಿನ ಸಮಾರಂಭವು ಪೂರ್ಣವಾಯಿತೆನ್ನಬಹುದು ಶ್ರೀಗಳಾದ ಮಂಗಳೂರ ಮಂಜುನಾಥಾಚಾರ್ಯರೂ ಕಲ್ಯಾಣಪುರ ದೇವೇಂದ್ರ ಶೆಣೈಗಳವರೂ ಸತ್ಯಾಗ್ರಹಿ ಸದರಿ ಮೆರವಣಿಗೆಯಲ್ಲಿ ಭಾಗವಹಿಸಿ ಸಭಾಕಾರ್ಯವನ್ನು ಚಂದಗೊಳಿಸಿದುದು ಆದರಣೀಯ ಮರುದಿನ ತಾ ೨೯ರಲ್ಲಿ ಎಡ್ವೊಕೇಟ್ ಬಿ ವಾಸುದೇವರಾಯರು ಕಾಂಗ್ರೆಸ್ ಸ್ವಯಂಸೇವಕರಿಗೆ ಸ್ವರ್ಣಮಹೋತ್ಸವದ ಬುಧಸಾಧನಾರ್ಥವಾಗಿ ಟೀಪಾರ್ಟಿ ಸತ್ಕರಿಸಿದ್ದರು

ತೋಕೂರು ಜೋಗಟ್ಟೆ:—ಕೊಡೆತ್ತೂರು ರಾಮನಾಥರ ಮಗ ತೋಕೂರುಗುತ್ತು ಚಂದ್ರಾಳ್ವರು ಇಲ್ಲಿ ಒಂದು ಹೊಸತಾಗಿ ಕಟ್ಟಿಸಿದ ಅಕ್ಷಬಂಧಶಾಲೆಯ ಕಟ್ಟಡದ ಪ್ರವೇಶವು ತಾ, ೧೪—೧೨—೩೫ನೇ ರಾತ್ರಿ ಜರಗಿತು, ತಾ, ೧೬ ಮತ್ತು ೧೭ ಈ ಎರಡು ದಿವಸಗಳಲ್ಲಿ ಮಂಗಳೂರು ಕಂಪನಿಯವರ ಪಟಾಪತಾರದ ಪ್ರೀಳದಪರಿಂದ ಬಯಲಾಟವು ಇಲ್ಲಿ ಉತ್ತಮ ರೀತಿಯಲ್ಲಿ ಜರಗಿತು.

ದಕ್ಷಿಣಕನ್ನಡ ಜಿಲ್ಲಾ ಟೀಚರ್ ಮೆನೇಜರ್ ಸಂಘದ ಸಭೆ.

ಈ ಸಂಘದ ಸಭೆಯು ತಾ. ೨೯—೧೨—೩೫ನೇ ಆದಿತ್ಯವಾರ ಅಪರಾಹ್ನ ೩ ಗಂಟೆಗೆ ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಕಟ್ಟಡದಲ್ಲಿ ಮಾ. ರಾ. ರಾ. ಯು. ಶ್ರೀ. ಸುಬ್ರಮಣ್ಯ ಭಟ್ ಎಂ. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಥಮತಃ ಸಂಘದ ಕಾರ್ಯದರ್ಶಿ ಅಧ್ಯಕ್ಷರಾದ ರಾ. ಕೆ. ಗಣಪಯ್ಯ ಶೆಟ್ಟಿ ಸಂಘದ 'ವಾರ್ಷಿಕ' ಇತಿಹಾಸವನ್ನು ಓದಿದ ಬಳಿಕ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಮಂಜೂರಾದವು.

(೧) ಮದ್ರಾಸು ಸಂಸ್ಥಾನದ ಎಜುಕೇಶನಲ್ ಡೈರೆಕ್ಟರರಾಗಿದ್ದು ಶಾಲೆಗಳ ಕೇಂದ್ರೀಕರಣದ ನವೀನ ಸ್ಕೀಮನ್ನು ರಚಿಸಿದ ಮತ್ತು ಪ್ರಾಥಮಿಕ ವಿದ್ಯಾ ಪ್ರಚಾರದಲ್ಲಿ ಬಹಳ ಶ್ಲಾಘನೀಯ ಕೆಲಸ ಮಾಡಿದ ಮಿ. ಚಾಂಪಿಯನ್ ದೊರೆಗಳವರ ಅಕಾಲ ಮರಣಕ್ಕಾಗಿ ಈ ಸಭೆಯು ದುಃಖಸೂಚಕ ಠರಾವನ್ನು ಪಾಸುಮಾಡಲಾಯಿತು.

(೨) ಖಾಸಗಿ ಶಾಲೆಗಳ ಗ್ರೇಂಟಿನ ದರವು ಬಹಳ ಕಡಿಮೆಯಾದುದರಿಂದ ಈ ಕೆಳಗಿನ ರೀತಿಯಲ್ಲಿ ಗ್ರೇಂಟಿನ ಸ್ಕೇಲನ್ನು ಏರಿಸಿಕೊಡುವಂತೆ ಮದ್ರಾಸ ಸರಕಾರವನ್ನು ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

	ಅನ್‌ಟ್ರೈಂಡ್	ಟ್ರೈಂಡ್
A ಲೋವರ್ ಗ್ರೇಡ್ ತಿಂಗಳು ೧ಕ್ಕೆ		
	೮	೧೨
B ಹಾಯರ್ ೧೨		೧೬
C ಸೆಕೆಂಡರಿ ೧೬		೨೦

(೩) ಉತ್ತಮವಾದ ಲೋವರ್ ಎಲಿಮೆಂಟರಿ ಶಾಲೆಗಳಿಗೆ ಶೇಕಡ ೫೦ರ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಶೇಕಡ ೧೦೦ರ ವರೆಗೂ ಆಯಾಯ ಶಾಲೆಗಳ ಯೋಗ್ಯತಾ ಪ್ರಕಾರ ಅಭಿವೃದ್ಧಿ ಗ್ರೇಂಟನ್ನು ಕೂಡಿಸಿ ಕೊಡುವಂತೆ ಸರಕಾರಕ್ಕೆ ಬರಕೊಳ್ಳುವದು.

(೪) ಬೇಕ್‌ವರ್ಡ್ ಅಲ್ಲದ ಬಡ ಹುಡುಗಿಯರ ಮೂಲ ವಿದ್ಯಾಭ್ಯಾಸಕ್ಕಾಗಿ ಸರಕಾರವು ಈ ಜಿಲ್ಲೆಗೆ ಕೊಡತಕ್ಕ ಕಂಪೆನ್ ಸೇಶನ್ ಗ್ರೇಂಟು ಏನೇನು ಸಾಕಾಗುವುದಿಲ್ಲವಾದ್ದರಿಂದ ಸದರಿ ಗ್ರೇಂಟನ್ನು ಈ ಜಿಲ್ಲೆಗೆ ಕೊಡುವುದಾಗಿ ಸರಕಾರವನ್ನು ಕೇಳಿಕೊಳ್ಳುವದು.

(೫) ಸರಕಾರವು ಬಿಲ್ಡಿಂಗ್ ಗ್ರೇಂಟನ್ನು ಫರ್ನಿಚರ್ ಗ್ರೇಂಟನ್ನು ಇತ್ತೀಚೆಗೆ ನಿಲ್ಲಿಸಿ ಬಿಟ್ಟದ್ದರಿಂದ ಖಾಸಗಿ ಶಾಲೆಗಳಿಗೆ ಬಹಳ ತೊಂದರೆಯಾದ ಕಾರಣ ಈ ವರ್ಷ ಸದ್ರಿ ಗ್ರೇಂಟುಗಳನ್ನು ಕೊಡಿಸುವಂತೆ ಸರಕಾರವನ್ನು ಕೇಳಿಕೊಳ್ಳುವದು

(೬) ಕಳೆದ ೧೯೩೧ನೇ ಇಸವಿಯಿಂದ ಈ ಜಿಲ್ಲೆಯ ಟೀಚಿಂಗ್ ಗ್ರೇಂಟಿನಲ್ಲಿ ಕಡಿತವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಬಂದು ಕಳೆದ ಮಾರ್ಚಿಯಲ್ಲಿ ಪ್ರತಿ ಶಾಲೆಯ ಗ್ರೇಂಟಿನಲ್ಲಿ ಶೇಕಡ ೨೫ರಷ್ಟು ಬಲವಾದ ಕಡಿತವುಂಟಾಯಿತು ಆದರೆ ಇತರ ಅನೇಕ ಜಿಲ್ಲೆಗಳ ಕೌನ್ಸಿಲುಗಳಲ್ಲಿ ಸಹ ಪ್ರಕಟಿತ ಗ್ರೇಂಟು ಉಪಯೋಗಕ್ಕೆ ಬಾರದೆ ಸಿಲ್ಕು ಉಳಿದಿದೆ ಆದ್ದರಿಂದ ಸರಕಾರವು ಈ ವರ್ಷದಲ್ಲಿ ಈ ಜಿಲ್ಲೆಗೆ ಹೆಚ್ಚಿನ ಟೀಚಿಂಗ್ ಗ್ರೇಂಟನ್ನು ಸೆಂಕ್ಷನ್ ಮಾಡಬೇಕಾಗಿ ಸಭೆಯು ಅಭಿಪ್ರಾಯಪಡುತ್ತದೆ

(೭) ಈ ವರ್ಷ ಇಲಾಖೆ ಅಧಿಕಾರಿಗಳು ಇಡೀ ಜಿಲ್ಲೆಯ ಎಸೆಸ್ಡ್ ಗ್ರೇಂಟಿಗಿಂತ ಎಸ್ಟಿಮೇಟ್ ಗ್ರೇಂಟು ಹೆಚ್ಚಾಗಬಾರದೆಂದು ಧೋರಣವನ್ನು ವಹಿಸಿ ಬರೇ ಕೆಲವು ಹಾಯರ್ ಶಾಲೆಗಳಿಗೆ ಮಾತ್ರ ೫೦ರಿಂದ ೧೦೦ರ ವರೆಗೆ ಅಭಿವೃದ್ಧಿ ಗ್ರೇಂಟನ್ನು ಕೂಡಿಸಿದ್ದಾರಾಗಿಯೂ ಮತ್ತು ಈ ಅಭಿವೃದ್ಧಿ ಗ್ರೇಂಟಿನ ಹಣವನ್ನು ಕೂಡಾ ಇತರ ಶಾಲೆಗಳಿಂದ ಕಡಿತ ಮಾಡಿ ಭರ್ತಿಮಾಡಿದ್ದಾರೆಂಗಿಯೂ ತಿಳಿದುಬರುತ್ತದೆ. ಈ ಕ್ರಮದಿಂದ ಯೋಗ್ಯ ಖಾಸಗಿ ಶಾಲೆಗಳು ಮುಖ್ಯವಾಗಿ ಹಾಯರ್ ಎಲಿಮೆಂಟರಿ ಶಾಲೆಗಳು ಬೇಗನೇ ನಿರ್ನಾಮ ಹೊಂದಲಿಕ್ಕಿರುವದರಿಂದ ಸರಕಾರದವರು ಇಲಾಖೆಯವರ ಈ ಕ್ರಮವನ್ನು ಕೂಡಲೇ ರದ್ದುಪಡಿಸಿ ಹಿಂದಿನಂತೆಯೇ ಶಾಲೆಗಳ ಯೋಗ್ಯತಾನುಸಾರ ಶೇಕಡ ೫೦ರಂತೆಯಾದರೂ ಅಭಿವೃದ್ಧಿ ಗ್ರೇಂಟನ್ನು ಕೊಡಿಸುವಂತೆ ಸರಕಾರವನ್ನು ಪ್ರಾರ್ಥಿಸುವದು.

(೮) ಶಾಲೆಗಳಲ್ಲಿ ಸರ್ಟಿಫಿಕೇಟಿಲ್ಲದ ತಾತ್ಕಾಲಿಕ ಉಪಾಧ್ಯಾಯರು ಕೆಲಸ ಮಾಡುತ್ತಿರುವಲ್ಲಿ ಇಲಾಖೆಯ ಅಧಿಕಾರಿಗಳು ಮುಂದಾಗಿ ತಿಳಿಸದೆ ಅನೇಕ ಶಾಲೆಗಳಲ್ಲಿ ಕೆಲಸ ಮಾಡಿದ ಹಲವು ಉಪಾಧ್ಯಾಯರ ಗ್ರೇಂಟನ್ನೇ ತೆಗೆದುಹಾಕುವ ಕಠಿಣ ಮಾದರಿಯನ್ನು ಅನುಸರಿಸಿದ್ದರಿಂದ ಸದ್ರಿ ಕೆಲಸ ಮಾಡಿದ ಉಪಾಧ್ಯಾಯರ ಗ್ರೇಂಟನ್ನು ಸಂಪೂರ್ಣ ಕೊಡಿಸುವಂತೆ ಏರ್ಪಾಡು ಮಾಡಬೇಕಾಗಿ ಸರಕಾರವನ್ನು ಕೌನ್ಸಿಲನ್ನು ಕೇಳಿಕೊಳ್ಳುವದು

(೯) ಈ ಜಿಲ್ಲೆಯ ಕೆಲವು ಇನ್ಸ್‌ಪೆಕ್ಟಿಂಗ್ ಅಧಿಕಾರಿಗಳು ಒಬ್ಬ ಉಪಾಧ್ಯಾಯನಿಗೆ ೩೦ ವಿದ್ಯಾರ್ಥಿಗಳು ಇರಬೇಕೆಂಬ ಸರ್ಕಲರನ್ನು ಹೊರಡಿಸಿ ಆ ಪ್ರಕಾರ ಕೆಲವು ಉಪಾಧ್ಯಾಯರ ಗ್ರೇಂಟನ್ನು ವಜಾ ಮಾಡಿದ್ದು ಸರಿಯಲ್ಲದ ಕಾರಣ ಕ್ಲಾಸಿಗೆ ಒಬ್ಬ ಉಪಾಧ್ಯಾಯನನ್ನು ನೇಮಿಸಲು ಎಡೆಕೊಡುವಂತೆ ಬರಕೊಳ್ಳುವದು.

(೧೦) ಈ ಜಿಲ್ಲೆಯಲ್ಲಿ ಟೀಚರ್ ಮೆನೇಜರ ಶಾಲೆಗಳು ೧೪೦ಕ್ಕೆ ಮಿಕ್ಕಿದ್ದು ಅವರ ಪ್ರತಿನಿಧಿಗಳಾಗಿ ಡಿ ಇ ಕೌನ್ಸಿಲಿನಲ್ಲಿ ಈ ಸ್ಥಾನಗಳು ಇರುವದು ಸಾಕಾಗದೆ ಇದ್ದುದರಿಂದ ತಾಲೂಕಿಗೆ ಟೀಚರ್ ಮೆನೇಜರರಿಗೆ ೬ ಸ್ಥಾನಗಳು ಸಿಕ್ಕುವಂತೆ ಸರಕಾರವನ್ನು ಪ್ರಾರ್ಥಿಸುವದು

(೧೧) ಇಲಾಖಾ ಅಧೀಕರರು ಯಾವದಾದರೊಂದು ಬಲವಾದ ಕಾರಣದಿಂದ ಒಂದು ಶಾಲೆಯ ಗ್ರೇಂಟನ್ನು ಕಡಿಮೆ ಮಾಡಿದ್ದಲ್ಲಿ ಸದರಿ ವಿಷಯವು ಶಾಲಾ ಮೆನೇಜರರಿಗೆ ತಿಳುವಳಿಕೆ ಬಗ್ಗೆ ಕೂಡಲೇ ತಿಳಿಸಬೇಕಾಗಿ ಕೇಳಿಕೊಳ್ಳುವದು

(೧೨) ಗ್ರೇಂಟ್ ಸಬ್ ಕಮಿಟಿ ಮೀಟಿಂಗ್ ೩ ತಿಂಗಳಿಗೊಮ್ಮೆ ಜರಗಬೇಕಾಗಿಯೂ ಸಭೆಯು ಈ ಮೊದಲು ಎಷ್ಟೋ ಸಲ ಕೇಳಿಕೊಂಡರೂ ಅದು ಜಾರಿಗೆ ಬಾರದ್ದರಿಂದ ಮುಂದಿನ ವರ್ಷದಿಂದಲಾದರೂ ಪ್ರತೀ ಜನರಲ್ ಮೀಟಿಂಗು ಜರಗುವ ಸಮಯದಲ್ಲಿ ಗ್ರೇಂಟು ಸಬ್ ಕಮಿಟಿ ಮೀಟಿಂಗ್ ಜರಗುವಂತೆ ಡಿ ಇ ಕೌನ್ಸಿಲಿನಲ್ಲಿ ಏರ್ಪಾಡು ಮಾಡಬೇಕಾಗಿಯೂ ಸದ್ರಿ ಗ್ರೇಂಟು ಮೀಟಿಂಗಿನಲ್ಲಿ ಖಾಸಗಿ ಶಾಲಾ ಮೆನೇಜರರಿಗೆ ತಮ್ಮ ಅರಿಕೆಗಳನ್ನು ಮಾಡಿಕೊಳ್ಳಲಿಕ್ಕೆ ಸಂದರ್ಭ ಕೂಡಿಸಬೇಕಾಗಿ ಡಿ ಇ ಕೌನ್ಸಿಲ್ ಪ್ರಸಿಡೆಂಟರವರಿಗೆ ಬರಕೊಳ್ಳುವದು

(೧೩) ಗ್ರೇಂಟು ಮೀಟಿಂಗು ಜರಗಿ ಕೆಲವು ತಿಂಗಳು ದಾಟುವ ವರೆಗೆ ಗ್ರೇಂಟು ಚಕ್ಕು ದೊರೆಯುವದಿಲ್ಲವಾದ್ದರಿಂದ ಇನ್ನು ಮುಂದಕ್ಕೆ ಮೀಟಿಂಗು ಜರಗಿ, ೧೫ ದಿವಸದೊಳಗೆ ಗ್ರೇಂಟು ಚಕ್ಕು ದೊರೆಯುವಂತೆ ಡಿ ಇ ಕೌನ್ಸಿಲು ಪ್ರಸಿಡೆಂಟರವರಿಗೆ ಬರಕೊಳ್ಳುವದು

(೧೪) ಟೀಚರ್ ಮೆನೇಜರರು ತಮ್ಮ ಶಾಲಾ ಕಟ್ಟೋಣಗಳಿಗಾಗಿ ಹೇರಳ ಹಣ ಖರ್ಚು ಮಾಡುವದರಿಂದ ಸದರಿ ಶಾಲೆಗಳಿಗೆ ಬಾಧಕವಾಗುವಂತೆ ಇತರ ಸಂಸ್ಥೆಯವರು ಇತರ ಶಾಲೆಗಳನ್ನು ತೆರೆಯುದಂತೆ ಮಂಜೂರಾತಿಯನ್ನು ಕೊಡಬಾರದಾಗಿ ಬರಕೊಳ್ಳುವದು

(೧೫) ದಕ್ಷಿಣ ಕನ್ನಡ ಜಿಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ೧ನೇಯ ೦ದ ೩ನೇ ತರಗತಿಯ ವರೇಗೆ ವಿದ್ಯಾರ್ಥಿಗಳಿಗೆ ಸಂಬಳ ಮಾಫಿ ಮಾಡಿರುವ ಕಾರಣ ಖಾಸಗಿ ಶಾಲೆಗಳಲ್ಲಿಯೂ ಈ ತರಗತಿಗಳಲ್ಲಿ ಫೀಸು ವಸೂಲಾಗದೆ ನಷ್ಟ ಉಂಟಾಗುವದರಿಂದ ಈ ನಷ್ಟವನ್ನು ಕಂಪೆನ್ ಸೇಷನ್ ಗ್ರೇಂಟ್ ರೂಪವಾಗಿ ಕೊಡಿಸಿ ಕೊಡುವಂತೆ ಸರಕಾರಕ್ಕೆ ಬರಕೊಳ್ಳುವದು

(೧೬) ಖಾಸಗಿ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ೧೦ಕ್ಕೆ ಮಿಕ್ಕಿ ಅಧ್ಯಾಪಕರು ಇರುವಲ್ಲಿ ಅವರ ಪೈಕಿ ಕೆಲವರು ಕೆಜ ವಲ್ ದರ್ಜೆಯ ಮೇಲೆ ಇರುವಾಗ ಕೆಲಸವು ತೊಂದರೆ ಇಲ್ಲದೆ ನಡೆಯಲು ಅನುಕೂಲವಾಗುವಂತೆಯೂ ಕೆಲವು ಲೋಯರ್ ಗ್ರೇಡ್ ಸಿಕ್ಕುವಂತೆಯೂ ಸೆಕೆಂಡರಿ ಶಾಲೆಗಳಲ್ಲಿ ಇರುವಂತೆ ಜಾಸ್ತಿ ಒಬ್ಬ ಅಧ್ಯಾಪಕನನ್ನು ನೇಮಿಸುವಂತೆ ಅಬ್ಬರ ಗ್ರೇಂಟು ಹೆಚ್ಚಿಗೆ ಕೂಡಿಸಬೇಕಾಗಿ ಕೇಳಿಕೊಳ್ಳುವದು.

(೧೭) ಈ ಜಿಲ್ಲಾ ಸಂಘವನ್ನು ಪ್ರಾಂತಿಕ ಟೀಚರ್ ಮೆನೇಜರರ ಸಂಘದ ಕೇಳಿಕೆ ಪ್ರಕಾರ ಸದರಿ ಸಂಘಕ್ಕೆ ಸಂಯೋಜಿಸಬೇಕಾಗಿ ನಿರ್ಣಯಿಸಲಾಯಿತು

(೧೮) ಜಿಲ್ಲಾ ಸಂಘದ ಆಡಳಿತ ಮಂಡಳಿಗೆ ಪ್ರತಿ ತಾಲೂಕಿನಿಂದ ೨ರ ಪ್ರಕಾರ ಮೆಂಬರರನ್ನು ಚುನಾಯಿಸಲಾಯಿತು.

K Ganapayya Shetty,
President,
Dt. Teacher Managers' Association

ಕರ್ಣಾಟಕದ ವ್ಯವಸ್ಥೆ.
ಮದರಾಸು ಅಧಿಪತ್ಯದಲ್ಲಿ

ಬಳ್ಳಾರಿ ಮೊದಲಾದ ಪ್ರದೇಶಗಳ ಮೇಲೆ ಆಂಧ್ರರು ಮಾಡಿದ ಆಕ್ರಮಣ ಪ್ರಯತ್ನವನ್ನು ನಿರೋಧಿಸಲು ಪರಿಷತ್ತು ನಡೆಸಿರುವ ಕಾರ್ಯವನ್ನು ಹಿಂದಿನ ವರದಿಯಲ್ಲಿ ತಮ್ಮ ಗಮನಕ್ಕೆ ತಂದಿದ್ದಾಗಿದೆ (ಪುಟ ೩೧) ಅಲ್ಲಿಂದೀಚೆಗೆ ಮದರಾಸು ಪ್ರಾಂತದಲ್ಲಿ ಕನ್ನಡಿಗರಿಗೆ ಆಗಬೇಕಾಗಿರುವ ಉಪಕಾರಗಳನ್ನು ಕುರಿತು ಅಲ್ಲಿಯ ಸರಕಾರಕ್ಕೆ ಪರಿಷತ್ತು ಸಮ್ಮೇಳನದ ಪರವಾಗಿಯೂ ತಾನಾಗಿಯೂ ಮಾಡಿಕೊಂಡ ಪ್ರಾರ್ಥನೆಗಳಿಗೆ ಸಮಾಧಾನಕರವಾದ ಉತ್ತರವೇನೂ ಬಂದಿರುವುದಿಲ್ಲ ಇಂಡಿಯಾ ಸರಕಾರಕ್ಕೆ ಈ ವಿಚಾರದಲ್ಲಿ ಕಳುಹಿಸಿದ ಪ್ರಾರ್ಥನೆಗಳಿಗೆ ಉತ್ತರವಾಗಿ ಅವರು ಪರಿಷತ್ತು ಮದರಾಸು ಸರಕಾರಕ್ಕೇ ಬರೆದುಕೊಳ್ಳತಕ್ಕದ್ದೆಂದು ಅಪ್ಪಣೆ ಮಾಡಿರುತ್ತಾರೆ ಹೀಗೆ ಇಂಡಿಯಾ ಸರಕಾರದ ಅನಂಗೀಕಾರ, ಮದರಾಸು ಸರಕಾರದ ಉದಾಸೀನತೆ—ಇವೆರಡರ ನಡುವೆ ಕನ್ನಡದ ಅವಸ್ಥೆ ವಿಷಮವಾಗುತ್ತಿದೆ. ಈ ಸಂದರ್ಭವನ್ನು ಪರಿಷತ್ತಿನ ಉಪಾಧ್ಯಕ್ಷರವರು ಮದರಾಸು ಗವರ್ನರರಿಗೂ ಇಂಡಿಯಾ ಸರಕಾರದವರಿಗೂ ಒಂದು ವಿಶೇಷ ಪತ್ರದಲ್ಲಿ ವಿನ್ನಯಿಸಿ ಕನ್ನಡವು ಮದರಾಸು ಪ್ರಾಂತದಲ್ಲಿ ಪಡುತ್ತಿರುವ ಕಷ್ಟವನ್ನು ವಿವರಿಸಿ, ಕನ್ನಡಕ್ಕಾಗಿ ಗವರ್ನರರ ವಿಶೇಷ ಸಂರಕ್ಷಣೆಯನ್ನು ಬೇಡಿದ್ದಾರೆ ಆ ಪತ್ರವನ್ನು ಕಾ. ಸ. ಮಂಡಲಿ ತಾ ೨೦—೧೧—೩೫ರಲ್ಲಿ ಅನುಮೋದಿಸಿರುತ್ತದೆ (ಈ ಪತ್ರದ ಇಂಗ್ಲಿಷ್ ಮೂಲವನ್ನು ಈ ವರದಿಗೆ ಅನುಬಂಧವಾಗಿ ಕೊಟ್ಟಿದೆ) ಆ ಪತ್ರದ ಸಾರಾಂಶ ಇದು—

"ಮದರಾಸು ಅಧಿಪತ್ಯದಲ್ಲಿ ಒಟ್ಟು ೧೯ ೬೩ ೬೫೫ ಮಂದಿ ಕನ್ನಡಿಗರಿದ್ದಾರೆ, ಎಂದರೆ ಇಂಡಿಯಾದೇಶದ ಒಟ್ಟು ಕನ್ನಡಿಗರ ಸಂಖ್ಯೆಯಲ್ಲಿ ಮದರಾಸು ಅಧಿಪತ್ಯದ್ದು ಸುಮಾರು ಒಂದು ಭಾಗ ಇದು ಸ್ವಲ್ಪ ಅಂಶವೇನೂ ಅಲ್ಲ ಹೀಗಿದ್ದರೂ ಮದರಾಸು ಪ್ರಾಂತದ ನಾನಾ ಭಾಷೀಯರ ಸಂಖ್ಯಾಬಲವನ್ನು ನೋಡಿದರೆ ಕನ್ನಡಿಗರು ಸ್ವಲ್ಪ ಸಂಖ್ಯೆ ವರ್ಗದವರು (ಮೈನಾರಿಟಿ) ಆ ದ್ವಾರೆ ತಮಿಳರೂ ತೆಲುಗರೂ ಮಲೆಯಾಳಿಗಳೂ ಬೇರೆ ಬೇರೆಯಾಗಿಯೇ ಕನ್ನಡಿಗರಿಗಿಂತ ಅಧಿಕ ಸಂಖ್ಯೆಯವರು ಹೀಗಿರುವುದರಿಂದ ಮದರಾಸು ಅಧಿಪತ್ಯದ ಸಾರ್ವಜನಿಕ ಕ್ಷೇತ್ರದಲ್ಲಿಯೂ ಸ್ಥಳೀಯ ಸಂಸ್ಥೆಗಳಲ್ಲಿಯೂ ಶಾಸನಸಭೆಗಳಲ್ಲಿಯೂ ಕನ್ನಡಿಗರ ಪ್ರತಿನಿಧ್ಯವು ಅತಿ ಸ್ವಲ್ಪವಾಗಿದೆ ಈ ಕಾರಣದಿಂದ ಸರಕಾರದಲ್ಲಿ ಅವರ ಸ್ಥಿತಿ ದುರ್ಬಲವಾಗಿದೆ ಮಂತ್ರಿಮಂಡಲದಲ್ಲಿಯಾಗಲಿ ವಿದ್ಯಾಧಿಕಾರ ಮಂಡಲದಲ್ಲಿಯಾಗಲಿ ವಿಶ್ವವಿದ್ಯಾನಿಲಯದಲ್ಲಿಯಾಗಲಿ ಕನ್ನಡದ ಯೋಗಕ್ಷೇಮಗಳನ್ನು ಕುರಿತು ವಿಶೇಷ ಚಿಂತೆಮಾಡುತ್ತಿರುವವರೂ ಯಾರೂ ಕಾಣಬರುತ್ತಿಲ್ಲ ತೆಲುಗು ತಮಿಳು ಭಾಷೆಗಳಿಗೆ ಸಂಖ್ಯಾಬಲದ ಅನುಕೂಲಗಳಿರುವುದರಿಂದಲೂ ಅವುಗಳನ್ನು ಮಾತನಾಡುವವರು ಅಧಿಕಾರ ಸ್ಥಾನಗಳಲ್ಲಿರುವುದರಿಂದಲೂ ಅವರ ನಡುವೆ ಕನ್ನಡ ಕ್ಷಯಿಸುತ್ತಿದೆ ಕನ್ನಡ ಭಾಷೆ ಸಾಹಿತ್ಯಗಳ ವ್ಯಾಸಂಗಕ್ಕೆ ಅನುಕೂಲಗಳು ಸಾಲದೆ ಇರುವುದರಿಂದ ಎಷ್ಟೋ ಕಡೆಗಳಲ್ಲಿ ಕನ್ನಡಿಗರು ತೆಲುಗನ್ನೋ ತಮಿಳನ್ನೋ ಕಲಿಯಬೇಕಾಗಿ ಬಂದು ಅನ್ಯಭಾಷೀಯರಾಗುತ್ತಿದ್ದಾರೆ ಹೀಗೆ ಕನ್ನಡ ವಿದ್ಯೆ ಸಂಸ್ಕೃತಿಗಳಿಗೆ ಅಪಾಯ ಒದಗಿದೆ ಈ ವಿಷಮ ಸಂದರ್ಭದಲ್ಲಿ ಘನತೆವೊಂದಿದ ಗವರ್ನರರವರು ಕನ್ನಡ ವಿದ್ಯೆ ಸಂಸ್ಕೃತಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಒಂದು ವಿಶೇಷ ಪ್ರಸಂಗ (Special Interests)ವೆಂದು ಪರಿಗಣಿಸಿ ಮೈನಾರಿಟಿಗಳಿಗೆ ಸಲ್ಲಬೇಕಾದ ವಿಶೇಷ ಸಂರಕ್ಷಣೆಯನ್ನು ಕನ್ನಡಿಗರ ವಿದ್ಯಾಕೌಶಲ್ಯಗಳ ವಿಚಾರಕ್ಕೆ ಕೊಡಿಸುವುದು ನ್ಯಾಯವಾಗಿರುತ್ತದೆ

ಇದೇ ಅರ್ಥದ ಪ್ರಾರ್ಥನೆಯೊಂದನ್ನು ಬ್ರಿಟಿಷ್ ಇಂಡಿಯದ ಪ್ರಾಂತೀಯ ಸರಕಾರಗಳಿಗೆ ಮೇಲ್ಪಟ್ಟಿರುವ ಅಖಿಲ ಇಂಡಿಯಾ ಸರಕಾರದ ಸನ್ನಿಧಾನಕ್ಕೂ ಕಳುಹಿಸಿದ್ದಾಗಿದೆ

ಈ ಮನವಿಗಳು ತಲುಪಿರುತ್ತವೆಂದು ಮದರಾಸು ಗವರ್ನರ್ ಸಾಹೇಬರವರ ಪ್ರೈವೇಟ್ ಸೆಕ್ರೆಟರಿಯವರಿಂದಲೂ (ತಾ. ೮—೧೦—೧೯೩೫) ಇಂಡಿಯಾ ಸರಕಾರದ ಸೆಕ್ರೆಟರಿಯವರಿಂದಲೂ (ನಂ F ೧೧೪—೭/೩೫E ತಾ ೨೯—೧೦—೧೯೩೫) ಕಾಗದಗಳು ಬಂದಿರುತ್ತವೆ

(ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯಿಂದ)

ಭಾಷಾ ಸಾಹಿತ್ಯಕ್ಕದ ಏರ್ಪಾಟು.

ರಾಯಚೂರು ಸಮ್ಮೇಳನದಲ್ಲಾದ ನಿರ್ಣಯಗಳಲ್ಲಿ ಕನ್ನಡದ ಭವಿಷ್ಯದ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದೆಂದರೆ ೧೯ನೆಯದು, ಕನ್ನಡ ಪಠ್ಯ ಗ್ರಂಥಗಳಲ್ಲಿಯೂ ಪಾರಿಭಾಷಿಕ ಪ್ರಯೋಗಗಳಲ್ಲಿಯೂ ಸಮಾನರೂಪತೆಯನ್ನುಂಟು ಮಾಡುವ ಬಗ್ಗೆ ಕನ್ನಡ ನಾಡಿನ ನಾನಾ ಸರಕಾರಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಖಾಯಂ ಕರ್ಣಾಟಕ ಸಮಿತಿಯು ಪರಿಷತ್ತಿನ ಮೂಲಕ ಏರ್ಪಡಬೇಕೆಂಬುದು ಇದರ ಮುಖ್ಯತೆಯನ್ನು ವಿವರಿಸಲು ಹೆಚ್ಚು ಮಾತುಗಳು ಬೇಕಾಗಿಲ್ಲ ಕನ್ನಡದೇಶದ ಸ್ಕೂಲು ಕಾಲೇಜುಗಳಲ್ಲಿ ಉಪಯೋಗದಲ್ಲಿರುವ ಕನ್ನಡ ಪಠ್ಯಪುಸ್ತಕಗಳ ವಿಚಾರವಾಗಿ ಹಿಂದಿನ ಸಮ್ಮೇಳನಗಳಲ್ಲಿ ಎಷ್ಟೋ ಬಾರಿ ಠರಾವುಗಳಾಗಿವೆ, ಮತ್ತು ವರ್ತಮಾನ ಪತ್ರಿಕೆಗಳಲ್ಲಿಯೂ ಆ ಪ್ರಶ್ನೆ ಪದೇ ಪದೇ ಚರ್ಚೆಗೆ ಬರುತ್ತಿದೆ ಆದರೂ ನಮ್ಮ ನಾನಾ ಸರಕಾರಗಳು ಪ್ರತ್ಯೇಕಗಳಾಗಿರುವ ಕಾರಣದಿಂದ ನಮ್ಮ ನಿರ್ಣಯಗಳು ಫಲಕ್ಕೆ ಬಾರದೆ ಇರುವ ಅನುಭವವನ್ನು ರಾಯಚೂರು ಸಮ್ಮೇಳನವು ಗಮನದಲ್ಲಿರಿಸಿಕೊಂಡು, ಈ ಮೇಲಿನ ನಿರ್ಣಯವನ್ನು ಅಂಗೀಕರಿಸಿತು, ಕನ್ನಡ ನಾಡಿನಲ್ಲಿರುವ ಪ್ರಾದೇಶಿಕವಾದ ಭಾಷಾ ವ್ಯತ್ಯಾಸಗಳು ಕಡಿಮೆಯಾಗಿ ಕನ್ನಡಿಗರಲ್ಲಿ ಒಂದು ಪ್ರಾಂತದವರ ಮಾತುಕತೆಗಳೂ ಮನೋವೃತ್ತಿಗಳೂ ಇತರ ಪ್ರಾಂತಗಳವರಿಗೆ ಸುಲಭವಾಗಿ ಗ್ರಾಹ್ಯವಾಗಬೇಕಾದರೆ, ಪಠ್ಯ ಪುಸ್ತಕ, ನಿಘಂಟು, ಸರಕಾರದ ಪತ್ರವ್ಯವಹಾರ ಇವೇ ಮುಂತಾದ ಭಾಗಗಳಲ್ಲಿ ಸಮಾನರೂಪತೆಯನ್ನು ಸಾಧಿಸುವುದಷ್ಟು ಅವಶ್ಯಕವೆಂಬುದು ಸ್ಪಷ್ಟವಾಗಿಯೇ ಇದೆ ಭಾಷಾ ಪ್ರಪಂಚದ ಐಕ್ಯತೆಯು ರಾಜಕೀಯದ ಐಕ್ಯತೆಗಿಂತ ಪ್ರಾಮುಖ್ಯತೆಯಲ್ಲಿ ಕಡಿಮೆಯಾದದ್ದೇನೂ ಅಲ್ಲ ಹೀಗೆ ಕನ್ನಡಿಗರ ಬಲಕ್ಕೆ ಅತ್ಯಂತವಾಗಿ ಸಂಬಂಧಪಟ್ಟಿರುವ ಈ ವಿಚಾರದ ಮುಖ್ಯತೆಯನ್ನು ನಾನಾ ಪ್ರಾಂತಗಳ ಸರಕಾರದವರು ಗ್ರಹಿಸದೆ ಇರುವುದು ಅತ್ಯಂತ ಶೋಚನೀಯವಾಗಿದೆ ಅನೇಕ ಸರಕಾರಗಳು ಈ ವಿಷಯದಲ್ಲಿ ಉದಾಸೀನರಾಗಿದ್ದಾರೆಂಬ ಕಾರಣದಿಂದ ಪರಿಷತ್ತು ಪುನಃ ಪುನಃ ನಾನಾ ಸರಕಾರಗಳ ಗಮನಗಳ ಮೇಲೆ ಒತ್ತಿ ಅವುಗಳ ಸಹಕಾರವನ್ನು ಸಂಪಾದಿಸಿ ಕೆಲಸ ನಡೆಸಿದ ಹೊರತು ಕರ್ಣಾಟಕಕ್ಕಿರುವ ಈ ಪ್ರಬಲವಾದ ಸಮಸ್ಯೆಯು ಬಗೆಹರಿಯಲಾರದು

ಪುರಾತನ ದೇಗುಲಗಳನ್ನು ಹಾಳುಗೆಡವಿದರು.
ಹಿಂದೂಗಳಲ್ಲಿ ಗಲಭೆ

ಜೋಧಪುರ, ೨೧

ಸ್ಥಳೀಯ ಹಿಂದೂಗಳಲ್ಲಿ ಮತ್ತು ಸನಾತನಿಗಳಲ್ಲಿ ದೊಡ್ಡ ಕ್ಷೋಭೆಯುಂಟಾಗಿದೆ ಇದರ ಕಾರಣವು ಏನೆಂದರೆ ಪುರಾತನ ದೇವಸ್ಥಾನಗಳನ್ನು ಹಾಳುಗೆಡವಿ ದೇವರ ಮೂರ್ತಿಗಳನ್ನು ಚೂರು ಚೂರು ಮಾಡಿ ಹಾಕಲ್ಪಟ್ಟದ್ದಾಗಿ ಇದರ ನಿಮಿತ್ತವಾಗಿ ಹಿಂದುಗಳು ಸರಕಾರಕ್ಕೆ ಒಂದು ದೊಡ್ಡ ಮನವಿಯನ್ನು ಮಾಡಿರುವರು ಅದರಲ್ಲಿ ಈ ದೇವಸ್ಥಾನಗಳನ್ನು ನಾಶ ಮಾಡಿದ್ದರಿಂದ ನಮ್ಮ ಅನುಸರಿಸುವ ಕರ್ಮಗಳಿಗೆ ಕುಂದಕ ಬಂದಂತಾಗಿ ನಮ್ಮ ಧರ್ಮಕ್ಕೆ ಹಾನಿಯುಂಟಾಗಿದೆ ಆದ್ದರಿಂದ ಧರ್ಮರಕ್ಷಕರಿಂದ ತಪ್ಪು ಪರಾಮರ್ಶಿಸಬೇಕಾಗಿ ಬೇಡುತ್ತೇವೆ ಎಂದು ಬರೆದಿದೆ

ಸೈಂಟಿಫಿಕ್
ಸ್ವರ್ಣಾಭರಣಗಳು

(ಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ -

The Scientific Gold Bangles Co , Ltd.
Head Office:-43, Byragimatam Street,
Post Box No 203, Madras.

(ಹಿನೇ ಪುಟದಿಂದ ಮುಂದುವರಿದುದು.)

ಮೇಲೆ ಹಿಂದೂದೇಶದ ವ್ಯಾಸರಾಗಿದ್ದ ಲಾರ್ಡ ಇರ್ವಿನರ ಟೀಕೆ ಯಿತ್ತು. ಇವರು ಇಂಗ್ಲಾಂಡಿನಲ್ಲೂ ಹಿಂದೂದೇಶದಲ್ಲೂ ಮದ್ಯಪಾನ ನಿಷೇಧದ ಚಳವಳವನ್ನು ಪ್ರಾರಂಭ ಮಾಡಿದರು. ಈಗಲೂ ಈ ಚಳವಳವು ಮಹಾತ್ಮಾ ಗಾಂಧಿಯವರಿಂದ ಹಿಂದೂದೇಶದಲ್ಲಿ ನಡೆಯುತ್ತದೆ

ಆಗಿನ ಕಾಲದಲ್ಲಿ ಹಿಂದೂದೇಶದ ಮಿತ್ರರಲ್ಲಿ ಸಾಮುವೇಲ್ ಸ್ಮಿತ್ (ಪಾರ್ಲಿಮೆಂಟಿನ ಸದಸ್ಯರು) ರೊಬ್ಬರು. ಹಿಂದೂದೇಶಕ್ಕೆ ಸಂಬಂಧಪಡುವ ಅನೇಕ ಪ್ರಶ್ನೆಗಳನ್ನು ಸರಿಯಾಗಿ ಪರಿಶೀಲಿಸಿದವರು ಪಾರ್ಲಿಮೆಂಟಿನಲ್ಲಿ ಹಿಂದೂದೇಶಕ್ಕೆ ಕೆಲವು ರಾಜಕೀಯ-ಸುಧಾರಣೆಗಳನ್ನು ಕೊಡುವ ಮಸೂದೆಗಳನ್ನು ಅಧರಿದಸಿದರು. ಇವರು ೧೯೦೪ರಲ್ಲಿ ಹಿಂದೂದೇಶಕ್ಕೆ ಬಂದು, ಕಲ್ಕತ್ತದಲ್ಲಿ ಜರಗಿದ ಅಖಿಲ ಭಾರತ ಮದ್ಯಪಾನ ನಿಷೇಧದ ಕಾನ್ಫರೆನ್ಸಿನ ಅಧ್ಯಕ್ಷರಾಗಿ, ಆಗ್ಗೆ ಅಲ್ಲಿ ಜರಗಿದ ಕಾಂಗ್ರೆಸ್ ಅಧಿವೇಶನಗಳನ್ನು ನೋಡಿ, ಹಿಂದೂದೇಶದ ಮೇಲೆ ಪ್ರೀತಿ ಹುಟ್ಟಿದವರಾಗಿ ನನ್ನ ಹಲವು ಸಂಕಷ್ಟ ಇತ್ಯಾದಿಗಳನ್ನು ಪರೀಕ್ಷಿಸುವ ಭರದಲ್ಲಿ, ಅಕಸ್ಮಾತ್ತಾಗಿ ಹೃದಯ ಚಲನ ನಿಂತು ಮೃತರಾದರು. ಸಾಯುವ ಸಮಯ ತಮ್ಮ ಶವವನ್ನು ಹಿಂದೂದೇಶದಲ್ಲಿ ಹುಗಿಯಬೇಕೆಂದು ಇಚ್ಛೆಪಟ್ಟಿದ್ದರು ಹಿಂದೂದೇಶವನ್ನು, ಅವರ ೪೦ ವರ್ಷಗಳ ಜೀವಮಾನ ಪ್ರೀತಿಸಿ, ಭಾರತೀಯರ ಹಿತವೇ ಅವರ ಮನಸ್ಸಿನಲ್ಲಿ ಮುಖ್ಯಸ್ಥಾನವನ್ನು ಹೊಂದಿತ್ತು

ಬ್ರಾಡಲಾಫ್ ಮತ್ತು ಕೈನರಿಗೆ ಹಲವು ಭಾರಿ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಗಳನ್ನು ವಹಿಸಲು ವಿನಂತಿಸಿದರು ಆದರೆ ಕೆಲವು ಕಾರಣಗಳಿಂದ ಅವರು ಅವನ್ನು ಸ್ವೀಕರಿಸಲಿಲ್ಲ ಆದರೆ ಹಿಂದೂದೇಶಕ್ಕಾಗಿ ಅಷ್ಟು ಶ್ರಮಪಟ್ಟ ಬ್ರಾಡಲಾಫ್‌ರ ಸ್ಮಾರಕವಾಗಿ ಲಾಹೋರಿನಲ್ಲಿ ಒಂದು ಭವನವನ್ನು ಕಟ್ಟಿಸಲಾಯಿತು. ಈ ಭವನವು ಈಗ ಕಾಂಗ್ರೆಸ್ಸಿನ ಮೂಲಸ್ಥಾನವಾಗಿರುತ್ತದೆ ಕೈನರವರು ೧೮೮೯ರ ಕಾಂಗ್ರೆಸ್ಸಿಗೆ ಬಂದಿದ್ದರು ಹಿಂದೂದೇಶದ ಹಲವು ವಿಚಾರಗಳು ಅವರ ಕಲೆಗೆ ಸೇರಿದ್ದವು ಆದರೆ ಪಾರ್ಲಿಮೆಂಟಿನ ಸದಸ್ಯತನವು ತಪ್ಪಿಹೋಗಲು ಅದರಿಂದ ಯಾವುದನ್ನೂ ಮಾಡಲು ಸಾಧ್ಯವಾಗಲಿಲ್ಲ

ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟಾಯ್ಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟಾಯ್ಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರೀಕ್ಷಕರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ; ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು.

ಗೊಡ್ರೆಜ್

ವೆಜಿಟೇಬಲ್ ಟಾಯ್ಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಟೇಬಲ್ ಆಫ್ ಕಾಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೋರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ,

ಮೈಕ್ರೊಸ್ಕೋಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಿಗಳಾಗಿರುವ

ಡಾ| ಔಫ್ರೆಚ್ಟ್ ಎಂಬವರು:— "ನಾನು ಗೊಡ್ರೆಜ್ ವೆಜಿಟೇಬಲ್ ಟಾಯ್ಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಫೈಲೊಕಕಸ್ ಮತ್ತು ಸ್ಟೆಫಿಲೊಕಕಸ್ ಎಂಬ ಕ್ರಿಮಿಗಳನ್ನು ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನು ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಸ್ಟ ಎಂಬವರು:— "ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಯಿಯ ಸರಕಾರೀ ಕೆಮಿಕಲ್ ಎನಲೈಸರಾದ

ಮೇಜರ್ ಡಿಕೆನ್‌ಸನ್‌ರವರು.— "ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು.

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ| ಎಂ. ಎ. ಅನ್ಸಾರಿ, ಎಂ. ಡಿ. ಎಂ. ಎಸ್. ರವರ:— "ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಂತ ಸಂತೋಷವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಲಿಕ್ಕೆ ನನಗೆ ಸಂಶಯವಿಲ್ಲ. ಆದುದರಿಂದ ಅವುಗಳ ಭಾರತೀಯತ್ವದ ದೃಷ್ಟಿಯಿಂದಲೂ ಗುಣದ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಬಯಸುತ್ತೇನೆ" ಎಂದಿರುವರು.

ಫೆಕ್ಟರಿ — **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಲಿಸಲ್ ರೋಡ್, ಮುಂಬಾಯಿ.

ಸೋಲ್ ಏಜಂಟರು — **ನಾದಿರ್ ಷಾ, ಪ್ರಿಂಟರ್ ಎಂಡ್ ಕೋ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ
ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು.

Motor Accessories Of Approved Manufacture Always in Stock.

Exide Batteries Uncharged	...	Rs. 20-0-0
Fully Charged		Rs. 24-0-0
Genuine Lockheed Hydraulic Brake fluid Quart tins factory Sealed		Rs. 2-12-0
Genuine Lockheed ,,	locally filled	Rs 2-4-0

All Hydraulic Brake parts held in stock and available at Bombay Prices less 5% discount.

Chevrolet Springs of approved American Make available at less than Bombay Prices

Brake liners, Automobile lamp bulbs, Bronze bushings and bars, Bolts and Nuts of S. A. E. threads, Special tools, Drilling Machines, Spanner sets of all types.

An Enquiry with us will save you money

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು, ಮಂಗಳೂರು.

The Canara Public Conveyance Company Ltd., Kodialbail, Mangalore.

ಸಮಸ್ತ ಭರತಖಂಡವು ಕೊಂಗ್ರೆಸ್ ಸುವರ್ಣೋತ್ಸವವನ್ನು ಅತಿ ವಿಜೃಂಭಣೆಯಿಂದ ಜರಗಿಸಿತು.

ಅಖಿಳಭಾರತ ಹಿಂದೂ ಮಹಾಸಭೆಯ 17ನೇ ಪರಿಷತ್ತು, ಪೂನೆಯಲ್ಲಿ.

ಮುಂಬಾಯಿಯಲ್ಲಿ ಕೊಂಗ್ರೆಸ್ ಸುವರ್ಣ ಮಹೋತ್ಸವ

ಅನೇಕ ಕೊಂಗ್ರೆಸ್ ಅಧ್ಯಕ್ಷರು ನೆರೆದಿದ್ದರು ಭಾರತೀಯರ ರಾಷ್ಟ್ರೀಯ ಅನುರಾಗವು ಬಹಳ ವೃದ್ಧಿಹೊಂದಿರುತ್ತದೆ.

ಶ್ರೀ ಸರೋಜಿನಿ ದೇವಿಯವರ ಗಂಭೀರ ಭಾಷಣ.

ಜಾತಿಭೇದ ನಿವಾರಣೆಯಾಗಬೇಕು! ಎಲ್ಲಾ ಮತಗಳಲ್ಲಿ ಐಕ್ಯ ಉಂಟಾಗಬೇಕು ಇವೆರಡೂ ಸಂಪೂರ್ಣ ಸ್ವರಾಜ್ಯದ ಸೋಪಾನಗಳಾಗಿರುತ್ತವೆ

ಅರ್ಧ ಶತಮಾನದ ಹಿಂದೆ ಕಾಂಗ್ರೆಸು ಪ್ರಥಮ ಬಾರಿ ಸೇರಿದ, ಮುಂಬಯಿಯ ಗೋಕುಲದಾಸ ತೇಜ್ಪಾಲ ಪಾಠಶಾಲೆಯಲ್ಲಿ ಶ್ರೀಮತಿ ಸರೋಜಿನಿ ದೇವಿಯವರ ಅಧ್ಯಕ್ಷತೆಯಲ್ಲಿ, ಕಾಂಗ್ರೆಸ್ ಸುವರ್ಣ ಮಹೋತ್ಸವವು ಅತಿ ವಿಜೃಂಭಣೆಯಿಂದ ಜರಗಿತು. ಇದೇ ಮಂದಿರದಲ್ಲಿ ೫೦ ವರ್ಷಗಳ ಹಿಂದೆ ಬಂಗಾಳದ ಸುಪ್ರಸಿದ್ಧ ಉಮೇಶಚಂದ್ರ ಬೆನರ್ಜಿಯವರ ಅಧ್ಯಕ್ಷತೆಯಲ್ಲಿ ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಸಾಧಿಸುವ ಪವಿತ್ರ ಸಂಸ್ಥೆಯಾದ ಭಾರತೀಯ ಕಾಂಗ್ರೆಸ್ಸು ಜನ್ಮವೆತ್ತಿದಾಗಿರುತ್ತದೆ. ಈವತ್ತು ಬಂಗಾಳದ ಸುಪ್ರಸಿದ್ಧ ಸರೋಜಿನಿ ದೇವಿಯವರ ಅಧ್ಯಕ್ಷತೆಯಲ್ಲಿ ಲಿಬರಲ್ ಪಕ್ಷದವರೂ, ಮುಸ್ಲಿಂ ಪಕ್ಷದವರೂ, ಹಿಂದೂ ಮಹಾಸಭೆಯ ಸದಸ್ಯರೂ, ಸಿಖ್ಖರ ಪ್ರತಿನಿಧಿಗಳೂ, ಮತ್ತು ಹಿಂದೂದೇಶದ ಇತರ ಎಲ್ಲಾ ರಾಷ್ಟ್ರೀಯ ಪಂಗಡಗಳ ಪ್ರತಿನಿಧಿಗಳು ಈ ಸುವರ್ಣೋತ್ಸವವನ್ನು ಜರಗಿಸಲು ನೆರೆದಿದ್ದರು. ಪ್ರಸಿದ್ಧರಾದ ಶ್ರೀ ಮದನಮೋಹನ ಮಾಲವೀಯರು, ಸರದಾರ್ ವಲ್ಲಭಭಾಯಿ ಪಟೇಲರು, ಬಾಬೂರಾಜೇಂದ್ರ ಪ್ರಸಾದರು, ಸರ್ ಗೋವಿಂದ ರಾವ್ ಪ್ರಧಾನರು, ಅಣೆಯವರು, ಶೌಕತಾಲಿಯವರು ಇನ್ನೂ ಅನೇಕ ಮಹನೀಯರು ಅಲ್ಲಿ ನೆರೆದಿದ್ದರು.

ಬಾಬುರಾಜೇಂದ್ರ ಪ್ರಸಾದರು ರಾಷ್ಟ್ರೀಯ ಧ್ವಜವನ್ನು ಹಾರಿಸಿದರು. ಪಂಡಿತ ಮಾಲವೀಯರು ಕಾಂಗ್ರೆಸ್ಸಿನ ೫೦ ವರ್ಷಗಳ ಸೇವೆಯ ಸ್ಮಾರಕಾರ್ಥವಾಗಿ ಒಂದು ಸ್ಮಾರಕ ಶಿಲ್ಪದ ಅನಾವರಣ ಸಮಾರಂಭವನ್ನು ನಡೆಯಿಸಿದರು. ಬಾಬುರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸಮ್ಮೇಲನವು ಜರಗಿತು. ಮಧ್ಯಾಹ್ನದ ಸಮಾರಂಭ ಆಜಾದ್ ಮೈದಾನಿನಿಂದ ಶ್ರೀ ಕೆ. ಎಫ್. ನರಿಮಾನರ ಮುಂದಾಳತ್ವದಲ್ಲಿ ಒಂದು ಮಹಾ ಮೆರವಣಿಗೆಯು ಹೊರಡುವಿಕೆಯಿಂದ ಪ್ರಾರಂಭವಾಯಿತು. ೫೦ ಸಾವಿರ ಜನರು ಈ ಮೆರವಣಿಗೆಯಲ್ಲಿ ನೆರೆದಿದ್ದರು. ಈ ಮೆರವಣಿಗೆಯು ಆಜಾದ್ ಮೈದಾನವನ್ನು ಬಿಟ್ಟು ಗೋಕುಲದಾಸ ತೇಜ್ಪಾಲ ಪಾಠಶಾಲೆಯನ್ನು ಸೇರಿತು. ಇಡೀ ನಗರವು ತೋರಣಗಳಿಂದ ಅಲಂಕೃತವಾಗಿತ್ತು. ನಗರದಲ್ಲೆಲ್ಲಾ ಜಯಘೋಷಗಳು ಎದ್ದವು. ಶ್ರೀ ಸರೋಜಿನಿ ದೇವಿಯರು ಮದನಮೋಹನ ಮಾಲವೀಯರು ಬಾಬುರಾಜೇಂದ್ರ ಪ್ರಸಾದರು ಮತ್ತು ಅನೇಕ ಪ್ರಮುಖರು ಕಾಂಗ್ರೆಸ್ಸಿನ ಜೀವಮಾನವನ್ನು ವಿವರಿಸಿ ಅದರ ಕಾರ್ಯಕ್ರಮದಲ್ಲಿ ಶ್ರೇಯಸ್ಕರವಾಗಿ ಭಾಗವಹಿಸಿ ಪ್ರಮುಖರೆನಿಸಿದ ಧುರೀಣರನ್ನು ಉಲ್ಲೇಖಿಸಿಯೂ ಕಾಂಗ್ರೆಸಿಗೆ ಸಂಬಂಧಪಟ್ಟ ಇನ್ನು ಅನೇಕ ವಿಚಾರಗಳ ಭಾವಪೂರ್ವಕ ಭಾಷಣಗಳಿದ್ದವು.

ಸುವರ್ಣ ಮಹೋತ್ಸವದ ಎರಡನೆ ದಿವಸ ಹರಿಜನರಿಂದೊಡಗೂಡಿದ ಒಂದು ಭೋಜನ ಸತ್ಕಾರವು ಜರಗಿತು. ಅದರಲ್ಲಿ ಎಲ್ಲರೂ ಭಾಗವಹಿಸಿದ್ದರು. ಅದೇ ದಿವಸ ಶ್ರೀ ಸರೋಜಿನಿ ದೇವಿಯರ ಅಧ್ಯಕ್ಷತೆಯಲ್ಲಿ ಸ್ತ್ರೀಯರ ಸಭೆಯೊಂದು ಸೇರಿತು.

ಭರತ ಖಂಡದ ಎಲ್ಲಾ ಪ್ರಾಮುಖ್ಯ ನಗರಗಳಲ್ಲೂ, ಹಳ್ಳಿಹಳ್ಳಿಗಳಲ್ಲೂ ಧ್ವಜವಂದನೆಗಳಿಂದಲೂ, ಭಾಷಣಗಳಿಂದಲೂ, ಇನ್ನೂ ಅನೇಕ ಪ್ರದರ್ಶನಗಳಿಂದ, ಈ ಕಾಂಗ್ರೆಸ್ಸು ಸುವರ್ಣೋತ್ಸವವು ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಎಲ್ಲೆಲ್ಲೂ ಜನರಲ್ಲಿ ರಾಷ್ಟ್ರೀಯ ಅನುರಾಗವು ವೃದ್ಧಿಯೊಂದಿದ ಕುರುಹುಗಳು ಕಾಣಸಿಕೊಂಡವು.

ಹಿಂದೀ ಕಾಂಗ್ರೆಸ್ ಚರಿತ್ರೆ.

ಡಾ॥ ಪಟ್ಟಾಭಿ ಸೀತಾರಾಮಯ್ಯರ ಕಾಂಗ್ರೆಸ್ ಚರಿತ್ರೆಯ ಹಿಂದೀ ಅನುವಾದವು ಎಲ್ಲಾ ಮಾರಾಟವಾಗಿರುತ್ತದೆ. ಸಾಧಾರಣ ೩೦೦೦ ಪ್ರತಿಗಳು ಅಚ್ಚು ಹಾಕಲ್ಪಟ್ಟಿದ್ದುವು. ಇನ್ನೂ ೩೫೦೦ ಪ್ರತಿಗಳಿಗೆ ಗಿರಾಕಿಗಳು ಇರುವರೆಂದು ತಿಳಿದುಬರುತ್ತದೆ.

ಭಾರತೀಯ ಪತ್ರಿಕಾ ಪ್ರತಿನಿಧಿಗಳು.

ಬ್ರಿಟಿಷ ಪಾರ್ಲಿಮೆಂಟಿನ ವಿರೋಧಪಕ್ಷದ ನಾಯಕರಾದ ಮೇಜರ್ ಅಟ್ಲಿಯವರು ತಮ್ಮ ಸಂಕಲ್ಪಗಳನ್ನು ಸೂಚಿಸುವ ಭಿನ್ನಪವನ್ನು ಈ ನವವರ್ಷಾರಂಭದಲ್ಲಿ ಅರ್ಪಿಸುವವರಾಗಿದ್ದಾರೆ.

ಲಕ್ನೋ ಕಾಂಗ್ರೆಸ್ಸಿನ ಸಮಯ

ಬಾಬುರಾಜೇಂದ್ರ ಪ್ರಸಾದರು, ಲಕ್ನೋ ಕಾಂಗ್ರೆಸು ಮಾರ್ಚ ತಿಂಗಳ ೩೦ ೩೧ ತಾರೀಖುಗಳಲ್ಲಿ ಜರಗಿಸಬೇಕಾಗಿ ಸೂಚಿಸಿರುತ್ತಾರೆ. ಪಂಡಿತ ಜವಾಹರಲಾಲರನ್ನು ಅಧ್ಯಕ್ಷರಾಗಿ ಚುನಾಯಿಸುವುದು ಈಗ ದೃಢವಾಗಿರುತ್ತದೆ. ಬಂಗಾಳದ ಕಾಂಗ್ರೆಸ್ ಕಮಿಟಿಯ ಕಲಹಗಳನ್ನು ನಿವಾರಿಸಲು ದೇಶದ ಎಲ್ಲಾ ಸಂಸ್ಥೆಗಳೂ ಪ್ರಯತ್ನಿಸುತ್ತಿವೆ. ಕಾಂಗ್ರೆಸ್ ತನ್ನ ಮಹಾ ಉದ್ದೇಶವನ್ನು ಸಾಧಿಸುವ ಈ ಮಹತ್ಕಾರ್ಯದಲ್ಲಿ ಇಂತಹ ಕಲಹಗಳು ಕಡಿಮೆಯಾಗಬೇಕೆಂದೂ ಬಾಬೂರಾಜೇಂದ್ರ ಪ್ರಸಾದರ ವಿನಂತಿಮಾಡಿರುವರು.

1772ರಲ್ಲಿ ಜನನ—ಇನ್ನೂ ಪುಷ್ಟನಾಗಿಯೇ ಬಾಳುತ್ತಿರುವನು!

ಮಹಮದ್ ಅಕ್ತರ್ ಉದ್ದೀನ್ ಎಂಬವನು ಪಾಟ್ನಾ ಜಿಲ್ಲೆಯ ನಿವಾಸಿಕನು. ಇವನು ೧೭೭೨ರಲ್ಲಿ ಜನಿಸಿದವನು. ಎಂದರೆ ಅವನ ಈಗಿನ ಪ್ರಾಯ ೧೬೩. ಇವನ ದೃಷ್ಟಿಯು ಮಾತ್ರ ಸ್ವಲ್ಪ ಮಂದವಾಗಿರುವುದು. ದೇಹಬಲವು ಅಷ್ಟು ಕುಂದಲಿಲ್ಲ. ಈಸ್ಟ್ ಇಂಡಿಯಾ ಕಂಪೆನಿಯ ಘೋರಣೆಗಳನ್ನು ಸರಿಯಾಗಿ ವಿವರಿಸಬಲ್ಲನು. ಇವನು ಅವಿದ್ಯಾವಂತನಾದ ಕಾರಣ ಇವನ ವಿವರಣೆಗಳನ್ನು ಪ್ರಕಟಿಸಲು ಸಾಧ್ಯವಿಲ್ಲ.

ಅಖಿಲಭಾರತ ಹಿಂದೂ ಮಹಾಸಭೆಯ ೧೭ನೇ ಪರಿಷತ್ತು ಪೂನೆಯಲ್ಲಿ

ಪಂಡಿತ ಮದನಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಜರಗಿತು. ದೇಶದ ಎಲ್ಲಾ ಕಡೆಗಳಿಂದ ಸಾಧಾರಣ ೫ ಸಾವಿರಕ್ಕೆ ಮೇಲಾಗುವ ಜನರು ನೆರೆದಿದ್ದರು. ಈ ಪರಿಷತ್ತು ಪೂನೆಯ ತಿಲಕ ಮೆಮೋರಿಯಲ್ ಹಾಲಿನಲ್ಲಿ ಜರಗಿತು. ಪಂಡಿತ ಮಾಲವೀಯರನ್ನು ಸ್ವಾಗತಿಸುವ ಸಮಾರಂಭವು ಅತಿ ವಿಜೃಂಭಣೆಯಿಂದ ನಡೆಯಿತು. ಶ್ರೀಗಳಾದ ಎಂ. ಆರ್. ಜಯಕರ್, ಡಾ॥ ಮೂಂಜೆ ಕೇಳ್ಕರ್ ಬಾಯಿ ಪರಮಾನಂದರೂ ಬೌದ್ಧ ಮತಾವಲಂಬಿಗಳ ಪ್ರತಿನಿಧಿಗಳೂ ಇನ್ನೂ ಅನೇಕ ಪ್ರಮುಖರು ಅಲ್ಲಿ ನೆರೆದಿದ್ದರು.

ಹಿಂದೂಧರ್ಮದ ಶ್ರೇಯಸ್ಸನ್ನು ಕಾಪಾಡುವಂತೆಯೂ ಮತ್ತು ಅದು ಪ್ರಪಂಚದ ಎಲ್ಲಾ ದಿಕ್ಕುಗಳಿಗೆ ಹಬ್ಬುವಂತೆಯೂ ಆರ್ಯ ಧರ್ಮದ ರಕ್ಷಣೆಮಾಡಬೇಕಾಗಿಯೂ ಹಿಂದೂಮತದ ವಿವಿಧ ಪಂಥಗಳಲ್ಲಿರುವ ಮನಸ್ತಾಪಗಳನ್ನು ನಾಶಮಾಡಬೇಕಾಗಿಯೂ ಪ್ರಾರಂಭದಲ್ಲಿ ಘಾಕರ್ಟ್ ಕೋಟಿಯವರು ಭಾಷಣಮಾಡಿದರು.

ಶ್ರೀ ಕೇಳ್ಕರರು, ಡಾ॥ ಅಂಬೇಡ್ಕರರ ನಿರ್ಧಾರದ ಕುರಿತು, ಈ ನಿರ್ಧಾರದಲ್ಲಿ ಡಾ॥ ಅಂಬೇಡ್ಕರರನ್ನು ಅಲ್ಪಸಂಖ್ಯಾತ ಹರಿಜನರು ಮಾತ್ರ ಅವಲಂಬಿಸಿರುವರೆಂದೂ ಆದರೂ ಅಸ್ಪೃಶ್ಯತಾ ನಿವಾರಣೆಗಾಗಿ ಹಿಂದೂಗಳು ಶ್ರಮಪಡಬೇಕಾಗಿಯೂ ಭಾಷಣಮಾಡಿದರು.

ನಂತರ ಡಾ॥ ಮೂಂಜೆಯವರಂಥ ಪ್ರಸಿದ್ಧ ಪುರುಷರ ಭಾಷಣಗಳಾದ ನಂತರ ಪಂಡಿತ ಮಾಲವೀಯರು ಹಿಂದೂ ಮಹಾಸಭೆಯ ಚರಿತ್ರೆಯನ್ನು ವಿವರಿಸುವ ಮತ್ತು ಹಿಂದೂಗಳ ಪ್ರಸ್ತುತ ಸ್ಥಿತಿಗತಿ ವಿಚಾರವನ್ನೂ ಅನೇಕ ಸುಧಾರಣೆಗಳನ್ನೂ ಸೂಚಿಸುವ ಭಾವಪೂರ್ವಕ ಭಾಷಣವನ್ನು ಮಾಡಿದರು. "ಭರತಖಂಡದ ಜನಸಂಖ್ಯೆಯಲ್ಲಿ ಶೇಕಡಾ ೭೫ ಸಲ ಹಿಂದೂಗಳಾಗಿದ್ದರೂ ಇವತ್ತಿನ ದಿವಸಕ್ಕೆ ಅವರನ್ನು ಅಲ್ಪ ಸಂಖ್ಯಾತರಿಗಿ ಮಾಡಿರುತ್ತಾರೆ" ಎಂದು ಭಾಷಣದಲ್ಲಿ ವ್ಯಕ್ತಪಡಿಸಿ "ಮತಗಳಲ್ಲಿ ಐಕ್ಯವನ್ನುಂಟುಮಾಡುವುದೂ ದೇಶದಲ್ಲಿ ರಾಷ್ಟ್ರೀಯ ಅನುರಾಗವನ್ನು ವೃದ್ಧಿಗೊಳಿಸುವುದೂ ಹಿಂದೂ ಮಹಾಸಭೆಯ ಮುಖ್ಯ ಧ್ಯೇಯಗಳು" ಎಂದು ಇವರು ತಿಳಿಸಿದರು.

ಹಿಂದೂಗಳಲ್ಲಿ ಪ್ರಚಲಿತವಿರುವ ಜಾತಿಭೇದವನ್ನು ಕಿತ್ತುಹಾಕಬೇಕಾಗಿ ಈ ಪರಿಷತ್ತಿನಲ್ಲಿ ಅನೇಕ ಸೂಚನೆಗಳು ಬಂದಿವೆ. ಪರಿಷತ್ತು ಮುಂದುವರಿಯುತ್ತಿದೆ. ಅನೇಕ ಮುಖ್ಯ ಠರಾವುಗಳು ಆಗಲಿವೆ.

ಈ ಪರಿಷತ್ತಿನ ಮುಹೂರ್ತದಲ್ಲಿ ಪೂನೆಯಲ್ಲಿ ಅಖಿಲಭಾರತ ಹಿಂದೂಸ್ತ್ರೀಯರ ಪರಿಷತ್ತು ಜರಗಿತು. ಭರತಖಂಡದ ಹಿಂದೂ ಸ್ತ್ರೀಯರ ಸುಧಾರಣೆಯ ಕುರಿತು ಅನೇಕ ಠರಾವುಗಳಾದುವು.

91 ದಿನಗಳ ಉಪವಾಸ.

ಅಹಮ್ಮದಾಬಾದಿನ ನಗರ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಸುವರ್ಣ ಹಿಂದೂಗಳಿಂದ ಹರಿಜನರಿಗೆ ದೇವಾಲಯ ಪ್ರವೇಶಕ್ಕೆ ತಡೆಗಳು ಬರಲು ಅದರ ನಿವಾರಣೆಗಾಗಿ ೨೧ ದಿನಗಳ ಉಪವಾಸ ಆರಂಭಿಸಿರುವರು.

ವಿದ್ಯಾಭ್ಯಾಸಕ್ಕಾಗಿ ಸರಕಾರವು ಹೆಚ್ಚಿನ ಹಣವನ್ನು ತೆರತಕ್ಕದ್ದು

"ಭಾರತೀಯರನ್ನು ಸುಶಿಕ್ಷಿತರನ್ನಾಗಿ ಮಾಡುವ ಕಾರ್ಯವು ಶೀಘ್ರವಾಗಿ ನಡೆಯತಕ್ಕದ್ದು. ಅಂದರೆ ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣವನ್ನು ವ್ಯಯಿಸಿ, ಪ್ರೌಢವಿದ್ಯಾಭ್ಯಾಸಕ್ಕೆ ಸಲ್ಲುವ ಹಣವನ್ನು ಕಡಿಮೆ ಮಾಡಬೇಕೆಂದಲ್ಲ. ಹಿಂದೂದೇಶದಲ್ಲಿ ಅತಿ ಸ್ವಲ್ಪ ಜನರಿಗೆ ಪ್ರೌಢ ವಿದ್ಯಾಭ್ಯಾಸವು ದೊರಕುತ್ತಿದೆ. ಔದ್ಯೋಗಿಕ ಶಾಲೆಗಳು ನಿರ್ಮಾಣವಾಗಬೇಕೇನೋ ನಿಜ. ಆದರೆ ಅವುಗಳಲ್ಲಿ ಕಲಿತವರು ಹೊಂದುವ ತರುವಾಯ ಉದ್ಯೋಗ ದೊರಕಿಸುವ ಯೋಜನೆಗಳನ್ನು ಸೃಷ್ಟಿಸತಕ್ಕದ್ದು. ಬರೇ ಔದ್ಯೋಗಿಕ ಶಿಕ್ಷಣವನ್ನು ಮಾತ್ರ ಕೊಟ್ಟರೆ ನಿರುದ್ಯೋಗ ಪ್ರಶ್ನೆಯು ಇನ್ನೂ ಕಠಿಣವಾಗುವುದು. ಭಾರತೀಯ ಸೇನಾಸಮೂಹದಲ್ಲಿ ತುಂಬಾ ಏರಿಸಲ್ಪಡಬೇಕು. ಎಲ್ಲಾ ಕೈಗಾರಿಕೆಗಳಿಗೆ ಸರಕಾರದಿಂದ ಪ್ರೋತ್ಸಾಹವು ದೊರೆಯಬೇಕು. ಈ ಸುಧಾರಣೆಗೆ ಸರಕಾರವು ತನ್ನ ವಿದ್ಯಾಭ್ಯಾಸದ ವೆಚ್ಚವನ್ನು ಹೆಚ್ಚಿಸಿದರೆ ಮಾತ್ರ ಸಾಧ್ಯವಾಗುವುದು" ಎಂದು ನಾಗಪುರದಲ್ಲಿ ಜರಗಿದ ವಿದ್ಯಾಭ್ಯಾಸ ಪರಿಷತ್ತಿನಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ವೈಸ್ ಚಾನ್ಸಲರಾದ ಶ್ರೀ ಮುಖರ್ಜಿಯವರು ಮಾಡಿದ ಭಾಷಣದ ಸಾರಾಂಶವಾಗಿರುತ್ತದೆ.

ಕಮಲಾ ನೆಹರುರವರ ಸ್ಥಿತಿ.

ಕಳೆದ ವಾರ ವಿಷಮಾವಸ್ಥೆಯನ್ನು ಹೊಂದಿದ ಶ್ರೀಮತಿ ಕಮಲಾನೆಹರುರವರ ಆರೋಗ್ಯಸ್ಥಿತಿಯು ಈಗ ವೃದ್ಧಿಹೊಂದುತ್ತಿದೆ. ಅವರು ಈಗ ಹೆಚ್ಚು ಆಹಾರವನ್ನು ಸೇವಿಸುತ್ತಿರುವರು. ಜ್ವರವು ಕಡಿಮೆಯಾಗಿರುತ್ತದೆ. ದೇಹದಲ್ಲಿ ಸ್ವಲ್ಪ ಚೈತನ್ಯವೂ ಹುಟ್ಟಿರುತ್ತದೆ.

ಲಂಡನಿನಲ್ಲಿ ಕಾಂಗ್ರೆಸ್ ಸುವರ್ಣೋತ್ಸವ ಸಮಾರಂಭವು.

ಕಾಂಗ್ರೆಸ್ಸಿನ ಸುವರ್ಣೋತ್ಸವವನ್ನು ಬ್ರಿಟಿಷ ಸಾಮ್ರಾಜ್ಯದ ಮುಖ್ಯ ಕೇಂದ್ರವಾಗಿರುವ ಲಂಡನ್ ನಗರದಲ್ಲಿ ಅತಿ ವಿಜೃಂಭಣೆಯಿಂದ ಆಚರಿಸಲಾಯಿತು. ಕಾಂಗ್ರೆಸ್ಸಿಗಾಗಿ ಶ್ರಮಪಟ್ಟ, ಪಡುತ್ತಿರುವ ನಾಯಕರ ನಾಮಗಳನ್ನು ಉಚ್ಚರಿಸಿ ಜಯಘೋಷಗಳು ನಡೆದವು. ಅಲ್ಲಿನ ಎಲ್ಲಾ ಭಾರತೀಯರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಕಾಂಗ್ರೆಸ್ಸಿನ ಚರಿತ್ರೆಯನ್ನು ವಿವರಿಸಿ, ಕಾಂಗ್ರೆಸ್ಸನ್ನು ಶ್ಲಾಘಿಸಿ ಭಾವಪೂರ್ವಕ ಭಾಷಣಗಳಾದವು. ಭಾರತೀಯ ರಾಷ್ಟ್ರೀಯ ಧ್ವಜವಂದನೆಯನ್ನು ಜರಗಿಸಿದ್ದರು. ಪಂಡಿತ ಜವಾಹರಲಾಲರು ಈ ಸಮಾರಂಭಕ್ಕೆ ಕಾಂಗ್ರೆಸನ್ನು ಹರಸಿ ತನ್ನ ಸಂದೇಶವನ್ನು ಕಳುಹಿಸಿಕೊಟ್ಟಿದ್ದರು.

ರಾಷ್ಟ್ರೀಯ ವಿದ್ಯಾಭ್ಯಾಸ.

ಶ್ರೀ ಬಾಬುರಾಜೇಂದ್ರ ಪ್ರಸಾದರು ಕಾಂಗ್ರೆಸ್ಸಿನ ಸುವರ್ಣೋತ್ಸವ ಸಮಾರಂಭದಲ್ಲಿ ಪಾಟ್ನಾಕ್ಕೆ ಕಳುಹಿಸಿದ ಸಂದೇಶದಲ್ಲಿ ಭರತಖಂಡದ ವಿದ್ಯಾಭ್ಯಾಸದ ಕುರಿತು ಹೀಗೆ ಅಭಿಪ್ರಾಯಪಡುತ್ತಿದ್ದಾರೆ.

"ಹಿಂದೂದೇಶದಲ್ಲಿ ರಾಷ್ಟ್ರೀಯ ಅನುರಾಗವು ವೃದ್ಧಿ ಹೊಂದುವಂತೆ ವಿದ್ಯಾಭ್ಯಾಸ ನಡೆಯತಕ್ಕದ್ದು. ವಿದ್ಯಾಲಯಗಳಲ್ಲಿ ತರುಣರು ಬುದ್ಧಿವಿಕಾಸದೊಂದಿಗೆ ಅವರಲ್ಲಿ ರಾಷ್ಟ್ರೀಯ ಅನುರಾಗವು ಉತ್ಪಾದನೆಯಾಗುವ ಸಂಪ್ರದಾಯಗಳಿರಬೇಕು. ಈ ರೀತಿ ರಾಷ್ಟ್ರೀಯ ವಿದ್ಯಾಭ್ಯಾಸದ ಅಗತ್ಯವನ್ನು ಶ್ರೀಮತಿ ಎನ್ನಿಬೆಸೆಂಟ್‌ರು ಹೋಂರೂಲಿನ ಚಳವಳದ ಸಮಯ ತಿಳಿದು ರಾಷ್ಟ್ರೀಯ ಶಿಕ್ಷಣವನ್ನು ಕೊಡುವ ಹಲವು ಸಂಸ್ಥೆಗಳನ್ನೂ ಕಾಲೇಜುಗಳನ್ನೂ ಶಾಲೆಗಳನ್ನೂ ಸ್ಥಾಪಿಸಿದರು. ಹೀಗೆಯೇ ಮುಂದಕ್ಕೂ ನಮ್ಮ ದೇಶದ ವಿದ್ಯಾಭ್ಯಾಸ ಕ್ರಮವು ರಾಷ್ಟ್ರೀಯ ವಿದ್ಯಾಭ್ಯಾಸವು ದೊರಕುವ ರೀತಿ ನಡೆಯತಕ್ಕದ್ದು."

ವಿಮೋಚನೆಗೊಳಿಸುವ ದೇವಪ್ರೇರಿತರು

ಮಹಾತ್ಮಾ ಗಾಂಧಿಯವರು ಮತ್ತು ಅವರ ತತ್ವ.

ಶ್ರೀಮತಿ ಸರೋಜಿನಿ ದೇವಿಯವರಿಂದ—ಕಾಂಗ್ರೆಸ್ಸಿನ ಕಳೆದ ಅರ್ಧ ಶತಮಾನದ ಕಥೆಯು ರಾಷ್ಟ್ರೀಯ ವಿಮೋಚನೆಗೊಳಿಸುವ ಪರಾಕ್ರಮಿಗಳ ಪ್ರಯತ್ನಗಳ ಇತಿಹಾಸಕ್ಕೆ ಒಂದು ತೀವ್ರ ಮತ್ತು ಮಹತ್ವವಾದ ಪಂಕ್ತಿಯಾಗಿರುತ್ತದೆ.

ಸ್ವಾತಂತ್ರ್ಯ ಸಾಧನೆಯಲ್ಲಿ ನಿರತರಾಗಿ ಸಾವಧಾನದಿಂದಲೂ ದೇಶವಾತ್ಸಲ್ಯದಿಂದಲೂ ಶ್ರಮಪಟ್ಟು ಮಡಿದ ಅಸಂಖ್ಯಾತ ಸ್ತ್ರೀಪುರುಷರ ಹೆಸರುಗಳು ಒಂದು ವೀರ ಕಾವ್ಯದ ನುಡಿಗಳಂತೆ ನಮ್ಮ ಹೃದಯಗಳಲ್ಲಿ ಪ್ರತಿಭಟಿಸುತ್ತಿವೆ.

ನಮ್ಮ ದೇಶವನ್ನು ರಾಷ್ಟ್ರೀಯ ಬಂಧವಿಮೋಚನೆಗೊಳಿಸುವ ಪ್ರಯತ್ನದೊಂದಿಗೆ ಒಡಗೂಡಿದ ಮಹಾ ತತ್ವವನ್ನು ಧರಿಸಿದ ಮಹಾತ್ಮಾ ಗಾಂಧಿಯವರ ಬರುವಿಕೆಗೆ ಹಾದಿ ತಯಾರಿಸಿದ ಸುಪ್ರಸಿದ್ಧ ಅಗ್ರಗಾಮಿಗಳಿಗೆ ನಮ್ಮ ಭಾವಪೂರ್ವಕ ವಂದನೆಗಳು ಸಲ್ಲತಕ್ಕದ್ದು.



HASAG

ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಲ್ಲವೂ ಹೊಸ ಮಾದರಿ ಈಗಾಗಲೆ ಸಾವಿರ ಗಟ್ಟಳೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ. ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR



ಎಫಾರ್

ಎಂಬುದು ಇನ್ನೊಂದು ಅಮೋಘ ದೀಪ ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಮನೆಯ ಶೃಂಗಾರಕ್ಕೆ ಬಹಳ ಯೋಗ್ಯವಾಗಿರುವುದು

Sole Representatives — F Racek & Co,

Bombay	Calcutta	Madras	Colombo
P O. Box	P O Box	P O Box	P O Box
2006	2121	1218	389

QUALITY-IMPORTS

ಬಹು ಕಾಲದಿಂದಲೂ ನಿರೀಕ್ಷಿಸಲ್ಪಟ್ಟ ಅತ್ಯಮೋಘ ತೆಲುಗು ಮಾತಾಡುವ ಚಲಚ್ಚಿತ್ರ!

ಕೃಷ್ಣ ಲೀಲಾ

ನಗುವಿನ ಸುಗ್ಗಿ! ಮನಮುಗ್ಧಕರ ಅಭಿನಯ!

ರೋಮಾಂಚನಗೊಳಿಸುವ ದೃಶ್ಯಗಳು!

ಕರ್ಣಾನಂದಕರವಾದ ಗಾಯನ!

ಆಧುನಿಕ ಧೋರಣೆಗಳ ಉಪಾಸನೆಯು ಪ್ರತಿಯೊಂದೆಡೆಯಲ್ಲಿಯೂ ಹೊರಹೊಮ್ಮಿ ಕಾಣುವುದು.

ಕಂಪೆನಿಯ ಶ್ರೇಷ್ಠ ನಟವರ್ಗವು ಇದರಲ್ಲಿ ಅಭಿನಯಿಸಿದೆ

ಮಿಸ್ ರಾಮತಿಲಕಮ್
ಮಿಸ್ ಶ್ರೀರಂಜನಿ
ಮಿ। ವೇಮೂರಿ ಗಗ್ಗಯ್ಯ
ಮಿ। ಪಾರಪಲ್ಲಿ ಸುಬ್ಬರಾವ್
ಮಿ। ಪಾರಪಲ್ಲಿ ಸತ್ಯನಾರಾಯಣ
ಮಾಸ್ಟರ್ ರಾಜೇಶ್ವರರಾವ್

ಕೊಯಮುತ್ತೂರು, ಸೇಲಂ, ನೀಲಗಿರಿ, ಮಲಬಾರು, ದಕ್ಷಿಣ ಕನ್ನಡ ಮತ್ತು ಕೊಚ್ಚಿ ಈ ಪ್ರಾಂತ್ಯಗಳಲ್ಲಿ ತಮ್ಮ ಚಿತ್ರಗಳ ಸಂಚಾಲನಾ ಅಧಿಕಾರವನ್ನು ಪಡೆದಿರುವರು.

For Bookings Apply to:

THE MANORAMA FILMS,
COIMBATORE

Telegrams 'Manorama' Telephone 114

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA — AND — MANGALORE.

Now For Sale.

Poholatum (Balm) (German make) This is a home remedy for Rheumatism Asthma, Sciatica, Lumbago Insect bites, Herpes Wounds Cuts, Colds Headache It is a complete substitute for the domestic medicine chest Try one this unequalled remedy In ½oz tin As 8 In oz jar As 12 -

Superior Red Balm For relieving pains in muscles and on skin Directions for use with the bottle Price As 12 - only

Wurmteufel Is a sovereign remedy against all sorts of worms in stomach and in the intestines Physicians enjoying authoritativeness describe it as reliable remedy and warmly recommend it All those who suffer from worms children and adults try this unique remedy and be freed from your ailment Price As 10 per packet.

Pocket Inhaler For coughs and hoarseness headache catarrh, colds, use this inhaler and you will be relieved immediately Price per inhaler As 6 & As 8

'Po-Ho Fluid' For Asthma, colds, indigestion toothache lumbago, a sure remedy in all cases Price As 6 and Re 1/- per phial

Cough Cure An infallible remedy for coughs of all kinds bronchitis, hoarseness Particulars in bottle Price As. 12/- for 8 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health. Price As. 1, 3, 2/6, 3/-, 4,

Basel Mission Book Depot

Mangalore, Branches in Codialbail, Hubli, Calicut

ವನಿತಾ ವಿಭಾಗ.

ಸ್ತ್ರೀಯರು ಆಟಗಳಲ್ಲಿ ಭಾಗವಹಿಸುವಂತೆ ಚಳವಳ ನಡೆಯಬೇಕು.

"ಭಾರತೀಯ ಹುಡುಗಿಯರು ಶಾಲೆಗಳಲ್ಲಿರುವ ತನಕ ಮಾತ್ರ ಸ್ವಲ್ಪ ಮಟ್ಟಿಗೆ ಆಟಗಳಲ್ಲಿ ಭಾಗವಹಿಸುವರು ಹುಡುಗಿಯರು ವ್ಯಾಯಾಮದಲ್ಲಿ ಭಾಗವಹಿಸುವಂತೆ ಅನೇಕ ಕ್ರಮಗಳಿವೆ ನಿಜ. ಆದರೆ ಶಾಲೆಗಳನ್ನು ತ್ಯಜಿಸಿದ ನಂತರ ಹುಡುಗಿಯರು ಆಟಗಳಲ್ಲಿ ಭಾಗವಹಿಸುವುದಿಲ್ಲ ಮಾತ್ರವಲ್ಲದೆ ಅವುಗಳನ್ನು ಸಂಪೂರ್ಣ ಮರೆತು ಬಿಡುವರು. ಸ್ತ್ರೀಯರ ಆಟಗಳಲ್ಲಿನ ಉತ್ಸಾಹವು ಅವರು ಚಿಕ್ಕ ಮಕ್ಕಳನ್ನು ಆಡಿಸುವ ಸಮಯ ಕಾಣಬಹುದು.

"ಜನರು ಏನೆಂದಾರು" ಎಂಬುದು ಹುಡುಗಿಯರನ್ನು ಈ ಆಟಗಳಿಂದ ಹೊರಗಿಡುತ್ತದೆ. ಅವರ ತಂದೆ ತಾಯಂದಿರು ಗಳಂತೂ, ಅವರು ಬಾಲಕರೋಪಾದಿಯಲ್ಲಿ ಕೈಕಾಲುಗಳನ್ನು ಚಲಿಸುವ ಆಟಗಳನ್ನಾಡಿದರೆ ರೇಗುವರು. ನಮ್ಮ ಸಣ್ಣ ಮಕ್ಕಳಲ್ಲಿ ವಾಡಿಕೆಯಲ್ಲಿರುವ 'ಜುಬಿಲಿ' ಆಟವನ್ನು ಹುಡುಗಿಯರು ಸೀರೆ ಉಡಲಾರಂಭಿಸಿದ ನಂತರ ಆಡಬಾರದಾಗಿ ನಿರ್ಬಂಧಗಳಿವೆ. ಇವು ನಿರ್ಲಕ್ಷ್ಯ ಆಟಗಳೆಂದು ನೆನ್ನುವರ ಮತ.

ಆದರೂ, ಈಗಿನ ಭಾರತೀಯ ತರುಣರು ಪುಷ್ಟಿಕರ ತರುಣಿಯರನ್ನೆ ತಮ್ಮ ಅರ್ಧಾಂಗಿಗಳಾಗಿ ಹುಡುಕುತ್ತಿದ್ದಾರೆ. ವಿದ್ಯಾ ಯೋಗ್ಯತೆಗಳನ್ನು ಅವರು ಅಷ್ಟು ವಿಚಾರಿಸ ಹೋಗುವುದಿಲ್ಲ. ತರುಣಿಯು ಅವಿದ್ಯಾವಂತಳಾದರೂ ಅವಳಿಗೆ ಸಂಗಾತಿ ಬೆಳೆದ ಯೋಗ್ಯ ದೇಹವಿದ್ದರೆ ಅವರನ್ನು ತಮ್ಮ ಪತ್ನಿಯರಾಗಿ ಆರಿಸುತ್ತಾರೆ. ವಿದ್ಯಾವಂತಳಾದ ಕ್ಷೀಣದೇಹದಿಂದ ಕೂಡಿದ ಆಧುನಿಕ ಕಾಲದ ವಿದ್ಯಾರ್ಥಿನಿ ಕೂಡಿದ ತರುಣಿಯನ್ನು ತನ್ನ ಬದಿಗೆ ನೋಡಿಕೊಳ್ಳಲು "ಈತನು ಸ್ವಲ್ಪ ಬೆದರುವನು".

ಹಾಗಾದರೆ ಸ್ತ್ರೀಯರು ಮೇಲಿನ ರೀತಿಯಲ್ಲಿ ಆರೋಗ್ಯವಂತರಾಗುವ ಬಗೆ ಹೇಗೆ? ನಮ್ಮ ಕೆಲವು ಸ್ತ್ರೀಯರ ಶಾಂತ ಹಣೆ ಭಾವನೆಗಳನ್ನು ತೃಪ್ತಿಸುವಂತೆಯೂ ಸ್ತ್ರೀಯರೂ ಎಲ್ಲಾ ತರದ ಆಟಗಳಲ್ಲಿ ಭಾಗವಹಿಸುವಂತೆಯೂ ಭಾರಿ ಚಳವಳವು ನಡೆಯಬೇಕಾಗಿದೆ. ಆದುದರಿಂದ ಭಾರತೀಯ ಜನಾಂಗದ ಸ್ತ್ರೀಯರಿಗೆ ಅವರು ಆಟಗಳಲ್ಲಿ ಭಾಗವಹಿಸ ಚಳವಳವು ಅವಶ್ಯಮಾಡುದು.

ಆಟಗಳಿಂದ ದೇಹವು ಆರೋಗ್ಯಕರವಾಗಿ ಪರಿಣಮಿಸುವುದಲ್ಲದೆ ಇನ್ನೂ ಅನೇಕ ಫಲೋದಯವಾಗುವುದು. ಸ್ವನಂಬಿಗೆ ಮತ್ತು ಸ್ವಾತಂತ್ರ ಸ್ಫೂರ್ತಿಯು ಈ ಆಟಗಳಿಂದ ಸ್ತ್ರೀಯರಲ್ಲಿ ಉತ್ಪಾದನೆಯಾಗುವವು. ಸಂಗಡಿಗರಾಗಿ ಆಟವಾಡುವುದು ಇವರಲ್ಲಿ ಎಗರೀಕತೆಗೆ ಆಗತ್ಯವೆನಿಸುವ ಮುಂದಿನ ಜೀವಮಾನದಲ್ಲಿ ಸಹಕಾರದಿಂದ ವರ್ತಿಸುವ ಸ್ಫೂರ್ತಿಯು ಇವರಲ್ಲಿ ಹುಟ್ಟುವುದು. ಸ್ತ್ರೀಯರಿಗೆ ಅನೇಕ ಸ್ವಾತಂತ್ರ್ಯಗಳನ್ನು ಒದಗಿಸಿ, ಅವರ ಜೀವನಕ್ಕೆ ಒಂದು ಕಳೆಯು ಬರುವಂತೆ ಮಾಡುವುದು. ಪಾಶ್ಚಾತ್ಯದ ಸ್ತ್ರೀಯರು ಈ ರೀತಿ ವರ್ತಿಸಿ ಯೋಗ್ಯ ಫಲವನ್ನು ಹೊಂದಲಿಲ್ಲವೆ? ನಮ್ಮ ಸ್ತ್ರೀಯರಿಗೆ ಈ ಅನುಭವಗಳು ಯಾಕಾಗಬಾರದು?

ನಮ್ಮ ಹುಡುಗಿಯರು ಅನೇಕ ಆಟಗಳನ್ನು ಈಗ ಆಡುತ್ತಿದ್ದರೂ ಅವುಗಳು ಯಾವವು ಅವರ ದೇಹಪುಷ್ಟಿಯನ್ನು ಬೆಳೆಯಿಸುವಂತಹುದಲ್ಲ. ದೇಹದ ಎಲ್ಲಾ ಅಂಗಗಳಿಗೆ ತಕ್ಕ ವ್ಯಾಯಾಮ ದೊರಕುವಂತೆ ಇವರು ಆಟಗಳನ್ನು ಆಡತಕ್ಕದು. ಸ್ತ್ರೀಯರು ಗೋಡೆಯ ಆಟಗಳನ್ನು ಆಡಬೇಕೆಂದು ನಮ್ಮ ಇಚ್ಛೆಯಲ್ಲ. ಆದರೂ ಸಾಧಾರಣ ತರದ ಟೆನ್ನಿಸ್ ಓಡಾಡುವುದು ಇತ್ಯಾದಿ ಆಟಗಳನ್ನು ಸ್ತ್ರೀಯರು ಆಡತಕ್ಕದು. ಇವು ಅವರ ದೇಹದ ಉತ್ತಮ ರೀತಿಯ ಬೆಳವಣಿಗೆಗೆ ಸಹಕಾರಿಯಾಗವವು. ಕೆಲವು ಕ್ರಮಯುಕ್ತ ಆಟಗಳು ಅವರ ಸ್ತ್ರೀತ್ವವನ್ನು ಎಚ್ಚರಗೊಳಿಸಿ ಅವರ ಗುಣಗಳನ್ನು ವಿಶೇಷವಾಗಿ ಬದಲಾಯಿಸುತ್ತವೆ. ಆದುದರಿಂದ ಸ್ತ್ರೀಯರು ಅವರಿಗೆ ಒಪ್ಪುವ ಮತ್ತು ಎಲ್ಲಾ ಅಂಗಗಳಿಗೆ ತಕ್ಕುದಾದ ವ್ಯಾಯಾಮವನ್ನು ದೊರಕಿಸುವ ಆಟಗಳಲ್ಲಿ ಮಾತ್ರ ಭಾಗವಹಿಸತಕ್ಕದ್ದು.

ಸ್ತ್ರೀಯರು ಅವರ ದೇಹಪ್ರಕೃತಿಗೆ ತಕ್ಕುದೆನಿಸುವ ಆಟಗಳನ್ನು ಮಾತ್ರ ಆಡತಕ್ಕದ್ದು. ಸಹನಾಶಕ್ತಿ ರಭಸ ಇತ್ಯಾದಿಗಳನ್ನು ಪ್ರದರ್ಶಿಸುವ ಆಟಗಳಲ್ಲಿ ಅವರು ಭಾಗವಹಿಸಬಾರದು. ಎಂದರೆ, ಹಾಕಿ, ಫುಟ್‌ಬಾಲ್ ಇತ್ಯಾದಿ ವೈದಾನಾಟಗಳನ್ನು ಆಡಕೂಡದು. ಆದರೆ ಅವರು ಬ್ಯಾಡ್‌ಮಿಂಟನ್, ಟೆನ್ನಿಕಾಯ್ಟ್ ಇತ್ಯಾದಿಗಳನ್ನು ಮಾತ್ರ ಆಡಬೇಕೆಂದು ಊಹಿಸಬಾರದು.

ಪಾಶ್ಚಾತ್ಯದಲ್ಲಿ ಕೆಲವು ಅನುಕರಣೀಯವಾಗುವ ಬದಲಾವಣೆಗಳನ್ನು ಮಾಡಿ, ಸ್ತ್ರೀಯರು ಪುರುಷರ ಆಟಗಳನ್ನು ಆಡುತ್ತಿದ್ದರೆ ಆದರೆ, ಸ್ತ್ರೀಯರು, ಸಮಯಾವನಕ್ಕೆಯನ್ನು ಪಡೆದ ನಂತರ, ಪುರುಷರ ಆಟಗಳನ್ನಾಡಬಾರದಾಗಿ, ವೈದೀಕ ಜನರ ನಿರ್ಬಂಧಗಳಿವೆ. ಅವುಗಳಿಂದ ಅವರ ಜೀವಿಯದ ಗುಣಗಳು ಬದಲಾಗಿ, ಅವರು ಉತ್ತಮ ಶಿಶುಗಳನ್ನು ಪಡೆಯುವ ಗುಣಗಳ ವಿನಾಯಗುವದೆಂದು ವೈದೀಕ ಜನರ ಅಭಿಪ್ರಾಯ.

ಮೇಲಿನದನ್ನೆಲ್ಲಾ ವಿಚಾರಿಸಿದರೆ, ದೇಹಕ್ಕೆ ಘಾತಿಕರವೆನಿಸುವ ಆಟಗಳನ್ನು ಸ್ತ್ರೀಯರಿಗೆ ಯೋಗ್ಯವಲ್ಲವೆಂದು ವ್ಯಕ್ತವಾಗುತ್ತದೆ. ಈ ಆಟಗಳ ಪರಿಣಾಮವಾಗಿ ಅವರ ಗರ್ಭದಲ್ಲಿ ಶಿಶುಗಳ ಬೆಳವಣಿಗೆಗೆ ವಿಶೇಷ ಆತಂಕಗಳು ಬರುವ ಸಂಭವವಗಳಿರುವುದರಿಂದ, ಆಟಗಳನ್ನಾಡುವ ಸ್ತ್ರೀಯರು ಆ ಆಟಗಳ ಪರಿಣಾಮಗಳನ್ನು ಅರಿಯದಿಗೈ ತಿಳಿಯುವ ಉದ್ದೇಶದಿಂದ ತಮ್ಮನ್ನು ವೈದ್ಯಕೀಯ ಜನರಿಂದ ಪರೀಕ್ಷೆ ಮಾಡಿಸಿಕೊಳ್ಳತಕ್ಕದ್ದು. ಇದರಿಂದ ಆಟಗಳ ಚಳವಳದ ಹಾನಿದಾಯಕ ಗುಣಗಳು ತಪ್ಪುವವು.

ಟೆನ್ನಿಸ್ ಕ್ರಿಕೆಟ್, ಇತ್ಯಾದಿ ಆಟಗಳಲ್ಲಿ ಸ್ತ್ರೀಯರು ಪುರುಷರ ಸರಿಸಮಾನರಾಗಿ ಭಾಗವಹಿಸಬಹುದು. ಆದರೆ ಈ ಆಟಗಳಲ್ಲಿ ಅವರ ಉಡುವ ಉಡುಪುಗಳನ್ನು ಧರಿಸತಕ್ಕದೆಂದು ಇಷ್ಟರ ತನಕ ನಿರ್ಧಾರವಾಗಲಿಲ್ಲ. ಆದರೆ ಆ ಆಟಗಳಲ್ಲಿ ಯೋಗ್ಯವೆನಿಸುವ ಪಾಶ್ಚಾತ್ಯ ಉಡುಪುಗಳನ್ನು ಧರಿಸುವುದು ಉಚಿತವು. ಕೈಕಾಲು ಸರಿಯಾಗಿ ಚಲಿಸಲು ಸಾಧ್ಯವಾಗುವ ಉಡುಪನ್ನು ಅವರು ಧರಿಸತಕ್ಕದು. ಭಾರತೀಯ ಸ್ತ್ರೀಯರ ಕೈಕಾಲುಗಳು ಬಲಹೀನವಾಗಿವೆ. ಅವುಗಳನ್ನು ಅವರು ಅವರ ಪಾಶ್ಚಾತ್ಯ ಭಗಿನಿಯರಂತೆ ಪುಷ್ಟಿಕರವಾಗಿಯೂ ಬೆಳೆಸುವಂತೆ ಸಾಧಿಸತಕ್ಕದು. ಆದರೆ ಈ ಆಟಗಳಲ್ಲಿ ಅವರಿಗೆ ಶೀಘ್ರಗಳನ್ನು ಪಡೆಯಲು ಸಾಧ್ಯವಾಗಲಿಕ್ಕಿಲ್ಲ.

ಇಂಗ್ಲಾಂಡಿನಲ್ಲಿ ಕಳೆದ ಮಹಾ ಯುದ್ಧದ ನಂತರ ಆಟದ ಚಳವಳವು ಪ್ರಾರಂಭವಾಯಿತು. ಅಲ್ಲಿ ಮಕ್ಕಳಿಗೆ ಆಟಗಳನ್ನು ಬೋಧಿಸಲು ಸಂಸ್ಥೆಗಳು ಹುಡುಗರೊಡನೆ ಹುಡುಗಿಯರಿಗೂ ಈ ವಿಷಯದಲ್ಲಿ ಹೆಚ್ಚು ಗಮನ ಕೊಡಲಾಯಿತು. ಇದರ ದೆಸೆಯಿಂದ ಲಂಡನಿನಲ್ಲಿ ಈ ಆಟದ ಚಳವಳದ ೧೦ ಕೇಂದ್ರ ಸ್ಥಳಗಳಿವೆ. ಸ್ತ್ರೀಯರೂ ಪುರುಷರೂ ಯೋಗ್ಯವಾದ ರೀತಿಗಳಲ್ಲಿ ಆಟಗಳಲ್ಲಿ ಭಾಗವಹಿಸಿ ಆರೋಗ್ಯವಂತರೂ ಭಾಗ್ಯವಂತರೂ ಆಗುತ್ತಿದ್ದಾರೆ. ಆದರೆ ನಮ್ಮಲ್ಲಿ! ನಾವು ಇನ್ನೂ ಪುರಾತನ ಕಾಲದಲ್ಲಿದ್ದೇವೆ. ದಿನೇ ದಿನೇ ನಮ್ಮ ಸ್ತ್ರೀಯರು ನಿರ್ಬಲರಾಗಿ ಅನೇಕ ಭಯಂಕರ ರೋಗಗಳಿಗೆ ತುತ್ತಾಗ ತೊಡಗಿದ್ದಾರೆ. ಇದರ ದೆಸೆಯಿಂದ ನಮ್ಮ ಭವಿಷ್ಯ ಜನಾಂಗವು ಕೆಡುತ್ತಲಿದೆ. ಬರತಕ್ಕ ನಮ್ಮಲ್ಲಿಯೂ ಈ ಆಟದ ಚಳವಳವು ಬೇಗನೆ ಪ್ರಾರಂಭವಾಗಿ ಪುರುಷರೂ ಸ್ತ್ರೀಯರೂ ಆರೋಗ್ಯವಂತರಾಗಿ ಭರತ ಖಂಡದ ಜನಾಂಗವು ಉಲ್ಲಸಿತವಾಗುವಂತೆ ಸಾಧಿಸುವುದು ಪ್ರತಿಯೊಬ್ಬ ಭಾರತ ಮಹಿಳೆಯರ ಕರ್ತವ್ಯವಾಗಿರುತ್ತದೆ.

ಪರ್ಶಿಯಾದಲ್ಲಿ ಪರದಾ ಹೋಯಿತು

ಪರ್ಶಿಯಾ ದೇಶವು ಇದಕ್ಕೆ ಇರಾನ್ ಎಂದೂ ಒಂದು ಹೆಸರು. ಅದು ಮುಸ್ಲಿಂ ರಾಜ್ಯ. ಆ ದೇಶದ ಪ್ರಭು ರಾಜಾಷಹಾ ಪಹ್ಲವಿಯು ಮುಸಲ್ಮಾನನೇ. ಆದುದರಿಂದ ಈ ಮುಸಲ್ಮಾನಮಯವಾದ ಇರಾನಿನಲ್ಲಿ ಘೋಷಾ ಪದ್ಧತಿಯು ವಾಡಿಕೆಯಲ್ಲಿರುವುದೆಂದು ಸುಲಭವಾಗಿ ಊಹಿಸಿಕೊಳ್ಳಬಹುದು. ಆದರೆ ಈಗಿನ ಪ್ರಭುವಾದ ಪಹ್ಲವಿಯು ವಿಶಾಲಮನಸ್ಕ ಪ್ರಗತಿಗಾಮಿ. ಆದುದರಿಂದ ಆ ಕೆಟ್ಟ ಪದ್ಧತಿಯನ್ನು ಕಡಿದು ಹಾಕಬೇಕೆಂದು ಬಹು ದಿನಗಳಿಂದ ಪ್ರಯತ್ನಿಸುತ್ತಿದ್ದರೂ ಜನಸಮೂಹದ ಪ್ರತಿಭಟನೆಯು ಹೆದರಿಕೆಯಿಂದ ಹಾಗೆ ಮಾಡಲಿಲ್ಲ. ಈಗ ೧೯೩೬ರ ಪ್ರಾರಂಭವು ಈ ಪದ್ಧತಿ ಬಹಳ ಜಾರುತ್ತಿದ್ದುದರಿಂದ ನವೀನ ಜನರ ಹುರಿತ್ವ ತಾತ್ಪರ್ಯವನ್ನು ತಕ್ಕ ಮಟ್ಟಿಗೆ ಹಾಳುಮಾಡಿರುವುದರಿಂದ, ಸರಿಯಾದ ಸಮಯವು ಬಂದಿದೆಯೆಂದು ಸಾರ್ವಭೌಮರು ಈಗ ಆ ಪದ್ಧತಿಯನ್ನು ಸಂಪೂರ್ಣವಾಗಿ ಕಿತ್ತೊಗೆದು ಬಿಟ್ಟಿದ್ದಾರೆ. ಬುರ್ಕೆಯನ್ನು ಹಾಕಿಕೊಳ್ಳದಿರುವುದು ಸಾಮಾಜಿಕ ಅಪರಾಧವಾಗಿದ್ದರೂ, ಎಲ್ಲರೂ ಬುರ್ಕೆಯನ್ನು ತೊರೆದು ಬಿಡಬೇಕೆಂಬ ನಿರ್ಬಂಧವೇನೂ ಇಲ್ಲ. ಇದರಿಂದ ಪರ್ಶಿಯಾ ದೇಶದ ಸ್ತ್ರೀಯರ ಎಷ್ಟು ಉತ್ಸಾಹಭರಿತರಾಗಿದ್ದಾರೆಂಬ ಕಾಲವೇ ತೋರ್ಪಡಿಸಲು ಸಾಧ್ಯವಾಗಿಲ್ಲ.

ಹೆಂಗಸೇ ಪ್ರಧಾನಳಾಗಿದ್ದಳು.

ಅಮೆರಿಕಾ ದೇಶದಲ್ಲಿ ಒಂದು ವಿಶೇಷ ಸ್ತ್ರೀಯರಿಗೆ ಪದವಿಯು ಅನಿವಾರ್ಯವಾದ ದೇಶವಾಗಿತ್ತು. ಹಿಂದಿನ ಕಾಲದಲ್ಲಿ ಅದೊಂದು ಭೂಸಣ ಆಗಿತ್ತು. ಸ್ತ್ರೀಯರು ಹೊಸ್ತಿಲಿನಿಂದ ಕಾಲು ತೆಗೆಯಬೇಕಾದರೆ ಒಂದು ದೊಡ್ಡ ಕರಿಯ ಬುರ್ಕೆಯನ್ನು ಹಾಕಿಕೊಳ್ಳಬೇಕಾಗಿತ್ತು. ಆ ಬುರ್ಕೆಯು ನೆಲದಿಂದಿಯಂತೆ ತಲೆಯಿಂದ ಕಾಲಿನ ಅಂಗುಷ್ಠದ ವರೆಗೂ ಎಲ್ಲವನ್ನೂ ಮುಚ್ಚಿಕೊಳ್ಳುವಷ್ಟು ದೊಡ್ಡದಾಗಿರುತ್ತಿತ್ತು. ಇದಕ್ಕೆ ಕಾರಣವೇನೆಂದರೆ ಸ್ತ್ರೀಯರ ಮಾನ, ಪಾತಿವ್ರತ್ಯ ರಕ್ಷಣೆ.

ಇಷ್ಟು ನಿರ್ಬಂಧನವು ಪರ್ಶಿಯದಲ್ಲಿ ಸ್ತ್ರೀಯರ ಮೇಲೆ ಹೊರಿಸಿದ್ದರೂ ಅವರ ಕೈಗೆ ಸಂಸಾರದ ಬೀಗದ ಕೈಯನ್ನು ಕೊಟ್ಟಿರುವರು. ಆಸ್ತಿಯ ಪಾಲಿಗಾಗಿ ಕೇಸು ಹಕ್ಕು ಹೆಣ್ಣು ಮಕ್ಕಳಿಗೆ ಮಾತ್ರ. ಆ ಆಸ್ತಿಯ ವಿಲೇವಾರಿಯನ್ನು ಮಾಡುವ ಸರ್ವ ಅಧಿಕಾರ ಅವಳಿಗೇ. ಅವರಿಗೇ ಸೇರಿದ್ದು. ಅಲ್ಲಿ ವರದಕ್ಷಿಣೆಯೆಲ್ಲ ವಧುವಿನ ದಕ್ಷಿಣೆಯನ್ನು ವರನು ಬಿಡುವರೆ ವರನ ಕೆರೆಬೇಕು. ಮದುವೆಯಾಗುವಾಗ ವರನಿಂದ ಒಂದು ಪ್ರಮಾಣವನ್ನು ವಧುವು ಪಡೆಯುತ್ತಾಳೆ. ವಿಚ್ಛೇದನ ಸ್ವಾತಂತ್ರ್ಯವನ್ನು ತನ್ನ ಮುಂದಿನ ಗಂಡನಿಗೆ ಕೊಡಿಸುತ್ತಾಳೆ. ಪರ್ಶಿಯದಲ್ಲಿ ವಿವಾಹವು ಧಾರ್ಮಿಕ ಬಂಧನವಲ್ಲ. ಸಾಮಾಜಿಕ ದೃಷ್ಟಿಯ ಮದುವೆಯು ಕಾಲದಲ್ಲೇ ಎಲ್ಲಾ ಕರಾರುಗಳೂ ನಡೆಯುತ್ತವೆ. ಯಾವ ಯಾವ ಸಂದರ್ಭಗಳಲ್ಲಿ ಗಂಡನು ಹೆಂಡತಿ ವಿವಾಹ ಬಂಧನದಿಂದ ವಿಮುಕ್ತರಾಗಬಹುದು ಎನ್ನುವುದು ಕೂಡ ಆಗಲೇ ತೀರ್ಮಾನವಾಗಿ ಹೋಗುತ್ತದೆ. ಪರದೆಯ ಹಿಂದಿದ್ದರೂ ಪರ್ಶಿಯಾದ ಪ್ರಮದೆಯರು ಎಲ್ಲ ವ್ಯವಹಾರಗಳಲ್ಲೂ ನಡೆಸುವ ಪ್ರಧಾನ ವ್ಯಕ್ತಿಗಳಾಗಿದ್ದಾರೆ.

ಹೆಂಗಸು ಮಾಡಬಹುದಾದ ಸಾಮಾಜಿಕಸೇವೆ.

ಸ್ತ್ರೀಯರು ಮನೆ ಕೆಲಸ ಆದರೂ ಪುರುಷ ಭಿನ್ನ ಪ್ರಕೃತಿಯುಳ್ಳವರು ಪ್ರಕೃತಿ ನಿಯಮಿತ ಕಾರ್ಯಕಲಾಪಗಳನ್ನು ನೆರವೇರಿಸಲು ತಕ್ಕಂತೆ ಹೆಂಗಸರು ಗಂಡಸರಿಗಿಂತ ಭಿನ್ನವಾಗಿದ್ದಾರೆ. ಹೆಂಗಸಿನ ಪ್ರಕೃತಿಯು ಆ ನಿಯಮದಂತೆ ಪ್ರವೃತ್ತಿ ದಯೆ ಸೇವೆ ತ್ಯಾಗಗಳೇ ಆಕೆಯ ಪ್ರಧಾನ ಗುಣಗಳು. ಪ್ರಕೃತಿಯ ಕೊಡುಗೆಯಾದ ಈ ಗುಣಗಳು ಬರುತ್ತದೆ. ಇದನ್ನು ಆಕೆಯು ಕಳೆದುಕೊಳ್ಳಲಾರಳು. ಆದ್ದರಿಂದ ಆಕೆಯ ಸೇವೆ ಆದ ದರಿಂದ ಸ್ತ್ರೀಯು ಎಸಗುವ ಸೇವೆಗಾಗಿ ದಯೆಯು ಬೇಕೆಂದರೆ ಆ ಗುಣಗಳ ಮೂಲಕ ಈ ಉತ್ತಮ ಆದರ್ಶವಾಗಿಯೇ ಆಕೆಯ ಕಾರ್ಯವು ಸಾಮಾಜಿಕ ದೃಷ್ಟಿಯಲ್ಲಿ ಸಂಪೂರ್ಣವಾಗಿ ಉಪಯೋಗಕ್ಕೆ ಬರುತ್ತದೆ. ಸೇವಾ ಕ್ಷೇತ್ರ ಕೇವಲ ಗೃಹ ಸಾಮ್ರಾಜ್ಯದ ಉತ್ತಮ ಸೇವಕಿ ಆಗದೆ ಪರ ದೇಶದಲ್ಲಿ ಅತ್ಯವಶ್ಯಕ ಮಹತ್ವದ್ದಾಗಿದೆ.

ಭಾರತದಲ್ಲಿ ಈ ಬಗೆಯ ಸ್ತ್ರೀ ಸೇವಾಕಾರ್ಯವು ಬಹುವಾಗಿ ಬೇಕಾಗಿದೆ. ಪ್ರಪಂಚದ ಮಾನವ ಕೋಟಿಯು ಐದನೆಯ ಒಂದು ಪಾಲು ಜನರು ಭಾರತದಲ್ಲಿ ವಾಸಿಸುತ್ತಿದ್ದಾರೆ. ಆದರೂ ಭಾರತದಲ್ಲಿರುವ ಜನರ ಆಯುಷ್ಯವು ಹೆಚ್ಚಾದಂತೆ ಪರೀಕ್ಷೆಯು ಹೇಳುವ ಪ್ರಕಾರ ಅವರನ್ನು ಸಾಗಿಸಿ ಹೋದವರೂ ಹೋಗವುದು ಅಧಿಕವಾದಂತೆ ದಾರಿದ್ರ್ಯವು ೩ನೇ ಶಾಖೆಯಾಗುತ್ತಿದೆ. ತಪ್ಪು ಅವರಿಗಿ ಬಹು ಭಾರತೀಯರ ವಿಧಿಸಿರುವ ಕಷ್ಟಗಳಿದೆ. ಅವರ ಜೀವನದ ಮಟ್ಟವು ಬಹುವಾಗಿ ಕಷ್ಟಕ್ಕೆ ಬಿದೆ. ದಾರಿದ್ರ್ಯಾದಿ ರೋಗಗಳಿಂದ ಮನೆಗಳಲ್ಲಿ ದಾರಿದ್ರ್ಯಕ್ಕೆ ಆಗ್ರಹಗಳು ಆದು ಇದ್ದ ಮೇಲೆ ಮತ್ತು ರೋಗವನ್ನು ಕಳೆಯ ಬೇಕಾಗಿಲ್ಲ. ತಾನೆ ಕಾಣಿಸಿ ಬರುತ್ತದೆ. ಅವುಗಳಲ್ಲಿ ಭಾರತೀಯರ ಜೀವನವನ್ನು ನರಕಪ್ರಾಯವನ್ನಾಗಿ ಮಾಡಿರುವುದು ಅನಾರೋಗ್ಯ. ಕತ್ತಲಾದ ಮನೆಗಳಲ್ಲಿ ವಾಸಮಾಡಲು ಕಾಸಿನ ಶಕ್ತಿಸಾಲದ ಕೆಲಸಕ್ಕೆ ಕೊಂಪೆಗಳಲ್ಲಿ ವಾಸಮಾಡುತ್ತಾರೆ. ಪುಷ್ಟಿದಾಯಕವೂ ಆರೋಗ್ಯಕರವೂ ಆದ ಆಹಾರ ಸೇವನೆಯನ್ನು ಮಾಡಲು ಹಣವಿಲ್ಲದೆ ಅಗ್ಗದ ಮುಗ್ಗನ್ನು ತಿಂದು ಹೊಟ್ಟೆ ಹೊರೆದುಕೊಳ್ಳುತ್ತಾರೆ. ಅಲ್ಲಿಂದ ಅವರ ಕಷ್ಟ ಆರಿಷ್ಟ ಪರಂಪರೆಗಳು ಸಾಲುಕಟ್ಟಿಕೊಂಡು ಮೊದಲಿಡುತ್ತವೆ. ಇದಲ್ಲದೆ ಹೆಂಗಸರಿಗೆ ಮತ್ತೊಂದು ಅನಿಷ್ಟವು ಕಾಯ್ದುಕೊಂಡಿರುತ್ತದೆ—ಹೆರಿಗೆ. ಇಂತಹ ಅನಾರೋಗ್ಯದ ಸನ್ನಿವೇಶಗಳಲ್ಲಿ ಬದುಕುವುದರಿಂದಲೂ ಆ ತಪ್ಪು ಹೆರಿಗೆ ಕಾಲದಲ್ಲಿ ತಕ್ಕವೈದ್ಯಕೀಯ ಎಚ್ಚರಿಕೆಗಳನ್ನು ತೆಗೆದುಕೊಳ್ಳಲು ಯತ್ನವಿಲ್ಲದಿರುವುದರಿಂದಲೂ ಹೆರಿಗೆ ಮರಣಗಳು ಅಪಾರವಾಗುತ್ತಿವೆ. ಹಾಗೆ ವ್ಯಕ್ತವ್ಯವಿಲ್ಲದೆ ದಯಾಹೀನವಾಗಿ ಕರುಣಿಸಿಟ್ಟು ಹೆರಿಗೆ ಕಾಲದಲ್ಲಿ ಮಾನವ ಎಲಿಯನ್ನು ತೆಗೆದುಕೊಳ್ಳುವ ಸ್ಥಿತಿ ಇನ್ನೂ ಮುಗಿದಿಲ್ಲ. ಜನನ ಹೊಂದುವ ತಾಯಿಯೂ ಆ ಬಳಿಕ ರೋಗಿಗಳಾಗಿ ಬದುಕುತ್ತಾರೆ. ಇಲ್ಲಿಯೂ ವೈದಿಕಯ ಸಹಾಯ ಸಂಘ ಅನಾರೋಗ್ಯಕರ ಸನ್ನಿವೇಶವು ಬಡವರ ನಕ್ಷತ್ರಕಾಗುತ್ತವೆ. ಬಾಲ್ಯವಿವಾಹ ಬಾಲ್ಯಮಾತೃತ್ವ ಇವೆಲ್ಲವೂ ಸೇರಿ, ಶೀರನ ಸಿಗ್ಗಿನ ಜೀವಿತ ತವಗಳು ಭಾರತದ ೫೦ ಕೋಟಿಗಳಾಗಿವೆ.

ಇಂದು ಇಂದಿನ ಭಾರತದ ಮಹಿಳೆಯರ ದೃಷ್ಟಿ ಇದನ್ನು ನಿವಾರಿಸುವ ಕಾರ್ಯವನ್ನು ಬಹು ದಕ್ಷತೆಯಿಂದ ನಡೆಸಬಲ್ಲವಳು ಸ್ತ್ರೀಯೇ ಆಗಿದ್ದಾಳೆ. ಆಕೆಯು ಸ್ವಾಭಾವಿಕ ಚೈತನ್ಯ, ಆದಕ್ಕೆ ಅನುಗುಣವಾದ ಸ್ಥಿತಿ ಬಾಲ್ಯದ ಕೀಳು. ಆದುದರಿಂದ ಭಾರತೀಯರ ಈ ಕಷ್ಟ ವಿಪರೀತವನ್ನು ಹೋಗಲಾಡಿಸಲು ಸ್ತ್ರೀಯರ ಸೌಮ್ಯ ಸ್ವಭಾವವೇ ಅತ್ಯವಶ್ಯಕ. ಅಜ್ಞಾನಾಂಧಕಾರದಲ್ಲಿರುವ ಸ್ತ್ರೀಕೋಟಿಗಳಿಗೆ ಜ್ಞಾನಜ್ಯೋತಿಯನ್ನು ಕೆಡಿಸಿ, ಅವರನ್ನು ಆ ಅಂಧಕಾರದಿಂದ ಎತ್ತುವ ಕಾರ್ಯವು ಸ್ತ್ರೀಯರದೇ. ಅವರಿಗೆ ವೈದ್ಯಕೀಯ ಆರೋಗ್ಯ ನೈರ್ಮಲ್ಯ ನಿಯಮಗಳನ್ನು ಕಲಿಸಿಕೊಟ್ಟು, ಸಮಯ ಬಿದ್ದರೆ ಸಹಾಯ ಗಳನ್ನು ಕಲ್ಪಿಸಿಕೊಟ್ಟು ಕೃಪಾ ಕಾರಾಗೃಹದಿಂದ ಭಾರತ ಸ್ತ್ರೀಯರದೇ. ಗಂಡಸಿಗೆ ಜ್ಞಾನೋದಯವನ್ನುಂಟುಮಾಡಿ ಆವನಿಂದ ಸರಿಯಾದ ಮಾರ್ಗವನ್ನು ತೋರುವುದೂ ಸುಶಿಕ್ಷಿತ ಸ್ತ್ರೀಯರದೇ. ಸುಶಿಕ್ಷಿತ ಸ್ತ್ರೀಯರಿಗೆ ಇದಕ್ಕಿಂತ ಪವಿತ್ರವಾದ ಯೋಗ್ಯವಾದ ಸೇವಾ ಕಾರ್ಯವು ಬೇರೆ ಇಲ್ಲ. ಅಂದರೆ ಗಂಡಸಿನ ಕೈಲಾಗದು ಇಲ್ಲಿ ಹಾಗೆನ್ನಲೆಂದು ಪ್ರತಿಪಾದಿಸುವುದು ಈಗ ಉದ್ದೇಶವಲ್ಲ. ಆದರೆ ಸಾಮಾಜಿಕ ರಂಗದಲ್ಲಿ ಸ್ತ್ರೀಯ ಸಂಘಟಿಸಬಹುದಾದ ಮಾನವಸೇವೆ ಅಪರಿಮಾಣದಿಂದೂ ಅದರೊಡನೆ ಹೋಲಿಸಿದಂತೆ ಗಂಡಸಿನ ಕಾರ್ಯವು ಕಡಿಮೆಯೆ ದೂ ದಷ್ಟು ತಿಳಿಸುವುದೇ ಅಭಿಪ್ರಾಯ. (ವಿಶ್ವಕರ್ನಾಟಕ)

NOTICE

Applicati ms are 11 vited for the t llowing posts in Sri Venkatr1m 11a Temple Mangalore

1 Pujpathvagar
2 Clerk
3. Attender.

Candidates will appear personally before tl e Managing Trustee, M R Ry M Annappa Nayak Avl, on or before 10-1-36 with tl eir applica-tions and testimonials Candidates selected will be on probation for a period of 3 months

(By order)
N N Rao,
Manager,
Sri Venkatramana Temple,
30-12-35 Mangalore

ಸ್ತ್ರೀಪುರುಷರ ಪ್ರಿಯ ರಹಸ್ಯ (ಶರೀರ ಮರ್ಮಶಾಸ್ತ್ರ)



ಮಾನನೀಯರುಗಳೇ ಇದು ವರೆಗೆ ಸೀಮಿತ ಪುಸ್ತಕವನ್ನು ಓದಿರಲಾರಿರಿ. ಇದರಲ್ಲಿ—ಅನೇಕ ಜಾತಿಯ ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಿನ ಸುಖ ಲಕ್ಷಣಗಳು, ಹೆಚ್ಚು ಸಂಭೋಗದಿಂದ ಉಂಟಾಗುವ ದೋಷಗಳು, ಗರ್ಭಚಿಹ್ನೆ, ಗರ್ಭವೃದ್ಧಿ ರೋಗ, ಶಿಶು ಉತ್ಪತ್ತಿ ವಿಧಿ, ಗರ್ಭಪಾತ, ಜನನೇಂದ್ರಿಯ ವರ್ಣನೆ ಸಂತಾನ ನಿರೋಧಕ ಪತ್ರಸ್ವರ ಉಪಯೋಗದಿಂದಾದ ಹಾನಿಗಳು ಅದಕ್ಕೆ ತಕ್ಕ ಚಿಕಿತ್ಸೆಗಳು ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತರಹಸ್ಯಗಳನ್ನೆಲ್ಲಾ ೬೪ ಚಿತ್ರಪಟಗಳೊಡನೆ ೧೬೦ ಪುಟಗಳಲ್ಲಿ ವಿವರಿಸಿ ಬರೆದಿದೆ. ಇಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗೆ ಕನ್ನಡದಲ್ಲಿ ಪ್ರಕಟವಾಗಿಲ್ಲ. ಬೆಲೆ ರೂ ೧ ಪೋ ಖ. ಬೇರೆ

ವಿಳಾಸ:—ಕರ್ನಾಟಕ ಏಜನ್ಸಿ, ಕ್ರಿಸ್ಟ್ ಸಾಯಾಟ ಟೇಲ್ಕ ಬೀದಿ, ಮದ್ರಾಸ.

ಬೇಗನೇ ಪುಸ್ತಕವನ್ನು ತರಿಸುವವರಿಗೆ ಗಿಫ್ಟ್‌ನ ಇನಾಮು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ್ಯ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ್ಯ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ



Distributors for South Kanara —

Raghavendra Ranga Pai, Car Street, Mangalore.

ಕುಂದಾಪುರ ಪ್ರವರ್ತಕರು: – ಕಾಮತ್ಸ್ ಸ್ವದೇಶೀ ಎಂಪೋರಿಯಂ

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.	ರೂ	ಆ	ಪೈ
				ಎರಡನೇ ದರ್ಜೆ	0	8	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	8	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ							
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ)

ಮೂರ ಕರಡಿಗಳು
ಹೇನ ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅಗಣೆ ಮುದ್ದೆ
ಇಲಿಗಳ ಥಕ್ಕ ಥೈ
ಅಂಗಳ ದ ಗನ್ನ
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0–0–9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ ಅಥವಾ 'ಸಮಾಜಶಾಸ್ತ್ರ – ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು, ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

1936

ಇಸವಿಯ
ಶಾರದಾ ಡೈರಿಗಳು
ತಯಾರಾಗಿವೆ!
ಶಾರದಾ ಛಾಪಖಾನೆಗೆ
ಬರೆಯಿರಿ,
ಅಥವಾ
— ?

ತಯಾರಾಗಿದೆ!

ಗಾ ... ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೊಸಿಯೊಲೊಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟದ್ದು ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ೧೯೩೪ರ ಪಾಠಪಟ್ಟಿಗನುಸಾರವಾಗಿ ರಚಿಸಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ
ಮಂಗಳೂರು.

ರೈಲು ಬಂಡಿಗಳ ಸೇವೆಯ

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 6 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಿಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್		
ಪೆಸೆಂಜರು	ಬೆ 8 25	ಮ 1 20
ಕಾಸರಗೋಡು		
ಪೆಸೆಂಜರು	ಸಂಜೆ 3 20	ಸಂಜೆ 6 15

ಸಂಸ್ಕೃತಿ ಪ್ರಚಾರ

('ಮೊಡರ್ನ್ ರಿವ್ಯೂ'ವಿನಿಂದ ಮೇಲಿನ ವಿಚಾರ ಡಾ. ದಿರೇಂದ್ರ ಎನ್ ರೋಯ್, (ಪ್ರೊಫೆಸರ್, ಫಿಲಿಫೈನ್ ದ್ವೀಪಗಳ ವಿಶ್ವವಿದ್ಯಾಲಯ) ಇವರ ಲೇಖದ ಸಂಕ್ಷಿಪ್ತ ಅನುವಾದ)

ಪಾಶ್ಚಾತ್ಯರು, ತಾವು ಸೇರಿದ ಪ್ರತಿಯೊಂದು ದೇಶಗಳಲ್ಲಿ "ಯೋಗ್ಯರು ಮಾತ್ರ ಜೀವಿಸಲರ್ಹರು" ಎಂಬ ಸೂತ್ರವನ್ನನುಸರಿಸುವಂತೆ, ಆ ದೇಶಗಳ ಸಂಸ್ಕೃತಿಗಳನ್ನು ಧ್ವಂಸಗೊಳಿಸಿ, ಎಲ್ಲೆಲ್ಲೂ ಪಾಶ್ಚಾತ್ಯ ಸಂಸ್ಕೃತಿಯನ್ನು ಬೀರುವ ಪ್ರಯತ್ನಗಳನ್ನು ನಡೆಯಿಸಿ, ಅನೇಕ ಕಡೆಗಳಲ್ಲಿ ಜಯಶೀಲರಾಗಿರುತ್ತಾರೆ. ಆ ದೇಶಗಳ ಮೂಲನಿವಾಸಿಗಳನ್ನು ನಿರ್ಮೂಲ ಮಾಡಿರುತ್ತಾರೆ.

ದೃಷ್ಟಾಂತಕ್ಕಾಗಿ, ಅಮೇರಿಕಾ ದೇಶವನ್ನು ಪಾಶ್ಚಾತ್ಯರು ಹೊಕ್ಕುವ ಮೊದಲು ಅಲ್ಲಿ ವಿಚಿತ್ರ ನವನಾಗರೀಕತೆಯೂ, ಸಂಸ್ಕೃತಿ ಇತ್ಯಾದಿ ಉತ್ತಮ ಗುಣಗಳಿಂದ ಮೆರೆಯುವ ಎಜಟೆಕ್ ಮತ್ತು ಮಾಯಾಗಳೆಂಬ ಎರಡು ಪ್ರಸಿದ್ಧ ಜನಾಂಗಗಳಿದ್ದುವು ಈ ಜನಾಂಗದವರು ಅನೇಕ ಲೋಹಗಳನ್ನು ಕಂಡುಹಿಡಿದಿದ್ದರು ಮಾತ್ರವಲ್ಲದೆ, ಅವುಗಳಿಂದ ಅನೇಕ ಆಭರಣಗಳನ್ನು ತಯಾರಿಸುತ್ತಿದ್ದರು ಅನೇಕ ಪ್ರಸಿದ್ಧ ಚರಿತ್ರಕಾರರು ಈ ವಿಚಾರ ಪರಿಶೋಧನಾ ಕಾರ್ಯಗಳನ್ನು ನಡೆಯಿಸಿ, ಈ ಜನಾಂಗಗಳ ಮಹತ್ವವನ್ನು ತಿಳಿದು ಅದನ್ನು ಪ್ರಚಾರ ಮಾಡಿರುತ್ತಾರೆ ಓಸ್ವಾಲ್ಡ ಸ್ಪೆಂಗ್ಲರ್, ಪ್ರಸಿದ್ಧ ಜರ್ಮನ್ ಅಧ್ಯಾತ್ಮ ಶಾಸ್ತ್ರಜ್ಞರು ಒಂದು ಗ್ರಂಥದಲ್ಲಿ ಈ ಜನಾಂಗಗಳ ಕುರಿತು ಹೀಗೆನ್ನುತ್ತಿದ್ದಾರೆ

"ಶ್ರೇಯಸ್ಸಿನ ಹಾದಿಯಲ್ಲಿರುವ, ಪ್ರಾಚೀನ ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಿಗಿಂತ ಉತ್ಕೃಷ್ಟವಾಗಿರುವ ಪ್ರಜಾ ಪ್ರಭುತ್ವದ ಸೂತ್ರಗಳಿಂದೊಡಗೂಡಿದ ಉತ್ತಮ ಸರಕಾರ ಧೋರಣಗಳಿಂದ ಕೂಡಿರುವ, ಉತ್ತಮ ಆರ್ಥಿಕ ವ್ಯವಸ್ಥೆ, ಇತ್ಯಾದಿ ಶ್ರೇಷ್ಠ ಗುಣಸಂಪನ್ನರಾದ, ಈ ಜನಾಂಗಗಳು ಕೆಲವು ದರೋಡೆಗಾರರ ನಿಮಿತ್ತವಾಗಿ ನಿರ್ನಾಮ ಹೊಂದಿದವು ಇದೊಂದು, ಒಂದು ಸಂಸ್ಕೃತಿಯು ಭೀಕರ ಕೊಲೆಯಿಂದ ನಾಶಹೊಂದಿದ ದೃಷ್ಟಾಂತವಾಗಿರುತ್ತದೆ"

ಇದೇ ರೀತಿಯಲ್ಲಿ ದಕ್ಷಿಣ ಅಮೇರಿಕಾದಲ್ಲೂ ಪಾಶ್ಚಾತ್ಯರ ನೆಲೆಯು ಮೊದಲು, ಉತ್ತಮ ನವನಾಗರೀಕತೆಗಳಿಂದ ಕೂಡಿದ ರಾಜ್ಯಗಳಿದ್ದುವು ಇವುಗಳೆಲ್ಲಾ, ಪಾಶ್ಚಾತ್ಯರ ಸಂಸ್ಕೃತಿಯಿಂದ ಆಗಲೆ ನಿರ್ನಾಮವಾಗಿವೆ ಇವುಗಳಿಗೆ ಮತ್ತೊಮ್ಮೆ ಜನಿಸಲು ಕೂಡ ಅವಕಾಶಗಳಿಲ್ಲ

ಆದರೆ ಪಾಶ್ಚಾತ್ಯರು ಈ ಸಂಸ್ಕೃತಿಗಳಿಗೆ ಮನ್ನಣೆ ಕೊಡ[illegible]ವರಲ್ಲ ತಮ್ಮ ಸಂಸ್ಕೃತಿಯೇ ಶ್ರೇಷ್ಠ, ಅದರಿಂದು ಯಾವ ಇತರ ಸಂಸ್ಕೃತಿಯು ಜೀವಿಸಬಾರದೆಂಬುದೆ ಇವರ ಉದ್ದೇಶ ಎಲ್ಲೆಲ್ಲೂ ತಮ್ಮ ಸಂಸ್ಕೃತಿಯ ಪ್ರಚಾರದಲ್ಲಿ ನಿರತರಾಗಿರುತ್ತಾರೆ ಇವರ ಸಂಸ್ಕೃತಿಯ ಕುರಿತು ಭಿನ್ನಾಭಿಪ್ರಾಯ ಹೊಂದಿದವರಿಗೆ, ಅವಮಾನಗೊಳಿಸುವರು, ಮಾತ್ರವಲ್ಲದೆ ಭಿನ್ನಾಭಿಪ್ರಾಯದ ಸಂಭವಗಳನ್ನೆ ನಾಶಮಾಡಿದರು

ಆದರೆ ಏಸ್ಯಾಖಂಡದ ಕೆಲವು ದೇಶಗಳಲ್ಲಿ ಪಾಶ್ಚಾತ್ಯರು ಕಾಲಿರಿಸುವ ಸಮಯ ಅಲ್ಲಿನ ಶ್ರೇಷ್ಠ ಸಂಸ್ಕೃತಿ ಹೊಂದಿದ ಜನರು, ಹೇಗೊ ಪಾಶ್ಚಾತ್ಯರ ಪ್ರೇರೇಪಣೆಯಿಂದ ಹೊರಗಾಗಿ, ಅಮೇರಿಕಾದ ಜನರಿಗೆ ಉಂಟಾದ ಅಪಘಾತಗಳನ್ನು ತಪ್ಪಿಸಿಕೊಂಡರು ಇಲ್ಲಿನ ಸಂಸ್ಕೃತಿಯು ಸ್ಥಿರತ್ವದಿಂದಲೂ ಮತ್ತು ಜನರ ಪುರುಷತ್ವದಿಂದಲೂ ಹೀಗಾಗಿರಬಹುದು ಅವರ ಸ್ವದೇಶಾಭಿಮಾನ, ದುಡುಕದಿರುವ ಸ್ವಭಾವ, ಅವರ ಶೂರತ್ವ ಮೊದಲಾದ ಶ್ರೇಷ್ಠ ಗುಣಗಳು, ಅವರ ಪ್ರಾರಂಭದ ಚಳವಳಿಗಳಿಂದ ವ್ಯಕ್ತವಾಗುತ್ತದೆ ಆದರೆ, ಡಂಭ, ಹೀನವಾದ ಕುಯುಕ್ತಿ ಮತ್ತು ದ್ರೋಹಕರ ಗುಣಗಳು ಇವರಲ್ಲಿರಲಿಲ್ಲ ಅವುಗಳಲ್ಲಿ ಪರಿಚಯ ಹೊಂದಲು ಕೂಡ ಸಾಧ್ಯವಾಗಲಿಲ್ಲ. ಪಾಶ್ಚಾತ್ಯರು ತಮ್ಮ ಡಂಭದಿಂದಲೂ ಕುಯುಕ್ತಿ ಮತ್ತು ದ್ರೋಹಗುಣಗಳಿಂದಲೂ ಏಸ್ಯಾಖಂಡದಲ್ಲಿ ತಮ್ಮ ಉದ್ದೇಶವನ್ನು ಸಾಧಿಸಲಾರಂಭಿಸಿದರು ಇವುಗಳಿಂದ ಜಯಶೀಲರೂ ಆದರು.

ಪ್ರಾರಂಭದಲ್ಲಿ, ಏಸ್ಯಾಖಂಡದ ಈ ಜನಾಂಗಗಳು ತಮ್ಮ ರಾಜಕೀಯ ಪ್ರಭುತ್ವವನ್ನು ಕಳೆಗೊಂಡರು ಆದರೆ ಇಷ್ಟರಲ್ಲಿ ಪಾಶ್ಚಾತ್ಯರು ತೃಪ್ತಿಹೊಂದುವ ಹಾಗಿಲ್ಲ ಅವರ ಜಯವು ಸಂಪೂರ್ಣವಾಗಬೇಕಾಗಿದೆ ಆದುದರಿಂದ ಈ ಕಾರ್ಯವು ಇಲ್ಲಿಗೆ ಪೂರ್ಣಗೊಳ್ಳದು ಇನ್ನೂ ಮುಂದುವರಿಯುವುದು

ದೃಷ್ಟಾಂತಕ್ಕಾಗಿ ಫಿಲಿಪ್ಪೈನ ದ್ವೀಪಗಳ ಪ್ರಾಚೀನತೆಯನ್ನು ಪರಿಶೀಲಿಸುವ ಈ ದ್ವೀಪಗಳು, ಚೀನಾ ಸಮುದ್ರದ ಮತ್ತು ಶಾಂತ ಸಾಗರದ ಮಧ್ಯದಲ್ಲಿವೆ ಅತಿ ಪ್ರಾಚೀನ ಕಾಲದಿಂದ ಇಲ್ಲಿನ ನಿವಾಸಿಗಳು ನವನಾಗರೀಕತೆಯನ್ನು ಸಂಸ್ಕೃತಿಯನ್ನೂ ಹೊಂದಿದ್ದರು ಹಿಂದೂದೇಶ, ಚೀನಾ ದೇಶಗಳೊಡನೆ ಇವರಿಗೆ ಪರಸ್ಪರ ವ್ಯಾಪಾರ ಸಂಬಂಧಗಳಿದ್ದುವು ಇವರಿಗೆ ಹಿಂದೂದೇಶಕ್ಕೂ ಸಂಸ್ಕೃತಿ ಸಂಬಂಧವಿತ್ತೆಂದು ಕೆಲವು ಶೋಧನೆಗಳಿಂದ ತಿಳಿದುಬಂದಿರುತ್ತದೆ ಕ್ರಿಸ್ತಶಕವು ಪ್ರಾರಂಭವಾಗುವ ಮೊದಲಿಂದ ಈ ದ್ವೀಪಗಳು ಸಂತುಷ್ಟವಾಗಿ ಬಾಳಿದ್ದುವು ಆದರೆ, ೧೫೨೧ರಲ್ಲಿ ಮಗಾಲನ್ ನೆಂಬ ಸ್ಪೈನ್ ದೇಶದ, ದೇಶಪರಿಶೋಧಕನು ಇದನ್ನು ಕಂಡುಹಿಡಿದನಂತೆ ಹೀಗೆಯೆ ಪಾಶ್ಚಾತ್ಯರ ಚರಿತ್ರೆಯಲ್ಲಿ ನವದೇಶ ಶೋಧಗಳನ್ನು ನಾವು ನೋಡಬಹುದು. ಅಮೇರಿಕವು ೧೪೯೨ ಕೊಲೊಂಬಸ್ಸನ್ನು ಶೋಧನೆ ಮಾಡಿದನೆಂದು ನಾವು ತಿಳಿದಿರುತ್ತೇವೆ ನಾವು ಅದು ಸತ್ಯವೆಂದೂ ನಂಬಿರುತ್ತೇವೆ ಆದರೆ, ಅಮೇರಿಕದ ಪೂರ್ವಿಕರು ಏಸ್ಯಾ ಖಂಡದಿಂದ ಬಂದವರೆಂದು ಈಗ ದೃಢವಾಗಿರುತದೆ ಏಸ್ಯಾ ಖಂಡದವರು ಈ ಖಂಡವನ್ನು ಕೊಲೊಂಬಸ್ಸನಿಗಿಂತ ೧೯ ಶತಮಾನಗಳ ಮುಂಚಿತವಾಗಿ ಕಂಡುಹಿಡಿದಿರುವರು ಹಿಂದೂದೇಶವೂ ಈ ನಿವಾಸಿಗಳ ಮೂಲಸ್ಥಾನವಾಗಿತ್ತು ಅಂತೆಯೆ ಫಿಲಿಪ್ಪೈನ ದ್ವೀಪಗಳನ್ನು ಏಸ್ಯಾದವರು ಅತಿ ಪ್ರಾಚೀನ ಕಾಲದಲ್ಲಿ ಸೇರಿರುವರು ಆದುದರಿಂದ ಈ ಪ್ರದೇಶವನ್ನು ಕಂಡು ಹಿಡಿದವರು ಕೊಲೊಂಬಸ್ಸ ಮತ್ತು ಮೆಗಲನರೆ?

ಈ ಪ್ರದೇಶಗಳು ಕೊಲಂಬಸ್ಸ ಮತ್ತು ಮೆಗಲನರಿಂದ ಪಾಶ್ಚಾತ್ಯರ ಪ್ರಯೋಗಕ್ಕೆ ಸಿಕ್ಕಿದಂತಾದವು ಎಂಬುದರಲ್ಲಿ ಅರ್ಥವಿದೆ ಫಿಲಿಪ್ಪೈನ ದ್ವೀಪಗಳು, ಸ್ಪೈನ್ ದೇಶದ ಅಧಿಕಾರದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ಪಡೆಯಿತು ಅಮೇರಿಕಾದವರ ಆಶ್ರಯದಲ್ಲಿದ್ದು ಅನೇಕ ಅಭ್ಯುದಯಗಳನ್ನು ಹೊಂದಿತೊ[illegible]. ಸ್ವಾತಂತ್ರ್ಯವನ್ನು ಪಡೆದವರಾದರು ನಂಬಾದರೇನು ನಿಜ ಆದರೆ, ಒಂದು ಕಾಲದಲ್ಲಿ ಶ್ರೇಷ್ಠವಾಗಿದ್ದ ಸಂಸ್ಕೃತಿಯನ್ನು ಮರೆತು, ಅಥವಾ ಅದನ್ನು ತ್ಯಜಿಸಿ, ಪಾಶ್ಚಾತ್ಯ ನವನಾಗರಿಕತೆಯನ್ನು ಹೊಂದಿರುತ್ತಾರೆ ಎಲ್ಲಾ ವಿಚಾರದಲ್ಲಿ ಪಾಶ್ಚಾತ್ಯರನ್ನು ಅವಲಂಬಿಸುತಿದ್ದಾರೆ ಇವರ ಎಲ್ಲಾ ಕ್ರಮಗಳು ಪಾಶ್ಚಾತ್ಯ ಕ್ರಮಗಳ ಪ್ರತಿಬಿಂಬಗಳಾಗಿರುತ್ತವೆ ಇದರಿಂದ ಪಾಶ್ಚಾತ್ಯರು ಗೌರವ ಪಡುತಿದ್ದಾರೆ ಅವರು ನವನಾಗರೀಕರಾಗಿ ಸಂಸ್ಕೃತಿ ಹೊಂದಿದ್ದರೇನೋ ನಿಜ ಆದರೆ, ಅವರು ಬರೀ ಪಾಶ್ಚಾತ್ಯ ನವನಾಗರಿಕತೆಯನ್ನು ಮಾತ್ರ ಹೊಂದಿದಂತಾಗಿದೆ ಫಿಲಿಪ್ಪೈನ ದ್ವೀಪಗಳು ಪಾಶ್ಚಾತ್ಯರನ್ನು ಅವಲಂಬಿಸಿದುದು ಮಾತ್ರವಲ್ಲದೆ, ಅವರಿಂದಾದಿಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಹೊರಗಿದ್ದವರನ್ನು ದ್ವೇಷಿಸಲು ಕಲಿತರು

ಫಿಲಿಪ್ಪೈನ ದ್ವೀಪಗಳ ದಕ್ಷಿಣದಲ್ಲಿ ಡಚ್ಚ್ ಈಸ್ಟ್ ಇಂಡಿಸ್ ಎಂಬ ದ್ವೀಪಗಳಿವೆ ಈ ಪ್ರದೇಶದ ಜನರು ಡಚ್ಚರಿಂದ ಪಾಶ್ಚಾತ್ಯ ಸಂಸ್ಕೃತಿಯನ್ನು ಹೊಂದುತಿದ್ದಾರೆ. ಇದರಿಂದ ಅವರಲ್ಲಿ ಈ ಮುಂಚೆ ಸಂಸ್ಕೃತಿಯು ಇರಲಿಲ್ಲ ಎಂಬ ಭಾವನೆಯಾಗಬಾರದು. ಈ ಮುಂಚೆ ಈ ದ್ವೀಪಗಳು ನಾಗರಿಕತೆಯಿಂದ ಕೂಡಿದ್ದುವು ಮಾತ್ರವಲ್ಲದೆ ಹತ್ತಿರ ಅನೇಕ ಪ್ರದೇಶಗಳಿಗೆ ನಾಗರಿಕತೆಯನ್ನು ಹಬ್ಬಿಸುವ ಸ್ಥಾನವಾಗಿತ್ತು ಕ್ರಿ ಶ ೬ನೇ ಶತಮಾನದಲ್ಲಿ 'ಮಡ್ಜಾಪಾಹಿಟ್' ಸಾಮ್ರಾಜ್ಯದ ಮೂಲಸ್ಥಾನವಾಗಿತ್ತು ತದನಂತರ ಇದು ಮುಸ್ಲಿಮರ ವಶವಾಗಿ, ಮುಸ್ಲಿಮ ಸಂಸ್ಕೃತಿಯನ್ನು ಹೊಂದಿದವರಾದರು

ಆದರೆ ಪಾಶ್ಚಾತ್ಯರ ಅಡಿಯಲ್ಲಿ ಇವರ ಗತಿ ಏನಾಗುವುದು? ಪಾಶ್ಚಾತ್ಯ ಮತ ಪ್ರಸಾರಕರು, ವರ್ತಕರು, ಪ್ಲೇಂಟರರು, ಸೈನಿಕರ, ನಾವಿಕರು ಅವರ ಸಂಸ್ಕೃತಿಯನ್ನೇ ಜಾವಾ ನಿವಾಸಿಗಳಿಗೆ ಬೀರುತ್ತಿದ್ದಾರೆ ಇವರು ಇತರ ಜನಾಂಗಗಳ ಸಂಸರ್ಗ ಮಾಡದ ಹಾಗೆ ನೋಡಿಕೊಳ್ಳುತಿದ್ದಾರೆ ಕಲಸಮಯದ ಹಿಂದೆ ಆತ್ತ ತೆರಳಿದ ಫಿಲಿಪೈನೊ ವಿಹರಿಯರು ಪಾಶ್ಚಾತ್ಯರು ಜಾವಾನೀಸರ ಹೊಟ್ಟೆ ತುಂಬಿಸುತಿದ್ದಾರೆ ಆದರೆ ಅವರ ತಲೆಗಳು ಮಾತ್ರ ಖಾಲಿ ಇವೆ ಎಂಬ ಅಭಿಪ್ರಾಯ ಪಟ್ಟಿರುತ್ತಾರೆ ಜಾವಾ ದ್ವೀಪವು ಸಂಪತ್ತಿನಿಂದ ಕೂಡಿದ್ದಾಗಿರುತ್ತದೆ ಆದರೆ ಜಾವಾನೀಸರಲ್ಲ

ಹಾಗಾದರೆ, ಈ ಜಾವಾನೀಸರು ಪಾಶ್ಚಾತ್ಯ ಸಂಸ್ಕೃತಿಯಿಂದ ಅನುಭವಿಸುವ ಫಲಗಳಾವುವು? ಅವರು ಅವುಗಳನ್ನು ನಮ್ಮಿಂದ ಯಾಕೆ ಅಡಗಿಸುತಿದ್ದಾರೆ ಅದರ ಪ್ರಕಟಣೆಯನ್ನು ಪಾಶ್ಚಾತ್ಯರು ಸಹಿಸಲಾರರು. ಇತ್ತೀಚೆಗೆ ಇವೇ ಕಾರಣಗಳಿಂದ ಇಲ್ಲಿ ಕೆಲವು ದಂಗೆಗಳು ನಡೆದಿದ್ದುವು. ಜನರು ಸಂತುಷ್ಟರಾಗುತಿದ್ದರೆ ಈ ದಂಗೆಗಳ್ಯಾಕೆ? ಜಾವಾನೀಸರಿಗೂ ಏಸ್ಯಾ ಖಂಡದವರಿಗೂ ಅತೀ ಹಿಂದಿನಿಂದ ಪರಸ್ಪರ ಸಂಬಂಧಗಳಿವೆ ಜಾವಾನೀಸರಿಗೂ ಫಿಲಿಫೀನರಿಗೆ ಸಂದ ಪಾಶ್ಚಾತ್ಯ ನಾಗರಿಕತೆಯು ಸಲ್ಲುತ್ತಿದೆಯೇ? ಅವರು ಪಾಶ್ಚಾತ್ಯರ ನೆರಳಾಗಿ ಸಂಭವಿಸುವರೆ?

ಅಂತೆಯೆ ಇಂಡೊ ಚೀನಾದ ಅವಸ್ಥೆಯಾಗಿರುತ್ತದೆ ಈ ಇಂಡೋ—ಚೀನಾವು ಅದರ ಹೆಸರು ಸೂಚಿಸುವಂತೆ ಹಿಂದೂದೇಶಕ್ಕೂ ಚೀನಕ್ಕೂ ಸಂಬಂಧಿಸಿದ ಪ್ರದೇಶವಾಗಿರುತ್ತದೆ ಆದರೆ ಪಾಶ್ಚಾತ್ಯ ಪ್ರಭುತ್ವವು ಇದನ್ನು ಅವುಗಳಿಂದ ಪ್ರತ್ಯೇಕಿಸಿ ಅದು ಇತರ ಪೌರ್ವಾತ್ಯಗಳೊಡನೆ ಯಾವತ್ತೂ ವ್ಯವಹಾರವನ್ನು ನಡೆಯಿಸದಂತೆ ಇತರರು ಅದನ್ನು ಸೇರದಂತೆ, ಕಠಿಣ ಕ್ರಮನಿಬಂಧನೆಗಳಿಂದ ಕಾಪಾಡುತಿದ್ದಾರೆ ಎರಡು ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಮಹಾ ಕ್ರಾಂತಿಯುಂಟಾಯಿತು ಇದರ ಪರಿಣಾಮವಾಗಿ ೧೯೩೦ರಲ್ಲಿ ಅಲ್ಲಿ ೩ ಸಾವಿರ ರಾಜಕೀಯ ಕೈದಿಗಳುಂಟಾದರು ೭ ಸಾವಿರ ಜನರ ತಿಂಗಳುಗಳಲ್ಲಿ ಕಠಿಣತೆಗಳನ್ನು ಕೇಳದುದಕ್ಕಾಗಿ ಮತ್ತು ಇನ್ನೂ ಕೆಲವು ಸುಧಾರಣೆಗಳನ್ನು ಕೇಳಿದುದಕ್ಕಾಗಿ, ತರತರದ ಶಿಕ್ಷೆಗಳನ್ನು ವಿಧಿಸಲ್ಪಟ್ಟವರಾದರು (ರೋಮೈನ ರೊಲಾಂಡ್) ಆದರೆ ಪಾಶ್ಚಾತ್ಯರಿಂದ ಈ ವರ್ತನೆಯ ಕುರಿತು ಬೇರೆ ಉದಾಹರಣೆಗಳು ಬರಲು ಸಾಕು ಇದರಿಂದ ಈ ಇಂಡೋ ಚೀನಾ ಪ್ರದೇಶವು ಪಾಶ್ಚಾತ್ಯರ ಸಂಸ್ಕೃತಿಯು ಹೇಗೆ ಸುಧಾರಣೆ ಹೊಂದುತ್ತಿದೆ ಎಂಬುದು ವ್ಯಕ್ತವಾಗುತ್ತದೆ

ಪೌರ್ವಾತ್ಯದಲ್ಲಿ ನಾಗರೀಕತೆಯಿಂದೊಡಗೂಡಿದ ಅನೇಕ ಪ್ರಾಚೀನ ದೇಶಗಳಿವೆ ಇವರ ಸಂಸ್ಕೃತಿ ಇತ್ಯಾದಿ ಅತಿ ಪ್ರಾಚೀನ ಕಾಲದ್ದುವಾಗಿದ್ದು, ಬಹಳ ಶ್ರೇಯಸ್ಸನ್ನು ಹೊಂದಿದಾಗಿರುತ್ತವೆ ಈ ದೇಶಗಳಲ್ಲಿ ತಮ್ಮ ನಾಗರಿಕತೆಯನ್ನು ಬೀರುವ ಕಾರ್ಯವು ಅಷ್ಟು ಸುಲಭಕರವಲ್ಲವೆಂದು ಪಾಶ್ಚಾತ್ಯರು ಅನುಭವ ಪಡುತಿದ್ದಾರೆ. ನಮ್ಮ ಸ್ವಾಭಾವಿಕ ಉಪಾಯವಾಗಿರುವ "ಬ್ರ್ಯಾಬಲ್", ಸುರಾಪಾನ ಮತ್ತು ತುಪಾಕಿ"ಯಿಂದ ತಮ್ಮ ಕಾರ್ಯವನ್ನು ಸಾಧಿಸುತಿದ್ದಾರೆ.

ಆದರೆ, ಪಾಶ್ಚಾತ್ಯರು ಯಾವ ಕಾರಣಗಳಿಂದಲೂ ಈ ದೇಶಗಳಲ್ಲಿ ನಾಗರೀಕತೆಯನ್ನು ಬೀರುವ ಕಾರ್ಯದಿಂದ ಹಿಂಜರಿಯರು ಅನೇಕ ಕಡೆಗಳಲ್ಲಿ ಲಭಿಸಿದ ಜಯಗಳಿಂದ ಇವರು ಬಹಳ ಉತ್ಸಾಹಿಕರಾಗಿರುತ್ತಾರೆ ಈ ದೇಶಗಳ ನಾಗರೀಕತೆಯೂ ೫೦ ಶತಮಾನಗಳಿಂದ ಉದ್ಧರಣೆ ಹೊಂದಿದ್ದಾಗಿರುತ್ತದೆ ಬಹಳ ಶ್ರೇಯಸ್ಕರವಾದುದು ಪಾಶ್ಚಾತ್ಯರ ಈ ವರ್ತನೆಯಿಂದ ಜನರ ಶಾಂತತೆಗೆ ಹಾನಿ ಬರುತ್ತದೆ ಆದರೂ ಅವರ ಕಾರ್ಯವನ್ನು ಅವರು ನಿಲ್ಲಿಸರು ಅವರ ಪ್ರತಿಕೂಲಿಗಳನ್ನು ಗಣ್ಯಮಾಡದೆ ನಡೆಯುವುದು ಇವರ ಸ್ವಭಾವವಾಗಿರುತ್ತದೆ ಈ ಪ್ರದೇಶಗಳ ಜನರ ಪ್ರತಿಕೂಲಿಗಳಿಗೆ ನ್ಯಾಯ ಸಮ್ಮತ ನಾಗಿರಬಹುದು ಆದರೆ ಪಾಶ್ಚಾತ್ಯರ ಕೂಡೆ ಅವರದೆ ನ್ಯಾಯಗಳಿವೆ ಅವೇ ಶ್ರೇಷ್ಠವೆಂದೂ ಅವರ ದೃಢವಾದ ನಂಬಿಕೆ ತಮ್ಮ ಉದ್ದೇಶ ಸಾಧಿಸಲು ಅನೇಕ ಉಪಾಯಗಳನ್ನು ಕಲ್ಪಿಸುತ್ತಿದ್ದಾರೆ ತಮ್ಮಿಂದ ಸಾಧ್ಯವಾಗುವ ಎಲ್ಲಾ ಪ್ರಯತ್ನಗಳನ್ನೂ ಮಾಡುತಿದ್ದಾರೆ

ಅನೇಕ ವರ್ಷಗಳ ನಂತರ ಹೊಟ್ಟೆಶೂಲೆಯು ಶಮನವಾಯಿತು.

ಮಿ। ಸಿ ಎಂಬಾತನು ನಮ್ಮ ಬಟ್ಟೆನ್ನು ಶ್ಲಾಘಿಸಿದ್ದು ಅಷ್ಟೊಂದು ಆಶ್ಚರ್ಯಕರ ಸಂಗತಿಯೇ? ಅವನಿಗೆ ಉದರ ವೇದನೆಯಿಂದ [illegible] ಅನ್ನವನ್ನು ಉಂಡಿಸಲು ಸಾಧ್ಯವಾಗುತ್ತಿರಲಿಲ್ಲ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸಿದ ನಂತರ ಗುಣಲಾಭವನ್ನು ಪಡೆದನು

ಆದರೆ ಮಂದ್ದನ್ನು ಸೇವಿಸುವ ಮೊದಲು ಅದು [illegible] ಅಲ್ಲವೋ ಎಂಬುದನ್ನು [illegible] ಕಾರಣ ಅನೇಕರು ಈ ಚಿಟ್ಟೆಗಳನ್ನು ತೋರಿಸಿ ಮೋಸ ಮಾಡುವುದುಂಟು ಅವನ ಹೇಳುವ ಮಾತುಗಳನ್ನು ಕೇಳಿ

"ನಮ್ಮ ಮೆಕ್ಲೀನ್ ಬ್ರೇಂಡ್ ಸ್ಟೋಮಕ ಪೌಡರ [illegible] ನನಗೆ ಎಷ್ಟು ಲಾಭವು [illegible] ನಾನು [illegible] ಕೂಡಲು [illegible] ವೇದನೆಯಿಂದ ನರಳುತ್ತಿದ್ದೆನು [illegible] ನನಗೆ [illegible] ಸೇವಿಸಲು ಈಗ [illegible] ಸೇವನೆಯಿಂದ ನನ್ನ ದೇಹದಲ್ಲಿ ಹೊಸ ಚೈತನ್ಯವು ಬಂದ ಹಾಗೆ ಆಗಿದೆ

ಮಿ। ಸಿ ಗೆ ಸಿಕ್ಕಿದ ಫಲವು ನಿಮಗೂ ಸಿಗಬೇಕಾದರೆ ಸೀಲು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ಸೇವಿಸಿರಿ ಆದರೆ ಕೆಂಪು ಮುದ್ರೆ ಇರುವ [illegible] ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು [illegible]

Alex. C. Maclean

ಎಂ. ಸಿ. [illegible] ಬಾಟ್ಲಿಗಳ ಮತ್ತು ಟೇಬ್ಲೆಟ್ ಗಳ [illegible] ಅಥವಾ ಸ್ಟೋರು [illegible] ಪಡೆಯುವರೆ ಕಷ್ಟವಿರುವುದಾದರೆ

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು.

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು–ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ. ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದ್ದಾಗಿ ತಯ್ಯಾರು ಆಗುತ್ತದೆ. ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮೀರಿ! .... ಬಣ್ಣದಲ್ಲಿ ಪವನು! .... ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಪೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯಂ. ವೆಂಕಟೇಶ ರಂಗ ಪೈ, ಪ್ರೊಪ್ರೈಟರ್.

-HAIL & CO-

HALFTONE & LINE BLOCK MAKERS

Cinema Colour Slides & Designs A Speciality

CHIKPET
BANGALORE CITY

BLOCKS FOR BOOK Illustrations, Magazines & Newspapers. Art Lables, Etc., Etc.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಲದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲ ಬದ್ಧತೆ, ಜಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ 1ಕ್ಕೆ ರೂ. 2-8-0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು.

ಬಾಟ್ಲಿ 1ಕ್ಕೆ 10 ಆಣೆ. 3 ಬಾಟ್ಲಿಗಳಿಗೆ ರೂ. 1-12-0.

ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ. ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ.

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ. 1–0–0.

ಮಲೇರಿಯಾ ನಿವಾರಿಣಿ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ, ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ.

ಬಾಟ್ಲಿ 1ಕ್ಕೆ ರೂ. 1-8-0. ಸಣ್ಣ ಬಾಟ್ಲಿ 1ಕ್ಕೆ ಆಣೆ 18.

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು. ಕ್ರಯ ಡಬ್ಬಿ 1ಕ್ಕೆ ರೂ. 2–8–0 ಮಾತ್ರ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ— ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮು ಪೇಟೆ, ಕಾಸರಗೋಡು. ಡಾ॥ ಶ್ರೀನಿವಾಸ ಪೈ, ಪುತ್ತೂರು. ಮೆಸರ್ಸ್ ಮುಲ್ಲರ ಪಟೇಲ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ., ಶಾರದಾಹೌಸ್, ಗಿರಿಗಾಂವ್, ಪೋರ್‌ಬಂದ್ ಮುಂಬಯಿ ನಂ 4. ವಿ. ದೇಶ್ಪಾಂಡೆ ಹೋಟೆಲ್, ಮಡಿಕೇರಿ ಕೂರ್ಗ್. ರಾವ್ ಫಾರ್ಮಸಿ, ಸಾಗರ.

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟ್ಯಾಪ್‌ರ್ಯಾಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager.

ಡಾಕ್ಟರ ವಾಮನ ಗೋಪಾಳರವರ



ಬಹಿರ್ದಾಯಿ ಜ ... ಶರೀರ.
ಶಟ್ಟು ರಕ್ತಕ್ಕೆ ಪರಮೌಷಧ
ಈ ವರ್ಷದ ಅನುಭವ.
ಉಪಯೋಗಿಸಿದವರೇ ಹೇಳಿದ್ದಾರೆ.
ಡಾ॥ ಗೌತಮ ರಾವ್ ಕೇಶವರವರ ಪ್ರೊಸ್ಪರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್.

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಫಾರ್ಮಸಿ, ಮುಂಬಯಿ 4. ಪ್ರತಿನಿಧಿ ... ಮಂಗಳೂರು.
[illegible]

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ.

The Canara Banking Corporation Udipi, Ltd.

Head office:—UDIPI, S. K. (Incorporated in British India) TEL: 'BANKING' **ESTD: 1906**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras (George Town), **6. Bunder Mangalore, 7. Mercara** (North Coorg), **& 8. Virarajendrapet** (South Coorg).

DEPOSITS:

1922	1926	1930	1934	30-11-'35
ರೂ. 2,28,419/	6,48,940/	20,28,887/	24,95,329/	**27,40,812/-**

SAVINGS BANK ACCOUNTS

INTEREST allowed at 3½ %

Facilities 1. Withdrawal by **CHEQUES.** 2. Production of pass books unnecessary at the time of withdrawal. 3. Accounts transferred **FREE** of charge from one office to another.

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯನ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

TO INSURE OR TO REPRESENT

CONSULT:—

The Bombay Life Assurance Company Ltd.

ESTD 1908.

Offers: (1) Attractive Schemes of Assurances to suit individual needs.
(2) Rebate for yearly payment of premiums.
(3) Additional Rebate for larger assurances.
(4) Permanent Disability Benefits without extra.
(5) Increased rate of Bonuses.
(6) Accident Risk on a small extra payment.

Attractive Rates of Commission & Bonuses to Agents.

For particulars apply to any of our Offices:

Kochikar Brothers. Branch Secretaries.

OFFICES. (1) "Gautam Nivas", Charni Rd., Girgaum, Bombay No. 4. (2) P. B. 387, Mount Road, Madras. (3) Visveshwarapuram Circle, Bangalore City. (4) Hazur Road, Calicut. (5) Car Street, Mangalore, S. K. (6) Udipi, (S. India).

ಬ್ರಿಟಿಷ್ ಕರ್ಣಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ 5 ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವಾರ್ಷಿಕ ಚಂದಾ ೩ ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M. 1490

ಟಪ್ಪಾಲು ಹಾಸಲು ಸೇರಿ ರೂ. 3-12-0.

For Quality Snuff
H. Rama Rao and Sons,
High Class Snuff Manufacturers,
Mangalore
RAMA SNUFF
the charm of Snuff Users

ಸ್ವದೇಶಾಭಿಮಾನಿ
SWADESHABHIMANI

LIFE ASSURANCE
IS
NO EXPENSE
BUT
AN INVESTMENT
Safeguard yourself & your family TODAY
Buy a policy in
THE BOMBAY LIFE
Kochikar Brothers,

ESTABLISHED 1906

(ಕೀರ್ತಿಶೇಷ ಕೆ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲ್ಪನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತಿಳಿ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೦. ಮಂಗಳೂರು ತಾ. ೧೦ನೇ ಶುಕ್ರವಾರ ಜನವರಿ ೧೯೩೬. (10-1-'36) ಸಂಚಿಕೆ ೨

ಜನಾಂಗಸಭೆಯು ಅಧಿವೇಶನದ ಚಿತ್ರ.

ಈ ಚಿತ್ರದಲ್ಲಿ ಭಾರತೀಯರಾದ ಆಘಾಖಾನರನ್ನು ಕಾಣಬಹುದು. ಇಟೆಲಿಯು ಹಬಸಿಗಳ ಮೇಲೆ ಯುದ್ಧವೊಡ್ಡಿದ ಸಮಯ, ಈ ಯುದ್ಧವನ್ನು ತಡೆಯಲು, ಸೆಂಕ್ಷನು ಇತ್ಯಾದಿ ಪ್ರತಿಕ್ರಿಯೆಗಳನ್ನು ಜ್ಯಾರಿಮಾಡಲು ಜರಗಿದ ಅಧಿವೇಶನವಿದು.

ಟಿಪ್ಪಣಿಗಳು
NOTES

...ಅವರದ್ದು ಗುತ್ತಿನಲ್ಲಿ ಅತ್ತೆಯ ಆಡಳಿತ ಬಹಳ ಬಿಗಿಯಾಗಿತ್ತು, ಸೊಸೆಗೆ ಬಾಯಿ ಎತ್ತುವುದಕ್ಕೂ ಇಲ್ಲ. ಬಿಗಿ ಆಡಳಿತದ ಪರಿಣಾಮವಾಗಿ, ಎಷ್ಟೋ ಹೆಮ್ಮೆಯ ಕುಟುಂಬದ ಮೆಂಬರರು ಗೊಣಗುತ್ತಿದ್ದರು. ಆದರೆ ಕೈಯುಕ್ತುವುದಕ್ಕೂ ಇಲ್ಲ. ಹೀಗಾಗ ಹಲವು ವರ್ಷ ಕಳೆಯಿತು.

\+ + + +

ಅತ್ತೆಗೆ ವೃದ್ಧಾಪ್ಯವೆಂದು ಊರೆಲ್ಲ ಸುದ್ದಿಯಾಯಿತು. ಕಾಶಿಗೆ ಹೋಗುವುದೆಂದಿತ್ತು, ಅದು ಗೋಕರ್ಣಕ್ಕಾಯಿತು. ಅಂತೂ, ಸೊಸೆಗೆ ಆಡಳಿತ ಸಿಕ್ಕಿತು. ಹಿಂದೆ ಗೊಣಗುತ್ತಿದ್ದವಳನ್ನು ತನ್ನ ಪಕ್ಷಕ್ಕೆ ಕಟ್ಟಿಕೊಂಡು, ಸೊಸೆ ಭಾರೀ ಆಡಳಿತಕ್ಕೆ ತೊಡಗಿದಳು. ಸೊಸೆಯನ್ನು ಹೊಗಳಿದ್ದೆನು, ಊರೆಲ್ಲ ಕೊಂಡಾಟ, ಸ್ತೋತ್ರ.

× × × × × ×

ಹೊಗಳಿದವರು ಮಾತ್ರ ಅವರೇ ಹಿಂದೆ ಗೊಣಗಿದ ಕಿರಿ ಮೆಂಬರರು ಸೊಸೆ ಅವರ ಮಾತೆಂದರೆ ವೇದವಾಕ್ಯವೆಂದು ಮಾಡಿಕೊಂಡಿದ್ದಳು. ಅವಳ ಪೂಜೆಯೆ ದೇವರ ಪೂಜೆ ಅವಳಿಗೆ ಮನೆ ದೈವವೆಲ್ಲ ಆಯ್ತು. ಸೊಸೆಯಂತೆ ನಿಪುಣರ್ಯಾರೂ ಆಡಳಿತ ನೋಡಿದವರಲ್ಲಿಲ್ಲ ಎಂದು ಖಂಡಿತವಾಯಿತು ಅಷ್ಟರಲ್ಲಿ..

× × × × ×

ಗೋಕರ್ಣದಿಂದ ಅತ್ತೆ ಬಂದಳು. ಬಂದು ಪ್ರತಿಳಿತ ವಶಪಡಿಸಿಕೊಳ್ಳಬೇಕೆಂದರೆ,—ನಾಲಗೆ ಚಪ್ಪರಿಸಿ ತಿಂದ ನೆನಪಿಗೆ ಕೃತಜ್ಞರಾಗಿ ಸೊಸೆಯ ಪಕ್ಷ ನಿಂತ ಕಿರಿಯ ಮೆಂಬರರು ಅತ್ತೆಗೆ ಆಡಳಿತ ಸಿಗದಂತೆ ನೋಡಿದರು.

\+ + + +

ಹಿರಿಯರೂ ಕಿರಿಯರೂ ಅಲ್ಲದ ಒಂದು ಮೆಂಬರಿಕೆ ಇತ್ತು ಆ ಪ್ರಾಣಿಗೆ ಏನೋ ಔಷಧ ಚುಚ್ಚಿ ಅವನು ಸದ್ಯಕ್ಕೆ ಸ್ಮೃತಿ ತಪ್ಪುವಂತೆ ಮಾಡಿದರು ಅಷ್ಟು ದಿನ ಯಜಮಾನಿಯನ್ನು ಅರಿಸುವವರಿಲ್ಲ. ಹಾಗೆಂದು ಸೊಸೆಗೂ ಅಧಿಕಾರವಿಲ್ಲ ಕಿರಿ ಮೆಂಬರರು ಹಿರಿ—ಹಿರಿ ಹಿಗ್ಗಿದರು.

\+ + + +

ಅತ್ತೆಗೆ ಆಡಳಿತ ಸಿಕ್ಕಿಲ್ಲದಿದ್ದರೂ ಸೊಸೆಗೂ ಇಲ್ಲ ಎಂದು ಅತ್ತೆಗೆ ಸಂತೋಷ ಅತ್ತೆಗಂತೂ ಸಿಕ್ಕಿಲ್ಲವಷ್ಟೆ ಎಂದು ಸೊಸೆಗೂ ಆನಂದ ನಿಜವಾಗಿ ನೋಡಿದರೆ ಇವರಿಬ್ಬರಿಗೂ ಸೊನ್ನೆ ಏಕೆಂದರೆ ಈಗ ಎಲ್ಲವೂ ಕುಲದೇವತೆಯ ಮೇಲೆ ಭಾರ ಹಾಕಿ ನಡೆಯುತ್ತಿದೆ

× × × × ×

ಭಂಡಾರವಿದ್ದಲ್ಲಿ ದೈವವಿದೆಯಷ್ಟೆ ಅತ್ತೆ ಸೊಸೆ ಎಂದು ಭಂಡಾರವನ್ನು ಬೇಕಾದಂತೆ ಉಪಯೋಗಿಸಿ, ದೈವದ ಗೊಡವೆ ಇಲ್ಲದೆ ಇದ್ದರಂತೆ. ಈಗ ದೈವ ಮುಂದೆ ಬಂದು ನಿಂತಿದೆ. ಎಲ್ಲೆಲ್ಲಿ ಹೇಗೆಲ್ಲ ನಡೆಯಬೇಕೋ ಹಾಗೆ ಅವರವರದನ್ನು ಅವರವರಿಗೆ ಸಲ್ಲಿಸುತ್ತಿದೆ ಭಂಡಾರವನ್ನು ಅದೂ ಕಾಯಲಾರದಿದ್ದರೆ, ಮನೆತನದ ಗೌರವ ಉಳಿದೀತೇ?

\+ + + +

ಕಿರಿ ಮೆಂಬರರು ಈಗ ಸಿಕ್ಕಿ ಬಿದ್ದಿದ್ದಾರೆ ದೈವವನ್ನು ದೂರುವುದಕ್ಕೆ ಉಪಾಯವಿಲ್ಲ, ತಾವೇ ಮುಂದೆ ಬಂದು ಎಲ್ಲ ನಡೆಸಲೂ ಉಪಾಯವಿಲ್ಲ. ಅದಕ್ಕಾಗಿ ಅತ್ತೆಯನ್ನು ದೂರುವುದು ದೈವವನ್ನು ಎಬ್ಬಿಸಿದವಳು ಅತ್ತೆ, ಗೋಕರ್ಣಕ್ಕೆ ಹೋಗಿ ಬಂದದ್ದಲ್ಲವೆ' ಎಂದು ಮೊದಲಾಗಿ ಭಾರೀ ಗಲಾಟೆ ಮಾಡುತ್ತಿದ್ದಾರೆ

\+ + + +

ಆದರೆ ...ಮನೆಯಲ್ಲಿ ...ಕ್ಷೇಮವಾಗಿದೆ. ದೈವದ ಮೇಲೆಯೆ ಭಾರ ಹಾಕಿಸೋಣ ಬಹಳ ಉತ್ತಮ ಎಂದು ಎಲ್ಲರೂ ಹೇಳುತ್ತಾರೆ ಸಿಕ್ಕಲಾರದ ಆಡಳಿತವನ್ನು 'ತನಗೆ ಬೇಡ' ಎಂದು ಅತ್ತೆ ಹೇಳುತ್ತಾಳೆ. "ದೈವಕ್ಕೆ ಆದರೂ ಬರೀ ಭಂಡಾರ ಹಿಡಿದು ಎಷ್ಟು ದಿನ ಆಡಳಿತ ಮಾಡಲು ಬೇಸರವಿಲ್ಲದೆ ಇದೀತು?" ಎಂದು ಸೊಸೆ ಎನ್ನುತ್ತಾಳೆ. ಕಿರಿಮೆಂಬರರ ಹಸಿವು, ಬಾಯಾರಿಕೆ ಇನ್ನೂ ತೃಪ್ತಿಯಾಗಿಲ್ಲ. ಆದರೆ, ಎಲ್ಲಾ ಇಮಮಾಡಿ, ಸೊಸೆಗೆ ಪಟ್ಟಕಟ್ಟಿದ್ದೇ ಒಮ್ಮೆಲೇ ಗಡಾದ ಕಲ್ಲನ್ನು ನುಂಗಿ, ರಾಮ ಸಮುದ್ರವನ್ನು ಕುಡಿಯುವುದು ಎಂದು ನಿಶ್ಚಯ ಮಾಡಿದ್ದಾರೆ.

(೩ನೇ ಪುಟದ ೮ನೇ ಕಲಮನ್ನು ನೋಡುವುದು)

ನಿಮ್ಮವರು ಆರೋಗ್ಯವಂತರೂ ಶಕ್ತಿಯುತರೂ ಆಗಬೇಕೆ, ಹಾಗಾದರೆ ಅವರಿಗೆ ಒವಲ್ಟಿನ್ನನ್ನು ಕೊಡಿರಿ.

ನವಚೈತನ್ಯವನ್ನೂ ಶಾಂತ ಚಿತ್ತವನ್ನೂ ಕೊಡುವುದರಲ್ಲಿ 'ಓವಲ್ಟಿನ್' ಅತ್ಯದ್ಭುತಕರವಾದುದು. ಓವಲ್ಟಿನ್ನನ್ನು ತೆಗೆದುಕೊಂಡುದರಿಂದ ಅನಾರೋಗ್ಯವು ನಾಶವಾಗಿ ನಿಶ್ಶಕ್ತಿಯು ಕುಂದಿ, ಭರಪುರತ್ರಾಣವೂ ದೇಹಧಾರ್ಢ್ಯವೂ ಹೆಚ್ಚುವುದು ಜ್ಞಾಪಕಶಕ್ತಿಗೂ ಬಹಳ ಉಪಯೋಗಕಾರಿ

ಓವಲ್ಟಿನ್‌ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಸಾರವಿದೆ. ಬೆಳೆದ ಬಾರ್ಲಿ, ದನದ ಕೆನೆಹಾಲು, ಅತ್ಯಮೂಲ್ಯ ಪಾನೀಯಗಳು ದೇಹದ ಬೆಳವಣಿಗೆಯನ್ನೂ ಮೆದುಳಿನ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಲು ಅತ್ಯಾವಶ್ಯಕವಾದ ಸಾಧನಗಳು ಒಂದು ಸಲ ಸೇವಿಸಿದೊಡನೆ ಅದರ ಚೇತನದಾಯಕ ಗುಣವನ್ನು ನೀವು ಕಂಡುಹಿಡಿಯುವಿರಿ

ದಿನನಿತ್ಯವೂ ಚಹಾಕ್ಕೆ ಓವಲ್ಟಿನ್ ಸೇರಿಸಿರಿ ಅದರಿಂದಾಗಿ ಇಚ್ಛಾಪೂರ್ತಿಯನ್ನು ಹೊಂದಿರಿ ಆದರೆ ಪರಕೀಯರ ಮೋಸದ ಮಾಲನ್ನು ಪಡೆದುಕೊಂಡು ನಾಶವನ್ನು ಹೊಂದಬೇಡಿ

'ಓವಲ್‌ಟಿನ್'

ಟೋನಿಕ್ ಆಹಾರ ಪಾನಕ.

OVALTINE

ಮೆದುಳು, ನರ, ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಕ್ರಯಕ್ಕೆ ಸಿಗುತ್ತದೆ.

ಏಜಂಟ್ಸ್:— ಜೇಮ್ಸ್ ರೈಟ್, 8ನೇ ಲಿಯನ್ ಸ್ಟ್ರೀಟ್, ಕಲ್ಕತ್ತಾ ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ

OV/390

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

First And Foremost

FIRST AND FOREMOST among the ideals of the Canara Bank is the ideal of Service to its Customers

ESTD: 1906

CANARA BANK
LIMITED.

THE KALYANPUR SUGAR MILLS, LTD.

ದಿ ಕಲ್ಯಾಣಪುರ ಶುಗರ್ ಮಿಲ್ಸ್, ಲಿಮಿಟೆಡ್.

(ದಿ ಇಂಡಿಯನ್ ಕಂಪೆನೀಸ್ ಏಕ್ಟ್, 1913ರ ಪ್ರಕಾರ ರಿಜಿಸ್ಟರ್ ಆದದ್ದು)

ಇದರ ಒಂದು ಪ್ರತಿಯನ್ನು ಮಂಗಳೂರಿನ ಜೋಯಿಂಟ್ ಸ್ಟೋಕ್ ಕಂಪೆನಿಗಳ ಅಸಿಸ್ಟ್ಯಾಂಟ್ ರಿಜಿಸ್ಟ್ರಾರರೊಡನೆ ದಾಖಲು ಮಾಡಿರುತ್ತದೆ

ಅಧೀಕೃತ ಮೂಲಧನ—ರೂಪಾಯಿ 10ರ 50,000 ಶೇರುಗಳಿಂದ ರೂಪಾಯಿ 5,00,000.

ವಂತಿಗೆಗೆ ಅರ್ಪಿಸಿದ ಮೂಲಧನ—ರೂಪಾಯಿ 2,00,000; ಪೈಕಿ ಕಬ್ಬು ಬೆಳೆಸುವವರ ಬಗ್ಗೆ ರೂಪಾಯಿ 50,000 ಪ್ರತ್ಯೇಕಿಸಲ್ಪಟ್ಟಿರುತ್ತದೆ.

ಪ್ರತೀ ಪಾಲಿಗೆ ಕೊಡಬೇಕಾದ ಐವೇಜು:—

ಅರ್ಜಿಯ ಒಟ್ಟಿಗೆ ಕೊಡಬೇಕಾದದ್ದು	ಒಂದು ಅರ್ಜಿಯಲ್ಲಿ ರೂಪಾಯಿ ಹತ್ತಕ್ಕೆ ಮೀರದ ಪ್ರವೇಶ ಹಾಸಲು	0—4—0
	ಪ್ರತಿ ಪಾಲಿನ ಮೊದಲಿನ ಕಂತು	2—8—0
ಅರ್ಜಿ ಅಂಗೀಕರಿಸೋಣಾದ ಒಂದು ತಿಂಗಳ ಒಳಗೆ ಕೊಡಬೇಕಾದದ್ದು	ಎರಡನೆಯ ಕಂತು	7—8—0

ಡ್ಯಾರೆಕ್ಟರರು

1. ಮಹಾರಾಜೇಶ್ರೀ, (ಪ್ರೆಸಿಡೆಂಟರು) **ಅಮ್ಮೆಂಬಳ ಶ್ರೀನಿವಾಸ ಪೈಯವರು** ಬಿ ಎ, ಬಿ ಎಲ್—ಕೆನರಾ ಬೇಂಕಿನ ಪ್ರೆಸಿಡೆಂಟರು
2. (ವ್ಯಾಸ್ ಪ್ರೆಸಿಡೆಂಟ್) **ಬಂಟ್ವಾಳ ವೈಕುಂಠ ಬಾಳಿಗರು** ಬಿ ಎ ಬಿ ಎಲ್— ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಚೆಯರ್‌ಮ್ಯಾನರು, ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನಿನ ಡ್ಯಾರೆಕ್ಟರರು, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಮೆಂಬರರು (ಹ್ಯಾಕೋರ್ಟಿನ ಪ್ರಾಕ್ಟಿಸಿನ್ನು ನಿರೀಕ್ಷಿಸಲಾಗುತ್ತದೆ
3. **ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತರು**—ಸಾಹುಕಾರರು ಮತ್ತು ಜಮೀನುದಾರರು ಕೆನರಾ ಬ್ಯಾಂಕಿನ ಮತ್ತು ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಡ್ಯಾರೆಕ್ಟರರು
4. **ಮೂಲ್ಕಿ ವಾಮನ ಕುಡ್ವರು,** ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಜನರಲ್ ಮೆನೇಜರರು ಮತ್ತು ಎಮ್. ಶ್ರೀನಿವಾಸ ರಾಮಚಂದ್ರ ಕುಡ್ವ ಎಂಡ್ ಸನ್ಸ್, ಲಿಮಿಟೆಡ್ ಇವರ ಮೆನೆಜಿಂಗ್ ಡ್ಯಾರೆಕ್ಟರರು
5. **ಕಿನ್ನಿ ಶೇಷಗಿರಿ ರಾಯರು**—ಜಮೀನುದಾರರು ಮತ್ತು ಬೇಂಕರರು ಶಂಕರ್ ವಿಠ್ಠಲ್ ಕಂಪನಿಯ ಮೆನೆಜಿಂಗ್ ಡ್ಯಾರೆಕ್ಟರರು
6. **ಉಳ್ಳಾಲ ಶ್ರೀನಿವಾಸ ಮಲ್ಯರು**—ಸಾಹುಕಾರರು, ಕೆನರಾ ಬೇಂಕಿನ ಡ್ಯಾರೆಕ್ಟರರು
7. **ಮಣೇಲ್ ಅಣ್ಣಪ್ಪ ನಾಯಕರು**—ಸಾಹುಕಾರರು ಮತ್ತು ಬೇಂಕರರು, ಮಂಗಳೂರು ಮಿಲ್ಸ್ ಲಿಮಿಟೆಡ್ ಇದರ ಡ್ಯಾರೆಕ್ಟರರು
8. **ಸೂಜೇರ್ ಪುಂಡಲೀಕ ನಾಯಕರು**—ಸಾಹುಕಾರರು, ಮಂಗಳೂರು ಮಿಲ್ಸ್ ಲಿಮಿಟೆಡ್ ಇದರ ಡ್ಯಾರೆಕ್ಟರರು, ಮುಂಬಾಯಿ ಪೀರ್‌ಭಾಯಿ ಬಿಲ್ಡಿಂಗಿನಲ್ಲಿರುವ ಕಮಿಶನ್ ಏಜಂಟರು
9. **ಎಮ್. ವೆಂಕಟೇಶ ಪೈಗಳವರು**—ಜಮೀನುದಾರರು ಮತ್ತು ಬೇಂಕರರು, ಕೆನರಾ ಬೇಂಕ್ ಮತ್ತು ಮಂಗಳೂರು ಇಲೆಕ್ಟ್ರಿಕ್ ಸಪ್ಲಾಯಿ ಕಂಪೆನಿಯ ಡ್ಯಾರೆಕ್ಟರರು

ಬೇಂಕುಗಳು.

ದಿ ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಉಡುಪಿ ಲಿಮಿಟೆಡ್, ಉಡುಪಿ.

ಲೆಕ್ಕ ಪರಿಶೋಧಕರು.

ಮಹಾರಾಜೇಶ್ರೀ ಬಿ. ಶಾಂತರಾಮ ರಾಯರು, ಬಿ ಎ, ಜಿ ಡಿ, ಆರ್ ಎ

ರಿಜಿಸ್ಟರ್ಡ್ ಆಫೀಸು

ಕಂಪೆನಿಯ ರಿಜಿಸ್ಟರ್ ಮಾಡಲ್ಪಟ್ಟ ಆಫೀಸು, ಸಿ ಪಿ ಸಿ ಬಿಲ್ಡಿಂಗ್, ಕೊಡಿಯಾಲಬೈಲು, ಮಂಗಳೂರು.

ವಿವರ.

1932ನೇ ಇಸವಿಯಲ್ಲಿ ಸರ್ಕಾರದವರು ಸಕ್ಕರೆ ಕೈಗಾರಿಕೆಗೆಯ ಸಂರಕ್ಷಣಾತ್ಮಕ ಮಸೂದೆಯನ್ನು ಮಂಜೂರು ಮಾಡಿದ ನಂತರ, ಸಕ್ಕರೆ ಕೈಗಾರಿಕೆಗೆ—ಹಿಂದುಸ್ಥಾನದಲ್ಲಿ ಈ ವರೆಗೆ ಇತರ ಯಾವ ಕೈಗಾರಿಕೆಗೂ ದೊರೆಕದಂತಹ—ಪ್ರೋತ್ಸಾಹವು ದೊರಕಿರುತ್ತದೆ ಪರಿಣಾಮವಾಗಿ 1931-32ನೇ ವರ್ಷದಲ್ಲಿ 32 ಕಾರ್ಖಾನೆಗಳಿದ್ದದ್ದು 1935—36ರಲ್ಲು 154 ಕಾರ್ಖಾನೆಗಳಾಗಿವೆ ಈ ಅಭಿವೃದ್ಧಿಯು ಹೆಚ್ಚಾಗಿ ಉತ್ತರ ಹಿಂದೂಸ್ಥಾನದಲ್ಲಿಯೇ ಆಗಿರುತ್ತದೆ—ಪೈಕಿ ಸಂಯುಕ್ತಪ್ರಾಂತ್ಯ ಮತ್ತು ಬಿಹಾರಿನಲ್ಲಿ ಮಾತ್ರವೇ 111 ಕಾರ್ಖಾನೆಗಳಿವೆ ಇದರೊಡನೆ ದಕ್ಷಿಣ ಹಿಂದೂಸ್ಥಾನದಲ್ಲಿ ಬರೇ 21 ಕಾರ್ಖಾನೆಗಳು—ಅವುಗಳು ಕೂಡಾ ಉತ್ತರ ಹಿಂದೂಸ್ಥಾನದ ಎಷ್ಟೋ ಕಾರ್ಖಾನೆಗಳಿಗಿಂತ ಬಹಳ ಚಿಕ್ಕವುಗಳಾಗಿವೆ. ಆದುದರಿಂದ ಸಕ್ಕರೆ ಕೈಗಾರಿಕೆಯ ಅಭಿವೃದ್ಧಿಯ ಮಟ್ಟಿಗೆ ದಕ್ಷಿಣ ಹಿಂದೂಸ್ಥಾನವು ಬಹಳ ಹಿಂದೆ ಬಿದ್ದಿರುತ್ತದೆಂಬುದು ಒಡೆದು ಕಾಣುತ್ತದೆ

ಪಶ್ಚಿಮ ಕರಾವಳಿಯಲ್ಲಿ ಕೊಯಂಬತ್ತೂರು ಮತ್ತು ತಿರುವಾಂಕೂರು ಜಿಲ್ಲೆಗಳಲ್ಲಿ ಬರೇ ಎರಡು ಕಾರ್ಖಾನೆಗಳಿವೆ ಇವುಗಳು ತಯಾರಿಸುವ ಸಕ್ಕರೆಯು ಇವುಗಳ ಸ್ಥಳೀಕ ಆವಶ್ಯಕತೆಗಳಿಗೆ ಕೂಡ ಸಾಕಾಗುವುದಿಲ್ಲ. ಆದುದರಿಂದ ಪಶ್ಚಿಮ ಕರಾವಳಿಯಲ್ಲಿ ಒಂದು ಕಾರ್ಖಾನೆಯನ್ನೇರ್ಪಡಿಸಲಿಕ್ಕೆ ತುಂಬಾ ಅನುಕೂಲತೆ ಇದೆಯೆಂಬುದು ಸ್ಪಷ್ಟವಾಗುತ್ತದೆ.

ಕಲ್ಯಾಣಪುರ ಹೊಳೆಯ ದಡದಲ್ಲಿಯೇ ಇದ್ದ ಒಂದು ಸ್ಥಳವನ್ನು ತೆಗೆದುಕೊಳ್ಳುವ ಸಂದರ್ಭವು ಕಂಪೆನಿಯ ಸುಯೋಗದಿಂದ ಒದಗಿರುತ್ತದೆ ಆ ಸ್ಥಳವು ಸ್ವರ್ಣನದಿ, ಮಡಿಸಾಲ ಹೊಳೆ, ಸೀತಾನದಿ ಮತ್ತು ಸಂಕದ ಹೊಳೆ, ಇವುಗಳ ಸಂಗಮದ ಹತ್ತಿರದಲ್ಲಿಯೇ ಇದ್ದು, ಹದಿನೈದು ಮೈಲುಗಳ ವರೆಗೆ ಕಬ್ಬಿನ ತೋಟಗಳಿಗೆ ಜಲಮಾರ್ಗದ ಪ್ರಯೋಜನ ಉಳ್ಳದ್ದಾಗಿದೆ ಉತ್ತಮ ತರಗತಿಯ ಬೆಲ್ಲ ತಯಾರಿಸುವುದರಲ್ಲಿ ಹೆಸರುವಾಸಿಯಾದ ಬಾರ್ಕೂರು, ಆರೂರು, ಬಾರ್ಕೂರು ಮೊದಲಾದ ಹಳ್ಳಿಗಳು ಈ ನದಿಗಳ ದಡದಲ್ಲಿರುತ್ತವೆ ಈ ಹಳ್ಳಿಗಳಲ್ಲಿಯೂ, ಈ ನದಿಗಳ ದಡದಲ್ಲಿಯೂ—ಡಿಪ್ಯುಟಿ ಡ್ಯಾರೆಕ್ಟರ್ ಒಫ್ ಎಗ್ರಿಕಲ್ಚರ್ ತಲಚೇರಿ, ಇವರು ನಮಗೆ ತಿಳಿಸಿದ ಪ್ರಕಾರ ಶೇಕಡಾ 15ರಿಂದ 16ರ ವರೆಗೆ ಸಕ್ಕರೆಯ ಸತ್ವವಿರುವ ಕೆಂಪು ಮೋರಿಸ್ ಕಬ್ಬು ಬೆಳೆಸಲ್ಪಡುತ್ತದೆ ಈ ಸ್ಥಳದಿಂದ ಮಂಗಳೂರು ಬಂದರಕ್ಕೂ ಮಂಗಳೂರು ರೈಲ್ವೆ ಸ್ಟೇಶನಿಗೂ ದೋಣಿಗಳ ಮೂಲಕ ಹೋಗುವ ಸುಲಭವಾದ ಸಮುದ್ರಮಾರ್ಗವಿದೆ ಆದುದರಿಂದ ಹೆಚ್ಚು ಸಕ್ಕರೆ ಸತ್ವವಿರುವ ಕಬ್ಬನ್ನು ಕಾರ್ಖಾನೆಗೂ, ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟ ಸಾಮಾನುಗಳನ್ನು ಬಂದರ ಮತ್ತು ರೈಲ್ವೆ ಸ್ಟೇಶನುಗಳಿಗೂ ಕಡಿಮೆ ಖರ್ಚಿನಲ್ಲಿ ಕೊಂಡೊಯ್ಯಲಿಕ್ಕೆ ಅನುಕೂಲವಿದೆ ಈ ವಿಷಯಗಳಲ್ಲಿ ಈ ಸ್ಥಳವು ಆದರ್ಶ ಸ್ಥಳವಾಗಿದೆಯೆಂದು ನೆನಸಲಾಗಿದೆ

ಅಲ್ಲದೆ ನಮ್ಮ ಡ್ಯಾರೆಕ್ಟರರಾಗಿರುವ ಮತ್ತು ದೊಡ್ಡ ಜಮೀನುದಾರರಾದ ಮ॥ ರಾ॥ ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತ್ ಮತ್ತು ಕಿನ್ನಿ ಶೇಷಗಿರಿ ರಾವ್ ಇವರ ಸಹಕಾರದಿಂದ ಕಾರ್ಖಾನೆಗೆ ಸಾಕಷ್ಟು ಕಬ್ಬನ್ನು ಕ್ರಮವಾಗಿ ಒದಗಿಸಲು ವ್ಯವಸ್ಥೆಗೊಳಿಸಬಹುದಾಗಿದೆ

ಕಂಪೆನಿಯು ಪ್ರಥಮ ವರ್ಷದಲ್ಲಿ ದಿನವಂದಕ್ಕೆ 50 ಟನ್ನು ಕಬ್ಬನ್ನು ಗಾಣಕ್ಕೆ ಹಾಕುವ ಸಣ್ಣ ಕಾರ್ಖಾನೆಯೊಡನೆ ಆರಂಭಿಸಿ, ಕ್ರಮೇಣ 150 ಟನ್ನು ವರೆಗೆ ಗಾಣಕ್ಕೆ ಹಾಕುವಂತೆ ಏರ್ಪಡಿಸಬೇಕಾಗಿ ಯೋಚಿಸಿಯದೆ ಮೊದಲಿನ ವರ್ಷದಲ್ಲಿ ಕಾರ್ಖಾನೆಯು 120 ದಿನ ಕೆಲಸಮಾಡಿ, ಮುಂದೆ ವರ್ಷಾವಧಿ ಕೆಲಸದ ದಿನಗಳನ್ನು 150ಕ್ಕೆ ಏರಿಸಬಹುದಾಗಿ ನಿರೀಕ್ಷಿಸಲಾಗಿಯದೆ ಕಾರ್ಖಾನೆಯು ಪ್ರಥಮದ ವರ್ಷ 600 ಟನ್ನು ಸಕ್ಕರೆಯನ್ನು ತಯಾರಿಸಿ, ಕಟ್ಟಕಡೆಗೆ 2200 ಟನ್ನು ಸಕ್ಕರೆ ತಯಾರಿಸುವ ಶಕ್ತಿಯುಳ್ಳದ್ದಾಗಿದೆ. ನಮ್ಮ ಜಿಲ್ಲೆಯು ಪ್ರತಿವರ್ಷವೂ ಸುಮಾರು 4000 ಟನ್ನು ಸಕ್ಕರೆಯನ್ನು ಆಮದು ಮಾಡುತ್ತದೆ ಆದುದರಿಂದ ಈ ಕಾರ್ಖಾನೆಯಲ್ಲಿ ತಯಾರಾಗುವ ಸಕ್ಕರೆಯು ಸ್ಥಳೀಕ ಆವಶ್ಯಕತೆಗಳಿಗೆನೇ ಸಾಕಾಗಲಾರದು ಈ ದೆಸೆಯಿಂದ ಮಾರಾಟದ ತೊಂದರೆಗಳೂ ಇರಲಾರವು

ಯಂತ್ರ ಸಾಮಗ್ರಿಗಳ ಮೇಲೆ ನ್ಯಾಯವಾದ ಡಿಪ್ರಿಸಿಯೇಶನನ್ನೂ ಇತರ ಖರ್ಚುಗಳನ್ನೂ ಕಳೆದು ಕಾರ್ಖಾನೆಯು ಒಂದು ಟನ್ನು ಸಕ್ಕರೆಯ ಮೇಲೆ ರೂಪಾಯಿ 30ನ್ನು ಏಕ್ ಮುನಾಫೆಯಾಗಿ ಹುಟ್ಟಿಸಬಹುದಾಗಿ ನಿರೀಕ್ಷಿಸಲಾಗಿದೆ ಪ್ರಥಮ ವರ್ಷದಲ್ಲಿ 1½ ಲಕ್ಷದ ಮೂಲಧನದ ಮೇಲೆ ಸಕ್ಕರೆ ತಯಾರಿಯು 600 ಟನ್ನೆಂದು ತೆಗೆದುಕೊಂಡಲ್ಲಿ, 18,000 ಏಕ್ ಮುನಾಫೆಯನ್ನು ನಿರೀಕ್ಷಿಸಬಹುದು ಈ ಪೈಕಿ ರಿಜರ್ವ ಫಂಡಿನ ಬಗ್ಗೆ ಶೇಕಡಾ 25ನ್ನು ಪ್ರತ್ಯೇಕಿಸಿ, ಶೇಕಡಾ 9ರ ಡಿವಿಡೆಂಡನ್ನು ಪಾಲುದಾರರಿಗೆ ಹಂಚಬಹುದು ಇದು ಬರೆ 50 ಟನ್ನು ಕಬ್ಬನ್ನು ಗಾಣಹಾಕುವ ಆಧಾರದ ಮೇಲೆ ಲೆಕ್ಕ

ಮಾಡಿದ್ದಾಗಿದೆ ಇನ್ನೂ ಹೆಚ್ಚು ಕಬ್ಬನ್ನು ಗಾಣ ಹಾಕಿದ್ದಲ್ಲಿ, ಸಕ್ಕರೆ ತಯಾರಿಯಲ್ಲಿ ಖರ್ಚಿನ ದಾಮಾಶಾಯಿಯಲ್ಲಿ ಉಳಿತಾಯವಾಗಿ, ಮೂಲಧನದ ಮೇಲಿನ ಲಾಭವು ಇನ್ನೂ ಹೆಚ್ಚಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಮಳೆಗಾಲದಲ್ಲಿ ಸಕ್ಕರೆ ಕಾರ್ಖಾನೆಯು ಕೆಲಸವಿಲ್ಲದಿದ್ದಾಗ, ಧೂಪದ ಕ್ಯಾಗಳನ್ನು ಒಣಗಿಸುವ ಆಲೋಚನೆಯಿದೆ ಈ ಬಗ್ಗೆ, ನಾವು ತೆಗೆದುಕೊಳ್ಳಬೇಕೆಂದಿರುವ ಕಾರ್ಖಾನೆಯಲ್ಲಿ ಒಂದು ದೊಡ್ಡ Bronwell Dryer ಎಂಬ ಒಣಗಿಸುವ ಯಂತ್ರವೂ, Chulla Dryer ಎಂಬ ಇನ್ನೊಂದು ಒಣಗಿಸುವ ಯಂತ್ರವೂ ಇದೆ ಒಣಗಿಸಿದ ಕ್ಯಾಗಳ ಬಗ್ಗೆ ಗಿರಾಕಿಗಳಿವೆ ಮತ್ತು ಹೆಚ್ಚಿನ ಲಾಭದಲ್ಲಿ ಒಣಗಿದ ಕ್ಯಾಗಳನ್ನು ಮಾರಬಹುದುದಾಗಿದೆ

ಅಲ್ಲದೆ, ಶರಾಬು, ಸ್ಪಿರಿಟು ಮತ್ತು ಮೋಟರಕಾರಿಗೆ ಆಗುವ ಪೆಟ್ರೊಲಿನಂತಹ ದ್ರವವನ್ನು ತಯಾರಿಸಲು ಸರ್ಕಾರದಿಂದ ಲ್ಯಾಸೆನ್ಸ್ ಪಡೆಯುವ ಸಂಭವದ ವಿಷಯವನ್ನು ಸಹ ನಾವು ಪರಿಗಣಿಸಲಿಲ್ಲ ಇವುಗಳಲ್ಲಿ ಯಾವುದಾದರೊಂದರ ತಯಾರಿಯ ಬಗ್ಗೆ ಲ್ಯಾಸೆನ್ಸು ಹೊಂದುವುದರಲ್ಲಿ ನಮ್ಮ ಪ್ರಯತ್ನಗಳು ಸಫಲವಾದರೆ ಸಕ್ಕರೆ ತಯಾರಿಯಲ್ಲಿ ನಮಗೆ ಬೆಲೆ ಇಲ್ಲದೆ ಸಿಕ್ಕುವ Molasses ಎಂಬ ದ್ರವವನ್ನು ಬಹಳ ಲಾಭಕರವಾದ ರೀತಿಯಲ್ಲಿ ಉಪಯೋಗಿಸಬಹುದು

ಕಾರ್ಖಾನೆಯು ಸ್ಥಾನವಿಶೇಷದಿಂದ ಕಾರ್ಖಾನೆಗೆ ಹಲವು ಕೈಗಾರಿಕೆಗಳ ಅನುಕೂಲವಾದ ಸಾಮಾನುಗಳು ದೊರಕಲನುಕೂಲವಾಗಿ, ಭತ್ತದಿಂದ ಅಕ್ಕಿ ತಯಾರಿಸುವುದು, ತೆಂಗಿನೆಣ್ಣೆ ತಯಾರಿಸುವುದು, ಹುರಿಹಗ್ಗದ ಕೈಗಾರಿಕೆಯನ್ನೇರ್ಪಡಿಸುವುದು ಮೊದಲಾದ ಹಲವು ತರದ ಕೈಗಾರಿಕೆಗಳಿಂದ ಕಾರ್ಖಾನೆಯಲ್ಲಿ ಕೆಲಸಗಳನ್ನು ಹೆಚ್ಚಿಸಬಹುದು

ಎಲ್ಲೊಟ್‌ಮೆಂಟ್.

ಕಂಪೆನಿಯ ಆರ್ಟಿಕಲ್ಸ್ ಒಫ್ ಎಸೋಸಿಯೇಶನ್ ಪ್ರಕಾರ, ಒಂದು ಲಕ್ಷ ರೂಪಾಯಿ ಮೌಲ್ಯದ 10,000 ಪಾಲುಗಳು ಭರ್ತಿಯಾಗುವ ಮುಂಚೆ ಪಾಲುಗಳನ್ನು ಎಲ್ಲೊಟ ಮಾಡೋಣಾಗುವುದಿಲ್ಲ

ಸ್ಥಾಪಕರಿಗೆ ಪ್ರತಿಫಲ.

ಕಂಪೆನಿಯನ್ನು ಸ್ಥಾಪಿಸುವ ಬಗ್ಗೆ ಹಣ ಕೊಟ್ಟಿರುವುದಾಗಲೀ, ಕೊಡುವುದಾಗಲೀ ಇರುವುದಿಲ್ಲ

ಆರಂಭದ ಖರ್ಚು

ಕಂಪೆನಿಗೆ ತಗಲುವ ಆರಂಭದ ಖರ್ಚು ರೂಪಾಯಿ 2500ನ್ನು ಮೀರಲಾರದೆಂದು ಅಂದಾಜು ಮಾಡಲಾಗಿಯದೆ

ಡ್ಯಾರೆಕ್ಟರರು.

ಡ್ಯಾರೆಕ್ಟರರಾಗಲಿಕ್ಕೆ ಮತ್ತು ಡ್ಯಾರೆಕ್ಟರರು ಹೊಂದತಕ್ಕ ಪ್ರತಿಫಲದ ಬಗ್ಗೆ, ಆರ್ಟಿಕಲ್ಸ್ ಒಫ್ ಎಸೋಸಿಯೇಶನಿನಲ್ಲಿ ಕೆಳಗೆ ಕಾಣಿಸಿದ ಕ್ರಮಗಳಿರುತ್ತವೆ

(83) 3000 ರೂಪಾಯಿ ಮೌಲ್ಯ ತೆತ್ತ 300 ಪಾಲುಗಳನ್ನು ಪಡೆಕೊಂಡಿರುವ ಪ್ರತಿಯೊಬ್ಬ ಪಾಲುದಾರನೂ ಡ್ಯಾರೆಕ್ಟರನಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರುತ್ತಾನೆ

(85) ಡ್ಯಾರೆಕ್ಟರರು ಮೀಟಿಂಗಿನಲ್ಲಿ ಹಾಜರಾದ ಬಗ್ಗೆ, ಪ್ರತಿ ಮೀಟಿಂಗಿಗೆ ರೂಪಾಯಿ 5ಕ್ಕೆ ಮೀರದ ಡ್ಯಾರೆಕ್ಟರರು ನಿರ್ಣಯಿಸಬಹುದಾದ ಮೊಬಲಗನ್ನು ಪಡೆಯಲಿಕ್ಕೂ ಅಥವಾ ಆಗಾಗ್ಗೆ ಜನರಲ್ ಮೀಟಿಂಗಿನಲ್ಲಿ ಕಂಪೆನಿಯು ನಿರ್ಣಯಿಸಬಹುದಾದ ಪ್ರತಿಫಲವನ್ನು ಹೊಂದಲಿಕ್ಕೂ ಪ್ರತಿ ಡ್ಯಾರೆಕ್ಟರನು ಅರ್ಹನಾಗಿರತಕ್ಕದ್ದು

(86) ಬೋರ್ಡಿನಲ್ಲಿ ನಿರ್ಣಯಿಸಬಹುದಾದ ದರದ ಪ್ರಕಾರ ಪ್ರಯಾಣದ ಭತ್ತೆಯನ್ನು ಹೊಂದಲು ಡ್ಯಾರೆಕ್ಟರರು ಅರ್ಹರಾಗಿರುತ್ತಾರೆ.

ಡ್ಯಾರೆಕ್ಟರರ ಸಂಬಂಧ.

1 ಮಹಾರಾಜಶ್ರೀ ಎಚ್ ಲಕ್ಷ್ಮೀನಾರಾಯಣ ಕಾಮತ್, ಬಿ. ವೈಕುಂಠ ಬಾಳಿಗ ಮತ್ತು ವಾಮನ್ ಕುಡುವಾ (ಡ್ಯಾರೆಕ್ಟರರು) ಮತ್ತು ಎಮ್ ಶ್ರೀಧರ ಕುಡುವಾ ಇವರು ಕೂಡಿ, ಕಲ್ಯಾಣಪುರ ಧೂಪದ ಕಾರ್ಖಾನೆ ಎಂದು ಕರೆಯಲ್ಪಡುತ್ತಿದ್ದ ಕಾರ್ಖಾನೆಯನ್ನು ರೂಪಾಯಿ 4750—0—0ಕ್ಕೆ ಉಡುಪಿ ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ತಾರೀಕು 22—10—1935ರ ನಂಬ್ರ 1846ನೇಗೆ ರಿಜಿಸ್ಟರಾದ ಕ್ರಯಚೀಟಿನ ಪ್ರಕಾರ ಕ್ರಯಕ್ಕೆ ಪಡೆದಿರುತ್ತಾರೆ. ಆ ಮೇಲೆ ಅದಕ್ಕೆ ರೂಪಾಯಿ 750—0—0ರಷ್ಟು ದುರುಸ್ತಿ ಮೊದಲಾದ ಬಗ್ಗೆ ಅವರಿಗೆ ಖರ್ಚು ತಗಲಿರುತ್ತದೆ. ಕ್ರಯಚೀಟು ಎಚ್ ಲಕ್ಷ್ಮೀನಾರಾಯಣ ಕಾಮತರ ಹೆಸರಿನಲ್ಲಿರುತ್ತದೆ ಆರ್ಟಿಕಲ್ 4 ಹೀಗೆ ಇದೆ—ಮ। ರಾ। ರಾ। ಎಚ್ ಲಕ್ಷ್ಮೀನಾರಾಯಣ ಕಾಮತರು ಇತ್ತೀಚೆಗೆ ಕ್ರಯಕ್ಕೆ ಪಡೆದಿರುವ, ಕಲ್ಯಾಣಪುರದಲ್ಲಿರುವ ಕಾರ್ಖಾನೆ ಮತ್ತು ಸ್ಥಳ ಕಟ್ಟೋಣಗಳನ್ನು ಅವರಿಂದ ಕ್ರಯಕ್ಕಾಗಲಿ, ಮೂಲಗೇಣಿಗಾಗಲಿ ಪಡೆಕೊಳ್ಳಲು ಕಂಪೆನಿಯು ಕೂಡಲೇ ಅವರೊಡನೆ ಕರಾರನ್ನು ಮಾಡತಕ್ಕದ್ದು

2 ಮೇಲಿನ ಹೊರತು ಮತ್ತು ಆರ್ಟಿಕಲ್ಸ್ ಒಫ್ ಎಸೋಸಿಯೇಶನಿನ ಕ್ರಮಗಳಿಗನುಸಾರವಾಗಿ ಅವರಿಗೆ ಹಕ್ಕಿರುವ ಮೀಟಿಂಗ್ ಹಾಜರಿಯ ಪ್ರತಿಫಲ ಮತ್ತು ಇತರ ಏನೊಂದು ಭತ್ತೆಯು ಹೊರತು ಡ್ಯಾರೆಕ್ಟರರಿಗೆ ಕಂಪೆನಿಯಲ್ಲಿ ಬೇರಾವತರದ ಲಾಭವು ಇರುವುದಿಲ್ಲ

ಕಂಪೆನಿಯ ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಒಫ್ ಎಸೋಸಿಯೇಶನ್ ಮತ್ತು ಎಚ್. ಲಕ್ಷ್ಮೀನಾರಾಯಣ ಕಾಮತರ ಹೆಸರಿನ ಮೇಲೆ ಕಾಣಿಸಿದ ಕ್ರಯಚೀಟು ಇವುಗಳನ್ನು ತಾ 31—1—1936ರ ವರೆಗೆ ಬೆಳಿಗ್ಗೆ ಘಂಟೆ 8ರಿಂದ 12ರ ವರೆಗೂ ಮಧ್ಯಾಹ್ನ ಘಂಟೆ 2ರಿಂದ 5ರ ವರೆಗೂ ಕೊಡಿಯಾಲಬೈಲಿನಲ್ಲಿರುವ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ನೋಡಬಹುದು

ಕಮಿಶನ್ನು

ಕಂಪೆನಿಯು ಪಾಲು ಮಾರಾಟದ ಬಗ್ಗೆ ಕಂಪೆನಿಯಿಂದ ಅಧಿಕಾರ ಹೊಂದಿದ ಏಜಂಟರಿಗೆ ಅಥವಾ ದಲಾಲರಿಗೆ ಶೇಕಡಾ 5ರ ಕಮಿಶನನ್ನು ಕೊಡುವುದು

ಪಾಲುಗಳ ಅರ್ಜಿಯ ಫೋರ್ಮುಗಳು (1) ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿಯೂ (2) ಕೆನರಾ ಬೇಂಕ್ ಲಿಮಿಟೆಡ್ ಮತ್ತು ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಇವರ ಎಲ್ಲಾ ಶಾಖೆಗಳಲ್ಲಿಯೂ ದೊರಕುವುವು. ಶೇರುಗಳ ಅರ್ಜಿಯ ಸಂಬಂಧದ ಐವೇಜುಗಳನ್ನು ಕಂಪೆನಿಯ ಪರವಾಗಿ ಮೇಲೆ ಕಾಣಿಸಿದ ಬೇಂಕುಗಳು ಇತರ ಯಾವ ಖರ್ಚನ್ನೂ ಕೇಳದೆ ಸ್ವೀಕರಿಸುವುವು ಎಲ್ಲೊಟ್‌ಮೆಂಟ್ ಆಗದೆ ಇದ್ದರೆ ಕೊಟ್ಟ ಡಿಪೊಜಿಟ್ ಐವೇಜನ್ನು ಪೂರಾ ವಾಪಾಸು ಕೊಡೋಣಾಗುವುದು ಮತ್ತು ಅರ್ಜಿ ಮಾಡಿದ ಶೇರು ಸಂಖ್ಯೆಗಿಂತ ಎಲ್ಲೊಟ್ ಆದ ಶೇರುಸಂಖ್ಯೆಯು ಕಡಿಮೆಯಾದರೆ, ಆ ಸಂಬಂಧ ಕಂಪೆನಿಯೊಡನೆ ಉಳಿಯುವ ಡಿಪೊಜಿಟ್ ಐವೇಜನ್ನು ಎಲ್ಲೊಟ್ ಆದ ಶೇರುಗಳ ಬಗ್ಗೆ ಬರಬೇಕಾದ ಐವೇಜಿನ ಬಗ್ಗೆ ವಜಾ ತೆಗೆದು, ಇನ್ನೂ ಬಾಕಿ ಉಳಿದಲ್ಲಿ ಅರ್ಜಿಮಾಡಿದವರಿಗೇನೆ ವಾಪಾಸು ಕೊಡೋಣಾಗುವುದು ಕೇಳಿದ ತಾರೀಕಿಗೆ ಶೇರಿನ ಬರಬೇಕಾದ ಐವೇಜನ್ನು ಕೊಡದೆ ಇದ್ದಲ್ಲಿ, ಮೊದಲು ಕೊಟ್ಟ ಐವೇಜನ್ನು ವಜಾ (forfeit) ಮಾಡೋಣಾಗುವುದಲ್ಲದೆ ಎಲ್ಲೊಟ್‌ಮೆಂಟನ್ನೂ ವಜಾ (cancel) ಮಾಡೋಣಾಗುವುದು.

ತಾರೀಕು 7ನೇ ಜನವರಿ 1936.

ಇಟೆಲಿಗೂ ಚೀನಾಕ್ಕೂ ಒಪ್ಪಂದವಾಯಿತೆ?

ಜಪಾನಿನ ವಿಶಿಷ್ಟ ಪ್ರಗತಿ

೫೦೦೦ ಜನರ ಮೇಲೆ ವಿಷಪ್ರಯೋಗ!

೫೫೪ ಪೌಂಡು ಭಾರವುಳ್ಳ ವ್ಯಕ್ತಿ!

ನಿತ್ಯವೂ ಚಂದ್ರನ ಬೆಳಕು!

ಜಾಪಾನು ಮತ್ತು ಜಾಪಾನೀಯರು

ಸಿಲೋನಿನ ದ್ವೀಪಕ್ಕೆ "ಪೌರ್ವಾತ್ಯದ ಮುತ್ತು" ಎಂಬ ಬಿರುದು ಹೇಗೆ ಒಪ್ಪುತ್ತದೊ, ಹಾಗೆಯೆ ಜಪಾನಿಗೆ "ಸೃಷ್ಟಿಕರ್ತನ ಭೂಮಿಯ ಮೇಲಿನ ಸ್ವರ್ಗ" ಎಂಬುದು ಸರಿಯಾದ ಹೆಸರು. ಸೃಷ್ಟಿ, ಕಲೆ, ವಿಜ್ಞಾನ, ಸಂಸ್ಕೃತಿ, ನಾಗರೀಕತೆ ಇವೆಲ್ಲವೂ ಒಂದಾಗಿ, ಜಾಪಾನು ದೇಶವನ್ನು ಒಂದು ವಿಶಿಷ್ಟ ಪ್ರದೇಶವನ್ನಾಗಿ ಮಾಡಿರುತ್ತದೆ, ಜಪಾನಿಯರಿಗಿಂತ ವಿಶೇಷ ಸಂಸ್ಕೃತಿಹೊಂದಿದ ನವನಾಗರೀಕರಾದ ಜನರಿಂದ ಕೂಡಿದ ಮತ್ತು ಸೃಷ್ಟಿ, ಕಲೆ, ವಿಜ್ಞಾನ, ಸಂಸ್ಕೃತ ಇತ್ಯಾದಿಗಳ ಕಲೆಯೊಳಿಕೆ, ಇಷ್ಟು ಆಶ್ಚರ್ಯವನ್ನು ಉಂಟುಮಾಡಿದ ಇನ್ನಾವ ದೇಶಗಳೂ ಇರಲಿಕ್ಕಿಲ್ಲ. ಅವರು ಈ ವಿಶೇಷ ತರದ ಪ್ರಗತಿಯನ್ನು ಹೇಗೆ ಹೊಂದಿದರು. ಅನ್ಯ ಜನಾಂಗಗಳನ್ನು ಬೆರಗುಗೊಳಿಸುವಂಥ ಸ್ಥಿತಿಯನ್ನು ಸಂಪಾದಿಸಿದ ಜಪಾನಿಯರಲ್ಲಿ ಯಾವ ವಿಶೇಷ ಗುಣಗಳಿವೆ, ಇವೇ ಮೊದಲಾದ ಜಪಾನನ್ನು ಶ್ರೇಯಸ್ಕರವಾಗಿ ಮಾಡಿದ ಕಾರಣಗಳನ್ನು ತಿಳಿಯಲು ಅನೇಕರು ಕುತೂಹಲಪಡಿಯಬಹುದು. ಮಿ। ಎಚ್. ಜಿ. ವೆಲ್ಸ್ ಅವರು, ಪ್ರಪಂಚದ ಚರಿತ್ರೆ ಎಂಬ ತನ್ನ ಕೃತಿಯಲ್ಲಿ, ಜಪಾನಿಯರ ಕುರಿತು ಹೀಗೆನ್ನುವರು—"ಪಾಶ್ಚಾತ್ಯರಂತೆ ಸಂಸ್ಕೃತಿಹೊಂದಲು ಜಪಾನೀಯರು ಆಶ್ಚರ್ಯಕರ ಶಕ್ತಿಯನ್ನೂ ಬುದ್ಧಿವಂತಿಕೆಯನ್ನೂ ಉಪಯೋಗಿಸಿದರು. ಭೂಮಂಡಲದ ಚರಿತ್ರೆಯಲ್ಲಿ ಜನಾಂಗಗಳು ಈ ರೀತಿ ಪ್ರಗತಿಹೊಂದಿದ ಘಟನೆ ಬೇರೊಂದಿಲ್ಲ. 1886ರಲ್ಲಿ ಬಹಳ ಕೀಳಾಗಿದ್ದ ಈ ಜನಾಂಗವು 1899ರಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ಹೊಂದಿದವರಾಗಿ ಪಾಶ್ಚಾತ್ಯದ ಮಹಾಪ್ರಭೃತಿದ ಜನಾಂಗಗಳೊಡನೆ ಸರಿಸಮಾನತೆಯನ್ನು ಪಡೆದಿರುತ್ತದೆ. ಏಸ್ಯಖಂಡವು ಯಾವ ತರದಲ್ಲೂ ಯುರೋಪು ಖಂಡಗಿಂತ ಹಿಂದುಳಿಯುವುದಿಲ್ಲವೆಂದೂ ಅದು ಯುರೋಪು ಖಂಡವನ್ನು ಅನುಸರಿಸುತ್ತದೆ ಮಾತ್ರವಲ್ಲದೆ ಅದಕ್ಕಿಂತಲೂ ಮುಂದೆಸಾಗಲೂ ಬಹುದೆಂದು ಜಪಾನೀಯರಿಂದ ವ್ಯಕ್ತವಾಗಿರುತ್ತದೆ. ಜಪಾನೀಯ ಪ್ರಗತಿಯು ಪಾಶ್ಚಾತ್ಯರ ಪ್ರಗತಿಯ ಕೀರ್ತಿಯನ್ನು ಅಲ್ಲಗಳೆಯುವಂತಿದೆ"

~~ಚೀನಾ-ಇಟೇಲಿ ಒಪ್ಪಂದ~~

ಚೀನಾದೇಶದ ಹೊಂಕೊಂಗಿನಿಂದ ಕಳೆದ ದಶಂಬರ 20ರಲ್ಲಿ, ಚೀನಿಯರಿಗೂ, ಇಟೇಲಿಯನರಿಗೂ ಒಂದು ಗುಪ್ತವಾದ ಒಪ್ಪಂದವಾಗಿರುತ್ತದೆಂದೂ, ತಂತಿಮೂಲಕ ವಾರ್ತೆ ಬಂದಿರುತ್ತದೆ. ಈ ವಾರ್ತೆಯಿಂದ ಅನೇಕ ಜನಾಂಗಗಳು ಆಶ್ಚರ್ಯಚಕಿತರಾಗಿರುತ್ತಾರೆ. ಈ ಒಪ್ಪಂದದ ಶರ್ತಗಳ ಪ್ರಕಾರ 1939ರ ಒಳಗೆ ಚೀನಿಯರ ಸೈನ್ಯಮಂಡಳ, ನೌಕಾಮಂಡಳ, ವಾಯುಬಲ ಇತ್ಯಾದಿ ಸಂಗ್ರಾಮ ಸಮಸ್ಯೆಗಳನ್ನು ಇಟೇಲಿಯಾನರು ಸಂಪೂರ್ಣ ಸುಧಾರಣೆ ಮಾಡಿಕೊಡಬೇಕಾಗಿದೆ.

ಈ ಘಟನೆಯು ನಡೆಯಲು ಯಾವ ಆತಂಕಗಳಿಲ್ಲದಿದ್ದರೂ, ಇದು ಸಹಜವಾದುದಲ್ಲ. ಯಾಕಂದರೆ, ಜಪಾನೀಯರು ಯಾವತ್ತೂ ಪಾಶ್ಚಾತ್ಯ ಜನಾಂಗಗಳು ಚೀನಾದ ವ್ಯವಹಾರದಲ್ಲಿ ಭಾಗವಹಿಸದಂತೆ ಜಾಗರೂಕರಾಗಿರುವರು. ಪಾಶ್ಚಾತ್ಯ ಜನಾಂಗಗಳಿಂದ ಚೀನಿಯರು ಸಾಲಗಳನ್ನು ಪಡೆಯುವುದು ಕೂಡ ಇವರ ಇಚ್ಛೆಗೆ ವಿರೋಧವಾದುದು. ಹೀಗಿರುವಾಗ ಅಸಂಖ್ಯಾತ ಜಪಾನೀಯರ ಗೂಢಚಾರಿಗಳು ಚೀನಾದೇಶದಲ್ಲಿ ಸುಳಿದಾಡುತ್ತಿರುವ ಈ ಸಮಯದಲ್ಲಿ ಈ ತರದ ಒಪ್ಪಂದವು ಹೇಗೆ ನಡೆಯಿತು?

ಆದರೂ, ಈ ಒಪ್ಪಂದವು ಆಗಿದ್ದರೆ, ಇದು ಜಪಾನೀಯರಿಗೂ ಇಟೇಲಿಯಾನರಿಗೂ ಕಲಹ ಬೆಳೆಸದೆ ಇರದು. ಇಟೇಲಿ ಹಬಸಿ ಯುದ್ಧ ಪ್ರಾರಂಭವಾಗುವ ಮೊದಲಿನಿಂದ ಜಪಾನೀಯರಿಗೆ ಎಬಿಸೀನಿಯಾದಲ್ಲಿ ವ್ಯಾಪಾರ ನಡೆಯಿಸಲು ಅನೇಕ ರಿಯಾಯತಿಗಳಿದ್ದವು. ಅದಲ್ಲದೆ ಅಲ್ಲಿ ವಿಸ್ತಾರವಾದ ಪ್ರದೇಶಗಳಲ್ಲಿ ಇವರು ಶಕ್ತಿ ಬೆಳೆಯಿಸುತ್ತಿದ್ದಾರೆ. ಆದರಿಂದ ಇಟೇಲಿಯು ಹಬಸಿಗಳ ಮೇಲೆ ಬೀಳಲು, ಜಪಾನಿಗೆ ಅದರ ಮೇಲೆ ವೈರತ್ವವು ಹುಟ್ಟಬೇಕು. ಆದರೆ ಯಾವದೊ ಕಾರಣಗಳಿಂದ ಇವರು ಮೌನವನ್ನು ತಾಳಿದ್ದರು. ಈ ಗುಪ್ತವಾದ ಒಪ್ಪಂದದ ವಾರ್ತೆಯು ನಿಜವಾಗಿದ್ದರೆ ಅಗ್ನಿ ಜಪಾನು ರೇಗದಿರದು. ಅದರ ಮೇಲೆ ಬೇಗನೆ ಧಾವಿಸುವುದು.

ಆ ವಾರ್ತೆಯು ಹರಡಿದ ಎರಡು ದಿವಸಗಳ ನಂತರ ಈ ಕೆಳಗಿನ ವಾರ್ತೆಗಳು ಬಂದಿವೆ—

ರೋಮಿನಿಂದ – ಇಟೇಲಿಯಾನ ಬಹಿರ್ ವ್ಯವಹಾರದ ಇಲಾಖೆಯು, ಚೀನಕ್ಕೂ ಇಟೇಲಿಗೂ ಚೀನಾದೇಶದ ಸಂಗ್ರಾಮ ಸುಧಾರಣೆಗಳನ್ನು ಮಾಡುವ ಕುರಿತ ಯಾವದೇ ಒಪ್ಪಂದಗಳು ಆಗಲಿಲ್ಲ. ಅದರ ಈ ಕುರಿತು ಮಾತೂ ಕೂಡ ಬರಲಿಲ್ಲ ಎಂದು ಪ್ರಕಟಿಸಿರುತ್ತದೆ.

ಶಾಂಗಾಯಿ ಯಿಂದ – ಚೀನಾದೇಶ ಸರಕಾರಿ ಉದ್ಯೋಗಸ್ಥರು ಹೇಳಿದ ವಾರ್ತೆಯಲ್ಲಿ ಸತ್ಯಾಂಶವಿಲ್ಲವೆನ್ನುತ್ತಾರೆ. ಇಟೇಲಿಗೂ ಚೀನಾದೇಶಕ್ಕೂ ಚೀನಾದೇಶದಲ್ಲಿ ಇಟೇಲಿಯಾನರ ಅಧಿಕಾರದಲ್ಲಿ ಒಂದು ವಿಮಾನಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸುವ ಮಾತುಕತೆಗಳು ಕೆಲಸಮಯದ ಹಿಂದೆ ನಡೆಯುತ್ತಿತ್ತು. ಆದರೆ ಇಟೇಲಿ-ಹಬಸಿ ಯುದ್ಧದ ನಿಮಿತ್ತ ಅದು ಮುರಿದುಹೋಗಿರುತ್ತದೆ. ಈ ಮಾತುಕತೆಗಳನ್ನನುಸರಿಸಿ, ಚೀನಿಯರನ್ನು ತರಬೇತು ಮಾಡಲು, ಅನೇಕ ಇಟೇಲಿಯಾನರು ಇಲ್ಲಿಗೆ ಬಂದಿದ್ದರು. ಯುದ್ಧ ಪ್ರಾರಂಭವಾಗಲು ಅವರು ಹಿಂತಿರುಗಿರುತ್ತಾರೆ.

ಭೂಲೋಕದ ವಿಚಿತ್ರ ಜಂತುಗಳು

ಮಾನವ ವರ್ಗವೆ ಶ್ರೇಷ್ಠವಾದುದೆಂದು ನಮ್ಮೆಲ್ಲರ ದೃಢವಾದ ನಂಬಿಕೆ. ಆದರೆ ಕೆಲವು ಜಂತುಗಳ ವಿಷಯ ನಮ್ಮ ಅರಿವು ಹೆಚ್ಚುತಿದ್ದ ಹಾಗೆ ಈ ನಂಬುಗೆ ಬಲಗುಂದುತ್ತಿದೆ.

ಇರುವೆಗಳಲ್ಲೂ, ಜೇನ ನೊಣಗಳಲ್ಲೂ ಮನುಷ್ಯರ ಈಗ ರೂಢಿಯಲ್ಲಿರುವ ಮತ್ತು ಇನ್ನೂ ಹುಟ್ಟಲಿರುವ ಸರಕಾರಗಳಿಗಿಂತ ಶ್ರೇಷ್ಠವೆನಿಸುವ ಸಾಮಾಜಿಕ ಧೋರಣೆಗಳಿವೆ. ಆದರೆ 'ರಾಜಕೀಯ ಇರುವೆಯು ಮಾತಾಡಬಲ್ಲುದು' ಎಂಬುದು ಇಷ್ಟರ ತನಕ ಯಾರೂ ಕಂಡು ಹಿಡಿಯಲಿಲ್ಲ. ನಿಮ್ಮ ಕೋಣೆದಲ್ಲಿ ಸಂಚರಿಸುವ ಇರುವೆಗಳ ಸಾಲುಗಳನ್ನು ಪರೀಕ್ಷಿಸಿರಿ. ಒಬ್ಬರಿಗೊಬ್ಬರು ಭೇಟಿಯಾಗಲು, ಅವರು ಇವರ ಮುಂದಿನ ಕಾಲುಗಳಿಂದ ಮುಟ್ಟುತ್ತಾರೆ. ತಮ್ಮ ತಲೆಯ ಮೇಲಿರುವ ಎಲ್ಲವನ್ನೂ ಪರೀಕ್ಷಿಸುವ ಅವಯವಗಳನ್ನು ಇವರು ಈ ಕೆಲಸಕ್ಕೆ ಉಪಯೋಗಿಸುವುದಿಲ್ಲ. ಇರುವೆಗಳು ಮಾತಾಡುತ್ತಿವೆ. ನಮ್ಮ ಹಾಗೆ ತಲೆಗಳಿಂದಲ್ಲ—ಕಾಲುಗಳಿಂದ.

ರೇಡಿಯೊ ಎಂಬ ನವೀನ ಶಕ್ತಿಯ ಮನುಷ್ಯನು ಹುಡುಕಿ ತೆಗೆಯುವ ಮೊದಲಿನಿಂದ ಈ ವಿಚಿತ್ರ ಶಕ್ತಿ ಚಿಟ್ಟೆಗಳಲ್ಲಿತ್ತೆಂದೂ ಈಗಲೂ ಅವುಗಳಲ್ಲಿ ಇರುವುದೆಂದೂ ತಿಳಿದು ಬಂದಿರುತ್ತದೆ.

ಆದರೆ ಈ ಜಂತುಗಳಿಗೆ ಪರಸ್ಪರ ಕರುಣೆ ಮಾತ್ರ ಇಲ್ಲವಾಗಿ ಭಾಸವಾಗುತ್ತಿದೆ. ಆಕಸ್ಮಿಕವಾಗಿ ಅವರ ಸಹೋದರರೊಬ್ಬರ ಕೈಕಾಲುಗಳು ದೈವವಶಾತ್ ಮುರಿದುಬಿಟ್ಟರೆ, ಆತನನ್ನು ಅಲ್ಲಿಯೆ ಸಾಯಲಿಕ್ಕೆ ಬಿಟ್ಟು, ತಾವು ಮುಂದುವರಿಯುವರು. ಆತನ ಗೋಜಿಗೆ ಯಾರೂ ಹೋಗಲಾರರು. ಈ ಜಂತುಗಳಲ್ಲಿ ಆಸ್ಪತ್ರೆ ಕ್ರಮಗಳಿಲ್ಲ.

ಈ ಭೂಸೃಷ್ಟಿಯಲ್ಲಿ ಅನೇಕ ವಿಚಿತ್ರ ಜಂತುಗಳಿವೆ. ಕ್ರಿಮಿವರ್ಗದಲ್ಲಿ ಈ ವಿಶಿಷ್ಟತೆಯನ್ನು ತುಂಬಾ ಕಾಣಬಹುದು. ಪ್ರಾಣಿವರ್ಗದಲ್ಲೂ [illegible] ವೈಚಿತ್ರ್ಯಗಳಿವೆ. ಪಕ್ಷಿಯ ಕೊಕ್ಕು ಮೃಗಗಳ ದೇಹ [illegible] ಬಾಲವಿರುವ ಮೊಟ್ಟೆಗಳನ್ನಿಡುವ ವಿಚಿತ್ರ ಪ್ರಾಣಿ ಒಂದನ್ನು [illegible]ದಲ್ಲಿ ಕಂಡುಹಿಡಿದಿರುವರು.

ನಾವು [illegible] ವಿಚಾರ ಕೇಳಿರಬಹುದು. ಆದರೆ [illegible] ಅತಿ ನೋಡಿಗದ [illegible] ಮೀನುಗಳನ್ನು ಕಂಡುಹಿಡಿದಿರುತ್ತಾರೆ. ಮೀನಗಳಿಗೂ ಮನುಷ್ಯರಿಗೂ ಇತರ ಮೃಗಗಳಿಗಿದ್ದಂತೆ ಶ್ವಾಸಕೋಶವಿರುವುದಿಲ್ಲ. [illegible]ದರೆ ಈ ವಿಚಿತ್ರ ಮೀನಿಗೆ [illegible] ಶ್ವಾಸಕೋಶವಿದೆ ಅಲ್ಲದೆ ಅದು ನೀರಿನಲ್ಲೂ ಇರಬಹುದೆಂದು ಒಂದನ್ನು ಕೇಳಿದರೂ ನೀವು ಮತ್ತೂ ಸೋಜಿಗಪಡಬಹುದು. [illegible] ಸಂದರ್ಭಗಳಲ್ಲಿ ಇವುಗಳ [illegible] ತಪ್ಪಿಸಿಕೊಳ್ಳಲು ಸೃಷ್ಟಿಕರ್ತನು ಇದಕ್ಕೆ [illegible] ಕೊಟ್ಟಿರಬಹುದು.

ಹುಡುಕಲು ಸಾಧ್ಯವಾಗದ [illegible] ಆದರೂ ವೈರಿಯ ಶಕ್ತಿ [illegible] ಅಗೋಚರವಾಗುವ ಅನೇಕ ರೀತಿಗಳನ್ನು [illegible] ತಮ್ಮ ಹಲವು ನವೀನ ಯುದ್ಧಕ್ರಮಗಳೊಂದಿಗೆ ಕಲಿತಿರುವರು. ವೈರಿಯು ನಿಮ್ಮ ಕಣ್ಣ ಮುಂದೆ ಇದ್ದರೂ ಯಾವುದೋ ಕೆಲವು ವಿಶಿಷ್ಟ ಯೋಜನೆಗಳಿಂದ ಅವನು ನಿಮ್ಮ ಕಣ್ಣಿಗ ಕಾಣಲಾರರು. ಈ ಯುದ್ಧದ ಅನುಭವವು ಭೂಮಂಡಲದ ಎಲ್ಲಾ ಪ್ರಾಣಿವರ್ಗಕ್ಕೆ ಸಹಜವಾದುದೆನ್ನುವಂತೆ ಇಂತದೆ ಕ್ರಿಮಿಗಳು ~~ಹಲವು ಮೃಗಗಳಲ್ಲಿ ಕ್ರಿಮಿಗಳಲ್ಲಿ~~ ಕಾಣಬಹುದು. ವೈರಿಗಳಿಂದ ರಕ್ಷಿಸಿಕೊಳ್ಳುವ ಅನೇಕ ಕ್ರಮಗಳು ಇವರಲ್ಲೂ ಇವೆ.

ಎಲ್ಲವುಕ್ಕಿಂತಲೂ ವಿಶಿಷ್ಟವಾದುದು ಕೋತಿ. ಈತನು ನಮ್ಮ ಒಡನಾಡಿಯೆನ್ನುವಂತೆ ತರ್ಕಿಸಬಲ್ಲನು. ಕೋತಿಗಳ ಮಾನವ ವರ್ಗದಲ್ಲೇ ವಾಸಮಾಡಿದರೆ ಅನೇಕ ಸಮಯದ ನಂತರ ಮಾನವನಾಗಿ ಪರಿಣಮಿಸುವ ಸಂಭವಗಳಿವೆ.

ಸೂರ್ಯನಿಗಿಂತ ಬಿಸಿಯಾಗಿರುವ ವಸ್ತು

ಸೂರ್ಯನ ಕೊಡುತ್ತಿರುವ ಉಷ್ಣವನ್ನು ಅಳೆಯುವುದಾದರೆ ಅದೊಂದು ಭಯಕರ ಸಂಖ್ಯೆಯಾಗುವುದು. ಈ ಸಂಖ್ಯೆಯನ್ನು ನೋಡಿ ನೀವು ಬೆಪ್ಪಾಗುವಿರಿ. ನಮಗೆ ಇದರಲ್ಲಿ ಅತೀ ಅಲ್ಪ ಅಂಶ ಸೇರುವುದರಿಂದ ಉಳಿದ ಮಹಾ ಅಂಶವು ಎಲ್ಲಿ ಹೋಗುತ್ತಿದೆ ಎಂದೂ ನೀವು ಆಶ್ಚರ್ಯಪಡುತ್ತಿರಬಹುದು. ಆದರೂ ಸೂರ್ಯನ ಉಷ್ಣಗಿಂತ ಹೆಚ್ಚಿನ ಉಷ್ಣವನ್ನು ಕೊಡುವ ವಸ್ತುವನ್ನು ಮನುಷ್ಯನು ನಿರ್ಮಿಸಿರುವನು. ಕರಿಯ ಬತ್ತಿಗಳಿಂದ ವಿದ್ಯುತ್ ಶಕ್ತಿಯ ಮೂಲಕ ಆರ್ಕವೆಂಬ ಯೋಜನೆಯೆ ಈ ವಿಚಿತ್ರ ವಸ್ತುವಾಗಿರುತ್ತದೆ. ಇಂತಹ ಆರ್ಕನ್ನು ಸಿನೆಮ ಮಂದಿರದಲ್ಲಿ ನೀವು ನೋಡಿರಬಹುದು. ಆ ಆರ್ಕಿನ ಉಷ್ಣವು ಸೂರ್ಯನಿಗಿಂತ ಮಿಗಿಲಾದುದೆಂದು ಈ ಕೆಳಗಿನ ಸೂತ್ರವನ್ನು ಆಧರಿಸಿ ಕಂಡುಹಿಡಿಯಲ್ಪಟ್ಟಿದೆ. ಶಬ್ದದ ವೇಗವು ಅದೊಂದು ಬಿಸಿ ಗೇಸಿನ ಒಳಗಿಂದ ಹಾರತ್ತಿರುವಾಗ ಹೆಚ್ಚುತ್ತದೆ. ಒಂದು ವಿಚಿತ ಯಂತ್ರವನ್ನು ನಿರ್ಮಿಸಿ ಈ ಆರ್ಕದೊಳಗಿಂದ ಒಂದು ಶಬ್ದವು ಚಲಿಸುವಂತೆ ಮಾಡಿ ಅದರ ವೇಗವನ್ನು ಅಳೆದು ಮತ್ತು ಅದೇ ಶಬ್ದದ ವೇಗವನ್ನು ತಣ್ಣಗಿರುವ ಆರ್ಕನಲ್ಲಿ ಅಳೆದು ಈ ಆರ್ಕಿನ ಉಷ್ಣವು ೧೮,೦೦೦ ಡಿಗ್ರಿ ಫೆರನಹ್ಯಾಟ್ ಎಂದು ಕಂಡುಹಿಡಿದಿರುವರು. ಎಂದರೆ ಸೂರ್ಯನ ಉಷ್ಣಗಿಂತ ೪೦೦೦ ಡಿಗ್ರಿ ಹೆಚ್ಚು.

೨೨ ವರ್ಷ ಪ್ರಾಯ, ೫೫೪ ಪೌಂಡು ಭಾರ!

೨೨ ವರ್ಷ ಪ್ರಾಯದ, ೫೫೪ ಪೌಂಡು ಭಾರವಿರುವ [illegible] ಡೆನ್ನಿಸನೆಂಬವನಿಗೆ ಮೊನ್ನೆ ಕೆಲವು [illegible]ಗಳಿಗೆ ವಿರೋಧವಾಗಿ ವರ್ತಿಸಿದ ದೆಸೆಯಿಂದ [illegible] ಸೆರೆಹಿಡಿದಿರುವರು. ಆತನನ್ನು ಜೈಲಿಗೆ ಕೊಂಡು ಹೋದರು, ಆದರೆ [illegible] ಜೈಲಿನ ದ್ವಾರವು ಅವನಲ್ಲಿರಲಿಲ್ಲ. ಆತನಿಗೆ ಸೇರಲಿಕ್ಕೆ ಸಂಭವವಾಗುವ ಜೈಲು ಕೋಣೆಯು ಅಲ್ಲಿ ಸಿಗಲಿಲ್ಲ. ಹೀಗಾಗಿ ಜೈಲ ಅಧಿಕಾರಿಗಳಿಗೆ [illegible] ಸ ಕಟದಲ್ಲಿ ಕಳವಳ [illegible].

೫೦೦ ಜನರಿರುವ ೪೫೦ ಕುಟುಂಬಗಳ ಮೇಲೆ ವಿಷಪ್ರಯೋಗ

[illegible] ನಗರದ ಸಮೀಪದಲ್ಲಿ [illegible] ಜನ ದೊಡ್ಡಡಿದ [illegible] ವಿಷ [illegible] ಇದಕ್ಕೆ ಕಾರಣ ಒಬ್ಬ ಹಿಟ್ಟಿನ ವರ್ತಕನು [illegible] ಹೆಚ್ಚು ಲಾಭ [illegible] ಹಿಟ್ಟಿನಲ್ಲಿ [illegible] ಬೆರಸಿದ ನಂತರ [illegible] ನೀವು [illegible] ನಂತರ [illegible] ಪರಿಣಾಮ ಸತ್ತ [illegible] ಒಬ್ಬನ [illegible] ಸಹಿಸಲಾರದೆ ಪ್ರಾಣತ್ಯಾಗ ಮಾಡಿದನಂತೆ. ಈ ವರ್ತಕನ [illegible] ಹಿಟ್ಟಿನಲ್ಲಿ ಆ ಉಪ್ಪನ್ನು ಸೇರಿಸಿದ ಆತನ ಸೇವಕರು ಕೂಡ ಈ ಅಪಾಯಕ್ಕೆ ಒಳಗಾಗಿದ್ದರಂತೆ.

ಮಕರಸಂಕ್ರಮಣ ಬಂದು. ಹೊಸ ಪರ್ಯಾಯಕ್ಕೆ ಸ್ವಾಮಿಗಳು ಪಟ್ಟವನ್ನೇರುತ್ತಾರಾದರೆ ~~— ಇನ್ನೂ ಈ ಮಸಿಕೆನದಲ್ಲಿ ಸೋಸೆ~~ ಯೋ ಅತ್ತೆಯೋ ಎಂದು ಆದಳಿತ ನಿಶ್ಚಯ ವಾಗದೆ ಪರ್ಯಾಯೋತ್ಸವ ಸಹ ರುಚಿಸದ ಹಾಗಾಗಿದೆ. ದೈವವಾದರೂ ಇದನ್ನು ಮನಸ್ಸಿಗೆ ತರುತ್ತದೆ, ಆಗ ಶಿಕ್ಷೆ ಕೆಂಪುಂಬರದ ಮೇಲೆ ಕಸಿಕರಿಸಲ್ಲಿವೇ

× × × × × ×

[illegible] ಶಾಗ್ರಾಣದ [illegible] ಯುತಿದ್ದ ಬಟಾಟೆಗಳನ್ನು ಹೆದ್ದಾರಿಯ ಮೇಲೆ ಚೆಲ್ಲಿ ಇದೆಲ್ಲ ಕೇಳುವವರಿಲ್ಲದೆ ಮಾಡಿದೆ. ಅತ್ತೆ [illegible] – ಇದೆಲ್ಲ ನಾರವುಮ ನೋಸೆಯ [illegible] ಹಿರಿಯ ಮಂಡಲ [illegible] ವುದು. ಸೊಗಸಲ್ಲ ಪುರಾತನ ಮನೆತನ ಎವ್ವ ಕೊಳೆತ ಬಟಾಟೆಗಳನ್ನು ಊರಲ್ಲೆಲ್ಲ ಚೆಲ್ಲುವುದೆ? ಇಸ್ಸಿ! ಮಿತಿಯಿರಬೇಕಯ್ಯ

\+ + + +

ಬರಿದಾದ ಬಂಡಾರದಲ್ಲಿ ಈ ಕೊಳೆತ ಬಟಾಟೆಗಳನ್ನು ಅಷ್ಟು ದಿನ ಅಡಗಿಸಿಟ್ಟು ಈಗ ಇನ್ನೂ ಒಂದು ದೊಡ್ಡ ಹೊಂಡದಲ್ಲಿ ಹುಗಿದು ಒಂದು ಸಮಾಧಿ ಕಟ್ಟಿಸಿದರೆ ಸಾಕು,—ಇಲ್ಲದಿದ್ದರೆ ಈ ನಾತವೆಲ್ಲ ನಿಮಗೂ ಕೆಟ್ಟದ್ದು, ನಮಗೂ ಕೆಟ್ಟದು

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1—10—0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಧರ್ಮಶಾಲೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ಗ್ರಂಥಗಳ ಆಧಾರದಿಂದ ಸಾಧ್ಯ ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾಪುರ ಸಮೇತ
ಋಗ್ವೇದೀ ಸಂಧ್ಯಾವಂದನೆ
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ
ಬೆಲೆ ಆಣೆ 8.
30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ — ಅದು ಪೂರ್ಣವಾದ ಟೋನಿಕ್ ಆಹಾರ. ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ
ರೂ. 3—4—0 ಮತ್ತು ರೂ. 1—12—0.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು— ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Ested 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,
PUTTUR
ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್
ಪುತ್ತೂರು.
ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5 ರಂತೆ, 6 ತಿಂಗಳಿಗೆ ಶೇಕಡಾ 6 ರಂತೆ, 12 ತಿಂಗಳಿಗೆ ಶೇಕಡಾ 6½ ರಂತೆ.
"ಸೇವಿಂಗ್ಸ್ ಬೇಂಕ್"—ಎಂದ ಸಂಚಯ ಠೇವಣಾತಿಗಳು ಶೇಕಡಾ 4 ರಂತೆ.
"ಚಾಲ್ತಿ ಠೇವಣಾತಿಗಳು"—ಶೇಕಡಾ 2½ ರಂತೆ.
ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.
ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವದು.

Puttur, Dated 10—4—1935.
G. N. Lakshman Pai,
Secreatry.

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೋಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು. ಇದು ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು.

ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ. ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ. ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೋಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ—ದೊಡ್ಡ ಬಾಟ್ಲಿಗೆ ರೂ. 4. ನಡುವಿನದು 2—4—0. ಚಿಕ್ಕದು 1—2—0.

ತಯಾರಿಸುವವರು:— ಲಸ್ಕರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್:— ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು:— ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

'ಸ್ವದೇಶಾಭಿಮಾನಿ'
ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

ಸ್ವಾತಂತ್ರ್ಯಾಹಿಕ ಕಥೆ

ಆಶಾ-ಆಹುತಿ

(ಒಂದು ಕಲ್ಪಿತ ಕಥೆ)

ಲೇಖಕ—ಯಂ. ಬಿ. ನರ್ಸಪ್ಪ, ಮೂಲ್ಕಿ, ದ. ಕ.

ಮಟ ಮಟ ಮಧ್ಯಾಹ್ನ. ಜನನಿಬಿಡವಾದ ಮುಂಬಯಿ ನಗರ. ಅಷ್ಟೊಂದು ಜನಸಂಖ್ಯೆ ಇರುವ ಪ್ರಾಮುಖ್ಯ ನಗರವಾದರೂ ನಿಶ್ಶಬ್ದವಾಗಿತ್ತು. ರಾಜಬೀದಿಯ ಅದೊಂದು ಕ್ಲಾಕ್ ಟವರಿನಲ್ಲಿ ಡಣ್, ಡಣ್ ಎಂದು ಹನ್ನೆರಡು ಗಂಟೆ ಹೊಡೆಯಿತು. ಲೇಂಗ್ಲೀ ಕಂಪೆನಿಯ ನೌಕರರೆಲ್ಲಾ ಮಧ್ಯಾಹ್ನ ಊಟಕ್ಕೆಂದೊ, ಫಲಾಹಾರಕ್ಕೆಂದೊ ವಿಶ್ರಾಂತಿ ಗೃಹಗಳನ್ನು ಪ್ರವೇಶಿಸುತ್ತಿದ್ದಾರೆ. ಕಂಪೆನಿಯ ಮಹಡಿಯ ರಮ್ಯವಾದ ಆಫೀಸು ರೂಮಿನ ಆರಾಮ ಕುರ್ಚಿಯ ಮೇಲೆ ಸಿಗರೇಟನ್ನು ಸೇದುತ್ತಾ ಮೇನೇಜರನು ಆಲೋಚನಾ ಪರನಾಗಿ ಅಲ್ಲೇ ಕುಳಿತುಕೊಂಡಿದ್ದನು.

ಆ ಸಮಯ ಒಂದು ಉದ್ದವಾದ ಲಕೋಟೆಯ ಸಮೇತ ಒಬ್ಬ ತರುಣನು ಅದೇ ಕಂಪೆನಿಯ ಮಹಡಿಯನ್ನು ಹತ್ತಿಕೊಂಡು ಮೇನೇಜರನ ರೂಮಿಗೆ ಹೋಗತಕ್ಕವನು, ಅಷ್ಟರಲ್ಲೇ ಏನೇನು ತೋಳೆಯಿತೋ ಹಾಗೆಯೇ ಹಿಂತಿರುಗಿ ಮೆಟ್ಟಲು ಇಳಿದು ವಾರ್ಗಾಭಿಮುಖನಾಗಿ ಹೊರಟು ಒಂದು ಕಡೆ ಸುಮ್ಮನೆ ನಿಂತನು. ಸ್ವಲ್ಪ ಹೊತ್ತು ಯೋಚನಾಪರನಾದನು. ತರುಣನಿಗೆ ಅದಾಗಲೇ ಇಪ್ಪತ್ತೈದು ವರುಷ ಆಗಿರಬಹುದು. ತಾರುಣ್ಯಕ್ಕೆ ತಕ್ಕ ಲಕ್ಷಣಗಳು ಇದ್ದಿತಾದರೂ ಆ ಸಮಯ ತರುಣನ ಮುಖವು ಕೊಂಚ ಬಾಡಿ ಹೋಗಿತ್ತು. "ಎಲ್ಲಿ ಹೋದರೂ ಶನೀಶ್ವರ ಬಿಡ" ಎಂಬಂತೆ ಅವನಿಗೆ ಭಾಸವಾಗಿರಬಹುದು. ತರುಣನು ಮೇನೇಜರನನ್ನು ತನ್ನ ಉದರಪೋಷಣೆಯ ನಿಮಿತ್ತ ನೌಕರಿಗಾಗಿ ಕಾಣಲು ಹೋಗಿದ್ದು, ಮೇನೇಜರನು ಆ ಸಮಯ ಆರಾಮ ಕುರ್ಚಿಯ ಮೇಲೆಯೇ ಒರಗಿ ನಿದ್ದೆ ಹೋಗಿದ್ದುದರಿಂದ ತರುಣನು ನಿರಾಶನಾಗಿ ಹಿಂತಿರುಗಬೇಕಾಯಿತು.

ಮಧ್ಯಾಹ್ನದ ಊಟ, ಫಲಾಹಾರದ ಗೊಡವೆ ಇಲ್ಲದೆ ತರುಣನು ಬಹುಕಾಲ ಒಂದೇ ಪಕ್ಕದಲ್ಲಿ ನಿಂತಿದ್ದನು. ಅಷ್ಟರಲ್ಲಿ "ರಾಮಚಂದ್ರಾ, ಅದೇಕೆ ಒಬ್ಬನೇ ನಿಂತಿರುವೆ? ಹೋದ ಕೆಲಸವೇನಾಯಿತು? ಬಡ ಸಂಸಾರದ ಕಷ್ಟವೆಷ್ಟಿದೆಯೆಂದು ತಿಳಿದೆಯೋ? ಸ್ವದೇಶವನ್ನು ಬಿಟ್ಟು ಎರಡು ವರ್ಷಗಳಿಂದ ಇಲ್ಲಿ ನೌಕರಿಗಾಗಿ ಸುತ್ತಾಡುತ್ತಾ ಆ ಕಂಪೆನಿ, ಈ ಫರ್ಮು ಎಂದು ನೂರಾರು ಕಡೆಗಳಿಗೆ ತಿರುಗಿ ನಿರಾಶನಾಗಿ ಅದೆಷ್ಟು ದೇಹವನ್ನು ದಂಡಿಸಿಕೊಳ್ಳಬೇಕೆಂದಿರುವೆ? ಊರಿಗಾದರೂ ಹಿಂತಿರುಗಿ ಮಾತಾ, ಪಿತರುಗಳಿಗೆ ಸಮಾಧಾನವನ್ನುಂಟುಮಾಡಿದರಾಗದೆ?" ಎಂದು ತರುಣನ ಗೆಳೆಯ ಚಂದ್ರಕಾಂತನು ಬೆನ್ನುತಟ್ಟಿ ಕೇಳಿದನು.

ರಾಮಚಂದ್ರ:—ಚಂದ್ರಕಾಂತಾ, ಬಡತನದ ಬೇಗೆಯನ್ನು ನೀನು ತಿಳಿಯದಿಲ್ಲ. ನನ್ನ ಹಾಳು ಬಾಳುವೆ ಕುರಿತು ಇನ್ನೂ ಕೊಂಚ ಹೇಳುವೆನು ಕೇಳು. ಬಡತನದಲ್ಲಿ ಕೈಗಾರಿಕೆ, ಕೃಷಿಯೇ ಮುಂತಾದ ಶ್ರಮ ಜೀವನದಲ್ಲಿ ಹಿರಿಯರು ಕೂಡಿಟ್ಟ ಎರಡು ಸಾವಿರದಷ್ಟು ಹಣವು ನನ್ನ ಈ 'ಬಿ. ಎ.' ಎಂಬ ಎರಡಕ್ಷರದ ಡಿಗ್ರಿಗಾಗಿ ವ್ಯಯವಾಯಿತು. ಕಳೆದೆರಡು ವರ್ಷಗಳಲ್ಲಿ ಜೀವನದ ಅದೊಂದು ಸುಖ ದೊರೆಕಬಹುದೆಂಬ ಇಚ್ಛೆಯಿಂದ ಈ ನಗರಕ್ಕೆ ಬಂದು ನೌಕರಿಗಾಗಿ ಅದೆಷ್ಟು ಕಷ್ಟ ಪಡುತ್ತಿರುವೆನೆಂದು ನಿನಗೆ ತಿಳಿಯದಿಲ್ಲ. ನನ್ನ ಕಡೆಗೆ ದೀನ ದೃಷ್ಟಿಗಳನ್ನು ಬೀರುತ್ತಾ ನನ್ನ ಬಡ ಮಾತಾ ಪಿತೃಗಳು ಊರಲ್ಲಿ ಕೊರಗುತ್ತಿರುವರು. ಸಂತಸಪಡುವ ಒಂದು ಪತ್ರವನ್ನೂ ಬರೆಯಲು ನಾನು ಅಸಮರ್ಥನಾಗಿರುವುದು ಲಾಂಛನಾಸ್ಪದವು. ಮಾತಾ ಪಿತೃಗಳಾದರೋ ಕೆಲಸ ಮಾಡಲಶಕ್ತರಾದ ವೃದ್ಧರು. ಪ್ರಾಯಕ್ಕೆ ಬಂದ ತಂಗಿ ಜಾನಕಿ ಎಂಬ ಸಹೋದರಿಯೂ, ಓದು ಅರ್ಧದಲ್ಲಿ ಬಿಟ್ಟ ಗೋಪಾಲನೆಂಬ ಸಹೋದರನೂ ಇರುವರು. ಬಿಕ್ಕಟ್ಟಿನ ಸಮಯವಾದುದರಿಂದಲೂ, ಗೇಣಿ ಬಾಕಿ ಇದ್ದುದರಿಂದಲೂ ಸಾಗುವಳಿಯನ್ನು ಬಿಟ್ಟುಬಿಡಬೇಕಾಗಿ ಬಂತು. ಸಾಲಗಾರರ ಕಾಟವಂತೂ ಹೇಳತೀರದು. ನನಗಂತೂ ನೌಕರಿಯೇ ದೊರೆಕಲಿಲ್ಲ. ಇಷ್ಟಕ್ಕೂ ಮರುಗುವುದು ಹೇಡಿತನವೆಂದು ಅಷ್ಟು ಜವಾಬ್ದಾರಿ ಹೊತ್ತು ನಿಮ್ಮಂಥವರ ಜೊತೆಯಲ್ಲಿ ಕಾಲ ಕಳೆಯುತ್ತಿದ್ದೇನೆ. ಈ ಗೊಡ್ಡು ಮುಖವನ್ನು ತೋರಿಸಲಿಕ್ಕೆಂದೇ ನಾನು ಊರಿಗೆ ಹೋಗ ಹೋಗಬೇಕೆಂಬ ನಿನ್ನ ಅಭಿಪ್ರಾಯವೋ? ಹೀಗೆ ಹೇಳುತ್ತಾ ಹೋದಂತೆ ಫಕ್ಕನೆ ಅದೇಕೆ ಚಂದ್ರಕಾಂತಾ ಕಣ್ಣೀರಿನ ತೊಟ್ಟು? ಎಂದು ಕೇಳಿದನು.

ಚಂದ್ರಕಾಂತ:—ರಾಮಚಂದ್ರಾ, ನಿನ್ನ ಹೃದಯದ್ರಾವಕ ಸಂಗತಿಯನ್ನು ಕೇಳಿ ಅದಾವನಿಗೆ ಮರುಕವುಂಟಾಗಲಾರದು? ವಿದೇಶಗಳಿಗೆ ಸದಾ ಅನ್ನಕೊಡುತ್ತಿರುವ ಈ ನಮ್ಮ ಭಾರತ ಮಾತೆಯು ತನ್ನ ಮಕ್ಕಳಿಗೆ ಅನ್ನ ಕೊಡಲು ಅಸಮರ್ಥಳಾಗಿರುವಳು. ಇದಕ್ಕೆ ನಾವೇ ಕಾರಣರು. ತಮ್ಮ, ತಮ್ಮ ಊರುಗಳಿಂದ ನನ್ನ ಬಡ ಸಹೋದರರನೇಕರು ಕೃಷಿ, ಕೈಗಾರಿಕೆಯೇ ಮುಂತಾದ ಊಟ ಕೊಡುವ ಕೆಲಸವನ್ನು ಬಿಟ್ಟು ಮುಂಬಾಯಿಗೆ ಹೋಗಿ ಸಂಪಾದನೆ ಮಾಡಬಹುದೆಂಬ ಆಶೆಯಿಂದ ಇಲ್ಲಿಗೆ ಬಂದು ಅನೇಕ ತರದ ಕಷ್ಟಗಳನ್ನು ಪಡುತ್ತಿರುವರು. ಪ್ರತೀ ಕೆಲಸದಲ್ಲೂ ಯಂತ್ರಗಳ ಪ್ರಯೋಗ ಜಾಸ್ತಿಯಾಗುತ್ತಿರುವ ಈ ಕಾಲದಲ್ಲಿ ಮುಂಬಾಯಿ ಮಾತೆಯು ಅದೆಷ್ಟು ಜನರಿಗ ಅನ್ನ ಕೊಟ್ಟಾಳು? ಊರಿಗೆ ರಜೆಯಲ್ಲಿ ಬರುತ್ತಿರುವ ಸಹೋದರರನೇಕರ ಉದ್ದನ್ನ ಉದಿಗೆ ತೊಡಿಗೆಗಳನ್ನೋ ಎರವಾಗಿ ತಂದ ಚಿನ್ನದ ಸರಗಳನ್ನೋ ನೋಡಿ ಮುಂಬಾಯಿಯಲ್ಲಿ ಈ ರೀತಿ ಸಂಪಾದನೆ ಇದೆಯೋ ಎಂದು ಆಶೆಪಡುತ್ತಾರೆ. ಊರಲ್ಲಿ ಮೈ ಒಗೆದೆ ಸಾಲ ಮಾಡಿಯೋ, ಮನೆಯವರ ಉಪವಾಸದ ಕೊಟ್ಟೋ ಸ್ತ್ರೀಯರ ಆಭರಣಗಳನ್ನು ಮಾರಿ ಸ್ನೇಹಿತರಿರುವ ಇಲ್ಲಿ ಧಾವಿಸಿ ಬರುವರು. ಸ್ನೇಹಿತರ ಕಷ್ಟ ತೊಂದರೆಗಳು ಅದೆಲ್ಲಿ ಅವರಿಗೆ ತಿಳಿಯುವುದು? ತಿಂಗಳಿನ ೩೦ ದಿವಸಗಳನ್ನು ದಾಟಿಸುವುದೇ ಕಷ್ಟವಾಗಿರುವಾಗ್ಗೆ ಇನ್ನೊಬ್ಬರ ಹೊಟ್ಟೆ ಪಾಡನ್ನು ನೋಡಲು ಅವರೆಲ್ಲಿ ಶಕ್ತರು? ಇಲ್ಲದ ಉಸಾಬರಿಯನ್ನು ಮೈಯಲ್ಲಿ ತಂದುಕೊಂಡು ಅವರೂ ಇನ್ನಷ್ಟು ಕಷ್ಟಪಡಬೇಕಾಗುತ್ತದೆಂದು ಪಾಪ ಅವರೆಲ್ಲಿ ತಿಳಿಯುವರು? ಇಲ್ಲಿಗೆ ಬಂದು ನೌಕರಿ ದೊರೆಯದೆ ತಿರುಗುತ್ತಿದ್ದಾರೆ. ಹೊಟ್ಟೆ ಬಟ್ಟೆಗಿಲ್ಲದೆ ದುರ್ವ್ಯಸನಿಗಳ ಸಂಗಡಿಗರಾಗಿ ದೇಹಗಳನ್ನು ಕೆಡಿಸಿ ಅದೆಷ್ಟು ಮಂದಿ ಬೀದಿಯ ಭಿಕಾರಿಗಳಾಗಲಿಲ್ಲ? ಈ ರೀತಿ ತಾವು ಕಷ್ಟಪಡುವುದಲ್ಲದೆ ಮುಂದಿಗಳಿಗೆ ಹಾಳು ಬಗೆದು ಇಲ್ಲದ ಕಷ್ಟಗಳನ್ನು ಉಭಯಕಡೆಗೂ ತಂದೊಡ್ಡುತ್ತಾರೆ. ಹಾಯ್! ಬಡವರ ಕಷ್ಟವನ್ನು ಹೇಳತೀರದು. ರಾಮಚಂದ್ರಾ—ನಿನಗಾಗಿ ಹೇಳಿದೆನೆಂದು ತಿಳಿಯಬೇಡ. ನಿನ್ನಂತಹ ಅದೆಷ್ಟು ಜನರು ನನ್ನ ಕಣ್ಣು ಮುಂದೆ ಕಾಣುತ್ತಿಲ್ಲ? ರಾಮಚಂದ್ರನು ನಿರುತ್ತರನಾದನು.

ಚಂದ್ರಕಾಂತನು ಬಡ ಕುಟುಂಬದವನಾದರೂ ಸಾಕಷ್ಟು ವಿದ್ಯಾವಂತನು. ತಿಂಗಳೊಂದಕ್ಕೆ ಅರ್ವತ್ತು ರೂಪಾಯಿ ಸಂಬಳವನ್ನು ಪಡೆದು ತನ್ನ ಹಾಗೂ ತನ್ನ ಕುಟುಂಬಪೋಷಣೆ ಮಾಡುವ ಒಬ್ಬ ಗುಮಾಸ್ತನು. ಕಿರಿತನದಲ್ಲಿ ವಿದ್ಯೆಯನ್ನು ಬಹಳ ಕಷ್ಟದಿಂದ ಪಡೆದನಾದರೂ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಆಶಿಪಟ್ಟನು. ಅದರೇನು? ಬಡತನದ ಸುಖದಲ್ಲಿ ಊರಲ್ಲಿ ಹೆಚ್ಚಿನ ವಿದ್ಯೆಯು ದೊರಕಲಿಲ್ಲ. ಕಡೆಗೆ ಮುಂಬಾಯಿಗೆ ಬಂದು ಅಲ್ಪಸ್ವಲ್ಪ ವೇತನದಿಂದ ಉದರಪೋಷಣೆಯೊಡನೆ ವಿದ್ಯೆಯನ್ನು ಹೊಂದಿದನು. ಹಾಗೂ ಸಜ್ಜನರ ಸಂಘದಿಂದ ಗುಣವಂತನಾಗಿ ಎಲ್ಲರಿಂದಲೂ ಹೊಗಳಲ್ಪಟ್ಟಿರುವನು. ಮುಂಬಾಯಿಯ ಸ್ಥಿತಿಗತಿಯು ಅವನಿಗೆ ತಿಳಿದಿತ್ತು. ಐಶ್ವರ್ಯಕ್ಕಿಂತಲೂ ಮಾನವೇ ಶ್ರೇಷ್ಠವೆಂದು ನಂಬಿ ಬಡತನದಲ್ಲಿ ಸುಖವನ್ನು ಅನುಭವಿಸುವನು. ತನ್ನ ಕುಟುಂಬಪೋಷಣೆಯು ಹಾಗೂ ಹೀಗೂ ಉತ್ತಮದ ತರದಲ್ಲಿ ನಡೆಯುತ್ತದೆಂದು ಹೇಳಬಹುದು. ಚಂದ್ರಕಾಂತನಲ್ಲಿ ಬ್ರಹ್ಮಚರ್ಯದ ತೇಜಸ್ಸು ತುಂಬಿ ತುಳುಕುತ್ತಿರುವುದಲ್ಲದೆ ಗರಡಿ ಸಾಧನೆಯ ಮೈಕಟ್ಟೂ ಅಂದ ಚಂದವಾಗಿ ತೋರುತ್ತಿರುವುದು. ದಯಾಭಾವ, ಪ್ರೇಮ ಶೀಲವಿನಯಾದಿಗಳು ಇನ್ನೊಬ್ಬರ ಮನಸ್ಸನ್ನು ಸೆಳೆಯುತ್ತಿರುವುದು.

ವರ್ಷಗಳು ಮೂರು ಕಳೆದುಹೋದವು. ರಾಮಚಂದ್ರನಿಗೆ ನೌಕರಿಯು ಇನ್ನೂ ದೊರೆಯಲಿಲ್ಲ. ಈಗೀಗ ರಾಮಚಂದ್ರನು ನಿರಾಶನಾಗಿ ಜೀವನದ ಆಶೆಯನ್ನು ಬಿಟ್ಟಿರುವನು. ಒಬ್ಬಂಟಿಗನಾಗಿರುವಾಗ ಕಣ್ಣೀರು ಸುರಿಸಿ ಹಾ! ದೈವವೇ ಈ ರೀತಿ ನನಗ್ಯಾಕೆ ಕಷ್ಟಕೊಡುತ್ತಿರುವೆ? ಎಂದು ಮರುಗುವನು. ದಿನ ಹೋದಷ್ಟಕ್ಕೆ ಜೀವನ ನಡಿಸುವುದೇ ಕಷ್ಟವಾಯಿತು. ಸ್ನೇಹಿತರು ಒಬ್ಬೊಬ್ಬರೇ ಹಿಂಜರಿಯತೊಡಗಿದರು. ಊರಿಗೆ ಪತ್ರ ಬರೆಯುವಂಥಾದ್ದು ನಿಂತುಹೋಯಿತೆಂದೇ ಹೇಳಬಹುದು.

ಆದಿತ್ಯವಾರ ದಿನ ಎಂದಿನಂತೆ ಸಾಯಂಕಾಲ ಆಫೀಸುಗಳ ನೌಕರರು ಚೌಪಾತಿ ಮರಳರಾಶಿಯಲ್ಲಿ ಬಗೆ ಬಗೆಯ ಆಟಗಳನ್ನು ಆಡುತ್ತಿರುವರು. ಯಾವಾಗಲೂ ಸಂಗಾತಿಗಳ ಜೊತೆಯಲ್ಲಿ ಇರುವ ರಾಮಚಂದ್ರನು ಈ ದಿನ ಚೌಪಾತಿಗೆ ಬರಲಿಲ್ಲ. ಒಂದು ನೆವ ಹಿಡಿದು, ರಾಮಚಂದ್ರನು ಅಪ್ಪೊಲ್ಲೊ ಬೀದಿಯಲ್ಲಿ ಮುಂದರಿಯುತ್ತಾ ಹೋಗಿ ಒಂದು ಕಡೆ ಉದ್ಯಾನವನದ ಹಾಸಿಗಲ್ಲಿನಲ್ಲಿ ಒಬ್ಬನೇ ಕುಳಿತು ಆಲೋಚಿಸ ತೊಡಗಿದನು. ಒಂದು ಕಡೆ ಮನೆಯ ಯೋಚನೆ, ಇನ್ನೊಂದು ಕಡೆ ತನಗೆ ನೌಕರಿ ದೊರೆಯದೆ ಇದ್ದ ಚಿಂತೆ. ಒಬ್ಬನೇ ಆಕಾಶದ ಕಡೆಗೆ ನೋಡಿದವನಾಗಿ ಹೇ ವಿಧಾತ ಸಾಕು. ಈ ನೌಕರಿಯ ಸಾಹಸ. ಊರಿಗೆ ಹೋಗಲೇ ಬೇಡ. ಅದಾವ ಸುಖವನ್ನು ಹೊಂದಿ ಹೋಗುವುದು? ಮಾತಾಪಿತರುಗಳು ಕೊರಗಿ ಹೋಗಿರುವರು. ಸಂಸಾರವಂತೂ ಕಷ್ಟವಾಗಿದೆ. ಮೇಲಾಗಿ ನನ್ನನ್ನು ವಿಷಮಜ್ವರವು ಆಗಾಗ್ಗೆ ಕಾಡುತ್ತಿರುವುದು. ಇಲ್ಲಿಗೆ ಬಂದು ಅದಾವ ಸುಖವನ್ನು ಹೊಂದಿದೆ? ದೇವಾ, ಬಡವರ ಬಂಧೂ, ನೀನಲ್ಲವೇ ಅನಾಥರಿಗೆ ನಾಥನೆಂಬ ಬಿರುದನ್ನು ಪಡೆದವನು? ಅದೆಲ್ಲ ನಿನ್ನ ಬಿರುದನ್ನು ಬಚ್ಚಿಟ್ಟಿರುವೆ? ಬಡವರಿಗೆ ಐಶ್ವರ್ಯ ಬಂದಲ್ಲಿ ನಿನ್ನ ಹೆಸರನ್ನೆ ಮರೆತು ಬಿಡಬಹುದೆಂದೋ ಯಾ ನನ್ನದೊಂದು ಉದಾಹರಣೆಯಿಂದ ನನ್ನಂತಹ ತಿಳಿಗೇಡಿತನದ ಸಹೋದರರೂ ಕಣ್ಣು ತೆರೆಯಬಹುದೆಂದೋ ನಿನ್ನಿಚ್ಛೆ ಇರಬಹುದಲ್ಲವೆ? ಆಗಲಿ, ನಿನ್ನಿಚ್ಛೆಯಂತೆಯೇ ನಡೆಯಲಿ. ಈ ಬಿ. ಎ. ಡಿಗ್ರಿಯು ಬರೇ ನೌಕರಿಗಾಗಿ ಅಲೆಯುವದಾದಲ್ಲಿ ಅದಕ್ಕೆ ಧಿಕ್ಕಾರವಿರಲಿ. ಇದೇ ರೀತಿ ಇನ್ನೂ ಉಚ್ಚ ತರಗತಿಯ ಡಿಗ್ರಿಗಳನ್ನು ಪಡೆದು ಮಾಡುವದೇನು? ಯಾವ ಬಿ. ಎ. ಕಲಿಯುವಾಗ್ಗೆ ನೀರಿನಂತೆ ಹಣ ವ್ಯಯ ಮಾಡುತಿದ್ದೆನೋ ಈಗ ಅದರ ವಾಸನೆ ಕೂಡಾ ದೊರಕುತಿಲ್ಲವೆಂದರೆ ಇದಕೇನನ್ನಬೇಕು? ಬೇರೆ ಉಪಾಯವೇ ಇರಲಿಲ್ಲವೇನು? ಸಂಕುಚಿತ ಬುದ್ಧಿಯಿಂದ ಕೆಲಸ ಮುಂದರಿಸಿ ಹೋಯಿತು. ಈಗ ಮಾಡತಕ್ಕದ್ದೇನಿರುವುದು? ಅಸ್ಥಿಪಂಜರಗಳಂತಿರುವ ಈ ಬಡಜೀವಿಯಿಂದ ಇನ್ನು ಆಗತಕ್ಕದ್ದೇನಿರುವುದು? ಚಂದ್ರಕಾಂತನಂತಹ ಸ್ನೇಹಿತರು ಆಗಾಗ ನಿರಾಶನಾಗಬೇಡ, ಮನುಷ್ಯನಿಂದ ಆಗದ ಕೆಲಸವಿಲ್ಲ. ಸ್ಥಿರಬುದ್ಧಿಯಿಂದಿರು ಎಂದು ಆಗಾಗ್ಗೆ ಎಚ್ಚರಿಸಿದರೂ ನನ್ನ ಮನಸ್ಸು ಸದಾ ನಿರಾಶೆ ಪಡುತ್ತಿರುವುದು. ತಂದೆತಾಯಿಗಳ ಕಷ್ಟನಿರ ಜೀವನದ ಆಸೆಯನ್ನು ನನ್ನಂತಹ ಬಿ. ಎ. ಎಂ. ಎ. ಡಿಗ್ರಿ ಪಡೆದ ಸಹೋದರರ ದುಂದು ವೆಚ್ಚಗಳಿಗೆ ಆಹುತಿಯಾಗಿ ಕಡೆಗೆ ಉದ್ಯೋಗ ದೊರೆಕದೆ ನನ್ನಂತೆ ಕಷ್ಟಪಡುತ್ತಿರುವ ಅದೆಷ್ಟು ಮಂದಿ ಈ ಭಾರತದಲ್ಲಿಲ್ಲ? ಹಣದ ರಾಶಿಗಳನ್ನು ಮನೆಯೊಳಗೆ ತುಂಬಿಟ್ಟು, ಕೈಗಾರಿಕೆ, ಕೃಷಿ ಮುಂತಾದುವುಗಳ ಮುಖಾಂತರ ಬಡಜನರ ಹೊಟ್ಟೆ, ಬಟ್ಟೆಗೆ ಸದ್ವಿನಿಯೋಗ ಮಾಡಿದರೆ, ಕೋರ್ಟು ಪಿಲೀಡರುಗಳಿಗೆ ವ್ಯಾಜ್ಯಗಳ ಮುಖಾಂತರ, ಹಾಗೂ ಕುಡಿತನ, ಜೂಜು ಮುಂತಾದುವುಗಳಿಗೆ ವ್ಯಯ ಮಾಡುವ ಅದೆಷ್ಟು ಐಶ್ವರ್ಯವಂತರಿಲ್ಲ? ಓದು, ಬರಹ ಅರಿಯದ, ಕೃಷಿಕರು, ಬೇಸಾಯಗಾರರು ದಿನನಿತ್ಯದ ತಮ್ಮ ಕೆಲಸಗಳನ್ನು ಮಾಡಿ ದೃಢಕಾಯರಾಗಿ ಅದೆಷ್ಟು ಸುಖವನ್ನು ಹೊಂದುತಿಲ್ಲ? ನನ್ನಂತಹ ಅದೆಷ್ಟು ಸಹೋದರರು ಪರದಾಸ್ಯದ ಸಂಕಲೆಗೆ ಸಿಲುಕಿ ಬರೇ ಅಲ್ಪ ವೇತನಕ್ಕಾಗಿ ಕುಣಿಸಿದಂತೆ ಕುಣಿದು ತಮ್ಮ ದೇಹದಲ್ಲಿ ದಾಸ್ಯದ ರಕ್ತವನ್ನು ತುಂಬಿಸುತ್ತಿಲ್ಲ? ಛೇ! ಈ ಪರದಾಸ್ಯತನಕ್ಕೆ ಧಿಕ್ಕಾರವಿರಲಿ!

ತಿಂಗಳೊಂದು ಕಳೆಯಿತು. ರಾಮಚಂದ್ರನು ದಿನ ಹೋದಷ್ಟಕ್ಕೆ ಕೃಶನಾಗ... ಭಯಂಕರ ವಿಷಮಜ್ವರಕ್ಕೆ ತುತ್ತಾಗಿ ಜೆ. ಜೆ. ಹೊಸ್ಪಿಟಲಿಗೆ ದಾಖಲು ಪಟ್ಟನು. ಚಂದ್ರಕಾಂತನಂತಹ ಸ್ನೇಹಿತರು ಆಗಾಗ್ಗೆ ತಕ್ಕದಾದ ಉಪಕಾರವನ್ನು ಮಾಡುತ್ತಿರುವರು. ಇತ್ತ ವೃದ್ಧ ಮಾತಾಪಿತರುಗಳು ರಾಮಚಂದ್ರನ ಕಹ ವಿಷಯಕ್ಕೂ, ತಮ್ಮ ಬಡತನದ ಬೇಗೆಗೂ ಸೊರಗಿ ಹೋಗಿರುವರು. ಮಕ್ಕಳಂತೂ ಉಸಿರೆತ್ತದೆ ಪರರ ಮನೆಯಲ್ಲಿ ಕಟ್ಟಾಳುಗಳಾಗಿರುವರು.

ಸೋಮವಾರ ದಿನ ಸುಮಾರು 10 ಗಂಟೆ ಸಮಯ ಇರಬಹುದು. ಅಂಚೆಯವನು ಅವಸರದಿಂದ ರಾಮಚಂದ್ರನ ತಂದೆಯ ಕೈಯಲ್ಲಿ ಸಣ್ಣ ಲಕೋಟೆಯೊಂದನ್ನು ಕೊಟ್ಟನು. ಅದ ತಂತೀ ವರ್ತಮಾನವಾಗಿತ್ತು. ಅದರಲ್ಲಿ ಈ ರೀತಿ ಬರೆದಿತ್ತು. ನಿಮ್ಮ ಮಗ ರಾಮಚಂದ್ರನು ನಿನ್ನೆ ಸಾಯಂಕಾಲ ವಿಷಮಜ್ವರದಿಂದ ಮೃತಿಯನ್ನೈದಿದನು. ಸಾಧ್ಯವಿರುವಷ್ಟಿಗೆ ಪ್ರಯತ್ನಪಟ್ಟೆವು. ಪ್ರಾಣದಿಂದ ಉಳಿಸಲು ಸಾಧ್ಯವಾಗಲಿಲ್ಲ. ನಿಮ್ಮ ದುಃಖದಲ್ಲಿ ನಾವು ಸಮಭಾಗಿಗಳು. ಚಂದ್ರಕಾಂತ ಎಂದಿತ್ತು. ಅಂತಹ ಹೃದಯದ್ರಾವಕ ಸಂಗತಿಯದು. ವಾಚಕರೇ, ಮಗನನ್ನೇ ನಂಬಿಕೊಂಡಿದ್ದ ಆ ಬಡ ಮಾತಾಪಿತರುಗಳ ಅವಸ್ಥೆ ಈ ಸಮಯ ಹ್ಯಾಗಿರಬಹುದು.

ಆಶೆಯು ಆಹುತಿಯಾಯಿತು

ನೋಟೀಸು.

ಕಾಸ್ರಗೋಡು ತಾಲೂಕು, ಉದ್ಯಾವರ ಗ್ರಾಮದಲ್ಲಿರುವ ಉದ್ಯಾವರ ಪದ್ಮನಾಭ ನಾಯ್ಕರ ಮಗ ಉ. ಗೋಪಾಲಕೃಷ್ಣ ನಾಯ್ಕನಾದ ನಾನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ನಾನು ಕಾಸ್ರಗೋಡು ಕಸಬೆಯಲ್ಲಿಯ ಗೋಪಾಲಕೃಷ್ಣ ನಾಯ್ಕರ ಮತ್ತು ಕಂಪೆನಿ ಎಂಬ ಹೆಸರಲ್ಲಿ ನಡಿಸಿ ಬಂದ ಜವುಳಿ ವ್ಯಾಪಾರದಿಂದ ನಾನು ತಾ. ೩೧-10-1935ರಲ್ಲಿ ನನ್ನ ಪಾಲುಗಾರನಾದ ಕಾಸರಗೋಡು ಕಸಬೆಯಲ್ಲಿರುವ ಎಂ. ಪಾಂಡುರಂಗ ಶೆಣೈವ ಶ್ಯಾನುಭಾಗರಿಗೆ ಎಲ್ಲಾ ವಹಿವಾಟನ್ನು ಬಿಟ್ಟುಕೊಟ್ಟು ನಾನು ಸದ್ರಿ ಕಂಪೆನಿಯಿಂದ ಬಿಡುಗಡೆಹೊಂದಿರುತ್ತೇನೆ. ಇನ್ನು ಸದ್ರಿ ಕಂಪೆನಿಯಿಂದ ಹೊರಗೆ ಸಲ್ಲತಕ್ಕ ಮತ್ತು ಕಂಪೆನಿಗೆ ಬರತಕ್ಕ ಎಲ್ಲಾ ಲೇವಾದೇವಿಗಳಿಗೆ ಸದ್ರಿ ಎಂ. ಪಾಂಡುರಂಗ ಶೆಣೈವ ಶ್ಯಾನುಭಾಗರೇ ಜವಾಬ್ದಾರರಲ್ಲದೆ ನಾನು ಜವಾಬ್ದಾರನಲ್ಲವೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ.

Udma, D. 28-12-35. — U. Gopalkrisana Nayak

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠಸ್ವರ, ಬಿಳಿಚಾದ, ಗುರುಡಿಗೀಡ [illegible] ಕಣ್ಣು, ಇಳಿದ ಮುಖ, ದುಃಖ ದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸುತ್ತು, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಮೆಯಾಗುವುದು.

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ.

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0. 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ, ಬಾತಕ್ಕೆ ಕ್ಷೀರಬಲವೂ, ಮುಟ್ಟುಗೂಡಿ [illegible] ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

೫೦೦ ರೂಪಾಯಿ ಬಹುಮಾನ
(ವಶೀಕರಣ ಉಂಗುರ)

ಬಹು ಶಕ್ತಿಯುತವಾದುದು ಅಲ್ಲದೆ [illegible] ಯುತವಾದುದು. ಬಹಳ ಆಶ್ಚರ್ಯಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ದಾಸನನ್ನು ಯಾರಲ್ಲಿ ಕಳ್ಳದೆಯೋ [illegible] ವಶನಾಗುತ್ತಾನೆ. [illegible] ವ್ಯಾಪಾರದಲ್ಲಿ, ಜಯ, ಗೆಲುವು [illegible] ಸಿಗುತ್ತದೆ. ರೋಗ [illegible] ಅಲ್ಲದೆ [illegible] ಕಾರ್ಯಕ್ಕೆ [illegible] ಅನುಭವವಿಲ್ಲದೆ [illegible] ಇದರ ಕ್ರಯವಿಲ್ಲ. [illegible] ಬೇಕಾದ ಆವಶ್ಯಕವಿಲ್ಲ. ಇದು ನಿಮ್ಮ [illegible] ಸಾಕು. ಕ್ರಯ [illegible] ಮಾತ್ರ.

01 P. 8 Bengal Mesmarism House
5-7 Panchpota, Bengal (B. S.)

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ ...	3—6	3—12
ಹೊಸ ಮುಕ್ತಿ ...	3—10	4—2
ಗುಡ್ಡೆ ಸುಗ್ಗಿ ...	3—8	3—14
ಊರ ಅವ್ವಲ್ ದೆಕ್ಕಿಗೆ ...	4—0	4—8
ರಂಗೂನು ಬಿ. ಗೋ. ಒಕ್ಕ...	6—4	7—0
ಎಲ್ಲೂರು ಬೆ. ಮು. ಒಕ್ಕ...	4—4	4—8
ಗೋಧಿ ಗೋಣಿ ಒಕ್ಕ ...	8—8	10—4
ಹೆಸರು ಗೋಣಿ ಒಕ್ಕ ...	9—[illegible]	9—8
ಮುರುವ ಗೋಣಿ ಒಕ್ಕ ...	5—4	5—12
ಕಡಲೆ ಗೋಣಿ ಒಕ್ಕ ...	7—4	9—8
ತೊಗರಿಬೇಳೆ ಗೋಣಿ ಒಕ್ಕ...	10—0	13—8
ಉದ್ದು ಗೋಣಿ ಒಕ್ಕ ...	9—8	10—0
ಹೆಸರು ಗೋಣಿ ಒಕ್ಕ ...	9—4	9—12
ಊರುಬೆಲ್ಲ ಕಂಡಿ ಒಕ್ಕ ...	32—6	40—8
ಉಪ್ಪು ಗೋಣಿ ಒಕ್ಕ ...	4—8	4—8
ಕೊಬ್ಬರಿ ಕಂಡಿ ಒಕ್ಕ ...	60—0	70—0
ಕೊಬ್ಬರಿ ಹಿಂಡಿ ಕಂಡಿ ಒಕ್ಕ...	28—0	28—0
ಎಳ್ಳಿಂಡಿ ಕಂಡಿ ಒಕ್ಕ ...	33—12	35—0
ಕೊಬ್ಬರಿ ಎಣ್ಣೆ ಮುಡಿ ಒಕ್ಕ...	5—0	6—0
ಎಳ್ಳೆಣ್ಣೆ ಮುಡಿ ಒಕ್ಕ ...	7—0	7—0
ಚಿಮಿಣಿಎಣ್ಣೆ ಪೆಟ್ಟಿಗೆ ಒಕ್ಕ...	6—5	6—5
ಹೊರಗಿನ ಸಕ್ಕರೆ ಮು. ಒಕ್ಕ...	3—9	3—9
ಮೆಣಸು ...	2—8	4—0
ಸಾಸಿವೆ ಮುಡಿ ಒಕ್ಕ ...	5—8	6—0
ಶಾಲುಮೆಣಸು ಖಂ. ಒಕ್ಕ ...	102—8	105—
[illegible] ಮುಡಿ ಒಕ್ಕ...	38—0	39—0
ಗೇರುಬೀಜ ಮು. ಒಕ್ಕ ...	4—6	4—8
ಅರಸಿನ ಕಂಡಿ ಒಕ್ಕ ...	35—0	37—8
ಕಾಂಡ್ಯ [illegible] ಮು. ಒಕ್ಕ...	9—12	9—14
ಕಾಂಡ್ಯ [illegible] ಮು. ಒಕ್ಕ	12—8	14—0
[illegible] ಒಕ್ಕ ...	17—8	18—0
[illegible] ಮು. ಒಕ್ಕ...	10—0	10—
[illegible] ಒಕ್ಕ ...	22—8	22—8
ಹುಣಸೆ ಹುಳಿ ಕಂಡಿ ಒಕ್ಕ	20—0	25—8
[illegible] ಕಾಫಿ ಕಂಡಿ ಒಕ್ಕ	145—0	150—0
[illegible] ಕಾಫಿ ಕಂಡಿ ಒಕ್ಕ...	185—0	190—8
[illegible] ಬಲೆ ...	25—0	26—0
[illegible] ಬಲೆ ...	26—0	30—0
ಹತ್ತಿ ಬಂಡಿ ...	100—0	115—0

ಜಠರಾಗ್ನಿಯ ಅಜೀರ್ಣದಿಂದಾಗಿ ಹಲವು ವರ್ಷಗಳ ಬಾಧೆ.

ನೀವು ಉದರವಾಯು ಮತ್ತು ಹೊಟ್ಟೆಯುಬ್ಬುವಂತಾಗುವ ಅಜೀರ್ಣ ರೋಗದಿಂದ ಅನೇಕ ವರ್ಷಗಳ ವರೆಗೆ ಬಾಧಿಸಲ್ಪಟ್ಟು, ಆ ಮೇಲೆ ಒಂದು ಔಷಧಿಯು ದೊರೆತು, ಅದರಿಂದ ನೀವು ಪೂರ್ಣ ಗುಣಹೊಂದಿದೊಡನೆ ಅದೊಂದು ಅದ್ಭುತವೆನ್ನಲಾರಿರಾ? ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ (ಉದರರೋಗ ನಿವಾರಿಣೀ ಚೂರ್ಣ)ನ ಕುರಿತು ಬ್ರೊಮ್ಲೆಯ, ಫಾರ್ಮ್ ಫೀಲ್ಡ್ ರೋಡಿನಲ್ಲಿರುವ ಮಿ। L. S. J. ಯವರು ಹೀಗೆಯೇ ಹೇಳಿರುವರು. ನೀವು ಸಾಮಾನ್ಯತರದ ಅಜೀರ್ಣದಿಂದಾಗಲೀ ವಿಶೇಷವಾದ ಜಠರಾಗ್ನಿಯಿಂದಾಗಲೀ, ಬಾಧಿಸಲ್ಪಡುತ್ತಿರುವಿರಾದರೆ ನಿಮಗೂ ಅದು ಅಂತಹ ಗುಣವನ್ನೇ ಕೊಡುವುದು.

ಮಿ। L. S. J. ಯವರು ಹೇಳುವುದನ್ನು ಓದಿರಿ:—"ಅನೇಕ ವರ್ಷಗಳ ವರೆಗೆ ಜಠರಾಗ್ನಿ ಮತ್ತು ಅಜೀರ್ಣಗಳಿಂದಾಗಿ ನಾನು ನರಕ ಬಾಧೆಯನ್ನನುಭವಿಸುತ್ತಿದ್ದೆ. ಮೂರು ತಿಂಗಳುಗಳ ಹಿಂದೆ ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನ ಕುರಿತು ನನಗೆ ತಿಳಿಸಲಾಯಿತು. ಅದರ ಉಪಯೋಗದಿಂದ ನನಗೆ ದೊರೆತ ಗುಣವು ಅತ್ಯದ್ಭುತಕರವಾಗಿ ಇಂದ್ರಜಾಲವೇ ಸರಿ. ಮೂರು ತಿಂಗಳುಗಳ ಸುಖಶಾಂತಿ ಮಾಡಿದುದಕ್ಕಾಗಿ ನಿಮ್ಮನ್ನು ಅಭಿವಂದಿಸಲೇ"?

ಇಂದೇ ಒಂದು ಬಾಟ್ಲಿಯನ್ನು ಪಡೆಯಿರಿ. ಆದರೆ ಕೆಂಪು ಮುದ್ರೆಯುಳ್ಳ ತಾಜಾ ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಪಡೆಯುವಂತೆ ಎಚ್ಚರಿರಿ.

Alex. C. Maclean

ಎಂಬ ಸಹಿಯು ಅಚ್ಚು ಬಿಲ್ಲೆಗಳ ಮತ್ತು ಚೀಟಿಗಳ ಮೇಲಿದೆ.—ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವದೇ ಕಷ್ಟವಾಗುವುದಾದರೆ,

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ.

Shiromani Narayanacharya & Co.,

Silk Lace & Cloth Manufacturers

Choukhamba Benares City

THIS MAN
OUR CUSTOMER

ಕೃಷ್ಣರಾಯರು:—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು, ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲ ಬಹಳ ಆನಂದಗೊಂಡರು. ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ತೋರುತ್ತಿರುವೆನು.

ಆನಂದರಾಯರು:—ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಕಾಶಿಗೆ, ಕಡೇಗೆ ನಡು [illegible] ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ.

ಕೃಷ್ಣರಾಯರು:—"ಅದರ ಕ್ರಯವೆಷ್ಟು?"

ಆನಂದರಾಯರು:—ಎಲ್ಲಾ ಕಡೆಗಳಿಗಿಂತ ಶೇಕಡಾ 25 ಅಗ್ಗದ ದರದಲ್ಲಿ ಸಿಕ್ಕಿತು. ನೀವು ಸಹ ಅಲ್ಲಿಗೆ ಬರೆದು ತರಿಸಿ. ಕ್ರಯಕ್ಕೆ ತಕ್ಕ ಜವಾಬು ಕಂಡಿತ. ಜರಿ, ರಂಗು ಮೊದಲಾದ ಸೀರೆಗಳು ಸಿಗುತ್ತವೆ. 18 ಮೊಳ ಉದ್ದ 2½ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ. ಪದಲು ಬುಟ್ಟಿ ಇರುವುದು 18 ಮೊಳ ಸೀರೆ 1ಕ್ಕೆ ರೂ. 45ರಿಂದ 150ರ ವರೆಗೆ, 16 ಮೊಳ ಪದಲು ಸಹ ಸೀರೆ 1ಕ್ಕೆ ರೂ. 10ರಿಂದ 55ರ ವರೆಗೆ, ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ, ಬುಟ್ಟೆದಾರ ದವಕೆ ಕಣ 1ಕ್ಕೆ ರೂ. 3ರಿಂದ 10ರ ವರೆಗೆ. 8 ಮೊಳದ ಸೀರೆ 1ಕ್ಕೆ ರೂ. 7ರಿಂದ 15ರ ವರೆಗೆ. 8 ಮೊಳದ ಜರಿ ಸೀರೆ 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಸೀರೆ 1ಕ್ಕೆ ರೂ. 4ರಿಂದ 16ರ ವರೆಗೆ, 6 ಮೊಳದ ಸೀರೆ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲ ತರದ ದ್ರವ್ಯಗಳ ಕ್ರಯದ ಪಟ್ಟಿ ಬೇಕಾದರೆ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

LOOK SHARP! LOOK AHEAD

Murdeshwar's Banking Institute.

Pioneer Institute on the West Coast.

Opens out Careers for Businessmen, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,
Dip. Econ; F. R. Econ; S. (Lond.)
Principal.
Ganapathy High School Street,
Mangalore.

ಶಾಲಿವಾಹನ ಶಕ ೧೮೫೬ನೆಯ ಯುವ ಸಂವತ್ಸರದ ಪುಷ್ಯ ಬ ೩ ಶನಿವಾರದಿಂದ ಪುಷ್ಯ ಬ ೮ ಶುಕ್ರವಾರದ ವರೆಗಿನ ಪಂಚಾಂಗ. (ಗಣಿತನೀಯ ಮೂಲದ ಪ್ರಯೋಗ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
11	ಶನಿ	೩	[illegible]	ಆಶ್ಲೇಷ	[illegible]	[illegible]	[illegible]
12	ರವಿ	೪	[illegible]	ಮಘಾ	[illegible]	[illegible]	
13	ಸೋಮ	೫	[illegible]	ಪುಬ್ಬ	[illegible]	[illegible]	
14	ಮಂಗಳ	೫	೧	ಉತ್ತರ	[illegible]	[illegible]	
15	ಬುಧ	೬	[illegible]	ಹಸ್ತ	[illegible]	[illegible]	
16	ಗುರು	೭	[illegible]	ಚಿತ್ರ	[illegible]	[illegible]	
17	ಶುಕ್ರ	೮	[illegible]	ಚಿತ್ರ	[illegible]	[illegible]	

ಹಿಂದೂದೇಶದ ಸಾಗುವಳಿಯ ಸ್ಥಿತಿ.

ಚೀನೀಯ ವಿದ್ಯಾರ್ಥಿಗಳ ಗಲಭೆ! ಹಬಸಿಯುವರ ಪರಾಕ್ರಮ!

ಕೊಂಗ್ರೆಸ್ ಸಂಸ್ಥೆಯು ಸಂಪೂರ್ಣ ಸ್ವರಾಜ್ಯಕ್ಕಾಗಿ ಚಳವಳವನ್ನು ಯಾವಾಗ ಪ್ರಾರಂಭಿಸಿತು?

ಚೀನಿಯ ವಿದ್ಯಾರ್ಥಿಗಳ ಗಲಭೆ

ಜಪಾನೀಯರು ಪಾಶ್ಚಾತ್ಯ ಆದರ್ಶಗಳಿಂದ ಸಾಮ್ರಾಜ್ಯ ಸ್ಥಾಪಿಸುವ ಎಲ್ಲಾ ವಿಧಗಳನ್ನು ಚೆನ್ನಾಗಿ ಕಲಿತುಕೊಂಡಿರುತ್ತಾರೆ. ಅದಲ್ಲದೆ ಅನೇಕ ನವೀನ ಉಪಾಯಗಳನ್ನೂ ಯೋಜನೆಗಳನ್ನೂ ಕಲಿತುಕೊಂಡಿರುವರು ಮೆಂಚೂರಿಯದಲ್ಲಿ ಗೊಂಬೆಯಂತೆ ಕುಣಿದಾಡಿಸಲು ಸಾಧ್ಯವಾಗುವ ಅರಸರನ್ನು ಇರಿಸಿರುವರು. ಈಗ ಉತ್ತರ ಚೀನದ ಪ್ರಾಂತ್ಯಗಳಲ್ಲಿ ಸ್ವಯಂಪ್ರಭುತ್ವದ ರಾಜ್ಯ ಸ್ಥಾಪನೆ ಮಾಡಲು ಸಾಧಿಸುತಿದ್ದಾರೆ ಈ ರೀತಿ ಸ್ವಯಂಪ್ರಭುತ್ವದ ರಾಜ್ಯಗಳು ಚೀನಾ ದೇಶದಲ್ಲಿ ಸ್ಥಾಪನೆಯಾದರೆ ಬಲವು ಕುಂದುವುದು. ಸಂಪೂರ್ಣ ಚೀನಾ ದೇಶವನ್ನು ಸ್ವಾತಂತ್ರ್ಯ ದೇಶವನ್ನಾಗಿ ಮಾಡಿದರೆ ಒಂದು ತರ ಅದರಲ್ಲೂ ಜಾಪಾನೀಯ ಕುತಂತ್ರ ಕುಯುಕ್ತಿಗಳಿಂದ ಹೊರಟಿದ ಈ ಸ್ವಯಂಪ್ರಭುತ್ವದ ಚಳವಳವು ಚೀನಾ ದೇಶದ ಶಕ್ತಿಯನ್ನು ಇನ್ನೂ ಕುಂದಿಸುವುದು ಆದುದರಿಂದಲೇ ಅಲ್ಲಿನ ಅಸಂಖ್ಯಾತ ವಿದ್ಯಾರ್ಥಿಗಳು ಅಸಮಾಧಾನ ಪಟ್ಟಿರುತ್ತಾರೆ ಯಾವತ್ತು ದೇಶಗಳಲ್ಲಿ ತರುಣರು ತಮ್ಮ ಸ್ವತಂತ್ರ್ಯವನ್ನು ಕಳಕೊಳ್ಳಲು ಒಡಂಬಡಲಾರರು ಅಲ್ಲಿನ ವಿದ್ಯಾರ್ಥಿಗಳ ಸ್ವಾತಂತ್ರ್ಯದ ಚಳವಳದ ಕುರಿತು ಉತ್ತರದೇಶದ ಟಿಯೆಂಟ್ಸಿನ್ ಎಂಬಲ್ಲಿಂದ ಈ ಕೆಳಗಿನ ವಾರ್ತೆ ಬಂದಿರುತ್ತದೆ

ಹತ್ತು ಸಾವಿರ ವಿದ್ಯಾರ್ಥಿಗಳು (ಇದರಲ್ಲಿ ೫೦೦೦ ಸಾವಿರ ಮಂದಿ ಹೆಮ್ಮಕ್ಕಳು) ಉತ್ತರ ಚೀನದ ಮುಖ್ಯಪಟ್ಟಣವಾದ ಪೇಕಿಂಗ್ ನಲ್ಲಿ ನಡೆದ ವಿದ್ಯಾರ್ಥಿಗಳ ಚಳವಳ ಸಹಾನುಭೂತಿಯಾಗಿ ಸ್ವತಂತ್ರ ಚಳವಳದ ಪ್ರದರ್ಶನಗಳನ್ನು ಅಹಿಂಸಾಧರ್ಮದಿಂದ ಆಚರಿಸಿ, ಅತಿ ಶಾಂತತೆಯಿಂದ ಜರಗಿಸಿದರು

ಈ ವಿದ್ಯಾರ್ಥಿಗಳು ಅಲ್ಲಿನ ನಗರಸಭಾಧ್ಯಕ್ಷರಲ್ಲಿ ತೆರಳಿ, ಸ್ವಾತಂತ್ರ ಚಳವಳವನ್ನು ರಕ್ಷಿಸುವ ಇದು ಕೋರಿಕೆಗಳನ್ನು ಸಲ್ಲಿಸಿದರು ಅಲ್ಲಿರುವ ಜಪಾನೀಯ ಸಂಗ್ರಾಮಾಧಿಕಾರಿಗಳು ಈ ಚಳವಳವನ್ನು ಪ್ರತಿಕೂಲಿಸಿದರು ಚೀನಾ ಪೋಲೀಸರ ಮುಖ್ಯಾಧಿಕಾರಿಗಳು ಮುಂದೆ ಸಂಭವಿಸಬಹುದಾದ ಅನುಸಂಕಟಗಳನ್ನು ತಡೆಯುವುದಕ್ಕಾಗಿ ವಿದ್ಯಾರ್ಥಿ ಸಂಸ್ಥೆಗಳ ಅಧ್ಯಕ್ಷರನ್ನು ಕಾಣುತ್ತಿದ್ದಾರೆ

ಹಿಂದೂದೇಶದ ಸಾಗುವಳಿಯ ಸ್ಥಿತಿ.

ಅಕ್ಕಿ.

ಹಿಂದೂದೇಶ	ಎಕ್ರೆಗೆ	1295	ರಾತ್ತಲ
ಜಾಪಾನು	,,	8040	,,
ಐಗುಪ್ತ	,,	2788	,,

ಸಕ್ಕರೆ.

ಹಿಂದೂದೇಶ	ಎಕ್ರೆಗೆ	2400	ರಾತ್ತಲ
ಜಾಪಾನು	,,	8840	,,
ಐಗುಪ್ತ	,,	8878	,,
ಜಾವಾ	,,	11,988	,,
ಹವಾಯಿ	,,	18,799	,,

ಮೇಲಿನ ಅಂಕೆಸಂಖ್ಯೆಗಳಿಂದ ಹಿಂದೂದೇಶದ ಸಾಗುವಳಿಯ ಸ್ಥಿತಿಯು ಅಷ್ಟು ಉತ್ತಮವಲ್ಲವೆಂದು ವ್ಯಕ್ತವಾಗುತ್ತದೆ ಭೂಮಿಯು ಫಲವತ್ತಾಗಿರದಿರುವುದರಿಂದಲೆ ಹೀಗಾಗಿದೆ ಎಂದು ನಮ್ಮ ಅನೇಕ ವಿಜ್ಞಾನಿಗಳ ಮಾತು. ಇತರ ದೇಶಗಳಂತೆ ನಾವು ನಮ್ಮ ಭೂಮಿಯನ್ನು ಫಲವತ್ತಾಗಿ ಮಾಡುವುದರ ಕಡೆ ಹೆಚ್ಚು ಲಕ್ಷ್ಯ ಕೊಡಬೇಕು. ಸಸ್ಯಗಳ ಬೆಳವಣಿಗೆಗೆ ಮುಖ್ಯವಾಗಿರುವ ನ್ಯಾಟ್ರೊಜನ್ ಅಂಶವನ್ನು ಭೂಮಿಯಲ್ಲಿ ಹೆಚ್ಚಿಸಬೇಕು. ಅದಕ್ಕೆ ಸಾಗುವಳಿಯಲ್ಲಿ ನ್ಯಾಟ್ರೊಜನ್ ಇರುವ ಗೊಬ್ಬರದ ಉಪಯೋಗವಾಗಬೇಕು ಈ ಗೊಬ್ಬರಗಳನ್ನು ಪಡಕೊಳ್ಳಲು ನಮ್ಮ ರೈತರಿಗೆ ಅನಾನುಕೂಲವಾಗಿರುತ್ತದೆ. ಸುಲಭ ತರದಲ್ಲಿ ರೈತರು ಗೊಬ್ಬರವನ್ನು ಒದಗಿಸಿಕೊಳ್ಳುವ ಅನೇಕ ಕ್ರಮಗಳನ್ನು ಕಂಡುಹಿಡಿದಿರುವರು. ಇವುಗಳಲ್ಲಿ ಸಕ್ಕರೆ ಅಥವಾ ಬೆಲ್ಲದತಯಾರಿಯಲ್ಲಿ ಹಿಂಡಿದ ಕಬ್ಬನ್ನು ಶ್ರೇಷ್ಠವಾದ ಗುಣಗಳಿಂದ ಕೂಡಿರುವುದೆಂದು ತಿಳಿದುಬಂದಿದೆ ಕಬ್ಬು ಬೆಳೆಯಿಸಿ ಬೆಲ್ಲ ತೆಗೆಯುವ ನಮ್ಮ ರೈತರು ಒಂದು ಉಚ್ಚ ಗೊಬ್ಬರವನ್ನಾಗಿ ಉಪಯೋಗಿಸಬಹುದು

ಕೊಂಗ್ರೆಸ್ ಸಂಸ್ಥೆಯು ಸಂಪೂರ್ಣ ಸ್ವರಾಜ್ಯಕ್ಕಾಗಿ ಚಳವಳವನ್ನು ಯಾವಾಗ ಪ್ರಾರಂಭಿಸಿತು?

ಕೊಂಗ್ರೆಸ್ ತನ್ನ ಮುಖ್ಯ ಧ್ಯೇಯವನ್ನು ಸಂಪೂರ್ಣ ಸ್ವರಾಜ್ಯವನ್ನಾಗಿ ಮಾಡಿದ್ದು, ಮಹಾತ್ಮಾಗಾಂಧಿಯವರು ಅದನ್ನು ಸೇರಿದಂದಿನಿಂದೆಂದು ಕೆಲವರ ಅಭಿಪ್ರಾಯ ಆದರೆ ಇದು ಕೇವಲ ತಪ್ಪು ಅಭಿಪ್ರಾಯ ಶ್ರೀ| ದಾಧಾಭಾಯಿ ನೌರೋಜಿಗಳವರು ೧೯೦೬ ಕೊಂಗ್ರೆಸ್ಸಿನ ಅಧ್ಯಕ್ಷರಾಗಿ ಕೊಟ್ಟ ಬಿನ್ನಪದಲ್ಲಿ ಹಿಂದು ದೇಶಕ್ಕೆ ಬ್ರಿಟಿಷ ಸಾಮ್ರಾಜ್ಯ ಸ್ವಯುಕ್ತ ರಾಜಧಾನಿಗಳಂತೆ ಸ್ವರಾಜ್ಯ ಸಿಕ್ಕಬೇಕೆಂದೂ ಅಂದರೆ, ಸರಕಾರದ ಪರಿಪೂರ್ಣ ಅಧಿಕಾರವು ನಮಗೆ ಸಿಕ್ಕಬೇಕಾಗಿಯೂ, ತೆರಿಗೆ ವಿಧಿಸುವ ಹಕ್ಕು, ಇದನ್ನು ಯುಕ್ತಕಂಡ ರೀತಿಯಲ್ಲಿ ವ್ಯಯಿಸುವ ಹಕ್ಕು, ಇವೇ ಮೊದಲಾದ ಸ್ವರಾಜ್ಯ ಅನ್ವಯಿಸುವ ರಾಜಕೀಯ ಹಕ್ಕುಬಾಧ್ಯತೆಗಳು ನಿಮಗೆ ದೊರಕಬೇಕೆಂದೂ ಸೂಚಿಸಿದ್ದರು ಇಂಗ್ಲೆಂಡು, ಹಿಂದುದೇಶ ಸಂಬಂಧವು ಸ್ವಾತಂತ್ರ್ಯ ಜನಾಂಗಗಳ ಸಂಬಂಧದಂತಿರಬೇಕೆಂದು ಇವರ ಮತವಾಗಿತ್ತು ಮಹಾತ್ಮಾ ಗಾಂಧಿಯವರು ಇದೇ ಉದ್ದೇಶವನ್ನು ಸಾಧಿಸಲು ಸತ್ಯಾಗ್ರಹ, ಸ್ವದೇಶಿ, ಅಸ್ಪೃಶ್ಯತಾ ನಿವಾರಣ, ಹಳ್ಳಿಗರ ಉದ್ಧಾರ ಇತ್ಯಾದಿ ಯೋಜನೆಗಳಿಂದ ದೇಶಾಭ್ಯುದಯ ಕಾರ್ಯವು ಬಿರುಸಾಗಿ ನಡೆಯುವಂತೆ ಮಾಡಿರುವರು

ಹಬಸಿಯವರ ಪರಾಕ್ರಮ.

ಪೆಟ್ರೋಲು ಇತ್ಯಾದಿ ಖನಿಜದ ಎಣ್ಣೆಗಳು ಇಟಲಿಗೆ ಸಿಕ್ಕದ ಹಾಗೆ ಸೆಂಕ್ಷನು ಪ್ರತಿಕ್ರಿಯೆಗಳನ್ನು ಜ್ಯಾರಿ ಮಾಡಿದರೆ, ಇಟಲಿಯು ಆ ಪ್ರತಿಕ್ರಿಯೆಗಳಲ್ಲಿ ಭಾಗವಹಿಸುವ ಜನಾಂಗಗಳೊಡನೆ ಯುದ್ಧ ಮಾಡುವೆವೆಂದು ಮಾಡಿದ ಗದರಿಕೆಯು ಬ್ರಿಟನ್ ಮತ್ತು ಫ್ರಾನ್ಸಿನವರಿಗೆ ಯುರೋಪಿನಲ್ಲಿ ಇನ್ನೊಂದು ಮಹಾಯುದ್ಧವು ಸಂಭವಿಸುವಂತಿದೆ ಇಟೇಲಿಯ ಸೇನಾಬಲ ನೌಕಾ ವಾಯುಬಲಗಳು ಎಷ್ಟು ಭಯಂಕರವಾಗಿರುವುವೆಂದು ಈಗ ಬಯಲಾಗಿರುವುದು ಇಂತಹ ವೈರಿಯನ್ನು ಹಬಸಿಯ ಸೈನಿಕರು ತಡೆಯುತ್ತಿದ್ದಾರೆ ಕೆಲವೆಡೆಗಳಲ್ಲಿ ಹೊಡದೋಡಿಸುತ್ತಿದ್ದಾರೆ. ಅವರ ಟೆಂಕು ಇತ್ಯಾದಿ ಯುದ್ಧ ಸಾಮಾಗ್ರಿಗಳನ್ನು ವಶೀಕರಿಸಿರುತ್ತಾರೆ ಅನೇಕ ಕಡೆಗಳಲ್ಲಿ ಇಟೇಲಿಯಾನರು ಸೋತು ಕಕ್ಕಾಬಿಕ್ಕಿ ಪಲಾಯನ ಮಾಡುವಂತೆ ಮಾಡಿರುತ್ತಾರೆ ಇವೆಲ್ಲಾ ವಾರ್ತೆಗಳನ್ನು ಕೇಳಿದಲಿ ಹಬಸಿಯುವರ ಪರಾಕ್ರಮವು ಶ್ಲಾಘನೀಯವು ಎಂದು ನಮಗೆ ಹೊಳೆಯುತ್ತದೆ ಯುರೋಪ ಎಂಬ ಸಿಂಹದೊಡನೆ ಸಣ್ಣ ಕುರಿ ಮರಿಯು ಜಗಳವಾಡಿ ಜಯಶಾಲಿಯಾಗುವಂತಾಯಿತು ಇದು.

ಕಳೆದ ಮಹಾಯುದ್ಧದಲ್ಲಿ ಜರ್ಮನಿಯರು ಹತ್ತಿರವಿರುವ ಬೆಲ್ಜಿಯನರ ಮೇಲೆ ಧಾವಿಸಲು, ಅವರು ಅದನ್ನು ಅತಿ ಸಾಹಸದಿಂದ ರಕ್ಷಿಸಿದರು. ಆಗ ಅವರನ್ನು ಶ್ಲಾಘಿಸಿ ಅವರೊಡನೆ ಅನೇಕ ಬಿಳಿಯ ಜನಾಂಗಗಳೂ ಸಹಕರಿಸಿದುವು ಆದರೆ ಎಬಿಸಿನಿಯವು ಒಬ್ಬಂಟಿಗನಾಗಿ ಯುದ್ಧಮಾಡುತ್ತಿದೆ. ಅದು ಯುರೋಪಿನಲ್ಲಿ ಇಲ್ಲದಿರುವುದರಿಂದಲೆ ಮತ್ತು ಅಲ್ಲಿನ ಜನರ ಬಣ್ಣ ಕಪ್ಪಾಗಿರುವುದರಿಂದ ಇವರನ್ನು ಶ್ಲಾಘಿಸುವವರೂ ಇಲ್ಲ ಇವರೊಡನೆ ಸಹಕರಿಸುವವರೂ ಇಲ್ಲ

ಕೆನರಾ ಬ್ಯಾಂಕ್ ಲಿಮಿಟೆಡ್,

ಬಂಟವಾಳ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನ ಆಭರಣಗಳ ಅಡವಿನ ಮೇಲೆ ಸದ್ರಿ ಬ್ಯಾಂಕಿನಲ್ಲಿ ಪಡೆದ ಸಾಲಗಳ ಬಡ್ಡಿ ವಗೈರೆಯನು ಕೊಡದೆ ಆ ಕುರಿತು ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸದ್ರಿ ಆಸಾಮಿಗಳ ಪೈಕಿ ಕೆಲವರು ಮೃತಪಟ್ಟಿದ್ದಾರಾಗಿಯೂ, ನೋಟೀಸುಗಳ ವಾಪಾಸು ಬಂದಿರುವುದರಿಂದಲೂ, ಕೆಲವರು ನೋಟೀಸು ಪಡಕೊಂಡು ಬಡ್ಡಿ ಕೊಡದೆ ಇರುವುದರಿಂದಲೂ ಸದ್ರಿ ಸಾಲಗಳಿಗೆ ಜವಾಬ್ದಾರಿ ಇರುವ ದಾಗಿನೆಗಳನ್ನು ಇದೇ ಒರುವ ಫೆಬ್ರವರಿ ತಾ 17ನೇ ಸೋಮವಾರ ಹಗಲು ಗಂಟೆ 12ಕ್ಕೆ ಯಾ ಬ್ಯಾಂಕಿನವರಿಗೆ ಯುಕ್ತ ತೋರುವ ಬೇರೆ ಯಾವುದಾದರೂ ಒಂದು ದಿವಸ ಪುನಃ ನೋಟೀಸ್ ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು ಎಂತ ಈ ಮೂಲಕ ತಿಳಿಯಪಡಿಸೋಣಾಗುತ್ತದೆ

ಸಾಲದ ನಂಬ್ರ 938/84 ಹಸರು ಕೃಷ್ಣ ಭಟ್ಟ, ಅನಂತ ಭಟ್ರ ಮಗ ಪಾಣೆಮಂಗಳೂರು ಪೋಸ್ಟು ಅಸ್ಲು ರೊಬಲಗು ರೂ 22/-

ಸಾಲದ ನಂಬ್ರ 939/84 ಹೆಸರು ಕಟ್ಟಪ್ಪ ರೈ, ಮುಂಡಪ್ಪ ಮಲ್ಲಿ ಅಳಿಯ, ಪರ್ಗೋದಾರ, ಮೂಡಗ್ರಾಮ-ಬಂಟವಾಳ ಪೋಸ್ಟು ಅಸ್ಲು ಮೊಬಲಗು ರೂ 25 -

ಸಾಲದ ನಂಬ್ರ 1214 84 ಸೋಮು ಹೆಂಗ್ಸು, ಪೂವಪ್ಪ ಪೂಜಾರಿ ಸೊಸೆ, ಮಳಿನ ಸಾಂತಿಲ, ಶಂಬೂರು ಗ್ರಾಮ ಬಂಟವಾಳ ಪೋಸ್ಟು ಅಸ್ಲು ಮೊಬಲಗು ರೂ 10/-

ಸಾಲದ ನಂಬ್ರ 280/88 ಕೋಟಿ ವ ಡ್ಯಾಲ ಕೊರಗ ಮಡ್ಯಾಲ ಮಗ ಕ್ಷೆಂಗ, ಬಡ್ಡಕಟ್ಟೆ, ಬಂಟವಾಳ ಪೋಸ್ಟು ಅಸ್ಲು ಮೊಬಲಗು

ರೂ 175/-

Office of the Bank Bontwal 8—1—1936 } B Damodar Baliga, Agent

---

ರಾಷ್ಟ್ರಬಂಧುವಿನ

ನೋಟೀಸಿಗೆ ಉತ್ತರ

ಮ ರಾ| ರಾ| ಎಡ್ವೊಕೇಟ್ ಕಾಸರಗೋಡು ಎ ವಾಸುದೇವರಾಯರು ತಾರೀಕು 16-12-1935ನೇ ರಾಷ್ಟ್ರಬಂಧುವಿನ 11ನೇ ಪಾನಿನಲ್ಲಿ ನನ್ನ ವಿಷಯವಾಗಿ ಬರೆದ ನೋಟಿಸು ಕೇವಲ ಕಲ್ಪಿತ ಅಸಂಬದ್ಧ ಮತ್ತು ಅಸತ್ಯವಾಗಿರುತ್ತದೆ ಅದರಲ್ಲಿ ಕಾಣಿಸಿದಂತೆ ಪಾಲ್ ಮಚ್ಚಾದನು ರೂ 1500ಕ್ಕೆ ಮಿಕ್ಕಿ ಕೃತ ಮಾಡಿದ್ದೂ ಇಲ್ಲ, ಅದನ್ನು ಅಪಹರಿಸುವರೆ ಅವನ ಮಗನ ಒಳಸಂಚನೆಯಿಂದ ಅವನಿಂದ ನೋಟುದಲ್ಲಿ ಬರೇ ಕಾಗದಕ್ಕೆ ಹೆಬ್ಬೆಟ್ಟು ವಗೈರೆ ಏನೂ ಪಡೆದ್ದಿಲ್ಲ. ತಾ, 7-8-1935ರಲ್ಲಿ ಜೊಸೆಫ್ ಮಚಾದನಾದ ಪಾಲ್ ಮಚಾದನ ಮಗನೇ ತಂದೆಯೊಡನೆ ಕರಕೊಂಡು ಬಂದ ಬೇಕಲದ ಇಗರ್ಜಿಯ ಮಾನ್ಯ ಗುರುಗಳಾದ ಜೆ. ಎ. ರೊಡ್ರಿಕ್ಸರು ವ ಇತರ ಪಂಚಾಯತರು ತಂದೆ ಮಕ್ಕಳೊಳಗೆ ಇದ್ದ ವಿವಾದಗಳನ್ನು ತೀರ್ಮಾನಿಸಿದಂತೆ, ಕೃತದ ಐವೇಜಿನಲ್ಲಿ ರೂ. 500 ಪಡೆದು ಬಾಕಿ ಕೃತದ ಐವೇಜನ್ನು ಅವನ ಮಕ್ಕಳಿಗೆ ಕೊಡಬೇಕಾಗಿಯೂ, ಆಸ್ತಿಯನ್ನು ಚಾಲ್ತಿ ವರ್ಷದ ಫಾಲ್ಗುಣ ಬ| ೩೦ಕ್ಕೆ ಬಿಟ್ಟು ಕೊಡಬೇಕಾಗಿಯೂ, ವಗೈರೆ ಪೂರ್ಣ ಸಮ್ಮತಿಸಿ, ಅವರ ಸವ ಕ್ಷದಲ್ಲಿಯೇ ಒಪ್ಪಿಗೆ ಬರ ಕೊಟ್ಟಿರುತ್ತೇನೆ ಇದಕ್ಕೆ ತಂದೆ, ಮಗ, ಮಾನ್ಯ ಪಾದ್ರಿಯವರು, ಪಂಚಾಯಿತರ ಮತ್ತು ನನ್ನ ಸಹಿ ರುಜು ಸಹಾ ಇರುತ್ತವೆ ಈ ಸತ್ಯ ವಿಷಯಕ್ಕೆ ವಿರೋಧವಾಗಿ ಬರೆದ ಸದ್ರಿ ನೋಟಿಸಿನ ಎಲ್ಲಾ ವಾಚಕಗಳನ್ನೂ ನಾನು ಈ ಮೂಲಕ ಸಂಪೂರ್ಣ ನಿರಾಕರಿಸುತ್ತೇನೆ ನಿಜವಾದ ಸಂಗತಿಗಳನ್ನು ಕೂಲಂಕಷ ವಿಚಾರ ಮಾಡಿ ತಿಳಿಯದೆ, ನನ್ನ ಮೇಲೆ ಅಸಂಬದ್ಧ ವ, ಅವಮಾನಕರವಾದ ಸದ್ರಿ ಸುಳ್ಳು ಮತ್ತು ಮಾನನಷ್ಟಕರವಾದ ನೋಟೀಸನ್ನು ಪ್ರಕಟಿಸಿದ್ದಕ್ಕೆ ಸಂಬಂಧಪಟ್ಟವರ ಮೇಲೆ ಅಲ್ಯಾದಾ ವ್ಯವಹರಣೆ ನಡಿಸುತ್ತೇನೆಂದು ಈ ಮೂಲಕ ತಿಳಿಸಿರುತ್ತೇನೆ

ಮಂಗಳೂರು ತಾ 8 1-36 } ಮಂಜೇಶ್ವರ ಸುಬ್ರಾಯ ಭಕ್ತ.

WANTED

Trained teachers for Srimad Anantheshwar Temple Higher Elementary School Manjeshwar Apply with testimonials in person Pay according to qualifications

Applications should reach the undersigned by 15 1 36

S A S H Ele School Manjeshwar 9—1—36 } M N Kini Manager & Correspondent

---

ರುಚಿಕರ! — ಹಿತಕರ!

ದಿ ರಿನೌನ್ ಬಿಸ್ಕಿಟ್ ಕಂಪೆನಿಯ

ನಾನಾ ತರದ ಬಿಸ್ಕಿಟುಗಳು

ವಿವಿಧ ಪ್ರದರ್ಶನಗಳಲ್ಲಿ 14 ಸುವರ್ಣ ಪದಕಗಳನ್ನೂ ಮಹನೀಯರನೇಕರಿಂದ ಪ್ರಶಂಸಾಪತ್ರಗಳನ್ನೂ ಪಡೆದಿರುವುದು

ಇಷ್ಟು ಉತ್ಕೃಷ್ಟವಾದ ಮತ್ತು ಜನಪ್ರಿಯವಾದ ಬಿಸ್ಕಿಟ್ ಮತ್ತೊಂದಿಲ್ಲ.

ಒಮ್ಮೆ ತಿಂದರೆ ಖಚಿತವಾಗುವುದು.

ಈಗ ತಾನೇ ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

B - Biscuits

XL Biscuits

Renown Biscuits

ಮೇಲಿನ ಈ ಮೂರು ತರಗತಿಗಳೂ 40 ರಾತ್ತಲ ಪೆಟ್ಟಿಗೆಗಳಲ್ಲಿಯೂ 10 2 1 ½ ರಾತ್ತಲ ಟಿನ್ನುಗಳಲ್ಲಿಯೂ ¼ ½ ರಾತ್ತಲ ಪೊಟ್ಟಣಗಳಲ್ಲಿಯೂ ದೊರೆಯುತ್ತವೆ

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

S. E Bangera,

Representative of

Jaya Bharatham Co,

Mission Compound, Kasargod, S. K.

ಮದ್ರಾಸ್ ಸಂಸ್ಥಾನದ ಏಜಂಟರು —

Jaya Bharatham Co,

P O Box No, 83 G T MADRAS

ಕಾಂಗ್ರೆಸ್ ಚರಿತ್ರಸಾರ.

(ಕಳೆದ ಸಂಚಿಕೆಗಳ ಅವಶಿಷ್ಟ)

40ನೇ ಕಾಂಗ್ರೆಸ್, 1925 ಕಾನಪೂರ

ಅಧ್ಯಕ್ಷಿಯರು —ಸರೋಜಿನಿ ನಾಯುಡುರವರು

ಅಧ್ಯಕ್ಷಿಯರು ಎರಡು ಭಾಷಣಗಳನ್ನು ಕೊಟ್ಟರು. ಒಂದು ಸಭೆಯಲ್ಲಿ ಮಾಡಿದ ಭಾಷಣ; ಇನ್ನೊಂದು ಪತ್ರಿಕೆಗಳಿಗಾಗಿ ಬರೆಯಲ್ಪಟ್ಟ ಭಾಷಣ. ದೇಶಬಂಧು ದಾಸರವರೂ, ಸುರೇಂದ್ರನಾಥ ಬೆನರ್ಜಿಯವರೂ, ಈ ವರ್ಷ ಕೈಲಾಸವಾಸಿಗಳಾಗಿದ್ದರು. ಬೆನರ್ಜಿಯವರು ಸುಧಾರಣೆಗಳ ಮೊಂಟ್‌ಫರ್ಡ್ ಸ್ಕೀಮಿನ ಪ್ರಕಾರ ಮಂತ್ರಿಗಳಾಗಿದ್ದು ಸರಕಾರದಿಂದ 'ಸರ್' ಬಿರಿದಿನಿಂದ ಬಹುಮಾನಿತರಾಗಿದ್ದರಾದರೂ, ಈ ಶತಮಾನದ ಮೊದಲನೆಯ ವರ್ಷಗಳಲ್ಲಿ ಅವರು ಹಿಂದುಸ್ಥಾನದ ರಾಜಕೀಯದಲ್ಲಿ ಪ್ರಶಂಸನೀಯ ಭಾಗ ವಹಿಸಿದ್ದರೆಂಬುದನ್ನು ನಾವು ಮರೆಯಲಾರೆವು. ಗಾಂಧಿಯವರು ಈ ವರ್ಷ ಹಿನ್ನೆಲೆಯೇ ಉಳಿದಿದ್ದು ಯಾವ ಸಮಾಲೋಚನೆಯಲ್ಲಿಯೂ ಕೈಕೊಡಲಿಲ್ಲ.

41ನೇ ಕಾಂಗ್ರೆಸ್, 1926 ಗೌಹಾತಿ.

ಅಧ್ಯಕ್ಷರು—ಶ್ರೀನಿವಾಸ ಅಯ್ಯಂಗಾರರು

ಚಿತ್ತರಂಜನ ದಾಸರ ನಿಧನವು ಸ್ವರಾಜ್ಯ ಪಂಗಡವನ್ನು ಅಖಿಲ ಭಾರತ ಪ್ರಸಿದ್ಧಿಗೆ ತಂದಿತು. ರಾಜ್ಯಾಂಗದೊಳಗಿಂದ ಜನಾಂಗ ಬಾಧ್ಯತೆಗಳನ್ನು ಪ್ರತಿಬಂಧಿಸಬೇಕೆಂಬ ಕಾಂಗ್ರೆಸ್ ಆಜ್ಞೆಯ ಅನುಸಾರ ಮಧ್ಯ ಮತ್ತು ಪ್ರಾಂತಿಕ ನ್ಯಾಯವಿಧಾಯಕ ಸಭೆಗಳ ಕಾಂಗ್ರೆಸ್ ಮೆಂಬರರು ತಿರುಗಿ ಚುನಾವಣೆಯನ್ನು ಅಪೇಕ್ಷಿಸಿದರು. ದಾಸರ ಪ್ರೇರಣೆಯು ಬಂಗಾಳದ ಜಾತೀಯತಾವಾದಿಗಳ ಮೇಲೆ ವಿಪರೀತ ಪರಿಣಾಮಕಾರಿಯಾಗಿ ವರ್ತಿಸಿತು. ಅಲ್ಲದೆ, ಅಧ್ಯಕ್ಷರೂ ತನ್ನ ಸ್ವಂತ ಪ್ರಾಂತ್ಯದ ಜಾತೀಯತಾವಾದಿಗಳನ್ನು ತನ್ನ ಭಾಷಣದಲ್ಲಿ ನಿರ್ದಾಕ್ಷಿಣ್ಯವಾಗಿ ಟೀಕಿಸಿದರು. ಪಂಡಿತ ಮೋತಿಲಾಲರು ಮರಳಿ ಎಸೆಂಬ್ಲಿಗೆ ಸೇರಿದರು. ಹೀಗಾಗಿ ಸರ್ವಸಾಧಾರಣ ಎಲ್ಲಾ ನ್ಯಾಯವಿಧಾಯಕ ಸಭೆಗಳನ್ನೂ ಕಾಂಗ್ರೆಸು ಆಳುವಂತಾಯಿತು. ಆದರೆ ಅಧಿಕಾಂಶದವರು ಸ್ಥಾನವನ್ನು ಸ್ವೀಕರಿಸಲು ನಿರಾಕರಿಸಿದುದರಿಂದ ಇದರಿಂದ ಪ್ರಯೋಜನವೇನೂ ದೊರೆಯಲಿಲ್ಲ. ಅಧ್ಯಕ್ಷರು ಭಾಷಣದಲ್ಲಿ ಸ್ವಾತಂತ್ರ್ಯಪರವಾಗಿ ವೀರವಾಕ್ಯಗಳನ್ನು ನುಡಿದರಲ್ಲದೆ ಗಾಂಧಿಯವರ ಶಾಸ್ತ್ರವನ್ನು ರಾಜಕೀಯದೊಂದಿಗೆ ಮಿಶ್ರ ಮಾಡುವ ಮತವನ್ನು ಖಂಡಿಸಿ ಮಾತಾಡಿದರು.

42ನೇ ಕಾಂಗ್ರೆಸ್, 1927—ಮದ್ರಾಸು

ಅಧ್ಯಕ್ಷರು—ಡಾಕ್ಟರ್ ಎಮ್ ಎ ಅನ್ಸಾರಿಯವರು

ಸ್ಥಾನ ಸ್ವೀಕಾರ ಮತ್ತು ಹಿಂದೂ ಮುಸ್ಲಿಂ ಕದಾರುಗಳ ಪ್ರಶ್ನೆಯ ಸಂಬಂಧ ಒಡೆದಾಡಿಕೊಳ್ಳುತ್ತಿದ್ದ ಕಾಂಗ್ರೆಸ್ ಪ್ರತಿನಿಧಿಗಳ ಪಕ್ಷಗಳ ಏಕೀಕರಣಕ್ಕಾಗಿ ಈ ವರ್ಷವು ಪ್ರಾಮುಖ್ಯತೆ ಪಡೆಯುವುದು. ದಿಲ್ಲಿಯಲ್ಲಿ ಹಿಂದೂಮುಸ್ಲಿಂ ಮುಖಂಡರು ಈ ವರ್ಷದ ಮಾರ್ಚ ತಿಂಗಳಲ್ಲಿ ನೆರೆದು ಜಿನ್ನಾ ಮುಂತಾದವರು ಒಪ್ಪಿಕೊಂಡ ಕ್ರಮವನ್ನು ಉಜ್ಜೀವನಗೊಳಿಸಿದರು. ಅಧ್ಯಕ್ಷರು ಕಳೆದವರ್ಷ ನ್ಯಾಯವಿಧಾಯಕ ಸಭೆಗಳ ಮುಖಾಂತರವೇ ಕಾರ್ಯಸಾಧನೆ ಮಾಡುವ ಉದ್ದೇಶದಿಂದ 'ಸಿವಿಲ್ ಡಿಸ್ ಒಬೀಡಿಯನ್ಸ್' ಚಳವಳವನ್ನು ಹಿಂದೆಗೆಯುವುದರಲ್ಲಿ ಮುಖ್ಯ ಭಾಗವನ್ನು ವಹಿಸಿದ್ದರಾದರೂ, ತನ್ನ ಅಧ್ಯಕ್ಷ ಭಾಷಣದಲ್ಲಿ ತನಗೆ ನ್ಯಾಯವಿಧಾಯಕ ಸಭೆಗಳಲ್ಲಿ ವಿಶ್ವಾಸವೇ ಇಲ್ಲವೆಂದು ವ್ಯಕ್ತಪಡಿಸಿದುದು ಚೋದ್ಯವಾಗಿರುವುದು. ಸೈಮನ್ ಸಮಿತಿಯ ವರ್ಜ್ಜನೆಲನ್ನು ಪ್ರಕಟಿಸಿದುದು ಈ ವರ್ಷದ ಅಧಿವೇಶನದ ಮುಖ್ಯ ಆಸಕ್ತಿಯ ವಿಷಯವಾಗಿತ್ತು. ಸೈಮನ್ ಸಮಿತಿಯಲ್ಲಿ ಸರಕಾರವು ಹಿಂದೂಗಳನ್ನು ಸೇರಿಸದಿದ್ದುದಕ್ಕಾಗಿ ಅದನ್ನು ಹಿಂದೂಗಳೆಲ್ಲರೂ ಬೊಯ್‌ಕೊಟ್ ಮಾಡಬೇಕೆಂಬ ಠರಾವು ಮಂಜೂರಾಯಿತು.

43ನೇ ಕಾಂಗ್ರೆಸ್, 1928.

ಅಧ್ಯಕ್ಷರು—ಪಂಡಿತ ಮೋತೀಲಾಲ ನೆಹರೂರವರು,

ನ್ಯಾಯವಿಧಾಯಕ ಸಭೆಗಳಿಂದ ಸ್ವರಾಜಿಸ್ಟರು ಹೊರಕ್ಕೆ ಬಂದುದೂ, ಪಂಡಿತ ನೆಹರೂರವರ ಅಧ್ಯಕ್ಷತೆಯಲ್ಲಿ ಸರ್ವಪಕ್ಷೀಯರು ಒಂದು ಸಭೆ ನೆರೆಯಿಸಿದುದೂ ಈ ವರ್ಷದ ವೈಶಿಷ್ಟ್ಯಗಳು. ಇದು ಸೈಮನ್ ಸಮಿತಿಗೆ ವಿರುದ್ಧವಾಗಿ ನಡೆದಿತ್ತು. ಅಧ್ಯಕ್ಷ ಭಾಷಣವು ಸರ್ವಪಕ್ಷೀಯ ಕೋನ್ಫರೆನ್ಸಿನ ನಿರ್ಧಾರಗಳನ್ನು ಜನರಲ್ಲಿ, ಐಕ್ಯವನ್ನೂ, ಅಖಂಡತೆಯನ್ನೂ ಉಂಟುಮಾಡುವುದಕ್ಕಾಗಿ ಜನಪ್ರಿಯಗೊಳಿಸಬೇಕೆಂದು ದೇಶವನ್ನು ಕೇಳಿಕೊಂಡಿತು. ದೇಶದ ಧ್ಯೇಯವು ಗಾಂಧಿಯವರ ಮತದಂತೆ, 'ಸಾಧ್ಯವಾದರೆ ಬ್ರಿಟಿಷ್ ಸಾಮ್ರಾಜ್ಯಾಂತರ್ಗತ, ಅಗತ್ಯಬಿದ್ದರೆ ಬ್ರಿಟಿಷ್ ಸಾಮ್ರಾಜ್ಯ ಬಾಹಿರ' ಸ್ವಾತಂತ್ರ್ಯವೆಂದೂ ಸಾರಲಾಯಿತು.

44ನೇ ಕಾಂಗ್ರೆಸ್, 1929 ಲಾಹೋರ್

ಅಧ್ಯಕ್ಷರು—ಪಂಡಿತ ಜವಾಹರಲಾಲ ನೆಹರೂರವರು

ಸೈಮನ್ ಸಮಿತಿಯು ದೇಶದಲ್ಲಿ ಸಮತಾವಾದಿ ಧ್ಯೇಯಗಳ ಬೆಳವಣಿಗೆಗೆ ಒಂದು ಮಹತ್ವಾದ ಉತ್ತೇಜನವನ್ನು ಕೊಟ್ಟಿತು. ಜವಾಹರಲಾಲರು ಭಾಷಣದಲ್ಲಿ, ಹಿಂದೂದೇಶದ ಸಕಲ ವ್ರಣಗಳಿಗೂ ರಾಮಬಾಣದಂತಿರುವ ಸಮತಾವಾದಿತ್ವದ ಸ್ಪಷ್ಟೀಕರಣವನ್ನು ಮಾಡಿದರು. ಕಾಂಗ್ರೆಸಿನ ಧ್ಯೇಯವನ್ನು ಈ ವರ್ಷ, ಡೊಮಿನಿಯನ್ ಸ್ಟೇಟಸ್ ರೂಪವಾದ ಸ್ವಾತಂತ್ರ್ಯವನ್ನು ಒಂದು ವರ್ಷದೊಳಗೆ ಕೊಟ್ಟರೆ ಸ್ವೀಕರಿಸಬಹುದೆಂದು, ಬದಲಾಯಿಸಿದರು. ಗಾಂಧಿಯವರೇ ಈ ಠರಾವನ್ನು ಮುಂತಂದವರು. ಈ ವರ್ಷ ಅವರು ಈ ಪ್ರಕಾರ ಕಾಂಗ್ರೆಸಿನ ಅಧಿಪತ್ಯವನ್ನು ಮರಳಿ ಅಂಗೀಕರಿಸಿದರು.

45ನೇ ಕಾಂಗ್ರೆಸ್, 1931 ಕರಾಚಿ.

ಅಧ್ಯಕ್ಷರ —ಸರದಾರ ವಲ್ಲಭಭಾಯಿ ಪಟೇಲರು

1930ರಲ್ಲಿ ಗಾಂಧಿಯವರು ಸ್ವತಃ ಗುಜರಾಥದಲ್ಲಿ ಸಿವಿಲ್ ಡಿಸ್ ಒಬೀಡಿಯನ್ಸ್ ಚಳವನ್ನು ಹೂಡಿದರು. ನಾವು ಪಂಡಿತ ಮೋತಿಲಾಲರನ್ನೂ ಮೌಲಾನಾ ಮಹಮದಾಲಿಯವರನ್ನೂ ಕಳಕೊಂಡೆವು. ಗಾಂಧಿಯವರ ಚಳವಳವು ಸಂಕ್ಷಿಪ್ತವಾದರೂ ಉಜ್ವಲವಾಗಿದ್ದಿತು. ವ್ಯಾಸರಾಯ ಅರ್ವಿನರು ಗಾಂಧಿಯವರನ್ನು ತನ್ನ ಭವನಕ್ಕೆ ಆಹ್ವಾನಿಸಿ ಸಂಧಿಮಾಡಿಕೊಂಡರು. ಗಾಂಧಿಯವರು ಈ ಸಂಧಿಯಲ್ಲಿ ಬಡವರ ಪರವಾಗಿ ಅನೇಕ ಅಮೂಲ್ಯ ರಿಯಾಯತಿಗಳನ್ನು ಸರಕಾರದಿಂದ ಪಡೆದರು. ಲಂಡನಿನಲ್ಲಿ ಸೈಮನ್ ಸಮಿತಿಯ ವರದಿಯ ಸಮಾಲೋಚನೆ, ಮತ್ತು ಹಿಂದೂಸ್ಥಾನಕ್ಕೆ ಸ್ವತಂತ್ರ ರಾಜ್ಯಗಳ ರೀತಿಯ ರಾಜ್ಯಾಂಗರಚನೆಗಳಿಗಾಗಿ ನೆರೆಯಲಿದ್ದ ರೌಂಡ್‌ಟೇಬಲ್ ಕೋನ್ಫರೆನ್ಸಿಗೆ ಪ್ರತಿನಿಧಿಗಳಾಗಿ ಹೋಗಲು ಗಾಂಧಿಯವರು ಸಮ್ಮತಿಸಿದರು. ಈ ವರ್ಷದ ಅಂತ್ಯದಲ್ಲಿ ಕಾಂಗ್ರೆಸ್ ಅಧಿವೇಶನವಿರಲಿಲ್ಲವಾದರೂ 1931ನೇ ಮಾರ್ಚ ತಿಂಗಳಲ್ಲಿ ಅದು ನೆರೆಯಿತು. ಅನಂತರ ಗಾಂಧಿಯವರು ಇಂಗ್ಲೆಂಡಿಗೆ ಹೊರಟುಹೋದರು.

1931ರ ಅಂತ್ಯದಲ್ಲಿ ಇಂಗ್ಲೆಂಡಿನಿಂದ ಮರಳಿದರು. ಅರ್ವಿನ್ ಸಂಧಿಯು ಆಗ ಬಿದ್ದುಹೋಗಿತ್ತಲ್ಲದೆ, ಅನೇಕರು ಕಾರಾಗೃಹವಾಸಕ್ಕೆ ಎಡೆಯಾಗಿದ್ದರು. ಆಗ ವ್ಯಾಸರಾಯರ ಬದಲಾವಣೆಯಾಗಿತ್ತು. ಗಾಂಧಿಯವರು ಪರಿಸ್ಥಿತಿಯನ್ನು ಸರಿಪಡಿಸುವ ಉದ್ದೇಶದಿಂದ ವ್ಯಾಸರಾಯರ ಸಂದರ್ಶನವನ್ನು ಕೋರಿ ನಿರಾಕರಿಸಲ್ಪಟ್ಟರು. ಪರಿಣಾಮವಾಗಿ ಗಾಂಧಿಯವರ ಸಿವಿಲ್ ಡಿಸ್ ಒಬೀಡಿಯನ್ಸ್ ಚಳವಳವು ತಿರುಗಿ ಇಡೀ ದೇಶದಲ್ಲಿ ಬಲು ತೀಕ್ಷ್ಣವಾಗಿ ಹೂಡಲ್ಪಟ್ಟಿತು. ಒಂದು ಲಕ್ಷ ಜನರು ಜೈಲಿಗೆ ಹೋದರು, ಅನೇಕರು ಮೃತ್ಯುವಿಗೆ ಬಲಿಯಾದರು, ಸಾವಿರಾರು ಮಂದಿ ಲಾಠಿ ಪ್ರಯೋಗಕ್ಕೆ ಒಳಗಾದರು. ಇಷ್ಟಾದರೂ ತೀವ್ರ ಹಿಂಸಿತರಾದ ಸತ್ಯಾಗ್ರಹಿಗಳಲ್ಲಿ ಒಬ್ಬರಾದರೂ ಪ್ರತಿಹಿಂಸೆಯ ಅಪಯಶಸ್ಸಿಗೆ ಪಾತ್ರರಾಗದಿದ್ದು

(೧೫ನೇ ಪುಟವನ್ನು ನೋಡುವುದು),

ಪ್ರಕಟಣೆ

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವುದೇನೆಂದರೆ,—

ಮಂಗಳೂರು ಶಹರ್ ನೆಲ್ಲಿಕಾಯಿ ಶ್ರೀನಿವಾಸರಾಯರ ಮಗ ವೆಂಕಟಕೃಷ್ಣರಾಯರ ಸಂಪೂರ್ಣ ಹಕ್ಕಿನ ಈ ಕೆಳಗೆ ಶೆಡ್ಯೂಲಿನಲ್ಲಿ ವಿವರಿಸಿದ ಸ್ಥಿರಾಸ್ತಿಗಳನ್ನು ವಿಕ್ರಯಿಸುವರೇ ಅವರಿಂದ ತಾ. 16—8—1933ನೇ ತಾರೀಕಿಗೆ ರಜಿಸ್ಟ್ರಿಯಾದ ಜನರಲ್ ಪವರ್ ಆಫ್ ಎಟೋರ್ನಿ ಮೂಲಕ ಪೂರ್ಣಾಧಿಕಾರ ಹೊಂದಿದ ಮಂಗಳೂರು ಶಹಾರಿನಲ್ಲಿರುವ ಸಾಹುಕಾರ ಮಿಜಾರ ಅಣ್ಣಪೈಗಳ ಮಗ ಮಿಜಾರ್ ಗೋವಿಂದ ಪೈ ಇವರಿಂದ ಸದ್ರಿ ಸ್ಥಿರಾಸ್ತಿಗಳು ಕೆಳಗೆ ಕಾಣಿಸಿದಂತೆ ಲೆಂಡ್ ಆಗಿ ಮಂಗಳೂರು ಶಹಾರು ಕೇರುಬೀದಿಯಲ್ಲಿರುವ ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್ ಇದರ ಆಫೀಸಿನ ಉಪ್ಪರಿಗೆಯ ಮೇಲೆ 1936ನೇ ಇಸವಿ ಫೆಬ್ರವರಿ ತಾ 1ನೇ ಶನಿವಾರ ಬೆಳಗ್ಗೆ ಘಂಟೆ 8ರಿಂದ 11ರ ವರೆಗೂ, ಏಲಂ ಕೈದು ಆಗುವ ಪರಿಯಂತರ ಬಹಿರಂಗವಾದ ಹರಾಜು ಮೂಲಕ ಮಾರಾಟ ಮಾಡಲ್ಪಡುವುವು. ಖಾಯಿಸವುಳ್ಳವರು ಸದ್ರಿ ಹರಾಜಿನಲ್ಲಿ ಕೊಂಡುಕೊಳ್ಳಬಹುದು. ಮೂರು ವಾರು ಕಾಯಂ ಮಾಡುವುದು ಯಾ ಮಾಡದಿರುವುದು ಏಲಂ ಮಾಡುವವರ ಇಷ್ಟದ ಮೇಲೆ ಹೊಂದಿರುತ್ತದೆ.

ಗೆದ್ದ ದರಕಾಸ್ತುದಾರನು ತನ್ನ ಹೆಸರಿನಲ್ಲಿ ಮೂರು ವಾರು ಆದ ಕೂಡಲೇ ಏಲಂ ಮೊಬಲಗಿನ ಪೈಕಿ ನಾಲ್ಕನೆಯ ಒಂದಂಶವನ್ನು ಕೂಡಲೇ ತೆರತಕ್ಕದ್ದು. ಉಳಿದ ಐವಜನ್ನು ಏಲಂ ಕಾಯಂ ಆದ 15 ದಿವಸಗಳ ಒಳಗೆ ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್ ಮಂಗಳೂರು ಇವರಿಗೆ ಪಾವತಿ ಮಾಡಿ ರಶೀದಿ ಪಡೆಯತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಕಾಸ್ತುದಾರನು ಡಿಪೋಜಿಟ್ ಮಾಡಿದ ೪ನೇ ಅಂಶದ ಹಣವನ್ನು ಕಳಕೊಳ್ಳುವುದಲ್ಲದೆ, ಸದ್ರಿ ದರಕಾಸ್ತುದಾರನ ನಷ್ಟ ಸಂಭವದ ಮೇಲೆ ಸದ್ರಿ ಆಸ್ತಿಯು ಪುನಃ ಏಲಂ ಮಾಡಲ್ಪಡುವುದು. ಮತ್ತು ಹಾಗೆ ಮಾಡಲ್ಪಡುವ ಎರಡನೆಯ ಏಲಮಿನಲ್ಲಿ ಹುಟ್ಟಿ ಬಂದ ಐವಜು ಮೊದಲಿನ ಏಲಮಿನ ಐವಜಿಗಿಂತ ಕಮ್ಮಿಯಾದಲ್ಲಿ ಹಾಗೆ ಕಮ್ಮಿಯಾಗುವ ಸದ್ರಿ ನಷ್ಟದ ಮೊಬಲಗನ್ನು ಏಲಂ ತಾರೀಕ ಲಾಗ್ಯಾತು ವಸೂಲು ವರೆಗೆ ಸಾಲಿಯಾನ್ ಸೇಕಡಾ 12½ರ ದರದ ಬಡ್ಡಿ ಸಮೇತ ಕೊಡುವರೆ ಪ್ರಥಮ ದರಕಾಸ್ತುದಾರನು ಬದ್ಧನಾಗಿರಬೇಕು. ಹೊರ್ತು ಎರಡನೇಯ ಏಲಮಿನಲ್ಲಿ ಜಾಸ್ತಿಗೆ ಐವಜು ಹುಟ್ಟಿಬಂದರೆ, ಅದನ್ನು ಕೇಳಲು ತಪ್ಪಿದ ದರಕಾಸ್ತುದಾರನಿಗೆ ಹಕ್ಕು ಇರುವುದಿಲ್ಲ.

ಗೆದ್ದ ದರಕಾಸ್ತುದಾರನು ದರಕಾಸ್ತಿನ ಮೊಬಲಗನು 15 ದಿವಸಗಳ ಒಳಗೆ ವಸೂಲು ಕೊಟ್ಟಲ್ಲಿ ಆತನ ಹೆಸರಲ್ಲಿ ದರಕಾಸ್ತು ಕಾಯಂ ಮಾಡಿ ಸದ್ರಿ ದರಕಾಸ್ತುದಾರನ ಖರ್ಚಿನಿಂದ ಅಗತ್ಯವಿರುವ ದಸ್ತಾವೇಜು ಸದ್ರಿ ಅಧಿಕಾರ ಹೊಂದಿದ ನನ್ನಿಂದ ರಿಜಿಸ್ಟ್ರಿ ಸಿಕ್ಕಿ ಒದಕೊಡೋಣಾಗುವುದು. ಪ್ರಥಮ ದರಕಾಸ್ತಿನ ಮೊಬಲಗನ್ನು ಮ್ಯಾದೆ ಒಳಗೆ ವಸೂಲು ಕೊಡದ ಸಂಗ್ತಿಯಲ್ಲಿ ಮಾಡಲ್ಪಡುವ ಎರಡನೇ ದರಕಾಸ್ತಿನ ರೂಲುಗಳು ಸಹಾ ಮೇಲೆ ಕಾಣಿಸಿದಂತೆಯೇ ಆಗಿರುತ್ತವೆ.

ಏಲಮಿಗೆ ಕಾರಣವಾದ ಆಸ್ತಿಗಳು ಮಂಗಳೂರು ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನಿಗೆ ಸದ್ರಿ ನೆಲ್ಲಿಕಾಯಿ ವೆಂಕಟ ಕೃಷ್ಣರಾಯರ ಬರಕೊಟ್ಟ ದಕ್ಷಿಣ ಕನ್ನಡ ಜಿಲ್ಲಾ ರಿಜಿಸ್ಟ್ರಾರರ ಆಫೀಸ್ ನಂಬ್ರ 817/33ಕ್ಕೆ ರಿಜಿಸ್ಟ್ರಿ ಸಿಕ್ಕಿ ಆದ Indemnity Bondನಲ್ಲಿ ಸೇರಿರುತ್ತವೆ, ವಿನಹಾ ಬೇರೆ ಯಾವ ತರದಿಂದಲೂ ಪರಾಧೀನವಾಗಿರುವುದಿಲ್ಲ. ಪ್ರಕೃತ ಹರಾಜು ಮಾಡುವ ಆಸ್ತಿಗಳ ಕ್ರಯಾಂಶ ಪ್ರತಿಪೂರ್ಣ ಸದ್ರಿ ಕೊರ್ಪೊರೇಶನ್ ಬ್ಯಾಂಕಿಗೇನೇ ಪಾವತಿ ಮಾಡಲ್ಪಡುವುದರಿಂದ ಅಂಥಾ ಜವಾಬುದಾರಿಯು ಏಲಮಿನಲ್ಲಿ ಪಡಕೊಳ್ಳುವವರ ಮೇಲಾಗಲೀ ಅವರು ಪಡಕೊಳ್ಳುವ ಆಸ್ತಿಯ ಮೇಲಾಗಲೀ ಎಷ್ಟುಮಾತ್ರ ಹೊಣೆಯಾಗುವುದಿಲ್ಲ.

ನಾನು ಒರೇ ಏಜಂಟನಾಗಿರುವುದರಿಂದ ಹಕ್ಕುಗಳ ಕುಂದುಕೊರತೆಗಳನ್ನು ಅವರವರೇ ತಿಳಿದುಕೊಳ್ಳಬೇಕಾಗಿರುವುದು ವಿನಹಾ ನನ್ನ ಸ್ವತಃ ಏನೊಂದೂ ಜವಾಬುದಾರಿ ಇರುವುದಿಲ್ಲ ಎಂಬುದನ್ನು ಈ ಮೂಲಕ ಸ್ಪಷ್ಟಗೊಳಿಸಿದೆ.

ಈ ಏಲಂ ಪ್ರಕಾರ ಕ್ರಯಕ್ಕೆ ಪಡಕೊಂಡ ಆಸ್ತಿಯು ಮುಂದಿನ ಯಾವತ್ತೂ ಲಾಭನಷ್ಟಕ್ಕೆ ಕ್ರಯಗಾರನೇ ಜವಾಬುದಾರನಾಗಿರತಕ್ಕದ್ದು.

ಮಾರಾಟಮಾಡುವ ಸ್ಥಿರಾಸ್ತಿಗಳ ಶೆಡ್ಯೂಲ್

ಗ್ರಾಮದ ನಂಬ್ರ	ಸರ್ವೆನಂಬ್ರ	ಸಬ್ ಡಿವಿಜನ್ ನಂಬ್ರ	ಕಿಸಂ	ವಿಸ್ತೀರ್ಣ		ತೀರ್ವೆ		ಟೌನ್ ಸರ್ವೆನಂಬ್ರ	ಶರಾ
[illegible] 106ನೇ ಕಸಬಾ ಬಜಾಲು ಗ್ರಾಮದ ... XIIನೇ ... IIIನೇ ಸರ್ಕಲ್ ... [illegible]	700	1	ಬಾಗಾಯ್ತು	1	58	12	10	XII4—94	[illegible]
	703	,,	ಡಿ	0	13	1	9	XII4—49	
	649	1 B	ಡಿ	Sqft	34848	9	9	XII 1—5	
	649	,,	ಡಿ	Sqft	2614	0	12	XII 1—5	
	779	,,	ಡಿ	0	6	0	8	XII6—36	

ಕೆರೆ ಬಾವಿಗಳು ಇರುವ ಉಪಕಟ್ಟಡಗಳು ಧಕ್ಕೆ ವಾಸ್ತವ್ಯದ ಹಂಚು ಚಾವಣಿ ಮನೆಗಳು, ತೆಂಗು, ಕಂಗು, ಹಲಸು ಮಾವು ವಗೈರೆ ಮರಮಟ್ಟುಗಳು ಸಮೇತ ಆಗುತ್ತದೆ

ಮಂಗಳೂರು,
ತಾ 8—1—1936

Mijar Govind Pai,
ಪವರ್ ಆಫ್ ಎಟೋರ್ನಿ ಹೋಲ್ಡರ್.

N. B: ಮೇಲಿನ ಆಸ್ತಿಯ ರೆಕಾರ್ಡುಗಳನ್ನು ನೋಡಲು ಅಪೇಕ್ಷಿಸುವವರು ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್ ಮಂಗಳೂರು ಬ್ರಾಂಚ್ ಏಜಂಟರಿಂದ ಬೆಳಗ್ಗೆ ಘಂಟೆ 11ರಿಂದ ಸಾಯಂಕಾಲ ಘಂಟೆ 4ರ ತನಕ ಬ್ಯಾಂಕಿಗೆ ರಜಾ ಇಲ್ಲದ ದಿವಸಗಳಲ್ಲಿ ನೋಡಬಹುದು.

ಪ್ರಪಂಚ ಪರಿಚಯ:

ಹಿಂದೂದೇಶದ ಸಾಂಪತ್ತಿಕ ಸ್ಥಿತಿ.

ಹಿಂದೂದೇಶದ ವ್ಯಾಪಾರದ ಸ್ಥಿತಿಯು ಈಗ ಹೇಗಿದೆ? ಕಳೆದ ಮಹಾ ಯುದ್ಧದ ದೆಸೆಯಿಂದಾಗಿ ಅನೇಕ ಪಾಶ್ಚಾತ್ಯ ಜನಾಂಗಗಳು ಸಾಗುವಳಿ ಕೆಲಸದಲ್ಲಿ ನಿರತರಾಗಿರುವುದರಿಂದ, ಹಿಂದೂದೇಶದ ಸಾಗುವಳಿ ಫಲಗಳಿಗೆ ಪರದೇಶ ಗಿರಾಕಿಗಳು ಕಡಿಮೆಯಾಗುತ್ತಾ ಬರುತ್ತಿದ್ದಾರೆ. ಅನೇಕ ಪಾಶ್ಚಾತ್ಯ ದೇಶಗಳಿಗೆ ಹೋಗುತ್ತಿರುವ ನಮ್ಮ ಅನೇಕ ತರದ ಕಾರಖಾನೆ ಸಾಮಗ್ರಿಗಳು ನಮ್ಮಲ್ಲೇ ಉಳಿಯುತ್ತಿರುವುದರಿಂದ ಹೀಗಾಗಿ, ನಮ್ಮಿಂದ ಬಹಿರ್ ವ್ಯಾಪಾರದ ಮುಖ್ಯವಾಗಿ ಹೊರಗಿನ ದೇಶದವರಿಗೆ ಸಲ್ಲಬೇಕಾದ ಹಣವು ದಿನೇ ದಿನೇ ಹೆಚ್ಚುತ್ತಿದೆ. ಇದರಿಂದಾಗಿ ಹಿಂದೂದೇಶದ ಸಂಪತ್ತು ದಿನೇ ದಿನೇ ಒಂದಲ್ಲ ಒಂದು ರೂಪದಲ್ಲಿ ಪಾಶ್ಚಾತ್ಯ ತಿಜೋರಿಗಳನ್ನು ಸೇರಿ ಅದು ಬಡವಾಗುತ್ತಾ ಬರುತ್ತಿದೆ. ಹೊರಗಣ ಸಾಮಾನುಗಳು ಅಮದಾಗದ ಹಾಗೆ ನಿರ್ಬಂಧಗಳಿಂದಲೂ ಮತ್ತು ಹಿಂದೂದೇಶದಿಂದ ಹೊರದೇಶಗಳಿಗೆ ಸಲ್ಲಬಹುದಾದ ಕೆಲವು ಪ್ರತಿಫಲಗಳನ್ನು ಕಡಿಮೆಮಾಡುವ ಕ್ರಮಗಳಿಂದಲೂ ಈ ದುಃಸ್ಥಿತಿಯನ್ನು ವಿಶೇಷವಾಗಿ ನಿವಾರಿಸುವ ಹಾಗಿಲ್ಲ. ನಮ್ಮ ಸಾಂಪತ್ತಿಕ ಸ್ಥಿತಿಯು ಹೀಗಿರುವಾಗ, ಜನಸಂಖ್ಯೆಯು ದಿನೇ ದಿನೇ ವೃದ್ಧಿಹೊಂದುತ್ತಿದೆ. ಆದರಿಂದ ನಮ್ಮ ಈ ಸ್ಥಿತಿಯು ಉದ್ಧಾರಣೆಯಾಗತಕ್ಕದ್ದು. ಇದರ ಬಗೆ ಹೇಗೆ? ಇವೇ ಮೊದಲಾದ ವಿಚಾರಗಳು ಡಿ ಕಾ ಪಟ್ಟಣದಲ್ಲಿ ನೆರೆದ ಅಖಿಲ ಭಾರತ ಸಾಂಪತ್ತಿಕ ಪರಿಷತ್ತಿನಲ್ಲಿ ಚರ್ಚಿಸಲ್ಪಟ್ಟವು. ಈ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಲಾಲಾ ಮನೋಹರಲಾಲರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಹಿಂದೂದೇಶದ ಸಾಂಪತ್ತಿಕ ಚಿತ್ರವನ್ನು ಸವಿಸ್ತಾರವಾಗಿ ವಿವರಿಸಿದರು. ಮೇಲಿನದು ಅವರ ಭಾಷಣದಿಂದ ವ್ಯಕ್ತವಾದುದು.

ನಮ್ಮ ಸಾಂಪತ್ತಿಕ ದುಃಸ್ಥಿತಿಯ ನಿವಾರಣೆಯು ಸುಲಭವಾಗಿ ಹಲವು ಉಪಾಯಗಳನ್ನು ಅನುಸರಿಸಬೇಕಾಗಿ ಶ್ರೀ ಮನೋಹರಲಾಲರ ಸೂಚನೆ. "ಜಪಾನಿನಂತೆ ನಮ್ಮಲ್ಲಿ ಅಧಿಕವಾದ ಜನಸಂಖ್ಯೆಯು ಇರುವುದರಿಂದ ತಯಾರಾದ ಸಾಮಗ್ರಿಗಳಿಗೆ ತುಂಬಾ ಗಿರಾಕಿಗಳಿರುವರು. ನಮ್ಮಲ್ಲಿ ಪಾಶ್ಚಾತ್ಯರ ಹಿಡಿಯುಲು ಯತ್ನಿಸುವ ಹಲವು ಉತ್ತಮ ತರದ ಮಾರ್ಕೆಟುಗಳಿವೆ. ಆದರೂ ನಾವು ಇಷ್ಟರ ತನಕ ಏನೂ ಮಾಡಲಿಲ್ಲ. ಈ ಸ್ಥಿತಿಯು ಎಷ್ಟರ ಮಟ್ಟಿಗೆ ಇನ್ನೂ ಮುಂದುವರಿಯುವದು? ಸಾಂಪತ್ತಿಕ ಸ್ಥಿತಿಯು ಉದ್ಧಾರವಾಗಬೇಕಾದರೆ ತಕ್ಕ ಸುವ್ಯವಸ್ಥೆಗಳು ನಡೆಯಲೇಬೇಕು. ಅದ್ದರಿಂದ ಸಾಂಪತ್ತಿಕ ಶಾಸ್ತ್ರಜ್ಞರು ಈ ಕೆ... ಯೋಜನೆಗಳನ್ನು ಸರಿಯಾಗಿ ಪರಿಶೀಲಿಸತಕ್ಕದ್ದು. ಅವುಗಳಿಂದಾಗಿ ಮುಂದೆ ತೀವ್ರವಾಗಿ ಯಾವ ತರದ ಮುಕ್ತಿಯು ಸಿಕ್ಕಬಹುದೆಂದು ಅವರು ಕಂಡುಹಿಡಿಯತಕ್ಕದ್ದು. (೧) ಸಾಗುವಳಿಯ ಉದ್ಧಾರಣೆ, (೨) ಜನಸಂಖ್ಯೆಯು ಅತಿರೇಕವಾಗಿ ಹೆಚ್ಚದಂತೆ ಮಾಡುವ ಕ್ರಮಗಳು (೩) ಪಾಶ್ಚಾತ್ಯ ಕೈಗಾರಿಕೆಗಳ ಅಭ್ಯುದಯವನ್ನು ಅನುಸರಿಸಿ ನಮ್ಮ ಕೈಗಾರಿಕೆಗಳ ಉದ್ಧಾರ. ಯಾವುದೂ ಯೋಜನೆಗಳು ಸರಿಯಾಗಿ ಕಾರ್ಯಗತವಾಗಬೇಕಾದರೆ ಸರಕಾರದ ಸಹಕಾರವು ಅತ್ಯಗತ್ಯವಾದುದು. ಇಷ್ಟರ ವರೆಗೆ ಸರಕಾರವು ಈ ವಿಚಾರದಲ್ಲಿ ಅಷ್ಟು ಉತ್ಸಾಹವಿಟ್ಟಿಲ್ಲ. ಕೈಗಾರಿಕೆಗಳು ಅಭಿವೃದ್ಧಿಗೊಳ್ಳುವಂತೆ ಸರಕಾರವು ಆರ್ಥಿಕ ಸಹಾಯವನ್ನು ಒದಗಿಸತಕ್ಕದ್ದು. ನಮ್ಮ ಸರಕಾರಕ್ಕೆ ಕಸ್ಟಮ್ಸ್ ಮತ್ತು ಇನ್‌ಕಮ್‌ಟೇಕ್ಸ್ ಇಲಾಖೆಗಳಿಂದ ಧಾರಾಳ ಆದಾಯಗಳಿವೆ. ಸಂಸಾರಕ್ಕೆ ಹೆಚ್ಚಿನ ಹಣ ಒದಗಿಸುವ ಇಲಾಖೆಗಳೆಂದರೆ ಇವೆರಡೇ. ದೇಶದ ಸಾಂಪತ್ತಿಕ ಸ್ಥಿತಿಯು ಸರಿಯಾಗಿದ್ದರೆ ಮಾತ್ರ ಈ ಇಲಾಖೆಗಳು ಸರಿಯಾಗಿ ಆದಾಯ ಗಳಿಸಬಲ್ಲವು. ಆದುದರಿಂದ ಸರಕಾರವು ಈ ಸಾಂಪತ್ತಿಕ ವಿಚಾರಗಳ ಎಚ್ಚರಿಕೆಗಳಿಗೆ ಗಮನಕೊಡುವುದು ಅಗತ್ಯ. ಜನರ ಸಾಂಪತ್ತಿಕ ಅಭಿವೃದ್ಧಿಯಾಗುವಂತೆ ಈಗಿನ ಸಾಂಪತ್ತಿಕ ದುಃಸ್ಥಿತಿಯು ನಾಶವಾಗುವಂತೆ ಸರಕಾರವು ವರ್ತಿಸತಕ್ಕದ್ದು.

ಹಿಂದೂ ಪತ್ರಿಕೆ

ಹಿಂದೂದೇಶದ 'ಮಾತೃತ್ವ ಮತ್ತು ಶಿಶುಗಳ ಆರೈಕೆ.

"ಮದ್ರಾಸು ಆದಿಪತ್ಯದಲ್ಲಿ ಮಾತೃತ್ವದಿಂದ ಉಂಟಾಗುವ ಮರಣಗಳ ಮತ್ತು ಶಿಶುಮರಣಗಳ ಸಂಖ್ಯೆಯು ಇಂಗ್ಲಾಂಡಿನ ಸಂಖ್ಯೆಯ ನಾಲ್ಕು ಪಾಲಾಗಿರುತ್ತದೆ" ಎಂದು ಮದ್ರಾಸು ಗವರ್ನರರಾದ ಎರ್‌ಸ್ಕಿನ್ ಪ್ರಭುಗಳು ಮದ್ರಾಸಿನಲ್ಲಿ ಜರಗಿದ ಅಖಿಲ ಭಾರತ ಸೂಲಗಿತ್ತಿ ಮತ್ತು ಮಾತೃತ್ವ ವಿಚಾರದ ಪರಿಷತ್ತಿನ ಅಧ್ಯಕ್ಷರಾಗಿ ಆಡಿದ ಮಾತಾಗಿರುತ್ತದೆ. ಇಂಗ್ಲಾಂಡಿನಲ್ಲಿ ಮಾತೃತ್ವ ಮತ್ತು ಶಿಶುಗಳಾರೈಕೆಯು ಆರೋಗ್ಯಕರವಾಗಿ ನಡೆಯುವಂತೆ ಅನೇಕ ಒಳ್ಳೇ ಸಾಂಪ್ರದಾಯಗಳಿವೆ. ಅಲ್ಲಲ್ಲಿ ತರಬೇತು ಹೊಂದಿದ ವೈದ್ಯರು, ನರ್ಸುಗಳು, ಮಿಡ್‌ವೈಫ್‌ಗಳು ಮಾತೃತ್ವದ ಅಪಾಯಗಳನ್ನು ಕಡಿಮೆ ಮಾಡುವಂತೆ ಶ್ರಮಪಡುತ್ತಿದ್ದಾರೆ. ಹಿಂದೂದೇಶದಲ್ಲೋ? ಹಳೇ ಪುರಾತನ ಕ್ರಮಗಳು ಇನ್ನೂ ರೂಢಿಯಲ್ಲಿವೆ. ಮಾತೃತ್ವದ ನವೀನ ಕ್ರಮಗಳು ಮದ್ರಾಸು, ಕಲ್ಕತ್ತಾ ಮೊದಲಾದ ಪಟ್ಟಣಗಳಲ್ಲಿ ಹೊರತು, ಹಿಂದೂದೇಶದ ಅಸಂಖ್ಯಾತ ಹಳ್ಳಿಗಳಲ್ಲಿ ಇವುಗಳ ಅರಿವೇ ಇಲ್ಲ. ಹೀಗಾಗಿ ಅನೇಕ ಮರಣಗಳು ಸಂಭವಿಸುವವು. ತಾಯಿಂದಿರ ಆರೋಗ್ಯವು ಕೆಡುತ್ತಿದೆ. ಶಿಶುಗಳ ಆರೈಕೆಯು ಯೋಗ್ಯ ರೀತಿಯಲ್ಲಿ ನಡೆಯುತ್ತಿಲ್ಲ. ಮದರಾಸಿನಲ್ಲಿ ಜರಗಿದ ಈ ಪರಿಷತ್ತು ಹಿಂದೂದೇಶದಲ್ಲಿ ಮಾತೃತ್ವದ ಕುರಿತು ಸುಜ್ಞಾನವು ಪ್ರಚಾರವಾಗುವಂತೆ ಪ್ರಯಾಸಪಡತಕ್ಕದ್ದು. ಪ್ರತಿಯೊಂದು ಜಿಲ್ಲೆಗಳಲ್ಲಿ ಮಾತೃತ್ವ ಆಶ್ರಮಗಳನ್ನು ಸ್ಥಾಪಿಸಿ, ಅನೇಕ ವೈದ್ಯರನ್ನು ಮಿಡ್‌ವೈಫುಗಳನ್ನೂ, ನರ್ಸುಗಳನ್ನೂ ಮಾತೃತ್ವದ ಆಧುನಿಕ ಕ್ರಮಗಳಲ್ಲಿ ತರಬೇತು ಮಾಡಿ ಅವರು ಪ್ರತಿ ಜಿಲ್ಲೆಯ ಹಳ್ಳಿಗಳಲ್ಲಿದ್ದು ಕಾರ್ಯಮಾಡಬೇಕು. ಯೋಗ್ಯವಾದ ವೈದ್ಯಕೀಯ ಸಹಾಯ ಪ್ರಸವಾಸನ್ನ ಜನರಿಗೂ ದೊರಕಬೇಕಾದರೆ ಬರೇ ಮೂಢನಂಬಿಕೆಯಿಂದ ಅನೇಕ ಅಲ್ಪಸಲ್ಪದ ಕ್ರಮಗಳನ್ನು ಆಚರಿಸುತ್ತಿರುವ ಬರೇ ತನ್ನ ಜೀವನವನ್ನು ಸಾಗಿಸುವ ಪ್ರಯತ್ನಪಡುವ ವೈದ್ಯಕೀಯ ಜನರ ಸಂಖ್ಯೆಯು ಕಡಿಮೆಯಾಗಬೇಕು. ಇವರೆಲ್ಲಾ ಸರಕಾರದ ಕೈಗಳಿಗೆ ಯೋಗ್ಯ ತರಬೇತನ್ನು ಪಡೆದವರಾಗಿ ಅಲ್ಲಲ್ಲಿ ಜನರ ಆರೋಗ್ಯವನ್ನು ಕಾಪಾಡುವ ಸಂಸ್ಥೆಗಳನ್ನು ನಡೆಯಿಸತಕ್ಕದ್ದು. ಜನರಲ್ಲಿ ಯಾವ ರೋಗಗಳೂ ಬಾರದಂತೆ, ಇಂಜೆಕ್ಷನ್ ಮಾಡು ಇತ್ಯಾದಿಗಳ ಬಾಧೆಯನ್ನು ತಪ್ಪಿಸುವಂತೆ ಈ ವೈದ್ಯಕೀಯ ಜನರು ಸ್ವಚ್ಛತೆಯ ಕಡೆಗೆ ಹೆಚ್ಚಿನ ಗಮನಕೊಟ್ಟು, ಜನರನ್ನು ಪೀಡಿಸುತ್ತಿರುವ ಹಲವು ಭಯಂಕರ ರೋಗಗಳನ್ನೇ ನಿರ್ಮೂಲಗೊಳಿಸಬೇಕು. ಹೀಗಾದರೆ ಮಾತ್ರ ಜನರು ಆರೋಗ್ಯವಂತರಾಗಿ ಬಾಳಬಹುದು. ಮಾತ್ರವಲ್ಲದೆ ಸರಕಾರದ ವೈದ್ಯಕೀಯ ಇಲಾಖೆಯು ವೆಚ್ಚವು ಸಾರ್ಥಕವೆನಿಸುವುದು. ಅದೇ ರೀತಿ ಈ ಮಾತೃತ್ವ ಮತ್ತು ಶಿಶುಗಳ ಆರೈಕೆಯು ಸರಿಯಾಗಿ ನಡೆಯಲು ಸರಕಾರವು ಅದರ ಸಂಪೂರ್ಣ ಅಧಿಕಾರವನ್ನು ವಹಿಸಿ ಮೇಲೆ ಸೂಚಿಸಿದ ವ್ಯವಸ್ಥೆಗಳನ್ನು ಮಾಡಿದರೆ ಅಗ್ಗ ... ಪಾಶ್ಚಾತ್ಯ ಜನಾಂಗಗಳ ಯೋಗ್ಯತೆಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಜನಾಂಗದ ಮುಂದಿನ ಸ್ಥಿತಿಯು ಆಧಾರವೆನಿಸುವ ಮಾತೃತ್ವ ಮತ್ತು ಶಿಶುಗಳ ಆರೈಕೆಯು ಸರಿಯಾಗಿ ನಡೆಯುವಂತೆ ಸರಕಾರವೂ ಪ್ರಜೆಗಳೂ ಶ್ರಮಪಡಬೇಕು.

ಜೆಕೊಸ್ಲೊವೇಕಿಯಾದ ಡಾ ಬಿನ್ನೆಸ್ಸರು:

ಸಾಧಾರಣ ೨೦ ವರ್ಷಗಳ ಸಮಯದಿಂದ ಜೆಕೊಸ್ಲೊವೇಕಿಯಾದ ಬಹಿರ್‌ವ್ಯವಹಾರಗಳ ಸಚಿವರಾಗಿರುವ ಡಾ. ಬಿನ್ನೆಸ್ಸರು ಈಗ ಅಲ್ಲಿನ ರಿಪಬ್ಲಿಕಿನ ಅಧ್ಯಕ್ಷರಾಗಿರುವರು. ಜನಾಂಗ ಸಭೆಯ ಅಧ್ಯಕ್ಷರಾಗಿದ್ದವರು ಯುರೋಪಿನ ಶಾಂತಿ ರಕ್ಷಣಾ ಕಾರ್ಯದಲ್ಲಿ ಬಹಳವಾಗಿ ಶ್ರಮಪಟ್ಟವರು. ಜೆಕೊಸ್ಲೊವೇಕಿಯಾ, ರೂಮೇನಿಯಾ ಮತ್ತು ಯುಗೊಸ್ಲೇವಿಯಾ ದೇಶಗಳನ್ನು ಒಂದುಗೂಡಿಸಿದವರು. ಜೆಕೊಸ್ಲೊವೇಕಿಯಾ ಸ್ವಾತಂತ್ರ್ಯಕ್ಕಾಗಿ ಬಹಳ ಪ್ರಯಾಸಪಟ್ಟವರು. ತನ್ನ ಅವಿಶ್ರಾಂತ ಕೆಲಸಮಾಡುವ ಗುಣಗಳಿಂದ ಯಶಸ್ಸನ್ನು ಪಡೆದವರು. ಜೆಕೊಸ್ಲೊವೇಕಿಯಾದ ಪ್ರತಿನಿಧಿಗಳಾಗಿ ಪೆರಿಸ್, ಲಂಡನ್ ಇತ್ಯಾದಿ ನಗರಗಳಿಗೆ ಸಂಚಾರಬೆಳೆಯಿಸಿದವರು. ಮಹಾಯುದ್ಧದ ಸಮಯ ಬ್ರಿಟಿಷರಲ್ಲಿ ಮತ್ತು ಅವರೊಡನೆ ಕೂಡಿದ ಜನಾಂಗಗಳಲ್ಲಿ ಜೆಕೊಸ್ಲೊವೇಕಿಯಾ ಸ್ವಾತಂತ್ರ್ಯದ ಕುರಿತು ಪ್ರಚಾರಕಾರ್ಯ ನಡೆಸಿದವರು. ಮಹಾ ವಿದ್ವಾಂಸರಾದ ವಕೀಲರು. ಬೆಳಗ್ಗಿನ ಜಾವಕ್ಕೆ ಎದ್ದು ದಿನಕ್ಕೆ ೧೫ ತಾಸು ಶ್ರಮಿಸಲು ಶಕ್ತಿಯುಳ್ಳವರು. ೧೯೧೮ರಲ್ಲಿ ಜೆಕೊಸ್ಲೊವೇಕಿಯಾಕ್ಕೆ ಇವರ ಶ್ರಮಗಳ ಪರಿಣಾಮವಾಗಿ ಸ್ವಾತಂತ್ರ್ಯವು ಸಿಕ್ಕಿತು. ಇದರ ನಂತರ ಡಾ। ಬಿನ್ನೆಸ್ಸರು ಜೆಕೊಸ್ಲೊವೇಕಿಯಾವನ್ನು ಭದ್ರೀಕರಿಸುವ ಕಾರ್ಯದಲ್ಲಿ ನಿರತರಾದರು. ಜೆಕೊಸ್ಲೊವೇಕಿಯಾ, ಜರ್ಮನಿ ಮತ್ತು ಇಟೇಲಿಯ ಮಧ್ಯೆ ಆಸ್ಟ್ರೀಯಾ, ಹಂಗೇರಿಯಾದ ಮಧ್ಯೆ ವಿಭಾಗದ ಪ್ರದೇಶಗಳು, ಜರ್ಮನಿಯ ಸಾಹಸಗಳು ಆಸ್ಟ್ರಿಯಾ ಹಂಗೇರಿಯಾವನ್ನು ಒಡೆಯುವರು. ಒಂದು ವೇಳೆ ಅವರು ಅದನ್ನು ವಶೀಕರಿಸಲು ತಪ್ಪಿದರೆ, ಅದು ಇಟೇಲಿಯ ಪಶ್ಚಿಮ ಪ್ರಭುತ್ವಕ್ಕೆ ಸೇರಬಹುದು. ಜೆಕೊಸ್ಲೊವೇಕಿಯಾದ ಜನಸಂಖ್ಯೆಯು ಕಾಲಂಶವು ಜರ್ಮನಿಯದಾಗಿರುತ್ತದೆ. ಹೀಗಿರುವಾಗ, ಮಧ್ಯ ಯೂರೋಪಿನ ಕಲಹ ಸಮುದ್ರದಲ್ಲಿ ಈ ದೇಶವನ್ನು ಸ್ವತಂತ್ರವಾಗಿಡುವಂತೆ ಡಾ। ಬಿನ್ನೆಸ್ಸರು ಬಹಳವಾಗಿ ಶ್ರಮಪಡುತ್ತಿದ್ದಾರೆ. ಇವರು ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಲು ಮೊರೆಯಿಟ್ಟಿರುವ ಜನಾಂಗಸಭೆಯ ೨ ದಿನ ಹೋಗುತ್ತಾ ಬರುತ್ತಿದೆ. ಅದರೂ ಡಾ। ಬಿನ್ನೆಸ್ಸರು ನಾಯಕರ ಆಡಿಯಲ್ಲಿ ಜೆಕೊಸ್ಲೊವೇಕಿಯಾ ಸಂತುಷ್ಟವಾಗಿಯೂ ಸ್ವತಂತ್ರವಾಗಿಯೂ ಬಾಳುವುದರಲ್ಲಿ ಏನೂ ಸಂದೇಹಗಳಿಲ್ಲ.

ರಷ್ಯಾ—ಇಂಗ್ಲಾಂಡು ಸಂಬಂಧ.

ಪ್ರಪಂಚದ ಶಾಂತಿರಕ್ಷಣೆಯಾಗಿ ಜನಾಂಗಸಭೆಯು ಕೊನೆನೆಂಟುಗಳೆಂಬ ಶರ್ತಗಳನ್ನು ನೋಲಕ್ಕಿಟ್ಟ ರಷ್ಯಾ ದೇಶದೊಡನೆ ಬ್ರಿಟನು ಮೈತ್ರಿಭಾವವನ್ನು ಬೆಳೆಯಿಸಿ ಜನಾಂಗಸಭೆಯನ್ನು ಬಲಗೊಳಿಸುವಂತಾಗಬೇಕು. ಇವರಿಬ್ಬರ ಮೈತ್ರಿಯು ತಮ್ಮ ಪರಸ್ಪರ ಸ್ವಾರ್ಥವನ್ನು ಸಾಧಿಸುವಂತೆ ಇತರ ಜನಾಂಗಗಳಿಂದ ತಮ್ಮ ವ್ಯಾಪಾರ ಇತ್ಯಾದಿಗಳನ್ನು ರಕ್ಷಿಸಿಕೊಳ್ಳುವ ಪರತ್ತಗಬಾರದು. ಇವರ ಮೈತ್ರಿಯಿಂದ ಜನಾಂಗಸಭೆಯು ಬಹಳ ಉನ್ನತಿಹೊಂದುವುದು. ಇಷ್ಟರ ತನಕ ಇವರಲ್ಲಿರುವ ಪರಸ್ಪರ ಮೈತ್ರಿ ಹೃತ್ಪೂರ್ವಕವಾದುದಲ್ಲ. ಇವರು ಹೃತ್ಪೂರ್ವಕ ಬ್ರಿಟಿಷರೊಡನೆ ಬೆರೆತ ಈ ಯೂರೋಪು ಮುಂದಿನ ಭಯಾನಕಗೊಳಿಸುವ ಅಪಾಯಗಳಿಂದ ತಪ್ಪಿಸುವಂತೆ ಜನಾಂಗಸಭೆಯು ಸಹಕಾರಿಯಾಗುವಂತೆ ಮಾಡತಕ್ಕದು. ಈ ಕಾರ್ಯದಲ್ಲಿ ಜರ್ಮನಿಯನ್ನು ಜನಾಂಗಸಭೆಯ ಸದಸ್ಯರನ್ನಾಗಿ ಮಾಡುವ ಪ್ರಯತ್ನಗಳು ನಡೆಯ ತಕ್ಕದು. ಯೂರೋಪಿನ ಎಲ್ಲಾ ಜನಾಂಗಗಳು ಜನಾಂಗಸಭೆಯ ಸದಸ್ಯರಾಗಿ ಈ ಶಾಂತಿರಕ್ಷಣೆಯ ಮಹತ್ಕಾರ್ಯವನ್ನು ನಡೆಯಿಸತಕ್ಕದ್ದು ಎಂದು ಲಂಡನಿನಲ್ಲಿ ಜರಗಿದ ಸ್ನೇಹಭಾವ ಮತ್ತು ಶಾಂತತೆ ಕಾಂಗ್ರೆಸ್ಸಿನಲ್ಲಿ ಲೋರ್ಡ್ ವಿಲ್ಸನ್‌ರು ಮಾಡಿದ ಭಾಷಣದ ಸಾರಾಂಶವಾಗಿರುತ್ತದೆ. ಈ ಕಾಂಗ್ರೆಸ್ಸಿಗೆ ಜಗತ್‌ಪ್ರಖ್ಯಾತ ನಾಟಕಕಾರರೆನಿಸಿದ ಬರ್ನಾರ್ಡ್ ಶಾರವರೂ ಬಂದಿದ್ದರು. ಅವರ ಹೇಳಿಕೆ ವಿಚಾರದಲ್ಲಿ

"ನಾವು ಬುದ್ಧಿವಂತರಾಗಿದ್ದರೆ ರಷ್ಯದಲ್ಲಿ ಕ್ರಾಂತಿಯಾದ್ದು ಈಗಿನ ಸೋವಿಯಟ್ ರಾಜ್ಯಸ್ಥಾಪನೆಯಾಗುತ್ತಿರಲಿಕೆ ನಮ್ಮ ಬಂಡವಾಳವು ಅಲ್ಲಿನ ಅನೇಕ ಕೈಗಾರಿಕೆಗಳಲ್ಲಿ ಸಂಚಯಿಸಬೇಕಿತ್ತು. ನಾವು ಹಾಗೆ ಮಾಡುತ್ತಿದ್ದರೆ ಇವತ್ತಿನ ದಿವಸಕ್ಕೆ ಸಮಸ್ತ ರಷ್ಯಾವೇ ಬ್ರಿಟಿಷರ ವಶವಾಗುತ್ತಿತ್ತು.

"ಈಗ, ರಷ್ಯವು ಅಭ್ಯುದಯವಾಗುವ ರೀತಿಯಲ್ಲಿ ಅತಿ ಬೇಗನೇ ಧಾರಾಳ ಬಂಡವಾಳವನ್ನು ಸೃಷ್ಟಿಸುವವರಾಗುವರು. ಬಂಡವಾಳವು ಅವರಲ್ಲಿ ಅಧಿಕವಾಗಿ ಅವರು ಅದನ್ನು ಬ್ರಿಟನಿನಲ್ಲಿ ಸಂಚಯಿಸಬಹುದು. ಇದರಿಂದಾಗಿ ಸ್ವಲ್ಪ ಸಮಯದ ನಂತರ ಈ ಬ್ರಿಟಿಷ ದ್ವೀಪಗಳು ಅವರ ಕೈಸೇರಬಹುದು" ಎಂದು ಅಭಿಪ್ರಾಯಪಟ್ಟರು. ಈ ಕಾಂಗ್ರೆಸ್ಸಿನಲ್ಲಿ ಜಗತ್ತಿನ ಶಾಂತಿಸ್ಥಾಪನೆಯಾಗುವರೆ ರಷ್ಯಾ—ಬ್ರಿಟನಿನ ಸಂಬಂಧವು ವೃದ್ಧಿಹೊಂದತಕ್ಕದ್ದೆಂದು ಅಭಿಪ್ರಾಯಪಟ್ಟು, ಸೋವಿಯಟ್ ರಷ್ಯಾದ ಜಗತ್ತಿನಲ್ಲಿ ಶಾಂತಿಸ್ಥಾಪನೆ ಮಾಡುವ ವಿಚಾರದಲಿ ಜನಾಂಗ ಸಭೆಯ ಮೇಲಿರುವ ಅನುರಾಗವನ್ನು ಶ್ಲಾಘಿಸಿಯೂ ಬ್ರಿಟಿಷ ಸರಕಾರವು ಸೋವಿಯಟ್ ಸರಕಾರದೊಡನೆ ವ್ಯಾಪಾರ ಇತ್ಯಾದಿ ಸ್ನೇಹಭಾವದ ಒಪ್ಪಂದಗಳನ್ನು ಮಾಡುವಂತೆಯೂ ಅದನ್ನು ವಿಸ್ತರಿಸುವಂತೆಯೂ ಅಂತರ್‌ರಾಷ್ಟ್ರೀಯ ಸಂಬಂಧಗಳು ಈ ಸಂಬಂಧಗಳಿಂದ ಉದ್ಧಾರಹೊಂದುವುದಾಗಿಯೂ ಇವೇ ಮೊದಲಾದ ಕಾರಣ ರಷ್ಯದೊಡನೆ ಮೈತ್ರಿಯು ಒಪ್ಪಂದ ಕುರಿತು ಠರಾವುಗಳನ್ನು ಮಾಡಿದರು.

ಚೀನಾದೇಶದಲ್ಲಿ ಸ್ವಯಂಪ್ರಭುತ್ವದ ಚಳವಳ

ಜಪಾನೀಯರು ಜನಾಂಗಸಭೆಯನ್ನು ಮಾನ್ಯಮಾಡದೆ ತನ್ನ ಅಭ್ಯುದಯಕ್ಕೆ ಮಂಚೂರಿಯಾವನ್ನು ಸಂಗ್ರಾಮೋಪಾಯಗಳಿಂದ ಹಿಡಿದು ಅಲ್ಲಿ ಬಲವಾದ ಜಪಾನೀಯ ಪ್ರಭುತ್ವವನ್ನು ಸ್ಥಾಪಿಸಿದರು. ಅದೂ ಅಲ್ಲದೆ, ಇವತ್ತಿಗೆ ೫ ವರ್ಷಗಳಿಂದ ಇಡೀ ಚೀನಾದೇಶದಲ್ಲಿ ಜಪಾನು ಪ್ರಭುತ್ವವು ಪ್ರಸರಿಸುವಂತೆ ಜಪಾನಿನ ಮಂಚೂರಿಯಾ ಇತ್ಯಾದಿ ಚೀನಾದೇಶದ ಪ್ರಾಂತ್ಯಗಳಲ್ಲಿರುವ ಜಪಾನೀಯ ಸಂಗ್ರಾಮಾಧಿಕಾರಿಗಳು ಶ್ರಮಪಡುತ್ತಿದ್ದಾರೆ. ಉತ್ತರ ಚೀನಾ ಪ್ರಾಂತ್ಯಗಳಲ್ಲಿ ಇವರ ಪ್ರಯತ್ನಗಳ ಫಲಿಸಲಾರಂಭಿಸಿವೆ. ಬೇಂಕ್ ಆಫ್ ಇಂಗ್ಲಾಂಡಿನವರು ಇತ್ತೀಚೆಗೆ ಚೀನಾ ಸರಕಾರಕ್ಕೆ ಒಂದು ದೊಡ್ಡ ಸಾಲಕೊಡುವ ಸೂಚನೆಗಳನ್ನು ಮಾಡಲು ಜಪಾನು ಪಾಶ್ಚಾತ್ಯ ಪ್ರಭುತ್ವವು ತನ್ನ ಉದ್ದೇಶಗಳಿಗೆ ಅತಂಕಗಳನ್ನೊದಗಿಸಬಹುದೆಂದು ಅಭಿಪ್ರಾಯಪಟ್ಟು ಅದನ್ನು ಬೇಗನೇ ಈ ಪ್ರಾಂತ್ಯಗಳಲ್ಲಿ ಕಾರ್ಯಗತಗೊಳಿಸುವರೆ ಪ್ರಯತ್ನಪಡುತ್ತಿದ್ದಾರೆ. ಇದರಿಂದಲೇ ಚೀನಾದೇಶದ ಪ್ರಾಂತ್ಯಗಳಲ್ಲಿ ಈಗ ಬಹಳ ಕ್ರಾಂತಿಯುದ್ಧಿರುತ್ತದೆ. ಉತ್ತರ ಚೀನಾದಲ್ಲಿರುವ ಈ ಪ್ರಾಂತ್ಯಗಳನ್ನು ಸ್ವಯಂಪ್ರಭುತ್ವದ ರಾಜ್ಯಗಳನ್ನಾಗಿ ಮಾಡಿ ಮತ್ತೆ ಅವುಗಳಲ್ಲಿ ಅಧಿಕಾರ ನಡೆಸುವುದು ಇವರ ಮುಖ್ಯ ಉದ್ದೇಶವಾಗಿರುತ್ತದೆ. ತಮ್ಮ ಈ ಉದ್ದೇಶವನ್ನು ಸಾಧಿಸಲು ತಕ್ಕ ಎಲ್ಲಾ ಸಿದ್ಧತೆಗಳನ್ನು ಮಾಡಿರುವರು. ಅನೇಕ ಕಡೆಗಳಲ್ಲಿ ದಂಗೆಗಳೂ ಆಗಿರುವವು. ಆದರೆ ಇವರ ಸಂಪೂರ್ಣ ಜಯಹೊಂದುವರೇ? ಇವರನ್ನು ಯಾರು ತಡೆಯುವರು? ಅಮೇರಿಕಾ ಮತ್ತು ಬ್ರಿಟನು ಇವರನ್ನು ತಡೆದರೆ ಆಗ ಜಪಾನು ಹೇಗೆ ವರ್ತಿಸುವುದ?



ಅನುಕ್ರಮಣಿಕೆ.

ಸೂಚನೆಗಳು	೩
ಅಬಿಸೀನಿಯಾ ಚೀನಾಕ್ಕೂ ಒಪ್ಪಂದವಾಗುತಿತೆ	೪
ಅಕ್ಷರ ಬಳಕೆ	೫
ಚೀನೀಯ ವಿದ್ಯಾರ್ಥಿಗಳ ಗಲಭೆ	೬
ಕಾಂಗ್ರೆಸ್ಸಿನ ಚರಿತ್ರಾಸಾರ	೮
ಪ್ರಪಂಚ ಪರಿಚಯ	೯
ಅಗ್ರಲೇಖ	
ಗ್ರಾಮೋದ್ಧಾರ ಕಾರ್ಯ	೧೦
ಸ್ಫುಟವಿಚಾರಗಳು	೧೧
ವರ್ತಮಾನ ಸಂಗ್ರಹ	
ಮಂಗಳೂರು, ತಾಲೂಕುಗಳಿಂದ	೧೧
ಕನ್ನಡ ರಾಜ್ಯ ನಿರ್ಮಾಣ	೧೩
೨೧ನೇ ಕನ್ನಡ ಸಾಹಿತ್ಯ ಸಮ್ಮೇಲನ	೧೬
ಶಿಕ್ಷಿತ ತರುಣರ ಕರ್ತವ್ಯವೇನು?	೧೮

ಸ್ವದೇಶಾಭಿಮಾನಿ.

ತಾ.೧೦ನೇ ಶುಕ್ರವಾರ ಜನವರಿ ೧೯೩೬

ಗ್ರಾಮೋದ್ಧಾರ.

(ಗಾಯಕವಾಡರ ವಜ್ರೋತ್ಸವ)

ರಜತೋತ್ಸವ, ಸ್ವರ್ಣೋತ್ಸವ, ವಜ್ರೋತ್ಸವಗಳು ೨೫-೫೦-೬೦ ವರ್ಷಗಳ ವರೆಗೆ ನಿರಾತಂಕವಾಗಿ ಸಾಗಿದ ಯಾವುದೊಂದು ಆಳಿಕೆಯೇ ಮೊದಲಾದ ಕಾರ್ಯನಿರ್ವಹಣವನ್ನು ಕುರಿತು ಜರುಗುವುವು ಒಂದು ಕಲಾಂತರದ ಹಿಂದೆ ನಡೆದ ವಿಕ್ಟೋರಿಯ ಮಹಾರಾಣಿಯವರ ವಜ್ರೋತ್ಸವ ತರುವಾಯದಲ್ಲಿ ಗಾಯಕವಾಡ (ಬರೋಡಾ) ಮಹಾರಾಜರ ವಜ್ರೋತ್ಸವವೂ ಕಳೆದ ವಾರ ನಡೆಯಿತು ಬರೋಡಾ ರಾಜ್ಯವನ್ನು ಒಂದು ಮಾದರಿ ಸಂಸ್ಥಾನವೆಂದು ಗಣನೆಗೆ ತರುವರು, ಆದುದರಿಂದಲೇ ಈ ವಜ್ರೋತ್ಸವವು ಎಂತಹ ಆಳಿಕೆಯ ಕೊಂಡಾಟವನ್ನು ಮಾಡುವುದೆಂದು ಸೂಚಿಸಲು ಹೀಗೆ ಬರೆಯುವೆವು

ಮೊದಲನೆಯದಾಗಿ,- ಗಾಯಕವಾಡರು ಅಂದಿನ ಉತ್ಸವದ ಸ್ಮಾರಕವಾಗಿ ಒಂದು ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಿ, ಹಳ್ಳಿಗಳಲ್ಲಿ, ಮುಖ್ಯವಾಗಿ ದೀನರೂ ದರಿದ್ರರೂ ಆಗಿರುವವರ ಜೀವನ ಸೌಖ್ಯಕ್ಕಾಗಿ ಅದನ್ನು ವಿನಿಯೋಗಿಸಲು ಒಂದು ಟ್ರಸ್ಟನ್ನು ರಚಿಸಿರುವರು ಗ್ರಾಮೋದ್ಧಾರಕ್ಕಾಗಿ ಪ್ರತಿ ವರ್ಷವೂ ಇನ್ನೂ ಇನ್ನೂ ಹೆಚ್ಚಿನ ಮೊಬಲಗು ವ್ಯಯವಾಗುವಂತೆ ಅಪ್ಪಣೆ ಕೊಟ್ಟು, ಅದರೊಂದಿಗೆ ಈ ಮೊಬಲಗನ್ನೂ ವಿನಿಯೋಗಿಸಬೇಕೆಂದಿರುವರು ಇದೇ ಭರತ ಖಂಡಕ್ಕೆ ಒಂದು ಕೋಟಿ ರೂಪಾಯಿಗಳನ್ನು ಈ ವರ್ಷ ಇದೇ ವಿಷಯಕ್ಕಾಗಿ ವ್ಯಯಿಸುವಂತೆ ನಮ್ಮ ಸರಕಾರವೂ ವಿಧಿಸಿದೆ ಬರೋಡಾ ರಾಜ್ಯವು ಒಂದು ಕೋಟಿ ರೂಪಾಯಿ ಮೂಲಧನದಿಂದ ಈ ಉದ್ಧಾರ ಕಾರ್ಯವನ್ನು ವಿಧಿಸುವುದೆನ್ನುವಾಗ, ಅಲ್ಲಿನ ಪ್ರಜೆಗಳು ಎಷ್ಟು ಕೃತಜ್ಞರಾಗಬೇಕಾಗಿಲ್ಲ?

'ಗ್ರಾಮೋದ್ಧಾರ' ಎಂಬ ಮಾತನ್ನು ನಾವೆಲ್ಲೆಲ್ಲಿಯೂ ಇತ್ತೀಚೆಗೆ ಕೇಳುತ್ತಿದ್ದೇವೆ ಉತ್ತಮ ಜೀವನವು ನಮಗೆ ಸಿಕ್ಕಬೇಕೆಂದು ಹಳ್ಳಿಗರಲ್ಲಿ ಕಾಂಕ್ಷೆ ಹುಟ್ಟಿಸುವುದೇ ಈ ಉದ್ಯೋಗ ಕಾರ್ಯದ ಮೊದಲನೆ ಸಾಧನೆ ಸ್ವಸಹಾಯ, ಆತ್ಮಾವಲಂಬನೆ ಇವೆರಡು ಗ್ರಾಮಸ್ಥರಲ್ಲಿ ಮೂಡದೆ, ಯಾರು ಉದ್ಧಾರಕ್ಕೆ ಹೊರಟರೂ ಸಾಧ್ಯವಾಗಲಾರದು.

ಮೊದಲಾಗಿ, ಕಡ್ಡಾಯವಾಗಿ ಸಮಸ್ತರೂ ಶಿಕ್ಷಣ ಹೊಂದುವಂತಾಗಬೇಕು. ಜನಸಾಮಾನ್ಯರಿಗೆಲ್ಲ ಶಿಕ್ಷಣವನ್ನೀವ ೩೦೦೦ ಶಿಕ್ಷಕರು ಬರೋಡಾ ರಾಜ್ಯದಲ್ಲಿ, ೧೮೯೩ರಿಂದ ಕೆಲಸ ಮಾಡುತ್ತಿರುವರು. ಅದೂ ಅಲ್ಲದೇ ಗ್ರಾಮ ಶಾಲೆಗಳಲ್ಲಿ ಗ್ರಾಮ್ಯಜೀವನಕ್ಕೆ ತಕ್ಕಂತಹ ಶಿಕ್ಷಣ ಕ್ರಮವಿದ್ದು, ಹಾಗೆ ಶಿಕ್ಷಣಹೊಂದಿದವರು ಒಮ್ಮೆಲೇ ನಗರಗಳಿಗೆ ಹೋಗಿ ಗ್ರಾಮಗಳ ಸಂಪತ್ತನ್ನು ಕುಂದಿಸದ ಹಾಗೆ ಸಾಧಿಸಲಾಗುತ್ತಿದೆ. ಟ್ರೈನಿಂಗ್ ಶಾಲೆಗಳಲ್ಲಿ ಹಳ್ಳೀ ಜೀವನಕ್ಕೆ ಸಂಬಂಧವಿರುವ ವಿಚಾರಗಳಲ್ಲೇ ಅತ್ಯಧಿಕ ಬೋಧನೆ ಕೊಡಲಾಗುತ್ತಿದೆ.

ಇನ್ನೂ ಇದಕ್ಕೆ ಸಹಾಯಕವಾಗಿ, ಸಂಚಾರೀ ಪುಸ್ತಕಾಲಯಗಳ ಏರ್ಪಾಡು ಇರಬೇಕು. ಓದಲು ಅನುಕೂಲತೆ ದೊರೆಯದೆ, ಪ್ರಾಥಮಿಕ ಶಿಕ್ಷಣ ಹೊಂದಿದವರು ಕ್ರಮೇಣ ನಿರಕ್ಷರರಾಗುವುದನ್ನು ತಪ್ಪಿಸಲು ಇಂತಹ ಪುಸ್ತಕಾಲಯಗಳು ಅವಶ್ಯವಾಗಿವೆ.

ಗ್ರಾಮಪಂಚಾಯತುಗಳನ್ನು ಪ್ರತಿಯೊಂದೂ ಗ್ರಾಮದಲ್ಲಿ ಸ್ಥಾಪಿಸಿ, ತನ್ಮೂಲಕವಾಗಿ ಗ್ರಾಮಾಭಿವೃದ್ಧಿಯನ್ನು ಬರೋಡೆಯಲ್ಲಿ ಸಾಧಿಸಲಾಗಿದೆ ಶಾಶ್ವತವಾಗಿ ಗ್ರಾಮಸ್ಥರಿಗೆ ಉಪಯೋಗವಾಗುವ ವಿಷಯಗಳಿಗೆ ಮಾತ್ರ ಈ ಪಂಚಾಯತುಗಳು ಹಣವನ್ನು ವ್ಯಯಿಸುತ್ತಿವೆ ದಾರಿಗಳು, ಬಾವಿಗಳು, ಕೂಟಗಳು ಮೊದಲಾದುವನ್ನು ಕಡಿಮೆ ಸಂಚಾರದ ಮತ್ತು ನೀರಿನ ಅನುಕೂಲತೆ ಮಾಡಿಕೊಡುವುದು ಈ ಪಂಚಾಯತುಗಳ ಪ್ರಥಮ ಕರ್ತವ್ಯವಾಗಿದೆ

ರೈತರಿಗೆ ಯಾವ ಬೆಳೆಗಳನ್ನು ಹೇಗೆ ಬೆಳೆಸಬೇಕೆಂದೂ, ಬೀಜಗಳನ್ನು ಹೇಗೆ ಆರಿಸಬೇಕೆಂದೂ, ಕೊಳೆರೋಗಗಳನ್ನು ಹೇಗೆ ನಿವಾರಿಸಬೇಕೆಂದೂ ಬೋಧನೆಯಾಗುತ್ತಿದೆ, ಜಾನುವಾರುಗಳ ಅಭಿವೃದ್ಧಿಗೆ ಪ್ರತ್ಯೇಕ ಪೇಚಾಡುವ ಇಲಾಖೆಯಿದೆ, ರೈತರಿಗೆ ತುಂಬ ಸಹಾಯ ಮಾಡಲು ಸಹಕಾರ ಸಂಘಗಳಿವೆ, ಅವಕಾಶದಲ್ಲಿ ಇನ್ನಷ್ಟು ಸಂಪಾದನೆಮಾಡಲು ರೈತರಿಗೆ ಬೋಧಿಸುವ ಅದೊಂದು ಇಲಾಖೆಯೇ ಇದೆ, ಗ್ರಾಮದ ಆರೋಗ್ಯ ಸಾಧನೆಗಾಗಿ ಆರೋಗ್ಯ ಇಲಾಖೆಯಿದ್ದು, ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುತ್ತಿದೆ

ಇನ್ನು ಸಾಮಾಜಿಕ ವಿಚಾರಗಳಲ್ಲಿ ಬಾಲ್ಯವಿವಾಹ ಪದ್ಧತಿಯಿಲ್ಲದಂತೆಯೂ, ಜಾತಿಗಳಲ್ಲಿ ಮೇಲುಕೀಳುಗಳ ಚಳವಳವಿರದಂತೆಯೂ, ಅಸ್ಪೃಶ್ಯತೆಯು ನಿವಾರಣೆಹೊಂದುವಂತೆಯೂ ಗಾಯಕವಾಡರು ಕಾನೂನುಮಾಡಿರುವರು

ಈಗ ಪ್ರತ್ಯೇಕಿಸಿರುವ ಈ ಕೋಟಿ ರೂಪಾಯಿಗಳ ನಿಧಿಯಿಂದೇನಾಗುವುದು? ಜನಸಂಖ್ಯೆಯು ಬಹಳ ಒತ್ತೊತ್ತಾಗಿರುವಲ್ಲಿ ಉಪನಗರಗಳನ್ನು ಸ್ಥಾಪಿಸುವುದಕ್ಕೂ, ನೀರು ಸರಬರಾಯಿ, ಹೆದ್ದಾರಿಗಳು ಮತ್ತು ಶಾಲೆಗಳು ಇವುಗಳ ಅನುಕೂಲತೆಗಳನ್ನು ಹೆಚ್ಚಿಸುವುದಕ್ಕೂ ಈ ಹಣವು ವಿನಿಯೋಗ ಹೊಂದುವುದಾದರೂ, ಅಂತ್ಯಜರಿಗೂ, ತೀರ ಬಡವರಿಗೂ ಈ ಸೌಕರ್ಯಗಳನ್ನು ಮೊದಲಾಗಿ ಕೊಡಬೇಕೆಂದೂ ರಾಜಶಾಸನವಾಗಿದೆ

ಇವೆಲ್ಲ ಅನುಕೂಲತೆಗಳು ಗ್ರಾಮವಾಸಿಗಳಿಗೆ ದೊರೆತರೆ, ಅವರ ದೃಷ್ಟಿಯು ಅರಳುತ್ತ ಜೀವನದಲ್ಲಿ ಹೆಚ್ಚಿನ ಸುಖವನ್ನು ಅವರು ನಿರೀಕ್ಷಿಸಲೂ ಅನುಭವಿಸಲೂ ಕಲಿತುಕೊಳ್ಳುವರು

ನಮ್ಮ ಅಧಿಪತ್ಯದಲ್ಲಿ ಈ ವರ್ಷ ೧೫ ಲಕ್ಷ ರೂಪಾಯಿಗಳನ್ನು ಗ್ರಾಮೋದ್ಧಾರಕ್ಕಾಗಿ ವ್ಯಯಿಸುವರು ಇದಕ್ಕೊಂದು ಕೌನ್ಸಿಲೂ ನಿರ್ಮಾಣ ಹೊಂದಿದೆ, ಕಾರ್ಯಕ್ರಮವೂ ಪ್ರಕಟವಾಗಿದೆ ಮೇಲೆ ಗಾಯಕವಾಡರು ಗ್ರಾಮಗಳ ಪುನರುಜ್ಜೀವನಕ್ಕಾಗಿ ಕೈಕೊಂಡ ವಿಧಿವಿಧಾನಗಳಲ್ಲಿ ಯಾವುವನ್ನು ಎಷ್ಟರಮಟ್ಟಿಗೆ ಈ ಕೌನ್ಸಿಲು ಕೈಕೊಳ್ಳುವುದೋ ನೋಡಬೇಕು ಅದೂ ಅಲ್ಲದೆ ಈ ಹಣವು ಪ್ರತಿವರ್ಷ ಇದಕ್ಕಾಗಿಯೇ ಬಜೆಟುಗಳಲ್ಲಿ ಪ್ರತ್ಯೇಕವಾಗಿ ಸ್ಯಾಂಕ್ಷನ್‌ಮಾಡಲಾಗುವ ಹಣಕ್ಕೆ ಸೇರಿಯೆ ವ್ಯಯವಾಗುವುದು. ನಮ್ಮಲ್ಲಿ ಈಗಲೆ ಕಂದಾಯವನ್ನು ಇಳಿಸಬೇಕಾಗಿ ಬಂದಿದೆ, ಸಂಬಳದ ನೌಕರರ ಸಂಬಳಗಳು ಹೆಚ್ಚಲೂ ಬೇಕು. ಮುಗ್ಗಟ್ಟು ಇನ್ನೂ ಬಗೆಯೇ ಇದೆ,—ಹೀಗಾಗಿ ಬಜೆಟನಲ್ಲಿ ಎಷ್ಟು ಹಣವು ಈ ಕಾರ್ಯಕ್ಕೆ ದೊರೆಯ…

ಸ್ಫುಟವಿಚಾರಗಳು

ಹಿಂದೂ ಮುಸ್ಲಿಮರ ಐಕ್ಯತೆಗಾಗಿ

ಹಲವು ವಿಚಾರವಂತರು ಕೆಲವು ಸಲಹೆಗಳನ್ನು ಪ್ರಕಟಿಸಿರುವರು ಮಹಾ ಸಭಾದಿಗಳಲ್ಲಿ ಆಗಾಗ ಮುಸ್ಲಿಮ ಧರ್ಮದ ಉಜ್ವಲ ಉದಾರ ಸತ್ಯ ತತ್ವಗಳನ್ನು ಕುರಿತಾಗಿ, ನಿಷ್ಪಕ್ಷಬುದ್ಧಿಯಿಂದ ಭಾಷಣಗಳಾಗಬೇಕು ಬ್ರಹ್ಮಜ್ಞಾನ ಸಂಘಗಳಲ್ಲಿ ಪೈಗಂಬರರ ವರ್ಧಂತ್ಯುತ್ಸವವನ್ನು ಆಚರಿಸಬೇಕು ಮಜೀದಿಗಳಲ್ಲಿ ಹಿಂದುಗಳನ್ನು ಪ್ರವೇಶಿಸಬಿಡುವುದಿಲ್ಲವಾದಲ್ಲಿ ಮುಸ್ಲಿಮ ಪ್ರಾರ್ಥನೆಗಳನ್ನು ಹಿಂದುಗಳು ವಿಶಾಲವಾದ ಮೈದಾನುಗಳಲ್ಲಿ ಮಾಡಬೇಕು; ಅವನ್ನು ಇತ್ತಂಡದ ಮುಂದಾಳುಗಳೂ ಕಲಿತುಕೊಳ್ಳಬೇಕು ಹಿಂದುಗಳಲ್ಲಾಗಲೀ ಮುಸ್ಲಿಮರಲ್ಲಾಗಲೀ ಯುವಕರು ಒಮ್ಮತವಾಗಿರಲು ಸಿದ್ಧರೇ ಎಂದೂ, ಮುಸ್ಲಿಮ ಧರ್ಮಶಾಸ್ತ್ರ ಬಲ್ಲ ಹಿಂದುಗಳು ಅದನ್ನು ಸುಲಭವಾಗಿ ಹಿಂದುಗಳಿಗೆ ಬೋಧಿಸುತ್ತಿರಬೇಕೆಂದೂ, ಉಭಯತರೂ ಒಂದಾಗದಂತೆ ಯಾರು ಪ್ರಯತ್ನಿಸುತ್ತಾರೆಯೋ ಅವರನ್ನು ದೂರವಿಡಬೇಕೆಂದೂ ತಮ್ಮದೇ ಆಗಿರುವ ರಾಷ್ಟ್ರಕ್ಕಾಗಿ ಇನ್ನೂ ಒಮ್ಮತವಾಗದಿರುವುದು ಅನ್ಯಾಯವೆಂದು ಸರ್ವರಿಗೂ ಎಚ್ಚರಿಸಿ ವಿವೇಕವನ್ನುಂಟುಮಾಡಬೇಕೆಂದೂ, ಮೊದಲಾಗಿ ವದ್ರಾಸಿನಲ್ಲಿ ಜರುಗಿದ ಬ್ರಹ್ಮಜ್ಞಾನಿಗಳ ಸಭೆಯಲ್ಲಿ ಮಾತುಕತೆಗಳೂ ನಡೆದಿವೆ

ಅಬಿಸೀನಿಯದ ಭವಿಷ್ಯ.

'ಹಿಂದೂ ಮುಸ್ಲಿಮರ ಅಸಮಾಧಾನ ಮನೋವೃತ್ತಿಯು ಸದ್ಯದಲ್ಲೇ ಕೊನೆಗಾಣುವುದು ಭಾರತವರ್ಷವು ಇನ್ನು ೫೦ ವರ್ಷಗಳ ಕನಕ ಸಂಪನ್ನವಾಗುತ್ತಲೇ ಬರಲು ತೊಡಗುವುದು. ಅಬಿಸೀನಿಯವು ಇಟೆಲಿಯನ್ನು ಬಲು ಬೇಗನೆ ಅಣಗಿಸುವುದು, ಮುಸ್ಸೋಲಿನಿಯು ಯಥಾಕ್ರಮವಾಗಿಯೂ ಹಿಟ್ಲರನು ಹಾವಳಿಗಾರರ ಕೈಗೆ ಒದ್ದು ಮಡಿಯುವರು ಎಂದು ಮೆಡೇಮ್ ಲೈಲಾ ಎಂಬಾಕೆ, ಹಿಂದೆ ಇದೇ ಯುದ್ಧವಾಗುವ ಕಾಲವನ್ನೂ ೧೯೩೫ಕ್ಕೆ ಪುನಃ ಅರಸು ಬರುವ ಕಾಲವನ್ನೂ ಮೊದಲು ತಿಳಿಸಿದವಳೇ ಈಗ ತಿಳಿಸಿರುವಳು ಇವಳ ಪ್ರವಾದದಂತೆ, ಭಾರತವರ್ಷದ ಮುಕ್ತಿಗೆ ಇನ್ನು ಆರು ವರ್ಷಗಳ ಅವಧಿಯಿದೆ, ಗಾಂಧಿಜೀಯವರ ವರ್ಚಸ್ಸು ಈಗ ಎಂದಿಗಿಂತಲೂ ಅಧಿಕವಾಗಿದೆ, ಅವರು ೭೫ನೇ ವಯಸ್ಸಿನಲ್ಲಿ ದಿವಂಗತರಾಗುವರು ಎಂದೂ ಭವಿಷ್ಯತ್ತು ಇವರಿಗೆ ಗೋಚರಿಸುವುದಂತೆ ಮೆಡೇಮ್ ಲೈಲಾ ಈಗ ಕಲ್ಕತ್ತದಲ್ಲಿದ್ದಾಳೆ, ಈಕೆಯು ತಂದೆ ಸಿಕ್ಖ ತಾಯಿ ಹಂಗೇರಿಯದ ಸ್ತ್ರೀ ಬಾಲ್ಯದಿಂದಲೂ ಪ್ರವಾದ ಹೇಳುವ ಶಕ್ತಿಯುಳ್ಳವಳಾಗಿ, ಎಷ್ಟೊ ರಾಜರನ್ನೂ ಮುತ್ಸದಿಗಳನ್ನೂ ಪ್ರತ್ಯಕ್ಷ ಕಂಡು ಭವಿಷ್ಯ ನುಡಿದು, ಅದು ಸತ್ಯವಾದುದನ್ನು ಅವರು ಶ್ಲಾಘಿಸಿರುವರೆಂದೂ ಮೈಲ್ ಪತ್ರಿಕೆಯೆನ್ನುತ್ತಿದೆ

ಜನಾರೋಗ್ಯ

ನಮ್ಮ ಅಧಿಪತ್ಯದಲ್ಲಿ ಕಳೆದ ವರ್ಷ ಬಹುದೋ ಹೇಳಲಾಗುವುದಿಲ್ಲ ಸ್ಥಳೀಯ ಬೋರ್ಡು ಮುನಿಸಿಪಾಲಿಟಿಗಳು ನರಳುತ್ತಿರುವ ಪ್ರಸಂಗಗಳೇ ಹೆಚ್ಚಾಗುತ್ತಿರುವಾಗ, ಅದರಲ್ಲೂ ಪುನಃ ಪಾರ್ಟಿ' 'ಜಾತಿ'ಗಳ ಗೊಂದಲಗಳೂ ತುಂಬ ತೋರಿ, ಮಂತ್ರಿಗಳೂ ಅಲ್ಲಲ್ಲಿ ಸಹಪಂಕ್ತಿ, ಅರ್ಧಪಂಕ್ತಿಗಳಿಗೆ ಅವಕಾಶಕೊಡುತ್ತಿದ್ದಾರೆಂದು ಆಕ್ಷೇಪಗಳೂ ಹೊರಟಿರುವ ಕಾರಣ,—ಗ್ರಾಮೋನ್ನತಿಗೆ ನಾವು ಸೂಚಿಸುವವಷ್ಟು ಸಾಧ್ಯವಾಗಬೇಕಾದರೆ ದೇವರೇ ಗತಿ ಎನ್ನುವಂತೆ ಗ್ರಾಮಸ್ಥರು ಭಯಪಟ್ಟಿರುವರು ಈ ಭಯವು ವ್ಯರ್ಥವೆಂದು ಪ್ರತ್ಯಕ್ಷ ತೋರಿಸಿಕೊಡುವ ಕೌಶಲವೂ ಕರ್ತವ್ಯ ತತ್ಪರತೆಯೂ ಸಾಧಕರ ಸಾಧನೆಗಳ ಪರಿಣಾಮವಾಗಿ ಆಗಲೆಂದು ಆಶಿಸುತ್ತೇವೆ

ಉಂಟಾದ ಜನನ ಮರಣಗಳು ರೋಗಗಳು-ಕ್ಷೇಮಾಭಿವೃದ್ಧಿಯ ಏರ್ಪಾಡುಗಳು ಮೊದಲಾದುವನ್ನು ಕುರಿತಾದ ಸರಕಾರದ ವರದಿಯಲ್ಲಿ—ಕಳೆದ ವರ್ಷ ಸಾಂಕ್ರಾಮಿಕ ರೋಗಗಳ ಹಬ್ಬುಗೆ ಮತ್ತು ಮರಣಾಧಿಕ್ಯತೆಗಳನ್ನು ಕುರಿತಾದ ಪ್ರಸ್ತಾಪವೆತ್ತಿ, ಸರಕಾರವೆನ್ನುತ್ತಿದೆ. "ನಿರ್ಮಲ ನೀರಿನ ಸೌಕರ್ಯ, ಚರಂಡಿಗಳ ಪುರವಠೆ ಮೊದಲಾದುವು ಇನ್ನಷ್ಟು ಗಮನ ಹೊಂದಬೇಕು" ಹಾಗಿದ್ದರೆ, ಸರಕಾರವು ಏನುಮಾಡುವುದಂತೆ? ಸ್ಥಳೀಯ ಬೋರ್ಡುಗಳು ಈ ವಿಷಯಗಳಿಗೆ ಇನ್ನಷ್ಟು ಚೆನ್ನಾಗಿ ನಿಗಾ ಕೊಡುವುದೆಂದು ನಂಬಬೇಕಾಗಿದೆ ಎಂದೂ, ಹಾಗೆ ಮಾಡಿದ್ದಲ್ಲಿ ರೋಗಗಳೂ ಮರಣಗಳೂ ಕಡಮೆಯಾಗುವುದೆಂದೂ ತಿಳಿಸಲಾಗಿದೆ ಎಂದರೆ, ಸರಕಾರವು ತಾನಾಗಿ ಏನನ್ನೂಮಾಡುವುದಿಲ್ಲವೆಂದು ಅಭಿಪ್ರಾಯವೆ? ವಾಹನ ತೆರಿಗೆಯಿಂದಾಗಿ ಬಂಡಾರ ಬರಿದಾಗುತ್ತಾ ಬಂದಿರುವ ಸ್ಥಳೀಯ ಬೋರ್ಡುಗಳ ಮೇಲೆ ಕ್ಷೇಮಾಭಿವೃದ್ಧಿಯ ಏರ್ಪಾಡುಗಳಿಗಾಗಿ ತನ್ನ ಜವಾಬ್ದಾರಿಯನ್ನು ಸರಕಾರವು ವರ್ಗಾಯಿಸಿಬಿಟ್ಟಿದೆ ಆರ್ಥಿಕ ಮುಗ್ಗಟ್ಟಿನಿಂದ ಸರಕಾರವು ಕಂಗೆಟ್ಟಿರುವುದಕ್ಕಿಂತಲೂ ಹೆಚ್ಚಾಗಿ ಬೋರ್ಡುಗಳು ಕಂಗೆಟ್ಟಿವೆ ಅವುಗಳ ಮೇಲೆ ಈ ಜವಾಬುದಾರಿಯನ್ನು ಹಾಕಿರುವುದರಿಂದ ಅವು ಈ ಭಾಗದಲ್ಲಿ ಏನನ್ನೂ ಮಾಡಲಾರದೆ, ರಿಸಲ್ಯೂಶನ್‌ಗಳಲ್ಲೇ ಸಮಾಧಾನ ಹೊಂದಬೇಕಾಗುವುದಲ್ಲ! ೮೨ ಮ್ಯುನಿಸಿಪಾಲಿಟಿಗಳಲ್ಲಿ ಶುದ್ಧ ನೀರಿನ ಸರಬರಾಯಿಯಿದೆ, ೪೧ರಲ್ಲಿ ಇನ್ನೂ ಈ ಮೂಲ ಏರ್ಪಾಡಿಗೆ ಗತಿಯಿಲ್ಲವಾಗಿದೆ ತಪ್ಪಿಂದಾಗಲಾರದ ಕೆಲಸವನ್ನು ಬೋರ್ಡುಗಳು ನಿರ್ವಹಿಸಬೇಕೆಂದು ತಿಳಿಸಿ, ಅವು ತಪ್ಪಿದ್ದಾದರೆ,—ಹಾಗಾಗದೆ ಇರುವುದು ಅಸಂಭವ—ಪ್ರಜೆಗಳ ಆರೋಗ್ಯವನ್ನು ದೇವರೂ ವೈದ್ಯರೂ ಕಾಪಾಡಬೇಕಲ್ಲ?

ನಿರುದ್ಯೋಗಿಗಳ ಸಹಾಯಕ್ಕಾಗಿ

ಎಸೆಂಬ್ಲಿಯಲ್ಲಿ ಶ್ರೀಯುತ ಗಿರಿಯವರ ಆದ್ಯತ ಸೂಚನೆಯು ಮುಂದೆ ಬರಲಿದೆ ಈಗ ಸಾರ್ವತ್ರಿಕ ಸಮಿತಿಯೊಂದನ್ನು ಏರ್ಪಡಿಸಬೇಕಾಗಿರುವ ಹಂಗೆಯೇ, ಸರಕಾರವು ಇನ್ನೊಂದು ಸಮಿತಿಯನ್ನು ನೇಮಿಸಿ,—ದೇಶದಲ್ಲಿ ಕೃಷಿಯೋಗ್ಯವಾಗಿಯೂ ಆದರೆ ಸದ್ಯಕ್ಕೆ ಕೃಷಿಗೆ ಒಳಪಡದೆಯೂ ಇರುವ ಎಲ್ಲಾ ಜಮೀನನ್ನು ಸರಕಾರವು ತನ್ನ ಸ್ವಾಧೀನತೆಗೆ ಪಡೆದು, ನಿರುದ್ಯೋಗಿಗಳ ವಶಕ್ಕೆ ಅದನ್ನು ಕೊಟ್ಟು ಅದರಿಂದ ಅವರು ಜೀವನಮಾಡುವ ಹಾಗೂ ಆದರೆ ವ್ಯಾಪಾರದ ಮೂಲಕ ಪ್ರಯೋಜನಪಡೆದ ಹಾಗೂ ನಿಯೋಜಿಸಿ, ಹಾಗೆ ಉದ್ಯೋಗ ಮಾಡಲು ಅಗತ್ಯಸಹಾಯಕ್ಕೆ ಬೇಕಾಗುವ ಯಂತ್ರಸನ್ನಾಹಗಳೇ ಮೊದಲಾದುವು ಸಮಿತಿಯ ವಶದಲ್ಲಿರುವ ಹಣದಿಂದ ಸಿಗುವಂತೆ ಮಾಡಿಕೊಟ್ಟು, ಯಾವ ನಿರುದ್ಯೋಗಿಯೇ ಆದರೂ ಸುಖವಾಗಿ ಜೀವಿಸಲೊಪ್ಪಿದರೆ ಈ ಕೆಲಸ (ವೃತ್ತಿ)ದಿಂದ ಜೀವಿಸುವಂತೆ ವ್ಯವಸ್ಥೆ ಮಾಡಿಕೊಡಬೇಕೆಂದು ಈ ಸೂಚನೆ ಆಗಬಹುದು ಶಿಕ್ಷಣಪ್ರಚಾರ, ಆರೋಗ್ಯ ರಕ್ಷಣೆಯ ಏರ್ಪಾಡು, ಇವುಗಳಿಗೆ ಒಂದೊಂದಕ್ಕೆ ಒಂದೊಂದು ಕೋಟಿ ರೂಪಾಯಿಯಂತೆ ಹಲವು ವರ್ಷಗಳ ವರೆಗೆ ಸರಕಾರವು ಹಣವನ್ನು ಪ್ರತ್ಯೇಕಿಸಿಟ್ಟು ಸಮಿತಿಗಳ ಮೂಲಕ ಕಾರ್ಯನಿರ್ವಹಿಸಿಕೊಳ್ಳಬೇಕೆಂದು ಇತ್ತೀಚೆಯ ಪತ್ರಗಳ ಕೇಳಿಕೆಯಾಗಿದೆ ಇಷ್ಟರಲ್ಲಿ ಸುಧಾರಣೆಗಳು ಹೊಸದಾಗಿ ಬರುತ್ತ ಹೆಚ್ಚುಗೊಳಿಸುವ ಖರ್ಚು ಬೇರೆ, ಕಂದಾಯ ತೆರಲಾರದಿರುವಲ್ಲಿ ಇಳಿಸಬೇಕಾಗಿರುವ ದೂರೂ ಆತ್ಯವೂ ಬೇರೆ, ಮಿಲಿಟರಿ ಖರ್ಚು ಹೆಚ್ಚಾಗಿರುವುದೂ ಬೇರೆ—ಹೀಗೆ ಅಧಿಕ ವ್ಯಯದ ಅಗತ್ಯಗಳು ಒಂದರಿಂದೇ ತೋರುವಾಗ, ನಿರುದ್ಯೋಗಿಗಳು ಇನ್ನೂ ಹೆಚ್ಚುವರೇ ಎಂದು ಅನುಮಾನವೂ ತೋರುವುದಲ್ಲ!

ಮಂಗಳೂರು.

ಇದೇ ದಶಂಬರ ತಾ. ೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೧೮ ಮರಣಗಳೂ ೮೧ ಜನನಗಳೂ ಜನವರಿ ತಾ. ೪ಕ್ಕೆ ಅಂತ್ಯವಾಗುವ ವಾರದಲ್ಲಿ ೨೨ ಮರಣಗಳೂ ೪೫ ಜನನಗಳೂ ಆದುವೆಂದು ತಿಳಿದುಬರುತ್ತದೆ.

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಪ್ರೊಪ್ರೈಟರ್ಸ್, ಶೇಟ್ ನಾಗಜಿ ಪುರುಷೋತ್ತಮ ಕಂಪೆನಿಯವರ ಜಾಹೀರಾತು 'ಮೋಟಾರು ಬಸ್' ಈ ತಿಂಗಳ ೫ಕ್ಕೆ ಈ ಜಿಲ್ಲೆಗೆ ಬಂದು, ಒಂದು ಹಪ್ತೆ ಸಂಚರಿಸಿ, ಎಲ್ಲಾ ಗಿರಾಕಿಗಳಿಗೆ ಬೇಕಾದ ಮಾಹಾಲನ್ನು ಖರ್ಚು ಇಲ್ಲದೆ ಒದಗಿಸಿಕೊಟ್ಟು, ಆ ನಂತರ ಉತ್ತರ ಕನ್ನಡಾ ಜಿಲ್ಲೆಗೆ ಹೋಗಿ, ಅಲ್ಲಿ ಕೋಟೆಗೆ ಹಿಂದೆರಳುವುದು ಎಂದು ಸ್ಥಳೀಯ ಏಜಂಟರಾದ ರಾಘವೇಂದ್ರ ರಂಗಪ್ಪಯವರು ತಿಳಿಸುತ್ತಾರೆ.

ಭಾಷಣ.

ಇದೇ ತಿಂಗಳ ತಾ. ೧೭ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮-೩೦ಕ್ಕೆ ಸರಿಯಾಗಿ, ಬಸವನಗುಡಿ ಬಳಿ ಇರುವ ೩೭ ಅನ್ನಪೂರ್ಣ ಮಂದಿರದಲ್ಲಿ ಶ್ರೀಯುತ ಎ ಬಾಲಕೃಷ್ಣರಾಯ್ರು ಇವರು "ಈಶ್ವರೀಯ ಜ್ಞಾನವೆಂದರೇನು?" ಎಂಬ ವಿಷಯದಲ್ಲಿ ಕನ್ನಡದಲ್ಲಿ ಭಾಷಣ ಮಾಡುವರು ಸರ್ವರಿಗೂ ಸ್ವಾಗತವಿದೆ ಭಜನೆ ಇತ್ಯಾದಿಗಳೂ ಜರಗುವವು

ಸ್ವಾಮಿ ಶ್ರೀ ಸತ್ಯದೇವಜಿಯವರು— ಯಾವುದೋ ಒಂದು ದೊಡ್ಡ ಕಾರಣದಿಂದ ಈ ತಿಂಗಳಲ್ಲಿ ದಕ್ಷಿಣ ಹಿಂದುಸ್ಥಾನಕ್ಕೆ ಬರಲು ತನಗೆ ಸಾಧ್ಯವಿಲ್ಲವೆಂದು ಅಕಸ್ಮಾತ್ತಾಗಿ ತಿಳಿಸಿರುವರು ಎಂದು ಕೆ. ದೇವಪ್ಪ ಆಳ್ವ ಹಿಂದೀ ಪ್ರಚಾರಕರು ತಿಳಿಸುತ್ತಾರೆ

ಜಿಲ್ಲಾ ಶ್ಯಾನುಭಾಗರ ಸಭೆ— ತಾರೀಖು ೨೮-೧೨-೩೬ರಲ್ಲಿ ಜರಗಿದ ಮೀಟಿಂಗಿನಲ್ಲಾದ ನಿರ್ಣಯದ ಮೇರೆಗೆ ಜಿಲ್ಲಾ ಶ್ಯಾನುಭಾಗರ ಕಡೆಯಿಂದ ಈ ಜಿಲ್ಲೆಯ ಎಲ್ಲಾ ಶ್ಯಾನುಭಾಗರಿಗೂ ತಿಳಿಸುವುದೇನೆಂದರೆ, ಇದೇ ಬರುವ ತಾ. ೧೭-೧-೩೭ನೇ ಆದಿತ್ಯವಾರ ಮಧ್ಯಾಹ್ನ ೨ ಗಂಟೆಗೆ ಮಂಗಳೂರು ಗಣಪತಿ ಹೈಸ್ಕೂಲ್ ಕಟ್ಟಡದಲ್ಲಿ ಈ ಜಿಲ್ಲೆಯ ಎಂ ಎಲ್ ಸಿ ಗಳಾದ ಮ। ರಾ। ರಾ। ಯು ಸಿ ಎಸ್ ಭಟ್ಟರವರ ಅಧ್ಯಕ್ಷತೆಯಿಂದಲೂ ಮಹನೀಯರುಗಳ ಉಪಸ್ಥಿತಿಯಿಂದಲೂ ಜಿಲ್ಲಾ ಶ್ಯಾನುಭಾಗರ ಜನರಲ್ ಮೀಟಿಂಗನ್ನು ಜರಗಿಸಬೇಕಾಗಿ ನಿರ್ಣಯಿಸಿರುವುದರಿಂದ ವಾರಿಸ ಮತ್ತು ಸಂಬಳದ ವಿಷಯಗಳಲ್ಲಿ ಸಂಭವಿಸಿದ ಸಂಕಷ್ಟಗಳ ವಿಷಯಗಳನ್ನು ಗವರ್ನಮೆಂಟಿಗೆ ಅರಿಕೆಮಾಡಿಕೊಳ್ಳುವ ಕುರಿತು ಆಯಾಯ ತಾಲೂಕಿನ ಮೀಟಿಂಗುಗಳನ್ನು ಜರಗಿಸಿ ಅವುಗಳ ಅಭಿಪ್ರಾಯಗಳ ಸಮೇತ ಪ್ರತಿ ತಾಲೂಕಿನಿಂದ ಕನಿಷ್ಠಪಕ್ಷ ೧೦ ಜನರಿಗೆ ಕಡಿಮೆಯಾಗದಂತೆ ಶ್ಯಾನುಭಾಗರುಗಳ ಪ್ರತಿನಿಧಿಗಳು ಹಾಜರಾಗಬೇಕಾಗಿ ವಿನಂತಿ ಎಂದು ಜಿಲ್ಲಾ ಸಂಘದ ಕೋಶಾಧಿಕಾರಿಗಳು ತಿಳಿಸುತ್ತಾರೆ

ಶಾಲಾ ವರ್ಧಂತಿ— ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿ ಉತ್ಸವವು (ಸ್ಕೂಲ್ ಡೇ) ಇದೇ ಬರುವ ಫೆಬ್ರವರಿ ತಿಂಗಳ ೧ನೇ ತಾರೀಖು ಶನಿವಾರ ಮಂಗಳೂರಿನ ಬೋರ್ಡ್ ಪ್ರೆಸಿಡೆಂಟರವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಡುವುದು. ಶಾಲೆಯ ಹಳೆಯ ವಿದ್ಯಾರ್ಥಿಗಳೆಲ್ಲರೂ ಈ ಉತ್ಸವಕ್ಕೆ ದಯಮಾಡಿ ಬಂದು ಎಲ್ಲಾ ವಿಧದಲ್ಲಿಯೂ ಸಹಕರಿಸಬೇಕಾಗಿ ವಿನಂತಿ ಎಂದು ಹೆಡ್ ಮಾಸ್ಟರರು ತಿಳಿಸುತ್ತಾರೆ.

ಕಾಂಗ್ರೆಸ್ ಸುವರ್ಣೋತ್ಸವ ಕಮಿಟಿ, ಮಂಗಳೂರು, ಜಮಾಖರ್ಚುಗಳ ವಿವರ

ನಗದಿ ಖರ್ಚಿಗಾಗಿ ವಸೂಲು ಮಾಡಿದ ವಂತಿಗೆ ರೂಪಾಯಿ ೧೩೫-೪-೦, ಅಕ್ಕಿ ಹಂಚುವರೆ ವಸೂಲು ಮಾಡಿದ ರೂ. ೪೭-೪-೦ (ಅಕ್ಕಿ ಕ್ರಯ ಕೂಡಾ), ಚಿಕ್ಕ ಧ್ವಜ ಮಾರಾಟದಿಂದ ಜಮಾ ರೂ. ೪೫-೩-೦, ಪುಸ್ತಕದಿಂದ ರೂ ೯ ಒಟ್ಟು ಜಮಾ ರೂ ೨೩೬-೧೧-೦.

ದಿ. ಸಿ. ಮಿಶನ್ ಹಂಚಿನ ಮಕ್ಕಳಿಗೆ ತಿಂಡಿ ಹಂಚುವರೆ ಖರ್ಚು ರೂ. ೨೦, ಉಳ್ಳಾಲ ಹಂಚಿನ ಮಕ್ಕಳಿಗೆ ಸ್ಲೇಟು ಪುಸ್ತಕ ಕೊಡಲಿಕ್ಕೆ ಕಂಡ ರೂ. ೧೨-೨-೦, ದೀಪಗಳ ಬಗ್ಗೆ ರೂ. ೧೪-೧೦-೦, ಬಡುಬಾಸ ಹಂಚುವರೆ ೨೯-೫-೬, ಧ್ವಜಗಳ ಖರ್ಚು ರೂ. ೨೫-೮-೭, ನಾಟಕದ ಬಗ್ಗೆ ಖರ್ಚು ರೂ. ೮-೩-೦, ಮುದ್ರಣ ವಗೈರೆ ರೂ. ೧೧-೨-೯, ಸ್ವಯಂಸೇವಕರಿಗೆ ಶ್ರೀ ಶೀನ ಶೆಟ್ಟಿಗೆ ಕೊಡಾ ರೂ. ೨೭-೫-೦, ಅಕ್ಕಿ ಹಂಚುವರೆ ರೂ. ೪೦-೮-೦, ಇತರ ಖರ್ಚು ರೂ. ೧೫-೬-೫, ನಗದಿ ಶಿಲ್ಕು ರೂ. ೨೭-೭-೯, ಒಟ್ಟು ರೂಪಾಯಿ ೨೩೬-೧೧-೦.

ತಾ. ೪-೧-೩೭ರಲ್ಲಿ ಸೇರಿದ ಕಮಿಟಿಯಲ್ಲಿ ಈ ಶಿಲ್ಕನ್ನು ವಂತಿಗಾಗಿ ಉಳಿದಿರುವ ನಗದಿ ರೂಪಾಯಿ ೨೭-೭-೯ನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ, ಕಾಂಗ್ರೆಸ್ ಕಟ್ಟಡದ ಬಗ್ಗೆ ಪ್ರತ್ಯೇಕಿಸಿ ಇಡುವಂತೆ ಕೊಡಬೇಕಾಗಿ ನಿರ್ಣಯವಾಗಿದೆ ಎಂದು ಹಿ. ರಾಮರಾಯ ಪೈ, ಕಾರ್ಯದರ್ಶಿ ಇವರು ತಿಳಿಸುತ್ತಾರೆ.

ತಾಲೂಕುಗಳಿಂದ

ಮೂಡಬಿದ್ರೀ— ಕಾಂಗ್ರೆಸ್ ಸುವರ್ಣ ಮಹೋತ್ಸವದ ಕಮಿಟಿಯವರು ನಿರ್ಣಯಿಸಿದ ಕಾರ್ಯಕ್ರಮದಂತೆ ಪ್ರಾತಃಕಾಲ ೬ ಗಂಟೆಗೆ ಪ್ರಭಾತಫೇರಿಯು ವೀರ ಮಾರುತಿ ದೇವಸ್ಥಾನದಿಂದ ಹೊರಟು ನಗರದ ಎಲ್ಲಾ ಬೀದಿಗಳಲ್ಲಿಯೂ ಸಂಚರಿಸಿ ಅರಮನೆ ಮೈದಾನಿಗೆ ಬಂದು ಸೇರಿತು. ಅಲ್ಲಿ ೮-೩೦ಕ್ಕೆ ಶ್ರೀಮಾನ್ ಧರ್ಮಸಾಮ್ರಾಜ್ಯಯ್ಯನವರು ಮಹಾಜನರ ಅಪೇಕ್ಷೆಯ ಮೇರೆಗೆ ವಂದನಾಪೂರ್ವಕವಾಗಿ ರಾಷ್ಟ್ರ ಧ್ವಜಾರೋಹಣವನ್ನು ಮಾಡಿದರು. ಗೀತ ಮಂಗಳವಾದ್ಯಗಳೊಡನೆ ಧ್ವಜವಂದನೆಯು ನಡೆದ ತರುವಾಯ ಶ್ರೀ ಕರಂಜೆ ಶ್ಯಾಮರಾಯರು ರಾಷ್ಟ್ರಧ್ವಜ ಮತ್ತು ಕಾಂಗ್ರೆಸಿನ ಸಂಕ್ಷಿಪ್ತ ಇತಿಹಾಸವನ್ನು ಮಹಾಜನರಿಗೆ ವಿವರಿಸಿ ಹೇಳಿದರು

ಆ ಮೇಲೆ ಕಮಿಟಿಯವರು ಖಾದಿ ಮಾರಾಟ ಮಾಡಿದರು. ಸಾಯಂಕಾಲ ೪ ಗಂಟೆಗೆ ಅಲಂಕರಿಸಲ್ಪಟ್ಟ ದೇಶಭಕ್ತ ಭಾವಚಿತ್ರಗಳೊಡನೆ ಪುರಪ್ರವೇಶ ೨೩ರ ಮುಂದಾಳುತನದಲ್ಲಿ ಮೆರವಣಿಗೆಯು ಅರಮನೆ ಮೈದಾನಿನಿಂದ ಹೊರಟು ನಗರದಲ್ಲೆಲ್ಲಾ ಸಂಚರಿಸಿ ಪುನಃ ಅಲ್ಲಿಗೆ ಬಂದು ಸೇರಿತು. ಮಹಾಸಭೆಗೆ ಕರಂಜೆ ಶ್ಯಾಮರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಅಧ್ಯಕ್ಷರು ತಮ್ಮ ರಸವತ್ತಾದ ಭಾಷಣದಲ್ಲಿ ಕಾಂಗ್ರೆಸಿನ ಧ್ಯೇಯವನ್ನೂ ಅದು ಕೈಕೊಂಡಿರುವ ಕಾರ್ಯಕಲಾಪಗಳನ್ನೂ, ಕಾಂಗ್ರೆಸಿನ ಪ್ರಮುಖ ಧುರೀಣರು ಮಾಡಿದ ಅನೇಕ ತ್ಯಾಗವನ್ನೂ ಒಳ್ಳೆಯ ಸ್ಫೂರ್ತಿಯಿಂದ ವಿವರಿಸಿದರು. ಒಕ್ಕಲಿಗರ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಎಮ್ - ಹೆಗ್ಡೆಯವರು ಮತ್ತು ಶ್ರೀ ಜ ಬಿ ಪೈಗಳೂ ಭಾಷಣವಿತ್ತರು. ರಾಷ್ಟ್ರಪತಿ ರಾಜೇಂದ್ರ ಬಾಬುಗಳ ಶುಭ ಸಂದೇಶವನ್ನು ಶ್ರೀ ಎನ್ ಪಿ ಮುರಯರು ಕನ್ನಡದಲ್ಲಿ ಭಾಷಾಂತರಿಸಿ ಸಭೆಯ ಮುಂದೆ ಓದಿದ ತರುವಾಯ ಮಂಗಳ ಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಪಾಣೆಮಂಗಳೂರು:— ತಾ. ೨೮-೧೨-೩೬ನೇ ಸೋಮವಾರ ಕಾಂಗ್ರೆಸಿನ ಸುವರ್ಣ ಮಹೋತ್ಸವವು ಇಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ಪೇಟೆಯು ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದಿತು. ರಾಷ್ಟ್ರಧ್ವಜದೊಂದಿಗೆ ಪ್ರಭಾತಫೇರಿ ಧ್ವಜಾರೋಹಣ ವಂದನೆಗಳು, ಹರಿಜನರಿಗೆ ಅನ್ನ ವಸ್ತ್ರದಾನ ಇತ್ಯಾದಿ ಕಾರ್ಯಕಲಾಪಗಳು ಜರಗಿಸಲ್ಪಟ್ಟವು. ಹರಿಜನ ಸಭೆಯೂ ಸಂತೋಷಕರವಾಗಿ ಮುಕ್ತಾಯಿತು.

ವಿಟ್ಲ:— ಇದೇ ಕಳೆದ ೨೮-೧೨-೩೬ನೇ ಸೋಮವಾರ ದಿನ ಇಲ್ಲಿ ಭಾರತ ರಾಷ್ಟ್ರೀಯ ಮಹಾಸಭೆಯ ಸ್ವರ್ಣೋತ್ಸವವು ಆಚರಿಸಲ್ಪಟ್ಟಿತು. ಆದ್ಯ ಮುಹೂರ್ತದ ಬೆಂಬಲದಿಂದ, ಉತ್ಸಾಹಿ ೩ ಜನರ ಮುಂದಾಳುತನದಲ್ಲಿ ಧ್ವಜವಂದನೆ ಮೆರವಣಿಗೆ ರಾಷ್ಟ್ರಮಹಾಸಭೆಯ (ಚರಿತ್ರೆ ಉದ್ದೇಶ ಕಾರ್ಯಕಲಾಪಗಳು ಪ್ರಯೋಜನ ಇತ್ಯಾದಿಗಳ) ಕುರಿತು ಉಪನ್ಯಾಸಗಳು, ಭಜನೆ ಯಕ್ಷಗಾನ ಮುಂತಾದ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದ್ದುವು. ಗ್ರಾಮದ ಪ್ರಮುಖರ ~~ರ್ಥಾಪ್ಪನವರ ರಾ. ನಡ್ಕಗುತ್ತು ಮಂಜಯ್ಯ ಅಳ್ವಂ~~ ಯರು ಉದಾರತೆಯಿಂದ ಹರಿಜನರಿಗೂ, ದೀನರಿಗೂ ಅಕ್ಕಿಯನ್ನು ಹಂಚಿದ್ದರು.

ಅಳಕೆಯ ಶ್ರೀ ವೆಂಕಪ್ಪಯ್ಯ ಹಾಯರ್, ಕುಕ್ಕಾಜೆ ದೂಮ ಶ್ರೀ ದುಗ್ಗ ಹಾಯರ್, ಶೆಟ್ಟಿ ಬೋರ್ಡ್ ಹಾಯರ್— ಈ ೩ ಶಾಲೆಗಳ ನಡುವೆ ಇನ್ನೊಂದು ಹಾಯರ್ ಎಲಿಮೆಂಟರಿ ಶಾಲೆಯಾಗುವುದಂತೆ

ಬೆಂಕಿಯ ಅನಾಹುತ— ತಾ. ೮-೧-೩೭ನೇ ದಿನ ಮಧ್ಯಾಹ್ನ ಕಣ್ಣೂರು ಗ್ರಾಮದ ಮಹಿಳ್ಳಾ ಮಸೀದಿಯ ಬಳಿಯಲ್ಲಿರುವ ಒಂದು ಮನೆಗೆ ಆಕಸ್ಮಾತ್ತಾಗಿ ಬೆಂಕಿ ತಗಲಿ, ನಂದಿಸಲಾಗದೆ, ಗಾಳಿ ರಭಸದಿಂದ ಬಾಕಿ ಐದು ಮನೆಗಳಿಗೆ ಬೆಂಕಿಯು ತಗಲಿತು. ಒಟ್ಟು ಎಂಟು ಮನೆಗಳು ಸಂಪೂರ್ಣ ಸುಟ್ಟುಹೋಗಿರುವವು. ಅನೇಕ ದನಕರುಗಳು ಗಾಯಹೊಂದಿರುವವು. ಒಂದು ದನವು ಸುಟ್ಟು ಭಸ್ಮವಾಗಿದೆ ಎಂದು ತಿಳಿದುಬರುತ್ತದೆ.

ಪ್ರಕಟಣೆ.

ಇದೇ ಬರುವ ತಾ. ೧೪-೧-೩೭ನೇ ಗುರುವಾರ ದಿನ ಸಾಯಂಕಾಲ ಗಂಟೆ ೫-೩೦ಕ್ಕೆ ಕೊಡಿಯಾಲ್ಬೈಲ್ ಕಾಂಗ್ರೆಸ್ ಕಛೇರಿಯಲ್ಲಿ ದ. ಕ. ಜಿಲ್ಲಾ ಸ್ವದೇಶಿ ಪ್ರಚಾರ ಸಭೆಯ ಸರ್ವಸ್ವದ ಮಹಾಸಭೆಯು ಸೇರುವುದರಿಂದ ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ ಎಂದು ಹಳ್ಳಿನಾಡು ಸೂರಪ್ಪಯ್ಯ ಕಾರ್ಯದರ್ಶಿ ಇವರು ತಿಳಿಸುತ್ತಾರೆ.

ಬೈಂದೂರು:— ಇಲ್ಲಿಯ ಬೋರ್ಡ್ ಮಿಕ್ಸ್ಡ್ ಸ್ಕೂಲಿನಲ್ಲಿ ಸುಮಾರು ೧೫ ವರ್ಷಗಳ ವರೆಗೆ ಅವಿಶ್ರಾಂತವಾಗಿ ಕೆಲಸಮಾಡಿದ ಹಾಲಾಡಿ ನಾರಾಯಣರಾಯರು ಕೆಲಸಕ್ಕೆ ಉಡುಪಿಗೆ ವರ್ಗಾಯಿಸಲ್ಪಟ್ಟು, ಕೆಲಸಮಯದಲ್ಲಿಯೇ ಅಕಾಲ ಮರಣಕ್ಕೀಡಾದುದು ತುಂಬಾ ವ್ಯಸನಕ್ಕೆ ಕಾರಣವೇ ಸರಿ. ಹಿರಿಯವರ ಸ್ಮರಣಾರ್ಥ ಕೇವಲ ಅವರ ಶಿಷ್ಯರಾಗಿರುವ ಬೈಂದೂರು ಸೆಂಟರಿನ ಹಳೇ ವಿದ್ಯಾರ್ಥಿಗಳೆಲ್ಲರೂ ಇಲ್ಲಿಯ ಕ್ಲಬ್ಬಿನ ಸಭಾರದಲ್ಲಿ ನೆರೆದು ತಾ. ೧-೧-೩೬ನೇ ಬುಧವಾರ ಅಪರಾಹ್ನ ರಾ। ಯಡ್ತರೆ ಕೃಷ್ಣಪ್ಪ ಶೆಟ್ಟಿ ಅಳಿಯ ಮಂಜಯ್ಯ ಶೆಟ್ಟಿ ಅಧ್ಯಕ್ಷತೆಯಲ್ಲಿ ಈ ಕೆಳಗಿನ ಠರಾವುಗಳನ್ನು ಪಾಸು ಮಾಡಿದರು. (೧) ಹಾಲಾಡಿ ನಾರಾಯಣರಾಯರ ಸ್ಮರಣಾರ್ಥ ಹಾಲಾಡಿ ನಾರಾಯಣರಾವ್ ಮೆಮೋರಿಯಲ್ ಕಮಿಟಿಯೊಂದನ್ನು ಸ್ಥಾಪಿಸಿ, ಅದರಿಂದ ಕೆಂಟಿಕ್ ವಿದ್ಯಾಭ್ಯಾಸವನ್ನು ಪಡೆದು ಸಂಸ್ಕೃತದಲ್ಲಿರುವ ಅವರ ಶಿಷ್ಯವೃಂದದಲ್ಲೆಲ್ಲಾ ತಮ್ಮ ಕೈಲಾದ ಮಟ್ಟಿನ ಸಹಾಯವನ್ನು ಪ್ರಿಯರಿಗೆ ಕಳ್ಳುಹಿಸುವಂತೆ ಪ್ರಾರ್ಥಿಸುವುದು (೨) ಅವರ 'ಫೊಟೊ'ವನ್ನು ಸದರೀ ಶಾಲೆಯಲ್ಲಿ ಶಾಲಾ ವರ್ಧಂತಿಯ ದಿವಸ ತೆರೆಯುವುದು. ಉಳಿದ ಹಣವನ್ನು ಕಮಿಟಿಯವರು ಇನ್ನಿತರ ಸಭೆಸೇರಿ, ನಾರಾಯಣರಾಯರ ಹೆಸರಲ್ಲಿ ಉಪಯುಕ್ತ ಕೆಲಸಗಳಿಗೆ ವಿನಿಯೋಗಿಸುವುದು. ಶಿಷ್ಯವೃಂದವು ಕೈಕೊಂಡ ಈ ಕೆಲಸವು ಸ್ತುತ್ಯವಿದೆ.

ಬೈಲೂರು:— ಸ್ಥಳೀಯ ಸೆಂಟರಿನ ಅಧ್ಯಾಪಕರ ಅಪೇಕ್ಷೆಯ ಮೇರೆಗೆ ಕೀರೆ ಬೈಲು ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ತಾ. ೨೬-೧೨-೩೬ರಿಂದ ತಾ. ೧-೧-೩೭ರ ವರೆಗೆ ಮೂಲ್ಕಿ ಬೋರ್ಡ್ ಹ್ಯಾಯರ್ ಎಲಿಮೆಂಟರಿ ಶಾಲೆಯ ಅಸಿಸ್ಟೆಂಟ್ ಮಾಸ್ಟರ್ ಶ್ರೀ ಎಚ್ ಶೀನಶೆಟ್ಟರವರು ಲಾಠಿ ಮತ್ತು ಲೇಜಿಮ್ ತರಬೇತಿ ಕ್ಲಾಸನ್ನು ತೆರೆದಿದ್ದರು.

ತಾ. ೧-೧-೩೭ರಲ್ಲಿ ಮ। ರಾ। ಕೆ ಅಂತಯ್ಯ ಶೆಟ್ಟಿ ಅಧ್ಯಕ್ಷತೆಯಲ್ಲಿ ಲಾಠಿ ಮತ್ತು ಲೇಜಿಮ್ ಪ್ರದರ್ಶನ ಮಾಡಿಸಲಾಯಿತು. ಊರ ಮಹನೀಯರೆಲ್ಲರೂ ಸದ್ರಿ ಆಟಗಳನ್ನು ನೋಡಿ ಸಂತೋಷಿಸಿದ್ದಲ್ಲದೆ ತರಬೇತಿ ಕೊಡುವರೆ ಬಂದ ಶ್ರೀ ಎಚ್ ಶೀನಶೆಟ್ಟರಿಗೆ ಅಭಾರಿಗಳಾಗಿರುತ್ತಾರೆ.

ಉಡುಪಿ:— ಸುವರ್ಣ ಮಹೋತ್ಸವದ ಜಮಾ ಖರ್ಚಿನ ವಿವರ—ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯು ಸುವರ್ಣೋತ್ಸವವನ್ನು ಜರಗಿಸುವರೆ ದ್ರವ್ಯಸಹಾಯ ಮಾಡಿದ ಮಹನೀಯರು—

ಶ್ರೀಯುತರುಗಳಾದ ಪಿ ... ಪೈ ಸಹೋದರರು ರೂ ೬ ಬಾಲಕಟ್ಟೆ ಬೀಡು ಕೃಷ್ಣಯ್ಯ ಹೆಗ್ಡೆ ರೂ ೫, ಬೈಲೂರು ವಾಸುದೇವರಾವ್ ವಕೀಲ ನಾನಾಲಾಲ ಮತ್ತು ಕೋಟೇಶ್ವರ ಸಹೋದರರು ರೂ ೨ರಂತೆ ಶ್ರೀಗಳಾದ ಗಿಲ್ಡಿ, ಪಾವಂಜೆ ಗುರುರಾವ್, ಕೆನರಾ ಮಿಲ್ಸ್, ಡಾಕ್ಟರ್ ಎ ಜೆ ಆಚಾರ್ಯ ಪಂಡಿತ ಕೇಶವ ನಂಜೆಯಾರ್ ಐಡಿಯಲ್ ಸ್ಟೋರ್ಸ್, ಡಾಕ್ಟರ್ ಸ್ಕಂದ ರಾಮ ಪೈ ಕೆ ಎಲ್ ಪಡಾಕೆ ಕೆ ಆರ್ ನಾಯ್ಕ ಕಲ್ಯಾಣಿ ವ್ಯಾಸಾಚಾರ್ಯ ಕಲ್ಯಾಣ ಗಂಗಟ್ಕಾರ್ ಪೈ ಮತ್ತು ಕಂಪೆನಿ ಯು ಗುರುರಾಜ ಉಪಾಧ್ಯ ಎಂ ವಿಶಾಲಾಕ್ಷಮ್ಮ ವಕೀಲ ಮತ್ತು ಇಬ್ಬರು ಹಿತೈಷಿಗಳು ರೂ ೧ರಂತೆಯೂ ಶ್ರೀಗಳಾದ ಕೆ ಕೆ ಎನ್ ಪಿ ಬಾಳಿಗ, ವಕೀಲ ವಿಶ್ವನಾಯ್ಕ ವಕೀಲ ದಾಮೋದರ ಕಾಮತ್, ವಕೀಲ ಪಿ ಪಾಂಡುರಂಗ ನಾಯ್ಕ ವಕೀಲ ಜೆ ಎ. ಲೀಯೊ ವಕೀಲ ಪಿ. ಎನ್ ಮಾಧವರಾವ್, ಪ್ರಭಾಕರ ಪ್ರೆಸ್ ಪಿ ಎನ್, ಪ್ರಭು, ಫೊಟೊಗ್ರಾಫರ್ ಏಜಂಟ್ ಎ ಬಿ ಕೃಷ್ಣರಾಜ ಕೈಕಿಣಿ ಪಂಟಿಂಟ ಪೈ, ಯು. ವೆಂಕಟ್ರಾಯ ಪೈ ಇವರು ಆಣೆ ೮ರಂತೆಯೂ ಶ್ರೀ ಎಂ. ಯು. ಶೆಣೈ, ಕೆ ವಾಸುದೇವರಾವ್ ಮತ್ತು ಇಬ್ಬರು ಹಿತೈಷಿಗಳು ಆಣೆ ೪ರಂತೆಯೂ, ಶ್ರೀ ಎನ್ ಪಿ ಬಲ್ಲಾಳರು ಆಣೆ ೩ ಮತ್ತು ಶ್ರೀ ಕೆ ಆರ್. ರಾವ್ ಮತ್ತು ಪಿ. ವಿ. ಆಚಾರ್ಯ ಆಣೆ ೧ರಂತೆಯೂ ಸಹಾಯ ಮಾಡಿರುವರು. ಒಟ್ಟಿಗೆ ರೂ. ೪೯-೪-೦ರಲ್ಲಿ ರೂ ೧-೧೨-೦ ಇನ್ನೂ ವಸೂಲಾಗಲಿಲ್ಲ.

ಒಟ್ಟಿಗೆ ಜಮಾ ರೂ. ೪೬-೫-೦, ಖರ್ಚು— ರಾಷ್ಟ್ರಧ್ವಜ ರೂ. ೩-೬-೦, ಮೆರವಣಿಗೆ ರೂ. ೧೪-೧-೩, ಪ್ರೆಸ್ ರೂ. ೮, ವಿದ್ಯುತ್ ದೀಪ ರೂ. ೫, ಸ್ವಯಂಸೇವಕರ ರೂ. ೧-೦-೬, ಚಿಲ್ಲರೆ ರೂ. ೧-೬-೦, ಅಂಚೆ ಆಣೆ ೦, ಸವಡಿ ರೂ. ೫-೧೪-೫, ಒಟ್ಟಿಗೆ ರೂ. ೪೬-೫-೦ ಎಂಬುದಾಗಿ ಕಾರ್ಯದರ್ಶಿಯವರಾದ ಶ್ರೀ ಕೆ. ಶ. ಕಾರಂತರು ತಿಳಿಸುತ್ತಾರೆ.

ಉದ್ಯಾವರ ಸೈಂಟ್ ಫ್ರಾನ್ಸಿಸ್ ಕ್ಸೇವಿಯರ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ. ೨-೧-೩೭ನೇ ಶನಿವಾರ ರಾತ್ರಿ ದಿ ಎಮೆಚ್ಯೂರ್ ಆರ್ಟಿಸ್ಟ್ಸ್ ಡ್ರಮಾಟಿಕ್ ಎಸೋಸಿಯೇಶನ್ ಉದ್ಯಾವರ, ಇವರು ಪಬ್ಲಿಕ್ ಬೇಸ್‌ಮಿಂಟನ್ ಪಂದ್ಯಾಟದ ಸಹಾಯಾರ್ಥವಾಗಿ 'ಯುಗ' ಮಾಸಪತ್ರಿಕೆಯ ಸಂಪಾದಕರಾದ ಶ್ರೀ ಕೆ ಕಾಂತಪ್ಪ ಶೆಟ್ಟರಿಂದ ವಿರಚಿತವಾದ "ಸಂಶಯ ಪಿಶಾಚಿ" ಎಂಬ ಸಾಮಾಜಿಕ ನಾಟಕವನ್ನು ಪ್ರೇಕ್ಷಕರೆಲ್ಲರೂ ಮೆಚ್ಚುವಂತೆ ಅಭಿನಯಿಸಿ ತೋರಿಸಿದರು. ಜನಸ್ತೋಮವು ಸಾಕಷ್ಟು ಮಟ್ಟಿಗೆ ಇದ್ದಿತೆನ್ನಬಹುದು.

ಕಾಶೀಮಠದ ಶ್ರೀ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರು (ತಾ. ೧೧-೧-೩೭ನೇ ಸೋಮವಾರ) ಇಲ್ಲಿಗೆ ಚಿತ್ತೈಸಲಿರುವರು. ಸದರಿ ಸಮಾಜದ ಶಿಷ್ಯವರ್ಗದವರು ಯೋಗ್ಯ ಸ್ವಾಗತವನ್ನೀಯುವರೆಂಬ ನಿರೀಕ್ಷೆ ಇದೆ.

ಮುಂದಿನ ಪರ್ಯಾಯ ಪೀಠಾಧಿಕಾರಿಗಳಾದ ಪೇಜಾವರ ಶ್ರೀ ವಿಶ್ವಮಾನ್ಯತೀರ್ಥ ಶ್ರೀ ಪಾದಂಗಳವರು ಇದೇ ತಿಂಗಳ ತಾ ೩ನೇ ಸೋಮವಾರ ದಿನ ರಜತಪೀಠವನ್ನು ಸೇರುವರಂತಾದರು ಕಾಪುಕಟ್ಟೆಯಿಂದ ತೆಂಕಪೇಟೆಯಿಂದ ಜನತೆ ಮೆರವಣಿಗೆಯ ಸ್ವಾಗತವಿತ್ತು.

ಉಡುಪಿ ತಾಲೂಕು ವರ್ಗದವರ ಸಭೆಯು ತಾರೀಖು ೧-೧೨-೩೬ನೇ ಬುಧವಾರ ದಿನ ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿತು.

ಗುರುಕಂಬಳ:— (ಮಂಗಳೂರು ತಾಲೂಕು) ಇಲ್ಲಿ ವರ್ಷಂಪ್ರತಿ ನಡೆಯುತ್ತಿರುವ ಬಹಳ ಪುರಾತನವಾದ ಅಸ್ರಾರುದ್ದೀನ್ ವಲಿ ಸೂಫಿಗಳ ಸಂದಲ್ ಉರೂಸು ಕೆಲಸವು ಇದೇ ಜನವರಿ ತಿಂಗಳ ತಾ ೧೦ನೇ ಆದಿತ್ಯವಾರದಿಂದ ಆರಂಭಿಸಿ ತಾ ೨೪ನೇ ಆದಿತ್ಯವಾರದವರೆಗೆ ನಡೆಯುತ್ತಿರುವುದಾಗಿ ಅದರ ೧೦ನೇ ಮೊಕ್ತೇಸರ ದ ಆಡಳಿತದಾರರು ತಿಳಿಸುತ್ತಾರೆ.

ಕಾಸರಗೋಡು:— ರಾಷ್ಟ್ರೀಯ ಮಹಾಸಭೆಯ ಸುವರ್ಣೋತ್ಸವವು ಈ ಊರಲ್ಲಿಯೂ ತಾರೀಖು ೨೮-೧೨-೩೬ರಲ್ಲಿ ವಿಜೃಂಭಣೆಯಿಂದ ಜರಗಿತು. ಪಟ್ಟಣವು ತಳಿರು ತೋರಣ ಧ್ವಜಾವಳಿಗಳಿಂದ ಶೃಂಗರಿಸಲ್ಪಟ್ಟಿತ್ತು. ಮೆರವಣಿಗೆ, ಧ್ವಜವಂದನೆ ಮೊದಲಾದ ಕಾರ್ಯಕ್ರಮಗಳಾಗಿ ಸಾಯಂಕಾಲ ಶ್ರೀ ಲಕ್ಷ್ಮೀನಾರಾಯಣ ಪುನಂಚತ್ತಾಯರ ಅಧ್ಯಕ್ಷತೆಯಲ್ಲಾದ ಸಾರ್ವಜನಿಕ ಸಭೆಯಲ್ಲಿ ಶ್ರೀ ವಕೀಲ್ ಉಮೇಶರಾವ್ ಮಾಸ್ಟರ್ ಕೆ ವಿ ಪದ್ಮನಾಭಯ್ಯ ಮತ್ತು ಅಧ್ಯಕ್ಷರ ಭಾಷಣಗಳಾದ ನಂತರ ಜಯಘೋಷದೊಡನೆ ಈ ಸಮಾರಂಭವು ಕೊನೆಗೊಂಡಿತು.

ಪರಿವಾರ ಬಂಟರ (ಮುಕ್ಕಳಶೆಟ್ಟಿನಾಲ್ಕ ಬರಿಸುವ) ೩ನೇ ಮಹಾಸಭೆ— ಈ ಸಭೆಯು ತಾರೀಖು ೧-೧-೩೬ನೇ ಬುಧವಾರ ಕಾಸರಗೋಡು ತಾಲೂಕು ಕುಡ್ಲುಗ್ರಾಮದ ಶ್ರೀ ಮುಗೇರ ದೇವಸ್ಥಾನದ ವಠಾರದಲ್ಲಿ ಜರಗಿತು. ಅಧ್ಯಕ್ಷತೆಯನ್ನು ಶ್ರೀ ಬಂಟಪ್ಪನಾಯ್ಕರು ವಹಿಸಿದ್ದರು. ಜನಸಮೂಹವು ತುಂಬಾ ಇತ್ತು. ಸ್ವಾಗತಾಧ್ಯಕ್ಷರು ಸಭೆಯ ಉದ್ದೇಶಗಳನ್ನು ಅದು ಮಾಡಬೇಕಾದ ಕಾರ್ಯಕಲಾಪಗಳನ್ನು ಸವಿಸ್ತಾರವಾಗಿ ಹೇಳಿದ ನಂತರ ಸಂಘದ ಕಾರ್ಯದರ್ಶಿಗಳವರು ಗತಸಭೆಯ ವರದಿಯನ್ನು ಓದಿದರು. ನಂತರ ಸಂಘದ ವೃದ್ಧಿಗಾಗಿ ಅದರ ಕಾರ್ಯಕಾರಿ ಮಂಡಳಿಯನ್ನು ನೇಮಿಸಿದರು. ~~[illegible]~~ ಕಾರಿ ಮಂಡಳಿಯಲ್ಲಿ ನೇಮಿಸಲ್ಪಟ್ಟರು. ಸಮಾಜದ ಅಭಿವೃದ್ಧಿಯನ್ನು ಎಣಿಸಿ ಭಾಷಣಮಾಡಿದ ಶ್ರೀ ಕೆ ಪಿ ವೆಂಕಪ್ಪಶೆಟ್ಟಿಯವರನ್ನು ಅಭಿನಂದಿಸಲಾಯಿತು. ನಾಲ್ವರು ಸ್ವಾಗತಕಾರರೂ ೧೫ ಮಂದಿ ಸ್ವಯಂ ಸೇವಕರೂ ೬೩ ಮಂದಿ ಸದಸ್ಯರಾಗಿಯೂ ಇರುವ ಒಂದು ಸಂಸ್ಥೆಯು ಎಷ್ಟು ಅವಶ್ಯಕವಾದ ರೂಪಾಯಿ ೧೫೦-೦-೦ನ್ನು ಸಂಗ್ರಹಿಸಲಾಯಿತು, ಸಮಯೋಚಿತವಾಗಿ ಅಧ್ಯಕ್ಷರ ಭಾಷಣವಾದನಂತರ ಬರುವ ಸಭೆಯನ್ನು ಪೆರ್ಲ ಊರಲ್ಲೇ ಜರಗಿಸಬೇಕೆಂದು ಸಂಘದವರು ನಿಶ್ಚಯಿಸಿಕೊಂಡರು. ಮೇಲಾಗಿ ದೊರಕಿದ ಬಾಲಕರ ವಸ್ತು ಪ್ರದರ್ಶನವನ್ನು ಸಂದರ್ಶಿಸಲಾಯಿತು. ರಾತ್ರಿ ತಾಳಮದ್ದಳೆಯೂ ಇತ್ತು. ಒಟ್ಟಿನಲ್ಲಿ ಬಹಳ ವಿಜೃಂಭಣೆಯಿಂದ ಈ ಸಭೆಯು ಮುಕ್ತಾಯವಾಯಿತೆಂದು ಹೇಳುವುದರಲ್ಲಿ ಸಂದೇಹವಿಲ್ಲ.

ಪಣಂಬೂರು:— ಶ್ರೀ ನಂದನೇಶ್ವರ ದೇವಾಲಯದಲ್ಲಿ ನಡೆಯುವ ವರ್ಷಾವಧಿಯ ಉತ್ಸವವು ಇದೇ ಬರುವ ಸಂಕ್ರಮಣದ ಮರುದಿನ (ತಾ. ೬-೨-೩೭ನೇ) ಗುರುವಾರದ ಧ್ವಜಾರೋಹಣದಿಂದ ಆರಂಭಿಸಿ ಮಹಾರಥೋತ್ಸವ (ತಾ. ೧೪-೨-೩೭ನೇ) ಅವಭೃತದೊಂದಿಗೆ ಅಂತ್ಯವಾಗುವುದು. ಈ ಒಂಬತ್ತು ದಿನಗಳ ಜಾತ್ರಾ ಮಹೋತ್ಸವಗಳಿಗೆ ಸರ್ವರೂ ಬಂದು ಶ್ರೀದೇವರ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಡಳಿತಗಾರರು ತಿಳಿಸುತ್ತಾರೆ.

(೧೪ನೇ ಪುಟಕ್ಕೆ ಮುಂದರಿಯುವುದು)

ಪುಸ್ತಕ ವಿಮರ್ಶೆ.

ಭಾರತದ ರಾಜಕೀಯ ದೃಶ್ಯ

ಲೇಖಕರು:— ಕಣಕುಪ್ಪಿ ಗುರುಪಾದಪ್ಪ.

ಮುದ್ರಕರು, ಜಯಶೀಲಪ್ರೆಸ್ ಕ್ರಯ: ಪ್ರಕಟಿಸಲಿಲ್ಲ.

ಇದೊಂದು ಭರತಖಂಡದ ಬ್ರಿಟಿಷ ಅಧಿಕಾರದ ಪ್ರಾರಂಭದಿಂದ-ಇವತ್ತಿನ ವರೆಗೆ ಭಾರತೀಯರು ಅನುಭವಿಸಿದ ರಾಜಕೀಯ ದೋರಣೆಯ ಚಿತ್ರವಾಗಿರುತ್ತದೆ, ಕಾಂಗ್ರೆಸ್ಸಿನ ಸುವರ್ಣೋತ್ಸವದ ಸಮಯ ಹೊರಗೆ ಬಂದ ಈ ಪುಸ್ತಕವನ್ನು ಕಾಂಗ್ರೆಸ್ಸಿನ ೫೦ ವರ್ಷಗಳ ಚರಿತ್ರೆಯೆನ್ನಾಗಿ ಭಾವಿಸಬಹುದು, ನಮ್ಮ ಅನೇಕ ರಾಷ್ಟ್ರೀಯ ವೀರರ ಸಾಹಸ ಕಾರ್ಯಗಳು ಇವುಗಳಲ್ಲಿ ಬಹಳ ವಿವರವಾಗಿ ವಿವರಿಸಲ್ಪಟ್ಟಿವೆ, ಪ್ರತಿಯೊಬ್ಬ ಭಾರತೀಯನು ಹಿಂದೂದೇಶದ ರಾಜಕೀಯ ಪರಿಸ್ಥಿತಿಯನ್ನು ತಿಳಿದು, ದೇಶೋದ್ಧಾರಕ್ಕೆ ಮತ್ತು ಸ್ವಾತಂತ್ರ್ಯ ಪಡೆಯುವುದಕ್ಕೆ ಸೋಪಾನವಾಗಿರುವ ಸತ್ಯಾಗ್ರಹ ಚಳವಳ, ಸ್ವದೇಶಿ ಚಳವಳ, ಗುಡಿ ಕೈಗಾರಿಕೆಗಳ ಉದ್ಧಾರ, ಅಸ್ಪೃಶ್ಯತಾ ನಿವಾರಣೆ ಇವೇ ಮೊದಲಾದವುಗಳಲ್ಲಿ ಭಾಗವಹಿಸಲು ಭಯಂಕರ ಪ್ರಚಾರಕಾರ್ಯ ನಡೆಯಬೇಕಾಗಿದೆ, ಸಮಸ್ತ ಭರತಖಂಡದಲ್ಲಿ ಈ ಪ್ರಚಾರ ಕಾರ್ಯವು ಗುರಿಯಾಗಿರುವ ಅನೇಕ ಗ್ರಂಥಗಳು ವಿವಿಧ ಭಾಷೆಗಳಲ್ಲಿ ಪ್ರಕಟವಾಗಿವೆ ಶ್ರೀ ಕಣಕುಪ್ಪಿ ಗುರುಪಾದಪ್ಪನವರು ಅನೇಕ ಆಂಗ್ಲೇಯ ಪತ್ರಿಕೆಗಳಿಂದ ಸಂಗ್ರಹಿಸಿ ತಯಾರಿಸಿದ ಈ ಗ್ರಂಥವು ಈ ಪ್ರಚಾರಕಾರ್ಯಕ್ಕೆ ಕಾರಣವಾಗದಿರದು ಮುದ್ರಣವು ಸ್ವಲ್ಪ ಲಲಿತವಾಗಿದ್ದರೆ ಉತ್ತಮವಿತ್ತು. ಇದರ ಕ್ರಯವು ಬಹಳ ಕಡಿಮೆಯಾಗಿದ್ದು, ಈ ಗ್ರಂಥದ ಸಹಸ್ರಾದಿ ಪ್ರತಿಗಳು ಕರ್ಣಾಟಕದಲ್ಲಿ ಹರಡುವಂತೆ ಮಾಡಿದರೆ, ಕರ್ಣಾಟಕದ ಒಂದು ಮಹಾ ಸೇವೆ ಮಾಡಿದಂತಾಗುವುದು, ಸರ್ವ ಕನ್ನಡಿಗರು ಇದನ್ನು ಪ್ರೋತ್ಸಾಹಿಸುವರೆಂದು ನಮ್ಮ ನಂಬುಗೆ.

ಮಧುವನ

ಪ್ರಕಾಶಕರು ಕಿರಿಯರ ಪ್ರಪಂಚ ಉಡುಪಿ

ಇದೊಂದು ಸಣ್ಣ ಕತೆಗಳ ಸಂಗ್ರಹವಾಗಿರುತ್ತದೆ ಕರ್ಣಾಟಕದ ಅನೇಕ ಸಾಹಿತ್ಯಿಗಳ ಕಥೆಗಳು ಇದರಲ್ಲಿ ಪ್ರಕಟವಾಗಿವೆ ಸಮಾಜ ಉದ್ಧರಣೆಯು ಈ ಸಂಗ್ರಹದ ಮುಖ್ಯ ಧ್ಯೇಯವೆನ್ನಬಹುದು ಈ ಪುಸ್ತಕವನ್ನು ಓದುವಾಗ ನಮಗೆ ಬಂಡನಿನ 'True story' ಮಾಸಿಕದ ನೆನಪಾಗುತ್ತದೆ ಈ ಆಂಗ್ಲೇಯ ಮಾಸಿಕದಲ್ಲಿ ಸಮಾಜದಲ್ಲಿ ನಡೆದ ನಿಜವಾದ ಕಥೆಗಳು ಪ್ರಕಟವಾಗುತ್ತಿವೆ, ಇವು ಅತಿ ರೋಮಾಂಚಗೊಳಿಸುವ ಕಥೆಗಳು ನಿಜವಾಗಿ ನಟಿಸಿ ತೆಗೆದ ಲಲಿತವಾದ ಚಿತ್ರಗಳಿಂದಲೂ, ಈ ಪುಸ್ತಕದ ನಮ್ಮ ಮೇಲಿನ ಆಕರ್ಷಣಾ ಶಕ್ತಿಯು ಅಷ್ಟಿಷ್ಟಲ್ಲ ಹಾಗೆಯೆ ಈ ಮಧುವನದ ಅನೇಕ ಕಥೆಗಳು ಈ ತರದ ಚಿತ್ರಗಳಿಂದ ಕೂಡಿದ್ದುದ್ದರೆ ಈ ಸಂಗ್ರಹದ ಗುಣಗಳು ಇನ್ನೂ ವೃದ್ಧಿಹೊಂದುತ್ತಿದ್ದುವು ಈ ಸಂಗ್ರಹದ ಕೆಲವು ಕಥೆಗಳಲ್ಲದೆ ಇತರ ಎಲ್ಲಾ ಕಥೆಗಳು, ಸಮಾಜದ ಕೊರತೆಗಳನ್ನು ಸೂಚಿಸುವ ಮತ್ತು ರೋಮಾಂಚಗೊಳಿಸುವ ಕಥೆಗಳಾಗಿರುತ್ತವೆ ಆದರೆ ಶಿವರಾಮ ಕಾರಂತರ "ತೆರೆಯ ಮರೆಯಲ್ಲಿ" ಎಂಬ ನಿಜವಾಗಿ ನಡೆದ ಕಥೆಗಳ ಸಂಗ್ರಹದಷ್ಟು ರೋಮಾಂಚಗೊಳಿಸುವುದಿಲ್ಲ ಬೆಲೆಯು ಸ್ವಲ್ಪ ಕಡಿಮೆಮಾಡಿ ಈ ಸಂಗ್ರಹವು ಎಲ್ಲರ ಕೈಸೇರುವಂತೆ ಮಾಡುತ್ತಿದ್ದರೆ, ಪ್ರಕಾಶಕರ ಈ ಉದ್ಯಮವು ಲಾಭಕರವೂ ಸಾಹಿತ್ಯಸೇವಾ ಪರವಾಗುತ್ತಿತ್ತು "True Story" ಮಾದರಿಯಲ್ಲಿ ಪ್ರತಿ ತಿಂಗಳಲ್ಲಿ ನಿಜವಾದ ಕಥೆಗಳ ಸಂಗ್ರಹವಾಗಿರುವ ಇಂಥಾ ಅನೇಕ ಮಧುವನಗಳು ನಮ್ಮಲ್ಲಿ ಜೀವಕ್ಕೆ ಬಂದೇಕು ಇವುಗಳಿಂದ ಸಮಾಜದ ಉದ್ಧರಣೆಯೂ ಸಾಹಿತ್ಯ ಸೇವೆಯೂ ಆಗುವುದು

ಭಾರತೀಯ ರಾಷ್ಟ್ರಧ್ವಜ

ಲೇಖಕರು ಡಾ ನಾ ಸು. ಹರ್ಡೀಕರ

ಪ್ರಕಾಶಕರು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಧಾರವಾಡ ಬೆಲೆ ೨ ಆಣೆ ಇದೊಂದು ರಾಷ್ಟ್ರೀಯ ಧ್ವಜದ ಕುರಿತು ಮರಾಠಿಯಲ್ಲಿ ರಚಿತವಾದ ಗ್ರಂಥದ ಅನುವಾದವಾಗಿರುತ್ತದೆ, ದೇಶದ ಜನರು ರಾಷ್ಟ್ರೀಯ ಧ್ವಜದ ಮಹತ್ವವ ಅರಿತು ಅದರಲ್ಲಿ ಅನುರಾಗ ಹುಟ್ಟುವಂತೆ ಮಾಡುವುದೆ ಈ ಪುಸ್ತಕದ ಉದ್ದೇಶ, ಈ ತರದ ಒಂದು ಪುಸ್ತಕವು ಗುಜರಾತಿ, ಹಿಂದಿ ಭಾಷೆಗಳಲ್ಲಿ ಪ್ರಕಟವಾಗಿವೆ, ೧೯೩೧ರಲ್ಲಿ, ಈ ಮೂರು ಭಾಷೆಗಳಲ್ಲಿ ಪ್ರಕಟವಾದ ಈ ಕೃತಿಯ ಪ್ರತಿಗಳು ಸಾವಿರಗಟ್ಟಲೆ ಮಾರಾಟವಾಗಿವೆ, ರಾಷ್ಟ್ರಧ್ವಜ ವಂದನೆಯು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿರತಕ್ಕದ್ದು, ಈ ರಾಷ್ಟ್ರಧ್ವಜ ವಂದನೆಯು ಹೇಗಾಗಬೇಕು ರಾಷ್ಟ್ರಧ್ವಜದ ಗೌರವ, ಕಾಂಗ್ರೆಸ್ಸು ಮತ್ತು ರಾಷ್ಟ್ರಧ್ವಜ ಸಂಬಂಧ, ಧ್ವಜವು ಮತ್ತು ಜಾತಿಗಳೂ, ರಾಷ್ಟ್ರಧ್ವಜ ವಂದನಾ ವಿಧಿಗಳೂ, ರಾಷ್ಟ್ರಗೀತೆಗಳು, ಇತ್ಯಾದಿ ನಮ್ಮಲ್ಲಿ ರಾಷ್ಟ್ರೀಯ ಅನುರಾಗವನ್ನು ಉತ್ಪಾದಿಸಿ, ನಮ್ಮನ್ನು ಎಚ್ಚರಿಸುವ ವಿಚಾರಗಳನೇಕ ಈ ಪುಸ್ತಕದಲ್ಲಿವೆ! ಬೆಲೆಯು ಬಹಳ ಸುಲಭವಾಗಿರುವುದರಿಂದ, ಅನೇಕ ಕನ್ನಡಿಗರು ಪಡಕೊಳ್ಳಲು ಸುಲಭವಾಗಿದೆ, ಪ್ರತಿಯೊಬ್ಬ ಭಾರತೀಯನು ತನ್ನ ರಾಷ್ಟ್ರಧ್ವಜವನ್ನು ಮನ್ನಿಸಲು ಕಲಿಯಬೇಕು, ಹೀಗೆ ಅಲ್ಲಲ್ಲಿನ ಕಾಂಗ್ರೆಸ್ ಸಂಸ್ಥೆಗಳು ಪ್ರಚಾರ ಕಾರ್ಯ ನಡೆಯಿಸಬೇಕು ಈ ಗ್ರಂಥಕ್ಕೆ ಈ ಪ್ರಚಾರಕಾರ್ಯದ ಯೋಗ್ಯತೆಯು ತುಂಬಾ ಇದೆ, ಈ ಪುಸ್ತಕವು ಪ್ರತಿಯೊಬ್ಬ ಕನ್ನಡಿಗನ ಮನೆಯಲ್ಲಿರತಕ್ಕದು ಕರ್ನಾಟಕದ ರಾಷ್ಟ್ರೀಯ ಅನುರಾಗವು ವೃದ್ಧಿಯಾಗಬೇಕು

ಅಳಬೇಕೊ, ನಗಬೇಕೊ?

ಸಮಾಜಸೇವಾ ಗ್ರಂಥಮಾಲೆ, ಮುದ್ರಾಡಿ.

ಲೇಖಕರು ಮುದ್ರಾಡಿ ಕೃಷ್ಣಯ್ಯ ಸೆಟ್ಟಿ ಬೆ ೪ಆಣೆ, ಹಳ್ಳಿಗರಲ್ಲಿ ವಾಡಿಕೆಯಲ್ಲಿರುವ ಕೆಲವು ಕೊಂತಿಗಳ ಪರಿಣಾಮಗಳನ್ನು ಸೂಚಿಸುವ ಘಟನೆಗಳು ಈ ಪುಸ್ತಕದಲ್ಲಿ ಅನೇಕ ಇವೆ ಅಶಿಕ್ಷಿತರಾದ ಹಳ್ಳಿಗರು ಓದುವಂತೆ ಅತಿ ಸುಲಭ ಕನ್ನಡದಲ್ಲಿ ಬರೆಯಲ್ಪಟ್ಟಿದೆ ಹಳ್ಳಿಯ ಶಾಲಾ ಮಕ್ಕಳಿಗೆ ತುಂಬಾ ಉಪಯುಕ್ತವಾಗುವ ಪುಸ್ತಕ. ಹಳ್ಳಿಗಳ ಸಮಾಜಸೇವಾ ಕಾರ್ಯವು ಈ ಪುಸ್ತಕದಲ್ಲಿ ಕಾಣುತ್ತಿದೆ ಈ ಪುಸ್ತಕವು ನಮ್ಮ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲಿ ಪ್ರಚಾರವಾಗಬೇಕು. ಇದರ ಬೆಲೆಯೂ ನಾಲ್ಕಾಣೆಗಳಾಗಿ, ಮಾಡಿದುದರಿಂದ, ಈ ಮುಗ್ಧಬುದ್ಧಿನ ಬಡ ಯ ಹಳ್ಳಿಗರು ಇದನ್ನು ಪಡಕೊಳ್ಳುವುದು ಸಂದೇಹಕರವು, ಇಂಥಾ ಸಮಾಜಸೇವಾ ಪುಸ್ತಕಗಳು, ಲಾಭದೃಷ್ಟಿಯನ್ನು ತ್ಯಜಿಸಿ, ಬಹಳ ಪ್ರಚಾರವಾಗುವಂತೆ, ಬಹಳ ಸುಲಭ ದರದಲ್ಲಿ ಹೊರಡಿಸಿದರೆ ಉತ್ತಮ

ವೀರಶೈವ

ಮಾಸಪತ್ರಿಕೆ ಸಂಪಾದಕರು ಮತ್ತು ಪ್ರಕಾಶಕರು ಪಂಡಿತ ಲಿಂಗಯ್ಯ, ಬೆಂಗಳೂರು ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ ೨

ಇದೊಂದು ವೀರಶೈವ ಸಮಾಜದ ಮಾಸಿಕವಾಗಿರುತ್ತದೆ ಹಿಂದೂದೇಶದ ವಿವಿಧ ಸಮಾಜ, ಜಾತಿ ವೃಂದ, ಇತ್ಯಾದಿಗಳಲ್ಲಿ, ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸುವಂತೆ ಪಕ್ಷ ಉಂಟಾಗಬೇಕು ಇದಕ್ಕೆ ಈ ವಿವಿಧ ತಂಡಗಳು ಬೇರ್ಪಡಿಸಿಕೊಳ್ಳಲು ಪತ್ರಿಕೆ ಇತ್ಯಾದಿಗಳ ಮೂಲಕ ಪ್ರಸಾರಣೆ ನಡೆಯಬೇಕು ಈ ವೀರಶೈವ ಪತ್ರಿಕೆಯು ಅದರ ಸಮಾಜದ ಹಲವು ಉದ್ದೇಶಗಳೊಡನೆ ಇದೂ ಕೂಡಿಸಿಕೊಂಡರೆ ಈ ಪತ್ರಿಕೆಯು ತನ್ನ ಸಮಾಜಸೇವೆಯಲ್ಲದೆ ಇಡೀ ಭರತಖಂಡದ ಸೇವೆ ಮಾಡಿದಂತಾಗುವುದು, ಭರತಖಂಡದಲ್ಲಿ ಈ ತರದ ಅನೇಕ ಸಮಾಜ ಹಿತಕಾರಿಯಾಗುವ ಅನೇಕ ಪತ್ರಿಕೆಗಳು ಹೊರಡಬೇಕು. ಇವುಗಳ ವಿದ್ಯಾವಂತ ಗುಣಗಳ ಕಾರುಹಾಗಳಾಗಿರುತ್ತವೆ ಈ ತರದ ಪತ್ರಿಕೆಗಳನೇಕ ಜನಿಸಿ ಯಶಸ್ವಿಯಾಗಿ ನಡೆದರೆ ಭಾರತಮಾತೆಯು ಧನ್ಯಳಾಗುವಳು

ತ್ರಿವೇಣಿ

ಮಾಸಪತ್ರಿಕೆ (ಇದರೊಂದಿಗೆ ಸ್ವದೇಶಿ ಪ್ರಚಾರಕವು ಕೂಡಿರುತ್ತದೆ, ಸಂಪಾದಕರು ಎಂ ಬಾಬುರಾಯ ಪ್ರಭುಗಳು, ವಾರ್ಷಿಕ ಚಂದಾ ರೂ ೨ ಕಳೆದ ನಾಲ್ಕು ವರ್ಷಗಳಿಂದ ಕರ್ಣಾಟಕದ ಸಾಹಿತ್ಯ ಸೇವೆಯನ್ನು ಮಾಡುತ್ತಿರುವ ಸ್ವದೇಶಿ ಪ್ರಚಾರಕವು ಈಗ ತ್ರಿವೇಣಿಯೆಂಬ ನಾಮಾಂಕಿತದಿಂದ ಹೊರಗೆ ಬಂದಿರುತ್ತದೆ, ತನ್ನ ೫ನೇ ವರ್ಷದ ಇದರ ಪ್ರಥಮದ ಸಂಚಿಕೆಯಲ್ಲಿ ಕರ್ಣಾಟಕ ಅನೇಕ ಸಾಹಿತಿಗಳ ಲೇಖಗಳು ಪ್ರಕಟವಾಗಿವೆ ರೋಮಾಂಚಗೊಳಿಸುವ ಕಥೆಗಳ ಸಂಗ್ರಹವು ಇದೆ, ಹಿಂದಿನಂತೆ ಎಲ್ಲರೂ ಈ ಮಾಸಿಕವನ್ನು ಪ್ರೋತ್ಸಾಹಿಸಿ, ಪ್ರಕಾಶಕರ ಉದ್ದೇಶವು ನೆರವೇರುವಂತಾಗಿ ಪ್ರೋತ್ಸಾಹಿಸುವರಾಗಿ ನಮ್ಮ ಕೋರಿಕೆ

ಜೇನುನೊಣ ಸಾಕುವಿಕೆ

ಲೇಖಕರು ಪೈಲೂರು ಲಕ್ಷ್ಮೀನಾರಾಯಣರಾವ್ ಬಿ, ಎ, ಮುಳ್ಳ ಡ, ೪ ಕ್ರಯ ೦-೮-೦ ಜೇನಿನ ಗುಣಗಳು ಎಲ್ಲರಿಗೂ ತಿಳಿದಿರುತ್ತದೆ, ಅನೇಕ ರೋಗಗಳೂ ಇದರಿಂದ ಅತಿ ಸುಲಭಕರವಾದ ರೀತಿಯಲ್ಲಿ ಗುಣ ಹೊಂದುತ್ತವೆ, ಇದೊಂದು ಬಹಳ ಉತ್ತಮ ತರದ ಆಹಾರವಾಗಿರುತ್ತದೆ, ಪಾಶ್ಚಾತ್ಯ ದೇಶಗಳಲ್ಲಿ ಈ ಜೇನಿನ ಸಂಗ್ರಹಕ್ಕಾಗಿ ಅನೇಕ ಸಂಸ್ಥೆಗಳು ಸ್ಥಾಪನೆಯಾಗಿವೆ, ಬಹಳ ಯಶಸ್ವಿಯಾಗಿ ಕಾರ್ಯಸುತ್ತಿವೆ, ಈ ಮುಂಚೆ ನಮಗೆ ಬೇಕಾದ ಜೇನು ಮತ್ತು ಜೇನು ಮಯಣವು ಅಲ್ಲಲ್ಲಿ ಅರಣ್ಯಗಳ ಮರಗಳಲ್ಲಿ ಬೆಳೆದ ಗೂಡುಗಳಿಂದ ಒದಗುತ್ತಿತ್ತು, ಈ ಅರಣ್ಯಗಳಿಂದ ನಮಗೆ ಬೇಕಾದಷ್ಟು ಜೇನನ್ನು ತಯಾರಿಸುವುದು ಸಾಧ್ಯವಿಲ್ಲ, ಇದನ್ನು ನಾವು ಪಾಶ್ಚಾತ್ಯ ದೇಶಗಳಂತೆ ಒಂದು ಕೈಗಾರಿಕೆಯನ್ನಾಗಿ ನಡೆಯಿಸಬೇಕಾಗಿದೆ ಇದನ್ನು ಗುಡಿ ಕೈಗಾರಿಕೆಯಲ್ಲಿ ಕೂಡಿಸಬಹುದು, ಶ್ರೀಗಳಾದ ಪೈಲೂರು ಲಕ್ಷ್ಮೀನಾರಾಯಣ ರಾಯರು ಈ ಪುಸ್ತಕದಲ್ಲಿ ಜೇನಿನಲ್ಲಿರುವ ಗುಣಗಳು, ವನಸ್ಪತಿ ವರ್ಗವೂ ಜೇನುನೊಣಗಳೂ, ಕೋಟೆಗಾರರೂ ಜೇನುನೊಣಗಳೂ ಜೇನುಗೂಡು, ಜೇನುನೊಣಗಳೂ ಕುಟುಂಬ, ಹಳ್ಳಿಗಳಲ್ಲಿ ಜನರು ಜೇನನ್ನು ಹೇಗೆ ಸಂಗ್ರಹಿಸುತ್ತಾರೆ ಜೇನು ನೊಣಗಳನ್ನು ಎಲ್ಲಿಂದ ಮತ್ತು ಹೇಗೆ ಹಿಡಿಯುವುದು? ನೊಣಗಳಿಗೆ ಆಹಾರ ಕೊಡುವ ಕ್ರಮ, ಪಾಲಾಗುವಿಕೆ, ಗೂಡಿನ ಮೇಲ್ವಿಚಾರಣೆ ಪದ್ಧತಿ, ಜೇನುನೊಣಗಳ ವೈರಿಗಳು ಮತ್ತು ಅವುಗಳ ನಿವಾರಣೋಪಾಯ, ಕೆಲವು ಅವಶ್ಯವಾದ ಉಪಕರಣಗಳು, ಎಂಬ ಜೇನನ್ನು ಸಂಗ್ರಹಿಸುವ ಕೈಗಾರಿಕೆಗೆ ಸಂಬಂಧಿಸಿದ ಅನೇಕ ವಿಚಾರಗಳು ಸಚಿತ್ರವಾಗಿ ಪ್ರಕಟವಾಗಿವೆ ಬಹಳ ಶ್ರಮಪಟ್ಟು ತನ್ನ ಸ್ವಂತ ಅನುಭವವನ್ನೆ ಆಧರಿಸಿಕೊಂಡು ರಚಿಸಿದ, ಶ್ರೀ ಪೈಲೂರು ಲಕ್ಷ್ಮೀನಾರಾಯಣ ರಾಯರ ಈ 'ಜೇನುನೊಣ ಸಾಕುವಿಕೆ' ಎಂಬ ಪುಸ್ತಕವು ಈ ಜೇನಿನ ಕೈಗಾರಿಕೆಯನ್ನು ನಡೆಯಿಸುವವರಿಗೆ ಅದನ್ನು ನಡೆಯಿಸುವ ಕ್ರಮಗಳನ್ನು ಇತರರಿಗೆ ಈ ಉದ್ಯೋಗವನ್ನು ನಡೆಯಿಸುವ ಇಚ್ಛೆಯನ್ನು ಹುಟ್ಟಿಸುವಂತಿದೆ ಶ್ರೀ ನಾರಾಯಣ ರಾಯರು ಈ ಪುಸ್ತಕವು ಕೈಗಾರಿಕೆಯ ಪ್ರಚಾರಕ್ಕೆ ತುಂಬಾ ಉಪಯುಕ್ತವಾಗುವುದು

ಶಂಕರ.

ಕನ್ನಡ ರಾಷ್ಟ್ರ ನಿರ್ಮಾಣ.

೧೯೩೫ನೇ ಇಸವಿ ಡಿಸೆಂಬರ ೨ನೇ ತಾರೀಖು ಮದರಾಸು ಗವರ್ನರರವರಾದ ಲಾರ್ಡ ಎರ್ಸ್ಕಿನ್ ಪ್ರಭುಗಳವರು ಸಂಟ್ ಆಂಡ್ರೂಸ ಔತಣದಲ್ಲಿ ಮಾಡಿದ ಭಾಷಣದಲ್ಲಿ ಭಾಷಾಪ್ರಯುಕ್ತ ರಾಷ್ಟ್ರ ವಿಭಜನೆಯ ಪ್ರಯತ್ನವನ್ನು ವಿದುರಗೊಳಿಸಿರುವರು ಈ ವಿಚಾರದಲ್ಲಿ ಕನ್ನಡ ಭಾಷಾಭಿಮಾನಿಗಳಾದ ಶ್ರೀ ಡಿ ವಿ ಗುಂಡಪ್ಪನವರು ಬೆಂಗಳೂರು ನಗರದ ವಿಶ್ವಕರ್ಣಾಟಕ ಪತ್ರಿಕೆಯಲ್ಲಿ ವಿಮರ್ಶೆಮಾಡಿ ಸದುತ್ತರಗೊಳಿಸಿದ್ದಾರೆ ಆದರೂ ಈ ಭಾಷಣದ ಖಂಡನೆಯು ಇಂದಿನ ಕನ್ನಡಿಗರ ಭಾವೋದಯ ವಿಸ್ತಾರಕ್ಕೆ ಅಗತ್ಯವಾದುದರಿಂದ ಈ ಲೇಖನವು ಬರೆಯಲ್ಪಟ್ಟಿದೆ

ಇದುವರೆವಿಗೆ ೧೯೨೮ ೧೯೨೧ನೇ ಇಸ್ವಿಗಳಲ್ಲಿಯೂ ೧೯೩೫ನೇ ಇಸವಿಯಲ್ಲಿಯೂ ಮದ್ರಾಸು ಶಾಸನ ಸಭೆಯಲ್ಲಿ ಎರಡು ಮೂರು ಸಾರಿ ಸಭಿಕರ ಉಪವಾದನೆಯ ಮೇಲೆ ಕನ್ನಡ ರಾಷ್ಟ್ರವು ನಿರ್ಮಿಸಲ್ಪಡಬೇಕೆಂಬ ತೀರ್ಮಾನವು ಒಪ್ಪಲ್ಪಟ್ಟಾಗ್ಗೆ ಮದ್ರಾಸ್ ಸರಕಾರದವರು ಅದಕ್ಕೆ ವಿರೋಧವಾಗಿ ಕೇಂದ್ರ ಪ್ರಭುತ್ವಕ್ಕೆ ಬರೆದಿರುವರು ಈಗಲೂ ಇತರ ಪ್ರಾಂತ್ಯ ನಿರ್ಮಾಣದಂತೆ ಸ್ವಲ್ಪ ಚಳುವಳಿಯು ಈ ಪರವಾಗಿ ನಿಲ್ಲುತ್ತಿರುವಾಗ್ಗೆ ಈ ಗವರ್ನರರವರು ಅದಕ್ಕೆ ನಿರುತ್ಸಾಹವನ್ನುಂಟು ಮಾಡುತ್ತಿರುವರು ಗವರ್ನರವರು ತಮ್ಮ ಅಭಿಪ್ರಾಯವನ್ನು ಹೊರ ಪಡಿಸಿದಾಗ ತಮಗೆ ಯಾವ ಉದ್ದೇಶವೂ ಇಲ್ಲವೆಂದು ತಿಳಿಸಿದ್ದಾರೆ, ಅವರು ತಿಳಿಸಿದ ಆಕ್ಷೇಪಣೆಗಳು ಎಷ್ಟು ಮಟ್ಟಿಗೆ ಸಕಾರಣಗಳಾಗಿರುವುವೋ ಆಲೋಚಿಸೋಣ ಅವು ಆಂಧ್ರ, ಕನ್ನಡ ರಾಷ್ಟ್ರ ನಿರ್ಮಾಣಕ್ಕೆ ವಿರೋಧವಾಗಿರುವವರು ಇದುವರೆವಿಗೆ ಹೇಳುತ್ತಿರುವ ಹಳೆಯ ಎಂದಿನ ಕಾರಣಗಳೇ ಹೊರತು ನವೀನ ಕಾರಣಗಳಲ್ಲ

ರಾಷ್ಟ್ರಗಳ ವಿಭಜನೆಯಿಂದ ಭರತಖಂಡದ ಜಾತೀಯ ಐಕ್ಯತೆಯು ಕೆಡುವುದೆಂದು ಅವರು ತಿಳಿಸಿರುವರು ರಾಷ್ಟ್ರಗಳೆಲ್ಲವನ್ನು ತೆಗೆದು ಹಾಕಿ ಸಮಗ್ರ ಹಿಂದೂ ದೇಶವನ್ನು ಒಂದೇ ರಾಷ್ಟ್ರವಾಗಿ ಅವರು ಮಾಡಬೇಕೆನ್ನುವರೊ? ಅದು ಆಗತಕ್ಕದಲ್ಲ; ಆದುದರಿಂದಲೇ ಅಮೇರಿಕಾ ಸಂಯುಕ್ತ ರಾಷ್ಟ್ರಗಳಂತೆ ಅಥವಾ ಅಸ್ಟ್ರೇಲಿಯಾ ಕೆನಡಾ ದೇಶಗಳಂತೆ ರಾಷ್ಟ್ರೀಯ ಸ್ವಪರಿಪಾಲನೆಯುಳ್ಳ ರಾಷ್ಟ್ರಗಳೂ ಕೇಂದ್ರದಲ್ಲಿ ಒಂದು ಸಂಯುಕ್ತ ಪ್ರಭುತ್ವವೂ (Ferderal Government) ಭಾರತವರ್ಷದಲ್ಲಿರಬೇಕೆಂದು ಹಾರ್ಡಿಂಗ್ ಪ್ರಭುಗಳೂ ಇಂದಿನ ಬ್ರಿಟಿಷ ರಾಜಕೀಯ ವಿಜ್ಞಾನಿಗಳೆಲ್ಲರೂ ಒಪ್ಪಿ ಆ ರೀತಿ ನಡೆಸಲು ಪ್ರಯತ್ನಿಸುತ್ತಿರುವರೆಂದು ಹೇಳುತ್ತಿರುವಲ್ಲಿ ಎರ್ಸ್ಕಿನ್ ಪ್ರಭುಗಳು ಆ ರೀತಿ ಹೇಳುವುದರಲ್ಲಿ ಅರ್ಥವೇನು?

ಆದರೆ ರಾಷ್ಟ್ರಗಳು ಎಷ್ಟಿರಬೇಕು? ಎಂಥವುಗಳು ಆ ರೀತಿಯಾಗಬೇಕು? ಎಂಬ ಪ್ರಶ್ನೆಯು ಯೋಚಿಸಬೇಕಾದುದಲ್ಲವೆ? ಹೆಚ್ಚು ರಾಷ್ಟ್ರಗಳಿರುವುದರಿಂದ ಜಾತೀಯ ಐಕ್ಯತೆಗೆ ಭಂಗವುಂಟಾಗುವುದೆಂದು ಎರ್ಸ್ಕಿನ್ ಪ್ರಭುಗಳವರು ಹೇಳುತ್ತಿರುವಲ್ಲಿ ಈ ನಡುವೆ ಬ್ರಿಟಿಷ ಸರಕಾರದವರು ಹಿಂದೂದೇಶದಲ್ಲಿ ಮೂರು ರಾಷ್ಟ್ರಗಳನ್ನು ಹೆಚ್ಚು ಮಾಡಿರುವರು (೧) ಪಶ್ಚಿಮೋತ್ತರ ಸರಹದ್ದು ಪ್ರಾಂತ್ಯ, (೨) ಸಿಂಧುರಾಷ್ಟ್ರ, (೩) ಉತ್ಕಳ ಪ್ರಾಂತ್ಯ, ಈ ಮೂರು ರಾಷ್ಟ್ರಗಳೂ ಕಾಂಗ್ರೆಸ್ಸಿನವರಿಂದ ಭಾಷಾಪ್ರಯುಕ್ತ ಪದ್ಧತಿಯಲ್ಲಿ ಮುಂಚಿನಿಂದಾಗಿಯೇ ಏರ್ಪಡಿಸಲ್ಪಟ್ಟು ಪ್ರತ್ಯೇಕ ರಾಷ್ಟ್ರೀಯ ಕಾಂಗ್ರೆಸ್ ಕಮಿಟಿಗಳನ್ನು ಹೊಂದಿರುವಲ್ಲಿ ಆ ಕರುವಾಯ ಸರಕಾರದವರು ಪ್ರತ್ಯೇಕ ರಾಷ್ಟ್ರಗಳಾಗಿ ನಿರ್ಮಾಣ ಮಾಡಿರುವರು, ಸರಕಾರದವರು ಅವುಗಳನ್ನು ಮುಂದಾಗಿ ಪ್ರತ್ಯೇಕಿಸಿದ ಉದ್ದೇಶಗಳು ಬೇರೆಯಾಗಿರಬಹುದು, ಮಹಮ್ಮದೀಯರೂ, ಉತ್ಕಳ ಜನಾಂಗದವರ ಸಂತೋಷಕ್ಕಾಗಿಯೇ ಕೆಲವರು ಅನ್ನುವರು, ಆದರೆ ಆ ಮೂರು ಪ್ರತ್ಯೇಕ ರಾಷ್ಟ್ರಗಳಾಗಬೇಕಾದವುಗಳೇ ಆಗಿವೆ ಇಷ್ಟು ಮಾತ್ರಕ್ಕೆ ಹಿಂದೂದೇಶದಲ್ಲಿ ಹನ್ನೊಂದು ರಾಷ್ಟ್ರಗಳು ಏರ್ಪಡುತ್ತಿರುವುವು, ಇನ್ನು ಮೂರು ರಾಷ್ಟ್ರಗಳು ಬೇರೆಯಾಗಿ ನಿರ್ಮಾಣ ಮಾಡಿದಲ್ಲಿ ಭಾಷಾಪ್ರಯುಕ್ತ ರಾಷ್ಟ್ರ ವಿಭಜನಾ ಸಮಸ್ಯೆಯು ಪರಿಷ್ಕಾರವಾಗುವುದು ಅವು ಯಾವುವೆಂದರೆ — (೧) ಆಂಧ್ರರಾಷ್ಟ್ರ, (೨) ಕರ್ಣಾಟಕ ರಾಷ್ಟ್ರ, (೩) ಮಹಾರಾಷ್ಟ್ರ ಬ್ರಿಟಿಷ ಹಿಂದೂದೇಶದಲ್ಲಿ ಕೇರಳವು ಬಹಳ ಸಣ್ಣದಾಗಿರುವುದರಿಂದ ಬಹುಕಾಲದ ವರೆಗೆ ಅದು ದ್ರಾವಿಡ ದೇಶದಲ್ಲಿ ಸೇರಬೇಕಾದುದು ಆಂಧ್ರರಾಷ್ಟ್ರವು ಏರ್ಪಡುತ್ತಲೆ ದ್ರಾವಿಡ ರಾಷ್ಟ್ರವು ತನ್ನಷ್ಟಕ್ಕೆ ತಾನೇ ಆಗುವುದು, ಮಹಾರಾಷ್ಟ್ರ, ಕನ್ನಡ ರಾಷ್ಟ್ರಗಳಾಗುತ್ತಲೇ ಗುಜರಾತು ತನ್ನಷ್ಟಕ್ಕೆ ಅದೆ ಪ್ರತ್ಯೇಕ ರಾಷ್ಟ್ರವಾಗುವುದು ಹಾಗೆಯೇ ಮಧ್ಯ ಪ್ರಾಂತ್ಯದ ಹಿಂದೀಯ ಭಾಗವು ಬೀಹಾರಿನಲ್ಲಿಯೋ ಸಂಯುಕ್ತ ರಾಷ್ಟ್ರದಲ್ಲಿಯೂ ಸೇರುವುದು ಆದುದರಿಂದ ಭಾಷಾಪ್ರಯುಕ್ತ ರಾಷ್ಟ್ರಗಳನ್ನು ನಿರ್ಮಿಸಬೇಕೆಂದರೆ ಇನ್ನು ಮೂರು ಮುಖ್ಯ ಹೊಸ ರಾಷ್ಟ್ರಗಳನ್ನು ನಿರ್ಮಾಣಮಾಡಬೇಕಾಗಿದೆ ಈಗ ಹನ್ನೊಂದು ರಾಷ್ಟ್ರಗಳಿರುವುದರಿಂದ ಕೆಡದ ಭಾರತ ಜಾತೀಯ ಐಕ್ಯವು ಹದಿನಾಲ್ಕು ರಾಷ್ಟ್ರಗಳು ಏರ್ಪಡುವುದರಿಂದ ಎಷ್ಟು ಮಾತ್ರವೂ ಕೆಡದು ಏರ್ಪಡಬೇಕಾದ ಮೂರು ರಾಷ್ಟ್ರಗಳೂ ತಮ್ಮ ಕಾಲುಗಳ ಮೇಲೆ ಆರ್ಥಿಕವಾಗಿ ತಾವು ನಿಲ್ಲುವವುಗಳು. ಮೊನ್ನೆ ಏರ್ಪಟ್ಟ ಪಶ್ಚಿಮೋತ್ತರ ಸರಹದ್ದು ಪ್ರಾಂತ್ಯ, ಸಿಂಧುಪ್ರಾಂತ್ಯ ಉತ್ಕಳ ರಾಷ್ಟ್ರಗಳಂತೆ ಇತರರ ಸಹಾಯವನ್ನು ಯಾಚಿಸುವವುಗಳಲ್ಲ. ಜಾತೀಯ ಐಕ್ಯತೆಗೆ ಭಾಷಾಪ್ರಯುಕ್ತ ರಾಷ್ಟ್ರಗಳು ಅಡ್ಡಿ ಬರುವುವೆಂಬ ಕಾರಣವು ನಿಜಕ್ಕೆ ದೂರವಾದುದು ಪ್ರತಿ ಸಣ್ಣ ಭಾಷೆಗೆ ಒಂದು ಪ್ರತ್ಯೇಕ ರಾಷ್ಟ್ರವು ಬೇಕೆಂದು ಯಾರೂ ವಾದಿಸುತ್ತಿಲ್ಲ

ಗವರ್ನರರವರಿಗೂ ನಮಗೂ ರಾಷ್ಟ್ರಗಳು ಹೇಗಿರಬೇಕೆಂಬ ವಿಷಯವು ಚರ್ಚಿನೀಯವಾದುದು ತಮಿಳರು ಆಂಧ್ರರು ಕನ್ನಡಿಗರು ಉತ್ಕಳರು ಕೇರಳರು ಮೊದಲಾದವರೆಲ್ಲರೂ ಒಂದೇ ರಾಷ್ಟ್ರದಲ್ಲಿ ಬೀಳಿಸಲ್ಪಟ್ಟವರಾದುದರಿಂದ ಇವರೆಲ್ಲರಿಗೂ ಸಾಮಾನ್ಯ ಭಾಷೆಯು ಇಂಗ್ಲಿಷೇ ಆಗಿರುವುದು ಇಂಗ್ಲಿಷಿನಲ್ಲಿಯೇ ವಿದ್ಯಾಭ್ಯಾಸ ಇಂಗ್ಲಿಷಿನಲ್ಲಿಯೇ ಪಾಲನೆ ಭಾಷೆಗಳಿಂದ ರಾಷ್ಟ್ರ ಕಟ್ಟಿದರೆ ನಡೆದಲ್ಲಿ ಪ್ರಜೆಗಳ ಭಾಷೆಯಲ್ಲಿ ಪರಿಪಾಲನೆ ಆಗಬೇಕೆನ್ನುವ ಅದು ಆಗತಕ್ಕದಲ್ಲ" ಎಂದು ನಮ್ಮ ಗವರ್ನರರವರು ತಿಳಿಸುವರು ಪ್ರಜೆಗಳ ತಾಯ ನುಡಿಯಲ್ಲಿ ಪರಿಪಾಲನೆಯು ನಡೆಯಬಾರದಂತೆ! ಗವರ್ನರರವರ ಮಾತೃಭಾಷೆಯಲ್ಲಿ ಪರಿಪಾಲನೆಯು ನಡೆಯಬೇಕಂತೆ! ಎಲ್ಲಾ ದೇಶಗಳಲ್ಲಿಯೂ ಆ ಪ್ರಜೆಗಳ ಮಾತೃಭಾಷೆಯಲ್ಲಿಯೇ ಪರಿಪಾಲನೆಯು ನಡೆಯುತ್ತಿರುವುದು ದುರದೃಷ್ಟವಾದ ನಮ್ಮ ಭರತಖಂಡದಲ್ಲಿ ಮಾತ್ರವೇ ವಿದೇಶ ಭಾಷೆಯಲ್ಲಿ ಪರಿಪಾಲನೆಯು ನಡೆಯುವುದಾಗಿದೆ ನವೀನ ರಾಜ್ಯಾಂಗ ವಿಧಾನದಲ್ಲಿ ೧೯೩೫ನೇ ಸಾಲಿನ ಗವರ್ನಮೆಂಟು ಆಫ್ ಇಂಡಿಯಾ ಆಕ್ಟ ೩೫, ೩೯ನೆ ಸೆಕ್ಷನ್ ಪ್ರಕಾರ ಮುಂದೆ ಬರುವ ರಾಷ್ಟ್ರೀಯ ಶಾಸನ ಸಭೆಗಳಲ್ಲಿಯೂ, ಸಂಯುಕ್ತ ಶಾಸನ ಸಭೆಗಳಲ್ಲಿಯೂ ಎಲ್ಲರೂ ಇಂಗ್ಲೀಷು ಭಾಷೆಯಲ್ಲಿಯೇ ಮಾತನಾಡಬೇಕೆಂದೂ, ಇಂಗ್ಲೀಷಿನಲ್ಲಿಯೇ ಎಲ್ಲಾ ಸಾಹಿತ್ಯವು ಪ್ರಚಾರವಾಗಬೇಕೆಂದೂ ಇಂಗ್ಲೀಷು ಮಾತನಾಡದವರು ಮಾತ್ರ ಮತ್ತೊಂದು ಭಾಷೆಯನ್ನು ಪ್ರಯೋಗಿಸಬಹುದೆಂದೂ ಶಾಸಿಸಲಾಗಿದೆ ಆಂಗ್ಲೇಯ ಸರಕಾರದವರೂ ಅವರ ಪ್ರತಿನಿಧಿಗಳಾದ ಗವರ್ನರುಗಳೂ ಹೇಗೆ ಆಂಗ್ಲೇಯ ಭಾಷೆಯನ್ನೂ ಈ ದೇಶದಲ್ಲಿ ಶಾಶ್ವತವಾಗುವಂತೆ ಪ್ರಯತ್ನಿಸುತ್ತಾರೆ ಭಾಷಾಪ್ರಯುಕ್ತ ರಾಷ್ಟ್ರಗಳು ಬೇಕೆಂದೂ, ರಾಷ್ಟ್ರ ಭಾಷೆಗಳಲ್ಲಿಯೇ ರಾಷ್ಟ್ರೀಯ ಪರಿಪಾಲನೆಯು ಎಲ್ಲಾ ನಡೆಯಬೇಕೆಂದೂ ಭಾರತ ಜಾತಿಗೆಲ್ಲಾ ಒಂದೇ ಜಾತೀಯ ಭಾಷೆ ಇರಬೇಕೆಂದೂ, ಅದು ವಿದೇಶ ಭಾಷೆಯಾದ ಇಂಗ್ಲೀಷು ಅಲ್ಲದ ಸ್ವದೇಶ ಭಾಷೆಯಾದ ಹಿಂದೀ ಆಗಿರಬೇಕೆಂದೂ ಹಿಂದೀ ಭಾಷೆಯಲ್ಲಿಯೇ ಕೇಂದ್ರ ಸಂಯುಕ್ತ ಪ್ರಭುತ್ವ ಪಾಲನೆ ಯುಲ್ಲವೂ ನಡೆಯಬೇಕೆಂದೂ ಕಾಂಗ್ರೆಸ್ಸು ಕೋರುತ್ತಿರುವುದು

ಅಂತೂ ಕನ್ನಡಿಗರು ಈ ಸನ್ನಿವೇಶದಲ್ಲಿ ಇತರ ರಾಷ್ಟ್ರ ನಿರ್ಮಾಣ ಪ್ರಯತ್ನದವರೊಂದಿಗೆ ತಮ್ಮ ಪ್ರಾಂತ್ಯ ನಿರ್ಮಾಣಕ್ಕಾಗಿ ಎಚ್ಚರ ವಹಿಸುವುದು ಕರ್ತವ್ಯವೆಂದು ಮಾತ್ರ ಸೂಚಿಸುತ್ತೇವೆ.

ಕೊಪ್ಪದ ಶ್ರೀ ರಾಮಸ್ವಾಮಿ ಅಯ್ಯಂಗಾರ್.

ಜಾಹೀರಾತು

1933ನೇ ಮೇ ತಿಂಗಳಲ್ಲಿ ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘ, ಮಂಗಳೂರು-ಈ ಸಂಘದವರು ತಮ್ಮ 'ಚಟುವಟಿಕೆಗಳಲ್ಲಿ ಒಂದಾಗಿ ವಿಶೂಚಿಗೃಹ ಮತ್ತು ರೋಗಿಗಳ ಆರೈಕೆಯ ಗೃಹ ಒಂದನ್ನು ಕದ್ರಿಯಲ್ಲಿ ತೆರೆದರು. ಡಾ। ಯಂ ಶಿವರಾಯರು ಈ ಗೃಹದ ವೈದ್ಯಕೀಯ ಆಫೀಸರರಾಗಿ ಇಲ್ಲಿಯ ಚಿಕಿತ್ಸೆಯ ಭಾರವನ್ನು ಕೈಕೊಂಡಿದ್ದರು ಈ ಗೃಹವನ್ನು ಕದ್ರಿಯಲ್ಲಿ ಮ। ರಾ। ಗೊಲ್ಲರಕೇರಿ ಕೃಷ್ಣರಾಯರ ಮನೆಯಲ್ಲಿ ಇರಗೊಳಿಸಲಾಯಿತು. ಆದರೆ ಕಾರಣಾಂತರದಿಂದ ಈ ಸಂಸ್ಥೆಯನ್ನು ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘದವರು ಮುಚ್ಚಲಿಕ್ಕಿದ್ದಾಗ ಇದನ್ನು ಡಾ। ಯಂ, ಶಿವರಾಯರು, ರಾವ್ ಬಹದ್ದೂರ್ ಉದ್ಯಾವರ ಆನಂದರಾಯರು ಮತ್ತು ಮ। ರಾ। ಉದ್ಯಾವರ ಮಾರುತಿರಾಯರು ಬಹಳ ಕಾಲದ ವರೆಗೆ ಈಶ್ವರಾನಂದ ಮಹಿಳಾ ಸೇವಾಶ್ರಮದಿಂದ ದ್ರವ್ಯಸಹಾಯ ಹಾರೈಸದೆ ತಾವೇ ನಡಿಸುತ್ತೇವಾಗಿ ಕೈಕೊಂಡರು ಈ ಎರಡು ಸಂಸ್ಥೆಗಳೊಳಗೆ ಭಿನ್ನಾಭಿಪ್ರಾಯಗಳು ಬಂದುದರಿಂದ ಸದ್ರಿ ಸೇವಾಶ್ರಮದವರು ತಮ್ಮ ಖರ್ಚಿನಿಂದ ಈ ವಿಶೂಚಿಗೃಹಕ್ಕೆ ಒದಗಿಸಿಕೊಟ್ಟ ಸಾಹಿತ್ಯ ಸಾಮಗ್ರಿಗಳ ಬಗ್ಗೆ ರೂ 1,000ವನ್ನು ಪಡೆದು, ಈ ಗೃಹದಲ್ಲಿ ತಮಗಿರುವ ಹಕ್ಕನ್ನು ಮೇಲೆ ಹೇಳಿದ ಮೂರು ಮಂದಿ ಗೃಹಸ್ಥರಿಗೆ ಒಪ್ಪಿಸಿಕೊಟ್ಟರು ಈಗ ಸದ್ರಿ ಕದ್ರಿಯ ಗೃಹವು ಈಶ್ವರಾನಂದ ಮಹಿಳಾ ಸೇವಾಶ್ರಮದೊಡನೆ ಏನೊಂದು ಹಕ್ಕು ಸಂಬಂಧವಿಲ್ಲದೆ ನಡೆಯಿಸಲ್ಪಡುವುದು ಈಶ್ವರಾನಂದ ಮಹಿಳಾ ಸೇವಾಶ್ರಮದ ಸಹಾಯಾರ್ಥವಾಗಿ ಕಳುಹಿಸುವ ದಾನ ಇತ್ಯಾದಿ ದ್ರವ್ಯಸಂಗ್ರಹವನ್ನು ಮಂಗಳೂರಿನ ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘಕ್ಕೇನೆ ನೇರಾಗಿ ಕಳುಹಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗುತ್ತದೆ.

(By order)
of the Managing Committee of the
Ishwaranand
Mahila Sevashram Society,
6-1-1936. Mangalore

(ಅನೇ ಪುಟದಿಂದ ಮುಂದುವರಿದುದು)

ಚಳವಳವು ನಮ್ಮವರ ಪಾಲಿಗೆ ಅಹಿಂಸಾತ್ಮಕವಾಗಿಯೇ ಇದ್ದದು ಪ್ರಶಂಸನೀಯವೇ ಸರಿ ಸರಕಾರವು ಪುರುಷರಿಂದಲೂ ಸ್ತ್ರೀಯರಿಂದಲೂ ಮುಂದೊತ್ತುತ್ತಿದ್ದ ಈ ಚಳವಳವನ್ನು ಪ್ರತಿಭಟಿಸಲು ಮೇಲಿಂದ ಮೇಲೆ ಹೊಸ ಹೊಸ ಶಾಸನಗಳನ್ನು ಕಾರ್ಯಕ್ಕೆ ತಂದಿತು

1932-33ರಲ್ಲಿ ಸರಕಾರವು ಕಾಂಗ್ರೆಸ್ ಸಂಸ್ಥೆಗಳನ್ನು ನ್ಯಾಯಬಾಹಿರವೆಂದು ಆಕ್ಷೇಪಿಸಿದುದರಿಂದ ಕಾಂಗ್ರೆಸ್ ಅಧಿವೇಶನಗಳು ಜರಗಲಿಲ್ಲ ಆದರೂ, 1933ರ ಅಂತ್ಯದಲ್ಲಿ ಕಲ್ಕತ್ತದಲ್ಲಿ ಪಂಡಿತ ಮಾಲವೀಯರ ಅಧ್ಯಕ್ಷತೆಯಲ್ಲಿ, ಪೋಲೀಸ್ ಬಂದೋಬಸ್ತನ್ನು ಎದುರಿಸಿ ಒಂದು ಅಧಿವೇಶನವು ಸೇರಿಯಿತು. ಆದರೆ ಮಧ್ಯದಲ್ಲೇ ಪೋಲೀಸರ ಬಾಧಿಪ್ರಯೋಗವಾದುದರಿಂದ ಸಭೆಯು ಚೆದರಬೇಕಾಯಿತು

49ನೇ ವರ್ಷದ ಕಾಂಗ್ರೆಸ್, 1934.

ಅಧ್ಯಕ್ಷರು ಬಾಬು ರಾಜೇಂದ್ರ ಪ್ರಸಾದರು

1934ನೇ ಇಸವಿಯ ಈ ಚಳವಳದ ಅಂತ್ಯವನ್ನು ಕಂಡಿತು ಮೆಕರೀಸಿನಲ್ಲಿ ಸೂಚಿಸುವ ಹೊಸ ಸುಧಾರಣೆಗಳ ಶಾಸನವಾಗಿ ಮಂಜೂರಾತಿ ಹೊಂದಿದವು ಗಾಂಧಿಯವರ ನಮ್ಮ ರಾಜಕೀಯದ ವ್ಯಸನಗಳಿಗಿರವ ಅಸ್ಪೃಶ್ಯರು ಮತ ಸಾಮಾನ್ಯರನ್ನು ಬಾಧಿಸುತ್ತಿರುವ ಹೃದಯಭೇದಕ ಬಡತನತೆಗಳನ್ನು ಬೆರಳಿಕ್ಕಿ ತೋರಿಸಿ ಕಾಂಗ್ರೆಸಿಂದ ನಿವೃತ್ತರಾದರು ಈ ವರ್ಷದ ಕಾಂಗ್ರೆಸಿನ ಕಾರ್ಯಕಲಾಪವೇ ನೆ ಒಂದು ಇನ್ನೂ ನಮ್ಮ ನೆನಪಿನಲ್ಲಿ ಶುಭ್ರವಾಗಿಯೇ ಇದೆ ಈಗ ಐವತ್ತು ವರ್ಷಗಳ ವಯಸ್ಸನ್ನು ಹೊಂದಿದ ಈ ಸಂಸ್ಥೆಯ ಸ್ವರ್ಣೋತ್ಸವದ ಪಿಠ್ಯಾಭಿಷೇಕ

P B

ಕಫ ಸಂಬಂಧ ರೋಗಗಳನ್ನು ಬರಮಾಡ ಬೇಡಿರಿ.

ವಿಷಹಾರಿ ಶ್ವಾಸನೀಯ ಗುಳಿಗೆಗಳಾಗಿರುವ

ಪೆಪ್ಸನ್ನು ಸೇವಿಸಿರಿ.



ನಿಮ್ಮೊಡನೆ ಒಂದು ಬಾಟ್ಲಿ ಪೆಪ್ಸ್ ಮಾತ್ರೆ ಸಿದ್ಧವಾಗಿಟ್ಟು ಶೀತ ಒದಗುವ ಸಂದರ್ಭದಲ್ಲಿ ಅಥವಾ ಚಳಿಯ ರಾತ್ರಿಯಲ್ಲಿ ಹೊರಗೆ ಸಂಚಾರ ಮಾಡುತ್ತಿರುವಾಗ ಒಂದು ಅಥವಾ ಎರಡು ಈ ಗುಳಿಗೆಗಳನ್ನು ಬಾಯಿಯಲ್ಲಿ ಹಾಕಿಕೊಳ್ಳಿ ಇದರಿಂದ ಮೇಲಿನ ಕಾರಣಗಳಿಂದ ಪರಿಣಮಿಸಬಹುದಾದ ಕಫ ಸಂಬಂಧ ರೋಗಗಳು ದೂರವಾಗುವುವು ಈ ಬಿಲ್ಲೆಗಳು ... ಶ್ವಾಸಕೋಶವನ್ನು ... ಈ ಬಿಲ್ಲೆಗಳಲ್ಲಿವೆ

ಎಲ್ಲಾ ದವಾಖಾನೆಗಳಲ್ಲಿ ಬಾಟ್ಲಿ ಒಂದರ ರೂ 1ಕ್ಕೆ ದೊರಕುತ್ತದೆ
ಏಜಂಟರು — ದಾಧಾ ಎಂಡ್ ಕೊ., ... ಮದ್ರಾಸ.

ಪ್ರತಿ ಪೆಪ್ಸ್ ಬಿಲ್ಲೆಗಳಿಗ ಬೆಳ್ಳಿಯ ಕವಚವಿದ

ಪೆಪ್ಸ್ PEPS

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ,

ಹೊರಡುವ ನೂತನವಾದ ಒಂದು ಸರ್ವಿಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತವೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಆದೇ ದಿನ ಮಧ್ಯಾಹ್ನ ಘಂಟೆ ೪॥ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದ ಮಂಗಳೂರು, ಬಂಟವಾಳ ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದ

ಅಲ್ಲದೆ,

ಸಕಲೇಶಪುರದಿಂದ ಆದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ

ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದ

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಆದೇ ದಿನ ಸಾಯಂಕಾಲ ತಲುಪಲು ಅತೀ ಅನುಕೂಲವಾಗಿದೆ.

The Canara Public Conveyance Co., Ltd., Kodialbail Mangalore.

The Sakaleshwara Motor Service Ltd., Saklaspur.

ಹಿಂದೂದೇಶದಲ್ಲಿ ಮೋಟರು ಕೈಗಾರಿಕೆಯು ಬೇಗನೆ ಪ್ರಾರಂಭವಾಗುವುದು.

ಹರಿಜನರನ್ನು ಬ್ರಾಹ್ಮಣರನ್ನಾಗಿ ಮಾಡಿದರು. ಇಟೇಲಿಯವರ ಕ್ರೂರತ್ವ!

ಕಲ್ಕತ್ತದಲ್ಲಿ ಖಿಲಾಫತ್ ಪರಿಷತ್ತು.

ಕಲ್ಕತ್ತದ ಪ್ರಸಿದ್ಧ ಕಿಷ್ಟನ್ ಕವಾಜಾಹಾ ಹಬಿಬುಲ್ಲಾ ನವಾಬ ಸಾಹೇಬರು ಈ ಪರಿಷತ್ತಿನ ಅಧ್ಯಕ್ಷರಾಗಿದ್ದರು. ರಾಜಕೀಯ ವಾತಾವರಣದಲ್ಲಿ ಮುಸ್ಲಿಮರು ಹೇಗೆ ವರ್ತಿಸಬೇಕು, ಮುಸ್ಲಿಮರು ಯಾವ ರೀತಿಯಲ್ಲಿ ಸುಧಾರಣೆ ಹೊಂದಬೇಕು. ನವೀನ ರಾಜಶಾಸನದಲ್ಲಿ ಮುಸ್ಲಿಮರ ಕೃತ್ಯವು, ಇಸ್ಲಾಂ ಧರ್ಮವೂ ಹರಿಜನರೂ ಇವೇ ಮೊದಲಾದ ವಿಚಾರವರ ಸಂಗತಿಗಳು ಆಲೋಚಿಸಲಾದವು. ಅಧ್ಯಕ್ಷರು "ತತ್ಕಾಲಕ್ಕೆ ಸಂಪೂರ್ಣ ಸ್ವರಾಜ್ಯವನ್ನು ಪಡೆಯುವುದು ಅಸಾಧ್ಯ. ಆದರೆ ಬ್ರಿಟಿಷ ಸಾಮ್ರಾಜ್ಯದಲ್ಲಿ ಭರತಖಂಡಕ್ಕೆ ಡೊಮಿನಿಯನ್ ಸ್ಟೇಟಸ್ಸಿನ ಹಕ್ಕಾದರೂ ಸಿಕ್ಕಬೇಕು. ಮುಸ್ಲಿಮರು ರಾಜಕೀಯ ವಾತಾವರಣದಲ್ಲಿ ಹೆಚ್ಚಿನ ಶ್ರಮಪಡಬೇಕು." ಎಂದು ಭಾಷಣ ಮಾಡಿದರು. ಕಲ್ಕತ್ತಾ ನಗರ ಸಭೆಯಲ್ಲಿ ಅಧಿಕಾರದಲ್ಲಿರುವ ಉದ್ಯೋಗಗಳ ನಾಲ್ಕನೆ ಒಂದಂಶವಾದರೂ ಮುಸ್ಲಿಮರಿಗೆ ಸಲ್ಲತಕ್ಕದೆಂದೂ ಮತ್ತು ಮುಸ್ಲಿಮರ ಹಿತಸಾಧಿಸುವ ಇತರ ಅನೇಕ ಠರಾವುಗಳನ್ನು ಮಂಜೂರು ಮಾಡಿ ಈ ಪರಿಷತ್ತು ಕೊನೆಗೊಂಡಿತು.

ಅಖಿಲಭಾರತ ಸ್ತ್ರೀಯರ ಪರಿಷತ್ತು

ಈ ಭಾರಿ ತ್ರಿವಾಂಡ್ರಮಿನಲ್ಲಿ ಜರಗಿತು. ಸ್ತ್ರೀಯರೂ ನವೀನ ರಾಜಶಾಸನವೂ, ಸ್ತ್ರೀಯರ ವಿದ್ಯಾಭ್ಯಾಸ, ಸ್ತ್ರೀಯರ ಸಾಮಾಜಿಕ ಉದ್ಧರಣೆ; ಇವೇ ಮೊದಲಾದ ಕುರಿತು ಭಾಷಣಗಳಾಗಿ ಬಹಳ ಚರ್ಚೆ ನಡೆದು, ಕೆಲವು ಠರಾವುಗಳಾದವು. ಈ ಭಾರಿ ಆಲೋಚಿಸಲ್ಪಟ್ಟ ಮುಖ್ಯ ವಿಚಾರವೆಂದರೆ 'ಸಂತತಿ ಪ್ರತಿಬಂಧಕ ವಿಚಾರ' ಈ ಕುರಿತು ಅನುಭವಕೊಡಲು ಅಮೇರಿಕಾ ದೇಶದ ಪ್ರಸಿದ್ಧ ಪ್ರತಿಬಂಧಕ ಚಳವಳಿ ನಾಯಕರಾದ ಮಾರ್ಗರೇಟ ಸೆಂಗ್ಗರ ಈ ಪರಿಷತ್ತಿಗೆ ಆಮಂತ್ರಿಸಲ್ಪಟ್ಟಿದರು.

ಟ್ರಾಮಕಾರಿನಲ್ಲಿ ಬೆಂಕಿ.

ಮುಂಬಯಿ ನಗರ ಜನಸಂದಣಿಯು ಹೆಚ್ಚಾಗಿರುವ ಒಂದು ಮಾರ್ಗದಲ್ಲಿ ತುಂಬಾ ಜನರಿಂದೊಡಗೂಡಿ ಹೋಗುತ್ತಿರುವ ಟ್ರಾಮುಗಾಡಿಯಲ್ಲಿ ಅಕಸ್ಮಾತವು ಬೆಂಕಿಯು ಉಂಟಾಯಿತು. ಇದನ್ನು ತಿಳಿದು ಡ್ರೈವರನು ಟ್ರಾಮನ್ನು ತಕ್ಕ ಸಮಯದಲ್ಲಿ ನಿಲ್ಲಿಸಿದನು. ಭೀತರಾದ ಪ್ರಯಾಣಿಕರು ಟ್ರಾಮಿನಿಂದ ಕೆಳ ಹಾರುವವರಾದರು. ಕೆಳ ಹಾರುವ ಗಲಭೆಯಲ್ಲಿ ಅನೇಕರು ಜಖಂ ಹೊಂದಿರುವರು.

ಹಿಂದೂದೇಶಕ್ಕೆ ಮೋಟಾರು ಕೈಗಾರಿಕೆ.

ಹಿಂದೂದೇಶದಲ್ಲಿ ಮೋಟಾರು ಕೈಗಾರಿಕೆಯನ್ನು ಪ್ರಾರಂಭಮಾಡುವ ನಿಮಿತ್ತ ಅನುಭವ ಪಡೆಯಲು ಪಾಶ್ಚಾತ್ಯ ದೇಶಕ್ಕೆ ತೆರಳಿದ ಮೈಸೂರಿನ ನಿವೃತ್ತ ದಿವಾನರಾದ ಮತ್ತು ಹಿಂದೂದೇಶದ ಕೀರ್ತಿವಂತ ವಿಜ್ಞಾನಿಗಳಾದ ಸರ್ ವಿಶ್ವೇಶ್ವರಯ್ಯನವರು ಬೇಕಾದ ಅನುಭವ ಪಡೆದು ಸ್ವದೇಶಕ್ಕೆ ಹಿಂತಿರುಗಿರುವರು. "ದೇಶದ ಈಗಿನ ದುಃಸ್ಥಿತಿಯನ್ನು ನಿವಾರಿಸಲು ಈ ಕೈಗಾರಿಕೆಯು ಬೇಗನೆ ಸ್ಥಾಪನೆಯಾಗಬೇಕು. ಇನ್ನು ಕಾಲವಿಳಂಬ ಮಾಡಿದರೆ ನಾವು ಪ್ರಾಣತ್ಯಾಗಮಾಡಿದಂತಾಗುವುದು" ಎಂದವರು ಇವರ ಭೇಟಿ ಮಾಡಿದವರಿಗೆ ತಿಳಿಸಿರುವರು. ಮುಂಬಾಯಿಯ ಧನಾಢ್ಯರೂ, ವರ್ತಕ ಧುರೀಣರೂ ಈ ಮೋಟಾರು ಕೈಗಾರಿಕೆಗೆ ಬೇಕಾದ ಹಣ ಸಂಗ್ರಹಿಸಲು ಮುಂದೆಬಂದಿರುವರು. ಪಾಶ್ಚಾತ್ಯ ಮತ್ತು ಅಮೇರಿಕಾ ದೇಶಗಳಲ್ಲಿ ತಯಾರಾಗುವ ನವೀನ ಮೋಟಾರು ವಾಹನಗಳಂತೆ ಮೋಟಾರು ವಾಹನಗಳನ್ನು ತಯಾರಿಸಲು ಯೋಗ್ಯತೆಯುಳ್ಳ ಒಂದು ದೊಡ್ಡ ಕಾರ್ಖಾನೆಯು ಬೇಗನೇ ಸ್ಥಾಪಿಸಲ್ಪಡುವುದು.

ಹಿಂದೂದೇಶವೂ ಸೆಂಕ್ಷನು ಪ್ರತಿಕ್ರಿಯೆಗಳೂ.

ಮುಂಬಾಯಿಯ ವರ್ತಕಸಂಘದ ಕಾರ್ಯದರ್ಶಿಗಳು ಸೆಂಕ್ಷನುಗಳ ದೆಸೆಯಿಂದ ವ್ಯಾಪಾರಸ್ಥರಿಗೆ ಆಗುವ ನಷ್ಟಪಟ್ಟಿಗಳನ್ನು ತನಗೆ ಕಳುಹಿಸಿಕೊಡಬೇಕಾಗಿ ಪ್ರಕಟಿಸಿ ಮಾಡಿರುವರು. ಈ ಪಟ್ಟಿಗಳನ್ನು ಅನುಸರಿಸಿ, ಸೆಂಕ್ಷನುಗಳಿಂದ ಉಂಟಾದ ನಷ್ಟಗಳನ್ನು ತುಂಬಿಸಲು ಹಿಂದೂದೇಶಕ್ಕೆ ಇತರ ವ್ಯಾಪಾರದ ಹಾದಿಗಳನ್ನು ತೋರಿಸಲು ಇಂಡಿಯಾ ಸರಕಾರಕ್ಕೆ ಮನವಿಮಾಡಲಾಗುವುದು.

ಯಾಕೆಂದರೆ, ಇಟಲಿ—ಅಬಿಸಿ ಯುದ್ಧವು ಬಹಳ ಕಾಲ ಮುಂದುವರಿಯುವುದಾದರೆ, ಈ ಸೆಂಕ್ಷನುಗಳಿಂದ ಹಿಂದೂದೇಶದ ವ್ಯಾಪಾರದ ಮೇಲೆ ಗ್ರಹಣವು ನಿಲ್ಲುವುದು. ಇದರಿಂದಾಗಿ ಮೊದಲೇ ಕೆಟ್ಟಸ್ಥಿತಿಯು ಮತ್ತೂ ಕೆಡುವುದು.

ಮಹಾತ್ಮಾಗಾಂಧಿಯವರ ಆರೋಗ್ಯ.

ರಕ್ತಚಲಾವಣೆಯ ವೇಗವು ಸ್ವಲ್ಪ ಹೆಚ್ಚಾಗಿರುತ್ತದೆ. ಇವರು ಸಂಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇವರಿಗೆ ವನಸ್ಪತಿ ಆಹಾರದ ಬದಲಾಗಿ ಈಗ ಗ್ಲೂಕೋಸನ್ನು ಕೊಡುತ್ತಿದ್ದಾರೆ. ಹರಿಜನರೋದ್ಧಾರ, ಹಳ್ಳಿಗಳ ಅಭ್ಯುದಯ ಇತ್ಯಾದಿ ಸಮಸ್ಯೆಗಳ ವಿಷಯ ಇವರು ಇತ್ತೀಚೆಗೆ ಬಹಳವಾಗಿ ಶ್ರಮಪಡುತ್ತಿದ್ದರೆಂದೂ ಇದರಿಂದ ಅವರ ನಿದ್ರಾಭಂಗವಾಗಿ, ಅವರ ಆರೋಗ್ಯವು ಕೆಟ್ಟುಹೋಗಿದೆಯೆಂದೂ, ಹಾಗೂ ಅವರು ಸೋಯಾಬೀನ್ಸ್‌ಗಳನ್ನು ಸೇವಿಸಿದುದರಿಂದಲ್ಲೆಂದೂ ವೈದ್ಯಕೀಯ ಜನರ ಅಭಿಪ್ರಾಯವು.

ಆಯುರ್ವೇದದ ಅಭ್ಯುದಯ.

ಕಲ್ಕತ್ತಾ ನಗರದಲ್ಲಿ ಶ್ಯಾಮದಾಸ ರಾಜವೈದ್ಯ ಶಾಸ್ತ್ರಪೀಠದ ನವೀನ ಕಟ್ಟಡದ ಪ್ರವೇಶಸಮಾರಂಭಕ್ಕೆ ನೆರೆದ ಹಲವು ಮಂದಿ ಪ್ರಸಿದ್ಧ ಪುರುಷರು ಭಾಷಣಗಳಿಂದ ಹಿಂದೂದೇಶದಲ್ಲಿ ಆಯುರ್ವೇದವು ಬಹಳವಾಗಿ ಅಭ್ಯುದಯಹೊಂದಿದೆಯೆಂಬ ಅಭಿಪ್ರಾಯವು ವ್ಯಕ್ತವಾಗುತ್ತದೆ. ಹಿಂದೂದೇಶದ ಸ್ಥಿತಿಗೆ ಆಯುರ್ವೇದಿ ಔಷಧಿಯು ತಕ್ಕುದಾದುದೆಂದು ಅಂದಿನ ಸಭಾಧ್ಯಕ್ಷರಾದ ತ್ರಿಪುರಾ ರಾಜ್ಯದ ಅರಸರು ಸೂಚಿಸಿದರು.

ಹರಿಜನರಿಗೆ ಯಜ್ಞೋಪವೀತವು ಕೊಡಲಾಯಿತು.

ಆರ್ಯಮಿಶನರಿಯ ಸ್ವಾಮಿ ಶ್ರದ್ಧಾನಂದರೆಂಬವರು ಲಾಹೋರಿನ ಧಾಗೂರುವೆಂಬ ಹಳ್ಳಿಯಲ್ಲಿ ೩೦ ಜನ ಹರಿಜನರನ್ನು ಹಿಂದೂಶಾಸ್ತ್ರದ ವಿಧಿಗಳನ್ನನುಸರಿಸಿ ಶುದ್ಧಿ ಸಂಸ್ಕಾರಮಾಡಿ, ವೈದಿಕ ಕ್ರಮಗಳ ಮೇರೆಗೆ ಅವರನ್ನು ಬ್ರಾಹ್ಮಣರನ್ನಾಗಿ ಮಾಡಿ ಯಜ್ಞೋಪವೀತಗಳನ್ನು ಹಾಕಲಾಯಿತು. ಈ ಸಮಾರಂಭಕ್ಕೆ ಆ ಹಳ್ಳಿಯ ಸಮಸ್ತರೂ ನೆರೆದಿದ್ದರು. ಶುದ್ಧಿಸಂಸ್ಕಾರದ ನಂತರ ನೆರೆದವರಿಗೆಲ್ಲಾ ಒಂದು ಮಹಾ ಔತಣವಿತ್ತು.

ಇಟೇಲಿಯಾನರ ಕ್ರೂರತ್ವ.

ಇಟೇಲಿಯಾನರು ಈಗೀಗ ವಿಚಾರವಿಹೀನರಾಗಿ ವರ್ತಿಸಲು ಪ್ರಾರಂಭಿಸಿದ್ದಾರೆ. ಯುದ್ಧದಲ್ಲಿ ಗಾಯಗೊಂಡ ಸೈನಿಕರ ಉಪಚರಣೆಗಾಗಿ ಶ್ರಮಿಸುತ್ತಿರುವ ಅಮೇರಿಕನ್ ರೆಡ್‌ಕ್ರೋಸ್ ಆಸ್ಪತ್ರೆಯನ್ನು ಮೊನ್ನೆ ಧ್ವಂಸಮಾಡಿದರಷ್ಟೇ. ಇತ್ತೀಚೆಗೆ ಸ್ವೀಸ್ ಮತ್ತು ಐಗುಪ್ತ ದೇಶದವರ ರೆಡ್‌ಕ್ರಾಸ್ ಆಸ್ಪತ್ರೆಗಳನ್ನು ಕೆಡಹಿದರು. ಈ ಆಸ್ಪತ್ರೆಗಳಲ್ಲಿರುವ ಗಾಯಹೊಂದಿದ ಸೈನಿಕರನೇಕರಲ್ಲದೆ, ಅಲ್ಲಿ ವೈದ್ಯಕೀಯ ಕೆಲಸ ಮಾಡುವ ಅನೇಕ ಜನರೂ ಮಡಿದಿರುವರು. ಇಟೇಲಿಯಾನರ ಈ ತರದ ವರ್ತನೆಯಿಂದಾಗಿ ಎಲ್ಲಾ ಜನಾಂಗಗಳೂ ರೇಗಿವೆ.

ನಿವೃತ್ತ ಮುಖ್ಯಮಂತ್ರಿಯವರಾದ ಮಿ॥ ಮೆಕ್ಡೋನಾಲ್ಡರಿಗೆ-

ಬ್ರಿಟಿಷ ಪಾರ್ಲಿಮೆಂಟಿನ ಸದಸ್ಯತನ ದೊರಕುವುದು ಸಂದೇಹಕರ. ಅವರ ಪುತ್ರನ ಗತಿಯೂ ಕೂಡ ಇದೇ ಆದೀತು ಎಂದು ಕೆಲವೆಡೆಗಳಲ್ಲಿ ಊಹೆ. ಯಾವುದೋ ಖಾಲಿಬಿದ್ದ ಸ್ಥಾನಗಳಿಗೆ ಇವರು ಉಮೇದ್ವಾರರಾಗಿ ನಿಂತಿದ್ದರು. ಇಲ್ಲಿಯೂ ಕೂಡ ತಡೆಗಳು ಉಂಟಾಗಿವೆ.

ಇಟೇಲಿಯಾನರ ಈಜಿಪ್ಟಿನಲ್ಲಿ ಚಟುವಟಿಕೆ

ಲಿಭಿಯಾ ಎಂಬ ಇಟೇಲಿಯಾನ ಪ್ರದೇಶವು ಐಗುಪ್ತದ ಗಡಿಯು ಹತ್ತಿರವಿದೆ. ಅಲ್ಲಿ ಧಾರಾಳವಾಗಿ ಇಟೇಲಿಯ ಸೈನ್ಯಮಂಡಳವು ಕೇಂದ್ರವಾಗಿರುತ್ತದೆ. ಮಾತ್ರವಲ್ಲದೆ, ಒಂದು ಮಹಾಯುದ್ಧದ ಸಿದ್ಧತೆಗಳನ್ನು ಮಾಡುತ್ತಿದೆ. ಗಡಿನಾಡಿನ ಆತ್ತಕಡೆಯೂ ಕೂಡ ಬ್ರಿಟಿಷರು ತಕ್ಕ ಸಿದ್ಧತೆಗಳನ್ನು ಮಾಡಿರುವರು. ಇನ್ನೊಂದು ಮಹಾಯುದ್ಧವು ಇಲ್ಲಿ ಸಂಭವಿಸಬಹುದೆಂದು ಕೆಲವರ ಮಾತು.

ಇಟೇಲಿಯವರು ವಿಷಕರ ಗೇಸುಗಳನ್ನು

ಉತ್ತರ-ರಣರಂಗದ ತಂಬಿಯನ್‌ನಲ್ಲಿ ಉಪಯೋಗಿಸುತ್ತಿದ್ದಾರೆ. ಅಲ್ಲಿನ ಡೆಸ್ಸಿ ನಗರದ ಮೇಲೆ ಇಟೇಲಿಯವರು ಬೆಂಕಿನ ಸುರಿಮಳೆಯನ್ನೆ ಸುರಿಸುತ್ತಿದ್ದಾರೆ. ಸಾಧಾರಣ ೧೦,೦೦೦ ಮೇಲಾಗಿ (ಇವುಗಳಲ್ಲಿ ಗೇಸಿನ ಬೋಂಬುಗಳು ಕೂಡಿವೆ.) ಬೇರಂಬು ಉತ್ತರ ರಣರಂಗದ ಮಖಾಲೆ ಪ್ರಾಂತ್ಯದ ಸತ್ತಿರ ಇಟೇಲಿಯವರು ಉಪಯೋಗ ಮಾಡಿರಬಹುದು. ಆದರೆ ಮಾಡಿದವರ ಸಂಖ್ಯೆ ಮಾತ್ರ ಕಡಿಮೆ. ಹಬಸಿಗಳು ಬಹಳ ಪರಾಕ್ರಮದಿಂದ ಕಾದಾಡುತ್ತಿದ್ದಾರೆ. ಕಳೆದು ಹೋದ ಮಖಾಲೆ ಪ್ರಾಂತ್ಯವನ್ನು ಬೇಗನೆ ಪುನಃ ವಶೀಕರಿಸುವರು. ಹಬಸಿ ಚಕ್ರವರ್ತಿಯವರು ಈ ಉತ್ತರ ರಣರಂಗದಲ್ಲಿ ಬಹಳ ಪ್ರಯಾಸಪಡುತ್ತಿದ್ದಾರೆ.

ಅಡಿಸ್ ಅಬಾಬದಲ್ಲಿ ಪೋಲಿಸರು ಮಾತ್ರ ಇರುವರು.

ಮಿಕ್ಕವರು ಸ್ವದೇಶ ರಕ್ಷಣೆಗಾಗಿ ಯುದ್ಧರಂಗಕ್ಕೆ ನಡೆದಿರುವರು. ಇಟೇಲಿಯಾನರ ಇತ್ತೀಚಿಗಿನ ಕ್ರೂರವರ್ತನೆಯನ್ನು ನೋಡಿ ಹಬಸಿಗಳೂ ರೇಗಿದವರಾಗಿ ತಮ್ಮ ದೇಶ ರಕ್ಷಣೆಗಾಗಿ ಟೊಂಕಕಟ್ಟಿ ಈ ರೀತಿ ಮುಂದುವರಿದಿರುವರು. ದೆಸ್ಸಿ ಯುದ್ಧರಂಗಕ್ಕೆ ಬ್ರಿಟಿಷರ ರೆಡ್‌ಕ್ರೋಸ್ ತಂಡವೊಂದು ಬೇಗನೆ ತೆರಳುವುದೆಂದು ವಾರ್ತೆ ಬಂದಿರುತ್ತದೆ.

ಮೋಟಾರು ಅಪಘಾತಗಳು.

ಕಳೆದ ಮಹಾ ಯುದ್ಧದಲ್ಲಿ ದಿನ ಒಂದರಲ್ಲಿ ೭೧ ಜನರು ಮಡಿಯುತ್ತಿದ್ದರು. ಆದರೆ ಆಧುನಿಕ ಕಾಲದ ಈ ಮೋಟಾರು ವಾಹನಗಳಿಂದ ಉಂಟಾಗುವ ಅಪಘಾತಗಳಿಂದಾಗಿ, ಈಗ ದಿನ ಒಂದರ ೯೩ ಜನರು ಮಡಿಯುತ್ತಿದ್ದಾರೆ. ಪ್ರಪಂಚದ ಎಲ್ಲಾ ದೇಶಗಳು ಮೋಟಾರು ವಾಹನಗಳ ಈ ಪರಿಣಾಮವನ್ನು ಕಡಿಮೆ ಮಾಡಲು ಅನೇಕ ಕ್ರಮ ಕಾನೂನುಗಳನ್ನು ಔಷಧಿಗಳನ್ನು ಮಾಡಿರುವರು. ಇಂಗ್ಲಾಂಡಿನಲ್ಲಿ ಬ್ರಿಟಿಷರ ಪ್ರಯತ್ನಗಳು ಸ್ವಲ್ಪ ಫಲಕಾರಿಯಾದಂತೆ ಕಾಣುತ್ತದೆ.

ಸ್ತ್ರೀಗೆ ಪೋಲೀಸ್ ಇನ್ಸ್‌ಪೆಕ್ಟರರ ಹುದ್ದೆ ದೊರಕಿತು.

ಬರ್ಮಾ ದೇಶದ ರಂಗೂನ ನಗರದಲ್ಲಿ ಮಿಸ್. ಎಸ್. ಇ. ನಿಕೋಲ ಜೋನ್ಸ ಎಂಬವಳನ್ನು ಪೋಲಿಸ್ ಇನ್ಸ್‌ಪೆಕ್ಟರಳಾಗಿ ನೇಮಕ ಮಾಡಿರುವರು.

ಉತ್ತರ ಚೀನಾದಲ್ಲಿ ಮಹಾ ಕ್ಷೋಭೆ.

ಜಪಾನಿಯರ ದೆಸೆಯಿಂದ ಹುಟ್ಟಿದ ಸ್ವಯಂಪ್ರಭುತ್ವದ ಪ್ರಾಂತ್ಯಗಳನ್ನು ರಚಿಸುವ ಚಳವಳಿಯಿಂದಾಗಿ ಜಪಾನಿಯರ ಈ ಸ್ವಾರ್ಥಪರ ಉದ್ದೇಶವನ್ನು ತಡೆಯಲು ವಿದ್ಯಾರ್ಥಿಗಳು ಪ್ರತಿಕೂಲನಾ ಚಳವಳವನ್ನು ಪ್ರಾರಂಭ ಮಾಡಿರುವರು. ವಿವಿಧ ಕಡೆಗಳಲ್ಲಿ ವಿದ್ಯಾರ್ಥಿಗಳ ಸಂಘಗಳು ಈ ಕುರಿತಾಗಿ ಬಹಳ ಶ್ರಮಿಸುತ್ತಿದ್ದಾರೆ. ಈ ಸ್ವಯಂಪ್ರಭುತ್ವದ ಚಳವಳವು ಬಿರುಸಾಗಿ ನಡೆಯುವ ಅಲ್ಲಿನ ಮುಖ್ಯ ಪಟ್ಟಣವಾಗಿರುವ ನಾಕಿಂಗಿಗೆ ವಿದ್ಯಾರ್ಥಿಗಳ ತಂಡತಂಡಗಳೆ ಈ ಚಳವಳವನ್ನು ಪ್ರತಿಕೂಲಿಸಲು ಬರುತ್ತಿದ್ದಾವೆ.

ಸಂಯುಕ್ತ ಅಮೇರಿಕಾದ-

ಅಧ್ಯಕ್ಷರಾದ ರೂಸ್‌ವೆಲ್ಟರು ತನ್ನ ದೇಶವು ಯುರೋಪಿನ ಈ ಕಲಹದಲ್ಲಿ ಪ್ರವೇಶಿಸಲು ಸಿದ್ಧವಿಲ್ಲವೆಂದು ನವವರ್ಷದ ಭಾಷಣದಲ್ಲಿ ಸೂಚಿಸಿರುವರು. ಇವರು ಉಭಯಸಮವಾಗಿ ವರ್ತಿಸಲು ನಿರ್ಧರಿಸಿರುತ್ತಾರೆ. ಇಟಲಿಯೊಡನೆ ಸಿಕ್ಕದ ಪ್ರಚಾರದಲ್ಲಿರುವ ವ್ಯಾಪಾರಕ್ಕಿಂತ ಹೆಚ್ಚಿನ ವ್ಯಾಪಾರವನ್ನು ಮಾಡದಹಾಗೆ ಇವರ ಆಜ್ಞೆ ಹೊರಟಿವೆ. ಯೂರೋಪಿನ ಯುದ್ಧದಲ್ಲಿ ಸೇರದೆ ಯಾವತ್ತೂ ಜನಾಂಗಗಳಿಗೆ ಆರ್ಥಿಕ ಯಾ ವ್ಯಾಪಾರಿಕ ಇತ್ಯಾದಿ ಸಹಕಾರವನ್ನು ಕೊಡಬಾರದಾಗಿ ಹೊಸ ಆಜ್ಞೆಗಳು ಹೊರಟಿವೆ. ಇದರಿಂದ ಪ್ರಸಿಡೆಂಟರ ಉದ್ದೇಶವು ಬೇರೆಯಾಗಿದ್ದರೂ, ಇಟಲಿಗೆ ಅಮೇರಿಕಾದಿಂದ ಸಿಗುವ ಎಣ್ಣೆ ಇತ್ಯಾದಿ ಸಾಮಗ್ರಿಗಳು ತಪ್ಪಿಹೋಗುವುವು. ಇವರ ಈ ನಿರ್ಧಾರದಿಂದಾಗಿ ಇಟೇಲಿಯು ಸ್ವಲ್ಪ ಕುಪಿತವಾಗಿರುತ್ತದೆ. ಅಮೇರಿಕಾದ ಈ ಚಂಚಲವರ್ತನೆಗೆ ಜಪಾನೇ ಮುಖ್ಯ ಕಾರಣವಾಗಿರುತ್ತದೆ. ಒಂದುವೇಳೆ ಶಾಂತಸಾಗರದಲ್ಲಿ ಇವರಿಗೂ ಜಪಾನಿಯರಿಗೂ ಯುದ್ಧ ಸಂಭವಿಸಿದರೆ, ಆಗ ಪಾಶ್ಚಾತ್ಯ ಬೆಂಬಲವು ಇವರಿಗೆ ಬೇಕಾಗುವುದು.

ಎಣ್ಣೆ ಸೆಂಕ್ಷನುಗಳು.

ಯುದ್ಧ ಕಾರ್ಯಕ್ಕೆ ಬೇಕಾಗುವ ಪೆಟ್ರೋಲ್ ಇತ್ಯಾದಿ ಖನಿಜ ಎಣ್ಣೆಗಳು ಇಟೇಲಿಗೆ ಎಲ್ಲಾ ಜನಾಂಗಗಳಿಂದ ಈಗ ಒದಗುತ್ತವೆ. ಆದರೆ ಇತರ ಸಾಮಗ್ರಿಗಳು ಇವರಿಗೆ ಸಿಕ್ಕದ ಹಾಗೆ ಸೆಂಕ್ಷನು ಪ್ರತಿಕ್ರಿಯೆಗಳನ್ನು ಜ್ಯಾರಿ ಮಾಡಿದಂತೆ ಈ ಎಣ್ಣೆಯು ಅವರಿಗೆ ಸಿಕ್ಕದಂತೆ ಸೆಂಕ್ಷನುಗಳನ್ನು ಜ್ಯಾರಿ ಮಾಡಲು ಜನಾಂಗ ಸಭೆಗೆ ಅನೇಕ ಜನಾಂಗಗಳಿಂದ ಸೂಚನೆಗಳು ಬಂದಿರುತ್ತವೆ. ಜನಾಂಗ ಸಭೆ ಇದನ್ನು ಬೇಗನೆ ಜ್ಯಾರಿ ಮಾಡುವುದು. ಈ ಸಂಭವ ಒದಗಿದಲ್ಲಿ ತಮ್ಮ ಯುದ್ಧ ಕಾರ್ಯಕ್ಕೆ ತಡೆಗಳು ಬಾರದಂತೆ ಇಟೇಲಿಯು ಅಮೇರಿಕಾದವರಿಂದಲೂ ಇನ್ನು ಇತರ ಜನಾಂಗಗಳಿಂದಲೂ ಧಾರಾಳ ಎಣ್ಣೆಯನ್ನು ಪಡೆಕೊಳ್ಳುತ್ತಿದೆ

ಚಿಕ್ಕಮಗಳೂರು.

ಈಗ ಕಾಫಿಯು ಬಜಾರಿಗೆ ಬರಲು ಪ್ರಾರಂಭವಾಗಿಯದೆ. ದಿನೇ ದಿನೇ ದರ ಇಳಿಯುವ ಸ್ಥಿತಿಯಲ್ಲಿದೆ. ಗಿರಾಕಿಗಳು ಕೂಡಾ ಇಲ್ಲ. ಈಗ ಹಾಲಿನೇಟಿವ್

ಆಳಿ	೬—೧೩—೦	೭—೦—೦
ಟಿಫೀರಿ	೮—೧೩—೦	೯—೦—೦
ನೇಟಿವ್ ಎ ಕಾಫಿ	೭—೪—೦	೭—೮—೦
ಪಾರ್ಚ್‌ಮೆಂಟು ಕಾಫಿ cwt ೧ಕ್ಕೆ	೩೩—೮—೦	೩೪—೦—೦
Pepper ,,	೪—೦	೫—೮—೦ ಈ ರೀತಿ ಇರುತ್ತೆ.

ಏಲಕ್ಕಿ ೧ ವಾರದ ಹಿಂದೆ ೩೦-೩೨ ಇದ್ದದ್ದು ಈಗ ೨೮-೩೦ಕ್ಕೆ ಇಳಿದಿದೆ.

ಕುಂದಾಪುರ:— ಇಲ್ಲಿಯ ಬೋರ್ಡು ಹೈಸ್ಕೂಲಿನ ಸಾಯನ್ಸ್ ಮಾಸ್ತರರಾದ ಶ್ರೀಯುತ ಕೆ. ಎಲ್. ಕಾರಂತ ಬಿ. ಎ. ಎಲ್. ಟಿ. ಯವರಿಗೆ ಕಾಸರಗೋಡು ಹೈಸ್ಕೂಲಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಕಾಸರಗೋಡು ಹೈಸ್ಕೂಲಿನ ಸಾಯನ್ಸ್ ಮಾಸ್ತರರಾದ ಶ್ರೀಯುತ ಶಿವಯ್ಯ ನಾವಡ ಬಿ. ಎ. ಎಲ್. ಟಿ. ಯವರಿಗೆ ನೇಮಕವಾಗಿರುತ್ತದೆ ಎಂದು ತಿಳಿದುಬರುತ್ತದೆ.

ಇಲ್ಲಿಯ ಕರ್ನಾಟಕ ಸಾಹಿತ್ಯ ಸಂಘದ ೧ನೇ ಸಭೆಯು ಇದೇ ಕಳೆದ ತಾ. ೫—೧—೩೬ರಲ್ಲಿ ಸ್ಥಳೀಯ ಹಿಂದೀ ಪಾಠಶಾಲೆಯಲ್ಲಿ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀಯುತ ದತ್ತಾತ್ರೇಯರಾವ್ ಟೊಗ್ಗರ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದಂತೆ ಗತ ಸಭೆಯ ವರದಿಯನ್ನೋದಿದಮೇಲೆ ಅಂದಿನ ಉಪನ್ಯಾಸಕರಾದ ಶ್ರೀಯುತ ಚಕ್ರಪಾಣಿ ನರಸಿಂಹಯ್ಯನವರು "ಕನ್ನಡ ಕವಿತೆ" ಎಂಬ ವಿಷಯದಲ್ಲಿ ಸ್ಫೂರ್ತಿದಾಯಕವಾದ ಉಪನ್ಯಾಸವನ್ನು ಮಾಡಿದರು. ತರುವಾಯ ಸಭಿಕರಲ್ಲಿ ಶ್ರೀಯುತ ಮೊಗ್ಗೇರಿ ಪದ್ಮನಾಭ ಅಡಿಗ ವಿದ್ವಾನ್ ಇವರೇ ಮೊದಲಾದ ಕೆಲವರು ಭಾಷಣಗಳನ್ನು ಮಾಡಿದರು. ಅಧ್ಯಕ್ಷರ ಭಾಷಣವಾದಮೇಲೆ ಸಭೆಯು ಅಂತ್ಯವಾಯಿತು. ಬರುವ ೯ನೇ ಸಭೆಯು ತಾರೀಕು ೧೯—೧—೩೬ರಲ್ಲಿ ಜರಗುವುದು. ಶ್ರೀಯುತ ಪದ್ಮನಾಭ ಅಡಿಗ ವಿದ್ವಾನ್ ಇವರು ವೇದಾಂತ ತತ್ವಗಳು ಎಂಬ ವಿಚಾರದಲ್ಲಿ ಉಪನ್ಯಾಸವನ್ನು ಮಾಡುವರು. ಕರ್ನಾಟಕ ಭಾಷಾಭಿಮಾನಿಗಳೆಲ್ಲರಿಗೂ ಸ್ವಾಗತವಿದೆ.

ಸ್ತ್ರೀಪುರುಷರ ಪ್ರಿಯ ರಹಸ್ಯ (ಶರೀರ ಮರ್ಮಶಾಸ್ತ್ರ)

ಮಹನೀಯರುಗಳೇ, ಇದು ವರೆಗೆ ನೀವಂತಹ ಪುಸ್ತಕವನ್ನು ಓದಿರಲಾರಿರಿ? ಇದರಲ್ಲಿ—ಅನೇಕ ಜಾತಿಯ

ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಾಗುವ ಶುಕ್ಲನಷ್ಟವು, ಹೆಚ್ಚು ಸಂಭೋಗದಿಂದ ಉಂಟಾಗುವ ದೋಷಗಳು, ಗರ್ಭಶಿಷ್ಟಿ, ಗರ್ಭಾಭಿವೃದ್ಧಿ ರೂಪ, ಶಿಶು ಉತ್ಪತ್ತಿ ವಿಧ, ಗರ್ಭಾದಾನ, ಜನನೇಂದ್ರಿಯ ವರ್ಣನೆ, ಸಂತಾನ ನಿರೋಧವು, ಹಸ್ತಪ್ರಯೋಗದಿಂದುಂಟಾಗುವ ಹಾನಿಗಳು, ಅದಕ್ಕೆ ತಕ್ಕ ಚಿಕಿತ್ಸೆಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತ ರಹಸ್ಯಗಳನ್ನೆಲ್ಲಾ ೬೪ ಚಿತ್ರಪಟಗಳೊಡನೆ ೧೩೦ ಪುಟಗಳಲ್ಲಿ ವಿವರಿಸಿ ಬರೆದಿದೆ, ಇಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗೆ ಕನ್ನಡದಲ್ಲಿ ಪ್ರಕಟವಾಗಿಲ್ಲ. ಬೆಲೆ ರೂ. ೧. ಟ. ಖ. ಬೇರೆ.

ವಿಳಾಸ:—ಕರ್ನಾಟಕ ಏಜನ್ಸಿ, ಕೃಷ್ಣಪ್ಪ ನಾಯಕನ ಟೇಂಕ್ ಬೀದಿ, ಮದರಾಸು- ಬೇಗನೇ ಪುಸ್ತಕವನ್ನು ತರಿಸುವವರಿಗೆ ೧೯೩೬ನೇ ಇಸವಿ ಕ್ಯಾಲೆಂಡರು ಇನಾಂ.



HASAG

ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದ ದು [illegible] ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಷ್ಟು ವರ್ಷ ಹೋದರೂ [illegible] ಈಗಾಗಲೆ ಸಾವಿರ ಗಟ್ಟಲೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಿಂದ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR



ಎಫಾರ್

ಎಂಬುದು ಇನ್ನೊಂದು ಆಧುನಿಕ ದೀಪ ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ [illegible] ದ ಉಜ್ವಲ ಪ್ರಕಾಶವನ್ನು ಕೊಡುವುದರಿಂದ ಅಲ್ಲದೆ [illegible] ಕ್ರಯವು ಬಹಳ ಕಡಿಮೆ [illegible] ಬಹಳ [illegible] ರುವುದು.

Sole Representatives— F Racek & Co,

Bombay	Calcutta	Madras	Colombo
P O Box	P O Box	P O Box	P O Box
2006	2121	[illegible]	[illegible]89

ಬಹು ಕಾಲದಿಂದಲೂ ನಿರೀಕ್ಷಿಸಲ್ಪಟ್ಟ ಅತ್ಯಮೋಘ
ತೆಲುಗು ಮಾತಾಡುವ ಚಲಚ್ಚಿತ್ರ!

ಕೃಷ್ಣ ಲೀಲಾ

ನಗುವಿನ ಸುಗ್ಗಿ! ಮನಮುಗ್ಧಕರ ಅಭಿನಯ!
ರೋಮಾಂಚನಗೊಳಿಸುವ ದೃಶ್ಯಗಳು!
ಕರ್ಣಾನಂದಕರವಾದ ಗಾಯನ!

ಆಧುನಿಕ ಧೋರಣೆಗಳ ಉಪಾಸನೆಯು ಪ್ರತಿಯೊಂದೆಡೆ
ಯಲ್ಲಿಯೂ ಹೊರಹೊಮ್ಮಿ ಕಾಣುವುದು.

ಕಂಪನಿಯ ಶ್ರೇಷ್ಠ ನಟವರ್ಗವು ಇದರಲ್ಲಿ ಅಭಿನಯಿಸಿದ

ಮಿಸ್ ರಾಮತಿಲಕಮ್
ಮಿಸ್ ಶ್ರೀರಂಜನಿ
ಮಿ। ವೇಮೂರಿ ಗಗ್ಗಯ್ಯ
ಮಿ। ಪಾರಪಲ್ಲಿ ಸುಬ್ಬರಾವ್
ಮಿ। ಪಾರಪಲ್ಲಿ ಸತ್ಯನಾರಾಯಣ
ಮಾಸ್ಟರ್ ರಾಜೇಶ್ವರರಾವ್

ಕೊಯಮುತ್ತೂರು, ಸೇಲಂ, ನೀಲಗಿರಿ, ಮಲಬಾರು, ದಕ್ಷಿಣ ಕನ್ನಡ ಮತ್ತು ಕೊಚ್ಚಿ ಈ ಪ್ರಾಂತ್ಯಗಳಲ್ಲಿ ತಮ್ಮ ಚಿತ್ರಗಳ ಸಂಚಾಲನಾ ಅಧಿಕಾರವನ್ನು ಪಡೆದಿರುವರು

For Bookings Apply to:—

THE MANORAMA FILMS,
COIMBATORE

Telegrams Manorama Telephone 114

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA—AND—MANGALORE.

Now For Sale.

Poholatum (Balm) (German make) This is a home remedy for Rheumatism Asthma, Sciatica, Lumbago, Insect bites, Herpes Wounds Cuts, Colds Headache It is a complete substitute for the domestic medicine chest Try once this unequalled remedy In ½oz tin As 3/- In oz, jar As 12/-

Superior Red Balm For relieving pains in muscles and on skin. Directions for use with the bottle Price As. 12/- only

Wurmteufel Is a soveriegn remedy against all sorts of worms in stomach and in the intestines Physicians enjoying authoritativeness describe it as redical remedy and warmly recommend it All those who suffer from worms, children and adults, try this unique remedy and be treed from your ailment Price As 10 per packet.

Pocket Inhaler For coughs and hoarseness, headache catarrh, colds, use this inhaler and you will be relieved immediately. Price per inhaler As 6 – & As 8/-

Po-Ho Fluid For Asthma, colds, indigestion, toothache lumbago, a sure remedy in all cases Price As 6/- and Rc 1/- per phial

Cough Cure An infallible remedy for coughs of all kinds bronchitis, hoarseness. Particulars in bottle. Price As. 12/- for 8 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health. Price As. 1/3, 2/6, 3/-, 4,

Basel Mission Book Depot

Mangalore, Branches in Codialbail, Hubli, Calicut

೨೧ನೇಯ ಕರ್ನಾಟಕ ಸಾಹಿತ್ಯ ಸಮ್ಮೇಳನ.

ವಾರ್ಷಿಕ ಸಮಾರಂಭೋತ್ಸವ, ಮುಂಬಾಯಿ ೧೯೩೫.

ಅಧ್ಯಕ್ಷರಾದ ಶ್ರೀ। ಎನ್. ಎಸ್. ಸುಬ್ಬರಾಯರವರ ಭಾಷಣದ ಸಾರಾಂಶ.

ಭೌತಿಕ ವಿಜ್ಞಾನವು ದಿನೇ ದಿನೇ ಬೆಳೆಯುತ್ತಿದೆ. ಬಹು ಕಾಲದಿಂದ ದೇಶದೇಶಗಳ ನಡುವೆ ಉಂಟಾಗಿದ್ದ ಅಂತರವು ಯಂತ್ರಗಳ ಮಹಿಮೆಯಿಂದ ಕ್ಷಣ ಕ್ಷಣಕ್ಕೂ ಕಡಿಮೆಯಾಗುತ್ತಿದೆ. ಹೀಗೆ ಸಂಚಾರ ಸಂಸರ್ಗಗಳ ಅನುಕೂಲತೆಯು ಬೆಳೆದಂತೆ ಭೇದ ಭಿನ್ನತೆಗಳು ಅಳಿದು ವಿಶ್ವವೆಲ್ಲವೂ ಒಂದಾಗುತ್ತಿದೆ. ವಿಶ್ವಬಂಧುತ್ವದ ಆಕಾಂಕ್ಷೆಯು ಎಲ್ಲೆಲ್ಲಿಯೂ ಬೆಳೆಯುತ್ತಿದೆ. ಈ ಕಾಲದ ಮಹಿಮೆಯು ಹೀಗಿದೆ.

ಇದಕ್ಕೆದುರಾಗಿ ನಡೆಯುವವರು ಹಲಕೆಲವರು ಇದ್ದಾರೆಂಬುದು ನಿಜ. ಆದರೆ ಕಾಲಮಹಿಮೆಯನ್ನು ಗೆದ್ದವರು ಯಾರು? ಗೆಲ್ಲಬಲ್ಲವರಾದರೂ ಯಾರು? ಅದರ ಗತಿಯನ್ನಂತೂ ಅದರೊಡನೆ ಹೆಜ್ಜೆಯಿಟ್ಟು ಸಾಗಿದರೇನೇ ಪ್ರಗತಿ. ಹಾಗೆ ಮಾಡಬೇಕಾದರೆ ಹೊಸ ದೃಷ್ಟಿ ಬೇಕು. ವಿಶ್ವಕುಟುಂಬತ್ವವೇ ಕಾಲದೇವಿಯ ಕೂಗು. ಆಕೆಗೆ ಅಸಂಗವು ಕೂಡದು, ಪೃಥಕ್ತ್ವವು ಕೂಡದು. ತನ್ನ ಎಲ್ಲ ಮಕ್ಕಳೂ ತಾನಿತ್ತ ಸಮೃದ್ಧಿಯನ್ನು ಒಂದೇ ಬಾಂಧವ್ಯ ಪ್ರೇಮದಿಂದ ಹಂಚಿ ತಿನ್ನಬೇಕೆಂಬುದೇ ಆಕೆಯ ಉದ್ದೇಶ. ಹೀಗಿರುವಾಗ ಇಂದಿನ ವರೆಗೆ ನಡೆದು ಬಂದ ಆ ಉಜ್ವಲ ಭೇದಬುದ್ಧಿಗೆ ಇನ್ನು ಎಡೆಯಿಲ್ಲವೆಂದೇ ಹೇಳಬೇಕಲ್ಲವೆ? ಆರ್ಯ ಮ್ಲೇಚ್ಛ ಮುದಿ ಮೈಲಿಗೆ ಇವುಗಳ ಮಾತಿನ ನಂಬಿಕೆಯ ಸೂತ್ರವನ್ನವಲಂಬಿಸಿಕೊಂಡ ಜಾತಿಗಳಿಗೆ ಇನ್ನು ಮುಂದೆ ಯಾವ ಜಾಗೆಯೂ ದೊರಕದು.

ಕಾಲ ತನ್ನ ಕೆಲಸವನ್ನು ಮಾಡಿಬಿಟ್ಟಿದೆ. ಪ್ರೆಸ್ ತನ್ನದನ್ನು ಮಾಡಿಬಿಟ್ಟಿದೆ. ಹಾಗೆಯೇ ಮಾಡುತ್ತಲೂ ಇವೆ. ವಿದ್ಯಾವಿಚಾರಗಳು ಇವುಗಳ ಪ್ರಭಾವದಿಂದ ಗಾಳಿಯಂತೆ ಹರಡಿವೆ, ಹರಡುತ್ತಲೂ ಇವೆ. ಮತ್ತು ಅವು ಗಾಳಿಯಂತೆ ಜನಜೀವನದ ಉಸಿರೇ ಆಗಿಬಿಟ್ಟಿವೆ. ಹಾಗಾಗಿ ಜನತೆಯೆಲ್ಲ ಎಚ್ಚರಗೊಂಡಿದೆ, ಆತ್ಮಾಭಿಮಾನಿಯಾಗಿದೆ. ಆತ್ಮಾವಲಂಬಿಯಾಗುತ್ತಿದೆ. ಪ್ರಜಾಶಕ್ತಿಯ ಮಹಿಮೆಯು ಜನಸಾಮಾನ್ಯದಲ್ಲಿ ಮನೆಮಾಡಿ ಬೆಳೆಯುತ್ತಿದೆ. ಒಬ್ಬೊಬ್ಬ ಮನುಷ್ಯನೂ ತನ್ನ ಸ್ವತ್ವ, ತನ್ನ ಕರ್ತವ್ಯ, ತನ್ನ ಶಕ್ತಿಯನ್ನು ದಿನೇ ದಿನೇ ಹೆಚ್ಚು ಹೆಚ್ಚಾಗಿ ತಿಳಿಕೊಳ್ಳುತ್ತಿದ್ದಾನೆ. ತನ್ನ ಮತ ಮತಗಳ ಮಹತ್ವವು ರಾಜ್ಯಭಾರದಲ್ಲಿ ಎಷ್ಟರ ಮಟ್ಟಿಗೆ ಪ್ರಬಲವಾಗಿದೆ ಎಂಬುದು ಆತನಿಗೆ ತಿಳಿದು ಬಂದಿದೆ. ಶಕ್ತಿಸಂಪತ್ತಿಗಳ ಉತ್ಪಾದಕರೂ ತಾವೇ, ವಿನಿಯೋಜಕರೂ ತಾವೇ ಎಂಬ ಮನವರಿಕೆಯು ಜನಸಾಮಾನ್ಯಕ್ಕೆ ಆಗಿಬಿಟ್ಟಿದೆ.

ಪ್ರಜಾಮತವೇ ರಾಜ್ಯಯಂತ್ರಗಳ ಬುನಾದಿ, ಅದೇ ಅವರ ಬೆಂಬಲವೂ. ಅದು ತನ್ನ ಇಚ್ಛೆಯಂತೆ ರಾಜ್ಯಗಳನ್ನು ಬೆಳೆಸಲೂ ಬಲ್ಲದು, ಅಳಿಸಲೂ ಬಲ್ಲದು. ಸ್ಥಿತಿಯು ಹೀಗಿರುವಾಗ ಮತವನ್ನು ಕೊಡುವವರ ವಿಚಾರಗಳು ಶುದ್ಧವೇ ಆಗಿರಬೇಕಲ್ಲವೆ? ಅವುಗಳಲ್ಲಿ ಸಂಕುಚಿತ ದೇಶಾಭಿಮಾನ, ತಿಳಿವಿಲ್ಲದ ವರ್ಣಾಭಿಮಾನ ಮುಂತಾದ ಅಂಧ ಶ್ರದ್ಧಾಪರಂಪರೆಯು ಸೇರಿಕೊಂಡು ಬಿಟ್ಟರೆ, ಮತ್ತೆ ಆ ರಾಜ್ಯದ ಗತಿಯೇನು? ಅದಿಷ್ಟೇ, ಹೀನ ವೇಷಾವೇಷಗಳನ್ನು ಪೋಷಿಸುವ ಹಿಟ್ಲರ್ ಮುಸೊಲಿನಿಗಳೂ ಹುಟ್ಟಿದ್ದಾರೆ! ಜನಸಾಮಾನ್ಯದ ಚಿತ್ತವಿಕಾರಗಳಿಗೆ ಮಾತ್ರ ನೀರೆರೆದು ತಮ್ಮ ಬಲವನ್ನು ಸ್ಥಾಪಿಸುವವರೇ ಅಂಥಲ್ಲಿಯ ಅಧಿಪತಿಗಳು!

ಸಂಸ್ಕೃತಿಯೆಂದರೆ ನಮ್ಮನ್ನು ನಮ್ಮ ಕೆಲಸಗಳಿಂದ ಎಳೆದೊಯ್ಯುವ ಸಾಹಿತ್ಯದ ಬರೀ ಅಭ್ಯಾಸವಲ್ಲ. ಕಾಳೆ ಬೆಳ್ಳದರ ಬೆಲೆಯೇನು ನಮಗಿರುವ ಕೆಲಸವೇನು ಎಂಬುದನ್ನು ತಿಳಿಸಬಲ್ಲ ಜಗತ್ತಿನ ಆತ್ಮಾಭ್ಯುದಯ ವಿವೇಕದ ಹೃದಯವನ್ನು ಮೆಲ್ಲಮೆಲ್ಲಗೆ ಪ್ರವೇಶಿಸುವದೇ ಸಂಸ್ಕೃತಿ. ಸಾಹಿತ್ಯವೆಂದರೆ ಬರೀ ವಿನೋದಕ್ಕಾಗಿ, ವಿಲಾಸಕ್ಕಾಗಿ ನಿಜ ಪ್ರಪಂಚದಿಂದ ಮಾಡುವ ಪಲಾಯನವಲ್ಲ. ಸುತ್ತಮುತ್ತಲೂ ಇರುವ ಜಗತ್ತಿನೊಡನೆ ವ್ಯಕ್ತಿಗಾದ ಸಂಸ್ಪರ್ಶದಿಂದ ಸಹಜವಾಗಿ ಉಂಟಾದ ಪ್ರತಿಕಾರದ ಇಂಪು ಸೊಂಪಾದ ವೈಖರಿಯೇ ಸಾಹಿತ್ಯ" ಸಾಹಿತ್ಯಕ್ಕೆ ಸಾಮಾಜಿಕ ಕರ್ತವ್ಯವೂ ಇದೆಯೆಂಬುದು ಒಪ್ಪಿಕೊಂಡರೆ, ಹಾಗೂ ಒಂದು ಜನಾಂಗದ ಯೋಗ್ಯ ಸಾಹಿತ್ಯವನ್ನು ಬರೆದವರು ಕಲಾನಿಷ್ಠರು ಮಾತ್ರವೇ ಅಲ್ಲ, ಸ್ವಾತಂತ್ರ್ಯದಾಯಕ ಮಾರ್ಗದರ್ಶಕರೂ ಆಗಿದ್ದರು ಎಂದೊಪ್ಪಿಕೊಂಡರೆ, ಇನ್ನೂ ಕೆಲವು ವಿಚಾರಗಳು ತಾವೇ ಹೊರಡುತ್ತವೆ. ಸಾಹಿತಿಗಳೂ ಸಾಹಿತ್ಯವನ್ನು ಪ್ರಬಂಧಗಳೂ ಕಾಲಸಮಾಜಗಳು ಮುಂದುವರಿಯುವಂತೆ ತಾವೂ ಮುಂದೆ ಮುಂದೆ ಹೆಜ್ಜೆ ಹಾಕಬೇಕು. ಸಾಹಿತ್ಯದ ವಿಷಯಗಳನ್ನೆ ಶೈಲಿಗಳ ಸ್ವರೂಪವೂ ಬೆಳೆಯಬೇಕು. ಹಿಂದೊಮ್ಮೆ ಸಾಹಿತ್ಯವೆಂದರೆ ಹಾಡುಗಳು ಎಂಬರ್ಥವಿತ್ತು. ಅಂದಿನ ಕವಿಗಳು ರಾಜರ ವೈಭವವನ್ನು ಹೊಗಳುವರು, ಯೋಧರ ಪರಾಕ್ರಮವನ್ನು ಸ್ತುತಿಸುವರು.

ಸಾಹಿತ್ಯವು ಹಿಂದಿನ ಸಂಕುಚಿತ ಭೂಮಿಯನ್ನಗಲಿ ವಿಶಾಲ ವಿಶ್ವದ ವಸ್ತುಪ್ರಮೇಯಗಳನ್ನು ಮುಟ್ಟಬೇಕಾದ ಪಕ್ಷಕ್ಕೆ, ಭಾಷೆಯೂ ಹಾಗೆಯೇ ವಿಶಾಲವಾಗಬೇಕಲ್ಲವೆ? ಭಾಷೆಯು ಸಾರ್ವಜನಿಕ ವ್ಯವಹಾರವನ್ನು ಕೈಕೊಂಡು ಕೊನೆಗಾಣಿಸಬೇಕೆಂದ ಪಕ್ಷಕ್ಕೆ, ಅದು ಹೊಸ ವಿಚಾರಗಳನ್ನೂ, ಹೊಸ ಹೊಸ ಆದರ್ಶಗಳನ್ನೂ ಅರಗಿಸಿ ಬೆಳಗಿಸಬೇಕಲ್ಲವೆ? ಸಾರಾಂಶ ಭಾಷೆಯು ಜನಾ ಜೀವನಾನುವರ್ತಿಯಾಗಬೇಕು. ಸ್ವತಂತ್ರವಾಗಲೂ ಬೇಕು.

ಹೀಗಿರುವಾಗ ಒಂದು ಜನಾಂಗ ಅಥವಾ ಒಂದು ಭಾಷೆಯ ಸಾಹಿತ್ಯವು ಆಗಾಗ್ಗೆ ಮಾರ್ಪಡುತ್ತಿರುವ ಜನಜೀವನದ ಸ್ಫೂರ್ತಿಯೂ ಪ್ರತಿಬಿಂಬವೂ ಆಗಿರಬೇಕಾದರೆ ಭಾಷೆಯು ಕಲಾವಿದರಿಗೂ ಶಿಕ್ಷಕರಿಗೂ ಅನುಕೂಲವಾಗಿರಬೇಕಾದರೆ, ಆ ಭಾಷೆಯೂ ಆತನೂ ಸಚೇತನರಾಗಿ ಬದುಕಿ ಬೆಳೆಯುವವರಾಗಿರಬೇಕು. ಅಲ್ಲದೆ ಹಳೇ ವಸ್ತು, ಹಳೇ ಶೈಲಿ, ಹಳೇ ಮನೋಭಾವನೆಗಳಿಗೆ ಗುಲಾಮರಾಗಿರಕೂಡದು.

ಸಂಸ್ಕೃತದೊಡನೆ ನಮ್ಮ ಕನ್ನಡ ಭಾಷೆಯು ಮಾಡಿಕೊಂಡ ವಿವಾಹದ ಫಲವಾಗಿ ಒಂದು ಪುರಾತನ ಪ್ರಸಿದ್ಧ ಸಾಹಿತ್ಯ ವಂಶಾವಳಿಯು ನಮ್ಮಲ್ಲಿ ಹುಟ್ಟಿತು. ಆದರೆ ಬರಬರುತ್ತ ಈ ವಂಶಕ್ಕೆ ಬಡಬಂಧುಗಳ ಅವಸ್ಥೆಯು ಉಂಟಾಯಿತು. ನಮ್ಮ ಪುರಾತನ ಸಾಹಿತಿಗಳನೇಕರಿಗೆ ತಮ್ಮ ವಾಚಕರ ಪರಿವೆಯೇ ಇದ್ದಂತೆ ತೋರುವುದಿಲ್ಲ.

ಈ ಕಾಲದ ಸಾಹಿತ್ಯ ಪ್ರಪಂಚದಲ್ಲಿ ಗದ್ಯಪದ್ಯಗಳೂ ಹೊಸ ರೂಪ ತಾಳಿದ್ದನ್ನು ನೋಡಬಹುದು. ಹಳೆಯ ಸಾಹಿತ್ಯವನ್ನು ಜಾಗ್ರತೆಯಾಗಿ ಮನನಮಾಡಿ ಓದುವವರೇನೂ ಒಂದು ಕಡೆ ಇದ್ದೇ ಇದೆ. ಆದರೂ ಅದೊಂದರ ರೂಪರಚನೆಗೇ ಗಂಟುಬೀಳದೆ ಹಿಂದಿನ ಶತಮಾನಗಳ ಸಂಪ್ರದಾಯ ಶೃಂಖಲೆಗಳನ್ನು ಮುರಿದು ಬಿಸುಟುವ ಪ್ರಯತ್ನವು ಕಂಡುಬರುತ್ತಿದೆ. ಕಳೆದ ೩೦ ವರ್ಷ ಸುಮಾರಿನ ಸಾಹಿತ್ಯದಲ್ಲಿ ಈ ಸ್ವಾತಂತ್ರ್ಯಪ್ರೇಮವು ಕಂಡು ಬರುತ್ತಿದೆ. ಸಾಹಿತ್ಯ ರಾಜ್ಯದಲ್ಲಿ ನೂತನ ಮಾರ್ಗಗಳಾಗುತ್ತಿವೆ. ಅದರಲ್ಲೀಗ ಗೀತೆಗಳಿವೆ, ಪ್ರಾಸಾನುಪ್ರಾಸ ರೂಪ ಕವಿತೆಗಳಿವೆ, ಗದ್ಯನಾಟಕಗಳಿವೆ, ಸಣ್ಣಕತೆಗಳಿವೆ, ಜೀವನ ಚರಿತ್ರೆಗಳಿವೆ. ದಿನೇ ದಿನೇ ಇನ್ನು ಇನ್ನು ಬೆಳೆಯುತ್ತಿರುವ ಇವನ್ನೆಲ್ಲಾ ನೋಡಿದರೆ ಸಾಹಿತ್ಯವೆಂದರೆ ಪದ್ಯ ಮಾತ್ರವೇ ಅಲ್ಲ, ಗದ್ಯವೂ ಎಂಬುದು ಯಾರಿಗೆ ತಾನೇ ತಿಳಿಯದೆ ಹೋದೀತು. ಅಷ್ಟೇ ಅಲ್ಲ, ಇವೆಲ್ಲವುಗಳ ವೃದ್ಧಿಯನ್ನು ನೋಡಿದರೆ ಸಾಹಿತಿಗಳಿಗೆ ಕಾಲಮಹಿಮೆಯ ಸ್ಪಂದನ ಸಂಸ್ಪರ್ಶವೂ ಆಗಿದೆ, ಆಗುತ್ತಲಿದೆ ಎಂಬುದು ಸ್ಪಷ್ಟವಾಗುತ್ತದೆ.

ಮೊದಲು ನಮ್ಮ ವ್ಯವಹಾರದಲ್ಲಿ ಕನ್ನಡ ಭಾಷೆಯನ್ನೇ ಹೆಚ್ಚಾಗಿ ಉಪಯೋಗಿಸಲಾರಂಭಿಸಬೇಕು. ನಮ್ಮ ಸರಕಾರಿ ವ್ಯವಹಾರ, ಧಾರ್ಮಿಕ ವಿಚಾರ ವ್ಯಾಪಾರ ಸಾರ್ವಜನಿಕ ವಿಚಾರಗಳಲ್ಲಿ ಮಾತ್ರವಲ್ಲದೆ ವಿದ್ಯಾಭ್ಯಾಸ ಪದ್ಧತಿಯಲ್ಲಿಯೂ ಕನ್ನಡವನ್ನೇ ಹೆಚ್ಚಾಗಿ ಬಳಕೆಗೆ ತರಬೇಕು. ಈ ಸೂಚನೆಯನ್ನು ಸಮರ್ಥಿಸಲು ಹೆಚ್ಚು ವಾದವಿವಾದಗಳು ಬೇಕಾಗಿಲ್ಲ. ಯಾಕೆಂದರೆ ಮಾತೃಭಾಷೆಯು ವ್ಯಕ್ತಿತ್ವದ ಒಂದು ಅಂಗವೇ ಆಗಿದೆ. ಮಾತಾಡುವಾಗ ಎಲ್ಲಿ ಆದರೂ ವ್ಯಾಕರಣದೋಷವಾದೀತು ಉಚ್ಚಾರಣೆ ತಪ್ಪೀತು ಎಂಬ ಕಳವಳವನ್ನು ಮನಸ್ಸಿನಲ್ಲಿ ಹುಟ್ಟಿಸುವ ಎರಡನೆಯ ಭಾಷೆಯಲ್ಲಿ ಮಾತಾಡುವುದಕ್ಕಿಂತಲೂ ಮಾತೃಭಾಷೆಯಲ್ಲಿ ಮಾತಾಡುವಾಗ ಒಂದು ಬಗೆಯ ಉಲ್ಲಾಸವೂ ಸಲಿಗೆಯೂ ಕಂಡುಬರುವುದು. ಜನಸಾಮಾನ್ಯದ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸಲು ವಿದ್ಯಾರ್ಥಿಗಳ ದೃಷ್ಟಿಯಿಂದ ಕೂಡ ಮಾತೃಭಾಷಾ ಪ್ರಯೋಗವೇ ಸರಿಯೆಂತಲೂ ಪರಿಣಾಮಕರವಾದ್ದೆಂತಲೂ ಕಂಡುಬರುವುದು.

೧೯೩೩ನೆಯ ಸಾಲಿನಲ್ಲಿ ಬೊಂಬಾಯಿ ವಿಶ್ವವಿದ್ಯಾಲಯದ ಎರಡನೆಯ ಪದವೀಪ್ರದಾನ ಮಹೋತ್ಸವದ ಕಾಲದಲ್ಲಿ ಆ ವರ್ಷ ಪದವೀಧರರಾದವರಿಗೆ ಸರ್ [illegible] ಪ್ರೈಸ್ ಎಂಬವರು ಹೀಗೆ ಉಪದೇಶ ಮಾಡಿದರು.

"ನೀವು ಈ ವಿಶ್ವವಿದ್ಯಾಲಯದಿಂದ ಪಡೆದ ಜ್ಞಾನದಿಂದ ನಿಮ್ಮ ದೇಶೀಯ ಭಾಷೆಯನ್ನು ಪುಷ್ಟಿಗೊಳಿಸುವದೇ ಯಾವಾಗಲೂ ನಿಮ್ಮ ಮುಖ್ಯ ಗುರಿಯಾಗಿರಬೇಕು. ಇಲ್ಲಿ ನೀವು ಪಡೆದ ಶಿಕ್ಷಣವು ಪವಿತ್ರ ನಿಧಿ, ಮತ್ತು ನಿಮ್ಮ ದೇಶಬಂಧುಗಳ ಹಿತಕ್ಕೇ ಉಪಯೋಗಿಸಲು ಅದನ್ನು ನಿಮ್ಮ ವಶಕ್ಕೆ ಒಪ್ಪಿಸಲಾಗಿದೆ ಎಂಬುದನ್ನು ನೀವು ಮರೆಯಕೂಡದು. ನೀವು ನೂರು ಜನರಿಗೆ ಅಥವಾ ಕೇವಲ ಸಾವಿರ ಜನರಿಗೆ ಇಲ್ಲಿ ದೊರೆಯಬಹುದಾದ ಪಾಂಡಿತ್ಯವನ್ನು ನೀವು ಹಿಂದುಸ್ಥಾನದ ಕೋಟಿಗಟ್ಟಲೆ ಜನರಿಗೆ ದೇಶಭಾಷೆಯ ಮೂಲಕ ಕಲಿಸಬೇಕು. ನಿಮ್ಮ ದೇಶದಲ್ಲಿ ಅನೇಕರು ಮಾತೃಭಾಷೆಯ ಮೂಲಕ ಮಾತ್ರವೇ ಶಿಕ್ಷಣ ಹೊಂದಬಲ್ಲರು. ಆದ್ದರಿಂದ ಯುರೋಪಿಯನ ವಿದ್ಯೆ ಮತ್ತು ವಿಜ್ಞಾನವನ್ನು ನೀವು ಅವರಿಗೆ ಆ ಭಾಷೆಯ ಮೂಲಕವೇ ಕಲಿಸಬೇಕು."

ವಿದ್ಯಾಭ್ಯಾಸ ಪದ್ಧತಿಯ ಸುಧಾರಣೆಯನ್ನು ಕುರಿತು ಮಾತನಾಡುವದು ಇಲ್ಲಿ ನನ್ನ ಉದ್ದೇಶವಲ್ಲ. ಆದರೆ ನಮ್ಮ ಭಾಷೆ ಮತ್ತು ಸಾಹಿತ್ಯ ವಿಚಾರಗಳು ವಿಶಾಲವಾಗಿ ಹರಡಿ ಹಂಚಿದ ಹಂದರವಾಗಬೇಕಾದರೆ ಅದಕ್ಕೆ ಕಾರ್ಯಗತ ಸ್ವಭಾವದ ಪ್ರಚಾರ ಶಾಖೆಯ ಅವಶ್ಯಕತೆಯಿದೆ. ನಮ್ಮ ಕಾರ್ಯದಿಂದ ದೊರೆತ ಫಲವನ್ನು ನಾವು ಹಳ್ಳಿಗಳಲ್ಲಿ ವಾಸಿಸುವ ನಮ್ಮ ಬಂಧುಗಳೊಂದಿಗೆ ಸೇರಿ ಸವಿಯಬೇಕು. ನಮ್ಮ ಹೊಸ ಕಾವ್ಯ, ಗದ್ಯದ ಹೊಸ ಶೈಲಿ, ಇಂಗ್ಲಿಷಿನಿಂದ ಪಡೆದ ನಮ್ಮ ಹೊಸ ಜ್ಞಾನ, ಸಂಸ್ಕೃತದಿಂದ ಪಡೆದ ಪ್ರಾಚೀನ ಪ್ರಜ್ಞೆ—ಇವುಗಳನ್ನು ಹಳ್ಳಿಗಳಲ್ಲಿ ಸಾರಬೇಕು. ಈ ಕೆಲಸಕ್ಕೆ ನಾವು ಹೊಸ ಮಾರ್ಗ, ಹಳೇ ಮಾರ್ಗ ಎಂಬ ಭೇದವೆನಿಸದೆ ಎಲ್ಲ ಮಾರ್ಗಗಳನ್ನೂ ಅನುಸರಿಸಬೇಕು. ಒಂದು ಕಡೆ ಹೊಸ ಶೈಲಿಯಲ್ಲಿ ಹರಿಕೀರ್ತನೆ ನಡೆಸೋಣ. ರಾಮಮಂದಿರಗಳನ್ನೆ [illegible] ಸಂಸ್ಕೃತಿ ಪ್ರಚಾರದ ಕೇಂದ್ರಸ್ಥಾನಗಳಾಗಿ ಮಾಡಿಕೊಳ್ಳೋಣ, ಅಲ್ಲಿ ಹಳ್ಳಿಗರಿಗಾಗಿ ರಾಮಾಯಣ ಭಾರತ ಪಠಣಗಳನ್ನೂ ಅರ್ಥ [illegible] ಗದ್ಯ ಪದ್ಯ ವಾಚನಗಳನ್ನೂ ಮಾಡಿಸೋಣ. ಮತ್ತೊಂದೆಡೆಯಲ್ಲಿ ನಾಟಕ ಮಂದಿರ ಅಥವಾ ಉಪನ್ಯಾಸ ಮಂದಿರದ ಪ್ರೇಕ್ಷಕ ವರ್ಗಕ್ಕಿಂತಲೂ ಹೆಚ್ಚಾಗಿರುವ ಸಾಮಾನ್ಯ ಜನರ ಕಣ್ಣು ಕಿವಿಗಳಿಗೆ ಹಬ್ಬವನ್ನುಂಟುಮಾಡುವಂಥ ಟಾಕಿ ಮತ್ತು ರೇಡಿಯೋಗಳ ಮೂಲಕವೂ ಜ್ಞಾನಪ್ರಸಾರ ಮಾಡೋಣ. ಹಳ್ಳಿಯ ಜನರೊಂದಿಗೆ ನಾವು ಕೆಲಸ ಮಾಡಲು [illegible] ಬೇಕಾದರೆ ಬೇಕಾದಷ್ಟು [illegible] ಅಧಿಕ [illegible] ಭಾಗಗಳಲ್ಲಿ ಸಂಸ್ಕೃತಿ ಪ್ರಚಾರ ಸಪ್ತಾಹಗಳ ಕೂಟಗಳನ್ನು ಸೇರಿಸುತ್ತಿರಬೇಕು. ಆ ಸಮಯದಲ್ಲಿ ಸಾಹಿತ್ಯ ವಿಜ್ಞಾನ ಸಮಾಜ [illegible] ವಿಚಾರವಾಗಿ ಭಾಷಣಗಳೂ [illegible] ಜನರ ಮನಸ್ಸನ್ನಾಕರ್ಷಿಸುವ ಇತರ ಕಾರ್ಯಗಳೂ ನಡೆಯಬೇಕು.

ಈ ಸಂದರ್ಭದಲ್ಲಿ ನಾನು ಇನ್ನೊಂದು ಸಾಧ್ಯವಾಗಬಹುದಾದ ಕಾರ್ಯಕ್ರಮವನ್ನು ಸೂಚಿಸುವೆನು. ಇಂಗ್ಲೆಂಡಿನಲ್ಲಿ ಯೂನಿವರ್ಸಿಟಿ ಸೆಟ್ಲ್‌ಮೆಂಟ್ಸ್ ಎಂಬ ಸಂಸ್ಥೆಗಳಿವೆ. ಕೇಂಬ್ರಿಜ್ ವಿಶ್ವವಿದ್ಯಾಲಯವೂ ಅದರ ಆಶ್ರಯದಲ್ಲಿರುವ ಹಲವು ಕೊಲೆಜುಗಳೂ ಲಂಡನ್ ಮತ್ತು ಲಿವರ್‌ಪೂಲ್ ಎಂಥಾ ಶಹರುಗಳಲ್ಲಿ ಬಡಜನರ ವಸತಿಗಳ ಮಧ್ಯೆ ಮನೆಸ್ಥಾನಗಳನ್ನು ಕಾಯಮ್ಮಾಗಿ ಸ್ಥಾಪಿಸಿಕೊಂಡಿವೆ. ಅಲ್ಲಿ ಆ ವಿದ್ಯಾಲಯಗಳ ಅಧಿಕಾರಿಗಳೂ ಪದವೀಧರರೂ [illegible] ಅಲ್ಲಿಯೆ ವಾಸಿಸಿ ತಮ್ಮ ನೆರೆಹೊರೆಯವರಿಗೆ ಅನೇಕ ಪ್ರಮೋದಗಳಿಂದ ಶಿಕ್ಷಣ ಕೊಡುತ್ತಿರುವರು. ನಮ್ಮ ದೇಶದಲ್ಲಿಯೂ ಅಂಥಾ ಕೆಲಸವು ಆಗಬೇಕಾಗಿದೆ. ಆದರೆ ನಮ್ಮ ಲಕ್ಷ್ಯವು ಈಗ ಹಳ್ಳಿಗಳ ಕಡೆ ತಿರುಗುವದು ಅಗತ್ಯವಾಗಿದೆ. ಅದಕ್ಕಾಗಿ ತರಬೇತಾದ ಕೆಲಸಗಾರರ ಅಧೀನದಲ್ಲಿ "ಗ್ರಾಮದಸೆಟಲ್‌ಮೆಂಟು"ಗಳನ್ನು ಸ್ಥಾಪಿಸಿ ಅವುಗಳ ಮೂಲಕ ನಮ್ಮ ಕಾಲೇಜಿನ ತರುಣರು ಹಳ್ಳಿಗಳಿಗೆ ಹೋಗಿ ಹಳ್ಳಿಗರ ಹಿತ ಮತ್ತು ಬೋಧನೆಗಾಗಿ ಕೆಲಸಮಾಡುವಂತಾಗಬೇಕು. ಈ ಕಾರ್ಯಕ್ಷೇತ್ರವು ಬಹು ವಿಶಾಲವಾಗಿದೆ. ಇಲ್ಲಿ ವಿಶ್ವವಿದ್ಯಾಲಯಗಳೂ ವಿದ್ಯಾಭ್ಯಾಸ ಇಲಾಖೆ ಆರೋಗ್ಯ ಖಾತೆ ಇವೇ ಮೊದಲಾದ ಸರಕಾರಿ ಸಂಸ್ಥೆಗಳೂ ಪರಿಷತ್ತು ಮತ್ತು ಕರ್ನಾಟಕ ಸಂಘಗಳಂಥಾ ಭಾಷೆ ಮತ್ತು ಸಂಸ್ಕೃತಿಗಾಗಿ ದುಡಿಯುವ ಸಂಸ್ಥೆಗಳೂ ಒಟ್ಟಾಗಿ ಸಹಕರಿಸಿ ತ್ರಿವೇಣಿ ಸಂಗಮವಾಗಿ ವಿಶಾಲವಾಗಿ ಗ್ರಾಮ ಪುನರ್ಘಟನಾ ಕಾರ್ಯವನ್ನು ಕೈಕೊಳ್ಳಬಹುದಾಗಿದೆ.

ಇಂಗ್ಲೀಷ ಭಾಷೆಯು ತನ್ನದೇ ಆದ ಸಾಹಿತ್ಯ ನಿಧಿಯನ್ನು ನಮಗೆ ಕೊಡುವುದಲ್ಲದೆ, ಫ್ರೆಂಚ್ ಜರ್ಮನ್ ರಷ್ಯನ್ ಗ್ರೀಕ್ ಲೆಟಿನ್ ಮೊದಲಾದ ಇತರ ಯುರೋಪ್ಯ ಭಾಷೆಗಳ ಭಾಂಡಾರಗಳನ್ನೂ ನಮ್ಮೆದುರಿಗೆ ತೆರೆದಿಡುತ್ತದೆ. ಆದ್ದರಿಂದ ನಮ್ಮ ಸಾಂಸ್ಕೃತಿಕ ಜೀವನವು ಅರ್ಥಪೂರ್ಣವಾಗಿ ಉಳಿಯಬೇಕಾದರೆ ನಮ್ಮ ಶಾಲೆ ಕೊಲೇಜುಗಳಲ್ಲಿ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳಿಗೆ ಪ್ರಮುಖ ಸ್ಥಾನವನ್ನು ಕೊಡಬೇಕು. ಕನಿಷ್ಟಪಕ್ಷದಲ್ಲಿ ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯಗಳ ಪರಿಚಯವನ್ನು ಚೆನ್ನಾಗಿ ಪಡೆದ ಸ್ತ್ರೀಪುರುಷರ ಕಂತವು ಬೆಳೆದು ನಮ್ಮ ಸ್ವಂತ ಸಾಹಿತ್ಯ ಸಂಸ್ಕೃತಿ ರಂಗಗಳನ್ನು ವಿಶಾಲಗೊಳಿಸುವದು ಅವಶ್ಯವಲ್ಲವೇ?

ಕನ್ನಡಿಗರಲ್ಲೊಂದು ಮನವಿ.

ವಿದ್ಯೆಯನ್ನು ಕಲಿಸಬೇಕೆಂಬ ಒಲವಿಕೆಯು ಹಲವರಲ್ಲಿದ್ದರೂ ಪ್ರಸ್ತುತ ಹಣದ ಅಭಾವವು ಬಹಳೇ ಇದ್ದುದರಿಂದ ಬಡವರಿಗೆ ಅದನ್ನು ಸಂಪಾದಿಸುವ ಹಾದಿಯಾವದೂ ಆದಾವದು? ಬೊಂಬಾಯಿಯಲ್ಲಿ ಹೆಚ್ಚಾಗಿ ಬಡವರು ಈ ಅವಸ್ಥೆಗೆ ಗುರಿಯಾಗಿದ್ದರು. ಹುಟ್ಟಿದ ಮಾನವನಿಗೆ ವಿದ್ಯಾಭ್ಯಾಸವು ಬೇಕೆಂಬುದು ದಿಟವಾದ ಮಾತಾದರೂ ಹೊಟ್ಟೆಗಿಲ್ಲದವನು ಅದನ್ನು ಸಂಪಾದಿಸಬಲ್ಲನೆ?

ಇದನ್ನೆಲ್ಲವನ್ನು ಅರಿತ ಮಹನೀಯರಲ್ಲಿ ಕೆಲವರು ಬೊಂಬಾಯಿಯಲ್ಲಿ ರಾತ್ರಿ ಶಾಲೆಯ ಏರ್ಪಾಡನ್ನು ಮಾಡಿರುವರು. ಇದಕ್ಕೆಲ್ಲಾ ಮನೋಬಲಕರು ಶ್ರೀ ವಿ. ಎಸ್. ಶಿಬ್ರೂರಕರ ರವರು. ಸ್ಥಳೀಯ ಮುನಿಸಿಪಾಲಿಟಿಯವರು ಅದನ್ನು ಮಟ್ಟಿಗೆ ಸಹಾಯಮಾಡುತ್ತಿದ್ದಾರೆ ಎಂದು ಹೇಳಲು ಬಹಳಾ ಸಂತೋಷ. ಈಗಾಗಲೇ ಶಾಲೆಯಲ್ಲಿ ೩೦ ಹುಡುಗರೂ ಹಲವು ಹುಡುಗಿಯರೂ ಭರ್ತಿಮಾಡಲ್ಪಟ್ಟಿದ್ದಾರೆ.

ಈಗ ಸಾಕಷ್ಟು ಮಟ್ಟಿಗೆ ಧನಸಹಾಯವು ಇಲ್ಲದೇ ಇರುವುದರಿಂದ ಬಹಳ ಪೇಚಾಟಕ್ಕೆ ಒಳಬೇಕಾಗಿದೆ, ಸರಿಯಾದ ದೀಪಗಳಿಲ್ಲ. ಶಾಲೆಕ್ಕೆ ಬೇಕಾದ ಸೌಕರ್ಯಗಳಿಲ್ಲ. ಆದುದರಿಂದ ಕರ್ನಾಟಕ ಮಹನೀಯರೆಲ್ಲರೂ ಉದಾರ ಮನಸ್ಸಿನಿಂದ ಧನಸಹಾಯವಿತ್ತು ಈ ಸಂಸ್ಥೆಯ ಅಭಿವೃದ್ಧಿಯನ್ನು ಕೋರಬೇಕಾಗಿ ವಿನಂತಿ.

ವಿ. ಎಸ್. ಎಸ್.

ದಿ ಕೆನರಾ ಸ್ಟುಡೆಂಟ್ಸ್ ಯೂನಿಯನ್, ಮುಂಬಾಯಿ.

ದಕ್ಷಿಣ ಕನ್ನಡದಲ್ಲಿ ಪ್ರಖ್ಯಾತರೂ ಮತ್ತು ಇದೀಗಲೇ ಮುಂಬಯಿಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಿತ್ತೈಸಿದವರೂ ಆದ ಶ್ರೀ ಪಿ. ಮಂಗೇಶರಾವ್, ಎಂ. ಎ. ಎಲ್. ಟಿ., ಇವರಿಗೆ ಮುಂಬಯಿಯಲ್ಲಿ ತಾ. [illegible]ರಲ್ಲಿ ಈ ಮೇಲಿನ ಯೂನಿಯನ್‌ನವರ ಆಮಂತ್ರಣವಿತ್ತು ಒಂದು ಸಭೆ ಕೂಡಿಸಿದ್ದರು. ಅಂದು [illegible] ದಿ ಸೋಜ ಎಂ. ಎ. ಇವರು ಅಧ್ಯಕ್ಷರಾಗಿದ್ದರು.

ಪೂಜ್ಯರು [illegible] ವಿದ್ಯಾರ್ಥಿಗಳ ಆಮಂತ್ರಣವನ್ನು ಸ್ವೀಕರಿಸಿ [illegible] ಒಂದು [illegible] ವಿಷಯಗಳನ್ನು ಕೂಡಿದ [illegible] ಕರ ಮನೋರಂಜನವನ್ನು ಮಾಡಿದರು. ಮಾತ್ರವಲ್ಲದೆ ಉಪಾಧ್ಯಾಯನಾದವನು ಮಕ್ಕಳಿಗೆ ಯಾವ ರೀತಿಯಲ್ಲಿ ಶಿಕ್ಷಣವನ್ನು ಕೊಡಬೇಕು, ಮಕ್ಕಳಾದರೂ ಇದನ್ನು ಯಾವ ರೀತಿಯಲ್ಲಿ ಅಭ್ಯಾಸಮಾಡಬೇಕು ಮಾತ್ರವಲ್ಲದೆ ಕವಿತೆ ಮುಂತಾದವುಗಳನ್ನು ಸುಲಭವಾಗಿಯೂ ಉತ್ತಮ ಶೈಲಿಯಲ್ಲಿ ರಚಿಸಬೇಕೆಂದು ಹೀಗೆ ಹಲವು ವಿಷಯಗಳನ್ನು ತಿಳಿಯಹೇಳಿದರು.

ಅಂದು ಕೂಡಿದ ಮಹನೀಯರಲ್ಲಿ ಕೆಲವರು ತಮ್ಮ ಅಮೂಲ್ಯ ಭಾಷಣವಿತ್ತರು. ನಂತರ ಫಲಾಹಾರವಾಗಿ ಅಂದಿನ ಸಭೆಯು ಕೊನೆಗೊಂಡದ್ದಲ್ಲದೆ ಒಂದು ಭಾವಚಿತ್ರವೂ ತೆಗೆಯಲಾಯಿತು.

ದಿ ಕೆನರಾ ಪರಸ್ಪರ ಸಹಾಯಕ ಫಂಡು, ಮುಂಬಾಯಿ.

ಈ ಮೇಲಿನ ಸಂಘದವರು ತಮ್ಮ ಪ್ರಥಮ ವಾರ್ಷಿಕೋತ್ಸವವನ್ನು ಇದೇ ಜನವರಿ ತಾ ೫ರಲ್ಲಿ ಕೋಟೆಯೊಳಗಿನ ಮೋದಿ ಬಜಾರ್ ರಸ್ತೆಯಲ್ಲಿರುವ ಜಹಾಂಗೀರ್ ಬಿಲ್ಡಿಂಗಿನಲ್ಲಿ ಶ್ರೀ ಬಿ. ವಾಮನರಾಯರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಅಂದು ಅನೇಕ ಮಹಾಶಯರು ನೆರೆದಿದ್ದರಲ್ಲದೆ ಸಭಿಕರ ಪೈಕಿ ಹಲವರು ಸಂಘದ ಏಳ್ಗೆಯ ಕುರಿತು ಬಲೋ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟರು. ಮಾನ್ಯ ಅಧ್ಯಕ್ಷರು ಸಂಘದ ಅಭಿವೃದ್ಧಿಯ ಕುರಿತು ಯೋಗ್ಯ ಸೂಚನೆಗಳನ್ನು ಉಪದೇಶಿಸುವವರಾದರು. ಈ ಸಂದರ್ಭದಲ್ಲಿ ಕನ್ನಡ ಸಂಗೀತ ಸಭೆಯವರು ಆಗಾಗ್ಗೆ ತಮ್ಮ ಸುರಸವಾದ ಗಾಯನಗಳಿಂದ ಸಭಿಕರನ್ನು ಆನಂದಪಡಿಸಿದರು. ಸಂಘದ ಪರವಾಗಿ ಕಾರ್ಯದರ್ಶಿಯವರು ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನಿತ್ತ ಮೇಲೆ ಸಭೆಯು ತಾಂಬೂಲ ಫಲಾಹಾರಾದಿಗಳಿಂದ ಸತ್ಕರಿಸಲ್ಪಟ್ಟು ಮುಕ್ತಾಯವಾಯಿತು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ–(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ ಕಟಪಾಡಿ ದ. ಕನ್ನಡ



Distributors for South Kanara —

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು—ಕಾಮತ್ಸ್ ಸ್ವದೇಶೀ ಎಂಪೋರಿಯಂ

1936

ಇಸವಿಯ

ಶಾರದಾ ಡೈರಿಗಳು

ತಯಾರಾಗಿವೆ!

ಶಾರದಾ ಛಾಪಖಾನೆಗೆ

ಬರೆ[illegible]

[illegible]

ದಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.			
				ಎರಡನೇ ದರ್ಜೆ	0	8	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	8	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು.
ಹೇನು ಸತ್ತು ಕಾಗೆ ಬಡವಾಯಿತು
ಮೊಲಸಿನ ಕಾಳಪ್ಪ
ಅಗಸನ ಮುದ್ದು
ಇಲಿಗಳ ಧರ್ಮ ಪ್ಪೆ
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ.
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ತಯಾರಾಗಿದೆ!

[illegible]

ಸಮಾಜಶಾಸ್ತ್ರ

ಅಥವಾ

ಸೊಸಿಯೊಲೊಜಿ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಇದನ್ನು ಹೊಸ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕಾಗದ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ
ಮಂಗಳೂರು.

ರೈಲುಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ	ತಲುಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸಡ್	,, 6 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ 12 45	ಮ. 2 40
ಶಟಲ್	ಸಂಜೆ 5 26	ಬೆಳಗ್ಗೆ 9-25
ಕಾಞ್ಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 8 20	ಸಂಜೆ 6 15

ಶಿಕ್ಷಿತ ತರುಣರ ಕರ್ತವ್ಯವೇನು?

(ಲೇಖಕರು—ಶ್ರೀ ಕೇಶವ ಕುದ್ವ, ಅಧ್ಯಾಪಕ ಉಡುಪಿ.)

ಭಾರತೀಯರ ಇಂದಿನ ಸ್ಥಿತಿಯೇನು? ಶಿಕ್ಷಿತರ ಸಂಖ್ಯೆಯು ಹೆಚ್ಚಾಗಿ ಉದ್ಯೋಗಗಳು ಕಡಿಮೆಯಾದ ಪ್ರಯುಕ್ತ ಆ ಪ್ರೌಢ ವಿದ್ಯಾರ್ಥಿಗಳು ಏನೊಂದೂ ಉದ್ಯೋಗವಿಲ್ಲದೆ ದಾರಿಯಲ್ಲಿ ಅಲೆದಾಡುವಂತಾಗಿದೆ ಆದರೂ ಕೂಡ ಇಂದಿಗೂ ವರ್ಷಕ್ಕೆ ಲಕ್ಷಗಟ್ಟಲೆ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣವನ್ನು ಗಳಿಸಿ ಕಾಲೇಜುಗಳಿಂದ ಹೊರಬೀಳುತ್ತಿರುವರು.

ಈಗೀಗ ಎಲ್ಲೆಲ್ಲಿಯೂ ಶಿಕ್ಷಿತ ತರುಣರ ನಿರುದ್ಯೋಗದ ಭೀಕರ ಚಿತ್ರವು ತಾಂಡವನೃತ್ಯವನ್ನಾಡುವುದಕ್ಕೆ ಇದೇ ಕಾರಣವಾಗಿದೆ ಯಾವ ಪತ್ರಿಕೆಯನ್ನು ಮಗುಚಿನೋಡಿದಾಗ್ಯೂ ಇದೇ ವಿಷಯವಾಗಿ ಲೇಖನಗಳು, ಭಾಷಣಗಳು, ತರ್ಕವಿತರ್ಕಗಳು ತೋರಿಬರುವುವು ನಿರುದ್ಯೋಗವೆಂದರೆ ಉದ್ಯೋಗವಿಲ್ಲದಿರುವಿಕೆಯೆಂಬ ತಾತ್ಪರ್ಯವಾಗುವುದಾದರೂ ಇದರಲ್ಲಿ ಶಿಕ್ಷಿತ ತರುಣರ ನಿರುದ್ಯೋಗ, ಅಶಿಕ್ಷಿತರ ನಿರುದ್ಯೋಗವೆಂಬ ಎರಡು ವಿಭಾಗಗಳನ್ನಾಗಿ ಮಾಡಬಹುದಾಗಿದೆ ಶಿಕ್ಷಿತರೆಂದರೆ ಕಾಯಕಷ್ಟದ ಉದ್ಯೋಗವನ್ನು ಅಪೇಕ್ಷಿಸದೆ ಯಾವಾಗಲೂ ಸುಖಮಯವಾದ ಉದ್ಯೋಗವನ್ನು ಅಪೇಕ್ಷಿಸುವರು ಚಿಕ್ಕ ಕೆಲಸವು ಅವರ ಗೌರವಕ್ಕೆ ಹಾನಿಯನ್ನು ತಂದೊಡ್ಡುವುದು ಖುರ್ಚಿ ಮೇಜುಗಳಿಲ್ಲದಿದ್ದರೆ ಸಾಧ್ಯವೇ ಇಲ್ಲವಂತೆ ಅಶಿಕ್ಷಿತರಾದರೋ ಕಾಯಕಷ್ಟಾದಿಗಳ ಜೀವನವೇ ತಮ್ಮ ಭಾಗ್ಯವೆಂದೆಣಿಸಿ ಅದನ್ನೇ ಮಾಡಲು ಕುತೂಹಲವುಳ್ಳವರಾಗಿ ಆಗಾಗ್ಗೆ ಯಾವುದಾದರೊಂದು ಉದ್ಯೋಗವನ್ನು ನಡೆಯಿಸುತ್ತಲೇ ಇರುವರು ಅದರಿಂದವರಿಗೆ ತಮ್ಮ ಅನುದಿನದ ಜೀವನವನ್ನು ನಿರ್ವಹಿಸಲು ಸಾಕಷ್ಟು ಉತ್ಪತ್ತಿಯು ದೊರೆಯಲಾರದೆ ಅರೆಹೊಟ್ಟೆಯಿಂದಲೂ ಹರಕುಬಟ್ಟೆಯಿಂದಲೂ ಕಾಲಕ್ಷೇಪವಾಗಬಹುದಾದರೂ ಶಿಕ್ಷಿತರಂತೆ ಮೈಗಳ್ಳತನದಿಂದ ಕಾಲಹರಣ ಮಾಡಲಾರರೆಂದು ನಿಸ್ಸಂದೇಹವಾಗಿ ಹೇಳಬಹುದು ಶಿಕ್ಷಿತ ತರುಣರು ತಮ್ಮ ಪ್ರೌಢ ಶಿಕ್ಷಣಕ್ಕಾಗಿ ಸಾವಿರಾರು ರೂಪಾಯಿಗಳನ್ನು ಗಳನ್ನು ವ್ಯಯಪಡಿಸಿ ಯಾವುದಾದರೊಂದು ನೌಕರಿಯನ್ನು ದೊರಕಿಸಿಕೊಳ್ಳಲಾರದೆ ನಿರಾಶರಾಗಿ ಅಲೆದಾಡುವಂತಾಗಿದೆ ಮಾತ್ರವಲ್ಲದೆ ಕಾಲೇಜುಗಳಿಂದ ಹೊರಬಿದ್ದ ಕೆಲವುಮಂದಿ ತರುಣ ವಿದ್ಯಾರ್ಥಿಗಳು ನೌಕರಿಗಾಗಿ ಪ್ರಯಾಸಪಟ್ಟು ಕಟ್ಟಕಡೆಗೆ ಅವರ ಮನೋದಯವು ಸಫಲವಾಗದೆ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ವಾರ್ತೆಯನ್ನು ನಾವು ಆಗಾಗ್ಗೆ ವಾರ್ತಾಪತ್ರಿಕೆಗಳಲ್ಲಿ ಕಣ್ಣಾರೆ ಕಾಣಬಹುದಾಗಿದೆ ಅಂದಮೇಲೆ ಅಶಿಕ್ಷಿತರಿಗಿಂತ ಶಿಕ್ಷಿತರ ನಿರುದ್ಯೋಗವೇ ಭೀಕರ ಸ್ವರೂಪವನ್ನು ತಾಳಿ ಭರತಭೂಮಿಯ ದಾರಿದ್ರ್ಯವನ್ನು ಮತ್ತಷ್ಟು ವೃದ್ಧಿಗೊಳಿಸುವುದೆಂದು ಹೇಳಬಾರದೇಕೆ?

ಶಿಕ್ಷಿತ ತರುಣರ ನಿರುದ್ಯೋಗದ ನಿವಾರಣೆಯ ಕುರಿತು ಅನೇಕಾನೇಕ ವಿದ್ವಾಂಸರು ಅನೇಕಾನೇಕ ತೆರದಲ್ಲಿ ವಿಚಾರಮಾಡಿರುವರು. ಮುಖ್ಯವಾಗಿ ನಮ್ಮ ಹಿಂದೂಸ್ಥಾನವು ಪ್ರಾಚೀನ ಕಾಲದಿಂದಲೂ ಕೃಷೀವಲರ ಭೂಮಿಯಾಗಿರುತ್ತದೆ ಕೃಷಿಕೈಗಾರಿಕೆಗಳು ಜೀವಂತವಿದ್ದರೇನೇ ಅದೂ ಜೀವಂತವಿರುವುದು ಇತರ ದೇಶಗಳಲ್ಲಿ ಪಟ್ಟಣಗಳು ಹೆಚ್ಚು ನಮ್ಮ ದೇಶದಲ್ಲಿ ಹಳ್ಳಿಗಳು ಹೆಚ್ಚು ಹಳ್ಳಿಗಳ ಅಭಿವೃದ್ಧಿಗೆ ಅವರ ಬೇಸಾಯಕಸಬುಗಳೇ ಕಾರಣ ಆದರೆ 'ಜಗತ್ತಿನ ತಾಯಿ'ಯೆಂಬಂತಿರುವ ಆ ಹಳ್ಳಿಗಳ ಇಂದಿನ ಸ್ಥಿತಿಯು ಅತ್ಯಂತ ಶೋಚನೀಯವಾಗಿರುತ್ತದೆ. ಯಾವ ಹಳ್ಳಿಗಳನ್ನು ನಾವು ಅವಲಂಬಿಸಿಕೊಂಡಿರುವೆವೋ ಅಂತಹ ಹಳ್ಳಿಗಳು ಎಷ್ಟರಮಟ್ಟಿನ ಕೀಳುಸ್ಥಿತಿಗೆ ಬಂದಿರುವುದೆಂಬುದರ ಕಡೆಗೆ ನಮ್ಮ ಲಕ್ಷ್ಯವಿಲ್ಲ. ಇಂದಿನ ಹಳ್ಳಿಗಳೆಂದರೆ ನರಕಸಮಾನವಾಗಿ ಎಲ್ಲೆಲ್ಲಿಯೂ ರೋಗಗ್ರಸ್ತ ಶರೀರಗಳಾದ ಬಡ ಒಕ್ಕಲಿಗರೇ ತೋರಿಬರುವರು. ದೇಹದಲ್ಲಿ ಆರೋಗ್ಯವಿಲ್ಲ! ಚೈತನ್ಯವಿಲ್ಲ! ಉತ್ಸಾಹವಿಲ್ಲ! ಕರ್ತವ್ಯಜ್ಞಾನವಿಲ್ಲ! ಯಾವುದೊಂದರ ಅರಿವೂ ಇಲ್ಲ! ಮೋರೆಯಲ್ಲಿ ಮೃತ್ಯುಛಾಯೆ ಬಿದ್ದಂತೆ ಭಾಸವಾಗುವುದು ಮತ್ತು ರೋಗಗಳ ತವರುಮನೆಯಾಗಿರುವ ಅವರ ಹರಕುಮುರುಕಾದ ಗುಡಿಸಲುಗಳು, ಅವರ ಕಿರಿಕಿರಿ ಸ್ವಭಾವದ ಮರಿಮಕ್ಕಳು ಹಸಿವಿನ ತಾಪವನ್ನು ಸಹಿಸಲಾರದೆ ಬೊಬ್ಬಿಡುವಿಕೆ, ಇವೆಲ್ಲವೂ ಕರುಣಾಜನಕವಾದ ಸಂಗತಿಯಾಗಿವೆ ಸದಾ ರೋಗಪೀಡಿತನಾದ ಒಬ್ಬ ಒಕ್ಕಲಿಗನು ಅದೆಷ್ಟು ಕೆಲಸವನ್ನು ಮಾಡಿಯಾನು? ಅವನು ತನ್ನ ಕುಲವೃತ್ತಿಯಾದ ಬೇಸಾಯ ಕಸಬುಗಳನ್ನು ಮಾಡಿ ತನ್ನ ಸಂಸಾರವನ್ನು ಪರಿಪಾಲಿಸಲು ಹೇಗೆ ಸಮರ್ಥನಾದಾನು? ಅಂದಮೇಲೆ ಸದಾ ಸಂಕಷ್ಟಪೀಡಿತರಾದ ಆ ಬಡ ಒಕ್ಕಲಿಗರ ಸಂಕಷ್ಟಗಳನ್ನು ನಿವಾರಿಸುವುದೇ ಪ್ರತಿಯೊಬ್ಬ ಭಾರತೀಯನ ಪ್ರಾಮುಖ್ಯ ಕರ್ತವ್ಯವಾಗಿದೆ.

ನವತರುಣರು ತಮ್ಮ ದೃಷ್ಟಿಯನ್ನು ಈ ಕಡೆಗೆ ಬೀರಬೇಕಾಗಿದೆ ಪಂಡಿತ ತಾರಾನಾಥಜೀ-ಜವಾಹರಲಾಲ ಮಹಾನುಭಾವರ ಅಭಿಮತವೇನೆಂದರೆ, ನಮ್ಮ ಹಿಂದೂಸ್ಥಾನದಲ್ಲಿ ಏಳು ಲಕ್ಷ ಹಳ್ಳಿಗಳಿವೆ, ಹಳ್ಳಿಗೊಬ್ಬನಂತೆ ದುಡಿದರೆ, ಏಳು ಲಕ್ಷ ಸುಶಿಕ್ಷಿತ ತರುಣರಿಗೆ ಉದ್ಯೋಗಗಳು ನಿಯಮಿಸಲ್ಪಟ್ಟಿದೆಯೆಂದು ಇದೀಗ ಗಮನೀಯವಾದ ಸಂಗತಿಯಾಗಿರುತ್ತದೆ ಆದರೆ ನಮ್ಮ ಕಾಲೇಜು ವಿದ್ಯಾರ್ಥಿಗಳಿಗೆ ಇದು ಗೊಡವೆಯೇ ಬೇಡ' ಪಟ್ಟಣವನ್ನಗಲಲು ಅವರ ಮನಸ್ಸು ಒಡಂಬಡುವುದಿಲ್ಲ ಅವರು ತಮ್ಮ ಹೇಟು ಬೂಟುಗಳನ್ನು ತ್ಯಜಿಸಿ ಗ್ರಾಮಸೇವಕರಾಗಿ ಹೊರಡುವುದೆಂದರೆ?

ಶಿಕ್ಷಿತ ತರುಣರೇ ನಿಮ್ಮ ಒಣಗೌರವವೂ ಮೈಗಳ್ಳತನವೂ ನಿಮ್ಮನ್ನಿಂದು ಹತಭಾಗಿಗಳನ್ನಾಗಿ ಮಾಡಿತು ಸುಖಮಯವಾದ ಉದ್ಯೋಗವನ್ನು ಹಿಡಿಯುವೆನೆಂಬ ಭಾವನೆಯು ನಿಮ್ಮಿಂದ ತೊರೆಯದಿದ್ದರೆ ನಿಮ್ಮ ಪರಿಹಾರವು ನೆಟ್ಟಗಾಗಲಿಕ್ಕಿಲ್ಲ ಇನ್ನಾದರೂ ನಿದ್ದೆಗಂಬಳಿಯನ್ನು ಕಿತ್ತೊಗೆದು ಶುದ್ಧವಿಚಾರದಿಂದ ಗ್ರಾಮಸೇವೆಗಾಗಿ ಸೊಂಟಗಟ್ಟಿ ಕಾರ್ಯರಂಗಕ್ಕೆ ದುಮುಕಿದರೇನೇ ನಿಮ್ಮನ್ನು ಸದಾ ಪೀಡಿಸುವ ಆ ನಿರುದ್ಯೋಗದ ಭೀಕರ ಭೂತವು ನಿಮ್ಮಿಂದ ದೂರಾಗಿ ಜನಿಸಿ ಸ್ವರ್ಗಸಮವಾದ ಭಾರತ ಭೂಮಿಗೆ ಕ್ಷಿಪ್ರದಲ್ಲಿಯೇ ಯಶವು ದೊರೆಯುವುದೆಂಬುದರಲ್ಲಿ ಸಂದೇಹವಿಲ್ಲ.

ಹಳ್ಳಿಗಳ ಉದ್ಧಾರಕ್ಕಾಗಿ, ಭಾರತಮಾತೆಯ ಸೇವೆಗಾಗಿ, ಇಂದಿನ ನವತರುಣರು ಮಾಡಬೇಕಾದ ಕಾರ್ಯಗಳು ಅನೇಕವಿರುವುವು. ಮುಖ್ಯವಾಗಿ 'ಕರ್ತವ್ಯಜ್ಞಾನವಿಲ್ಲದ ಹಳ್ಳಿಗಳ ಒಕ್ಕಲಿಗರಿಗೆ ಸ್ವಚ್ಛತೆಯನ್ನು ಕಲಿಸಬೇಕು,' ಅದರ ಮಹತ್ವವೇನೆಂಬುದನ್ನು ಅವರಿಗೆ ದೃಷ್ಟಾಂತ ರೂಪವಾಗಿ ಮನಗಾಣುವಂತೆ ಹೇಳಬೇಕು. ನಾವು ಅವರ ಕಡೆಯಿಂದ ಏನಾದರೊಂದನ್ನು ಮಾಡಿಸಿಕೊಳ್ಳುವುದಿದ್ದರೆ ಮೊದಲು ಅದನ್ನು ನಾವು ಮಾಡಿತೋರಿಸಿ, ಅದರ ಸಂಪೂರ್ಣ ಜ್ಞಾನವನ್ನು ಅವರಿಗೆ ಕೊಡಬೇಕು. ಆಗತಾನೇ ನಾವು ವರ್ತಿಸಿದಂತೆಯೇ ಅವರು ಕೂಡಾ ನಡೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಹಳ್ಳಿಗರ ಮಕ್ಕಳಿಗೆ ಯೋಗ್ಯ ರೀತಿಯಲ್ಲಿ ವ್ಯಾಯಾಮ ಶಿಕ್ಷಣವನ್ನು ಕೊಡಬೇಕು. ಆದರೆ ನಾವು ದೊಡ್ಡವರು ಇಂಗ್ಲೀಷು ಬಲ್ಲವರು, ತಮಗೆ ಮೀರಿದವರು ಯಾರು ಇಲ್ಲವೆಂಬ ಭಾವನೆಯು ನಮ್ಮ ತರುಣರಿಂದ ತೊಲಗಿ ಸತ್ಯ, ಪ್ರೇಮ, ನಿಸ್ವಾರ್ಥ ಮುಂತಾದ ಗುಣಗಳು ಅವರಲ್ಲಿ ನೆಲೆಗೊಂಡರೇನೇ ಈ ತೆರನಾದ ಕರ್ತವ್ಯವನ್ನು ಮಾಡಲು ಸಮರ್ಥರವರು ದುರಹಂಕಾರದಿಂದ ವರ್ತಿಸಿದರೆ ಅವರ ಕಾರ್ಯವು ಫಲಿಸಲಿಕ್ಕಿಲ್ಲ ಇದೇ ರೀತಿಯಲ್ಲಿ ನಮ್ಮ ಶಿಕ್ಷಿತ ನವತರುಣರು ಹಳ್ಳಿಗಳ ಉದ್ಧಾರವೇ ದೇಶೋದ್ಧಾರವೆಂದು ತಿಳಿದು ಹಳ್ಳಿಗೊಬ್ಬನಂತೆ ಕೆಲಸಮಾಡಿದರೆ ಅವರ ಜೀವನದ ಹಾದಿಯು ಅಲ್ಲಿ ತೆರೆದಿರುವುದಲ್ಲದೆ ಇದರಿಂದ ಸಮಸ್ತ ಹಿಂದೂಸ್ಥಾನಕ್ಕನೇ ಸಾಕಷ್ಟು ಸೇವೆಯನ್ನು ಗೈದ ಪುಣ್ಯವಿರುವುದಲ್ಲದೆ ಭಾರತದ ಭಾಗ್ಯೋದಯವಾಗುವುದೆಂಬುದರಲ್ಲಿ ಆಶ್ಚರ್ಯವೇನು?

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ -

The Scientific Gold Bangles Co., Ltd

Head Office -43, Byragimatam Street,

Post Box No 203, Madras



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1 8 0 8 ಔನ್ಸ್ ರೂ. 0 14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಆಯೊಡ್ಯಾಸ್ಡ್ ಸರ್ಸಪರಿಲ್ಲಾ· ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

4 ಔನ್ಸ್ ರೂ 1—0—0 8 ಔನ್ಸ್ ರೂ 1—8—0

ದಕ್ಷಿಣ ಕನ್ನಡದ ಏಜಂಟರು - ಪೊಮ್ಮಲರ ಸ್ಟೋರ್ಸ್, ಮಂಗಳೂರು.

WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassan and Kadur districts.
2 Coorg, South Canara, Shimoga and Chitaldrug districts.
3 Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY.

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc., in guaranteed colours Silk Sarees & Coatings a Speciality. Work is conducted under the supervision of Textile experts. We undertake special orders to suit individual tastes.

Please inspect our goods at:

Raghavendra Ranga Pai, Car Street, Mangalore.

We deal in grey & Coloured Yarns Dyes Chemicals & Handloom accessories.

M. Venkatesha Ranga Pai,

Proprietor

New Era Technical School

Near Market Square, Udipi

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our Special Commercial Course' and inusre against unemployment Details may be had on application to the Manager

ಡಾಕ್ಟರ ವಾಮನ ಗೋಪಾಳರವರ

ಐಟೆಡಾಯುಜ್ಞ ಪಾಕ ಪರೀಕ್ಷಾ ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸುವವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ ಪ್ರೊಸ್ಪರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಘಾಟುಕೊಪ್ಪಾರ, ಮುಂಬಾಯಿ

ಕೈಸ್ಟಿಸ್ಟ ಪಾ ಕಂಪೆನಿ ಮಂಗಳೂರು

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಒಚ್ಚುವುದು ಮಲ ಬದ್ಧತೆ ಪಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8 0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು.

ಬಾಟ್ಲಿ 1ಕ್ಕೆ 10 ಆಣೆ 8 ಬಾಟ್ಲಿಗಳಿಗೆ ರೂ 1-12-0



ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0-0

ಮಲೇರಿಯಾ ನಿವಾರಿಣಿ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಜಾತ ಕೀಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ ಜ್ವರಗೆಡ್ಡೆ ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1 8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 18

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ 2-8-0 ಮಾತ್ರ

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:- ಶ್ರೀ ರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ದಾಸ ಶ್ರೀನಿವಾಸ ಶೈ, ಪುತ್ತೂರು. ಮೆಸರ್ಸ್ ಮುಲ್ಲರ ಪೆಟಿನ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ ಮೆಸರ್ಸ್ ಕಾಮತ್ ಎಂಡ್ ಕೊ, ಕಾರಾಕೌಸ್, ಗಿರಗಾಂವ್, ಬ್ಯಾಕ್‌ರೋಡ್ ಮುಂಬಾಯಿ, ನಂ. 4, ದಿ ಕರ್ನಾಟ ಹೋಟೆಲ್, ಮಡಿಕೇರಿ ಕೂರ್ಗ್, ರಾವ್ ಫಾರ್ಮಸಿ, ಸಾಗರ

The Canara Banking Corporation Udipi, Ltd.

Head office:—UDIPI, S K. (Incorporated in British India) TEL.-'BANKING' **ESTD. 1906.**

Branches:—1 Udipi, 2 Coondapoor, 3 Car Street, Mangalore, 4 Shimoga, 5 Madras (George Town), **6 Bunder Mangalore, 7. Mercara** (North Coorg), **& 8 Virarajendrapet** (South Coorg)

DEPOSITS:

1922	1926	1930	1934	30 11 '35
ರೂ 2,28,419/	6 48,940/	20,28,837/	24,95,629/	**37,40,812/-**

SAVINGS BANK ACCOUNTS

INTEREST allowed at 3½ %

Facilities 1 Withdrawal by **CHEQUES.** 2 Production of pass books unnecessary at the time of withdrawal 3 Accounts transferred **FREE** of charge from one office to another

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ಎಲ್ಲಿಯವರ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ ಕಿಂಗ್ ಎಂಡ್ ಕ್ವೀನ್' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನ ಕೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದ ನಾವು ಅರಿಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಕಾರಣ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

TO INSURE OR TO REPRESENT

CONSULT –

The Bombay Life Assurance Company Ltd.

ESTD 1908

Offers
(1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra
(5) Increased rate of Bonuses
(6) Accident Risk on a small extra payment

Attractive Rates of Commission & Bonuses to Agents

For particulars apply to any of our Offices

Kochikar Brothers. Branch Secretaries

OFFICES (1) 'Gautam Nivas Charni Rd, Girgaum Bombay No 4 (2) P B 837 Mount Road Madras (3) Visveshvarapuram Circle Bangalore City (4) Hazur Road Calicut (5) Car Street Mangalore, S K (6) Udipi (S India)

ಬ್ರಿಟಿಷ್ ಕರ್ಣಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ್ಯರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ ——— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ-ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವಾರ್ಷಿಕ ಕ್ರಯ 3 ರೂಪಾಯಿ
ಬಿಡಿ ಸಂಚಿಕೆ 1 ಆಣೆ.

Registered No. M. 3406

ಟಪ್ಪಾಲು ಹಾಸಲು ಸೇರಿ ರೂ. 3-12-0.

for Quality Snuff
H. Rama Rao and Sons:
High Class Snuff Manufacturers
Mangalore, S. I.
— ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in
THE BOMBAY LIFE
Kochikar Brothers,

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮುಕ್ತಿ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೩೦. ಮಂಗಳೂರು ತಾ. ೧೭ನೇ ಶುಕ್ರವಾರ ಜನವರಿ ೧೯೩೬. (17—1—'36) ಸಂಚಿಕೆ ೩



ಇಟೆಲಿಯಾನ ವಿಮಾನ ದಳ

ಹಬಸಿ ರಣರಂಗದಲ್ಲಿ ಇಟೆಲಿಯಾನರು ಉಪಯೋಗಿಸುವ ವಿಮಾನಗಳ ಒಂದು ತಂಡ. ಇದರಲ್ಲಿ ನೂರಾರು ವಿಮಾನಗಳಿವೆ.

ನೋಟುಗಳು.
NOTE....S.

ಸ್ವಮುಷ್ಕರಲ್ಲಿ ಇದು ವರೆಗೆ ನುಸಿಗಳು ಸುಖದಾಗಿದ್ದುವು. ಇನ್ನು, ಅವು ಸುಖವಾಗಿಯೆ ಇರುವುದಕ್ಕೆ ಅಡ್ಡಿಯಿಲ್ಲ. ಒಂದು ಸಾವಿರ ರೂಪಾಯಿಗಳನ್ನು ಮುನಿಸಿಪಾಲಿಟಿಯು ಸೆಂಕ್ಷನು ಮಾಡಿದ ದಿನವೇ, ಅವುಗಳ ಸಾಮೂಜ್ಯವಾಗಿರುವ ತಿಪ್ಪೆ, ಚರಂಡಿ, ಕಸದ ಗೂಡುಗಳೆಂಬ ವಸಾಹತುಗಳಲ್ಲಿ, ದೀಪಾವಳಿಯೊಡನೆ ಅಭ್ಯುದಯೋತ್ಸವವೊಂದು ನಡೆಯಿತು.

\+ + + +

ಸಾ—ಸಾ—ಸಾವಿರ ರೂಪಾಯಿಗಳ ವ್ಯಯದಿಂದ ಸಾಯುವುದಕ್ಕೆ ಅವು ಹೆಗ್ಗಣಗಳಲ್ಲ, ನಾಯಿಗಳೂ ಅಲ್ಲ,—ಅವು ನುಸಿಗಳು· ಜನೋಪಕಾರಕ್ಕಾಗಿಯೆ ಅವತಾರವೆತ್ತಿದುವು. ಎಲ್ಲಿ ಕೊಳೆಯು ಹೆಚ್ಚಾಗಿ ಆರೋಗ್ಯಕ್ಕೆ ಬಾಧೆಯುಂಟಾಗುವುದೋ, ಅಲ್ಲಿ ನುಸಿಗಳು ಅವತಾರವನ್ನು ಯುಗೇ ಯುಗೇ ಎಂದರೆ ಕ್ಷಣೇ ಕ್ಷಣೇ ಎತ್ತುವುವು

× × × × × ×

ಹೊಟ್ಟೆ ಪಾಡಿಗಾಗಿ ದುಡಿಯುವ ಅಥವಾ ಯಾವ ಪಾಡಿಗಾಗಿಯೂ ದುಡಿಯದ ಮನುಷ್ಯನು ಕೊಳೆ ಜಮೆಯಾದ ವಿಚಾರವನ್ನು ಮಾತ್ರ ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲೆಂದು, ಅವನು ಸುಖನಿದ್ದೆ ಮಾಡುವ ವೇಳೆ, ಅದೇ ಕಿವಿಯ ಬಳಿ,—ಸಾಮವೇದದ ಹಾಗೆ,—"ಘನೊ—ಊ—ಊ—ಊ" ಎಂದು ಪಿಟೀಲು ಸ್ವರದಲ್ಲಿ ರಮ್ಯವಾಗಿ ಹಾಡುತ್ತಾ; ಹತ್ತಿರವಿದೆ ಕೊಳೆ, ಇದೇ ರೋಗದ ಬೆಳೆ' ಎಂದು ಪಲ್ಲವಿ ಹಾಡುವ ಮೊದಲೇ ವಹಿಯುವಾಗುವ, ಅಥವಾ ಮುಗ್ಧನಾದ ನಿದ್ರಿತನು ಕೈಚಪ್ಪಾಳೆ ಹೊಡೆವಾಗಲೆ ಸತ್ತೇ ಆತ್ಮಬಲಿಯನ್ನೆ ಕೊಡುವ ನುಸಿ, ನೀನೇ ಈ ಯುಗದ ಋಷಿ!

× × × × ×

ನುಸಿಗಳ ರಾಜ್ಯವಾಗಿರುವ ಚರಂಡಿಗಳಲ್ಲಿ ಓಡಸಿಗುವ ಚೂರು ಪತ್ರಿಕೆಯಲ್ಲಿ,— ನುಸಿಗಳಿಗಾಗಿಯೆ ನುಸಿಗಳಿಂದ ಸಂಪಾದಿತವಾದುದು!—ಈ ಮುನಿಸಿಪಾಲಿಟಿಯ ಜಬರದಸ್ತಿಯ ಮಾತು ಇದ್ದಿತು. ಅದನ್ನೋದಿ ನುಸಿಗಳು ಏಕದಮ್ ಮುನಿಸಿಪಲ್ ಆಫೀಸನ್ನೆ ನುಗ್ಗಿವೆ. ಆ ನುಸಿಗಳು ಮುನಿಸಿಪಲ್ ಆಫೀಸು ನುಸಿಗಳು ಪಾರ್ಲಿಮೆಂಟಿನೊಳಗೆ ನ್ಯಾಯ ಹೊಂದಲು ಗನಿಗಾರರು ಒಮ್ಮೆ ನುಗ್ಗಿದ ಹಾಗೆ ಇವು ನುಗ್ಗಿ, ಯಾರುಯಾರನ್ನು ಕಡಿದುವೋ ಗೊತ್ತಿಲ್ಲ ಆದರೆ,

× × × × × ×

ನುಸಿಗಳ ಕೋಟೆಗಳಿರುವಲ್ಲಿ ಈಗ ಮುನಿಸಿಪಲ್ ಚಿಮಿಣಿಎಣ್ಣೆ ಪ್ರವರ್ತಕರು ಕಾಣಸಿಗುವುದಿಲ್ಲ. ಮಹಾಮಹಾ ರೌರವ ನರಕಗಳು ಅಂದವಾಗಿ, ಸುವಾಸನೆ ಬೀರಿ ನಮ್ಮೂರನ್ನು ಅಮರಾವತಿಗೆ ಸಮಾನವಾಗಿ ಮಾಡಿಟ್ಟವೆ ಚಿಕ್ಕ ಚಿಕ್ಕ ಸಪೂರ ತೋದುಗಳಲ್ಲಿ ಎಲ್ಲಕ್ಕೂ ಮೇಲಾದ ಚಿಮಿಣಿಎಣ್ಣೆ ವಾಸನೆ ಹರಡಿ, ಅಲ್ಲಿಯ ಜನರು ಅಮರಾವತಿಗೆ ಬಿಡಾರ ಎತ್ತುವ ಆಸೆ ಮಾಡುತ್ತಾರೆ ಸನ್ನಿಪಾತ, ಮಲೇರಿಯಾಜ್ವರಗಳು ಅಲ್ಲಲ್ಲಿ ಇವೆ, ಇರಲಿ.

\+ + + +

ಹೆಂಗುಸರ ಆಸ್ಪತ್ರೆಯ ಹಿಂದೆ,—ಆಸ್ಪತ್ರೆಯ ಹಿಂದೆ, ನೆನವಿರಲಿ—ಈಗ ನುಸಿಗಳ ಅರಮನೆಯಾಗಿದೆ ಈ ಪಕಾರದಿಂದ ರೋಗಗಳು ಊರಿಗೆ ಹರಡದೆ ಹೋದರೆ, ಆ ಆಸ್ಪತ್ರೆಗೆ ಕೆಲಸವೇನೂ ಇರಲಾರದು

\+ + + +

ಎಷ್ಟೋ ಸಹಸ್ರ ರೂಪಾಯಿ ವ್ಯಯಿಸಿ, ಅತ್ಯುತ್ತಮವಾದ 'ರೋಗಜನನಿ' ಪಕಾರವನ್ನುಂಟುಮಾಡಿರುವ ಪುಣ್ಯವು ಪಂತಿಗೆ ಎತ್ತಿದವರಿಗೋ, ನುಸಿಗಳಿಗೋ?

\+ + + +

ಅದು ದೊ—ದೊ—ದೊಡ್ಡ—ಡ್ಡ ಶಾಲೆ, ಇದು ಸಣ್ಣ ಶಾಲೆ. ಅದು ಇದನ್ನು ಆಟಕ್ಕೆ ಕರೆಯಿತು ಏದುವಾಗ ದೊ—ದೊ—ದೂ—ಡ್ಡವರು ಆಡಿದ್ದಿಲ್ಲ ಗುಲ್ಲೆಬ್ಬಿಸಿ, ಬೈದು, ಹಿಯ್ಯಾಳಿಸಿ, ಕೊನೆಗೆ ಸೋತರು!

ಇನ್ನೂ ಇವೆ.—ಇನ್ನೊಂದು ಸಲ ನೋಡುವುದು.

ಓವಲ್ಟಿನ್ ಸೇವನೆಯು ಮಕ್ಕಳನ್ನು ದೃಢಕಾಯರನ್ನಾಗಿ ಮಾಡುವುದು.

ಬಾಲ್ಯಪ್ರಾಯವೇ ಮಕ್ಕಳ ಬೆಳವಣಿಗೆಯ ಪ್ರಾಯ ಆಗಲೇ ಮಕ್ಕಳ ಆರೋಗ್ಯವನ್ನು ಸರಿಯಾಗಿ ಮಾಡಿದ ಪಕ್ಷದಲ್ಲಿ ನಂತರ ಅಷ್ಟೊಂದು ಬೇಡಾಕೆಯಿಲ್ಲ ಮಕ್ಕಳ ಬೆಳವಣಿಗೆಯು ಹೆಚ್ಚಾಗಿ ಅವರು ತೆಗೆದುಕೊಳ್ಳುವ ಆಹಾರದಲ್ಲಿರುತ್ತದೆ ಯಾವ ಆಹಾರವಾದರೂ, ಶಾರೀರ ಶಕ್ತಿಯನ್ನೂ ನರಗಳ ಶಕ್ತಿಯನ್ನೂ ಮೆದುಳಿನ ಜ್ಞಾಪಕಶಕ್ತಿಯನ್ನೂ ಏಕಪ್ರಕಾರವಾಗಿ ಕೊಡುವುದಿಲ್ಲ ಆದರೆ, ಒಂದು ಆಹಾರವು ಮಕ್ಕಳಿಗೆ ಇದೆಲ್ಲವನ್ನು ಸಮಗ್ರವಾಗಿ ಕೊಡಬಲ್ಲದು ದೇಹಕ್ಕೆ ಶಕ್ತಿ, ಸರಿಯಾದ ಬೆಳವಣಿಗೆ ಮಿದುಳಿನ ಜ್ಞಾಪಕಶಕ್ತಿ, ಓದುವುದರಲ್ಲಿಯೂ ಉತ್ಸಾಹವಿರುವಿಕೆ ಇವೆಲ್ಲವೂ ಅದರಿಂದ ಸಿದ್ಧವಾಗುತ್ತದೆ ಅದೇ 'ಓವಲ್ಟಿನ್'

ಓವಲ್ಟಿನ್‌ಗೆ ಸರಿಸಮಾನವಾದ ಮತ್ತೊಂದು ಆಹಾರವಿಲ್ಲ ಬಾಲ್ಯಪ್ರಾಯದಲ್ಲಿ ಮಕ್ಕಳಿಗೆ ಅದನ್ನು ಕೊಡಿರಿ ನಿಮ್ಮ ಮಕ್ಕಳು ಹುಲುಸಾಗಿ ಬೆಳೆದು ನಿಮ್ಮ ಮನಸ್ಸನ್ನು ಆನಂದಗೊಳಿಸುವವು ಗಟ್ಟಿಯಾದ ಮೈಕಟ್ಟು ಅಂದವಾದ ತೇಜಸ್ಸು ಸ್ಫೂರ್ತಿದಾಯಕಗಳು ನಿಮ್ಮ ಸ್ವಾಧೀನವಾಗುವವು ಓವಲ್ಟಿನ್‌ನಲ್ಲಿ ನಿಸರ್ಗ ಸಿದ್ಧವಾದ ಅಮೂಲ್ಯ ಸಾರವಿದೆ ಬೆಳೆದ ಬಾರ್ಲಿ ದನದ ಕೆನೆಹಾಲು ಇತ್ಯಾದಿಗಳ ಸತ್ವವು ಅದರಲ್ಲಿ ತುಂಬಾ ಇದೆ ಆದರೆ, ಪರಕೀಯರ ಮೋಸಕ್ಕೆ ಬಲಿಬೀಳಬೇಡಿ ನಿಮ್ಮ ಸ್ವಾಭಾವಿಕ ಉತ್ತಮ ಶರೀರ ... ಗಿರುತ್ತದೆ ಇದು ಖಂಡಿತ

'ಓವಲ್‌ಟಿನ್'

OVALTINE

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಕಂಪೆನಿಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಏಜಂಟ್ಸ್—ಜೇಮ್ಸ್ ರೈಟ್ ೩೬ಎ ರಿಪನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ.

OV 398

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK
LIMITED

THE KALYANPUR SUGAR MILLS, LTD.

ದಿ ಕಲ್ಯಾಣಪುರ ಶುಗರ್ ಮಿಲ್ಸ್, ಲಿಮಿಟೆಡ್.

(ದಿ ಇಂಡಿಯನ್ ಕಂಪೆನೀಸ್ ಎಕ್ಟ್ 1913ರ ಪ್ರಕಾರ ರಿಜಿಸ್ಟರ್ ಆದದ್ದು)

ಇದರ ಒಂದು ಪ್ರತಿಯನ್ನು ಮಂಗಳೂರಿನ ಜ್ಯೊಂಟ್ ಸ್ಟೊಕ್ ಕಂಪೆನಿಗಳ ಅಸಿಸ್ಟಾಂಟ್ ರಿಜಿಸ್ಟ್ರಾರರೊಡನೆ ದಾಖಲು ಮಾಡಿರುತ್ತದೆ

ಅಧೀಕೃತ ಮೂಲಧನ— ರೂಪಾಯಿ 10ರ 50,000 ಶೇರುಗಳಿಂದ ರೂಪಾಯಿ 5,00,000.
ವಂತಿಗೆಗೆ ಅರ್ಪಿಸಿದ ಮೂಲಧನ— ರೂಪಾಯಿ 2,00,000; ಪೈಕಿ ಕಬ್ಬು ಬೆಳೆಸುವವರ ಬಗ್ಗೆ ರೂಪಾಯಿ 50,000 ಪ್ರತ್ಯೇಕಿಸಲ್ಪಟ್ಟಿರುತ್ತದೆ.

ಪ್ರತೀ ಪಾಲಿಗೆ ಕೊಡಬೇಕಾದ ಐವೇಜು:—

ಅರ್ಜಿಯ ಒಟ್ಟಿಗೆ ಕೊಡಬೇಕಾದದ್ದು	ಒಂದು ಅರ್ಜಿಯಲ್ಲಿ ರೂಪಾಯಿ ಹತ್ತಕ್ಕೆ ಮೀರದ ಪ್ರವೇಶ ಹಾಸಲು	0—4—0
	ಪ್ರತಿ ಪಾಲಿನ ಮೊದಲಿನ ಕಂತು	2—8—0
ಅರ್ಜಿ ಅಂಗೀಕರಿಸೋಣಾದ ಒಂದು ತಿಂಗಳ ಒಳಗೆ ಕೊಡಬೇಕಾದದ್ದು	ಎರಡನೆಯ ಕಂತು	7—8—0

ಡ್ಯಾರೆಕ್ಟರರು

1. ಮಹಾರಾಜೇಶ್ರೀ, (ಪ್ರೆಸಿಡೆಂಟರು) **ಅಮ್ಮೆಂಬಳ ಶ್ರೀನಿವಾಸ ಪೈಯವರು** ಬಿ ಎ ಬಿ ಎಲ್ —ಕೆನರಾ ಬೇಂಕಿನ ಪ್ರೆಸಿಡೆಂಟರು
2. (ವೈಸ್ ಪ್ರೆಸಿಡೆಂಟ್) **ಬಂಟ್ವಾಳ ವೈಕುಂಠ ಬಾಳಿಗರು** ಬಿ ಎ ಬಿ ಎಲ್— ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಚೆಯರ್‌ಮ್ಯಾನರು, ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನಿನ ಡ್ಯಾರೆಕ್ಟರರು, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಮೆಂಬರರ (ಪ್ಯಾಕ್ಟರಿಯ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತದೆ
3. **ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತರು**—ಸಾಹುಕಾರರು ಮತ್ತು ಜಮೀನುದಾರರು ಕೆನರಾ ಬ್ಯಾಂಕಿನ ಮತ್ತು ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಡ್ಯಾರೆಕ್ಟರರು
4. **ಮೂಲ್ಕಿ ವಾಮನ ಕುಡ್ವರು,** ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ಜನರಲ್ ಮೆನೇಜರರು ಮತ್ತು ಎಮ್ ಶ್ರೀನಿವಾಸ ರಾಮಚಂದ್ರ ಕುಡ್ವ ಎಂಡ್ ಸನ್ಸ್, ಲಿಮಿಟೆಡ್ ಇವರ ಮೆನೆಜಿಂಗ್ ಡ್ಯಾರೆಕ್ಟರರು
5. **ಕಿನ್ನಿ ಶೇಷಗಿರಿ ರಾಯರು**—ಜಮೀನ್‌ದಾರರು ಮತ್ತು ಬೇಂಕರರು ಶಂಕರ್ ವಿಠ್ಠಲ್ ಕಂಪೆನಿಯ ಮೆನೆಜಿಂಗ್ ಡ್ಯಾರೆಕ್ಟರರು
6. **ಉಳ್ಳಾಲ ಶ್ರೀನಿವಾಸ ಮಲ್ಯರು**— ಸಾಹುಕಾರರು ಕೆನರಾ ಬೇಂಕಿನ ಡ್ಯಾರೆಕ್ಟರರು
7. **ಮನೇಲ್ ಅಣ್ಣಪ್ಪ ನಾಯಕರು**— ಸಾಹುಕಾರರು ಮತ್ತು ಬೇಂಕರರು ಮಂಗಳೂರು ಮಿಲ್ಸ್ ಲಿಮಿಟೆಡ್ ಇದರ ಡ್ಯಾರೆಕ್ಟರರು
8. **ಸೂಜೀರ್ ಪುಂಡಲೀಕ ನಾಯಕರು**— ಸಾಹುಕಾರರು ಮಂಗಳೂರು ಮಿಲ್ಸ್ ಲಿಮಿಟೆಡ್ ಇದರ ಡ್ಯಾರೆಕ್ಟರರು, ಮುಂಬಯಿ ಎಲ್‌ಫಿನ್‌ಸ್ಟನ್ ಬಿಲ್ಡಿಂಗನಲ್ಲಿರುವ ಕಮಿಶನ್ ಏಜಂಟರು
9. **ಎಮ್. ವೆಂಕಟೇಶ ಪೈಗಳವರು** ಜಮೀನದಾರರು ಮತ್ತು ಬೇಂಕರರು, ಕೆನರಾ ಬೇಂಕ್ ಮತ್ತು ಮಂಗಳೂರ ಇಲೆಕ್ಟ್ರಿಕ್ ಸಪ್ಲಾಯ್ ಕಂಪನಿಯ ಡ್ಯಾರೆಕ್ಟರರ

ಬೇಂಕುಗಳು.

ದಿ ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರ ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಉಡುಪಿ ಲಿಮಿಟೆಡ್, ಉಡುಪಿ.

ಲೆಕ್ಕ ಪರಿಶೋಧಕರು

ಮಹಾರಾಜೇಶ್ರೀ ಬಿ ಶಾಂತರಾಮ ರಾಯರ ಬಿ ಎ ಜಿ ಡಿ ಎ ಎ

ರಿಜಿಸ್ಟರ್ಡ್ ಆಫೀಸು

ಕಂಪೆನಿಯ ರಿಜಿಸ್ಟರ್ ಮಾಡಲ್ಪಟ್ಟ ಆಫೀಸು, ಸಿ ಪಿ ಸಿ ಬಿಲ್ಡಿಂಗ್, ಕೊಡಿಯಾಲಬೈಲು, ಮಂಗಳೂರು

ವಿವರ.

1932ನೇ ಇಸವಿಯಲ್ಲಿ ಸರ್ಕಾರದವರು ಸಕ್ಕರೆ ಕೈಗಾರಿಕೆಗೆಯ ಸಂರಕ್ಷಣಾತ್ಮಕ ಮಸೂದೆಯನ್ನು ಮಂಜೂರು ಮಾಡಿದ ನಂತರ, ಸಕ್ಕರೆ ಕೈಗಾರಿಕೆಗೆ—ಹಿಂದುಸ್ಥಾನದಲ್ಲಿ ಈ ವರೆಗೆ ಇತರ ಯಾವ ಕೈಗಾರಿಕೆಗೂ ದೊರಕದಂತಹ—ಪ್ರೋತ್ಸಾಹವು ದೊರಕಿರುತ್ತದೆ ಪರಿಣಾಮವಾಗಿ 1931—32ನೇ ವರ್ಷದಲ್ಲಿ 32 ಕಾರ್ಖಾನೆಗಳಿದ್ದದ್ದು 1935—36ರಲ್ಲು 154 ಕಾರ್ಖಾನೆಗಳಾಗಿವೆ ಈ ಅಭಿವೃದ್ಧಿಯು ಹೆಚ್ಚಾಗಿ ಉತ್ತರ ಹಿಂದೂಸ್ಥಾನದಲ್ಲಿಯೇ ಆಗಿರುತ್ತದೆ—ಪೈಕಿ ಸಂಯುಕ್ತಪ್ರಾಂತ್ಯ ಮತ್ತು ಬಿಹಾರಿನಲ್ಲಿ ಮಾತ್ರವೇ 111 ಕಾರ್ಖಾನೆಗಳಿವೆ ಇದರೊಡನೆ ದಕ್ಷಿಣ ಹಿಂದೂಸ್ಥಾನದಲ್ಲಿ ಬರೇ 21 ಕಾರ್ಖಾನೆಗಳು—ಅವುಗಳ ಕೂಡಾ ಉತ್ತರ ಹಿಂದೂಸ್ಥಾನದ ಎಷ್ಟೋ ಕಾರ್ಖಾನೆಗಳಿಗಿಂತ ಬಹಳ ಚಿಕ್ಕವುಗಳಾಗಿವೆ. ಆದುದರಿಂದ ಸಕ್ಕರೆ ಕೈಗಾರಿಕೆಯ ಅಭಿವೃದ್ಧಿಯ ಮಟ್ಟಿಗೆ ದಕ್ಷಿಣ ಹಿಂದೂಸ್ಥಾನವು ಬಹಳ ಹಿಂದೆ ಬಿದ್ದಿರುತ್ತದೆಂಬುದು ಒಡೆದು ಕಾಣುತ್ತದೆ

ಪಶ್ಚಿಮ ಕರಾವಳಿಯಲ್ಲಿ ಕೊಯಂಬತ್ತೂರು ಮತ್ತು ತಿರುವಾಂಕೂರು ಜಿಲ್ಲೆಗಳಲ್ಲಿ ಬರೇ ಎರಡು ಕಾರ್ಖಾನೆಗಳಿವೆ ಇವುಗಳು ತಯಾರಿಸುವ ಸಕ್ಕರೆಯು ಇವುಗಳ ಸ್ಥಳೀಕ ಆವಶ್ಯಕತೆಗಳಿಗೆ ಕೂಡ ಸಾಕಾಗುವುದಿಲ್ಲ ಆದುದರಿಂದ ಪಶ್ಚಿಮ ಕರಾವಳಿಯಲ್ಲಿ ಒಂದು ಕಾರ್ಖಾನೆಯನ್ನೇರ್ಪಡಿಸಲಿಕ್ಕೆ ತುಂಬಾ ಅನುಕೂಲತೆ ಇದೆಯೆಂಬುದು ಸ್ಪಷ್ಟವಾಗುತ್ತವೆ

ಕಲ್ಯಾಣಪುರ ಹೊಳೆಯ ದಡದಲ್ಲಿಯೇ ಇದ್ದ ಒಂದು ಸ್ಥಳವನ್ನು ತೆಗೆದುಕೊಳ್ಳುವ ಸಂದರ್ಭವು ಕಂಪೆನಿಯ ಸಯೋಗದಿಂದ ಒದಗಿರುತ್ತದೆ ಆ ಸ್ಥಳವು ಸ್ವರ್ಣನದಿ, ಮಡಿಸಾಲ ಹೊಳೆ, ಸೀತಾನದಿ ಮತ್ತು ಸಂಕದ ಹೊಳೆ, ಇವುಗಳ ಸಂಗಮದ ಹತ್ತಿರದಲ್ಲಿಯೇ ಇದ್ದು ಹದಿನೈದು ಮೈಲುಗಳ ವರೆಗೆ ಕಬ್ಬಿನ ತೋಟಗಳಿಗೆ ಜಲಮಾರ್ಗದ ಪ್ರಯೋಜನ ಉಳದ್ದಾಗಿದೆ ಉತ್ತಮ ತರಗತಿಯ ಬೆಲ್ಲ ತಯಾರಿಸುವುದರಲ್ಲಿ ಹೆಸರುವಾಸಿಯಾದ ಉಪ್ಪೂರು, ಆರೂರು ವಾರ್ಕೂರು ಮೊದಲಾದ ಹಳ್ಳಿಗಳು ಈ ನದಿಗಳ ದಡದಲ್ಲಿರುತ್ತವೆ ಈ ಹಳ್ಳಿಗಳಲ್ಲಿಯೂ, ಈ ನದಿಗಳ ದಡದಲ್ಲಿಯೂ—ಡಿಪ್ಯುಟಿ ಡ್ಯಾರೆಕ್ಟರ್ ಒಫ್ ಎಗ್ರಿಕಲ್ಚರ್ ತಲಚೇರಿ ಇವರು ನಮಗೆ ತಿಳಿಸಿದ ಪ್ರಕಾರ ಶೇಕಡಾ 15ರಿಂದ 16ರ ವರೆಗೆ ಸಕ್ಕರೆಯ ಸತ್ವವಿರುವ ಕೆಂಪು ಮೋರಿಸ್ ಕಬ್ಬು ಬೆಳೆಸಲ್ಪಡುತ್ತದೆ ಈ ಸ್ಥಳದಿಂದ ಮಂಗಳೂರು ಬಂದರಕ್ಕೂ ಮಂಗಳೂರು ರೈಲ್ವೆ ಸ್ಟೇಶನಿಗೂ ಮಚ್ವೆಗಳ ಮೂಲಕ ಹೋಗುವ ಸುಲಭವಾದ ಸಮುದ್ರಮಾರ್ಗವಿದೆ ಆದುದರಿಂದ ಹೆಚ್ಚು ಸಕ್ಕರೆ ಸತ್ವವಿರುವ ಕಬ್ಬನ್ನು ಕಾರ್ಖಾನೆಗೂ, ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟ ಸಾಮಾನುಗಳನ್ನು ಬಂದರ ಮತ್ತು ರೈಲ್ವೆ ಸ್ಟೇಶನುಗಳಿಗೂ ಕಡಿಮೆ ಖರ್ಚಿನಲ್ಲಿ ಕೊಂಡೊಯ್ಯಲಿಕ್ಕೆ ಅನುಕೂಲವಿದೆ ಈ ವಿಷಯಗಳಲ್ಲಿ ಈ ಸ್ಥಳವು ಆದರ್ಶ ಸ್ಥಳವಾಗಿದೆಯೆಂದು ನೆನಸಲಾಗಿದೆ

ಅಲ್ಲದೆ ನಮ್ಮ ಡ್ಯಾರೆಕ್ಟರರಾಗಿರುವ ಮತ್ತು ದೊಡ್ಡ ಜಮೀನುದಾರರಾದ ಮ॥ ರಾ॥ ಹಟ್ಟಂಗಡಿ ಲಕ್ಷ್ಮೀನಾರಾಯಣ ಕಾಮತ್ ಮತ್ತು ಕಿನ್ನಿ ಶೇಷಗಿರಿ ರಾವ್ ಇವರ ಸಹಕಾರದಿಂದ ಕಾರ್ಖಾನೆಗೆ ಸಾಕಷ್ಟು ಕಬ್ಬನ್ನು ಕ್ರಮವಾಗಿ ಒದಗಿಸಲು ವ್ಯವಸ್ಥೆಗೊಳಿಸಬಹುದಾಗಿದೆ

ಕಂಪೆನಿಯು ಪ್ರಥಮ ವರ್ಷದಲ್ಲಿ ದಿನವೊಂದಕ್ಕೆ 50 ಟನ್ನು ಕಬ್ಬನ್ನು ಗಾಣಕ್ಕೆ ಹಾಕುವ ಸಣ್ಣ ಕಾರ್ಖಾನೆಯೊಡನೆ ಆರಂಭಿಸಿ ಕ್ರಮೇಣ 150 ಟನ್ನು ವರೆಗೆ ಗಾಣಕ್ಕೆ ಹಾಕುವಂತೆ ಏರ್ಪಡಿಸಬೇಕಾಗಿ ಯೋಜಿಸಿಯದೆ ಮೊದಲಿನ ವರ್ಷದಲ್ಲಿ ಕಾರ್ಖಾನೆಯು 120 ದಿನ ಕೆಲಸಮಾಡಿ, ಮುಂದೆ ವರ್ಷಾವಧಿ ಕೆಲಸದ ದಿನಗಳನ್ನು 150ಕ್ಕೆ ಏರಿಸಬಹುದಾಗಿ ನಿರೀಕ್ಷಿಸಲಾಗಿಯದೆ ಕಾರ್ಖಾನೆಯು ಪ್ರಥಮದ ವರ್ಷ 600 ಟನ್ನು ಸಕ್ಕರೆಯನ್ನು ತಯಾರಿಸಿ ಕಟ್ಟಕಡೆಗೆ 2200 ಟನ್ನು ಸಕ್ಕರೆ ತಯಾರಿಸುವ ಶಕ್ತಿಯುಳ್ಳದಾಗಿದೆ. ನಮ್ಮ ಜಿಲ್ಲೆಯು ಪ್ರತಿವರ್ಷವೂ ಸುಮಾರು 4000 ಟನ್ನು ಸಕ್ಕರೆಯನ್ನು ಆಮದುಮಾಡುತ್ತದೆ ಆದುದರಿಂದ ಈ ಕಾರ್ಖಾನೆಯಲ್ಲಿ ತಯಾರಾಗುವ ಸಕ್ಕರೆಯು ಸ್ಥಳೀಕ ಆವಶ್ಯಕತೆಗಳಿಗೆನೇ ಸಾಕಾಗಲಾರದು ಈ ದೆಸೆಯಿಂದ ಮಾರಾಟದ ತೊಂದರೆಗಳೂ ಇರಲಾರವು

ಯಂತ್ರಸಾಮಗ್ರಿಗಳ ಮೇಲೆ ನ್ಯಾಯವಾದ ಡಿಪ್ರಿಸಿಯೇಶನನ್ನೂ ಇತರ ಖರ್ಚುಗಳನ್ನೂ ಕಳೆದು ಕಾರ್ಖಾನೆಯು ಒಂದು ಟನ್ನ ಸಕ್ಕರೆಯ ಮೇಲೆ ರೂಪಾಯಿ 30ನ್ನು ನೆಟ್ ಮುನಾಫೆಯಾಗಿ ಹುಟ್ಟಿಸಬಹುದಾಗಿ ನಿರೀಕ್ಷಿಸಲಾಗಿದೆ ಪ್ರಥಮ ವರ್ಷದಲ್ಲಿ 1½ಲಕ್ಷದ ಮೂಲಧನದ ಮೇಲೆ, ಸಕ್ಕರೆ ತಯಾರಿಯು 600 ಟನ್ನೆಂದು ತೆಗೆದುಕೊಂಡಲ್ಲಿ, 13,000 ನೆಟ್ ಮುನಾಫೆಯನ್ನು ನಿರೀಕ್ಷಿಸಬಹುದು ಈ ಪೈಕಿ ರಿಜರ್ವ ಫಂಡಿನ ಬಗ್ಗೆ ಶೇಕಡಾ 25ನ್ನು ಪ್ರತ್ಯೇಕಿಸಿ, ಶೇಕಡಾ 9ರ ಡಿವಿಡೆಂಡನ್ನು ಪಾಲುದಾರರಿಗೆ ಹಂಚಬಹುದು ಇದು ಬರೆ 50 ಟನ್ನು ಕಬ್ಬನ್ನು ಗಾಣಹಾಕುವ ಆಧಾರದ ಮೇಲೆ ಲೆಕ್ಕ

ಮಾಡಿದ್ದಾಗಿದೆ. ಇನ್ನೂ ಹೆಚ್ಚು ಕಬ್ಬನ್ನು ಗಾಣ ಹಾಕಿದ್ದಲ್ಲಿ, ಸಕ್ಕರೆ ತಯಾರಿಯಲ್ಲಿ ಖರ್ಚಿನ ದಾಮಾಶಾಯಿಯಲ್ಲಿ ಉಳಿತಾಯವಾಗಿ, ಮೂಲಧನದ ಮೇಲಿನ ಲಾಭವು ಇನ್ನೂ ಹೆಚ್ಚಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಮಳೆಗಾಲದಲ್ಲಿ ಸಕ್ಕರೆ ಕಾರ್ಖಾನೆಯು ಕೆಲಸವಿಲ್ಲದಿದ್ದಾಗ, ಧೂಪದ ಕ್ಯಾಗಳನ್ನು ಒಣಗಿಸುವ ಆಲೋಚನೆ ಯಿದೆ. ಈ ಬಗ್ಗೆ, ನಾವು ತೆಗೆದುಕೊಳ್ಳಬೇಕೆಂದಿರುವ ಕಾರ್ಖಾನೆಯಲ್ಲಿ ಒಂದು ದೊಡ್ಡ Bronwell Dryer ಎಂಬ ಒಣಗಿಸುವ ಯಂತ್ರವೂ, Cholla Dryer ಎಂಬ ಇನ್ನೊಂದು ಒಣಗಿಸುವ ಯಂತ್ರವೂ ಇದೆ. ಒಣಗಿಸಿದ ಕ್ಯಾಗಳ ಬಗ್ಗೆ ಗಿರಾಕಿಗಳಿವೆ ಮತ್ತು ಹೆಚ್ಚಿನ ಲಾಭದಲ್ಲಿ ಒಣಗಿದ ಕ್ಯಾಗಳನ್ನು ಮಾರಬಹುದುದಾಗಿದೆ.

ಅಲ್ಲದೆ, ಶರಾಬು, ಸ್ಪಿರಿಟು ಮತ್ತು ಮೋಟರುಕಾರಿಗೆ ಆಗುವ ಪೆಟ್ರೋಲಿನಂತಹ ದ್ರವವನ್ನು ತಯಾರಿಸಲು ಸರ್ಕಾರದಿಂದ ಲೈಸೆನ್ಸ ಪಡೆಯುವ ಸಂಭವದ ವಿಷಯವನ್ನು ಸಹ ನಾವು ಪರಿಗಣಿಸಲಿಲ್ಲ. ಇವುಗಳಲ್ಲಿ ಯಾವುದಾದ ರೊಂದರ ತಯಾರಿಯ ಬಗ್ಗೆ ಲೈಸೆನ್ಸು ಹೊಂದುವುದರಲ್ಲಿ ನಮ್ಮ ಪ್ರಯತ್ನಗಳು ಸಫಲವಾದರೆ ಸಕ್ಕರೆ ತಯಾರಿಯಲ್ಲಿ ನಮಗೆ ಬೆಲೆ ಇಲ್ಲದ ಸಿಕ್ಕುವ Molasses ಎಂಬ ದ್ರವವನ್ನು ಬಹಳ ಲಾಭಕರವಾದ ರೀತಿಯಲ್ಲಿ ಉಪಯೋಗಿಸಬಹುದು.

ಕಾರ್ಖಾನೆಯು ಸ್ಥಾನವಿಶೇಷದಿಂದ ಕಾರ್ಖಾನೆಗೆ ಹಲವು ಕೈಗಾರಿಕೆಗಳ ಅನುಕೂಲವಾದ ಸಾವಕಾಶಗಳು ದೊರಕಲನುಕೂಲವಾಗಿ, ಭತ್ತದಿಂದ ಅಕ್ಕಿ ತಯಾರಿಸುವುದು, ತೆಂಗಿನೆಣ್ಣೆ ತಯಾರಿಸುವುದು, ಹುರಿಹಗ್ಗದ ಕೈಗಾರಿಕೆ ಯನ್ನೇರ್ಪಡಿಸುವುದು ಮೊದಲಾದ ಹಲವು ತರದ ಕೈಗಾರಿಕೆಗಳಿಂದ ಕಾರ್ಖಾನೆಯಲ್ಲಿ ಕೆಲಸಗಳನ್ನು ಹೆಚ್ಚಿಸಬಹುದು.

ಎಲ್ಲೊಟ್‌ಮೆಂಟ್.

ಕಂಪೆನಿಯ ಆರ್ಟಿಕಲ್ಸ್ ಒಫ್ ಎಸೋಶಿಯೇಶನ್ ಪ್ರಕಾರ, ಒಂದು ಲಕ್ಷ ರೂಪಾಯಿ ಮೌಲ್ಯದ 10,000 ಪಾಲುಗಳು ಭರ್ತಿಯಾಗುವ ಮುಂಚೆ ಪಾಲುಗಳನ್ನು ಎಲ್ಲೊಟ ಮಾಡೋಣಾಗುವುದಿಲ್ಲ.

ಸ್ಥಾಪಕರಿಗೆ ಪ್ರತಿಫಲ.

ಕಂಪೆನಿಯನ್ನು ಸ್ಥಾಪಿಸುವ ಬಗ್ಗೆ ಹಣ ಕೊಟ್ಟಿರುವುದಾಗಲೀ, ಕೊಡುವುದಾಗಲೀ ಇರುವುದಿಲ್ಲ.

ಆರಂಭದ ಖರ್ಚು.

ಕಂಪೆನಿಗೆ ತಗಲುವ ಆರಂಭದ ಖರ್ಚು ರೂಪಾಯಿ 2500ನ್ನು ಮೀರಲಾರದೆಂದು ಅಂದಾಜು ಮಾಡಲಾಗಿಯದೆ.

ಡೈರೆಕ್ಟರರು.

ಡೈರೆಕ್ಟರರಾಗಲಿಕ್ಕೆ ಮತ್ತು ಡೈರೆಕ್ಟರರು ಹೊಂದತಕ್ಕ ಪ್ರತಿಫಲದ ಬಗ್ಗೆ, ಆರ್ಟಿಕಲ್ಸ್ ಒಫ್ ಎಸೋಸಿಯೇಶನಿನಲ್ಲಿ ಕೆಳಗೆ ಕಾಣಿಸಿದ ಕ್ರಮಗಳಿರುತ್ತವೆ.

(83) 3000 ರೂಪಾಯಿ ಮೌಲ್ಯ ಅಥವಾ 300 ಪಾಲುಗಳನ್ನು ಪಡಕೊಂಡಿರುವ ಪ್ರತಿಯೊಬ್ಬ ಪಾಲುದಾ ರನೂ ಡೈರೆಕ್ಟರನಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹನಾಗಿರುತ್ತಾನೆ.

(85) ಡೈರೆಕ್ಟರರು ಮೀಟಿಂಗಿನಲ್ಲಿ ಹಾಜರಾದ ಬಗ್ಗೆ, ಪ್ರತಿ ಮೀಟಿಂಗಿಗೆ ರೂಪಾಯಿ 5ಕ್ಕೆ ಮೀರದ ಡೈರೆಕ್ಟರರು ನಿರ್ಣಯಿಸಬಹುದಾದ ಮೊಬಲಗನ್ನು ಪಡೆಯಲಿಕ್ಕೂ ಅಥವಾ ಆಗಾಗ್ಗೆ ಜನರಲ್ ಮೀಟಿಂಗಿನಲ್ಲಿ ಕಂಪೆನಿಯು ನಿರ್ಣಯಿಸಬಹುದಾದ ಪ್ರತಿಫಲವನ್ನು ಹೊಂದಲಿಕ್ಕೂ ಪ್ರತಿ ಡೈರೆಕ್ಟ ರನು ಅರ್ಹನಾಗಿರತಕ್ಕದ್ದು.

(86) ಬೋರ್ಡಿನಲ್ಲಿ ನಿರ್ಣಯಿಸಬಹುದಾದ ದರದ ಪ್ರಕಾರ ಪ್ರಯಾಣದ ಭತ್ತೆಯನ್ನು ಹೊಂದಲು ಡೈರೆಕ್ಟರರು ಅರ್ಹರಾಗಿರುತ್ತಾರೆ.

ಡೈರೆಕ್ಟರರ ಸಂಬಂಧ.

1. ಮಹಾರಾಜಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್, ಬಿ. ವೈಕುಂಠ ಬಾಳಿಗ ಮತ್ತು ವಾಮನ್ ಕುಡುವಾ (ಡೈರೆಕ್ಟರರು) ಮತ್ತು ಎಮ್. ಶ್ರೀಧರ ಕುಡುವಾ. ಇವರು ಕೂಡಿ, ಕಲ್ಯಾಣಪುರ ಧೂಪದ ಕಾರ್ಖಾನೆ ಎಂದು ಕರೆಯಲ್ಪಡುತ್ತಿದ್ದ ಕಾರ್ಖಾನೆಯನ್ನು ರೂಪಾಯಿ 4750—0—0ಕ್ಕೆ ಉಡುಪಿ ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ತಾರೀಕು 22—10—1935ರ ನಂಬ್ರ 1346ನೇಗೆ ರಿಜಿಸ್ಟರಾದ ಕ್ರಯಚೀಟಿನ ಪ್ರಕಾರ ಕ್ರಯಕ್ಕೆ ಪಡೆದಿರುತ್ತಾರೆ. ಆ ಮೇಲೆ ಅದಕ್ಕೆ ರೂಪಾಯಿ 750—0—0ರಷ್ಟು ದುರುಸ್ತಿ ಮೊದಲಾದ ಬಗ್ಗೆ ಅವರಿಗೆ ಖರ್ಚು ತಗಲಿರುತ್ತದೆ. ಕ್ರಯಚೀಟು ಎಚ್. ಲಕ್ಷ್ಮೀನಾರಾಯಣ ಕಾಮತರ ಹೆಸರಿನಲ್ಲಿರುತ್ತದೆ. ಆರ್ಟಿಕಲ್ 4 ಹೀಗೆ ಇದೆ—ಮ॥ ರಾ॥ ರಾ॥ ಎಚ್. ಲಕ್ಷ್ಮೀ ನಾರಾಯಣ ಕಾಮತರು ಇತ್ತೀಚೆಗೆ ಕ್ರಯಕ್ಕೆ ಪಡೆದಿರುವ, ಕಲ್ಯಾಣಪುರದಲ್ಲಿರುವ ಕಾರ್ಖಾನೆ ಮತ್ತು ಸ್ಥಳ ಕಟ್ಟೋಣ ಗಳನ್ನು ಅವರಿಂದ ಕ್ರಯಕ್ಕಾಗಲಿ, ಮೂಲಗೇಣಿಗಾಗಲಿ ಪಡಕೊಳ್ಳಲು ಕಂಪೆನಿಯೂ ಕೂಡಲೇ ಅವರೊಡನೆ ಕರಾರನ್ನು ಮಾಡತಕ್ಕದ್ದು.

2. ಮೇಲಿನ ಹೊರತು ಮತ್ತು ಆರ್ಟಿಕಲ್ಸ್ ಒಫ್ ಎಸೋಸಿಯೇಶನಿನ ಕ್ರಮಗಳಿಗನುಸಾರವಾಗಿ ಅವರಿಗೆ ಹಕ್ಕಿರುವ ಮೀಟಿಂಗ್ ಹಾಜರಿಯ ಪ್ರತಿಫಲ ಮತ್ತು ಇತರ ಏನೊಂದು ಭತ್ತೆಯ ಹೊರತು ಡೈರೆಕ್ಟರರಿಗೆ ಕಂಪೆನಿಯಲ್ಲಿ ಯಾವತರದ ಲಾಭವೂ ಇರುವುದಿಲ್ಲ.

ಕಂಪೆನಿಯ ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಒಫ್ ಎಸೋಸಿಯೇಶನ್ ಮತ್ತು ಎಚ್. ಲಕ್ಷ್ಮೀನಾರಾ ಯಣ ಕಾಮತರ ಹೆಸರಿನ ಮೇಲೆ ಕಾಣಿಸಿದ ಕ್ರಯಚೀಟು ಇವುಗಳನ್ನು ತಾ. 31—1—1936ರ ವರೆಗೆ ಬೆಳಿಗ್ಗೆ ಘಂಟೆ 8ರಿಂದ 12ರ ವರೆಗೂ ಮಧ್ಯಾಹ್ನ ಘಂಟೆ 2ರಿಂದ 5ರ ವರೆಗೂ ಕೊಡಿಯಾಲಬೈಲಿನಲ್ಲಿರುವ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ನೋಡಬಹುದು.

ಕಮಿಶನ್ನು.

ಕಂಪೆನಿಯು ಪಾಲು ಮಾರಾಟದ ಬಗ್ಗೆ ಕಂಪೆನಿಯಿಂದ ಅಧಿಕಾರ ಹೊಂದಿದ ಏಜಂಟರಿಗೆ ಅಥವಾ ದಲಾಲರಿಗೆ ಶೇಕಡಾ 5ರ ಕಮಿಶನನ್ನು ಕೊಡುವುದು.

ಪಾಲುಗಳ ಅರ್ಜಿಯ ಫೋರ್ಮುಗಳು (1) ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿಯೂ (2) ಕೆನರಾ ಬೇಂಕ್ ಲಿಮಿಟೆಡ್ ಮತ್ತು ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಇವರ ಎಲ್ಲಾ ಶಾಖೆಗಳಲ್ಲಿಯೂ ದೊರಕುವುವು. ಶೇರುಗಳ ಅರ್ಜಿಯ ಸಂಬಂಧದ ಐವೇಜುಗಳನ್ನು ಕಂಪೆನಿಯ ಪರವಾಗಿ ಮೇಲೆ ಕಾಣಿಸಿದ ಬೇಂಕುಗಳು ಇತರ ಯಾವ ಖರ್ಚನ್ನೂ ಕೇಳದೆ ಸ್ವೀಕರಿಸುವುವು. ಎಲ್ಲೊಟ್‌ಮೆಂಟ್ ಆಗದೆ ಇದ್ದರೆ ಕೊಟ್ಟ ಡಿಪೊಜಿಟ್ ಐವೇಜನ್ನು ಪೂರಾ ವಾಪಾಸು ಕೊಡೋಣಾಗುವುದು ಮತ್ತು ಅರ್ಜಿ ಮಾಡಿದ ಶೇರು ಸಂಖ್ಯೆಗಿಂತ ಎಲ್ಲೊಟ್ ಆದ ಶೇರುಸಂಖ್ಯೆಯು ಕಡಿಮೆ ಯಾದರೆ, ಆ ಸಂಬಂಧ ಕಂಪೆನಿಯೊಡನೆ ಉಳಿಯುವ ಡಿಪೋಜಿಟ್ ಐವೇಜನ್ನು ಎಲ್ಲೊಟ್ ಆದ ಶೇರುಗಳ ಬಗ್ಗೆ ಬರ ಬೇಕಾದ ಐವೇಜಿನ ಬಗ್ಗೆ ವಜಾ ತೆಗೆದು, ಇನ್ನೂ ಬಾಕಿ ಉಳಿದಲ್ಲಿ ಅರ್ಜಿಮಾಡಿದವರಿಗೇನೆ ವಾಪಾಸು ಕೊಡೋಣಾಗು ವುದು. ಕೇಳಿದ ತಾರೀಕಿಗೆ ಶೇರಿನ ಬರಬೇಕಾದ ಐವೇಜನ್ನು ಕೊಡದೆ ಇದ್ದಲ್ಲಿ, ಮೊದಲು ಕೊಟ್ಟ ಐವೇಜನ್ನು ವಜಾ (forfeit) ಮಾಡೋಣಾಗುವುದಲ್ಲದೆ ಎಲ್ಲೊಟ್‌ಮೆಂಟನ್ನೂ ವಜಾ (cancel) ಮಾಡೋಣಾಗುವುದು.

ತಾರೀಕು 7ನೇ ಜನವರಿ 1936.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ತೆಂಬಿಯುಮ್ ಪ್ರಾಂತ್ಯವು ಹಬಸಿಯುವರಿಗೆ ಸೇರಿತು!

ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರ ಸ್ಥಿತಿ!

ಲಕ್ನೋದಲ್ಲಿ ಕಾಂಗ್ರೆಸ್ಸು ಶ್ರೀ ಪಂಡಿತ ಜವಾಹರಲಾಲರು ಅಧ್ಯಕ್ಷರು.

ಫ್ರಾನ್ಸಿನಲ್ಲಿ ಭಯಂಕರ ನೆರೆ!

ಹಬಸಿಗಳು ಕಳೆದುಹೋದ ತೆಂಬಿಯುಮ್ ಪ್ರಾಂತ್ಯವನ್ನು ಪುನಃ ಹಿಡಿದಿರುವರು.

ಕೆಲವು ಸಮಯದ ಹಿಂದೆ ಇಟಲಿಯಾನರು ವಶೀಕರಿಸಿದ ತೆಂಬಿಯುಮ್ ಪ್ರದೇಶವನ್ನು ಹಬಸಿಗಳು ಪುನಃ ವಶಮಾಡಿರುವರು. ಇಟಲಿಯಾನರು ಪಲಾಯನ ಮಾಡುತ್ತಿದ್ದಾರೆಂದು ವಾರ್ತೆ. ಇಟಲಿಯಾನರು ವಿಮಾನಗಳಿಂದ ಧಾರಾಳ ಬೊಂಬಿನ ಪ್ರಯೋಗವನ್ನು ಮಾಡುತ್ತಿದ್ದಾರೆ. ಹಬಸಿಗಳು ಅವುಗಳಿಂದ ಬಹಳ ಯುಕ್ತಿಯಿಂದ ಪಾರಾಗುತಿದ್ದಾರೆ.

ಫ್ರಾನ್ಸಿನಲ್ಲಿ ಭಯಂಕರ ನೆರೆ

ಲೋಯರ್ ನದಿಯು ವಿಶೇಷ ಮಳೆಯಿಂದ ಉಕ್ಕಿ ಬಂದು ಫ್ರಾನ್ಸಿನ ನಗರಗಳಲ್ಲಿ ಹರಿಯಲಾರಂಭಿಸಿತು. ವಾಹನಗಳು ಚಲಿಸುತ್ತಿರುವ ಮಾರ್ಗಗಳಲ್ಲಿ ದೋಣಿಗಳು ತೇಲಲಾರಂಭಿಸಿದುವು. ಜನರು ಮನೆಯ ಮಾಡುಗಳನ್ನೂ, ಗುಡ್ಡ ಪರ್ವತಗಳನ್ನೂ ಏರಿದರು. ಈ ನೆರೆಯಿಂದಾಗಿ ಆ ನದಿಯ ತಡದಲ್ಲಿರುವ ನಗರಗಳಿಗೆ ಅನೇಕ ತರದ ನಷ್ಟಗಳು ಸಂಭವಿಸಿವೆ.

ಇಟಲಿಯಾನರು ವಿಷಕರ ಗೇಸನ್ನು ಉಪಯೋಗಿಸುತಿದ್ದಾರೆ

ವಿಮಾನಗಳಿಂದ ಖಾಲಿ ಬೋಂಬುಗಳಲ್ಲದೆ ಇಟಲಿಯಾನರು ವಿಷಕರ ಗೇಸನ್ನು ಹರಡುವ ಬೊಂಬುಗಳನ್ನು ಉಪಯೋಗಿಸುತಿದ್ದಾರೆ. ಅನೇಕ ಹಬಸಿಹಳ್ಳಿಗಳ ಮೇಲೆ ವಿಷಕರಗೇಸಿನ ಬೊಂಬುಗಳನ್ನು ಸುರಿಸಿರುತ್ತಾರೆ. ಹಬಸಿ ಚಕ್ರವರ್ತಿಯವರು ಇಟಲಿಯ ಈ ದುವರ್ತನೆಯನ್ನು ಜನಾಂಗ ಸಭೆಗೆ ತಿಳಿಸಿರುತ್ತಾರೆ.

ಹಬಸಿ ರಣರಂಗಕ್ಕೆ.

ರೋಮಿನಿಂದ ಇಟಲಿಯಾನರಿಗೆ ಕೆಲವು ನವೀನ ತರದ ವಿಮಾನಗಳು ಕಳುಹಿಸಲಾಗುವುವು. ಆದರೆ ಈ ವಿಮಾನಗಳು ಬ್ರಿಟಿಷ ಮತ್ತು ಫ್ರೆಂಚ್ ಪ್ರದೇಶಗಳ ಮೇಲಿಂದ ಹಾರಾಡಬೇಕಾಗಿರುವುದರಿಂದ ಇದರಿಂದ ಕಲಹಗಳು ಉಂಟಾಗುವುವೆಂದು ಕೆಲವರ ಮಾತು. ರೋಮಿನಿಂದ ಇವುಗಳು ಎಬಿಸಿನಿಯಾದ ಉತ್ತರ ರಣರಂಗಕ್ಕೆ ನಿಲ್ಲದೆ ಸಂಚರಿಸಲು ಯೋಗ್ಯತೆಯುಳ್ಳ ಮತ್ತು ಭಯಂಕರ ನವೀನ ರೀತಿಯ ಯುದ್ಧೋಪಕರಣ ಕೂಡಿದ ವಿಮಾನಗಳಾಗಿರುತ್ತವೆ. ಈ ವಿಮಾನಗಳು ಇಟಲಿಯಾನರಿಗೆ ಒದಗಿದರೆ ಅಗ್ನಿ ಬೊಂಬುಗಳಿಂದ ಒದಗುವ ಅನಾಹುತಗಳು ಇನ್ನೂ ಮಿಗಿಲಾಗುವುವು.

"ಎಲ್ಲರೂ ಸಿದ್ಧರಾಗಿರಬೇಕು" ಎಂದು ಹಬಸಿ ಚಕ್ರವರ್ತಿಯವರ ಅಪ್ಪಣೆ.

ಹಬಸಿಗಳು ಇಟಲಿಯಾನರ ಮೇಲೆ ಬಹಳವಾಗಿ ರೇಗಿರುತ್ತಾರೆ. ಆ ಪ್ರಯುಕ್ತ ಹಬಸಿ ಚಕ್ರವರ್ತಿಯವರ ಮೇಲಿನ ಕೋರಿಕೆಯನ್ನು ಸಲಾಯಿಸಲು ಸಾಧಾರಣ ಅವರ ಎಲ್ಲಾ ಪ್ರಜೆಗಳು ಸಿದ್ಧರಾಗಿರುವರು. ಇತ್ತಲಾಗೆ ಹಬಸಿಯವರನ್ನು ದುರ್ಬೋಧೆಗಳಿಂದ, ಲಂಚದುಪಯೋಗದಿಂದಲೂ ದೇಶದ್ರೋಹಿಗಳಾಗಿ ಮಾಡುವ ಇಟಲಿಯಾನರ ಪ್ರಯತ್ನಗಳು ನಿಷ್ಪ್ರಯೋಜನಕರವಾಗಿವೆ. ಇಟಲಿಯಾನರು ತಮ್ಮ ಅಧಿಕಾರದಲ್ಲಿರುವ ಇರಿಟ್ರಿಯಾ ಪ್ರದೇಶದ ದೇಶಿ ಸೈನಿಕರನ್ನು ಅನೇಕ ಕಷ್ಟಾಂತರಗಳಿಗೆ ಒಳಪಡಿಸಿದುದೆ ಇದಕ್ಕೆ ಕಾರಣವಾಗಿರುತ್ತದೆ. ಮೊನ್ನೆ ತಾ ೭ರಲ್ಲಿ ಕ್ರಿಸ್‌ಮಸ್ ಹಬ್ಬವು, ತಮಗೆ ಲಭಿಸಿದ ಹಲವು ಜಯಗಳ ಸ್ಮರಣಾರ್ಥವಾಗಿ ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಪ್ರಜೆ ಸಮುದಾಯವು ಬಹಳ ಸಂತೋಷದಿಂದ ಈ ಹಬ್ಬವನ್ನು ಜರಗಿಸಿತು.

ಹಬಸಿ ಇಟಲಿಯಾನ ಯುದ್ಧವು ಬರುವ ಜುಲಾಯಿ ತಿಂಗಳಲ್ಲಿ ಮುಗಿಯುವುದು.

ಹಬಸಿಯವರು ಈ ಯುದ್ಧವನ್ನು ಇನ್ನು ಬರೇ ೬ ತಿಂಗಳಲ್ಲಿ ಕೊನೆಗೊಳಿಸುವರೆಂದು ಓರ್ವ ಹಬಸಿ ಯುದ್ಧಯೋಧನನ ಅಭಿಪ್ರಾಯ. ಇವರಲ್ಲಿ ನವೀನ ತರದ ಯುದ್ಧೋಪಕರಣಗಳು ಇಲ್ಲದಿರುವುದೇನೋ ನಿಜ. ಆದರೆ, ಇವರಿಗೆ ಈ ಕಾರ್ಯದಲ್ಲಿ ದೈವವು ಸಹಕರಿಸುವಂತೆ ಅಲ್ಲಿನ ಮಳೆಯು, ಮಲೇರಿಯಾ ಇತ್ಯಾದಿ ಆ ದೇಶದ ಆನ ಸಂಕಟಗಳು ಇಟಲಿಯಾನರನ್ನು ಸದೆಬಡೆಯುವುದು. ಅದರಲ್ಲೂ ಪೆಟ್ರೋಲಿನ ಮೇಲೆ ಸಂಕ್ಷನ ಜ್ಯಾರಿಯಾದರೆ ಸರಿ. ಆಗ್ಗೆ ಇವರ ಊಹೆಯು ಸರಿಯಾಗಿ ನಡೆಯುವುದು ಖಚಿತವಂತೆ.

ಅಂತರಿಕ್ಷದಿಂದ ಆಕ್ರಮವನ್ನು ತಡೆಯುವ ತುಪಾಕಿ

ಇಂಗ್ಲಾಂಡಿನ ಯುದ್ಧೋಪಕರಣಗಳನ್ನು ತಯಾರಿಸುವ ಪ್ರಸಿದ್ಧ ವಿಕ್ಕರ್ಸ್ ಕಂಪೆನಿಯವರು ವಿಮಾನಗಳಿಂದ ಒದಗಬಹುದಾದ ಅಂತರಿಕ್ಷದ ಆಕ್ರಮಗಳನ್ನು ತಡೆಯಲು ವಿಶೇಷ ಗುಣಗಳುಳ್ಳ ಒಂದು ತುಪಾಕಿಯನ್ನು ತಯಾರಿಸಿರುವರು. ಈ ತುಪಾಕಿ ಪ್ರಪಂಚದಲ್ಲಿ ಶ್ರೇಷ್ಠವಾದುದಂತೆ. ಈಗಲೇ ಅನೇಕ ಜನಾಂಗಗಳಿಂದ ವಿಲಿಯಗಟ್ಟಲೆ ಇಂತಹ ತುಪಾಕಿಗಳಿಗೆ ಓರ್ಡರ್ ಬಂದಿರುತ್ತವಂತೆ.

ಇರ್ವಿನ್ ಆಸ್ಪತ್ರೆ.

ಮಾಜಿ ವೈಸರಾಯರಾದ ಇರ್ವಿನ್ ಪ್ರಭುಗಳು ಶಂಕುಸ್ಥಾಪನೆ ನಡೆಯಿಸಿದ ನವದಿಲ್ಲಿಯ ಇರ್ವಿನ್ ಆಸ್ಪತ್ರೆಯ ಕಟ್ಟಡದ ಕೆಲಸವು ಈಗ ಸಂಪೂರ್ಣವಾಗುತ್ತಾ ಬರುತ್ತಿದೆ. ಸಾಧಾರಣ ೪೦ ಲಕ್ಷ ರೂಪಾಯಿ ವೆಚ್ಚವಾಗಿರುವುದು. ಈ ಕಟ್ಟಡದ ನಿರ್ಮಾಣದಲ್ಲಿ ಅನೇಕ ನವೀನ ರೀತಿಗಳನ್ನು ಅನುಸರಿಸಿದ್ದಾರೆ. ಈ ಆಸ್ಪತ್ರೆಯಲ್ಲಿ ಸಾಧಾರಣ ೫ ಲಕ್ಷ ರೂಪಾಯಿ ವೆಚ್ಚವಾದ ಎಕ್ಸ್‌ರೇ ಇಲಾಖೆ ಇದೆ. ಎಲ್ಲಾ ವಿಧದಲ್ಲಿ ಈ ಆಸ್ಪತ್ರೆಯು ಮದರಾಸಿನ ಪ್ರಖ್ಯಾತ ಜನರಲ್ ಆಸ್ಪತ್ರೆಯಂತಿರುವುದು.

ದಕ್ಷಿಣ ಆಫ್ರಿಕದ ಭಾರತೀಯರ

ಪ್ರಶ್ನೆಯನ್ನು ಜನಾಂಗ ಸಭೆಯ ಇತ್ಯರ್ಥಕ್ಕೆ ಒಳಪಡಿಸಬೇಕೆಂದು ಕೆಲವು ಸೂಚನೆಗಳು ಬಂದಿವೆ. ಇಲ್ಲಿ ಉತ್ತಮ ಸಂಸ್ಕೃತಿ ಹೊಂದಿದ ನವನಾಗರೀಕರಾದ ಪಾಶ್ಚಾತ್ಯರಿಂದ ಭಾರತೀಯರಿಗೆ ಒದಗುವ ಕಷ್ಟಗಳು ಅಷ್ಟಿಷ್ಟಲ್ಲ. ಬರುವ ಶಾಸನ ಸಭೆಯ ಅಧಿವೇಶನದಲ್ಲಿ ಈ ಕುರಿತು ಸರಕಾರದೊಡನೆ ಅನೇಕ ಪ್ರಶ್ನೆಗಳು ಕೇಳಲಾಗುವುವು.

ಸಂಯುಕ್ತ ಅಮೇರಿಕಾವು

ಕಳೆದ ಮಹಾಯುದ್ಧದಲ್ಲಿ ಬ್ರಿಟನ್ ಮತ್ತು ಫ್ರಾನ್ಸಿನವರಿಗೆ ಸಾಧಾರಣ ೩೬೩,೦೦೦,೦೦೦ ಡೊಲ್ಲರುಗಳು ಕ್ರಯಬಾಳುವ ಯುದ್ಧ ಸಾಮಗ್ರಿ, ದವಸಧಾನ್ಯ, ವಸ್ತ್ರ ಇತ್ಯಾದಿಯನ್ನು ಮಾರಾಟ ಮಾಡಿರುತ್ತದೆ.

ಮದ್ರಾಸಿನಲ್ಲಿ ಜಾಪಾನೀಯ ಕವಿಗಳು

ಭರತ ಖಂಡವನ್ನು ಸಂಚರಿಸುತ್ತಿರುವ ಜಪಾನಿನ ಕವಿ ಯೋನ್ ನೋಗ್ಯುಚಿಯವರು ಈಗ ಮದ್ರಾಸಿಗೆ ಬಂದಿರುವರು. ಇಲ್ಲಿನ ವಿಶ್ವವಿದ್ಯಾಲಯದ ಸಿನೇಟ ಹೌಸಿನಲ್ಲಿ ಜಪಾನೀಯ ಕಲೆ ಮತ್ತು ಪದ್ಯದ ಮೇಲೆ ನಾಲ್ಕು ಭಾಷಣಗಳನ್ನು ಮಾಡುವರು. ಇವರು ಮಹಾತ್ಮಾ ಗಾಂಧಿಯವರು ಇರುವ ವಾರ್ಧಾ ನಗರಕ್ಕೆ ತೆರಳಿದ್ದರು. ಮಹಾತ್ಮಾ ಗಾಂಧಿಯವರೊಡನೆ ಭೇಟಿ ಮಾಡಿದ್ದರು. ಮಹಾತ್ಮಾ ಗಾಂಧಿಯವರು ಸತ್ಯದ ಅವತಾರವೆಂದು ಇವರು ಅಭಿಪ್ರಾಯ ಪಡುತ್ತಿದ್ದಾರೆ. ಮದ್ರಾಸಿನಲ್ಲಿ ತಮ್ಮ ಭಾಷಣಗಳನ್ನು ಮುಗಿಸಿ ಹೈದರಾಬಾದಿಗೆ ತೆರಳುವರು.

ಲಕ್ನೊ ಕಾಂಗ್ರೆಸ್.

ಲಕ್ನೊ ಕಾಂಗ್ರೆಸ್ಸಿಗೆ ಕಳುಹಿಸಲ್ಪಡಲು ಪ್ರತಿನಿಧಿಗಳ ಚುನಾವಣೆ ಕಾರ್ಯವು ಭರತ ಖಂಡದ ಎಲ್ಲಾ ಪ್ರಾಂತ್ಯಗಳಲ್ಲಿ ನಡೆಯುತ್ತಿದೆ. ಕಾಂಗ್ರೆಸ್ ಕಾರ್ಯಕ್ಕಾಗಿ ಬೇಕಾಗುವ ಹಣವನ್ನು ಕೂಡಿಸಲು ಲಕ್ನೊ ನಗರದ ಪ್ರಸಿದ್ಧ ಪುರುಷರು ಸಂಯುಕ್ತ ಪ್ರಯತ್ನವನ್ನು ಸಂಚರಿಸುತಿದ್ದಾರೆ. ಜವಾಹರ್‌ಲಾಲರು ಈ ಬಾರಿಯ ಅಧ್ಯಕ್ಷರೆಂದು ನಿರ್ಧಾರವಾಗಿರುತ್ತದೆ.

ಅಂತರ್ರಾಷ್ಟ್ರೀಯ ನೌಕಾ ಪರಿಷತ್ತು

ಜಾಪಾನು ಇತರ ಜನಾಂಗಗಳು ಕೊಟ್ಟಿರುವ ಯಾವತ್ತು ಶರ್ತಗಳನ್ನು ಅನುಸರಿಸಲು ಸಿದ್ಧವಿಲ್ಲ. ಆದುದರಿಂದ ಇಷ್ಟು ಶ್ರಮವಟ್ಟು ಜರಗಿಸಿದ ಈ ಪರಿಷತ್ತು ಫಲಕಾರಿಯಾಗುವುದರಲ್ಲಿ ತುಂಬಾ ಸಂದೇಹ. ನೌಕಾಬಲದ ಕುರಿತು ಕೆಲವು ಜನಾಂಗಗಳಲ್ಲಿ ಕೆಲವು ಒಪ್ಪಂದಗಳು ಜ್ಯಾರಿಯಲ್ಲಿದ್ದವು. ಇವು ಸ್ವಲ್ಪ ಸಮಯದಲ್ಲೇ ರದ್ದಾಗುವುವು. ನೌಕಾಬಲಕ್ಕಾಗಿ ವಿಶೇಷ ವೆಚ್ಚವಾಗದಂತೆ ಎಲ್ಲಾ ಜನಾಂಗಗಳು ನವೀನ ಒಪ್ಪಂದಗಳನ್ನು ಮಾಡಬೇಕಾಗಿ ಈ ಪರಿಷತ್ತಿನ ಉದ್ದೇಶವಿತ್ತು. ಜಪಾನೀಯರ ವರ್ತನೆಯಿಂದ ಯಾವತ್ತು ಒಪ್ಪಂದಗಳಾಗುವ ಸಂದರ್ಭ ದೊರಕುವ ಹಾಗಿಲ್ಲ. ಪ್ರಪಂಚದ ಶಾಂತಿಗೆ ಇನ್ನೊಂದು ಭಂಗ ಬರುವುದೆ?

ವಿದ್ಯಾ ಸಪ್ತಾಹ ಸಮಾರಂಭಗಳು.

ಯಾವತ್ತೂ ಸ್ಥಳೀಯ ಸಂಸ್ಥೆಗಳ ಅಧಿಕಾರದಲ್ಲಿರುವ ಶಾಲೆಗಳು ವಿದ್ಯಾಸಪ್ತಾಹ ಸಮಾರಂಭಗಳಿಗೆ, ಎಲಿಮೆಂಟರಿ ವಿದ್ಯಾಭ್ಯಾಸದ ಫಂಡಿನಿಂದ ಹಣವನ್ನು ವ್ಯಯಿಸಬಾರದಾಗಿ ಮದ್ರಾಸು ಸರಕಾರದ ಅಪ್ಪಣೆಯಾಗಿರುತ್ತದೆ.

ನಮ್ಮ ಜಿಲ್ಲಾ ಕಲೆಕ್ಟರರಿಗೆ ಒಂದು ವಾಸಸ್ಥಳ

ಇಷ್ಟರ ತನಕ ಬಾಡಿಗೆಯ ಬಂಗ್ಲೆಗಳಲ್ಲಿರುವ ಜಿಲ್ಲಾ ಕಲೆಕ್ಟರರು, ಇತ್ತೀಚೆಗೆ ಅವರ ಮೇಲೆ ನಡೆದ ವ್ಯವಹರಣೆ ನಿಮಿತ್ತವಾಗಿ, ಅವರು ಮನೆಯ ಯಜಮಾನರ ಕಾಟಕ್ಕೆ ಒಳಗಾಗಬಾರದೆಂದು ಈಗ ಅವರು ವಾಸವಾಗಿರುವ ನಿಲಯವನ್ನು ಸರಕಾರದವರು ರೂಪಾಯಿ ೪೭,೦೦೦ಕ್ಕೆ ಕ್ರಯಕ್ಕೆ ಪಡಕೊಳ್ಳಲು ನಿರ್ಧಾರ ಮಾಡಿರುತ್ತಾರೆ.

ಪೂರ್ಣ ಸ್ವರಾಜ್ಯ ದಿವಸ

ವಾಡಿಕೆಯಂತೆ ಪೂರ್ಣ ಸ್ವರಾಜ್ಯ ದಿವಸವನ್ನು ಇದೇ ತಿಂಗಳ ತಾ ೨೬ರಲ್ಲು ಜರಗಿಸಬೇಕಾಗಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಬಾಬು ರಾಜೇಂದ್ರ ಪ್ರಸಾದರವರ ಮನವಿ ಹೊರಡಿರುತ್ತದೆ. ಇದನ್ನು ಎಲ್ಲೆಲ್ಲೂ ಬಹಳ ಸಂಭ್ರಮದಿಂದಲೂ, ಭಾವಪೂರ್ವಕವಾಗಿಯೂ ಜರಗಿಸುವರೆಂದು ಮಾನ್ಯ ಅಧ್ಯಕ್ಷರ ಊಹೆ.

ಇಂಗ್ಲಾಂಡಿನ ಬೇಂಕುಗಳ ಲಾಭದಾಯ.

ಇಂಗ್ಲಾಂಡಿನ ಬೇಂಕಿನ ಲಾಭವು ೧೯೩೫ ೩೬ರಲ್ಲಿ ೯ ೫೪ ಮಿಲಿಯ ಪೌಂಡು ಆಗಿರುತ್ತದೆ. ೧೯೩೪ರಲ್ಲಿ ಇದು ೯ ೪೯ ಮಿಲಿಯ ಪೌಂಡು ಆಗಿತ್ತು. ೧೯೩೩ರಲ್ಲಿ ೯ ೦೩ ಮಿಲಿಯ ಪೌಂಡಾಗಿತ್ತು.

ಹಬಸಿಗಳ ಸಹಾಯಾರ್ಥವಾಗಿ

ಐಗುಪ್ತದ ಮುಖ್ಯ ನಗರವಾದ ಕೈರೋವಿನ ಕೆಲವು ಪ್ರಾಮುಖ್ಯ ವರ್ತಕರ ಕೂಡಿದ ಒಂದು ಸಂಘವು ಹಬಸಿಯುವರಿಗೆ ವೈದ್ಯಕೀಯ ಸಹಾಯ ಒದಗಿಸಲು ಹಣ ಒಟ್ಟು ಮಾಡುತ್ತಿದ್ದಾರೆ. ಧಾರಾಳ ಹಣವು ಕೂಡಿರುತ್ತದೆ.

ಅನೇಕ ಜನಾಂಗಗಳು

ತಮ್ಮ ಖರ್ಚಿನ ಮೇಲೆ ಅಂಬ್ಯುಲೆನ್ಸುಗಳನ್ನು ಇಥಿಯೋಪಿಯಕ್ಕೆ ಕಳುಹಿಸುತಿದ್ದಾರೆ. ಯುರೋಪು ಖಂಡದಿಂದ ಅನೇಕ ಮಂದಿ ಡಾಕ್ಟರರು, ವೈದ್ಯಕೀಯ ಉಪಕರಣಗಳು ದಿನಾಲೂ ರಣರಂಗಕ್ಕೆ ಹೋಗುತ್ತಿವೆ. ಬ್ರಿಟನ್, ಫ್ರಾನ್ಸ್, ನೆದರ್‌ಲೇಂಡ್ ಇವರೇ ಮೊದಲಾದವರು ಹಬಸಿಯವರಿಗೆ ಸಾಕಷ್ಟು ವೈದ್ಯಕೀಯ ಸಹಾಯವು ಒದಗುವಂತೆ ವ್ಯವಸ್ಥೆ ಮಾಡಿರುತ್ತಾರೆ.

ಟರ್ಕಿ ಸರಕಾರದವರ ಹೊಸ ತೆರಿಗೆ.

ವಿಮಾನಗಳಿಂದ ಚೆಲ್ಲಲ್ಪಟ್ಟ ವಿಷಕರ ಗೇಸು ಬೋಂಬುಗಳ ಅನಾಹುತದಿಂದ ತಪ್ಪಿಸಲು ಪ್ರತಿಯೊಂದು ಪ್ರಜೆಗೆ ಒಂದೊಂದು ಗೇಸುಮಾಸ್ಕನ್ನು ಕೊಡಬೇಕಾಗಿ ಟರ್ಕಿ ಸರಕಾರವು ಕ್ರಮಮಾಡಿರುತ್ತದೆ. ಇದಕ್ಕೆ ತಗಲಬಹುದಾದ ವೆಚ್ಚವನ್ನು ಗಳಿಸಲು ಪ್ರಜೆಗಳ ಮೇಲೆ ಹೊಸ ತೆರಿಗೆಯನ್ನು ವಿಧಿಸಿದ್ದಾರೆ.

ಸೋತು ಹಿಯ್ಯಾಳಿಸಿದರೋ, ಹಿಯಾಳಿಸಿ ಸೋತರೋ"

\+ \+ \+ \+

ಯಾರೇ ಆಗಲಿ, ಸಭ್ಯರು ಆಡಬೇಕಾದರೆ ದೊಡ್ಡವರಲ್ಲೇ. ಅವರು ಆಮಂತ್ರಿಸಿಧಂತೆ ಹೋಗಿ, ಅವರು ಗುಲ್ಲು ಬೈಗಳು ಪ್ರದರ್ಶಿಸುವುದನ್ನು ನೋಡಿಯೇ ಗೆಲ್ಲಬೇಕೆಂದೂ, ಅಲ್ಲಿ ಗೆದ್ದರೆ ಮಾತ್ರ ಕಪ್ ಸಿಗುವುದೆಂದೂ ನಿಯಮವಂತೆ!

\+ \+ \+ \+

ಈ ಕಪ್ಪಿನ ನಿಯಮವೆಂದರೆ, ಆಟದ ಒಂದು ಅಂಗವಾಗಿ ಕುಚ್ಚೋದ್ಯವನ್ನು ಗೆಲ್ಲುವವರೂ ಕಪ್ ತುಂಬಾ ಪಡೆಯಬೇಕೆಂದು! ಕುಚ್ಚೋದ್ಯ ಮಾಡುವವರಲ್ಲಿ ಹಿರಿಯರು ಯಾರೆಂದೂ ಈ ಕಪ್ ನಿರ್ಧಾರಮಾಡುವುದಂತೆ.

× × × × ×

ಈ ಕಪ್ಪು, ಕಪ್ಪು ಬಳಿದುಕೊಳ್ಳಬಲ್ಲವರಿಗೇ ಇದ್ದರಾಗದೇ? ಇತರರಿಗೆ ಏಕೆ?

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ಗ್ರಂಥಗಳ ಆಧಾರದಿಂದ ಸಾಧ್ಯವಾದಷ್ಟು ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾಯುತ ಸಮೇತ
ಋಗ್ವೇದೀ ಸಂಧ್ಯಾವಂದನೆ
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ
ಬೆಲೆ ಆಣೆ 8.
30, 60, 100 ಪ್ರತಿಗಳನ್ನು ಒಮ್ಮೆಲೆ ತರಿಸಿಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ—ಅದು ಪೂರ್ಣವಾದ ಟೋನಿಕ್ ಆಹಾರ. ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ.
ರೂ. 3-4-0 ಮತ್ತು ರೂ. 1-12-0.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
93, ಚಿಕ್ಕಪೇಟೆ, ಬೆಂಗಳೂರು ಸಿಟಿ.

Ested 1920] THE [1920ರಲ್ಲಿ ಸ್ಥಾಪಿತವಾದದ್ದು.
Kanara Enterprise Ltd.,
PUTTUR
ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್
ಪುತ್ತೂರು.
ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.
"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.
"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.
ಯೋಗ್ಯ ಜಾಮೀನ್ದಾರರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.
ಹೆಚ್ಚಿನ ವಿವರಗಳ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur, Dated 10—4—1935.

G. N. Lakshman Pai,
Secretary.

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ್'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾಹುಕಾರ ಶ್ರೀನಿವಾಸ ರಂಗ ಪೈ,

ಸಾಹುಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು. ಇದು ಸ್ತ್ರೀಸಂಗಮದಿಂದ ಮನುಷ್ಯನ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು.

ಅನೇಕರು ಕಾಹಿಲೆಯ ದೆಸೆಯಿಂದ ಕೊಲ್ಲೂರಿಕೊಂಡು ತಿರುಗುತ್ತಿದ್ದಾರೆ. ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ. ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ—ದೊಡ್ಡ ಬಾಟ್ಲಿಗೆ ರೂ. 4. ಮಧ್ಯಮ 2-4-0. ಚಿಕ್ಕದು 1-2-0.

ತಯಾರಿಸುವವರು:— ಲಸ್ಟರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್:—ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು:—ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

'ಸ್ವದೇಶಾಭಿಮಾನಿ', ಉತ್ತಮವರ್ಗದ ವಾರಪತ್ರಿಕೆ.
ಇಂದೇ ಚಂದಾದಾರರಾಗಿರಿ—ಓದಿರಿ!

ಮಿಥ್ಯಾಜೀವನದ ಸತ್ಯಕಥೆಗಳು.

(All Rights Reserved)

ಲೇಖಕರು—ಶ್ರೀ "ರಸಿಕರಂಜನ"

"Truth is stranger than fiction"

[ವಿಶೇಷ ಸೂಚನೆ — ಪ್ರಪಂಚದಲ್ಲಿ ನಡೆಯುವ ಹಲವು ಘಟನೆಗಳು ಕಾದಂಬರಿಗಳಿಗಿಂತಲೂ ವಿಚಿತ್ರವಾಗಿರುತ್ತವೆ. ಸಮಾಜದ ಮಿಥ್ಯಾಜೀವನದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮುಂತಾದುವುಗಳಿಂದ ಪ್ರೇರಿತವಾಗಿ ನಡೆಯುವ ದುಷ್ಕಾರ್ಯಗಳು ಎಂತಹ ಪರಿಣಾಮಗಳಲ್ಲಿ ಪರ್ಯವಸಾನಗೊಳ್ಳುವುವೆಂಬುದನ್ನು ಈ ಸತ್ಯಕಥಾಮಾಲೆಯು ಸ್ಪಷ್ಟಪಡಿಸುತ್ತದೆ. ಸಂಸಾರ ಸಾಗರದ ತಳದಲ್ಲಿ ಕಂಡೂ ಕಾಣದಂತಿರುವ ಬಂಡೆಗಳಾದ ಈ ಅನಾಹುತಗಳನ್ನು ಗಮನಿಸಿ ಇತರರು ತಮ್ಮ ಸಂಸಾರ ನೌಕೆಗಳನ್ನು ನಿರಾತಂಕವಾಗಿ ಸಾಗಿಸಲು ಶಕ್ತರಾಗಲೆಂಬುದೇ ಇವುಗಳ ಬರವಣಿಗೆಯ ಉದ್ದೇಶವು. ಕಥೆಗಳಲ್ಲಿ ಕೆಲವು ಕೇವಲ ಭೀಭತ್ಸವಾಗಿದ್ದು ಸ್ವಾಭಾವಿಕತೆಯು ಇಲ್ಲದಂತೆ ವಿರುದ್ಧವಾದರೂ ಎಲ್ಲಾ ಕಥೆಗಳೂ ಮುಖ್ಯಾಂಶದಲ್ಲಿ ಅತಿಶಯೋಕ್ತಿಯಿಲ್ಲದ ಸತ್ಯಕಥೆಗಳೇ ಆಗಿರುತ್ತವೆ. ಹೆಸರುಗಳು ಮಾತ್ರ ಎಲ್ಲಾ ಕಥೆಗಳಲ್ಲಿಯೂ ಬದಲಾಯಿಸಲ್ಪಟ್ಟಿರುವುವು —ಲೇಖಕ]

ನನ್ನ ಸಾಕ್ಷಾತ್ತಿನ ಕಥೆ

೧. "ನಿರುದ್ಯೋಗ ನಿವಾರಣೆ"

ಮಾಧವರಾಯನು ಹೈಸ್ಕೂಲಿನ ವಿದ್ಯಾಭ್ಯಾಸ ಮುಗಿಸಿದ ಮೇಲೆ, ಹಲವು ಮಕ್ಕಳ ತಂದೆಯಾಗಿದ್ದು, ಮಧ್ಯಮ ತರಗತಿಯ ಆದಾಯವುಳ್ಳವನಾದ ಆತನ ತಂದೆ ವಿಶ್ವನಾಥ ರಾಯನು ಮಗನನ್ನು ಉನ್ನತ ವಿದ್ಯಾಭ್ಯಾಸಕ್ಕೆ ಕಳುಹುವ ಯೋಚನೆ ಮಾಡಲಿಲ್ಲ. ಸಂಕ್ಷೇಪವಾಗಿ ಮಾಧವನು ಕಮರ್ಶಿಯಲ್ ವಿಷಯಗಳನ್ನು ಆರು ತಿಂಗಳುಗಳ ವರೆಗೆ ಅಭ್ಯಾಸ ಮಾಡಿ ಜನವರಿಯಲ್ಲಿ ಮಂಗಳೂರಿನಿಂದ ಮುಂಬಾಯಿಯ ಸ್ಟೀಮರನ್ನು ಹತ್ತಿದ

ಮುಂಬಾಯಿಯಲ್ಲಿ ಮೊದಲು ಕೆಲವು ತಿಂಗಳ ವರೆಗೆ ದೊಡ್ಡದೊಡ್ಡ ವ್ಯಾಪಾರೀ ಸಂಸ್ಥೆಗಳ ಇನ್ಸ್‌ಪೆಕ್ಷನ (ಉದ್ಯೋಗ ಶೋಧನೆಗಾಗಿ) ಮಾಡುವ ಗೌರವ ಉದ್ಯೋಗವೇ (Honorary Appointment) ಪ್ರಾಪ್ತವಾಗಿದ್ದರೂ, ಕೊನೆಯಲ್ಲಿ ಒಬ್ಬ ಸಂಬಂಧಿಕರ ಸಹಾಯದಿಂದ 'ದೂವ್ಸ್‌ಡೇ ಕಂಪೆನಿ'ಯಲ್ಲಿ ಒಂದು ಟೈಪಿಸ್ಟ್ ಕೆಲಸ ದೊರೆಯುವಂತಾಯಿತು

ಮಾಧವನ ಕಾರ್ಯದಕ್ಷತೆಯಿಂದ, ಪ್ರೊಬೇಶನರಿಯಾಗಿ ದೊರೆಯುತ್ತಿದ್ದ ಅರ್ಧ ಸಂಬಳವು ಎರಡು ತಿಂಗಳಲ್ಲೇ ಪೂರ್ತಿಯಾಗಿ ನಡೆಯುವಂತಾಯಿತು. ಹಾಗೂ ಹೀಗೂ ಒಂದು ವರ್ಷ ಹೋಗುವಷ್ಟರಲ್ಲಿ ವಿಶ್ವನಾಥ ರಾಯನು ನೂರು ರೂಪಾಯಿ ಸಂಬಳ ಎಣಿಸುತ್ತಿದ್ದ ಮಗನಿಗೆ ಒಳ್ಳೇ ನೆಂಟಸ್ತಿಕೆಯನ್ನು ನೋಡಿ ಗಂಟುಹಾಕಿದನು, ಮತ್ತು ಗಂಟು [illegible]ದನು (ವರದಕ್ಷಿಣೆಯ [illegible])

ಎರಡನೆಯ ವರ್ಷವನ್ನು ಮಾಧವನು ಮುಂಬಾಯಿಯಲ್ಲಿ ಹೆಂಡತಿಯೊಡನೆ ಸುಖವಾಗಿ ಕಳೆದನು

ಅಷ್ಟರಲ್ಲಿ ಮಾಧವನ ಹೆಂಡತಿ ರುಕ್ಮಿಣಿಯು ಹೊಟ್ಟೆಗೂ ಆರು ತಿಂಗಳಾಯಿತು. ಹೆಂಡತಿಯನ್ನು ಹೆರಿಗೆಗೆ ಊರಿಗೆ ಕಳುಹಬೇಕೆಂದು ಯೋಚಿಸುವಷ್ಟರಲ್ಲಿ ಮಾಧವನಿಗೆ ದೊಡ್ಡದೊಂದು ಸಂಕಟವು ಪ್ರಾಪ್ತವಾಗಿ ಅವಳನ್ನು ತಾನೇ ಕರೆದೊಯ್ಯುವಂತಾಯಿತು. 'ದೂವ್ಸ್‌ಡೇ ಕಂಪೆನಿ'ಗೆ ಹದಿನಾರನೇ [illegible]?) ಆಪತ್ತು (ದಿವಾಳಿ ಅರ್ಜಿಗಾಗಿ) ಉಂಟಾಗಿ, ಅದರ ಸಾಗರದ ನೌಕೆಯನ್ನು ಕಾಯುವಂತಾಯಿತು

ಊರಿಗೆ ಬಂದ ಮಾಧವನು ಕೈಯಲ್ಲಿರುವ ಕಾಸು ಖರ್ಚಾಗುವ ವರೆಗೆ ಊರಲ್ಲೇ ಹಾಯಾಗಿ ಇದ್ದುಬಿಟ್ಟನು

ಅಷ್ಟರಲ್ಲಿ ಅವನ ತಾಯಿ ಗೋಪಮ್ಮನು ಸಂಸಾರಕ್ಕೆ ರಾಜಿನಾಮೆ ಕೊಟ್ಟು ದಿವಂಗತಳಾದಳು. ಮನೆ ತುಂಬ ಇದ್ದ ಮಕ್ಕಳ ಆರೈಕೆ ನೋಡಲು ರುಕ್ಮಿಣಿ ಒಬ್ಬಳೇ ಸಮರ್ಥಳಾಗಿದ್ದಳು. ಆದುದರಿಂದ ವಿಶ್ವನಾಥ ರಾಯನು ಮಗನಿಗೆ ತನ್ನ ವ್ಯಾಪಾರದಲ್ಲೇ ಮನಸ್ಸು ಕೊಟ್ಟು ತನ್ನೊಡನೆಯೇ ಇದ್ದುಬಿಡಲು ಸೂಚಿಸಿದನು. ಮೊದಲನೆಯ ಸಲ ಕೆಲಸ ದೊರಕಿಸಿಕೊಳ್ಳಲು ಪಟ್ಟ ಕಷ್ಟವನ್ನು ಮನಗಂಡ ಮಾಧವನು ಸ್ವಯಂದು ಊರಲ್ಲೇ ಠಾಣ್ಯ ಮಾಡಿಕೊಂಡನು

ತಂದೆಯ ಅಂಗಡಿಯ ಕೆಲಸವು ಮಗನಿಗೆ ಒಗ್ಗದಾಯಿತು. ಅಲ್ಲದೆ ಮನಸ್ವಿಯಾಗಿ ಹಣ ವೆಚ್ಚಮಾಡಿ ಸಾರವಾದ ಕೈಯು ಸುಮ್ಮನಿರಲು ಕೇಳಲಿಲ್ಲ, ಸುಮ್ಮನಿರದಂತೆ ಮಾಡಲು ವಿಶ್ವಸಂಸಾರಿಯಾದ ವಿಶ್ವನಾಥನೂ ಕೇಳಲಿಲ್ಲ, ಮಗನೂ ತಂದೆಯ ವ್ಯಾಪಾರದಲ್ಲಿ ನೆರವಾಗಿದ್ದರೂ ವ್ಯಾಪಾರವು ಹೆಚ್ಚಲು ಕೇಳಲಿಲ್ಲ. ತನಗಂತೂ ಟೈಪ್‌ರೈಟಿಂಗ್ ಬರುವುದು, ನೂರಿನ್ನೂರು ರೂಪಾಯಿ ಕೊಟ್ಟು ಒಂದು ಟೈಪ್‌ರೈಟರ್ ಪಡೆದು ಒಂದು ಮಾಳಿಗೆಯ ಮಾಳಿಗೆಯ ಮೂಲೆಯಲ್ಲಿ ಕೂತರೆ ತಿಂಗಳಿಗೆ ಐವತ್ತೈದರಿಂದ ನೂರಿನ್ನೂರರ ವರೆಗೆ ಸಂಪಾದನೆಯೇ ಆಗಲಾರದೆಂದು ಮಾಧವನು ಯೋಚಿಸತೊಡಗಿದನು. ಒಡನೆಯೇ ಆ ಸೂಚನೆಯಿಂದ ತಂದೆಯನ್ನೂ ಯೋಚನೆಗೀಡು ಮಾಡಿದನು

ಕೊನೆಯಲ್ಲಿ ಹೆಂಡತಿಯ ನಗವೊಂದನ್ನು ಮಾರಿದ. ಟೈಪ್‌ರೈಟರನ್ನೂ ಪಡೆದನು, ಒಂದು ಮಧ್ಯ ಸ್ಥಳದಲ್ಲಿ "ಇಲ್ಲಿ ಟೈಪ್‌ರೈಟ್ ಮಾಡಲಾಗುವುದು" ಎಂದು ದಳಿಗೆಯನ್ನೂ ತೂಗಾಡಿಸಿ ಕೂತನು.

ಹಳಿಗೆಯ ಮೇಲಿನ ಬರಹದ ಸತ್ಯಾಂಶ[illegible], ಎಲ್ಲರ ದೂರದಿಂದಲೇ ಓದಿ ಹೋದರು. ಒಬ್ಬರೂ ಅವನನ್ನು ಹಚ್ಚಿಗೆ [illegible] ಅವನನ್ನು ಕಾಡಿದ ಒಬ್ಬಿಬ್ಬರೂ ಅವನ ಸಂಬಂಧಿಕರುಗಳೇ ಸ್ನೇಹಿತರುಗಳೇ ಆದ್ದರಿಂದ ಅದ ಬರೀ ಕಾಟವಾಗಿ ಇದ್ದಿತೇ ಹೊರತು ಮಾಧವನಿಗೆ ಹಣದ ನೋಟವೇ ತೋರಿಯಲಿಲ್ಲ

ಕೆಲವು ತಿಂಗಳಾದ ತರುವಾಯ ಕಾಟವು ಇನ್ನೂ ಅಧಿಕ. ಕಡೆಗಳಿಂದ ಮಾಧವನಿಗೆ ದಾಳಿಯಿಟ್ಟಿತು [illegible] ತಿಂಗಳ ಕೊನೆಗೆ [illegible] ಒಬ್ಬರಿಗೆ ವಿಶಾರದಸಿಗೆ [illegible] ಸಾಗಿದ್ದುದು, ಮಧ್ಯಾಹ್ನದಲ್ಲೂ ಒಳ್ಳೆಯ ದಿನಗಳು ಬರದಿರಲಿಕ್ಕಿಲ್ಲವೆಂಬ ಆಶಾವಾದಿಯಾಗಿದ್ದ ಮಾಧವನ ದುರದೃಷ್ಟ. ವಿಶ್ವನಾಥ ರಾಯನ ವ್ಯಾಪಾರವು [illegible] ಬಿಟ್ಟಿತು [illegible] ಅವರಿಬ್ಬರ ಮರ್ಜಿಯಿಂದ ಮಾಧವನು ಟೈಪ್‌ರೈಟರನ್ನು ಮಾರಿ, ಮಾಡಿದ ಸಾಲ ತೀರಿಸಿ ಊರಲ್ಲೇ ಎಲ್ಲಿಯಾದರೂ ಕೆಲಸ ದೊರೆಯುವುದೋ ಎಂದು ಕತ್ತು ಉದ್ದಮಾಡಿ ಕೊಂಡು ತಿರುಗುವಂತಾಯಿತು

ಮನೆಯ ಪರಿಸ್ಥಿತಿಯಿಂದಾಗಿ ಕೆಲವು ತಿಂಗಳಲ್ಲೇ ಮಾಧವನ ಕತ್ತು ಇನ್ನೂ ಇನ್ನೂ ಉದ್ದವಾಗುತ್ತಾ ಬಂತು. ಕಣ್ಣುಗಳು ಗುಳಿಯೊಳಕ್ಕೆ ಇಳಿಯುತ್ತಾ ಬಂದುವು. ಎಲುಬುಗಳು ಹೊರಕ್ಕೆ ಕಾಣಿಸಿಕೊಳ್ಳುತ್ತಾ ಬಂದುವು

ಸುಖವು ಕನಸಿನಲ್ಲಿಯೂ ಇರಲಿಲ್ಲ, ಯೋಗವೂ ದೊರೆಯಲಿಲ್ಲ — ನಿರುದ್ಯೋಗದ ನಿವಾರಣೆ ಹೇಗೆಂಬುದು ದೊಡ್ಡ ಸಮಸ್ಯೆಯಾಯಿತು

ಮಾಧವನ ರೆಕಾರ್ಡ್ ಇನ್ಸ್‌ಪೆಕ್ಷನ್ ಕೂಡ ಗೌರವ ಉದ್ಯೋಗವೇ ಆಗಿದ್ದುದರಿಂದ ವಿಶ್ವನಾಥ ರಾಯನಿಗೆ ಅದರಿಂದ ಸ್ವಲ್ಪವೂ ಸಂಸಾರನಿರ್ವಹಣದಲ್ಲಿ ಆಧಾರವಾಗಲಿಲ್ಲ. ಅವನು ತಿರುಗಿ ಮುಂಬಾಯಿಯಲ್ಲೇ ಅದೃಷ್ಟ ಪರೀಕ್ಷೆ ಮಾಡಬಾರದೆಂದು ಯೋಚಿಸತೊಡಗಿದನು. [illegible] ರುಕ್ಮಿಣಿ [illegible] ವಿಶ್ವನಾಥ ರಾಯನೂ ಇದಕ್ಕೆ ಒಪ್ಪಲಿಲ್ಲ, '[illegible]ಯಿಂದ ತಿಂದು ಊರಲ್ಲೇ ಇದ್ದರಾಯಿತು. ಯೋಚನೆಯೇಕೆ? ನನ್ನ ಈ ಗದ್ದೆ ಕೆಲಸದಲ್ಲೇ ಕೈಕೊಟ್ಟರೆ ನಿರುದ್ಯೋಗದ ನಿವಾರಣೆಯಾದಂತಾಯಿತು' ಎಂದನು. ಇದರಿಂದ ಮಾಧವನ ಯೋಚನೆಯು ಒಂದು ದಿನಗಳ ವರೆಗೆ ಕಾರ್ಯಕ್ಕೆ ಬರಲಿಲ್ಲ. [illegible] ಅಂತರಿಯುವುದೇ ಅವನ ನಾಲಿಗೆ ಉಳಿಯಿತು

ಒಂದು ದಿನ ಮಾಧವನ ಮಧ್ಯಾಹ್ನ ಹೊರಗೆ ಹೋದವನ ತಲೆನೋವು ಕಾಣಿಸಿಕೊಂಡಿತೆಂದು [illegible] ಹೊತ್ತಿಗೆ ಮನೆಗೆ ಬಂದನು. ಒಂದರ್ಧ ಹೊರಗೆ ಹಜಾರದಲ್ಲಿ ಅಂಗಿ ಕಳಚಿಟ್ಟು, ಬಳಿಕ ತನ್ನ ಕೋಣೆಯ ಕಡೆಗೆ ಹೋದನು. ಎಲ್ಲಿಯೂ ಯಾರ ಸುಳಿವೂ ಕಾಣಲಿಲ್ಲ. ಸಣ್ಣ ಮಕ್ಕಳೆಲ್ಲಾ ಶಾಲೆಯಲ್ಲಿದ್ದವು. ರುಕ್ಮಿಣಿಯು ಮಗುವನ್ನು ತೆಗೆದುಕೊಂಡು ಕೋಣೆಯಲ್ಲಿ ಮಲಗಿರಬೇಕೆಂದು ಎಣಿಸಿ ಕೋಣೆಯ ಬಾಗಿಲನ್ನು ತಟ್ಟಿದನು

ಒಡನೆ ಕೋಣೆಯಲ್ಲೇನೋ ಗಡಿಬಿಡಿಯಾದಂತೆ ಸದ್ದಾಯಿತು. ರುಕ್ಮಿಣಿಯನ್ನು ಹೆಸರೆತ್ತಿ ಕರೆದರೂ ಉತ್ತರ ಬರಲಿಲ್ಲ. ಮಾಧವನು ಗಾಬರಿಯಾಗಿ ಕಿಟಕಿಯಿಂದ ನೋಡಲೆಂದು ಅಂಗಳಕ್ಕೆ ಇಳಿದನು.

ಆಗ ಬಾಗಿಲನ್ನು ತೆರೆಯುವ ಸದ್ದಾಯಿತು. ಕಿಟಕಿಯಿಂದ ಬಾಗಿಲ ಕಾಣಿಸುತ್ತಿತ್ತು. ಬಾಗಿಲಿನ ಆಚೆಕಡೆಯಲ್ಲಿ ವಿಶ್ವನಾಥ ರಾಯನು ಅವಸರವಾಗಿ ನಡೆಯುತ್ತಿದ್ದನು. ಈಚೆ ಕಡೆಯಲ್ಲಿ ರುಕ್ಮಿಣಿಯು ನಡುಗುತ್ತಾ ಗೋಡೆಯನ್ನು ಆನಿಸಿಕೊಂಡು ನಿಂತಿದ್ದಳು.

ಮಾಧವನ ಕಣ್ಣುಗಳನ್ನು ಸಾವಿರ ಚುಚ್ಚಿಗಳಿಂದ ಕುಕ್ಕಿದಂತಾಯಿತು. ಎದೆಯನ್ನು ಸಾವಿರ ಬಾಣಗಳಿಂದ ಚುಚ್ಚಿದಂತಾಯಿತು. ತಲೆಯನ್ನು ಸಾವಿರ ಚಮ್ಮಟಿಗೆಗಳಿಂದ ಗುದ್ದಿದಂತಾಯಿತು. "ಹಾ ನಿರುದ್ಯೋಗ ನಿವಾರಣೆಯೇ!" ಎಂದು ಬಿದ್ದುಬಿಟ್ಟನು.

ಪುನಃ ಎದ್ದ ಮಾಧವನು ಎಲ್ಲರಿಗೂ ಅಪರಿಚಿತನು. ಎಲ್ಲರೂ, ಎಲ್ಲವೂ ಅವನಿಗೆ ಅಪರಿಚಿತ. ಅವನ ರೆಕಾರ್ಡ್ ಇನ್ಸ್‌ಪೆಕ್ಷನ್ ಕೆಲಸವಂತೂ ಇನ್ನು ಸಾಗ ಕೂಡದ್ದಾಯಿತು. ಅನಂತರ ಕೆಲವು ತಿಂಗಳೋ, ಕೆಲವು ವರ್ಷಗಳೋ ಅವನು ಮಂಗಳೂರಲ್ಲೇ [illegible]. ಒಂದು ದಿನ ಅವನಿಗೆ ವರ್ಗವಾಯಿತು [illegible] ಮುಂಬಾಯಿಗೆ. ಅಲ್ಲಿಯ ದೊಡ್ಡ ದೊಡ್ಡ [illegible]ಗಳ ಇನ್ಸ್‌ಪೆಕ್ಷನ್ ಮಾಡಲು ಅವನು [illegible] ಅಸಮರ್ಥನೆಂದು ಕಂಡ ಅಧಿಕಾರಿಗಳು [illegible] ತರಬೇತಿಯನ್ನು ಕೊಡಿಸುವುದು [illegible]ವೆಂದು ಅಭಿಪ್ರಾಯಪಟ್ಟಂತೆ ಅದಕ್ಕಾಗಿ ಒಬ್ಬರು ಮೆಜಿಸ್ಟ್ರೇಟರಿಂದಲೂ, ಒಬ್ಬಿಬ್ಬರು ಡಾಕ್ಟರರಿಂದಲೂ ಅವಶ್ಯವಾದ ಸರ್ಟಿಫಿಕೇಟುಗಳನ್ನು ಪಡೆದು ಅವರು ಮಾಧವನನ್ನು ಹುಚ್ಚರ ಶಾಲೆ(Lunatic Asylum)ಗೆ ಸೇರಿಸಿರುವರು

ಅಲ್ಲಿ ಅವನು ಕನಸೊಬ್ಬ [illegible]ಯನ್ನು ತಂದುಕೊಡಬೇಕೆಂದೂ, ನಾನು ಅವಳ ಜಾತಕಶಾಸ್ತ್ರವನ್ನು (ಅಥವಾ [illegible] ಶಾಸ್ತ್ರವನ್ನೇ?) ಕಲಿಯಬೇಕೆಂದಿರುವೆನೆಂದೂ, ಅಧಿಕಾರಿಗಳಿಗೆ ಉಪಟಳ ಕೊಡುತ್ತಿರುವಾಗ [illegible] ಒಬ್ಬ [illegible] ಶಸ್ತ್ರಗಳನ್ನೂ, [illegible] [illegible] ನಿರುದ್ಯೋಗ ನಿವಾರಣೆಯಾಗಲೇ ಬೇಕು.

ಬರುವ ವಾರ

ಮಿಥ್ಯಾಜೀವನದ ಸತ್ಯಕಥೆಗಳು

೨. ರಂಗಪ್ಪನ "ದಿವಾಳಿ".

[illegible]

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purnish Chatram Road, Balepet,
BANGALORE CITY.

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು,

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಜ್ವರ, ಸಾಧಾರಣ ಜ್ವರ, ಅಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ನಿಃಶ್ವಾಸ, ಗುಂಡಿಗೀದ ನೀರು ತುಂಬಿದ ಕಣ್ಣು, ಒಣದ ಮುಖ, ಮುಖ ದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು,

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ.

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0. 1/6 ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ, ಜಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತ ಮದ್ದುಗಳೂ ಇವೆ.

೧೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಕಾಂತಿ ಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ. ಧನ ಸಿಗುತ್ತದೆ. ರೋಗ ನಾಶಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದರಿಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ. ಇನ್ನೊಬ್ಬರಿಗೆ ದಾಸರಾಗ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ, ಬೆಲೆ ರೂ. ೩ ಮಾತ್ರ.

ಆ. P. 8. Bengal Mesmarism House
5-7 Panchpota, Bengal (S. B.)

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ಹೊಸ ರಾಶಿ ಅಕ್ಕಿ ...	3— 6	3—12
ಹೊಸ ಮುಕ್ಕಿ ...	3—10	4— 2
ಗುಡ್ಡ ಸುಗ್ಗಿ ...	3— 8	3—14
ಊರ ಅವ್ವಲ್ ಬೆಳ್ತಿಗೆ ...	4— 0	4— 8
ರಂಗೂನು ಬೆ. ಗೋ. ೧ಕ್ಕೆ...	6— 4	7— 0
ಎಲ್ಲೂರು ಬೆ. ಮು. ೧ಕ್ಕೆ...	4— 4	4— 8
ಗೋದಿ ಗೋಣಿ ೧ಕ್ಕೆ ...	8 — 8	10— 4
ತೊಗರಿ ಗೋಣಿ ೧ಕ್ಕೆ ...	9 —0	9 — 8
ಹುರುಳಿ ಗೋಣಿ ೧ಕ್ಕೆ ...	5— 4	6— 12
ಕಡಲೆ ಗೋಣಿ ೧ಕ್ಕೆ ...	7 — 4	9 — 8
ತೊಗರಿಬೇಳೆ ಗೋಣಿ ೧ಕ್ಕೆ...	11— 0	15— 8
ಉದ್ದು ಗೋಣಿ ೧ಕ್ಕೆ ...	9— 8	10 — 0
ಹೆಸರು ಗೋಣಿ ೧ಕ್ಕೆ ...	9— 4	9—12
ಉಂಡೆಬೆಲ್ಲ ಖಂಡಿ ೧ಕ್ಕೆ ...	32— 8	40— 8
ಉಪ್ಪು ಗೋಣಿ ೧ಕ್ಕೆ ...	4— 8	4— 8
ಕೊಬ್ಬರಿ ಖಂಡಿ ೧ಕ್ಕೆ ...	60— 0	70— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ...	28— 0	29— 0
ಎಳ್ಳೆಂಡಿ ಖಂಡಿ ೧ಕ್ಕೆ ...	33 —12	35— 0
ಕೊಬ್ಬರಿ ಎಣ್ಣೆ ಮಣ ೧ಕ್ಕೆ...	5— 0	6— 0
ಎಳ್ಳೆಣ್ಣೆ ಮಣ ೧ಕ್ಕೆ ...	7— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ...	6— 5	6— 5
ಮೋರಿಸ ಸಕ್ಕರೆ ಮ. ೧ಕ್ಕೆ...	3— 9	3 — 9
ಮೆಣಸು ...	2— 8	4— 0
ಸಾಸಿವೆ ಮುಡಿ ೧ಕ್ಕೆ ...	5 — 8	6— 0
ಕಾಳುಮೆಣಸು ಖ. ೧ಕ್ಕೆ ...	102— 8	105—
ಯೇಲಕ್ಕಿಬೀಜ ಮಣ೧ಕ್ಕೆ...	38— 0	39— 0
ಗೇರುಬೀಜ ಮು. ೧ಕ್ಕೆ ...	4— 6	4 — 8
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8
ತಾಂಬ್ರತಗಡು ಮ. ೧ಕ್ಕೆ...	9— 12	9— 14
ತಾಂಬ್ರಪಾತ್ರಗಳು ಮ. ೧ಕ್ಕೆ	12— 8	14— 0
[illegible] ಸೇರು ೧ಕ್ಕೆ ...	17— 8	18— 0
ಹಿತ್ತಾಳೆ ತಗಡು ಮ. ೧ಕ್ಕೆ...	10— 0	10—
ಪವನು ೧ಕ್ಕೆ ...	22— 8	22— 8
ಹುಣಸೆ ಹುಳಿ ಖಂಡಿ ೧ಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ೧ಕ್ಕೆ	145— 0	150— 0
ಪ್ಲೆಂಟರ ಕಾಫಿ ಖಂಡಿ ೧ಕ್ಕೆ...	185— 0	190— 8
ಮಡಿಕೇರಿ ಏಲಕ್ಕಿ ...	25— 0	26 — 0
ಸಕಲೇಶಪುರ ಏಲಕ್ಕಿ ...	28— 0	30 — 0
ಹಳೆ ಅಡಿಕೆ ...	100—0	115—0

NOTICE.

In the Court of the District Munsiff of Kasaragod

O. P. No. 227/1935

1. Koggunna alias Raya Kamath (4 years) 2. Rama Kamath (2 years) 3. Lakshmana (1 year)—Minors—children of deceased Manjunath Kamath by their next friend their brother Dasappa Kamath.
4. Dasappa Kamath Son of Ganapathy Kamath, all are residing at Bangramenjeshwar } Petitioners.

Please take notice that the 4th petitioner as next friend of minor petitioners 1 to 3, children of deceased Manjunath Kamath has applied for a Succession certificate in his name on behalf of Minor petitioners 1 to 3 to collect the debts due to the deceased father of the minors and the said petition is posted to 20—1—1936. Persons who have any objection for the same are here by informed that they may appear before the said court on or before that date failing which the petition shall be decided exparte.

Kasargod 9-1-'36 | K. P. Anantha Rao, *Advocate for Petrs.*

NOTICE.

Wanted a private teacher. Apply with particulars, stating the minimum pay required to,

Mr. Kanjarpane Gopalkrishnaya,
Sullia Post.

NOTICE.

Is hereby given that the first General Meeting of the Members elect of the District Board of South Kanara, will be held in the District Board office, Mangalore at 2-30 P.M. on Tuesday the 21 January 1936,

E. M. Gawne,
President, District Board, S. Kanara.
District Board Office, S. Kanara,
Dated 8—1—1936.

Shiromani Narayanacharya & Co.,
Silk Lace & Cloth Manufacturers
Choukhamba Benares City

THIS MAN
OUR CUSTOMER

ಕೃಷ್ಣರಾಯರು:—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು. ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು. ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ಕಾರ್ಯ ಸಿರುವೆನು.

ಆನಂದರಾಯರು:—ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ.

ಕೃಷ್ಣರಾಯರು:—"ಅದರ ಕ್ರಯವೆಷ್ಟು?"

ಆನಂದರಾಯರು:—ಎಲ್ಲಾ ಕಡೆಗಳಿಗಿಂತ ಕಡಿಮೆ 25 ಅಡಕು ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ತರಿಸಿರಿ, ಕ್ರಯಕ್ಕೆ ತಕ್ಕ ಮಾಲು ಖಂಡಿತ. ಜರಿ, ರಂಗು ಮೊದಲಾದ ಸೀರೆಗಳು ಸಿಗುತ್ತವೆ, 18 ಮೊಳ ಉದ್ದ 2½ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ. ಜರಿ ಬುಟ್ಟಿ ಇರುವುದು 18 ಮೊಳ ಸೀರೆ 1ಕ್ಕೆ ರೂ. 45ರಿಂದ 150ರ ವರೆಗೆ. 16 ಮೊಳ ಪದಲು ಸದ ಸೀರೆ 1ಕ್ಕೆ ರೂ. 10ರಿಂದ 55ರ ವರೆಗೆ. ರವಕೆ ಕಣಕ್ಕೆ ರೂ. 1-8-0ರಿಂದ 4ರ ವರೆಗೆ. ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ. 3ರಿಂದ 10ರ ವರೆಗೆ. 8 ಮೊಳದ ಸದಮುಡಿ 1ಕ್ಕೆ ರೂ. 7ರಿಂದ 15ರ ವರೆಗೆ 8 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಪಮುರಿ 1ಕ್ಕೆ ರೂ. 4ರಿಂದ 16ರ ವರೆಗೆ. 6 ಮೊಳದ ಚಮುರಿ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲಾ ತರದ ಮ್ಯಾಲುಗಳ ಕ್ರಯದ ಪಟ್ಟಿ ಇನಾಂ 1 ಅಚ್ಚ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

LOOK SHARP! LOOK AHEAD

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates and S. S. L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE

For further particulars apply to:—

D. R. Murdeshwar,
Dip. Econ; F. R. Econ; S. (Lond.)
Principal,
Ganapathy High School Street,
Mangalore.

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಪುಷ್ಯ ಬ॥ ೯ ಶನಿವಾರದಿಂದ ಪುಷ್ಯ ಬ॥ ೩೦ ಶುಕ್ರವಾರದ ವರೇಗಿನ ಪಂಚಾಂಗ.(೧೯೩೬ನೇಯ ಮಕರ ಪುಯಿಂತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ವಿಶೇಷ
18	ಶನಿ	೯	೧೯	ಸ್ವಾತೀ	೯	೪	ಏಕಾದಶೀ*
19	ರವಿ	೧೦	೨೨	ವಿಶಾಖಾ	೧೪	೫	
20	ಸೋಮ	೧೧	೨೪	ಅನುರಾಧಾ	೧೬	೬	
21	ಮಂಗಳ	೧೨	೨೪	ಜ್ಯೇಷ್ಠ	೧೮	೭	
22	ಬುಧ	೧೩	೨೩	ಮೂಲ	೧೯	೮	
23	ಗುರು	೧೪	೨೧	ಪೂ. ಷಾಢ	೧೮	೯	
24	ಶುಕ್ರ*	೩೦	೧೭	ಉ. ಷಾಢ	೧೬	೧೦	—

ಡಾ। ಅಂಬೇಡ್ಕರರು ಹಿಂದೂಧರ್ಮವನ್ನು ತ್ಯಜಿಸುವರು

ಇಟೆಲಿಯಾನರ ವಿಮಾನವೊಂದು ಡಕ್ಕೆ ಬಡೆಯಿತು!

ವ್ಯಾಪಾರ ಉದ್ಧಾರಣಾ ಸಂಸ್ಥೆ. ಬೆಂಡಾ ಆರೋಪ! ಸಿಕ್ಕರ ಸತ್ಯಾಗ್ರಹ!

ಬ್ರಿಟನಿನ ವಾಯುಬಲವು ಹೆಚ್ಚಿಸಲಾಗುವುದು.

ಸೋವಿಯಟ್ ರಷ್ಯಾದ ಮೇಲೆ ಬೀಳಲು

ನಾಜೀ ಜರ್ಮನಿಯು ಸರ್ವ ಸಿದ್ಧತೆಗಳನ್ನು ಮಾಡುತ್ತಿದೆ. ಜರ್ಮನಿಯು ಈ ಬಗೆಯ ವರ್ತನೆಯಿಂದ ಸಮಸ್ತ ಯುರೋಪು ಖಂಡದ ಶಾಂತಿಗೆ ಭಂಗ ಬಂದಿರುತ್ತದೆ. ಯುದ್ಧವು ಸಂಭವಿಸುವುದೆಂಬ ಭಯದಿಂದ ಎಲ್ಲಾ ಜನಾಂಗಗಳು ಸಂಗ್ರಾಮಸಿದ್ಧತೆಗಳನ್ನು ಮಾಡುತ್ತಿವೆ. ಯುರೋಪಿನ ಪೋಲೆಂಡು ರಷ್ಯಾದ ಮೇಲೆ ಆಕ್ರಮಿಸುವ ಸಂಭವಗಳಿವೆ. ಈ ಸ್ಥಿತಿಯನ್ನು ಎದುರಾಯಿಸಲು ರಷ್ಯವು ಸಿದ್ಧತೆಗಳನ್ನು ಮಾಡುತ್ತಿದೆ. ಈಗ ಸೋವಿಯಟ್ ಸೈನ್ಯಬಲದಲ್ಲಿ ೧೦,೦೦೦೦೦ ಸೈನಿಕರಿರುವರು. ೩೦೦೦ ನವೀನ ತರದ ಯುದ್ಧೋಪಕರಣಗಳಿಂದ ಕೂಡಿದ ವಿಮಾನಗಳಿವೆ. ಸಾವಿರಾರು ಟೆಂಕುಗಳಿವೆ. ಯೋಗ್ಯ ಸಂಗ್ರಾಮ ನೌಕೆಗಳನ್ನು ರಚಿಸಿರುತ್ತಾರೆ.

ಬ್ರಿಟನಿನ ವಾಯುಬಲವು ಹೆಚ್ಚಿಸಲಾಗುವುದು.

ವಾಯುಬಲವನ್ನು ವೃದ್ಧಿಗೊಳಿಸುವ ಎರಡು ವರ್ಷದ ಕಾರ್ಯಕ್ರಮವು ಈಗಲೇ ಗೊತ್ತಾಗಿರುತ್ತದೆ. ಅಸಂಖ್ಯಾತ ನವೀನ ತರದ ವಿಮಾನಗಳು ರಚನೆಯಾಗುತ್ತಿವೆ. ಅನೇಕರನ್ನು ಅಂತರಿಕ್ಷದ ಯುದ್ಧಕ್ರಮಗಳಲ್ಲಿ ತರಬೇತು ಮಾಡುತ್ತಿದ್ದಾರೆ. ೭೦೦ ಜನರು ವಾಯುಬಲದ ಉದ್ಯೋಗಸ್ಥರಾಗಿ ನೇಮಕ ಹೊಂದಿರುತ್ತಾರೆ. ೧೩ ವೈಮಾನಿಕ ಶಾಲೆಗಳು ತೆರೆಯಲ್ಪಟ್ಟಿವೆ. ಇವರ ವಾಯುಬಲ ರಚನಾಕ್ರಮವನ್ನು ತಿಳಿಯಲು ಬಂದ ಜರ್ಮನಿಯ ಗೂಢಚಾರರನ್ನು ಹಿಡಿಯಲಾಗಿದೆ. ಮೇಲಿನ ಕಾರ್ಯಕ್ರಮವು ಸಂಪೂರ್ಣವಾದರೆ ಬ್ರಿಟನಿನ ವಾಯುಬಲವು ಬಹಳ ಶ್ರೇಷ್ಠತೆಯನ್ನು ಹೊಂದುವುದು.

ಸಿಕ್ಖರ ಸತ್ಯಾಗ್ರಹ

ಪಂಜಾಬ ಸರಕಾರದವರ ಸಿಕ್ಖರು ಕರ್ಪಾನಗಳನ್ನು ಧರಿಸಿದಂತೆ ಮಾಡಿದ ಅನುಪಕ್ಷದ ಕ್ರಮವನ್ನು ಪ್ರತಿಕೂಲಿಸಲು ಸಿಕ್ಖರು ಸತ್ಯಾಗ್ರಹ ಚಳವಳವನ್ನು ಪ್ರಾರಂಭಿಸಿದರು. ಈ ಚಳವಳದಲ್ಲಿ ಅನೇಕರು ಕಾರಾಗೃಹವನ್ನು ಸೇರಿರುವರು.

ಹಬಸಿಯವರು ಮಕಾಲೆಯನ್ನು ಹಿಡಿಯುವುದು ಖಂಡಿತ

ಹಬಸಿಗಳಿಗೆ ಎಲ್ಲೆಲ್ಲೂ ಜಯಗಳು ಲಭಿಸುತ್ತಿವೆ. ಮುಖ್ಯ ನಗರವಾದ ಆಡಿಸ್ ಅಬಾಬದಲ್ಲಿ ಸಂತೋಷದ ಸುಗ್ಗಿಯ ಕುರುಹುಗಳು ಕಾಣಿಸುತ್ತಿವೆ. ತೆಂಬಿಯನ್ ಪ್ರಾಂತ್ಯವನ್ನು ಇವರು ಪುನಃ ವಶೀಕರಿಸಿದುದರಿಂದ, ಮಕಾಲೆಯನ್ನು ಇವರು ಹಿಡಿಯುವುದು ಖಂಡಿತವೆಂದು ಕೆಲವರ ಮಾತು. ಯಾಕೆಂದರೆ ತೆಂಬಿಯನ್ ಪ್ರಾಂತ್ಯದಲ್ಲಿ ನಡೆದ ಕದನಗಳಲ್ಲಿ ಇಟಲಿಯಾನ ಪಕ್ಷಕ್ಕೆ ಮಹತ್ತಾದ ಪ್ರಾಣನಷ್ಟವುಂಟಾಗಿರುತ್ತದೆ. ತೆಂಬಿಯನ್ ಪ್ರಾಂತ್ಯದಲ್ಲಿ ಹಬಸಿಗಳು ಇಟಲಿಯಾನರಿಂದ ಒಂದು ಲಕ್ಷ ಗೋಣಿ ಅಕ್ಕಿಯ ಹಿಟ್ಟನ್ನು ಹಿಡಿದಿದ್ದಾರೆ.

ವ್ಯಾಪಾರ ಉದ್ಧಾರಣಾ ಸಂಸ್ಥೆ

ಬ್ರಿಟನಿನ ಅನೇಕ ವ್ಯಾಪಾರ ಸಂಸ್ಥೆಗಳು ಕೂಡಿ ಒಂದು ರಷ್ಟ್ರ ಸಂಘವನ್ನು ಸ್ಥಾಪನೆ ಮಾಡಿರುವರು. ಹೊರಗಣ ದೇಶಗಳಲ್ಲಿ ಬ್ರಿಟನಿನ ವ್ಯಾಪಾರ ಹೆಚ್ಚಿಸಲು ಈ ಸಂಸ್ಥೆಯು ಕಾರ್ಯಗೊಳಿಸುವುದಂತೆ. ಈ ಸಂಸ್ಥೆಯು ಅಲ್ಲಿನ ಎಲ್ಲಾ ವ್ಯಾಪಾರಸಂಸ್ಥೆಗೆ ಸರಿಸಮಾನವಾದ ಅಭಿವೃದ್ಧಿಯು ಉಂಟಾಗುವಂತೆ ಸಾಧಿಸುವುದು. ಬ್ರಿಟಿಷ ಸಾಮಾನುಗಳಿಗೆ ಯೋಗ್ಯ ಮಾರ್ಕೆಟ್ಟುಗಳನ್ನು ಉಂಟುಮಾಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿರುತ್ತದೆ. ಇಂಥಾ ಸಂಸ್ಥೆಯೊಂದು ಭರತಖಂಡಕ್ಕೂ ಅಗತ್ಯವಲ್ಲವೆ?

ಬಂಗಾಳದ ಡೆಟಿನ್ಯೂಗಳಿಗೆ

ಸಾಗುವಳಿ, ಕೈಗಾರಿಕೆ ಇತ್ಯಾದಿ ಉದ್ಯಮಗಳಲ್ಲಿ ತರಬೇತು ಮಾಡಲು ಬಂಗಾಳ ಸರಕಾರದವರು ವ್ಯವಸ್ಥೆ ಮಾಡಿರುತ್ತಾರೆ. ಡೆಟಿನ್ಯೂಗಳಿಂದ ಕೂಡಿದ ಕಾರ್ಖಾನೆಗಳೂ, ಫಲಗಳ ತೋಟಗಳೂ ಸ್ಥಾಪನೆಯಾಗಿವೆ. ಈ ಉದ್ಯೋಗಾಲಯಗಳಲ್ಲಿ ಅವರ ಕುಂಟಾ ವಿಮುಕ್ತತೆಯು ಕೊಡಲಾಗುವುದು.

ಜನಾಂಗಸಭೆಯಿಂದ ನೇಮಕವಾದ ಸಮಿತಿಯ ನಿರ್ಣಯಗಳ ನೆಂಕರದ ಮುಸಲೋನಿಯು.

ಹಳ್ಳಿಗಳ ಅಭ್ಯುದಯ.

ಇರೀಕಿನ ಸರಕಾರದವರು ಗ್ರಾಮಾಭ್ಯುದಯ ಕಾರ್ಯವನ್ನು ನಡೆಯಿಸಲು ೧೫೦ ರೆಡಿಯೊಗಳನ್ನು ಪಡಕೊಂಡಿರುವರು. ಈ ರೇಡಿಯೊ ಮೂಲಕ ಹಳ್ಳಿಗರಿಗೆ ಉಚ್ಚ ಬೋಧನೆ ಮಾಡುವ ಭಾಷಣಗಳನ್ನು ಸಾರುವರು.

ಬೆಂಡಾ ಆರೋಪ.

ಕೆಲಸಮಯದ ಹಿಂದೆ ಜಬಲ್‌ಪುರದ ಬೆಂಡಾ ಎಂಬ ಹಳ್ಳಿಯಲ್ಲಿ ಕೆಲವು ಬ್ರಿಟಿಷ ಸೈನಿಕರು ಆರೋಪ ನಡೆಸಿದುದಕ್ಕಾಗಿ ವಿಚಾರಣೆಯನ್ನು ನಡೆಯಿಸಿ, ಅಪಾದಿತರಾದ ಅನೇಕ ಸೈನಿಕರಿಗೆ ತರತರದ ಶಿಕ್ಷೆಗಳನ್ನು ವಿಧಿಸಲಾಗಿದ್ದುವು. ಸೈನಿಕರು ನಾಗಪುರದ ಹೈಕೋರ್ಟಿಗೆ ಈ ಕುರಿತು ಅಪೀಲು ಮಾಡಿದ್ದರು. ಇವರ ಅಪೀಲು ತಿರಸ್ಕರಿಸಲಾಗಿದೆ ಎಂದು ವಾರ್ತೆ ಬಂದಿರುತ್ತದೆ. ಈ ಮೊದಲು ವಿಧಿಸಿದ ಶಿಕ್ಷೆಯು ಕಾಯಂ ಆಗಿರುತ್ತದೆ.

ಜೆಸ್ಲೋರಿನ ಸೆಲೊಲ್ಯಾಡ ಕಾರ್ಖಾನೆಯು

ಬಹಳ ವೃದ್ಧಿ ಹೊಂದಿರುತ್ತದೆಂದು ತಿಳಿದುಬರುತ್ತದೆ. 'ಕಿರೊನ್' ಎಂಬ ಹೆಸರಿನ ಇಲ್ಲಿ ತಯಾರಾಗುವ ಬಾಚಣಿಗೆ ಇತ್ಯಾದಿಗಳು ಭರತ ಖಂಡದಲ್ಲೆಲ್ಲೂ ಪ್ರಸಿದ್ಧವಾಗಿವೆ. ಇವರು ಈಗ 'ಲಕ್ಷ್ಮಿ' ಎಂಬ ಹೆಸರಿನ ಹಲ್ಲುಗಳನ್ನು ಉಜ್ಜುವ ಒಂದು ಬ್ರೆಶ್ಶನ್ನು ಹೊರಗೆ ಹಾಕಿರುವರು. ಇದಲ್ಲದೆ ಸೆಲೊಲ್ಯಾಡಿನಲ್ಲಿ ತಯಾರಾಗತಕ್ಕ ಅನೇಕ ಒಡವೆಗಳನ್ನು ತಯಾರಿಸುತ್ತಿದ್ದಾರೆ.

ಸಂಯುಕ್ತ ಅಮೇರಿಕದಲ್ಲಿ

ಪ್ರೆಸಿಡೆಂಟ ರೂಸವೆಲ್ಟರು ದೇಶಹಿತಕ್ಕಾಗಿ ನಿರುದ್ಯೋಗನಿವಾರಣೆಗಾಗಿ ನಿರ್ಮಿಸಿದ ಹಲವು ಕ್ರಮಸೂತ್ರಗಳು ನ್ಯಾಯಸಮ್ಮತವಾದುದಲ್ಲವೆಂದು ಅಲ್ಲಿನ ಸೂಪ್ರಿಮ್ ಕೋರ್ಟಿನವರು ತೀರ್ಮಾನಮಾಡಿರುತ್ತಾರೆ. ಅವರು ನವೀನವಾಗಿ ರಚಿಸಿದ ಸಾಗುವಳಿಯನ್ನು ಉದ್ಧರಿಸುವ ಮತ್ತು ಸಾಗುವಳಿಯ ಫಲಕ್ಕೆ ಒಳ್ಳೆ ಬೆಲೆಯನ್ನು ದೊರಕಿಸಲು ಸಾಧ್ಯವಾಗುವ ಕ್ರಮ ಹೀಗೆ ಕಂಡಿಸಲ್ಪಡುವುದು. ಇದರ ಪರಿಣಾಮವಾಗಿ ಸಾಧಾರಣ ೬೫,೦೦೦ ಜನರು ಉದ್ಯೋಗ ಕಳಕೊಳ್ಳಬೇಕಾಗಿದೆ.

ಹಬಸಿ ಚಕ್ರವರ್ತಿಯವರ ವಿರೋಧವಾಗಿ ಪ್ರಸಾರಣೆ.

ಹಬಸಿ ಚಕ್ರವರ್ತಿಯವರು ಪಟ್ಟಕ್ಕೆ ನಿಜವಾದ ಹಕ್ಕುದಾರರಾದ ಲಿಜಯಾಸು ಎಂಬವರನ್ನು ಕೊಲೆಮಾಡಿರುವರೆಂದು, ಅನ್ಯಾಯದಿಂದ ಪಟ್ಟ ಪಡಕೊಂಡು, ಈಗ ರಾಜ್ಯ ಪರಿಪಾಲನೆಮಾಡುತ್ತಿದ್ದಾರೆಂದೂ, ಚಕ್ರವರ್ತಿ ಮೆನಲಿಕರ ಪುತ್ರರಾದ ಲಿಜಯಾಸೂರವರು ಆಡಿಸ್ ಅಬಾಬದಲ್ಲಿ ಸೌಖ್ಯದಲ್ಲಿ ಕೈದಿಗಳಾಗಿದ್ದಾರೆಂಬುದು ಕೇವಲ ಸುಳ್ಳೆಂದು ಇವೇ ಮೊದಲಾದ ಆರೋಪಗಳನ್ನು ಪ್ರಕಟ ಮಾಡುವ ನೋಟೀಸುಗಳು ಎಥಿಯೋಪಿಯಾದ ಅನೇಕ ಮುಖ್ಯ ನಗರಗಳಲ್ಲಿ ಇಟಲಿಯಾನರು ವಿಮಾನಗಳಿಂದ ಚೆಲ್ಲುತ್ತಿದ್ದಾರೆ.

ಬರ್ಮಾ ಕ್ರಿಮಿನಲ್ ಲೋ

೧೯೩೦ರಲ್ಲಿ ಜ್ಯಾರಿಮಾಡಿದ ಬರ್ಮಾ ಕ್ರಿಮಿನಲ್ ಲೊ ಎಂಬ ಕ್ರಮವು ಸದ್ಯದಲ್ಲಿ ರದ್ದಾಗುವುದು. ಆದರೆ ಇದರ ಜೀವಮಾನವನ್ನು ಇನ್ನೂ ೫ ವರ್ಷಗಳ ವರೆಗೆ ಮುಂದುವರಿಸಲು ಠರಾವುಗಳು ಬಂದಿವೆ. ಬಂಗಾಳದ ಕ್ರಾಂತಿಕಾರರಿಗೆ ಯಾವ ರೀತಿಯಲ್ಲೂ ಬರ್ಮಾದಲ್ಲಿ ಎಡೆಸಿಕ್ಕದಂತೆ ಮಾಡುವುದು ಇದರ ಉದ್ದೇಶವಂತೆ.

ಹರಿಜನರೂ ಹಿಂದೂಧರ್ಮವೂ

"ಎಲ್ಲಾ ಹರಿಜನರು ಹಿಂದೂಧರ್ಮವನ್ನು ತ್ಯಜಿಸಬೇಕು. ಆದರೆ ಹಿಂದೂಮತವನ್ನು ತ್ಯಜಿಸಿ, ಬೇರೆ ಮತಾವಲಂಬಿಗಳಾಗಬೇಕೆಂದು ನನ್ನ ಉದ್ದೇಶವಲ್ಲ. ಆದರೆ ಒಂದು ಮತವು ಸ್ಥಾಪನೆಯಾಗಬೇಕು. ಸಮಾಜದಲ್ಲಿ ತಮಗೆ ಯೋಗ್ಯ ಸ್ಥಳವು, ಮನ್ನಣೆಯು ದೊರಕುವಂತೆ ಸಾಧಿಸಬೇಕು" ಎಂದು ಡಾ। ಅಂಬೇಡ್ಕರರು ಪೂನೆಯಲ್ಲಿ ಜರಗಿದ ಹರಿಜನ ಯುವಕರ ಪರಿಷತ್ತಿನಲ್ಲಿ ಭಾಷಣ ಮಾಡಿದರು.

ಮದ್ರಾಸು ಅಧಿಪತ್ಯದ ಯಾಲಕ್ಕಿ ಬೆಳೆ ಮತ್ತು ಅದರ ಧಾರಣೆ-1935

ಮದ್ರಾಸಿನಿಂದ ಈ ಕೆಳಗಿನ ವರದಿಯು ಬಂದಿರುತ್ತದೆ:—೧೯೩೫ರಲ್ಲಿ ಏಲಕ್ಕಿಯನ್ನು ಬೆಳೆಯಿಸಿದ ಪ್ರದೇಶ—೯೦,೫೦೦ ಎಕ್ರೆಗಳು ಮಲಬಾರಿನಲ್ಲಿ, ೮೫೦೦೦ ಎಕ್ರೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. 1984ರಲ್ಲಿ ಈ ಸಂಖ್ಯೆಗಳು ೮೮,೧೬೪ ಎಕ್ರೆಗಳು ಮತ್ತು ೭೫೮೧ ಎಕ್ರೆಗಳಾಗಿದ್ದುವು. ಬೆಳೆಯು ಸಮೃದ್ಧಿಯಾಗಿರುತ್ತದೆ. ಏಲಕ್ಕಿಯು ಬೇಗನೇ ತೆಗಿಯಲಾಗುವುದು. ಮಲಬಾರಿನಲ್ಲಿ ಸಾಧಾರಣ ೧೭,೫೦೦ ಟನ್ ಏಲಕ್ಕಿಯೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣ ೧೧೫೦ ಟನ್ ಏಲಕ್ಕಿ ದೊರಕಬಹುದೆಂದೂ ಊಹಿಸಲಾಗಿದೆ. ಕಳೆದ ವರ್ಷ ಈ ಅಂಕೆ ೧೩,೩೦೦ ಮತ್ತು ೧೨೪೦ ಟನ್ನುಗಳಾಗಿದ್ದುವು. ಏಲಕ್ಕಿಯ ಧಾರಣೆಯು ಹೀಗಿರುತ್ತದೆ:—ದಕಂಬರದಲ್ಲಿ ಕಲ್ಲಿಕೋಟೆಯಲ್ಲಿ ಮಣ ಒಂದರ ೧೫ ೧೨—೦, ಕೊಚ್ಚಿಯಲ್ಲಿ ರೂ. ೧೪-೧-೦, ತಲ್ಲೇರಿಯಲ್ಲಿ ರೂಪಾಯಿ ೧೩—೧೧ ೦, ಮಂಗಳೂರಿನಲ್ಲಿ ರೂ. ೧೪-೮-೦ ಕಳೆದ ವರ್ಷದ ಧಾರಣೆಗಳಿಗಿಂತ ಈ ವರ್ಷದ ಈ ಧಾರಣೆಗಳು ಬಹಳ ಇಳಿದಿವೆ. ದಕ್ಷಿಣ ಕನ್ನಡ ಜಿಲ್ಲೆಯ ಇಳಿತವು ಸಾಧಾರಣ ಶೇಕಡಾ ೧೨೫ರ ಸಳಿಯಾಗಿರುತ್ತದೆ.

ಇಟೆಲಿಯಾನರ ವಿಮಾನವೊಂದು ಡಕ್ಕೆ ಬಡೆಯಿತು

ಉತ್ತರ ರಣರಂಗದ ಆಸ್ಮಾನದಲ್ಲಿ ಇಟೇಲಿಯಾನರ ವಿಮಾನವೊಂದು ಡಕ್ಕೆಬಡೆದು ಮೂವರು ಇಟಲಿಯಾನ ಆಫೀಸರರು ಮಡಿದಿರುವರು. ಮೃತರಾದವರು ಇಟೆಲಿಯಾನ ವಾಯುಬಲದ ಕೆಲವು ಮುಖ್ಯ ಉದ್ಯೋಗಸ್ಥರಾಗಿದ್ದರೆಂದು ತಿಳಿದುಬರುತ್ತದೆ. ಈ ರೀತಿಯ ಅಪಘಾತವು ಇದೇ ಪ್ರಥಮ ಬಾರಿಯದು.

ತುರಿಸುವಿಕೆ, ಕಜ್ಜಿ, ಸುಟ್ಟ ಗಾಯ ಗಳು, ಪೆಟ್ಟಿನ ಗಾಯಗಳನ್ನು ಗುಣಪಡಿಸಿಕೊಳ್ಳಬೇಕೆ?

ಹಾಗಾದರೆ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟ

ಝಾಂಬಕನ್ನು ಪಯೋಗಿಸಿರಿ.

ದೇಹದ ಸೌಂದರ್ಯ ಚರ್ಮದಿಂದಾಗಿ ಒಡೆದು ಕಾಣುತ್ತದೆ. ಆದನ್ನು ಕರಿಕಚ್ಚಿಗಳು ಗಾಯಗಳು ಮೊಡವೆ ಹಪ್ಪುಗಳ ಕಲೆಗಳಿಲ್ಲದಂತೆ ಇಡುವುದು ನಿಮ್ಮ ಕರ್ತವ್ಯ. ಅದಕ್ಕಾಗಿ ಝಾಂಬಕನ್ನು ಉಪಯೋಗಿಸಿರಿ ಯಾವದೇ ಯಾವ ಚರ್ಮರೋಗವಿದ್ದರೂ ಅದರ ಹುಟ್ಟಡಗಿಸುವುದು ಝಾಂಬಕ್ ದೇಹದ ರಂಧ್ರಗಳ ಮೂಲಕ ಚರ್ಮವನ್ನು ಸೇರಿ ಅದರಲ್ಲಿರುವ ವಿಷಕರವಾದ ಅಣುಗಳನ್ನು ನಾಶಪಡಿಸಿ ಚರ್ಮಕ್ಕೆ ನೂತನ ಸೌಂದರ್ಯವನ್ನು ಕೊಡುತ್ತದೆ. ಹುಳ ಹೋಯುವುದು ಬಹುಕಾಲದಿಂದಲೂ ಗುಣವಾಗದ ಹುಣ್ಣುಗಳು ನೋವುಗಳು ಕಜ್ಜಿ ಇವಕ್ಕೆಲ್ಲಾ ಝಾಂಬಕ್ ದಿವ್ಯೌಷಧಿ ಎಲ್ಲಾ ಔಷಧಿ ಮಾರಾಟ ಮಾಡುವ ಅಂಗಡಿಗಳಲ್ಲಿ ವಿಕ್ರಯಿಸಲ್ಪಡುತ್ತದೆ

ಬೆಲೆ ರೂ. 1 ಅಥವಾ ಪೆಟ್ಟಿಗೆಗೆ ರೂ ೦ ೪ ೦

ಇದರಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ

ಝಾಂಬಕ್

Zam-Buk

ಚಂದ್ರನ ಅಂತ್ಯ

ಚಂದ್ರನು ಈಗ ಭೂಮಿಯ ಕಡೆಗೆ ಆಕರ್ಷಿಸಲ್ಪಡುತ್ತಾನೆ ಅದರ ಈ ಆಕರ್ಷಣದಲ್ಲಿ ಅದು ಭೂಮಿಯ ಅತಿ ಸಮೀಪವಾದೊಡನೆ, ಒಡೆದು ಎರಡು ತುಂಡುಗಳಾಗುವುವು ನ ತರ ಎಂಟು, ಹೀಗೆ ಅಸಂಖ್ಯಾತ ತುಂಡುಗಳಾಗುವನು ಚಂದ್ರನು ಒಡೆದ ನುಚ್ಚು ಚೂರಾಗುವನು ಆಗ್ಗೆ ಈ ತುಂಡುಗಳು ಭೂಮಿಯ ಸುತ್ತು ಶನಿಗ್ರಹ ಸುತ್ತಲಿರುವ ಉಂಗುರಗಳಂತೆ ಉಂಗುರಗಳನ್ನು ಉಂಟುಮಾಡುವವು ಆಗ ಭೂಮಿಗೆ ಸ್ಯವೂ ಚಂದ್ರ ಪ್ರಕಾಶವು ದೊರಕುವುದು ಚಂದ್ರನಿಂದಲ್ಲ ಚಂದ್ರನ ಅಸಂಖ್ಯಾತ ತುಂಡುಗಳಿಂದ

೩೬ ವರ್ಷಗಳ ಪ್ರಣಯದ ನಂತರ ವಿವಾಹ

ಇಂದಿಗೆ ೩೬ ವರ್ಷಗಳ ಹಿಂದೆ ಪ್ರಾರಂಭವಾದ ಒಂದು ಪ್ರಣಯವು ಮೊನ್ನೆ ವಿವಾಹದಲ್ಲಿ ಫಲಿಸಿತು ಸ್ತ್ರೀಯ ಈಗಿನ ಪ್ರಾಯ ೬೫, ಪುರುಷನ ಪ್ರಾಯ ೬೦ ಈತನು ೩೬ ವರ್ಷಗಳ ಹಿಂದೆ, ಈಕೆಯನ್ನು ಮದುವೆಮಾಡಿಕೊಳ್ಳಲು ಸಾಧ್ಯವಾಗುವಂತೆ, ಕೆನಡಾದಕ್ಕೆ ಕಡೆ ತೆರಳಿದ್ದನು ೩೬ ವರ್ಷದ ನಂತರ ಈಗ ಹಿಂತಿರುಗಿದನು ಇವರ ವಿವಾಹವು ಮೊನ್ನೆ ನಡೆಯಿತು ಕೆನಡಾದಲ್ಲಿ ತನ್ನ ಕೆಲವು ಕಾರ್ಯಗಳನ್ನು ತೀರಿಸಿ, ಇಂಗ್ಲಾಂಡಿನಲ್ಲಿ ತನ್ನ ಪ್ರಿಯತಮೆ ಒಟ್ಟಿಗೆ ನೆಲಸ ವನು

ಶನಿಗ್ರಹದ ಸುತ್ತಲೂ ಉಂಗುರಗಳೇಕೆ?

ಶನಿದ ಗ್ರಹದ ಸುತ್ತಲೂ ಪ್ರಕಾಶ ಉಂಗುರಗಳಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿರುತ್ತದೆ. ಹಾಗೆಯೆ ನಮ್ಮ ಭೂಮಿಯನ್ನು ಶನಿಗ್ರಹದಲ್ಲಿ ನಿಂತು ಕಂಡರೆ, ಅದರ ಸುತ್ತಲೂ ಒಂದು ಪ್ರಕಾಶದ ರವಿಯು ಕಾಣಿಸುವುದು ಕಾರಣ? ಅದು ಹೀಗೆ ಪರಿಣಮಿಸುವುದು ನಮ್ಮ ಭೂಮಿಯ ಸುತ್ತಲೂ ಇರುವ ವಾಯುಮಂಡಲವು ಸೂರ್ಯನ ಮತ್ತು ಚಂದ್ರನ ಪ್ರಕಾಶಗಳಿಂದ ಹೊಳೆಯುವುದರಿಂದ ಆದರೆ ಶನಿಗ್ರಹದ ಸುತ್ತಲೂ, ಆ ಉಂಗುರಗಳು ಈ ಕಾರಣದಿಂದ ಉಂಟಾದುದಲ್ಲ, ಶನಿಗ್ರಹದ ಸುತ್ತಲೂ, ಇವುಗಳು ಅದರಿಂದ ಹಾರಿಹೋಗಿ ಸುತ್ತಲೂ ಚಲಿಸುವ ಅಣುಗಳ ಸಮೂಹವಾಗಿರುತ್ತದೆ

ವಾಯುವಿನಲ್ಲಿ ರೋಗದ ಕ್ರಿಮಿಗಳು

೨೦೦೦೦ ಅಡಿ ಎತ್ತರದ ವಾಯುವಿನಲ್ಲಿ ರೋಗಗಳ ಕ್ರಿಮಿಗಳ ತಂಡ ತಂಡವಾಗಿ ಜೀವಿಸುತ್ತವೆಂದೂ ಶೋಧನೆ ಮಾಡಿರುವರು ಇವುಗಳಿಂದ ನಮ್ಮಲ್ಲಿ ಅನೇಕ ಸಾಂಕ್ರಾಮಿಕ ರೋಗಗಳು ಪರಿಣಮಿಸುವುವು ಇವುಗಳ ಶೋಧೆಯನ್ನು ವಿಮಾನಗಳ ಮೂಲಕ ಮಾಡಿರುವರು ಇಷ್ಟು ಎತ್ತರಕ್ಕೆ ಉಗಿಯಾಗಿ ಸೇರಿದ ನೀರು ಪುನಃ ನೀರಾಗುವುದರಿಂದ ಈ ಕ್ರಿಮಿಗಳಿಗೆ ಜೀವಿಸಲು ಸಾಧ್ಯವಾಗುತ್ತದೆ ಅವುಗಳಿಗೆ ಅಗತ್ಯವೆನ್ನಿಸುವ ಆಹಾರಾದಿಗಳು ವಾಯುಮಂಡಲದಿಂದಲೇ ದೊರಕುತ್ತವೆ ಈ ಕ್ರಿಮಿ ತಂಡಗಳಲ್ಲಿ ಮಲೇರಿಯಾ, ನ್ಯುಮೋನಿಯಾ ಇವೇ ಮೊದಲಾದ ಕಠಿಣ ತರದ ಸಾಂಕ್ರಾಮಿಕ ರೋಗಗಳನ್ನು ಒದಗಿಸುವ ಕ್ರಿಮಿಗಳಿವೆಯಂತೆ

ಭುಂಜಿಸಿದ ನಂತರ ಭಯಂಕರ ವೇದನೆ.

ಪ್ರತಿಯೊಂದು ಭೋಜನದ ನಂತರ ಭಯಂಕರ ವೇದನೆಯಾಗುವುದು, ಅನಿವಾರ್ಯವಾಗಿ ಬರುವುದೆಂದಿರುವ ಅಜೀರ್ಣದ ಭಯದಿಂದ ಉಣ್ಣಲು ತಿನ್ನಲು ಭಯಗೊಳ್ಳುವುದು ೧೫ ವರ್ಷಗಳಿಂದ ಕಾಣಿಸಿಕೊಳ್ಳುವ ಸ್ಥಿತಿಯು ಅವಳದಾಗಿತ್ತು ಕವೆಂಟ್ರಿಯಲ್ಲಿನ ಮಿಸೆಸ್ ಎ ಇ ಬಿ ಎಂಬವಳದಾಗಿತ್ತು ಎಷ್ಟರ ವರೆಗೆ?—ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸುವ ವರೆಗೆ

ಅವಳ ಅನಪೇಕ್ಷಿತ ಪತ್ರವನ್ನು ಓದಿ

"ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರ್ ನನಗಿತ್ತ ಸುಖಸೌಭಾಗ್ಯದ ಸ್ಮರಣಾರ್ಥ ನಿಮ್ಮನ್ನು ವಂದಿಸಲು ನಾನಿದನ್ನು ಬರೆದಿರುವೆನು ಸಾಧಾರಣ ಭೋಜನವನ್ನು ಮಾಡಿದರೂ ಕೂಡ, ನನಗೆ ಉದರವೇದನೆಯಾಗುತ್ತಿತ್ತು ಭಯಂಕರ ಅಜೀರ್ಣದಿಂದ ನೋವಿಲ್ಲದೆ ನಾನು ಭೋಜನಮಾಡಲು ಸಾಧ್ಯವಾಗುತ್ತಿದ್ದಿಲ್ಲ ಈ ಪರಿಸ್ಥಿತಿಯಲ್ಲಿ ನಾನು ಹಲವು ಕಾಲ ಇದ್ದೆ ಆದರೆ ಈಗ ಧನ್ಯಳಾಗಿರುವೆ ಅಂತಹ ನೋವಿನ ಭಯವಿಲ್ಲದೆ ನಾನೀಗ ಭೋಜನಮಾಡಲು ಶಕ್ತಳಾಗಿರುವೆ ನಿಮ್ಮ ಚೂರ್ಣಕ್ಕಾಗಿ ನನ್ನ ಅಭಿವಂದನೆಗಳು ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ಕುರಿತಾಗಿ ನನಗೆ ಮೊದಲೇ ತಿಳಿದು ಬಂದಿರಲಿಲ್ಲವಲ್ಲಾ—ಎಂಬುದೇ ನನ್ನ ಈಗಿನ ವಿಷಾದ ನನಗೆ ಕೊಟ್ಟ ಸುಖಕ್ಕಾಗಿ ನಿಮಗೆ ಪುನಃ ನಮಸ್ಕಾರ"

ಮಿಸೆಸ್ ಬಿಗೆ ದೊರೆತ ಸುಖವೇ ತಮಗೂ ಸಿಗಬಹುದು. ಆದರೆ ಮೂಲಭೂತ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ಪಡೆಯುವಂತೆ ಎಚ್ಚರವಿರಿ ಕೆಲವು ಅಂಗಡಿಗಳ ವ್ಯಾಪಾರಿಗಳು ಅಂಥದ್ದೇ ಶೀಘ್ರಗತಿಯ ಚೂರ್ಣವನ್ನು ಪಡೆದ ಉಪಾಯಗಳ ಹೇಳಬೇಡ ಮುದ್ರೆ ಗುರ್ತು, ಚೀಟಿಗಳಲ್ಲಿ ಕೆಂಪಗಿನ ಮುದ್ರೆಯಿರುವ

ಈ ದಸ್ಕತು ಇರುವ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ಪಡೆಯುವಂತೆ ಜಾಗ್ರತರಾಗಿರಿ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೇ ಕಷ್ಟವಿರುವುದಾದರೆ

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ



ನೋಟೀಸು.

Attur Vaikunta Prabhu Bank, Mangalore.

ಅತ್ತೂರು ವೈಕುಂಠ ಪ್ರಭು ಬೇಂಕ್, ಡೊಂಗರಕೇರಿ, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದಿ ಈಡಿನ ಮೇಲೆ ಸಾಲ ಪಡೆಕೊಂಡ ನಂತರ ಶ್ಲಪ್ತ ವ್ಯಾದಿಗೆ ಅಸಲು, ಬಡ್ಡಿ ಕೊಡದೆ ಈ ವರೆಗೆ ಬಾಕಿಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲಗಳನ್ನು ಬರಮಾಡಿಕೊಳ್ಳುವರೇ ಅವರಿಗೆ ಬಿಟ್ಟ, ರಿಜಿಸ್ಟ್ರೀ ನೋಟೀಸು ಜ್ಯಾರಿಯಾಗಿಯೂ ಕೆಲವು ಜ್ಯಾರಿಯಾಗದೆಯೂ ಬಂದಿರುವುದರಿಂದಲೂ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ 1936ನೇ ಇಸವಿ ಜನವರಿ ತಾ 25ನೇ ಶನಿವಾರ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು, ಇತ್ಯಾದಿಗಳನ್ನು ಸಲ್ಲಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡಾಗಿ ಇಟ್ಟ ನಗಗಳನ್ನು ಇದೇ 1936ನೇ ಇಸವಿ ಜನವರಿ ತಾ 25ನೇ ಶನಿವಾರ ಯಾ ಅನಂತರೆ ನಮಗೆ ಯುಕ್ತಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ 2 ಘಂಟೆಗೆ ಬಹಿರಂಗವಾಗಿ ಏಲಂ ಮಾಡುವೆವು

	ಸಾಲದ ನಂಬ್ರ ಮತ್ತು ಅಡವಿಟ್ಟ ತಾ	ಸಾಲ ಪಡೆಕೊಂಡವರ ಹೆಸರು ಮತ್ತು ವಿಳಾಸ	[illegible]
1	A 129 / 17-1-35	ದೇವೇಂದ್ರ ಶೆಟ್ಟಿ S/o ಸೋಮ ಶೆಟ್ಟಿ ವ್ಯಾಪಾರಿ ಕೊಂಚಾಡಿ, ದೇರೆಬೈಲು	6
2	A 148 / 21-1 35	ಮಂಜಪ್ಪ ಶೆಟ್ಟಿ S/o ಐತಪ್ಪ ಶೆಟ್ಟಿ ಮಗ್ಗದ ಕೆಲಸದವ, ಕೊಡಿಯಾಲಬೈಲು, ಮಂಗಳೂರು.	9
3	A 258 / 6-2 35	ಅಮ್ಮದೆ ಬ್ಯಾರಿ S/o ಅಬ್ದುಲ್ ಖಾದ್ರಿ, ಮಂಜೂರು ಗ್ರಾಮ, ಉಳ್ಳಾಲ	10
4	A 263 / 7-2-35	ಬಾಯಬ್ಯಾರಿ S/o ಇಬಿನೆ ಬ್ಯಾರಿ ಕೊಪ್ಪರಿಗೆ ಮನೆ ಜಪ್ಪು ಮೊಗರು ಗ್ರಾಮ ಕಂಕನಾಡಿ,	10
5	A 323 / 15 2-35	ಚೌಕರ S/o ತನಿಯ ಬಾಬುಗುಡ್ಡೆ ಅತ್ತಾವರ ಮಂಗಳೂರು	5
6	A 349 / 19-2 35	ಬೆಯ್ಯ ಬ್ಯಾರಿ S/o ಇದಿನೆ ಬ್ಯಾರಿ ಕುದ್ರೋಳಿ ಹಿಂದೂಸ್ತಾನ್ ಶಾಪಿ ಬಳಿ	7
7	A 363 / 21-2 35	ಎಲಿಯೋ ಜೋನಸ್ S/o ಓಬಿಯಾತ್ ಜೋನಸ್ ಡ್ರೈವರ್ ಜೆಪ್ಪುಗುಡ್ಡೆ ಬೈರಿನ ಬಳಿಯಲ್ಲಿ	4
8	A 376 / 23 2-35	ಪಕೀರ ಬ್ಯಾರಿ S/o ಮೊಯಿದಿನೆ ಬ್ಯಾರಿ ಕಂಕನಾಡಿ ಗೇಟಿನ ಬಳಿ ಬಜಾಲ್ ಗ್ರಾಮ ಕಂಕನಾಡಿ.	6
9	A 404 / 26 2-35	ಪಕೀರ ಬ್ಯಾರಿ S/ ಮೊಯಿದಿನೆ ಬ್ಯಾರಿ ಬಜಾಲ್ ಗ್ರಾಮ ಕಂಕನಾಡಿ	8
10	A 412 / 28-2-35	ಪಮ್ಮಕ್ಕ S ಇಸ್ಮಾಲಿ ಬ್ಯಾರಿ ಎಮ್ಮಾಡಿ ಮನೆ ಕೈರಂಗಳ ಗ್ರಾಮ ಮಂಜೇಶ್ವರ.	4
11	A 461 / 9-3 35	ಪೊನ್ನಮ್ಮ D/o ಬಾಡು, ಕುದ್ರುವಿನಪ್ಪ ತಣ್ಣೀರುಬಾವಿ ಗ್ರಾಮ ಪಣಂಬೂರು.	4
12	A 529 / 15 3 35	ಸೈಯದ್ U K S/o ಆ B ಸ್ಕೈಸ್ ಉಳ್ಳಾಲ	4
13	A 949 / 31-5 35	ಕೊರಗ ಶಕೇರ S/o ಉಗ್ಗಪ್ಪ ಕದ್ರಿ ಮಂಗಳೂರು	4

ತಾ 14—1-1936 }
ಮಂಗಳೂರು }

A. Vaikunta Prabhu,
Propri[e]tor, A V P Bank

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 234/1935

1 ತಿಮ್ಮಣ್ಣಾಳ್ವ, 2 ಅಕ್ಕಮ್ಮ, 3 ಪಕೀರಾಳ್ವ, 4 ಕೆ ಚಿಕ್ಕಪ್ಪ ಆಳ್ವ—1, 3, 4ನೇಯವರು ಕೋಡಿಂಗಾರು ಶಂಕರ ಆಳ್ವರ ಅಳಿಯಂದಿರು 2ನೇಯವಳು ಸಹ ಶಂಕರ ಆಳ್ವರ ಸೊಸೆ ಬೇಳ ಗ್ರಾಮದ ಕೋಡಿಂಗಾರದಲ್ಲಿರುವವರು—ಅರ್ಜಿದಾರರು

ಅರ್ಜಿದಾರರ ಸಹೋದರ ಮೃತನಟ್ಟ ತಿಂಗಾಳ್ವರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲುಮಾಡಿಕೊಳ್ಳುವರೆ ಅರ್ಜಿದಾರರ ಬಗ್ಗೆ ಅವರ ಕುಟುಂಬದ ಕವರಿನ ಆಡಳ್ತೆದಾರನಾದ 1ನೇ ಅರ್ಜಿದಾರನ ಹೆಸರಲ್ಲಿ ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿದಾರರು ದಾಖ್ಲು ಮಾಡಿದ ಸದ್ರಿ ಅರ್ಜಿಯು ತಾರೀಕು 27—1—'36ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆಕ್ಷೇಪವುಳ್ಳವರು ಆ ದಿವಸ ಹಾಜರಾಗಿ ಆಕ್ಷೇಪಿಸದಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ಮಾಡಲಾದೀತು ಎಂಬ ಸಂಗತಿ ಈ ಮೂಲಕ ಸರ್ವರಿಗೂ ತಿಳಿಸೋಣಾಗಿಯದೆ.

Kasaragode, } **M Ganesh Naryan Rao,**
Date 11 1-36 } *Advocate for Petitioners*

ನೋಟೀಸು

ಕಾಸ್ರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O S No 1039/1935

ಪ್ರಿ ಕೆ ಮುಹಮ್ಮದ ಕುಂಞ ಬ್ಯಾರಿ—ವಾದಿ

ಅಬ್ಬಾಸ ಬ್ಯಾರಿ ಪೊಯ್ಯೆಯಿಲ್ ಮುಹಮ್ಮದ ಬ್ಯಾರಿ ಮಗ ಕಾಸ್ರಗೋಡು ತಾಲೂಕು ಪುದ್ದ ಗ್ರಾಮದ ಪಡಿಂಞಾರೆ ಕರೆ ಎಂಬಲ್ಲಿ ರುವವ—ಪ್ರತಿವಾದಿ

ಪ್ರತಿವಾದಿಯು ವಾದಿಗೆ ತಾ 20 11-32 ರಲ್ಲಿ ರೂಪಾಯಿ 100ಕ್ಕೆ ಬರೆಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟು ಪ್ರಕಾರ ಬರತಕ್ಕ ಅಸ್ಲು ಬಡ್ಡಿ ಗವೇಜನ್ನು ವಸೂಲು ಮಾಡುವ ಬಗ್ಗೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 21 1 36ಕ್ಕೆ ತನಿಖೆ ಇಟ್ಟಿರುತ್ತದೆ ಆ ದಿವಸ ಪ್ರತಿವಾದಿಯು ಖುದ್ದು ಯಾ ವಕೀಲರ ಮುಖಾಂತರ ಕ್ಲಪ್ತಕಾಲಕ್ಕೆ ಹಾಜರಾಗಿ ತನ್ನ ಆಕ್ಷೇಪಗಳನ್ನು ಹೇಳುವರೆ ತಪ್ಪಿದರೆ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾಗುವುದು ಎಂತ ಈ ಮೂಲಕ ತಿಳಿಸೋಣಾಗಿಯದೆ.

Kasaragod, } **K. P Anantha Rao,**
Date 9 1-36 } *Advocate for Plaintiff*

ಭಾರತೀಯ ಲಿಬರಲ್ ಪಕ್ಷದ

ಪ್ರಸಿದ್ಧ ಪುರುಷರಾದ ಶ್ರೀ ವಿ. ಯಸ್. ಶ್ರೀನಿವಾಸ ಶಾಸ್ತ್ರಿಗಳು, ಎಲ್ಲರೂ ಕೊಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡಬೇಕಾಗಿ ಮೊನ್ನೆ ಭಾಷಣ ಮಾಡಿದರು. ಆದರೆ ಇವರ ಮನೋಭಿಪ್ರಾಯ ಇವರ ಸಹಪಾಠಿಗಳಾದ, ಲಿಬರಲ್ ಪಕ್ಷದ ಇತರರಿಗೆ ಅಂದರೆ, ಸರ್ ಕೊವಸ್ಜಿ ಜಹಂಗೀರ್, ಸರ್ ಚಿಮನ್‌ಲಾಲ ಸೆಟಲ್ವಾಡರವರಿಗೆ ಇದ್ದರೆ ಉಚಿತವು ಎಂದು ಕಾಂಗ್ರೆಸ್ಸ ಅಧ್ಯಕ್ಷರ ಮಾತು.

ಚಂದ್ರಗ್ರಹಣದ ಸಮಯ.

ಚಂದ್ರಗ್ರಹಣವೆಂದರೆ ಅದನ್ನು ಯಾರೋ ಒಬ್ಬ ಕ್ರೂರ ರಾಕ್ಷಸನು ನುಂಗುತ್ತಿರುವನೆಂಬ ಭಾವನೆಯುಳ್ಳವರಾಗಿ ಟಿಬೇಟಿಯ ಜನರು, ಅವರ ಹಳೆ ಪದ್ಧತಿಯನ್ನನುಸರಿಸಿ, ಮೊನ್ನೆ ಗ್ರಹಣದ ಸಮಯ ಅಲ್ಲಿನ ಇಸ್ಪಾನ್‌ಟ ಲ್ ಎಂಬಲ್ಲಿ ಚಂದ್ರನ ಕಡೆಗೆ ಸಾವಿರಾರು ಗುಂಡುಗಳು ಹೊಡೆದರು. ಚಂದ್ರಗ್ರಹಣವನ್ನು ನಿರೀಕ್ಷಿಸಲು ಆ ನಗರದ ಎಲ್ಲಾ ಜನರು ನೆರೆದಿದ್ದರು. ಇಲ್ಲಿನ ಗ್ರಹಣದ ಕಾಲ ೨೩ ನಿಮಿಷಗಳು.

ಮಗಳು ತಾಯಿಯ ಮೇಲೆ ದಾವೆ ಮಾಡಿರುವಳು

ಎನ್. ಹೀಬಟ್ಟ ಎಂಬವಳು ಓರ್ವ ಶ್ರೀಮಂತ ಪುರುಷನ ಮಗಳು. ತಂದೆಯು ಮೃತನಾಗಿರುವ ಸಮಯ, ತನ್ನ ಮಗಳಿಗೆ ಮಕ್ಕಳು ಹುಟ್ಟಿದರೆ, ತನ್ನ ಆಸ್ತಿಯ ಹೆಚ್ಚಿನಂಶವು ಅವಳಿಗೆ ಸಲ್ಲಬೇಕಾದುದೆಂದು ಒಂದು ವೀಲನ್ನು ಮಾಡಿದ್ದನು. ಈಕೆಯ ತಾಯಿಯು ತನ್ನ ಮಗಳಲ್ಲಿ ಮಕ್ಕಳು ಜನಿಸದಂತೆ ಈರ್ವರು ಡಾಕ್ಟರರ ಸಹಾಯದಿಂದ ಅವಳ ಮೇಲೆ ಕೆಲವು ಔಷಧಿಗಳ ಉಪಯೋಗವನ್ನು ಮಾಡಿದಳು. ಎನ್ನಳ ತಂದೆಯ ಆಸ್ತಿಯು ೩೦೦,೦೦೦ ಆಗಿರುತ್ತದೆ. ಏನ್ನಳು ತನ್ನ ತಾಯಿಯು ಔಷಧಿ ಉಪಯೋಗ ಮಾಡಿದುದಕ್ಕಾಗಿ ೧೦೦,೦೦೦ ಡೇಮೇಜನ್ನು ಕೋರಿ ದಾವೆ ಮಾಡಿರುವಳು. ಈ ಘಟನೆಯು ನಡೆದುದು ಅಮೇರಿಕಾದ ಸಾನ್‌ಫ್ರಾನ್ಸಿಸ್ಕೋನಲ್ಲಿ.

ಚೀನಾದಲ್ಲಿ ಜಪಾನಿಯರು

ಪ್ರಾರಂಭಿಸಿದ ಸ್ವಯಂಪ್ರಭುತ್ವದ ಆಳಿಕೆಯಿಂದ ಬಹಳ ಕ್ಷೋಭೆಯುಂಟಾಗಿರುತ್ತದೆ. ಜಪಾನೀಯ ಸಂಗ್ರಾಮಾಧಿಕಾರಿಗಳು ಎಲ್ಲಾ ಯುದ್ಧ ಸಿದ್ಧತೆಗಳನ್ನು ಮಾಡಿರುವರು. ಚೀನಿಯರು ಏನೇಕ ಒಪ್ಪಂದ ಪಡೆಸದಿದ್ದರೆ, ತಾವು ಅವರ ಮೇಲೆ ಆಕ್ರಮಿಸುವೆವೆಂದು ಎಚ್ಚರಿಕೆಯನ್ನು ಕಳುಹಿಸಿಕೊಟ್ಟಿರುತ್ತಾರೆ.

ಕಾಂಗ್ರೆಸ್ಸಿನ ಸುವರ್ಣೋತ್ಸವ ನಿಮಿತ್ತವಾಗಿ.

ಲಾಹೋರಿನ ಶೇಖಪುರ ಎಂಬಲ್ಲಿನ ನಗರ ಸಭೆಯು ಎಂಟು ಜನ ಸದಸ್ಯರ ಸ್ಥಾನವು ತೆಗೆಯಲಾಗುವದೆಂದು ಆಜ್ಞೆ ಬಂದಿರುತ್ತದೆ. ಮುನ್ಸಿಪಲ್ ಆಕ್ಟಿಗೆ ವಿರೋಧವಾದ ರೀತಿಯಲ್ಲಿ ಈ ಸದಸ್ಯರು ವರ್ತಿಸುದುದೆ ಇದಕ್ಕೆ ಕಾರಣವಂತೆ.

ಕಾಶೀ ನಗರದಲ್ಲಿ ಚಂದ್ರಗ್ರಹಣ

ಚಂದ್ರಗ್ರಹಣದ ಸಮಯ ಪವಿತ್ರ ಗಂಗೆಯಲ್ಲಿ ಸ್ನಾನ ಮಾಡುವ ಕಾಶೀ ನಗರದಲ್ಲಿ ಲಕ್ಷಗಟ್ಟಲೆ ಯಾತ್ರಿಕರು ಕಿಕ್ಕಿರಿದು ನೆರೆದಿದ್ದರು. ಇದರಿಂದ ಬಹಳ ಗೊಂದಲವುಂಟಾಯಿತು. ಒಬ್ಬನು ಮಡಿದಿರುವನು. ಈ ಯಾತ್ರಿಕರ ಜಾಗ್ರತೆ ತೆಗೆದುಕೊಳ್ಳಲು ೨೦೦೦ ಸ್ವಯಂಸೇವಕರ ಏರ್ಪಾಡಿತ್ತು. ಇವರಲ್ಲಿ ಓರ್ವ ಅಮೇರಿಕನ್ ಪ್ರಯಾಣಿಕನ ಕೂಡಿದ್ದನು.

ಜರ್ಮನಿಯಲ್ಲಿ ಸುಂಟರಗಾಳಿ.

ಪಶ್ಚಿಮ ಜರ್ಮನಿಯಲ್ಲಿ ಸುಂಟರಗಾಳಿಯುಂಟಾಗಿ ಎರಡು ಕಾರ್ಖಾನೆಗಳು ಕುಸಿದುಬಿದ್ದವು. ೪ ಜನರು ಮಡಿದಿರುವರು; ೩೦ ಮಂದಿ ಗಾಯಹೊಂದಿರುವರು. ಸಾಧಾರಣ ೨೫೦ ಜನರ ಮನೆಗಳು ನಿರ್ನಾಶ ಹೊಂದಿರುವವು.

ನವರಾಜಶಾಸನವನ್ನು

ಅನುಸರಿಸಿ ಪ್ರಾಂತೀಯ ಸರಕಾರಗಳು ಯೋಗ್ಯವಾದ ರೀತಿಯಲ್ಲಿ ಒಂದೇ ಸವನೆ ಕಾರ್ಯಪ್ರಾರಂಭ ಮಾಡಲು ಕೆಲ್ಲ ಸಿದ್ಧತೆಗಳನ್ನೆ ಮಾಡುವ ಕೆಲವು ಆಲೋಚನೆಗಳನ್ನು ಮಾಡಲು ಪ್ರಾಂತೀಯ ಸರಕಾರಗಳ ಕೆಲವು ಉದ್ಯೋಗಸ್ಥರು ನವಡಿಲ್ಲಿಯಲ್ಲಿ ಸಭೆಸೇರುವರು.

ಬಂಗಾಳ ಸರಕಾರದ ಕ್ಷಮಾಪಣೆ.

ಶ್ರೀ ಜವಾಹರ ಲಾಲರು ಹಿಂದುಸ್ತಾನದ ನೆಲದಿಂದ ರಾಜಕೀಯ ಕಾರ್ಯವನ್ನು ನಡೆಯಿಸಿ, ಹಣ ಕೂಡಿಸುತ್ತಿದ್ದಾರೆಂದೂ ಗವರ್ನರ ಬಂಗಾಳ ಸರಕಾರದ ವರದಿಯಲ್ಲಿ ತಪ್ಪು. ಈ ಆರೋಪಣೆಗೆ ಅವರು ಆಕ್ಷೇಪ ತರಲು ಬಂಗಾಳ ಸರಕಾರವು ತನ್ನ ಕ್ಷಮಾಪಣೆಯನ್ನು ಪ್ರಕಟಿಸಿರುತ್ತದೆ.

ಜರ್ಮನಿಯ ಯೆಹೂದ್ಯರ ರಕ್ಷಣೆಗಾಗಿ—

ನಾಜಿ ಮಂಡಳಿಯು ಹಿಟ್ಲರನ ಅಧಿಕಾರದಲ್ಲಿ ಅವರ ದೇಶದಲ್ಲಿ ವಾಸವಾಗಿರುವ ಜೀವ್ಸರನ್ನು (ಯೆಹೂದ್ಯ) ಅಲ್ಲಿಂದ ಹೊರಗಟ್ಟಲು ದೃಢಸಂಕಲ್ಪಮಾಡಿದ್ದಾರೆ. ಈ ದೇಶ್ಯರ ಕಷ್ಟನಿವಾರಣೆಗಾಗಿ ಅಮೇರಿಕಾದಲ್ಲಿ ಬ್ರಿಟಿಷ ಮತ್ತು ಇತರ ಅಮೇರಿಕಾನರ ಸಭೆಯು ಸೇರಿ ಯೋಜನೆಗಳಾಗುವವು.

ಡಾ| ಅಂಬೇಡ್ಕರರು ಹಿಂದೂ ಧರ್ಮವನ್ನು ತ್ಯಜಿಸುವ

ನಿರ್ಧಾರವನ್ನು ಹಿಂದಕ್ಕೆ ಪಡೆದಿರುವರು. ಈಗ ಇವರು ಹರಿಜನರಿಗೆ ಇತರ ಯಾವ ಮತಗಳಿಂದ ಹೆಚ್ಚಿನ ಹಿತ ದೊರಕುವುದೆಂದು ಪರೀಕ್ಷಿಸುವ ಕಾರ್ಯದಲ್ಲಿ ನಿರತರಾಗಿರುತ್ತಾರೆ.

ಕಲ್ಕತ್ತಾ ನಗರ ಸಭೆಗೆ—

ರೂ ೭,೬೬,೪೦೦ರನ್ನು ೩ ಸಲ ಒಡ್ಡಿ ತೆರಿಗೆ ಸಲ್ಲಿಸಬೇಕಾಗಿ ದೆಂದು ಬಂಗಾಳ ಸರಕಾರದ ಆಜ್ಞೆ ಬಂದಿರುತ್ತದೆ. ಇದರ ಮೊತ್ತವು ೧೭ ವರುಷಗಳಲ್ಲಿ ಆಗತಕ್ಕದ್ದು. ಈ ನಗರ ಸಭೆಗೆ ರೂ ೩೦ ಲಕ್ಷ ಸರಕಾರದಿಂದ ಸಲ್ಲಬೇಕಾಗಿದೆ. ಅವನ್ನು ವಸೂಲು ಮಾಡಲು ತಕ್ಕ ವ್ಯವಸ್ಥೆ ಮಾಡಬೇಕೆಂದು ನಗರಸಭೆಯ ಅಕೌಂಟ ಆಫೀಸರರ ಸೂಚನೆ ಬಂದಿರುತ್ತದೆ.

ಅಲ್ಲಹಾಬಾದಿನಲ್ಲಿ ಅರ್ಧಕುಂಭ ಮೇಳವು

ಪ್ರಾರಂಭವಾಗಿರುತ್ತದೆ. ಇದು ಹದಿನೆರಡು ವರುಷಕ್ಕೆ ಒಂದು ಸಲ ಜರಗುವ ಉತ್ಸವವಾಗಿರುತ್ತದೆ. ಇನ್ನು ಒಂದು ತಿಂಗಳ ಸಮಯ ಈ ಮೇಳವು ನಡೆಯುವುದು. ಲಕ್ಷಗಟ್ಟಲೆ ಹಿಂದೂ ಯಾತ್ರಿಕರು ಪ್ರಯಾಗ—ಗಂಗಾ ಯಮುನಾ ನದಿಯ ಸಂಗಮ ಸ್ಥಳದಲ್ಲಿ ಸ್ನಾನ ಮಾಡಲು ಹೋದರು. ಈ ಮೇಳದ ಸಮಯ ಯಾತ್ರಿಕರ ಮತ್ತು ಅಲ್ಲಹಾಬಾದಿನ ಆರೋಗ್ಯವನ್ನು ಕಾಪಾಡಲು ಸರಕಾರವು ಅನೇಕ ಸುವ್ಯವಸ್ಥೆಗಳನ್ನು ಮಾಡಿರುತ್ತದೆ.

ಹಿಂದೂದೇಶದ ಮದ್ಯಪಾನ ನಿಷೇಧ ಚಳವಳಿ

ಮದ್ಯಪಾನಗಳ ಉಪಯೋಗವು ದಿನೇ ದಿನೇ ಹೆಚ್ಚುತ್ತಾ ಬರುತ್ತದೆ. ಇದರ ದೆಸೆಯಿಂದಾಗಿ ದೇಶದ ದಾರಿದ್ರ್ಯವು ಇನ್ನೂ ವೃದ್ಧಿಗೊಳ್ಳುತ್ತದೆ. ಈ ದುರಭ್ಯಾಸವು ಜನರಲ್ಲಿ ಅಂಟದಂತೆ ಮತ್ತು ಜನರನ್ನು ಅದರಿಂದ ಬಂಧವಿಮೋಚನೆ ಮಾಡಲು ನಿಷೇಧ ಚಳವಳಿ ಬಹಳ ಬಲವಾಗಿ ನಡೆಸಬೇಕಾಗಿದೆ ಎಂದು, ಮಿ. ಜೆ. ಇ. ಇಂಗ್ಲೆಂಡ ಸ್ಕಾಟ್ಲೆಂಡಿನಿಂದ ಇಲ್ಲಿಗೆ ಬಂದ ಓರ್ವ ಮಹಿಳೆ ಎಂಬವರು ಹಿಂದೂದೇಶದಲ್ಲಿ ಮದ್ಯಪಾನ ನಿಷೇಧದ ಕುರಿತು ಪ್ರಚಾರಮಾಡುತ್ತಿರುವಾಗ ಸೂಚಿಸಿದಳು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು.

ನವೀನ ಚುನಾವಣೆಹೊಂದಿದ ಸದಸ್ಯರ ಸಭೆ ಸೇರಿಸಿ, ಅಧ್ಯಕ್ಷರ ಚುನಾವಣೆಯನ್ನು ಇನ್ನೂ ಜಿಲ್ಲಾ ಕಲೆಕ್ಟರ್‌ರವರು ಮಾಡಲಿಲ್ಲವೆಂದೂ ಸಭೆ ಸೇರಿಸಲು ಅವರೊಡನೆ ಮಾಡಿದ ಅರ್ಜಿಗೆ ಯೋಗ್ಯ ಉತ್ತರವು ದೊರೆತಿಲ್ಲವೆಂದೂ ಈ ಕುರಿತು ಸರಕಾರವು ವಿಚಾರಿಸಬೇಕೆಂದೂ ಹೊಸ ಜಿಲ್ಲಾ ಬೋರ್ಡ ಸದಸ್ಯರು ಮದರಾಸು ಗವರ್ನರರಲ್ಲಿ ಅರಿಕೆಮಾಡಿರುವರು. ಗವರ್ನರರ ಉತ್ತರವು ಕಾಯಲಾಗಿದೆ.

ಮಲಬಾರಿನ ತೀಯಾ ಜನರು.

ಮಲಬಾರಿನಲ್ಲಿ ಸಾವಿರಾರು ತೀಯಾ ಜನರು ಹಿಂದೂ ಧರ್ಮವನ್ನು ತ್ಯಜಿಸಲು, ಮೊನ್ನೆ ಅಲ್ಲಿನ ತರ್ಕಲ್ಲಿ ಎಂಬಲ್ಲಿ ಜರಗಿದ ತೀಯರ ಸಭೆಯಲ್ಲಿ ನಿರ್ಧಾರಮಾಡಿರುವರು. ಹಿಂದೂಧರ್ಮದಲ್ಲಿ ಅವರಿಗೆ ತಕ್ಕ ಮನ್ನಣೆಯು ದೊರಕದಿರುವುದೇ ಇದಕ್ಕೆ ಕಾರಣವಂತೆ.

ಈಜಿಪ್ಟಿನ ಭವಿಷ್ಯ.

೧೯೩೬ರ ಒಪ್ಪಂದವನ್ನು ಆಂಗ್ಲೋ—ಈಜಿಪ್ಟಿಯನ ಪ್ರಶ್ನೆಯ ಇತ್ಯರ್ಥಕ್ಕಾಗಿ ಉಪಯೋಗಿಸಲ್ಪಡುವುದು. ಈಜಿಪ್ಟಿನಲ್ಲಿ ಬೇರಾದ ಸಂಗ್ರಾಮೋದ್ಯೋಗಿಯನ್ನು ಮಾಡಲು ಬ್ರಿಟಿಷರಿಗೆ ಸಾಧ್ಯವಾಗುವುದು. ಸುಯೇಜ ಕಾಲುವೆಯಲ್ಲಿ ೮೦೦೦ ಸೈನಿಕರನ್ನು ಇರಿಸಬೇಕಾಗಿ ನಿರ್ಧಾರವಾಗಿರುತ್ತದೆ. ಈಜಿಪ್ಟಿನ ರಕ್ಷಣೆಗೆ ಬ್ರಿಟಿಷ ಸೈನ್ಯ ಮಂಡಳವು ಕೊಡಲಾಗುವುದು. ಈ ಶರ್ತಗಳನ್ನು ಅನುಸರಿಸಿ ಈಜಿಪ್ಟಿನಲ್ಲಿ ಮುಂದಿನ ರಾಜ್ಯರಚನೆಯಾಗುವುದು.

ಗೋರಾಹಿ ಬಳಿ ಭೀಕರ ಯುದ್ಧ

ಗೋರಾಹಿ ಹತ್ತಿರ ಹಬಶಿಗಳಿಗೂ ಇಟೇಲಿಯನರಿಗೂ ಭಯಂಕರ ಯುದ್ಧವು ಸಂಭವಿಸಿ, ಇಟೇಲಿಯವರು ಸೋತುಹೋಗಿರುವರು. ಇಟೇಲಿಯನರ ಅನೇಕ ದೇಶೀ ಸೈನಿಕರು ಮಡಿದಿರುವರು. ಒಬ್ಬ ಆಫೀಸರರೂ ಮಡಿದಿರುವರು. ಇಟೇಲಿಯವರ ಆರು ಟ್ಯಾಂಕುಗಳನ್ನು ಹಬಶಿಯವರು ಹಿಡಿದಿರುವರು.

ಇನ್ನೊಂದು ಮಹಾಯುದ್ಧದ ಸಿದ್ಧತೆಗಳು

ಇಟೇಲಿ—ಎಬಿಸಿ ಕಲಹವು ದಿನೇ ದಿನೇ ಇದೀ ಯೂರೋಪ ಖಂಡವನ್ನೇ ಯುದ್ಧಕ್ಕೆಳೆಯುವ ಚಿಹ್ನೆಯನ್ನು ಸೂಚಿಸುತ್ತದೆ. ರಷ್ಯಾವು ಜನಾಂಗಸಭೆಯ ಗೌರವವನ್ನು ರಕ್ಷಿಸಲು ಮುಂದೆ ಬಂದಿರುತ್ತದೆ. ಜರ್ಮನಿಯವರನ್ನು ಇದರೊಳಗೆ ಎಳೆಯಲು ಪ್ರಯತ್ನಗಳು ನಡೆಯುತ್ತಿವೆ. ಬ್ರಿಟಿಷರಿಗೂ ಫ್ರೆಂಚರಿಗೂ ಮೆಡಿಟರೇನಿಯನ್ ಸಾಗರದಲ್ಲಿನ ನೌಕಾ ಬಲದ ವಿಚಾರ ಕೆಲವು ವಿಶೇಷ ತರದ ಒಪ್ಪಂದಗಳಾಗಿವೆ. ಬಾಗ್ದಾದ ಅಲೆಕ್ಸಾಂಡ್ರಿಯಾ ಎಂಬಲ್ಲಿ ಅನೇಕ ಯುದ್ಧನೌಕೆಗಳು ಸಿದ್ಧವಿವೆ.

ಸಿಂಧಪ್ರಾಂತ್ಯದಲ್ಲಿ ಅತಿರೇಕ ಚಳಿ

ಸಿಂಧಪ್ರದೇಶದಲ್ಲಿ ಅತಿರೇಕ ಚಳಿಯು ಬಿದ್ದಿರುತ್ತದೆ. ಚಳಿಯಿಂದ ಅನೇಕರು ಮಡಿದಿರುವರು.

ನೌಕಾಪರಿಷತ್ತು.

ಇಂಗ್ಲಾಂಡಿನಲ್ಲಿ ಜರಗುವ ನೌಕಾಪರಿಷತ್ತಿನಿಂದ ಕ್ಷೇಮಕರವು ಸೂಚನೆಗಳಿಗೆ ಸಮಾಧಾನಕರ ಉತ್ತರವು ದೊರೆತಿರುವದರಿಂದ ಜಪಾನು ಆ ಪರಿಷತ್ತನ್ನು ತ್ಯಜಿಸಿರುವುದು. ಈ ಪರಿಷತ್ತಿಗೆ ರಷ್ಯಾ ಮತ್ತು ಜರ್ಮನಿ ಸೇರುವಂತಿದೆ.

ನೆಪ್ಚ್ಯೂನ್ ಎಶ್ಯೂರೆನ್ಸ್ ಕಂಪೆನಿ.

ನೆಪ್ಚ್ಯೂನ್ ಎಶ್ಯೂರೆನ್ಸ್ ಕಂಪೆನಿಯು ಕಾರ್ಯನಿರ್ವಹಣವನ್ನು ಕುರಿತು ರಚಿಸಿ ಜುಲಾಯಿಗೆ ಅಂತ್ಯವಾದ ಮೂರು ವರ್ಷಗಳ ಹಣದ ಸ್ಥಿತಿಯನ್ನು ಪರ್ಯಾಲೋಚಿಸಿ ನಾವಿದ ರೂಪಾಯಿಯ ವಿಮೆ. (ಇದೀ ಜೀವವಿಮಾ ಮತ್ತು ಉಂಬಳಿ) ಯ ಮೇಲೆ ರೂ ೫೪ ಮತ್ತು ೬೫ರ ಬೋನಸನ್ನು ಹಂಚಲು ಧೈರ್ಯವಾಗಿದೆ. ಅರ್ಧ ಕೋಟಿ ರೂಪಾಯಿ ಪಾಲಿಸಿಗಳ ಪತ್ರಗಳನ್ನು ಇಟ್ಟು, ಅಲ್ಪ ಸಮಯದಲ್ಲಿ ಇರಗಿಸಿ ಇಷ್ಟು ಹೆಚ್ಚಿನ ಬೋನಸನ್ನು ಹಂಚಿದ ಕಂಪೆನಿಯು ಇದೇ ಎಂದು ಕಂಪೆನಿಯ ರಿಪೋರ್ಟ್ ಸೂಚಿಸುತ್ತದೆ. ಕಂಪೆನಿಯ ಆರ್ಥಿಕ ಸ್ಥಿತಿಯು ಉತ್ತಮವಾಗಿದ್ದು, ಹಣವನ್ನು ಇನ್ನು ಉತ್ಕೃಷ್ಟ ಲಾಭಕರ ಸಂಸ್ಥೆಗಳ ಪಾಲುಪತ್ರದಲ್ಲಿ ವಿನಿಯೋಗಿಸಿ ಇನ್ನೂ ಅಧಿಕ ಬೋನಸನ್ನು ಹಂಚಬೇಕೆಂದೂ ಕಂಪೆನಿಯ ಆಸೆಯಿದೆ.

ಕಳೆದ ವರ್ಷ ಅದರ ಹಿಂದಿನ ವರ್ಷದ ಹಿಂದೂವರೆ ಪಾಲಿನಷ್ಟು ಪಾಲಿಸಿಗಳು ನಡೆದಿವೆ. ಪ್ರೀಮಿಯಮ್‌ಗಳು ಸೇರದೆ ಒಂದಸ್ಟು ಹೆಚ್ಚಾಗಿ ಒಂದಿದೆ. ಹೆಚ್ಚಾಗಿ ಬರುವ ಮತ್ತು ಸಭ್ಯರು ತರಗತಿಯವರಾಗಿದೆ. ಈ ಕಂಪೆನಿಯು ವಿನಾ ಕೆಲಸ ಮಾಡುತ್ತಿರುವುದು ಇಂತಹ ಸಂಸ್ಥೆಯ ಸೇವೆಯನ್ನು ಜನರು ಹೆಚ್ಚಾಗಿ ಪಡೆಯಬೇಕಾದರೆ ಸಂಸ್ಥೆ ಇನ್ನಷ್ಟು ಬಲಹೊಂದಿ ಹೆಚ್ಚಿನ ಸೇವೆಗಾಗಿ ಪ್ರಯತ್ನಹೊಂದುವದೆಂದೂ ನಂಬುವಂತೆ ಕಳೆದ ವರ್ಷದ ಕಾರ್ಯಕಲಾಪಗಳು ಆಸೆಹುಟ್ಟಿಸುತ್ತಿವೆ.

ವಿಕಸಿತ ರೋಜಾ ಹೂವಿನಂತೆ

ಆಕೆಯ ನಿರ್ಮಲ ಮುಖವರ್ಣವು ಬೆಳಗುತ್ತಿತ್ತು

ಪ್ರಖ್ಯಾತ, ಜಗನ್ಮೋಹನಾಕಾರದ ಮೊಗಲ ಮಹಾರಾಣಿ ನೂರ್‌ಜಹಾನಳ ಹೆಸರು ಯಾರಿಗೆ ಗೊತ್ತಿಲ್ಲ? ಆಕೆಯು ಸೌಂದರ್ಯೋಪಾಸಕಳು. ಸೌಂದರ್ಯದಲ್ಲಿ ಮುಳುಗಿತೇಲಿದವಳು. ಪರಿಮಳೋತ್ಪನ್ನವಾದ ಪರಿಮಳ ದ್ರವ್ಯಗಳನ್ನು ಕಂಡುಹಿಡಿದುದಕ್ಕೆ ಆದಾದ ರಾಜಭೋಗನೆಯಿತ್ತವಳು. ನೂರ್‌ಜಹಾನ್ ಬೇಗಮಳ ಸೃಷ್ಟಿಯು ಹಿಂದೆ ತ್ರಿಲೋಕಕ್ಕೆ ಭೋಗಸಾಮ್ರಾಜ್ಯವಾಗಿತ್ತು. ಇಂದು ಅಫಘನಾ ಪರಿಮಳ ದ್ರವ್ಯಗಳಿಗೆ ಬಂದಿದೆ. ಅವುಗಳ ಸೊಗಸು, ಸುವಾಸನೆ, ಅನ್ಯೆಲ್ಲಿ ಇಲ್ಲ.

ಮೊಗಲ ರಾಜಾಂತಃಪುರದ ನೂರಾರು ನಾರೀಮಣಿಯರೂ, ನೂರ್‌ಜಹಾನಳೂ ಮುಖಸೌಂದರ್ಯ ಪಾಲನೆಯಲ್ಲಿ ಮಗ್ನರಾಗಿದ್ದರು. ಈ ನಿಮ್ಮ ಸೌಂದರ್ಯದಲ್ಲಿ ನಿಮಗೆ ಆಸಕ್ತಿಯಿಲ್ಲವೇ? ಹಾಗಾದರೆ ದಿನದ ಅಫಘನ್ ಸ್ನೋ ಉಪಯೋಗಿಸಿ. ಚರ್ಮಕ್ಕೆ ಒಳ್ಳೇ ವಸ್ತು, ಚರ್ಮವನ್ನು ರೇಶ್ಮೆಯಷ್ಟು ಮೃದುಮಾಡುತ್ತದೆ. ಕಪ್ಪುವನ್ನೆಲ್ಲ ತೊಳೆದುಹಾಕುತ್ತದೆ. ಸಹಜವಾದ ಯಾವ ಬಣ್ಣ ಮುಖದ ವರ್ಣವನ್ನು ಇದ್ದಿಯೋ ಅದನ್ನು ಉಳಿಸುತ್ತದೆ. ಎಲ್ಲಾ ಮಳಿಗೆಗಳಲ್ಲೂ ಸಿಗುತ್ತದೆ.

ಪಟೇನ್‌ವಾಲಾ ಇವರ

AFGHAN SNOW

ಕೆಮಿಸ್ಟ್ಸ್ ಮಳಿಗೆಗಳಲ್ಲಿ ಸಿಗುತ್ತದೆ.	ಆಸಿಯಾ ಖಂಡದಲ್ಲೆಲ್ಲಾ ಮಾರಲ್ಪಡುತ್ತದೆ.

ಇ. ಎಸ್. ಪಟೇನ್‌ವಾಲಾ, ೧೮೫ ಬಿ, ಅಬ್ದುಲ್ ರಹಿಮಾನ್ ಸ್ಟ್ರೀಟ್, ಬಾಂಬೆ.

ಅನುಕ್ರಮಣಿಕೆ

ಟಿಪ್ಪಣಿಗಳು ೩
ಬೆಲ್ಜಿಯಮ್ ಪ್ರಾಂತ್ಯವು ಅಬಿಸೀನಿಯವರಿಗೆ ಸೇರಿತು ೩
ನಿರುದ್ಯೋಗ ನಿವಾರಣೆ ೫
ವ್ಯಾಪಾರ ಸುಧಾರಣಾ ಸಂಸ್ಥೆ ೬
ಅಗ್ರಲೇಖ
ಸಂಧಾನ ಸಾಧನೆ ೧೦
ಸ್ಫುಟವಿಚಾರಗಳು ೧೦
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ಎಸೆಂಬ್ಲಿ ಸದಸ್ಯರ ಮೇಲೆ ಬಹಿಷ್ಕಾರ ರಾಯಸ ೧೪
ಮಹಿಳಾ ವಿಭಾಗ ೧೬
ಮೌಲಾನಾ ಶೌಕತಾಲಿಯವರು ಕಾಂಗ್ರೆಸ್ ಸಂಗಡವನ್ನು ಸೇರುವರು ೧೮

ಸ್ವದೇಶಾಭಿಮಾನಿ.

ಕಾ. ೧೦ನೇ ಶುಕ್ರವಾರ ಜನವರಿ ೧೯೩೬

ಸಂಧಾನ ಸಾಧನೆ

ಅಬಿಸೀನಿಯ ಇಟಲಿಗಳೊಳಗಣ ಯುದ್ಧವು ಮುಗಿವಂತೆ ಎರಡೇ ಉಪಾಯಗಳಿವೆ ಎಂದು ಜನಾಂಗಸಂಘವು ಎನ್ನುತ್ತಿದೆ ಎಣ್ಣೆ (ಪೆಟ್ರೋಲ್) ಇಟಲಿಗೆ ಸಿಗದಂತೆ, ಪ್ರತಿಬಂಧನ ಮಾಡುವುದು, ಒಂದು ಉಪಾಯ, ಆಗ ಯಾವತ್ತೂ ಯಾಂತ್ರಿಕ ಯುದ್ಧಕ್ರಿಯೆಯು ತಟಸ್ಥವಾಗಿ, ಇಟಲಿಯು ಅಬಿಸೀನಿಯದ ಹಿಂಸೆಗೆ ಒಳಪಡಬೇಕಾಗುವುದರಿಂದ, ಸಂಧಾನ ಮಾಡಲು ಆತುರಪಡಬಹುದು ಅಥವಾ, ಅಬಿಸೀನಿಯವನ್ನು ಜನಾಂಗಸಂಘವು ಹೇಳುವ ಜನಾಂಗಗಳ ಸರಕಾರಗಳ ಕೈಕೆಳಗೆ ಇಡುವುದರಿಂದ, ಆ ರೀತಿ ರಾಜ್ಯಭಾರವನ್ನು ಹೊಂದುವ ಅಬಿಸೀನಿಯದೊಡನೆ ಇಟಲಿಯು ಯುದ್ಧಮಾಡುವುದು ಅನ್ಯಾಯವಾಗಿ, ತನ್ನಷ್ಟಕ್ಕೆ ಸುಮ್ಮನಿರಬೇಕಾಗುವುದು

ಇಟಲಿಯು, ಅಷ್ಟೊಂದು ಬಲಹೊಂದಿರದೆ ಇದ್ದ ಅಬಿಸೀನಿಯದಲ್ಲಿ ಒಳನುಗ್ಗಿ, ಧರ್ಮಯುದ್ಧ ಕ್ರಮಗಳನ್ನ ಮರೆತು, ಹಬಸೀ ಜನರ ಸಂಹಾರಣೆ ಮಾಡಲು ಬಾಂಬುಗುಂಡುಗಳ ಸುರಿಮಳೆಯನ್ನು ಸುರಿಯುತ್ತಾ ದರ್ಪದಿಂದ, ಲಂಚದಿಂದ, ಭಯಪ್ರದರ್ಶನದಿಂದ, ಆವೇಗದಿಂದ ಚಿಕ್ಕದೊಂದು ಅಂಶದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದಾಗಲೇ, ಫ್ರಾನ್ಸಿನ ಲಾವಲರೂ ~~ಇಂಗ್ಲೆಂಡಿನ ಹೋರರೂ ಸಂಧಾನ ಪ್ರಯತ್ನ~~ ಮಾಡಲೆಳಸಿ,–ಹೋರರು ಸ್ಥಾನತ್ಯಾಗ ಮಾಡುವಂತಾಯಿತು ಸುಧಾರಿತ ರಾಷ್ಟ್ರಗಳಾವುವೂ ಆ ಬಗೆಯ ಸಂಧಾನ ಶರ್ತಗಳನ್ನು ಮನ್ನಿಸಲಿಲ್ಲ ಈಗ, ಇತ್ತೀಚೆಗೆ ತಲಪುತ್ತಿರುವ ವಾರ್ತೆಯಂತೆ, ಇಟಲಿಗೆ ದೈವವು ಅನುಕೂಲವಾಗಿಲ್ಲದೆ ಮಳೆಸುರಿದ ರಣರಂಗದಲ್ಲಿ ಎಲ್ಲೆಲ್ಲಿಯೂ ಸೋತು, ಯುದ್ಧಾರಂಭದಲ್ಲಿ ಎಲ್ಲಿದ್ದರೋ ಅಲ್ಲಿಗೆ ಬಂದು ತಲಪಿ ನಿಟ್ಟುಸಿರಿಂದಿರೆ ಈಗ ಪುನಃ, ಮೇಲೆ ಹೇಳಿರುವ ಎರಡನೆ ರೀತಿಯಲ್ಲಿ ಸಂಧಾನವಲ್ಲದಿದ್ದರೂ, ಯುದ್ಧವಾಗದಂತಹ ಪರಿಸ್ಥಿತಿಯನ್ನು ಕಲ್ಪಿಸಬೇಕಾಗಿ ಯಾರೋ ಪ್ರಯತ್ನಪಡುತ್ತಿರುವರಾಗಿ ವಾರ್ತೆ ಹಬ್ಬಿದೆ

ಅಬಿಸೀನಿಯವು ಸ್ವತಂತ್ರ ರಾಷ್ಟ್ರ, ಸಂಪೂರ್ಣಾಧಿಕಾರವನ್ನು ಸ್ವಯಂ ನಡೆಸುವ ಯೋಗ್ಯತೆಯುಳ್ಳದೆಂದೇ, ಜನಾಂಗ ಸಂಘದಲ್ಲಿ ಸದಸ್ಯತೆಯನ್ನು ಪಡೆದು ಸಮಾನ ರಾಷ್ಟ್ರವಾಗಿದೆ. ಜನಾಂಗ ಸಂಘಕ್ಕೆ ಅದು ಸೇರದಿದ್ದರೂ, ಜನಾಂಗ ಸಂಘದಿಂದ ಹೊರತಳ್ಳಿದರೂ, ಅಬಿಸೀನಿಯವು ಸ್ವತಂತ್ರವೇ. ಮಹಾಯುದ್ಧ ಕಾಲದಲ್ಲಿ ಸೋತ ರಾಜ್ಯಗಳ ವಸಾಹತುಗಳನ್ನು, ಅಂತಹ ರಾಜ್ಯಗಳಿಂದ ನಷ್ಟ ಪರಿಹಾರದ್ರವ್ಯವು (ಹೀಗೆ ಕಾರಣವೂ ಅವನ್ನು ದಂಡಿಸಬೇಕಾಗಿದ್ದ ಕಾರಣವೂ ಮಾತ್ರ) ಜನಾಂಗಸಂಘವು ಅವನ್ನು ತನ್ನ 'ಮೆಂಡೇಟು'ಗಳೆಂದು ಅಂಗೀಕರಿಸಿ, ಮಿತ್ರ ರಾಷ್ಟ್ರಗಳಲ್ಲಿ ಯೋಗ್ಯರ ಕೈಕೆಳಗೆ ಅವನ್ನು ಕೆಲವರ್ಷಗಳ ವರೆಗೆ ಇರಿಸಿದ್ದಿತು. ಅಂತಹ ಮೆಂಡೇಟುಗಳಲ್ಲಿನ ಜನಾಂಗಗಳೂ ತಾವೇ ತಮ್ಮ ಜತನ ನೋಡಿಕೊಂಡು ಬಾಳಲು ಶಕ್ತರಾಗಿದ್ದಿಲ್ಲ. ಅಬಿಸೀನಿಯವು ಅಂತಹದೇ? ಎಂದಿನಿಂದಲೂ ಇಂದಿಗೂ ಸ್ವತಂತ್ರವಾಗಿದ್ದು, ಪರರಾಷ್ಟ್ರಗಳೊಡನೆ ತನ್ನ ರಾಯಭಾರಿಗಳನ್ನು ಕಳುಹಲೂ, ಅಲ್ಲಿನ ರಾಯಭಾರಿಗಳನ್ನು ತನ್ನಲ್ಲಿಯೂ ಇಟ್ಟುಕೊಳ್ಳಲೂ, ಸ್ವತಂತ್ರವಾಗಿ ಒಪ್ಪಂದಗಳನ್ನು ಮಾಡಲೂ ಯೋಗ್ಯತೆಯುಳ್ಳದೇ ಆಗಿದೆ

ಅಬಿಸೀನಿಯವು ಯಾವ ಯುರೋಪೀಯ ರಾಷ್ಟ್ರಗಳಿಗೂ ಅಧೀನವಾಗಿ ಎಂದಾದರೂ ಇದ್ದಿತೇ? ಇಟಲಿಯು ಆಕ್ರಮಿಸಿದಾಗ, ಜನಾಂಗವೆಲ್ಲ ಒಂದಾಗಿ ಅದನ್ನು ಎದುರಿಸಲಿಲ್ಲವೆ? ಹೀಗಿದ್ದರೂ ಈ ಸಂಧಾನದ ಪ್ರಸ್ತಾವವೇತಕ್ಕೆ ಎದ್ದಿದೆ?

ಏತಕ್ಕೆಂದರೆ,–ಇಟಲಿಗೆ ಈ ಯುದ್ಧದ ಬೇಸರ ಹಿಡಿದೇ ಇದೆ ಎಂದು ತೋರುತ್ತಿದೆ, ಖಜಾನೆ ಬರಿದಾಗುತ್ತ ಬರುತ್ತಿದೆ, ಇದುವರೆಗೆ ದೊರೆತ ಪ್ರಯೋಜನವೇನೂ ಇಲ್ಲ, ಮುಂದೆ ದೀನಭಾವದಿಂದ ಸಂಧಾನ ಮಾಡಿಕೊಳ್ಳುವ ಬದಲಾಗಿ, ಈಗಲೆ ಯಾರೂ ಸಂಧಾನದ ಮಾತೆತ್ತಿದರೆ ಒಪ್ಪಿಕೊಳ್ಳೋಣ ಎನಿಸುತ್ತಿದೆ

ಬೆಲ್ಜಿಯಮ್ ರಾಜ್ಯಕ್ಕೂ ಇಟಲಿಯ ರಾಜರಿಗೂ ರಕ್ತಸಂಬಂಧವಿದೆ, ಆದಕ್ಕಾಗಿ ಬೆಲ್ಜಿಯಮ್ ಸರಕಾರವು ಈಗ ಸಂಧಾನ ಪ್ರಯತ್ನಗಳಿಗೆ ಕೈಯಿಕ್ಕಿದೆ ಎಂದು ಗುಜು ಗುಜು ಮಾತು ಎದ್ದಿದೆ ರಾಜರು ಹೇಗೆ ಎಣಿಸಿರುವರೋ ಅದು ತಿಳಿಯದು, ಆದರೆ ಇಟಲಿಯ ಪ್ರಜೆಗಳು ಸಂಧಾನಾತುರರಾಗಿ ಹೇಳಲುಸಾಧ್ಯವಿಲ್ಲ ಟಾಯ್ರೋಲ್ ಪ್ರಾಂತ್ಯದಲ್ಲಿ ಸೈನಿಕರು ದಂಗೆ ಎದ್ದರೆಂಬುದು ನಿಜವಿರಬಹುದು, ಜನರು ಇನ್ನು ಯುದ್ಧರಂಗಕ್ಕೆ ಹೋಗಲು ಒಪ್ಪುವುದಿಲ್ಲ ಎಂಬುದೂ ನಿಜವಿದ್ದರೂ ಇರಬಹುದು ಆದರೆ, ಯುದ್ಧದ ಹುಚ್ಚು, ಆವೇಶ, ಅಮಲುಗಳು ಜನಾಂಗಕ್ಕೆಲ್ಲ ತಲೆಗೇರಿರುವ ಕಾರಣ, ಅಲ್ಲಲ್ಲಿ ಅಪಜಯವಾದರೂ ಅದು ಸದ್ಯಕ್ಕೆ ಗಣನೆಗೆ ಬರುವಂತಿಲ್ಲ ಇಂತಹ ಯುದ್ಧವೊಂದು ಇಟಲಿ ಜನಾಂಗವು ಉಳಿಯಬೇಕಾದರೆ ಅಗತ್ಯವೆಂದೂ ಜನರಲ್ಲಿ ನಂಬುಗೆಯಿದೆ 'ಇಟಲಿಗೆ ನ್ಯಾಯ ದೊರಕಬೇಕು, ಅಥವಾ ಕೊನೆಯ ಆಳಿನ ತನಕವೂ ಕಾದಾಡುವೆವು' ಎಂದು ಹೆಚ್ಚಿನವರ ಅಂಬೋಣವಿದೆ ಮುಸ್ಸೊಲಿನಿಯನ್ನು ಹಿಂಬಾಲಿಸಿ ಜಯವೋ, ಮರಣವೋ, ಆಗುವುದಾಗಲಿ ಎಂದೇ ಜನರೆನ್ನುವರು ~~ಜಗತ್ತಿನ ಅಭಿಪ್ರಾಯವನ್ನು ಮನ್ನಿ~~ಸುವ ಮನೋಸ್ಥಿತಿಯು ಇಟಲಿಯ ಜನರಿಗಿಲ್ಲವಾಗಿದೆ

ಹೀಗಿರುವುದರಿಂದ, ಯುದ್ಧವು ನಡೆಯುವುದು, ಸಂಧಾನವನ್ನು ಇಟಲಿಯು ಈಗ ಅಪೇಕ್ಷಿಸಲಾರದು, ಈ ಪ್ರಯತ್ನಗಳ ಪ್ರಸ್ತಾವವೂ ನಂಬಲು ಯೋಗ್ಯವಾಗಿಲ್ಲ

ಸ್ಫುಟವಿಚಾರಗಳು

ಕತ್ತರಿಸಿರಿ, ಕಡಿಮೆ ತಲಬಿನ ಉಪಾಧ್ಯಾಯರ ಸಂಬಳವನ್ನು!

ಯಾವ ಖರ್ಚಿಗೂ ಹಣ ಕಡಿಮೆಯಾಗುವ ಸಂಭವ ತೋರಿದ ಕೂಡಲೆ, ಮೇಲಿನ ವಾಕ್ಯವೊಂದು ಶಾಶ್ವತವಾದ ಶಿಫಾರಸಾಗಿ ಅಧಿಕಾರವುಳ್ಳವರ ಬಾಯಿಂದ ಹೊರಡುತ್ತಿದೆ ಸರಕಾರಕ್ಕೆ ಖರ್ಚಿಗೆ ಹಣದ ಕುಟ್ಟಿಯುಂಟಾದ ಕೂಡಲೆ, ವಿದ್ಯಾಭ್ಯಾಸಕ್ಕಾಗಿರುವ ಗ್ರಾಂಟನ್ನೆ ಮೊದಲಾಗಿ ಕತ್ತರಿಸುವರು. ಕಡ್ಡಾಯ ಶಿಕ್ಷಣದ ಏರ್ಪಾಡಿಗೆ ಕೈಹಚ್ಚುವುದರಿಂದ ಖರ್ಚಿಗೆ ಧಾರಾಳ ಹಣ ಬೇಕಾಗಿರುವುದು. ಅದಕ್ಕಾಗಿ ಸರಕಾರವು ಈ ಖರ್ಚಿನ ಇಲಾಖೆಯನ್ನೆ ಲೋಕಲ್ ಬೋರ್ಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ ಒಪ್ಪಿಸಿ ಬಿಟ್ಟಿದೆ ದುರ್ಬಲನಾದವನ ಮೇಲೆ ಪ್ರಚಂಡ ಭಾರವನ್ನು ಹೊರಿಸಿದಂತಾಗಿದೆ. ಕಲ್ಲಿಕೋಟೆಯ ಮ್ಯುನಿಸಿಪಾಲಿಟಿಗೆ ಸ್ವಲ್ಪ ಹಣ ಕಡಿಮೆಯಾಗುತ್ತಲೆ, ಶೇಕಡಾ ೫ ರಂತೆ ಉಪಾಧ್ಯಾಯರ ತಲಬನ್ನು ಕತ್ತರಿಸುವ ಸೂಚನೆಯಾಯಿತು ದೀಪ ಹಚ್ಚದ್ದಾರಿಯೊ ಇಲ್ಲವೊ ಎಂಬುದನ್ನು ನೋಡುವ ಇನ್ಸ್‌ಪೆಕ್ಟರರೇ ಅಗತ್ಯವಿಲ್ಲ ಅವರನ್ನೆ ವಜಾಮಾಡಿರಿ ಎಂದರೆ, ಮನಸ್ಸಿಗೆ ವಿವೇಕದ ಬೆಳಕಿಗಿಂತ ಓಣಿಗೆ ಚಿಮಿಣಿಯ ಬೆಳಕು ಅಗತ್ಯವೆಂದು ಅವರನ್ನು ಉಳಿಸಿ, ಮಾಸ್ತರರ ಸಂಬಳದಲ್ಲಿ ವಜಾ ಮಾಡಿದರು! ಊರಲ್ಲಿ ಹೊರಗೆ ಕತ್ತಲಾದರೆ ಮೋಸ ಮನೆಯೊಳಗೆ ದೀಪ ಹಚ್ಚುವ ಎಣ್ಣೆಯ ಕಾಸುಗಳನ್ನು ಕತ್ತರಿಸಿ, ಉಪಾಧ್ಯಾಯರ ಮನೆಗಳಲ್ಲಿ ಕತ್ತಲೆ ಹಬ್ಬಿಸಿದರು ಹೊರಗಿಂದ ಶಿಕ್ಷಣ ಪ್ರಚಾರವೆಂದು ದೇವರ ಸಹಸ್ರನಾಮ ಹೇಳುತ್ತ ಒಳಗಿಂದ ಇದು ಅನಗತ್ಯವೆನ್ನುವ ಟೆಕ್ಕು ಸನ್ಯಾಸಿಗಳು ಎಷ್ಟಿಲ್ಲ? ಉಪಾಧ್ಯಾಯರಿಗೆ ಸಂಬಳ ಇಳಿಸಿ, ಕತ್ತರಿಸಿ, ಜುಲುಮಾನೆ ಕೂಡಿಸಿ ಕಳೆದುದರ ಫಲವಾಗಿ ಶಾಲೆಗಳಲ್ಲಿ ಶೇಕಡಾ ೮೦ರಂತೆ ಅಸಮಾಧಾನಕ್ಕೆ ಕಾರಣವುಂಟಾಗಿದೆ ಎಂದೇ ರಿಪೋರ್ಟು ಹೇಳುವುದಿಲ್ಲವೇ?

ಕಾಂಗ್ರೆಸ್ಸಿನ ದೃಷ್ಟಿ ಹೇಗಿದೆ?

ಬೋರ್ಡು ಮ್ಯುನಿಸಿಪಾಲಿಟಿಗಳ ಕೆಲಸ ನಿರ್ವಹಿಸುವರೆ ಕಂಟ್ರ್ಯಾಕ್ಟರರು ಅರ್ಜಿಮಾಡಿದರೆ, ಇತರ ವಿಷಯಗಳಲ್ಲಿ ಸಮಾನ ದೃಷ್ಟಿಯಿಂದ ನೋಡಬೇಕಾದರೂ, ಅವರಲ್ಲಿ ದೇಶಕ್ಕಾಗಿ ಕಷ್ಟ ಸಹಿಸಿದವರನ್ನು ಇತರರಿಗಿಂತ ಮೇಲೆ ಆರಿಸಿ ಕೆಲಸ ಕೊಡುವುದುತ್ತಮ ಇದೇ ರೀತಿ ಎಲ್ಲ ನೌಕರಿಗಳಿಗೆ ಉಮೇದ್ವಾರರಾಗಿ ಇರುವವರನ್ನೂ ಕಾಂಗ್ರೆಸ್ ಪಕ್ಷವು ಕಾಣುವುದು ಎಂದು ಶ್ರೀ ಸತ್ಯಮೂರ್ತಿಯವರ ವೇದವಾಕ್ಯವಾಗಿದೆ ಈ 'ದೇಶಕ್ಕಾಗಿ ದಣಿದವರು, ಕಷ್ಟ ಅನುಭವಿಸಿದವರು' ಎಂಬ ಮಾತುಗಳಿಗೆ, 'ಕಾಂಗ್ರೆಸ್ ಪಕ್ಷದವರ ಆಜ್ಞೆಗೆ ಒಳಗಾಗಿ' ಎಂಬ ಮಾತುಗಳನ್ನು ಮೊದಲಲ್ಲಿ ಸೇರಿಸಿ ಓದಿಕೊಂಡರೆ, ಅವರ ಮನಸ್ಸಿನ ಅಭಿಪ್ರಾಯವು ತಿಳಿಯುವುದು ದೇಶಕ್ಕಾಗಿ ಕಷ್ಟಪಟ್ಟವರಲ್ಲಿ, ಸಾವಿರಾರ ಸೈನಿಕರಿರುವರು ಕಳೆದ ಮಹಾಯುದ್ಧದಲ್ಲಿ ಇವರು ಸಹಿಸಿದ ಕಷ್ಟಪರಂಪರೆಗಳಿಗೆ ಮಿತಿಯಿಲ್ಲ ಲಾಠಿಪೆಟ್ಟು ತಿನ್ನಲಾರದೆ, ಮನೆಯಲ್ಲಿ ಇದ್ದು, ನಿರಂತರವೂ ದೇಶಹಿತಕ್ಕಾಗಿ, ಮನಃಪೂರ್ವಕವಾಗಿ ಸಾಧ್ಯವಾದಷ್ಟು ಚೆನ್ನಾಗಿ ದುಡಿದು ಸೋತವರಿದ್ದಾರೆ ಇವರ ಕಡೆಗೆ ಕಾಂಗ್ರೆಸ್ಸಿನ ದೃಷ್ಟಿ ಬೀರಬಹುದೆ? ಕಾಂಗ್ರೆಸ್ ಪಕ್ಷವು ಹೇಳಿದಂತೆ ಮಾಡಿದವರೇ ಮಾತ್ರ ದೇಶಕ್ಕಾಗಿ ದೇಹದಂಡನೆ ಮಾಡಿದವರೆಂದು, ಅವರನ್ನೆ ಅಧಿಕಾರಾರೂಢರನ್ನಾಗಿ ಮಾಡುವುದರಿಂದ, ಈಗ ಜಸ್ಟಿಸ್ ಪಕ್ಷವನ್ನು ಸ್ವಪಕ್ಷಾಭಿಮಾನಿ ಸ್ವಾರ್ಥಿಗಳೆಂದು ದೂರುವ ಸತ್ಯಮೂರ್ತಿಯವರೂ, ಅವರೊಡನೆ ಸಹಪಂಕ್ತಿಯಲ್ಲಿ ತನ್ನ ಆಸ್ನವನ್ನೂ ಇಡಲು ಹಿಂಜರಿಯುವವರಲ್ಲ ಎಂದು ಖಂಡಿತ ಅರ್ಥವಾಗದಿರದು ತನ್ನವರಿಗೆ ತಾನು, ಎಂಬುವುದನ್ನು ಪ್ರತಿ ಪಕ್ಷವೂ ಹೇಳುತ್ತಿದೆ, ಅದರಲ್ಲಿ ಕಾಂಗ್ರೆಸ್ಸಿನವರದೇನು ಮಹಾನುಭವತೆ? ಚುನಾವಣೆಯ ಕಾಲ ಬರುವಾಗ ಇಂತಹ ಮುತ್ತುಗಳನ್ನೆ ವೋಟರರ ಮುಂದೆ ಚೆಲ್ಲುವುದು ಯೋಗ್ಯವೆ?

ಹಿಂದೀ ಕ್ರಿಕೆಟ್ ಆಟಗಾರರಿಗೆ ಜಯ

ಲಾಹೋರಿನಲ್ಲಿ ಆಸ್ಟ್ರೇಲ್ಯದಿಂದ ಇಲ್ಲಿಗೆ ಕ್ರಿಕೆಟ್ ಆಟ ಆಡಲು ಬಂದ ಆಟಗಾರರಿಗೂ ಹಿಂದೀಯರಿಗೂ ಮೂರನೆಯ ಸ್ಪರ್ಧೆಯಾಟ ನಡೆದು ಹಿಂದೀಯ ಪಕ್ಷವು ಗೆದ್ದಿತು ಎರಡೂ ತಂಡಗಳು ಬಲದಲ್ಲಿ ಸಮಾನವೆಂದು ಎಣಿಸಲಾಗಿದ್ದಿತು ಹೊಕ್ಕೀ ಆಟದಲ್ಲೂ ಹಿಂದೀ ಪಕ್ಷವು ಆಸ್ಟ್ರೇಲ್ಯಕ್ಕೆ ತೆರಳಿ ಅಲ್ಲಿ ವಿಜಯವನ್ನು ಪಡೆದು ಬಂದಿದ್ದಿತು. ಈ ಕಾರಣದಿಂದಾಗಿ ಹಿಂದೀಯರು ಆಟಕ್ಕೆಳಿದರೆ ಕಡಿಮೆಯಾಗಿಲ್ಲವೆಂದು ಆಗಾಗ ತಿಳಿದು ಬರುತ್ತಲೇ ಇದೆ ಕಲ್ಕತ್ತದಲ್ಲಿ ಫುಟ್‌ಬೋಲ್ ಆಟಗಾರರು ಯಾವಾಗಲೂ ಯುರೋಪಿಯನರೊಡನೆ ಪ್ರತಿದ್ವಂದ್ವಿಗಳಾಗಿ ಜಯಲಾಭವನ್ನೆ ಕೋರುವರು ಯುರೋಪಿಯನರಾಗಲಿ, ಆಸ್ಟ್ರೇಲ್ಯದವರಾಗಲಿ ಸೋತರೆ, ಗೆದ್ದವರನ್ನು ಹೀಯಾಳಿಸುವುದೂ ಇಲ್ಲ. ತಾವೇ ಗೆದ್ದರೆ ಸೋತವರನ್ನು ಕಸಿವ್ವರೆಂದು ಕಡೆಗಣಿಸುವುದೂ ಇಲ್ಲ ಆದರೆ, ಈ ಹೊಕ್ಕಿ, ಕ್ರಿಕೆಟ್ ಫುಟ್‌ಬೋಲ್‌ಗಳನ್ನು ಈಗ ಶಾಲೆಗಳಲ್ಲಿ, ಜಿಲ್ಲಾ ಪ್ರಾತಿನಿಧ್ಯದಿಂದಲೂ ಆಡಿಸುವಾಗ, ಅವರನ್ನು ತರಬೇತು ಮಾಡುವ ಫಿಸಿಕಲ್ ಡೈರೆಕ್ಟರುಗಳೂ ಶಾಲಾಧಿಕಾರಿಗಳೂ ಅಚ್ಚ ಆಟಗಾರರ ಮನೋಭಾವ ಪ್ರವೃತ್ತಿಗಳು ಇವರಲ್ಲಿ ಬೆಳೆಯುಗೊಡುತ್ತಾರೆಯೆ? ಆದರೂ ನೀಚ ಕುತ್ಸಿತ ಪ್ರವೃತ್ತಿಗಳು ಗೆಲ್ಲುವವರನ್ನು ಮುರಿಯಲು ಜರೆದಾಡುವುದರಲ್ಲೂ, ಸೋತವರನ್ನು ಕುನ್ನಿಗಳೆಂದು ಭಾವಿಸಿ ಹಿಗ್ಗುವುದರಲ್ಲೂ ತೋರುವುದಲ್ಲ, ಇವನ್ನು ಅಡಗಿಸುವುದಕ್ಕೆ ಆಗುವುದೇ ಇಲ್ಲವೇಕೆ? ಆಟದಿಂದ ಸ್ಫೂರ್ತಿ, ಸ್ಪರ್ಧೆ, ಮೈತ್ರಿ ಮುಂತಾದುವು ಬೆಳೆದು ಬರುವ ಬದಲಾಗಿ, ಇನ್ನಷ್ಟು ನಿಂದಿಸುವ ಶಬ್ದಕೋಶಗಳೂ, ತುಚ್ಛೀಕಾರ ಮಾಡುವ ದುರ್ಲಕ್ಷಣವೂ, ಹೀನ ಹಗೆತನವೂ ಬೆಳೆಯುವಂತಾಗುವುದು ಉತ್ತಮವೆ? ನಮ್ಮ ಜಿಲ್ಲೆಯಲ್ಲಿಯೆ ಕೆಲವು ಶಾಲೆಗಳೊಳಗೆ ಹೀಗಾದ ವಾರ್ತೆಗಳು ಪ್ರಕಟವಾಗಿವೆ ದುಷ್ಪರಿಣಾಮಗಳು ಉಂಟಾಗುವುವೆಂದಾದರೆ, ಈ ಹಿರೋಯಿಕ್ ಆಟಗಳು ಗೃಹಸ್ಥರಿಗೆ ಬೇಡ

ದೇವಸ್ಥಾನಗಳ ಆಡಳಿತ.

ದಕ್ಷಿಣ ಹಿಂದೂಸ್ಥಾನದ ದೇವಸ್ಥಾನಗಳ ಮತ್ತು ಧರ್ಮಶಾಸನಗಳ ಉಂಬಳಿಗಳನ್ನು ಕುರಿತಾಗಿ ಎಲ್ಲ ವಿಚಾರವನ್ನು ಮಾಡುವ ಅರ್ಹತೆಯುಳ್ಳ ಸಮಿತಿಯು ಉಂಟಾಗಬೇಕೆಂಬ ಕೋರಿಕೆಯು, ದೇವಾಲಯಗಳ ಆಡಳಿತದವರ ಒಂದು ಪ್ರತಿನಿಧಿ ಸಭೆಯಲ್ಲಿ ವ್ಯಕ್ತವಾಗಿದೆ ಶ್ರೀ ಸುಂದರ ರೆಡ್ಡಿಯವರು, (ಹಿಂದೂ ಮತಶಾಸನಗಳ ಕಮಿಶನರುಗಳಲ್ಲೊಬ್ಬರು) ಈ ಸಭೆಗೆ ಅಧ್ಯಕ್ಷರಾಗಿದ್ದರು ಈ ಕಮಿಶನರುಗಳ ಬೋರ್ಡಿನ ಮೇಲೆಯೆ ನಾನಾ ಟೀಕೆಗಳಾಗಿವೆ, ಇರಲಿ, ದೇವಸ್ಥಾನದ ಆಡಳಿತವು ಸರಿಯಾಗುವ ಹಾಗೆ ಯಾರೂ ಪ್ರಯತ್ನಿಸುವರಾದರೆ, ಅದಕ್ಕೆ ಸರ್ವ ವಿವೇಕಿಗಳೂ ಉತ್ತೇಜನ ಕೊಡಲೇ ಬೇಕು ಟ್ರಸ್ಟಿನ ಹಣದ ಉಪಯೋಗವು ಹೇಗಾಗುತ್ತಿದೆ ಎಂಬುದನ್ನು ನೋಡುವುದಕ್ಕೆ, ಸ್ಥಿರ ಚರಸೊತ್ತುಗಳ ಸ್ಥಿತಿಯು ಹೀಗಿದೆ ಎಂಬುದನ್ನು ವಿಚಾರ ಮಾಡುವುದಕ್ಕೆ ಈ ಸಮಿತಿಗೆ ಸರ್ವರೂ ಪ್ರೋತ್ಸಾಹ ಕೊಡಬೇಕು "ಅಜಾಗ್ರತೆ, ದುಂದುವೆಚ್ಚ ಇವೇ ಮುಖ್ಯವಾದ ಎರಡು ಕೊರತೆಗಳು ದೇವಸ್ಥಾನಗಳಲ್ಲಿವೆ, ದೇವರ ಭಯವು ಎಂದೋ ಅವಿಶ್ವಾಸದ ಮಾತಾಗಿದೆ' ಎಂದು ಶ್ರೀ ರೆಡ್ಡಿಯವರು ಹೇಳಿರುವರು ವಿಗ್ರಹಗಳ ಮೇಲೆ ಅತ್ತಿತ್ತ ಓಡಾಡಬಹುದಾದ ಶ್ರೀಮಿಗಳ ಹಾಗೆ ವಿಗ್ರಹಗಳ ಹೆಸರಲ್ಲಿರುವ ಸಂಪತ್ತಿನ ಮೇಲೆ ಓಡಾಡುವ ನಿರ್ಭಯರಾದ ಆಡಳಿತದವರಿದ್ದರೆ, ಹೇಳುವುದಕ್ಕೇನಿದೆ? ಎಂತಹ ಸಂಪನ್ನವಾದ ಮಂದಿರಗಳು, ಎಂತಹ ಅದ್ಭುತ ಕಲೆಯುಳ್ಳ ಕಟ್ಟಡಗಳು, ಇವನ್ನು ಹಾಳಾಗದಂತೆ ನೋಡುವವರು ಎಷ್ಟು ಮಂದಿ? ಅತ್ಯುತ್ತಮ ಪ್ರಾಚೀನ ಕೈಕೆಲಸದ ಮಾದರಿಗಳು ಮಾಯವಾಗುವ ದಿನಗಳು ನಮ್ಮ ದೇವಾಲಯಗಳಿಗೆ ಬರುತ್ತಲಿವೆ ಎಂದು ವಿಲಾಯತಿಯಿಂದ ಇತ್ತ ಅವುಗಳ ಸೌಂದರ್ಯ ನೋಡಲು ಬರುವ ಸಂಚಾರಿಗಳೇ ಹೇಳುವರು ಯಾತ್ರಿಕರ ಮೇಲೆ ಸರಕಾರವು ವಿಧಿಸುವ ತೆರಿಗೆಯ ಒಂದಂಶವನ್ನು, ತಮ್ಮ ಪ್ರಾಚೀನ ಕಟ್ಟಡದ ದುರುಸ್ತಿಗಾಗಿ ದೇವಾಲಯಾಧಿಕಾರಿಗಳು ಸರಕಾರದಿಂದ ಪಡೆಯುವ ಅವಕಾಶವಿದೆ "ಕೆಲವರು ದೇವಳವನ್ನು ಸುಂದರಗೊಳಿಸುತ್ತೇವೆಂದು ಪಟವಾಸು ಮೊದಲಾದುವುಗಳಿಂದ ಅದನ್ನು ವಿರೂಪಗೊಳಿಸುತ್ತಾರಾಗಿಯೂ" ಈ ಸಭೆಯಲ್ಲಿ ದೂರಲಾಗಿದೆ.

ಕೃಷಿ ಮಾತ್ರವೇ ಸಾಲದು.

ಅವಕಾಶವಿರುವಾಗ ಉಪವೃತ್ತಿಗಳೂ ಹಳ್ಳಿಗರಿಗೆ ಅಗತ್ಯ ಬೇಕಾಗಿವೆ. ಇದುವರೆಗೆ, ಹಳ್ಳಿಗಳನ್ನು ಸರಿಯಾಗಿ ನಡೆಸಿಲ್ಲವೆಂಬ ಮಾತಂತಿರಲಿ, ಮುಂದೆಯಾದರೂ ಅವನ್ನು ನಡೆಸುವಂತೆ ಯಾವ ಪ್ರಯತ್ನಗಳಾಗುತ್ತಿವೆ? ಯಂತ್ರಯುಗವು ಮೂಡಿದಂದಿನಿಂದ ಹಳ್ಳಿಗಳಲ್ಲಿ ಪ್ರತಿಕುಟೀರದಲ್ಲಾಗುತಿದ್ದ ಒದವೆಗಳು ದೊಡ್ಡ ಶಹರುಗಳ ಕಾರ್ಖಾನೆಗಳಲ್ಲಿ ಬೇಕಾದುದಕ್ಕಿಂತ ಹೆಚ್ಚಾಗಿ ತಯಾರಾಗ ತೊಡಗಿದುವು. ಫಲವಾಗಿ, ಹಳ್ಳಿ ಜನರು ಮೈಬಿಟ್ಟರು, ಪಟ್ಟಣ ಸೇರಿದರು 'ಸೆಟ್ಟ ಪಟ್ಟಣ ಸೇರಿ ಕೆಟ್ಟ' ಎಂಬ ಗಾದೆ ಹೊರಟಿತು ಆದರೂ ಕೈನೂಲು,-ಕೈಮಗ್ಗ ಈ ಮಾತುಗಳು ಇನ್ನೂ ಹಳ್ಳಿಗಳಿಂದ ಮಾಯವಾಗಿಲ್ಲ ವಿದ್ಯುಚ್ಛಕ್ತಿ ಸುಲಭ ದರಕ್ಕೆ ಸಿಕ್ಕುವಂತಾದಲ್ಲಿ, ಪ್ರತಿ ಹಳ್ಳಿ ಮನೆಯಲ್ಲೂ ಎಷ್ಟೋ ಕೈಗಾರಿಕೆಗೆ ಅವಕಾಶ ಸಿಗುವುದಾಗಿ, ಗ್ರಾಮೋದ್ಧಾರ ಕೆಲಸದಲ್ಲಿ ನುರಿತವರು ಹೇಳುವರು ಗ್ರಾಮಗಳಲ್ಲಿ ಹೊಸಜೀವ ತುಂಬಲು ಪ್ರಥಮ ಪ್ರಯತ್ನಗಳಾಗಬೇಕು ನೀರಾವರಿ ಕೆಲಸಗಳೂ, ಅವುಗಳಿಂದ ಜತೆಯಲ್ಲಿಯೂ ವಿದ್ಯುಚ್ಛಕ್ತಿ ಹೊರಡಿಸುವ ಸನ್ನಾಹವೂ ಆಗಬೇಕು ಇದೆಲ್ಲಕಿಂತ ಮೊದಲು ಗ್ರಾಮಸ್ಥರಲ್ಲೇ ತಾವು ಅಭ್ಯುದಯ ಹೊಂದಬೇಕೆಂಬ ಆ ಕಾಂಕ್ಷೆ ಪ್ರಬಲವಾಗಬೇಕು ಆಗ ಅವರ ಸೇವೆಯೆ ತಮ್ಮ ಜೀವನದ ಧ್ಯೇಯವೆಂದು ಬಗೆವ ಮು ದಾಳುಗಳೂ ಕಾರ್ಯಶೀಲ ಪ್ರವೀಣರೂ ಅವರಿಗೆ ಒದಗಿದರೆ ಎಲ್ಲವೂ ಕೈಗೂಡುವುದು. ಭಾರತ ವರ್ಷದ ಹಿತ ಎಂದರೆ ಹಳ್ಳಿಗಳ ಹಿತ ಎಂದು ವೈಸ್ರಾಯರೇ ನುಡಿದ ಬಳಿಕ ಸರಕಾರವೂ ಈ ಭಾಗದಲ್ಲಿ ಹೆಚ್ಚಿನ [illegible] ಕೊಡದೆ ಹುಡಿದು ಹೇಳಲು ಅಧಿಕವಿಲ್ಲ ಕಾಂಗ್ರೆಸಿನ (ಮಹಾತ್ಮಾಜೀಯವರ) ಪ್ರಯತ್ನಗಳು ಸಾಗುತ್ತಲೇ ಇವೆ ಸಹಕಾರಿಗಳು ಎಚ್ಚತ್ತಿದ್ದಾರೆ ಆದರೆ, ಕೆಲವು ಪ್ರಯತ್ನಗಳಾದರೂ ಫಲಕೊಡುವ ವರೆಗೆ ಈ ಉತ್ಸಾಹವೂ ಪ್ರೋತ್ಸಾಹವೂ ನೆಲೆಸಿ ತರಿಸಾಕು ಎಂದು ಹಿಂದಣ ಅನುಭವ ಸೂಚಿಸವುದಲ್ಲ!

ಮಾನ್ಯ ಗವರ್ನರರ ಬೊರೆಗಳಲ್ಲಿ ಬಿನ್ನಹ

"ಜಿಲ್ಲಾ ಬೋರ್ಡುಗಳನ್ನು ಈಗ ಮಂತ್ರಿಗಳು ನಡೆಸಿ ಬರುವ [illegible] ಟೀಕಿಸ ವ ಭಾಷಣಗಳು ಮುದ್ರಾಸಿನಲ್ಲೇ ಆದ ವ್ರ ಇವನ್ನು ಓದಿದರೆ, ಮಾನ್ಯ ಗವರ್ನರರು ಈ ವಿಚಾರದಲ್ಲಿ ತಮ್ಮದೊಂದು ತೀರ್ಮಾನ ಹೇಳದೆ ತೀರದೆನ್ನಬೇಕಾಗಿದೆ ಕೆಲವು ಬೋರ್ಡುಗಳನ್ನು ತುಂಡರಿಸಿದ್ದಾಗಿದೆ ಕೆಲವುಗಳಿಗೆ ಸಂಜೀವನ ಕೊಡಲಾಗಿದೆ ಕಂಟ್ರಾಕ್ಟುಗಳು ಬಜೆಟುಗಳು ಈಗಲಿ ಒರುವ ವರ್ಷಕ್ಕಾಗಿ ಹಳೆಯ ಬೋರ್ಡಿನಿಂದಲೇ, ಹೊಸ ಬೋರ್ಡು ಚುನಾವಣೆ ಹೊಂದಿದರೂ ಸೆಂಕ್ಷನಾಗುತ್ತವೆ ಎಂದು ಗೋದಾವರಿಯ ದೂರು ಇದು ಸರಕಾರದ (ಎಲ್ಲ ಮಂತ್ರಿಮಂಡಲದ) ಸಮ್ಮತಿಯಿಂದಾಯಿತೆಂದೇ ಮಂತ್ರಿಗಳೆನ್ನುತ್ತಾರಂತೆ ಗವರ್ನರರೂ ಇದಕ್ಕೊಪ್ಪುತ್ತಾರೆಯೆ? ಎಂದು ಸಂದೇಹವಿದೆ, ಒಪ್ಪುವುದಿಲ್ಲವಾದರೆ ಅವರು ಮೌನವಾಗಿರುವುದೇ? ಇವರಿಗೆ ಉತ್ತರಕೊಡಬೇಕಾಗಿಯೇನೂ ಗವರ್ನರರ ಮೇಲೆ ಜವಾಬ್ದಾರಿಯುಲ್ಲ, ಆದರೆ ಅವರ ಮೌನವೇ ಇವರಿಗೆ ಸಮ್ಮತಿ ಕೊಟ್ಟಂತಾದರೆ, ಮತ್ತೆ ಆಕ್ಷೇಪಕರು ಯಾರಲ್ಲಿ ಮೊರೆ ಇಡಬಹುದು? ಜಿಲ್ಲಾ ಬೋರ್ಡುಗಳ ವಿಭಜನೆಯ ವಿಚಾರವು ಒಬ್ಬ ಕಮಿಶನರಿಂದಲೇನೋ ವಿಮರ್ಶೆಗೆ ಒಳಪಡುವುದೆಂದೂ, ಸರಕಾರವು ಅನಂತರ ಒಂದು ಸ್ಟೇಟ್ ಮೆಂಟನ್ನು ಪ್ರಕಟಿಸುವುದೆಂದೂ ತಿಳಿದುಬರುತ್ತಿದೆ. ಚುನಾಯಿತ ಬೋರ್ಡು ಮೆಂಬರರು ಸಭೆಸೇರುವ ಅವಧಿಯನ್ನು ಮುಂದರಿಸುವುದೂ ಚುನಾವಣೆಯ ಮೊದಲನೆ ದಿನ ಎಂಬಂತೆ ವೋಟರರ ಪಟ್ಟಿಗಳನ್ನು ದುರುಸ್ತಿ ಮಾಡಿಸುವುದೂ, ಚುನಾವಣೆ ಕಾಲದಲ್ಲಿ ಸರಕಾರದ ಅಥವಾ ಬೋರ್ಡು ಇತ್ಯಾದಿಗಳ ಸೇವಕರನ್ನು ತಮ್ಮ ಪಕ್ಷಕ್ಕೆ ಜಯವಾಗುವಂತೆ ಕೆಲಸಕ್ಕೆ ಹಚ್ಚುವುದು, ಈಗಣ ಮಾಮ್ಮಿ ಮಂತ್ರಿಗಳ ಕಾರ್ಯಭಾರದ ವಿಶೇಷಗಳೆಂದು ಆ ಭಾಷಣಗಳಲ್ಲಿ ಹೇಳಲಾದ ಆಕ್ಷೇಪಗಳು ಇವು ನಿಜವೊ ಅಲ್ಲವೊ ಎಂಬುದನ್ನು ಸರಕಾರವೇ ಹೊರಡಿಸುವ ಸ್ಟೇಟ್‌ಮೆಂಟಿನಿಂದ ತಿಳಿಯಬೇಕಾಗಿದೆ. ಇದ್ದುದನ್ನು ಇದ್ದಂತೆಯೆ ಅಪ್ಪಣೆ ಕೊಡಿಸುವ ನಮ್ಮ ಮಾನ್ಯ ಗವರ್ನರರಲ್ಲಿ ನಾವು ಭರವಸೆ ಇಡಬೇಕಾಗಿದೆ. ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಲು ಸಿದ್ಧರೆಂದೂ, ಆದರೆ, ಇನ್ನು ಕೆಲವೇ ತಿಂಗಳಲ್ಲಿ ಹೊಸ ಕೌನ್ಸಿಲೂ ಮಂತ್ರಿಗಳೂ ಆಗಲಿರುವ ಕಾರಣ ಈಗ ಬೇಡವೆಂದು ಅವರಿಗೆ ಸಮಾಧಾನ ಹೇಳಿ ಮಿತ್ರರು ತಡೆದರೆಂದೂ' ಮೈಲ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಮಂಗಳೂರು.

ತಿದ್ದುಪಡಿ.

ತಾ ೧೦-೧-೩೭ ಮತ್ತು ೧೬-೧-೩೭ನೇ ಸ್ವದೇಶಾಭಿಮಾನಿ ಸಂಚಿಕೆಗಳ ಪುರವಣಿಗಳಲ್ಲಿ ದಿ ಕಲ್ಯಾಣಪುರ ಶುಗರ್ ಮಿಲ್ಸ್ ಕಂಪೆನಿ ಲಿಮಿಟೆಡ್, ಇದರ ಐನ್ ಮುನಾಫೆಯು ರೂ ೧೩,೦೦೦ವೆಂದು ತಪ್ಪಾಗಿ ಬಿದ್ದಿರುವುದು ಇದನ್ನು ರೂ ೧೮,೦೦೦ವೆಂದು ಓದಿಕೊಳ್ಳುವುದು ಸಂ ಸ್ವದೇಶಾಭಿಮಾನಿ

ಮಂಗಳೂರು ರೇಂಜಿನ ಶಾಲಾ ಇನಿಸ್ಪೆಕ್ಟರ್ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ಯು ಟಿ ಸುಬ್ಬಯ್ಯನವರು ರಜೆಯಲ್ಲಿರುವ ಕಾರಣ ಅವರ ಸ್ಥಾನದಲ್ಲಿ ಗವರ್ನಮೆಂಟ್ ಹಾಯರ ಎಲಿಮೆಂಟರಿ ಟ್ರೈನಿಂಗ್‌ಶಾಲೆಯ ಮೋಡೆಲ್ ಕ್ಲಾಸ್ ಡಿಪಾರ್ಟಮೆಂಟಿನ ಮುಖ್ಯೋಪಾಧ್ಯಾಯರಾದ ಶ್ರೀ ಬಿ ಸರ್ವೋತ್ತಮ ಶೆಟ್ಟಿಗಳವರನ್ನು ನೇಮಿಸಿರುತ್ತಾರೆ

ಸಿಟಿ ಆರ್ಯಸಮಾಜದಲ್ಲಿ ಭಾಷಣ

ಇದೇ ತಿಂಗಳ ತಾ ೧೯ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮ ೩೦ಕ್ಕೆ ಸರಿಯಾಗಿ ಇಲ್ಲಿಯ ಸಿಟಿ ಆರ್ಯಸಮಾಜ ಮಂದಿರದಲ್ಲಿ "ಈಶ್ವರ ಪ್ರೇಮ" ಎಂಬ ಕುರಿತು ಭಾಷಣವಾಗುವುದು ಭಾಷಣದ ನಂತರ ಪ್ರಶ್ನೋತ್ತರಗಳೂ ಜರಗುವವು ಬಂಧುಭಗಿನಿಯರೆಲ್ಲರಿಗೂ ಸ್ವಾಗತವಿದೆ ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ

ಶುದ್ಧಿ ಸಂಸ್ಕಾರ.

ಹೈದರಾಬಾದ್ ನಿಜಾಂ ಸರಕಾರದ ಎಕೌಂಟ್ಸ್ ಇಲಾಖೆಯ ಅಸಿಸ್ಟಾಂಟ್ ಸುಪರಿಂಟೆಂಡೆಂಟರಾದ ಮಿಸ್ಟರ್ ಎಸ್ ಡಿ ಕ್ರೆಜ್ ಎಂಬ ಒಬ್ಬ ಜನ್ಮತಃ ಕ್ರಿಸ್ತ ಗೃಹಸ್ಥರ ಶುದ್ಧಿಸಂಸ್ಕಾರವು ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಕಳೆದ ಬುಧವಾರ ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀ ಮೋಹನಪ್ಪ ತಿಂಗಳಾಯರು ಸಂಸ್ಕಾರವನ್ನು ಜರಗಿಸಿ ಗಾಯತ್ರೀ ಮಂತ್ರೋಪದೇಶವನ್ನು ಮಾಡಿ ಯಜ್ಞೋಪವೀತವನ್ನು ತೊಡಿಸಿದರು ಮತ್ತು ಅನಂತನ್ ಎಂಬ ನಾಮಕರಣವನ್ನು ಮಾಡಿ ಆಶೀರ್ವದಿಸಿದರು.

ಜಿಲ್ಲಾ ಬೋರ್ಡಿನ ಪ್ರಥಮ ಜನರಲ್ ಮೀಟಿಂಗು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ಚುನಾಯಿಸಲ್ಪಟ್ಟಿರುವ ಮೆಂಬರರ ಪ್ರಥಮ ಜನರಲ್ ಮೀಟಿಂಗ ಇದೇ ಬರುವ ಜನವರಿ ತಾ ೨೦ನೇ ಮಂಗಳವಾರ ಅಪರಾಹ್ನ ಗಂಟೆ ೩.೩೦ಕ್ಕೆ ಡಿ ಬೋರ್ಡು ಆಫೀಸಿನಲ್ಲಿ ಡಿ ಬೋ ಪ್ರೆಸಿಡೆಂಟ್ (ಎಕ್ಸ್ ಒಫೀಶಿಯೋ), ಮಿ ಇ ಎಂ ಗೋಪಾಲ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗುವುದು

ಟೆಲಿಗ್ರಾಫ್ ಆಫೀಸಿನ ಬದಲಾವಣೆ.

ಇಲ್ಲಿಯ ಹೆಡ್ ಪೋಸ್ಟಾಫೀಸನ್ನೂ ಟೆಲಿಗ್ರಾಫ್ ಆಫೀಸನ್ನೂ ಒಂದೇ ಕಟ್ಟಡದಲ್ಲಿ ವ್ಯವಸ್ಥೆಗೊಳಿಸುವ ಏರ್ಪಾಡ ಇನ್ನೊಂದ ವರ್ಷದ ವರೆಗೆ ಬಾಕಿಯಿಡಲಾಗಿದೆಯೆಂದು ತಿಳಿದುಬರುತ್ತದೆ

ಟ್ರಂಕ್ ಟೆಲಿಫೋನ್

ಟ್ರಂಕ್ ಟೆಲಿಫೋನಿನ ಕೆಲಸವು ಭರದಿಂದ ಸಾಗುತ್ತಿದೆ ಇನ್ನು ಕೆಲವೇ ದಿನಗಳೊಳಗಾಗಿ ಪೂರೈಯಾಗುವುದು.

ಶ್ರೀ ಕೃಷ್ಣಾ ಸಿನೇಮ ಮಂದಿರದಲ್ಲಿ

ಶ್ರೀ ಕೃಷ್ಣಸಿನೆಮಾ ಮಂದಿರದಲ್ಲಿ ಇಂದು ಜಗತ್ಪ್ರಖ್ಯಾತ ಕೊಲಂಬಿಯಾ ಪಿಕ್ಚರ್ಸ್‌ರವರಿಂದ ತಯಾರಿಸಲ್ಪಟ್ಟು ಜೇಕ್ ಹೋಲ್ಟ್ ರಾಲ್ಫ್ ಗ್ರೇವ್ಸ್ ಎಂಬ ಪ್ರಮುಖರಾದ ಪ್ರಸಿದ್ಧ ನಟರಿಂದ ಅಭಿನಯಿಸಲ್ಪಟ್ಟ "ವಾರ್ ಕರೆಸ್ಪೊಂಡೆಂಟ" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು ನಂತರ ನೂರ್‌ಜೆಹಾನ್, ಗುಲ್ಜಾನ್ ಮಿಸೆಸ್‌ಪರ್ ಅದ್ಭುತಸಾಹಸಿ ಮಾಸ್ಟರ್ ಮಹಮ್ಮದ್, ಪ್ರಸಿದ್ಧ ಲಾಥಿ ಚಾಂಪಿಯನ್ ಉಸ್ತಾದ್ ಅಬ್ದುಲ್ ಹಾಕ್ ಮುಂತಾದವರಿಂದ ಅಭಿನಯಿಸಲ್ಪಟ್ಟು ಹೋಮಿ ಬಿ ವಾಡಿಯಾರಿಂದ ಡೈರೆಕ್ಟ್‌ಮಾಡಲ್ಪಟ್ಟು, ಡೈಮಂಡ್ ಫಿಲ್ಮ್ ಕಂಪೆನಿಯವರಿಂದ ತಯಾರಿಸಲ್ಪಟ್ಟ "ವೀರ ಭಾರತ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು

ಶ್ರೀ ಕೃಷ್ಣಸಿನೆಮ ಮಂದಿರದ ಪ್ರೊಪ್ರೈಟರರ ಉದಾರ ಸಹಾಯ.

ಹಿಂದೆ ಹಲವು ತೆರದಿಂದ ಹಲವರಿಗೆ, ಹಲವು ಸಂಸ್ಥೆಗಳಿಗೆ, ಹಲವು ಧರ್ಮಕಾರ್ಯಗಳಿಗೆ ಉದಾರ ಸಹಾಯವಿತ್ತಂತೆ ಶ್ರೀಯುತರು ಶ್ರೀ ಕಾಶೀಮಠದ ಶ್ರೀ ಸುಕೃತೀಂದ್ರ ಶ್ರೀಪಾದಂಗಳವರ ರಾಮೇಶ್ವರದಲ್ಲಿನ ಶ್ರೀ ಕೋದಂಡರಾಮ ದೇವಸ್ಥಾನದ ಜೀರ್ಣೋದ್ಧಾರದ ಸಹಾಯಾರ್ಥವಾಗಿ ಕನ್ನಡದಲ್ಲಿ ಪ್ರಥಮದಲ್ಲಿ ಸೃಷ್ಟಿಸಿದವೂ ಆದ "ಸತೀ ಸುಲೋಚನಾ" ಎಂಬ ಚಿತ್ರವನ್ನು ಪ್ರದರ್ಶಿಸಿದರು ಅದರ ಪ್ರದರ್ಶನದಿಂದ ಹುಟ್ಟಿಬಂದ ಹಣದಿಂದ ತನಗಾದ ಖರ್ಚನ್ನೂ ತೆಗೆದು ಉಳಿದ ಎಲ್ಲಾ ಹಣವನ್ನು ಅಂದರೆ ರೂ ೪೩೬-೦-೦ನ್ನು ಸಹಾಯನಿಧಿಗೆ ಇತ್ತಿರುವುದು ತುಂಬಾ ಶ್ಲಾಘನೀಯವೇ ಸರಿ

ಕೊಳಲ ಗಾಯನ.

ಕೊಳಲ ಗಾಯನದಲ್ಲಿ ಅದ್ವಿತೀಯರೆಂದು ಲೋಕಪ್ರಸಿದ್ಧರಾದ ಶ್ರೀಯುತ ಪಲ್ಲಡಂ ಸಂಜೀವರಾಯರು ಮತ್ತು ಶ್ರೀ ಸುಬ್ಬಯ್ಯ ನೊಡಲಂಧ ಕಲಾಕೋವಿದರಿಂದ ಕೂಡಿದ ಒಂದು ಕೊಳಲ ಸಂಗೀತ ಕಚೇರಿಯು ಇದೇ ತಿಂಗಳ ತಾ ೨೦ನೇ ಸೋಮವಾರ ರಾತ್ರಿ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಜರಗಲಿರುವುದು ಇದರ ಸಂಪೂರ್ಣ ಉತ್ಪತ್ತಿಯು ಉಡುಪಿ ಪಿಯಾರ್ಯ ಮಠದವರಾದ ಶ್ರೀ ಪೇಜಾವರ ಸ್ವಾಮಿಯವರಿಗೆ ಸಮರ್ಪಿಸಲಾಗುವುದು ನಿನ್ನೆ ದಿನ ಇವರುಗಳ ಒಂದು ದೊಡ್ಡ ಸಂಗೀತ ಕಚೇರಿಯು ಉಡುಪಿಯಲ್ಲಿ ಕೂಡಾ ನಡೆದು ಇದರ ಉತ್ಪತ್ತಿಯನ್ನು ಈ ಪೇಜಾವರ ಮಠಕ್ಕೆನೇ ಸಮರ್ಪಿಸಿರುವರು.

ಬೆಂದೂರು—"ಇಲ್ಲಿ ಮರಕರಗುಡ್ಡೆಯಲ್ಲಿರುವ ಬಾಸೆಲ್ ಮಿಶನ್ ಚರ್ಚ್ ಎಲಿಮೆಂಟರಿ ಸ್ಕೂಲಿನಲ್ಲಿ ತಾ ೯ನೇ ಜೆಗ್ಗೆ ನವಸಂವತ್ಸರಿಕ ಉತ್ಸವವು ಇಲ್ಲಿಯ ಶ್ರೀ ವಿಲ್ ಡಿಸೋಜ಼ರವರು ಡಾಕ್ಟರರಾದ ಕೆ ಪಿ ವಿಲ್ ಎಲ್ ಎಂ ಎಸ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. [illegible] ವಿನೋದಕಳೆಟಿ ಪ್ರದರ್ಶನವಾದ ಮೇಲೆ [illegible] ಮೊನೇಜರರೂ ಪ್ರೆಸಿಡೆಂಟರೂ ಆದ ರೆವರೆಂಡ್ ಸುಮಿತ್ರ ಇವರು ಶಾಲೆಯ ವಿಷಯವಾಗಿ ಮಾತಾಡಿದ ವೇಳೆ ಅಧ್ಯಕ್ಷರ ಶಾಲೆಗೆ ಹೊಸವರ್ಷದ ಅಭ್ಯುದಯವನ್ನು ಹಾರೈಸಿ ಟೀ ಉಪಹಾರವಾದಿದ ಭಗವಂತನ ಪ್ರಾರ್ಥನೆಯಾದ ವೇಳೆ ಸಭೆಯು ಮುಕ್ತಾಯವಾಯಿತು"

ತಾಲೂಕುಗಳಿಂದ

ಕಾರ್ಕಳ.—ಇದೇ ತಾ ೧೩-೧-೩೭ನೇ ದಿವಸ ಇಲ್ಲಿಯ ಅನಂತಶಯನದ ಬಳಿಯಲ್ಲಿರುವ ಬಂಗಲೆಯಲ್ಲಿ ಸೀತಾರಾಮ ಭಟ್ಟರ ಕಟ್ಟೋಣದಲ್ಲಿ ಶ್ರೀ ಕೇಶವ ರಾಮಚಂದ್ರ ಶೆಣೈಯವರು ವ್ಯವಸ್ಥಾಪಕರ ಆರ್ಯಸಮಾಜ ಸ್ಥಾಪನಾ ಸಮಾರಂಭವು ಜರಗಿತು. ಬೆಳಿಗ್ಗೆ ಹವನಯುಕ್ತ ಪ್ರಾರ್ಥನಾದಿಗಳೂ [illegible] ನಗರ ಸಂಕೀರ್ತನೆ ದಸ ಬೆಂಗಳೂರು ಎಂದ ಒಬ್ಬ ಶ್ರೀ ಧರ್ಮದೇವ ವಿದ್ಯಾವಾಚಸ್ಪತಿ ಮಂಗಳೂರಿನ ಶ್ರೀಗೋವಿಂದ ಬಿ ದಾಸಪ್ಪ ಶೆಟ್ಟಿ ಲಕ್ಷ್ಮಣದೇವ ವಿದ್ಯಾರ್ಥಿ ಹಾಗೂ ಇನ್ನೂ ಕೆಲವು ಮಹನೀಯರ ಆರ್ಯಸಮಾಜದ ಅವಶ್ಯಕತೆ ಹಿಂದೂಸಮಾಜದ ದ [illegible] ವಸ್ಥೆ ವೈದಿಕಧರ್ಮದ ಮಹತ್ವ ಮುಂತಾದ ವಿಷಯಗಳಲ್ಲಿ ಭಾಷಣಗಳು ಆದುವು

ಸ್ಥಳೀಯ ಕ್ರೈಸ್ತದೇವಾಲಯದ ರೆವರೆಂಡ್ ಫಾದರ ಎ ಜೆ ಪಿಂಟೊ ಮತ್ತು ರೆವರೆಂಡ್ ಫಾದರ್ ಆಲ್ಬರ್ಟ್ ನಜರತ್ ಇವರಿಬ್ಬರೊಳಗಿನ ಖಾಸಗಿ ದ್ವೇಷ ಮೂಲವಾದ ಜಗಳದಿಂದ ಅವರಿಬ್ಬರ ವರ್ಗಾವರ್ಗಿ ಆಗಿದೆಯಷ್ಟೆ ಅನಂತರ ಅವರ ಪೈಕಿ ರೆ ಫಾ ಪಿಂಟೋರವರನ್ನು ಮಾತ್ರ ಕೆಲವರು ಪೇಟೆಯಲ್ಲಿ ಹೂವಾಸಿಲೆ ಹಾಕಿ ಮೆರವಣಿಗೆಯಿಂದ ಕಳುಹಿಸಿಕೊಟ್ಟದ್ದರು ಅವರಿಗೆ ಆದ ಸನ್ಮಾನವು ಪ್ರಜಾಜನರಿಂದ ಮಾಡಲ್ಪಟ್ಟದ್ದಲ್ಲವಾಗಿಯೂ ಅವರ ಕೆಲವೇ ಮಂದಿ ಸ್ನೇಹಿತರು ಕೂಡಿ ಆ ಗದ್ದಲೆ ಮಾಡಿದ್ದಾಗಿಯೂ ರೆ ಫಾ ನಜರತರಿಗೆ ಆ ತರಹದ ವಿಜೃಂಭಣೆಯನ್ನು ಮಾಡಿದ್ದರಿಂದ ಅವರು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರಲಿಲ್ಲವೆಂದೂ ಯಾರೂ ತಿಳಿಯ ಕೂಡದಾಗಿಯೂ, ಆ ಕೆಲವರ ಭೇದಬುದ್ಧಿಯು ಪಕ್ಷನೆಯ ವಿಚಾರಕರವಾದ ಸಂಗತಿಯಾಗಿದೆಯೆಂದೂ ಈಗ ಶ್ರೀಗಳಾದ ಗ್ರೆಗೋರಿ ಮಿನೇಜಸ್ ಮೊದಲಾದ ೧೩ ಮಂದಿ ಸಹ್ಯಹಸ್ತರು. ಸಹಿ ಹಾಕಿರುವ ಅಬ್ಬಾದ ಕರಪತ್ರಗಳನ್ನು ಹಂಚಿದ್ದಾರೆ ಈಗ ಇದರ ಮೇಲೆ ಯಾವ ಟೀಕೆಯೂ ಅಗತ್ಯವಿರುವುದಿಲ್ಲ

ಹಿಂದೆ ಗೀತಾಪ್ರಚಾರಕರಾಗಿ ಖ್ಯಾತಿಹೊಂದಿದ ಶ್ರೀ ಬಳ್ಳುಂಜೆ ಸುಬ್ಬರಾಯರು ಈಗ ತಮ್ಮ ವೃದ್ಧಾಪ್ಯದಲ್ಲಿ ಆರೋಗ್ಯಪ್ರಚಾರಕರಾಗಿ "ದೇಹಕ್ಕೆ ಎಣ್ಣೆ ಹಾಗು ಯಾತಿಕ್ಕಿಮಿಯುವುದರಿಂದ ಆಗುವ ಪ್ರಯೋಜನ"ಗಳನ್ನು ಆಯುರ್ವೇದ ಗ್ರಂಥಾಧಾರಗಳಿಂದ ಎತ್ತಿ ಕರಪತ್ರಗಳ ಮೂಲಕ ಎಲ್ಲರಿಗೂ ತಿಳಿಸಹೊರಟಿದ್ದಾರೆ. ಎಲ್ಲರೂ ದೀರ್ಘಾಯುಗಳಾಗಬೇಕೆಂದು ಅವರು ಮಾಡುವ ಪ್ರಯತ್ನಗಳನ್ನು ಕಂಡು ಸಾನಂದಾಶ್ಚರ್ಯ ಪಡುವಂತಾಗಿದೆ, ಅವರ ಆ ಕರಪತ್ರಗಳನ್ನು ಓದಬೇಕೆನ್ನುವವರು ಅವರಿಗೆ ಶನ್ನು ಅವರಿಂದ ಧರ್ಮಾರ್ಥ ಪಡೆಯಬಹುದು.

ಸಂಸ್ಕೃತ ಪ್ರವೇಶ (ಎಂಟ್ರೆನ್ಸ್) ಪರೀಕ್ಷೆಯು ಒಗ್ಗ ಇಲ್ಲಿ ಶ್ರೀಮತಿ ಭುವನೇಂದ್ರ ಸಂಸ್ಕೃತ ಪಾಠ ಶಾಲೆಯನ್ನು ಒಂದು ಕೇಂದ್ರವನ್ನಾಗಿ ಸರಕಾರದವರು ಸ್ವೀಕರಿಸಿರುವರಾಗಿ ತಿಳಿದುಬರುತ್ತದೆ. [illegible] ದಿಂದ ಊರ ಹೊರಗಿನ ಇತರ ಸಂಸ್ಕೃತ ಪರೀಕ್ಷಾರ್ಥಿಗಳು ಕೂಡ ಅನುಕೂಲವಿದ್ದಹಾಗೆ [illegible] ಇಲ್ಲಿಯೇ ಆ ಪರೀಕ್ಷೆಯನ್ನು ಕೊಟ್ಟು [illegible] ಪರಿಶ್ರಮವನ್ನೂ ಕಡಿಮೆಮಾಡಬಹುದಾಗಿದೆ

ಪೆರ್ಡೂರು.—ಇದೇ ತಾರೀಖು ೫ನೇ ಆದಿತ್ಯವಾರ ಇಲ್ಲಿಯ "ದಿ ಯೂನಿಯನ್ ಕ್ಲಬ್ಬಿ"ನ ವಾರ್ಷಿಕೋತ್ಸವವು ಮಾನ್ಯ ಶ್ರೀ ಭೋಜರಾಜ ಸೆಟ್ಟಿ ಅಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಈ ನಾಟಕಸಮಾಜದಿದದ ಮೆಂಬರರಲ್ಲೊಬ್ಬರಾದ ಶ್ರೀ ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೇರವರು ಈ ಸರ್ತಿನ ಕೋಂಗ್ರೆಸ್ ಉಮೇದ್ವಾರರಾಗಿ ಡಿ ಬೋರ್ಡಿಗೆ ಸ್ಪರ್ಧಿಯುಳ್ಳದೆ ಆರಿಸಲ್ಪಟ್ಟದ್ದರಿಂದ ಅವರನ್ನು ಒಬಳವಾಗಿ ಅಭಿನಂದಿಸಲಾಯಿತು

ಕೂರಾಡಿ.—ಜಿಲ್ಲಾ ಎಜುಕೇಶನಲ್ ಕೌನ್ಸಿಲ್ ಮೆಂಬರ್ ಶ್ರೀ ಕೆ ವೆಂಕಪ್ಪ ಸೆಟ್ಟಿಯ [illegible] ಮಾಜಿ ಮೆಂಬರ್ ಶ್ರೀ [illegible] ಸುಬ್ಬಣ್ಣ ಸೆಟ್ಟಿ [illegible] ತಾ [illegible] ಶಾಂತಿನಿಕೇತನ [illegible] ಮೆಂಟರಿ ಶಾಲಾ ಸಂದರ್ಶನೆಮಾಡಿದರು. [illegible] ಗಾರ್ಡ್ ಆಫ್ ಹೋನರ್ [illegible] ರನ್ನು ಸ್ವಾಗತಿಸಿದರು. [illegible] ತೃಪ್ತರಾದರು

ಕುಂಬಳೆ.— ಈ ಸಂಘದ [illegible] ಸಭೆಯು ತಾ ೧೧ ೧ ೩೭ [illegible] ಗಂಟೆಗೆ ಕುಂಬಳೆ ಬೋ [illegible] ಎಂ ಸಿ ವಾಮ್ಮಯವರ ಅಧ್ಯಕ್ಷತೆಯಲ್ಲಿ [illegible] ಅಧ್ಯಕ್ಷರು "ಮಾನ್ಯದ ಕರ್ತವ್ಯ" ಎಂಬ [illegible] ಒಂದು ಚಲೋ ಭಾಷಣದಿಂದ [illegible] ಮತ್ತು ಸಂಗೀತಪಕ್ಷ್ಯಕರಡಿದ [illegible] ವಾರ್ಷಿಕ ಸಭೆಯನ್ನು ಕುಂಬಳೆ [illegible] ಸಮಯ ಜರಗಿಸುವುದೆಂದ [illegible] ಕಾರ್ಯಕಲಾಪಗಳಾದ ಮೇಲೆ [illegible] ಬಳ್ಳಿಂದ "ಇದು ಎಂಥಾ ಕಥೆ" ಎಂಬ [illegible] ಪ್ರದರ್ಶಿಸಲ್ಪಟ್ಟಿತು ಅದೇ [illegible] ನೆಗ್ರಾಲ್ ಮಿಶನ್ [illegible] ರೆಂಬಿನ ಉಪಾಧ್ಯಾಯರ ಸಭೆ [illegible]

ಮದೂರು—ಪೋಸ್ಟ್ [illegible] ೦ ವರು ಇಲ್ಲಿಗೆ ಒಂದು [illegible] ಸಿಲ್ಲ ಮದೂರು [illegible] ಶಾಲೆಗಳನ್ನು ವಿಜಿಟ್‌ಮಾಡಿ [illegible] ಕೂಡಿ ಕೆಲವು ವಿಷಯಗಳ [illegible] ಶಾಲೆಗೆ ಸಮ್ಮಂಧಪಟ್ಟವರಿಗೂ [illegible] ಅವರಿಗೆ [illegible] ಇದ್ದ ವಿಷಯಗಳು [illegible] ಮುದೂರ [illegible] ದೇಟು ಮಹಮ್ಮದೀ [illegible] ಕಳಿಸುವ [illegible] ದ್ದರೆ ಊರಿಗೆ ಉಪಕಾರವಾಗುತ್ತಿ [illegible] ದಿಪ್ಯುಟಿ ಇನ್ಸ್‌ಪೆಕ್ಟರ [illegible] ಕೊಟ್ಟಾರೆಂದು ನಂಬುತ್ತೇವೆ

ಸುರತ್ಕಲ್. ಇಲ್ಲಿಯ [illegible] ಸಂಘದ ಜಾಮತಿ ಸಭೆಯು ಇದೇ [illegible] ದಲ್ಲ ಇದ್ದ ವಿದ್ಯಾದಾನ [illegible] ಸಂಘಕ್ಕೆ ಮೂಲಧನವನ್ನು [illegible] ಅಭಿವೃದ್ಧಿಗೊಳಿಸುವುದಕ್ಕೂ [illegible] ಅಧೀನದಲ್ಲಿರುವ ಇದ್ದ ವಿದ್ಯಾ [illegible] ವಿದ್ಯಾರ್ಥಿಗಳ ಕಾರ್ಯಕ್ಕೆ ಇನ್ನಷ್ಟು [illegible] ಮಾಡುವ ಉದ್ದೇಶದಿಂದ [illegible] ೨೪ ೦ [illegible] ೨೦೦ [illegible] ವರ್ಕ್ಸ್‌ನ [illegible] ಕುರಿತು [illegible] ಕಾರ್ಯಗಳನ್ನು [illegible] ಕೈಕೊಂಡು ಸದರಿ ಸೊಸೈಟಿಯನ್ನು ಇದೇ [illegible] ತಿಂಗಳಲ್ಲಿ ತೆಗೆಯುವುದೆಂದೂ [illegible] ತಿಳಿದುಬರುತ್ತದೆ ವಿದ್ಯಾಭಿವೃದ್ಧಿಯಂಥ [illegible] ದಲ್ಲಿ ಕಂಕಣಬದ್ಧರಾಗಿ ದುಡಿಯುವ [illegible] ಈಗ ಪ್ರಾರಂಭಿಸುವ ಈ ಉದ್ಯಮಕ್ಕೆ [illegible] ಪರಿಪೂರ್ಣ ಮನಸ್ಸಿಂದೆಲ್ಲರೂ [illegible] ಪ್ರೋತ್ಸಾಹಿಸಿ ಈ ಲೋಕೋಪಯೋಗಿ [illegible] ಇದರ ಪ್ರಥಮ ಫಲವಾದ ವಿದ್ಯಾದಾನ [illegible] ಉಪಕಾರವಿಕ [illegible] ವಿ [illegible] ಮಾಡುವರೆಂಬ ಬರವಸೆಯಿದೆ

ಕರೋಪಾಡಿ—ಕಳೆದ ತಾ [illegible] ವರೆಗೆ ತಾ ೧೧-೧-೩೭ಕ್ಕೆ [illegible] ಮತ್ತು ಊರ ಮಹನೀಯರು ಸೇರಿ ಅಂದಿನ [illegible] ಮುಕ್ತಾಯವಾಗಿ ಮುಂದಿನ ಭಜನೆಯು [illegible] ೧೧-೩-೩೭ಕ್ಕೆ ಜರಗಿಸುವುದೆಂದ [illegible]

೧೯ನೇ ಪುಟಕ್ಕೆ ಮುಂದುವರಿಯುವುದು.

ಶ್ರೀ ಜಗದ್ಗುರು ಸಂಸ್ಥಾನ ಶೃಂಗೇರಿ ಮಠದ ಆಚಾರವಿಚಾರಣ ಧರ್ಮಾಧಿಕಾರಸ್ಥಾನ.

ಇಡೀ ದಕ್ಷಿಣ ಕನ್ನಡ ಜಿಲ್ಲಾ ಮತ್ತು ಕೊಡಗಿನಲ್ಲಿರುವ ಶ್ರೀಮಠದ ಎಲ್ಲಾ ಶಿಷ್ಯಜನರಿಗೂ ತಿಳಿಸುವುದೇನೆಂದರೆ.—

ನಾವು ಕಳೆದ ವರ್ಷ ಇಡೀ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಸಂಚರಿಸಿ ಎಲ್ಲಾ ವಿಷಯವನ್ನು ವಿಮರ್ಶೆಮಾಡಿದ್ದರಲ್ಲಿ ಕೆಲವರು ಈ ಪೂರ್ವದಲ್ಲಿ ಶ್ರೀ ಮಠದ ಕಾಣಿಕೆ ವಸೂಲಿ ಅಧಿಕಾರವನ್ನು ಪಡೆದಿದ್ದು ಈ ವರೆಗೂ ಕಾಣಿಕೆಯನ್ನು ವಸೂಲುಮಾಡುತ್ತಿದ್ದು, ಶ್ರೀ ಮಠಕ್ಕೆ ಕಾಣಿಕೆ ಹಣವನ್ನು ಕಳುಹಿಸದೆ ಇರುವುದೂ, ಇನ್ನು ಕೆಲವರು ಶ್ರೀ ಮಠದಿಂದ ಯಾವ ವಿಧವಾದ ಅಧಿಕಾರವನ್ನೂ ಪಡೆಯದೆ ಶ್ರೀ ಮಠದ ಕಾಣಿಕೆಯನ್ನು ವಸೂಲು ಮಾಡುತ್ತಿರುವುದೂ ಮತ್ತೆ ಕೆಲವರು ಇದಕ್ಕೆ ಸಹ ಮಾಡುತ್ತಿರುವುದೂ ಮುಂತಾದ ಹಲವು ಅಕ್ರಮಗಳು ನಮ್ಮ ತಿಳುವಳಿಕೆಗೆ ಬಂದುದರಿಂದ ಶ್ರೀ ಮಠದ ಕಾಣಿಕೆ ವಸೂಲಿ ವಿಷಯದಲ್ಲಿ ಸಕ್ರಮವಾದ ಪುನರ್ವ್ಯವಸ್ಥೆಯನ್ನು ಮಾಡುವುದು ಅಗತ್ಯವಾಗಿ ಕಂಡು ಬಂದು ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅಜ್ಞೆಯಂತೆ ಈ ಕೆಳಗಣ ನಿಬಂಧನೆಗಳನ್ನು ಪ್ರಕಟಿಸುತ್ತೇವೆ.

(೧) ಇದು ವರೆಗೆ ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಿಕೆ ವಸೂಲಿ ಅಧಿಕಾರವನ್ನು ಹೊಂದಿದ್ದವರ ಅಧಿಕಾರವನ್ನು ಸಂಪೂರ್ಣವಾಗಿ ರದ್ದು ಮಾಡಿರುತ್ತೇವೆ

(೨) ಈ ೧೯೩೬ನೇ ಜನವರಿ ಲಾಗಾಯತು ಪ್ರತಿ ತಾಲೋಕಿಗೂ ಒಬ್ಬೊಬ್ಬ ಮಠದ ಏಜಂಟರನ್ನು(?) ನಿಯಮಿಸಿ, ಇವರ ಕಾರ್ಯದ ಅನುಕೂಲಕ್ಕಾಗಿ ಕಾರ್ಯನಿರ್ವಾಹಕ ಸಂಘವನ್ನು ಸಹ ನೇಮಿಸಿ ಈ ನೇಮಕವನ್ನು ಪ್ರಸಿದ್ಧಪಡಿಸ ತ್ತೇವೆ,

(೩) ಪ್ರತಿಯೊಂದಲೂ ಆಯಾಯ ಜಾತಿ ಜನರಲ್ಲಿ ಶ್ರೀ ಸಂಸ್ಥಾನದಿಂದ ಪರ್ಪಡಿಸಲ್ಪಟ್ಟ ಗುರಿಕಾರ ಮೊಕ್ತೇಸರ ಯಜಮಾನ ಗೌಡ ಬುದ್ಧಿವಂತ ಪಟ್ರೆ ಗೌಂವ ಅಧಿಕಾರಸ್ಥರು ಮತ್ತು ಆಯಾಯ ಜಾತಿಯ ಪುರೋಹಿತರು ಸಹ ತಮ್ಮ ಪೂರ್ವಮರ್ಯಾದೆಗಳಿಗನುಸಾರವಾಗಿ ಈ ಅಧಿಕಾರ ಸ್ಥಾನದಿಂದಲೇ ಹೊಸ ಸನ್ನದನ್ನು ಪಡೆಯಬೇಕು ಮತ್ತು ಪ್ರಾಕಿನಂತೆ ಆಯಾಯ ಸಂದರ್ಭಗಳಲ್ಲಿ ಜಾತಿಮತ ತಗಾದೆಗಳ ತೀರ್ಮಾನವನ್ನು ಶ್ರೀ ಸಂಸ್ಥಾನದವರ ಮೂಲಕ ಪರಿಷ್ಕರಿಸಿಕೊಳ್ಳಬೇಕಾಗಿಯೂ ನಿಬಂಧನೆ ಮಾಡಿರುತ್ತೇವೆ

(೪) ಶ್ರೀ ಮಠದ ಅಧಿಕಾರ ಸ್ಥಾನದಿಂದ ಅಧಿಕಾರ ಸನ್ನದನ್ನು ಪಡೆದಿರುವ ಮಠಮುದ್ರೆಯುಳ್ಳ ವಶ. ಆಯಾಯ ಗ್ರಾಮದ ಮುಖ್ಯಸ್ಥರಿಗೆ ನಿರೂಪವನ್ನೂ ಅಧಿಕಾರ ಸ್ಥಾನದಿಂದ ಅಂಕಿತವಾದ ಈ ಇಲಾಖೆಯ ಮೊಹರುಳ್ಳ ರಶೀದಿ ಪುಸ್ತಕವನ್ನೂ ಸಹ ಕೊಡಲಾಗುವುದು ಪ್ರತಿಸಾರಿ ಕಾಣಿಕೆಯನ್ನು ಕೊಡುವಾಗಲೂ ಈ ರಶೀದಿಯನ್ನು ತೆಗೆದುಕೊಂಡೇ ಕಾಣಿಕೆ ಹಣವನ್ನು ಕೊಡಬೇಕು—

(೫) ಈ ಅಧಿಕಾರ ಸ್ಥಾನದಿಂದ ಕ್ರಮವಾದ ಅಧಿಕಾರ ಪಡೆಯದೆ ಕಾಣಿಕೆ ವರ್ಗೈರೆಯನ್ನು ಇನ್ನು ಮುಂದೆ ಯಾರೂ ವಸೂಲು ಮಾಡಕೂಡದು ಇದಕ್ಕೆ ವಿರೋಧವಾಗಿ ನಡೆಯುವವರು ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅಜ್ಞೆಯನ್ನು ಅತಿಕ್ರಮಿಸುವ ಮೂಲಕ ಆಶೀರ್ವಾದವನ್ನು ಕಳೆದುಕೊಳ್ಳುವರಲ್ಲದೆ ಶ್ರೀ ಸಂಸ್ಥಾನದಿಂದ ಮುಂದಿನ ಕ್ರಮಕ್ಕೂ ಗುರಿಯಾಗುವರು

(೬) ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಿಷ್ಯರಿಗೂ ಅನುಗ್ರಹಿಸಿ ನಮ್ಮ ವಶ ಕೊಟ್ಟಿರುವ (೧—೪—೧೯೩೪) ನಂ ೩೬ನೇ ಶ್ರೀಮುಖವನ್ನು ಅನುಸರಿಸಿ ಒಂದು ಸಾರಿ ಪ್ರತಿ ತಾಲೂಕು ಗ್ರಾಮಗಳಲ್ಲಿಯೂ ಸಂಚರಿಸಿ ಶಿಷ್ಯವರ್ಗದವರನ್ನು ಬರಮಾಡಿಕೊಂಡು ಈ ಶ್ರೀಮುಖವನ್ನು ಕೊಟ್ಟು ಶ್ರೀ ಶ್ರೀ ಮಹಾಸ್ವಾಮಿಗಳವರ ಆಜ್ಞೆಯಂತೆ ಅವರವರ ಜಾತಿಮತ ಧರ್ಮದ ರಕ್ಷಣೆಯ ಸಂದೇಶವನ್ನು ತಿಳಿಸಿ ಅದರ ರಕ್ಷಣೆಯ ವ್ಯವಸ್ಥೆಗೆ ಪರ್ವದಿನ ಒಂದು ಸಾರಿ ಕಾದಿದ್ದಾಗಿ ಕಾಣಿಕೆಯನ್ನು ನಾನೇ ವಸೂಲು ಮಾಡಿ ಆಯಾಯ ಜಾತಿ ಮುಖ್ಯಸ್ಥರಿಗೆ ಸನ್ನದನ್ನು ಕೊಟ್ಟು ಮುಂದಿನ ಕಾರ್ಯವ್ಯವಸ್ಥೆಯನ್ನು ಮಾಡಿ ಪ್ರಕಟಿಸುತ್ತೇವೆ

ವಿದ್ವಾನ್ ಕೆ. ಶೇಷ ಶಾಸ್ತ್ರಿ,
ಧರ್ಮಾಧಿಕಾರಿ ಶ್ರೀ ಜಗದ್ಗುರು ಸಂಸ್ಥಾನಶೃಂಗೇರಿ

ಇಂಗ್ಲೀಷು ಮತ್ತು ದೇಶಭಾಷೆಗಳ ವಿಚಾರವಾಗಿ ಸರ್ ಮಿ.ರ್ಜಾ ಇಸ್ಮಾಯಿಲ್ ಸಾಹೇಬರವರು.

ಮೊನ್ನೆ ಅಕ್ಟೋಬರ ತಾ ೩ನೇ ದಿನ ಮೈಸೂರು ಸಂಸ್ಥಾನದ ಮಂತ್ರಿವರ್ಯರಾದ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರವರು ಅಣ್ಣಾಮಲೆ ವಿಶ್ವವಿದ್ಯಾನಿಲಯದ ಪದವೀದಾನ ಮಹೋತ್ಸವದಲ್ಲಿ ಭಾಷಣಮಾಡಿ, ವಿಶ್ವವಿದ್ಯಾಲಯದ ಮುಖ್ಯೋದ್ದೇಶಗಳೇನು?, ಅಲ್ಲಿ ವ್ಯಾಸಂಗ ಮಾಡಿ ಪದವೀಧರರಾದವರು ತಮಗೂ ತಮ್ಮ ದೇಶಕ್ಕೂ ಉಪಯೋಗಪಡುವುದು ಹೇಗೆ, ಅವರು ಕಲಿಯಬೇಕಾದ ಗುಣಗಳೇನು, ಬಿಡಬೇಕಾದ ದೋಷಗಳೇನು ಎಂದು ಮುಖ್ಯವಾದ ಅಂಶಗಳನ್ನು ಅನುಭವ, ಪ್ರತ್ಯಕ್ಷ ಪರಿಶೀಲನೆ, ದೂರದೃಷ್ಟಿ ಇವುಗಳಿಂದ ಕೂಡಿದ ಮಾತುಗಳಲ್ಲಿ ಉಚಿತವಾಗಿ ವಿವರಿಸಿದರು ಅವರ ಆ ಭಾಷಣವನ್ನು ಎಲ್ಲ ಪ್ರಜೆಯೂ ಓದಿ ಮನನಮಾಡತಕ್ಕದ್ದಾಗಿದೆ. ಇದರಲ್ಲಿ ಭಾಷಾ ಸಾಹಿತ್ಯಗಳಿಗೆ ಸಂಬಂಧಪಟ್ಟ ಎರಡು ಪ್ರಕರಣಗಳ ಸಾರಾಂಶವನ್ನು ಮಾತ್ರ ಇಲ್ಲಿ ಕೊಡುತ್ತೇವೆ ಇವುಗಳಲ್ಲಿ ಅವರು ಇಂಗ್ಲೀಷಿನ ಬೆಲೆ, ಇಂಗ್ಲೀಷಿನಲ್ಲಿ ಕಲಿತ ಅಂಶಗಳನ್ನು ದೇಶಭಾಷೆಯಲ್ಲಿ ಜನಸಾಮಾನ್ಯಕ್ಕೆ ತಿಳಿಸುವವರ ಅವಶ್ಯಕತೆ ಇವುಗಳನ್ನು ಒತ್ತಿ ಒತ್ತಿ ಹೇಳಿದ್ದಾರೆ— ಕ ಸಾ ಪರಿಷತ್ಪತ್ರಿಕೆ

“ಇಂಗ್ಲಿಷ್ ಭಾಷೆಯು ಅವಶ್ಯವಾಗಿ ಕಲಿಯಬೇಕಾದ ಅತ್ಯಂತ ಪ್ರಯೋಜನಕರವಾದ ಭಾಷೆಯಾಗಿದೆ ಸಾಮಾಜಿಕ ದೃಷ್ಟಿಯಿಂದಲೇ ಆಗಲಿ ಸಂಸ್ಕೃತಿ ಸಂಬಂಧವಾದ ದೃಷ್ಟಿಯಿಂದಲೇ ಆಗಲಿ ವಿದ್ಯಾಭ್ಯಾಸದ ದೃಷ್ಟಿಯಿಂದಲೇ ಆಗಲಿ ಮತ್ತು ರಾಜಕೀಯ ದೃಷ್ಟಿಯಿಂದಲೇ ಆಗಲಿ ಯಾವ ದೃಷ್ಟಿಯಿಂದ ನೋಡಿದಾಗ್ಯೂ ಇಂಗ್ಲಿಷ ಭಾಷೆಯ ವ್ಯಾಸಂಗವು ಅವಶ್ಯಕವೆಂಬುದು ನಿಸ್ಸಂದೇಹವಾಗಿದೆ ಭರತಖಂಡದ ಯಾವ ವಿಶ್ವವಿದ್ಯಾನಿಲಯದವರೂ ಇಂಗ್ಲಿಷ ಭಾಷೆಯ ವ್ಯಾಸಂಗಕ್ಕೆ ತಕ್ಕಷ್ಟು ಗಮನ ಕೊಡದೆ ಅನಾದರಣೆ ಮಾಡುವಂತಿಲ್ಲ ಅದು ಪ್ರಪಂಚದ ಸಮಸ್ತ ದೇಶಗಳಲ್ಲಿಯೂ ಪ್ರಚಾರದಲ್ಲಿರುವ ಭಾಷೆ ಪಾಶ್ಚಿಮಾತ್ಯರ ಗ್ರಂಥಗಳೂ ಸಂಸ್ಕೃತಿಯೂ ಭಾರತೀಯರ ಪರಿಚಯವಾಗುವಂತೆ ಆ ಭಾಷೆಯು ಅವಕಾಶವನ್ನು ಕಲ್ಪಿಸುತ್ತದೆ ಅಲ್ಲದೆ ಅದು ನಮ್ಮ ಭರತಖಂಡದ ನಾನಾ ಪ್ರಾಂತ್ಯಗಳವರೂ ಪರಸ್ಪರ ವ್ಯವಹಾರ ನಡೆಯಿಸುವುದಕ್ಕೆ ಸಹಾಯವಾಗಿರತಕ್ಕ ಭಾಷೆಯೂ ಆಗಿದೆ ಈ ದೃಷ್ಟಿಯಿಂದ ನೋಡಿದರೆ ಭರತಖಂಡದ ನಾನಾ ಪ್ರಾಂತ್ಯಗಳ ಏಕೀಕರಣವು ನಡೆಯುವುದಕ್ಕೆ ಅವಶ್ಯಕವಾದ ಅತ್ಯಂತ ಪ್ರಬಲವಾದ ಸಾಧನಗಳಲ್ಲಿ ಇಂಗ್ಲಿಷ್ ಭಾಷೆಯೂ ಒಂದಾಗಿದೆ ಮುಂದೆ ಭರತಖಂಡಕ್ಕೆ ದೊರೆಯುವ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಶಾಸನಸಭೆಯಲ್ಲಿಯೂ ಮತ್ತು ಪ್ರಾಂತೀಯ ಶಾಸನಸಭೆಯಲ್ಲಿಯೂ ಭಾಷಣಗಳೂ ಇತರ ವ್ಯವಹಾರಗಳೂ ನಡೆಯುವುದು ಇಂಗ್ಲಿಷ್ ಭಾಷೆಯಲ್ಲಿ ಮಾತ್ರವೇ ಅದಕಾರಣ ಭರತಖಂಡದ ಪ್ರತಿಯೊಂದು ವಿಶ್ವವಿದ್ಯಾನಿಲಯದವರೂ ಇಂಗ್ಲಿಷ್ ಭಾಷೆಯ ವ್ಯಾಸಂಗಕ್ಕೆ ಪ್ರೋತ್ಸಾಹ ಕೊಡಬೇಕಾದುದು ಅವರ ಕರ್ತವ್ಯವೆಂಬುದು ಸ್ಪಷ್ಟವಾಗಿಯೇ ಇದೆ

“ಆದರೆ ಈ ರೀತಿ ಇಂಗ್ಲಿಷ್ ಭಾಷೆಯ ವ್ಯಾಸಂಗಕ್ಕೆ ಪ್ರೋತ್ಸಾಹ ಕೊಡುವಲ್ಲಿ ದೇಶಭಾಷೆಗಳ ವ್ಯಾಸಂಗದಲ್ಲಿ ಎಂದಿಗೂ ಉಪೇಕ್ಷೆಯುಂಟಾಗಕೂಡದು ದೇಶಭಾಷೆಯು ಜನಜೀವನದ ನಾಡಿಯಂತಿದೆ ವಿದ್ಯಾವಂತನಾದ ಮಾನವನು ತನ್ನ ಆಲೋಚನೆಗಳನ್ನೂ ತನ್ನ ಭಾವಗಳನ್ನೂ ಜನಗಳಿಗೆ ಅರ್ಥವಾಗುವಂತೆ ಸುಲಭವಾಗಿಯೂ ಧಾರಾಳವಾಗಿಯೂ ದೇಶಭಾಷೆಯಲ್ಲಿ ತಿಳಿಸಲು ಸಮರ್ಥನಾಗಿಲ್ಲದ ಪಕ್ಷಕ್ಕೆ ಅವನಿಂದ ದೇಶಬಾಂಧವರಿಗೆ ಏನೇನೂ ಪ್ರಯೋಜನವಾಗಲಾರದು ಅವನು ಅವರೊಡನೆ ಸಂಬಂಧವನ್ನಿಟ್ಟುಕೊಳ್ಳುವುದಕ್ಕೆ ದೇಶಭಾಷೆಯೇ ಪ್ರಬಲವಾದ ಏಕೀಕರಣ ಸಾಧನ ದೇಶಭಾಷೆಯಲ್ಲಿ ಸುಲಲಿತವಾಗಿ ಮಾತನಾಡಿ ವ್ಯವಹರಿಸಲು ವಿದ್ಯಾವಂತನು ಸಮರ್ಥನಾಗಿದ್ದಲ್ಲಿ ಮಾತ್ರವೇ ಅವನು ಉಚಿತ ರೀತಿಯಲ್ಲಿ ಅವರ ಮನಸ್ಸನ್ನು ಪರಿಣಾಮಗೊಳಿಸಲು ಶಕ್ತನಾಗುವನು ಯುವಕರಾದ ನೀವು ನಮ್ಮ ದೇಶಬಾಂಧವರಾದ ಮಹಾಜನಗಳೊಡನೆ ದೇಶಭಾಷೆಯಲ್ಲಿ ಮಾತನಾಡಬೇಕಾದುದು ಹಿಂದಿದ್ದುದಕ್ಕಿಂತಲೂ ಇನ್ನು ಮುಂದೆ ಬಹಳವಾಗಿ ಹೆಚ್ಚಬೇಕಾಗುತ್ತದೆ, ಅದಕಾರಣ ಮುಂದೆ ನಿಮಗೆ ಒದಗುವ ಈ ದೊಡ್ಡ ಕೆಲಸಕ್ಕಾಗಿ ತಕ್ಕಷ್ಟು ಸಾಮರ್ಥ್ಯವನ್ನು ಸಂಪಾದಿಸಿಕೊಂಡು ಸಿದ್ಧರಾಗಬೇಕಾಗಿ ನಾನು ಮನಃಪೂರ್ವಕವಾಗಿ ಸಲಹೆ ಹೇಳುತ್ತೇನೆ” ಪಿ. ಕ. ೩೧-೧೦-೩೬.

ಭಾಷೆಗಳ ಬಡಿದಾಟ.

ಮೈಸೂರು ವಿಶ್ವವಿದ್ಯಾನಿಲಯದ ಪದವೀಪ್ರದಾನ ಮಹೋತ್ಸವದ ಕಾಲದಲ್ಲಿ (೯-೧೧-೩೬) ಶ್ರೀ ಸಿ. ವೈ. ಚಿಂತಾಮಣಿ, ಎಂ ಎಲ್. ಸಿ ಎಂಬ ಪ್ರಸಿದ್ಧ ವೃತ್ತಪತ್ರಿಕಾಕರ್ತರು ಮಾಡಿದ ಭಾಷಣದಲ್ಲಿ ಹಿಂದೀ ಭಾಷೆಯ ಸ್ಥಾನವನ್ನು ಬಲಪಡಿಸಬೇಕೆಂದು ಸಲಹೆ ಕೊಟ್ಟದ್ದು ವಾಚಕರ ಜ್ಞಾಪಕದಲ್ಲಿರಬಹುದು. ಇದಕ್ಕೆ ಪ್ರತ್ಯುತ್ತರವಾಗಿ ಈಚೆಗೆ (ತಾ ೬-೧೨-೩೬) ಬೆಂಗಳೂರಿನಲ್ಲಿ, ಶ್ರೀಮದ್ಯುವರಾಜರ ಅಧ್ಯಕ್ಷತೆಯಲ್ಲಿ ನಡೆದ ವಿದ್ಯಾಪ್ರಚಾರವಾದದ ಪ್ರಾರಂಭೋತ್ಸವ ಸಮಯದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಶಾಸ್ತ್ರವಿಜ್ಞಾನ ಶೋಧಕ ಸಂಸ್ಥೆಯ ಮುಖ್ಯಾಧಿಕಾರಿಗಳಾಗಿದ್ದು ಈಗ ವಿಶ್ರಾಂತರಾಗಿ ಮೈಸೂರಿನಲ್ಲಿ ನೆಲಸಿರುವ ಸರ್ ಮಾರ್ಟಿನ್ ಫಾರ್‌ಸ್ಟರ್ ಮಹಾಶಯರು ಶ್ರೀಮಾನ್ ಚಿಂತಾಮಣಿಯವರ ಸಲಹೆಯನ್ನು ಪ್ರಸ್ತಾಪಿಸಿ ಈ ಕೆಳಗೆ ಕಂಡಂತೆ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ —

“ಇಂಡಿಯಾ ದೇಶಕ್ಕೆ ಸರ್ವ ಜನಸಾಧಾರಣವಾದ ಭಾಷೆಯಾಗಬೇಕಾದರೆ ಹಿಂದೀಯೇ ಹೊರತು ಇಂಗ್ಲಿಷು ಅಲ್ಲ ಎಂಬ ಚಿಂತಾಮಣಿಯವರ ಅಭಿಪ್ರಾಯವನ್ನು ನಾನು ಒಪ್ಪುತ್ತಿಲ್ಲ ಇದಕ್ಕೆ ಕಾರಣ ನಾನು ಬೇರೆ ಜನಾಂಗದವನೆಂಬುದಲ್ಲ ಈ ವಿಚಾರದಲ್ಲಿ ಜನಾಂಗ ಸಂಬಂಧವನ್ನು ತಂದುಹಾಕಿ ಅದನ್ನು ಕೆಡಿಸಬಾರದು ಅದನ್ನು ನಿಷ್ಪಕ್ಷಪಾತವಾಗಿ ಒಂದೇ ಆಧಾರದ ಮೇಲೆ —ಈ ಭಾಷೆಗಳ ಯೋಗ್ಯತೆ ಪ್ರತಿಸ್ಪರ್ಧೆ ಮುಂದುವರಿದು ಕೊಂಡು ಹೋಗುತ್ತಿರುವ ಈಗಿನ ಪ್ರಪಂಚದ ತಿಳುವಳಿಕೆಯನ್ನು ಜನರಿಗೆ ಕೊಟ್ಟು, ಅದರ ಸಾಹಿತ್ಯ ಚರಿತ್ರೆ ನೀತಿ ಧರ್ಮ ಮುಂತಾದ ಅಂಶಗಳಿಗೆ ಸಹಜವಾದ ಬೆಳೆಸುವಲ್ಲಿ ಸಂಪೂರ್ಣವನ್ನುಂಟುಮಾಡಿ ಕೊಡಬಲ್ಲ ಯೋಗ್ಯತೆ ಇಂಗ್ಲಿಷ್ ಜನರಿಗೆ ಪ್ರೀತಿಪಾತ್ರವಾದ ಸ್ವಾತಂತ್ರ್ಯ ಸ್ವಾಧೀನತೆಗಳ ಉಚ್ಚ ಆದರ್ಶಗಳು ಅವರ ಭಾಷಾ ಸಾಹಿತ್ಯಗಳಲ್ಲಿ ತುಂಬಿ ತುಳುಕುತ್ತಿವೆ ಇಂಗ್ಲಿಷ ಸಾಹಿತ್ಯವನ್ನು ಓದುವುದರಿಂದಾಗುವ ಈ ಪರಿಣಾಮವು ರಾಜಕೀಯದಿಂದಲೂ ಆಗಲಾರದು ಎಂದು ಬ್ರಿಟಿಷ ರಾಜತಂತ್ರಜ್ಞರು ಹೇಳಿದರು ಇದನ್ನು ಇತರರೂ ಒಪ್ಪುತ್ತಾರೆ

“ಇಂಗ್ಲಿಷ್ ಭಾಷೆಗೆ ಈ ದೃಷ್ಟಿಯಿಂದ ಬೆಲೆ ಎಷ್ಟು? ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಇಂಡಿಯಾದೇಶವು ಭಾಗವಹಿಸಲೇ ಬೇಕಾಗುತ್ತದೆಯಷ್ಟೆ, ಆಗ ಇಂಗ್ಲಿಷಿನಿಂದ ಇಲ್ಲಿಯ ಜನರಿಗೆ ಉಂಟಾಗುವ ಪ್ರಯೋಜನ ಸಾಮರ್ಥ್ಯಗಳೇನು? ಎಂಬುದನ್ನು ಮುಖ್ಯವಾಗಿ ಗಮನಕ್ಕೆ ತರಲಿಚ್ಛಿಸುತ್ತೇನೆ ಈಗ ಜಗತ್ತಿನಲ್ಲಿ ಸುಮಾರು ೨೫೦,೦೦೦,೦೦೦ ಜನ ಇಂಗ್ಲಿಷ್ ಮಾತನಾಡುತ್ತಿದ್ದಾರೆಂದು ಇಟ್ಟುಕೊಂಡರೆ ಅವರಲ್ಲಿ ಸುಮಾರು ಐದನೆಯ ಒಂದು ಭಾಗ ಮಾತ್ರ ಬ್ರಿಟಿಷ್ ದ್ವೀಪ ನಿವಾಸಿಗಳು. ಉಳಿದವರೆಲ್ಲರೂ ಹೊರಗಿನವರು. ಏನೇ ಒಂದು ಅಸಮಾಧಾನದಿಂದ ಇಂಗ್ಲೀಷನ್ನು ಬಿಟ್ಟರೆ ನಿಮ್ಮ ಜನಕ್ಕೆ ಈ ೨೫೦,೦೦೦,೦೦೦ ಜನರೊಡನೆ ಭಾಷಾ ಸಂಬಂಧವನ್ನು ತಪ್ಪಿಸಿದಂತಾಗುತ್ತದೆ ಈ ಹೊರಗಿನ ಜನರು ಮುಂದುವರಿಯುತ್ತಿರುವವರು, ಉತ್ಸಾಹಿಗಳು, ಸಾಹಸಿಗರು ಇವರೇನು ಹಿಂದಿಯನ್ನು ಕಲಿಯುವ ಹಾಗಿಲ್ಲ. ಅವರಿಗೆ ಹಿಂದಿ ಬೇರೆ ಕೆಲಸವಿದೆ

“ಯಾರೋ ಕೆಲವರು ಬೇಕಾದರೆ ಇಂಗ್ಲಿಷಿನಲ್ಲಿ ವ್ಯವಹಾರ ಮಾಡಿಕೊಳ್ಳಲಿ ಬಹುಸಂಖ್ಯೆಯುಳ್ಳ ಇತರ ಜನರು ಹಿಂದೀಯನ್ನು ಉಪಯೋಗಿಸಲಿ ಎಂಬುದು ಶ್ರೀ ಚಿಂತಾಮಣಿಯವರ ಆಶಯ ಇದರಿಂದ ಮೇಲೆ ಕಂಡ ಭಾವಗಳ ವ್ಯಾಪನೆಯನ್ನು ಅನಾವಶ್ಯಕವಾಗಿ ಸಂಕೋಚಪಡಿಸಿದ ಹಾಗಾಗುತ್ತದೆ ಸದ್ಯಃಪ್ರಸಕ್ತವಾದ ಭಾವನೆಗಳನ್ನೂ ಆಶಯಗಳನ್ನೂ ಅಧಿಕ ಸಂಖ್ಯೆಯ ಜನರು ಚೆನ್ನಾಗಿ ಗ್ರಹಿಸುವವರಾಗಬೇಕು ಇಲ್ಲದಿದ್ದರೆ ಪ್ರಜೆಗಳಿಗಾಗಿ ಪ್ರಜೆಗಳಿಂದಲೇ ನಡೆಯುವ ಪ್ರಜಾ ಸರ್ಕಾರವು ಏರ್ಪಡುವುದು ಹೇಗೆ? ದೇಶಾಭಿಮಾನದಲ್ಲಿ ಪ್ರಯೋಜನ ಕಾರ್ಯಸಿದ್ಧಿಗಳು ಮುಳುಗಿಹೋಗಬಾರದು ಇಂಗ್ಲೀಷಾಗಲೀ ಹಿಂದೀಯಾಗಲೀ ದೇಶಭಾಷೆಗಳ ಸ್ಥಾನವನ್ನು ಆಕ್ರಮಿಸಬಾರದೆಂಬುದನ್ನು ಶ್ರೀ ಚಿಂತಾಮಣಿಗಳಂತೆ ನಾನೂ ಒಪ್ಪುತ್ತೇನೆ ಪ್ರಕೃತ ವಿಷಯ ಅದಲ್ಲ; ದ್ವಿತೀಯ ಭಾಷೆ ಯಾವುದಾಗಿರಬೇಕೆಂಬುದು, ಇಂಗ್ಲೀಷು ಅಂತರ್ರಾಷ್ಟ್ರೀಯ ವ್ಯವಹಾರಕ್ಕೆ ಎಷ್ಟು ಉಪಯುಕ್ತವಾದ ಸಾಧನವಾಗಿದೆ ಎಂಬುದನ್ನು ನೋಡಿ ನಾನು ಆ ದ್ವಿತೀಯ ಭಾಷೆ ಇಂಗ್ಲಿಷ್ ಆಗಲಿ ಎನ್ನುತ್ತೇನೆ.

“ಇಂಡಿಯಾದೇಶದಲ್ಲಿ ಈ ವಿಷಯ ವರ್ಷಗಳಿಂದ ಓದುಬರಹ ಬಲ್ಲವರ ಸಂಖ್ಯೆ ಒಂದಕ್ಕೆ ಎರಡರಷ್ಟಾಗಿದ್ದೆ, ಆದರೂ ಅದು ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೧೦ರ ಮೇಲಾಗಿಲ್ಲ. ಇದನ್ನು ಈ ಶತಮಾನದಲ್ಲೇ (ಎಂದರೆ ಇನ್ನು ೬೦ ವರ್ಷಗಳೊಳಗಾಗಿ) ಭರ್ತಿ, ಶೇಕಡಾ ಅರುವತ್ತರಲ್ಲಿರುವಷ್ಟು ಮಟ್ಟಿಗಾದರೂ ಹೆಚ್ಚಿಸಲಾಗುವುದಿಲ್ಲವೇ? ಇಂಗ್ಲೀಷನ್ನು ದ್ವಿತೀಯ ಭಾಷೆಯಾಗಿ ಇಟ್ಟುಕೊಳ್ಳಬೇಕೆನ್ನುವುದರಲ್ಲಿ ಈ ಉದ್ದೇಶವೂ ಇದೆ. ಅದರಿಂದ ವಿದ್ಯಾವಂತರು ಹೆಚ್ಚು ತಿಳುವಳಿಕೆಯುಳ್ಳವರಾಗಿ ಇತರ ದೇಶಗಳಲ್ಲಿ ಕಂಡುಬರುವ ಭಾವನೆಗಳನ್ನೂ ಬದಲಾವಣೆಗಳನ್ನೂ ಗ್ರಹಿಸಿ ಅವುಗಳಲ್ಲಿ ತಮ್ಮ ಜೀವನಕ್ಕೆ ಅನ್ವಯಿಸುವವನ್ನು ಅನುಸರಿಸುವಂತಾಗುತ್ತದೆ ಹಿಂದೀಯನ್ನು ದ್ವಿತೀಯ ಭಾಷೆಯಾಗಿ ಇಟ್ಟುಕೊಳ್ಳುವುದರಿಂದ ಸುಮಾರು ೧೦೦,೦೦೦,೦೦೦ ಜನರು ದ್ವಿತೀಯ ಭಾಷೆಯನ್ನು ಕಲಿಯುವ ಕಷ್ಟವನ್ನು ತಪ್ಪಿಸಿದಂತಾಗುವುದು. ಇದು ಒಂದು ಅನುಕೂಲ ನಿಜ. ಆದರೆ ಇದರಿಂದ ಮಿಕ್ಕ ೩೫೦,೦೦೦,೦೦೦ ಜನರಿಗೂ ವಿಶ್ವವಿಸ್ತಾರವಾದ ಭಾವನೆಗಳ, ಕಲ್ಪನೆಗಳ ಪ್ರಗತಿಗಳ ಸಮಷ್ಟಿತತ್ವವನ್ನು ಕೊಡುವ ಬೇರೆಯೊಂದು ದ್ವಿತೀಯ ಭಾಷೆಯನ್ನು ಕೊಡುವುದು ಒಳ್ಳೆಯದಲ್ಲವೇ?”

ಸರ್ ಮಾರ್ಟಿನ್ ಫಾರ್‌ಸ್ಟರ್‌ರವರು ಭರತಖಂಡದಲ್ಲಿರುವ ವೈಜ್ಞಾನಿಕರಲ್ಲಿ ಅತ್ಯುನ್ನತ ಪಂಕ್ತಿಗೆ ಸೇರಿದವರಾಗಿದ್ದಾರೆ ಅವರು ತಮ್ಮ ಜೀವಮಾನದ ಬಹು ಮುಖ್ಯ ಭಾಗವನ್ನು ಇಂಡಿಯಾದೇಶದಲ್ಲಿ ವಿಜ್ಞಾನಶಾಸ್ತ್ರ ಪ್ರಚಾರಕ್ಕೆ ವಿನಿಯೋಗಿಸಿ, ಈಗಲೂ ಮೈಸೂರು ವಿಶ್ವವಿದ್ಯಾನಿಲಯ ಮುಂತಾದ ವಿದ್ಯಾಸಂಸ್ಥೆಗಳ ಮೂಲಕ ವಿದ್ಯಾಕಾರ್ಯದಲ್ಲಿ ಆಸಕ್ತರಾಗಿದ್ದಾರೆ. ಇಂಥಾ ಮಹಾಶಯರು ಹೇಳತಕ್ಕ ಮಾತುಗಳಿಗೆ, ಗಮನಕೊಟ್ಟು ಆ ದೃಷ್ಟಿಯಿಂದಲೂ ತತ್ವವನ್ನು ವಿಚಾರಿಸುವುದು ಸರಿಯಾದ ನಿರ್ಣಯಕ್ಕೆ ತಕ್ಕ ಮಾರ್ಗವೆಂದು ಧಾರಾಳವಾಗಿ ಹೇಳಬಹುದು

ಕ ಸಾ ಪರಿಷತ್ಪತ್ರಿಕೆ

ಇಂಗ್ಲೆಂಡಿನಲ್ಲಿ ಪ್ರಚಂಡ ಗಾಳಿ.

ಇಂಗ್ಲೆಂಡಿನಲ್ಲಿ ತಾಸಿಗೆ ೧೧೦ ಮೈಲು ವೇಗವಿರುವ ಗಾಳಿಯು ಬೀಸಲಾರಂಭಿಸಿ ಅನೇಕ ಅನಾಹುತಗಳು ಉಂಟಾಗಿವೆ ಮೊನ್ನೆ ಬಂದ ನೆರೆಯು ಸ್ವಲ್ಪ ಇಳಿದಿತ್ತು ಆದರೆ ಈ ಗಾಳಿಯಿಂದ ನೆರೆಯು ಬಹಳವಾಗಿ ಏರಿತು. ೧೩ ಜನರು ಸತ್ತಿರುವರು ಅನೇಕ ಕಟ್ಟಡಗಳಿಗೆ ಹಾನಿ ಉಂಟಾಗಿವೆ ಮರಗಳು ನೆಲದಿಂದ ಕಿತ್ತುಹೋಗಿ ಹಾರಲಾರಂಭಿಸಿದವು. ಜನರು ಭಯಭೀತರಾಗಿ ಮನೆಯೊಳಗೆಯೇ ಕುಳಿತಿದ್ದಾರೆ

ಕನ್ನಡ ವಾಚನಾಲಯ.

ಮುಂಬಯಿಯಲ್ಲಿ ಕರ್ನಾಟಕ ನೂತನ ಸಂಗೀತ ಸಭೆಯ ಆಶ್ರಯದಿಂದ ಈ ವಾಚನಾಲಯದ ಉದ್ಘಾಟನ ಸಮಾರಂಭೋತ್ಸವವು ತಾ ೫-೧-೩೬ನೇ ರವಿವಾರ ಪೂರ್ವಾಹ್ನ ಗಂಟೆ ೯-೩೦ಕ್ಕೆ ಶ್ರೀಮಾನ್ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು

ಸನ್ಮಾನ್ಯ ಅಧ್ಯಕ್ಷರು ವಾಚನಾಲಯವನ್ನು ಕೈಯಿಂದ ತೆರೆದು ಅದಕ್ಕೆ “ಮುದ್ದಣ್ಣ ವಾಚನಾಲಯ” ಎಂಬ ನಾಮವನ್ನಿತ್ತರು ಮುಂಬಯಿಯಲ್ಲಿಯೂ ಕನ್ನಡ ವಾಚನಾಲಯದ ಆವಶ್ಯಕತೆಯ ಕುರಿತು ಭಾವಗರ್ಭಿತವಾದ ಭಾಷಣವನ್ನಿತ್ತು ಈ ವಾಚನಾಲಯವು ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹರಸಿದರು

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ

ಹೈಕೋರ್ಟು ಜಡ್ಜರುಗಳಿಂದಲೂ, ಸರ್ಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ



[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-

The Scientific Gold Bangles Co., Lt

Head Office:—43, Byragimatai Stree

Post Box No. 203, Madra

HIGHEST BONUS with LOWEST PREMIUM

BONUS

54

on Whole LIFE

45

on ENDOWMENT

Per Every Rs. 1000 Policy
for three years

For Valuation report Prospectus & other particulars write to

THE
NEPTUNE
ASSURANCE CO., LTD.
Head Office
109 Parsi Bazar Street Fort Bombay
Other Offices at
Calcutta Lahore Ahmedabad Nagpur Poona Karachi

Neptune's First Valuation
Smashes all Previous Records.

Mr G S. Marathey, M.A. A.I.A.

Company's Actuary writes

I have to congratulate you on the highly satisfactory result of the valuation which is your first valuation. The low expense ratio incurred by you is remarkable. There are three points worth noting. The second point is the absence of any fictitious or intangible assets like preliminary expenses, organisation expenses, etc. The third point is your decision to adopt in connection with the distribution of the divisable surplus, a ratio of 99 per cent to the Policyholders leaving only 1 per cent to the shareholders. This is a feature which is very remarkable for a proprietory office and seems an attempt to combine in one the advantages of a Mutual as well as Proprietory Office.

G S Marathey

The Company is now looking for Insurance Men of charecter and integrity for appointment as Agents Organisers and chief Agents and lucrative terms and with considerable scope of Advancement.

For particulars please write to
The Head Office or nearest Branch Office
Local Agent
H K Thingalaya Hoige Bazar MANGALORE.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿ ಕ್ಕ ಮ ಗ ಳೂ ರು .

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಾಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.

ಮುಂಬಾಯಿಯಿಂದ–ಪೂನಾ–ಬೆಳಗಾಂವ–ಧಾರವಾಡ–ಹುಬ್ಬಳ್ಳಿ–ಗೋವಾ ಇವೆಲ್ಲ ಕಡೆಗಳಿಂದ

ಮಂಗಳೂರಿಗೆ–ಪುತ್ತೂರು–ಉಡುಪಿ–ಕಾರ್ಕಳ–ಬೆಳ್ತಂಗಡಿ–ವೇಣೂರು–ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

ಶೀಘ್ರ ಪ್ರಯಾಣ ಅನುಕೂಲ ಸೌಕರ್ಯ ಅತ್ಯಲ್ಪ ಖರ್ಚು ಸುಂದರವಾದ ನೋಟ.

ಅಲ್ಲದೆ

ಮೈಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ–ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ–ಕೈಗಾರಿಕೆಯ ಕೇಂದ್ರವಾದ ಭದ್ರಾವತಿ–ಶಿಲಾಶಿಲ್ಪದ ಬೇಲೂರು, ಹಳೆಬೀಡು–ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು–

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ.

Chikmagalur Public Conveyance Motor Service,

CHIKMAGALUR.

ಎಸೆಂಬ್ಲಿ ಸದಸ್ಯರ ಮೇಲೆ ಬಹಿಷ್ಕಾರ ರಾಯಸ.

ಮಹಾತ್ಮಾಜಿಯವರ ಆರೋಗ್ಯವು ಉತ್ತಮಗೊಳ್ಳುತ್ತಿದೆ. **ಲಕ್ನೋ ನಗರದಲ್ಲಿ ಕಾಂಗ್ರೆಸ್ಸು ಸಿದ್ಧತೆಗಳು.**

ಒಗಡನ್ ಪ್ರಾಂತ್ಯದ ಯುದ್ಧ ವಾರ್ತೆಗಳು

ಶಿಶುಮರಣಗಳ ಕಾರಣಗಳು.

ಮದ್ರಾಸು ಸರಕಾರದವರು ನಮ್ಮ ಆದಿಪತ್ಯದಲ್ಲಿ ಆಗುವ ಶಿಶುಮರಣಗಳ ಕಾರಣವನ್ನು ತಿಳಿಯಲು ಮತ್ತು ಅವುಗಳನ್ನು ಕಡಿಮೆಮಾಡಲು ಶೋಧನಾ ಕಾರ್ಯವನ್ನು ನಡೆಯಿಸಲು ಪ್ರಾಂತ್ಯದ ಕೆಲವು ನಗರಸಭೆಗಳಿಗೆ ಸೂಚನೆಗಳನ್ನು ಕಳುಹಿಸಿಕೊಟ್ಟಿರುವರು.

ಶಾಸನಸಭೆಯ ಪ್ರಶ್ನಾಸಮಯ.

ಈ ಭಾರಿಯ ಅಸೆಂಬ್ಲಿಯಲ್ಲಿ ಕೇಳಲ್ಪಡಲು ಸಾಧಾರಣ ೧೫೦೦ಕ್ಕೆ ಮಿಕ್ಕಿದ ಪ್ರಶ್ನೆಗಳು ಬಂದಿರುತ್ತವೆ. ಇನ್ನೂ ಅನೇಕ ಪ್ರಶ್ನೆಗಳು ಈಗಲೂ ಬರುತ್ತಿವೆ. ದೇಶದ ಹಿತವಿಚಾರದ ಮತ್ತು ಈಗ ದೇಶವನ್ನು ಪೀಡಿಸುತ್ತಿರುವ ಅನೇಕ ಸಂಕಷ್ಟಗಳ ನಿವಾರಣೆಯ ಕುರಿತು ಇವುಗಳಲ್ಲಿ ತುಂಬಾ ಪ್ರಶ್ನೆಗಳಿವೆ. ಆದರೆ ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಕ್ಕುವುದು ತುಂಬಾ ಸಂದೇಹಕರ.

ಲಕ್ನೋನಗರದಲ್ಲಿ ಕಾಂಗ್ರೆಸ್ ಸಿದ್ಧತೆಗಳು

ಕಾಂಗ್ರೆಸ್ ಅಧಿವೇಶನವು ಜರಗಿಸಲು ಗೊತ್ತುಮಾಡಿದ ಸ್ಥಳವು ಈಗ ತಯಾರಾಗುತ್ತಿದೆ. ಸ್ವಾಗತಾ ಸಮಿತಿಯವರ ಆಫೀಸು ಅಲ್ಲಿಗೆ ಸಮೀಪವಿರುವ ಒಂದು ಬಂಗ್ಲೆಗೆ ಒಯ್ಯಲಾಗಿದೆ. ಕೆಲಸವು ಸಂಪೂರ್ಣವಾದ ನಂತರ ಈ ಕಾಂಗ್ರೆಸ್ ನಗರದ ವಿಸ್ತೀರ್ಣವು ಒಂದು ಚದರ ಮೈಲಾಗುವುದು. ಇದರಲ್ಲಿ ೫೦,೦೦೦ ಜನರಿಗೆ ನೆರೆಯಲು ಸಾಧ್ಯವಾಗುವುದು. ಚಪ್ಪರವು ಮೊಟ್ಟೆಯ ಆಕೃತಿಯಲ್ಲಿ ಕಟ್ಟಲ್ಪಡುವುದು.

ಇಟೇಲಿಯನ ಸೈನಿಕರು ತಮ್ಮ ಉದ್ಯೋಗವನ್ನು ತ್ಯಜಿಸಿ—

ಪಲಾಯನಮಾಡುತ್ತಿದ್ದಾರೆಂದು ವಾರ್ತೆ ಬಂದಿರುತ್ತದೆ. ಇಟೇಲಿಯು ಆಫ್ರಿಕಾದಲ್ಲಿ ಯುದ್ಧಪ್ರಾರಂಭ ಮಾಡಿದಂದಿನಿಂದ ಅನೇಕರು ಇಟೇಲಿಯನ್ನು ಬಿಟ್ಟು ಹೊರಗೆ ಓಡಲು ಪ್ರಾರಂಭಮಾಡಿರುವರು. ಒಂದು ಕಡೆಯಲ್ಲಿ ೩೦೦೦ ಇಟೇಲಿಯನ ಸೈನಿಕರು ತಮ್ಮ ಸ್ಥಾನವನ್ನು ತ್ಯಜಿಸಿ ದೇಶವನ್ನು ಬಿಟ್ಟಿರುವರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಮಂಡಳ, ಧಾರವಾಡ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವಾರ್ಷಿಕ ಸಭೆಯು ಇದೇ ಜನವರಿ ತಾ. ೨೫ರಲ್ಲಿ ಮಧ್ಯಾಹ್ನ ಗಂಟೆ ೩ಕ್ಕೆ ಕೆಳಗೆ ನಮೂದಿಸಿದ ವಿಷಯಗಳನ್ನು ಚರ್ಚಿಸುವರೆ ಧಾರವಾಡದಲ್ಲಿ ಸೇರುವುದು.

೧. ಗತವರ್ಷದ ವರದಿ ಮತ್ತು ಲೆಖ್ಖಪತ್ರಗಳು. ~~೨. ಬರುವ ವರ್ಷದ ಖರ್ಚಿನ ಪಟ್ಟಿಯನ್ನು ಗೊತ್ತು~~ ಪಡಿಸುವುದು. ೩. ಕಮಿಟಿ ಮೆಂಬರರ ಚುನಾವಣೆ. ೪. ಕೌನ್ಸಿಲು ಮೆಂಬರರ ಚುನಾವಣೆ. ೫. ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ೩ ಮಂದಿ ಪ್ರತಿನಿಧಿಗಳನ್ನು ಆರಿಸುವುದು. ೬. ಲೆಖ್ಖಾಚಾರದ ಸಂಬಂಧಪಟ್ಟ ಲೆಖ್ಖಪರಿಶೋಧಕನನ್ನು ನೇಮಿಸುವುದು. ೭. ಅಗತ್ಯವೆಂದು ಕಂಡುಬಂದಲ್ಲಿ ಇನ್ಸಪೆಕ್ಟರುಗಳ ಚುನಾವಣೆ. ೮. ಇನ್ನು ಸದಸ್ಯರಿಗೆ ತೋರಬಂದ ವಿಷಯಗಳು. (ಅಧ್ಯಕ್ಷರ ಸಮ್ಮತಿಯಿರಬೇಕು).

ಆರ್. ಎಸ್. ಹುಕ್ಕೇರೀಕರ್,

ಜನರಲ್ ಸೆಕ್ರೆಟರಿ.

ವಿ. ಸೂ.—ಅಖಿಲ ಭಾರತ ಕರ್ನಾಟಕ ಕಾಂಗ್ರೆಸ್ ಕಮಿಟಿಗೆ ಪ್ರತಿನಿಧಿಗಳಾಗಿ ನಿಲ್ಲಲು ಉತ್ಸಾಹವುಳ್ಳವರು ತಮ್ಮ ತಮ್ಮ ಉಮೇದ್ವಾರಿಯನ್ನು ನಮೂದಿಸುವ ಪತ್ರಗಳನ್ನು ಜನವರಿ ತಾ. ೨೦ರ ಒಳಗೆ ಜನರಲ್ ಸೆಕ್ರೆಟರಿಯವರಿಗೆ ಮುಟ್ಟಿಸಬೇಕು. ಆ ಪತ್ರದ ವಿಷಯವು ಈ ರೀತಿಯಾಗಿರಬೇಕು.

(ಹೆಸರು) ....ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಪ್ರತಿನಿಧಿಯಾಗಿ ಹೋಗಲು ಉತ್ಸುಕನಾಗಿರುವೆನು. ನನ್ನನ್ನು......................ದಿಂದ ಲಕ್ನೋ ಕಾಂಗ್ರೆಸ್ಸಿಗೆ ಪ್ರತಿನಿಧಿಯಾಗಿ ಆರಿಸಿರುವರು. ನನ್ನಿಂದ ಪ್ರ. ಕ. ಕಾಂಗ್ರೆಸ್ಸಿಗೂ ಅಥವಾ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೂ ಹಣದ ಬೇವಾಕಿಯ ವಿಷಯ ಏನೂ ಸಂಬಂಧವಿಲ್ಲ.

ಪತ್ಯೂರು ಕೊಲೆಯ ವ್ಯವಹರಣೆ.

ಬಂಗಾಳದ ಪತ್ಯೂರು ರಾಜಕುಟುಂಬದ ಬಿನೊಯ ಪಾಂಡೆ ಎಂಬವನು ಕಲ್ಕತ್ತದ ಡಾಕ್ಟರ್ ತಾರಾನಾಥ ಭಟ್ಟಾಚಾರ್ಯಜಿಯವರ ಸಹಾಯದಿಂದ ಕುಟುಂಬದ ಆಸ್ತಿಗೆ ಸರಿಯಾದ ಹಕ್ಕುಳ್ಳ ತನ್ನ ತಮ್ಮನಾದ ಅಮರೇಂದ್ರ ಪಾಂಡ್ಯ ಗೆ ಪ್ಲೇಗಿನ ಕ್ರಿಮಿಗಳನ್ನು ಕಲ್ಕತ್ತದ ಹೌರಾ ರೈಲ್ವೆ ಸ್ಟೇಷನದಲ್ಲಿ, ಜನರ ಗಲಭೆಯೊಳಗೆ ಅವನಲ್ಲಿ ಸೇರಿಸಿ, ಸ್ವಲ್ಪ ದಿವಸದ ನಂತರ ಅವನು ಮೃತನಾಗಿ, ಹಲವು ಸಮಯದಿಂದ ನಡೆಯುವ ಈ ವ್ಯವಹರಣೆಯು ಕೆಲವು ದಿವಸಗಳ ಹಿಂದೆ ಇತ್ಯರ್ಥವಾಗಿ, ಇಬ್ಬರಿಗೂ ಫಾಶೀ ಶಿಕ್ಷೆಯು ವಿಧಿಸಲಾಗಿತ್ತು. ಆದರೆ ಅಪರಾಧಿಗಳು ಅಪೀಲುಮಾಡಲು ಈ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಬದಲಾವಣೆ ಮಾಡಿರುತ್ತಾರೆ.

ಜರ್ಮನಿಯಲ್ಲಿ ನಿರುದ್ಯೋಗಿಗಳ ಸಂಖ್ಯೆಯು—

ಸ್ವಲ್ಪ ವೃದ್ಧಿಯಾಗಿರುತ್ತದೆ. ಡಿಸೆಂಬರದಲ್ಲಿ ಅಲ್ಲಿ ೨೫,೦೦,೦೦೦ ನಿರುದ್ಯೋಗಿಗಳಿದ್ದರು. ಕಳೆದ ನವಂಬರಗಿಂತ ಇದು ೫೦,೦೦೦ ಹೆಚ್ಚಾಗಿರುತ್ತದೆ.

ಕಾಂಗ್ರೆಸ್ಸಿನ ಸಮತಾವಾದ ಪಕ್ಷ.

ಕಾಂಗ್ರೆಸ್ ಸಮತಾವಾದಿಗಳ ಮುಖಂಡರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು, ಕಾಂಗ್ರೆಸ್ ಪೂರ್ಣ ಸ್ವತಂತ್ರವನ್ನು ಪಡೆಯುವರೆ, ತನ್ನ ಪಕ್ಷದವರು ಹೇಗೆ ವರ್ತಿಸಬೇಕೆಂಬುದರ ವಿಚಾರವಾಗಿ ಮದ್ರಾಸಿನಲ್ಲಿ ಭಾಷಣ ಮಾಡಿದರು. ಸಮತಾವಾದದ ಕುರಿತು ಮದ್ರಾಸಿನಲ್ಲಿ ಇದು ಪ್ರಥಮ ಭಾಷಣವಾಗಿರುತ್ತದೆ. ಸಮತಾವಾದದಿಂದ ರೈತರ ಗೋಳು, ನಿರುದ್ಯೋಗ, ಇತರ ಹಲವು ಸಾಂಪತ್ತಿಕ ದುರ್ದಶೆಗಳನ್ನು ಹೇಗೆ ನಾಶಮಾಡಬಹುದೆಂದು ಇವರು ಭಾಷಣದಲ್ಲಿ ಸೂಚಿಸಿದರು.

ಮಹಾತ್ಮಾಜೀಯವರ ಆರೋಗ್ಯ.

ಕಳೆದ ವಾರ ಅತಿರೇಕವಾಗಿ ಹೆಚ್ಚಿದ ಗಾಂಧಿಯವರ ರಕ್ತವೇಗವು ಬಹಳ ಕಡಿಮೆಯಾಗಿರುತ್ತದೆ. ಹಾಳಾದ ಕೆಲವು ಹಲ್ಲುಗಳನ್ನು ಅವರ ಬಾಯಿಯಿಂದ ತೆಗೆಯಲಾದವು. ಈಗ ವನಸ್ಪತಿ ಆಹಾರವನ್ನು ಸೇವಿಸುತ್ತಿರುವರು. ಹಲವು ಪ್ರಸಿದ್ಧ ವೈದ್ಯರು ಮಹಾತ್ಮರ ದೇಹ ಪರೀಕ್ಷೆಯನ್ನು ಮಾಡಿ, ಇವರು ಇನ್ನೂ ಅಪಾಯದ ಹೊರಗಿರುವರೆಂದು ಅಭಿಪ್ರಾಯಪಟ್ಟಿರುವರು. ಮಹಾತ್ಮಾಜಿಯವರು ಈಗ ಸಂಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಿದ್ದಾರೆ.

ಭಾರತೀಯ ಸಂಗೀತವನ್ನು ಅಭ್ಯಾಸಿಸಲು

ಜಪಾನಿನ ಪ್ರಸಿದ್ಧ ಗಾಯಕರಾದ ಶ್ರೀ ಟಿ. ಮಾಸು ಎಂಬವರು ಕವಿ ರವೀಂದ್ರರ ವಿಶ್ವಭಾರತಿಯನ್ನು ಸೇರಿರುವರು.

ಅಫಘಾನಿಸ್ಥಾನದ ಆರು ಮಂದಿ ವಿದ್ಯಾರ್ಥಿಗಳು—

ಜಪಾನಿಗೆ ತೆರಳಲು ಮುಂಬಾಯಿಗೆ ಬಂದಿರುತ್ತಾರೆ. ಅಲ್ಲಿನ ಸರಕಾರವು ಈ ವಿದ್ಯಾರ್ಥಿಗಳನ್ನು, ಅಂತರಿಕ್ಷದ ನವೀನ ಸಂಗ್ರಾಮವಿದ್ಯೆಯಲ್ಲಿ ತರಬೇತು ಹೊಂದುದಕ್ಕೆ ಕಳುಹಿಸಿರುವರೆಂದು ತಿಳಿಯಬರುತ್ತದೆ.

ಪಾಶ್ಚಾತ್ಯ ಅಪರಾಧಿ.

ಲಾಹೋರಿನಲ್ಲಿ, ಜೆ. ರಸ್ಸೆಲ್ ಗ್ರೇ ಎಂಬ ಮಧ್ಯವಯಸ್ಸಿನ ಓರ್ವ ಅಪರಾಧಿಗೆ, ಒಂದು ಸೈಕಲನ್ನು ಕಳವುಮಾಡಿದುದಕ್ಕಾಗಿ ಐದು ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು. ಈ ಅಪರಾಧಿಯು ಇದಕ್ಕಿಂತ ಮುಂಚೆ ಅನೇಕ ಭಾರಿ ಶಿಕ್ಷೆ ಅನುಭವಿಸಿದ್ದಾನೆಂದೂ, ಸಾಧಾರಣ ೧೪ ವರ್ಷಗಳಲ್ಲಿ ಜೈಲಿನಲ್ಲಿದ್ದನೆಂದೂ ತಿಳಿದುಬರುತ್ತದೆ. ಈ ತರದ ಜನರು ಸಮಾಜಕ್ಕೆ ಹಾನಿಕರವಾದವರೆಂದು ಅಭಿಪ್ರಾಯಪಟ್ಟು ಲಾಹೋರಿನ ಜಡ್ಜರಾದ ಮಿ. ಶೆರ್ರಿ ಎಂಬವರು ಇವನಿಗೆ ೫ ವರ್ಷಗಳ ಕಠಿಣ ಸಜೆಯನ್ನು ವಿಧಿಸಿದರು.

ಹಬಸಿಚಕ್ರವರ್ತಿಯರ ಅಳಿಯನ ಜಯ.

ದಕ್ಷಿಣ ರಣರಂಗದಲ್ಲಿ ಹಬಸಿಚಕ್ರವರ್ತಿಯರ ಅಳಿಯನ ಅಧಿಕಾರದಲ್ಲಿರುವ ಸೈನ್ಯಮಂಡಳವು ಅಲ್ಲಿನ ಬೆಟ್ಟಪ್ರಾಂತ್ಯದಲ್ಲಿರುವ ಇಟೇಲಿಯ ಸೇನಾ ಸಮೂಹದೊಡನೆ ಯುದ್ಧ ನಡೆಯಿಸಿ, ಅವರನ್ನು ಸಂಪೂರ್ಣ ಸೋಲಿಸಿರುವುದು. ಗುಡ್ಡಗಳಲ್ಲಿ ಅವಿತಿದ್ದು ಆಶ್ಚರ್ಯಕರವಾದ ರೀತಿಯಲ್ಲಿ ಇವರು ಇಟೇಲಿಯನರ ಮೇಲೆ ದಾಳಿಸಿದರು. ಇಟೇಲಿಯರ ಅನೇಕ ಸೋಮಾಲಿ ಸೈನಿಕರು ಮಡಿದಿರುವರು. ಇಟೇಲಿಯನರು ೬ ಟೆಂಕುಗಳು, ೯ ಮೆಶಿನ್ ಗನ್‌ಗಳು, ಇನ್ನೂ ಕೆಲವು ಉಪಕರಣಗಳೂ ಇವರ ವಶವಾಗಿರುತ್ತವೆ. ಚಕ್ರವರ್ತಿಯವರ ಅಳಿಯನ ಪ್ರಾಯ ಬರೇ ೩೫ ವರ್ಷ. ಸಾಧಾರಣ ೨೦,೦೦೦ ಮಂದಿ ಸೈನಿಕರಿಂದೊಡಗೂಡಿದ ಸೈನ್ಯದಂಡವು ಇವರ ಅಧಿಕಾರದಲ್ಲಿದೆ.

ಎಸೆಂಬ್ಲಿ ಸದಸ್ಯರ ಮೇಲೆ ಬಹಿಷ್ಕಾರ ರಾಯಸ.

ಕಲ್ಕತ್ತಾದ ಬರದ್ವಾನ್ ಡಿವಿಜನಿನ ಅಸೆಂಬ್ಲಿ ಸದಸ್ಯರಾದ ಶ್ರೀ ಅಮರೇಂದ್ರನಾಥ ಚಟರ್ಜಿಯವರಿಗೆ ಅವರು ಯಾವತ್ತೂ ಸಾರ್ವಜನಿಕ ಭಾಷಣಗಳನ್ನು ಮಾಡಬಾರದಾಗಿ, ಬಂಗಾಳ ಸರಕಾರದ ಪಬ್ಲಿಕ್ ಸೆಕ್ಯುರಿಟಿ ಕ್ರಮಗಳನ್ನನುಸರಿಸಿ ಮಿಡ್ನಾಪುರದ ಜಿಲ್ಲಾ ಕಲೆಕ್ಟರರು ಆಜ್ಞೆಮಾಡಿರುವರು.

ಜಪಾನೂ ಅಂತರರಾಷ್ಟ್ರೀಯ ನೌಕಾ ಪರಿಷತ್ತೂ.

ಈಗ ಲಂಡನಿನಲ್ಲಿ ನಡೆಯುತ್ತಿರುವ ನೌಕಾ ಪರಿಷತ್ತಿನಲ್ಲಿ ಕೆಲವು ಬೇಧಗಳು ಬರಲು, ಜಪಾನು ಪರಿಷತ್ತಿನಿಂದ ಹೊರಗೆ ಹೋಗುವುದೆಂದು ವಾರ್ತೆಯು ಬಂದಿತ್ತು. ಜಪಾನಿನ ರಾಜಧಾನಿಯಲ್ಲಿ ಅವಸರದ ಸಭೆಗಳು ಜರಗಿ, ಅವರು ಪರಿಷತ್ತನ್ನು ತ್ಯಜಿಸಬಾರದಾಗಿಯೂ, ಜಪಾನೀಯ ನೌಕಾ ರಚನೆಯನ್ನು ಹೆಚ್ಚಿಸುವ ಸೂತ್ರವನ್ನೂ ಮತ್ತು ಅವರ ಕೆಲವು ಕೋರಿಕೆಗಳನ್ನೂ ಇತರ ಜನಾಂಗಗಳು ಸ್ವೀಕರಿಸುವಂತೆ ಪ್ರಯತ್ನನಡೆಯಿಸಬೇಕಾಗಿ ತಮ್ಮ ಪ್ರತಿನಿಧಿಗಳಿಗೆ ತಂತಿಕೊಟ್ಟಿರುವರು.

ಹಿಂದೂಸ್ಥಾನಿ ವಿದ್ಯಾಯತನದ ವಾರ್ಷಿಕೋತ್ಸವ.

ಸಂಯುಕ್ತ ಪ್ರಾಂತ್ಯಗಳ ಹಿಂದೂಸ್ಥಾನೀ ವಿದ್ಯಾಯತನದ ವಾರ್ಷಿಕೋತ್ಸವವು ಶ್ರೀ ಪಟ್ಟಾಭಿನಂದ ಸಿನ್ಹರ ಅಧ್ಯಕ್ಷತನದಲ್ಲಿ ಅಲ್ಲಹಾಬಾದಿನಲ್ಲಿ ಜರಗಿತು. ಶ್ರೀ ಸಪ್ರೂಗಳವರು ಹಿಂದೂದೇಶಕ್ಕೆ ಒಂದು ರಾಷ್ಟ್ರೀಯ ಭಾಷೆಯ ಅಗತ್ಯದ ಕುರಿತು ಭಾಷಣಮಾಡಿದರು. ಅನೇಕ ಕವಿಗಳ ಕಾವ್ಯಗಳು ಈ ಸಮಾರಂಭದಲ್ಲಿ ಓದಲಾದುವು. ಹಿಂದೂಸ್ಥಾನೀ ವಿದ್ಯಾಯತನದ ಸಂಕ್ಷಿಪ್ತ ವರದಿಯು ಅಧ್ಯಕ್ಷರಿಂದ ಕೊಡಲಾಯಿತು. ಈ ಸಮಸ್ಥೆಯು ಬಹಳವಾಗಿ ಪ್ರಗತಿಹೊಂದಿರುತ್ತದೆಂದು ಇವರ ಭಾಷಣದಿಂದ ವ್ಯಕ್ತವಾಯಿತು. ಅನೇಕ ನವೀನ ಗ್ರಂಥಗಳೂ, ಅನುವಾದ ಇತ್ಯಾದಿಗಳು ಹಿಂದೂಸ್ಥಾನಿಯಲ್ಲಿ ನವೀನವಾಗಿ ರೂಪುಹೊಂದಿದ್ದಾವೆ. ಹಿಂದೂಸ್ಥಾನಿಯನ್ನು ಭರತಖಂಡದ ಮುಖ್ಯ ಭಾಷೆಯನ್ನಾಗಿ ಮಾಡಬೇಕೆಂದು ಸೂಚನೆಗಳು ಬಂದುವು.

ಒಗಡನ್ನ ಪ್ರಾಂತ್ಯದ ಯುದ್ಧವಾರ್ತೆಗಳು.

ಕೆಲವು ಸಣ್ಣ ಸಣ್ಣ ಕದನಗಳ ಹೊರತು, ಈ ಪ್ರಾಂತ್ಯದಲ್ಲಿ ಯಾವತ್ತೂ ವಿಶೇಷ ಯುದ್ಧಕಾರ್ಯಗಳು ನಡೆಯಲಿಲ್ಲ. ಇಟೇಲಿಯರ ವಿಮಾನಗಳು ಹಬಸಿ ಸೈನ್ಯದ ಪಂಡಿನ ಮೇಲೆ ಬೋಂಬಿನ ಉಪಯೋಗವನ್ನು ಮಾಡುತ್ತಿದ್ದಾರೆ. ಆದರೆ ಅವುಗಳಿಂದ ಅಷ್ಟು ಅನಾಹುತಗಳು ಉಂಟಾಗಲಿಲ್ಲ. ಇಕ್ಕಡೆಯವರಿಗೂ ವಿಶೇಷ ಜಯಗಳೇನೂ ದೊರಗಲಿಲ್ಲ. ಯಥಿಯೋಪಿಯಾದ ಯುದ್ಧದ ಸ್ಥಿತಿಯು ಉತ್ತಮವಾಗುತ್ತಾ ಬರುತ್ತಿದೆ. ಜೀವದಾತೆಯಿಂದ ಪಲಾಯನಮಾಡಿದ ವರ್ತಕರು ಇತ್ಯಾದಿ ಜನರು ಪುನಹ ಅಡಿಸ್‌ಅಬಾಬವನ್ನು ಸೇರುತ್ತಿದ್ದಾರೆ. ವ್ಯಾಪಾರವ್ಯವಹಾರವು ಮುಂಚಿನ ಹಾಗೆಯೆ ನಡೆಯುತ್ತಿದೆ.

ಚಕ್ರಬಂಧ ಬಗೆಹರಿವು.

ಮಧ್ಯಪ್ರಾಂತ್ಯಗಳ ನ್ಯಾಯವಿಧಾಯಕ ಸಭೆಯಲ್ಲಿ, ಚಕ್ರಬಂಧ ಬಗೆಯುಗಳು ವಿದ್ಯಾವಂತರ ಗುಣಗಳನ್ನು ವಿಶೇಷವಾದ ರೀತಿಯಲ್ಲಿ ಕೆಡಿಸುತ್ತಿವೆಯೆಂದೂ ಅವುಗಳನ್ನು ಸಂಪೂರ್ಣವಾಗಿ ನಿಲ್ಲಿಸಲು ಒಂದು ಕ್ರಮವನ್ನು ಜ್ಯಾರಿಮಾಡುವ ಒಂದು ಮಸೂದೆಯನ್ನು ಓರ್ವ ಸದಸ್ಯರು ತಂದಿರುವರು.

ಸಿಲೋನಿನ ಮಂತ್ರಿವರ್ಯರ ಪುತ್ರನ ಮೇಲೆ ಮೊಕದ್ದಮೆ.

ವೆರ್ನೋನ ಅಲೆಕ್ಸಾಂಡರ್ ಎಂಬವನಿಗೆ ಪೋಲೀಸ ಸುಪರಿಂಟೆಂಡೆಂಟರ ವೇಶದಲ್ಲಿ ಓರ್ವ ಪಠಾಣನಿಂದ ೩೦೦ ರೂಪಾಯಿಗಳನ್ನು ದೋಚಮಾಡಿ ಪಡೆಯುವುದರಲ್ಲಿ ಭಾಗಿಯಾಗಿದ್ದನೆಂಬ ಆರೋಪದ ಮೇಲೆ ಸಿಲೋನಿನ ಸ್ಥಳೀಕ ಸಂಸ್ಥೆಗಳ ಮಂತ್ರಿಯವರ ಪುತ್ರನ ಮೇಲೆ ಮೊಕದ್ದಮೆ ನಡೆಯುತ್ತಿದೆ.

ಉಡುಪಿ.

ಕೆನರಾ ಇಂಡಸ್ಟ್ರಿಯಲ್ ಮತ್ತು ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್‌ನ ಅಧ್ಯಕ್ಷರೂ, ಇತ್ತೀಚೆಗೆ ಇಲ್ಲಿ ಸ್ಥಾಪಿತವಾಗಿರುವ ದಿ ಕೆನರಾ ಮ್ಯೂಚುವಲ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನ ಸ್ಥಾಪಕರೂ ಆಗಿರುವ ಡಾಕ್ಟರ್ ಟಿ. ಮಾಧವ ಪೈ, ಎಂ. ಬಿ. ಬಿ. ಎಸ್. ಇವರು ಸ್ವಂತ ಖರ್ಚಿನಿಂದ ಉಡುಪಿಗೆ ೩ ಮೈಲು ದೂರದಲ್ಲಿನ ಮಣಿಪಾಲಬೆಟ್ಟ ತಪ್ಪಲಲ್ಲಿ ಭವ್ಯವಾದ ಅತ್ಯಾಧುನಿಕ ರೀತಿಯಲ್ಲಿ ಸುಸಜ್ಜಿತವಾದ ಆರೋಗ್ಯಮಂದಿರ (ಸೆನಟೋರಿಯಂ)ದ ಪ್ರವೇಶೋತ್ಸವ ಸಮಾರಂಭ ಹಾಗೂ ಸದರಿ ಆರೋಗ್ಯಮಂದಿರವನ್ನು ಶಾಶ್ವತವಾಗಿ ನಡೆಯುವಂತೆ ಧನದ ಏರ್ಪಾಟಿನ ಮುಕ್ತಿಪತ್ರ ವ್ಯವಸ್ಥಾಪತ್ರ ಮತ್ತು ದಾನಪತ್ರ ಮಾಡೋಣಕಾರ್ಯಗಳು ಇದೇ ತಾ. ೧೫ಕ್ಕೆ ಕ್ರಮದಂತೆ ಶ್ರೀ ರಜತಪುರ ಶ್ರೀ ಕೃಷ್ಣ ಪೂಜಾ ಕರ್ತೆಯನ್ನು ವಹಿಸಲಿರುವ ಶ್ರೀ ಪೇಜಾವರ ಮಠಾಧೀಶರಾದ ಶ್ರೀಮದ್ವಿಶ್ವಮಾನ್ಯ ಶ್ರೀಪಾದಂಗಳವರ ಪವಿತ್ರ ಹಸ್ತಗಳಿಂದಲೂ ಶ್ರೀ ಸನ್ನಿಧಿಯಲ್ಲೂ ಬಹು ವಿಜೃಂಭಣೆಯಿಂದ ಜರಗಿದುವು.

ತಾ. ೧೧ಕ್ಕೆ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಗುರುವರ್ಯರಾದ ಶ್ರೀ ಕಾಶೀಮಠಾಧೀಶ ಶ್ರೀ ಸುಕೃತೀಂದ್ರ ಶ್ರೀಪಾದಂಗಳವರು ಉಡುಪಿಗೆ ಚಿತ್ತೈಸುವವರಾದರು. ಇಲ್ಲಿನ ಸಮಾಜವೃಂದದವರಿಂದ ಆಹ್ವಾನಿತರಾಗಿದ್ದು, ಶಿಷ್ಯವರ್ಗದವರಲ್ಲಿ ವಾತ್ಸಲ್ಯಯುಕ್ತರಾಗಿ ಆಹ್ವಾನ ಸ್ವೀಕಾರಮಾಡಿ, ಮೂಲ್ಕಿಗೆ ಚಿತ್ತೈಸಿದ್ದ ಶ್ರೀಯವರನ್ನು ಬಿರುದಾವಳಿ ವಾದ್ಯಘೋಷ ಮೆರವಣಿಗೆಯಿಂದ ವಿಶೇಷ ರೀತಿಯ ಉತ್ಸಾಹಸಂಭ್ರಮದಿಂದ ಸ್ವಾಗತೀಕರಿಸಲಾಗಿ ಸ್ಥಳೀಯ ಶ್ರೀ ಲಕ್ಷ್ಮೀ ವೆಂಕಟ್ರಮಣ ದೇವಳದಲ್ಲಿ ಇಳಿದಿದ್ದಾರೆ. ಶಿಷ್ಯವೃಂದದವರಿಂದ ಪಾದಪೂಜೆ ಭಿಕ್ಷಸತ್ಕಾರಗಳಿಂದ ಮನ್ನಿತರಾಗಿ ಇನ್ನೂ ೧೦-೧೨ ದಿನಗಳು ಇಲ್ಲಿ ಉಳಕೊಳ್ಳುವರಾಗಿ ತಿಳಿದು ಬರುತ್ತದೆ.

ತಾ. ೧೪ಕ್ಕೆ ಕರ್ನಾಟಕ ಹರಿಸೇವಾ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರೂ, ದಕ್ಷಿಣ ಭಾರತಕ್ಕೆ ಸದರಿ ಸಂಘದ ಮೇಲ್ವಿಚಾರಕರಾದ ಶ್ರೀ ಕೋದಣ್ಡ ಭಂಡಾರಿಗಳೂ ಮಡಿಕೇರಿಯಿಂದ ಕಾರ್ಯಕ್ಕಾಗಿ ಬಂದಿದ್ದವರು ಉಡುಪಿ ಕ್ಷೇತ್ರಕ್ಕೆ ಚಿತ್ತೈಸಿದರು. ಸ್ಥಳೀಯ ಬೋ. ಹೈಸ್ಕೂಲಿನಲ್ಲಿ ಅಭ್ಯಾಸಿಸುತ್ತಿರುವ ಹರಿಜನ ವಿದ್ಯಾರ್ಥಿಗಳಿಗೆ (೨೧ ಮಂದಿ ಬಾಲಕಬಾಲಿಕಿಯರು) ಏರ್ಪಡಿಸಲಾಗಿರುವ ಮಧ್ಯಾಹ್ನದ ಊಟದ ವ್ಯವಸ್ಥೆ, ವಿದ್ಯಾರ್ಥಿಗಳ ಪುಸ್ತಕಪಾಟಿಕ್ಕೆ, ಉಡಿಗೆಗಳ ಪೂರವಣಿಗಳ ವಿಚಾರಗಳನ್ನು ಸಂಪೂರ್ಣ ವಿವೇಚಿಸಿ ತಿಳಿಯುವವರಾದರು.

ಸದ್ಯ ಜರಗುತ್ತಲಿರುವ ಶ್ರೀ ಕೃಷ್ಣಸನ್ನಿಧಿಯ ಉತ್ಸವಾದಿ ಪರ್ಯಾಯ ಮಹೋತ್ಸವಗಳ ಸಂಬಂಧವಾದ ಆರೋಗ್ಯ ವಿಭಾಗಗಳ ವ್ಯವಸ್ಥೆ ಮೇಲ್ವಿಚಾರಗಳನ್ನು ಮಾಡುವರೆ ಎಸ್. ಅಫೀಸಿಯೋ ಜಿಲ್ಲಾ ಬೋರ್ಡ್ ಅಧ್ಯಕ್ಷರೂ ಹಾಗೂ ಜಿಲ್ಲಾ ಕಲೆಕ್ಟರರೂ ಆದ ಮಿ. ಇ. ಎಂ. ಗೋನ್‌ರವರೂ, ಜಿಲ್ಲಾ ಆರೋಗ್ಯ ಅಧಿಕಾರಿಗಳೂ ಇಲ್ಲಿ ಕೆಲವು ದಿನಗಳಿಂದ ದೊಕ್ಕಾಂ ಮಾಡಿರುತ್ತಾರೆ. ಎಲ್ಲಾ ವ್ಯವಸ್ಥೆಗಳ ಕನುಬಮಾಡಿಕೊಂಡು ಶ್ರಮ ವಹಿಸುತ್ತಿದ್ದಾರೆ. ಈ ಸಲ ಜನಸಂದಣಿಯೂ ಪರವೂರವರೂ ಸ್ವಲ್ಪ ಜಾಸ್ತಿಯೇ ಇರುತ್ತಾ, ಇವರ ಶ್ರಮದಿಂದಾಗಿ ಜನತೆಗೆ ಹೆಚ್ಚಿನ ಸೌಖ್ಯವೂ ನೆಮ್ಮದಿಯೂ ಇರುವುದರಲ್ಲಿ ಅಡ್ಡಿಯಿಲ್ಲ.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು ಕ್ಷಯ ಸಂಹಿತಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರವಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1 8-0 ೬ ಔನ್ಸ್ ರೂ 0 14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಅಯೊಡ್ಯಾಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ ತೀವ್ರ ಗುಣಕಾರಿ

4 ಔನ್ಸ್ ರೂ. 1—0—0 8 ಔನ್ಸ್ ರೂ. 1—8—0

ದಕ್ಷಿಣ ಕನ್ನಡದ ಏಜಂಟರು—ಫೊಷ್ಯಲರ ಸ್ಟೋರ್ಸ್, ಮಂಗಳೂರು.

ಬಹು ಕಾಲದಿಂದಲೂ ನಿರೀಕ್ಷಿಸಲ್ಪಟ್ಟ ಅತ್ಯಮೋಘ

ತೆಲುಗು ಮಾತಾಡುವ ಚಲಚ್ಚಿತ್ರ!

ಕೃಷ್ಣ ಲೀಲಾ

ನಗುವಿನ ಸುಗ್ಗಿ! ಮನಮುಗ್ಧಕರ ಅಭಿನಯ!

ರೋಮಾಂಚನಗೊಳಿಸುವ ದೃಶ್ಯಗಳು!

ಕರ್ಣಾನಂದಕರವಾದ ಗಾಯನ!

ಆಧುನಿಕ ಧೋರಣೆಗಳ ಉಪಾಸನೆಯು ಪ್ರತಿಯೊಂದೆಡೆಯಲ್ಲಿಯೂ ಹೊರಹೊಮ್ಮಿ ಕಾಣುವುದು.

ಕಂಪೆನಿಯ ಶ್ರೇಷ್ಠ ನಟವರ್ಗವು ಇದರಲ್ಲಿ ಅಭಿನಯಿಸಿದೆ

ಮಿಸ್ ರಾಮತಿಲಕಮ್
ಮಿಸ್ ಶ್ರೀರಂಜನಿ
ಮಿ। ವೇಮುರಿ ಗಗ್ಗಯ್ಯ
ಮಿ। ಪಾರಪಲ್ಲಿ ಸುಬ್ಬರಾವ್
ಮಿ। ಪಾರಪಲ್ಲಿ ಸತ್ಯನಾರಾಯಣ
ಮಾಸ್ಟರ್ ರಾಜೇಶ್ವರರಾವ್

ಕೊಯಮುತ್ತೂರು, ಸೇಲಂ, ನೀಲಗಿರಿ, ಮಲಬಾರು, ದಕ್ಷಿಣ ಕನ್ನಡ ಮತ್ತು ಕೊಚ್ಚಿ ಈ ಪ್ರಾಂತ್ಯಗಳಲ್ಲಿ ತಮ್ಮ ಚಿತ್ರಗಳ ಸಂಚಾಲನಾ ಅಧಿಕಾರವನ್ನು ಪಡೆದಿರುವರು.

For Bookings Apply to:—

THE MANORAMA FILMS,
COIMBATORE.

Telegrams, 'Manorama' Telephone 114

THE 1935 MODEL

HEAVY DUTY TRUCK



For Your Haulage

U. SUBRAYA NAYAK,
FORD DEALER
SHIMOGA=AND=MANGALORE

Now For Sale.

Poholatum (Balm) (German make) This is a home remedy for Rheumatism Asthma, Sciatica, Lumbago Insect bites, Herpes Wounds Cuts Colds Headache It is a complete substitute for the domestic medicine chest Try once this unequalled remedy In ¼oz tin As 3 In oz jar As 12/

Superior Red Balm For relieving pains in muscles and on skin Directions for use with the bottle Price As 12/- only

Wurmteufel Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms children and adults, try this unique remedy and be freed from your ailment Price As 10 per packet

Pocket Inhaler For coughs and hoarseness, headache catarrh colds use this inhaler and you will be relieved immediately Price per inhaler As 6 & As 8/

Po-Ho Fluid For Asthma colds indigestion toothache lumbago, a sure remedy in all cases Price As 6 and Re 1/- per phial

Cough Cure An infallible remedy for coughs of all kinds bronchitis, hoarseness Particulars in bottle Price As 12/- for 3 oz bottle

The New Curative Earth: A Radium cure for incurable diseases

Mithra Toilet Soaps—Scientifically prepared German soaps excellent for health Price As. 1/3, 2/6, 3/-, 4,

Basel Mission Book Depot
Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ವನಿತಾ ವಿಭಾಗ.

ವ್ಯಾಯಾಮ ಕ್ಷೇತ್ರದಲ್ಲಿ ಸ್ತ್ರೀಯರು

"ಸಧ್ಯದ ಪ್ರಪಂಚದಲ್ಲಿ ಎಲ್ಲೆಲ್ಲಿ ನೋಡಿದರೂ ಸ್ತ್ರೀಯರ ಆರೋಗ್ಯವು ಕೆಟ್ಟು ಅವರು ನಿರ್ಬಲರೂ ನಿಸ್ತೇಜಗಳೂ ಆಗಿರುವಂತೆ ಕಂಡುಬರುವುದು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ಸ್ತ್ರೀಯರ ಆರೋಗ್ಯವಂತೂ ಬಹು ಶೋಚನೀಯವೇ ಆಗಿರುವುದು. ಅವರ ವಯೋಮಾನವು ಎಷ್ಟೊಂದು ಕಡಿಮೆಯಾಗುತ್ತಲಿರುವುದೆಂಬುದು ಇದು ವರೆಗೂ ಅವರ ಆರೋಗ್ಯದ ಕಡೆಗೆ ದುರ್ಲಕ್ಷಿಸುತ್ತಲಿರುವ ಸಮಾಜದ ಲಕ್ಷ್ಯಕ್ಕೆ ಚೆನ್ನಾಗಿ ಬಂದಿರುವುದು. ಇಂತಹ ನಿಸ್ತೇಜಿಗಳಾದ, ನಿಶಕ್ತರಾದ ಮಾತೆಯರಿಂದ ಪೂರ್ಣ ಬಲಯುತರೂ, ವೀರ್ಯವಂತರೂ ಆದ ಸ್ವಾತಂತ್ರ್ಯ ಪ್ರೇಮಿ ಸಂತತಿಯನ್ನು ಪಡೆಯುವುದೆಂಬುದು ಕನಸಿನ ಗಂಟಲ್ಲವೇ? ಸರಿ ಆರೋಗ್ಯದ ಅಥವಾ ಶಕ್ತಿಯ ಮುಖ್ಯ ಸಾಧನವು ಅಂಗಸಾಧನೆಯಲ್ಲಿದೆ. ಈ ಅಂಗಸಾಧನೆಯ ಕಡೆಗೆ ಅವರು ದುರ್ಲಕ್ಷ ಮಾಡುತ್ತಿರುವುದರಿಂದಲೇ ಇಷ್ಟೊಂದು ನಿರ್ಬಲರಾಗಲು ಮೊದಲನೆಯ ಕಾರಣ. ಆದುದರಿಂದ ಇದು ವರೆಗೂ ಮಾಡಿದ ದುರ್ಲಕ್ಷ್ಯವು ಸಾಕು ಎಂದು ತಿಳಿದು ಸಮಾಜವು ಇನ್ನಾದರೂ ಅವರ ಕಡೆಗೆ ಮನಕೊಡುವುದಾದರೆ ಮುಂದೆ ಆಗಲಿರುವ ಅನಿಷ್ಟ ಪ್ರಸಂಗವಾದರೂ ತಪ್ಪೀತು.

ಇತ್ತೀಚೆಗೆ ನಮ್ಮ ಹಿಂದುಸ್ಥಾನದ ಅನೇಕ ಭಾಗಗಳಲ್ಲಿ ಪುರುಷರಂತೆಯೇ ಸ್ತ್ರೀಯರ ಬಗ್ಗೆ ವ್ಯಾಯಾಮ ಶಾಲೆಗಳೂ ಆರೋಗ್ಯ ಮಂದಿರಗಳೂ ಸ್ಥಾಪಿತವಾಗುತ್ತಲಿರುವವು. ಇದು ನಿಜವಾಗಿಯೂ ದೇಶದ ಭಾಗ್ಯೋದಯವಲ್ಲದೆ ಮತ್ತೇನು? ಯಾಕೆಂದರೆ ಸಂತತಿಯ ಉತ್ಪಾದಕರು ಸ್ತ್ರೀಯರು ದೇಶದಲ್ಲಿ ತೇಜಸ್ವಿಯೂ ಶಕ್ತಿಯುತವೂ ಆದ ಸಂತತಿಯನ್ನುಂಟುಮಾಡಿಸಲು ಅವರೇ ಮೂಲ ಕಾರಣರು. ಅವರ ದೇಹದಾರ್ಢ್ಯತೆಯ ಬಲದ ಮೇಲೆಯೇ ಸಂತತಿಯ ಅರ್ಥಾತ್ ದೇಶದ ಬಲವಾದರೂ, ಸ್ವಾತಂತ್ರ್ಯವಾದರೂ ಹೊಂದಿಕೊಂಡಿರುವುದು. ಮಾತೆಯ ಶರೀರ ಸುದೃಢತೆಯೇ ದೇಶದ ಉನ್ನತಿಗೂ ಸ್ವಾತಂತ್ರ್ಯಕ್ಕೂ ಕಾರಣವೆಂಬುದು ನಿರ್ವಿವಾದ ವಿಚಾರವಾಗಿರುವುದು. ಹೊಲಕ್ಕೆ ತಕ್ಕಂತೆ ಬೆಳೆ ಮಣ್ಣಿಗೆ ತಕ್ಕಂತೆ ಪೈರು ಎಂಬ ಹಿರಿಯರ ವಚನವು ಅಕ್ಷರಶಃ ನಿಜವಿರುವುದು.

ಕೆಲವು ಸಂದರ್ಭಗಳಲ್ಲಿ ಸ್ತ್ರೀಯರಿಗೆ ಎಂತಹ ವ್ಯಾಯಾಮವನ್ನು ಕೊಡಬೇಕು ಎಂಬುದನ್ನು ತಿಳಿಯದೇ ಜನರು ತಟಸ್ಥರಾಗುವರು. ತಾವು ಕೊಡಲಿರುವ ವ್ಯಾಯಾಮವು ಅವರಿಗೆ ಪೋಷಕವಾದೀತೇ ಇಲ್ಲವೇ ಎಂಬ ಅನುಮಾನ ಮತ್ತು ಭಯಗಳು ಎಷ್ಟೋ ಜನರಲ್ಲಿ ಉದ್ಭವಿಸುವವು. ಹೀಗಾಗಿಯೂ ಅವರ ವ್ಯಾಯಾಮವು ನಿಂತು ಹೋಗುವುದುಂಟು. ಆದರೆ ತಜ್ಞರಾದವರು ಪುರುಷರಂತೆಯೇ ಸ್ತ್ರೀಯರಿಗೂ ವ್ಯಾಯಾಮವನ್ನು ಕೊಡುವುದು ಅತ್ಯಗತ್ಯವೆಂಬ ನಿರ್ಧಾರದ ಮೇಲಿಂದ ಅವರವರ ವಯೋಮಾನಕ್ಕೂ ಶಕ್ತಿಗೂ ತಕ್ಕಂತೆ ಅವರಿಗೆ ಎಂತೆಂತಹ ವ್ಯಾಯಾಮವನ್ನು ಕೊಡಬೇಕೆಂಬುದರ ನಿರ್ಧಾರವನ್ನು ಮಾಡಿರುವರಲ್ಲದೆ ಈ ಬಗೆಯ ಶಾಸ್ತ್ರಶುದ್ಧವಾದ ವ್ಯಾಯಾಮವನ್ನು ಎಷ್ಟೋ ಜನ ಸ್ತ್ರೀಯರಿಗೂ ಕೊಟ್ಟು ಅದರ ಸತ್ಪರಿಣಾಮವನ್ನು ದೃಢಪಡಿಸಿಕೊಂಡಿರುವರು. ಹೀಗಾಗಿ ಮಧ್ಯ ಹಿಂದುಸ್ಥಾನದಲ್ಲೂ ಉತ್ತರ ಹಿಂದುಸ್ಥಾನದಲ್ಲೂ ಎಷ್ಟೋ ಇಂತಹ ವ್ಯಾಯಾಮ ಸಂಸ್ಥೆಗಳು ನಿರ್ಮಿತವಾಗಿರುವವು.

ಮೇಲ್ಕಂಡ ಸಂಸ್ಥೆಗಳಲ್ಲಿ ಈ ವ್ಯಾಯಾಮವನ್ನು ಅವರವರ ವಯೋಮಾನಕ್ಕೂ ಶಕ್ತಿಗೂ ತಕ್ಕಂತೆ ನಾಲ್ಕು ಬಗೆಯವುಗಳನ್ನು ಕೊಡುವರು. ೧ ಸಂತೋಷಕ್ಕಾಗಿ ೨. ಆರೋಗ್ಯರಕ್ಷಣೆಗಾಗಿ ೩ ಶರೀರದ ಬೆಳವಣಿಗೆ ಮತ್ತು ಶಕ್ತಿ ಸಂಗ್ರಹಕ್ಕಾಗಿ ೪ ಆತ್ಮರಕ್ಷಣೆಗಾಗಿ.

ಈ ಮೇಲ್ಕಂಡ ನಾಲ್ಕು ವಿಧದಲ್ಲೂ ಎರಡು ಬೇರೆ ಮುಖ್ಯಾಂಗಗಳಿರುವವು.

೧. ಉಪಕರಣರಹಿತ, ೨. ಉಪಕರಣ ಸಹಿತ

ಮೇಲ್ಕಂಡ ೧, ೨, ೩ನೆಯ ವ್ಯಾಯಾಮ ಪ್ರಕಾರವು ಸ್ತ್ರೀಯರ ಆರೋಗ್ಯರಕ್ಷಣೆಗಾಗಿಯೂ ಶಕ್ತಿಸಾಧನೆಗಾಗಿಯೂ ಹೇಗೆ ಆವಶ್ಯಕವಿವೆಯೋ ಅದೇ ರೀತಿಯಲ್ಲಿ ೪ನೆಯದಾದರೂ ಅತ್ಯಗತ್ಯವಾಗಿರುವುದು. ಯಾಕೆಂದರೆ ಸ್ತ್ರೀಯರು ನೈಸರ್ಗಿಕವಾಗಿ ಪುರುಷರಿಗಿಂತಲೂ ಬಲಹೀನರೂ ಕೋಮಲೆಯರೂ ಆಗಿರುವರು. ಇದಕ್ಕಾಗಿಯೇ ಅಬಲೆಯರೆಂಬ ಹೆಸರಿದೆ. ಆದರೆ ಪುರುಷರಿಗಿಂತಲೂ ಸ್ತ್ರೀಯರಿಗೆ ಮಾನಸಂರಕ್ಷಣೆಯ ಭಾಗವು ವಿಶೇಷ ದೀರ್ಘವೂ ಅಥವಾ ಉಂಟಾಗುತ್ತದೆ. ಆದ ದರಿಂದ ದೊಡ್ಡಲಿನ ಪುರುಷರಂತೆಯೇ ನಾಲ್ಕನೆಯದನ್ನಾದರೂ ಪ್ರತಿಯೊಬ್ಬ ಸ್ತ್ರೀಯರಿಗೂ ಕಡ್ಡಾಯವಾಗಿ ಕಲಿಸಿ ಕೊಟ್ಟು ಅವರನ್ನು ಸರ್ವವಿಧದಿಂದಲೂ ಸುಸಜ್ಜಿತರನ್ನಾಗಿ ರಿಸುವುದು ಪ್ರತಿಯೊಂದು ಸಮಾಜದ ಕರ್ತವ್ಯವಾಗಿರುವುದು. ("ವ್ಯಾಯಾಮ ಪ್ರೇಮಿ")

ಪೋಲೀಸ್ ಖಾತೆಯಲ್ಲಿ ಹೆಂಗಸರು.

ಲಂಡನ್ ನಗರದಲ್ಲಿ ಹೆಂಗಸರನ್ನು ಪೋಲೀಸು ಖಾತೆಯಲ್ಲಿ ಭರ್ತಿಮಾಡಿಕೊಳ್ಳುತ್ತಿರುವರು. ಇಷ್ಟರಲ್ಲಿ ೬೭ ಹೆಂಗಸರನ್ನು ಭರ್ತಿಮಾಡಿದ್ದಾಯಿತು. ನವಸುಧಾರಣೆಯ ಕಾಲದಲ್ಲಿ ಹೆಂಗಸರಿಗೂ ಪ್ರೋತ್ಸಾಹದೊರಕಿದ್ದು ಅಷ್ಟೊಂದು ಆಶ್ಚರ್ಯಕರ ಸಂಗತಿಯಲ್ಲ. ಪೋಲೀಸ ಖಾತೆಯನ್ನು ಸೇರಬೇಕಾದರೆ ಅವರಿಗೆ ಇಂಗ್ಲಿಷ್, ಲೆಕ್ಕ, ಭೂಗೋಳ, ಸಾಮಾನ್ಯ ತಿಳುವಳಿಕೆಗಳಲ್ಲಿ ಪರೀಕ್ಷೆ ಇದೆ. ಇದಲ್ಲದೆ ಗಂಡಸರ ನಿರ್ಬಂಧಗಳಂತೆ ಅವರ ಉದ್ದವು ೫ ಅಡಿಗಳಿಗಿಂತ ಹೆಚ್ಚು ಇರಬೇಕು. ವಯಸ್ಸು ಸರಿಯಾಗಿರಬೇಕು, ಪ್ರಾಯವು ೩೫ ಮೀರಿರಬೇಕು, ಆದರೆ ೩೫ಕ್ಕಿಂತ ಹೆಚ್ಚಾಗಬಾರದು. ಮೊದಲು ಶಕ್ತಿಯುತ ಕೆಲಸದ ತಾಕತ್ತುಳ್ಳ ಹೆಂಗಸರನ್ನು ಕೆಲಸಕ್ಕೆ ಹಚ್ಚುವರೇ ತುಂಬಾ ಪ್ರಯಾಸವಾಗುತ್ತಿದ್ದು ಕಾರಣ, ಆಂಗ್ಲೇಯರು ಅತ್ತಕಡೆ ತಮ್ಮ ಗಮನವನ್ನಿಡಲಿಲ್ಲ. ಇತ್ತೀಚೆಗೆ ಹೆಂಗಸರು ತಮ್ಮ ಕಾಯಬಲವನ್ನೂ ಮನೋಬಲವನ್ನೂ ಅತಿರೇಕವಾಗಿ ವೃದ್ಧಿಗೊಳಿಸಿದ್ದರಿಂದ ಈ ನಮೂನೆಯ ಕಷ್ಟವು ಕೊಂಚಕೊಂಚವಾಗಿ ಕ್ಷಯಿಸುತ್ತಲಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೆಲಸಕ್ಕೆ ಸೇರಿದವರಿಗೆ ಕೆಲಸದಿಂದ ನಿವೃತ್ತರಾದ ಮೇಲೆ ಪೆನ್ಶನ್ ಇದೆ. ಕೆಲಸದಲ್ಲಿರುವಾಗ ಅವರ ಸಂಬಳವು ಈ ರೀತಿಯಿರುವುದು. ಪೋಲೀಸ್ ಇನ್ಸ್‌ಪೆಕ್ಟರ್‌ರಿಗೆ ವಾರಕ್ಕೆ ೧೦೪—೧೩೨ ಶಿಲ್ಲಿಂಗ್‌ಗಳು ಮತ್ತು ಭತ್ತೆ ೯॥ ಶಿಲ್ಲಿಂಗ್, ಸಾರ್ಜಂಟ್‌ರಿಗೆ ೯೦—೧೦೦ ಶಿಲ್ಲಿಂಗುಗಳು ಭತ್ತೆ ೭ ಶಿಲ್ಲಿಂಗು. ಪೋಲೀಸರಿಗೆ ೬೦—೮೦ ಶಿಲ್ಲಿಂಗುಗಳು ಭತ್ತೆ ೬ ಶಿಲ್ಲಿಂಗುಗಳು. ಮದುವೆಯಾದವರನ್ನು ಈ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಸಂತತಿ ಇಲ್ಲದ ವಿಧವೆಯರಿಗೆ ಇದರಲ್ಲಿ ಸ್ಥಾನವಿದೆ. ಕೆಲಸಕ್ಕೆ ಸೇರಿದ ನಂತರ ಮದುವೆಯಾಗುವುದಿದ್ದರೆ ಅಂತಹವಳು ಕೂಡಲೇ ತನ್ನ ಕೆಲಸಕ್ಕೆ ರಾಜೀನಾಮೆ ಕೊಡತಕ್ಕದ್ದು.

ಚೀನಾದೇಶದ ಹೊಟೇಲುಗಳಲ್ಲಿ ಸ್ತ್ರೀಯರು.

ಚೀನಾದೇಶದ ಹೊಟೇಲುಗಳಲ್ಲಿ ಸ್ತ್ರೀಕೆಲಸಗಾರರು ಬಹಳೇ ಹೆಚ್ಚಿರುವರು. ಹೆಂಗಸರಿಗೆ ಸಮಾಜದಲ್ಲಿ ಸರಿಸಮಾನಹಕ್ಕುಗಳು ಇರಬೇಕೆಂದೇ ಇಂಥ ವಿಚಾರಗಳು ಅಲ್ಲಿ ಜರಗುತ್ತಿವೆ. ಆದರೆ ಆದರಿಂದ, ತಟ್ಟುವ ಹಾನಿಯು ಅಪಾರವಾಗಿದೆಯೆಂದು ಇತ್ತೀಚೆಗೆ ಕಂಡುಹಿಡಿಯಲಾಗಿದೆ. ಮಾಡುವದೇನು? ಒಂದು ಸಲವೆ ಅವರಿಗೆ ಆ ಹಕ್ಕನ್ನು ಕೊಟ್ಟು ನಂತರ ಪುನಃ ಕಸಗೊಳ್ಳುವದೆಂದರೆ ಹಾಸ್ಯಾಸ್ಪದವಲ್ಲವೇ? ಅದಕ್ಕಾಗಿ ಬಹುಜನರ ಮನವಿಯ ಮೇರೆಗೆ ಹೊಟೇಲಿನಲ್ಲಿ ಕೆಲಸಕ್ಕಿರುವ ಸ್ತ್ರೀಯರು ನಾನಾ ನಮೂನೆಯ ಸೀರೆಗಳನ್ನು ಉಡಬಾರದೆಂದೂ, ಮುಖಕ್ಕೆ ಪೌಡರನ್ನು ಹಾಕಬಾರದೆಂದೂ, ತಲೆಗೆ ಪರಿಮಳಯುಕ್ತ ಎಣ್ಣೆಯನ್ನು ಇಡಬಾರದೆಂದೂ, ಹೆಚ್ಚು ಅಂಗಶೃಂಗಾರಗಳನ್ನು ಮಾಡಕೂಡದೆಂದೂ, ಕಾಫಿ ಕುಡಿಯಲು ಬಂದವರೊಡನೆ ಸರಸಸಲ್ಲಾಪವಾಡಬಾರದೆಂದೂ, ಕಾಫಿ ಕುಡಿಯಬಾರದೆಂದೂ ಆಜ್ಞೆಯನ್ನು ಹೊರಡಿಸಿದ್ದಾರೆ. ಅವರ ಕೆಲಸವನ್ನು ಅಷ್ಟು ಬಿಟ್ಟಿಗೆ ಕಷ್ಟದಾಯಕವಾಗಿ ಮಾಡಿದರೆ ಅವರು ಅದನ್ನು ಬಿಟ್ಟುಬಿಡಲೂ ಸಾಕೆಂದು ಊಹಿಸಲಾಗಿದೆ.

ಕುಂಭಕೋಣದಲ್ಲಿ ಖಡ್ಡಾಯದ ಸ್ತ್ರೀ ವಿದ್ಯಾಭ್ಯಾಸ.

ಆಧುನಿಕ ಕಾಲದಲ್ಲಿ ಸ್ತ್ರೀಯರು ಮುಂದೊತ್ತಿ ಬರಬೇಕಾಗಿ ಹಲಕೆಲವು ವಿಧಾನಗಳು ನಿರ್ಮಿತವಾಗುತ್ತಿವೆ. ಆದರೆ ಅವಕ್ಕೆಲ್ಲ ಮೂಲಕಾರಣವಾದ ವಿದ್ಯಾಭ್ಯಾಸದ ಕಡೆಗೆ ಯಾರ ಗಮನವೂ ಹೋಗದೆ ಇದ್ದದ್ದು ಆಶ್ಚರ್ಯ. ಆದರೆ, ಕುಂಭಕೋಣದ ಮುನಿಸಿಪಾಲಿಟಿಯವರು ಇದರ ವಿಷಯ ಒಳ್ಳೆಯ ಪರ್ಯಾಲೋಚನೆಯನ್ನು ಮಾಡಿ, ಹುಡುಗಿಯರಿಗೆ ಖಡ್ಡಾಯ ವಿದ್ಯಾಭ್ಯಾಸದ ನಿರ್ಧಾರವೊಂದನ್ನು ಜ್ಯಾರಿಗೆ ತಂದಿರುವರು. ತತ್ಕಾಲಕ್ಕೆ ಎಲಿಮೆಂಟರಿ ಶಾಲೆಗಳ ವರೆಗೆ ಮಾತ್ರ ಖಡ್ಡಾಯ ವಿದ್ಯಾಭ್ಯಾಸವು ನಡೆಯುತ್ತದೆ, ಸ್ತ್ರೀ ... ಧನದ ಅಭಾವವು ಕಡ್ಡಾಯವಾದ ಪ್ರೌಢ ವಿದ್ಯಾಭ್ಯಾಸವು ಈ ರೀತಿ ಕೊಡಲ್ಪಡುವುದು.

ರಷ್ಯಾದೇಶದ ಸ್ತ್ರೀಯರು.

ರಷ್ಯಾದೇಶವನ್ನು ಸಂದರ್ಶಿಸಿ ಬಂದ ಡಾ. ಗಣೇಶರಂಬರವರು ಅಲ್ಲಿಯ ಸ್ತ್ರೀಯರ ವಿಷಯ ಈ ರೀತಿ ಅಭಿಪ್ರಾಯಪಡುತ್ತಾರೆ. ಸ್ತ್ರೀಯರಿಗೆ ಸರಿಸಮಾನ ಹಕ್ಕುಗಳನ್ನೀಯುವುದೇ ನಮ್ಮ ದೇಶದ ಉನ್ನತಿಯನ್ನು ಸಾಧಿಸುವ ಸುಪಥವು ಎಂದು ರಷ್ಯಾ ದೇಶದವರು ಎಣಿಸುತ್ತಾರೆ. ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತ ದೇಶವೆಂದರೆ ಅದೊಂದೇ ಎಂದು ನಿಶ್ಚಯವಾಗಿ ಹೇಳಬಹುದು. ಯಾವ ಕಾರ್ಖಾನೆಯಲ್ಲಾಗಲೀ ಯಾವ ಸಂಸ್ಥೆಯಲ್ಲಾಗಲೀ ಸ್ತ್ರೀಯರಿಗೆ ಸ್ಥಾನವಿದೆ. ಲಿಂಗಭೇದವಿದ್ದಲ್ಲಿ ಸಮಾಜದಲ್ಲೂ ಕೆಲಸಗಳಲ್ಲೂ ಭೇದವಿರಬೇಕೆ ಎಂದು ಅವರ ವಾಗ್ವಾದ. ಮಕ್ಕಳ ವಿಷಯವಾಗಿ ಒಳ್ಳೆಯ ಏರ್ಪಾಡನ್ನು ಮಾಡಿರುವರು. ಕೆಲಸಕ್ಕೆ ಹೋಗುವ ಸ್ತ್ರೀಯರಿಗೆ ಮಕ್ಕಳ ಲಾಲನ ಪಾಲನದ ಚಿಂತೆಯಿಲ್ಲ. ಅದಕ್ಕಾಗಿ ಬೇರೆಯೇ ಶಾಲೆಗಳೂ ಗೃಹಗಳೂ ಇವೆ. ಕೆಲಸಕ್ಕೆ ಹೋಗುವವರು ತಮ್ಮ ಮಕ್ಕಳನ್ನು ಅವುಗಳಲ್ಲಿ ಬಿಟ್ಟುಹೋದರೆ ಸಾಯಂಕಾಲ ತಿರುಗಿ ಬರುವಾಗ ಪುನಃ ಮನೆಗೆ ಕೊಂಡು ಹೋಗಬಹುದು. ಮದುವೆಯ ವಿಚಾರದಲ್ಲಿ ಅವರವರಿಗೆ ಸರಿದೋರುವ ಯುವಕರನ್ನು ಅವರು ಮದುವೆಯಾಗಬಹುದು. ಮತ್ತೆ ಸಂಬಂಧವಿದ್ದರೆ ಅವನನ್ನು ಬಿಡಲೂ ಬಹುದು. ಅದಕ್ಕೆ ಸರಕಾರದವರೂ ಯಾವೊಂದು ಅಡ್ಡಿಯನ್ನು ಮಾಡುವುದಿಲ್ಲ. ಕಾರಣ ಅಸಂತೋಷದ ಜೀವನವು ದೇಹಕ್ಕೆ ಹಾನಿಕರ. ಸತಿಪತಿಯವರಲ್ಲಿ ಕಲಹವಿದ್ದರೂ ಪರಸ್ಪರ ಪ್ರೀತಿಯಿಲ್ಲದೆ ನಿಸ್ಸಾರವಾಗಿ ಜೀವನ ಕಳೆಯುವುದಕ್ಕಿಂತಲೂ ಅವನ್ನು ಮದುವೆಯ ಬಂಧನಗಳನ್ನು ಮುರಿದು ಹೊಸದಾದ ಜೀವನ ಆರಂಭಿಸುವುದು ಲೇಸು ಎಂದು ಆ ದೇಶದವರ ಅಭಿಪ್ರಾಯ. ಸಮಾಜದ ಕುಂದುಕೊರತೆಗಳನ್ನು ಹೋಗಲಾಡಿಸಲೆಂದು ರಷ್ಯಾ ದೇಶದ ಸರ್ಕಾರವು ಈ ವಿಚಿತ್ರ ಧೋರಣೆಗಳನ್ನು ಜಾರಿಗೆ ತರುವ ಪ್ರಯತ್ನವನ್ನು ಜಾಹೀರು ಮಾಡಿದೆ.

ಘೋಷಾಪದ್ಧತಿಯು ನಾಶವಾಯಿತು

ನವವರುಷವು ಇರಾಣದಲ್ಲಿ ನವೀನ ಪದ್ಧತಿಗಳನ್ನು ಹೊರಡಿಸಿದೆ. ಇಷ್ಟರ ವರೆಗೆ ನಡೆದುಬಂದಿದ್ದ ಘೋಷಾಪದ್ಧತಿಯು ಈ ನವವರ್ಷದ ಉದ್ಭವದಿಂದ ನಾಶವಾಗಿದೆ. ಅದೇ ಘೋಷಾಪದ್ಧತಿಯ ನಾಶದಿಂದ ಅಲ್ಲಿಯ ಬಾಲಿಕೆಯರು, ಯುವತಿಯರು ಮತ್ತು ಮುದುಕಿಯರೂ ಎಲ್ಲರೂ ಘೋಷವನ್ನು ತೆಗೆದು ಎಲ್ಲೂ ತಿರುಗಬಹುದು. ಇತರ ದೇಶಗಳ ಸ್ತ್ರೀಯರಂತೆ ಅವರು ಸಭೆಗಳಿಗೂ ನಾಟಕಗಳಿಗೂ ಹೋಗಬಹುದು. ಟರ್ಕಿಯು ತೋರಿಸಿದ ಸನ್ಮಾರ್ಗವೇ ಇದಕ್ಕೆಲ್ಲಾ ಕಾರಣವೆಂದು ತಿಳಿಯಬರುತ್ತದೆ. ಈ ನವಪದ್ಧತಿಯ ಉತ್ಸಾಹವು ದಿನೇ ದಿನೇ ವೃದ್ಧಿಹೊಂದಿ ಅಲ್ಲಿಯ ಸ್ತ್ರೀಯರೂ ಇತರ ದೇಶಗಳ ಸ್ತ್ರೀಯರಂತೆ ಉಚ್ಚತರಗತಿ, ಸ್ಥಾನಮಾನಗಳನ್ನು ಪಡೆಯಲೆಂದೇ ಪ್ರೇಕ್ಷಕರ ಹಾರೈಕೆ.

ನರಸರಾವ್ ಪೇಟೆ ಮಹಿಳಾಸಂಘ.

ಈ ಸಂಘದ ೩ನೇ ವಾರ್ಷಿಕೋತ್ಸವವು ಜನವರಿ ೫ ಮತ್ತು ೬ನೇ ತಾರೀಕಿನಲ್ಲಿ ಬಹಳ ವಿಜೃಂಭಣೆಯಿಂದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಪತ್ನಿಯವರಾದ ಶ್ರೀ ರಾಜಮ್ಮಾ ಇವರ ಅಧ್ಯಕ್ಷತೆಯಲ್ಲಿ ಜರಗಿತು. ೫ ರಲ್ಲಿ ಮಧ್ಯಾಹ್ನ ೩—೩೦ಕ್ಕೆ ಸಭೆಯು ಜರಗಿತು. ಸಂಘದ ಕಾರ್ಯದರ್ಶಿಗಳಾದ ಶ್ರೀಮತಿ ವಿ. ಸೀತಾಲಕ್ಷ್ಮಿಯಮ್ಮನವರು ಸಂಘದ ಗತವರುಷದ ವರದಿಯನ್ನು ಓದಿದ ನಂತರ, ಸಂಘದವರಿಂದಲೇ ನಡೆಸಲ್ಪಡುತ್ತಿರುವ ಹಿಂದಿ ಶಾಲೆಗಳ ಬಾಲಿಕೆಯರು ಒಡಹುಟ್ಟಿದ ಮತ್ತು ರುಕ್ಮಿಣಿ ಕಲ್ಯಾಣ ಎಂಬ ಹಿಂದಿ ನಾಟಕಗಳನ್ನು ಆಡಿ ತೋರಿಸಿದರು.

ಮರುದಿನ ಭಾವಚಿತ್ರವನ್ನು ತೆಗೆದ ನಂತರ ಶ್ರೀಮತಿ ಸತ್ಯವತಿಯವರು ತನ್ನ ಮಧುರ ಗಾಯನದಿಂದ ಸಭಿಕರನ್ನು ಸಂತೋಷಗೊಳಿಸಿದಳು. ಶ್ರೀಮತಿಗಳಾದ ಸೀತಾಲಕ್ಷ್ಮಮ್ಮ, ಸತ್ಯವತಿ ಮತ್ತು ಕೆ. ಕೃಷ್ಣವೇಣಮ್ಮನವರು ಹಿಂದಿಯಲ್ಲಿ ಸಂದರ್ಭೋಚಿತ ಭಾಷಣಗಳನ್ನು ಮಾಡಿದ ನಂತರ ಧನ್ಯವಾದಗಳೊಂದಿಗೆ ಸಭೆಯು ವಿಸರ್ಜನವಾಯಿತು.

ಮಿಸ್ ಪ್ರತಿಮಾ ರೇ ಚೌಧುರಿ.

ಮಾತಿನ ಸನ್ನಿಧಾನದಲ್ಲಿಯೂ ಕೀರ್ತಿ ದೊಡ್ಡದು ಎಂಬುದರ ನಿಧ್ಯಾಂಶವು ಇದರಿಂದಲೇ ಸ್ಪಷ್ಟವಾಗುವುದು. ಮಿಸ್ ಪ್ರತಿಮಾ ರೇ ಚೌಧುರಿಯು, ಬಾಬು ಬೀಮಾಲಾಲ್ ಚರಣ್ ರೇ ಚೌಧುರಿಯ ಪುತ್ರಿಯು. ಇವಳ ವಯಸ್ಸು ಬರೇ ೧೪ ವರುಷ. ಆದರೆ ಗಾಯನದಲ್ಲಿ ಅಖಿಲ ಭಾರತದಲ್ಲಿ ಇವಳನ್ನು ಮೀರಿದವರಿಲ್ಲ. ಅಖಿಲ ಭಾರತಗಾಯಕರ ಸಂಘದಲ್ಲಿ ನಡೆದ ಪ್ರತಿಸ್ಪರ್ಧೆಯಲ್ಲಿ ಗೆದ್ದು ಸುವರ್ಣಪದಕವೊಂದನ್ನು ಬಹುಮಾನ ಪಡೆದಳು. ನಾಲ್ಕು ವರ್ಷ ಮೊದಲು ೬೦ ವರುಷಕ್ಕೆ ಮೀರಿದವರೆಲ್ಲರೂ ಇವಳೊಡನೆ ಸ್ಪರ್ಧೆಗೆ ನಿಂತು ಸೋತುಹೋದರೆಂದೂ ಇವಳ ಪ್ರೌಢಿಮೆಯು ಅದೆಷ್ಟು ಇರಬೇಕು. ಧ್ರುಪದ್ ಕೇಯಾಲ್ ತುಮ್ರಿ ಗಜಲ್ ಕೀರ್ತನ್ ಚರಡಾ ಮತ್ತು ಬಂಗಾಲಿ ರಾಗಗಳಲ್ಲಿ ಇವಳು ಒಳ್ಳೇ ಪಾಂಡಿತ್ಯವನ್ನು ಪಡೆದಿರುವಳು. ಒಂದಾನೊಂದು ದಿವಸದ ಸಮಾರಂಭದಲ್ಲಿ ರಾಜ್ ಬಹದ್ದೂರ ಉಮಾಚರಣ ದಾಸರೂ ಮತ್ತು ನೆರೆದ ಸಭಿಕರೂ ಕೂಡಿ ಒಂದು ಪದಕವನ್ನು ಉಡುಗೊರೆ ಇತ್ತರು. ಆ ಸಂಘದ ಅಧ್ಯಕ್ಷರಾದ ಟಾಗೂರರ ಬಂಧುಗಳು ಬಾಲಿಕೆಯ ಸಾಮರ್ಥ್ಯವನ್ನು ಕಂಡು ಸಂಗೀತ ರತ್ನ ಎಂಬ ಪದವಿಯನ್ನು ಬಹುಮಾನಿಸಿದರು.

ಸ್ವೀಕಾರ ಮತ್ತು ವಿಮರ್ಶೆ.

೧೯೩೬ನೇ ಇಸವಿಯ ಕನ್ನಡ ಪಂಚಾಂಗವು—ಪ್ರಕಾಶಕರು—ಪ್ರೋಗ್ರೆಸ್ ಪ್ರೆಸ್ ಉಡುಪಿ. ಬೆಲೆ ೩ ಆಣೆ. ಸಾದರದಿಂದ ಸ್ವೀಕರಿಸಿರುವೆವು.

ವಿಮರ್ಶೆ— ಈ ಕನ್ನಡ ಪಂಚಾಂಗವು ಕನ್ನಡ ನಾಡಿನ ಜನರಿಗೆ ಉಪಯುಕ್ತವಾದ ರೀತಿಯಲ್ಲಿದೆ. ಎಂದರೆ ಅತಿಶಯೋಕ್ತಿಯಾಗಲಾರದು. ಜನಸಾಮಾನ್ಯರಿಗೆ ಬೇಕಾಗಿರುವ ಎಲ್ಲಾ ವಿಷಯಗಳೂ ಇದರಲ್ಲಿ ಅಡಕವಾಗಿವೆ. ವ್ಯವಹಾರಿಕ ಜ್ಞಾನವು ಪಂಚಾಂಗದೊಡನೆ ಸೇರಿರುವುದು ಸ್ತುತ್ಯ. ಸರ್ವ ಕನ್ನಡಿಗರೂ ಇದನ್ನು ಪ್ರೋತ್ಸಾಹಿಸುವರೆಂದು ನಂಬಿಗೆ.

ಕಾಂಗ್ರೆಸ್ಸಿನ ಕಥೆ.

ಲೇಖಕರು— ದತ್ತಾತ್ರೇಯ ಪರಮರಾಮ ಕರಮರಕರ. ಬೆಲೆ ರೂ. ೧. ಸಾದರದಿಂದ ಸ್ವೀಕರಿಸಿರುವೆವು.

ವಿಮರ್ಶೆ—ಗ್ರಂಥಾವಲೋಕನದಿಂದ ಇಂತಹ ಗ್ರಂಥವು ವಿರಳವೆಂದೇ ಹೇಳಬೇಕು. ಲೇಖಕರ ಉದ್ದೇಶ್ಯವನ್ನೇ ದೃಷ್ಟಿಪಥದಲ್ಲಿಟ್ಟು ಇದನ್ನು ಓದಿದರೆಂದು ಅವರ ಲೆಕ್ಕಣಿಕೆಯೇ ಹೇಳುತ್ತಿದೆ. ಜನತೆಯ ಜಾಗೃತಿಯನ್ನು ಬಯಸುವ ಈ ಕಾಲದಲ್ಲಿ ಇಂತಹ ಪುಸ್ತಕವೊಂದು ಅವರ ದೃಷ್ಟಿಪಥದಲ್ಲಿ ಬಿದ್ದರೆ ಜನಾಂಗವು ಅದರ ತಮ್ಮ ಶ್ರೇಷ್ಠತೆಯನ್ನು ಜಗತ್ತಿಗೆ ಸಾರಬಹುದೆಂದರೆ ತಪ್ಪಾಗಲಾರದು. ವಿಷಯವು ಕಠಿಣವಾದಾಗ್ಯೂ ಲೇಖಕರು ಒಳ್ಳೇ ಅನುಭವಶಾಲಿಗಳೂ ರಾಜಕೀಯ ವಿಚಾರದಲ್ಲಿ ಪರಿಣತರೂ ಆದ್ದರಿಂದ ತನ್ನ ಸರಳ ಭಾಷೆಯಿಂದ ಸುಶ್ರಾವ್ಯವಾಗಿ ಬರೆದಿರುವರು. ಭಾರತದ ವೈಭವ ಅವನತಿ, ಇತರ ರಾಷ್ಟ್ರಗಳೊಡನೆ ಅದರ ಹೋಲಿಕೆ ಇವನ್ನೆಲ್ಲಾ ಬಹು ಚಟುವಟಿಕೆಯಾಗಿ ಮಾಡಿರುವರು. ಕಾಂಗ್ರೆಸ್ಸಿನ ಸ್ವರ್ಣೋತ್ಸವ ಕಾಲದಲ್ಲಿ ಬರೆದ ಈ ಪುಸ್ತಕವು ಬಹು ಬೇಗನೆ ಲೋಕಪ್ರಿಯವಾಗುವದೆಂಬುದರಲ್ಲಿ ಸಂಶಯವಿಲ್ಲ.

ಸ್ತ್ರೀಪುರುಷರ ಪ್ರಿಯ ರಹಸ್ಯ (ಶರೀರ ಮರ್ಮಶಾಸ್ತ್ರ)

ಮಹಾಶಯರುಗಳೇ, ಇದು ವರೆಗೆ ನೀವಂತಹ ಪುಸ್ತಕವನ್ನು ಓದಿರಲಾರಿರಿ? ಇದರಲ್ಲಿ—ಅನೇಕ ಜಾತಿಯ



ಸ್ತ್ರೀಯರ ಲಕ್ಷಣಗಳು, ಸಂಭೋಗ ಕಾಲದಲ್ಲಾಗುವ ಪುಕ್ಕನಷ್ಟವು ಹೆಚ್ಚು ಸಂಭೋಗದಿಂದ ಉಂಟಾಗುವ ದೋಷಗಳು, ಗರ್ಭಚಿಹ್ನೆ, ಗರ್ಭಾಭಿವೃದ್ಧಿ ರೂಪ ಶಿಶು ಉತ್ಪತ್ತಿ ವಿಧ, ಗರ್ಭಾದಾನ, ಜನನೇಂದ್ರಿಯ ವರ್ಣನೆ, ಸಂತಾನ ನಿರೋಧವು, ಹಸ್ತಪ್ರಯೋಗದಿಂದುಂಟಾಗುವ ಹಾನಿಗಳು, ಅದಕ್ಕೆ ತಕ್ಕ ಚಿಕಿತ್ಸೆಗಳು, ಇನ್ನೂ ಸ್ತ್ರೀಪುರುಷರಿಗೆ ಬೇಕಾದ ಅತಿ ಗುಪ್ತರಹಸ್ಯಗಳನ್ನೆಲ್ಲಾ ೬೪ ಚಿತ್ರಪಟಗಳೊಡನೆ ೧೬೦ ಪುಟಗಳಲ್ಲಿ ವಿವರಿಸಿ ಬರೆದಿದೆ. ಇಂಥಾ ರಹಸ್ಯಗಳನ್ನೊಳಗೊಂಡ ಪುಸ್ತಕವು ಈ ವರೆಗೆ ಕನ್ನಡದಲ್ಲಿ ಪ್ರಕಟವಾಗಿಲ್ಲ. ಬೆಲೆ ರೂ ೧ ಟ ಖ ಬೇರೆ.

ವಿಳಾಸ—ಕರ್ನಾಟಕ ಏಜನ್ಸಿ, ಶ್ರೀಕೃಷ್ಣಸ್ವಾಮಿ ... ಬೀದಿ, ಮದರಾಸು

ಬೇಗನೇ ಪುಸ್ತಕವನ್ನು ತರಿಸುವವರಿಗೆ ... ಇನಾಮು

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು' ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ - (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ - (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ - (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ - (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ವ್ಯಾಪಾರಕ್ಕೆ ಸಿದ್ಧವಿರುತ್ತವೆ ಹೆಚ್ಚಿನ ವರ್ತಮಾನಕ್ಕಾಗಿ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ ಕಟಪಾಡಿ ದ. ಕನ್ನಡ



Distributors for South Kanara.—

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ

1936

ಇಸವಿಯ
ಶಾರದಾ ಡೈರಿಗಳು ತಯಾರಾಗಿವೆ!
ಶಾರದಾ ಛಾಪಖಾನೆಗೆ
ಬರೆಯಿರಿ,
ಅ ಥ ವಾ
ಒ.ಸಿ.ರ

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಸ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು

ಸಾಮಾನ್ಯ ವಿಜ್ಞಾನ. ಅಜ್ಜಿ ಕಥೆಗಳು (ಸಚಿತ್ರ.)

ಚರಿತ್ರೆ ಮತ್ತು ಕಥೆಗಳು.	ರೂ	ಅ	ಪೈ	ಸಾಮಾನ್ಯ ವಿಜ್ಞಾನ.			
				ಎರಡನೇ ದರ್ಜೆ	0	3	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	3	0
ಮೂರನೇ ,,	0	4	6	ನಾಲ್ಕನೇ ,,	0	3	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	3	0				
ನಾಲ್ಕನೇ ,,	0	3	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.):
ಮೂರು ಕರಡಿಗಳು
ಹೇನ ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ
ಅರಗಿನ ಮುದ್ದೆ
ಇಲಿಗಳ ಥಕ್ಕ ಥೈ
ಅಂಗೆಳ ದುಗ್ಗ
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ
(ಇವುಗಳ ಕ್ರಯ. 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ತಯಾರಾಗಿದೆ!

ಗೌ ಹಾ ಮ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ
ಸಮಾಜಶಾಸ್ತ್ರ
ಅಥವಾ
ಸೊಸಿಯೊಲೊಜಿ.
ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ಗೌರ್ಮೆಂಟ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮುದ್ರಣಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಿಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್		
ಪೆಸೆಂಜರು	ಬೆ 8 25	ಮ 1 20
ಕಾಸರಗೋಡು		
ಪೆಸೆಂಜರು	ಸಂಜೆ 8 20	ಸಂಜೆ 6-15

ಮೌಲಾನಾ ಶೌಕತಾಲಿಯವರು ಕೊಂಗ್ರೆಸ್ ಪಂಗಡವನ್ನು ಸೇರುವರು:

ಹಿಂದೂಗಳ ಅತೀ ಪವಿತ್ರವಾದ ಯಾತ್ರಾಸ್ಥಳ.

ಚೀನಾ ದೇಶದ ನಿಜವಾದ ಸ್ಥಿತಿ! ೪೦೦ ಮಂದಿ ಕೆಲಸಗಾರರಿಗೆ ರಜೆ ಕೊಡಲಾಯಿತು!

ಮೌಲಾನಾ ಶೌಕತಾಲಿಯವರ ಸಂದೇಶ

"ನಮ್ಮ ಚಿಕ್ಕ ಪುಟ್ಟ ಕಲಹಗಳನ್ನು ನಾವು ಮರೆತು ನಾವೆಲ್ಲರೂ ಒಂದಾಗಬೇಕು ಎಲ್ಲರಲ್ಲೂ ಪರಸ್ಪರ ಸಹನಾಶಕ್ತಿಯು ಬೆಳೆಯತಕ್ಕದು. ಎಲ್ಲರಲ್ಲೂ ಪರಸ್ಪರ ಸೌಮನಸ್ಯ ಬೇಕು. ನಾನೂ ಮತ್ತು ನನ್ನ ಲಕ್ಷಾಂತರ ಮುಸ್ಲಿಮ್ ಸಹೋದರರೂ ಕೊಂಗ್ರೆಸ್ಸಿನೊಡನೆ ಸೇರುವೆವು

ಹಿಂದೂದೇಶದಲ್ಲಿ ಸಮತಾವಾದ

ಹಿಂದೂದೇಶದಲ್ಲಿ ಸಮತಾವಾದ ಚಳವಳವನ್ನು ಸಾಂಗವಾಗಿ ನಡೆಯಿಸುವುದಕ್ಕೆ ಅನೇಕ ಆತಂಕಗಳಿವೆ ಸಮತಾವಾದ ವಿವಿಧ ಕಾರ್ಯಕ್ರಮಗಳನ್ನು ಸರಿಯಾಗಿ ನಡೆಯಿಸಲು ಸಾಧ್ಯವಿಲ್ಲವೆಂದು ಢಾಕಾದಲ್ಲಿ ಪ್ರೊಫೆಸರ್ ಸಿ ಎನ್ ವಕೀಲರು ಸಮತಾವಾದದ ಕುರಿತು ಭಾಷಣ ಮಾಡುತ್ತಿರುವಾಗ ಸೂಚಿಸಿದರು

ಸಂಗ್ರಾಮ ತರಬೇತಿನೊಂದಿಗೆ

ಗ್ರಾಮಾಭ್ಯುದಯ ಕಾರ್ಯವನ್ನು ನಡೆಯಿಸಲು ತರಬೇತನ್ನು ಡೆರಾಡನ್ನಿನ ಸಂಗ್ರಾಮ ಶಾಲೆಯ ಕಾರ್ಯಕ್ರಮಕ್ಕೆ ಸೇರಿಸಬೇಕಾಗಿ ಸರಕಾರವು ನಿರ್ಧರಿಸಿದೆ

ಕರಾಚಿಯ ಮುಸ್ಲಿಮರು

ನಿವೃತ್ತರಾಗಿ ಹೋಗುವ ಬೊಂಬೈ ಗವರ್ನರರಿಗೆ ಮಾನಪತ್ರವನ್ನು ಒಪ್ಪಿಸಬಾರದಾಗಿ ನಿರ್ಧಾರಮಾಡಿರುವರು

ಸಹಿಯನ್ನು ಹಾಕುವ ಕೋತಿ

ಲಂಡನಿನಲ್ಲಿ ಒಂದು ಕೋತಿಯು ೩ ಭಾಷೆಗಳಲ್ಲಿ ಸಹಿಹಾಕಬಲ್ಲುದು. ಈ ಕೋತಿಯು ಬಾಟ್ಲಿಯಿಂದ ಕುಡಿಯಬಲ್ಲುದು ಸಿಗರೇಟನ್ನು ಸೇದಬಲ್ಲುದು ಒಂದು ದಿವಸ ಅಮಲುಕರ ಪಾನೀಯವನ್ನು ಕುಡಿದ ಒಬ್ಬ ಹುಡುಗನ ಮೇಲೆ ಬಿದ್ದು ಅತನಿಗೆ ವಿಶೇಷ ರೀತಿಯಲ್ಲಿ ಜಖಂಗೊಳಿಸಿತು

ಚೀನಾ ದೇಶ

ಚೀನಾ ದೇಶವನ್ನು ಇಷ್ಟರ ವರೆಗೆ ಯಾರೂ ಸ್ವಾಧೀನಪಡಿಸಿದ್ದಿಲ್ಲ. ಅದರ ಮೇಲೆ ಕೈಮಾಡಲು ಯಾರಿಂದಲೂ ಸಾಧ್ಯವಾಗಲಿಲ್ಲ ಅಥವಾ ಇನ್ನಿತರ ಅಗಾಧ ಕಾರಣಗಳಿಂದಲೋ ಅದನ್ನು ಯಾರೂ ವಶೀಕರಿಸಿದ್ದಿಲ್ಲ ಚೀನಾ ದೇಶದಲ್ಲಿ ಕಲ್ಲಿದ್ದಲು ಹೇರಳವಿದೆ ಸಾಧಾರಣ ೩೦೦,೦೦೦ ಚದರ ಮೈಲು ವಿಸ್ತೀರ್ಣದಷ್ಟು ಕಲ್ಲಿದ್ದಲಿರುವ ಪ್ರದೇಶವಿದೆ ಅನೇಕಾನೇಕ ನಮೂನೆಯ ಲೋಹಗಳೂ ಅಲ್ಲಿ ದೊರಕುತ್ತವೆ ಇನ್ನು ಕೆಲವೇ ವರುಷಗಳಲ್ಲಿ ಚೀನಾ ದೇಶವು ಆಫ್ರಿಕಾದೋಪಾದಿಯಲ್ಲಿ ಕವಲುಗಳಾಗಿ ಒಡೆದು ಅನೇಕ ಜನಾಂಗಗಳ ಆಳ್ವಿಕೆಗೆ ಒಳಪಡುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ

ಚೀನಾ ದೇಶವು ೧೯೧೧ರಿಂದ ಕ್ಷೀಣವಾಗುತ್ತಾ ಬಂದಿದೆ ಅದರ ರಾಜ್ಯಾಂಗ ರಚನೆಯಲ್ಲಿ ಶಿಥಿಲತೆಯು ಕಂಡುಬರುತ್ತಿದೆ ವ್ಯಾಪಾರದಲ್ಲಿ ಚೀನಾ ದೇಶಕ್ಕೆ ಸರಿಸಾಟಿಯಾದಿಲ್ಲವೆಂದು ಹೇಳಬಹುದು ಅಲ್ಲಿ ೩೭೦,೦೦೦,೦೦೦ ಜನಸಂಖ್ಯೆಯಿದ್ದು ಸೈನ್ಯದ ಮಟ್ಟಿಗೆ ಅದು ಬಹಳ ಹಿಂದೆ ಬಿದ್ದಿದೆ ಜಪಾನು ಅದನ್ನು ನುಂಗಿಬಿಡಲು ಪ್ರಯತ್ನಿಸುವುದಾದರೂ, ಬಾಕಿ ಜನಾಂಗಗಳೂ ಸುಮ್ಮನೆ ಕುಳಿತುಕೊಳ್ಳುವಂತಿಲ್ಲ. ಉಳಿದ ರಾಷ್ಟ್ರಗಳಿಗೂ ಸರಿಸಮಾನ ಹಕ್ಕಿಲ್ಲವೆ ಎಲ್ಲರಿಗಿಂತಲೂ ಆಂಗ್ಲ ದೇಶದವರು ಮೊದಲಾಗಿ ಚೀನಾ ದೇಶದವರೊಡನೆ ಮೈತ್ರಿಯನ್ನು ಬೆಳೆಯಿಸಿದ್ದರು ವ್ಯಾಪಾರಕ್ಕೆ ಅಡಿಗಲ್ಲನ್ನಿಟ್ಟಿದ್ದರು ಅವರು ನಿಜವಾಗಿಯೂ ಜಪಾನಿಗೆ ಸುಲಭವಾಗಿ ಸ್ವಾಧೀನಕರಿಸಲು ಬಿಡಲಿಕ್ಕಿಲ್ಲ

ಪರದೇಶದವರನ್ನು ತಮ್ಮ ದೇಶಕ್ಕೆ ಬರಲು ಬಿಡಬಾರದೆಂಬ ಸೂಚನೆಯಿಂದ ಚೀನಾ ದೇಶದ ಅರಸನು ತನ್ನ ದೇಶಕ್ಕೆ ದೊಡ್ಡ ಪ್ರಾಗಾರವನ್ನೇ ಹಾಕಿದನು ಆದರೆ ಪರದೇಶದವರನ್ನು ತಡೆಗಟ್ಟುವಷ್ಟು ತ್ರಾಣವು ಮಾತ್ರ ಆ ಪ್ರಾಗಾರಕ್ಕೆ ಇಲ್ಲದೆ ಹೋಯಿತು.

ಪತ್ರಿಕೆಗಳು ತಾವೇ ಓದಿ ಹೇಳುತ್ತವೆ

ವಾರ್ತಾ ಪತ್ರಿಕೆಗಳು ತಮ್ಮಷ್ಟಕ್ಕೆ ಓದಿಕೊಳ್ಳುವುದೆ ಇತ್ತೀಚೆಗಿನ ನವೀನ ಶೋಧ ಯಾವ ಮುದ್ರಣಾಲಯಗಳೂ ಅವನ್ನು ಅಚ್ಚು ಹಾಕಬಹುದು ಆದರೆ ಅಕ್ಷರಗಳ ಬದಲಿಗೆ ಅದರಲ್ಲಿ ಶಬ್ದಗಳನ್ನು ಸೂಚಿಸುವ ಚೊಟ್ಟುಗಳೂ ಗೆರೆಗಳೂ ಇವೆ ಇದನ್ನು ಒಂದು ಯಂತ್ರದಲ್ಲಿಟ್ಟು ಅದನ್ನು ಚಲಿಸಬಿಟ್ಟರೆ ಅದು ಪತ್ರಿಕೆಯಲ್ಲಿರುವ ಎಲ್ಲಾ ವಿಷಯಗಳನ್ನೂ ಓದಿ ಹೇಳುತ್ತದೆ ಈ ಗೆರೆಗಳೂ ಪತ್ರದ ಒಂದೇ ಬದಿಯಲ್ಲಿದ್ದು ಇನ್ನೊಂದು ಬದಿಯಲ್ಲಿ ನಿಜವಾದ ಅಕ್ಷರಗಳೇ ಇರುತ್ತವೆ ಕಾರಣ ಸ್ವತಹ ಓದುವವರಿಗೆ ಇದರಿಂದಾಗಿ ಬಾಧೆ ತಟ್ಟಬಾರದೆಂದು ಇದನ್ನು ಪರಿಶೋಧಿಸಿದವನು ಆರ್ಜೆಂಟೈನ ದೇಶದ ಓರ್ವ ತರುಣನು.

ಹಬಸಿಯವರ ಕುಯುಕ್ತಿಗೆ ಜಯವಾಯಿತು.

ಡೆಸ್ಸಿಯಿಂದ ಸ್ವಲ್ಪ ದೂರದಲ್ಲಿ ಟೇಂಕುಗಳಿಂದ ಕೂಡಿದ ಇಟೆಲಿಯನರ ಒಂದು ಸೈನ್ಯ ಮಂಡಲವು ಕೆಲವು ಗುಡ್ಡಗಳ ಮಧ್ಯದಿಂದ ಹಾದುಹೋಗುತ್ತಿದ್ದವು ಸಾಯಂಕಾಲವಾಗಿರಲು ಸ್ವಲ್ಪ ವಿಶ್ರಾಂತಿ ಪಡೆಯಲು ಒಂದು ಗುಡ್ಡದ ಅಡಿಯಲ್ಲಿ ಕುಳಿತರು ಇಕ್ಕಡೆಗಳಲ್ಲಿರುವ ಗುಡ್ಡಗಳ ಮೇಲೆ ಹಬಸಿಗಳು ತುಪಾಕಿ ಸಮೇತರಾಗಿ ಅವಿತಿದ್ದರು. ಇಟೆಲಿಯಾನರು ತಮ್ಮ ಚಲನೆಯನ್ನು ನಿಲ್ಲಿಸಲು ಇವರು ಅವರಿಗೆ ಗೋಚರವಾಗದ ರೀತಿಯಲ್ಲಿ ಕೆಳಗಿಳಿದು ಬಂದು, ಅವರಿಗೆ ತಿಳಿಯದಂತೆ ಅವರ ಹಿಂದಕ್ಕೂ ಮುಂದಕ್ಕೂ ಕಲ್ಲಿನ ಎರಡು ದೊಡ್ಡ ಗೋಡೆಗಳನ್ನು ನಿರ್ಮಾಣ ಮಾಡಿದರು ಇದರಿಂದ ಇಟೆಲಿಯಾನರು ಒಂದು ಗೂಡಿನಲ್ಲಿ ಸಿಲುಕಿದಂತಾಯಿತು. ಈ ಕಾರ್ಯವಾದ ಸ್ವಲ್ಪ ಸಮಯದ ನಂತರ ಎಂದರೆ ರಾತ್ರಿಯ ಸಮಯ ತಮ್ಮ ತುಪಾಕಿಗಳನ್ನು ಹಾರಿಸುತ್ತಾ ಇಟೆಲಿಯಾನರ ಮೇಲೆ ಧಾವಿಸಿದರು ಆದರೆ ಸಿದ್ಧರಾಗಿರುವ ಇಟೆಲಿಯಾನರ ಮೆಶಿನು ಗನ್ನುಗಳ ಬಾಯಿಗಳಿಗೆ ಅನೇಕ ಹಬಸಿ ಸೈನಿಕರು ತುತ್ತಾದರು ಆದರೂ ಹೆದರದೆ ಮುಂದುವರಿದು ಇಟೆಲಿಯಾನರ ಮೇಲೆ ಬಿದ್ದು, ಅವರ ಟೇಂಕುಗಳನ್ನು ವಶೀಕರಿಸಿ, ಅವರನ್ನು ಹೊಡೆದೋಡಿಸಿರುವರು ಇಷ್ಟರ ವರೆಗೆ ಹಬಸಿಗಳು ಇಟೆಲಿಯಾನರಿಂದ ಸಾಧಾರಣ ೨೫ ಟೇಂಕುಗಳನ್ನು ವಶೀಕರಿಸಿರುವರು ಇವುಗಳನ್ನು ಅವರು ಈಗ ಉಪಯೋಗಿಸಲು ಕೆಲವು ಸೈನಿಕರನ್ನು ತರಬೇತು ಮಾಡಿರುವರು.

ಇಟೆಲಿಯಾನರು ಸಣ್ಣ ತುಫಾಕಿಗಳೊಂದಲೆ

ಉತ್ತರ ರಣರಂಗದಲ್ಲಿ ಮಕಾಲೆಯನ್ನು ಹಿಡಿಯಲೆತ್ನಿಸುವ ಹಬಸಿಗಳನ್ನು ತಡೆಯುತಿದ್ದಾರೆ. ಇಟೆಲಿಯಾನರು ಅನೇಕ ಕಡೆಗಳಲ್ಲಿ ಹಬಸಿಗಳ ರಕ್ಷಣಾ ಸ್ಥಳಗಳನ್ನು ಕೆಡವಿದ್ದಾರೆಂದು ವಾರ್ತೆ. ಇಷ್ಟರ ತನಕ ನಡೆದ ಯುದ್ಧ ಘಟನೆಗಳಲ್ಲಿ ೫೨೧ ಅಸ್ಕಾರಿಗಳು ಮಾತ್ರ ಮಡಿದಿರುವರೆಂದು ರೋಮಿಗೆ ಪಟ್ಟಿ ಬಂದಿರುತ್ತದೆ ಗಾಯಹೊಂದಿದವರ ಪಟ್ಟಿಯು ಸರಿಯಾಗಿ ತಿಳಿದುಬಂದಿಲ್ಲ

ಮಕಾಲೆ ಹತ್ತಿರ ಭೀಕರ ಯುದ್ಧ.

ಟಿಗ್ರೆ ಪ್ರಾಂತ್ಯದ ಮಕಾಲೆ ಹತ್ತಿರದ ಗೆಬಾಟ ಮತ್ತು ಗೇವಾನದಿಯ ಮಧ್ಯದಲ್ಲಿ ಇಟೆಲಿಯನರಿಗೂ ಹಬಸಿಗಳಿಗೂ ಒಂದು ಭಾರಿ ಕದನವಾಯಿತು ಹಬಸಿಗಳು ಇಟೆಲಿಯಾನರ ತುಫಾಕಿಗಳ ಗುಂಡಿನ ಪ್ರಪಾತಕ್ಕೆ ಒಳಗಾಗಿ, ದಿಕ್ಕು ಕಾಣದೆ ಪಲಾಯನ ಮಾಡಬೇಕಾಯಿತು.

ಇನ್ನೂ ಸಂಧಿಯಾಗುವ ಸಂಭವಗಳಿವೆಯೋ?

ಸಂಧಿಯ ವಿಚಾರ ಇಟೆಲಿಯಾನರ ಮನೋಭಾವವು ಸ್ವಲ್ಪ ಬದಲಾವಣೆ ಹೊಂದಿರುತ್ತದೆ ಆದರೆ ಈ ಸಂಧಿ ಪ್ರಸ್ತಾಪಗಳನ್ನು ಮುಂದೆ ತರುವವರಾರು? ಬ್ರಿಟನ ಮತ್ತು ಫ್ರಾನ್ಸು ತಮ್ಮ ಶ್ರಮಗಳು ಪರಿಯಲು ಇನ್ನು ಮುಂದಕ್ಕೆ ಬರುವ ಹಾಗಿಲ್ಲ ಇಟೆಲಿಯಾನರೂ ತಾವಾಗಿ ಸಂಧಿ ಮಾಡಲು ಸಿದ್ಧವಿಲ್ಲ ಅಂತೆಯೇ ಹಬಸಿಗಳು ಜನಾಂಗಸಭೆಯಲ್ಲಿ ಸಂಧಿಸ್ಥಾಪನೆಯ ಯೋಗ್ಯತೆಗಳೇನೋ ಇವೆ ನಿಜ ಆದರೆ ಅವುಗಳನ್ನು ಕಾರ್ಯರೂಪಕ್ಕೆ ತರಲು ಅನೇಕ ಆತಂಕಗಳಿವೆ ಇವೆಲ್ಲಾ ವಿಚಾರಗಳು ೨೦ನೇ ತಾರೀಕಿಗೆ ಜರಗುವ ಜನಪದ ಮಂಡಳದ ಸಭೆಯ ಮುಂದೆ ಬರುವವು ಆದರೆ ಈ ಸಭೆಯಲ್ಲಿ ರಾಜಿಪ್ರಸ್ತಾಪಗಳ ಮಾತು ನಡೆಯುವ ಸಂಭವಗಳು ಅತೀ ಕಡಿಮೆ ಬದಲಾಗಿ ಇನ್ನೂ ಕಠಿಣ ತರದ ಸಂಕ್ಷನುಗಳು ಇಟೆಲಿಯ ಮೇಲೆ ಜ್ಯಾರಿಯಾಗಲೂ ಸಾಕು.

೪೦೦ ಮಂದಿ ಕೆಲಸಗಾರರಿಗೆ ರಜೆ ಕೊಡಲಾಯಿತು

ಮುಂಬಾಯಿಯ G I P ರೈಲ್ವೇ ಕಂಪೆನಿಯ ವರ್ಕಶೋಪಿನ ೪೦೦ ಮಂದಿ ಕೆಲಸಗಾರರಿಗೆ ಒತ್ತಾಯ ಪೂರ್ವಕ ರಜೆಯು ಕೊಡಲಾಯಿತು ವರ್ಕಶೋಪಿನಲ್ಲಿ ಕೆಲಸ ಕಡಿಮೆಯಾದುದರಿಂದಲೂ, ವೆಚ್ಚವನ್ನು ಕಡಿಮೆ ಮಾಡುವುದಕ್ಕೋಸ್ಕರವಾಗಿಯೂ ಈ ರೀತಿಯ ಹುಕುಂ ಜ್ಯಾರಿಯಾಗಿದೆಂದು ತಿಳಿದುಬರುತ್ತದೆ

ಸಂಯುಕ್ತ ಅಮೇರಿಕದ ಅಧ್ಯಕ್ಷರಾದ

ರೂಸವೆಲ್ಟರನ್ನು ಕೊಲೆಮಾಡುವೆನೆಂದು ಗದರಿಕೆ ಮಾಡಿದುದಕ್ಕಾಗಿ, ಓರ್ವ ಶ್ರೀಮಂತ ಪುರುಷನನ್ನು ಸೆರೆಹಿಡಿದಿರುವರು ರೂಸವೆಲ್ಟರು ಸಾರ್ವಜನಿಕ ಹಿತಕ್ಕಾಗಿ ರೂಪಿಸಿದ ಹಲವು ಯೋಜನೆಗಳು ಶ್ರೀಮಂತರಿಗೆ ಹಿತಕರವಲ್ಲದವುಗಳು ಇದೇ ಕಾರಣದಿಂದ ಮೇಲಿನ ಶ್ರೀಮಂತ ಪುರುಷನಿಗೆ ಧಾರಾಳ ನಷ್ಟ ಸಂಭವಿಸಿದುದರಿಂದ ಆತನು ಈ ಗದರಿಕೆಯನ್ನು ಕಳುಹಿಸಿದನೆಂದು ತಿಳಿದುಬರುತ್ತದೆ

ಸಂಯುಕ್ತ ಅಮೇರಿಕದಲ್ಲಿ

ಸಾಗುವಳಿಯ ಅಭ್ಯುದಯಮಾಡಲು ಅನೇಕ ಹೊಸ ಕ್ರಮಗಳೂ ಜ್ಯಾರಿಯಾಗಿವೆ ಇವುಗಳಿಂದ ಸಾಗುವಳಿಗಾರರಿಗೂ ಅವರ ಫಲಗಳನ್ನು ಸೇವಿಸುವವರಿಗೂ ಹೆಚ್ಚಿನ ಒಳ್ಳೇತು ಆಗಬಹುದೆಂದೂ ತಿಳಿದುಬರುತ್ತದೆ

ಲಾಹೋರಿನಲ್ಲಿ ಮುಸ್ಲಿಮರು

ಶಾಯಿದ್ ಗಂಜ ವಿಚಾರ ಕುರಿತು ಆಲೋಚಿಸಲು ಸಭೆ ಸೇರಿದ್ದರು. ಆದರೆ ಕೆಲವು ಪ್ರಮುಖರಲ್ಲಿ ಆಲೋಚನಾ ಭೇದಗಳುಂಟಾಗಿ, ಸಭೆಯಲ್ಲಿ ಬಹಳ ಕ್ಷೋಭೆಯುಂಟಾಗಿ ಸಭೆಯು ಮುಕ್ತಾಯವಾಯಿತು.

ರಷ್ಯವು ಮಹತ್ತಾದ ಸೈನ್ಯಮಂಡಲವನ್ನು ರಚಿಸಲು ನಿರ್ಧಾರಮಾಡಿರುತ್ತದೆ.

ಜರ್ಮನಿಯ ಸಂಗ್ರಾಮ ಸಿದ್ಧತೆಗಳನ್ನು ದಿನೇ ದಿನೇ ವೃದ್ಧಿಹೊಂದುವುದರಿಂದ, ತಾವೂ ಅದೇ ರೀತಿಯಲ್ಲಿ ಸಿದ್ಧತೆಗಳನ್ನು ಮಾಡತಕ್ಕದೆಂದು ಮಸ್ಕೊ ನಗರದಲ್ಲಿ ಅವರ ಅಧ್ಯಕ್ಷರು ಒಂದು ಭಾಷಣದಲ್ಲಿ ಸಾರಿರುವರು

ಪ್ರಪಂಚದ ಭಯಂಕರ ಜ್ವಾಲಾಮುಖಿ

ಸಮಯ ೧೮೮೩ ಸ್ಥಳ ಈಸ್ಟ ಇಂಡಿಸ್ ದ್ವಿಪ ಮಂಡಳದ ಕ್ರಾಕೋಟೊವಾ ದ್ವೀಪ ಈ ಜ್ವಾಲಾಮುಖಿಯು ೨೦ ಮೈಲು ಎತ್ತರಕ್ಕೆ ಹಾರಿತ್ತು ಇಡೀ ದ್ವೀಪವು ಇದರಿಂದ ನಾಶ ಹೊಂದಿತು. ೪೦ ಸಾವಿರ ಜನರು ಮೃತರಾಗಿದ್ದರು ಈ ಜ್ವಾಲಾಮುಖಿಯ ಸ್ಫೋಟನಾ ಶಬ್ದವು ಸಾಧಾರಣ ೩೦೦೦ ಮೈಲು ದೂರಕ್ಕೆ ಕೇಳುತ್ತಿತು. ನುಚ್ಚುನೂರಾದ ಈ ದ್ವೀಪದಿಂದ ಹಾರಿದ ದೂಳು ಮೈಲುಗಟ್ಟಳೆ ದೂರಕ್ಕೆ ಸರಿಯಿತು ಈ ಜ್ವಾಲಾಮುಖಿಯ ಉರಿಯುವ ಪ್ರಕಾಶವು ಇಂಗ್ಲಾಂಡಿನವರಿಗೆ ಕಾಣಿಸಿತ್ತು

ಹಿಂದೂಗಳ ಅತೀ ಪವಿತ್ರವಾದ ಭಯಂಕರ ಯಾತ್ರೆ

ಹಿಮಾಲಯಗಳ ಕಣಿವೆಯಲ್ಲಿರುವುದು ಹಿಂದೂಗಳ ಅತಿಪವಿತ್ರವಾದ ಯಾತ್ರಾಸ್ಥಳ ವರ್ಷಂಪ್ರತಿ ೧,೦೦,೦೦೦ ಯಾತ್ರಿಕರು ಇತ್ತಕಡೆಗೆ ಹೋಗುತ್ತಿದ್ದಾರೆ ಆದರೆ ಇದರ ಕಾಲು ಅಂಶ ಮಂದಿಗಳ ಮಾತ್ರ ಹಿಂತಿರುಗುತ್ತಾರೆ ಮಿಕ್ಕವರ ದಾರಿಯಲ್ಲೆ ಮೃತರಾಗುವರು ಈ ಯಾತ್ರೆಯು ಅನೇಕ ಕಷ್ಟ ಶ್ರಮಗಳಿಂದ ಕೂಡಿದಾಗಿರುತ್ತದೆ ಈ ಯಾತ್ರೆಯನ್ನು ಸ್ವರ್ಗ ಮೋಕ್ಷ ಸಿಗ ಪುದೆಂದು ಹಿಂದೂಗಳ ನಂಬಿಗೆ ಪವಿತ್ರ ಹಿಂದೂಗಳು ಮಾತ್ರ ಈ ಯಾತ್ರೆಯನ್ನು ಕೈಗೊಳ್ಳುತ್ತಾರೆ ಭಯಂಕರ ಹಾದಿಯನ್ನು ದಾಟಿ ಹೋಗಬೇಕಾಗಿದೆ

ಮೇಲಿನ ಸಂಕಷ್ಟಗಳಲ್ಲಿ, ಹಗ್ಗದ ಸಿಪ್ಪಿತ್ರ ಪ್ರಯಾಣವು ಒಂದಾಗಿರುತ್ತದೆ ಈ ಹಾದಿಯು ಎರಡು ಎತ್ತರವಾದ ಬಂಡೆಗಳ ಮಧ್ಯದಲ್ಲಿರುವ ಬಹಳ ಆಳವಾಗಿರುವ ಭಯಂಕರ ಕಣಿವೆಯನ್ನು ಹಾದುಹೋಗುತ್ತದೆ ಈ ಕಣಿವೆಯ ತಳವು ಎಷ್ಟೆಂದರೆ,ಅದರಲ್ಲಿರುವ ವಸ್ತುಗಳನ್ನು ಕಾಣಲುಸಾಧ್ಯವಾಗುವುದಿಲ್ಲ ಈ ಎರಡು ಬಂಡೆಗಳ ನಡುವೆ ಒಂದು ಘಟ್ಟಿಯಾದ ಮತ್ತು ತೋರವಾದ ಹಗ್ಗವನ್ನು ಹಾಕಿರುತ್ತಾರೆ ಈ ಹಗ್ಗದಲ್ಲಿ ಯಾತ್ರಿಕರನ್ನು ಅತ್ತ ಸಾಗಿಸುವ ಒಂದು ಪೀಠವು ಚಲಿಸುತ್ತದೆ ಯಾತ್ರಿಕರನ್ನು ಈ ಪೀಠದ ಮೇಲೆ ಕುಳ್ಳಿರಿಸಿ ಭಯಂಕರ ರಭಸದಿಂದ ಅತ್ತ ಸಾಗಿಸುವರು ಈ ಹಗ್ಗವು ೨೫೦೦ ಅಡಿ ಉದ್ದವಾಗಿರುತ್ತದೆ ಈ ಪೀಠವು ರಭಸವಾಗಿ ಚಲಿಸುವ ಸಮಯ ಅನೇಕ ಅಪಾಯಗಳು ಒದಗುವುದುಂಟು ಅನೇಕರು ಕೈತಪ್ಪಿ ಆ ಕಣಿವೆಗೆ ಬೀಳುವುದೂ ಉಂಟು, ಅನೇಕ ಭಾರಿ ಆ ಪೀಟದ ರಭಸದಿಂದ ಯಾತ್ರಿಕರ ತಲೆಗಳು ಬಂಡೆಗಳಿಗೆ ತಗಲಿ ಒಡೆದು ಹೋಗುವುದೂ ಉಂಟು ವೇಗದ ರಭಸದಿಂದ ಬಂಡೆಗೆ ಬಡಿದ ಮನುಷ್ಯನು ನುಚ್ಚುನೂರಾಗಿ ಹೋಗುವುದೂ ಉಂಟು ಈ ಹಾದಿಯನ್ನು ಸುರಕ್ಷಿತವಾಗಿ ದಾಟಿದವರು ಬಹಳ ಪುಣ್ಯವಂತರೆಂದು ಭಾವಿಸಲಾಗುವುದು ಅವನಿಗೆ ಎಲ್ಲಾ ಕಾರ್ಯಗಳಲ್ಲಿ ಲಾಭವೆ ಉಂಟಾಗುವುದಂತೆ

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು.

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರ - ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ. ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮೀರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಪೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯಂ. ವೆಂಕಟೇಶ ರಂಗ ಪೈ, ಪ್ರೊಪ್ರೈಟರ್.

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment Details may be had on application to the Manager

ಡಾಕ್ಟರ ವಾಮನ ಗೋಪಾಳರವರ

ಬಹುಡಾಯಬೆ

ಸಾರಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ

೪೫ ವರ್ಷದ ಅನುಭವ

ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ

ಫೋಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಯಿ ೪

ಸ್ಟೋಕಿಸ್ಟ್ ಪಾಂಡುರಂಗ ಮಂಗಳೂರು

ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯು

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ

ಮಾಡಿರಿ

HAIL & CO

HALFTONE & LINE BLOCK MAKERS

Cinema Colour Slides & Designs A Speciality

CHIKPET BANGALORE CITY

BLOCKS FOR BOOK Illustrations, Magazines & Newspapers. Art Lables, Etc, Etc.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು ಮಲ ಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನು ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು.

ಬಾಟ್ಲಿ 1ಕ್ಕೆ 10 ಆಣೆ. 3 ಬಾಟ್ಲಿಗಳಿಗೆ ರೂ 1-12-0

ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ

ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0-0

ಮಲೇರಿಯಾ ನಿವಾರಿಣಿ

ಮಲಬದ್ಧತೆ ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ಕಫ ಜ್ವರ ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1-8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13.

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ 2-8-0 ಮಾತ್ರ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ- ಶ್ರೀ ರಾಮಾ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ದಾ। ಶ್ರೀನಿವಾಸ ಪೈ, ಪುತ್ತೂರು. ಮೆಸರ್ಸ್ ಮುಲ್ಜಿ ಜೆಠಾ ಬ್ರದರ್ಸ್, 91 ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ, ಕಾರಾಹೌಸ್, ಗಿರಿಗಾಂವ್, ಬೊಂಬಾಯಿ ನಂ. 4 ದಿ ವರ್ಸಾಟಿ ಹೋಲ್, ಮಡಿಕೇರಿ ಕೂರ್ಗ್. ರಾವ್ ಫಾರ್ಮಸಿ, ಸಾಗರ

The Canara Banking Corporation Udipi, Ltd.

Head office:—UDIPI, S. K. (Incorporated in British India) TEL. 'BANKING' **ESTD· 1906·**

Branches:—1· Udipi, 2· Coondapoor, 3· Car Street, Mangalore, 4· Shimoga, 5· Madras (George Town), **6· Bunder Mangalore, 7· Mercara** (North Coorg), **& 8· Virarajendrapet** (South Coorg).

DEPOSITS:

1922	1926	1930	1934	30-11-'35
ರೂ. 2,28,419/	6,48,940/	20,28,887/	24,95,829/	**27,40,812/-**

SAVINGS BANK ACCOUNTS

INTEREST allowed at 3½ %

Facilities } 1. Withdrawal by **CHEQUES.** 2· Production of pass books unnecessary at the time of withdrawal. 3 Accounts transferred **FREE** of charge from one office to another·

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.

ಇಲ್ಲಿಯ ವರೆಗಿನ ನಮ್ಮ ವಿಲ್ಲಿಯವರ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷಿಸುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

TO INSURE OR TO REPRESENT

CONSULT:—

The Bombay Life Assurance Company Ltd.

ESTD 1908.

Offers:
(1) Attractive Schemes of Assurances to suit individual needs.
(2) Rebate for yearly payment of premiums.
(3) Additional Rebate for larger assurances.
(4) Permanent Disability Benefits without extra.
(5) Increased rate of Bonuses.
(6) Accident Risk on a small extra payment.

Attractive Rates of Commission & Bonuses to Agents·

For particulars apply to any of our Offices:

Kochikar Brothers. Branch Secretaries·

OFFICES: (1) "Gautam Nivas" Charni Rd., Girgaum, Bombay No. 4. (2) P. B. 337, Mount Road, Madras. (3) Visveshwarapuram Circle, Bangalore City. (4) Hazur Road, Calicut, (5) Car Street, Mangalore, S. K. (6) Udipi, (S. India).

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ. ——— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವಾರ್ಷಿಕ ಚಂದಾ 2 ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M.3406

ಟಪ್ಪಾಲು ಹಾಸಲು ಸೇರಿ ರೂ. 2-12-0.

?
for Quality Snuff
H. Rama Rao
and Sons,
High Class Snuff Manufacturers
RAMA SNUFF
The charm of Snuff Users

ಸ್ವದೇಶಾಭಿಮಾನಿ
SWADESHABHIMANI

LIFE ASSURANCE
IS
NO EXPENSE
BUT
AN INVESTMENT
Safeguard yourself & your
family TODAY.
Buy a policy in
THE BOMBAY LIFE
Kochikar Brothers,
Udupi, Mangalore, Bangalore, Madras, Bombay

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಪ್ರೆಸ್ಸಿನಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥೧॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥೧॥

ಪುಸ್ತಕ ೩೦. | ಮಂಗಳೂರು ತಾ. ೨೪ನೇ ಶುಕ್ರವಾರ ಜನವರಿ ೧೯೩೬. (24—1—'36). | ಸಂಚಿಕೆ ೪

ಐದನೇ ಜೋರ್ಜ್ ಸಾರ್ವಭೌಮರವರು

ಇವರು ಕೆಲವು ದಿನಗಳಿಂದ ಅಸ್ವಸ್ಥದಿಂದಿದ್ದು ತಾ. 20-1-1936ನೇ
ದಿನ ರಾತ್ರಿ ಘಂಟೆ 11-15ಕ್ಕೆ ಸ್ವರ್ಗಸ್ಥರಾಗಿರುವರು.

ಟೀಕೆಗಳು
NOTES

ಮೆಡೇಮ್ ಟೆರ್‌ಸ್ಸ್ ಲೈಲಾ ಎಂಬಾಕೆ ಭವಿಷ್ಯವಾದಿನಿ. ಇವಳ ಪ್ರವಾದಗಳಲ್ಲಿ—ಹಿಟ್ಲರನ ಏಳ್ಗೆ, ಗ್ರೀಸಿಗೆ ಪುನಃ ರಾಜಾಗಮನ ಅಬಿಸೀನಿಯ ಯುದ್ಧ ಎಲ್ಲವೂ ನಿಜವಾಗಿಯೂ ಸಂಭವಿಸಿದುವೆಂದು ಇವಳಿಗೆ ಸ್ತುತಿವಾರಗಳು ಸಾಗುತ್ತಿವೆ.

\+ + + +

ಜೋರ್ಜ್ ಚಕ್ರವರ್ತಿಯವರು ಇನ್ನೆಷ್ಟೋ ವರ್ಷಗಳ ತನಕ ಸುಖವಾಗಿ ಜೀವಿಸುವರೆಂದೂ, ಈ ಕಾಹಿಲೆಯು ಹಿಂದಣ ಕಾಹಿಲೆಗಿಂತ ಏನೂ ಹೆಚ್ಚಿನದಲ್ಲವೆಂದೂ ಇವಳು ಮದ್ರಾಸಿನಲ್ಲಿ 'ಮೈಲ್' ಪತ್ರಿಕಾ ಪ್ರತಿನಿಧಿಯರಿಗೆ ತಿಳಿಸಿದಳೆಂದು ರವಿವಾರದ ಪತ್ರದಲ್ಲಿದೆ. ಇಂಥ ಇನ್ನೆಷ್ಟೋ ಪ್ರವಾದಗಳನ್ನು ಸಹ ಹೇಳಿರುವಳು

× × × × × ×

ಆದರೆ,—ಇದೊಂದು ಭವಿಷ್ಯವನ್ನು ನುಡಿದು ಇವಳು ತನ್ನ ಹಣೆಯ ಬರಹವನ್ನೆ ಓದಿಸಿಕೊಂಡಳು. ಚಕ್ರವರ್ತಿಯವರು ದಿಗಂತ ವಿಶ್ರಾಂತ ಕೀರ್ತಿವಂತರಾಗಿ, ಕೀರ್ತಿಶರೀರಿಗಳಾದರು.

× × × × ×

ಇವಳು ಹೇಳಿರುವುದರಲ್ಲಿ,— ಇನ್ನೆರಡು ವರ್ಷಗಳಲ್ಲಿ ಹಿಂದೂ ಮುಸ್ಲಿಮ ಜಗಳ ಮುಗಿವುದು, ಇಂಡಿಯದ ಕೀರ್ತಿಯು ಹಬ್ಬುವುದು, ಮದ್ರಾಸಿನಲ್ಲಿ ಚಿನ್ನ ಸಿಗುವುದು, ಮುಂದಣ ವರ್ಷ ಮಹಾ ಯುದ್ಧವಾಗಿ ಇಂಡಿಯಕ್ಕೆ ಲಾಭವಿದೆ, ಈಗ ನಡೆವ ಯುದ್ಧವು ತಟ್ಟನೆ ಅಬಿಸೀನಿಯದ ಪಕ್ಷವಾಗಿ ಮುಗಿವುದು, ಗಾಂಧಿಜಿಯವರು ಬಹು ವರ್ಷ ಬದುಕಿ, ಇನ್ನು ಆರು ವರ್ಷಗಳಲ್ಲಿ ಅವರ ಧ್ಯೇಯವು ಕೈಸೇರುವುದು ಎಂಬ ಮಾತುಗಳಿವೆ

× × × × × .

ನಂಬಬಹುದೋ, ಸ್ವಾಮಿ? ಇವೆಲ್ಲವೂ ಅದೇ ಮುಹೂರ್ತದಲ್ಲಿ ಕಂಡ ಕನಸುಗಳು! ಭವಿಷ್ಯ ಕೆಡಿಸಿಕೊಳ್ಳುವ ಭವಿಷ್ಯವೇ ಅಮ್ಮ?

\+ + + +

ಎಲ್ಲರೂ ಒಂದಾದರೆ ಇಂಡಿಯ ನಮ್ಮದು, ಎಂದು ಜಸ್ಟಿಸ್, ಪಕ್ಷವೆನ್ನುತ್ತದೆ ದೇಶಹಿತಕ್ಕಾಗಿ ಸಾಧಿಸುವವರು ಒಂದಾಗಬೇಕು— ಎಂದು ಕಾಂಗ್ರೆಸ್ ಪಕ್ಷ ಎನ್ನುತ್ತದೆ ಹಿತಸಾಧಕರೊಡನೆ ಸೇರಲು ನಾವು ಸಿದ್ಧರು— ಎಂದು ಲಿಬರಲ್ ಪಕ್ಷ ಎನ್ನುತ್ತದೆ ಇನ್ನು ಹಿಂದೂದೇಶವು ಉದ್ಧಾರವಾಗುವುದು ಖಂಡಿತ

\+ + + +

"ಒಂದಾಗಬೇಕು' ಎಂದು ಹೇಳುವ ಮೂವರೂ ಮಾತ್ರ ಬೇರೆ ಬೇರೆಯಾಗಿಯೆ ಇದ್ದಾರೆ, ಇರುವರು, ಇರಬೇಕು' ಎಂಬಂತೆ ಪ್ರಯತ್ನಗಳಾಗುತ್ತವೆ ಪ್ರತಿಯೊಂದು ಪಕ್ಷವೂ ಇತರರೊಡನೆ ಸೇರಿ ಒಂದಾಗುವ ಬದಲು, ತಾನೇ ಒಂದಾಗಿ ಇರುತ್ತದಲ್ಲ' ಇದಕ್ಕೇನು ಉಪಾಯ?

× × × × ×

ಪ್ರೈಮರಿ ಶಾಲೆಗಳಿಗಾಗಿ ಪುಸ್ತಕಗಳನ್ನು ಸರಕಾರವೇ ಬರೆಸಿ, ಪ್ರಕಟಿಸಿದರೆ ಉತ್ತಮ ಎಂದು ಈ ವಿಷಯದ ವಿಮರ್ಶಕ ಕಮಿಟಿಗೆ ಶ್ರೀಕೃಷ್ಣ ಚೌಧುರಿ ಶ್ರೀ ವಾಸುದೇವ ಮೊದಲಾದ ಮಹನೀಯರ ಸೂಚನೆ ಸ್ತುತ್ಯ

\+ + + +

ತ್ರಾವಣಕೂರ, ಕೊಚ್ಚಿ, ಮೈಸೂರು ರಾಜ್ಯಗಳಲ್ಲೂ ಹೀಗೆಯೆ ಸರಕಾರವೇ ಈ ಕೆಲಸಕ್ಕೆ ಕೈಹಚ್ಚಿದೆ ಗ್ರಂಥಕರ್ತರೂ ಪ್ರಕಾಶಕರೂ ದೂರುತ್ತಾರೆ. ಮದ್ರಾಸಿಗೂ ಇದು ತಪ್ಪದಿರಬಾರದು

\+ + + +

ಉಪಾಧ್ಯಾಯನಾದವನು ಒಂದಾದರೂ ಪುಸ್ತಕ ಬರೆದು ಪ್ರಕಟಿಸಬೇಕೆಂದು ಇಂಗ್ಲೆಂಡಿನ ಅಮೇರಿಕದ ರಾಜ್ಯಗಳಲ್ಲಿ ಇರುವ ನಿಯಮ ಶಿಕ್ಷಣಖಾತೆಗೆ ಸೇರಿದ್ದವರಾದರೂ ಬರೆಯುವುದು ಇಲ್ಲಿನ ವಾಡಿಕೆ, ಡೈರೆಕ್ಟರರು, ಇನ್ಸ್‌ಪೆಕ್ಟರರು, ಡಿಪ್ಯುಟಿ ಇನ್ಸ್‌ಪೆಕ್ಟರರು, ಟ್ರೈನಿಂಗ್ ಶಾಲೆ ಹೆಡ್‌ಮಾಸ್ತರರು, ಶಾಲಾ ಉಪಾಧ್ಯಾಯರು, ಇತ್ಯಾದಿ ಕೆಳದ ಮಟ್ಟಿಗೆ ಬರೆಯುತ್ತಲೇ ಇರುವರು.

ಗಿನೇ ಮುಂದುವರಿಸಲಾಗಿದೆ



ದೇಹಪುಷ್ಟಿಯನ್ನೂ
ನವಚೈತನ್ಯವನ್ನೂ
ಓವಲ್‌ಟಿನ್ ಕೊಡುತ್ತದೆ.

ಧಾತ್ರಿಯ ದಿವ್ಯ ಆಹಾರಗಳ ಸತ್ವಗಳಿಂದ ತಯಾರಿಸಲ್ಪಟ್ಟಿದ್ದು ಇದರಲ್ಲಿ ಬೆಳೆದ ಬಾರ್ಲಿ ದನದ ಕೆನೆ ಹಾಲು ಮತ್ತು ಕೋಕ್ಕೋವಿನ ಸತ್ವ ಇವೆಲ್ಲವೂ ಕೂಡಿದೆ ದೇಹಕ್ಕೆ ಶಕ್ತಿಯನ್ನೀಯುವ ಆಹಾರಗಳೆಲ್ಲವೂ ಇದರಲ್ಲಿ ತುಂಬಿ ಇದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ದೇಹದ ಮೈಕಟ್ಟು ಶಕ್ತಿ ಹುರುಪಿನ ಶಕ್ತಿ ಇತ್ಯಾದಿಗಳನ್ನು ಒದಗಿಸಿಕೊಡುವುದರಲ್ಲಿ ಇದಕ್ಕೆ ಸರಿಸಮಾನವಾದ ಪಾನೀಯವು ಮತ್ತೊಂದಿಲ್ಲ ದೇಶದ ಪ್ರಖ್ಯಾತ ಆಟಗಾರರೂ ಇದನ್ನು ಸೇವಿಸುತ್ತಾರೆ ಇದು ತ್ರಾಣವನ್ನೂ ಗೆಲುವಾ ಶಕ್ತಿಯನ್ನೂ ಕೊಡುವುದೆಂದು ಅವರಿಗೆ ಗೊತ್ತು

ಜಗತ್ತಿನಲ್ಲಿ ಸುಖಸಂತೋಷದಿಂದಿರಬೇಕೆ? ಆರೋಗ್ಯವಂತರಾಗಿರಬೇಕೆ? ಕೆಲಸದಲ್ಲಿ ಉತ್ಸಾಹವಿರಬೇಕೆ? ನಿದ್ರೆಯು ಸರಿ ಬೀಳಬೇಕೆ? ಹಾಗಾದರೆ — ಓವಲ್ಟಿನ್ನನ್ನು ನಿಮ್ಮ ದಿನನಿತ್ಯದ ಆಹಾರವಾಗಿ ತೆಗೆದುಕೊಳ್ಳಿ ಆದರೆ ಪರಕೀಯರ ಮೋಸದ ಮಾಲನ್ನು ಪಡೆದು ನಿರಾಶರಾಗಬೇಡಿ-ಜಾಗ್ರತರಾಗಿ

ಓವಲ್‌ಟಿನ್
ಮೆದುಳು, ನರ ಮತ್ತು ದೇಹಗಳನ್ನು ವೃದ್ಧಿಸುತ್ತದೆ.

OVALTINE

ಇದರ ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಏಜಂಟರು - ಜೇಮ್ಸ್ ರೈಟ್, 85ಎ, ಕ್ಲೈವ್ ಸ್ಟ್ರೀಟ್ ಕಲ್ಕತ್ತಾ
ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ

OV/443

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK
LIMITED.

ಇಟೆಲಿಯಾನ ಪೆಸಿಯಿಸ್ಟ್ ಪಂಗಡದ ಕ್ರೂರಕೃತ್ಯಗಳು!

ಹಬಸಿಯವರ ಮೇಲೆ ಇಟೆಲಿಯಾನರ ಆರೋಪ!

ಇಟೆಲಿಯಾನರ ಸೋಲು ಖಂಡಿತ! ಸ್ವೀಡನಿಗೆ ಇಟೆಲಿಯ ಪ್ರತ್ಯುತ್ತರ!

ಹರಿಜನರಿಗೆ ಭಜನೆ ಮಂದಿರದಲ್ಲಿ ಪ್ರವೇಶ ಕೊಡಲಾಯಿತು!

ಇಟೇಲಿಯಾನ ಪೆಸಿಯಿಸ್ಟ್ ಪಂಗಡದವರ ಕ್ರೂರ ಕೃತ್ಯಗಳು

ಇಟೇಲಿಯಾನ ಸೋಮಾಲಿಲೆಂಡಿನ ಸೋಮಾಲಿ ಸೈನಿಕರು ಇಟೇಲಿಯಾನರನ್ನು ತ್ಯಜಿಸುತ್ತಿದ್ದಾರೆ ಹಲವರು ಹಬಸಿಗಳ ಕಡೆಗೆ ಸೇರುತ್ತಿದ್ದಾರೆ ಇದೇ ರೀತಿ ಇಟೇಲಿಯಾನರ ಅಧಿಕಾರದಲ್ಲಿರುವ ಎಲ್ಲಾ ಸೋಮಾಲಿಗಳೂ ಯಾ ಇತರ ದೇಶಿ ಸೈನಿಕರೂ ಅವರನ್ನು ತ್ಯಜಿಸುತ್ತಿದ್ದಾರೆಂದು ವಾರ್ತೆ ಬಂದಿರುತ್ತದೆ ಇಟೇಲಿಯಾನರು ಇವರನ್ನು ಪ್ರತಿಯೊಂದು ಕದನದಲ್ಲಿ ಮುಂದಕ್ಕೆ ದೂಡಿ, ಅನೇಕ ಅಪಾಯಗಳಿಗೆ ಗುರಿಗಳನ್ನಾಗಿ ಮಾಡುತ್ತಿದ್ದಾರಲ್ಲದೆ, ತಾವಿಲ್ಲದ ಸಮಯ ತಮ್ಮ ಹೆಂಡತಿ ಮಕ್ಕಳನ್ನು ತಮ್ಮ ಭೋಗಸುಖಗಳಿಗಾಗಿ ಉಪಯೋಗಿಸುತ್ತಿದ್ದಾರೆಂದೂ ಸೋಮಾಲಿಗಳು ಈ ರೀತಿ ರೇಗಿರುವರು ಕೆಲವು ಕಡೆಗಳಲ್ಲಿ ಯುದ್ಧ ತಂದೊಡ್ಡಿದ ಪೆಸಿಯಿಸ್ಟ್ ಪಂಗಡದವರಿಗೂ, ಅವರ ವಿರೋಧ ಪಕ್ಷದವರಿಗೂ ಬಹಳ ಕಲಹವೆಬ್ಬಿರುತ್ತದೆ ಈ ಎರಡು ತಂಡಗಳಲ್ಲಿ ಭಯಂಕರ ಕದನ ಉಂಟಾಗಿ ಅನೇಕರು ಮಡಿದಿರುವರು ಅದಿಸ್ ಅಬ್ಬಬದ ಮೇಲೆ ಬಾಂಬಿನ ಪ್ರಯೋಗವಾಗಬಹುದೆಂದು ಊಹಿಸಲಾಗಿದೆ ಎಲ್ಲೆಲ್ಲೂ ಜನರು ಜಾಗರೂಕರಾಗಿರುತ್ತಾರೆ

ಇಟೇಲಿಯಾನರು ಸೋಲು ಖಂಡಿತ

ಎಲ್ಲಾ ಸಂಭವಗಳನ್ನೂ ಸಂಘಟನೆಗಳನ್ನೂ ಪರಿಶೀಲಿಸಿ ನೋಡಿದರೆ, ಇಟೇಲಿಯಾನರು ಬೇಗನೇ ಅಭಿಯೋಗವನ್ನು ಬಿಟ್ಟು ಪ್ರಾಣದಂಶಿಸಿಂದ ಪಲಾಯನ ಮಾಡಬೇಕಾಗುವುದು ಸೆಂಕ್ಷನುಗಳಿಂದಂತೂ ಅವರ ಕೈಗಳು ಕಟ್ಟಿಹೋಗಿವೆ ಬೇಗನೇ ಈ ಯುದ್ಧವು ಕೊನೆಗಾಣುವುದು

ರಾಸ ದೆಸ್ತಾನ ಪರಾಕ್ರಮ

ಓಗದನ್ ಪ್ರಾಂತ್ಯದ ಗೆನೆಲೆ ಡೋರ್ಯ ಪ್ರದೇಶದಲ್ಲಿ, ರಾಸ ದೆಸ್ತಾನ ಸೈನ್ಯವು ಇಟೆಲಿಯಾನರನ್ನು ಸುತ್ತುಹಾಕಿರುತ್ತದೆ ಇತ್ತ ಕಡೆಯ ವಾರ್ತೆ ಸರಿಯಾಗಿ ಬರಲು ತುಂಬಾ ಆತಂಕಗಳಿವೆ ಒಂದೆಡೆ ರಾಸ ದೆಸ್ತಾನ ಸೈನಿಕರು ಇಟೆಲಿಯಾನ ಸೈನ್ಯದೊಡನೆ ಬಹಳ ಶೌರ್ಯದಿಂದ ಕಾದಾಡಿದರು ಅನೇಕರು ಇಟೆಲಿಯಾನರ ಮೆಶಿನು ತುಪಾಕಿಗಳ ಬಾಯಿಗೆ ತುತ್ತಾಗಿರುವರು ಮೆಶಿನು ತುಪಾಕಿಗಳ ಹೊಡತವನ್ನು ಸಹಿಸಲಾರದೆ, ಇವರ ಅನೇಕ ಸೈನಿಕರು ಪರ್ವತಗಳನ್ನು ಸೇರಿರುವರು • ಇಟೆಲಿಯಾನರು ವಿಮಾನಗಳಿಂದ ಬೋಂಬುಗಳನ್ನೂ ಉಪಯೋಗಿಸುತ್ತಿದ್ದಾರೆ ಸಾಧಾರಣ ೨೦೦೦ ಬೋಂಬುಗಳು ಉಪಯೋಗಿಸಲ್ಪಟ್ಟವು ರಾಸ ದೆಸ್ತಾನು ಅತಿ ಜಾಗರೂಕತೆಯಿಂದ ಹೋರಾಡುತ್ತಿದ್ದಾನೆ ಈ ಪ್ರದೇಶದಲ್ಲಿ ಇಟೇಲಿಯಾನರು ಸಂಪೂರ್ಣ ಜಯಹೊಂದಿರುವರೆಂದೂ, ಸಾಧಾರಣ ೪೦೦೦ ಹಬಸಿಗಳು ಮಡಿದಿರುವರೆಂದೂ ರೋಮ್ ನಗರದಿಂದ ವಾರ್ತೆ ಬಂದಿರುತ್ತದೆ.

ಸ್ವಾಮಿ ಶಂಕರಾಚಾರ್ಯರಿಗೆ ಹರಿಜನರ ಪಾದಪೂಜೆ.

ಅನೇಕ ಸುವರ್ಣ ಹಿಂದೂಗಳು ಹಾಜರಿದ್ದು, ಪ್ರಸಿದ್ಧ ಡಾ। ಮೂಂಜೆಯವರ ನೇತೃತ್ವದಲ್ಲಿ ಪೂನೆಯ "ಹರಿಜನ ಪ್ರದೇಶ"ದಲ್ಲಿ ಶ್ರೀ। ಶಂಕರಾಚಾರ್ಯರ (ಡಾ। ಕುರ್ತಕೋಟಿ) ಪಾದಪೂಜೆಯು ಅಲ್ಲಿನ ಹರಿಜನರಿಂದ ಅತಿ ವಿಜೃಂಭಣೆಯಿಂದ ಮಾಡಲಾಯಿತು ಸಮಗ್ರ ಭರತಖಂಡದಲ್ಲಿ ಹಿಂದೂಧರ್ಮದ ಇತಿಹಾಸದಲ್ಲಿ, ಹರಿಜನರು ಶ್ರೀ। ಸ್ವಾಮಿಯವರ ಪಾದಪೂಜೆಮಾಡಿದ್ದು ಇದು ಮೊದಲನೇಯದು

ವಿಚಿತ್ರ ಘಟನೆ.

ಓರ್ವ ಯೋಗಿಯ ಅದ್ಭುತ ಕಾರ್ಯ ಶ್ರೀ। ವಿಜಯಶಾಂತಿ ಸೂರಿಸ್ವಾಜೀ ಮಹಾರಾಜ, ಯೋಗಿಯ ಹೆಸರು ಘಟನೆಯು ನಡೆದುದು ಮಾರವಾಡದಲ್ಲಿ ಅಲ್ಲಿನ ಓರ್ವ ವರ್ತಕನು ಈ ಯೋಗಿಯ ಸಮಾರಾಧನೆಗಾಗಿ ಒಂದು ಭೋಜನ ಸಮಾರಂಭವನ್ನು ಜರಗಿಸಿದ್ದನು ಸಾಧಾರಣ ೧೦೦೦ ಮಂದಿಗಳಿಗೆ ಆಮಂತ್ರಿಸಲಾಗಿತ್ತು ಆದರೆ, ಯೋಗಿಗಳ ದರ್ಶನ ಮಾಡಲು ನಿರೀಕ್ಷಿಸಿದ್ದ ಜನರ ದಾಯವು ಹೆಚ್ಚಿದ್ದುದರಿಂದ ವರ್ತಕನಿಗೆ ಬಹಳ ಚಿಂತೆ ಉಂಟಾಯಿತು ಆದರೆ ಯೋಗಿಗಳ ಉತ್ತೇಜನೆಯಿಂದ ಸಮಾಧಾನ ಹೇಳಿದರು ಎಲ್ಲರನ್ನೂ ಕೂಡಿಸಲಾಯಿತು ಬಡಿಸಲಾಯಿತು ಒಂದು ಸಾವಿರ ಮಂದಿಗೆ ತಯಾರಿಸಿದ ಭೋಜನವನ್ನು ೫೦೦೦ ಜನರಿಗೆ ಒದಗಿಸಲು ಸಾಧ್ಯವಾಯಿತು ಇದೊಂದು ಯೋಗಿಗಳ ಅದ್ಭುತಕಾರ್ಯವೆಂದು ತಿಳಿಯಲಾಗಿದೆ

ಒಂದು ಸ್ತ್ರೀಯನ್ನು ಕದ್ದೊಯ್ದರು

ಮತ್ತು ಹಣಕೊಟ್ಟರೆ ಮಾತ್ರ ಬಿಟ್ಟುಕೊಡುವೆವು ಎಂದು ... ಬ್ರಾಹ್ಮಣ ಸ್ತ್ರೀಯ ಗಂಡನಿಗೆ ಕಳುಹಿಸಿದ್ದರು ಈ ಘಟನೆಯು ನಡೆದದ್ದು ... ಸರಹದ್ದಿನ ಒಂದು ಹಳ್ಳಿಯಲ್ಲಿ ... ಮೂರು ಪಠಾಣರು ಓರ್ವ ಸಿಕ್ಖನ ಮನೆಯನ್ನು ಸೇರಿ, ಬಲಾತ್ಕಾರದಿಂದ ಅವನ ಪತ್ನಿಯನ್ನು ಎಳೆಕೊಂಡು ಹೋದರು ಈ ವರ್ತಮಾನವು ಪೋಲೀಸ್ ಅಧಿಕಾರಿಗಳಿಗೆ ತಿಳಿಯಲು, ಪೋಲೀಸರ ಒಂದು ತಂಡವು ದರೋಡೆಗಾರರನ್ನು ಹಿಂಬಾಲಿಸಿಕೊಂಡು ಹೋಗಿರುತ್ತದೆ

ಹರಿಜನರಿಗೆ ಭಜನೆಮಂದಿರದಲ್ಲಿ ಪ್ರವೇಶಕೊಟ್ಟರು

ರಾಜಂ ಎಂಬಲ್ಲಿನ ಶ್ರೀರಾಮ ಮಂದಿರವೆಂಬ ಭಜನೆಮಂದಿರದಲ್ಲಿ ಮೊನ್ನೆ ಪೊಂಗಲಾದ ದಿವಸ "ಭಕ್ತನಂದನಾರ"ವೆಂಬ ಹರಿಕೀರ್ತನೆಯು ಜರಗಿತು ಈ ಹರಿಕೀರ್ತನೆ ಸಮಾರಂಭಕ್ಕೆ ಆ ಪಟ್ಟಣದ ಅನೇಕ ಪ್ರಸಿದ್ಧ ಪುರುಷರೂ, ವಿದ್ವಾಂಸರೂ, ಬ್ರಾಹ್ಮಣರೂ, ಇತ್ಯಾದಿಗಳು ನೆರೆದಿದ್ದರೂ, ಇವರ ನಡುವೆ ಒಂದುನೂರು ಜನ ಹರಿಜನರೂ ಕೂಡಿದ್ದರು.

ಮಕ್ಕಳ ರಕ್ಷಕರನ್ನು ಶಿಕ್ಷಿಸಲಾಯಿತು.

ಅವರ ಮಕ್ಕಳನ್ನು ವಿದ್ಯಾಭ್ಯಾಸಂಗ ಮಾಡಲು ಶಾಲೆಗಳಿಗೆ ಕಳುಹಿಸಿಕೊಡದೆ ಇದ್ದುದಕ್ಕೆ ಪಂಜಾಬ ಪ್ರಾಂತ್ಯದಲ್ಲಿ ನವೀನವಾಗಿ ಜ್ಯಾರಿಯಾದ ಕ್ರಮಗಳನ್ನನುಸರಿಸಿ, ಸಾಧಾರಣ ೧೫೦ ಜನ ರಕ್ಷಕರಿಗೆ ರೂ. ೧ರಿಂದ ೫ವರೆಗಿನ ಜುಲುಮಾನೆ ವಿಧಿಸಲಾಯಿತು. ಇದೇ ರೀತಿಯಲ್ಲಿ ಸಮಗ್ರ ಭರತಖಂಡದಲ್ಲಿ ವಿದ್ಯಾಭ್ಯಾಸವನ್ನು ಕಡ್ಡಾಯಗೊಳಿಸುವ ವ್ಯವಸ್ಥೆಯಾಗಬೇಕು.

ಮಹಾತ್ಮಾ ಗಾಂಧಿಯವರ ಆರೋಗ್ಯ

ಮಹಾತ್ಮಾ ಗಾಂಧಿಯವರನ್ನು ಮುಂಬೈ ನಗರಕ್ಕೆ ತಂದಿರುತ್ತಾರೆ. ರಕ್ತ ವೇಗವು ಕಡಿಮೆಯಾಗಿದೆಯಾದರೂ, ದೇಹದಲ್ಲಿ ತುಂಬಾ ನಿಶ್ಶಕ್ತಿಯಿರುವುದರಿಂದ, ಯಾರಿಗೂ ಇವರ ಭೇಟಿಮಾಡಲು ಅವಕಾಶಕೊಡಲಿಲ್ಲ ಇವರ ಹೃತ್ಕಮಲದ ಸ್ಥಿತಿಯು ಉತ್ತಮವಾಗಿರುತ್ತದೆಂದು ಮಹಾದೇವ ದೇಸಾಯಿಗಳವರ ಪ್ರಕಟಣೆ ಪ್ರಸಿದ್ಧ ವೈದ್ಯಕೀಯ ಜನರು ಇವರ ಆರೋಗ್ಯದ ಪರೀಕ್ಷೆ ಆಗಾಗ್ಗೆ ಮಾಡುತ್ತಿದ್ದಾರೆ ಇವರು ಸಂಪೂರ್ಣ ಗುಣಹೊಂದಲು ಹವಾ ಬದಲಾವಣೆಯಾಗಬೇಕೆಂದು ಕೆಲವರ ಅಭಿಪ್ರಾಯ

ಪ್ರಸಿದ್ಧ ಅಂಗ್ಲೇಯ ಕವಿಗಳಾದ,

ರಡ್‌ಯಾರ್ಡ ಕಿಪ್ಲಿಂಗರ, ಇದೇ ಜನವರಿ ತಾ ೧೮ರಲ್ಲಿ ದಿವಂಗತರಾದರು ಡಿಶಂಬರ ೩೦, ೧೮೬೫ರಲ್ಲಿ ಮುಂಬಯಿಯಲ್ಲಿ ಜನಿಸಿದವರು ವಿದ್ಯಾಭ್ಯಾಸಂಗವನ್ನು ಸ್ವದೇಶದಲ್ಲಿ ಮಾಡಿದವರಾಗಿ, ಬಹಳ ಪ್ರಖ್ಯಾತ ಕವಿಗಳಾದರು ಇವರ ಹಿಂದೂದೇಶದ ಅರಣ್ಯಗಳ ಕುರಿತ ಅನೇಕ ಕಥೆಗಳನ್ನು ರಚಿಸಿರುವರು ಇವರ ಶ್ರೇಯಸ್ಸು ಎಲ್ಲೆಲ್ಲೂ ಹರಡಿರುತ್ತದೆ ೧೯೦೭ರಲ್ಲಿ ಸಾಹಿತ್ಯದ ನೋಬೆಲ್ ಬಹುಮಾನವು ಇವರಿಗೆ ದೊರಕಿರುತ್ತದೆ

ಕಲ್ಕತ್ತಾದಲ್ಲಿ ಕೊಂಗ್ರೆಸ್ ಅಧ್ಯಕ್ಷರು.

ಶ್ರೀ ಬಾಬು ರಾಜೇಂದ್ರ ಪ್ರಸಾದರು ಶ್ರೀಯುತರುಗಳಾದ ಸೇತ ಜಮ್ನಾಲಾಲ ಬಜಾಜ, ಪುರುಷೋತ್ತಮ ಟಂಡನ್ ಮತ್ತು ಮಹೇಂದ್ರ ಪ್ರಸಾದ ಇವರಿಂದ ಒಡಗೂಡಿ ಮೊನ್ನೆ ತಾ ...ರಲ್ಲಿ ಕಲ್ಕತ್ತಕ್ಕೆ ಬಂದಿರುವರು ಇವರನ್ನು ಅತಿ ವಿಜೃಂಭಣೆಯಿಂದ ಸ್ವಾಗತೀಕರಿಸಲಾಯಿತು ಇವರ ಇಲ್ಲಿಗೆ ಬಂದುದು ಕಾರ್ಯಕ್ಕಾಗಿ ಬಂದಿರುವುದು ಬಂಗಾಳ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಕಲಹಗಳ ನಿವಾರಣೆಯಲ್ಲಿ ಕೈಹಾಕುವುದಿಲ್ಲವೆಂದು ತಿಳಿದಿರುತ್ತದೆ ಇಲ್ಲಿ ಕೆಲವು ದಿನಗಳಿದ್ದು ಅನೇಕ ಪ್ರಮುಖರ ಭೇಟಿ ಮಾಡಿ ಇಲ್ಲಿಂದ ಮುಂದ ಪರಿಯಂತರ ತೆ ಬಂಗಾಳ ಕೊಂಗ್ರೆಸ್ ಕಮಿಟಿಯ ಕಲಹ ನಿವಾರಣಾ ಕಾರ್ಯವನ್ನು ಶ್ರೀ ಸರತ್‌ಚಂದ್ರ ಭೋಸರಿಗೆ ಒಪ್ಪಿಸಲಾಗಿದೆ

೩೦ ಮಂದಿ ಮಕ್ಕಳನ್ನು ಕದ್ದೊಯ್ದರು

ಫಿರೋಜಪುರದ ಒಂದು ಹಳ್ಳಿಯಲ್ಲಿ ಒಂದು ಕೊರವ ಜಿ ಮಂದಳದ ಮಕ್ಕಳನ್ನು ಕದ್ದೊಯ್ದ ವಾರ್ತೆಯು ಓರ್ವ ಪೋಲೀಸ ಕೊನಸ್ಟೇಬಲನಿಗೆ ಒಂದು ಹುಡುಗಿಯ ಮೂಲಕ ತಿಳಿದುಬರಲು ಅವನು ಒಂದು ಪೋಲೀಸ್ ಘಟವನ್ನು ಕೂಡಕೊಂಡು ಈ ಕೊರವಂಜಿಗಳನ್ನು ಹಿಂಬಾಲಿಸಿ, ಆ ಮೂವತ್ತು ಮಕ್ಕಳನ್ನು ರಕ್ಷಿಸಿದರು.

ಕೈಯಿಂದ ತಯಾರಿಸಿದ ಕಾಗದವನ್ನು ಉಪಯೋಗಿಸಿದ ಕಾಂಗ್ರೆಸ್ ಚರಿತ್ರೆ.

ಮಹಾರಾಷ್ಟ್ರ ಕೊಂಗ್ರೆಸ್ಸ ಕಮಿಟಿಯವರು ಕಾಂಗ್ರೆಸ್ಸಿನ ಚರಿತ್ರೆಯನ್ನು ಕೈಯಿಂದ ತಯಾರಿಸಿದ ಕಾಗದ ಮೇಲೆ ಛಾಪಿಸಿ, ಪುಸ್ತಕಮಾಡಿ, ಮಹಾತ್ಮಾಗಾಂಧಿಯವರಿಗೆ ಅರ್ಪಿಸಿರುವರು ಇದರಕುರಿತು ಮಹಾದೇವ ದೇಸಾಯಿಯವರು ಹರಿಜನ ಪತ್ರಿಕೆಯಲ್ಲಿ ಹೀಗೆನ್ನುತ್ತಿದ್ದಾರೆ— ಇದೊಂದು ಅತೀ ಸೌಂದರ್ಯದ ಒಡವೆಯಾಗಿರುತ್ತದೆ. ಈ ಕೆಲಸವನ್ನು ಅವರು ಅತಿ ತ್ವರೆಯಿಂದ ಮಾಡಿರುವರು. ಕಾಂಗ್ರೆಸ್ ಸುವರ್ಣೋತ್ಸವದ ಸಮಯ ಇತರ ಚರಿತ್ರೆಗಳಿಗಿಂತ ಮೊದಲಾಗಿ ಇದು ನಮ್ಮ ಕೈಗಳನ್ನು ಸೇರಿರುತ್ತದೆ

"ಇಗರ್ಜಿಗಳನ್ನು ಸುಟ್ಟಿದ್ದು ನಿಜ.

ಆದರೆ, ಶಾಂತಿಸ್ಥಾಪನೆಯಾದ ಮೇಲೆ ಕಳೆದುಹೋದ ಈ ಇಗರ್ಜಿಗಳು ಪುನಃ ರಚನೆ ಹೊಂದುವುವು ಅವುಗಳು ಉತ್ತಮ ರೀತಿಯಲ್ಲಿ ಪ್ರಗತಿ ಹೊಂದುವವು" ಎಂದು ಇಟೇಲಿಯಾನರ ಮಾತು ಯುದ್ಧದಿಂದ ಅನೇಕ ಅನಾಹುತಗಳುಂಟಾದರೂ, ಇವುಗಳ ಫಲಿತಾಂಶವಾಗಿ ಮುಂದಕ್ಕೆ ಒಳ್ಳಿತು ಉಂಟಾಗುವುದೆಂದು ಇವರ ಭರವಸೆಕೊಡುತ್ತಿದ್ದಾರೆ ಇವರ ನಾಲ್ಕು ವಿಮಾನಗಳು ಕೊರೆಮ್ ಎಂಬ ನಗರದ ಮೇಲೆ ಬೊಂಬುಗಳನ್ನು ಜಡಿದಿರುತ್ತಾರೆ ಇವುಗಳಿಂದ ಪರಿಣಮಿಸಿದ ಅನಾಹುತಗಳ ಸರಿಯಾಗಿ ತಿಳಿದುಬರಲಿಲ್ಲ

ಸ್ವೀಡನಿಗೆ ಇಟೆಲಿಯ ಪ್ರತ್ಯುತ್ತರ

"ನಾವು ನಿಮ್ಮ ರೆಡ್‌ಕ್ರೊಸ್ ಆಸ್ಪತ್ರೆಗಳಮೇಲೆ ಉದ್ದೇಶಪೂರ್ವಕವಾಗಿ ಬೊಂಬುಗಳನ್ನು ಎಸೆದುದಲ್ಲ, ಅವುಗಳು ಕೇವಲ ಅಪಘಾತಗಳಾಗಿರುತ್ತವೆ ಹಾಗಾದುದಕ್ಕೆ ನಾವು ತುಂಬ ಕನಿಕರಪಡುತ್ತಿದ್ದೇವೆ ಆದರೆ, ಅಂಥಾ ಕಾರ್ಯವನ್ನು ಕೈಕೊಂಡಿರುವವರು ನೀವು ಕೆಲವು ಅಪಾಯಗಳಿಗೆ ಸಿದ್ಧರಿರಬೇಕು." ಎಂದೂ ಸ್ವೀಡನ್ ದೇಶದವರ ರೆಡ್‌ಕ್ರೊಸ್ ಆಸ್ಪತ್ರೆಯನ್ನೂ ಇಟೇಲಿಯಾನ ಬೊಂಬುಗಳು ಕೆಡವಲು ಸ್ವೀಡನ್ ದೇಶದವರು ಇಟೆಲಿಗೆ ಕಳುಹಿಸಿಕೊಟ್ಟ ಪ್ರತಿಕೆಲಿಗೆ ಪ್ರತ್ಯುತ್ತರ ಬಂದಿರುತ್ತದೆ

ಹಬಸಿಯವರ ಮೇಲೆ ಇಟೇಲಿಯಾನರ ಆರೋಪ.

'ಸಶಸ್ತ್ರರಾದ ಹಬಸಿಗಳು ಈ ರೆಡ್‌ಕ್ರೊಸ್ ಆಸ್ಪತ್ರೆಗಳಲ್ಲಿ ಆಶ್ರಯ ಪಡೆಯುತ್ತಿದ್ದರು ದಮ್‌ದಮ್ ಬುಲ್ಲೇಟುಗಳ ಉಪಯೋಗವಾಗಿರುತ್ತದೆ ಮತ್ತು ಹಬಸಿಯವರ ಅನೇಕ ಕ್ರೂರಕರ್ಮಗಳ ದಲ್ಲಿ ತಮ್ಮ ವರ್ತನೆಯು ಅಷ್ಟು ಭಯಂಕರತೆಯನ್ನು ಹೊಂದಿತು. ' ಈ ಕುರಿತು ಜನಾಂಗಸಭೆಗೆ ಸಿಗಾ ತೆಗೆದುಕೊಳ್ಳಬೇಕಾಗಿ ಜನಾಂಗಸಭೆಗೆ ಇಟೇಲಿಯಿಂದ ಪತ್ರ ಬಂದಿರುತ್ತದೆ ರೆಡ್‌ಕ್ರೊಸ್ ಸಂಸ್ಥೆಯವರು ಹಬಸಿಯ ಸೈನಿಕರಿಗೆ ಆಶ್ರಯಕೊಟ್ಟುದುದಕ್ಕಾಗಿ, ರೆಡ್‌ಕ್ರೊಸ್ ಮಹಾಸಂಸ್ಥೆಗೆ ಇಟೇಲಿಯ ಪ್ರತಿಕೂಲ ಬಂದಿರುತ್ತದೆ

ಹಬಸಿ ಚಕ್ರವರ್ತಿಯವರ ದೃಢವಾದ ನಂಬುಗೆ

ಆಧುನಿಕ ಯುದ್ಧೋಪಕರಣಗಳ ಎದುರು ಪುರಾತನ ಮಟ್ಟಿನ ತಮ್ಮ ಸೈನಿಕರು ಈ ರೀತಿ ಕಾದಾಡಿ ಜಯಹೊಂದುವರೆಂದು ಹಬಸಿ ಚಕ್ರವರ್ತಿಯವರಿಗೆ ಪ್ರಾರಂಭದಲ್ಲಿ ಅಷ್ಟು ಭರವಸೆ ಇರಲಿಲ್ಲ ಆದರೆ, ಇತ್ತೀಚೆಗೆ ತಮಗುಂಟಾದ ಅನೇಕ ಜಯಗಳಿಂದಾಗಿ, ಜಯವು ತಮ್ಮ ಕೈ ಸೇರುವುದೆಂದು ದೃಢವಾಗಿ ನಂಬಿರುವರು ತಮ್ಮ ಸೈನಿಕರು ಕೈ ಕೈ ಯುದ್ಧದಲ್ಲಿ ಅತಿ ಪ್ರವೀಣರೆಂದೂ, ಅವರು ತೋರಿಸಿದ ಸಾಹಸಗಳನ್ನೂ ಕಂಡು ಬಹಳ ಸಂತುಷ್ಟರಾಗಿರುವರು ಆದರಿಂದ ಸಂಧಿ ಪ್ರಸ್ತಾಪ ಮಾತುಗಳನ್ನು ಇನ್ನುಮುಂದಕ್ಕೆ ಎತ್ತಲೇ ಬಾರದೆಂದೂ, ಕಾದಾಡಿಯೇ ತಮ್ಮ ಸ್ವದೇಶ ರಕ್ಷಣೆ ಮಾಡಬೇಕೆಂದೂ ಹಬಸಿ ಚಕ್ರವರ್ತಿಯವರು ದೃಢಸಂಕಲ್ಪ ಮಾಡಿರುವರು

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಶಾಲೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ಸಾವು ನಿರ್ಣಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾಯುತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ಧೃಷ್ಣವಂಗಿ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ–ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ
ಬೆಲೆ ಆಣೆ 8.
30, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)
ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ವಂದಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ—ಅದು ಪೂರ್ಣವಾದ ಟೋನಿಕ್ ಆಹಾರ. ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ.
ರೂ. 3–4–0 ಮತ್ತು ರೂ. 1–12–0.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:— ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Estd 1920] THE [1920ರಲ್ಲು ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್
ಪುತ್ತೂರು.
ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.
"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.
"ಚಾಲ್ತಿ ಠೇವಣಾತಿಗಳಿಗೆ"—ಶೇಕಡಾ 2½ರಂತೆ.
ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.
ಹೆಚ್ಚಿನ ಮಾಹಿತಿ ಬಗ್ಗೆ ಕೇಳಿಕೊಳ್ಳಬಹುದು.

Puttur, Dated 10—4—1935.

G. N. Laksinman Pai,
Secreatry.

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಅಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ
ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ
"ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ದುಕಾನ್, ರಥಬೀದಿ ಮಂಗಳೂರು.
(ಸನ್ 1868ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು. ಇದು ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು.

ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ. ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ. ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಹಿಂದಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ:—ದೊಡ್ಡ ಬಾಟ್ಲಿಗೆ ರೂ. 4. ಮಧ್ಯಮ 2–4–0. ಚಿಕ್ಕದು 1–8–0.

ತಯಾರಿಸುವವರು:— ಲಸ್ಕರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್:—ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

'ಸ್ವದೇಶಾಭಿಮಾನಿ' ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡೆಕೊಳ್ಳಿರಿ—ಓದಿರಿ!

ಮಹಿಳಾ ಸಮಾಜ.

(ಒಂದು ಕಾಲ್ಪನಿಕ ಸಮಾಜ ಚಿತ್ರ)

ಲೇಖಕ:—ಯಂ. ಬಿ. ಎನ್. ಮೂರ್ತಿ.

ಶ್ರಾವಣ ಮಾಸದ ಮಧ್ಯಕಾಲ. ಮಳೆಯು ಚಲೋ ರೀತಿಯಲ್ಲಿ ಸುರಿಯುತ್ತಿದೆ. ಪೈರು ಪಚ್ಚೆಗಳು ಹಸನಾಗಿ ಬೆಳೆದು ಅಕ್ಷಿಗಳಿಗೆ ಆನಂದದಾಯಕವಾಗಿ ತೋರುತಿರುವುವು. ನಡು, ನಡುವೆ ಆದಿತ್ಯನ ಹೊಂಬಣ್ಣ ಕಿರಣಗಳು ಪೈರು ಪಚ್ಚೆಗಳಿಗೆ ಮತ್ತಷ್ಟು ಕಾಂತಿಯನ್ನು ಕೊಡುತ್ತಿರುವುವು. ಈ ಸಮಯ ಮಂಗಳಾಪುರದ ಗೋಪಿನಾಥ ಭಟ್ಟರ ಉದ್ಯಾನವು ನೇತ್ರಾವತೀ ನದೀ ದಡದಲ್ಲಿ ಶೋಭಿಸುತ್ತಿರುವುದು.

ಸಾಯಂಕಾಲದ ಆರು ಗಂಟೆ ಸಮಯ ಉದ್ಯಾನದ ಒಂದು ಮೂಲೆಯಲ್ಲಿ ಪುಷ್ಪಗಳನ್ನು ಕೊಯ್ಯುತ್ತಿರುವ ಇಬ್ಬರು ನವ ತರುಣಿಯರು ಅದೇನನ್ನೋ ಮಾತಾಡುತ್ತಿರುವರು. ಒಬ್ಬಳ ವಯಸ್ಸು ಸುಮಾರು ಹದಿನಾರರ ಹೊರ ಒಳಗಿರಬಹುದು. ಇನ್ನೊಬ್ಬಳ ಪ್ರಾಯವು ಇಪ್ಪತ್ತು ದಾಟಿರಬಹುದು. ಮೊದಲನೇಯವಳು ಸಾದಾ ಬಿಳಿ ಆದರೆ ಮುಖವು ಶೋಭಾಯಮಾನವಾಗಿ ತೋರುವುದಿಲ್ಲ. ಅವಳ ಹೆಸರು ಕಮಲ ಎರಡನೇಯವಳು ಸಾದಾ ಕಪ್ಪು ಆದರೆ ಮುಖವು ಕಾಂತಿಯುಕ್ತವಾಗಿತ್ತು ಇವಳ ಹೆಸರು ಸೀತಾ

ಸೀತಾ:—ಕಮಲಾ ಇದೇನು ಆಡಂಭರ?

ಕಮಲಾ:—ಸರ್ವರಿಗೆ ಇದ್ದ ಆಡಂಭರವೇ ನನ್ನದು.

ಸೀತಾ:—ಸನಾತನಿಗಳ ಪಂಕ್ತಿಭ್ರಷ್ಟತೆ ನಿನಗೆ ತಿಳಿಯದೇ?

ಕಮಲಾ:—ತಿಳಿದೇ ಇದೆ ಆದರಲ್ಲಿ ಮಹತ್ವಿಕೆ ಏನು? ನಿಜ ಸನಾತನಿಗಳಿಗೂ ಈಗಿನ ಆಡಂಭರ ಸನಾತನಿಗಳಿಗೂ ಬಹಳ ಅಂತರವಿದೆ

ಸೀತಾ:—ಹಾಗೆಲ್ಲಾ ಹರಟೆ ಆಡಬಾರದಮ್ಮಾ ಸನಾತನಿಗಳೆಂದರೆ ಸರ್ವವನ್ನೂ ಒಲ್ಲವರು ಅನುಭವಿಕರು ವೇದಾಧ್ಯಯನ ಮಾಡಿದವರು ಅವರು ಮಾಡಿದ ಕೆಲಸಗಳು ನಿಷ್ಫಲ ಹೊಂದಬಾರದು ತಿಳಿಯಿತೇನಮ್ಮಾ?

ಕಮಲಾ:—ತಿಳಿಯಿತು, ಸೀತಕ್ಕಾ ತಿಳಿಯಿತು ನೀನೂ ಈಗಿನ ಸನಾತನಿಗಳ ಕಡೆ ತಿರುಗಿದೆ ಎಂದಾಯಿತು ಈಗಿನ ಸನಾತನಿಗಳ ವಾಗ್ಬಾಣಗಳು ಈಗೀಗ ಶೋಚನೀಯವಾದದ್ದು ನಿನಗೆ ತಿಳಿದಿಲ್ಲವೆಂತ ಕಾಣುತ್ತದೆ ಅಂದಿಗೆ ಭಾರತ ಮಾತೆಯ ಉದರದಲ್ಲಿ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ದಯಾನಂದ ಸರಸ್ವತಿ, ಪೂಜ್ಯ ಗಾಂಧಿಜಿಯವರಂಥಹ ಪುಣ್ಯ ಪುರುಷರು ಉದಯಕ್ಕೆ ಬಂದು ವೇದ, ಪುರಾಣದ ತಿರುಳೇನೆಂದು ಮನದಟ್ಟು ಮಾಡಿದರೋ ಅಂದಿಗೆ ಕಪಟ ಸನ್ಯಾಸಿಗಳಂತಹ ಈಗಿನ ಸನಾತನಿಗಳ ಕಪಟ ವಾಗ್ಬಾಣಗಳು ಗಂಟಲ ಕೆಳಗಡೆಯಲ್ಲಿಯೇ ಇಂಗಿ ಹೋಗಿದೆ ಇದಕ್ಕೇನನ್ನುವೆ?

ಸೀತಾ:—ನೀನೇನೋ ತಿಳುವಳಿಕೆಯುಳ್ಳವಳು. ಪ್ರೌಢ ವಿದ್ಯಾಭ್ಯಾಸವನ್ನು ಪಡೆದವಳು. ಪ್ರಪಂಚ ಜ್ಞಾನವು ಸ್ವತಹ ಅರಿಯದವಳಾದರೂ ಗ್ರಹಿಕೆ ಇದ್ದವಳು ಬುದ್ಧಿವಂತೆ. ಆದರೇನು? ನಿನಗೆ ಜನ್ಮ ಕೊಟ್ಟ ತಂದೆಯೇ ನಿನಗೆ ಶತ್ರುರೂಪನಾಗಿರುವನು. ನೀನು ವಿಧವೆಯಾಗಿರುತ್ತಾ ಸಧವೆಯರ ಹಾಗೆ ಅಲಂಕಾರ ಆಡಂಭರ ಮಾಡಬಾರದ ಸಂಗ್ತಿ ನಿನಗೆ ತಿಳಿದೇ ಇದೆ. ಎಷ್ಟೆಷ್ಟೋ ವಿಧವೆಯರು ಸರ್ವಸ್ವವನ್ನೂ ತ್ಯಜಿಸಿ ಸುಮ್ಮನಿರುವುದಿಲ್ಲವೆ? ಸಮಾಜ ಸೇವೆ ಮಾಡುವುದಾದರೂ ಅದಕ್ಕೆ ತಕ್ಕ ಆತ್ಮಬಲ ಬೇಕಾಗಿರುವುದೆಂಬುದನ್ನು ನೀನು ತಿಳಿಯಲಿಲ್ಲ. ಅಷ್ಟೆಲ್ಲಾ ಕಷ್ಟಗಳನ್ನು ನೀನೇಕೆ ಮೈಮೇಲೆ ಹಾಕಿಕೊಳ್ಳುತ್ತಿರುವೆ?

ಕಮಲಾ:—ಕಣ್ಣೀರು ಸುರಿಸಿ, ಸೀತಕ್ಕಾ, ನನಗಾಗಿ ಕಣ್ಣೀರು ಸುರಿಸುವೆನೆಂದು ತಿಳಿಯಬೇಡ. ನನ್ನಂತಹ ಅನೇಕ ನಿರ್ಭಾಗ್ಯ ಸಹೋದರಿಯರು ತಮ್ಮ ತಮ್ಮ ಸಣ್ಣ ಪ್ರಾಯದಲ್ಲೇ ಪತಿಗಳನ್ನಗಲಿ ಮಾತಪಿತರ ಹಾಗೂ ಮನೆಯವರ ವಕ್ರದೃಷ್ಟಿಗಳಿಗೆ ಪಾತ್ರರಾಗುವರಲ್ಲದೆ ತರ ತರದ ಯಾತನೆಗಳನ್ನು ಸಹ ಪಡೆದು ಮರುಗುತ್ತಿರುವರು. ಹಾಯ್! ಜಗಧೀಶಾ ಎಂದಿಗೆ ವಿಧವೆಯರ ಗೋಳನ್ನು ಆಲಿಸುವೆ?

ಸೀತಾ:—ಪಕ್ಕದ ನಾರಾಯಣ ಶಾಸ್ತ್ರಿಗಳ್ಳು ನರಟು ಮನುಷ್ಯರು ಅವರು ಅಚ್ಚೆ ಸನಾತನಿಗಳು. ತಾನು ಹೇಳಿದ್ದನ್ನು ಮಾಡಿಸಿಯೇ ಬಿಡುವರು ಮೊನ್ನೆ ಇಂದಿರೆಯ ಗತಿಯೇನಾಯಿತೆಂದು ಬಲ್ಲೆಯಾ?

ಕಮಲಾ:—ಬಲ್ಲೆನು ಸೀತಕ್ಕಾ ಬಲ್ಲೆನು ಆ ಕಪಟ ನಾರಾಯಣ ಶಾಸ್ತ್ರಿಯ ವಿಷಯ ಬಲ್ಲೆನು ಮೊನ್ನೆ ರಾತ್ರಿ ದ ಗರ್ಭ ಪೂಜೆಗೆಂದು ಗುಡಿಗೆ ಹೋದವರು ಇಂದಿರೆಯನ್ನು ಪಾಪದೃಷ್ಟಿಯಿಂದ ನೋಡಿದ್ದು ಅದನ್ನು ಇಂದಿರೆಯು ಬಯಲಿಗೆಳೆದುದರಿಂದ ಕಪಟ ಶಾಸ್ತ್ರಿಗಳು ತನ್ನ ತಪ್ಪನ್ನು ಒಪ್ಪದೆ ಇಂದಿರೆಯ ಮೇಲೆಯೇ ಅಪವಾದವನ್ನು ಹೊರಿಸಿ ಪಾಪ ಆ ಅಬಲೆ ವಿಧವೆಯನ್ನು ಮನೆಯಿಂದ ಹೊರಗೆ ಹಾಕಿಸಿದರು ಅವರ ದುರ್ನಡತೆಗೆ ಧಿಕ್ಕಾರವಿರಲಿ

ಸೀತಾ:—ಈ ವಿಷಯ ನಿನಗೆ ಹೇಗೆ ತಿಳಿಯಿತಮ್ಮಾ? ಶಾಸ್ತ್ರಿಗಳಂತಹ ಸನಾತನಿಗಳು ಹಾಗೆ ಮಾಡಲಿಕ್ಕಿಲ್ಲವಮ್ಮಾ ಆಡಬಾರದ ಈ ಮಾತುಗಳನ್ನು ಆಡಿ ಅನೇಕ ಪಾಪವನ್ನು ಕಟ್ಟಿಕೊಳ್ಳುವೆ?

ಕಮಲಾ:—ಸೀತಕ್ಕಾ ನಿನಗದು ತಿಳಿಯದು. ತೋರಿಕೆ ಯ ಸನಾತನಿಗಳಿಂದು, ಆಚಾರಶೀಲರೆಂದು ತೋರಿಸುವವರೆಂದಿಗೂ ಒಳ್ಳೆಯವರೆಂದು ತಿಳಿಯಬೇಡ ಅವರ ಸನ್ಯಾಸ ಅಕೃತ್ಯಗಳ ಗುಪ್ತವಾಗಿ ನಡೆಯುವುವು ಆದ ನಾರಾಯಣ ಶಾಸ್ತ್ರಿಯ ನಾನೊಬ್ಬಳೇ ತಿಳಿದಿದ್ದ ... ಬೇಡ ... ... ಗಳವೆ ಅವುಗಳಲ್ಲಿ ... ಒಂದು ಆ ಸಂಘಕ್ಕೆ ನಾನೊಬ್ಬ ... ... ನನ್ನ ಚಾಲಕತ್ವದಿಂದಲೇ ನಡೆಯುವುದೆಂದು ಹೇಳಿದರೂ ಹೇಳಬಹುದು ಈ ಸಂಘಗಳಿಂದ ಪ್ರಯೋಜನವೇನೆಂದು ನೀನು ಕೇಳಬಹುದು. ಮನೆ ಬಿಟ್ಟು ಕೇಳ ವಿಚಾರದಲ್ಲಿ ಹೇಳುವೆನು. ವಿಧವೆಯರಾದ ಭಗಿನಿಯರು ಸಾಧ್ಯವಿದ್ದಷ್ಟು ಅಂದರೆ ಪುನರ್ವಿವಾಹಕ್ಕೆ ಅಪೇಕ್ಷಿಸುವವರೆಗೆ ಬ್ರಹ್ಮಚರ್ಯವ್ರತದಿಂದಿದ್ದು ಸಮಾಜ ಸೇವೆ, ದೇಶಸೇವೆ, ಭಗಿನೀ ಸೇವೆ ಇತ್ಯಾದಿ ಕಾರ್ಯಗಳನ್ನು ಮಾಡುವುದು, ಪ್ರೌಢ ವಿವಾಹಕ್ಕೆ ಪ್ರೋತ್ಸಾಹ ಕೊಡುವುದು, ಬಾಲ್ಯ ವಿವಾಹಗಳನ್ನು ತಡೆಯುವುದು, ಪುನರ್ವಿವಾಹ ಮಾಡಿಕೊಳ್ಳಬೇಕೆಂದಿರುವ ಬಾಲ ವಿಧವೆಯರಿಗೆ ಯೋಗ್ಯ ವರನನ್ನು ನೋಡಿ ವಿವಾಹ ಮಾಡಿಸಿಕೊಡುವುದು ಇವೇ ನಮ್ಮ ಆ ಸಂಘಗಳ ಕಾರ್ಯಗಳು ಇವಕ್ಕೆ ಅಲ್ಲಲ್ಲಿ ಪ್ರಚಾರಕರು ಇರುವರು ಮೊನ್ನೆ ಇಂದಿರೆಯು ಗುಡಿಯ ಹತ್ತಿರ ಕಪಟ ಶಾಸ್ತ್ರಿಯ ಕೆಲವು ದುಷ್ಟ ಪದ್ಧತಿಗಳನ್ನು ಕಣ್ಣಾರೆ ಕಂಡುಕೊಳ್ಳಬೇಕೆಂದು ಹೋಗಿದ್ದಳು ಪ್ರತ್ಯಕ್ಷ ಪ್ರಮಾಣ ತಿಳಿದು ಆ ರೀತಿ ಬಯಲಿಗೆಳೆದಳು ಇದರಿಂದ ಅವಳು ಕತ್ತಾಲಕ್ಕೆ ದೂಷಿತೆಯಾದರೂ ಅಲ್ಪ ಕಾಲದಲ್ಲಿ ಸತ್ಯ ಸಂಗತಿಯು ಹೊರಬೀಳದಿರದು.

ಸೀತಾ:—ಕಮಲಾ ನೀನೀಗ ನಿಜ ಸಂಗತಿ ಹೇಳಿದೆ ಎಂದು ತಿಳಿಯುವೆನು. ನಿನ್ನಲ್ಲಿ ಸಮಾಜ ಪ್ರೇಮ ಮಾತ್ರವಲ್ಲದೆ ದೇಶ ಪ್ರೇಮ ಕೂಡಾ ಇದೆ. ಇದು ಆಧುನಿಕ ಸ್ತ್ರೀ ಪ್ರಪಂಚಕ್ಕೆ ಭೂಷಣವು. ಈ ನನ್ನ ದೇಹದಿಂದ ನಿನ್ನ ಪವಿತ್ರ ಕಾರ್ಯಕ್ಕೆ ಕೂಡಿದ ಸಹಾಯ ಮಾಡುವೆನು. ಮಾತ್ರವಲ್ಲ ನನ್ನ ಪತಿದೇವನನ್ನು ಈ ಕೆಲಸಕ್ಕೆ ಕೈಹಚ್ಚುವಂತೆ ಪ್ರೇರೇಪಿಸುವೆನು.

ಕಮಲಾ:—ಸೀತಕ್ಕಾ ಇಂದೀಗ ನಾನು ಸಂತುಷ್ಟಳಾದೆನು. ಬಹಳ ಸಮಯದಿಂದ ನಿರೀಕ್ಷೆ ಮಾಡಿದ್ದು ಇಂದೀಗ ಸಾಫಲ್ಯವಾಯಿತು. —ಇನ್ನು ನಮ್ಮ ಭಗಿನಿ ಸಮಾಜವು ಆದರಲ್ಲೂ ನನ್ನಂತಹ ವಿಧವೆಯರು ಮುಂದಕ್ಕೆ ಬರುವುದರಲ್ಲಿ ಸಂದೇಹವಿಲ್ಲ

೨

ಇಂದು ಆದಿತ್ಯವಾರ ಭಗಿನಿ ಸೇವಾ ಮಂದಿರವು ತಳಿರು ತೋರಣಗಳಿಂದ ಶೋಭಾಯಮಾನವಾಗಿರುವುದು. ರಜಾ ದಿನವಾದುದರಿಂದ ಸರ್ವ ಪಂಗಡದ ಶ್ರೀಮಂತ ಹಾಗೂ ಬಡ ಕುಟುಂಬದ ಭಗಿನಿಯರು, ಸಹೋದರರೂ ನೆರೆದಿದ್ದಾರೆ ಇಂದ ಸರ್ವ ಪ್ರಕಾರ ಅಧ್ಯಕ್ಷ ಕಮಲಾ ಬಾಯಿಯವರ ಭಾಷಣ ಮಂದಿಗಳು ಸದ್ದಿಲ್ಲದೆ ಭಾಷಣವನ್ನು ಆಲಿಸುತ್ತಿದ್ದರು.

ಕಮಲಾ ಬಾಯಿಯವರು ಸಭಿಕರಿಗೆ ವಂದಿಸಿ ಸಹೋದರ, ಸಹೋದರಿಯರೇ, ಇದು ಕಲಿಯುಗವೆಂದು ಕೇಳಲ್ಪಡುವುದಾದರೂ ಸತ್ಯಯುಗವೆಂದು ಹೇಳಬಹುದು. ದೇಶ ಜಾಗೃತವು ಉನ್ನತಿಯಿಂದ ಕನ್ಯಾಕುಮಾರಿವರೆಗೂ ಉಂಟಾಗಿದೆ ಎಲ್ಲರೂ ತಮ್ಮ ತಮ್ಮ ಕರ್ತವ್ಯವೇನೆಂದು ತಿಳಿಯುತಿದ್ದಾರೆ ಒಂದು ಕಡೆ ಸ್ವಾಮಿ ಶ್ರದ್ಧಾನಂದರ ಭಾಷಣವು ಹಿಂದೂ ಸಜ್ಜನರ ಮನಸ್ಸನ್ನು ಸನ್ಮೋಹಿತಗೊಳಿಸುತ್ತದೆ ಇನ್ನೊಂದು ಕಡೆ ಪೂಜ್ಯ ಗಾಂಧಿಜಿಯವರ ಪ್ರೇಮಮಯ ಭಾಷಣವು ಶಾಂತಿಯನ್ನು ಪ್ರೇರೇಪಿಸುತ್ತಿದೆ ಮತ್ತೊಂದು ಕಡೆ ದೇಶಬಂಧು ಚಿತ್ತರಂಜನ ದಾಸರ ಸ್ಫೂರ್ತಿಯುಕ್ತ ಭಾಷಣದಿಂದ ರಕ್ತಸ್ಪಂದನ ಹೊಂದುತ್ತಿದೆ ರಾಷ್ಟ್ರಪತಿ ಜವಾಹರಲಾಲರ ಭಾಷಣವು ನಂತರ ಅವರ ಮನಸ್ಸನ್ನು ಸಳೆಯುತ್ತಿದೆ ಇದಲ್ಲದೆ ನಮಗೆ ಆನಂದದಾಯಕವು ಭಾರತ ಮಾತೆಯೇ ಧನ್ಯ ನಿನ್ನ ಉದರದಲ್ಲಿ ಈ ಗಾಂಧಿಯುಗದಲ್ಲಿ ಜನನಕ್ಕೆ ಬಂದಿರುವ ನಾವೇ ಧನ್ಯರು ಮಾತೆಯೇ ಎಂದಿಗೆ ನಾನು ಮತ್ತು ನನ್ನಂತಹ ಸಾವಿರಾರು ವಿಧವೆಯರು ಜಾಗೃತರಾಗಿ ನಿನ್ನ ಸೇವೆಯನ್ನು, ಸಮಾಜ ಸೇವೆಯನ್ನೂ ಮಾಡುತ್ತಾ ಹೋಗುತ್ತೇವೋ, ಎಂದಿನ ವರೇಗೆ ನಿನ್ನ ಪವಿತ್ರ ಹೆಸರಿಗೆ ಕಳಂಕಿತವಾಗದೆ ಕುಲಶೀಲಗಳನ್ನು ಮರ್ಯಾದೆಯಿಂದ ಪಾಲಿಸುತ್ತಾ ಹೋಗುತ್ತೇವೋ ಅಂದಿಗೆ ನಿನ್ನ ಕೀರ್ತಿ ಶಿಖರವು ಕತ್ತೆತ್ತಿ ನಿಂತು ಶಾಂತಿಯುಕ್ತವಾಗುವುದು ಈಗೀಗ ನಿನ್ನ ಮಕ್ಕಳು ಜಾಗ್ರತರಾದುದಕ್ಕೆ ದೇವರನ್ನು ಕೊಂಡಾಡುವೆನು ಬಾಲ್ಯ ವಿಧವೆಯರಿಗೆ ಅವರವರ ಒಪ್ಪಿಗೆಯಿಂದ ಪುನರ್ವಿವಾಹವು ನಡೆಯುತ್ತಿದೆ ಶಕ್ತಿಯುತರು ಪೂರ್ಣ ಬ್ರಹ್ಮಚರ್ಯದಿಂದ ರಾಷ್ಟ್ರಸೇವೆ ಮಾಡಿ ಕುಲಕ್ಕೆ ಕೀರ್ತಿ ತರುತ್ತಿರುವರು. ಭಗಿನಿಯರೇ ಧನ್ಯರು. ನಿಮ್ಮನ್ನು ಹಡೆದ ಜನನೀ ಜನಕರೂ ಧನ್ಯರು ಇದೇ ರೀತಿ ನನ್ನ ಭಗಿನಿಯರು ಮುಂದಕ್ಕೆ ಬಂದು ಸ್ವಾಮಿ ಶ್ರದ್ಧಾನಂದ, ಪೂಜ್ಯ ಗಾಂಧಿಜಿಯರಂತಹ ವಿಭೂತಿ ಪುರುಷರ ಆಜ್ಞೆಯಂತೆ ನಡೆಯಿರಿ ಮಕ್ಕಳಿಗೆ ಜನನ ಕೊಡುವವರೂ, ಹಾರೈಕೆಯನ್ನು ನೋಡುವವರೂ ಆದ ನಮ್ಮ ಭಗಿನಿ ಸಮಾಜವು, ವೀರಪತ್ನಿಯರಾಗಿಯೂ, ವೀರ ಮಾತೆಯರಾಗಿಯೂ, ಪವಿತ್ರ ಭಾರತ ಮಾತೆಯ ಉದರದಲ್ಲಿ ಪ್ರಕಾಶಗೊಳಿಸುತ್ತಿರಲಿ. ಉದರಪೋಷಣೆಗಾಗಿಯೂ, ಇನ್ನಿತರ ಹರಟು ಕಾರಣಗಳಿಂದಲೂ, ಹೆಚ್ಚಿನ ಸಹೋದರಿಯರು ಪರಪುರುಷರ ವಿಷಯ ಲಂಪಟತನಕ್ಕೆ ಒಳಗಾಗುವರು. ಇದು ನಮ್ಮ ಅಬಲತ್ವವಲ್ಲದೆ ಮತ್ತೇನು? ಅಂತಹ ಅಕೃತ್ಯಕ್ಕೆ ಒಳಗಾಗದಿರಿ.

ಸಹೋದರರೇ, ನೀವೇ ಭಗಿನಿ ಸಮಾಜದ ಸಹಾಯಕರು. ನೀವೇ ಮುಂದಕ್ಕೆ ದೇಶ ಸೇವಕರಾಗುವವರು. ಕುಟುಂಬ ರಕ್ಷಕರು. ಭಾವಿ ಜನಾಂಗದ ಜನಕರಾಗತಕ್ಕವರು. ಸಣ್ಣ ಪ್ರಾಯದ ನಿಮ್ಮ ಮಕ್ಕಳಿಗೆ ಮದುವೆ ಮಾಡದಿರಿ. ಪ್ರಾಪ್ತ ವಯಸ್ಕರಾದ ಮೇಲೆ ಯೋಗ್ಯ ವರನನ್ನು ನೋಡಿ ಕನ್ಯಾದಾನ ಮಾಡಿರಿ. ಹಣದ ಆಶೆಗಾಗಲೀ, ಮಂದಿಗಳ ಹೆಗ್ಗಳಿಕೆಗಾಗಲೀ ಒಳಪಟ್ಟು, ಕುರುಡ, ಕುಂಟ, ಕಾಡಿಕ, ಕಡುಲೋಭಿ, ವೃದ್ಧ ಮುಂತಾದವರಿಗೆ ಸಂತೆಯಲ್ಲಿ ಧಿಕರಿಗೆ ಮಾರುವಂತೆ ಮಾರಬೇಡಿರಿ ಇದರಿಂದ ದೇಶದಲ್ಲಿ ಮುಂದಕ್ಕೆ ಅಬಲರೂ, ನಿಸ್ತೇಜರೂ ಆದ ಕ್ರಿಮಿಕೀಟಗಳಂತಿರುವ ಮಕ್ಕಳನ್ನು ಸಾವಿರಾರು ಪಡೆಯುವುದಕ್ಕಿಂತ ತೇಜಃಪುಂಜರೂ, ಬಲಾಢ್ಯರೂ ಆದ ಮಕ್ಕಳು ಜನನಕ್ಕೆ ಬರುವುದು ಶ್ರೇಯಸ್ಕರವಲ್ಲವೆ? ಇದುದರಿಂದ ಮುಂದಿನ ಜನಾಂಗವೇ ಜಾಗ್ರತರಾಗಿರಿ ಬಾಲ್ಯದಲ್ಲಿ ಗತಿ ಗೋತ್ರ ತಿಳಿಯದೆ, ಗಂಗಳಿಗೆ ಒಬ್ಬ ಗಂಡನಾಗಬೇಕೆಂಬು ಅರಿಯದ ದಂಪತಿಗಳು ಮಗಳನ್ನು ಮಾರುತ್ತಾದರೆ ನಮ್ಮ ಕಲ್ಯಾಣವಾಗದು. ಪವಿತ್ರ ಭಾರತ ಮಾತೆಯು ಪನ್ನಳಾಗುವಳು ಪೂಜ್ಯ ಗಾಂಧಿಜಿಯವರಂತಹ ಲೋಕನಾಯಕರಿಗೆ ಸರಿ ಬೀಳದು. ಸಹೋದರರೇ, ಮಗಳಿಗೆ ಎಂಟು ವರ್ಷ ತುಂಬುವಾಗಲೇ ಮದುವೆ ಸಂಭ್ರಮ ಮಾಡುವುದಕ್ಕಿಂತ ಇನ್ನೂ ಒಳ್ಳೇ ಬುದ್ಧಿಯನ್ನು ವಿದ್ಯೆಯನ್ನು ಕೊಟ್ಟು ಪ್ರಾಯಕ್ಕೆ ಬಂದ ಮೇಲೆ ಯೋಗ್ಯ ವರನ ಕೊರಳಿಗೆ ಮಾಲೆ ಹಾಕಿಸಿರಿ ಅಂದಿಗೇ ಭಾರತ ಮಾತೆಯು ಯೋಧರರನ್ನು ಪಡೆದು ದಾಸ್ಯ ಸಂಕಲೆಯಿಂದ ಬಿಡಲ್ಪಡುವಳು. ಜಗಧೀಶಾ ಭಾರತ ಮಾತೆಗೆ ಕಲ್ಯಾಣವನ್ನುಂಟುಮಾಡು. ಎಂಬ ತನ್ನ ಅಮೂಲ್ಯವಾದ ಭಾಷಣವನ್ನು ಸಭಿಕರಿಗೆ ಮನಗೊಪ್ಪುವಂತೆ ಮಾಡಿ ಮುಗಿಸಿದಳು ಕರತಾಡನದೊಳಗೆ ಸಭೆಯು ಕೊನೆಗೊಂಡಿತು.

೩

ಸಂತಕಾಲದ ಆದೊಂದು ಆದಿತ್ಯವಾರ ದಿನ ನಿಶ್ಚಯಂತೆ ಈ ದಿವಸವೂ ಮಹಿಳಾ ಸಮಾಜದಲ್ಲಿ ನಿರತ ಭಾಷಣಕರ್ತರ ಭಾಷಣವನ್ನು, ಭಗಿನಿ ಸಮಾಜದ ಕಾರ್ಯಕಲಾಪಗಳನ್ನು ತಿಳಿಯಲು ಹೊರಗಿನ ಜನರೂ ಬಂದಿದ್ದರು ಇಂದಿನ ಸಭೆ ಗುರುತರಗಿಂತಲೂ ಹೆಂಗಸರು ವಿಶೇಷವಾಗಿ ಬಂದಿದ್ದರು ಸಮಾಜಕ್ಕೆ ಸೇರಬರುವವರ ಸಂಖ್ಯೆಯು ಏರುತ್ತಾ ಬರುತ್ತಿದೆ ಎಷ್ಟೋ ಕುಲೀನ ಮನೆತನದ ತರುಣಿಯರೂ ಸೇರುತ್ತಿರುವರು ಇವರಲ್ಲಿ ಕೆಲವರು ತಮ್ಮ ತಮ್ಮ ಸುಖ ಕಷ್ಟಗಳನ್ನು ಹೇಳಿಕೊಳ್ಳುತ್ತಿರುವರು ಈಗಾಗಲೇ ಆರು ತಿಂಗಳು ಕಳೆಯುವುದರೊಳಗಾಗಿ ಒಂದು ನೂರು ಇಪ್ಪತ್ತೈದರ ಸಂಖ್ಯೆಯು ಐದ ನೂರಕ್ಕೆ ಏರಿಬಿಟ್ಟು ಹೋಗಿದೆ ಸಂಘವು ಈ ವರೆಗೆ ಅನೇಕ ಕಾರ್ಯಗಳನ್ನು ನೆರವೇರಿಸಿದೆ ಮುಖ್ಯತಃ ಐಕ್ಯವು, ಕುಲೀನತೆ ಉಚ್ಚತ್ವ, ಖಾದಿ ವಸ್ತ್ರದ ಬಗ್ಗೆ ರಾಟಿನೂಲನ್ನು ತೆಗೆಯುವ ಮಕ್ಕಳಿಗೆ ಬುದ್ಧಿ ಹಾಗೂ ವಿದ್ಯೆಯನ್ನು ಹೇಳುತ್ತಿರುವ ಆಧುನಿಕ ಸ್ತ್ರೀಪ್ರಪಂಚಕ್ಕೂ, ಸ್ವದೇಶಪ್ರೇಮಕ್ಕೂ ಸಂಬಂಧಪಟ್ಟ ಗ್ರಂಥಗಳನ್ನೂ, ವರ್ತಮಾನ ಪತ್ರಗಳನ್ನೂ ತರಿಸಿ ಅನುಭವ ಪಡೆಯುವ ಇತ್ಯಾದಿ ಸೇವೆಗಳನ್ನು ಮಾಡಿವೆ ಅನೇಕ ಬಂಧು ಭಗಿನಿಯರೂ ಕೈಗೊಟ್ಟು ಸಹಾಯ ಮಾಡುತ್ತಿರುವರು. ಸಮಾಜಕ್ಕೆ ತಮ್ಮದೇ ಆದ ಸ್ವಂತ ಮಂದಿರವಿದೆ ಅಲ್ಲಲ್ಲಿ ಪ್ರೌಢ ವಿವಾಹ ನಡೆಯುವಂತೆ ಏರ್ಪಾಡಾಗಿದೆ ಬಾಲ ವಿಧವೆಯರ ಸಂಖ್ಯೆಯು ಆದಷ್ಟು ಕಮ್ಮಿಯಾಗುವ ಪ್ರಯತ್ನಕ್ಕೆ ಸೊಂಟಕಟ್ಟಿದೆ ಆದರೂ ಜನರಲ್ಲಿ ಮೂಢ ಸ್ವಭಾವವು ಇನ್ನೂ ಕಡಿಮೆಯಾಗದಿರುವುದು ಶೋಚನೀಯವು. ತರುಣ ಸಂಘದ ನರಸಿಂಹರಾಜನ್, ರಘುನಾಥ ಹಾಗೂ ವಿಶ್ವನಾಥರ ಸಹಾಯ ಈ ಸಮಾಜಕ್ಕೆ ಧಾರಾಳವಾಗಲೂ ಇದ್ದೇ ಇದೆ.

(ಬರುವ ಸಂಚಿಕೆಯಲ್ಲಿ ಕೊನೆಗೊಳ್ಳುವುದು)

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಣಚೆ ಚಳಿ, ಸಾಧಾರಣ ಜ್ವರ, ಅಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಬಿಳುಪಾದ, ಗುಂಡಿಗಿಳಿದ ನೀರು ತುಂಬಿದ ಕಣ್ಣು, ಇಳಿದ ಮುಖ, ದುಃಖದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ತಲೆಸಿಡಿತ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು.

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4–8–0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ ವಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

೧೦೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಕಾಂತಿಯುತವಾದುದು ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ, ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದರಿಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ ಇನ್ನೊಬ್ಬರಿಗೆ ದಾಸರಾಗಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ. ಬೆಲೆ ರೂ ೨ ಮಾತ್ರ.

01 r. s Bengal Mesmarism House
5–7 Panchpota, Bengal (s. B

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ ಆ
ಹೊಸ ರಾಶಿ ಅಕ್ಕಿ	3— 6	3— 12
ಹೊಸ ಮಸ್ಕತಿ	3—10	4— 2
ಗುಡ್ಡ ಸುಗ್ಗಿ	3— 8	3—11
ಊರ ಅಸ್ವಲ್ ಬೆಳ್ತಿಗೆ	4— 0	4— 8
ರಂಗೂನು ಬೆ. ಗೋ. ಿನ ಒಕ್ಕೆ	6— 4	7— 0
ಎಲ್ಲೂರು ಬೆ ಮು ಒಕ್ಕೆ	4— 4	4— 8
ಗೋದಿ ಗೋಣಿ ಒಕ್ಕೆ	8 — 8	10— 4
ತೊಗರಿ ಗೋಣಿ ಒಕ್ಕೆ	9 —0	9 — 8
ಹುರುಳಿ ಗೋಣಿ ಒಕ್ಕೆ	5— 4	5— 12
ಕಡಲೆ ಗೋಣಿ ಒಕ್ಕೆ	7 — 4	9 — 8
ತೊಗರಿಬೇಳೆ ಗೋಣಿ ಒಕ್ಕೆ	11— 0	15— 8
ಉದ್ದು ಗೋಣಿ ಒಕ್ಕೆ	9— 8	10 — 0
ಹೆಸರು ಗೋಣಿ ಒಕ್ಕೆ	9— 4	9—12
ಜಾಡಿಬೆಲ್ಲ ಖಂಡಿ ಒಕ್ಕೆ	32— 0	40— 8
ಉಪ್ಪು ಗೋಣಿ ಒಕ್ಕೆ	4— 8	4— 8
ಕೊಪ್ರ ಖಂಡಿ ಒಕ್ಕೆ	60— 0	70— 0
ಕೊಪ್ರ ಹಿಂಡಿ ಖಂಡಿ ಒಕ್ಕೆ	28— 0	29— 0
ಎಳ್ಳಿಂಡಿ ಖಂಡಿ ಒಕ್ಕೆ	33 —12	35— 0
ಕೊಪ್ರ ಎಣ್ಣೆ ಮುಡಿ ಒಕ್ಕೆ	5— 0	6— 0
ಎಳ್ಳೆಣ್ಣೆ ಮುಡಿ ಒಕ್ಕೆ	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಒಕ್ಕೆ	6— 5	6— 5
ಪೋರ್ಟಿನ ಸಕ್ಕರೆ ಮು. ಒಕ್ಕೆ	3 — 9	3 — 2
ಮೆಣಸು	2— 8	4— 0
ಸಾಸಿವೆ ಮುಡಿ ಒಕ್ಕೆ	5 — 8	6— 0
ಕಾಳುಮೆಣಸು ಖ ಒಕ್ಕೆ	102— 8	105—
ಯೇಲಕ್ಕಿ ಬೀಜ ಮ. ಒಕ್ಕೆ	38— 0	39— 0
ಗೇರುಬೀಜ ಮು. ಒಕ್ಕೆ	4— 6	4 — 8
ಕಬ್ಬಿಣ ಖಂಡಿ ಒಕ್ಕೆ	85— 0	37— 8
ತಾಂಬ್ರತಗಡು ಮು. ಒಕ್ಕೆ	9— 12	9— 14
ತಾಂಬ್ರಪಾತ್ರಗಳು ಮು ಒಕ್ಕೆ	12— 8	14— 0
ಚೀನದೆಲ್ಲ ಸೇರು ಒಕ್ಕೆ	17— 8	18— 0
ಹಿತ್ತಾಳೆ ತಗಡು ಮು. ಒಕ್ಕೆ	10— 0	10—
ಪವನು ಒಕ್ಕೆ	22— 6	22— 8
ಹುಣಸೆ ಹುಳಿ ಖಂಡಿ ಒಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಒಕ್ಕೆ	145— 0	150— 0
ಫ್ಲಾಟೇಶನ್ ಕಾಫಿ ಖಂಡಿ ಒಕ್ಕೆ	185— 0	190— 8
ಮಡಿಕೇರಿ ಏಲಕ್ಕಿ	25— 0	26 — 0
ಸಕಲೇಶಪುರ ಏಲಕ್ಕಿ	28— 0	30 — 0
ಹಳತು ಅಡಿಕೆ	100—0	115—0

"ಮೇಲೆ ಮೇಲೆ ವೇದನೆ ಗೊಳ್ಳುತ್ತಿದ್ದೆ."

ಎರಡು ವರ್ಷಗಳ ವರೆಗೆ ಉದರ ವೇದನೆಯಿಂದ ಕಷ್ಟಪಟ್ಟು ಆಸ್ಪತ್ರೆಯ ಚಿಕಿತ್ಸೆಯಾದನಂತರವೂ ಆರಾಮವಾಗದಿದ್ದು ನೊಂದುಕೊಳ್ಳುವಾಗ ಮೆಕ್‌ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರ್‌ನ ಒಂದೇ ಒಂದು ಬಾಟ್ಲಿಯಿಂದ ಶೀಘ್ರ ಗುಣವಾಯಿತೆಂದರೆ ಅದೊಂದು ವಿಚಿತ್ರವೆಂದು ನೀವು ಭಾವಿಸಲಾರಿರಾ? ಆದರೂ ಮಿ W E H ರವರು ಅವರ ನುಡಿಗಳಿಂದಲೇ ವ್ಯಕ್ತಪಡಿಸಿರುವುದನ್ನು ಓದಿರಿ —

ನಾನು ಆಸ್ಪತ್ರೆಯಲ್ಲಿದ್ದೆ, ಎರಡು ಸಲ ಎಕ್ಸ್‌ರೇ ನಡೆಸಿದರು ಎರಡು ವರ್ಷಗಳಿಂದ ಉದರವೇದನೆಯಿಂದ ಬಳಲುತ್ತಿದ್ದೆ ಒಮ್ಮೊಮ್ಮೆ ಮೇಲೆ ಮೇಲೆ ವೇದನೆಯಾಗುತಿತ್ತು ಆಸ್ಪತ್ರೆಲ್ಲಿ ಒಬ್ಬ ಗೆಳೆಯರು ಮೆಕ್ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರನ್ನು ಉಪಯೋಗಿಸೆಂದು ಹೇಳಿದರು, ಅದು ಅದ್ಭುತವನ್ನೇ ನಡೆಸಿತು ಒಂದು ಬಾಟ್ಲಿಯ ಹುಡಿಯನ್ನು ತೆಗೆದುಕೊಂಡೊಡನೆ ನನಗೆ ಬಹು ಸ್ವಾಸ್ಥ್ಯವು ಲಭಿಸಿತು ಮುಂದಕ್ಕೆ ನಾನು ಅದನ್ನು ಇಟ್ಟುಕೊಳ್ಳುದಿರೆನು ಹೊಟ್ಟೆನೋವಿನಿಂದ ಕಷ್ಟಪಡುತ್ತಿರುವವರಿಗೆಲ್ಲ ಅದನ್ನು ಶಿಫಾರಸು ಮಾಡುವೆನು

ಯಾವ ರೀತಿಯ ಹೊಟ್ಟೆಯ ಬಾಧೆಯಿಂದ ಕಷ್ಟಪಡುತ್ತಿರುವಿರಾದರೂ ನಿಮಗೆ ಮಿ। H ರವರಿಗೆ ದೊರೆತ ಸುಖ ದೊರೆಯುವುದು. ಆದರೆ ಕೆಲವು ಅನೇಗಳ ವಾಸಿಗಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರನ್ನೇ ನಮ್ಮ ಕೆಮಿಸ್ಟರಿಂದ ಪಡೆಯಿರಿ. ಸೀಲು ರಕ್ಷಾಪತ್ರ, ಮತ್ತು ಬಿಲ್ಲೆಗಳ ಮೇಲೆ

ಎಂಬ ದಸ್ಕತು ಇದೆ ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್
೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,
ಇಲ್ಲಿಗೆ ಬರೆಯಿರಿ

Shiromani Narayanacharya & Co.,
Silk Lace & Cloth Manufacturers
Choukhamba Benares City

ಕೃಷ್ಣರಾಯರು — ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು — ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು — 'ಅದರ ಕ್ರಯವೆಷ್ಟು!"

ಆನಂದರಾಯರು — ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಒಂದಿತ ಜರಿ, ರಂಗು ಕೂಡಲಾದ ಶೀರೆಗಳು ಸಿಗುತ್ತವೆ 18 ಮೊಳ ಉದ್ದ 2¼ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ವಡಲು ಬುಟ್ಟ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ವಡಲು ಸಡ ಶೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1 8 0ರಿಂದ 4ರ ವರೆಗೆ ಬುಟ್ಟಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಸರಗುಡಿ 1ಕ್ಕೆ ರೂ. 7ರಿಂದ 15ರ ವರೆಗೆ 8 ಮೊಳದ ಸಾಂ ಪುಡಿ 1ಕ್ಕೆ ರೂ 10ರಿಂದ 85ರ ವರೆಗೆ 5 ಮೊಳದ ಪಟಕಾ 1ಕ್ಕೆ ರೂ 4ರಿಂದ 16ರ ವರೆಗೆ, 6 ಮೊಳದ ಪಟಕಾ 1ಕ್ಕೆ ರೂ. 6ರಿಂದ 35ರ ವರೆಗೆ, ಬೇರೆಯೆಲ್ಲಾ ತರದ ಶ್ಯಾಲುಗಳ ಕ್ರಯದ ಪಟ್ಟಿ ಇನಾಂ 1 ಅಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್,

ರುಚಿಕರ! — ಹಿತಕರ!

ದಿ ರಿನೌನ್ ಬಿಸ್ಕಿಟ್ ಕಂಪೆನಿಯ

ನಾನಾ ತರದ ಬಿಸ್ಕಿಟುಗಳು

ವಿವಿಧ ಪ್ರದರ್ಶನಗಳಲ್ಲಿ 14 ಸುವರ್ಣ ಪದಕಗಳನ್ನೂ ಮಹನೀಯರನೇಕರಿಂದ ಪ್ರಶಂಸಾಪತ್ರಗಳನ್ನೂ ಪಡೆದಿರುವುದು

ಇಷ್ಟು ಉತ್ಕೃಷ್ಟವಾದ ಮತ್ತು ಜನಪ್ರಿಯವಾದ ಬಿಸ್ಕಿಟ್ ಮತ್ತೊಂದಿಲ್ಲ.

ಒಮ್ಮೆ ತಿಂದರೆ ಖಚಿತವಾಗುವುದು

ಈಗ ತಾನೇ ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

B S Biscuits
XL Biscuits
Renown Biscuits

ಮೇಲಿನ ಈ ಮೂರು ಗುರ್ತುಗಳವು 40 ರಾತ್ತಲಿನ ಪೆಟ್ಟಿಗೆಗಳಲ್ಲಿಯೂ 10 2 1 ½ ರಾತ್ತಲಿನ ಟಿನ್‌ಗಳಲ್ಲಿಯೂ ½ ¼ ರಾತ್ತಲಿನ ಪೊಟ್ಟಣಗಳಲ್ಲಿಯೂ ದೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

S. E Bangera,
Representative of
JAYA BHARATHAM Co.,
Mission Compound, Kasargod, S K

ಮದ್ರಾಸ್ ಸಂಸ್ಥಾನದ ಏಜಂಟರು :—

Jaya Bharatham Co ,
P O Box No 88 G T MADRAS

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಮಾಘ ಶು। ೧ ಶನಿವಾರದಿಂದ ಮಾಘ ಶು।೭ ಶುಕ್ರವಾರದ ವರೇಗಿನ ಪಂಚಾಂಗ.(೧೯೩೬ನೇಯ ಮಕರ ಪ್ರಯಂತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
25	ಶನಿ	೧	೧೩	ಶ್ರವಣ	೧೪	೧೧	ರಥಸಪ್ತಮಿ ಮಧ್ವನವಮಿ
26	ರವಿ	೨	೯	ಧನಿಷ್ಠಾ	೧೧	೧೨	
27	ಸೋಮ	೩	೫೪	ಶತಭಿಷಾ	೬	೧೩	
28	ಕುಜ	೫	೫೧	ಪೂ ಭಾದ್ರ	೫೫	೧೪	
29	ಬುಧ	೬	೪೬	ರೇವತೀ	೫೫	೧೫	
30	ಗುರು	೭	೪೦	ಅಶ್ವಿನೀ	೫೧	೧೬	
31	ಶುಕ್ರ	೮	೩೫	ಭರಣೀ	೪೮	೧೭	

ಸಾರ್ವಭೌಮ ಐದನೇ ಜೋರ್ಜ್ ಚಕ್ರವರ್ತಿಯುವರು ದೈವಾಧೀನರಾದರು!

ಪ್ರಿನ್ಸ್ ಆಫ್ ವೇಲ್ಸರು ಎಂಟನೇ.ಎಡ್ವರ್ಡರಾಗಿ ಪಟ್ಟಕ್ಕೆ ಬಂದಿರುವರು.

ಸಾರ್ವಭೌಮ ಐದನೇ ಜೋರ್ಜ ಚಕ್ರವರ್ತಿಯುವರು ದಿವಂಗತರಾದರು.

ನಮ್ಮ ಚಕ್ರವರ್ತಿಯುವರಾದ ಐದನೆ ಜೋರ್ಜರು ತಾ. ೨೦ರಲ್ಲಿ ರಾತ್ರೆ ಘಂಟೆ 11.೫೫ಕ್ಕೆ ದೈವಾಧೀನರಾದರು ಬಹಳ ಶಾಂತತೆಯುಲ್ಲಿ ಅವರ ಪ್ರಾಣವು ಅಂತ್ಯವಾಯಿತು. ಮಹಾರಾಣಿಯುವರೂ, ಪ್ರಿನ್ಸ ಒಫ್ ವೇಲ್ಸರೂ ಮತ್ತು ಅವರ ಇತರ ಮಕ್ಕಳೂ ಅವರ ಪಕ್ಕದಲ್ಲೇ ನೆರೆದಿದ್ದರು.

ಚಕ್ರವರ್ತಿಯುವರ ನಿಧನದಿಂದ ಇಡೀ ಪ್ರಪಂಚವೇ ಶೋಕಾನುಮಯುವಾಗಿರುತ್ತದೆ ಅವರು ಮೃತರಾದ ಸೆಂಡ್ರಿಗೇಮ ಅರಮನೆಯ ಹತ್ತಿರ, ಜನರು ಅವರ ಆರೋಗ್ಯದ ಕುರಿತು ವಾರ್ತೆಯನ್ನು ತಿಳಿಯಲು ಕಿಕ್ಕಿರಿದು ನೆರೆದಿದ್ದರು. ಚಕ್ರವರ್ತಿಯುವರು ಮೃತರಾದರೆಂದು ವಾರ್ತೆಯನ್ನು ಕೇಳಿ ಕೆಲವರು ಅತ್ತರು ಸಮಸ್ತ ಲಂಡನ್ ನಗರವೇ ಶೋಕಸಾಗರದಲ್ಲಿ ಮುಳುಗಿತು ಮಹಾರಾಣಿಯುವರು ಅಷ್ಟರ ತನಕ ಕಲ್ಲುಮನಸ್ಸು ಮಾಡಿದವರು, ಕೊನೆಗೆ ಶೋಕವನ್ನು ಸಹಿಸಲಾರದೆ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು ಪ್ರಿನ್ಸ ಒಫ್ ವೇಲ್ಸರು ಇವರನ್ನು ಸಮಾಧಾನ ಪಡಿಸಿದರು. ಚಕ್ರವರ್ತಿಯುವರ ಪ್ರಾಣ ಹೋಗುವ ಸಮಯ ಅವರ ಕುಲಪುರೋಹಿತರಾದ ಆರ್ಚ ಬಿಶಪ್ ಒಫ್ ಕೆಂಟರಿಬರಿಯುವರು ಅವರ ಸಮೀಪದಲ್ಲಿದ್ದರು ಪ್ರಿನ್ಸ ಒಫ್ ವೇಲ್ಸರಿಗೆ (ಈಗ ೮ನೇ ಎಡ್ವರ್ಡ ಚಕ್ರವರ್ತಿಯುವರು) ಜಗತ್ತಿನ ಎಲ್ಲಾ ಕಡೆಗಳಿಂದ ಸಂತಾಪಸೂಚಕ ಸಂದೇಶಗಳು ಬಂದಿವೆ ಬ್ರಿಟಿಷ ಸಾಮ್ರಾಜ್ಯದಲ್ಲೆಲ್ಲ ಎಲ್ಲಾ ಸರಕಾರದ ಇಲಾಖೆಗಳು ಮೂರು ದಿವಸಗಳಿಗೆ ಮುಚ್ಚಲ್ಪಟ್ಟವು ಚಕ್ರವರ್ತಿಯುವರ ಶವವನ್ನು ಈಗ, ಅವರು ನಿತ್ಯಲೂ ಪ್ರಾರ್ಥನೆಗೆ ಹೋಗುವ ಸ್ಯೆಂಟ್ ಮೇರಿ ಇಗರ್ಜಿಯಲ್ಲಿಟ್ಟಿರುತ್ತಾರೆ. ಇವರ ಕೊನೆಯ ದರ್ಶನವನ್ನು ಮಾಡಲು ಜನರು ಎಲ್ಲಾ ಭಾಗಗಳಿಂದ ಬರುತ್ತಿದ್ದಾರೆ. ಸದ್ಯದಲ್ಲೇ ಇವರ ಶವಸಂಸ್ಕಾರವು ನಡೆಯುವುದು ವಾಡಿಕೆಯಂತೆ, ಆಂಗ್ಲೇಯರ ಪ್ರಸಿದ್ಧ ಸಮಾಧಿಯಾಗಿರುವ ವೆಸ್ಟ್ ಮಿನಿಸ್ಟರ್ ಎಬೆಯಲ್ಲಿ, ಅರಸರ ಸ್ಥಾನದಲ್ಲಿ ಚಕ್ರವರ್ತಿಯುವರನ್ನು ಇರಿಸುವರು

ಚಕ್ರವರ್ತಿಯುವರ ಇತ್ತೀಚಿಗಿನ ಆರೋಗ್ಯ

೧೯೨೮ರಲ್ಲಿ ಮಹಾ ಕಾಯಿಲೆಯಾದಂದಿನಿಂದ ಚಕ್ರವರ್ತಿಯುವರ ಆರೋಗ್ಯ ನೆಟ್ಟಗಿರಲಿಲ್ಲ, ಅಂದಿನಿಂದ ಬಹಳ ಕ್ಷೀಣರಾಗುತ್ತಾ ಬಂದಿದ್ದರು ಈ ಕಾಯಿಲೆಯಿಂದ ಅವರನ್ನು ಬದುಕಿಸಲು ಅವರ ಹೃದಯಕಮಲದಲ್ಲಿ ಶಸ್ತ್ರ ಚಿಕಿತ್ಸೆಯಿಂದ ಎರಡು ನಳ್ಳಿಗಳನ್ನು ಇಟ್ಟಿದ್ದರು. ಮಾತ್ರವಲ್ಲದೆ, ಯುದ್ಧದ ಸಮಯದಲ್ಲಿ ಕುದುರೆಯಿಂದ ಬಿದ್ದುದರಿಂದ ಅರಸರು ಬಹಳ ನಿರ್ಬಲರಾಗಿದ್ದರು. ಕಳೆದ ಅಕ್ಟೋಬರದಲ್ಲಿ ಅರಸರು ಕೊನೆಯ ಭಾರಿ ಭೇಟಿಯಾಡಲು ಹೋದ ಸಮಯ ಅವರ ಕುತ್ತಿಗೆಯು ಬಹಳವಾಗಿ ಬಾತು ಹೋಗಿತ್ತು. ಮೂರು ವಾರಗಳ ಹಿಂದೆ ಸೆಂಡ್ರಿಗೇಮಿನ ಇಗರ್ಜಿಯಲ್ಲಿ ಪ್ರಾರ್ಥನೆಗೆ ಹೋದವರು ಪ್ರಜ್ಞೆ ತಪ್ಪಿಬಿದ್ದರು. ಕೆಲವು ದಿವಸಗಳ ಹಿಂದೆ ಅಕಸ್ಮಾತ್ತಾಗಿ ಇವರಿಗೆ ಚಳಿ ಹಿಡಿಯಲು ಇವರ ಆರೋಗ್ಯವು ವಿಷಮ ಸ್ಥಿತಿಯನ್ನು ಹೊಂದಿತು. ಹೃದಯ ಕಮಲವು ವಿಶೇಷವಾಗಿ ಕುಂದಿದ ಕುರುಹುಗಳು ಕಾಣಬಂದುವು ಪ್ರಾರಂಭದಲ್ಲಿ ಚಕ್ರವರ್ತಿಯುವರು ಎದೆಯಲ್ಲಿ ಸ್ವಲ್ಪ ನೋವನ್ನುಅನುಭವಿಸಿದ್ದರು ಆದರೆ, ಅಂತ್ಯದಲ್ಲಿ ಇವರ ನೋವು ಸಂಪೂರ್ಣ ಮಾಯವಾಗಿತ್ತು ಆದರೆ, ಹೃದಯ ಕಮಲವು ಸಂಪೂರ್ಣ ನಿರ್ಬಲತೆಯನ್ನುಹೊಂದಿತ್ತು ಬಹಳ ಶಾಂತತೆಯಿಂದ ಪ್ರಾಣವನ್ನು ತ್ಯಜಿಸಿದರು

ಎಂಟನೇ ಎಡ್ವರ್ಡರು

ನಮ್ಮ ಮುಂದಿನ ಚಕ್ರವರ್ತಿಯವರು ಪ್ರಿನ್ಸ ಎಡ್ವರ್ಡ ವಿಂಡಿಸೊರ, (ಪ್ರಿನ್ಸ ಒಫ್ ವೇಲ್ಸರ)ನ್ನು, ಜನವರಿ ತಾ ೨೧ರಲ್ಲಿ ಎಂಟನೆ ಎಡ್ವರ್ಡರೆಂದು, ಸಾರ್ವಭೌಮರಾಗಿ ಪ್ರಖ್ಯಾತ ಮಾಡಲಾಯಿತು ಸಾರ್ವಭೌಮತೆಯ ಅಧಿಕಾರವನ್ನ ಮೃತರಾದ ಚಕ್ರವರ್ತಿಯವರಿಂದ ಅವರ ನಿಧನದ ಹನ್ನೆರಡು ತಾಸು ಮುಂಚಿತವಾಗಿ ಇವರಿಗೂ, ಮಹಾರಾಣಿಯುವರಿಗೂ, ಮತ್ತು ಇತರ ಮಕ್ಕಳಿಗೂ ಕೊಡಲಾಗಿತ್ತು ಚಕ್ರವರ್ತಿಯುವರು ಸಾಯುವ ಹಲವು ತಾಸುಗಳ ಮೊದಲು ಪ್ರಿವಿ ಕೌನ್ಸಿಲಿನ ಸಭೆಯು ಸೇರಿತ್ತು ಸಾರ್ವಭೌಮರ ಮರಣದ ವರ್ತಮಾನವು ಬ್ರಿಟಿಷ ಸರಕಾರದ ಎಲ್ಲಾ ಮಂತ್ರಿಮಂಡಲಗಳಿಗೆ ತಿಳಿಸಲಾಯಿತು. ಕಡೆಗೆ ಪ್ರಿವಿ ಕೌನ್ಸಿಲಿನವರ ಹೊಸ ಸಾರ್ವಭೌಮರ ಕಡೆಗೆ ತಮ್ಮ ರಾಜನಿಷ್ಠೆಯ ಪ್ರಮಾಣವನ್ನು ತಾರೀಕು ೨೨ನೇ ದಿನ ಮಾಡಿದರು. ಎಂಟನೆ ಎಡ್ವರ್ಡರ ಐದನೆ ಜೋರ್ಜರ ಶವಸಂಸ್ಕಾರದ ಕುರಿತು ತಮ್ಮ ಅನುಜರಾದ ಡ್ಯೂಕ್ ಒಫ್ ಯೋರ್ಕ ರೊಡನೆ ಕೆಲವು ಗೂಢ ಚರ್ಚೆಗಳನ್ನು ನಡೆಯಿಸಿ, ಸೆಂಡ್ರಿಗೇಮಿನಿಂದ ಲಂಡನಿಗೆ ತೆರಳಿದರು. ಆಂಗ್ಲೇಯ ಪದ್ಧತಿ ಪ್ರಕಾರ, ಚಕ್ರವರ್ತಿಯುವರ ಮರಣದ ಸರ್ಟಿಫಿಕೇಟನ್ನು ಪಡೆದು, ಹೋಮ್ ಸೆಕ್ರಟರಿಯುವರಿಂದ, ಶವವು ಪರೀಕ್ಷಿಸಲಾಗಿ, ನಂತರ ಕೌನ್ಸಿಲ್ ಒಫ್ ರಿಜನ್ಸಿಯ ಇತರ ಸದಸ್ಯರೊಡಗೂಡಿ, ಪಟ್ಟವನ್ನು, ಯುವರಾಜರಿಗೆ ಒಪ್ಪಿಸಲಾಗುವುದು. ಈ ಸಮಾರಂಭದಿಂದ ಕಿರೀಟೋತ್ಸವ ಮುಂಚಿತವಾಗಿಯೆ, ಯುವರಾಜರು ಸಾರ್ವಭೌಮರಾಗುವರು

ನಮ್ಮ ಹೊಸ ಸಾರ್ವಭೌಮರು

ಎಂಟನೇ ಎಡ್ವರ್ಡರು ಐದನೆ ಜೋರ್ಜರ ಮತ್ತು ಮೇರಿ ಮಹಾರಾಣಿಯವರ ಹಿರಿಯ ಪುತ್ರರು ೧೮೯೪ರ ಜೂನ್ ತಿಂಗಳ ತಾ ೨೩ರಲ್ಲಿ ಜನಿಸಿದವರು ೧೯೦೭-೧೯೧೧ರ ವರೆಗೆ ಎ ಜಿ ಪಿ ಹೆನ್ಸಲ್‌ರ ಕೈಯಲ್ಲಿ ವಿದ್ಯಾಭ್ಯಾಸಂಗವನ್ನು ಮಾಡಿದರು ೧೯೦೭-೧೯೦೮ರಲ್ಲಿ ನೌಕಾ ವಿದ್ಯೆಯಲ್ಲಿ ತರಬೇತು ಹೊಂದಿದರು. ೧೯೧೧ರಲ್ಲಿ ಐದನೆ ಜೋರ್ಜರು ಸಾರ್ವಭೌಮರಾಗಲು, ಇವರನ್ನು ಪ್ರಿನ್ಸ ಒಫ್ ವೇಲ್ಸರನ್ನಾಗಿ ಪ್ರಖ್ಯಾತ ಮಾಡಿದರು ಇದರ ನಂತರ 'ಹಿಂದುಸ್ಥಾನ'ವೆಂಬ ನಾವೆಯಲ್ಲಿ ಮೂರು ತಿಂಗಳು ಕೆಲಸ ಮಾಡಿದರು ೧೯೧೨ರಲ್ಲಿ ರಾಜಕುಮಾರರು ಪೆರಿಸ್‌ನಲ್ಲಿ ೫ ತಿಂಗಳು ಕಳೆದರು ಈ ಸಮಯದಲ್ಲಿ ಆ ದೇಶದ ಭಾಷೆಯನ್ನೂ ಚರಿತ್ರೆಯನ್ನೂ ಅಂತುಕೊಂಡರು. ೧೯೧೨ರಲ್ಲಿ ಒಕ್ಸಫೋರ್ಡಿನ ಮೆಗಲನ್ ಕಾಲೇಜನ್ನು ಸೇರಿದರು ಇಲ್ಲಿ ಒಬ್ಬ ಸಾಧಾರಣ ವಿದ್ಯಾರ್ಥಿಯಂತೆ ಸಮಯ ಕಳೆದರು. ರಜಾ ಸಮಯದಲ್ಲಿ ಜರ್ಮನಿ, ಡೆನ್‌ಮಾರ್ಕ, ಇತ್ಯಾದಿ ಸ್ಥಳಗಳಿಗೆ ಪ್ರಯಾಣ ಬೆಳೆಸಿದರು ೧೯೧೪-೧೮ರ ಯುದ್ಧದಲ್ಲಿ ಒಂದು ತಂಡದ ನಾಯಕರಾಗಿ, ಪ್ರಪಂಚದ ಅನೇಕ ಕಡೆಗಳಲ್ಲಿ ಯುದ್ಧ ಮಾಡಿದರು.

ಬ್ರಿಟಿಷ ಸಾಮ್ರಾಜ್ಯದ ಎಲ್ಲಾ ಸ್ಥಳಗಳನ್ನು ಸಂದರ್ಶಿಸಿರುತ್ತಾರೆ. ೧೯೧೯ರಲ್ಲಿ ಕೆನಡಾಕ್ಕೆ ಪ್ರಯಾಣ ಬೆಳೆಸಿದರು ಈ ಸಮಯ ಯುನ್ಯಾಟೆಡ್ ಸ್ಟೇಟ್ಸಿನ ಪ್ರೆಸಿಡೆಂಟರ ಬೇಟಿಯನ್ನು ಮಾಡಿದರು ೧೯೨೦ರಲ್ಲಿ ನ್ಯೂ ಜಿಲೆಂಡಿಗೆ ಮತ್ತು ಆಸ್ಟ್ರೇಲಿಯಕ್ಕೆ ಪ್ರಯಾಣ ಬೆಳೆಸಿದರು ಹಾದಿಯಲ್ಲಿ ವೆಸ್ಟ್ ಇಂಡಿಸ್ಸ ಎಂಬಲ್ಲಿ ೩ ವಾರ ನಿಲಿಸಿದ್ದರು ೧೯೨೧ರಲ್ಲಿ 'ರಿನೌನ' ಎಂಬ ನಾವೆಯಲ್ಲಿ ಹಿಂದೂದೇಶಕ್ಕೆ ರಾಜವೈಭವದಲ್ಲಿ ಪ್ರಯಾಣ ಮಾಡಿದರು ಆ ವರ್ಷ ನವಂಬರ ತಾ ೧೭ರಲ್ಲಿ ಮುಂಬಾಯಿಯಲ್ಲಿ ಇಳಿದರು ಹಿಂದೂದೇಶದಲ್ಲಿ ಅನೇಕ ವಾರಗಳ ವರೆಗೆ ಸಂಚರಿಸಿ ನವದಿಲ್ಲಿಯಲ್ಲಿ ಎಸೆಂಬ್ಲಿಯ ಬಿನ್ನಪಪತ್ರವನ್ನು ಸ್ವೀಕರಿಸಿ, ಗಡಿನಾಡುಗಳನ್ನು ಸಂದರ್ಶಿಸಿ, ಇಲ್ಲಿಂದ ಜಪಾನಿಗೆ ಪ್ರಯಾಣ ಬೆಳೆಸಿದರು ೧೯೨೪ರಲ್ಲಿ ಮತ್ತೊಮ್ಮೆ ಕೆನಡಾ ದೇಶಕ್ಕೆ ಪ್ರಯಾಣ ಬೆಳೆಸಿದರು ೧೯೨೫-೨೬ರಲ್ಲಿ ಆಫ್ರಿಕಾದತ್ತ ಕಡೆ ತೆರಳಿದರು ೧೯೨೮ರಲ್ಲಿ ಸಾರ್ವಭೌಮ ಐದನೆ ಜೋರ್ಜರಿಗೆ ಮಹಾಕಾಯಿಲೆಯಾಗಲು ಇವರು ಪ್ರಯಾಣದಿಂದ ಹಿಂತಿರುಗಬೇಕಾಯಿತು. ದೇಶದ ಅನೇಕ ಕೈಗಾರಿಕೆಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು

ಮಹಾದೊಡ್ಡ ಅರಸರು, ದೊಡ್ಡ ಸಂಭಾವಿತರು

"ಬ್ರಿಟಿಷ ಸಾಮ್ರಾಜ್ಯವು ಮಹಾದೊಡ್ಡ ಅರಸರೊಬ್ಬರನ್ನು ಕಳಕೊಂಡುದಲ್ಲದೆ, ಅದೊಂದು ದೊಡ್ಡ ಸಂಭಾವಿತ ಪುರುಷರನ್ನು ಕಳಕೊಂಡುದಂತಾಗಿದೆ" ಎಂದು ಎಲ್ಲಾ ಬ್ರಿಟಿಷ ಪ್ರಜೆಗಳ ಐದನೇ ಜೋರ್ಜರ ನಿಧನದ ಕುರಿತು ಅಭಿಪ್ರಾಯಪಡುತ್ತಿದ್ದಾರೆ

ಐದನೆಜೋರ್ಜರಿಗೆ ಗೌರವೋಕ್ತಿಗಳು.

ಭಾರತೀಯ ಕೊಂಗ್ರೆಸ್ ಅಧ್ಯಕ್ಷರ ಸಂದೇಶ

"ಸಾರ್ವಭೌಮರಾದ ಐದನೇ ಜೋರ್ಜ ಚಕ್ರವರ್ತಿಯವರು ಬ್ರಿಟಿಷ್ ಸಾಮ್ರಾಜ್ಯದ ಪ್ರಜ್ವಲಿತ ಕುರುಹುಗಳಾಗಿದ್ದರು ಅಸಂಖ್ಯಾತ ಭೇದಭಾವಗಳಿದ್ದ ಬ್ರಿಟಿಷ್ ಸಾಮ್ರಾಜ್ಯದ ಐಕ್ಯತೆಯ ನಿರೂಪವಾಗಿದ್ದರು. ಬಹಳ ಪ್ರತಿಭಾಶಾಲಿಗಳು. ಡಿಲ್ಲಿಯಲ್ಲಿ ನಡೆದ ಇವರ ಕೊರೆನೇಶನ್ ಸಮಾರಂಭವನ್ನು ಯಾರೂ ಮರೆಯುವಂತಿಲ್ಲ ಪ್ರಜಾಪ್ರಿಯರಾಗಿದ್ದರೆಂಬುದಕ್ಕೆ ಈ ಸಮಾರಂಭದ ಸಮಯ ಪ್ರಜೆಗಳ ಉತ್ಸಾಹದಿಂದ ವ್ಯಕ್ತವಾಗಿತ್ತು ಇವರ ನಿಧನದಿಂದ ಬ್ರಿಟಿಷ ಸಾಮ್ರಾಜ್ಯದ ಎಲ್ಲಾ ಪ್ರಜೆಗಳ ಹಿತವನ್ನು ಸಾಧಿಸುವ ಸಾರ್ವಭೌಮರು ಕಳೆದು ಹೋಗಿರುವರು. ಇವರ ಮರಣವನ್ನು ಎಲ್ಲೆಲ್ಲೂ ಸಂತಾಪಿಸುವರು."

ಮಹಾತ್ಮಾ ಗಾಂಧಿಯುವರು

ತಮ್ಮ ಹಾಸಿಗೆಯಿಂದ, ತಮ್ಮ ಸಂತಾಪ ಸೂಚಕ ಸಂದೇಶವನ್ನು, ಹಿಂದೂದೇಶದ ವೈಸರಾಯರ ಮೂಲಕ ಎಂಟನೆ ಎಡ್ವರ್ಡರಿಗೆ ಕಳುಹಿಸಿಕೊಟ್ಟಿರುವರು.

ಅಘಾಖಾನರು ಶ್ರೀಮತಿ ಸರೋಜಿನಿ ದೇವಿಯರು, ಶ್ರೀ| ಭುಲಾಭಾಯಿ ದೇಸಾಯಿಯವರೂ ಸಾರ್ವಭೌಮರ ಗುಣ ಶ್ಲಾಘನೀಯವನ್ನು ಮಾಡಿ ನವ ಚಕ್ರವರ್ತಿಯ ಯೋಗ್ಯತೆಗಳನ್ನು ಹೊಗಳಿಸಿ, ಸಂತಾಪ ಸೂಚಕ ಸಂದೇಶಗಳನ್ನು ಮಾಡಿರುವರು

"ಸಾರ್ವಭೌಮರ ನಿಧನವು ಪ್ರಪಂಚದ ಒಂದು ಮಹಾ ನಷ್ಟವು" ಎಂದು ಕವಿ ರವೀಂದ್ರರ ಸಂದೇಶವಾಗಿರುತ್ತದೆ

ರಣರಂಗದ ವಾರ್ತೆಗಳು

ಕೊರೆಮ್ಮ ಮತ್ತು ಆಗಿನ ಗರಗಳ ಮೇಲೆ ಇಟೇಲಿಯಾನರು ಬೋಂಬುಗಳನ್ನು ಜಡಿದರು ಡೆಸ್ಸಿಯಲ್ಲಿ ಹಬಸಿ ಚಕ್ರವರ್ತಿಯುವರು, ಇಟೇಲಿಯಾನರ ಒಂದು ವಿಮಾನವು ಹಾರುವುದನ್ನು ನೋಡಿ, ಅದರ ಮೇಲೆ ಮೆಶಿನುಗನ್ನಿನ ಪ್ರಯೋಗವನ್ನುಮಾಡಿದರು ವಿಮಾನವು ಬಹಳ ಎತ್ತರವಿದ್ದುದರಿಂದ, ಬುಲ್ಲೇಟುಗಳು ವಿಮಾನಕ್ಕೆ ತಗಲಿಲ್ಲವಂತೆ ಕೊರೆಮ್ಮ ಮತ್ತು ಆಗಿ ನಗರಗಳ ಬೋಂಬಿನ ಅಭಿಕ್ರಮದಲ್ಲಿ ನಾಲ್ವರು ಮಡಿದಿರುವರು ೭ ಜನರು ಗಾಯ ಹೊಂದಿರುವರು ಇಲ್ಲಿ ಒಂದು ಹೊಸ ಮಾದರಿಯ ಬೋಂಬು ಉಪಯೋಗಿಸಲ್ಪಟ್ಟಿತ್ತೆಂದು ವಾರ್ತೆ

ಗಾನೆಲೆ ಡ್ರಿಯೆ ಪ್ರಾಂತ್ಯದಲ್ಲಿ ರಾಸ್ ಡೆಸ್ತಾನನ್ನು ಸಂಪೂರ್ಣ ಸೋಲಿಸಿದ್ದಾರೆಂದೂ, ಹಬಸಿಗಳು ಪಲಾಯನ ಮಾಡುತ್ತಿದ್ದಾರೆಂದೂ ಅನೇಕರು ಆಹಾರವಿಲ್ಲದೆ ನರಳುತ್ತಿದ್ದು ಈಗ ಇಟೇಲಿಯಾನರ ಶರಣಾಗತರಾಗಿರುವರೆಂದೂ, ಅಸಂಖ್ಯಾತ ಹಬಸಿಗಳು ಇತ್ತ ಕಡೆ ಯುದ್ಧದಲ್ಲಿ ಮಡಿದಿರುವರೆಂದೂ ರೋಮಿನಿಂದ ವಾರ್ತೆ ಉತ್ತರ ರಣರಂಗದಲ್ಲಿ ಎಂದರೆ ಮಕಾಲೆ ಡೆಸ್ಸಿ ಇತ್ಯಾದಿ ಪ್ರಾಂತ್ಯಗಳಲ್ಲಿ ಇಟೇಲಿಯಾನರು ಯುದ್ಧ ಸನ್ನಾಹ ಕಾರ್ಯವನ್ನು ಯೋಗ್ಯ ರೀತಿಯಲ್ಲಿ ಮಾಡಿರುವರು

ಜನಾಂಗ ಮಂಡಲದ ಸಭೆ

ಜನಾಂಗ ಮಂಡಲದ ಸಭೆಯು ಮೊನ್ನೆ ತಾ ೨೦ರಲ್ಲಿ ಜಿನಿವಾದಲ್ಲಿ ಜನಾಂಗ ಸಭಾಸದನದಲ್ಲಿ ಸೇರಿತು. ಆಂಗ್ಲೇಯ ಚಕ್ರವರ್ತಿಯುವರಿಗೆ ದೇಹಾಲಸ್ಯವಿರುವುದರಿಂದ ಈ ಸಭೆಯ ಕಾರ್ಯಕ್ರಮಗಳನ್ನು ಬೇಗನೆ ಕೊನೆಗೊಳಿಸಬೇಕೆಂದು ಸೂಚನೆಗಳು ಬಂದಿದ್ದುವು ಇಂಗ್ಲೆಂಡಿನ ಎಡನ್ನರು ಬೇಗನೆ ಸ್ವದೇಶಕ್ಕೆ ಹಿಂತೆರಳುವರು. ಅಂತೆಯೇ ಫ್ರಾನ್ಸಿನ ಲಾವಲರು ಜನಾಂಗ ಸಭೆಯಿಂದ ನೇಮಕವಾದ ಹದಿಮೂರು ಜನರ ಸಮಿತಿಯು, ಹಬಸಿ, ಇಟೇಲಿ ಯುದ್ಧವನ್ನು ನಿರೀಕ್ಷಿಸಲು ಒಂದು ಕಮಿಶನನ್ನು ಕಳುಹಿಸಿ ಕೊಡುವುದು ಉತ್ತಮವಲ್ಲವೆಂದು ಸಂಕಲ್ಪ ಮಾಡಿರುತ್ತದೆ. ಸಂಧಿ ಪ್ರಸ್ತಾಪದ ಕುರಿತು ಮಾತುಕತೆಗಳನ್ನು ನಡೆಯಿಸುವುದು ಈಗ ಸಾಧ್ಯವಲ್ಲವೆಂದು ಈ ಸಮಿತಿಯ ಅಭಿಪ್ರಾಯ ಪಡುತ್ತದೆ ಸೆಂಕ್ಶನುಗಳ ವಿಚಾರದಲ್ಲಿ ೧೮ ಸದಸ್ಯರ ಇನ್ನೊಂದು ಸೆಂಕ್ಶನ ಸಮಿತಿಯು, ತಮಗೆ ಯುಕ್ತ ಕಂಡ ರೀತಿಯಲ್ಲಿ ವರ್ತಿಸಬಹುದೆಂದು ನಿರ್ಧರಿಸಲಾಯಿತು. ಈ ಸಮಿತಿಯ ಸಭೆಯು ಕಳೆದ ಬುಧವಾರ ಸೇರಲಿಕ್ಕಿತ್ತು. ಈ ಸಭೆಯಲ್ಲಿ ಇಷ್ಟರ ವರೆಗಿನ ಸೆಂಕ್ಶನುಗಳ ಫಲವನ್ನು ಪರಿಶೀಲಿಸಿ, ಇನ್ನೂ ಹೆಚ್ಚಿನ ಸೆಂಕ್ಶನುಗಳು ಬೇಕಾಗುವುವೋ ಎಂದು ಇತ್ಯರ್ಥ ಮಾಡಲಾಗುವುದು.

ದಕ್ಷಿಣ ಹಿಂದೂಸ್ಥಾನದಲ್ಲಿ ಜೂಜುಟ್ಸು ಪ್ರಚಾರ!

ಅಖಿಲಭಾರತ ಸಮತಾವಾದಿಗಳ ಪರಿಷತ್ತು!

ನವೀನ ಒರಿಸ್ಸಾ ಪ್ರಾಂತ್ಯದ ಪ್ರಾರಂಭೋತ್ಸವ! ಹಿಂದೂದೇಶದ ಭವಿಷ್ಯ!

ಜಾಪಾನಿನ ಜೂಜುಟ್ಸು ಪ್ರವೀಣರಾದ

ಪ್ರೊಫೆಸರ್ ಎಸ್. ಕಾಕಾಗಾಕಿಯವರು ಮದ್ರಾಸಿಗೆ ಬಂದಿರುವರು. ಇವರು ಹಿಂದೂ ದೇಶಕ್ಕೆ ಬರುವುದು ಇದು ದ್ವಿತೀಯ ಸಲ. ಸುಮಾರು ಹನ್ನೊಂದು ವರ್ಷಗಳ ಹಿಂದೆ, ಡಾ. ರವೀಂದ್ರರ ಅಪೇಕ್ಷೆ ಮೇರೆಗೆ ಇವರು ಶಾಂತಿನಿಕೇತನಕ್ಕೆ ಬಂದು, ಅಲ್ಲಿ ಎರಡು ವರ್ಷಗಳ ಸಮಯ ಇದ್ದು, ಅನೇಕ ಭಾರತೀಯರಿಗೆ ಜೂಜುಟ್ಸುವನ್ನು ಕಲಿಸಿ ಹೋಗಿದ್ದರು. ಅಫ್ಘಾನಿಸ್ಥಾನದಲ್ಲೂ ಇವರು ಈ ಜೂಜುಟ್ಸು ವಿದ್ಯೆಯ ಬೋಧಕರಾಗಿದ್ದರು. ಇವರು ಈಗ ದಕ್ಷಿಣ ಹಿಂದೂದೇಶದಲ್ಲಿ ಜೂಜುಟ್ಸು ಕುಸ್ತಿಯನ್ನು ಪ್ರಚಾರ ಮಾಡುವ ಕಾರ್ಯವನ್ನು ಕೈಕೊಂಡಿರುವರು. ಈ ಜೂಜುಟ್ಸು ಕುಸ್ತಿಯಿಂದ, ದೇಹ ಮಾತ್ರವಲ್ಲದೆ ಮನುಷ್ಯನ ಬುದ್ಧಿಶಕ್ತಿಯು ಕೂಡ ಪ್ರಗತಿ ಹೊಂದುವುದಂತೆ. ಇವರನ್ನು ನಮ್ಮ ಜಿಲ್ಲೆಗೆ ಆಮಂತ್ರಿಸಬಾರದೆ?

ಒಟೋವಾ ಪೆಕ್ಟ್

ಈ ಭಾರಿಯ ಅಸೆಂಬ್ಲಿಯಲ್ಲಿ ಒಟೋವಾ ಪೆಕ್ಟಿನ ಮೇಲಿನ ಚರ್ಚೆಯು ಅಸಮಾನ್ಯತೆಯನ್ನು ಪಡೆಯುವುದೆಂದು ಊಹಿಸಲಾಗಿದೆ. ಕಾಂಗ್ರೆಸ್ ಪಕ್ಷದವರೊಡನೆ ಹಿಂದೂ ನೇಶನಲಿಸ್ಟ್ ಸಂಗಡದ ಬೆಂಬಲವಿದ್ದು, ಹಲ ಓಟುಗಳಿವೆ. ಈ ಪ್ರಶ್ನೆಯ ಇತ್ಯರ್ಥವು ಈಗ ಸಂಪೂರ್ಣ ಶ್ರೀ| ಜಿನ್ನಾರವರ ಮತದ ಮೇಲೆ ಹೊಂದಿಕೊಂಡಿರುತ್ತದೆ.

ಒಟವಾಪೆಕ್ಟಿನ ವಿಚಾರವಾಗಿ ತಪ್ಪು ತಿಳುವಳಿಕೆಯನ್ನು ನಾಶಮಾಡಲು ಸರಕಾರವು ಪತ್ರಿಕೆಗಳ ಮೂಲಕ ಪ್ರಸಾರಣಾ ಕಾರ್ಯವನ್ನು ಪ್ರಾರಂಭ ಮಾಡಿರುತ್ತದೆ. ಈ ಪೆಕ್ಟಿನ ಗತಿ ಈ ಭಾರಿಯ ಅಧಿವೇಶನದಲ್ಲಿ ಹೇಗೆ ಪರಿಣಮಿಸುವುದೆಂದು ನೋಡಲಿದೆ.

ಅಖಿಲಭಾರತ ಸಮತಾವಾದಿಗಳ ಪರಿಷತ್ತು

ಅಖಿಲಭಾರತ ಸಮತಾವಾದಿಗಳ ಪರಿಷತ್ತು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಮೀರತ್‌ನಲ್ಲಿ ಜರಗಿತು. ೫೦ ಪ್ರತಿನಿಧಿಗಳೂ, ಅನೇಕ ರೈತರೂ ವಿದ್ಯಾರ್ಥಿಗಳೂ ಈ ಪರಿಷತ್ತಿಗೆ ನೆರೆದಿದ್ದರು. ಕಾಂಗ್ರೆಸ್ ಶಾಸನದಲ್ಲಿ ಬದಲಾವಣೆಯ ಕುರಿತು ಅನೇಕ ಸೂಚಿತ ಠರಾವುಗಳು ಮಾಡಲಾದುವು. ಕಾಂಗ್ರೆಸ್ಸು ಮುಂದಿನ ನವರಾಜ ಧೋರಣದ ಅಧಿಕಾರ ಸೂತ್ರದಲ್ಲಿ ಭಾಗವಹಿಸಬಾರದಾಗಿ ಓರ್ವ ಮಹಿಳೆಯ ಭಾಷಣವಿತ್ತು. ಈ ಪರಿಷತ್ತಿನಲ್ಲಿ ಶ್ರೀ| ಜವಾಹರ್‌ಲಾಲರನ್ನು ಮುಂದಿನ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಬೇಕಾಗಿ ಠರಾವುಗಳಾದುವು. ಸಮತಾವಾದವೆಂದು ಬರಿ ಭಾಷಣಗಳನ್ನು ಮಾಡಿ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಅಡ್ಡಂತರಗಳನ್ನು ತರುವ ಬದಲಾಗಿ, ಈ ಸಮತಾವಾದಿಗಳು ಎಲ್ಲವನ್ನು ಕಾರ್ಯರೂಪದಲ್ಲಿ ಮಾಡಬೇಕು ಎಂಬ ಅಭಿಪ್ರಾಯದಿಂದ ಕೂಡಿದ, ಶ್ರೀ ಶಕ್ಲತ್ವಾಲರ (ಈಗ ದಿವಂಗತರಾಗಿರುವರು) ಸಂದೇಶವು ಬಂದಿತ್ತು. ಶ್ರೀ| ಜವಾಹರಲಾಲ, ಶ್ರೀ| ಸುಭಾಷ್ಚಂದ್ರ ಬೋಸ್ ಇವರೇ ಮೊದಲಾದ ಮಹನೀಯರ ಸಂದೇಶಗಳೂ ಬಂದಿದ್ದುವು.

ಶೃಂಗೇರಿ ಮಠದ ಶ್ರೀ ಸ್ವಾಮಿಗಳ ದೇಹಾಲಸ್ಯ

ಶೃಂಗೇರಿ ಮಠದ ಶ್ರೀ ಸ್ವಾಮಿಗಳಾದ ಶ್ರೀ| ಚಂದ್ರಶೇಖರ ಭಾರತಿಯವರಿಗೆ ದೇಹಾಲಸ್ಯ ಉಂಟಾಗಿದೆಯೆಂದೂ, ಬೆಂಗಳೂರಿನಿಂದ ವಾರ್ತೆ ಬಂದಿರುತ್ತದೆ. ಇವರು ಬೇಗನೆ ಗುಣ ಹೊಂದುವರೆಂದೂ ಊಹಿಸಲಾಗಿದೆ.

ಗಂಜಾಮಿನಲ್ಲಿ ನೀರಿನ ಕ್ಷಾಮ

ದಕ್ಷಿಣ ಗಂಜಾಮಿನ ಎಲ್ಲಾ ಬಾವಿಗಳೂ ಕೆರೆಗಳೂ, ನದಿಗಳೂ, ಬತ್ತಿಹೋಗಿ ಭಯಂಕರ ನೀರಿನ ಕ್ಷಾಮವು ತಲೆದೋರಿರುತ್ತದೆ. ಜನರಿಗೆ ನೀರನ್ನು ಒದಗಿಸುವ ಕಾರ್ಯವು ಜಿಲ್ಲಾ ಕಲೆಕ್ಟರರೇ ಮೊದಲಾದ ಮಹನೀಯರ ಪರಿಶ್ರಮದಲ್ಲಿ ಉತ್ತಮ ರೀತಿಯಿಂದ ನಡೆಯುತ್ತಿವೆ. ಮುಂದಕ್ಕೆ ಕ್ಷಾಮ ಬಾರದ ಹಾಗೆ, ಮತ್ತು ಈಗಿನ ಕ್ಷಾಮವನ್ನು ತಪ್ಪಿಸಲು, ನೀರಿನ ಕಾಲುವೆಗಳನ್ನೂ, ಕೆರೆ ಇತ್ಯಾದಿಗಳನ್ನೂ ರಚಿಸಬೇಕಾಗಿ ಸರಕಾರದವರೂ ಪ್ರಜೆಗಳೂ ನಿರ್ಧರಿಸಿರುವರು. ಅಲ್ಲಿನ ಜಮೀನುದಾರರು, ಈ ಕಾರ್ಯಕ್ಕೆ ರೂ. ೫೦,೦೦೦ವನ್ನು ತೆರಲು ಮುಂದೆ ಬಂದಿರುವರು.

ಆಘಾಖಾನರ ಸ್ವರ್ಣೋತ್ಸವ

ಇಸ್ಮೈಲೀ ಖೋಜಾಸರ ಆಧ್ಯಾತ್ಮಿಕ ಗುರುಗಳಾದ ಆಘಾಖಾನರ ಸುವರ್ಣೋತ್ಸವವು ಮುಂಬಯಿಯ ಹಸನಾಬಾದ್ ಎಂಬಲ್ಲಿ ಇದೇ ತಿಂಗಳ ತಾ. ೧೯ರಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ೩೦,೦೦೦ ಜನರು ಈ ಸಮಾರಂಭಕ್ಕೆ ನೆರೆದಿದ್ದರು. ಆಘಾಖಾನರ ಮಾತೆಯರಾದ, ೮೦ ವರ್ಷ ಪ್ರಾಯದ ಲೇಡಿ ಅಲಿ ಶಾರವರು ಈ ಸಮಾರಂಭಕ್ಕೆ ಬಂದಿದ್ದರು. ಖೋಜಾ ಸಮಾಜದ ಜನರ ಅಪೇಕ್ಷೆ ಮೇರೆಗೆ ಆಘಾಖಾನರು ಭಂಗಾರದಲ್ಲಿ ತೂಕಲು ಸಮ್ಮತಿಸಲ್ಪಟ್ಟರು. ಒಂದು ದೊಡ್ಡ ತ್ರಾಸಿನಲ್ಲಿ ಇವರನ್ನು ತೂಕಲಾಯಿತು. ೩,೩೫,೦೦೦ ರೂ. ಕ್ರಯಬಾಳುವ ೯೫೦ ತೊಲೆ ಭಂಗಾರವು ಬೇಕಾಯಿತು. ಈ ಚಿನ್ನವು ಆಘಾಖಾನರಿಗೆ ಖೋಜಾ ಸಮಾಜದವರಿಂದ ಸುವರ್ಣೋತ್ಸವ ಸ್ಮಾರಕವಾಗಿ ಬಹುಮಾನ ಕೊಡಲಾಯಿತು. ಹಿಂದೂದೇಶದಲ್ಲಿ ಖೋಜಾ ಸಮಾಜವಿದ್ದಲ್ಲೆಲ್ಲಾ ಆಘಾಖಾನರ ಸುವರ್ಣೋತ್ಸವವು ಆಚರಿಸಲಾಯಿತು.

ಸರ್. ಓಟೊನೇಮಿಯರರು.

ನವರಾಜ ಶಾಸನದ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸಲು ನೇಮಿಸಿದ ಇಂಗ್ಲಾಂಡಿನ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಸರ್. ಓಟೊ ನೇಮಿಯರರು ಮೊನ್ನೆ ಮುಂಬೈ ನಗರದಲ್ಲಿ ಇಳಿದು ನವಡಿಲ್ಲಿಗೆ ತೆರಳಿರುವರು.

ನವೀನ ಓರಿಸ್ಸಾ ಪ್ರಾಂತ್ಯದ ಪ್ರಾರಂಭೋತ್ಸವ.

ಓರಿಸ್ಸಾ ಪ್ರಾಂತ್ಯದ ಕೆಲವು ಪ್ರಮುಖರು ರೂ. ೧೫,೦೦೦ ವೆಚ್ಚಮಾಡಿ ನವೀನ ಓರಿಸ್ಸಾ ಪ್ರಾಂತ್ಯದ ಪ್ರಾರಂಭೋತ್ಸವವನ್ನು ಅತೀ ವಿಜೃಂಭಣೆಯಿಂದ ಜರಗಿಸಬೇಕಾಗಿ ಸಂಕಲ್ಪ ಮಾಡಿರುತ್ತಾರೆ. ಧನ ಶೇಖರಿಸಲು ಅನೇಕ ಮುಂದಾಳುಗಳು ವಂತಿಗೆ ಪಟ್ಟಿಗಳನ್ನು ಒಡಕೊಂಡು ತಿರುಗುತ್ತಿದ್ದಾರೆ.

ಬ್ರಿಟಿಷ್ ರೆಡ್‌ಕ್ರೊಸ ಅಂಬ್ಯುಲೆನ್ಸಿನ ಮೇಲೆ ಬೋಂಬು

ಡೆಸ್ಸಿಯ ಹತ್ತಿರ ಮೂರು ಇಟಲಿಯಾನ ವಿಮಾನಗಳು ಬ್ರಿಟಿಷ ರೆಡ್‌ಕ್ರೊಸ ಅಂಬ್ಯುಲೆನ್ಸಿನ ಮೇಲೆ ಬೋಂಬುಗಳನ್ನು ಹೊಡೆದಿರುವರು. ೧೪ ಮಂದಿಗಳು ಮಡಿದಿರುವರು. ೩೫ ಮಂದಿಗೆ ಭಯಂಕರ ಜಖಂ ಉಂಟಾಗಿದೆ. ಮಡಿದವರಲ್ಲಿ ಹೆಚ್ಚಿನವರು ಸ್ತ್ರೀಯರು ಮತ್ತು ಮಕ್ಕಳು. ಬ್ರಿಟಿಷ ರೆಡ್ ಕ್ರೊಸ ಸಂಸ್ಥೆಯು ಇನ್ನೊಂದು ಅಂಬ್ಯುಲೆನ್ಸ್ ಇತ್ತಕಡೆ ಬಂದಿರುತ್ತದೆ. ಮುಸಲೇನಿಯು ಇಟಲಿಯು ಬೇಗನೇ ಜನಾಂಗ ಸಭೆಯನ್ನು ತ್ಯಜಿಸುತ್ತಿದ್ದನೆಂದು ಈ ರೀತಿ ಊಹಿಸಲಾಗಿದೆ.

ಇಟಲಿಯಾನ ನಾಯಕರು ನಿರುತ್ಸಾಹಿಗಳಾಗಿರುವರು.

ಜನರಲ್ ಬೊಡೊಗ್ಲಿಯಾಯವರು ಎಬಿಸಿನಿಯ ದೇಶದ ಸ್ಥಿತಿಯಿಂದ ನಿರುತ್ಸಾಹಿಗಳಾಗಿದ್ದರೆಂದು ವಾರ್ತೆ ಹರಡಿತ್ತು. ಅದು ಸುಳ್ಳೆಂದು ಈಗ ಪ್ರಕಟವಾಗಿರುತ್ತದೆ.

ಸಯ್ಯದ್ ಸರ್ ರಾಜಾ ಅಲಿಗಳು

ಇವರು ಹಿಂದೂ ಸರಕಾರದ ಆಫ್ರಿಕದ ಏಜಂಟರು. ಇಲ್ಲಿನ ಕಿಂಬರ್ಲಿ ಎಂಬಲ್ಲಿನ ವಿ. ಸಾಮಿ ಎಂಬ ಹಿಂದೂ ತರುಣಿಯನ್ನು ವಿವಾಹ ಮಾಡಿಕೊಂಡಿರುವರು. ಅಲ್ಲಿನ ಮತ್ತು ಹಿಂದೂದೇಶದ ಹಿಂದುಗಳು ಅವರ ಈ ಕಾರ್ಯವನ್ನು ಪ್ರತಿಕೂಲಿಸಿದ್ದರು. ತರುಣಿಯನ್ನು ಮತಾಂತರಗೊಳಿಸದೆ, ಪರ್ಬಾನದ ಮದುವೆ ಕಾನೂನನ್ನು ಅನುಸರಿಸಿ ಇವರ ವಿವಾಹವು ನಡೆದಿರುತ್ತಾವೆಂದು ತಿಳಿದು ಬರುತ್ತದೆ.

ಹಂಗೇರಿಯಾದ ದಿವ್ಯ ಜ್ಞಾನಿ

ಹಂಗೇರಿಯಾದ ಪ್ರಸಿದ್ಧ ದಿವ್ಯ ಜ್ಞಾನಿಯಾದ ಮೆಡಮ್ ಟರ್‌ಫ್ರೆನ್ ಲ್ಯಾಲಾ ಎಂಬವರು ಮದ್ರಾಸಿಗೆ ಬಂದಿರುವರು.

ಹಿಂದೂದೇಶವು ಪ್ರಗತಿ ಹೊಂದುವುದು

ಇನ್ನು ಎರಡು ವರ್ಷದ ಸಮಯದಲ್ಲಿ, ಹಿಂದೂದೇಶದ ಕೋಮುವಾರು ಭೇದವು ಸಂಪೂರ್ಣ ನಾಶವಾಗಿ, ಅದೂ ರಾಜಕೀಯ, ಸಾಂಪತ್ತಿಕ ಮತ್ತು ಇತರ ಎಲ್ಲಾ ವಿಚಾರಗಳಲ್ಲಿ ಉತ್ತಮ ರೀತಿಯಲ್ಲಿ ಪ್ರಗತಿ ಹೊಂದುವುದು.

ನನ್ನ ಪ್ರಯಾಣದ ಉದ್ದೇಶ

ಹಿಂದೂದೇಶದ ಜನರ ಅಭ್ಯಾಸ, ಬುದ್ಧಿ ಮತ್ತು ಗುಣಗಳನ್ನು ತಿಳಿಯುವುದೇ ನನ್ನ ಈ ಪ್ರಯಾಣದ ಮುಖ್ಯ ಉದ್ದೇಶ, ಮತ್ತು ಇದನ್ನು "ಈ ಜಗತ್ತಿನ ಜನಾಂಗಗಳು" ಎಂಬ ಪುಸ್ತಕದಲ್ಲಿ ಚಿತ್ರಿಸಲಾಗುವುದು. ಹಿಂದೂದೇಶದ ಮೇಲಿನ ಇತರ ಪಾಶ್ಚಾತ್ಯ ಕವಿಗಳ ಪುಸ್ತಕಗಳನ್ನೋದಿ, ನಾನು ಈ ದೇಶವು ಬಹಳ ಸಿರಿವಂತ ಊರೆಂದು ಭಾವಿಸಿದ್ದನು. ಆದರೆ, ನನ್ನ ಉತ್ತರ ಹಿಂದೂಸ್ಥಾನದ ಪ್ರಯಾಣದಿಂದ, ಹಿಂದೂದೇಶವೂ, ಬಹಳ ಬಡವಾಗಿದೆಯೆಂದು ನನಗೆ ತಿಳಿದುಬಂದಿರುತ್ತದೆ. ಜನರು ಬಡಸ್ಥಿತಿಯಿಂದಲೂ, ರೋಗಗಳಿಂದಲೂ ನರಳುತ್ತಿದ್ದಾರೆ.

ಒಂದು ಹೊಸ ಲೋಹ

ಹಿಂದೂದೇಶದಲ್ಲಿ ಅನೇಕ ನವೀನ ವಸ್ತುಗಳು ದೊರಕುವುವು. ಕಾಶ್ಮೀರದಲ್ಲಿ ರೇಡಿಯಮ್ ಉಂಟೆಂದು ನಾನು ಶೋಧೆ ನಡೆಯಿಸಿ ಕಂಡು ಹಿಡಿದಿದ್ದೇನೆ. ಮುಂಬಾಯಿಯಲ್ಲಿ ಅಲ್ಯುಮಿನಿಯಮ್ ಮತ್ತು ಬೆಳ್ಳಿಯ ಗುಣಗಳುಳ್ಳ ಒಂದು ಲೋಹವನ್ನು ಕಂಡು ಹಿಡಿದ್ದೇನೆ. ಮದ್ರಾಸಿನಲ್ಲಿ ಧಾರಾಳ ಭಂಗಾರವು ಸಿಗುವುದು.

ಇಟಲಿ-ಹಬಸಿ ಯುದ್ಧ

ಈ ಯುದ್ಧವು ಹಬಸಿಯವರ ಜಯದಲ್ಲಿ ಬೇಗನೆ ಕೊನೆಗೊಳ್ಳುವುದು. ಈ ಯುದ್ಧದ ನಿಮಿತ್ತ ಇನ್ನೊಂದು ಮಹಾಯುದ್ಧವು ಸಂಭವಿಸದು. ಆದರೆ ಯುರೋಪಿನಲ್ಲಿ ಇನ್ನೊಂದು ಮಹಾಯುದ್ಧವು ಪ್ರಾರಂಭವಾಗುವುದು ಖಚಿತ.

ಮೆಡಮ್ ಲ್ಯಾಲಾರವರು, ಹಿಟ್ಲರರವರು ಏಳಿ, ಇಟಲಿ-ಹಬಸಿ ಕಲಹ ಇತ್ಯಾದಿಗಳನ್ನು ಭವಿಷ್ಯವಾಗಿ ಹೇಳಿದವರು.

ಬೇಕಾಗಿದ್ದಾರೆ!

ದಿ ನ್ಯೂ ಏಸ್ಯಾಟಿಕ್ ಲಾಯಿಫ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಕಂಪೆನಿಯ ಕಾರ್ಯಪ್ರಚಾರಕ್ಕಾಗಿ,–ದಕ್ಷಿಣ ಕನ್ನಡ, ಮಲಬಾರು, ತಿರುವಾಂಕೂರು ಪ್ರಾಂತ್ಯಗಳಲ್ಲಿ, ಉತ್ತಮವಾಗಿ ಪ್ರಚಾರ ಮಾಡಿ ವಿಮೆದಾರರನ್ನು ಕೂಡಿಸಿಕೊಡಬಲ್ಲ ಅರ್ಹರೂ ಯೋಗ್ಯರೂ ಆಗಿರುವ ಸ್ತ್ರೀ ಪುರುಷರು ಬೇಕಾಗಿದ್ದಾರೆ.

ಮೆಸರ್ಸ್ ಬಿರ್ಲಾ ಬ್ರದರ್ಸ್ ಲಿಮಿಟೆಡ್, ಇವರ ಆಡಳಿತದಿಂದಾಗಿ ಅಭ್ಯುದಯವನ್ನು ಹೊಂದಿ, ಈ ಕಂಪೆನಿಯು ತನ್ನ ಮೊದಲನೆ ಎರಡು ವರ್ಷಗಳೊಳಗಾಗಿಯೆ

೫೦ ಲಕ್ಷ ರೂಪಾಯಿ ಮೊಬಲಗಿನ ವಿಮಾ ಗಳಿಸಿಕೊಂಡಿದೆ.

ಇನ್ನೂ ಇನ್ನೂ ವಿಮಾದಾರರನ್ನು ಜಮೆಮಾಡಲು, ನಿಜವಾಗಿಯೂ ದಕ್ಷರಾಗಿರುವ ಉದ್ಯಮಶೀಲರು ಬೇಕಾಗಿರುವರು. ಇದಕ್ಕಾಗಿ, ನಮ್ಮ ಬ್ರಾಂಚ್ ಮೆನೇಜರರು ಈ ಪ್ರಾಂತ್ಯಗಳಲ್ಲಿ ಸಂಚರಿಸುವರು.

ಎಲ್ಲ ಅರ್ಜಿಗಳನ್ನು ಇಂಗ್ಲಿಷಿನಲ್ಲಿ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳುವುದು:

ಬ್ರೆಂಚ್ ಮೆನೆಜರರು,—

ದಿ ನ್ಯೂ ಏಸ್ಯಾಟಿಕ್ ಲಾಯಿಫ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,

16, ಎಸ್‌ಪ್ಲೆನೆಡ್ ರೋಡ್, ಫೋರ್ಟ್, ಮುಂಬಾಯಿ.

ಜಿಲ್ಲಾ ಬೋರ್ಡಿನ ವಿಭಜನೆಯಾಗುವುದೇ?

ಮುಂಬಾಯಿಯಲ್ಲಿ ಬೆಳ್ಳಿಯ ಧಾರಣೆಯು ಇನ್ನೂ ಇಳಿದಿರುತ್ತದೆ.

ಮಿಸ್ ಮೇಯೊಳ ಇನ್ನೊಂದು ಪುಸ್ತಕ

ಮುಂಬಾಯಿ ನಗರ ಸಭೆ.

ಬರುವ ಏಪ್ರಿಲ್ ತಿಂಗಳಲ್ಲಿ ಮುಂಬೈಯಲ್ಲಿ ಇಳಿದಿರುವ ಹಿಂದೂದೇಶ ಹೊಸ ವೈಸರಾಯರಾದ ಲಾರ್ಡ್ ಲಿನಲಿತ್‌ಗೋರವರಿಗೆ ಸ್ವಾಗತ ಪತ್ರವನ್ನು ಅರ್ಪಿಸಬೇಕಾಗಿ ಮುಂಬೈ ನಗರ ಸಭೆಯು ನಿರ್ಧರಿಸಿದೆ. ಸರ್ ಥೋಮಸ್ ಟ್ರೆಂಡುರೆಂಬವರು ಮುಂದೆ ಈ ಠರಾವು ಕಾಂಗ್ರೆಸ್ಸು ಪಕ್ಷದವರಿಂದ ಖಂಡಿಸಲಾಯಿತು. ಮತ ತೆಗೆಯಲಾಗಿ ಟ್ರೆಂಡುರ ಠರಾವಿಗೆ, ೫೦ ಮತಗಳು, ವಿರೋಧ ಪಕ್ಷಕ್ಕೆ ೧೨ ಮತಗಳು ದೊರೆತು, ನವೀನ ವೈಸರಾಯರಿಗೆ ಸ್ವಾಗತ ಪತ್ರವನ್ನು ಕೊಡಬೇಕಾಗಿ ನಿರ್ಧಾರವಾಯಿತು.

ಬೊಂಬಾಯಿ ಬೆಳ್ಳಿ ಮಾರ್ಕೆಟು

ಬೊಂಬಾಯಿಯ ಬೆಳ್ಳಿ ಮಾರ್ಕೆಟು ಸ್ಥಿತಿಯು ಹೀಗಾಗಬಹುದೆಂದು ಧಾರಣೆಯು ೮೫ ಆಣೆಗಳಿಗೆ ಇಳಿದಿರುತ್ತದೆ. ಲಂಡನಿನಲ್ಲಿ ಬೆಳ್ಳಿಯ ಧಾರಣೆಯು ಇಳಿದಿರುವುದರಿಂದ ಈ ಸ್ಥಿತಿಯು ಸಂಭವಿಸಿತೆಂದು ತಿಳಿದು ಬರುತ್ತದೆ. ಹೊರಗಿನಿಂದ ತುಂಬ ಬೆಳ್ಳಿಯು ಮುಂಬೈ ಬಂದರಿಗೆ ಬಂದಿರುತ್ತದೆ. ವರ್ತಕರು ಬೆಳ್ಳಿಯ ಧಾರಣೆಯಲ್ಲಿ ಸ್ವಲ್ಪ ಏರಿಕೆಯು ಉಂಟಾಗುವುದೆಂಬ ಆಶೆಯಿಂದ ಬೆಳ್ಳಿಯ ಧಾರಣೆಯನ್ನು ಪಡೆಯಲಿಲ್ಲ. ಬೆಳ್ಳಿಯಲ್ಲಿ ಹೆಚ್ಚಿನ ವಹಿವಾಟವು ನಡೆಯಲಿಲ್ಲ.

ಭಾವನಗರದಲ್ಲಿ ಬೆಂಕಿಯ ಅನಾಹುತ

ಭಾವನಗರದ ಒಂದು ಜೀನಸಿನ ಅಂಗಡಿಯಲ್ಲಿ ಉಂಟಾದ ಬೆಂಕಿಯಿಂದಾಗಿ ೧೬ ಇತರ ಅಂಗಡಿಗಳು ಸುಟ್ಟುಹೋಗಿರುತ್ತವೆ. ಇದರಿಂದಾಗಿ ಸಾಧಾರಣ ಅರ್ಧ ಲಕ್ಷ ರೂಪಾಯು ನಷ್ಟವಾಗಿರಬಹುದಂತೆ.

ಕಲ್ಕತ್ತಾದಲ್ಲಿ 20,000 ಮಜೂರರ ಮುಷ್ಕರ!

ಕೆಲವು ದಿನಗಳ ಹಿಂದಿನಿಂದ ಮುಷ್ಕರ ಹೂಡಿದ ಸಾಣಬು ಮಿಲ್ಲಿನ ೩೦,೦೦೦ ಕೆಲಸಗಾರರು ಅವರಿಗೂ ಮಿಲ್ಲಿನ ಯಜಮಾನರಿಗೂ ಆದ ಒಪ್ಪಂದಗಳನ್ನನುಸರಿಸಿ ಕೆಲಸಕ್ಕೆ ಹೋಗಿರುವರು. ಆದರೆ ೧೦೦೦೦ ಮಂದಿ ನೇಯುವವರು ಮಾತ್ರ ತಮ್ಮ ಕೋರಿಕೆಗೆ ತಕ್ಕ ಮನ್ನಣೆಯು ದೊರೆಯದಿರುವುದರಿಂದ ಕಳೆದ ವಾರ ಹಿಡಿದ ಮುಷ್ಕರವನ್ನು ಮುಂದುವರಿಸುತ್ತಿದ್ದಾರೆ.

ಒರಿಸ್ಸಾ ಮತ್ತು ಸಿಂಧ್.

ಈ ಎರಡು ಪ್ರಾಂತ್ಯಗಳನ್ನು ವಿಂಗಡಿಸುವ ಶಾಸನ ಹಿಂದೂದೇಶದಲ್ಲೂ ಇಂಗ್ಲಾಂಡಿನಲ್ಲೂ ಒಂದೇ ಸಮಯದಲ್ಲಿ ತಾ. ೨೧ರ ರಾತ್ರಿ ಪ್ರಕಟವಾಗಿರುತ್ತದೆ.

ಮದ್ರಾಸು ಪ್ರಾಂತ್ಯದ ಆರ್ಥಿಕಸ್ಥಿತಿಯು ಒಳ್ಳೆದಿರುವ

ಜಿಲ್ಲಾ ಬೋರ್ಡುಗಳನ್ನು ವಿಭಾಗಿಸಬೇಕಾಗಿ ಸರಕಾರದ ನಿರ್ಧಾರವಾಗಿದೆಂದು ತಿಳಿದುಬರುತ್ತದೆ. ತಾಲೂಕು ಬೋರ್ಡುಗಳು ರದ್ದುಹೊಂದಿದಂದಿನಿಂದ ಒಂದು ಜಿಲ್ಲಾ ಬೋರ್ಡಿನ ವ್ಯವಹಾರವು ಭಾರಿಕವಾಗಿ ಹೆಚ್ಚಿದುದರಿಂದ, ಈ ಎಲ್ಲಾ ಕಾರ್ಯಗಳನ್ನು ಜಿಲ್ಲಾ ಬೋರ್ಡಿನವರಿಂದ ಸಾಂಗವಾಗಿ ನಡೆಸಲು ಅಸಾಧ್ಯವಾಯಿತು. ಆದಪ್ರಯುಕ್ತ ಇನ್ನು ಮುಂದಕ್ಕೆ ಸ್ಥಳೀಕ ಸಂಸ್ಥೆಗಳು ಸರಿಯಾಗಿ ನಡೆಯುವಂತೆ ಪ್ರಾಂತ್ಯದ ಎಲ್ಲಾ ಜಿಲ್ಲಾ ಬೋರ್ಡುಗಳ ವಿಭಜನೆಮಾಡಬೇಕಾಗಿ ಸರಕಾರವು ನಿರ್ಧರಿಸಿದೆಂದು ತಿಳಿದುಬರುತ್ತದೆ.

ಕರಾಚಿ ಬಂದರದಲ್ಲಿ ಮುಷ್ಕರ.

ತಮ್ಮ ಮಜೂರಿಯನ್ನು ರೂ. ೧–೪–೦ರಿಂದ ರೂ. ೧–೮–೦ಕ್ಕೆ ಏರಿಸಬೇಕೆಂಬ ಅವರ ಸಲಹೆಯು ಪೂರೈಸದಿರಲು, ಕರಾಚಿ ಬಂದರಿನ ಪೈಂಟಿಂಗ್ ಇಲಾಖೆಯ ೧೦೦ ಮಂದಿ ಕೆಲಸಗಾರರು ಮುಷ್ಕರ ಹಿಡಿದಿರುವರು. ಇನ್ನೂ ೨೦೦ ಮಂದಿ ಕೆಲಸಗಾರರು ಇವರೊಡನೆ ಸಹಕರಿಸಬಹುದೆಂದು ಊಹಿಸಲಾಗಿದೆ. ಪೋಲೀಸ ಸಿಬ್ಬಂದಿಯು ಗಲಭೆ ನಡೆಯದಂತೆ ಬಂದೋಬಸ್ತು ನಡೆಸುತ್ತಿದೆ.

ಪಂಜಾಬ ನ್ಯಾಯವಿಧಾಯಕ ಸಭೆ.

ಈ ಸಭೆಯ ಅಧಿವೇಶನವು ಇದೇ ತಿಂಗಳ ತಾ. ೨೮ರಿಂದ ಪ್ರಾರಂಭವಾಗುವುದು. ಮುಂದಿನ ವರ್ಷದ ವ್ಯಯದ ಅಂದಾಜುಪಟ್ಟಿಯನ್ನು ಇದರಲ್ಲಿ ಚರ್ಚಿಸಲಾಗುವುದು. ಇವುಗಳಲ್ಲದೆ ಅನೇಕ ಮಸೂದೆಗಳ ಕುರಿತು ತರ್ಕವು ನಡೆಯುವುದು. ಈ ಅಧಿವೇಶನದಲ್ಲಿ ಮುಸ್ಲಿಮರ ಮಸೀದಿ ರಕ್ಷಣಾ ಮಸೂದೆಯೊಂದು ಲಾಹೋರಿನ ನಗರ ಸಭಾಧ್ಯಕ್ಷರಾದ ಮಿ। ಮುಲ್ಕ್ ಮಹಮ್ಮದ್ ದಿನ್ ಇವರಿಂದ ತರಲಾಗುವುದು.

ಪೋಲೀಸ ಇನ್ಸಪೆಕ್ಟರರನ್ನು ಮುಳುಗಿಸಿದರು.

ಅಮ್ರುತಸಾರಿನಲ್ಲಿ ಕೆಲವು ಅಪರಾಧಿಗಳನ್ನು ಹಿಡಿಯುವ ಕಾರ್ಯದಲ್ಲಿ ಒಬ್ಬ ಪೋಲೀಸ ಸಬ್ ಇನ್ಸಪೆಕ್ಟರರು ಮೃತ್ಯುಮುಖರಾದ ವಾರ್ತೆಯು ಲಾಹೋರಿನ ಒಂದು ಪತ್ರಿಕಾ ಪ್ರತಿನಿಧಿಗಳಿಂದ ಬಂದಿರುತ್ತದೆ. ಈ ಪೋಲೀಸ್ ಅಧಿಕಾರಿಗಳು ತಪ್ಪಿಸಿಕೊಳ್ಳಲು ಪಲಾಯನ ಮಾಡಿದ ಅಪರಾಧಿಗಳನ್ನು ಹಿಂಬಾಲಿಸಿದರು. ಅಪರಾಧಿಗಳು ಹಠಾತ್ತಾಗಿ ಹಾಡಿಯಲ್ಲೊಂದು ನದಿಯಲ್ಲಿ ಹಾರಿದರು. ಆದರು ತನ್ನ ಕಾರ್ಯವನ್ನು ಸಾಧಿಸಲು ಮುಂದಾದ ಅವರು ನದಿಗೆ ಹಾರಿದರು. ಅಪರಾಧಿಗಳು ನೀರಿನಲ್ಲಿ ಅವರ ಮೇಲೆ ಬಿದ್ದು ಅವರನ್ನು ಮುಳುಗಿಸಿದರು.

ಅಖಿಲಭಾರತ ರೈತರ ಪರಿಷತ್ತು

ಲಕ್ನೋ ನಗರದಲ್ಲಿ ಜರಗಿಸಬೇಕಾಗಿ ನಿರ್ಣಯವಾಗಿದೆ. ಈ ಪರಿಷತ್ತಿಗೆ ಹಿಂದೂ ದೇಶದ ಎಲ್ಲಾ ಜಿಲ್ಲಾ ರೈತರ ಸಂಘಗಳಿಂದ ಇಬ್ಬರು ಪ್ರತಿನಿಧಿಗಳನ್ನೂ ಮತ್ತು ಪ್ರಾಂತಿಕ ಸಂಘಗಳಿಂದ ಐವರು ಪ್ರತಿನಿಧಿಗಳನ್ನೂ ಆಹ್ವಾನಿಸುವರು.

ಎಸೆಂಬ್ಲಿ ಅಧ್ಯಕ್ಷರಾದ

ಸರ್ ಅಬ್ದುಲ್ ರಹಿಮಾನರು ಎಸೆಂಬ್ಲಿಯ ಮುಂದಿನ ಅಧಿವೇಶನಕ್ಕಾಗಿ ನವ ಡಿಲ್ಲಿಗೆ ತೆರಳಿರುವರು. ನವ ಡಿಲ್ಲಿಯ ೨೦ ಅಕ್ಬರ್ ರಸ್ತೆಯಲ್ಲಿರುವ ಅಧ್ಯಕ್ಷರ ನಿಲಯದಲ್ಲಿ ಇವರು ಇಳಿದಿರುವರು.

ಪಂಡಿತ ಜವಾಹರಲಾಲರು.

ಜರ್ಮನಿಯಲ್ಲಿ ಹೊಸದಾಗಿ ಹೊರಟ ಪುಸ್ತಕಗಳ ಮೇಲಿನ ನಿರ್ಬಂಧದ ಶಾಸನದ ನಿಮಿತ್ತ ಅವರಲ್ಲಿರುವ ಅನೇಕ ಉತ್ತಮ ಪುಸ್ತಕಗಳನ್ನು ಕಳಕೊಳ್ಳಬೇಕಾಗಿ ಬಂದಿದೆ. ನಾಜಿ ಸರಕಾರವು ತಮ್ಮ ವಿರುದ್ಧ ಯಾವತ್ತು ಪ್ರಚಾರವು ಪುಸ್ತಕ ರೂಪದಲ್ಲಿ ನಡೆಯದ ಹಾಗೆ ಈ ಕಾನೂನನ್ನು ಸೃಷ್ಟಿಸಿರುವರು.

"ಮುಸಲೀನಿಯ ಏಕಾಧಿಪತಿತ್ವವು ಮುರಿಯಲಾರಂಭಿಸಿದೆ"

ಮುಸಲೀನಿಯ ಏಕಾಧಿಪತಿತ್ವವು ಮುರಿಯಲಾರಂಭಿಸಿದೆ.

"ಪ್ರಪಂಚದ ಏಕಾಧಿಪತಿಗಳು ಮಾಯವಾದ ಹೊರತು ಶಾಂತಿಯು ಉಂಟಾಗದು. ಇವುಗಳಲ್ಲೊಂದು ಈಗ ಮುರಿಯಲಾರಂಭಿಸಿದೆ. ಎಲ್ಲಾ ಸಂಭವಗಳಲ್ಲಿ ಮುಸಲೀನಿಯ ಸರಕಾರವು ಬೇಗನೆ ಕಳಚಿ ಬೀಳದಿರದು" ಎಂದು ಇಂಗ್ಲಾಂಡಿನ ಪ್ರೊಫೆಸರ್ ಮಾರ್ರಿಯವರ ಏಕಾಧಿಪತಿಗಳ ಮೇಲಿನ ಭಾಷಣದ ಸಾರಾಂಶ.

ಮೆಡಮ್ ಸ್ಟೆವಿಸ್ಕಿಯು ನಿರಪರಾಧಿಯೆಂದು ಇತ್ಯರ್ಥ ಮಾಡಲಾಯಿತು

ಸ್ಟೆವಿಸ್ಕಿ ಎಂಬಾತನು ಅನೇಕ ರೂಪದಲ್ಲಿ ಜನರನ್ನು ಮೋಸಗೊಳಿಸಿ ಅವರಿಂದ ಹಣವನ್ನು ಪಡೆದು ದುಂದು ವ್ಯಯ ಮಾಡಿದುದಕ್ಕಾಗಿ ಅತನ ಸಹಪಾಟಿಗಳಾದ ಒಂಭತ್ತು ಮಂದಿಗಳ ಮೇಲೂ (ಅತನು ಈಗ ಮೃತನಾಗಿರುವನು) ಅತನ ಮೇಲೂ ಅತನ ಮಡದಿಯ ಮೇಲೂ ಮೊಕದ್ದಮೆ ಹೂಡಲಾಗಿತ್ತು. ಫ್ರಾನ್ಸಿನ ಪ್ಯಾರಿಸ್ ನಗರದ ಮುಖ್ಯ ಕೋರ್ಟಿನಲ್ಲಿ ಹಿಂದೆಯಾಗಿದ್ದ ಹಣದ ವ್ಯವಹಾರವು ಈ ದುಂದುಗಾರಿಕೆಯಲ್ಲಿ ನಡೆದಿರುತ್ತದೆ. ಈ ಮೊಕದ್ದಮೆಯು ಇವತ್ತಿಗೆ ೨ ತಿಂಗಳುಗಳಿಂದ ನಡೆಯುತ್ತಿತ್ತು. ಮೊನ್ನೆ ಈ ಮೊಕದ್ದಮೆ ಸಂಪೂರ್ಣ ಇತ್ಯರ್ಥವಾಗಿ, ಮೆಡಮ್ ಸ್ಟೆವಿಸ್ಕಿಯು ನಿರಪರಾಧಿಯೆಂದು ಬಿಡುಗಡೆ ಆಗಿರುತ್ತದೆ.

ಹಿಂದುಳಿದ ಪ್ರದೇಶಗಳ ಪರಿಷತ್ತು

ಭರತಖಂಡದ ಕೆಲವು ಹಿಂದುಳಿದ ಪ್ರದೇಶಗಳ ಪರಿಷತ್ತು ಚಾತ್ರಾ ನಗರದಲ್ಲಿ, ರಾವ್ ಬಹದ್ದೂರ್ ತಾಕೂರು ಬೋಲಾನಾಥ ಸಿಂಗರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಾಬು ರಾಜೇಂದ್ರ ಪ್ರಸಾದರೂ ಇನ್ನೂ ಅನೇಕ ಪ್ರಮುಖರು ಅಲ್ಲಿ ನೆರೆದಿದ್ದರು. ಶ್ರೀ ಬಾಬೂ ರಾಜೇಂದ್ರ ಪ್ರಸಾದರು ಒಂದು ಭಾಷಣವಿತ್ತರು.

ಮುಂಬೈ ನ್ಯಾಯವಿಧಾಯಕ ಸಭೆಗೆ

ಇನ್ನೂ ೮ ತಿಂಗಳ ಹೆಚ್ಚಿನ ಜೀವದಾನವು ಕೊಡಲಾಗುವ ಸರಕಾರದ ಅಪ್ಪಣೆಯು ಮುಂಬೈಯ ಗವರ್ನರರಾದ ಬ್ರಾಬೋರ್ನ್ ಪ್ರಭುಗಳು ಪ್ರಕಟಮಾಡಿರುವರು.

ಮಿಸ್ ಮೇಯೊಳ ಹಿಂದೂದೇಶದ ಮೇಲಿನ

ಫೇಸ್ ಆಫ್ ಮದರ್ ಇಂಡಿಯಾ ಎಂಬ ಪುಸ್ತಕದ ಮೇಲೆ ಹಿಂದೂದೇಶದ ಸರಕಾರವು ನಿರ್ಬಂಧ ಹೂಡಿರುತ್ತದೆ. ಈ ಪುಸ್ತಕದ ನಿಮಿತ್ತ ಹಿಂದೂ ಮುಸ್ಲಿಮರಲ್ಲಿ ಪರಸ್ಪರ ವೈಮನಸ್ಸು ಉಂಟಾಗುವ ಸಂಬಂಧಗಳಿರುವುದರಿಂದಲೆ ಈ ಪುಸ್ತಕವನ್ನು ಈ ರೀತಿ ದೇಶದ ಹೊರಗಿಡಲಾಗಿದೆ.

ಕಲ್ಕತ್ತಾ ನಗರ ಸಭೆಯು

ಮುಸ್ಲಿಮ ಸದಸ್ಯರು, ನಗರ ಸಭೆಯ ಉದ್ಯೋಗಗಳಲ್ಲಿ ಶೇಕಡಾ ೩೩ ಸ್ಥಾನಗಳನ್ನು ತಮಗೆ ಸಲ್ಲತಕ್ಕದೆಂಬ ಠರಾವಿಗೆ ತಕ್ಕ ಮನ್ನಣೆ ದೊರೆಯದಿರಲು, ತಮ್ಮ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿದ್ದರು. ಇವರಲ್ಲಿ ಒಬ್ಬ ಸದಸ್ಯನು ತನ್ನ ರಾಜಿನಾಮೆಯನ್ನು ಹಿಂತೆಗೆದಿರುವನು. ಮುಸ್ಲಿಮ ಸದಸ್ಯರ ರಾಜಿನಾಮೆಯಿಂದ ಉಂಟಾದ ಈಗಿನ ಪರಿಸ್ಥಿತಿಯನ್ನು ನಿವಾರಿಸಲು ನಗರ ಸಭೆಯ ಹಿಂದೂ ಸದಸ್ಯರು ಬಹಳ ಪ್ರಯತ್ನಿಸುತ್ತಿದ್ದಾರೆ.

ಸಿಕ್ಖರ ಚಳವಳವು.

ಶಹೀದಗಂಜನ್ನು ಪರಿಶೀಲಿಸುವುದಾಗಿ ಹೋರಟ ಸರಕಾರದ ಅಪ್ಪಣೆಯ ನಂತರ ಪ್ರಾರಂಭವಾದ ಸಿಕ್ಖರ ಸತ್ಯಾಗ್ರಹ ಚಳವಳವು ಇನ್ನೂ ಶಾಂತಗೊಳ್ಳಲಿಲ್ಲ. ನಮ್ಮ ರಾಷ್ಟ್ರೀಯ ಪಕ್ಷವನ್ನು ಕಳಕೊಳ್ಳಲು ಇದರಿಗೆ ಸಮ್ಮತವಿಲ್ಲ. ಕೆಲವು ಸಿಕ್ಖ ಸಾಧುಗಳು ಈ ಚಳವಳದಲ್ಲಿ ಭಾಗವಹಿಸಿರುವರು. ಕೆಲವರು ಸರಕಾರದ ಅಪ್ಪಣೆಯನ್ನು ಕಂಡಿಸಿ ಕರ್ತನಗಳನ್ನು ಧರಿಸಿ ಸೆರೆಮನೆಯನ್ನು ಸೇರಿರುವರು.

ಚೀನಾದೇಶವನ್ನು ವಿಭಾಗಿಸುವುದಿಲ್ಲ.

ಎಂದು ನಾಂಕಿಂಗಿನಲ್ಲಿ ಜನರಲ್ ಚಿಯಾಂಗ್ ಕೈ. ಶೇಕರು ವಿದ್ಯಾರ್ಥಿಗಳಿಗೆ ಭರವಸೆ ಕೊಟ್ಟಿರುತ್ತಾರೆ.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ

S.G.B.Co.

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ

The Scientific Gold Bangles Co., Ltd

Head Office -48, Byragimatam Street,

Post Box No 203, Madras

ಸುಂದರವಾದ ಮುಖವು ಜೀವನದ ಒಂದು ವರವಾಗಿದೆ.

BY APPOINTMENT TO

H H THE MAHARAJA OF JHALAWAR STATE

ಲಂಡನ್ ಬರ್ಲಿನ್ ಪ್ಯಾರಿಸ್ ಅನುಭವಸಿದ್ಧರಾದ ರಸಾಯನಶಾಸ್ತ್ರಜ್ಞರಾದ ನಾವು ಈ ಮೂಲಕ ಪ್ರಕಟಿಸುವುದೇನೆಂದರೆ, ಅಫ್ಘಾನ ಸ್ನೋ ಎಂಬ ಕ್ರೀಮನ್ನು ಬಂಗಡಿಸಿ ಅದರಲ್ಲಿ ಯಾವುದೆ ಕರಡ ವಿಷಕರ ಪದಾರ್ಥವಾಗಲಿ, ಹಾನಿಕರ ಪದಾರ್ಥವಾಗಲಿ ಕಂಡುಹಿಡಿದಿಲ್ಲ. ಈ ಕ್ರೀಮನ್ನು ಸರ್ವರೂ ತಮ್ಮ ಸೌಂದರ್ಯಕ್ಕಾಗಿ ವಿನಾ ಹಾನಿಯಿಲ್ಲದೆ ಚರ್ಮದ ಮೇಲೆ ಉಪಯೋಗ ಮಾಡಬಹುದು. (ಫ್ರಾನ್ಸ್)

ಸ್ತ್ರೀಯರು ತಮ್ಮ ಮುಖದ ಸೌಂದರ್ಯಕ್ಕಾಗಿ ಅತಿ ಪುರಾತನ ಕಾಲದಿಂದ ತರತರದ ಸಾಬೂನುಗಳನ್ನೂ ಪೌಡರುಗಳನ್ನೂ ಉಪಯೋಗಿಸುತ್ತಿದ್ದರು. ಆದರೆ ಇಷ್ಟರ ತನಕ ಸೌಂದರ್ಯಗೋಸ್ಕರ ಕ್ರೀಮನ್ನು ಯಾರೂ ಕಂಡುಹಿಡಿದಿಲ್ಲ.

ಪಾಟನ್‌ವಾಲಾ— ಎಂಬವರು ಗುಲಾಬಿಯ ಸತ್ವವನ್ನೂ ಮತ್ತು ಇನ್ನೂ ಕೆಲವು ವನಸ್ಪತಿಗಳನ್ನೂ ಒಟ್ಟು ಗೂಡಿಸಿ ಒಂದು ಮಿಶ್ರಣವನ್ನು ವಿಜ್ಞಾನಿಕ ರೀತಿ ತಯಾರಿಸಿದ್ದಾರೆ. ಈ ಕ್ರೀಮು ನಿಮ್ಮ ಚರ್ಮವನ್ನು ಮೃದುವಾಗಿರುವಂತೆಯೂ ನುಣುಪಾಗುವಂತೆಯೂ ಮಾಡುವುದು. ಈ ಅಫ್ಘಾನ ಸ್ನೋವು ಬೆಳ್ಳಿಯಂತೆ ಇದ್ದು, ಚರ್ಮಕ್ಕೆ ತೃಪ್ತಿಯನ್ನು ಕೊಡುವ ದಿವ್ಯ ಔಷಧಿಯಾಗಿದೆ. ಅದು ಚರ್ಮದ ಒರಟುಗಳನ್ನೂ ಕಪ್ಪು ಚುಕ್ಕೆಗಳನ್ನೂ ಮೊಡವೆ ಮೊದಲಾದ ಚರ್ಮವ್ಯಾಧಿಗಳನ್ನು ವಾಸಿಮಾಡುವುದು. ಮುಖಕ್ಕೆ ಗುಲಾಬಿವರ್ಣದ ಕಾಂತಿಯನ್ನು ಒದಗಿಸುವುದು.



AFGHAN Snow

ಇ. ಎಸ್. ಪಾಟನವಾಲಾ.

182-84, ಎ. ಅಬ್ದುಲ್‌ರಹಿಮಾನ್ ಸ್ಟ್ರೀಟ್, ಬೊಂಬೈ, 3.

ಅನುಕ್ರಮಣಿಕೆ.

ನೋಟೀಸಗಳು ೩
ಇಟಲಿಯಾನ ಪೆಸಿಯಸ್ಟ ಸಂಘದ ಕ್ರೂರಕೃತ್ಯಗಳು ೩
ಮಹಿಳಾ ಸಮಾಜ ೫
ವ್ಯಾಪಾರ ಉದ್ಧಾರಣಾ ಸಂಸ್ಥೆ ೬
ಹಂಗೇರಿಯಾದ ದಿವ್ಯ ಜ್ಞಾನಿ ೮
ಜಿಲ್ಲಾ ಬೋರ್ಡಿನ ವಿಭಜನೆಯಾಗುವುದೇ? ೯
ಅಗ್ರಲೇಖ
ಐದನೇ ಜೋರ್ಜ ೧೦
ಸ್ಫುಟವಿಚಾರಗಳು ೧೧
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ವನಿತಾ ವಿಭಾಗ ೧೩
ಜಸ್ಟಿಸ್ ಪಾರ್ಟಿಯವರು ಕಾಂಗ್ರೆಸ್ ಸಂಘವನ್ನು ಸೇರಲು ಸಿದ್ಧರಿದ್ದಾರೆ ೧೪
ಕನ್ನಡಿಗರ ಕರ್ತವ್ಯ ೧೬
ರಂಗಪ್ಪನ ದಿವಾಳಿ ೧೮

ಸ್ವದೇಶಾಭಿಮಾನಿ.

ತಾ. ೨೪ನೇ ಶುಕ್ರವಾರ ಜನವರಿ ೧೯೩೬

ಐದನೆಯ ಜೋರ್ಜ

೧೯೩೬ನೇ ಇಸವಿಯು ಪ್ರಾರಂಭವಾದುದೇ, ನಮ್ಮ ಇತಿಹಾಸದಲ್ಲಿ ಒಂದು ವಿಶೇಷ ವರ್ಷವಾಗುವಂತಾಯಿತು. ಮಹಾ ಮಾತೋಶ್ರೀಯವರಾದ ವಿಕ್ಟೋರಿಯಳ ಕಾಲದಿಂದೀಚೆಗೆ ರಾಜಕುಲದ ಗೌರವ ಪರಂಪರೆಯಲ್ಲಿ ಪ್ರಜಾ ವಾತ್ಸಲ್ಯದಿಂದ ಕಾಪಾಡುತ್ತ ಬಂದು, ಕಳೆದ ವರ್ಷ ತಾನೆ ರಜತೋತ್ಸವ ಸಂಭ್ರಮ ಕಾಲದಲ್ಲಿ, ಸಾಮ್ರಾಜ್ಯವೆಂಬುದೇ ತಮ್ಮ ಕುಟುಂಬವೆಂದೂ, ಆ ಕುಟುಂಬದ ಸೇವೆಗಾಗಿಯೇ ತಮ್ಮ ಆಯುಷ್ಯದಲ್ಲಿ ಉಳಿದ ಕಾಲವನ್ನು ಸಮರ್ಪಿಸುವೆವೆಂದೂ, ಎಂದಿದ್ದ ಶ್ರೀಮಾನ್ ಐದನೆಯ ಜೋರ್ಜ ಸಾರ್ವಭೌಮರು, ಸೋಮವಾರ ರಾತ್ರಿಗೆ ಪರಲೋಕವಾಸಿಗಳಾದರೆಂದು ತಿಳಿದು ಸಂತಾಪಗೊಳಬೇಕಾಗಿದೆ

ಸಮ್ರಾಜರ ಅಸ್ವಸ್ಥವು, ಆರೆಂಟು ವರ್ಷಗಳ ಹಿಂದಣ ರೋಗದ ಮೊಳಕೆಯಿಂದಲೇ ಉಂಟಾಗಿದ್ದಿತೆಂದು ಮೊದಲಿಂದಲೂ ಬೆದರಿಕೆಯಿದ್ದಿತು, ಜಾಡ್ಯ ಹಿಡಿದಂದೇ ಜಗತ್ತಿನಲ್ಲೆಲ್ಲ ದಿಗಿಲು ತುಂಬಿದ್ದಿತು, ರಾಜಾಧಿರಾಜರೂ ಸರಕಾರಗಳೂ 'ಹೇಗಿದ್ದಾರೆ?' ಎಂದು ರಾಯಭಾರಿಗಳ ಮೂಲಕ ವಿಚಾರವನ್ನು ಕ್ಷಣೇ ಕ್ಷಣೇ ಪಡೆಯುತಿದ್ದರು. ಅಸಂಖ್ಯಾತ ಪ್ರಜೆಗಳಲ್ಲಿ ಇವರಿಗೆ ಸದಾ ಸಹಾನುಭೂತಿಯೇ ಇದ್ದುದರಿಂದ, ರಜತೋತ್ಸವ ಸಮಾರಂಭದಲ್ಲಿ "ಪ್ರಜೆಗಳ ಅಭ್ಯುದಯ ಸಾಧನೆಗಾಗಿ ನನನ್ನೇ ಬಲಿಯಾಗಿ ಅರ್ಪಿಸಿಕೊಳ್ಳಲು ಸಿದ್ಧನಾಗಿರುವೆನು" ಎಂಬ ಅವರ ದಿವ್ಯ ಮಾತುಗಳು ಅವರ ಬಾಯಿಯಿಂದ ಹೊರಟುವು. ಜಗತ್ತಿನಲ್ಲಿ ಈಗ ಉಳಿದಿರುವ ಕೆಲವೇ ಸಮ್ರಾಜರಲ್ಲಿ ಇವರೊಬ್ಬರು, ಆದರೆ, ಇವರ ಯಥಾರ್ಥ ವರ್ತನೆಯ ಫಲವಾಗಿ, ಇವರ ಪ್ರಜೆಗಳೂ ಇತರ ರಾಷ್ಟ್ರಗಳವರೂ ಇವರಲ್ಲಿ ಭರವಸೆ, ಭಕ್ತಿ, ವಾತ್ಸಲ್ಯಗಳನ್ನಿಟ್ಟಿದ್ದರು. ಇವರ ಈ ಸ್ಥಾನದಲ್ಲಿ ಇನ್ನೊಬ್ಬರು ಸುಲಭವಾಗಿ ಇಷ್ಟು ವಿಚಾರಿಸುವರೇ ಎಂಬ ಸಂದೇಹವು ಪ್ರಜೆಗಳಲ್ಲಿ ಇದ್ದುದರಿಂದಲೇ ಇವರ ಶ್ರೇಯೋಪ್ರಾರ್ಥನಾದಿಗಳು ಇವಿಷ್ಟು ದಿನಗಳಿಂದಲೂ ಎಲ್ಲೆಲ್ಲಿಯೂ ನಡೆಯುತ್ತಿದ್ದವು.

ಹಿಂದಣ ಮಹಾಯುದ್ಧದಲ್ಲಿ ಬ್ರಿಟನಿಗೆ ವಿರುದ್ಧವಾಗಿದ್ದ ರಾಷ್ಟ್ರವಾದ ಜರ್ಮನಿಯ ಅಧಿನಾಯಕನೂ, ಈಗ ಯುದ್ಧದಲ್ಲಿ ಸೇರಿ ಬ್ರಿಟನಿಗೆ ಮಹಾ ಚಿಂತೆಯನ್ನೊದಗಿಸಿರುವ ಇಟಲಿಯ ರಾಜರೂ, ಜೋರ್ಜ ಸಾರ್ವಭೌಮರ ಅಸ್ವಸ್ಥ ಹೇಗಿದೆ? ಎಂದು ಸ್ವತಃ ವಿಚಾರ ತಿಳಿಯಲು ಕುತೂಹಲರಾಗಿರುವಷ್ಟು ಅವರ ಸ್ನೇಹ,ವಿಶ್ವಾಸಗಳು ನಮ್ಮ ಸಾರ್ವಭೌಮರಲ್ಲಿದ್ದವು; ಪ್ರಜಾಭಕ್ತಿಯು ಇವರಲ್ಲಿ ಅಚಂಚಲ ಭಾವದಿಂದಿದ್ದಿತ್ತು. 'ಇಂತಹ ಸಾರ್ವಭೌಮರು ಸಮ್ರಾಜ್ಯ ವೈಭವಗಳನ್ನು ಹಿಂದಿಕ್ಕಿ ಸಾರ್ವಭೌಮರಿಗೇ ಸಿಗುವ ಸ್ವರ್ಗವನ್ನಡರಿದರೆಂಬುದು ನಿಶ್ಚಿತವಾದುದರಿಂದ, ಅವರ ಮನೆತನಕ್ಕೂ ಪ್ರಜಾಗಣಕ್ಕೂ ಭಗವಂತನು ಸಂತವಿಟ್ಟಂತಿದೆ.

ಎಂಟನೆಯ ಎಡ್ವರ್ಡ್!

ರಾಜತ್ವವು ನಿರಾತಂಕವಾಗಿ ಮುಂಬರಿವಂತೆ, ಅವರ ಚಿರಸಪುತ್ರರು ಕೂಡಲೆ ಪಟ್ಟವನ್ನೇರುವಂತೆ, ಮಹಾಸಮಿತಿಯು ನಿರ್ಧಾರವಾಗಿದೆ. ಯಾವ ರಾಜಕುಲವು ಭಾರತವರ್ಷದಲ್ಲಿ ವಾತ್ಸಲ್ಯವನ್ನಿಟ್ಟು ಪ್ರಜಾರಂಜಕವಾದ ತಿದ್ದುಪಾಟುಗಳನ್ನು ಮಾಡುತ್ತ ಬಂದಿದೆಯೋ,' ಅದೇ ವಂಶದ ಪ್ರತಿನಿಧಿಯರಾಗಿ ಬಹುಕಾಲವೂ ಸಮ್ರಾಜ್ಞಾಳಲಿರುವ ನವ ಸಮ್ರಾಜರಿಗೆ ಜಯವಾಗಲಿ, –

ಸ್ಫುಟವಿಚಾರಗಳು

ನೌಕಾ ಬಲ

ಅವರವರ ಅಗತ್ಯಕ್ಕೆ ತಕ್ಕಷ್ಟೆ ಇರಬೇಕೆಂಬುದನ್ನು ನಿರ್ಧಾರಮಾಡಲು ಇಂಗ್ಲೆಂಡಿನಲ್ಲಿ, ಅಮೇರಿಕಾ ಜಪಾನುಗಳೊಡನೆ ಸಂಪ್ರತಿ ಮಾಡುವ ಪರಿಷತ್ತೊಂದು ಸೇರಿತು. ಮೊದಲೊಮ್ಮೆ ಈ ಪರಿಷತ್ತು ಸೇರಿ ಕಾರ್ಯವನ್ನೇನೂ ಮಾಡಲಾರದೆ ಅಲ್ಲೇ ಅಂತರ್ಧಾನ ಹೊಂದಿದ್ದಿತು. ಈ ಸಲ ಸೇರುವಾಗಲೇ, ಜಾಪಾನು ಅಮೇರಿಕಗಳ ದೃಷ್ಟಿಯು ದ್ವಿದ್ವಾರ್ಥದತವಾಗಿ, ಎಷ್ಟೆಂದರೂ ಸಮಾಧಾನವಾಗಲೇ ಇಲ್ಲ. ಮಹಾನಾವೆಗಳನ್ನು ಕಟ್ಟುವುದಕ್ಕೊಂದು ಮಿತಿಯಿರಬೇಕು, ಇವೆರಡು ರಾಷ್ಟ್ರಗಳು ಕಟ್ಟುವ ನಾವೆಗಳೊಳಗೆ ಒಂದು ದಾಮಾಶಾಯವಿರದೆ, ಸಮಾನತೆ ಇರಬೇಕು ಎಂಬ ಹಟವೂ ತರ್ಕವೂ ಚರ್ಚೆಗೆ ಬಂದು ಇಲ್ಲೇ ಜಪಾನು ತನ್ನ ಇದಿರು ಪಕ್ಷವು ಒಪ್ಪದ ಕಾರಣ ಹಿಂದೆಗೆಯಿತು. ಅಮೇರಿಕದಷ್ಟು ಜಾಪಾನು ಸಂಪನ್ನವಾಗಿಲ್ಲ, ಆದರೂ ಅಮೇರಿಕದಷ್ಟೇ ಹೆಚ್ಚು ಮಹಾನಾವೆಗಳನ್ನು ಕಟ್ಟಲು ತನಗೆ ಸಮಾನತೆ ದೊರೆತರೆ, ಅದೇ ಗೌರವವೆಂದಿದ್ದಿತು. ಈ ಮಧ್ಯೆ, ಶಾಂತಸಾಗರದಲ್ಲಿ ಇಂಗ್ಲೆಂಡೂ ಅಮೇರಿಕವೂ ತಮ್ಮ ನೌಕಾ ರಾಣ್ಯಗಳನ್ನೂ ಬಲಪಡಿಸಿ, ಒಬ್ಬರಿಗೆ ಇನ್ನೊಬ್ಬರು ನೆರವಾಗಬೇಕೆಂಬ ಮಾತೂ ಬರಲು, ಜಾಪಾನು ಇನ್ನಷ್ಟು ರೇಗಿಕೊಂಡಿತು. ಸಮಾನತೆ ಸಿಗದಲ್ಲಿ ಜಾಪಾನು ಕಾಲೂರಿ ನಿಲ್ಲದು

ಕಂದಾಯ ಕ್ರಮ

ನಮ್ಮಲ್ಲಿರವ ತೀರ್ವೆಯ ಕ್ರಮವು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ವಿಧವಾಗಿದೆ. ಕೆಲವು ಕಡೆ ಸರಕಾರಕ್ಕೆ ತೀರ್ವೆ ಸುಲಭವಾಗಿ ವಸೂಲಾಗುವ ಹಾಗೂ, ಕೆಲವು ಕಡೆ ತೀರ್ವೆಯ ಮೊಬಲಗು ಹೆಚ್ಚಾಗಿ ಸಿಗುವ ಹಾಗಾ ವಿವಿಧ ಪ್ರಕಾರಗಳು ರೂಢಿಯಲ್ಲಿವೆ. ಬೇಸಾಯಗಾರನ ಅನುಕೂಲತೆ, ಉತ್ಪನ್ನ ಮೊದಲಾದುವುಗಳನ್ನು ತಿಳಿದುಕೊಂಡು, ಅಥವಾ ನ್ಯಾಯವಾಗಿ ಒಂದೇ ದಾಮಾಶಯದಲ್ಲಿ ತೆರಿಗೆಯನ್ನು ವಿಧಿಸುವಿಕೆ, ಇತ್ಯಾದಿ ವಿಚಾರಗಳಿದ್ದು ಈ ತೀರ್ವೆಯನ್ನು ವಿಧಿಸಿದ್ದರೆ, ಅಕ್ಬರ ಮಹಾಶಯನ ಕಾಲದ ಕ್ರಮದಂತೆ, ಈ ಕ್ರಮವೂ ಶಾಶ್ವತವಾಗಿ ಪ್ರಜಾರಂಜಕವಾಗುತಿದ್ದಿತು. ಪ್ರತಿಯೊಂದು ಗ್ರಾಮದ ಫಸಲನ್ನು ತಿಳಿದುಕೊಂಡು, ಗ್ರಾಮ ಪಂಚಾಯತದ ಮೂಲಕವೇ ತೀರ್ವೆಯನ್ನು ಪ್ರತಿಯೊಬ್ಬ ರೈತನ ಮೇಲೆ ವಿಧಿಸುವಂತಾಗಿದ್ದರೆ ಗ್ರಾಮದ ಆಡಳಿತ ಕ್ರಮವೂ ಉಳಿಯುತಿತ್ತು, ಆಗಾಗ ಬೆಳೆಯ ಗುಣದೆಶೆ ತೀರ್ವೆಯ ವಿಧಾನವೂ ಸಾಗುತಿತ್ತು. ಈಗ ಇವನ್ನೆಲ್ಲ 'ಹಾಗಾಗುತ್ತಿತ್ತು' ಎಂದೇ ಹೇಳಬರುವುದಲ್ಲದೆ, 'ಹೀಗಿಲ್ಲವಲ್ಲ' ಎಂದೂ ಹೇಳಬೇಕಾಗಿದೆ ಎಂದು ಎಲ್ಲೆಲ್ಲಿಯೂ ತೀರ್ವೆಯನ್ನು ಇಳಿಸಲು ದೂರುಗಳಾಗಿವೆ.

ಸಪ್ರೂರವರ ರಿಪೋರ್ಟು

ನಿರುದ್ಯೋಗತೆಯ ನಿವಾರಣೆಗಾಗಿ ಸರ್ ಸಪ್ರೂರವರು ಕೆಲ ತಿಂಗಳಿಂದ ಬೇಕಾದ ಸಲಹೆ ಅನುಭವಗಳನ್ನು ಪಡೆದು, ಒಂದು ವರದಿಯನ್ನು ಪ್ರಕಟಿಸಿರುವರು. ಮಾಡುವುದೇನು? ಎಷ್ಟೋ ಸಲಹೆಗಳು ಇಂತಹ ವಿಚಾರದಲ್ಲಿ ನಾನಾ ವರದಿಗಳನ್ನು ಬರೆದಂತೆ, ಇವರೂ ಒಂದು ವರದಿಯನ್ನು ಬರೆದಂತಾಗಿದೆ ಹೊರತು ವಿಶೇಷವೇನೂ ಇಲ್ಲ. "ನಿರುದ್ಯೋಗತೆಗೆ ಇನ್ನು ಯಾವುದಾದರೂ ಒಂದೇ ನಿವಾರಣೋಪಾಯವನ್ನು ಕಾಣೆವು, ಅದೂ ಅಲ್ಲದೆ ಆ ದುಃಸ್ಥಿತಿಯನ್ನು ಕೂಡಲೆ ನಿವಾರಿಸಲೂ ನಮಗೆ ಸಾಧ್ಯವೆನಿಸುವುದಿಲ್ಲ" ಎಂಬುದು ಇವರ ತೀರ್ಮಾನವಾಗಿದೆ. ಹಲವು ವರ್ಷಗಳಲ್ಲಿ ಒಂದು ಗುರಿ ಮುಟ್ಟುವ ಧ್ಯೇಯವನ್ನಿಟ್ಟುಕೊಂಡು ಈಗಲೆ ಒಂದು 'ಪ್ಲೇನ'ನ್ನು ಹೂಡಿದರೆ ಅದು ಸಾಧ್ಯವಾಗಬಹುದು. ಆದರೆ, ಸರಕಾರವು ಧಾರಾಳವಾಗಿ ಹಣವನ್ನು ವ್ಯಯಿಸಲು ಸಿದ್ಧವಾದರೆ ಶಿಕ್ಷಣ ಕ್ರಮವನ್ನೇ ತಿದ್ದಿ, ದೇಶದ ಉತ್ಪನ್ನಗಳನ್ನು ಹೆಚ್ಚಿಸಲೂ ಪ್ರಯತ್ನಿಸಿದರೆ, ಜನರಲ್ಲಿ ಕೈಗಾರಿಕೆಗಳಿಗೆ ಕೈಯಿಕ್ಕುವ ಮನಸ್ಸುಂಟಾದರೆ, ಎಷ್ಟೋ ಅಶಿಕ್ಷಿತ ನಿರುದ್ಯೋಗಿಗಳಿಗೂ ಉದ್ಯೋಗ ಸಿಗಬಹುದು' ಎಂದಿದೆ ಇವರ ಶಿಫಾರಸು

ಅಧಿಕಾರ ಸ್ವೀಕಾರ

ಕಾಂಗ್ರೆಸ್ ಪಕ್ಷವು ಅಧಿಕಾರವನ್ನು ಸ್ವೀಕರಿಸಬಹುದೇ' ಎಂಬ ಪ್ರಶ್ನೆಗೆ, ಪಕ್ಷದೊಳಗೆಯೆ ಎರಡು ತಂಡಗಳಿವೆ. ಸರ್ ಹೆನ್ರಿ ಗಿಡ್ನಿಯವರ ಆಂಗ್ಲೋ ಇಂಡಿಯಾನರ ಸಭೆಗೆ ಹೇಳಿರುವ ಮಾತುಗಳಲ್ಲಿ, ಕಾಂಗ್ರೆಸ್ ಪಕ್ಷವನ್ನು ಅವರು ಉದ್ದೇಶಿಸಿ ಹೇಳುತ್ತಾ – "ಈಗ ಎಲ್ಲ ಪಕ್ಷಗಳು ಒಂದಾಗಿ ಹೊಸ ರಾಜ್ಯಭಾರ ಕ್ರಮವು ಜ್ಯಾರಿಗೆ ಬರವ ಹಾಗೆ ಸಹಕರಿಸಿ ಸಾಧಿಸಬೇಕಾಗಿದೆ. ಲಕ್ನೋ ಅಧಿವೇಶನದಲ್ಲಿ ಇದಕ್ಕೆ ವಿರುದ್ಧವಾಗಿ ಕಾಂಗ್ರೆಸ್ಸಿನವರು ನಿರ್ಧಾರಮಾಡಿದರೆ, ಅನ್ಯಾಯವಾಗುವುದು. ಕೊಟ್ಟುದನ್ನು ಪಡೆದು, ಇನ್ನಷ್ಟು ಹೆಚ್ಚು ಸಿಗುವ ಹಾಗೆ ಯತ್ನಿಸುವುದು ಕಾಂಗ್ರೆಸ್ಸಿನ ಕರ್ತವ್ಯವಾಗಿರಬೇಕು. ಪ್ರತಿ ಪಂಗಡವೂ ತನ್ನ ತನ್ನ ಪಕ್ಷ ಕಟ್ಟಿಕೊಂಡು ಚಿರಕಾಲಕ್ಕೂ ಕಾದಾಡುತ್ತಾ ಕೂತರೆ ಯಾರಿಗೂ ಹಿತವುಂಟಾಗದು. ಯುರೋಪೀಯಾನರೇ ಆದರೂ, ತಾವೇ ಮಾತ್ರ ಒಂದು ಪಂಗಡವಾಗಿರುವುದಲ್ಲ, ತಮ್ಮ ಕಾರ್ಯಕ್ರಮಕ್ಕೆ ಒಪ್ಪತಕ್ಕ ಎಲ್ಲರನ್ನೂ ತಮ್ಮ ಪಂಗಡದಲ್ಲಿ ಸದಸ್ಯರನ್ನಾಗಿ ಮಾಡಿಕೊಳ್ಳಬೇಕಾಗಿದೆ. ಎಂಗ್ಲೊ ಇಂಡಿಯನರೂ ಇಂಡಿಯನ (ಹಿಂದೀ)ರೆಂದೇ ವರ್ತಿಸಬೇಕಾಗಿದೆ" ಎಂದರು

1937 38ರ ಬಜೇಟುಗಳು

ಪ್ರತಿಯೊಂದು ಪ್ರಾಂತ್ಯದ ಸರಕಾರವೂ ಈಗ 1937 38ನೇ ವರ್ಷದ ಬಜೇಟನ್ನು ತಯಾರಿಸತ್ತಿದೆ. 1937ನೇ ಇಸವಿ ಎಪ್ರೀಲಿನಿಂದ ಹೊಸ ತಿದ್ದುಪಾಟುಗಳಂತೆ ಸರಕಾರವು ಕ್ರಮವಡುವುದು ಹಾಗಿರುವ ಪ್ರಯುಕ್ತ, ಈ ಬಜೇಟನ್ನು ಅವಧಿ ಮೀರಿ ಬದುಕಿರುವ ಯಾರ ಪ್ರಾತಿನಿಧ್ಯವೂ ಇಲ್ಲದ ಈ ಕೌನ್ಸಿಲೆ ಮಂಜೂರು ಮಾಡಬೇಕೋ ಅಥವಾ ಇನ್ನಿತರ ಉಪಾಯಗಳಾಗಬೇಕೋ ವಿಚಾರ ಯೋಗ್ಯವಾಗಿದೆ. ಹೇಗಿದ್ದರೂ, ಮುಂದಣ ವರ್ಷದ ಬಜೇಟಿನಲ್ಲಿ ಮೂರು ತಿಂಗಳ ತನಕವಾದರೂ ಖರ್ಚಿಗೆ ಬೇಕಾಗುವಷ್ಟು ಮೊಬಲಗನ್ನು ಹಳೇ ಕೌನ್ಸಿಲುಗಳು ಮಂಜೂರುಮಾಡುವುದೆಂದೂ, ಆ ಅವಧಿಯೊಳಗೆ ಹೊಸ ಮಂತ್ರಿ ಮಂಡಲವು ಅಧಿಕಾರವನ್ನು ನಡೆಸಬಹುದೆಂದೂ ಒಂದು ಅಭಿಪ್ರಾಯವಾಗಿದೆ. ಆದರೆ, ಹೀಗೆ ಮಂಜೂರು ಮಾಡುವ ಮೆಂಬರುಗಳಲ್ಲಿ ಕೆಲವರಾದರೂ ಮುಂದಿನ ಕೌನ್ಸಿಲಿನಲ್ಲಿ ಚುನಾವಣೆ ಹೊಂದದಿದ್ದರೆ, ಅದು ಮೋಸವೇ. ಹೊಸ ಕೌನ್ಸಿಲಿಗೆ ಯಾವುದೊಂದು ವ್ಯಯದ ಪರ್ಯಾಲೋಚನೆ ಕುರಿತು ಏನೂ ಹೇಳಲಿಕ್ಕೂ ಉಳಿಯುವಂತಿಲ್ಲವೆಂಬುದೂ ಒಂದು ನ್ಯೂನ.

ರೈಲ್ವೆಗಳು

ಕಳೆದ ವರ್ಷ ನಮ್ಮ ದೇಶದಲ್ಲಿನ ರೈಲ್ವೆಗಳ ಹಳಿಗಳ ಮೇಲೆ ಮಲಗ್ಗಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವವರ ಸಂಖ್ಯೆಯು ೪೬೦; ರೈಲು ದಾಟಿ ಹೋಗಿ ಸತ್ತವರು ೨೦೧೯. ಹಿಂದಣ ವರ್ಷ ಕ್ರಮವಾಗಿ ೩೭ ಮತ್ತು ೧೪೭. ಕಳೆದ ವರ್ಷಕ್ಕಿಂತ ಈ ವರ್ಷ ಸುಮಾರು ೨॥ ಮಿಲ್ಲಿಯ ಪ್ರಯಾಣಿಕರು ರೈಲನ್ನೇ ಉಪಯೋಗಿಸಿದರು. ಕಳೆದ ವರ್ಷಕ್ಕಿಂತ ೧೪೮ ಅಪಘಡಗಳು ಹೆಚ್ಚಾಗಿದ್ದುವು; ಸುಮಾರು ಏಳು ಮಿಲ್ಲಿಯ ಮೈಲಿನಷ್ಟು ದೂರಕ್ಕೆ (ಒಟ್ಟು) ರೈಲು ಗಾಡಿಗಳು ಸಂಚಾರಮಾಡಿವೆ. ೧೦೭ ಸಲ ಗಾಡಿಗಳನ್ನು ಧ್ವಂಸಗೊಳಿಸಲು ಯತ್ನಗಳಾದರೂ, ೧೭ ಸಲ ಹೀಗೆ ಗಾಡಿಗಳನ್ನು ಮುರಿದಿಕ್ಕಲಾಗಿದೆ. ಕಳೆದ ವರ್ಷಕ್ಕಿಂತ ಈ ವರ್ಷ ೪ ಕೋಟಿ ರೂಪಾಯಿ ಉತ್ಪನ್ನ ಹೆಚ್ಚಾದುದು, ಸಾಮಾನು ಒಯ್ಯೋಣದ ಮುಖ್ಯ ಹೆಚ್ಚಿಗೆಯಿಂದ

ವಿದ್ಯಾರ್ಥಿಗಳ ಯೋಗ್ಯತೆ

ಯನ್ನೇ ಗ್ರೇಂಟಿಗೆ ಆಧಾರವಾಗಿಟ್ಟುಕೊಂಡಲ್ಲಿ, ಬೋರ್ಡುಶಾಲೆಗಳ ಗ್ರೇಂಟು ಕಡಿಮೆಯಾಗುವ ಸಂಭವವೇ ತೋರುವುದು. ಬೋರ್ಡು ಶಾಲೆಗಳ ಬಗ್ಗೆ ಕೊಡಲಾಗುವ ಗ್ರೇಂಟಿನ ಮೊಬಲಗು ಇಂತಿಷ್ಟು ಇರಲು ನಿಶ್ಚಿತವಿದೆ. ಏಡೆಡ್ ಶಾಲೆಗಳಿಗೆ ಸಿಗುವ ಧನ ಸಹಾಯವೂ ಹಾಗೆಯೆ. ಇದರಿಂದ ಏಡೆಡ್ ಶಾಲೆಗಳಿಗೆ ತಲಾ ಸಿಗುವ ಗ್ರೇಂಟು ಬೋರ್ಡು ಶಾಲೆಗಳಲ್ಲಿ ಸಿಗುವುದಕ್ಕಿಂತ ಕಡಮೆಯಾಗಿದೆ. ಆದರೆ, ವಿದ್ಯಾರ್ಥಿಗಳ ಯೋಗ್ಯತೆಯಂತೆ, ಎಂದರೆ, ಇನ್ಸ್‌ಪೆಕ್ಟರ್ ರಿಪೋರ್ಟಿನ ಆಧಾರದ ಪ್ರಕಾರ ಗ್ರೇಂಟು ಹಂಚುವುದಾದರೆ, ಇದರಿಂದ ಬೋರ್ಡು ಶಾಲೆಗಳಿಗೆ ಸಿಗುವ ಗ್ರೇಂಟಿನ ಮೊಬಲಗು ಕಡಿಮೆಯಾಗದಿರದು. ಹಾಗೆಂದು, ಏಡೆಡ್ ಮತ್ತು ಬೋರ್ಡು ಶಾಲೆಗಳಿಗೆ ಗ್ರೇಂಟು ಹಚ್ಚುವ ವಿಧಾನವಾದರೂ ಸಮಾನವಾಗಿರಬೇಡವೆ? ಎಂದು ರೆವರೆಂಡ್ ಲೆಗ್ ಎಂಬವರೂ ಪ್ರಾಥಮಿಕ ವಿದ್ಯಾಭ್ಯಾಸದ ಕಮಿಟಿಗೆ ಬರೆದುಕೊಂಡಿರುವರು

ಹಳ್ಳಿ ಶಾಲೆಗಳಲ್ಲಿ

ವಿದ್ಯಾಭ್ಯಾಸ ಕ್ರಮವು ಹೇಗಿರಬೇಕೆಂದು ಶ್ರೀ ಚೌಧುರಿಯವರ ಸೂಚನೆಯಾಗಿದೆ. ಗ್ರಾಮಜೀವನಕ್ಕೆ ಅಗತ್ಯವಾಗುವ ವೃತ್ತಿ ಶಿಕ್ಷಣವಿರಬೇಕು. ಅರೆ ದಿನದ ಶಾಲೆಗಳನ್ನು ತೆರೆದು, ಮಕ್ಕಳು ಸಮಯ ದೊರೆತಂತೆ ಅವುಗಳನ್ನು ಕಲಿತುಕೊಳ್ಳಲು ಅನುಕೂಲವಾಗಬೇಕು. ಸ್ಲೇಟು ಪುಸ್ತಕಗಳನ್ನು ಮಕ್ಕಳಿಗೆ ಧರ್ಮಾರ್ಥ ಹಂಚಬೇಕು. ಉಪಾಧ್ಯಾಯರ ತಲಬು ಮತ್ತು ಗ್ರೇಂಟುಗಳನ್ನು ಹೆಚ್ಚಿಸಿಯೂ, ಗ್ರೇಡ್ಯುವೇಟರೇ ಮೊದಲಾದವರು ಹಳ್ಳಿ ಶಾಲೆಗಳಿಗೆ ಸಿಗುವಂತೆಯೂ ಗ್ರೇಂಟು ಹೆಚ್ಚಿಸಿಯೂ, ಶಿಕ್ಷಣವು ಗ್ರಾಮಾಭ್ಯುದಯಕ್ಕೆ ಸಹಾಯಕವಾಗುವಂತೆ ಉತ್ತಮ ಶಿಕ್ಷಕರನ್ನೆ ನೇಮಿಸಬೇಕಾಗಿದೆ. ಬೆಳಿಗ್ಗೆ ಪುಸ್ತಕ ಪಾಠಕ್ಕೂ ಮಧ್ಯಾಹ್ನ ಕೈ ಕೆಲಸಕ್ಕೂ ವಿನಿಯೋಗಿಸುವಂತಾಗಬೇಕು. ಪುಸ್ತಕಗಳನ್ನು ಕಡಮೆ ಮಾಡಿ, ಅವನ್ನು ಸರಕಾರವೇ ಪ್ರಕಟಿಸಬೇಕು ಇತ್ಯಾದಿ.

ಮಂಗಳೂರು.

ಭಾಷಣ

ಇದೇ ತಾ ೨೬ನೇ ಆದಿತ್ಯವಾರ ಬೆಳಿಗ್ಗೆ ಗಂಟೆ ೮ಗೆ ಮಂಗಳೂರು ಸಿಟಿ ಆರ್ಯಸಮಾಜದಲ್ಲಿ "ಮಾನವನ ಜೀವನ ಪಥ" ಎಂಬ ಕುರಿತು ಭಾಷಣಗಳಾಗುವವು, ಎಲ್ಲಾ ಬಂಧುಭಗಿನಿಯರೂ ಸಹಕರಿಸಬೇಕಾಗಿ ಕಾರ್ಯದರ್ಶಿಯವರ ವಿನಂತಿ ಇದೆ

ದಿ ಯುನಿವರ್ಸಿಟಿ ಎಕ್ಸಟೆನ್ಶನ್ ಬೋರ್ಡು, ಮಂಗಳೂರು

ಇದರ ನೇತೃತ್ವದಲ್ಲಿ "ಆಧುನಿಕ ರೀತಿಗೆ ಸರಿಯಾಗಿ ಕನ್ನಡದಲ್ಲಿ ಅಭಿರುಚಿಯನ್ನು ಹೇಗೆ ಉದ್ದೀಪನಗೊಳಿಸಬೇಕು?" ಎಂಬುದರ ಕುರಿತು ಸೈಂಟ್ ಆಗ್ನೇಸ್ ಕಾಲೇಜಿನ ಕನ್ನಡ ಪಂಡಿತರಾದ ಶ್ರೀ ಕೆ ಶಂಕರಭಟ್, ವಿದ್ವಾನ್, ಇವರು ಜನವರಿ ತಾ ೩೫ನೇ ಶನಿವಾರ ಸಂಜೆ ಗಂಟೆ ೫–೧೫ಕ್ಕೆ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಒಂದು ಭಾಷಣ ಕೊಡಲಿರುವರು ಎಲ್ಲರಿಗೂ ಸುಸ್ವಾಗತವಿದೆ

ರಥೋತ್ಸವ—ಗೌಡ ಸಾರಸ್ವತ ಬ್ರಾಹ್ಮಣ ವೃಂದದ ಕಾಶೀ ಮಠ ಶ್ರೀ ಸುಕೃತೀಂದ್ರ ಸ್ವಾಮಿಯವರು ಮಂಗಳೂರಿನ ಶ್ರೀ ವೆಂಕಟರಮಣ ದೇವಳದ ರಥೋತ್ಸವ ಸಮಾರಂಭದ ಸಲುವಾಗಿ ಇದೇ ತಾ ೨೩ರಲ್ಲಿ ಕಲ್ಯಾಣಪುರದಿಂದ ಇಲ್ಲಿಗೆ ಬಂದು ರಥೋತ್ಸವವು ಪೂರ್ಣವಾಗುವ ವರೆಗೆ ಇಲ್ಲಿದ್ದು ಉತ್ಸವಸಮಾರಂಭಗಳನ್ನು ನಡೆಯಿಸುವರೆಂದು ತಿಳಿದುಬರುತ್ತದೆ

ಜಿಲ್ಲಾ ಬೋರ್ಡಿನ ಪ್ರಥಮ ಸಭೆಯು

ಇದೇ ತಾ ೨೧ಕ್ಕೆ ಜರಗಲಿದ್ದು ನಮ್ಮ ಸಾರ್ವಭೌಮ ಚಕ್ರವರ್ತಿಯವರ ಅಕಸ್ಮಾತ್ ನಿಧನದಿಂದಾಗಿ ಮುಂದು ವರಿಸಲಾಗಿದೆ

ಜಿಲ್ಲಾ ಬೋರ್ಡಿನ ವಿಭಜನೆ.

ನಮ್ಮ ಜಿಲ್ಲಾ ಬೋರ್ಡನ್ನು ವಿಭಜನೆ ಮಾಡುವರೆಂದೂ ಕಾಸರಗೋಡು ತಾಲೂಕನ್ನು ಮಲಬಾರು ಜಿಲ್ಲಾ ಬೋರ್ಡಿಗೆ ಸೇರಿಸುವರೆಂದೂ ಬಲವಾದ ವಾರ್ತೆಯಿದೆ

ಮಂಗಳೂರು ಕಾಫಿ ಮಾರ್ಕೆಟು—

ಗಿರಾಕಿಗಳು ಕಡಿಮೆ ಕೋಟ್ಟೋಳಿಂದ ಕಾಫಿಯು ತುಂಬಾ ಇಳಿದಿರುತ್ತದೆ ತಾ ೧೮ರ ಕಾಫಿ ಧಾರಣೆಯು ಈ ರೀತಿಯಿತ್ತು, ಎಫ್ ಎ ಒ ಪ್ಲೆಂಟೇಶನ ಎಸೋರ್ಟೆಡ್ ಮಂಟಿ ರೂ ೩೩–೮–೦ ಎ ರೂ ೩೪–೮–೦ ಬಿ ರೂ ೩೦–೮ ೦ ಸಿ ರೂ ೨೮ ಫಿಬಿರಿ ವಿಷ ೪೫ ಟ್ರಾಯೇಜ ರೂ ೨೫–೮–೦ (ಒಂದು ಹಂಡ್ರೆಡ್ವೇಟಿಗೆ) ಫ್ಲೋರ್ವರ್ಡ್ ಡೆಲಿವರಿ ಇರಲಿಲ್ಲ

ಮಂಗಳೂರು ನಗರ ಸಭೆಯ ಬಜೆಟು ಸಭೆಯು

ಮಂಗಳೂರು ನಗರ ಸಭೆಯ ೧೯೩೫–೩೬ ಮತ್ತು ೧೯೩೬–೩೭ರ ಬಜೆಟುಗಳು ಮೊನ್ನೆ ತಾ ೧೮ರಲ್ಲಿ ಜರಗಿದ ನರಸಭೆಯಲ್ಲಿ ವಿಮರ್ಶಿಸಲಾದುವು ಕೆಲವು ಬದಲಾವಣೆಗಳನ್ನು ಮಾಡಿ ಸಭೆಯು ಮುಂದಿಟ್ಟು ಬಜೆಟನ್ನು ಸ್ವೀಕರಿಸಲಾಯಿತು ನಗರ ಸಭೆಯ ಉತ್ಪತ್ತಿಯು ಸ್ವಲ್ಪ ಕಡಿಮೆಯಾಗಿರುವುದೆಂದೂ, ಇದಕ್ಕೆ ಮೋಟರ್ ವಾಹನಗಳ ಲೈಸೆನ್ಸು ಪೀಸಿನ ಅಂಶವು, ಇದರಿಗೆ ಸರಕಾರದ ಹುಕುಂ ಪ್ರಕಾರ ಕಡಿಮೆ ಸಂದುದೆ ಕಾರಣವೆಂದೂ ಕಮಿಶನರಾದ ಶ್ರೀ ಕರುಣಾಕರ ಮೆನೋನರು ತಿಳಿಸಿದರು ೧೯೩೫–೩೬ರಲ್ಲಿ ರೂಪಾಯಿ ೨೫ ೧೦೦ರ ಉಳಿತಾಯವಾಗಿರುವುದು,

೧೯೩೬–೩೭ರಲ್ಲಿ ರೂ ೩೩೭ ೩೯೦ ಆದಾಯವಿರಬಹುದೆಂದು ಊಹಿಸಲಾಗಿದೆ ಅದರಲ್ಲಿ ೧೨೦೦ ಲೈಬ್ರರಿಗೆ, ರೂ ೭೧,೬೮೦, ಸಾರ್ವಜನಿಕ ಆರೋಗ್ಯಖಾತೆಗೆ ರೂ ೭೦೬೦, ಆಯುರ್ವೇದಿಕ್ ಮತ್ತು ಯೂನಾನಿ ಡಿಸ್ಪೆನ್ಸರಿಗಳಿಗೆ ರೂ ೧೦೦೦ ಕುಷ್ಠರೋಗಿಗಳ ಉಪಶಮನದ ಬಗ್ಗೆ ವಿದ್ಯಾವೇತನಗಳಿಗೆ ರೂ ೧೨೦೦, ಸಾರ್ವಜನಿಕ ಮಲವಿಸರ್ಜನೆಗೆ ರೂ ೨೯,೪೬೦ ಕೋಟೆಗಳ ಸಂಬಳ ರೂ ೧೪ ೨೦೦ ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ರೂ ೫೧ ೦೦೦ (ಇದರಲ್ಲಿ ರೂ ೧೪,೬೯೨ ಸರಕಾರದಿಂದ ಗ್ರೇಂಟಾಗಿ ಸಿಕ್ಕುವುದು) ಗುಣಗಹಿತ್ತಲಿನ ಮೂಲಿಗಿಂದ ರೂ ೨೦ ೦೦೦ ಗಳಿಸಬಹುದೆಂದು ಊಹಿಸಲಾಗಿದೆ

ಕಾಂಗ್ರೆಸು ಡಿಸ್ಟ್ರಿಕ್ಟ್ ಬೋರ್ಡು ಪಕ್ಷ.

ದ ಸಭೆಯೊಂದು ಇದೇ ಕಳೆದ ತಾ ೨೧ರಲ್ಲಿ ಸೇರಿದು ಶ್ರೀ ಎನ್ ಶಿವರಾಯರನ್ನು ಪಕ್ಷದ ಲೀಡರನ್ನಾಗಿಯೂ ಡಾಕ್ಟರ್ ಪಿ ಎಲ್ ಶೆಟ್ಟರನ್ನು ಡೆಪ್ಯುಟಿ ಲೀಡರನ್ನಾಗಿಯೂ ಶ್ರೀ ಬಿ ವೈಕುಂಠ ಬಾಳಿಗರನ್ನು ವಿಪ್ಪನ್ನಾಗಿಯೂ ಆರಿಸಲಾಯಿತು ಲೀಡರಾದವರು ಪ್ರೆಸಿಡೆಂಟರಾಗಬಾರದೆಂದೂ ವೈಸ್ ಪ್ರೆಸಿಡೆಂಟರಾಗಬಹುದೆಂದೂ ನಿರ್ಣಯಿಸಲಾಯಿತು

ಡಾಕ್ಟರ್ ಕೆ ವೆಂಕಟರಾವರು ರಾಜೀನಾಮೆಯಿತ್ತ ಮುನಿಸಿಪಲ್ ಕೌನ್ಸಿಲಿನ ಸೀಟಿಗೆ ಇದೇ ಕಳೆದ ತಾ ೨೧ರಲ್ಲಿ ನಡೆದ ಚುನಾವಣೆಯಲ್ಲಿ ಶ್ರೀ ಸಿ ಪಿಲ್ ಲೋಬೋ ರವರು ಆರಿಸಲ್ಪಟ್ಟಿರುವರು ... ... ಸಿ ಮಸ್ಕರೇಂಞಸರು ಇವರ ವಿರೋಧಿಯಾಗಿದ್ದರು

ಸ್ವೀಕಾರ ಮತ್ತು ವಿಮರ್ಶೆ

ನಗುವ ನಂದ—ಎಂಬ ಮಾಸಪತ್ರಿಕೆಯನ್ನು ನಾವು ಸಂತಸದಿಂದ ಸ್ವೀಕರಿಸಿದೆವು ಇದರ ಸಂಪಾದಕ ಎ ಜಿ ಎಸ್ ಕೃಷ್ಣರಾಯರು ಸರ್ದ್ಯೋದಕಾರ್ಯಾಲಯ ಬೆಂಗಳೂರು ಬೆಲೆ ಬಿಡಿ ಸಂಚಿಕೆಗೆ ಒಂದಾಣೆ ವಾರ್ಷಿಕ ವರ್ಗಣಿ ರೂ

ವಿವರ್ಶೆ ಆತ್ಮವಿಶ್ವಾಸಕ್ಕೂ ವಿನೋದ ಜನಿಗೂ ನಗುವನಂದವು ಬಹಳ ಉಪಯೋಗಕಾರಿಯಾಗಿದೆ ವ್ಯಂಗ್ಯಕತೆಗಳಿಂದಲೂ ಚಿತ್ರಗಳಿಂದಲೂ ಕವನಗಳಿಂದಲೂ ಸಚಿತ್ರವಾಗಿ ಕೆಲವೇ ವರ್ಷ ರಲ್ಲಿ ಪರ ಜನಾದರಣೆಯ ನ್ನಾಗಿದ್ದು ಅದರ ವಿಶೇಷನ್ನು ಸವ ಶಕ್ತಿಕವಾಗಿ ಪೋಷಿಸುತ್ತಿದೆ ಇನ್ನೂ ಅದರ ಅಕ್ಷರಗಳನ್ನು ದೊಡ್ಡವು ಮಾಡಿದ್ದಲ್ಲಿ ಬಹಳ ಉತ್ತಮವಾಗುತ್ತಿತ್ತು ದುರಭರವಾದ ಕಾಲದಲ್ಲಿ ವಿನೋದವೂ ತೊಡಲುಗನ್ನನುಭವಿಸದೆ ಅನ್ನ ಸೇವೆಯನ್ನು ಯಥಾಪ್ರಕಾರವಾಗಿ ಮಾಡಿಕೊಂಡಿರಲೆಂದು ನಾವು ಬಯಸುತ್ತೇವೆ

ಸದ್ಧರ್ಮ ಪ್ರಚಾರಕ—ಎಂಬ ಮಾಸಪತ್ರಿಕೆಯನ್ನು ಸಂತಸದಿಂದ ಸ್ವೀಕರಿಸಿರುವೆವು ಸಂಪಾದಕರು—ಶ್ರೀ ಬಿ ಲಕ್ಷ್ಮೀದೇವಿ ವಿದ್ಯಾರ್ಥಿ ಮಂಗಳೂರು ವಾರ್ಷಿಕ ಚಂದಾ ರೂ ೧–೪ ೦ ಬಿಡಿ ಸಂಚಿಕೆಗೆ ಅಣೆ

ವಿಮರ್ಶೆ—ಹೆಸರಿಗೆ ತಕ್ಕಂತೆ ಮಾಸಿಕ ಪತ್ರಿಕೆಯು ಧರ್ಮದ ಪ್ರಚಾರಕಾರ್ಯವನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿದ ನವೀನ ಭಾರತದ ವಿದ್ಯಾವಂತರು ಈಗಾಗಲೇ ಧರ್ಮಕ್ಕೆ ತಿಲಾಂಜಲಿಯನ್ನೀಯುವಾಗ ಅವರನ್ನು ಶಿರದಿಂದತ್ತ ಸುಪಥವನ್ನು ತೋರಲು ಈ ಪುಸ್ತಕವು ಜನ್ಮವೆತ್ತಿದೆಯೆಂದು ಹೇಳಲು ತುಂಬಾ ಸಂತೋಷ ಸಂಪಾದಕರು ಕೆಲವು ಪುಟಗಳನ್ನು ಸ್ತ್ರೀಯರಿಗಾಗಿ ಪ್ರತ್ಯೇಕಿಸಿ ಇಟ್ಟಿದ್ದು ಗಣನೀಯ. ಕೇವಲ ಶಾರದಾ ಧರ್ಮಪ್ರಚಾರ ಮಾಡದೆ ಸ್ತ್ರೀಯರನ್ನೂ ಉತ್ತೇಜನಗೊಳಿಸಿ ಸಹಜಾಚ ಸುಧಾರಣೆಯ ಕಾರ್ಯವನ್ನು ಎಸಗಿದಂತೆಯೇ ಆಯಿತು ಸಂಪಾದಕರ ಈ ಪತ್ರಿಕೆಯು ಜನಾದರಣೀಯವಾಗಲೆಂದು ನಾವು ಬಯಸುತ್ತೇವೆ

ಕೆಳಗೆ ಸೂಚಿಸಿದವರ ಕೆಲೆಂಡರುಗಳು ನಮ್ಮ ಹಸ್ತಗತವಾಡಿವೆ ಆದಕ್ಕಾಗಿ ಅವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ ಅಮೃತಾಂಜನ ಡಿಪೋ, ಸುಜೇರ್ ಕಾಂಟ್ರ್ಯಾಕ್ಟರ್ಸ್ ಎಂ ವಿ ಶಾಸ್ತ್ರಿ ದಿ ಕೆನರಾ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್ ಉಡುಪಿ ಎ ವಾಮನ ಭಟ್ ಉಡುಪಿ, (ಬೊಂಬಾಯಿ ಲೈಫ್ ಇನ್ಸೂರೆನ್ಸ್ ಕಂಪೆನಿಯ ಏಜೆಂಟರು) ಇಂಡೋ ಯೂರೋಪಾ ಟ್ರೇಡಿಂಗ್ ಕಂಪೆನಿ ಮುಂಬಾಯಿ, ಎಚ್ ರಾಮರಾಯರು, ಶ್ರೀನಿವಾಸ ಬ್ರದರ್ಸ್ ದಿ ವೆಜಿಟೇಬಲ್ ಸೋಪ್ ವರ್ಕ್ಸ್ ಕಲ್ಲಿಕೋಟೆ, ಪ್ರಭಾಕರ ಪ್ರೆಸ್ ಉಡುಪಿ, ಇದಲ್ಲದೆ ಉಡುಪಿ ಪರ್ಯಾಯ ಸುಜೆನರ್ ಪಿಕ್ಚೋರಿಯಲ್ ಕೆಲೆಂಡರೂ ನಮ್ಮ ಹಸ್ತಗತವಾಗಿದೆ

ನೋಟಗಳು.

ಬರೆಯುತ್ತಾ ಬರೆಯುತ್ತಾ ಇದ್ದುದೆಲ್ಲವನ್ನು ಕಳೆದುಕೊಂಡವರೂ ಇದ್ದಾರೆ, ಸಿಕ್ಕಿದುದನ್ನು ಗಳಿಸಿಕೊಂಡವರೂ ಇದ್ದಾರೆ, ಉಳಿಸಿಟ್ಟವರು ಕಡಿಮೆ

× × × × × ×

ಕೊಲೆಜುಗಳಲ್ಲಿ ಟ್ರೈನಿಂಗ್ ಶಾಲೆಗಳಲ್ಲಿ, ಬಡ ಉಪಾಧ್ಯಾಯರು, ಶಾಲೆಯ ಹೆಸರಲ್ಲಿ ಪುಸ್ತಕ ತರಿಸಿ, ಅವುಗಳ ಸದುಪಯೋಗವನ್ನು ವಿದ್ಯಾರ್ಥಿಗಳು ಮಾಡುವಂತೆ ಒದಗಿಸಿ ತಾವೂ ತಮ್ಮ ಸ್ವರಚಿತ ಗ್ರಂಥಗಳಲ್ಲಿ ಅವನ್ನೆತ್ತಿಕೊಂಡು ಬರೆವುದು ಕ್ರಮ ಇಂಥ ಪುಸ್ತಕಗಳೇ ವಿದ್ಯಾರ್ಥಿಗಳಿಗೆ ಮೆಚ್ಚಿನವಾಗಿರಬೇಕು ಅದರಲ್ಲೇನು ಕುಂದು?—ಶ್ರೀಕೃಷ್ಣ ಚೌಧುರಿಗಳೂ ಶ್ರೀ ವಾಸುದೇವರೂ ಈ ವಿಷಯವನ್ನು ತಿಳಿದಿಲ್ಲವೆ? ನಿಜವಾದ ಪುಸ್ತಕಗಳೆಂದರೆ ವಿದ್ಯಾರ್ಥಿಗಳಿಗೆ ಇವೇ ಏಕೆಂದರೆ, ಉಪಯುಕ್ತ, ಸರ್ವಸಂಗ್ರಹವುಳ್ಳವು, ಬೆಲೆ ಅಲ್ಪವಾದುವು

× × × × × ×

ಸರಕಾರವು ಪುಸ್ತಕದಂಗಡಿಯಿಡುವುದು ಶಾಯಿ ಕಾರ್ಖಾನೆ ಸಾಬೂನು ಕಾರ್ಖಾನೆ ಇಟ್ಟಂತಾದೀತೇ ವಿನಾ ಬೇರೆ ಯಲ್ಲ

ತಾಲೂಕುಗಳಿಂದ.

ಮೂಲ್ಕಿ: ಸ್ಥಳೀಕ ಶ್ರೀದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ಶಾಖೆಯೊಂದು ಇದೇ ಬರುವ ತಾ ೨೫–೧–೩೬ನೇ ಶನಿವಾರ ಸಾಯಂಕಾಲ ಘಂಟೆ ೬ಕ್ಕೆ ಕಿಲ್ಪಾಡಿ ಹಿಂದೂಸ್ಥಾನಿ ಶಾಲಾ ಕಟ್ಟಡದಲ್ಲಿ ತೆರೆಯಲ್ಪಡುವುದಾಗಿಯೂ, ಈ ಸಮಾರಂಭದ ಅಧ್ಯಕ್ಷರಾಗಲು ಮ ರಾ ರಾ (ಡಾಕ್ಟರ್) ಯಂ ರಾಯಪ್ಪ ಕಾಮತ್ ಅವರ್ಗಳ್ ಎಲ್ ಎಮ್ ಪಿ ರವರು ದಯಾಭಾವದಿಂದ ಒಪ್ಪಿರುವರಾಗಿಯೂ ತಿಳಿದುಬರುತ್ತದೆ

ಸ್ಥಳೀಕ ಬೋರ್ಡು ಹೈಸ್ಕೂಲಿನ ವರ್ಧಂತಿಯು ಇದೇ ಬರುವ ತಾ ೨೫–೧–೩೬ನೇ ಶನಿವಾರ ಆಚರಿಸಲ್ಪಡುವುದಾಗಿ ತಿಳಿದುಬರುತ್ತದೆ

ಇಲ್ಲಿಯ ಕೋ ಒಪರೇಟಿವ್ ಟೌನ್ ಬೇಂಕಿನ ವಾರ್ಷಿಕ ಮಹಾಸಭೆಯು ಇದೇ ಕಳೆದ ತಾ ೧೨ರಲ್ಲಿ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಸೇರಿತು ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರರೂ ದಯಮಾಡಿಸಿದ್ದರು ಬಾಲ್ಕಿ ವರುಷಕ್ಕೆ ಶ್ರೀ ಯು ಕೃಷ್ಣರಾಯರು ಅಧ್ಯಕ್ಷರಾಗಿಯೂ ಶ್ರೀ ಯು ಶ್ರೀನಿವಾಸ ಶ್ಯಾನುಭೋಗರು ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟಿರುವರು

ರಿಜಿಸ್ಟ್ರೇಷನ ಇಲಾಖೆಯ ಇನ್ಸ್ಪೆಕ್ಟರ್ ಜನರಲ್‌ರವರು ತಾ ೧೮–೧–೩೬ರಲ್ಲು ಅಕಸ್ಮಾತ್ತಾಗಿ ಸ್ಥಳೀಕ ರಿಜಿಸ್ಟ್ರೇಷನ್ ಆಫೀಸನ್ನು ಸಂದರ್ಶಿಸಿ ಮುಂದೆ ಮಂಗಳೂರ ಆಕ್ಕಡೆ ತೆರಳಿದರು

ಇಲ್ಲಿಯ ಪಂಚಾಯತುಬೋರ್ಡು ಮುತುವರ್ಜಿಯಿಂದ ಕೆಲಸ ಮಾಡುತ್ತಿರುವುದು ಊರವರಿಗೆ ಭೂಷಣವೇ ಸರಿ ಪಂಚಾಯತ ಬೋರ್ಡಿನ ಅಧ್ಯಕ್ಷರ ಸ್ಥಾನದಲ್ಲಿ ತರುಣ ಉಪಾಧ್ಯಕ್ಷರು ತಮ್ಮ ಖಾಸಗಿ ಕೆಲಸಗಳನ್ನು ಬದಿಗೊತ್ತಿ ಗ್ರಾಮ ನಿರ್ಮಾಣಕರದ ಕೆಲಸಕ್ಕೆ ಮನಸ್ಸುಮಾಡಿ ನಿಸ್ವಾರ್ಥ ಕೆಲಸಮಾಡುತ್ತಿರುವರು ಇದು ಹೊಗಳಲ್ಪಡುವಂತದ್ದಾಗಿದೆ

ಇತ್ತೀಚಿನ ವೈನ್ ರೋಡ್ ಕೆಲಸಗಳ ರೋಡುಗಳು ಸರಿ ನಿರ್ಮಾಣವಾಗಿ ತೋರುತ್ತಿರುವುದು ಊರಿಂದ್ರ ಕ್ಕಾಗಿ ದುಡುಕು ಸ್ವಭಾವವನ್ನು ಸ್ವಲ್ಪ ಕಮ್ಮಿಮಾಡಿ ಊರವರಲ್ಲಿ ಸಹಕರಿಸಿ ನಡೆದು ನೆಮ್ಮದಿಯಿಂದ ಇನ್ನೂ ಆರೋಗ್ಯಕರದ ಕೆಲಸವನ್ನು ಮಾಡಿಸುವಂತೆಯೂ ಊರವರು ಈ ಕಾ ಸಹಕರಿಸಿ ಪ್ರೋತ್ಸಾಹಿಸಬೇಕಾಗಿಯೂ ಅಪೇಕ್ಷೆ

ಅಜೆಕಾರು ಹಲವು ವರ್ಷದ ಕೋರಿಕೆಯಾದ ಅಜೆಕಾರು ಶಿರ್ಲಾಲು ಕೆರವಾಸೆ ರಸ್ತೆಯ ಈ ಬಾರಿ ಡಿ ಬೋರ್ಡಿನವರು ಕೈಕೊಂಡು ಅದರ ಕೆಲಸವು ಸಂಪೂರ್ಣವಾಯಿತು ಸ್ತುತ್ಯ

ಅಜೆಕಾರು ಸೀಮೆಯ ಮಾಸಿಕ ಸಭೆಯು ತಾರೀಕು ೧೧–೧–೩೬ರಲ್ಲಿ ಹೆರ್ಮುಂಡೆ ಶಾಲೆಯಲ್ಲಿ ಪಟೇಲ್ ವಾರಂಬಳ್ಳಿಯವರ ಅಧ್ಯಕ್ಷತೆಯಲ್ಲಿ ಜರಗಿತು

ಕಳ್ಳಾಟಿಕೆಯಿಂದ ಕಲ್ಲಿನ ಕರಾಲ ತಯಾರಿಸಿದುದಕ್ಕೆ ಇಲ್ಲಿಯ ಬೇರೆ ಬೇರೆ ಎರಡು ಜನರು ಕಂಪೌಂದಿಗೆ ಒಳಗಾಗಿರುವರು

ಉಡುಪಿ—ಸ್ಥಳೀಯ ಮ್ಯುನಿಸಿಪಾಲಿಟಿಯೊಳಗಣ ತೆಂಗಿನಮರದ ಸಭೆಗಳನ್ನು ಬೇರೆ ಬೇರೆ ಕೇಂದ್ರಗಳಲ್ಲಿ ಇದೇ ತಾ ೧೧ ೧೨ ಮತ್ತು ೧೩ರಲ್ಲು ಜರಗಿಸಿ ಮ್ಯುನಿಸಿಪಾಲಿಟಿಯೊಳಗೆ ಜ್ಯಾರಿಗೆ ಬರಲಿರುವ ತೆರಿಗೆ ಪಟ್ಟಿಗೆ ಆಕ್ಷೇಪವಿದ್ದರೆ ಅದನ್ನು ಇದೇ ತಾ ೧೯ರೊಳಗೆ ಸ್ಪೆಶಲ್ ಆಫೀಸರರಿಗೆ ತಿಳಿಸಬೇಕೆಂದು ಜ್ಯಾಹೀರು ಮಾಡಿದಂತೆ, ಸದ್ರಿ ಪಟ್ಟಿಯಲ್ಲಿನ ದರಗಳು ತೀರಾ ಹೆಚ್ಚಾಗಿರುವವೆಂದೂ, ಎಷ್ಟೋ ವರ್ಷಗಳ ಹಿಂದೆ ಸ್ಥಾಪಿತವಾಗಿರುವ ಮಂಗಳೂರು ತಲಚೇರಿ, ಕಣ್ಣಾನೂರು ಕಲ್ಲಿಕೋಟೆ ಪಟ್ಟಣಗಳು ರೈಲ್ವೆ ಮತ್ತು ಸ್ಟೀಮರುಗಳ ಹಾಗೂ ನಾನಾ ಕೈಗಾರಿಕೆಗಳ ವ್ಯಾಪಾರ ವಹಿವಾಟಿನವುಗಳಾಗಿ ಅಲ್ಲಿನ ದರಗಳನ್ನು ಬಡ ಉಡುಪಿಗೆ ಹೋಲಿಸಬಾರದಾಗಿಯೂ, ಇಲ್ಲಿ ಬಹು ಸಂಖ್ಯೆಯವರಾದ ರೈತರ ವೈದಿಕರ ಬಡ ನೌಕರಿಯ ಜನರ ಸ್ಥಿತಿಗತಿಗಳನ್ನು ಸ್ವತಃ ವಿಚಾರಿಸಿ ತೆರಿಗೆಗಳನ್ನು ನಿಶ್ಚಯಿಸಬೇಕಾಗಿ ಸದ್ರಿ ಆಫೀಸರರನ್ನು ಕೇಳಿಕೊಳ್ಳುವಂತೆ ಠರಾವುಗಳಾದುವು ಅಲ್ಲದೆ ಸರಹದ್ದಿನೊಳಗೆ ಅನೇಕ ಹೊಲಗದ್ದೆಗಳನ್ನು ಬಾಣ ಟಿಟ್ಟುಗಳನ್ನೂ ವಿರಹಿತಮಾಡುವುದೊಳ್ಳೆಯದು

ಪ್ರಾಥಮಿಕ ಶಾಲೆಗಳಲ್ಲಿ ವ್ಯಾಯಾಮ ಶಿಕ್ಷಣವು ವಿದ್ಯಾಮುಖ್ಯಾಂಗವಾಗಿರಬೇಕೆಂಬ ಉದ್ದೇಶದಿಂದ ಫೆಬ್ರವರಿ ತಾ ೨೩ ಆದಿತ್ಯವಾರದಿಂದ ಮಾರ್ಚ ತಾ ೨ನೇ ಆದಿತ್ಯವಾರದ ವರೆಗೆ ಉಡುಪಿಯಲ್ಲಿ ವ್ಯಾಯಾಮ ಶಿಕ್ಷಣ ಶಿಬಿರವು ಹಿಂದೂ ಮನೇಜರ ಸಂಘದ ಆಶ್ರಯದಲ್ಲಿ ಏರ್ಪಡಿಸಲಾಗುವುದು ಆಮರಾವತಿಯಲ್ಲಿ ಉಚ್ಚ ಶಿಕ್ಷಣವನ್ನು ಪಡೆದಿರುವ ಮಂಗಳೂರ ಶ್ರೀ ಕೊರಗ ಶೆಟ್ಟಿ ವ್ಯಾಯಾಮ ವಿಶಾರದ ಇವರೇ ಪ್ರಧಾನ ವ್ಯಾಯಾಮ ಬೋಧಕರು ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳ ಖಾಸಗಿ ಶಾಲೆಗಳ ಮನೇಜರರು ಮತ್ತು ಅಧ್ಯಾಪಕರು ಈ ಸುಸಂದರ್ಭವನ್ನು ಕಳಕೊಳ್ಳಲಿಕ್ಕಿಲ್ಲವೆಂದು ಸಂಘದ ಆಶೆ. ಪ್ರತಿದಿನ ಪ್ರಾತಃಕಾಲ ೬–೩೦ರಿಂದ ೮ ೩೦ ಸಂಜೆ ೪–೩೦ರಿಂದ ೬ರವರೆಗೆ ಲಾಠಿ ಜೋಡಿ ಲೆಝಿಮ್, ಬಾಲಕ್ರೀಡಾ ಡ್ರಿಲ್ ಇತ್ಯಾದಿ ಸದ್ಯ ೩೦ ಜನರಿಗೆ ಮಾತ್ರ ಈ ಸಾರಿ ವ್ಯವಸ್ಥೆ ಫೆಬ್ರವರಿ ೮ರೊಳಗೆ ಪ್ರವೇಶ ಚಂದಾ ರೂ ೧ನ್ನು ಮಾತ್ರ ಕಳುಹಿಸಿದಲ್ಲಿ ಈ ವ್ಯವಸ್ಥೆ ಮಾಡಲಾಗುವುದು ಖಾಕಿ ಬಣ್ಣದ ಚಲ್ಲಣ ಕೈಯಿಲ್ಲದ ಬಿಳಿ ಬನಿಯನ್—ಅವರವರ ಶಿಬಿರದವರೆಗೆ ಪ್ರವಾಸದ ವಂಚ ಇವನ್ನು ತಪ್ಪದೆ ತರಬೇಕು"—ಎಂದು ಕೋ ಶ ಕಾರಂತ, ಕಾರ್ಯದರ್ಶಿ, ಇವರು ತಿಳಿಸುತ್ತಾರೆ

ತಾ ೧೬ಕ್ಕೆ ಶ್ರೀ ಪಲ್ಲದ ವಿ ಸಂಜೀವರಾಯರು ತಮ್ಮ ಮಂಡಳಿಯೊಂದೊಡಗೂಡಿ ಶ್ರೀ ರಾಮಕೃಷ್ಣಾ ಥಿಯೇಟರಿನಲ್ಲಿ ಸುಶ್ರಾವ್ಯವಾದ ತಮ್ಮ ಕೊಳಲಿನ ಕಚೇರಿಯನ್ನು ಜರುಗಿಸಿದರು ಇದರ ಉತ್ಪತ್ತಿಯು ಶ್ರೀ ಪೇಜಾವರ ಮಠದ ಶ್ರೀಪಾದಂಗಳವರ ಪರ್ಯಾಯ ಮಹೋತ್ಸವ ಸಂಬಂಧವಾಗಿ ಒಪ್ಪಿಸಲಾಯಿತು

ತಾ ೯ರಿಂದ ಪ್ರಾರಂಭವಾದ ಶ್ರೀಕೃಷ್ಣ ಸನ್ನಿಧಿ ವಾರ್ಷಿಕ ರಥೋತ್ಸವಗಳು ತಾ ೧೮ಕ್ಕೆ ಜರಗಿದ ಪರ್ಯಾಯ ಮಹೋತ್ಸವದಿಂದ ಮುಕ್ತಾಯವಾಯಿತು ಶ್ರೀ ಅದಮಾರು ಶ್ರೀಪಾದಂಗಳವರ ಪರ್ಯಾಯದ ನಂತರ ಈ ಪರ್ಯಾಯಕ್ಕೆ ಹಿಡಿದ ಜನಸಂದಣಿಯ ...ಬಹುದು ತಾ ೧೮ರ ಪ್ರಾತಃ ೫ಕ್ಕೆ ಶ್ರೀ ಪೇಜಾವರ ಮಠದ ಶ್ರೀಪಾದಂಗಳವರ ... ಶ್ರೀಪಾದಂಗಳವರಿಂದೊಡಗೂಡಿ ತಾಲೂಕ ಕಚೇರಿ ಬಳಿ ಜೋಡುಕಟ್ಟೆಯಿಂದ ಮೆರವಣಿಗೆಯಲ್ಲಿ ಹೊರಟು ನಾಲ್ಕು ಬೀದಿಗೆ ಬಂದು ಕಲ್ಸಂಕದಲ್ಲಿ ಶ್ರೀಕೃಷ್ಣ ದರ್ಶನಮಾಡಿಸಿ ... ಶ್ರೀ ಚಂದ್ರಮೌಳೀಶ್ವರ ಶ್ರೀ ಅನಂತೇಶ್ವರ ದೇವರ ಸಂದರ್ಶನೆಗಳಾದ ಮೇಲೆ ಶ್ರೀಕೃಷ್ಣ ದೇವಸ್ಥಾನ ಹೆಬ್ಬಾಗಿಲಲ್ಲಿ ಪರ್ಯಾಯ ... ಶ್ರೀ ... ಶ್ರೀಪಾದಂಗಳವರಿಂದ ಸ್ವಾಗತಿಕ ಸ್ವೀಕೃತ ಪಟ್ಟ ದೇವರ ದರ್ಶನಾರತಿ ಶ್ರೀಮಧ್ವ ಸರೋವರ ತೀರ್ಥ ದರ್ಶನ ಮುಂತಾದ್ದನ್ನ ಶ್ರೀಮಧ್ವಾಚಾರ್ಯ ... ಚಾರ್ಯರ ದರ್ಶನದ ... ಗಳಾಗಲು ನವ ... ಶ್ರೀಪಾದಂಗಳವರು ... ಯಲ್ಲಿ ಅಲಂಕರಿಸಲಾಗಿದ್ದ ಅರಳಿನ ... ನೆರೆದ ಸಭಿಕರ ಕೈತಾಡನಗಳ ಜಯಘೋಷದೊಡನೆ ಅಲಂಕರಿಸಿದರು ... ಉಪಚಾರ ಮಾಡಿದೊಡನೆ ... ಲಾದುವು ಸದರಿ ಮಹೋತ್ಸವದಲ್ಲಿ ಶ್ರೀ ಪರ್ಯಾಯ ಸ್ವಾಮಿಯವರನ್ನು ಅಭಿನಂದಿಸಿದ ನಡತಗಳು ... ಗಳೂ ಅದಾವು ... ಶ್ರೀ ಪರ್ಯಾಯ ಶ್ರೀಪಾದಂಗಳವರ ಸಂಪನ್ನೋಪಚಾರ ಮಾತುಗಳ ಚಿಕ್ಕ ಭಾಷಣದಿಂದ ನೆರೆದ ಸಭಿಕರಿಗೆ ಧನ್ಯವಾದಗಳನ್ನು ಕೊಟ್ಟರು ನೆರೆದ ಸಭಿಕರಿಗೂ ಗಂಧ ಪುಷ್ಪಾಕ್ಷತೆಗಳೂ ಫಲವಾಗ್ ಸಂಭಾವನೆಗಳೂ ... ಸಭೆಯು ವಿಸರ್ಜನೆಯಾಯಿತು ... ಉತ್ಸವಗಳು ... ನೆರವೇರಿದ್ದಲ್ಲದೆ ... ರೋಗರುಜಿಯ ಬಾಧೆಯೂ ಇಲ್ಲದೆ ನೆಮ್ಮದಿಯಿಂದ್ದು—ಶ್ರೀಕೃಷ್ಣ ಪರಮಾತ್ಮನ ಕೃಪೆಯೇ ಸರಿ

ಮಠಗಳ ಬೀಳ ಬಿಡ್ಕೊಡುವ ಸಲುವಾಗಿ ಅಷ್ಟಮಠಗಳ ಸ್ವಾಮಿಯವರೆಲ್ಲರೊಡಗೂಡಿ ತಾ ೧೯ಕ್ಕೆ ಶ್ರೀ ಅನಂತೇಶ್ವರ ಸನ್ನಿಧಿಯಲ್ಲಿ ೫–೬ ಸಹಸ್ರ ಜನ ಸಂತರ್ಪಣೆಯಿಂದೊಡಗೂಡಿದ ಸೇವೆಯ ದರ್ಶಿ ಪೂಜೆಯನ್ನು ಸಲ್ಲಿಸಿದರು

ತಾ ೧೯ಕ್ಕೆ ಶ್ರೀ ಕಾಶೀವ ಮಠ ಶ್ರೀ ಸುಕೃತೀಂದ್ರ ಶ್ರೀಪಾದಂಗಳವರು ಕಲ್ಯಾಣಪುರದ ಭಕ್ತಸಮುಚ್ಚಯದಿಂದ ಭವ್ಯವಿಸಲ್ಪಟ್ಟವರಾಗಿ ತಮ್ಮ ಶಿಷ್ಯವೃಂದದವರನ್ನು ಅನುಗ್ರಹಿಸಲು ರಾತ್ರಿ ೯ ತಾಸಿಗೆ ಉಡುಪಿಯಿಂದ ತೆರಳುವವರಾದರು ಉಡುಪಿ ಹತ್ತು ಸಮಸ್ತರೂ ಶ್ರೀಯವರನ್ನು ಯೋಗ್ಯ ಪರಿವಾರವಾದ ವಾದ್ಯ ಜಯಘೋಷಗಳಿಂದ ಕಲ್ಯಾಣಪುರದವರೆಗೂ ಹೋಗಿ ಶ್ರೀಪಾದಂಗಳವರನ್ನು ಬೀಳ್ಕೊಟ್ಟು ಬಂದರು ಅಲ್ಲಿಂದ ಶ್ರೀಪಾದಂಗಳವರು ಮಂಗಳೂರು ರಥೋತ್ಸವ ಕಾಲಕ್ಕೆ ತೆರಳುವರಾಗಿಯೂ ತಿಳಿದುಬರುತ್ತದೆ

೧೪ನೇ ಪುಟಕ್ಕೆ ಮುಂದುವರಿಸಿದೆ

ವನಿತಾ ವಿಭಾಗ.

ಬಾಣಂತಿ ಮರಣ

ತಾಯಂದಿರಿಗೆ ಪ್ರಸವಕಾಲದ ಹಿಂದು ಮುಂದುಗಳಲ್ಲಿ, ರೋಗರುಜಿನೆಯಿಂದ ಈಗ ನೋಡಿಕೊಳ್ಳದಿದ್ದರೂ, ಕಟ್ಟುನಿಟ್ಟಾಗಿ ಅಂದರೆ ಹೊರುವ ವಿಷಯಗಳಲ್ಲಿ ಆರೋಗ್ಯ ನೈರ್ಮಲ್ಯ ನಿಯಮಗಳನ್ನು ಪಾಲಿಸದಿದ್ದರೂ ಸರಿಯೆ, ಪರಿಣಾಮವು ನೆಟ್ಟಗಾಗುತ್ತದಿಲ್ಲ. ಬಡವರ ಅಕ್ಷರತೀರದವರಾದ ಭಾರತೀಯರಂತೂ ನಾನಾ ಕಾರಣಗಳಿಂದ ಈ ವಿಷಯವನ್ನು ಅದೃಷ್ಟಕ್ಕೆ ಬಿಟ್ಟು ಬಿಟ್ಟಿದ್ದಾರೆ. ಈ ದುರದೃಷ್ಟವು ತಾನೇ ತಾನಾಗಿ ಮಾಡಿರುವ ಹಾವಳಿಯು ಪ್ರತಿನಿತ್ಯವೂ ಪ್ರತ್ಯಕ್ಷವಾಗಿ ನಮ್ಮ ಕಣ್ಣಿಗೆ ಬೀಳುತ್ತಿದ್ದರೂ ಅದರ ಘೋರ ಸ್ವರೂಪವು ಪೂರ್ಣವಾಗಿ ಮನವರಿಕೆಯಾಗುವುದಿಲ್ಲ. ಸಂಗ್ರಹಿತ ಸಂಖ್ಯೆಯನ್ನು ಕಂಡಾಗ ಮಾತ್ರ ಬೆಳ್ಳಸಬೇಗಾಗ ಬೇಕಾಗುತ್ತದೆ. ಅಥವಾ ಭಾರತದಲ್ಲಿ ಸಂಭವಿಸುವ ಬಾಣಂತಿ ಮರಣಗಳ ಸಂಖ್ಯೆಯನ್ನೂ ಪಾಶ್ಚಿಮಾತ್ಯ ದೇಶಗಳಲ್ಲಿ ನಡೆಯುವ ಬಾಣಂತಿ ಸಾವುಗಳ ಸಂಖ್ಯೆಯನ್ನೂ ಹೋಲಿಸಿ ನೋಡಿದರೆ ಕಣ್ತೆರೆಯಾಗುತ್ತದೆ. ಅದರ ಪೂರ್ಣ ಭೀಕರ ಸ್ವರೂಪವು ಮನವರಿಕೆಯಾಗುತ್ತದೆ.

ಅದರೆ ಇಡೀ ಭಾರತದ ಸಂಖ್ಯೆಯನ್ನು ಇದು ಇಷ್ಟೇ ಎಂದು ಹೇಳುವಂತಿಲ್ಲ. ಆದರೂ ಸ್ವಲ್ಪ ಹೆಚ್ಚು ಕಡಿಮೆ ಅಂದಾಜು ಮಾಡಬಹುದು. ಮದರಾಸು ಪ್ರಾಂತ್ಯದಲ್ಲಿ ಮಾತ್ರ ಈ ಮರಣಗಳ ಸಂಖ್ಯೆಯನ್ನು ಒಳ್ಳೆಯ ಶಿಸ್ತಿನಿಂದ ಕೂಡಿಸಿದ್ದಾರೆ. ಅಸ್ಸಾಂ, ದೆಹಲಿ, ಬಂಗಾಳಾ ಈ ಪ್ರಾಂತ್ಯಗಳಲ್ಲಿ ತಕ್ಕಮಟ್ಟಿಗೆ ಪ್ರಯತ್ನಗಳು ನಡೆದಿವೆ. ಇವುಗಳಿಂದ ವಿದಿತವಾಗುವ ಅಂಶವಿಷ್ಟು. ಕಾಲರಾ ಪ್ಲೇಗು ಇತ್ಯಾದಿ ದಾರುಣ ಪೀಡೆಗಳಿಂದ ಒಟ್ಟು ಎಷ್ಟು ಜನರು ಸಾಯುತ್ತಾರೆಯೋ ಅಷ್ಟುಕ್ಕೇನೂ ಲೋಪವಿಲ್ಲದೆ ಪ್ರಸವಕಾಲದಲ್ಲಿ ಸ್ತ್ರೀಯರು ಮರಣ ಹೊಂದುತ್ತಾರೆ. ಈ ಮರಣಗಳು ಸಾಂಕ್ರಾಮಿಕ ವ್ಯಾಧಿಗಳಿಗಿಂತ ಹಾನಿಕರವಾದುವೆಂದು ಹೇಳಬೇಕಾದುದಿಲ್ಲ. ಈ ಮರಣಗಳಿಂದ ಸಂಸಾರ ಸಂಸಾರಗಳೇ ಶೂನ್ಯವಾಗುತ್ತವೆ. ಇನ್ನೂ ಎಷ್ಟೋ ಅನರ್ಥಗಳೂ ಕಾಲು ಹಾಕುತ್ತವೆ; ಜನಾಂಗವನ್ನೇ ತಿಂದುಹಾಕುವ ಅನಿಷ್ಟ ಘಟನೆಯಿದು.

ಪ್ರಪಂಚದ ನಾನಾ ದೇಶಗಳಲ್ಲಿ ಹೆರಿಗೆ ಕಾಲದಲ್ಲಿ ಸಾಯುವ ಸ್ತ್ರೀಯರ ಸಂಖ್ಯೆಯನ್ನೂ ಭಾರತದಲ್ಲಿ ನಡೆಯುವ ಅದೇ ಸಂಖ್ಯೆಗೆ ಅದನ್ನು ಹೋಲಿಸಬಹುದು.

ಹಾಲೆಂಡ್ ೩.೪; ಫ್ರಾನ್ಸ್ ೩.೫; ಸ್ವೀಡನ್ ೩.೬; ಡೆನ್ಮಾರ್ಕ್ ೩.೬; ನಾರ್ವೆ ೩.೮; ಇಟಲಿ ೩.೮; ಜಪಾನ್ ೩.೮; ಫಿನ್‌ಲೆಂಡ್ ೪.೧; ಇಂಗ್ಲೆಂಡ್ ಮತ್ತು ವೇಲ್ಸ್ ೪.೦; ಸ್ವಿಟ್ಜರ್ಲೆಂಡ್ ೪.೪; ನ್ಯೂಜೀಲೆಂಡ್ ೪.೪; ಸ್ವತಂತ್ರ ಐರ್ಲೆಂಡ್ ೪.೮; ಆಸ್ಟ್ರೇಲಿಯ ೫.೫; ಸ್ಕಾಟ್ಲೆಂಡ್ ೬.೬; ಅಮೆರಿಕ ಸಂಸ್ಥಾನಗಳು ೬.೬; ಮದರಾಸು ಪ್ರಾಂತ್ಯ ೧೫.೮; ಮದರಾಸು ನಗರ ೧೬.೬; ಅಸ್ಸಾಮಿನ ಟೀ ತೋಟಗಳು ೪೩.೦; ಅಂತೂ ಭಾರತದಲ್ಲಿ ಸರಾಸರಿ ೨೪.೫.

ಎಷ್ಟು ಅಪರಿಮಿತವಾಗಿ ಸ್ತ್ರೀಯರು ಹೆರಿಗೆ ಕಾಲದಲ್ಲಿ ಸಾಯುತ್ತಾರೆ. ಭಾರತದಲ್ಲಿ ವರ್ಷವೊಂದಕ್ಕೆ ಒಟ್ಟು ೨ ಲಕ್ಷ ಮಂದಿ ತಾಯಂದಿರು ಪ್ರಾಣವನ್ನು ಕಳೆದುಕೊಳ್ಳುತ್ತಾರೆ.

೧೯೩೧ರಲ್ಲಿ ನಡೆದ ಜನಗಣತಿಯ ಅಂಕೆಗಳು ಮತ್ತೊಂದು ಅಂಶವನ್ನು ಬೆಳಕಿಗೆ ತರುತ್ತವೆ. ಪ್ರತಿ ಭಾರತೀಯ ಸ್ತ್ರೀಗೂ ಹೆತ್ತ ಮಕ್ಕಳಲ್ಲಿ ತಲಾ ಸರಾಸರಿ ೪ ಮಕ್ಕಳು ಬದುಕುತ್ತಾರೆ. ಮಿಕ್ಕ ಮಕ್ಕಳನ್ನು ಹೆರುವುದನ್ನು ಗಮನಕ್ಕೆ ತಂದುಕೊಳ್ಳದೇ ಒಂದು ಹೆಂಗಸು ನಾಲ್ಕೇ ಸಾರಿ ಹೆರುತ್ತಾಳೆಂದಿಟ್ಟುಕೊಳ್ಳೋಣ. ಅತ್ಯ ಕನಿಷ್ಠ ಪಕ್ಷವನ್ನು ತೆಗೆದುಕೊಂಡರೂ ಒಂದು ಸಾವಿರ ಸ್ತ್ರೀಯರಲ್ಲಿ ನೂರು ಮಂದಿ ಹೆರಿಗೆ ಕಾಲದಲ್ಲಿ ಜೀವವನ್ನು ತೆರುತ್ತಾರೆಂಬುದು ವ್ಯಕ್ತವಾಗುತ್ತದೆ.

ವಿಲಾಯತಿಯಲ್ಲಿ ತಾಯಂದಿರ ರಕ್ಷಣೆ.

ವಿಲಾಯತಿಯಲ್ಲಿ ಹೆರಿಗೆ ಕಾಲದಲ್ಲಿ ತಾಯಂದಿರ ಯೋಗಕ್ಷೇಮವನ್ನು ನೋಡಿಕೊಳ್ಳಲು ಒಂದು ಸಂಸ್ಥೆಯಿದೆ. ಈ ಸಂಸ್ಥೆಯವರು ತಮ್ಮ ಕಣ್ಣಿಗೆ ಬಿದ್ದ ಅಂಶಗಳನ್ನು ಕ್ರೋಢೀಕರಿಸಿ ವಿಲಾಯತಿಯ ಹೆಂಗಸರ ಸ್ತ್ರೀಯರ ಆರೋಗ್ಯ ಭಾಗ್ಯವನ್ನು ಕುರಿತು ಪ್ರಚಾರಮಾಡಿ ಕಂಡ ಲೋಪ ದೋಷಗಳಿಗೆ ತಕ್ಕ ಪರಿಹಾರ ಕ್ರಮವನ್ನು ಕೈಕೊಳ್ಳಲು ಸಾರ್ವಜನಿಕರ ಮತ್ತು ಸರಕಾರದ ಸಂಪೂರ್ಣ ಸಹಾಯ ಸಹಕಾರವನ್ನು ಪಡೆಯಲು ಅವಿಶ್ರಾಂತವಾಗಿ ದುಡಿಯುತ್ತಾರೆ.

ಸಂಸ್ಥೆಗೆ ಸೇರಿದಂತೆ ಹೆರಿಗೆ ಆಸ್ಪತ್ರೆಯೊಂದಿದೆ. ಅಲ್ಲಿ ಹಲವು ಗರ್ಭಿಣಿಯರ ವಿವಿಧ ರೋಗಗಳನ್ನು ಅಮೂಲಾಗ್ರವಾಗಿ ಪರಿಶೀಲಿಸಿ ಅವುಗಳನ್ನು ತಡೆಗಟ್ಟಲು ಯಾವ ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು, ಎನ್ನುವುದನ್ನು ಕಂಡುಹಿಡಿಯುವುದಲ್ಲದೆ, ಇತರರ ಉಪಯೋಗಾರ್ಥವಾಗಿ ಅವುಗಳನ್ನು ಪ್ರಕಟಿಸುತ್ತಾರೆ.

ಅಂತಹ ವಿಚಿತ್ರ ವ್ಯಾಧಿಗಳಲ್ಲಿ ಹೆತ್ತ ಸ್ತ್ರೀಯರಿಗೆ ಬರುವ ಜ್ವರವೊಂದು ಪ್ರಧಾನವೂ ದಾರುಣವೂ ಆದುದು. ಈ ಜ್ವರ ಬಂದವರು ಆ ಜೀವವಾಗಿ ವಾತಜ್ವರ, ಶಿವಿಯಾತನೆ, ಗಂಟಲುಬಾವು ಕೂಳ್ಳುವುದು ಇತ್ಯಾದಿ ರೋಗಗಳಿಗೆ ತುತ್ತಾಗುತ್ತಾರೆ. ಇದಕ್ಕೆ ಕಾರಣವು ಬಹಳ ಸ್ವಾರಸ್ಯವಾಗಿದೆ. ಶಿವಿ, ಮೂಗು ವ್ಯಾಧಿಗಳಿರುವ ದಾದಿಗಳು ಒಬ್ಬ ಸ್ತ್ರೀಯು ಹೆತ್ತಾಗ ಆಕೆಯನ್ನು ನೋಡಿಕೊಳ್ಳುತ್ತಿದ್ದರೆ, ಅವರಿಂದ ಆ ರೋಗ ಕ್ರಿಮಿಗಳು ಹೊರಟು ತುಂಬ ಸೂಕ್ಷ್ಮವಾಗಿರುವ ತಾಯಂದಿರ ಮೈಹೊಕ್ಕು ಜ್ವರವನ್ನುಂಟುಮಾಡುತ್ತವೆಯಂತೆ. ಆದುದರಿಂದ ಹೆತ್ತ ಸ್ತ್ರೀಯನ್ನು ಉಪಚರಿಸುವುದಕ್ಕೂ ಶಿಶೂಷೆ ಮಾಡುವುದಕ್ಕೂ ಸರ್ವ ವಿಧದಲ್ಲಿಯೂ ಆರೋಗ್ಯ, ಶುಚಿ ನಿರ್ಮಲರಾದ ದಾದಿಯರನ್ನು ನಿಯಮಿಸಬೇಕು.

(ವಿ. ಕ.)

ದೃಢಸಂಕಲ್ಪವು ಜನತೆಯಲ್ಲಿದ್ದರೆ ಸಮಾಜೋನ್ನತಿಯು ಬೇಗನೆ ಆಗುವುದು.

(ಶ್ರೀಮತಿ ಶ್ಯಾಮಕುಮಾರಿ ನೆಹರು ಅವರ ಲೇಖನದ ಸಾರಾಂಶ).

ಸಮಾಜದಲ್ಲಿ ಕಾಲಕ್ಕೆ ತಕ್ಕಂತೆ ಅನೇಕ ಪರಿವರ್ತನೆಗಳು ಆಗುತ್ತಿವೆ. ಆದರೆ ಪ್ರತಿಯೊಂದು ನವಸುಧಾರಣೆಯ ಸಮಾವೇಶದಲ್ಲಿ ಅದರ ಯುಕ್ತಾಯುಕ್ತತೆಯ ವಿಷಯ ಜನರಲ್ಲಿ ಭಿನ್ನಾಭಿಪ್ರಾಯಗಳೂ ಸಂಶಯಗಳೂ ಇದ್ದೇ ಇರುತ್ತವೆ. ಇದೇ ನಮ್ಮ ಸಮಾಜವು ನಿಮಿಷಕ್ಕೊಂದು ಹಿಮ್ಮುಂದಿಯನ್ನು ಹಾರಿಗೆ ತರಲು ಕಾರಣವೆಂದು ಹೇಳಬಹುದು. ಈ ವಿಚಿತ್ರ ವರ್ತನೆಯು ನಮ್ಮಗಳ ಸುಧಾರಣೆಗಾಗಿಯೋ ಅಥವಾ ಇತರ ಜಾತಿಗಳನ್ನು ಮೇಲಕ್ಕೆತ್ತಿ ಅವುಗಳ ಪತನವಾಗದಂತೆ ಅವುಗಳನ್ನು ಕಾಪಾಡಲೋಸುಗವೋ ಎಂಬುದನ್ನು ತಿಳಿಯ ಬೇಕಾದರೆ ಜಾತಿಮತಗಳ ಮುಖ್ಯವಾದದ ಕುರಿತು ಕೆಲವು ಸಂಗತಿಗಳನ್ನು ತಿಳಿಯುವುದು ಅವಶ್ಯಕ.

ಪ್ರಸ್ತುತ ಹಿಂದೂದೇಶದಲ್ಲಿ ಅನೇಕಾನೇಕ ಜಾತಿಗಳೂ ಮತಗಳೂ ಪ್ರಚಾರದಲ್ಲಿವೆ. ಅದ್ದರಿಂದ ಅವುಗಳ ವಿಷಯ ಸ್ವಲ್ಪ ಗಮನವಿಟ್ಟರೆ ಇದರ ಮರ್ಮವು ಕೆಲಮಟ್ಟಿಗೆ ತಿಳಿದುಕೊಂಡಂತಾಗುವುದು. ಹಿಂದೂದೇಶದಲ್ಲಿರುವ ಎಲ್ಲಾ ಮತಗಳಲ್ಲಿ ಹಿಂದೂ ಮುಸ್ಲಿಂ, ಮತ್ತು ಕ್ರೈಸ್ತ ಇವು ಮೂರು ಶ್ರೇಷ್ಠವಾದವುಗಳು. ಒಂದೊಂದೇ ಮತದ ವಿಷಯವಾಗಿ ಹೇಳುವುದಾದರೆ ಹಿಂದೂಮತದಲ್ಲಿಯೇ ನಾಲ್ಕು ಭಾಗಗಳಿವೆ. ಅವುಗಳಿಗೆ ವರ್ಣಗಳೆಂದು ಹೆಸರು. ಬ್ರಾಹ್ಮ, ಕ್ಷತ್ರಿಯ, ವೈಶ್ಯ ಶೂದ್ರ, ಇವುಗಳೇ ಕಡೆಗೆ ಅನೇಕ ಕವಲುಗಳಾಗಿ ಒಡೆದು ಭೂಲೋಕದಲ್ಲಿ ಎಷ್ಟು ಮಂದಿ ಹಿಂದೂಗಳಿದ್ದಾರೆಯೋ ಅಷ್ಟೇ ಜಾತಿಗಳಿರಬಹುದೆಂದು ಕಾಣುತ್ತದೆ. ಎಷ್ಟರ ಮಟ್ಟಿಗೆಂದರೆ, ಹಿಂದೂದೇಶದ ಉತ್ತರ ದಿಕ್ಕಿನಲ್ಲಿರುವ ಬ್ರಾಹ್ಮಣನೂ, ಹಿಂದೂದೇಶದ ದಕ್ಷಿಣದಲ್ಲಿರುವ ಬ್ರಾಹ್ಮಣನೂ ತಾವು ಬೇರೆ ಬೇರೆ ಪಂಗಡದವರೆಂದು ಹೇಳಿಕೊಂಡದ್ದೂ ಉಂಟು. ಹಿಂದೂ ಎಂಬ ಒಂದೇ ಜಾತಿಯಲ್ಲಿ ಇಷ್ಟು ವಿಭಾಗಗಳಿದ್ದು ಅವರಲ್ಲಿಯೂ ಐಕ್ಯಮತ್ಯವಿಲ್ಲದಿದ್ದಾಗ ಬಾಕಿ ಜಾತಿಗಳೊಡನೆ ಐಕ್ಯರಾಗಿರುವುದು ಸಾಧ್ಯವೇ? ಅಸ್ಪೃಶ್ಯತಾ ನಿವಾರಣೆಯನ್ನು ಮಾಡಲು ಟೊಂಕಕಟ್ಟಿರುವ ನಾವು ನಮ್ಮಲ್ಲಿರುವ ಅಸ್ಪೃಶ್ಯತೆಯನ್ನು ಕಳೆಯಲಾರೆವೆಂದರೆ ಅದೆಷ್ಟು ಹಾಸ್ಯಾಸ್ಪದ. ನಿಜವಾಗಿಯೂ ಅಸ್ಪೃಶ್ಯರಾದವರನ್ನು ಮುಟ್ಟಿ ಅಸ್ಪೃಶ್ಯರಲ್ಲದವರನ್ನು ಅಸ್ಪೃಶ್ಯರೆಂದು ಹೇಳಿ ಅವರನ್ನು ನೋಯಿಸುವುದು ಇದೆಂತಹ ವಿಚಿತ್ರ ನ್ಯಾಯ?

ಸಮಾಜದಲ್ಲಿ ಸರಿಯಾದ ಸ್ಥಾನಮಾನಗಳು ಸಿಗದಿದ್ದಲ್ಲಿ ಮನುಗಾ ಧರ್ಮವೇ ಬೇಕೆಂದು ಪರಿಜನರಿಗೆ ಉಸುರಕೊಡಗಿದ್ದಾರೆ. ಇದು ಹಿಂದೂಧರ್ಮಕ್ಕೆ ಲಾಂಛನವಲ್ಲವೆ?

ವಿದ್ಯಾಭ್ಯಾಸವೇ ಜಾತೀಯತೆಯಲ್ಲಿ ಸಮಾನತೆಯನ್ನು ಕೊಡುವುದೆಂದು ಹೇಳಿದರೆ ಅಪರಾಧವಾಗದು. ಇಂದು ಗಂಡಸರಂತೆ ಹೆಂಗಸರೂ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಪಡೆಯುತ್ತಿರುವರು. ಮತ ಜೀವನದ ಸಲುವಾಗಿ ಹುಡುಗರೂ, ಸಮಾಜದಲ್ಲಿ ಸರಿಸಮಾನತೆಯನ್ನು ತಾಳಲು ಹೆಂಗಸರೂ ಶಾಲೆಗೆ ಹೋಗಬಾರದೆಂದು ಹೇಳಬೇಕು. ಆದರೆ ಸ್ತ್ರೀ ವಿದ್ಯಾಭ್ಯಾಸವು ಇನ್ನೊಂದು ಹೊಸ ಮಾರ್ಗವನ್ನು ತಾಳಿದೆಯೆಂದು ಮಾತ್ರ ಮರೆಯಬೇಡಿ. ಈಗಿನ ಕಾಲಗಳಲ್ಲಿ ಮದುವೆಯಾಗಬೇಕಾದರೆ ವಧುವು ವಿದ್ಯಾವಂತಳಾಗಬೇಕು. ಆದ್ದರಿಂದಲೇ ವಿಧವೆಯರ ಸಂಖ್ಯೆಯು ಅಧಿಕ ಗಮನವಿತ್ತರೆ ತುಂಬಾ ಅಸಂತೋಷವಾಗುತ್ತದೆ. ಶಾರ್ದಾ ದಳ್ಳಿಯರು ಬಹು ಪ್ರಯಾಸಪಟ್ಟು ಜನತೆಯ ಬುದ್ಧಿವಿಹೀನತೆಯನ್ನು ತೆಗೆದ ನಂತರ ಶಾರದಾ ಬಿಲ್ಲನ್ನು ಪಾಸುಮಾಡಿದರು. ಹುಡುಗಿಗೆ ೧೪ ವರ್ಷದ ನಂತರವೂ ಹುಡುಗನಿಗೆ ೧೮ ವರ್ಷದ ನಂತರವೂ ಮದುವೆಯಾಗಬೇಕೆಂದಾಯಿತು. ಆದರೆ ದೇಶದ ಪ್ರಗತಿಯು ಸುಧಾರಿತವಾಗಲಿಲ್ಲ. ಈ ಶಾಸನವನ್ನು ಯಾರೂ ಮನ್ನಿಸಿದ್ದಿಲ್ಲ. ಕೆಳಗೆ ಕೊಟ್ಟಿರುವ ಪಟ್ಟಿಯು ೧೯೩೧ರಲ್ಲಿರುವ ವಿಧವಾ ಹುಡುಗಿಯರ ಸಂಖ್ಯೆಯನ್ನು ಸಮರ್ಥಿಸುತ್ತದೆ:—

ವಯಸ್ಸು.	ವಿಧವೆಯರು.
೦—೧	೧೫೧೫
೧—೨	೧೭೮೫
೨—೩	೩೪೮೫
೩—೪	೯೦೭೬
೪—೫	೧೫೦೧೯
೫—೧೦	೧೦೫೪೮೨
೧೦—೧೫	೧೮೫೩೩೯

(ಎಲ್ಲಾ ಜಾತಿಗಳಲ್ಲಿರುವ ವಿಧವೆಯರ ಸಂಖ್ಯೆಯಿದು ಕೇವಲ ಹಿಂದೂಜಾತಿಯವುಗಳಲ್ಲ)

ಮಹಮ್ಮದೀಯರಲ್ಲಿ ಅಷ್ಟೊಂದು ವಿಭಾಗಗಳಿಲ್ಲದಿದ್ದರೂ ನೋಡುತ್ತಿದಲು ಕೇವಲ ಎರಡು ತಂಡಗಳಿದ್ದವು. (೧) ಶಿಯಾ (೨) ಸುನ್ನಿ. ಕಡೆಗೆ ಇವುಗಳಲ್ಲೂ ಭಿನ್ನ ಭಿನ್ನ ವಿಚಾರಗಳು ತಲೆದೋರಿ, ಬೇರೆ ಬೇರೆ ಜಾತಿಗಳು ಉಂಟಾದುವು. ಅವುಗಳಲ್ಲಿಯೂ ಅಸ್ಪೃಶ್ಯರೆಂಬ ಒಂದು ಪಂಗಡವಿದೆ. ಉಚ್ಚ ತರಗತಿಯವರು ಅವರೊಡನೆ ಒಂದೇ ಪಂಕ್ತಿಯಲ್ಲಿ ಕುಳಿತು ಉಣ್ಣುವುದಿಲ್ಲ; ತಿನ್ನುವುದಿಲ್ಲ. ಹೆಚ್ಚೇಕೆ ಅವರನ್ನು ಮುಟ್ಟುವುದೂ ಇಲ್ಲ. ಧರ್ಮವು ಎಲ್ಲರೂ ಅಣ್ಣತಮ್ಮಂದಿರಂತೆ ಇರಬೇಕೆಂದು ಹೇಳಿದರೂ ಹಿಂದೂಗಳ ಗಾಳಿ ಬೀಸಿಯೋ ಏನೋ ಅವರಲ್ಲೂ ಈ ತರದ ಭೇದಗಳುಂಟಾದುವು. ಮುಸ್ಲಿಮರಲ್ಲಿ ಈಗ ಉಂಟಾದ ಸಮಾಜಸುಧಾರಣೆಯೆಂದರೆ ಘೋಷಾ ಪದ್ಧತಿಯನ್ನು ತ್ಯಜಿಸಿದ್ದು. ಈಗಲೂ ಹಲವರು ಘೋಷಾಪದ್ಧತಿಯು ಇರಲೇ ಬೇಕೆಂದು ಹೇಳುತ್ತಾರೆ. ಧರ್ಮದಲ್ಲಿ ಅದನ್ನು ಸಾರಿದೆ ಎಂದು ಹೇಳುವರವರು. ಆದರೆ, ವಿಚಾರಿಸಿದ್ದಲ್ಲಿ ಘೋಷಾ ಪದ್ಧತಿಯು ಅದರಲ್ಲಿ ಹೇಳಿರಲಿಲ್ಲ. ಅದೆಲ್ಲವೂ ಸಮಯದ ವೈಚಿತ್ರ್ಯದಿಂದ ಉಂಟಾದ ಘೋರ ಪದ್ಧತಿ. ಆದರಿಂದಾಗಿಯೇ ಮುಸ್ಲಿಂ ತರುಣಿಯರು ಸಮಾಜದಲ್ಲಿ ಬಹಳೇ ಹಿಂದುಳಿಯಬೇಕಾಯಿತು. ಅದೇ ಅವರಿಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಡಲು ತಡೆಗಟ್ಟಿತು. ಈಗಲೂ ಸರಿಯಾಗಿ ವಿದ್ಯಾಭ್ಯಾಸವನ್ನು ಪಡೆದ ಮುಸ್ಲಿಂ ತರುಣಿಯರು ಅತೀ ವಿರಳ. ಆದರೆ ಇತ್ತೀಚೆಗೆ ಹಾರಿಗೆ ತಂದ ಕಾನೂನುಗಳು ಮಹಮ್ಮದೀಯರನ್ನು ಕೆಳಗಿನ ಅಂತಸ್ತಿಗೆ ದೂಡುತ್ತಲಿವೆ. ಕಾರಣ, ಸರಕಾರದವರು ಜಾತಿ ಪಕ್ಷಪಾತವನ್ನಿಟ್ಟು ಕೆಲಕ್ಕೆ ಅವರನ್ನು ಸೇರಿಸಿದ್ದೇ ಇದರ ಕಾರಣ. ಆದರೆ ಹಿಂದೂ ತರುಣಿಯರಿಗಿಂತ ಅವರಿಗೆ ಕೆಲವು ಹಕ್ಕುಗಳ ಸ್ವಲ್ಪ ಸ್ವಾತಂತ್ರ್ಯವನ್ನು ಕೊಟ್ಟಿರುವವು. ಮದುವೆಯ ಕಾಲದಲ್ಲಿ, ಗಂಡನು ತ್ಯಜಿಸಿ ಹೋದಾಗ, ಗಂಡನು ಸತ್ತಾಗ, ಅವರು ಸ್ವತಂತ್ರವಾಗಿ ಇರಲು ಯಾರ ಆತಂಕವೂ ಇಲ್ಲ. ಮನಸ್ಸಿದ್ದರೆ ಪುನಃ ಎರಡನೆಯ ಮದುವೆಯನ್ನೂ ಆಗಬಹುದು.

ಕ್ರೈಸ್ತಧರ್ಮವೂ ಒಂದೇಯಾಗಿದ್ದರೂ, ಅವರಲ್ಲೂ ಮೇಲೆ ಹೇಳಿದ ಧರ್ಮಗಳಲ್ಲಿರುವಂತೆ, ಅನೇಕಾನೇಕ ವಿಭಾಗಗಳಿವೆ. ಇವರಲ್ಲಿರುವ ಸಿರಿಯನ್ ಕ್ರೈಸ್ತರು ಹಿಂದೂಗಳಲ್ಲಿರುವ ಉಚ್ಚತರಗತಿಯ ಬ್ರಾಹ್ಮಣರಿಗಿಂತಲೂ ಅವರ ಪದ್ಧತಿಗಳು ಆಚಾರವಿಚಾರಗಳು ಮೇಲೆಂದೇ ಭಾವಿಸಿರುವರು. ಇತರ ಕ್ರೈಸ್ತರನ್ನು ಅವರು ಅಸ್ಪೃಶ್ಯರ ಹಾಗೆಯೇ ಕಾಣುವರು. ಆದರೆ ವಿದ್ಯಾಭ್ಯಾಸದ ಮಟ್ಟಿಗೆ ಆ ಜನಾಂಗವು ಹೆಚ್ಚು ಹೆಸರುವಾಸಿಯನ್ನು ತಾಳಿದೆ. ಅವರಲ್ಲಿಯ ಹೆಂಗಸರೂ ಗಂಡಸರೂ ಉಚ್ಚ ವಿದ್ಯಾಭ್ಯಾಸವನ್ನು ಪಡೆದಿರುವವರಾಗಿದ್ದಾರೆ. ಹೆಣ್ಮಕ್ಕಳು ಹೆಚ್ಚು ಕಲಿಯಬಾರದೆಂಬ ಆ ಕೆಟ್ಟ ಚಾಳಿಯು ಅವರಲ್ಲಿಲ್ಲ. ಇತರ ಎಲ್ಲಾ ಜಾತಿಯ ಹೆಂಗಸರಿಗಿಂತಲೂ ಇವರು ಸಮಾಜದಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿರುವರು. ಆದರೂ, ಹೆಂಗಸರಿಗೂ ಗಂಡಸರಿಗೂ ಸರಿಸಮಾನ ಹಕ್ಕುಗಳಿಲ್ಲ.

ಮೇಲಿನ ವಿಷಯಗಳನ್ನು ಚೆನ್ನಾಗಿ ವಿಮರ್ಶಿಸಿದ್ದಲ್ಲಿ, ಪ್ರತಿಯೊಂದು ಜಾತಿಯಲ್ಲಾಗಲೀ ಅಥವಾ ಎಲ್ಲಾ ಜಾತಿಗಳಲ್ಲೂ ವಿಕಲ್ಪೀತಿಯ ಬದಲಾವಣೆಗಳಾಗಿವೆ. ಮತ್ತೆ ಇವಕ್ಕೆಲ್ಲಾ ಕಾರಣವು ಮನುಷ್ಯನ ಮಾನಸಿಕ ಕಲ್ಪನೆಯು. ಕಾಲಕ್ರಮೇಣ ಈ ಧರ್ಮಗಳೆಲ್ಲವೂ ಮಾಯವಾಗಿ ಜನತೆಯು ಅತೀ ನೀಚ ಧ್ಯೇಯಗಳ ಅನುಸಂಧಾನೆಯನ್ನು ಮಾಡಲಿದೆಯೋ ಎಂದು ಭಾಸವಾಗುತ್ತಿದೆ. ಪಾಶ್ಚಾತ್ಯರ ವಿದ್ಯೆಯೂ ಸಹವಾಸವೂ ನಮ್ಮನ್ನು ವಿಚಾರ ಸಾಮ್ರಾಜ್ಯದಲ್ಲಿ ಮುಳುಗಿಸಿದೆ. ಅದರಿಂದ ಈಗ ಎದ್ದು ಬರುವ ಪ್ರಶ್ನೆಯೆಂದರೆ ಇಷ್ಟೊಂದು ಧರ್ಮಗಳು, ಜಾತಿಗಳು, ನೀತಿಗಳು ನಮಗೆ ಅವಶ್ಯಕವಾದುವುಗಳೇ ಎಂಬುದು. ಮನುಷ್ಯರೆಲ್ಲರೂ ಮನುಷ್ಯರೇ, ಅವರ ಗುಣಗಳು, ಅಭ್ಯಾಸಗಳು, ಪ್ರಾಕೃತಿಕ ಸ್ಥಿತಿಗತಿಗಳು ವಿಕಾರಿಸಿದುವಾಗ ಜಾತಿ, ಧರ್ಮಗಳು ಅವರನ್ನೇಕೆ ಒಬ್ಬರಿಂದ ಇನ್ನೊಬ್ಬರನ್ನು ಬಿಂಗಡಿಸಬೇಕು. ಇನ್ನು ಮುಂದಾದರೂ ಈಗ ಬಂಗವಡೆದ ಭಾಗಗಳು ನಿರ್ನಾಮವಾಗಲಿ, ಭಾವೀ ಸಮಾಜದಲ್ಲಿ ಅದಕ್ಕೆ ಅಸ್ಪದವಿಲ್ಲದಿರಲಿ. ಜನತೆಯ ವಿಭಾಗವು ಅನವಶ್ಯಕ. ಆದರೆ, ಬೇರೆ ಜಾತಿಯವರೆಂದು ಒಬ್ಬರನ್ನು ಇನ್ನೊಬ್ಬರಿಂದ ಪ್ರತ್ಯೇಕಿಸುವುದು ಮೂರ್ಖತನ. ಅದನ್ನು ವಿಶಾಲಮನಸ್ಸಿನಿಂದ ಎಲ್ಲರೂ ತ್ಯಜಿಸಲಿ.

ಪ್ರಸ್ತುತ ಮದುವೆಗಳಿಂದಾಗಿಯೋ ಅಥವಾ ದೇವಸ್ಥಾನಗಳನ್ನು ಅಸ್ಪೃಶ್ಯರಿಗೆ ತೆರೆದೂ ಅಥವಾ ಮಹಮ್ಮದಿಯರನ್ನು ನಿಜವಾದ ಇಸ್ಲಾಮಿಕ ಧರ್ಮವನ್ನು ಅನುಸರಿಸಲು ಹೇಳಿಯೋ ಅಥವಾ ಕ್ರೈಸ್ತರನ್ನು ಕ್ರೈಸ್ತನ ಪವಿತ್ರ ಧರ್ಮದ ನಿಜವಾದ ಅನುಸರಣೆಯನ್ನು ಮಾಡ ಹೇಳಿಯೋ ಅಥವಾ ಎಲ್ಲಾ ಧರ್ಮಗಳ ಮೂಲತತ್ವಗಳನ್ನು ತೆಗೆದು ಅವುಗಳನ್ನು ಅನುಸರಿಸಿಯೇ ಜನತೆಯಲ್ಲಿ ಐಕ್ಯವನ್ನು ಉಂಟುಮಾಡಬೇಕೆಂದು ಸಾಧಿಸುವರು. ಆದರೆ ಇವೆಲ್ಲವುಗಳೂ ತೀರಾ ಕಷ್ಟಜನ್ಯವಾದ ಸಾಧನಗಳು.

ಹಿಂದೂ ದೇಶದ ಮಹಿಳೆಯರು ಇದರಲ್ಲಿ ಹೆಚ್ಚಿನ ಕೆಲಸವನ್ನು ಮಾಡಬೇಕಾಗಿರುವುದು. ಧೀರರಾಗಿ ರಣ ಗಂಡುಗಲಿಗಳಂತೆ ಮುಂದೊತ್ತಿ ಬಂದು ತಮ್ಮ ಸಂಶಯಗಳನ್ನು ಬದಿಗೊತ್ತಿ ಸ್ಥಿರ ಮನಸ್ಸಿನಿಂದ ಕೆಲಸಕ್ಕೆ ಕೈಹಚ್ಚಬೇಕು. ಪುರುಷರಷ್ಟೇ ನಾವೂ ದೇಶದ ಶ್ರೇಯೋಭಿವೃದ್ಧಿಗೆ ಕಾರಣರು ಅವರಷ್ಟೇ ಹಕ್ಕುಗಳು ನಮಗಿವೆ ಎಂಬುದನ್ನು ಮೊದಲಾಗಿ ಗಳಿಸಬೇಕು. ಸರಿಯಾದ ವಿದ್ಯಾಭ್ಯಾಸವನ್ನು ಪಡೆಯಲು ಪ್ರಯತ್ನಿಸಬೇಕು, ಮದುವೆಯ ವಿಷಯದಲ್ಲಿ ಸ್ತ್ರೀಗೆ ಪೂರ್ಣ ಸ್ವಾತಂತ್ರ್ಯವಿರಬೇಕು. ತನಗೆ ಇಚ್ಛಿತನಾದ ಪುರುಷನನ್ನೇ ಮದುವೆಯಾಗುವ ಹಕ್ಕನ್ನು ಸಂಪಾದಿಸಬೇಕು. ಪುಸ್ತಕದಲ್ಲಿ ಇವುಗಳೆಲ್ಲವುಗಳನ್ನು ಬರೆದಿಡುವುದು ಮಾತ್ರದಲ್ಲಿ ಕಾರ್ಯತಃ ಮಾಡಿ ತೀರಿಸಬೇಕು. ಮಹಮ್ಮದಿಯರಲ್ಲಿರುವ ಘೋಷಾ ಪದ್ಧತಿಯನ್ನು ಸಂಪೂರ್ಣವಾಗಿ ತೊಲಗಿಸಬೇಕು. ಸಮಾಜದಲ್ಲಿ ಸ್ತ್ರೀಯರಿಗೆ ಪುರುಷರಷ್ಟೇ ಹಕ್ಕು ಇರುವಂತೆ ಸಾಧಿಸಬೇಕು. ಇಷ್ಟೆಲ್ಲವನ್ನು ಸಾಧಿಸಿದ್ದರೆ ಸಮಾಜದ ಉದ್ಧಾರವು ನಿಂದಿತವಾಗಿಯೂ ಆಗಲಿಕ್ಕಿಲ್ಲವೆಂದು ನಾನು ಮನಮುಟ್ಟಿ ಹೇಳುತ್ತೇನೆ.

ಐದನೇ ಪುಟದಲ್ಲಿರುವ 'ಮಹಿಳಾ ಸಮಾಜ' ವನ್ನು ಓದಲು ಮರೆಯಬೇಡಿರಿ.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S No. 495/35

ಸಂಜೀವಿ ಹೆಂಗ್ಸು—ವಾದಿಳು

ಮತ್ತು

ಶೀನಗಿರಿ ಕಮ್ತಿ ಕೂಡಾ 8 ಜನರು—ಪ್ರತಿವಾದಿರು

ಇವರೊಳಗೆ

ಸದ್ರಿ ದಾವೆಯ ಪ್ರತಿವಾದಿರು

2 ಮಾಧವ ಕಮ್ತಿ, 8. ವಾಸುದೇವ ಕಮ್ತಿ—ವಿಟ್ಠಪ್ಪ ಕಮ್ತಿರ ಮಕ್ಕಳು

ಕಾರ್ಕಳ ತಾಲ್ಕು ಬೋಳ ಕಸಬಾ ಗ್ರಾಮದ ಕೆಂಚಿನಡ್ಕ ಎಂಬಲ್ಲಿರುವವರು—ಇವರಿಗೆ

ನಿಮ್ಮ ಕುಟುಂಬದ ಹಕ್ಕಿನ ಬಾಬ್ತು ಪ್ಲೈಂಟಿನಲ್ಲಿ ಕಾಣಿಸಿದ ಆಸ್ತಿಗಳ ಜವಾಬು ದಾರಿಯಿಂದ ತನಗೆ ಗತ ವ ಮುಂದಿನ ಆಕ ನಾರ್ಕ ಕೊಡಿಸಬೇಕಾಗಿ ಕೇಳಿ ನಿಮ್ಮ ಸಹೋದರ ದಾಮೋದರ ಕಮ್ತಿಯ ವಿಧವೆಯಾಗಿರುವ ಮೇಲೆ ಹೆಸರು ಕಾಣಿಸಿರುವ ವಾದಿಳು ಮೇಲ್ಕಂಡ ಕೋರ್ಟಿನಲ್ಲಿ ದಾವಾದಾಖಲು ಮಾಡಿದ್ದಾಳೆ. ಸದ್ರಿ ದಾವೆಯು ತಾರೀಕು 28—2—1936ಕ್ಕೆ ತನಿಖೆಗೆ ಇಡೋಣಾಗಿದೆ ಆ ದಿವಸ ಬೆಳಿಗ್ಗೆ 11 ಘಂಟೆಗೆ ಕೋರ್ಟಿನ ಮುಂದೆ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗದೆ ಇದ್ದಲ್ಲಿ ಸದ್ರಿ ದಾವೆಯು ನಿಮ್ಮ ಗೈರಹಾಜರಿಯಲ್ಲಿ ತನಿಖೆ ನಡೆದು ತೀರ್ಮಾನಿಸಲ್ಪಡುವುದೆಂಬ ಸಂಗತಿ ಈ ಮೂಲಕ ತಿಳಿಸಿರುತ್ತೇವೆ.

(ಕೋರ್ಟಿನವರ ಹುಕುಂ ಪ್ರಕಾರ)

ಮೊಕ್ಕಾಂ ಕಾರ್ಕಳ, 18—1—1936 } ಇಡ್ಯದ ವಾಸುದೇವಯ್ಯ ಬಿ. ಎ ಬಿ ಎಲ್ ವಾದಿಳ ಕಡೆ ವಕೀಲ್

ಮೂಲವ್ಯಾಧಿಯ ನೋವನ್ನೇಕೆ ಸಹಿಸಬೇಕು?

ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಝಾಂಬಕನ್ನು ಪಯೋಗಿಸಿರಿ.

ದಿನಂಪ್ರತಿ ಮೂರು ಸಲ ಝಾಂಬಕನ್ನು ತಿಕ್ಕಿದರೆ ಮೂಲವ್ಯಾಧಿಯ ನೋವು ವಾಸಿಯಾಗುವುದು ಭಯಂಕರವಾದ ನೋವು ಝಾಂಬಕನ್ನು ತಾಗಿಸಿದೊಡನೆ ಮಿಂಚಿನಂತೆ ಶಮನವಾಗುವುದು. ಒತ್ತೊತ್ತಾಗಿ ಮುದುಡಿದ್ದ ನರಗಳನ್ನು ಬಿಡಿಸಿ ಉಬ್ಬಿದ ಭಾಗಗಳ ರಕ್ತವನ್ನು ಹೊರಗೆಡವಿ ಶಾಂತಿಯನ್ನೀಯುವುದು. ಮೂಲವ್ಯಾಧಿಯು ನಿಮ್ಮನ್ನು ಕಾತರರನ್ನಾಗಿ ಮಾಡ ದಿರಲಿ ಇದೀಗಲೆ ಝಾಂಬಕನ್ನು ಕೊಂಡುಕೊಳ್ಳಿರಿ. ಮೂಲವ್ಯಾಧಿಗೆ ಅಲ್ಲದೆ ಇನ್ನಿತರ ಚರ್ಮ ವ್ಯಾಧಿಗಳಿಗೆ ಝಾಂಬಕ್ ದಿವ್ಯೌಷಧ ಎಲ್ಲಾ ಔಷಧಿ ಅಂಗಡಿಗಳಲ್ಲಿ ಮಾರಾಟಕ್ಕೆ ಸಿಗುತ್ತಿದೆ ದರ ರೂಪಾಯಿ 1 ಅಥವಾ ರೂ. 1—4—0

ಇದರಲ್ಲಿ ಜಂತುಗಳ ಕೊಬ್ಬಿನ ಮಿಶ್ರವಿಲ್ಲ

ಝಾಂಬಕ್

Zam-Buk



HASAG

ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು. ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಲ್ಲವೂ ಹೊಸ ಮಾದರಿ ಈಗಾಗಲೆ ಸಾವಿರ ಗಟ್ಟಳೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ. ಹಸಾಗ್, ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ. ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR



ಎಫಾರ್

ಎಂಬುದು ಇನ್ನೊಂದು ಅಮೋಘ ದೀಪ ಇದು ಎಲ್ಲರ ಮೆಚ್ಚಿಗೆಗೆ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಗೃಹಸ್ಥರುಗಳಿಗೆ ಬಹಳ ಯೋಗ್ಯವಾಗಿರುವುದು

Sole Representatives F Racek & Co.,

Bombay	Calcutta	Madras	Colombo
P O Box	P O Box	P O Box	P O Box
906	121	1.5	389

For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

Estimates Submitted without obligation

ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.

Electric fans, Household appliances, Table lamps,

Very Attractive chandeliers and other fittings

Everything in Electricity

Goods supplied on approval and guarantee of Manufacture

First class Goods First class Work First class Attendance

An Enquiry at our Electrical Show Rooms will cost you Nothing

And

Will gain You excellent Service.

The Canara Public Conveyance Company Ltd., Kodialbail, Mangalore.

ಹರಿಜನರು ಇಸ್ಲಾಂ ಮತವನ್ನು ಸೇರುವರು.

೩೦೦ ವರ್ಷಗಳ ಹಿಂದಿನ ಭಾರತೀಯ ಜಮಖಾನು!

ಮರಗಳಿಗೆ ಬಾಟ್ಲಿಯ ಆಹಾರ. ಸಣ್ಣ ಲಂಚಗಳಿಂದ ಪೌಂಡು ೨೭,೦೦೦ ಗಳಿಸಿದುದು.

ಬೆಂಗಳೂರಿನ ಭೂಮಸ್ವಾಮಿಕರ ಸಂಘ.

ಬತ್ತದ ಬೆಲೆಯು ಬಹಳವಾಗಿ ಇಳಿದುದರಿಂದ, ಕಂದಾಯವನ್ನು ೩೩೬ ಸಲ ಇಳಿಸಬೇಕಾಗಿ ಸರಕಾರದವರೊಡನೆ ಮನವಿಮಾಡಿಕೊಳ್ಳಲು ಬೆಂಗಳೂರಿನ ಭೂಮಸ್ವಾಮಿಕರ ಸಂಘದ ಸಂಪತ್ತಿನಲ್ಲಿ ನಿರ್ಧರಿಸಲಾಗಿದೆ.

ಮನ್ನಾರಗುಡಿ ಮುನಿಸಿಪಾಲಿಟಿಯು

ಉತ್ಪತ್ತಿಯು ಬಹಳವಾಗಿ ಇಳಿದುದರಿಂದ, ಅದನ್ನು ಹೆಚ್ಚಿಸಲು ಅಸ್ತಿಯುಗಳ ಮೇಲೆ ಮುನ್ಸಿಪಲ್ ಕಂದಾಯವನ್ನು ಹೆಚ್ಚಿಸಬೇಕಾಗಿ ಮದರಾಸು ಸರಕಾರವು ಸೂಚನೆ ಕೊಟ್ಟಿರುತ್ತದೆ.

ಮಲಬಾರು ಜಿಲ್ಲಾ ಬೋರ್ಡಿನ ಶಾಲೆಗಳಲ್ಲಿ ಕೈಗಾರಿಕೆಗಳನ್ನು ಕಲಿಸಲಾಗುವುದು.

ಮಲಬಾರು ಜಿಲ್ಲಾ ಬೋರ್ಡಿನ ಬಜೆಟಿನಲ್ಲಿ, ಅದರ ಅಧಿಕಾರದಲ್ಲಿರುವ ಶಾಲೆಗಳಲ್ಲಿ ಕೈಗಾರಿಕೆಗಳನ್ನು ಕಲಿಸಲು ಹಣ ವ್ಯಯಿಸಲು ಗೊತ್ತುಮಾಡಿರುತ್ತದೆ. ಪ್ರಕೃತಕ್ಕೆ ಇದನ್ನು ಮೂರುತಿ ಬಗ್ಗೆ ನಡೆಸಲಾಗುವುದು. ಸಫಲವೆಂದು ಕಂಡಲ್ಲಿ, ಬೋರ್ಡು ಅದರ ಎಲ್ಲಾ ಶಾಲೆಗಳಲ್ಲಿ ಕೈಗಾರಿಕೆಗಳಿಗೆ ಹೆಚ್ಚಿನ ಎಡೆಸಿಕ್ಕುವಂತೆ ವ್ಯವಸ್ಥೆಮಾಡುವರಾಗಿ ತಿಳಿದುಬರುತ್ತದೆ.

ಜಸ್ಟಿಸ್ ಪಾರ್ಟಿಯವರು ಕಾಂಗ್ರೆಸ್ ಸಂಗಡವನ್ನು ಸೇರಲು ಸಿದ್ಧರಾಗಿದ್ದಾರೆ.

"ಕಾಂಗ್ರೆಸ್ ಸಂಗಡವು ಸರಕಾರದ ನಿಯಮಿತ ಪಟ್ಟಿಯ ಪ್ರಕಾರ ಉದ್ಯೋಗಗಳು ಜನರಲ್ಲಿ ಹಂಚುವ ಯೋಜನೆಗೆ ಒಪ್ಪಿದರೆ ನಾನು ಕಾಂಗ್ರೆಸ್ ಪಕ್ಷವನ್ನು ಸೇರುವೆನೆ"ಂದು ಜಸ್ಟಿಸ್ ಪಾರ್ಟಿಯ ದಿವಾನ್ ಬಹದ್ದೂರ್ ಸಿ. ನಟೇಶ ಮುದಲಿಯಾರರು ಒಂದು ಭಾಷಣದಲ್ಲಿ ಸೂಚಿಸಿದರು.

ಸತ್ಯಮೂರ್ತಿಯವರ ಭಾಷಣ.

ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಸತ್ಯಮೂರ್ತಿಯವರು "ಪ್ರಜಾಪ್ರಭುತ್ವದ ರಾಜಘೋಷಣೆ ಮತ್ತು ಅವುಗಳಲ್ಲಿ ಜನರ ಸ್ಥಾನ" ಎಂಬುವದರ ಕುರಿತು ಭಾಷಣ ಮಾಡಿದರು.

ಹರಿಜನರು ಇಸ್ಲಾಂ ಮತವನ್ನು ಸೇರುವರು.

ತಿನ್ನವೆಲ್ಲಿಯ ಹರಿಜನರ ವಿವಿಧ ಸಂಗಡದವರು ಪರಿಷತ್ತು ಅಲ್ಲಿನ ಮಿ. ಶೇಕ ದಾನಮ್ಮರ ಬಂಗ್ಲೆಯಲ್ಲಿ ಸೇರಿ, ಹಿಂದುಗಳು ತಮಗೆ ಇನ್ನೂ ಎರಡು ತಿಂಗಳ ಸಮಯದಲ್ಲಿ ಸರಿಸಮಾನವಾದ ಹಕ್ಕುಗಳನ್ನು ಕೊಡದಿದ್ದಲ್ಲಿ, ತಾವು ಮುಸ್ಲಿಮ ಮತಕ್ಕೆ ಸೇರಬೇಕೆಂಬ ನಿರ್ಧಾರ ಮಾಡಿರುತ್ತಾರೆ.

ಕ್ವೆಟ್ಟಾ ನಗರದ ಪುನರ್ರಚನೆ.

೧೯೩೬-೩೭ರಲ್ಲಿ ಕ್ವೆಟ್ಟಾ ನಗರದ ಪುನರ್ರಚನೆಗೆ ೧ ಕೋಟಿ ರೂಪಾಯಿ ವ್ಯಯಿಸಲಾಗುವುದೆಂದು ತಿಳಿದುಬರುತ್ತದೆ. ಕ್ವೆಟ್ಟಾನಗರದ ಸಂಪೂರ್ಣ ಪುನರ್ರಚನೆ ಸಾಧಾರಣ ೧೦ ಕೋಟಿ ರೂ. ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ. ಈ ವ್ಯಯವನ್ನು ಅನೇಕ ವರ್ಷಗಳಿಗೆ ಹಂಚಿ ಹಾಕಲ್ಪಡುವುದೆಂದೂ, ಹಿಂದೂದೇಶದ ಸರಕಾರವು ಈ ಕಾರ್ಯಕ್ಕೆ ಸಾಲ ಕೋರುವುದಿಲ್ಲವೆಂದೂ ತಿಳಿದುಬಂದಿದೆ.

ಸಣ್ಣ ಲಂಚಗಳಿಂದ £ 27,000 ಗಳಿಸಿದುದು.

ಮಿ. ರಿಚ್ಚಾರ್ಡ್ ಹಚ್ಚಿನ್‌ಸನ್ ಎಂಬವನು ಇಂಗ್ಲಾಂಡಿನ ಲಿವರ್‌ಪೂಲಿನ ಒಂದು ಹೊಟೇಲಿನ ಕಾವಲುಗಾರನು. ಬಂದವರನ್ನು ಸತ್ಕರಿಸುವುದು ಇವನ ಕೆಲಸವಾಗಿತ್ತು. ಅತಿಥಿಗಳು ಇವನಿಗೆ ಸಣ್ಣ ಲಂಚ ಕೊಡುವುದು ರೂಢಿಯಲ್ಲಿತ್ತು. ಈ ಸಣ್ಣ ಲಂಚಗಳಿಂದಲೆ £ 27,000 ಐಶ್ವರ್ಯವನ್ನು ಈತನು ಗಳಿಸಿರುವನಂತೆ ಎಂದರೆ 3½ ಲಕ್ಷ ರೂ. ಈ ಐಶ್ವರ್ಯವನ್ನು ಒಂದು ಸಾರ್ವಜನಿಕ ಸಂಸ್ಥೆಗೆ ಬಿಟ್ಟುಕೊಟ್ಟಿರುವನು.

ಬ್ರಿಟನ ವ್ಯಾಪಾರವು ಪ್ರಗತಿಹೊಂದುತ್ತಿದೆ

ಬ್ರಿಟನಿನ ಬಹಿರ್ ವ್ಯಾಪಾರವು ವಿಶೇಷ ರೀತಿಯಲ್ಲಿ ವೃದ್ಧಿಹೊಂದಿರುತ್ತದೆಂದೂ, ಇನ್ನೂ ಬರೀ ೫ ವರ್ಷದಲ್ಲಿ ಈ ದೇಶವು ಈಗಿರುವ ವ್ಯಾಪಾರದ ಮುಗ್ಗಟ್ಟಿನಿಂದ ಸಂಪೂರ್ಣ ಹೊರಗಾಗುವುದೆಂದೂ, ಬ್ರಿಟನ ವ್ಯಾಪಾರ ಸಂಘದ ವರದಿ ಹೊರಡಿರುತ್ತದೆ. ಅದರ ಉಕ್ಕಿನ, ಕಬ್ಬಿಣದ, ಇತರ ಲೋಹಗಳೂ, ಯಂತ್ರಗಳ ವ್ಯಾಪಾರವು ದಿನೇ ದಿನೇ ವೃದ್ಧಿಹೊಂದುತ್ತದೆ. ಹಿಂದೂದೇಶದ ಕೆಲವು ರೈಲ್ವೇ ಕಂಪೆನಿಗಳು ಇಲ್ಲಿನ ಕೆಲವು ಇಂಜಿನಿಯರಿಂಗ್ ಸಂಸ್ಥೆಗಳೊಡನೆ ದಾರಾಳ ಆರ್ಡರ್ಸನ್ನು ಕೊಟ್ಟಿರುವರೆಂದು ತಿಳಿದುಬರುತ್ತದೆ.

ಜರ್ಮನಿಯ ಯಂತ್ರಗಳ ವ್ಯಾಪಾರ.

ಹಿಂದೂ ದೇಶದ ಅನೇಕ ರಾಜ್ಯಗಳಿಂದ ಕೈಗಾರಿಕೆಗಳಿಗೆ ಉಪಯುಕ್ತವಾಗುವ ದಾರಾಳ ಜರ್ಮನ ಯಂತ್ರ ಸಾಮಗ್ರಿಗಳಿಗೆ ಆರ್ಡರುಗಳು ಹೋಗಿರುತ್ತವೆಂದು ತಿಳಿದುಬರುತ್ತದೆ. ಇವುಗಳಲ್ಲಿ ಸಿಮೆಂಟ ಫ್ಯಾಕ್ಟರಿ, ವಸ್ತ್ರದ ಗಿರಣಿ, ರಬ್ಬರ್ ಫ್ಯಾಕ್ಟರಿ, ಗಾಜಿನ ಫ್ಯಾಕ್ಟರಿ, ಸಕ್ಕರೆ ಕಾರ್ಖಾನೆಗಳಿಗೆ ಉಪಯುಕ್ತವಾಗುವ ಯಂತ್ರಗಳಿವೆ. ೧೯೩೪ರಲ್ಲಿ ಜರ್ಮನಿಯಿಂದ ಲಕ್ಷೋಪಲಕ್ಷ ರೂ. ಕ್ರಯ ಬಾಳುವ ಯಂತ್ರಗಳನ್ನು ಹಿಂದೂದೇಶವು ಪಡೆಕೊಳ್ಳುವುದು. ಜರ್ಮನಿಯಿಂದ ದಾರಾಳ ಉಕ್ಕು ಹಿಂದೂದೇಶವನ್ನು ಸೇರುತ್ತಿದೆ.

ಹಿಂದೂದೇಶದ ರೈಲ್ವೇ ಕಂಪೆನಿಗಳ ಆದಾಯ.

೧೯೩೫ನೇ ಏಪ್ರಿಲ್ ತಿಂಗಳಿನಿಂದ ಡಿಸೆಂಬರ ತಿಂಗಳ ಅಂತ್ಯದ ವರೆಗೆ ಹಿಂದೂದೇಶದ ರೈಲ್ವೇ ಕಂಪೆನಿಗಳ ಉತ್ಪತ್ತಿಯು ರೂ. ೬೮೯ ಕೋಟಿಯಾಗಿರುತ್ತದೆ. ಇದು ೧೯೩೪ರ ಅದೇ ಸಮಯದ ಉತ್ಪತ್ತಿಗಿಂತ ರೂ. ೬೦ ಲಕ್ಷ ಕಡಿಮೆಯಾಗಿರುತ್ತದೆ. ಇದರಲ್ಲಿ ಸೌತ್ ಇಂಡಿಯನ್ ರೈಲ್ವೇ ಕಂಪೆನಿಯ ಉತ್ಪತ್ತಿಯು ಬಹಳವಾಗಿ ಇಳಿದಿರುತ್ತದೆಂದು ತಿಳಿದುಬರುತ್ತದೆ. ಈ ರೈಲ್ವೇ ಕಂಪೆನಿಗಳು ಚಲಾಯಿಸುವ ಖರ್ಚು ಬಹಳವಾಗಿ ಏರಿರುತ್ತದೆ.

ಮೈಸೂರು ಬೇಂಕಿನ ಆದಾಯ.

೧೯೩೫ನೇ ವರ್ಷದ ಮೈಸೂರು ಬೇಂಕಿನ ಆದಾಯವು ರೂ. ೫,೧೦,೬೩೩ ಆಗಿರುತ್ತದೆ. ಇದಕ್ಕೆ ಗತ ವರ್ಷದ ಉಳಿತಾಯವನ್ನು ಕೂಡಿಸಿದರೆ ಇದು ರೂ. ೫,೮೩,೬೦೩ ಆಗುತ್ತದೆ. ಪಾಲುಗಾರರಿಗೆ ಶೇಕಡಾ ೧೨ರ ಸಲ ಡಿವಿಡೆಂಡನ್ನೂ ೨೦ ಸಲ ಬೋನಸ್ಸನ್ನೂ ಕೊಡುವುದಾಗಿ ನಿರ್ಧರಿಸಲಾಗಿದೆ.

ಮಿ. ಶಾಪುರ್ಜಿ ಶಕ್ಲತ್ತವಾಲರು ದಿವಂಗತರಾದರು.

ಬ್ರಿಟಿಷ ಪಾರ್ಲಿಮೆಂಟಿನ ಮಾಜಿ ಸದಸ್ಯರಾದ, ಪ್ರಸಿದ್ಧ ಭಾರತ ಪುತ್ರರಾದ ಶ್ರೀ ಶಾಪುರ್ಜಿ ಶಕ್ಲತ್ತವಾಲರವರು, ಹೃದಯ ಚಲನೆ ನಿಂತು, ತಮ್ಮ ಲಂಡನಿನ ವಾಸಗೃಹದಲ್ಲಿ ದಿವಂಗತರಾದರು. ಹಿಂದೂದೇಶದ ಪಾರ್ಸಿ ಪ್ರಸಿದ್ಧ ಪುರುಷರು. ೧೯೦೫ರಲ್ಲಿ ಇಂಗ್ಲಾಂಡಿಗೆ ತೆರಳಿ ಅಲ್ಲಿನ ಮಜೂರರ ಮತ್ತು ಸಮತಾವಾದಿಗಳ ಪಕ್ಷದಲ್ಲಿ ಕೆಲಸಮಾಡಿದರು. ೧೯೧೦ರಲ್ಲಿ ಸಹಕಾರ ಚಳವಳದಲ್ಲಿ ಕೈ ಹಾಕಿದರು. ಕೊನೆಗೆ ಬ್ರಿಟನ ಕಮ್ಯುನಿಸ್ಟ ಸಂಗಡದವರಾಗಿ, ೧೯೨೨-೨೩ ೧೯೨೪-೧೯೨೯ ವರೆಗೆ ಬ್ರಿಟನ ಪಾರ್ಲಿಮೆಂಟಿನ ಸದಸ್ಯರಾದರು. ಯಾವಾಗಲೂ, ಹಿಂದೂದೇಶದ ದಣಿಯುವ ಮಜೂರರ ಹಿತ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. ಹಿಂದೂದೇಶದ ಮಜೂರರ ಸಂಘಗಳ ಪ್ರತಿನಿಧಿಗಳಾಗಿ, ಪಾಶ್ಚಾತ್ಯದಲ್ಲಿ ನಡೆದ ಅನೇಕ ಮಜೂರರ ಪರಿಷತ್ತಿನಲ್ಲಿ ಭಾಗವಹಿಸಿರುವರು. ೧೯೨೭ರಲ್ಲಿ ಹಿಂದೂದೇಶಕ್ಕೆ ಬಂದಿದ್ದರು. ಪ್ರಖ್ಯಾತ ಭಾಷಣಕಾರರು, ಒಳ್ಳೆ ಬರಹಗಾರರು. ಇವರಿಗೆ ಹಿಂದೂದೇಶವನ್ನು ಸೇರಲು ಬ್ರಿಟಿಷ ಫೋರಿನ್ ಅಫೀಸಿನವರು ಅಡ್ಡಿ ಹಾಕಿದ್ದರು.

ತಿರುಪುರದಲ್ಲಿ ಬೆಂಕಿ!

ತಿರುಪುರದ ಮುನ್ಸಿಪಲ್ ಹರಿಜನ ಕೊಲೋನಿಯಲ್ಲಿ ಬೆಂಕಿಯುಂಟಾಗಿ ೬೦ ಮನೆಗಳೂ ಕೆಲವು ಮರಗಳೂ ಸಂಪೂರ್ಣ ಸುಟ್ಟು ಬೂದಿಯಾಗಿವೆ. ಬೆಂಕಿಯು ಹತ್ತಿರವಿರುವ ಮುನ್ಸಿಪಲ್ ಕಟ್ಟಡಕ್ಕೂ ಇತರ ಕಟ್ಟಡಗಳಿಗೂ ಹರಡುವ ಸಂಭವವಿತ್ತು. ಆದರೆ ಮುನ್ಸಿಪಲ್ ನೀರಿನ ಲೋರಿಗಳಿಂದಾಗಿ ಈ ಬೆಂಕಿಯನ್ನು ನಂದಿಸಲಾಯಿತು. ಓರ್ವ ಹರಿಜನ ಹುಡುಗಿಯು ಮೃತಳಾಗಿರುವಳು.

ಅಲ್ಲಹಾಬಾದ ಜಿಲ್ಲೆಯ ಡಿಪ್ರೆಸ್ಡ್ ಕ್ಲಾಸು ಸಂಘವು

ತಮಗೂ ಅಲ್ಲಹಾಬಾದಿನಲ್ಲಿ ಸಮ್ಮದಲ್ಲಿ ಮಿ. ಎಂ. ಸಿ. ದಾಜರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಡಿಪ್ರೆಸ್ಡ್ ಕ್ಲಾಸ್ ಪರಿಷತ್ತಿಗೂ ಯಾವತ್ತು ಸಂಬಂಧವಿಲ್ಲವೆಂದು ಠರಾವು ಮಾಡಿರುತ್ತದೆ. ಈ ಪರಿಷತ್ತಿಗೆ ಸುವರ್ಣ ಹಿಂದುಗಳ ಪ್ರೇರಣೆ ಇರುವುದೆಂದು ಇವರ ಭಾವನೆ

300 ವರ್ಷ ಹಿಂದಿನ ಭಾರತೀಯ ಜಮಖಾನು.

ಲಂಡನಿನ ವಿಕ್ಟೋರಿಯಾ ಮತ್ತು ಅಲಬರ್ಟ ಮ್ಯೂಸಿಯಮಿಗೆ, ೩೦೦ ವರ್ಷದ ಹಿಂದಿನ, ಬಹಳ ಕ್ರಯ ಬಾಳುವ, ಸುಂದರವಾದ ಒಂದು ಭಾರತೀಯ ಜಮಖಾನು ಬಂದಿರುತ್ತದೆ. ಈ ಜಮಖಾನು ಹಿಂದೂದೇಶದಲ್ಲಿ ೧೬೩೦ರಲ್ಲಿ ತಯಾರಾದುದೆಂದು ತಿಳಿದುಬರುತ್ತದೆ. ಈಗಲೂ, ಈ ಜಮಖಾನು ಯಾವ ರೀತಿಯಲ್ಲೂ ಹಾಳಾಗಿಲ್ಲವೆಂದೂ ತಿಳಿದುಬರುತ್ತದೆ. ಈ ಜಮಖಾನದಲ್ಲಿರುವ ಚಿತ್ರಗಳನ್ನು ನೋಡಿದರೆ, ಆಗಿನ ಭಾರತೀಯ ಕಲಾ ಜ್ಞಾನವು ಮಹತ್ತರವಾಗಿತ್ತೆಂದೂ ದೃಶ್ಯವಾಗುತ್ತದೆ. ಆಂಗ್ಲೇಯರು ಇದರ ಸೌಂದರ್ಯವನ್ನು ನೋಡಿ ಬೆರಗಾಗಿರುವರು.

ಮರಗಳಿಗೆ ಬಾಟ್ಲಿ ಆಹಾರ.

ಮರಗಳನ್ನು ಬಾಟ್ಲಿ ಆಹಾರ ಕೊಟ್ಟು ಬೇಗನೆ ಬೆಳೆಯುವಂತೆ ಮಾಡಬಹುದೆಂದು ಕಂಡುಹಿಡಿಯಲಾಗಿದೆ. ನೆಲದ ಮಣ್ಣಿನಲ್ಲಿ ಫಲವತ್ತಾದ ಗುಣಗಳಿಲ್ಲದಿದ್ದಲ್ಲಿ, ಈ ತರದ ಬಾಟ್ಲಿ ಆಹಾರವನ್ನು ಉಪಯೋಗಿಸಿ ಕೃಷಿಯನ್ನು ಸಮೃದ್ಧಿಯಾಗಿ ನಡೆಯಿಸಬಹುದಂತೆ. ಮರದ ಕಾಂಡದಲ್ಲಿ ಒಂದು ತೂತು ಮಾಡಬೇಕು. ಈ ತೂತಿನಲ್ಲಿ ಮರಕ್ಕೆ ಬೇಕಾದ ಫಲವತ್ತಾದ ಆಹಾರವಿರುವ ದ್ರಾವಕರೂಪದಲ್ಲಿ ಬಾಂಕಿನ ನಳಿಗೆಯನ್ನು ಸಿಕ್ಕಿಸಬೇಕು. ಹೀಗೆ ಮರವು ಆ ಬಾಟ್ಲಿನಲ್ಲಿರುವ ಆಹಾರವನ್ನು ಎರಡು ಮೂರು ದಿವಸ ಸ್ವೀಕರಿಸುವಂತೆ ಮಾಡಬೇಕು. ನಂತರ ಮರವು ಕಣ್ಣಿಗೆ ಬಹಳ ಸಮೃದ್ಧಿಯಾಗಿ ಬೆಳೆಯುವುದು. ಈ ದ್ರಾವಕರೂಪದ ಗೊಬ್ಬರವನ್ನು ಇಂಗ್ಲಾಂಡಿನಲ್ಲಿ ಒಬ್ಬರು ಕಂಡುಹಿಡಿದಿರುವರು.

ಉತ್ತರ ಚೀನಾ ಗಲಭೆ.

ಜಪಾನಿಯರು ಸ್ವಯಂಪ್ರಭುತ್ವದ ಚಳವಳದಲ್ಲಿ ಸಹಕರಿಸುದುದರ ಪ್ರತಿಫಲವಾಗಿ ಹೋಫೆ ಮತ್ತು ಚಾರ ಪ್ರಾಂತ್ಯದ ಸಭಾಧ್ಯಕ್ಷರು, ಆ ಪ್ರಾಂತ್ಯಗಳಲ್ಲಿ ಕೂಡಿಸುವ ರೈಲ್ವೆ ಮತ್ತು ಉಪ್ಪಿನ ತೆರಿಗೆಯನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸುವುದಿಲ್ಲವೆಂದು ದೃಢಮಾಡಿರುತ್ತಾರೆ. ಈ ಪ್ರಾಂತ್ಯಗಳಲ್ಲಿ ರೈಲ್ವೇ ಮತ್ತು ಉಪ್ಪಿನ ತೆರಿಗೆಯ ರೂಪದಲ್ಲಿ ತಿಂಗಳೊಂದರ ೪೦೦,೦೦೦ ರೂ. ಉತ್ಪತ್ತಿ ಇದೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭಾಸದರಾಗಲು ಉಮೇದ್ವಾರರಾಗಿ ನಿಂತವರು.

(ಕಂತಿ ಮೂಲಕ ಬಂದ ವಾರ್ತೆ)

ಧಿ ಕರ್ನಾಟಕ ಕಾಂಗ್ರೆಸ್ ಮಂಡಳ ಧಾರವಾಡ ಇದರ ಕಾರ್ಯದರ್ಶಿಯವರಾದ ಶ್ರೀ ಮುಕ್ತೇರಕಾರರು ತಿಳಿಸುವುದೇನಂದರೆ ತಾ. ೧೩ರಲ್ಲಿ ಕರ್ನಾಟಕ ಕಾಂಗ್ರೆಸ್ ಕಮಿಟಿಯವರು ಪ್ರಚುರಪಡಿಸಿದ ಸರ್ಕಾಲರ ಪ್ರಕಾರ ಈ ಕೆಳಗಿನವರು [illegible] ಕಾಂಗ್ರೆಸ ಕಮಿಟಿಗೆ ಪ್ರತಿನಿಧಿಗಳಾಗಿ ಹೋಗಲು ಉಮೇದ್ವಾರರಾಗಿ ನಿಂತಿರುವರು.

1 ಸಿದ್ಧಪ್ಪಾ ಹೊಸಮನಿ. 2 ಗಂಗಧರರಾವ್ ದೇಶಪಾಂಡೆ. 3 ರಂಗನಾಥ ದಿವಾಕರ್. 4 ಕಾರ್ನಾಡ್ ಸದಾಶಿವ ರಾವ್. 5 ಕಮಲಾದೇವಿ. 6 ಸುಂದರಮ್ ಅಯ್ಯರ್. ಇವರಲ್ಲದೆ ಇನ್ನೂ ಅನೇಕರು ತಮ್ಮ ಅರ್ಜಿಗಳನ್ನು ಕಳುಹಿಸಿದ್ದರು. ಆದರೆ ಕಡೆಗೆ ತಾವು ಉಮೇದ್ವಾರರಾಗಿ ನಿಲ್ಲುವುದಿಲ್ಲವೆಂದು ಹೇಳಿದ್ದರಿಂದ ಅವರ ಹೆಸರುಗಳನ್ನು ಇಲ್ಲಿ ಪ್ರಚುರಪಡಿಸಲಿಲ್ಲ.

ಮೇಲಿನವುಗಳಲ್ಲಿ ಶ್ರೀ ಸಿದ್ಧಪ್ಪ ಹೊಸ ಮನಿಯವರು ಕರ್ನಾಟಕ ಕಾಂಗ್ರೆಸ್ ಮಂಡಳದ ಅಧ್ಯಕ್ಷರಾಗಿದ್ದುದರಿಂದ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಆರ್ಟಿಕಲ್ ಕಲಂ ೩ನೇ ಶಿಬ್ಬಂದಿಯ ಪ್ರಕಾರ ಅವರನ್ನು ಸರ್ವ ಸಮ್ಮತದಿಂದ ಮೂರರಲ್ಲೊಬ್ಬ ಪ್ರತಿನಿಧಿಗಳಾಗಿ ಚುನಾಯಿಸಲಾಗಿದೆ. ಆದ್ದರಿಂದ ಓಟುಗಳನ್ನು ಕಳುಹಿಸುವವರು ಉಳಿದ ಐದು ಮಂದಿಗಳಲ್ಲಿ ಇಬ್ಬರಿಗೆ ತಮ್ಮ ಓಟುಗಳನ್ನು ಕಳುಹಿಸಬೇಕಾಗಿ ವಿನಂತಿ. ಅದಲ್ಲದೆ ಜನವರಿ ತಾ. ೨೫ಕ್ಕೆ ನಮ್ಮ ಆಫೀಸಿಗೆ ಬರೆಯುವವರು ತಮ್ಮ ಓಟುಗಳನ್ನು ಮುಂದಾಗಿ ಪೋಸ್ಟು ದ್ವಾರಾ ಕಳುಹಿಸುವ ಅಗತ್ಯವಿಲ್ಲ. ಅವರ ಓಟುಗಳನ್ನು ಅಂದು ಆಫೀಸಿನಲ್ಲಿ ಸ್ವೀಕರಿಸಲಾಗುವುದು. ಯಾರಿಗೆ ನಮ್ಮ ಆಫೀಸಿಗೆ ಬರಲು ಅನಾನುಕೂಲವಿದೆಯೋ ಅಂಥವರು ಮಾತ್ರ ಟಪಾಲು ದ್ವಾರವ ತಮ್ಮ ಸ್ನೇಹಿತರೊಂದಿಗೆ ಕ್ಲಪ್ತಕಾಲಕ್ಕೆ ಅವುಗಳನ್ನು ತಲಪುವಂತೆ ಕಳುಹಿಸಿಕೊಡಬಹುದು.

ನಮ್ಮ ಜಿಲ್ಲೆಯಲ್ಲಿ ಉಡುಪಿಯಲ್ಲಿ ಮಾತ್ರ ಕಳೆದ ಡಿಸೆಂಬರದಲ್ಲಿ ನಡೆದ ಕಾಂಗ್ರೆಸು ಕಮಿಟಿಯ ಚುನಾವಣೆಯು ಶ್ರಮಬದ್ಧವಲ್ಲದೆ ಚುನಾವಣೆಯು ತಿರಿಗಿ ಆಗುವ ಸಂಭವವಿದೆಯಂತೆ. ಕಾಂಗ್ರೆಸಿನ ಸ್ಪರ್ಧಿಗೆ ಬೇಕಾಗಿನ ಕಟ್ಟುದಾದ ಪ್ರಕಟನೆ, ಸಭಾ ನಾಮಿನೇಶನ್ ಮತ್ತು ಕ್ರಮಬದ್ಧ ಸೂತ್ರಗಳು ಪರಿಪಾಲನೆಯಾಗದಿದ್ದುದು ಕಾರಣವಂತೆ.

ಸುರತ್ಕಲ್-ಇಡ್ಯ ಗ್ರಾಮ ಪಂಚಾಯತ ಕೋರ್ಟಿನ ಸದಸ್ಯರೊಬ್ಬರೂ ಅಧ್ಯಕ್ಷರೂ ಆದ ಶ್ರೀಯುತ ವಾಸುದೇವ ಭಟ್ಟರು ಕಳೆದ ಡಿಸೆಂಬರದಲ್ಲಿ ರಾಜಿನಾಮೆ ಕೊಟ್ಟಿರುವುದರಿಂದ, ಅವರ ಸ್ಥಾನಕ್ಕೊಬ್ಬ ಸದಸ್ಯರ ಚುನಾವಣೆಯು ನಡೆಯಿತು. ಉಮೇದ್ವಾರರುಗಳು ಮೂವರ ಸ್ಪರ್ಧೆಗಳಲ್ಲಿ ಮಿ. ಸಯ್ಯದ್ ಅಬ್ದುಲ್ ರಹಿಮಾನ ಬ್ಯಾರಿಗಳವರು ಬಹುಮತದಿಂದ ಚುನಾವಣೆಗೊಂಡಿರುವರು. ಈ ಕೋರ್ಟಿನ ಸದಸ್ಯರಾಗಿ ಮುಂದೆ ಬಂದ ಮುಸಲ್ಮಾನ ಬಂಧುಗಳಲ್ಲಿ ಇವರೇ ಮೊದಲಿಗರೆಂದು ತಿಳಿಸಲು ಸಂತೋಷವೆನಿಸುತ್ತದೆ.

ಕಳೆದ ನವಂಬರ ತಿಂಗಳಲ್ಲಿ ಚುನಾವಣೆಯಾಗಿರುವ ಸುರತ್ಕಲ್ ಇಡ್ಯಗ್ರಾಮ ಪಂಚಾಯತ ಬೋರ್ಡ್ ಸದಸ್ಯರು (೧೩ ಮಂದಿ)ಗಳ ಪ್ರಥಮಾಧಿವೇಶನವು ಇದೇ ತಾ. ೧೬ನೆಯ ದಿನ ಪೂರ್ವಾಹ್ನ ಸುರತ್ಕಲ್ 'ಸಹಕಾರ ಭವನ'ದಲ್ಲಿ ಜರಗಿತು. ಪ್ರಥಮದಲ್ಲಿ ಸದಸ್ಯರುಗಳ ಪ್ರಮಾಣವಾಕ್ಯಗಳ ನುಡಿಯುವಿಕೆಯಾಗಲು, ಅಧ್ಯಕ್ಷರಾಗಿ ಪ್ರತಿಸ್ಪರ್ಧಿಗಳಿಲ್ಲದೆ ಸರ್ವಾನುಮತಿಯಿಂದ ಶ್ರೀ ಎಸ್. ಬಾಬುರಾಯ ಕಾಮತರು ಚುನಾವಣೆಗೊಂಡರು. ಬಳಿಕ ಉಪಾಧ್ಯಕ್ಷರ ಸ್ಥಾನಕ್ಕಾಗಿ ಇಬ್ಬರು ಉಮೇದ್ವಾರರುಗಳ ಸ್ಪರ್ಧೆಯಲ್ಲಿ, ಶ್ರೀ ಎಂ. ರಾಮಕೃಷ್ಣ ಇವರು ಬಹುಮತದಿಂದ ಉಪಾಧ್ಯಕ್ಷರಾಗಿ ಚುನಾವಣೆ ಹೊಂದಿದ ತರುವಾಯ ಎಲ್ಲಾ ಸದಸ್ಯರಿಗೂ ಅಧ್ಯಕ್ಷರ 'ಉಪಾಹಾರ' ಸತ್ಕಾರದೊಂದಿಗೆ ಸಭಾಂತ್ಯವಾಯಿತು.

ಸುರತ್ಕಲ್ ಪದ್ಮಶಾಲಿಗ ವೈಶ್ಯ ಬಳಗದವರ "ಶ್ರೀ ವೀರಭದ್ರಸ್ವಾಮಿ ದೇವಾಲಯ"ದಲ್ಲಿ ಜನವರಿ ತಾ. ೨೫ ರಿಂದ ತಾ. ೨೯ರ ತನಕ ೫ ದಿನಗಳ ಜಾತ್ರೆಯು ಬಹು ವಿಜೃಂಭಣೆಯಿಂದ ಜರುಗಲಿದೆ.

ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನೂ ಪರಿಹಾರವಮಾಡುವ ಟೋನಿಕ್ಕು.

24 ಔನ್ಸ್ ರೂ. 2   16 ಔನ್ಸ್ ರೂ. 1-8-0   8 ಔನ್ಸ್ ರೂ. 0 14-0.

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಆಯೊಡ್ಯಾಸ್ಡ್ ಸರ್ಸಪರ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

4 ಔನ್ಸ್ ರೂ. 1—0—0   8 ಔನ್ಸ್ ರೂ 1—8—0.

ದಕ್ಷಿಣ ಕನ್ನಡದ ಏಜಂಟರು—ಪೊಪ್ಯುಲರ ಸ್ಟೋರ್ಸ್, ಮಂಗಳೂರು.

ಬಹು ಕಾಲದಿಂದಲೂ ನಿರೀಕ್ಷಿಸಲ್ಪಟ್ಟ ಅತ್ಯಮೋಘ
ತೆಲುಗು ಮಾತಾಡುವ ಚಲಚ್ಚಿತ್ರ!

ಕೃಷ್ಣ ಲೀಲಾ

ನಗುವಿನ ಸುಗ್ಗಿ! ಮನಮುಗ್ಧಕರ ಅಭಿನಯ!
ರೋಮಾಂಚನಗೊಳಿಸುವ ದೃಶ್ಯಗಳು!
ಕರ್ಣಾನಂದಕರವಾದ ಗಾಯನ!

ಆಧುನಿಕ ಧೋರಣೆಗಳ ಉಪಾಸನೆಯು ಪ್ರತಿಯೊಂದೆಡೆಯಲ್ಲಿಯೂ ಹೊರಹೊಮ್ಮಿ ಕಾಣುವುದು.

ಕಂಪೆನಿಯ ಶ್ರೇಷ್ಠ ನಟವರ್ಗವು ಇದರಲ್ಲಿ ಅಭಿನಯಿಸಿದೆ.

ಮಿಸ್ ರಾಮತಿಲಕಮ್
ಮಿಸ್ ಶ್ರೀರಂಜನಿ
ಮಿ॥ ವೇಮುರಿ ಗಗ್ಗಯ್ಯ
ಮಿ॥ ಪಾರಪಲ್ಲಿ ಸುಬ್ಬರಾವ್
ಮಿ॥ ಪಾರಪಲ್ಲಿ ಸತ್ಯನಾರಾಯಣ
ಮಾಸ್ಟರ್ ರಾಜೇಶ್ವರರಾವ್

ಕೊಯಮುತ್ತೂರು, ಸೇಲಂ, ನೀಲಗಿರಿ, ಮಲಬಾರು, ದಕ್ಷಿಣ ಕನ್ನಡ ಮತ್ತು ಕೊಚ್ಚಿ ಈ ಪ್ರಾಂತ್ಯಗಳಲ್ಲಿ ತಮ್ಮ ಚಿತ್ರಗಳ ಸಂಚಾಲನಾ ಅಧಿಕಾರವನ್ನು ಪಡೆದಿರುವರು.

For Bookings Apply to:—

THE MANORAMA FILMS,
COIMBATORE.

Telegrams: 'Manorama'   Telephone 114

THE 1935 MODEL

HEAVY DUTY TRUCK



For Your Haulage

U. SUBRAYA NAYAK,
FORD DEALER
SHIMOGA AND MANGALORE.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds, Cuts, Colds, Headache It is a complete substitute for the domestic medicine chest Try once this unequalled remedy In tin for tin As 3/- In oz jar As 12/-

Superior Red Balm For relieving pains in muscles and on skin. Directions for use with the bottle Price As 12 - only

Wurmteufel Is a soverign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms, children and adults, try this unique remedy and be freed from your ailment. Price As. 10 per packet.

Pocket Inhaler For coughs and hoarseness, headache catarrch, colds, use this inhaler and you will be relieved immediately Price per inhaler As 6/- & As 8/-

'Po-Ho Fluid' For Asthma, colds, indigestion, toothache lumbago, a sure remedy in all cases Price As. 6, and Re. 1/- per phial

Cough Cure An infallible remedy for coughs of all kinds bronchitis, hoarseness Particulars in bottle. Price As. 12/- for 3 oz bottle.

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health. Price As. 1/3; 2/6; 3/-, 4,

Basel Mission Book Depot
Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ಕನ್ನಡಿಗರ ಕರ್ತವ್ಯ.

ಕಾಸರಗೋಡು ತಾಲೂಕಿನ ನಿದ್ರಾವಸ್ಥೆ! ಹೊಸದುರ್ಗದ ಜನರ ಸೋಮಾರಿತನ!

ಕಾಸರಗೋಡು ತಾಲೂಕಿನಲ್ಲಿರುವ ಕೆಲವು ಮಲೆಯಾಳಿ ಸಹೋದರರು ಕಾಸರಗೋಡು ತಾಲೂಕನ್ನೇ ಮಲಬಾರಿಗೆ ಸೇರಿಸಬೇಕೆಂಬ ಭ್ರಾಂತಿಯನ್ನಿಟ್ಟು ಕೆಲವು ಕಾಲವು ಕಳೆಯಿತು ಇವರಲ್ಲಿ ಕೆಲವರು ಚಂದ್ರಗಿರಿ ಹೊಳೆಯ ವರೆಗಾದರೂ ಖಂಡಿತವಾಗಿ ಮಲಬಾರಿಗೆ ಸೇರಿಸಬೇಕೆಂತ ವಾದಿಸುತ್ತಿರುವರು ಇವರಲ್ಲೊಬ್ಬರು ಇತ್ತೀಚೆಗೆ 'ಮಾತೃಭೂಮಿ 'ಎಂಬ ಮಲೆಯಾಳಿ ದೈನಂದಿನ ಪತ್ರಿಕೆಯಲ್ಲಿ, ಕಾಸರಗೋಡು–ಸುಳ್ಯರೋಡು ವರೆಗೆ ಮಲಬಾರಿಗೆ ಸೇರಿಸಬೇಕಾಗಿಯೂ, ಚಂದ್ರಗಿರಿಗೂ ಉತ್ತರಭಾಗದಲ್ಲಿ ಮಲೆಯಾಳಿ ಗ್ರಾಮಗಳು ಹೆಚ್ಚಿಗಿರುವ ಕಾಗಿಯೂ, ಅದುದರಿಂದ ಅದರ ಸೀಮೆಯನ್ನು ಇನ್ನೂ ವ್ಯಾಪಕವಾಡಬೇಕಾಗಿಯೂ ಬರೆದಿರುವರು ಇವರ ಲೇಖನವನ್ನು ಓದುವಾಗ ಇಡೀ ಕಾಸರಗೋಡು ತಾಲೂಕನ್ನೇ ಮಲಬಾರಿಗೆ ಸೇರಿಸಬೇಕೆಂತಲೂ ಅಭಿಪ್ರಾಯ ವಾಗುತ್ತದೆ

ಭಾರತ ಮಹಾಜನ ಸಭೆಯ ಪ್ರೆಸಿಡೆಂಟರಾದ ಬಾಬು ರಾಜೇಂದ್ರಪ್ರಸಾದರು ಪಯ್ಯನ್ನೂರನ್ನು ಸಂದರ್ಶಿಸುವಾಗ ಶ್ರೀಗಳಾದ ಎ ಸಿ ಕಣ್ಣನ್ ನಾಯರ್ ಕೆ ಟಿ ಕುಂಞ ರಾಮನ್ ನಂಬಿಯಾರ್, ಸುಬ್ರಹ್ಮಣ್ಯ ಪೆರುಮಾಂಬು ಎಂಬೀ ವರ್ಗನ್ನರು ಒಂದು ಅರ್ಜಿ ಸಮೇತ ಪ್ರಸಾದರನ್ನು ಕಂಡು, ಚಂದ್ರಗಿರಿ ಹೊಳೆಯ ವರೆಗೆ ಮಲಬಾರಿಗೆ ಸೇರಿಸಬೇಕಾಗಿ ಅಪೇಕ್ಷಿಸಿರುವರು ಅದಕ್ಕೆ ಅವರು ಭಾರತ ಮಹಾಜನ ಸಭೆಯ ಕಾರ್ಯಾಲೋಚನಾ ಸಮಿತಿ (All India Congress Working Committee) ಯಲ್ಲಿ ಈ ಕಾರ್ಯವನ್ನಾಲೋಚಿಸಿ ತೀರ್ಪುಕೊಡ ಬೇಕಾಗಿ ಹೇಳಿರುವರಂತೆ

ನಮ್ಮ ಮದ್ರಾಸು ಗವರ್ನಮೆಂಟಿನವರು ಮಲಬಾರ್ ಜಿಲ್ಲೆಯನ್ನು ಮಲಬಾರ್ ನೋರ್ತ್, ಮಲಬಾರ್ ಸೌತ್ ಎಂತ ಎರಡಾಗಿ ಭಾಗಿಸುವರೆ ಆಲೋಚಿಸುತ್ತಿರುವರು. ಮಾತ್ರವಲ್ಲ, ಕೊಯಂಬತ್ತೂರು ಡಿಸ್ಟ್ರಿಕ್ಟನ್ನೇ ತೆಗೆದುಹಾಕಿ ಅದರ ಕೆಲವು ಭಾಗಗಳನ್ನು ಮಲಬಾರಿಗೆ ಸೇರಿಸಿಬಿಟ್ಟರೆ ತಮ್ಮ ಅಭೀಷ್ಟವು ನೆರವೇರಿದಂತಾಗುವು ದಲ್ಲವೇ? ಈ ಆಲೋಚನೆಯಿಂದ ಕೆಲವರು ಈಗ ಇದರ ವಿಷಯ ಮಲೆಯಾಳಿ ಪತ್ರಿಕೆಯಲ್ಲಿ ಬರೆಯಲು ಪ್ರಾರಂಭಮಾಡಿರುವರು ಶ್ರೀ ಕೋಡೋತ್ ಗೋವಿಂದನ್ ಎಂಬವರು ಬರೆಯುತ್ತಾರೆ —"ದಕ್ಷಿಣ ಕನ್ನಡ ಜಿಲ್ಲೆಯು ಎರಡಾಗಿ ಭಾಗಿಸಲು ಅಷ್ಟು ವಿಸ್ತೀರ್ಣವಾಗಿಲ್ಲ ಈಗ ಇದ್ದಹಾಗೆ ಇದ್ದರೆ ಡಿಸ್ಟ್ರಿಕ್ಟ್ ಬೋರ್ಡಿಗೆ ಭರಣವನ್ನು ನಡೆಸಲು ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಕಾಸರಗೋಡು ತಾಲೂಕನ್ನು ಮಲಬಾರಿಗೆ ಸೇರಿಸಿಬಿಟ್ಟರೆ ಅವರ ಭಾರವು ಕಡಿಮೆಯಾಗುವದು" ಎಂದು

ಇಡೀ ಭಾರತವನ್ನೇ ಆಳಲು ಸನ್ನದ್ಧರಾಗಿರುವ ಭಾರತೀಯರಿಗೆ ಇಷ್ಟು ಸಣ್ಣ ಡಿಸ್ಟ್ರಿಕ್ಟ್ ಬೋರ್ಡಿನ ಕಾರ್ಯಗಳನ್ನು ನೆರವೇರಿಸಲು ತೊಂದರೆಯಾಗುತ್ತದೆಂತ ಒಬ್ಬ ಭಾರತೀಯನೇ ಹೇಳುವುದೆಷ್ಟರ ಮಟ್ಟಿಗೆ ಸಿವ ಂಜಸವಾಗಿ ಕಂಡುಬರುತ್ತದೆ! ಇದರಿಂದಲೇ ನಮ್ಮ ಧುರಂಧರತ್ವವು ವ್ಯಕ್ತವಾಗುತ್ತದೆ ಪ್ರಕೃತ ಲೇಖಕನಿಗಂತೂ ಧನ್ಯವಾದಗಳು!

ನಮ್ಮ ಜಿಲ್ಲೆಯು ಹಲವು ಭಾಷೆಗಳನ್ನಾಡುವವರ ಮತ್ತು ಹಲವು ಮತಾನುಯಾಯಿಗಳ ಒಂದು ಪ್ರಣ್ಯ ಬೀಡಾಗಿರುತ್ತದೆ ಇದು ಇತರ ಜಿಲ್ಲೆಗಳಿಗೆ ಅಲ್ಲ ಇಡೀ ಭಾರತಕ್ಕೇ ಐಕ್ಯವನ್ನುದಾಹರಿಸಬೇಕಾದ ಆದರ್ಶ ಜಿಲ್ಲೆಯಾಗಿರುತ್ತದೆ ಮಾತ್ರವಲ್ಲ ಕಳೆದ ಸಿಯಮೋಲ್ಲಂಘನಾ ಕಾಲದಲ್ಲಿ ನಮ್ಮ ಜಿಲ್ಲೆಯಿಂದಲೇ ಕನ್ನಡ ನಾಡಿನ ಇತರ ಜಿಲ್ಲೆಗಳನ್ನಪೇಕ್ಷಿಸಿ ಹೆಚ್ಚಿಗೆ ಜನರು ಜೈಲಿಗೆ ಹೋಗಿರುವರೆಂಬ ಸಂಗತಿಯು ಅಭಿಮಾನಕರವೇ ಸರಿ ನಮ್ಮ ಈ ಜಿಲ್ಲೆಯಲ್ಲಿ ಮಾತನಾಡುವಷ್ಟು ಭಾಷೆಗಳು ಬೇರೆ ಯಾವ ಜಿಲ್ಲೆಯಲ್ಲೂ ಎಂದಿಗೂ ಇರಲಿಕ್ಕಿಲ್ಲ ಇವರೆಲ್ಲಾ ಸಹೋದರ ಭಾವನೆಯಿಂದ ವರ್ತಿಸಿ ತಮ್ಮ ಐಕ್ಯವನ್ನು ಐಕ್ಯಭಾರತಕ್ಕೆ ಪ್ರದರ್ಶಿಸುತ್ತಿರುವರು ಹಲವು ಭಾಷೆಗಳನ್ನಾಡುವವರೂ ಹಲವು ಜಾತಿಮತಸ್ಥರಿರುವವರೂ ಸ್ವಾತಂತ್ರ್ಯಕ್ಕೆಂದೂ ಹಾನಿ ಮಾಡಲಿಕ್ಕಿಲ್ಲವೆಂದು ನಾವು ಇತರರಿಗೆ ತೋರಿಸಬೇಕಾಗಿದೆ ಇದಕ್ಕೆ ಸರಿಯಾದ ಉದಾಹರಣೆಯು ನಮ್ಮ ಜಿಲ್ಲೆಯಲ್ಲದೆ ಬೇರೆ ಯಾವ ಜಿಲ್ಲೆಯಿರುವುದು? ಹೀಗಿರಲು, ಅವರಲ್ಲಿ ಭಿನ್ನತೆಯ ಬೀಜವನ್ನು ಬಿತ್ತುವುದು ಸರಿಯೋ? ಭಾರತವನ್ನು–ಅಲ್ಲ ಲೋಕವನ್ನು ವ್ಯಾಪಕವಾಗಬೇಕಾದ ನಮ್ಮ ಮನೋವಿಕಾಸವನ್ನು ಸಂಕೋಚದ ಕೋಳಿ ಗೂಡಿನಲ್ಲಿ ದೂಡಿಹಾಕುವದು ಉಚಿತವೇ?

ಕಳೆದ ನಿಯಮೋಲ್ಲಂಘನಾ ಕಾಲದಲ್ಲಿ ಶ್ರೀಗಳಾದ ಎ ಸಿ ಕೆ ನಾಯರ್, ಕೆ ಟಿ ಕೆ ನಂಬಿಯಾರ್ ಮೊದಲಾದವರು ಚಂದ್ರಗಿರಿ ಹೊಳೆಯ ವರೆಗೆ ಇರುವ ಸ್ಥಳವನ್ನು ಹೊಸದುರ್ಗ ತಾಲೂಕೆಂಬ ಹೆಸರಿನಲ್ಲಿ ತಮ್ಮ ಇಚ್ಛಾನುಸಾರವಾಗಿ ವಿಂಗಡಿಸಿ ಮಲಬಾರಿಗೆ ತಮ್ಮಷ್ಟಕ್ಕೇನೆ ಸೇರಿಸಿಕೊಂಡಿದ್ದರು. ಆದರೆ ಇಲ್ಲಿಯವರು ಆ ಸಂದರ್ಭದಲ್ಲಿ ಈ ಸಂಕೋಚವನ್ನು ಮನಸ್ಸಿಗೆ ತರಲಿಲ್ಲ. ಆವಾಗ ಅದು ತರುವದೆಂತೂ ಉಚಿತವಾಗಿಯೂ ಇದ್ದಿಲ್ಲ ಮತ್ತೆ ಶ್ರೀ ಎ ಸಿ ನಾಯರ್ ಮತ್ತು ಶ್ರೀ ನಂಬಿಯಾರ್ ಇವರು ಕಾಂಗ್ರೆಸ್ಸಿನಿಂದ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಂಡ ಕೂಡಲೇ ಇಲ್ಲಿನವರು ಪ್ರಕೃತ ವಿಭಜನದ ಕುಂಠಿತ ಪ್ರಕಟವಾಗಿ ವಿರೋಧಿಸಿದರು ತದನಂತರ ಇಲ್ಲಿನವರು ಮಾತ್ರವಲ್ಲ, ಸಲೀಶ್ವರದತ್ತ ಲಕ್ಷಗಿರುವ ಅನೇಕರು ಕಾಸರಗೋಡಿಗೆ ಹೋಗಿ ಪಿಕೆಟಿಂಗ್ ಮಾಡಿರುವರು ಮತ್ತೆ ಹೊಸದುರ್ಗ ತಾಲೂಕೆಂಬ ಹೆಸರೇ ಮಾಯವಾಗಿ ಹೋಯಿತು ಇದನ್ನು ಮಲಬಾರಿಗೆ ಸೇರಿಸುವುದರಲ್ಲಿ ಇಲ್ಲಿನವರಿಗೆ ಆಕ್ಷೇಪ ಇರುವ ಕಾರಣ ಮಲಬಾರು-ಕಾಂಗ್ರೆಸ್ ಕಮಿಟಿಯವರು ಇದನ್ನು ತೆಗೆದುಹಾಕಿರುವರು ಅದುದರಿಂದ ಕಳೆದ ಸಾರಿ ಪ್ರಸಾದರು ಪಯ್ಯನ್ನೂರು ವರೆಗೆ ಮಾತ್ರ ಒಂದು ಹಿಂತಿರುಗಿಹೋಗಿರುವರು

ಹೊಸದುರ್ಗ, ಬೇಕಲ ಚಂದ್ರಗಿರಿ ಈ ಮೂರು ಸ್ಥಳಗಳನ್ನು ಕನ್ನಡ ನಾಡಿನವಲ್ಲಿ ಚರಿತ್ರಪ್ರಸಿದ್ಧವಾದ ನಾಡುಗಳು ಕನ್ನಡ ನಾಡಿನ ಪ್ರಾಚೀನ ಚರಿತ್ರಾನ್ವೇಷಕರಿಗೆ ಈ ಮೂರು ಊರುಗಳಲ್ಲಿ ಹಲವು ಸಂಗತಿಗಳು ಶೋಧಿಸಲಿಕ್ಕಿರುವವು ಈ ಮೂರು ಸ್ಥಳಗಳಲ್ಲಿಯೂ ಮೂರು ಸುಂದರವಾದ ಕೋಟೆಗಳಿರುವುವು ಇವು ಕನ್ನಡನಾಡಿನ ಅರಸರೇ ಕಟ್ಟಿದ್ದಾಗಿರುತ್ತದೆ ಇವುಗಳಲ್ಲಿ ಹೊಸದುರ್ಗ ಕೋಟೆಯು ಬಹು ವಿಸ್ತೀರ್ಣವೂ ಉನ್ನತವೂ ಮಾತ್ರವಲ್ಲ ಗಂಭೀರವೂ ಆಗಿರುತ್ತದೆ ಬೇಕಲಕೋಟೆಯು ಸಮುದ್ರ ತೀರದಲ್ಲೇ ನಿಂತ ಮೌನವಾಗಿ ಕನ್ನಡ ನಾಡಿನ ಶೋಚನೀಯತೆಯನ್ನು ಚಿಂತಿಸುತ್ತಿರುವುದು ಚಂದ್ರಗಿರಿ ಕೋಟೆಯು ಇವುಗಳಿಗಿಂತ ಸಣ್ಣದಾಗಿರುತ್ತದೆ ಅದು ಚಂದ್ರಗಿರಿ ನದಿಯ ತೀರದಲ್ಲೇ ಕಟ್ಟಲ್ಪಟ್ಟಿದೆ ಕನ್ನಡ ಇತಿಹಾಸದಲ್ಲಿ ಪ್ರಸಿದ್ಧಿ ಹೊಂದಿದ, ವಿಶೇಷವಾಗಿ ಹೊಸದುರ್ಗ ಮತ್ತು ಬೇಕಲ ಈ ಸ್ಥಳವನ್ನು ಕನ್ನಡಿಗರು ಎಂದಿಗೂ ಬಿಟ್ಟುಕೊಡುವದು ಅಭಿಮಾನಕರವಲ್ಲ ಶ್ರೇಯಸ್ಕರವಲ್ಲ ಈ ಸ್ಥಳಗಳನ್ನು ಅಭಿಮಾನಪೂರ್ವಕ ಕನ್ನಡದಲ್ಲೇ ಇರಿಸಬೇಕಾದ್ದು ದಕ್ಷಿಣ ಕನ್ನಡ ಜಿಲ್ಲೆಯ ಅಲ್ಲ ಇಡಿ ಅಖಿಲ ಕರ್ನಾಟಕದ ಕರ್ತವ್ಯವಾಗಿರುತ್ತದೆ ಪ್ರಾಚೀನ ಕಾಲದಲ್ಲಿ ಕನ್ನಡ ನಾಡಾಗಿ ಪ್ರಸಿದ್ಧಿಹೊಂದಿದ ಹಲವು ನಾಡುಗಳು ಈಗ ನಮಗೆ ನಷ್ಟವಾಗಿರುವವು ಅದು ಕನ್ನಡದ ದುರ್ದೈವವೇ ಸರಿ ಆದರೆ ಈಗಿನ ಪ್ರಬುದ್ಧ ಕರ್ನಾಟಕವು ಇದಕ್ಕೆ ಒಪ್ಪೀತೇ?

ಈ ಸ್ಥಳಗಳನ್ನು ಮಲಬಾರಿಗೆ ಸೇರಿಸುವುದರ ಕುರಿತು ಮಲೆಯಾಳಿ ಪತ್ರಿಕೆಯಲ್ಲಿ ಬರೆದಿರುವ ಪ್ರಯುಕ್ತ ಕಾಸರಗೋಡು ತಾಲೂಕಿನಲ್ಲಿರುವವರಿಗೆ ಪ್ರಾಯಶಃ ಗೊತ್ತಿರಲಿಕ್ಕಿಲ್ಲ ಆದರೆ ಹೊಸದುರ್ಗ ಮುಂತಾದ ಸ್ಥಳದಲ್ಲಿರುವ ಜನರಿಗೆ ಇದು ತಿಳಿದೂ ಅವರು ಸುಮ್ಮನಿರುವದೇ ವಿಷಾದಕರ ತಂತಮ್ಮೊಳಗೆ ಮಾತನಾಡಿ ತೃಪ್ತಿಪಡುತ್ತಾರಲ್ಲದೆ ಬಹಿರಂಗವಾಗಿ ಆಕ್ಷೇಪವನ್ನು ಎಬ್ಬಿಸುವುದಿಲ್ಲ ಇನ್ನಾದರೂ ಹೊಸದುರ್ಗ ಬೇಕಲ ಕಾಸರಗೋಡು ಮುಂತಾದ ಸ್ಥಳದಲ್ಲಿರುವವರು ಎಚ್ಚರಗೊಂಡು ಪ್ರವರ್ತಿಸತಕ್ಕದ್ದು. ಇದರ ವಿಷಯ ಸಭೆಗಳನ್ನು ಸೇರಿಸಿ ತಮ್ಮ ಆಕ್ಷೇಪಣೆಯನ್ನು ರುಜುವಾಡಬೇಕು ತಂಮ್ಮ ಗಳನ್ನು ಪಾಸುಮಾಡಿ ಮಲಬಾರಿಗೆ ಸೇರಿಸುವುದರಲ್ಲಿ ತಮಗಿರುವ ವಿರೋಧವನ್ನು ಕಾಂಗ್ರೆಸ್ ಪ್ರೆಸಿಡೆಂಟರಿಗೂ ಇತರರಿಗೂ ತಿಳಿಸಬೇಕು ಇದರ ವಿಷಯ ಈಗಲೇ ನಾವು ಪ್ರಯತ್ನಮಾಡದೆ ಇದ್ದರೆ ಮತ್ತೆ ಪಶ್ಚಾತ್ತಾಪಪಡಬೇಕಾಗುವುದು ಇದು ಎಂದಿಗೂ ಮಲಬಾರಿಗೆ ಸೇರಲಿಕ್ಕಿಲ್ಲವೆಂತ ನಾವು ನಮ್ಮಷ್ಟಕ್ಕೆ ಭಾವಿಸಿ ಸುಮ್ಮನೆ ಕೂತುಕೊಂಡರೆ ಮತ್ತೆ ಕನಿಕರಪಡಬೇಕಾದೀತು ಆದುದರಿಂದ ಕನ್ನಡ ನಾಡಿನ ಅಭಿಮಾನಿಗಳು ಈಗಲೇ ಪ್ರಯತ್ನಿಸಬೇಕು ನಮ್ಮ ಜಿಲ್ಲೆಯವರು ಒಂದೇ ಸ್ವರದಿಂದ ಆಕ್ಷೇಪಿಸಬೇಕು ಪ್ರಸ್ತುತ ಸ್ಥಳಗಳಲ್ಲಿ ಸಭೆ ಸೇರಲು ನಮ್ಮ ಜಿಲ್ಲೆಯ ಮುಖಂಡರುಗಳೇ ಬಂದು ಪ್ರೋತ್ಸಾಹಿಸಬೇಕು ಅಂದರೆ ಮಾತ್ರ ಸ ಲಭ ಸಾಧ್ಯ ಇನ್ನಾದರೂ ಕಣ್ಣು ತೆರೆಯುವರೇ?

ಪಂಡಿತ್.

ಸ್ಪರ್ಧೆಯ ಮೇಲಿರುವ ಪ್ರೇಮ.

"ಜೀವನದ ಸಾರವಿರುವುದು ಸ್ಪರ್ಧೆಯಲ್ಲಿ, ಕೇವಲ ಪ್ರೇಮಪೂರ್ಣವಾದ ಪ್ರಪಂಚವು ವ್ಯರ್ಥವೂ ನೀರಸವೂ ಆಗಿದೆ". ಹೀಗೆಂದು ಹಲವರ ಹೇಳಿಕೆಯಿದೆ ಪ್ರೇಮಪೂರ್ಣ ಪ್ರಪಂಚವು ವ್ಯರ್ಥವಾದುದೂ ಅಲ್ಲ, ನೀರಸವಾದುದೂ ಅಲ್ಲ ಸತ್ವಗುಣ ಪೂರ್ಣವಾದುದೂ, ಮಾಧುರ್ಯವುಳ್ಳದ್ದೂ ಆಗಿರುತ್ತದೆ ತೀಕ್ಷ್ಣವೂ, ಕಟುವೂ ಆದ ವಸ್ತುಗಳ ಸೇವನೆಯಿಂದ ಕೆಟ್ಟುಹೋದ ನಾಲಿಗೆಗೆ ಮಾಧುರ್ಯದ ಅನುಭವವಾಗುವುದು ಸಾಧ್ಯವಿಲ್ಲ ಅದರಂತೆ ಸ್ಪರ್ಧಾಪ್ರೇಮಿಗಳಿಗೆ ಪ್ರೇಮದ ಸವಿಯು ತಿಳಿಯುವುದಿಲ್ಲ ಸ್ಪರ್ಧೆಯು ಜೀವನಕ್ಕೆ ಅರುಚಿಯನ್ನುಂಟುಮಾಡುವ ವಸ್ತು

"ಮನುಷ್ಯನನ್ನು ಕೆಲಸಕ್ಕೆ ಹಚ್ಚುವಂತಹುದೇ ಸ್ಪರ್ಧೆಯು ಸ್ಪರ್ಧೆಯು ಅವನನ್ನು ಉದ್ಯೋಗಿಯನ್ನಾಗಿ ಮಾಡುತ್ತದೆ ಈಗ ಲೋಕದಲ್ಲಿ ಜರಗುವ ಎಷ್ಟೋ ಮಹತ್ಕಾರ್ಯಗಳಿಗೆ ಸ್ಪರ್ಧೆಯೇ ಮೂಲ ಕಾರಣ" ಹೀಗೆಂದು ಹಲವರ ವಿಚಾರವಿರುತ್ತದೆ ಸರಿ ಲೋಕವಿನಾಶಕಾರಕ ಉದ್ಯೋಗಗಳಿಗೆ ಜನ್ಮಕೊಟ್ಟಂತಹ ಶ್ರೇಯಸ್ಸು ಸ್ಪರ್ಧೆಗೆಂಬುದೇನೋ ಸತ್ಯವು ಅದರ ಜೊತೆಯಲ್ಲಿ ಜೀವನಪೋಷಕ ಉದ್ಯೋಗಗಳಿಗೆ ವಿನಾಶವನ್ನು ತಂದುಹಾಕಿದ ಪಾಪವೂ ಅದರ ತಲೆಗೇ ಇದೆಯೆಂಬುದನ್ನು ಮರೆಯಲಾಗದು

ಇನ್ನೂ ಹಲವರು "ಸ್ಪರ್ಧೆಯೇ ಮನುಷ್ಯತ್ವದ ಸ್ವಾಭಾವಿಕ ಲಕ್ಷಣವಾಗಿದೆ ಪ್ರೇಮವೆಂಬುದು ಯೇಸು ಕ್ರಿಸ್ತ ಅಥವಾ ಬುದ್ಧರಂತ ವ್ಯಕ್ತಿಗಳ ಮನಸ್ಸಿನ ತರಂಗ ಮಾತ್ರವು ಮತ್ತು ಅವರು ದರೋ ಅಸಾಧಾರಣ ವ್ಯಕ್ತಿಗಳಾಗಿದ್ದರು ನಾವು ಸಾಧಾರಣವಾದ ವ್ಯಕ್ತಿಗಳು" ಎಂದು ಹೇಳುತ್ತಾರೆ

ಇರಲಿ ಕ್ರಿಸ್ತ ಬುದ್ಧರಂಥವರನ್ನು ಬಿಡಿರಿ ಸ್ವಲ್ಪ ಈಚೆಗೆ ಒಬ್ಬರ ಮಗುವನ್ನು ತೊಡೆಯ ಮೇಲಿಟ್ಟುಕೊಂಡ ಹಾಲುಣಿಸುವ ತಾಯಿಯೊಡನೆ ಕೇಳಿರಿ ಒಬ್ಬರಿಗಾಗಿ ಇನ್ನೊಬ್ಬರು ಪ್ರಾಣತ್ಯಾಗಮಾಡ ನಾತರ ಸ್ನೇಹ ನೋಡಿ ಅರಿಯಿರಿ ಅಥವಾ ಅಸ್ಪೃಶ್ಯರಿಗೋಸ್ಕರ ತಮ್ಮ ಸರ್ವಸ್ವವನ್ನು ತ್ಯಾಗಮಾಡುವ ಮಿತ್ರರೊಡನೆ ಪ್ರಶ್ನಿಸಿರಿ ಇಲ್ಲದಿದ್ದರೆ ಸ್ವದೇಶಕ್ಕೋಸ್ಕರ ತಮ್ಮನ್ನು ತಾವೇ ಬಲಿಗೊಡುವ ದೇಶಭಕ್ತರೊಡನೆ ಕೇಳಿರಿ ಅದೂ ಬೇಡ ನಿಮ್ಮ ಹೃದಯಕ್ಕೆ ನೀವು ಪ್ರಶ್ನೆ ಹಾಕಿರಿ ಪ್ರೇಮವು ಸ್ವಾಭಾವಿಕವೋ ಅಸ್ವಾಭಾವಿಕವೋ? ಪ್ರೇಮವು ಸತ್ಯವಾದುದೋ ಅಲ್ಲ ಸ್ವಪ್ನವೋ? ಪ್ರೇಮದ ಪ್ರೇರಣೆಯು ಸತ್ಯವೋ ಸ್ಪರ್ಧೆಯ ಪ್ರೇರಣೆಯು ಸತ್ಯವೋ ಸಂತೋಷವು ಪ್ರೇಮದಲ್ಲಿದೆಯೋ ಸ್ಪರ್ಧೆಯಲ್ಲಿದೆಯೋ ಅನುಭವವು ಏನ ಹೇಳುತ್ತದೆ? ಇರಲಿ ಇನ್ನಾಗಲೂ ಮಾನವನ ಕಲ್ಯಾಣಕ್ಕೆ ಸಾಧನವು ಪ್ರೇಮವೋ ಸ್ಪರ್ಧೆಯೋ? ಪ್ರೇಮಪೋಷಕ ವಾತಾವರಣವು ಒಳ್ಳೆಯದೋ ಸ್ಪರ್ಧಾಪೋಷಕ ವಾತಾವರಣವು ಒಳ್ಳೆಯದೋ? ಜೀವನಪೋಷಕತತ್ವವು ಬೇಕೋ ಅಥವಾ ಜೀವನಸಂಹಾರಕ ತತ್ವವು ಬೇಕೋ? ಯಾವುದೆಂದು ಹೇಳಿರಿ ಮತ್ತು ಅದನ್ನು ಅನುಸರಿಸಿರಿ

"ಗಂಗಾಧರ".

ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಮಂಡಳ ಧಾರವಾಡ

ಅಖಿಲ ಕರ್ನಾಟಕ ಕಾಂಗ್ರೆಸ್ ಮಂಡಳಕ್ಕೆ ಕರ್ನಾಟಕದಿಂದ ೩ ಸಭಾಸದರನ್ನು ಚುನಾಯಿಸಲಿರುವರು ಮೊದಲು ಸೂಚಿಸಿದಂತೆ ಉಮೇದ್ವಾರರು ತಮ್ಮ ಅರ್ಜಿಗಳನ್ನು ತಾ ೨೦ರ ಒಳಗೆ ನಮ್ಮ ಕಾರ್ಯಾಲಯಕ್ಕೆ ಮುಟ್ಟಿಸತಕ್ಕದ್ದು ಉಮೇದ್ವಾರರ ಹೆಸರುಗಳನ್ನು ತಾ ೨೪ರಲ್ಲಿ ಈ ಕೆಳಗಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುವು (೧) ಸಂಯುಕ್ತ ಕರ್ನಾಟಕ ಬೆಳಗಾವಿ ೨) ತರುಣ ಕರ್ನಾಟಕ ಹುಬ್ಬಳ್ಳಿ (೩) ಸ್ವದೇಶಾಭಿಮಾನಿ ಮಂಗಳೂರು ಚುನಾವಣೆಯು ತಾ ೭ನೆರಲ್ಲಿ ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಮಂಡಳ ಧಾರವಾಡದಲ್ಲಿ ಜರಗುವುದು

ಎಲ್ಲರಿಗೂ ಕ್ಲಪ್ತಕಾಲಕ್ಕೆ ಒಂದು ತಮ್ಮ ಓಟುಗಳನ್ನು ಕೊಡಲು ಸಾಧ್ಯವಿಲ್ಲವಾದ್ದರಿಂದ ಅಂಥವರು ತಮ್ಮ ಓಟುಗಳನ್ನು ತಮ್ಮ ಸ್ನೇಹಿತರ ಮೂಲಕವಾಗಲಿ ಪೋಸ್ಟ್ ಮುಖಾಂತರ ನಮಗೆ ಕಳುಹಿಸಬಹುದು ಆದರೆ ಅಂತಹ ಪತ್ರಗಳು ತಾ ೨೫ರಲ್ಲಿ ಅಪರಾಹ್ನ ಗಂಟೆ ೩ರ ಒಳಗೆ ನಮ್ಮ ಕಾರ್ಯಾಲಯಕ್ಕೆ ಮುಟ್ಟುವಂತಾಗಬೇಕು, ಪ್ರತಿಯೊಬ್ಬರಿಗೂ ಉಮೇದ್ವಾರರ ಹೆಸರನ್ನು ಗೊತ್ತುಪಡಿಸಲು ಸಮಯವಿಲ್ಲದುದರಿಂದ ಮೇಲಿನ ಪಂಚಿಕೆಯನ್ನು ನಮ್ಮ ಕೆಲಸಕ್ಕೆ ಯೋಗ್ಯವೆಂದು ಕಂಡುಹಿಡಿಯಲಾಗಿದೆ ಆದ್ದರಿಂದ ಎಲ್ಲರೂ ಈ ಪತ್ರಿಕೆಗಳನ್ನು ನೋಡಿ ತಮ್ಮ ಓಟುಗಳನ್ನು ಕಳುಹಿಸಿಕೊಡಬೇಕು ಓಟು ಕಳುಹಿಸಿದ ಲಕ್ಕೋಟೆಗಳ ಮೇಲೆ "ವೋಟಿಂಗ್ ಪೇಪರ್" ಎಂತ ಬರೆದಿರಬೇಕು

ದ ಕ ಜಿಲ್ಲಾ ಗ್ರಾಮ ಉದ್ಯೋಗ ಸಂಘ ಮಂಗಳೂರು.

ತಾ ೧೬–೧–೩೬ನೇ ಸಾಯಂಕಾಲ ಗಂಟೆ ೫–೩೦ಕ್ಕೆ ಕೊಡಿಯಾಲಬೈಲು ಕಾಂಗ್ರೆಸ್ ಕಚೇರಿಯಲ್ಲಿ ಸೇರಿದ ಜಿಲ್ಲಾ ಸ್ವದೇಶಿ ಪ್ರಚಾರ ಸಭೆಯ ಸದಸ್ಯರ ಮಹಾಸಭೆಯಲ್ಲಿ ಇನ್ನು ಮುಂದೆ ಈ ಸಂಸ್ಥೆಯವರು ಅಖಿಲ ಭಾರತ ಗ್ರಾಮ ಉದ್ಯೋಗ ಸಂಘದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿಯೂ ಇದಕ್ಕೆ ಸ್ವದೇಶಿ ಪ್ರಚಾರ ಸಭೆಯೆಂಬ ಹೆಸರನ್ನು ಬದಲಾಯಿಸಿ ದ. ಕ ಜಿಲ್ಲಾ ಗ್ರಾಮ ಉದ್ಯೋಗ ಸಂಘ ಎಂಬುದಾಗಿ ಹೆಸರಿಡಬೇಕಾಗಿಯೂ ಜಿಲ್ಲೆಯ ಸಂಸ್ಥೆಯನ್ನು ಅಖಿಲ ಭಾರತ ಸಂಸ್ಥೆಯೊಡನೆ ಸಂಯೋಜಿಸಲು ಕೇಳಿಕೊಳ್ಳಬೇಕಾಗಿಯೂ ನಿರ್ಣಯವಾಗಿರುತ್ತದೆ

ಲೆಕ್ಕಪತ್ರಗಳ ಮಂಜೂರಾತಿಯಾದ ಬಳಿಕ ಹೊಸ ವರ್ಷದ ಬಗ್ಗೆ ಈ ಕೆಳಗಿನವರನ್ನು ಉದ್ಯೋಗಸ್ಥರನ್ನಾಗಿಯೂ ಕಾರ್ಯಕಾರಿ ಮಂಡಲಿಯ ಸದಸ್ಯರನ್ನಾಗಿಯೂ ನೇಮಿಸಲಾಗಿದೆ ಡಾಕ್ಟರ್ ಎಚ್ ವಿ ಆಡಪ್ಪ (ಅಧ್ಯಕ್ಷ) ೨ ಓ ರಾಮರಾಯಮಲ್ಯ (ಕಾರ್ಯದರ್ಶಿ ೩ ಡಾಕ್ಟರ್ ಯು ಪಿ ಮಲ್ಯ (ಖಜಾಂಚಿ) ೪ ಕೆ ಆರ್ ಕಾರಂತ ೫ ಪಂಡಿತ ಕಲ್ಯಾಣಿಬಾಯಿ ೬ ಕಾರ್ನಾಡ ಸದಾಶಿವರಾವ್ ೭ ಎಂ ಜನಾರ್ದನ ಮಲ್ಯ ೮ ಎಂ ಶ್ರೀನಿವಾಸ ಮಲ್ಯ ೯ ಬಿ ಶ್ರೀನಿವಾಸ್ ೧೦ ಬಿ ಅನಂತಕೃಷ್ಣ ೧೧ ಎಲ್ ಶೆಟ್ಟಿ ೧೨ ಎಚ್ ಸೂರಪ್ಪಯ್ಯ ೧೩ ಎಚ್ ಕೆ ತಿಂಗಳಾಯ ಇವರಲ್ಲದೆ ಇನ್ನು ಎರಡು ಮಂದಿಯನ್ನು ಸೇರಿಸಿಕೊಳ್ಳಲು ಕಾರ್ಯಕಾರಿ ಮಂಡಳಿಗೇನೇ ಅಧಿಕಾರ ಕೊಡಲಾಯಿತು ಸ್ವದೇಶಿ ಪ್ರಚಾರ ಸಭೆಯ ಮೋಟಾರ್ ಟ್ರಕ್ಕು ಮುಂದಿನ ಕಾರ್ಯಕ್ರಮಕ್ಕೆ ಅವಶ್ಯವಿಲ್ಲವೆಂಬುದರಿಂದ ಅದನ್ನು ಮಾರಾಟ ಮಾಡಬೇಕಾಗಿ ನಿರ್ಣಯಿಸಲಾಯಿತು

ದ ಕ ಜಿಲ್ಲಾ ಗ್ರಾಮ ಉದ್ಯೋಗ ಸಂಘದ ಆಫೀಸು ಸದ್ಯಕ್ಕೆ ಕೊಡಿಯಾಲಬೈಲು ಕಾಂಗ್ರೆಸ್ ಕಚೇರಿಯಲ್ಲೇ ಇದ್ದು ದ ಕ ಜಿಲ್ಲಾ ಗ್ರಾಮ ಉದ್ಯೋಗ ಸಂಘ ಕಾಂಗ್ರೆಸ್ ಕಚೇರಿ ಕೊಡಿಯಾಲಬೈಲು ಈ ವಿಳಾಸಕ್ಕೇನೆ ಪತ್ರವ್ಯವಹಾರಗಳನ್ನು ನಡೆಸಬಹುದು

ಗ್ರಾಮಗಳಲ್ಲಿಯ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಿ ಹಳ್ಳಿಗರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ಸರ್ವತೋಮುಖವಾದ ಗ್ರಾಮ ಸಂಘಟನೆಯನ್ನು ತಂದೊಡ್ಡುವುದೇ ಗ್ರಾಮ ಉದ್ಯೋಗ ಸಂಘದ ಧ್ಯೇಯವಿರುತ್ತದೆ ಗ್ರಾಮಗಳೇ ನಮ್ಮ ದೇಶದ ಜೀವಾಳವಾಗಿರುತ್ತವೆಂಬುದರಿಂದ ಈ ಕಾರ್ಯಕ್ರಮಕ್ಕೆ ಅತ್ಯಂತ ಮಹತ್ವವಿರುತ್ತದೆ ಜಿಲ್ಲೆಯ ಗ್ರಾಮಸ್ಥರೂ ಪಟ್ಟಣಿಗರೂ ಈ ಕಾರ್ಯಕ್ರಮದಲ್ಲಿ ಸಹಕರಿಸುವುದು ಆವಶ್ಯವಿರುತ್ತದೆ ಗ್ರಾಮ ಉದ್ಯೋಗ ಸಂಘದ ಕಾರ್ಯಕ್ರಮವನ್ನು ನಮ್ಮ ಜಿಲ್ಲೆಯಲ್ಲಿ ಯಾವ ರೀತಿಗಳಿಂದ ಮುಂದೊತ್ತಬಹುದೆಂಬುದನ್ನು ಕ್ರಮಕ್ರಮವಾಗಿ ಬರೆಯುತ್ತೇನೆ ಈ ಬಗ್ಗೆ ತಮ್ಮ ಸೂಚನೆಗಳನ್ನು ಕೊಡಲಿಚ್ಛಿಸುವ ಕೆಲಸಗಾರರ ಪತ್ರಿಕೆಗಳ ಮೂಲಕವಾಗಲಿ ನನಗೆ ಪತ್ರವ್ಯವಹಾರದ ಮೂಲಕವಾಗಲಿ ಕಳುಹಿಸಿಕೊಟ್ಟರೆ ಉಪಕಾರವಾಗುವುದು

ಓ. ರಾಮರಾಯಮಲ್ಯ
ಕಾರ್ಯದರ್ಶಿ

ಕಂಪೆನಿ ಕಾನೂನಿನ ಸುಧಾರಣೆ

ಕಂಪೆನಿ ಕಾನೂನನ್ನು ಸುಧಾರಣೆ ಮಾಡಲು ಸರ್ ಎನ್ ಎನ್ ಸರಕಾರ್‌ರವರ ಅಧ್ಯಕ್ಷತೆಯ ಲಾ ಸದಸ್ಯರು ಅವರ ಆಶ್ರಯದಲ್ಲಿ ಹಿಂದೂದೇಶದ ಅನೇಕ ಪ್ರತಿನಿಧಿಗಳಿಂದ ಕೂಡಿದ ಒಂದು ಪರಿಷತ್ತು ಅನೇಕ ದಿನಗಳಿಂದ ನಡೆಯುತ್ತಿದೆ ಇನ್ನು ಹತ್ತು ದಿವಸದಲ್ಲಿ ಇವರ ಕಾರ್ಯವು ಪೂರ್ಣವಾಗುವುದೆಂದು ವಾರ್ತೆ ಬಂದಿರುತ್ತದೆ. ಈಗ ಜ್ಯಾರಿಯಲ್ಲಿರುವ ಕಂಪೆನಿ ಕಾನೂನುಗಳನ್ನು ಅನೇಕ ರೀತಿಗಳಲ್ಲಿ ಸುಧಾರಣೆ ಮಾಡಲು ಈ ಪರಿಷತ್ತಿನಿಂದ ಸೂಚನೆಗಳು ಹೋಗುವವು

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ – (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ – (ಸಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ – (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ ಕಟಪಾಡಿ ದ. ಕನ್ನಡ.



Distributors for South Kanara —

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು—ಕಾಮತ್ಸ್ ಸ್ವದೇಶೀ ಎಂಪೋರಿಯಂ

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸು ಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.	ರೂ	ಆ	ಪೈ
				ಎರಡನೇ ದರ್ಜೆ	0	3	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	3	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು.
ಮೊಣಸಿನ ಕಾಳಪ್ಪ.
ಅಗಸ ಮುದ್ದೆ.
ಇಲಿಗಳ ಥಕ್ಕ ಥೈ.
ಅಂಗಳ ಮುಗ್ಗು.
ಗುಡುಗುಡು ಗುಮ್ಮಟ ದೇವರು.
ಒಬ್ಬನ ಓಟ.
(ಇವುಗಳ ಕ್ರಯ: 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

1936

ಇಸವಿಯ
ಶಾರದಾ ಡೈರಿಗಳು
ತಯಾರಾಗಿವೆ!
ಶಾರದಾ ಛಾಪಖಾನೆಗೆ
ಬರೆಯಿರಿ,
ಅಥವಾ
ಬನ್ನಿರಿ

ತಯಾರಾಗಿದೆ!

ಗೌ ಹಾ ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೊಸಿಯೊಲೊಜಿ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ಗವರ್ನ್ಮೆಂಟಿನ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೈಲು ಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9-50	ಸಂಜೆ 4-20
ಮಿಕ್ಸೆಡ್	,, 5-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ. 2 40
ಶಟಲ್	ಸಂಜೆ 5-25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 3.20	ಸಂಜೆ 6 15

ನನ್ನ ಸಾಮಾಜಿಕ ಕಥೆ

ಮಿಥ್ಯಜೀವನದ ಸತ್ಯಕಥೆಗಳು

(Truth is stranger than Fiction)

ಲೇಖಕ — ಶ್ರೀ 'ರಸಿಕರಂಜನ'

(All Rights Reserved)

೨. ರಂಗಪ್ಪನ 'ದಿವಾಳಿ'

ಮಂಗಳೂರಿನ ಪ್ರಮುಖ ವ್ಯಾಪಾರಿಗಳು—ವಾಣಿಜ್ಯ ದಿಗ್ದಂತಿಗಳು—ಒಂದು ದಿನ ಬೆಳಿಗ್ಗೆ ಎದ್ದವರೇ ರಂಗಪ್ಪನ ಹೆಸರನ್ನೂ ತಮ್ಮ ಸಾಲಿನಲ್ಲೇ ಸೇರಿಸಿರುವುದನ್ನು ಕಂಡರು ಆ ವರೆಗೆ ಅನಾಮಿಕನಾಗಿದ್ದ ರಂಗಪ್ಪನು ಅಂದು ಮಂಗಳೂರಿನ, ಚರಿತ್ರೆಯಲ್ಲೇ ಒಂದು ಹೊಸ ಪುಟವನ್ನು ಮಗುಚಿದನು ಹೆಚ್ಚೇಕೆ, ಇಡೀ ಮಂಗಳೂರಿನ ಅದೃಷ್ಟದ ವಿಧಾತನೇ ಅವನಾದನೆನ್ನಲು ಯಾರೂ ಸಂಕೋಚಪಡಲಾರರು.

ರಂಗಪ್ಪನು ಮೊದಲು ಸಾಮಾನ್ಯ ವ್ಯಾಪಾರಿಯೇ ಆಗಿದ್ದರೂ ಆತನು ಕೈಕೊಂಡ ಯಾವುದೋ ಒಂದು ಉದ್ಯಮದಲ್ಲಿ ದೊರೆತ ಅಸಾಮಾನ್ಯ ಲಾಭವೇ ಅವನ ಈ ಪ್ರಸಿದ್ಧಿಗೆ ಕಾರಣವಾಯಿತು.

ಅಂದಿನಿಂದ ರಂಗಪ್ಪನ ನಕ್ಷತ್ರವು ಒಂದೇ ಸವನೆ ಆರೋಹಣೋನ್ಮುಖವಾಯಿತು ಅವನು ಎಷ್ಟರ ಮಟ್ಟಿಗೆ ಅದೃಷ್ಟಶಾಲಿಯಾದನೆಂದರೆ, ಕೈಯಲ್ಲಿ ಮಣ್ಣು ಎತ್ತಿದರೂ ಅದು ಹೊನ್ನಾಗುವಂತಾಯಿತು

ರಂಗಪ್ಪನ ವ್ಯಾಪಾರವು ದಿನೇ ದಿನೇ ವಾಣಿಜ್ಯದ ಪ್ರತಿಯೊಂದು ಶಾಖೆಯಲ್ಲೂ ಹರಡತೊಡಗಿತು ಊರಿನ ಪ್ರಮುಖ ಜಿನಸಿನ ಭಂಡಸಾಲೆ, ಕಚ್ಚೇರಿ ಅಂಗಡಿ, ಜವಳಿಯ ಮಳಿಗೆ, ಚಿನ್ನದ ಕಟ್ಟೆ, ಕಾಫಿ ಹೊಟೆಲು, ಮುಂತಾಗಿ ಪ್ರತಿಯೊಂದೂ ರಂಗಪ್ಪನ ಹೆಸರಿನಿಂದ ಶೋಭಿಸುತ್ತಿತ್ತು

ವ್ಯಾಪಾರ ಹಬ್ಬಿದಂತೆಯೇ ರಂಗಪ್ಪನ ದರ್ಬಾರೂ ಹರಡತೊಡಗಿತು ಒಂದೇ ವರ್ಷದಲ್ಲಿ ಅವನು ಮೂರು ಮೋಟರ್ ಕಾರುಗಳ ಒಡೆಯನಾದನು ಅವನ 'ವಾಸವೂ ಹೊಸತಾಗಿ ಕೊಂಡ ಕೆಂಡ ಇಂದ್ರಭವನ'ಕ್ಕೆ ವರ್ಗ ಹೊಂದಿತು. ... ನೆಯಲ್ಲಿ ತಲೆಗೆ ಬಿದ್ದಂ... ಕೆಲಸದವರಾದರು ಹತ್ತಿರದ ಸಂಬಂಧಿಕರೂ, ಬಾದರಾಯಣ ಸಂಬಂಧಿಕರೂ ರಂಗಪ್ಪನನ್ನು ಊರು ಹೊರಊರುಗಳಿಂದ ಹುಡುಕಿಕೊಂಡ ಬಂದು, ಒಂದೆರಡು ತಿಂಗಳು ಅವನ ಆತಿಥ್ಯವನ್ನು ಪಡೆದು ಸಂತುಷ್ಟಾಂತರಂಗರಾಗಿ ಹೋಗತೊಡಗಿದರು. ಅಂತೂ ರಂಗಪ್ಪನ ಮನೆಯು ಯಾವಾಗ ನೋಡಿದರೂ, ಮದುವೆಯ ಮನೆಯಂತೆ, ಸುಖಸಂತೋಷ ಪೂರ್ಣ

ಎರಡನೆಯ ವರ್ಷ ರಂಗಪ್ಪನ ಲಾಭವನ್ನು ಹಾರಿಯಿಂದಲೇ ಅಚೆ ಈಚೆ ಮಗುಚಬೇಕಾಯಿತಂತೆ ಈ ವರ್ಷ ಅವನು ತನ್ನ ಹಿರಿಯ ಮಗಳಿಗೆ ಬಹಳ ವಿಜೃಂಭಣೆಯಿಂದ ಮದುವೆಮಾಡಿಕೊಟ್ಟನು ಮದುವೆಗೆ ಮದವರ ಆನೆಗಳನ್ನೆಲ್ಲಾ ತಂದಿದ್ದರು ಅದರ ಖರ್ಚೇ ಐದು ಸಾವಿರ ರೂಪಾಯಿ ಆಗಿತ್ತೆನ್ನುವಾಗ ಇಡೀ ಮದುವೆಯ ಖರ್ಚು ಎಷ್ಟಾದೀತೆಂದು ಸುಲಭದಲ್ಲಿ ಊಹಿಸಬಹುದು

ರಂಗಪ್ಪನ ದರ್ಬಾರು ಮೂರು ವರ್ಷ ನಡೆಯುವುದರೊಳಗೆ ರಂಗಪ್ಪನಿಗೆ ಪರಿಚಯವಿಲ್ಲದ ಊರ ಪ್ರಮುಖರೇ ಇಲ್ಲದಂತಾಯಿತು ಆತನು ಗೋವೆ, ಮುಂಬಾಯಿ, ಕರಾಚಿ ಕೊಚ್ಚಿ ಮುಂತಾದ ಕಡೆಗಳಲ್ಲಿ 'ಪೇಡಿ'ಗಳನ್ನು ತೆರೆದಿದ್ದನು, ಅಲ್ಲೆಲ್ಲಾ ವರ್ಷಕ್ಕೆ ಹತ್ತು ಸಲ ತಿರುಗಿ ಬರುತ್ತಿದ್ದು ಅಲ್ಲಿಯ ಹಲವು ಪ್ರಮುಖ ಹಣಗಾರರ ಗುರುತನ್ನೂ ಮಾಡಿಕೊಂಡಿದ್ದನು.

ಈಗ ರಂಗಪ್ಪನಿಗೆ ಯಾವ ಬೇಂಕಿನವರೂ, ಯಾವ ಮಾರವಾಡಿಯವರೂ ಎಷ್ಟು ಹಣವನ್ನಾದರೂ ಸಾಲಕೊಡಲು ಹಿಂಜರಿಯುತ್ತಿರಲಿಲ್ಲ.

ನಾಲ್ಕನೆಯ ವರ್ಷದಲ್ಲಿ ಕಾಲಿಡುತ್ತಲೇ ರಂಗಪ್ಪನಿಗೆ ತಗಲಿದ ಒಂದೆರಡು ಸಾಧಾರಣವಾದ ವ್ಯಾಪಾರದ ಪೆಟ್ಟುಗಳು ಅವನನ್ನು ಸ್ವಲ್ಪ ದುಗ್ಗರಿಸುವಂತೆ ಮಾಡಿದುವು. ಎಲ್ಲರಿಗೂ ಇದು ತಿಳಿದಿದ್ದರೂ ಹೆಚ್ಚಿನವರು ಅವನೊಡನೆ ತಮ್ಮ ವಹಿವಾಟುಗಳನ್ನು ಮುಂಚಿನಂತೆಯೇ ಮಾಡುತ್ತಾ ಬಂದರು. ಬೇಂಕುಗಳು ಮಾತ್ರ ತಮ್ಮ ಲೇವಾದೇವಿಗಳಲ್ಲಿ ಜಾಗ್ರತೆಯಾಗ ತೊಡಗಿದರು.

ರಂಗಪ್ಪನು ತನ್ನ ತಗಾದೆಗಳಿಗೆ ಬೇಕಾದ ಹಣವನ್ನು, ದೊಡ್ಡ ದೊಡ್ಡ ವ್ಯಾಪಾರಿಗಳ ಜಾಮೀನು ಕೊಟ್ಟು, ಬೇಂಕುಗಳಿಂದ ಪಡೆಯಲಾರಂಭಿಸಿದನು ಅವುಗಳನ್ನು ಹಿಂದೆ ಪಾವತಿ ಮಾಡುವುದಕ್ಕೆ ಇನ್ನೂ ದೊಡ್ಡ ವ್ಯಾಪಾರಿಗಳ ಜಾಮೀನಿನ ಮೇಲೆ ಬೇರೆ ಬೇಂಕುಗಳಿಂದ ಇನ್ನೂ ಹೆಚ್ಚಿನ ಹಣ ಸಾಲ ಪಡೆಯುತ್ತಾ ಬಂದನು

ವ್ಯಾಪಾರಿಗಳಾದರೂ ಜಾಮೀನನ್ನು ಬರೀ ಮಾತುಗಳ ಮೇಲೆ ಕೊಡುತ್ತಿರಲಿಲ್ಲ ರಂಗಪ್ಪನ ಮನೆಯಲ್ಲಿ ಅವನ ಹೆಂಡತಿಮಕ್ಕಳ ನಡುವೆ ಊಟ ಉಪಚಾರ, ಟೀಪಾರ್ಟಿ ಸತ್ಕಾರಗಳ ಅಮಲನ್ನು ಕಲಿಗೇರಿಸಿ ರಂಗಪ್ಪನು ಅವರನ್ನೆಲ್ಲಾ ಕ್ರಮಪ್ರಕಾರ ಬೇಂಕಿಗೆ ಒಯ್ಯುತ್ತಿದ್ದನು ಈ ಅಮಲು ಸಾಕಾಗದವರಿಗೆ ಸ್ಪೆನ್ಸರ್ ಹೊಟೇಲಿನ ವ್ಯೆನ್, ವ್ಹಿಸ್ಕಿ, ಬೀರ್ ಮುಂತಾದುವು ಸಹಕಾರಿಯಾಗುತ್ತಿದ್ದುವು. ಇನ್ನೂ ಕೆಲವರಿಗೆ ಇತರ ಬಾಗ್ಗೆಗಳ ಸಂದರ್ಶನ ಕೂಡ ರಂಗಪ್ಪನ ಔದಾರ್ಯದಿಂದ ಬಹು ಸಲೀಸಾಗಿ ದೊರೆಯುತ್ತಿತ್ತು ರಂಗಪ್ಪನ ಮೋಟರುಗಳಿಲ್ಲ ಈಚೆಗೆ ಇಂತಹವರನ್ನು ಸಾಗಿಸುವ ಉದ್ಯೋಗದಲ್ಲೇ ಹಗಲೂ, ಇರುಳೂ ನಿರತವಾಗುತ್ತಿದ್ದುವು

ಒಂದು ದಿನ ಬೆಳಿಗ್ಗೆ ಏಳುವಾಗ, ರಂಗಪ್ಪನ ಹೆಸರು ಹೇಗೆ ಮೇಲೆ ಬಂದಿತ್ತೋ, ಹಾಗೆಯೇ ಅದು ಕೆಳಕ್ಕೆ—ಅಧಃ ಪಾತಾಳಕ್ಕೆ—ಬಿದ್ದಿತ್ತೆಂದು ಎಲ್ಲರಿಗೂ ಕಂಡುಬಂತು ರಂಗಪ್ಪನು ಐದು ಲಕ್ಷ ರೂಪಾಯಿಗೆ ದಿವಾಳಿಯಾಗಿದ್ದನು

ರಂಗಪ್ಪನ ಕಾರಿನಲ್ಲಿ ನೂರುದಿನ ತಿರುಗಾಡಿದ ನಾರಾಯಣ ರಾಯ...ಗೆ ಒಂದೆ ದಿನಕ್ಕೆ ಹತ್ತು ಸಾವಿರ ರೂಪಾಯಿ ...ಂದಿಗೆ ಚಿತ್ತ ಅವನ ಮನೆಯಲಿ ಒಂದು ಫಲಾಹಾರ ಮಾಡಿದ ಲಕ್ಷ್ಮಣ ಆಚಾರ್ಯರಿಗೆ ಐದುಸಾವಿರದ ಬಿಲ್ಲು ಬಂತು ರಂಗಪ್ಪನ ಹೆಂಡತಿಯ ಮುಂದೆ ಐದು ನಿಮಿಷ ಸುಳಿದಾಡುವ ಭಾಗ್ಯ ಪಡೆದ ಚಂದ್ರಕಾಂತ ಶ್ಯಾನುಭೋಗರಿಗೆ ನಿಮಿಷಕ್ಕೆ ಎರಡು ಸಾವಿರ ರೂಪಾಯಿ ದಂಡವಾಯಿತು ಅವನ ಸಹಾಯದಿಂದ ಕೃಷ್ಣಪ್ಪನವರು ಸ್ಪೆನ್ಸರ್ ಹೊಟಿಲಿನಲ್ಲಿ ಸವಿದ ಒಂದು ಕಪ್ ವ್ಯೆನಿಗೆ ಇಪ್ಪತ್ತು ಸಾವಿರ ರೂಪಾಯಿ ತಗಲಿತು ರಂಗಪ್ಪನೊಂದಿಗೆ ಊರಿನ ಮತ್ತು ಗೋವೆ, ಮುಂಬಯಿ ಮುಂತಾದ ಕಡೆಗಳ ಸುಂದರಿಯರ ಪರೀಕ್ಷಾ ಲಾಭ ಪಡೆದ ಮಂಜುನಾಥ ರಾಯರು ಐವತ್ತು ಸಾವಿರ ರೂಪಾಯಿ ಪರೀಕ್ಷೆಯ ಪ್ರವೇಶಧನ ತೆರಬೇಕಾಯಿತು ಇಂತಹ ಎಲ್ಲರ ಆವೇಶವನ್ನು ಎದುರಿಸಲಾರದ ರಂಗಪ್ಪನು ಎಲ್ಲಿ ನೋಡಿದರೂ ಕಾಣೆ

ರಂಗಪ್ಪನ 'ಇಂದ್ರಭವನ', ಮೋಟರ್ ಕಾರುಗಳು ಇತರ ಆಸ್ತಿಪಾಸ್ತಿ ಎಲ್ಲವನ್ನೂ ಮಾರಿದರೆ ಸಾಲಿಗರಿಗೆ ಸ್ವಲ್ಪವಾದರೂ ಉಳಿದೀತ್ತು ಎಂತಾದೀತೆಂದು ಎಲ್ಲರೂ ಹಾರೈಸಿಕಾದಿದ್ದರು ಆದರೆ ಎಷ್ಟು ಕಾಯ್ದರೂ ಬಂಜೆಯ ಬಸಿರೇ ಆಯಿತು 'ಇಂದ್ರಭವನ'ದಲ್ಲಿ ರಂಗಪ್ಪನ ಹೆಂಡತಿಯು ಮೊದಲಿನಂತೆಯೇ ಸಂಭ್ರಮದಿಂದ ಕಾಲ ಕಳೆಯುತ್ತಿದ್ದಳು ಕಡೆಗೆ ಕೆಲವರು ರಿಕಾರ್ಡುಗಳನ್ನು ಪರಿಶೀಲಿಸಿ ನೋಡಿಸಲು ರಂಗಪ್ಪನ ಇಂದ್ರಭವನವೂ, ಆಸ್ತಿಪಾಸ್ತಿಗಳೂ ಅವನ ಹೆಂಡತಿಯ ಹೆಸರಲ್ಲೇ ಇದ್ದುವೆಂದು ವ್ಯಕ್ತವಾಯಿತು

ಈಗ ರಂಗಪ್ಪನು ಮಂಗಳೂರಲ್ಲೇ ತನ್ನ ಭಾವನ ಹೆಸರಲ್ಲಿ ತಿರುಗಿ ವ್ಯಾಪಾರ ಆರಂಭಿಸಿರುವನು. ಅವನ ಮನೆಯಲ್ಲಿನ ದರ್ಬಾರೂ ಮುಂಚಿನಂತೆಯೇ ಸಾಗುತ್ತಿರುವುದು ಆದರೆ ಈಗ ಮಾತ್ರ ಅವನು ಯಾರನ್ನೂ ಜಾಮೀನು, ಗಾಗಲಿ, ಸಾಲಕ್ಕಾಗಲಿ ಕೇಳಿಕೊಂಡು ಹೋಗುವುದಿಲ್ಲ ಅವನ ಹೆಂಡತಿಯೇ ಬೇಂಕಾಗಿರುವಾಗ ಅವನಿಗೆ ಇದರ ಅಗತ್ಯವೆಲ್ಲಿಯದು?

ಬರುವ ವಾರ

ಮಿಥ್ಯಜೀವನದ ಸತ್ಯಕಥೆಗಳು

೩. "ಸಾಧ್ವಿಯರ ಸಾಧು"

ಓದಲು ಮರೆಯಬೇಡಿ!

NOTICE

Wanted a private teacher Apply with particulars, stating the minimum pay required to,

Mr Kanjarpane Gopalkrishnaya,
Sullia Post

FROM FIRST WEEK OF
MARCH 1936
N.I.P.
HIGH GRADE-HIGH TEST
PETROL
WILL BE DISTRIBUTED IN
VARIOUS PARTS
OF INDIA
For Agency terms apply
International Oil Co, Ltd
Jiji House Ravelin Street, Fort,
BOMBAY
Sole Distributors for India

ನಿಮ್ಮ ವಕ್ಷಸ್ಥಳದಿಂದ
ಶೀತವನ್ನು
ಹೋಗಲಾಡಿಸಿರಿ.
ಬಿಲ್ಲೆಗಳು ಶ್ವಾಸೋಚ್ಛ್ವಾಸಿಸಿರಿ.



ಎಲ್ಲಾ ಔಷಧಿಗಾರರು ಪೆಪ್ಸ್‌ಗಳನ್ನು ಬಾಟ್ಲಿ 1ಕ್ಕೆ ರೂ 1ರಂತೆ ವಿಕ್ರಯಿಸುವರು.

ಪೆಪ್ಸ್ PEPS

ನೆಪ್ಚೂನ್ ಎಶ್ಯೂರೆನ್ಸ್ ಕಂಪೆನಿ,
ಲಿಮಿಟೆಡ್.

ಬಡವರಿಗೂ ಮಧ್ಯಮತರಗತಿಯವರಿಗೂ ತೆರೆದ ವಿಮಾಸಂಸ್ಥೆ ಎಂದರೆ
ಜಗತ್ತಿನಲ್ಲಿ ಇದೊಂದೇ!

ಜನತೆಯೂ, ಛಾಪಖಾನೆಗಳೂ ಪತ್ರಿಕೆಗಳೂ ಇದರ ಗುಣಗಾನ ಮಾಡುತ್ತಿರುವುವು.

ಇದರ ಪ್ರತಿನಿಧಿಗಳಾದವರಿ ತುಂಬಾ ಧನಪ್ರಾಪ್ತಿ ಮಾಡಬಹುದು.

ಏಜನ್ಸಿಯ ಶರ್ತಗಳಿಗೆ ಇಲ್ಲಿಗೆ ಬರೆದ ಕೇಳಿ —

ದಿ ನೆಪ್ಚೂನ್ ಎಶ್ಯೂರೆನ್ಸ್
ಕಂಪೆನಿ ಲಿಮಿಟೆಡ್,
109 ಪಾರ್ಶಿ ಬಜಾರ್ ಸ್ಟ್ರೀಟ್
ಮುಂಬಯಿ

ಲೋಕಲ್ ಏಜಂಟರು
ಎಚ್. ಕೆ. ತಿಂಗಳಾಯ,
ಹಳೆಗೆ ಬಜಾರ್, ಮಂಗಳೂರು.

ಬೋನಸ್
ರೂಪಾಯಿ
54
ಮತ್ತು
45
ಇಡೀ ಜೀವಮಾನದ ವಿಮೆಯ ಪಾಲಿಸಿಗಳ ಮತ್ತು ಎಂಡೋವಮೆಂಟ ಮೇಲೆ ಮೂರು ವರುಷಗಳಿಗೆ ಪ್ರತಿ ಸಾವಿರಕ್ಕೆ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadui distiicts.
2. Coorg, South Canara, Shimoga and Chitaldrug districts
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Goverument-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕೃತವಾಗಿದೆ)
ಇಲ್ಲಿ ಟ್ಯಾಪ್‌ರ್ಯಾಟಿಂಗ್ ಮೊದಲಾದ ಕಮೆರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment Details may be had on application to the Manager

---

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc, in guaranteed colours Silk Sarees & Coatings a Speciality Work is conducted under the supervision of Textile experts. We undertake special orders to suit individual tastes

Please inspect our goods at:

Raghavendra Ranga Pai, Car Street, Mangalore.

We deal in grey & Coloured Yarns Dyes Chemicals & Handloom accessories

M. Venkatesha Ranga Pai.

Proprietor

ಡಾಕ್ಟರ ವಾಮನ ಗೋಪಾಳರವರ

ಅನುಭವಸ್ಥ ಶಾಸ್ತ್ರೀಯರಿಂದ ಕೆಟ್ಟ ರಕ್ತಕ್ಕೆ ಪರಮೌಷಧ ೫೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ ಪ್ರೊಸ್ಪರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್
ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಭಾಯಖಲ್ಯಾ ಮುಂಬಯಿ
ಏಜೆಂಟರು ... ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲ ಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿ ಮಾಡುವುದು ಶರೀರಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು.

ಬಾಟ್ಲಿ 1ಕ್ಕೆ 10 ಆಣೆ. 8 ಬಾಟ್ಲಿಗಳಿಗೆ ರೂ 1-12-0.



ಅಲ್ಲದೆ ಬಾಲಗ್ರಹ ತೈಲ ಬಾಲಗ್ರಹ ದ್ರವ ಸಹಾ ದೊರೆಯುತ್ತವೆ ಕ್ರಯ. ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ
ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0-0

ಮಲೇರಿಯಾ ನಿವಾರಿಣೀ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ ಪುರಾಣ ಜ್ವರ, ಕಫ ಜ್ವರ, ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1 8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 18

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬರದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ 2-8-0 ಮಾತ್ರ

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:- ಶ್ರೀ ರಾಮ ಸ್ಟೋರ್ಸ್ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ... ಪುತ್ತೂರು, ಮೆಸರ್ಸ ಮುಲ್ಲರ ಪೇಟೆನ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ ... ಎಂಡ್ ಕೊ, ... ನಂ. 4, ದಿ ... ಹೋಟೆಲ್, ಮಡಿಕೇರಿ ಕೂರ್ಗ್, ... ಫಾರ್ಮಸಿ, ಸಾಗರ

The Canara Banking Corporation Udipi, Ltd.

Head office:—UDIPI, S. K (Incorporated in British India) TEL.-'BANKING' **ESTD. 1906.**

Branches:—1 Udipi, 2 Coondapoor, 3. Car Street, Mangalore, 4. Shimoga, 5. Madras (George Town), **6. Bunder Mangalore, 7 Mercara** (North Coorg), **& 8 Virarajendrapet** (South Coorg)

DEPOSITS:

1922	1926	1930	1934	30 11 '35
ರೂ 2,28,419/	6,48,940/	20,28,887/	24,95,829/	**27,40,812/-**

SAVINGS BANK ACCOUNTS

INTEREST allowed at 3½ %

Facilities } 1 Withdrawal by **CHEQUES.** 2 Production of pass books unnecessary at the time of withdrawal 3 Accounts transferred **FREE** of charge from one office to another

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ 'ಕಿಂಗ್ ಎಂಡ್ ಕ್ರೀನ್'' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪ್ಪೋವಿನ, ಮೂರು ಬಣ್ಣದ ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಪೇಕ್ಷೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

TO INSURE OR TO REPRESENT

CONSULT –

The Bombay Life Assurance Company Ltd.

ESTD 1908

Offers (1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra
(5) Increased rate of Bonuses
(6) Accident Risk on a small extra payment

Attractive Rates of Commission & Bonuses to Agents

For particulars apply to any of our Offices

Koohikar Brothers. Branch Secretaries

OFFICES 1) 'Gautam Nivas' Charni Rd, Girgaum, Bombay No 4 (2) P B 337 Mount Road Madras (3) Visveshwarapuram Circle, Bangalore City (4) Hazur Road Calicut (5) Car Street Mangalore, S K (6) Udipi (S India)

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ – ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೬ ವರ್ಷಗಳ ಮೌಲ್ಯವೇಕ್ಷಣದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ═══ ಯಥೋಚಿತವಾದ ಪುರಸ್ಕಾರಗಳಿವೆ. ═══ ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವಾರ್ಷಿಕ ಚಂದಾ ೩ ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M.3406

ಟಪ್ಪಾಲು ಹಾಸಲು ಸೇರಿ ರೂ. 2-13-0

for Quality Snuff
H. Rama Rao and Sons
High Class Snuff Manufacturers
Mangalore
ask for
RAMA SNUFF
The charm of Snuff Users!

ಸ್ವದೇಶಾಭಿಮಾನಿ

SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in
THE BOMBAY LIFE
Kochikar Brothers

ESTABLISHED 1906

(ಕೇರಳೀಯ... [illegible])

[illegible]

ರಕ್ಷೈರ್ಮರ್ಗಹಾರ್ಯೈಸ್ತು ಕುರ್ಮನ ದೇವಾ । ... [illegible]
ದೊರೆಯಲಸುವನ ರತ್ನಗಳ ... [illegible]
ಗರಲಕನರಂಜದರಿ ... [illegible]

ಪುಸ್ತಕ ೩೦. ಮಂಗಳೂರು ತಾ. ೩೧ನೇ ಶುಕ್ರವಾರ ಜನವರಿ ೧೯೩೬ (31-1-'36) ಸಂಚಿಕೆ ೫

ಮಂಗಳೂರಿನ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವ ಸಮಾರಂಭಕ್ಕೆ ಆಗಮಿಸಿದ
ಶ್ರೀ ಕಾಶೀಮಠಾಧೀಶ್ವರರಾದ
ಶ್ರೀ ಸುಕ್ರತೀಂದ್ರ ತೀರ್ಥ ಶ್ರೀಪಾದಂಗಳವರು.

[illegible]

NOTE.....S.

'ಕಾಲೇಜು' ಒಂದು ಒಬ್ಬರು ತಪ್ಪಾಗಿ ಬರೆದುದರಲ್ಲಿ 'ಕೊಲಿಜು' ಎಂದು ಆಗುವಷ್ಟು ಸರಿಯಾಗಿ, ಉಚ್ಚಾರಕ್ಕೆ ತಕ್ಕಂತೆ ಶ್ರೀ! ಎನ್. ಎಸ್. ಸುಬ್ಬ್ರಾವ್ ರವರ ಅಧ್ಯಕ್ಷ ಭಾಷಣದಲ್ಲಿ ಮುದ್ರಣವಾದೊಡನೆ,—ಅದು ಮಂಗಳೂರು ಕನ್ನಡ ಎಂದಾಯಿತೆಂದು ದೂರಿದರೆನ್ನುವುದು ಎಂತಹ ಹರಿದಾಸರಿಗೂ ನ್ಯಾಯವಲ್ಲ.

+ + + +

ಮಂಗಳೂರು ಮೈಸೂರು ಧಾರವಾಡ ಎಂಬ ಈ ಭೇದಗಳು ಇರುವಷ್ಟು ಇರುವುವೇ ಆದರೂ ಅವನ್ನು ಇನ್ನೂ ಇನ್ನೂ ಒತ್ತಿ ಕೀಳಿ ಭಿನ್ನತೆಯನ್ನೆ ಹೆಚ್ಚಾಗಿಸುವುದು ಬೇಡವೆಂದು ಪ್ರಯತ್ನ ಮಾಡುವವರು ಮಾಡುತ್ತಿರಲಿ. ಕೊಲಿಜು ಎಂದು ಯಾರೂ ಬರೆದ ಕೂಡಲೆ, ಅದೇನು ಮೈಸೂರು ಹರಿದಾಸರಿಗೆ ಮೈಲಿಗೆಯಾಗಿಯೇ ಹೋಯಿತೆ? ಬೇಲೂರು ಕನಕದಾಸನ ಭಕ್ತಿಯ ಪ್ರಪಂಚ ಎಂಬುದನ್ನು ಮರೆವುದೇ?

× × × × × ×

ಉದ್ದಾಮಗುಣದಿಂದ ಗೋಪಾಳ ಬುಟ್ಟಿ ಹೊತ್ತು, ವಿಜಯನಗರ ಸ್ಮಾರಕೋತ್ಸವಕ್ಕೆ ಹಣ ಕೂಡಿಸಬಲ್ಲ ಈ ಮಹಾನುಭಾವರಿಗೆ ಒಂದು 'ಕೊ' 'ಕಾ'ಗಳೊಳಗೇ ಇಷ್ಟು ಕಂಡರೆ,—ಇವರು ಈ ಗೋಪಾಳಬುಟ್ಟಿಯಲ್ಲಿ ತುಂಬ ಕೂಡಿಸಿ ತರಲು ಹೊರಟಿರುವುದೇನನ್ನು? ಎಂದು ಕೇಳೋಣವೆ? ಬೇಡ.

× × × × ×

ಮಂಗಳೂರು ಕನ್ನಡವನ್ನು ಅಸ್ಪೃಶ್ಯತೆಯ ದೃಷ್ಟಿಯಿಂದ ತಾವು ಕಂಡರೂ, ಶ್ರೀ! ಸುಬ್ಬರಾಯರ ಮೇಲೆ ಮುನಿಯದಿರಿ. ಅವರ ಅನುಗ್ರಹವು ಸರ್ವರ ಮೇಲೂ ಏಕಪ್ರಕಾರವಿರುವಲ್ಲಿ, ತಾವೆ ಬೇರೆ ಅದನ್ನು ವಶೀಕರಿಸಿಕೊಳ್ಳಲು ಹೋಗುವುದು ಬೇಡವೆಂದು, ಮುಂಬಾಯಿಯಲ್ಲಿ ತಮ್ಮ ರುಮಾಲುಮೂಟೆ ನೋಡಿಯೆ, ಸಾಷ್ಟಾಂಗ ಮಾಡಿದ ಜಟ್ಕಾದವನು (ಸಾಬಿಯೆ?) ತಮಗೆ ತಿಳಿಸದಿದ್ದುದು ಅನ್ಯಾಯವಾಯಿತು.

+ + + +

ಹರಿದಾಸರು ಮಂಗಳೂರು ಕನ್ನಡದ ಗಾಳಿ ಸೋಕದಂತೆ, ದೂರವಿದ್ದಷ್ಟು ಅವರ ಮಡಿ ಉಳಿಯಲಿ; ನಮ್ಮ ಕನ್ನಡ ಬೆಳೆಯಲಿ,—ಇಂಥ ಮಡಿಯಿಲ್ಲದೆ!

+ + + +

ಇನ್ನೊಮ್ಮೆ ಗವರ್ನರಸಾಹೇಬರ ಸಂದರ್ಶನವಾಗುವ ತನಕ, ನಮ್ಮ ರೈಲ್ವೇ ಸ್ಟೇಶನಿನಿಂದ ಹಂಪನಕಟ್ಟೆಗೆ ಸೀದಿರುವ ರಸ್ತೆಯ ಒಂದು ಬದಿಯು ಹಾಗೇ ಉಳಿಯುವುದೆಂದು ಹೇಳುತ್ತಾರೆ. ಏಕೆಂದು ಯಾರು ಬಲ್ಲರು?

× × × × ×

ಕೆಲವು ಎತ್ತುಗಳೂ, ಇಷ್ಟಿಷ್ಟು ಕಸವೂ, ಒಂದು ಪೆಟ್ಟಿಗೆಯಂಗಡಿಯೂ ಆ ಬದಿರಸ್ತೆಯ ಮೇಲೆ ಇರುವಷ್ಟು ಕಾಲ, ಇನ್ನೇಕೆ ಅದನ್ನು ಸರಿಪಡಿಸಬೇಕು? ಇವಕ್ಕೆಲ್ಲ ಬೇರೆ ಜಾಗೆಯಿಲ್ಲವಲ್ಲ!

× × × × ×

ಅಥವಾ, ಹೆಣ್ಣು ಮಕ್ಕಳ ಆಸ್ಪತ್ರೆಯ ಹಿಂಭಾಗದಲ್ಲಿರುವ ರಸ್ತೆಗೊಂದು ಜೋಡಿಯಾಗಿ, ಗಂಡುಮಕ್ಕಳ ಆಸ್ಪತ್ರೆಯ ಬಳಿಯ ದಾರಿಯನ್ನೂ ಹೀಗೆ ಸಿಂಗಾರವಾಗಿ ಇರಿಸುವುದೂ ಚಂದವೇ!

+ + + +

1937ನೇ ಇಸ್ವಿ ಜನವರಿಯ ಮೊದಲು ಹೊಸ ಕೌನ್ಸಿಲು ಚುನಾವಣೆಗಳಾಗಲಾರವು ಎಂದು ಈಗ ಪ್ರಕಟವಾಗಹತ್ತಿದೆ. ಈಗಣ ಕೌನ್ಸಿಲು ಇದುವರೆಗೆ ದ್ವಿಗುಣಿತ ಅವಧಿ ತಳೆದು ಮಾಡಿರುವ ಮಹತ್ಕಾರ್ಯಗಳನ್ನು ಮುಗಿಸಲು ಸಂಪೂರ್ಣ ಅವಕಾಶ ಸಿಕ್ಕಿದಂತಾಯಿತು. ಅರ್ಧಕ್ಕರ್ಧ ಮಾಡಿಟ್ಟಿರುವ ಹಿತಕೃತ್ಯಗಳನ್ನು ಪೂರೈಸಲೂ, ತಿಳಿದೂ ತಿಳಿಯದೆಯೂ ಮಾಡಿರುವ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಲೂ ಇಷ್ಟು ಅವಧಿ ಸಿಕ್ಕಿದಂತಾಯಿತು.

+ + + +

ಬೋರ್ಡುಗಳಲ್ಲಿ ಯಾವುದನ್ನು ಇಬ್ಭಾಗ ಮಾಡಬಹುದೆಂದು ನಿರ್ಧಾರಮಾಡಲು, ಆರು ತಿಂಗಳ ತನಕ ಒಬ್ಬ ಆಫೀಸರರ ನೇಮಕವಾಗಿದೆ. ಇವರಿಗೆ ಸೂಚಿಸಬಹುದಾದ ಮೊದಲನೇ ಎರಡು ಕೆಲಸಗಳು ಇವು:—

ಮಲಬಾರು ಜಿಲ್ಲಾ ಬೋರ್ಡು ಮೂರು ಬೋರ್ಡುಗಳಾಗುವಂತೆ ವಿಭಜಿಸಬೇಕಾಗಿ ಅಲ್ಲಿಯ ಮೆಂಬರರಲ್ಲೇ ಕೆಲವರ ಅಭಿಪ್ರಾಯವಿದೆ. ಈಗಲೆ ಒಂದೂವರೆ ಲಕ್ಷದಷ್ಟು ಮಾತ್ರ ವ್ಯಯವು (ಆಯಕ್ಕಿಂತ) ತೋರುವುದರಿಂದ, ಆಗತ್ಯವಾಗಿಯೂ ಅದನ್ನು 3 ಬೋರ್ಡುಗಳಾಗಿ ಮಾಡಿ, ಅವಲ್ಲಿ ಒಂದಕ್ಕೆ ನಮ್ಮಲ್ಲಿನ ಅಮೂಲ್ಯವಾದ ಕಾಸರಗೋಡನ್ನೂ (ಅವರ ಅಪೇಕ್ಷೆಯಂತೆ) ಕೂಡಿಸಿದರೆ ಹೇಗಾದೀತು?

ಹೊಸ ಮ್ಯುನಿಸಿಪಾಲಿಟಿಯೇ ಉತ್ಪನ್ನವಾಗಿ ಜಿಲ್ಲಾ ಬೋರ್ಡಿನಲ್ಲಿ ವಿಶೇಷ ಕಾರ್ಯಭಾರ ನಡೆಸಿದ ಅನುಭವಶಾಲಿಗಳು ಆ ಮ್ಯುನಿಸಿಪಾಲಿಟಿಯ ಕೌನ್ಸಿಲಿನಲ್ಲಿ ಖಂಡಿತವಾಗಿಯೂ ಸೇರಲು ಅರ್ಹರಾಗಿರುವ ಪ್ರಯುಕ್ತ,-ಕಾಸರಗೋಡು ವಿರಹಿತವಾಗಿ (ಮಲಬಾರಿನ ಒಂದೂ ಮೂರನೇ ಬೋರ್ಡಿಗೆ ಸೇರಿದರೆ) ಉಳಿದ ನಮ್ಮ ಜಿಲ್ಲೆಯಲ್ಲಿ ಉಡುಪಿಯ ಉತ್ತರಭಾಗ ಕೂಡಿಸಿ ಒಂದು ಹೊಸ ಬೋರ್ಡು ಸ್ಥಾಪನೆಮಾಡಿ, ಮಂಗಳೂರು ಪುತ್ತೂರು ತಾಲೂಕುಗಳನ್ನು ಮಾತ್ರ ದಕ್ಷಿಣ ಕನ್ನಡದ ದಕ್ಷಿಣ ಬೋರ್ಡನ್ನಾಗಿ ಮಾಡಿದರೇನಾದೀತು?

× × × × × ×

ಎರಡನೇ ಬೋರ್ಡಿನಿಂದ ಪುತ್ತೂರು ಮಂಗಳೂರುಗಳಿಗೇನಾದರೂ ಸುಖವಾಗದೆ? ಮೊದಲೆ ದಕ್ಷಿಣ ಕನ್ನಡ; ಅದರಲ್ಲೂ ದಕ್ಷಿಣ ಕನ್ನಡದ ದಕ್ಷಿಣ ಬೋರ್ಡು ಎಂದ ಮೇಲೆ ಇಲ್ಲಿ ಯಾವ ಬಗೆಯ ದಾಕ್ಷಿಣ್ಯಕ್ಕೂ ದಕ್ಷಿಣೆಗೂ ಯಾರಿಗೂ ಏನೂ ಅವಕಾಶವಿರದು.

ನಿಮ್ಮ ಮಕ್ಕಳಿಗೆ ನೀವೇ ಪುಷ್ಟಿಯಾದ ಆಹಾರವನ್ನು ಉಣಿಸಬಹುದು.

ಮಗುವಿಗೆ ಮೊಲೆಹಾಲಿನಷ್ಟು ಉತ್ತಮವಾದ ಆಹಾರವು ಮತ್ತೊಂದಿಲ್ಲ. ದೇಹ ಪುಷ್ಟಿಯನ್ನೂ ಚುರುಕುತನವನ್ನೂ ಅದು ಏಕಕಾಲದಲ್ಲಿ ಕೊಟ್ಟು ಅವರನ್ನು ಕೇಡಪುಂಡರನ್ನಾಗಿ ಮಾಡುತ್ತದೆ.

ಅದಕ್ಕಾಗಿಯೇ ಎಲ್ಲಾ ತಾಯಂದಿರು ಮಕ್ಕಳಿಗೆ ಅಂತಹ ಆಹಾರವು ಸಿಕ್ಕಬೇಕಾದರೆ ತಾವೂ ಅಷ್ಟು ಪುಷ್ಟಿದಾಯಕ ಆಹಾರವನ್ನು ತೆಗೆದುಕೊಳ್ಳಬೇಕಾದುದು ಅತ್ಯಾವಶ್ಯಕ. ಅದಕ್ಕೆ ಓವಲ್ ಟಿನ್ನಿನಷ್ಟು ಅಮೂಲ್ಯವಾದ ಆಹಾರವು ಬೇರೊಂದಿಲ್ಲ. ಇದನ್ನು ಮಕ್ಕಳಾಗುವ ಮೊದಲೂ, ಮಕ್ಕಳಾದ ಮೇಲೆಯೂ ತಾಯಂದಿರು ಸೇವಿಸಿದರೆ ಅವರ ಮೊಲೆ ಹಾಲ ಮೂಲಕ ಅದು ಮಗುವಿನ ದೇಹವನ್ನೂ ಸೇರಿ ಮಕ್ಕಳನ್ನು ಆರೋಗ್ಯವಂತರನ್ನಾಗಿ ಮಾಡುವುದು. ಓವಲ್ ಟಿನ್ನನ್ನು ಒಳ್ಳೆಯ ಆಹಾರಗಳ ಸತ್ವದಿಂದಲೆ ತಯಾರಿಸಿರುವರು. ಇದರಲ್ಲಿ ಬೆಳೆದ ಬಾರ್ಲಿ, ದನದ ಕೆನೆಹಾಲು, ಕೊಕೊವಿನ ಸತ್ವ ಇವುಗಳೆಲ್ಲ ಬೆರಸಿವೆ. ಇದನ್ನು ಸೇವಿಸಿದರೆಂದರೆ ತಾಯಿಯ ಮೊಲೆಯಲ್ಲಿ ಹೆಚ್ಚು ಹಾಲಾಗುವುದಲ್ಲದೆ ತಾಯಿಯ ಆರೋಗ್ಯವನ್ನೂ ಶಕ್ತಿಯನ್ನೂ ಸರಿಯಾಗಿಸುತ್ತದೆ. ಇದರೆ ಪರಕೀಯರ ಮೋಸಕ್ಕೆ ಮಾತ್ರ ಬಲಿಬೀಳಬೇಡಿ. ಅಚ್ಚ ಓವಲ್ ಟಿನ್ನನ್ನೆ ಪಡೆಯಿರಿ.

ಓವಲ್ ಟಿನ್

ಮಕ್ಕಳಿಗೆ ಉತ್ತಮವಾದ ಮೊಲೆಹಾಲನ್ನೀಯಲು ತಾಯಿಗೆ ಉಪಕಾರಿಯಾಗಿದೆ.

OVALTINE

ಇದರ ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ;
ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಏಜಂಟರು: ಜೇಮ್ಸ್ ರೈಟ್, 8½ ಎ. ರಿಬನ್ ಸ್ಟ್ರೀಟ್
ಕಲ್ಕತ್ತಾ ಮತ್ತು ಬೊಂಬೈ, ಮದ್ರಾಸು.

OV/414

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇದು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-

The Scientific Gold Bangles Co., Ltd

Head Office:-48, Byragimatam Street,

Post Box No. 203, Madras.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

R. E. A. 764/35

ಅನಂತಯ್ಯ ಆಚಾರ್ಯ . . . ಅರ್ಜಿದಾರ.

1. ವೆಂಕಟ್ರಮಣ ಆಚಾರ್ಯ
2. ವ್ಯಾನರ ಗೋಪಾಲಕೃಷ್ಣ ಆಚಾರ್ಯ —ಗಾರ್ಡಿಯನ 1ನೇ ಎದ್ರಿ
3. ಮಾಧವಾಚಾರ್ಯ

} ಎದ್ರಿ

ಎದ್ರಿರು ಕುಂದಾಪುರ ತಾಲೂಕು ಗಂಗ್ನಳ್ಳಿ ಗ್ರಾಮದ ನಿವಾಸಿಕರು.

ಅರ್ಜಿದಾರನು 1-2ನೇ ಎದ್ರಿರು ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲು ಮಾಡಿದ R. E. A. ನಂ. 778/34ನೇದರಲ್ಲಿ ಆದ ಹುಕುಮನ್ನು ಪುನಃ ವಿಮರ್ಶಣೆ ಮಾಡುವರೇ ಮೇಲ್ಕಂಡ ಅರ್ಜಿಯನ್ನು ದಾಖ್ಲು ಮಾಡಿರುತ್ತಾನೆ. ಸದ್ರಿ ಅರ್ಜಿಯು ತಾ. 18-2-36ಕ್ಕೆ ತನ್ಕಿಗೆ ಇಟ್ಟಿದೆ. 1-2ನೇ ಎದ್ರಿರ ಆಕ್ಷೇಪಣೆ ಇದ್ದ ಪಕ್ಷದಲ್ಲಿ ಆ ದಿನದ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲು ಮಾಡಬಹುದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕುಂದಾಪುರ 26-1-'36

K. Vaman Bhandari
Advocate for Petitioner.

ಹಿಂದೂದೇಶವನ್ನೂ ಮತ್ತು ಐಗುಪ್ತವನ್ನೂ ಬಿಟ್ಟುಕೊಡಬೇಕು!

ಮಹಾತ್ಮಾಜೀಯವರಿಗೆ ಜಾಪಾನಿನ ಆಮಂತ್ರಣ!

ಸತ್ಯಾಗ್ರಹದ ಮಹತ್ವ! ಯುದ್ಧವಾರ್ತೆಗಳು! ಜರ್ಮನಿಯ ಸಂಗ್ರಾಮ ಸಿದ್ಧತೆಗಳು!

ಮಕಾಲೆಯ ಸಮೀಪದ ಯುದ್ಧ

ಮಕಾಲೆಯ ಹತ್ತಿರ ಹಬಸಿಯವರಿಗೂ ಇಟೇಲಿಯಾನರಿಗೂ ಒಂದು ಭಯಂಕರ ಕದನವು ನಡೆಯಿತು. ೧೭೦೦ ಮಂದಿ ಇಟೇಲಿಯಾನರು ಮಡಿದಿರುವರು. ನೂರಾರು ಮಂದಿ ಶರಣಾಗತರಾಗಿರುವರು. ಇವರಲ್ಲಿ ಹೆಚ್ಚಿನವರು ಯುರೋಪು ಖಂಡದವರಂತೆ. ಹಬಸಿಗಳು ಜಯಶೀಲರಾಗಿರುವರು.

ತೆಂಬಿಯನ್ನಿನ ದಕ್ಷಿಣ ಜಿಲ್ಲೆಗಳಲ್ಲಿ

ಹಬಸಿ ನಾಯಕನಾದ ರಾಸ್‌ಕಾಸನ ಅಧಿಕಾರದಲ್ಲಿ ಒಂದು ಮಹಾ ಸೈನ್ಯಮಂಡಳವು ಇಟೇಲಿಯಾನರೊಡನೆ ಹೋರಾಡಿ ಸೋತು ಹೋಗಿ, ಪಲಾಯನ ಮಾಡಿರುವರೆಂದೂ, ಇಲ್ಲಿಯ ಎಲ್ಲಾ ಪ್ರದೇಶಗಳು ಇಟೇಲಿಯಾನರ ಕೈಸೇರಿವೆಯೆಂದೂ ರೋಮಿಗೆ ವಾರ್ತೆ ಬಂದಿರುತ್ತದೆ. ಇಟೇಲಿಯಾನರು ರಾಸ್‌ಕಾಸನ ಸೈನ್ಯದ ಮೇಲೆ ಆಶ್ಚರ್ಯಕರವಾದ ರೀತಿಯಲ್ಲಿ ಅಭಿಕ್ರಮಿಸಿದರಂತೆ. ಜಯವಾಗಿ ದೊರೆತ ಪ್ರದೇಶಗಳಲ್ಲಿ ಗುಲಾಮಗಿರಿಯನ್ನು ತೆಗೆದು ಹಾಕಿದ್ದಾರಂತೆ.

ಡೋಲೋದಲ್ಲಿ ಭಯಂಕರ ಯುದ್ಧ

ಓಗಡನ್ ಪ್ರಾಂತ್ಯದಲ್ಲಿ ಇಟೇಲಿಯಾನ ನಾಯಕರಾದ ಜನರಲ್ ಗ್ರೆಜಿಯಾನಿಯವರು ಜಯಶಾಲಿಗಳಾಗಿ ಹಬಸಿಗಳನ್ನು ಓಡಿಸಿದ ವಾರ್ತೆಯು ನಿಜ. ಆದರೆ, ಈ ಯುದ್ಧದಿಂದ ಇಟೇಲಿಯಾನರ ಕೈಸೇರಿದ ಪ್ರದೇಶವು ಬರೀ ಮರುಳು ಪ್ರದೇಶವಾಗಿರುವುದಂತೆ. ಈ ಯುದ್ಧದಲ್ಲಿ ಬಹಳ ಯುಕ್ತಿಯಿಂದ ಹಬಸಿಗಳು ಇವರ ಕೈಗಳಿಂದ ಪಾರಾಗಿರುವರಂತೆ. ಈಗ ಮತ್ತೊಮ್ಮೆ ಮೇಲ್ಪಾಯಿಕೆಯ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಈ ಸೋಲಿನಿಂದ ಹಬಸಿಗಳ ಧೈರ್ಯವೇನೂ ಕೆಡಲಿಲ್ಲ. ಬೇಗನೇ ಇನ್ನೊಂದು ಘೋರ ಕದನವು ನಡೆಯುವುದು. ಇಟೇಲಿಯಾನರು ಇಲ್ಲಿನ ಹರಾರ್ ಗಡಿನಾಡುಗಳನ್ನು ಸೇರಿರುವರು.

ಅನೇಕ ಇಟೇಲಿಯಾನ ಸೈನಿಕರು.

ತಮ್ಮ ಉದ್ಯೋಗಗಳನ್ನು ತ್ಯಜಿಸಿ ಅಲ್ಲಿಯೆ ಹತ್ತಿರವಿರುವ ಬ್ರಿಟಿಷ ಪ್ರದೇಶಗಳನ್ನು ಸೇರಿರುವರು. ಎಬಿಸಿನಿಯದ ಭಯಂಕರ ಹವಾಗುಣಗಳಿಂದ ಇವರು ಬೇಸತ್ತು ಹೋಗಿರುವರು. ಹೀಗೆಯೇ ಇಟೇಲಿಯಲ್ಲಿ ಜನರು ಅಸಮಾಧಾನ ಹೊಂದುತ್ತಿದ್ದಾರೆ. ದಿನೇ ದಿನೇ ಇಟೇಲಿಯ ಭಂಡಾರವು ಬರಿದಾಗುತ್ತಾ ಬರುತ್ತಿದೆ. ಇಟೇಲಿಯಾನ ಸೈನಿಕರ ಸಂಕಷ್ಟಗಳು ಮಿಗಿಲಾಗುತ್ತಿವೆ. ಅನೇಕ ಕಡೆಗಳಲ್ಲಿ ಇಟೇಲಿಯ ಸೈನಿಕರು ನಿರುತ್ಸಾಹಿಗಳಾದ ಕುರುಹುಗಳು ಕಾಣಬರುತ್ತಿವೆ.

ಚೀನಾದ ರಾಜಕೀಯ ನಾಯಕರನ್ನು ಕೊಲೆಮಾಡಿದರು

ಚೀನಾ ದೇಶದ ಮೊಂಗಲ್ ರಾಷ್ಟ್ರದ ಸದಸ್ಯರಾದ ಮತ್ತು ನಾಂಕಿಂಗ್ ಸರಕಾರದ ಸದಸ್ಯರಾದ ನಿಮಾವೊಟಿಶ್ಯಾರನ್ನು ಒಂದು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವಾಗ ಕಾಲ್ಗಾನ ಎಂಬಲ್ಲಿ ಯಾರೋ ಕೊಲೆ ಮಾಡಿದರು. ಕೊಲೆಗೆ ಕೆಲವು ರಾಜಕೀಯ ಕಾರಣಗಳಂತೆ.

ಜರ್ಮನಿಯರು ಏನು ಮಾಡುತ್ತಿದ್ದಾರೆ?

ಸಂಗ್ರಾಮ ಯೋಗ್ಯತೆಗಳನ್ನು ಪ್ರಗತಿಪಡಿಸಲು ಹೆಚ್ಚಿನ ಹಣ ವ್ಯಯಿಸಬೇಕಾಗಿ ನಿರ್ಧಾರವಾಗಿರುತ್ತದೆ. ಈ ಕುರಿತು ಪ್ರಚಾರ ಕಾರ್ಯ ಮಂತ್ರಿವರ್ಯರಾದ ಡಾ|| ಗೊಬೆಲ್ಸರು ೧೧೦ ಸಾವಿರ ಮಂದಿ ಕೂಡಿರುವ ಜನಸ್ತೋಮಕ್ಕೆ ಹೀಗೆಂದು ಭಾಷಣಮಾಡಿದರು– "ನಮಗೆ ಪ್ರಪಂಚದ ಶಾಂತಿಸ್ಥಾಪನೆಯು ಜನಾಂಗದ ಸಭೆಯಿಂದಾಗುವುದೆಂದು ಭರವಸೆಯಿಲ್ಲ. ನಮ್ಮ ಈಗಿನ ಸಂಗ್ರಾಮ ಸಿದ್ಧತೆಗಳು ಬಹಳ ಸಾಮಾನ್ಯವಾಗಿವೆ. ಸಮಸ್ತ ಜರ್ಮನಿಯನ್ನು ಸಂಗ್ರಾಮ ಶೂರವಾಗಿ ಮಾಡುವುದೇ ನಮ್ಮ ಉದ್ದೇಶ. ಇಷ್ಟೆಲ್ಲಾ ಸಿದ್ಧತೆಗಳು ಯುದ್ಧಕ್ಕಾಗಿಯೇ ಅಲ್ಲ. ಜರ್ಮನಿಯನ್ನು ರಕ್ಷಿಸಲು. ಇಟೇಲಿ ಹಬಸಿ ಕಲಹದಲ್ಲಿ ನಮಗೇನೂ ಸಂಬಂಧವಿಲ್ಲ. ಪೌರ್ವಾತ್ಯದ ಘಟನೆಗಳಿಂದ ನಮಗೆ ಯಾವ ರೀತಿಯಲ್ಲೂ ಹಾನಿ ಒದಗುವ ಹಾಗಿಲ್ಲ. ಆದರೆ, ಇವೆಲ್ಲ ಘಟನೆಗಳನ್ನು ನಾವು ನಿರೀಕ್ಷಿಸುವೆವು."

೪೦ ಮಿಲಿಯ ಮಂದಿಗಳು ಸಿದ್ಧರಿರುವರು

ರಷ್ಯಾದಲ್ಲಿ ೪೦ ಮಿಲಿಯ ಜನರು ಈಶ್ವರ ನಿಷೇಧವನ್ನು ಆಚರಿಸಲು ಸಿದ್ಧರಿರುವರು. ಸೋವಿಯಟ ಪ್ರಭುತ್ವವು ಧಾರ್ಮಿಕ ತತ್ವದಲ್ಲಿ ಭರವಸೆಯಿಟ್ಟಿಲ್ಲ. ಇಗರ್ಜಿಗಳನ್ನು ನಿಷೇಧಿಸುವ ಚಳವಳವು ಪ್ರಾರಂಭವಾಗಿ ಈಗ ಅಲ್ಲಿನ ಎಲ್ಲಾ ಇಗರ್ಜಿಗಳನ್ನು ಸರಕಾರದ ಉದ್ಯೋಗಾಲಯಗಳನ್ನಾಗಿಯೂ ಶಾಲಾ [illegible]ಗಳನ್ನಾಗಿಯೂ ವಿಹಾರಮಂದಿರಗಳನ್ನಾಗಿಯೂ ಉಪಯೋಗಿಸುತ್ತಿದ್ದಾರೆ. ೪೦ ಮಿಲಿಯ ಜನರು ಈಶ್ವರ ನಿಷೇಧಿಗಳು ಮಾತ್ರ. ಅಲ್ಲಿನ ಸಂಪೂರ್ಣ ಜನರು ಯಾವ ಧರ್ಮವನ್ನೂ ಆಚರಿಸುವುದಿಲ್ಲ. ಯಾವತ್ತೂ ಧಾರ್ಮಿಕ ಕ್ರಮಗಳನ್ನು ಆಚರಿಸುವುದಿಲ್ಲ. ನವೀನವಾಗಿ ಹುಟ್ಟಿದ ಸಾವಿರಾರು ನಗರಗಳಲ್ಲಿ ಒಂದೇ ಒಂದು ದೇವಾಲಯವೂ ಇಗರ್ಜಿಯೂ ಕಾಣಸಿಗದು.

ಹಿಂದೂದೇಶದಿಂದ ಮತ್ತು ಐಗುಪ್ತದಿಂದ ಯಾಕೆ ಹೊರಗೆ ನಡೆಯಬಾರದು?

ಅಮೇರಿಕದ ಯುನೈಟೆಡ್ ಸ್ಟೇಟ್ಸಿನವರು ಹಬಸಿಯವರ ಮೇಲೆ ಕನಿಕರ ತೋರಿದವರು. ಆದರೆ, ಅಲ್ಲಿನ ವರ್ತಮಾನ ಪತ್ರಗಳು ಮತ್ತು ರೇಡಿಯೋ ಸ್ಟೇಶನುಗಳು, ಜನಾಂಗ ಸಭೆಯನ್ನು ಹೀನೈಸುವ ಕಾರ್ಯವನ್ನೂ, ಬ್ರಿಟಿಷರನ್ನು ತಿರಸ್ಕಾರ ಮಾಡುವ ಕಾರ್ಯವನ್ನೂ ಪ್ರಾರಂಭ ಮಾಡಿರುತ್ತವೆ. ಅಲ್ಲಿನ ಒಂದು ಪತ್ರಿಕೆಯು ಇಟೇಲಿ–ಹಬಸಿ ಕಲಹದ ವಿಷಯ ಹೀಗೆನ್ನುತ್ತಿದೆ–

"ಇಟೇಲಿಯ ವರ್ತನೆಯು ಕ್ರೂರವೆಂದು ಇಂಗ್ಲಾಂಡು ಖಂಡಿಸುತ್ತಿದೆ. ಇದರಿಂದ ನಾವು ಅದು ಸಂಭಾವಿತವಾಗಿದೆಂದು ತಿಳಕೊಳ್ಳಬಹುದೇ? ಕದ್ದ ಸಾಮಾನುಗಳನ್ನು ವಾಪಾಸು ಕೊಡುವುದೆ ಒಬ್ಬ ಕಳ್ಳನಿಗೆ ಉತ್ತಮ ಪಶ್ಚಾತ್ತಾಪ ಕ್ರಮವಾಗಿರುತ್ತದೆ. ಅಂತೆಯೇ, ಬ್ರಿಟಿಷರು ಹಿಂದೂದೇಶವನ್ನೂ ಮತ್ತು ಐಗುಪ್ತವನ್ನೂ ಯಾಕೆ ಬಿಟ್ಟುಕೊಡಬಾರದು?"

ನಾಯಿಯ ಪ್ರೀತಿ–ಮಗುವಿನ ಮೃತ್ಯು

ಒಂದು ನಾಯಿಯು ಮಗುವಿನ ಮೇಲಿನ ಅತ್ಯಂತ ಪ್ರೀತಿಯು ಆ ಮಗುವಿನ ಸಾವಿನಲ್ಲಿ ಪರಿಣಮಿಸಿತು. ಮಗುವಿನ ಪ್ರಾಯ ಸಾಧಾರಣ ೧೩ ದಿವಸ. ಇಂಗ್ಲಾಂಡಿನ ಯೋರ್ಕ್‌ಶಾಯರ್ ಎಂಬಲ್ಲಿ ನಡೆದ ಘಟನೆಯಿದು. ಮಗುವನ್ನು ತೊಟ್ಟಿಲಲ್ಲಿರಿಸಿ ಒಂದು ಕೋಣೆಯಲ್ಲಿಟ್ಟಿದ್ದರು. ದಾದಿಯು ಎಲ್ಲಿಯೊ ಹೊರಗೆ ಹೋಗಿದ್ದಳು. ನಾಯಿಯು ಮಗುವಿನ ಮೇಲೆ ಪ್ರೀತಿಯಿಂದ ಮಗುವಿನ ಮುಖದ ಮೇಲೆ ಮಲಗಿತು. ದಾದಿಯು ಬಂದು ನಾಯಿಯನ್ನು ಓಡಿಸಿದಳು. ಆದರೆ ಮಗುವಿನ ಪ್ರಾಣ ಮಾತ್ರ ಹಾರಿಹೋಗಿತ್ತು. ನಾಯಿಯಿಂದ ಮಗುವಿಗೆ ಉಸಿರುಕಟ್ಟಿ ಹೋಗಿತ್ತು.

ಗಾಂಧಿಜಿಯವರಿಗೆ ಜಾಪಾನಿನ ಆಮಂತ್ರಣ

ಜಾಪಾನಿನ "ನ್ಯೂ ಲಿವಿಂಗ್ ಮೂವಮೆಂಟಿ"ನ ಟೊಮಿಕೊ ಕೋರಾ ಎಂಬವಳು ಗಾಂಧಿಜಿಯವರು ಜಾಪಾನಿಗೆ ಬರಲು ಆಮಂತ್ರಣವೀಯಲು ಬಂದಿದ್ದಳು. "ಗಾಂಧಿಜಿಯವರು ಜಾಪಾನಿಗೆ ಬರಬೇಕು. ನಮ್ಮ ಜನರ ಬುದ್ಧಿ ಅರಳುವಂತೆ ಮಾಡಬೇಕು. ಜಪಾನೀಯರು ಮಹಾತ್ಮಾಗಾಂಧಿಯವರ ತತ್ವಗಳನ್ನು ಬಹಳವಾಗಿ ಶ್ಲಾಘಿಸುತ್ತಿದ್ದಾರೆ. ನಾವು ದಿನೇ ದಿನೇ ಪ್ರಗತಿ ಹೊಂದುತ್ತಿದ್ದಂತೆ ನಮ್ಮ ಧಾರ್ಮಿಕ ಕಳೆಯು ಬಿದ್ದುಹೋದಂತೆ ಕಾಣುತ್ತಿದೆ. ಈ ಅಪಾಯದಿಂದ ರಕ್ಷಿಸಲು ನಮಗೆ ಮಹಾತ್ಮಾಗಾಂಧಿಯವರ ಆಶ್ರಯವು ಬೇಕಾಗಿದೆ. ಸಮಸ್ತ ಪೌರ್ವಾತ್ಯಕ್ಕೆ ಮಹಾತ್ಮಾಜೀಯವರು ದಾರಿ ತೋರಿಸುವ ಪ್ರಕಾಶವಾಗಿರುತ್ತಾರೆ."

ಮಹಾತ್ಮಾಜಿಯವರ 'ಸತ್ಯಾಗ್ರಹ'ವು ಇಂಗ್ಲಾಂಡಿನಲ್ಲಿ ಆಚರಿಸಲಾಗುವುದು

ಸಮಸ್ತ ಪ್ರಪಂಚವೆ ಮಹಾತ್ಮಾಜಿಯವರ 'ಸತ್ಯಾಗ್ರಹ'ದ ಶ್ರೇಷ್ಠತೆಯನ್ನು ತಿಳಿದಂತಾಗಿದೆ. ಹಿಂದೆ ಯುರೋಪಿನಲ್ಲಿ ಅನೇಕ ರಾಜಕೀಯ ಚಳವಳಿ ವಿಪ್ಲವ ಇತ್ಯಾದಿಗಳು ನಡೆಯುವ ಭೂಲೋಕದ ಹಲವು ಕಡೆಗಳಲ್ಲಿ 'ಸತ್ಯಾಗ್ರಹ' ಸೂತ್ರವನ್ನನುಸರಿಸುತ್ತಿದ್ದಾರೆ. ಇಂಗ್ಲಾಂಡಿನ ವೇಲ್ಸ ಪ್ರದೇಶವು ಈ ಸತ್ಯಾಗ್ರಹವನ್ನು ಆಚರಿಸಿ ರಾಜಕೀಯ ಸುಧಾರಣೆ ಹೊಂದಬೇಕಾಗಿ ನಿರ್ಧಾರ ಮಾಡಿರುತ್ತದೆ.

ಗಾಂಧಿಯವರ ಕುರಿತು ಸುಳ್ಳು ವಾರ್ತೆಗಳು

ಇಂಗ್ಲಾಂಡು ಇತ್ಯಾದಿ ಬಹಿರ್ ಪ್ರದೇಶಗಳಲ್ಲಿ ಹರಡಿದ ಕೆಲವು ಪತ್ರಿಕೆಗಳು ಗಾಂಧಿಜಿಯವರ ಆರೋಗ್ಯವು ವಿಷಮ ಸ್ಥಿತಿಯಲ್ಲಿರುವುದೆಂದು ಪ್ರಕಟಮಾಡಿವೆ. ಈ ವಾರ್ತೆಯನ್ನು ಕೇಳಿ ಮಹಾತ್ಮಾ ಗಾಂಧಿಯವರ ಆರೋಗ್ಯವನ್ನು ವಿಚಾರಿಸಿ ಅನೇಕ ಮಹದ್ ಪುರುಷರು ತಂತಿ ಕಳುಹಿಸಿ ಕೊಟ್ಟಿರುವರು.

ಜವಾಹರಲಾಲರ ಕರ್ತವ್ಯ ವಾದ

ಶ್ರೀಮತಿ ಕಮಲಾನೆಹರೂರವರ ದೇಹಸ್ಥಿತಿಯು ತುಂಬಾ ಸೂಕ್ಷ್ಮವಾಗಿಯೇ ಇದ್ದರೂ ಪಂಡಿತ ಜವಾಹರಲಾಲ ನೆಹರೂರವರು ಫೆಬ್ರವರಿ ತಿಂಗಳಲ್ಲಿ ಭಾರತಕ್ಕೆ ಹೊರಟು ಬರುತ್ತಾರೆ. ಶ್ರೀಮತಿಯವರೇ ಪಂಡಿತರನ್ನು ಭಾರತಕ್ಕೆ ಹಿಂತಿರುಗುವಂತೆ ಒತ್ತಾಯಪಡಿಸುತ್ತಿರುವರಂತೆ. ಪಂಡಿತ ನೆಹರೂರವರು ಹೀಗೆ ಹೇಳುತ್ತಾರೆ.

"ನಾನು ಬಿಟ್ಟು ಹೊರಡುವುದೇನೂ ಸುಲಭವಲ್ಲ. ನನ್ನ ಪತ್ನಿಯ ದೇಹಸ್ಥಿತಿಯು ತುಂಬ ಆತಂಕವನ್ನುಂಟುಮಾಡುತ್ತಿದೆ. ಆದರೆ ಸಂಘಟನೆ ಸಮ್ಮೇಳನಗಳ ಧರ್ಮದಿಂದ ಇತರ ಮಹತ್ತರ ಕಾರ್ಯಗಳನ್ನುಉಪೇಕ್ಷಿಸಲಾಗುವುದಿಲ್ಲ.

"ಭಾರತ ಸ್ವಾತಂತ್ರ್ಯ ಸಾಧನೋದ್ಯಮದಲ್ಲಿ ನಾನಾ ಕಾರ್ಯಕಾರಣಗಳಿಂದ ನಾನೂ ಒಬ್ಬ ಗಣ್ಯನಾಗಿದ್ದೇನೆ. ಈಗ ಭಾರತವು ಒಂದು ಪರ್ವಕಾಲಕ್ಕೆ ಬಂದು ನಿಂತಿದೆ. ಈ ವಿಷಯವನ್ನು ನಾನು ಮರೆಮಾಚಲಾರೆ. ನನ್ನ ದೇಶಕ್ಕೂ, ನನ್ನ ದೇಶೀಯರಿಗೂ ಒಂದು ದೊಡ್ಡ ಋಣವನ್ನು ನಾನು ತೀರಿಸಬೇಕಾಗಿದೆ. ಆ ಕರ್ತವ್ಯದಿಂದ ನಾನು ವಿಮುಖನಾಗಲಾರೆ.

"ಈ ವಿಷಯಗಳನ್ನು ಕುರಿತು ನನ್ನ ಗೃಹಿಣಿಯೊಡನೆ ನಾನು ಚರ್ಚೆ ನಡೆಸಿದ್ದೇನೆ. ಯಾವುದಾದರೊಂದು ನಿರ್ಧಾರಕ್ಕೆ ಬರುವಂತೆ ಆಕೆಯು ನನ್ನನ್ನು ಉತ್ತೇಜನಗೊಳಿಸಿದ್ದಾಳೆ. ತನ್ನ ಕಾಯಿಲೆಯ ನಿಮಿತ್ತ ನಾನು ನನ್ನ ಕರ್ತವ್ಯವಿಮುಖನಾದ ಪಕ್ಷಕ್ಕೆ ಅದೊಂದು ಮಹಾ ದುಃಖವೆಂದೇ ತಾನು ಎಣಿಸುವಂತೆ ಆಕೆಯು ತಿಳಿಸಿಬಿಟ್ಟಿದ್ದಾಳೆ. ಈ ಪರ್ವ ಸಮಯದಲ್ಲಿ ನಾನು ನನ್ನ ಕರ್ತವ್ಯ ಪಾಲನೆ ಮಾಡಲು ಹಿಂತೆಗೆಯಕೂಡದೆಂದು ಕಡ್ಡಾಯವಾಗಿ ಹೇಳಿಬಿಟ್ಟಿದ್ದಾಳೆ.

"ಆದರೂ ಒಂದು ನಿರ್ಧಾರಕ್ಕೆ ಬರಲು ನನಗೆ ಶಕ್ಯವಾಗಿಲ್ಲ. ಇಷ್ಟು ಮಾತ್ರ ಸಿದ್ಧಾಂತ. ಜಾಗ್ರತೆಯಾಗಿಯೇ ಭಾರತಕ್ಕೆ ಹಿಂತಿರುಗುತ್ತೇನೆ. ಆಕೆಯ ಆರೋಗ್ಯ ಉತ್ತಮ ಗೊಂಡೀತೆಂದು ನನ್ನ ಹಾರೈಕೆ. ಇಲ್ಲವಾದರೆ ಕೆಲವು ಕಾಲ ಮತ್ತೆ ಇಲ್ಲಿಗೆ ಬರಬೇಕಾಗುತ್ತದೆ."

ಗಾಂಧಿ ನೊಗಚಿಯವರ ಭೇಟಿ

ಜಪಾನಿನ ದರ್ಶನಪಿತ್ರಾಗಿ [illegible] ಡಾ. ನೊಗಚಿಯವರು [illegible] ಸಂದರ್ಶನಾರ್ಥವಾಗಿ [illegible] ಹೋಗಿದ್ದರು. ದೇಹಾಲಸ್ಯದಿಂದ [illegible] ಡಾ. ನೊಗಚಿಯವರೊಡನೆ ಸಂಭಾಷಣೆಯನ್ನು ನಡೆಸಿದ [illegible] ಮಧ್ಯೆ [illegible] ಮಾಡುತ್ತಿದ್ದರು.

ಶ್ರೀಮತಿ ಕಸ್ತೂರಿ ಬಾ ಗಾಂಧಿಯವರನ್ನು ಡಾ. ನೊಗಚಿಯವರಿಗೆ ಪರಿಚಯ ಮಾಡಿಕೊಡುತ್ತ [illegible] ನೋಡಿದರೆ ಜಪಾನ [illegible] ಎಂದು ಹಾಸ್ಯಮಾಡಿದರಂತೆ.

ಇದಕ್ಕೆ ಡಾ. ನೊಗಚಿಯವರು [illegible] ಉತ್ತರ ಕೊಟ್ಟರಂತೆ.

ಮಹಾತ್ಮರನ್ನು [illegible] ಬೇಕೆಂದು ಆಗಾಗ ಇಷ್ಟವಿರಲಿಲ್ಲ. ಆದರೂ ಮಹಾತ್ಮರು ಅವರನ್ನು [illegible] ಕಳುಹಿಸಿಕೊಂಡರು.

ನಿಮ್ಮಿಂದ ಯಾವ ಸಂದೇಶವನ್ನೂ ನಾನು ಬೇಡುವುದಿಲ್ಲ. ನಿಮ್ಮ ದರ್ಶನ ನಿಮ್ಮ ಜೀವನವೇ ತೆರೆದಿಟ್ಟ ಪುಸ್ತಕದಂತಿದೆ. ಗುಟ್ಟು ಗೋಪ್ಯದ ಗಂಧವೇ ನಿಮ್ಮಲ್ಲಿಲ್ಲ "ಹೀಗೆಂದು ಡಾ|| ನೊಗಚಿಯವರು ಪ್ರಾರಂಭಿಸುತ್ತ ಮಹಾತ್ಮರನ್ನು ಪ್ರಶ್ನಿಸಿದರು.

"ನಮ್ಮಿಬ್ಬರ ಧ್ಯೇಯಗಳಿಗೂ ಮೂಲತಃ ಯಾವ ವ್ಯತ್ಯಾಸವೂ ಇಲ್ಲ. ನಮ್ಮಿಬ್ಬರಿಗೂ ಸರಳತೆ, ತ್ಯಾಗ ವೈರಾಗ್ಯಗಳೇ ಹಿತ. ಆದರೆ ಮಾತ್ರ ನಾವು ಪೂಜಾಕರರು.

ಮಹಾತ್ಮ ಗಾಂಧಿಯವರೇ, ನನಗೆ ಗೊತ್ತಿರುವಂತೆ ಜಪಾನು ದೇಶವು ಪ್ರಪಂಚದಲ್ಲೆಲ್ಲ ಅತ್ಯಂತ ಉದಾರದೇಶವೆಂದು ಪರಿಗಣಿಸುತ್ತೇನೆ. ನಮ್ಮ ದೇಶವು ಹೇಗಿದೆ. ಕಡೆಗೆ ಎರಡನೆಯ ಸ್ಥಾನವನ್ನಾದರೂ ಪಡೆಯುತ್ತದೆಯೆಂದು ನಾನು ದೃಢವಾಗಿದ್ದೇನೆ" ಎಂದು ಪ್ರಶ್ನೆ ಹಾಕಿದರು.

ಡಾ. ನೊಗಚಿಯವರು, "ಇಲ್ಲಿ ನಿಮ್ಮ ದೇಶವೇ ಪ್ರಥಮ ಸ್ಥಾನಕ್ಕೆ ಯೋಗ್ಯವಾದುದು" ಎಂದುತ್ತರಕೊಟ್ಟು ಜಪಾನು ದೇಶಕ್ಕೆ ಏನಾದರೂ ಸಂದೇಶವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಂಡರು.

ಮಹಾತ್ಮರು ಕೊಟ್ಟ ಸಂದೇಶವಿದು: ಕವೀಂದ್ರ ರವೀಂದ್ರನಾಥ ಠಾಕೂರರು ಕೊಟ್ಟ ಸಂದೇಶದಲ್ಲಿಯೇ ಇದೆ. ಅದಕ್ಕಾಗಿಯೆ ನಮ್ಮಲ್ಲನೇಕರು ಕೊಡಬಹುದಾದ ಸಂದೇಶಗಳನ್ನು ಅವರ ಸಂದೇಶವು ಅಡಕವಾಗಿಟ್ಟುಕೊಂಡಿದೆ."

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1–10–0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಧರ್ಮಶಾಲೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾಯುತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ,
ಸ್ಮಾರ್ತರಿಗೆ–ಭಸ್ಮಧಾರಣ ವಿಧಿ, ಕೂಡ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ
ಬೆಲೆ ಆಣೆ 3.
(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು.

ಒಂದು ತಿಂಗಳಲ್ಲಿ ಅಮೋಘವಾದ ಗುಣ; ಇದು ಜಾಡ್ಯವನ್ನು ಗುಣಪಡಿಸುವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು.

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:— ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Ested 1920] **THE** [1920ರಲ್ಲು ಸ್ಥಾಪಿತವಾದದ್ದು.

Kanara Enterprise Ltd.,

PUTTUR.

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು.

ಠೇವಣಾತಿಗಳ ದರ.

ಖಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6¼ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.
ಹೆಚ್ಚಿನ ಮಾಹಿತಿ ಬಗ್ಗೆ ಬೇಡಿಕೆ ಬರಕೊಳ್ಳುವುದು.

Puttur,
Dated 10—4—1935.

ಡಿ. ಸಿ. Lakshman Pai,
Secretary.

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ್'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ
ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ನರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.
ಬೆಲೆಗೆ ತಕ್ಕ ಒಡವೆ ಒಪಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1858ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು. ಇದು ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು.



ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ. ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ. ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ. ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಹಿಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ. ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂದು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ.

ಕ್ರಯ:–ದೊಡ್ಡ ಬಾಟ್ಲಿಗೆ ರೂ. 4. ಮಾಧ್ಯಮ 2–4–0. ಚಿಕ್ಕದು 1–2–0.

ತಯಾರಿಸುವವರು:— ಲಸ್ಟರ್ ಡಿಪೋ, ಚಿಕ್ಕಮಗಳೂರು.
ಬ್ರೇಂಚ್:—ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಸ್ವದೇಶಾಭಿಮಾನಿ,

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1-8-0 8 ಔನ್ಸ್ ರೂ 0-14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿವಾರಿಸುತ್ತದೆ

ಅಯೊಡೈಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ ತೀವ್ರ ಗುಣಕಾರಿ

4 ಔನ್ಸ್ ರೂ 1—0—0 8 ಔನ್ಸ್ ರೂ 1—8—0

ದಕ್ಷಿಣ ಕನ್ನಡದ ಏಜಂಟರು—ಪ್ರೊವಿನ್ಶಿಯಲ್ ಸ್ಟೋರ್ಸ್, ಮಂಗಳೂರು.

ಬಹುಕಾಲದಿಂದಲೂ ನಿರೀಕ್ಷಿಸಲ್ಪಟ್ಟ ಅತ್ಯಮೋಘ

ತೆಲುಗು ಮಾತಾಡುವ ಚಲಚ್ಚಿತ್ರ!

ಕೃಷ್ಣ ಲೀಲಾ

ನಗುವಿನ ಸುಗ್ಗಿ! ಮನಮುಗ್ಧಕರ ಅಭಿನಯ!

ರೋಮಾಂಚನಗೊಳಿಸುವ ದೃಶ್ಯಗಳು!

ಕರ್ಣಾನಂದಕರವಾದ ಗಾಯನ!

ಆಧುನಿಕ ಧೋರಣೆಗಳ ಉಪಾಸನೆಯು ಪ್ರತಿಯೊಂದೆಡೆಯಲ್ಲಿಯೂ ಹೊರಹೊಮ್ಮಿ ಕಾಣುವುದು.

ಕಂಪೆನಿಯ ಶ್ರೇಷ್ಠ ನಟವರ್ಗವು ಇದರಲ್ಲಿ ಅಭಿನಯಿಸಿದೆ

ಮಿಸ್ ರಾಮತಿಲಕಮ್
ಮಿಸ್ ಶ್ರೀರಂಜನಿ
ಮಿ। ವೆಮುರಿ ಗಗ್ಗಯ್ಯ
ಮಿ। ಪಾರಪಲ್ಲಿ ಸುಬ್ಬರಾವ್
ಮಿ। ಪಾರಪಲ್ಲಿ ಸತ್ಯನಾರಾಯಣ
ಮಾಸ್ಟರ್ ರಾಜೇಶ್ವರರಾವ್

ಕೊಯಮುತ್ತೂರು, ಸೇಲಂ, ನೀಲಗಿರಿ, ಮಲಬಾರು, ದಕ್ಷಿಣ ಕನ್ನಡ ಮತ್ತು ಕೊಚ್ಚಿ ಈ ಪ್ರಾಂತ್ಯಗಳಲ್ಲಿ ತಮ್ಮ ಚಿತ್ರಗಳ ಸಂಚಾಲನಾ ಅಧಿಕಾರವನ್ನು ಪಡೆದಿರುವರು

For Bookings Apply to:—

THE MANORAMA FILMS,

COIMBATORE.

Telegrams: 'Manorama' Telephone 114

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA—AND—MANGALORE.

Now For Sale.

Peholatum (Balm) (German make) This is a home remedy for Rheumatism Asthma Sciatic Lumbago Insect bites, Herpes Wounds, Cuts Colds Headache It is a complete substitute for the domestic medicine chest Try once this unequalled remedy In ½oz tin As 3 In oz jar As 12/–

Superior Red Balm For relieving pains in muscles and on skin Directions for use with the bottle Price As 12/– only

Wurmteufel Is a sovereign remedy against all sorts of worms in stomach and in the intestines Physicians enjoying authoritativeness describe it as medical remedy and warmly recommend it All those who suffer from worms, children and adults, try this unique remedy and be freed from your ailment. Price As 10 per packet.

Pocket-Inhaler For coughs and hoarseness, headache catarrh, colds use this inhaler and you will be relieved immediately Price per inhaler As 6/- & As 8/-

Po-Ho Fluid For Asthma, colds, indigestion, toothache lumbago, a sure remedy in all cases Price As 6/- and Re 1, per phial

Cough Cure An infallible remedy for coughs of all kinds bronchitis, hoarseness Particulars in bottle. Price As. 12/- for 8 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health Price As 1/3, 2/6, 3/–, 4,

Basel Mission Book Depot

Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ಸಂಪಾದಕರ ಟಪ್ಪಾಲು ಪೆಟ್ಟಿಗೆ.

(ಪತ್ರಕರ್ತರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ—ಸಂ. ಸ್ವ.)

ಮಾನ್ಯ ಡಿ. ಬೋರ್ಡು ಮೆಂಬರುಗಳ ಚಿತ್ತಾವಧಾನಕ್ಕೆ.

ಮಹಾಶಯರೇ,

ತಾ. ೨೧-೧-೩೬ನೇ ಡಿ ಬೋರ್ಡು ಮೀಟಿಂಗು ಜರಗುವುದೆಂತಲೂ ಅಲ್ಲಿ ೧೯೩೬-೩೭ನೇ ವರ್ಷದ ಬಜೆಟ್ ಚರ್ಚಿಸಲ್ಪಡುವದೆಂತಲೂ ಸರಕಾರದ ಸೂಚನೆ ಮೇರೆಗೆ ಕೆಲವು ಬೋರ್ಡು ಸ್ಕೂಲುಗಳನ್ನು ಕಿತ್ತುಹಾಕುವ ಸೂಚನೆ ಸಭೆಯ ಮುಂದೆ ಬರುವುದೆಂತಲೂ ವದಂತಿ ಇದೆ. ಮದ್ರಾಸ್ ಸರಕಾರದ ಬಹುಮಾನಿತರಾದ ಮುಖ್ಯ ಮಂತ್ರಿವರ್ಯರು ಎಲಿಮೆಂಟರಿ ವಿದ್ಯಾಪ್ರಚಾರದ ಯಾ ಏಳಿಗೆಯ ಮುಖ್ಯ ಗುರಿಯನ್ನಿಟ್ಟುಕೊಂಡು ಹತ್ತು ವರ್ಷಗಳೊಳಗೆ ಮದ್ರಾಸು ಸಂಸ್ಥಾನದ ಎಲ್ಲಾ ಹಳ್ಳಿಗಳನ್ನು ಪ್ರಾಥಮಿಕ ಶಾಲೆಗಳಿಂದ ತುಂಬಿಸುವ ಅಭಿಪ್ರಾಯ ಉಳ್ಳವರಾಗಿದ್ದಾರೆಂತಲೂ, ಪತ್ರಿಕೆಗಳಿಂದ ಓದಿ ಸಂತೋಷಗೊಂಡಿದ್ದೆನು. ಆದರೆ ಈಗ ತಾನೆ ಪ್ರಾಥಮಿಕ ಶಾಲೆಗಳನ್ನು ಕಿತ್ತುಹಾಕುವ ಸೂಚನೆಯನ್ನು ಬೋರ್ಡಿಗೆ ಕೊಟ್ಟಿದ್ದು ಕೇಳಿ ಬಹಳ ವ್ಯಸನಪಡಬೇಕಾಗಿದೆ. ಡಿ. ಬೋರ್ಡಿನ ಎಲಿಮೆಂಟರಿ ಎಜ್ಯುಕೇಶನ್ ಬಜೆಟಿನಲ್ಲಿ ಡೆಫಿಸಿಟ್ ಇಂತ ಹಣವನ್ನು ಭರ್ತಿ ಮಾಡುವರೆ ಯಾ ಮುಂದೆಯು ಇಂಥಾ ಆರ್ಥಿಕ ದುಸ್ಥಿತಿ ಉಂಟಾಗದಂತೆಯೂ ಸರಕಾರದವರೂ ಬೋರ್ಡಿನವರೂ ಒಟ್ಟಿನಲ್ಲಿ ಇಂದ ಶಾಲೆಗಳ ಕಡಿತವನ್ನು ಮಾಡಲು ಯೋಚಿಸಿರಬಹುದು. ಆದರೆ ಹಣ ಉಳಿಸುವರೆ ಇದು ಕೇವಲ ಸುಲಭೋಪಾಯವಾದರೂ ಲೋಕದ ಹಿತದೃಷ್ಟಿಯಿಂದ ಇದು ಸರಿಯಾದುದಲ್ಲ. ಸರಕಾರವು ಕೆಲವು ವರ್ಷಗಳ ಹಿಂದೆಯೇ ಎಲಿಮೆಂಟರಿ ವಿದ್ಯಾಭ್ಯಾಸದ ಬಗ್ಗೆ ಬೋರ್ಡಿನವರಿಗೆ ಕೊಡುವರೆ ನಿರ್ಣಯಿಸಿದ ಗ್ರೇಂಟಿನ ಮೊಬಲಗಿನ ಸಂಖ್ಯೆಯೂ ಅಲ್ಲಿಯೇ ನಿಂತಿದೆ ಹೊರತು ಮುಂದೆ ಹೆಜ್ಜೆಯೇ ಇಡಲಿಲ್ಲ. ಆದರೆ ಕನ್ನಡ ಜಿಲ್ಲೆಯ ಮಕ್ಕಳ ಸಂಖ್ಯೆಯೂ ಅಲ್ಲಿಯೇ ನಿಲ್ಲಲಿಲ್ಲ. ವರುಷದಿಂದ ವರುಷಕ್ಕೆ ಏರುತ್ತಾ ಬರುವ ಕಾರಣ ಡಿ. ಬೋರ್ಡು ವರುಷದಿಂದ ವರುಷಕ್ಕೆ ಹೆಚ್ಚು ಹಣ ಖರ್ಚು ಮಾಡಲೇಬೇಕಾಗಿದೆ. ಬೋರ್ಡಿಗೆ ಸ್ವಂತ ಸಾಮರ್ಥ್ಯವು ಇಲ್ಲದ ಮೇಲೆ ಹೆಚ್ಚಿನ ಉತ್ಪತ್ತಿ ಇಲ್ಲದ ಮೇಲೆ ಹೆಚ್ಚಿನ ಖರ್ಚನ್ನು ಬೋರ್ಡು ಹೇಗೆ ತಾನೆ ಭರಿಸಬಲ್ಲುದು? ಆದಕಾರಣ ಸರಕಾರವು ದೇಶದ ಏಳಿಗೆಯನ್ನು ಇಚ್ಛಿಸಿ ವರ್ಷಂಪ್ರತಿಯೂ, ಸ್ವಲ್ಪ ಸ್ವಲ್ಪ ಹಣವನ್ನು ಬೋರ್ಡಿಗೆ ಸಹಾಯ ಮಾಡದೆ ಇದ್ದರೆ ವರ್ಷಂಪ್ರತಿಯೂ ಶಾಲೆಗಳನ್ನು ಏರಿಸುವ ಬದಲಿಗೆ ಶಾಲೆಗಳನ್ನು ಕಿತ್ತುಹಾಕುವ ಪ್ರಸಂಗವು ಬಂದೊದಗಬಹುದು. ಈ ಶಾಲೆಗಳಿರುವ ಹಳ್ಳಿಯಲ್ಲಿ ಇಲ್ಲ ಅರ್ಧ ಅಂತಕ್ಕಿಂತ ಕಡಿಮೆ ಬರಕಕ್ಕೆ ಪ್ರಾಯದ ಮಕ್ಕಳೇ ಶಾಲೆಗಳಿಂದ ಹೊರಗುಳಿದರು ಹೋಗಿರುತ್ತಾ ಶಾಲೆಗಳ ಸಂಖ್ಯೆ ಹೆಚ್ಚು ಬೇಕಾದ್ದ ಕಾಲದಲ್ಲಿ ಶಾಲೆಗಳನ್ನು ಹಣದ ಅಭಾವಕ್ಕೋಸ್ಕರ ಕಿತ್ತುಹಾಕಬಹುದೆಂತ ಕೊಟ್ಟ ಸರಕಾರದ ಸೂಚನೆಯು ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಗರಿಗೆ ದುರಾದೃಷ್ಟವಾಗಿಯೇ ಪರಿಣಮಿಸಬಹುದು. ಈಗ ಬೋರ್ಡಿನ ಆಡಳಿತೆಯಲ್ಲಿರುವ ಹೆಚ್ಚಿನ ಶಾಲೆಗಳು (ಸಬ್ಸಿಡಿಸ್ಕೂಲ್ಸ್) ಸರಕಾರದ ದ್ರವ್ಯ ಸಹಾಯದಿಂದಲೇ ನಡಿಸಲ್ಪಡುವವುಗಳೆಂದರ್ಥ. ಆದರೆ ಕಾರ್ಯವು ಹಾಗಿರುವುದಿಲ್ಲ. ಬೋರ್ಡು ತನ್ನ ಸ್ವಂತ ಆದಾಯದ ಪಾಲನ್ನು ಅವುಗಳಿಗೆ ಕೊಡಬೇಕಾಗಿ ಬಂದಿರುತ್ತದೆ. ಬೋರ್ಡು ಸಬಲವಾಗಿ ಪುಷ್ಟಿ ಇರುವುದಾದರೆ ಅದೊಂದು ದೊಡ್ಡದಲ್ಲ. ಸರಕಾರವು ಎಲಿಮೆಂಟರಿ ಸ್ಕೂಲ್ಸ್ ಉಪಾಧ್ಯಾಯರಿಗೆ ಸಂಬಳದ ಸ್ಕೇಲನ್ನು ಹಾಕಿ ಕೊಟ್ಟು ಅದನ್ನು ಜಾರಿಗೆ ತರಬೇಕೆಂದು ಬೋರ್ಡಿಗೆ ಕಡ್ಡಾಯಪಡಿಸಿದ್ದರಿಂದಲೇ ಅನುಜ್ಞೆಯನ್ನು ಮೀರಲಾರದೆ ಬೋರ್ಡು ಸ್ಕೇಲನ್ನು ಜಾರಿಗೆ ತಂದು ಬಿಟ್ಟಿತು. ಆದರೆ ಆ ಸ್ಕೇಲಿನ ಪ್ರಕಾರ ಸಬ್ಸಿಡಿ ಸ್ಕೂಲ್‌ಗಳಿಗೆ ಖರ್ಚಾಗುವ ಹೆಚ್ಚಿನ ಹಣವನ್ನು ಕೂಡ ಸರಕಾರವು ಕೊಡಲು ಸರಕಾರವು ತಯಾರಿಲ್ಲದಿರುವುದು ಬೋರ್ಡಿನ ಗ್ರಹಚಾರವೆನ್ನಬೇಕು. ಬೋರ್ಡು ಈ ಹಣವನ್ನು ಎಲ್ಲಿಂದ ಹಾಕಬೇಕು?

ಸರಕಾರವು ಬೋರ್ಡುಗಳಿಗೆ ಸಹಾಯ ಮಾಡುತ್ತಿರುವ ದ್ರವ್ಯಸಹಾಯದ ರೀತಿಯು ಕ್ರಮವು ಸಹ ಸರಿಯಾದುದಲ್ಲ. ಸಂಪತ್ತುಳ್ಳ ಬೋರ್ಡಿಗೆ ಹೆಚ್ಚು ಹಣವನ್ನೂ ಬಡ ಬೋರ್ಡಿಗೆ ಕಡಿಮೆ ಹಣವನ್ನೂ ಸಹಾಯ ಮಾಡುತ್ತಾ ಇದೆ. ಬೋರ್ಡಿನ ಸಾಂಪತ್ತಿಕ ಸ್ಥಿತಿಯು ಜಿಲ್ಲೆಯ ವಿಸ್ತಾರ ಯಾ ಜನಸಂಖ್ಯೆಯ ಮೇಲೆ ಹೊಂದಿಕೊಂಡಿಲ್ಲ. ಜಿಲ್ಲೆಯ ಸಾಂಪತ್ತಿಕ ಸ್ಥಿತಿಯ ಮೇಲೆ ಹೊಂದಿಕೊಂಡಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಜನಸಂಖ್ಯೆಯಿಂದಲೂ ವಿಸ್ತಾರದಿಂದಲೂ ಕಡಿಮೆಯಾಗಿಲ್ಲ. ಆದರೆ ಬಡವರ ಸಂಖ್ಯೆಯಿಂದ ತುಂಬಿದೆ, ಅದುದರಿಂದಲೇ ಬೋರ್ಡು ಬಡಸ್ಥಿತಿಯಲ್ಲಿದೆ. ಎಜ್ಯುಕೇಶನ್ ಟೇಕ್ಸಿನಷ್ಟೇ ದ್ರವ್ಯಸಹಾಯವನ್ನೇ ಸರಕಾರದವರು ಕೊಡುವ ಕ್ರಮದಿಂದ ಮೊದಲೇ ಕಡಿಮೆ ಉತ್ಪತ್ತಿ ಇರುವ ಬೋರ್ಡಿಗೆ ಸರಕಾರದವರು ಕೊಡುವ ಪಾಲು ಕೂಡ ಕಡಿಮೆಯಾಗುವುದು. ಆದ ಕಾರಣ ಸರಕಾರದವರು ಪುನರಾಲೋಚಿಸಿ ದಾನಶಾಯ ಪ್ರಕಾರ ಬಡ ಬೋರ್ಡುಗಳಿಗೆ ಹೆಚ್ಚು ಸಹಾಯ ಮಾಡುವ ಹಾಗೆ ಬಡ ಬೋರ್ಡುಗಳೆಲ್ಲಾ ಒಟ್ಟುಕೂಡಿ ಸರಕಾರವನ್ನು ವಿಜ್ಞಾಪಿಸಿಕೊಳ್ಳುವದುತ್ತಮ.

ಕೆಲವು ಹಳ್ಳಿ ಶಾಲೆಗಳು ಸರಿಯಾಗಿ ನಡಿಯುವುದಿಲ್ಲೆಂಬ ಈ ಕಾರಣವು ಹಣದ ಅಭಾವದ ಕಾಲದಲ್ಲಿ ಬೋರ್ಡಿಗೂ ಸರಕಾರಕ್ಕೂ ಸಿಕ್ಕಿದ್ದು ರೋಗಿ ಬಯಸಿದ್ದೂ ಹಾಲು ವೈದ್ಯ ಕೊಟ್ಟದ್ದೂ ಹಾಲು ಎಂಬ ಹಾಗಾಗಿದೆ. ಶಾಲೆಗಳು ನಡಿಯುವದಿಲ್ಲೆಂದರೆ ಅರ್ಥವೇನೂ?—ಆ ಗ್ರಾಮದಲ್ಲಿ ಮಕ್ಕಳ ಸಂಖ್ಯೆಯೇ ಇಲ್ಲವೇ? ಜನರು ಇನ್ನೂ ನೂರ್ಕವತ್ತು ವರ್ಷಗಳಿಗೆ ಹಿಂದಿನ ಸ್ಥಿತಿಯಲ್ಲಿರುವರೂ ಅಥವಾ ಬರ್ತ್ ಕಂಟ್ರೋಲ್ ಮಾಡಿರುವರೇ? ಯಾ ಆ ಹಳ್ಳಿಯ ಉಪಾಧ್ಯಾಯನು ಕೆಲಸವನ್ನು ಮಾಡುವುದಿಲ್ಲವೆ? ಉಪಾಧ್ಯಾಯನು ಕೆಲಸವನ್ನು ಏಕೆ ಮಾಡಲಾರನು? ಡಿಪಾರ್ಟ್‌ಮೆಂಟಿನವರಿಂದಲೂ ಬೋರ್ಡಿನವರಿಂದಲೂ ಕೆಲಸವನ್ನು ಮಾಡಿಸುವರೆ ಸಾಧ್ಯವೇ ಆಗುವುದಿಲ್ಲವೆ? ಈ ವಿಷಯದಲ್ಲಿ ಯಾವ ಪ್ರಯತ್ನಗಳು ನಡೆದಿವೆ? ಶಾಲೆಗಳು ನಡಿಯುವದಿಲ್ಲವೆಂದ ಮಾತ್ರಕ್ಕೆ ಅಲ್ಲಿಯೇ ನಿರಾಶರಾಗಿ ಶಾಲೆಗಳನ್ನು ಕಿತ್ತುಹಾಕುವ ಯೋಚನೆ ಮಾಡುವುದು ಉದ್ಯೋಗದ ಕರ್ತವ್ಯದ ದೃಷ್ಟಿಯಿಂದ ಸಮ್ಮತಿಸಲಾಗಲಾರದು. ಲೋಕಹಾದಿಗಳಿಂದ ಅನೇಕಾನೇಕ ಕೆಲಸಗಳನ್ನು ಮಾಡಿಸಲಾಗುತ್ತದೆ ಅಂದ ಬಳಿಕ ಜೀವವಿರುವ ಬಡ ಹಳ್ಳಿಯ ಉಪಾಧ್ಯಾಯನಿಂದ ಕೆಲಸ ಮಾಡಿಸಲಾಗುವುದಿಲ್ಲವೆಂದರೆ ಹೇಗೆ? ಇದು ಯಾರ ತಪ್ಪು? ಅಧಿಕಾರಿಗಳದೋ? ಉಪಾಧ್ಯಾಯರದೋ? ಹಳ್ಳಿಯವರದೋ? ಬೋರ್ಡು ಮೆಂಬರರು ನಿಜವಾಗಿ ದೇಶಸೇವೆಯ ದೃಷ್ಟಿಯಿಂದಲೇ ಮುಂದೆ ಬಂದವರಾದರೆ ಅವರವರ ಸರ್ಕಲಿನಲ್ಲಿರುವ ಶಾಲೆಗಳು ಎಂದೂ ಕ್ಷೀಣ ಗತಿಗೆ ಬರಲಾರದು ಹಳ್ಳಿಯ ಜನರಿಗೊಂದು ಮಾತು. ಹಳ್ಳಿಯವರ ಪ್ರತಿನಿಧಿಗಳಾಗಿ ಬಂದ ಬೋರ್ಡು ಮೆಂಬರರು ಹಳ್ಳಿ ಶಾಲೆಗಳನ್ನು ಕಿತ್ತು ಹಾಕಲು ಒಪ್ಪಿಸಲಾರರು. ಹಾಗೆ ಇಷ್ಟಪಡುವುದಾದರೆ ಬೋರ್ಡಿನ ಸಂಸ್ಕಾರವು ಬೇರೆ ಹಳ್ಳಿಯ ಸಂಸ್ಕಾರವು ಬೇರೆಯೆಂದಂತು ಹಳ್ಳಿಯವರೊಗ್ಗಟ್ಟಾಗಿ ತಮ್ಮ ಏಳಿಗೆಗೋಸ್ಕರ ಪ್ರತ್ಯೇಕವಾಗಿ ಪ್ರಯತ್ನಿಸುವುದು ಮೇಲು.

ಉಪಾಧ್ಯಾಯರಿಗೊಂದು ಮಾತು. ಶಾಲೆಗಳು ನಡಿಯುವುದಿಲ್ಲೆಂದು ಅಪಕೀರ್ತಿಗೆ ಒಳಪಟ್ಟ ಉಪಾಧ್ಯಾಯರು ಈ ಕಡೆ ಗಮನ ಕೊಡುವುದು. ನಿಮ್ಮಿಂದಾಗಿ ಶಾಲೆಗಳು ಕೀಳಲ್ಪಡುವುದು. ನೀವೇ ಹಳ್ಳಿಯವರಿಗೆ ಹಿತಶತ್ರುಗಳಾಗಿರುವಿರಿ. ಮಕ್ಕಳ ಸಂಖ್ಯೆಯು ಇಲ್ಲವೆಂಬ ಸಂಗತಿ ಏನೂ ಸರಿಯಾಗಿದ್ದಲ್ಲ. ನೀವು ಶ್ರದ್ಧೆಯಿಂದ ಕೆಲಸ ಮಾಡಿದರೆ ಶಾಲೆಗಳ ಬೇರು ಬಲವಾಗುವುದು. ಅಗ್ಗೆ ಕಿತ್ತುಬಿಡಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ನಿಮ್ಮ ಶಾಲೆಗಳಲ್ಲಿ ಮಕ್ಕಳು ತುಂಬಲಿ, ನಿಮ್ಮ ಪ್ರಯತ್ನದಿಂದ ಹಳ್ಳಿಯವರಿಗೆ ಮಕ್ಕಳ ವಿದ್ಯೆಯ ಮೇಲೆ ಪ್ರೀತಿ ಹುಟ್ಟಲಿ, ಅಗ್ಗೆ ಬೋರ್ಡಿನಲ್ಲಿ ಹಣದಭಾವ ಉಂಟಾದರೂ ಮತ್ತೆ ಯಾವ ನೆವನ ಹೇಳಿ ಶಾಲೆಗಳನ್ನು ಕಿತ್ತುಹಾಕಿ ಎಂದು ಹೇಳುವುದು ಯಾರಿಂದು ನೋಡೋಣ. ಬೋರ್ಡಿನ ಎಜ್ಯುಕೇಶನ್ ಫಂಡಿನಲ್ಲಿ ವಿಶೇಷವಾಗಿ ಹಣವು ಡಿಪೋಸಿಟ್ ನಿಲ್ಲಲು ಕಾರಣವೇನೆಂದು ಸ್ವಲ್ಪ ವಿಚಾರಿಸೋಣ. (೧) ಸಬ್ಸಿಡಿ ಸ್ಕೂಲ್‌ಗಳಿಗೆ ಖರ್ಚಾದ ಸಂಪೂರ್ಣ ಹಣವನ್ನು ಸರಕಾರದವರು ಕೊಡದೆ ಇರುವುದರಿಂದ (೨) ಸಬ್ಸಿಡಿ ಸ್ಕೂಲ್‌ಗಳ ಬಾಡಿನಲ್ಲಿ ತಾಲೂಕು ಬೋರ್ಡು ಪ್ರೆಸಿಡೆಂಟರು ಕಾನೂನು ಪ್ರಕಾರ ನಡಿಯಲಿಲ್ಲವೆಂದು (ಕಾರ್ಯತಃ ನಡೆದಿದೆ) ಕಾನೂನನ್ನು ಅಡ್ಡ ಹಾಕಿ ಸರಕಾರದವರು ಕೊಡುತ್ತಿರುವ ಗ್ರೇಂಟಿನ ಅಂಶವನ್ನು ವಜಾ ಮಾಡುತ್ತಾ ಬಂದುದರಿಂದ (೩) ಡಿ. ಬೋರ್ಡು ಎಜ್ಯುಕೇಶನಲ್ ಆಫೀಸರರನ್ನು ನೇಮಕ ಮಾಡಿದುದರಿಂದ (೪) ಎಜ್ಯುಕೇಶನಿನ ಆಫೀಸು ಸರಸ್ವತಿಯ ಖರ್ಚನ್ನು ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ಹೊರಿಸಿದ್ದರಿಂದ (೫) ಉಪಾಧ್ಯಾಯರ ಪ್ರೊವಿಡೆಂಟು ಫಂಡಿನ ಹಣವನ್ನು ಎಲಿಮೆಂಟರಿ ಫಂಡಿನಿಂದಲೇ ಪ್ರತ್ಯೇಕಿಸುವುದರಿಂದ (೬) ಹಣದ ಅಭಾವದ ಕಾಲದಲ್ಲಿಯೇ ಹೊಸ ಹೊಸ ಹಾಯರ್ ಎಲಿಮೆಂಟರಿ ಶಾಲೆಗಳನ್ನು ತೆರೆದುದರಿಂದ (೭) ತಾಲೂಕು ಬೋರ್ಡಿನ ಆಡಳಿತೆಯಲ್ಲಿ ಸಾಲವಾಗಿ ಡಿಸ್ಟ್ರಿಕ್ಟ್ ಬೋರ್ಡಿನ ಫಂಡಿಗೆ ದೊಡ್ಡ ಹೊರೆಯನ್ನು ಹೊರಿಸಿದ್ದರಿಂದ (೮) ಬೋರ್ಡು ಹಿಂದು ಮುಂದು ನೋಡದೆಯೂ, ತನ್ನ ಸಾಮರ್ಥ್ಯವನ್ನು ಎಣಿಸದೆಯೂ ಟ್ರೈನ್ ಸ್ಕೇಲನ್ನು ಜಾರಿಗೆ ತಂದುದರಿಂದ (೯) ಜನರಲ್ ಫಂಡಿನಿಂದ ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ಹಾಕಿದ ಹಣವು ಹಿಂದಿನ ವರ್ಷಕ್ಕಿಂತ ಅತೀ ಕಡಿಮೆಯಾದುದರಿಂದ ಎಲಿಮೆಂಟರಿ ಎಜ್ಯುಕೇಶನ್ ಫಂಡಿಗೆ ಪಾರಿ ಪ್ರೊಂಪ್ಟಿಗಿಂತಲೂ ಕ್ಷಾಮ ಸ್ಥಿತಿ ಬರಲು ಕಾರಣ.

ಹಣದ ಅಭಾವವನ್ನು ಯಾವ ರೀತಿಯಿಂದ ಭರ್ತಿ ಮಾಡಬಹುದೆಂದು ಯೋಚಿಸುವುದಾದರೆ ಎಲಿಮೆಂಟರಿ ಸಂಸ್ಥೆಯಲ್ಲಿ ಯಾವ ತರದ ರಿಟ್ರೆಂಚ್‌ಮೆಂಟ್ ಮಾಡಲು ಸಾಧ್ಯವಿಲ್ಲ. (೧) ಒಂದು ವೇಳೆ ಎಯಿಡೆಡ್ ಸ್ಕೂಲ್‌ಗಳ ಅತೀ ಹತ್ತಿರವಿರುವ ಅಂದರೆ ಉತ್ತಮ ಸ್ಥಿತಿಯಲ್ಲಿ ನಡಿಯುತ್ತಿರುವ ಎಯಿಡೆಡ್ ಸ್ಕೂಲ್‌ಗಳ ಹತ್ತಿರವಿರುವ ಬೋರ್ಡು ಸ್ಕೂಲ್‌ಗಳನ್ನು ಕಿತ್ತುಹಾಕಬಹುದು. (೨) ಹಾಯರ್ ಎಲಿಮೆಂಟರಿ ಕ್ಲಾಸುಗಳಲ್ಲಿ ಮಕ್ಕಳ ಸಂಖ್ಯೆಯು ಕಡಿಮೆಯಿದ್ದು ಮುಂದೆಯೂ ಈ ಸಂಖ್ಯೆಯೂ ಏರುವ ಸಂಖ್ಯೆಯು ತೋರದೆ ಕಾಣದಿದ್ದರೆ ಆ ಸ್ಕೂಲ್‌ಗಳನ್ನು ಕಿತ್ತುಹಾಕಬಹುದು. (೩) ಅತೀ ಸಮೀಪದಲ್ಲಿರುವ ಮಾಡೆಲ್ ಸ್ಕೂಲ್, ಗರ್ಲ್ಸ್ ಸ್ಕೂಲ್, ಜನರಲ್ ಸ್ಕೂಲ್‌ಗಳನ್ನು ಸಂಯೋಜಿಸಬಹುದು. (೪) ಕಾಸರಗೋಡು ತಾಲೂಕಿನ ಶಾಲೆಗಳ ಬಾಡಿಗೆಯನ್ನು ಕಡಿಮೆ ಮಾಡಬಹುದು. ಆದರೆ ಬೋರ್ಡಿನ ಜನರಲ್ ಫಂಡಿನ ಸಂಸ್ಥೆಗಳ ಮಟ್ಟಿಗೆ ಹೆಚ್ಚಿಗೆ ರಿಟ್ರೆಂಚ್‌ಮೆಂಟ್ ಮಾಡಲು ಅವಕಾಶವಿದೆ. (೧) ಡಿಸ್ಟ್ರಿಕ್ಟ್ ಬೋರ್ಡಿನ ಸೆಕ್ರೆಟರಿಯ ಪೋಸ್ಟನ್ನು ಹಿಂದಿನಂತೆ ಹೆಡ್ ಕ್ಲಾರ್ಕರಾಗಿ ಮಾಡಬಹುದು. (೨) ಉಡುಪಿಯಲ್ಲಿ ಕ್ರಿಶ್ಚಿಯನ್ ಹೈಸ್ಕೂಲ್ ಇರುವುದರಿಂದ ಬೋರ್ಡಿನ ಪ್ರತ್ಯೇಕ ಹೈಸ್ಕೂಲ್ ಅನಾವಶ್ಯವಾದರೂ ಫೋರ್ತ್ ಫೋರ್ಮಿನ ಕೆಲಸಗಳನ್ನು ವಜಾ ಹಾಕಬಹುದು. (೩) ಕಾಸರಗೋಡಿನಲ್ಲಿ ಮಿಶ್ಯನ್ ಸೆಕೆಂಡರಿ ಸ್ಕೂಲ್ ಇರುವುದರಿಂದ ಹೈಸ್ಕೂಲಿನ ಕೆಳಗಿನ ಕ್ಲಾಸುಗಳನ್ನು ಕಿತ್ತುಹಾಕಬಹುದು. (೪) ಪುತ್ತೂರಿನಲ್ಲಿ ಹಾಯರ್ ಎಲಿಮೆಂಟರಿ ಶಾಲೆ ಇರುವುದರಿಂದ ಹೈಸ್ಕೂಲಿನ I ಫೋರ್ಮಿನ ಕೆಳಗಿನ ಕ್ಲಾಸುಗಳನ್ನು ತೆಗೆಯಬಹುದು. (೫) ಸರಕಾರದವರು ಬೈಂದೂರು ಮತ್ತು ಮೂಡಬಿದ್ರೆ ಮಿಡ್ಲ್ ಸ್ಕೂಲುಗಳ ಗ್ರೇಂಟನ್ನು ವಜಾ ಮಾಡುವುದಿಲ್ಲವಾದರೆ ಆ ಎರಡು ಸ್ಕೂಲುಗಳನ್ನು ಹಯರ್ ಎಲಿಮೆಂಟರಿ ಸ್ಕೂಲುಗಳಾಗಿ ಮಾರ್ಪಡಿಸಬಹುದು. (೬) ಇಂಜಿನಿಯರ್ ಇಲಾಖೆಯ ಮುಖಾಂತರ ಖರ್ಚಾಗುವ ಹೆಚ್ಚಿನ ಹಣವನ್ನು ಮಿತವಾಗಿಡಲು ಬೋರ್ಡು ಪ್ರಯತ್ನ ಮಾಡಬಹುದು.

ಇನ್ನು ಬೋರ್ಡಿನ ಆದಾಯವನ್ನು ಹೇಗೆ ಹೆಚ್ಚಿಸಬಹುದೆಂದು ನೋಡೋಣ. (೧) ಹಿಂದಿನಂತೆ ಟೋಲ್‌ಗೇಟುಗಳನ್ನು ಮಾಡಬಹುದು. (೨) ಸೈಕಲು ಮೇಲೆ ಲೈಸನ್ಸು ಫೀಸು ಹೊರಿಸಬಹುದು. (೩) ಇನ್‌ಕಮ್ ಟೇಕ್ಸನ್ನು ಬೋರ್ಡುಗಳಿಗೇ ಕೊಡುವ ಹಾಗೆ ಹೋರಾಡಬಹುದು (೪) ಮೋಟಾರಿನ ಉತ್ಪತ್ತಿಯೂ ಬೋರ್ಡಿನ ಆದಾಯಕ್ಕೆ ಸೇರಿಸುವಂತೆ ಸರಕಾರದವರೊಡನೆ ಪ್ರಯತ್ನಿಸಬಹುದು. (೫) ಎಜ್ಯುಕೇಶನ್ ಟೇಕ್ಸನ್ನು ೩ ಪೈಯಿಂದ ೪ ಪೈಗೆ ಏರಿಸಬಹುದು.

ಬೋರ್ಡಿನ ಆಡಳಿತೆಯು ಅತ್ಯುತ್ತಮ ಸ್ಥಿತಿಗೆ ಬರಲು ಎಕ್ಸಿಕ್ಯುಟಿವ್ ಆಫೀಸರರೇ ಬೇಕೆಂದು ಕೆಲವರ ಅಂಬೋಣ, ಇದು ಸರಿಯಾದ್ದಲ್ಲ. ಇದರಿಂದ ಬೋರ್ಡಿಗೆ ಖರ್ಚು ಹೆಚ್ಚಾಗುವದಲ್ಲದೆ ಉಪಯೋಗವಿಲ್ಲ. ಬೋರ್ಡು ಮೆಂಬರರು ಪ್ರೆಸಿಡೆಂಟಿಗೆ ಸಹಾಯ ಮಾಡುವುದಾದರೆ ಎಕ್ಸಿಕ್ಯುಟಿವ್ ಆಫೀಸರರ ಅಗತ್ಯವಿಲ್ಲ. ಆಡಳಿತೆಯ ಉತ್ತಮ ಮಧ್ಯಮ ಸ್ಥಿತಿಯು ಅಧಿಕಾರಿಗಳ ಸಂಖ್ಯೆ ಏರಿಸುವದರಿಂದ ಉಪಯೋಗವಿಲ್ಲ. ಅಧಿಕಾರವಿರುವ ವ್ಯಕ್ತಿಯ ಮೇಲೆ ಹೊಂದಿಕೊಂಡಿದೆ. ಒಂದು ವೇಳೆ ಸಮುದ್ರದಂತಿರುವ ಬೋರ್ಡಿನ ಆಡಳಿತೆಯ ಕಾರ್ಯವನ್ನು ಬೋರ್ಡು ಪ್ರೆಸಿಡೆಂಟರೊಬ್ಬರಿಂದಲೇ ಮಾಡಲು ಅವರಿಗೆ ಬಿಡುವು ದೊರೆಯದಿದ್ದರೆ ಅಧಿಕಾರದ ಕೆಲ ಕೆಲ ಅಂಶವನ್ನು ಯೋಗ್ಯರಾದ ಕೆಲ ಮೆಂಬರರಿಗೆ ಅಧಿಕಾರ ಕೊಟ್ಟು ಹಂಚಿ ಹಾಕಬಹುದು. ಒಳ್ಳೆಯ ರೀತಿಯಿಂದ ನಡಿಸಿದ ತಾಲೂಕು ಬೋರ್ಡು ಪ್ರೆಸಿಡೆಂಟ್ ಉದ್ಯೋಗ ನೋಡಿ ಮಾಹಿತಿ ಇರುವ ಮಹನೀಯರು ಈಗಲೂ ಬೋರ್ಡಿನಲ್ಲಿರುವರಷ್ಟೆ. ಹೀಗಿರುವಾಗ ಇನ್ನೊಬ್ಬ ಎಕ್ಸಿಕ್ಯುಟಿವ್ ಆಫೀಸರರೇಕೆ? ಮುಖ್ಯವಾಗಿ ಪ್ರೆಸಿಡೆಂಟರೂ ಮೆಂಬರರೂ ಪಾರ್ಟಿಗಳಿಲ್ಲದೆ ಕೆಲಸವನ್ನು ನಿರ್ವಹಿಸಿದರೆ ಎಲ್ಲವೂ ಉತ್ತಮವಾಗಬಹುದು. ಬೋರ್ಡಿಗೇಕೆ ಬೇರೆ ಬೇರೆ ಪಾರ್ಟಿಗಳು? ಪಾರ್ಟಿಗಳಿದ್ದಲ್ಲಿ ಜಗಳವಿದೆ. ಜಗಳವಿದ್ದಲ್ಲಿ ನ್ಯಾಯವಿಲ್ಲ. ಅದುದರಿಂದ ಬೋರ್ಡು ಈ ಪಾರ್ಟಿಗಳನ್ನು ಬಿಟ್ಟು ಬೋರ್ಡು ತಾನೊಂದೇ ಪಾರ್ಟಿ ಎಂಬಭಿಮಾನದಿಂದ ಬೋರ್ಡಿಗೂ ಊರಿಗೂ ಸುಖವಾಗಬಹುದೆಂದು ನನ್ನ ಅಭಿಪ್ರಾಯ.

'ದೇಶಪ್ರೇಮಿ'

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.
ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು.
ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ "ಕಿಂಗ್ ಎಂಡ್ ಕ್ವೀನ್" ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅರಿಕೆಮಾಡಿಕೊಳ್ಳುತ್ತೇವೆ. ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಪ್ರಯುಕ್ತದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ.

ಮಂಗಳೂರಲ್ಲಿ ಶಾ॥ ಕಂಪೆನಿಯಲ್ಲಿ ದೊರೆಯುವುದು.

ಪ್ರಕೃತಿಯ ಪ್ರತೀಕಾರ!

ಲೇಖಕ:— ಶ್ರೀ "ರಸಿಕರಂಜನ"

೧

ಆನಂದನಿಗೆ ಈ ಪ್ರಪಂಚದಲ್ಲಿ ಯಾವುದರ ಕೊರತೆಯೂ ಇರಲಿಲ್ಲ. ತಾನು ಉಂಡುತಿಂದು ಹತ್ತು ಹಲವರಿಗೆ ಬೇಕಾದಷ್ಟು ಹಂಚಿದರೂ ಕರಗದಂತಹ ಅಪಾರ ಆಸ್ತಿಗೆ ಅವನು ಒಬ್ಬನೇ ಅಧಿಕಾರಿಯಾಗಿದ್ದನು. ಅವನ ನಿವಾಸಕ್ಕೆ ಅರಮನೆಯಂತಹ ವಿಶಾಲವೂ, ಮನೋಹರವೂ ಆದ ಮನೆಯಿತ್ತು. ಅವನ ಮನಸ್ಸಿನ ಪ್ರತಿಯೊಂದು ಬಯಕೆಯನ್ನೂ ಎವೆಯಿಕ್ಕುವಷ್ಟರಲ್ಲಿ ಸಲ್ಲಿಸಲು ಹೆಜ್ಜೆಹೆಜ್ಜೆಗೂ ಆಳುಗಳು ಬದ್ಧಕಂಕಣರಾಗಿ, ಸೊಂಟಕಟ್ಟಿ ನಿಂತಿದ್ದರು ಆದರೆ, ಏನಿದ್ದರೇನು? ಒಂದು ವಿಷಯದಲ್ಲಿ ಮಾತ್ರ ವಿಧಾತನು ಆನಂದನ ಮೇಲೆ ತೀರಾ ನಿಷ್ಕುರನಾಗಿದ್ದನು ಆನಂದನು ಜನ್ಮಾಂಧನಾಗಿದ್ದನು; ಹುಟ್ಟಿದಂದಿನಿಂದ ಅವನು ಬೆಳಕನ್ನೇ ಕಂಡಿರಲಿಲ್ಲ

ಆನಂದನು ತಮ್ಮ ಒಬ್ಬನೇ ಉತ್ತರಾಧಿಕಾರಿಯಾಗಿದ್ದುದರಿಂದ ಅವನ ತಂದೆತಾಯಿಗಳು ಅವನನ್ನು ಬಹಳ ಮಮತೆಯಿಂದ, ಬಹಳ ಜಾಗರೂಕತೆಯಿಂದ ಸಾಕಿ ಸಲಹಿ ಬೆಳೆಸಿದರು ಬಹಳ ಪ್ರಯತ್ನಪಟ್ಟು ಅವನನ್ನು ಅಂಧ ವಿದ್ಯಾಪಾಠಕರ ಮೂಲಕ ವಿದ್ಯೆ ಕಲಿಸಿದರು ಎಲ್ಲಾ ವಿಧಾನಗಳಿಂದ ಅವನಿಗೆ ಈ ಪ್ರಪಂಚದ ಜ್ಞಾನವನ್ನು ಗಳಿಸಲು ಅನುಕೂಲಿಸಿಕೊಟ್ಟರು ಅವನಿಗೆ ಕಣ್ಣಿದ್ದುದಾದರೆ ಅವನು ಎಷ್ಟು ಪ್ರಯೋಜನಹೊಂದಬಹುದಾಗಿತ್ತೋ, ಸಾಧಾರಣ ಅಷ್ಟೇ ಮಟ್ಟಿಗೆ ಅವನಿಗೆ ಪ್ರತಿಯೊಂದು ವಿಷಯದಲ್ಲಿಯೂ ಪ್ರಯೋಜನ ದೊರಕಿಸಿಕೊಟ್ಟರು ಇದಕ್ಕಾಗಿ ಅವರು ಖರ್ಚು ಮಾಡಲು ಸ್ವಲ್ಪವೂ ಗಣ್ಯಮಾಡಲಿಲ್ಲ ಕಾರಣ ಅವನ ಮುಂದಿನ ಹಿತಕ್ಕೆ, ಮುಂದಿನ ಶ್ರೇಯಸ್ಸಿಗೆ ಒದಗದ ಹಣವು ಮತ್ತೆ ಯಾವುದಕ್ಕೆ ಒದಗೀತು?

ಆದರೆ, ಅವರು ತಮ್ಮ ಈ ಚರ್ಯೆಯಿಂದ, ತಮ್ಮ ಮನಸ್ಸಿನ ಮೂಲಕಾಂಕ್ಷೆಗೇ ಅಡ್ಡಿ ಬರಬಹುದೆಂದು ಒಮ್ಮೆಯಾದರೂ ಎಣಿಸಲಿಲ್ಲ. ತಮ್ಮ ಮಗನು ಈ ರೀತಿಯಾಗಿರುವುದಂತೂ ತಮ್ಮ ದುರಾದೃಷ್ಟ, ಆದರೆ ಅವನಿಗೆ ಒಂದು ಯೋಗ್ಯ ಹೆಣ್ಣನ್ನು ತಂದು ಆತನು ಅವಳೊಂದಿಗೆ ಸಂಸಾರ ಮಾಡಿಕೊಂಡಿದ್ದುದನ್ನು ನೋಡಬೇಕೆಂಬುದು ಅವರ ಬಹುಕಾಲದ ಅಭಿಲಾಷೆಯಾಗಿತ್ತು ಆನಂದನಿಗೆ ಊನವಿಲ್ಲದ ಮಕ್ಕಳು ಹುಟ್ಟುವುದನ್ನು ನೋಡಿ, ತಮ್ಮ ಕುಟುಂಬವು ಉದ್ಧಾರವಾಗುವುದಕ್ಕೆ ಯಾವ ಆತಂಕವೂ ಇಲ್ಲವೆಂದು ತೃಪ್ತಿಯಿಂದ ಪ್ರಾಣಬಿಡಬೇಕೆಂದು ಅವರು ಮೊದಲಿನಿಂದಲೂ ಘಂಟಾಘೋಷವಾಗಿ ಹೇಳುತ್ತಿದ್ದರು

ಅದಕ್ಕಾಗಿ ಅವರು ಆನಂದನಿಗೆ ಹದಿನಾರನೇ ವಯಸ್ಸಿನಲ್ಲೇ ಹನ್ನೆರಡು ವರ್ಷದ ಮೋಹಿನಿಯೊಡನೆ ಲಗ್ನಮಾಡಿದರು

ಮೋಹಿನಿಯು ರೂಪದಲ್ಲಿ ಮೋಹಿನಿಯೇ ಆಗಿದ್ದಳು ಆದರೆ ಅದನ್ನು ನೋಡಿ ಹಿಗ್ಗುವುದು ಆನಂದನ ಅದೃಷ್ಟದಲ್ಲಿರಲಿಲ್ಲ ಅವಳ ಹೃದಯವು ಮೋಹಕವಾಗಿದ್ದರೆ ಸಾಕೆಂದು ಆನಂದನು ಪರಮಾತ್ಮನಲ್ಲಿ ಬೇಡಿಕೊಂಡನು ಆದರೆ ಆತನ ಇಚ್ಛೆಯನ್ನು ತಿಳಿಯಲು ಯಾರಿಗೆ ಸಾಧ್ಯ? ಅದನ್ನು ಮೀರಲು ಯಾರಿಗೆ ಅಳವು? ರೂಪದಲ್ಲಿ ಮೋಹಿನಿಯಾಗಿದ್ದರೂ ಹೃದಯದಲ್ಲಿ ಮೋಹಿನಿಯಾಗುವಷ್ಟು ಪ್ರಾಯ ಮೋಹಿನಿಗೆ ಆಗಿರಲಿಲ್ಲ ಆಗಲೇ ಅವಳಿಗೆ ಮದುವೆಯಾದುದು.

ಮದುವೆಯಾಗುವ ಮುಂಚೆ ಪ್ರತಿಯೊಬ್ಬನೂ ತಾನು ರಂಭೆಯಂತಹ ಸುಂದರಿಯನ್ನೇ ವರಿಸುವೆನು; ಸಾವಿರಗಟ್ಟಳೆ ರೂಪಾಯಿ ವರದಕ್ಷಿಣೆ ಪಡೆಯುವೆನು; ಹೆಂಡತಿಯು ಓದು ಬರಹ ಹೆಚ್ಚು ಕಲಿತಿಲ್ಲವಾದರೆ ಬಿ. ಎ., ಯಾ ಎಮ್. ಎ., ವರೆಗೆ ಓದಿಸುವೆನು. ಅವಳನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಮೆರೆಯಿಸುವೆನು, ಇಲ್ಲವೆ ಪೀಠದಲ್ಲಿ ಇರಿಸಿ ಪೂಜಿಸುವೆನು-ಎಂದು ಮುಂತಾಗಿ ಕನಸು ಕಾಣುವನು. ಹಾಗೆಯೇ, ಹುಡುಗಿಯರಲ್ಲಿ ಪ್ರತಿಯೊಬ್ಬಳೂ ತಾನು ಮೋಹನಾಕಾರನಾದ ಗಂಡನನ್ನೇ ಪಡೆಯುವೆನು, ಅವನಿಗೆ ಕಣ್ಮಣಿಯಾಗಿ ಮೆರೆಯುವೆನು, ಅವನ ಹೃದಯವನ್ನು ಆಕ್ರಮಿಸಿ ಅವನನ್ನು ಆಳುವೆನು—ಎಂದು ಮೊದಲಾಗಿ ಆಕಾಶಕ್ಕೆ ಏಣಿ ಕಟ್ಟುವಳು ಆದರೆ ಮದುವೆಯ ಮಂಟಪದಲ್ಲಿ ಅಂತರ್ಪಟವನ್ನು ಮೇಲೆತ್ತಿದಾಗ ಇವರೊಳಗೆ ಎಷ್ಟು ಮಂದಿಯ ಸ್ವಪ್ನಗಳು ನಿಜರೂಪವನ್ನು ಹೊಂದುವುವು?

ಮೋಹಿನಿಯಾದರೂ ತನ್ನನ್ನು ವರಿಸುವ ಗಂಡನ ಕುರಿತು ಆಕಾಶಕ್ಕೆ ಏಣಿಯನ್ನು ಕಟ್ಟದಿರಲಿಲ್ಲ ಆದರೆ ಆ ಏಣಿಯು ತನ್ನನ್ನು ಆಕಾಶಕ್ಕೆ ಅಲ್ಲದಿದ್ದರೂ, ಒಂದು ಉನ್ನತಸ್ಥಾನಕ್ಕಾದರೂ ಒಯ್ಯದಿರಲಿಕ್ಕಿಲ್ಲವೆಂದು ಅವಳ ನಂಬಿಕೆಯಾಗಿತ್ತು ಆದರೆ ಆ ಏಣಿಯೇ ಮುರಿದು ತಾನು ಪಾತಾಳಕ್ಕೆ— ಅಡಿಯೇ ಇಲ್ಲದ ಅಂತರಾಳಕ್ಕೆ ಬಿದ್ದೇನೆಂದು ಅವಳು ಕನಸಿನಲ್ಲಿಯೂ ಕಲ್ಪಿಸಿರಲಿಲ್ಲ ಹಾಗಾಗಿ, ತಾನು ಮಾಲೆ ಹಾಕಿದವನು ಬೆಳಕೇ ಕಾಣದ ಹುಟ್ಟು ಕುರುಡನೆಂದು ತಿಳಿದುಬರುತ್ತಲೇ ಅವಳಿಗಾದ ದುಃಖವೂ, ಉತ್ಸಾಹಭಂಗವೂ, ನಿಸ್ಸಹಾಯಭಾವನೆಯೂ ಯಾರ ಊಹನೆಗೂ ಸಿಲುಕದ ಮದುವೆಯ ಉತ್ಸವದಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಉಂಟಾಗುವ ಸಂತೋಷದ, ಉತ್ಸಾಹದ ಬದಲಿಗೆ ಮೋಹಿನಿಗೆ ಫಾಸೀಕಂಬದ ಬಳಿ ನಿಂತ ಕೈದಿಯ-ಅದರಲ್ಲಿಯೂ ನಿರಪರಾಧಿ ಕೈದಿಯ—ಮನಸ್ಸಿನ ಮೇಲಾಗುವ ವಿಹ್ವಲತೆಯ ಪರಿಣಾಮದ ಅನುಭವವಾಯಿತು.

ಮೋಹಿನಿಯು ಆನಂದನ ಬಳಿಯಲ್ಲೇ ಬಾವಟಿಗೆಗಳ ಬದಿಯ ಪೀಠವನ್ನು ಆತುಕೊಂಡು ನಿಂತು ಅವನ ಸಂಗೀತದಲ್ಲಿ ತಲ್ಲೀನಳಾಗಿ ಹೋದಳು

೨

ಆನಂದನು ಮದುವೆಯಾಗುತ್ತಲೇ ಇನ್ನು ಮುಂದೆ ತನಗೆ ಮೋಹಿನಿಯು ಕಣ್ಣಿಗೆ ಕಣ್ಣಾಗಿಯೂ, ಗೆಳೆತನಕ್ಕೆ ಗೆಳತಿಯಾಗಿಯೂ, ತನ್ನ ಆತ್ಮಕ್ಕೆ ಒಂದು ಸ್ವಂತ ಆತ್ಮವಾಗಿಯೂ ನೆರವಾಗುವಳೆಂದು ಭಾವಿಸಿದನು ಆದರೆ ಅವನ ಈ ಆಸೆಯು ಬರೀ ಬಯಲಾಸೆಯೆಂದು ಅವನಿಗೆ ತಿಳಿದುಬರಲು ಹೆಚ್ಚು ಸಮಯ ಬೇಕಾಗಲಿಲ್ಲ.

ಒಂದು ದಿನ ಅವನು ತನ್ನ ಕೋಣೆಯಲ್ಲಿ ಸುಖಾಸನದ ಮೇಲೆ ಒರಗಿ ವಾಯುಗೋಪುರಗಳನ್ನು ಕಟ್ಟುವುದರಲ್ಲಿ ಮಗ್ನನಾಗಿದ್ದನು, ಆಗ ಕೋಣೆಯೊಳಗೆ ಬೇರೆ ಯಾರೋ ಬಂದುದು ಅವನ ಚುರುಕಾದ ಕಿವಿಗಳಿಗೂ, ಸೂಕ್ಷ್ಮವಾದ ಜ್ಞಾನದೃಷ್ಟಿಗೂ ಗೋಚರವಾಯಿತು.

ಆಗಿಂದಾಗ ಕೈಬಳೆಗಳಿಂದ ಆಗುತ್ತಿದ್ದ ಕಿಣಿಕ್ಕಿಣಿ ಶಬ್ದದಿಂದಲೂ, ಘಮ್ಮನೆ ಪರಿಮಳಿಸುತ್ತಿದ್ದ ಹೂಗಂಪಿನಿಂದಲೂ ಒಳಗೆ ಬಂದವ್ಯಕ್ತಿಯು ತನ್ನ ಅಧಿಷ್ಠಾತ್ರಿಯಾದ ಮೋಹಿನಿಯೇ ಆಗಿದ್ದಳೆಂದು ಅವನಿಗೆ ಖಚಿತವಾಯಿತು

ಆನಂದನು ಮೋಹಿನಿಯೊಡನೆ ಸರಸಸಲ್ಲಾಪವಾಡಬೇಕೆಂದು ಬಲುವಾಗಿ ಬಯಸಿದನು ಆದರೆ ಯಾವ ರೀತಿಯಿಂದ ಮೊದಲು ಮಾಡಲಿ ಎಂದು ಯೋಚಿಸಲಾಗದೇ ಹೋದನು ಇನ್ನೂ ಯೋಚಿಸುತ್ತಿರುವಂತೆಯೇ ಅಕಸ್ಮಾತ್ತಾಗಿ ಅವನ ಚುರುಕಾದ ಕಿವಿಗಳಿಗೆ ನಿಟ್ಟುಸಿರುಗಳ ಅನುಭವವಾಯಿತು

ಆನಂದನು ಕಾತರನಾಗಿ, 'ಮೋಹಿನಿ' ಎಂದನು

ಮಾರುತ್ತರ ಬರಲಿಲ್ಲ

ಅವನು ತಿರುಗಿ, 'ಮೋಹಿನಿ' ಅದೇಕೆ ನಿಟ್ಟುಸಿರು?' ಎಂದನು

ಪುನಃ ಕೂಗಿದನು

ಆನಂದನು ಮೋಹಿನಿಯ ಬಳೆಗಳ ಶಬ್ದದಿಂದ, ಅವಳು ಬಳಿಯ ಕಿಟಕಿಯ ಹತ್ತಿರ ನಿಂತಿದ್ದಳೆಂದು ತಿಳಿದುಕೊಂಡು, ಮೆಲ್ಲಗೆ ಆ ಕಡೆ ಹೋದನು

ಮೋಹಿನಿಯು ಆನಂದನನ್ನೇ ಏಕಾಗ್ರದೃಷ್ಟಿಯಿಂದ ನೋಡುತ್ತ ನಿಂತಳು.

ಆನಂದನ ದೃಷ್ಟಿಯಿಲ್ಲದ ಕಣ್ಣುಗಳನ್ನೇ ದಿಟ್ಟಿಸುತ್ತಿರಲು ಅವಳಿಗೆ ಆತನಲ್ಲಿ ಒಂದು ತರದ ಸಹಾನುಭೂತಿಯುಂಟಾಯಿತು ಅವನು ಅವಳ ಹತ್ತಿರ ಹತ್ತಿರಕ್ಕೆ ಬರುತ್ತಲೇ ಅವಳು ನಾಗಸ್ವರದ ಮಾಯೆಗೆ ಒಳಪಟ್ಟ ಹಾವಿನಂತೆ ಅವನನ್ನೇ ದಿಟ್ಟಿಸುತ್ತಾ ಕದಲದೇ ಇದ್ದುಬಿಟ್ಟಳು ಆದರೆ ಅವನು ತೀರ ಹತ್ತಿರಕ್ಕೆ ಬಂದು ಕೈಯನ್ನು ಮೆಲ್ಲಗೆ ಆದಿಸಿ ತನ್ನ ಕೈಯನ್ನು ಹಿಡಿದುಕೊಳ್ಳುವಷ್ಟರಲ್ಲಿ ಅವಳಿಗೆ ಏನೋ ಒಂದು ತರದ ಭೀತಿಭಾವವು ತಲೆದೋರಿ, ಅವಳು ತಪ್ಪಿಸಿಕೊಂಡು ಆಚೆಗೆ ಸರಿದು ನಿಂತಳು ಅವಳು ಗಟ್ಟಿಯಾಗಿ ಬಿಕ್ಕಲಾರಂಭಿಸಿದಳು.

ಆನಂದನು ಅಪ್ರತಿಭನಾದನು ಅವನಿಗೆ ಆಗತಾನೇ ಮೋಹಿನಿಯ ಮನಸ್ಸಿನ ಪರಿಸ್ಥಿತಿಯ ವಿಷಯದಲ್ಲಿ ಸಂಶಯವುಂಟಾಯಿತು.

ಅವನು ಬಹಳ ಮೃದು ಸ್ವರದಿಂದ, 'ಮೋಹಿನಿ! ನನ್ನ ಕುರುಡುತನವು ನಿನ್ನನ್ನು ಕಾಡುತ್ತಿರುವುದೇ?' ಎಂದು ಕೇಳಿದನು.

ಮೋಹಿನಿಯ ಬಿಕ್ಕಳಿಕೆ ಮತ್ತಷ್ಟು ಹೆಚ್ಚಾಯಿತು.

ಆನಂದನು, 'ಮೋಹಿನಿ! ನೀನೇಕೆ ಹೀಗೆ ಹಲುಬುತ್ತಿರುವೆ? ನನ್ನ ಕಣ್ಣುಗಳು ಕುರುಡಾಗಿರುವ ಮಾತ್ರಕ್ಕೆ ನಾನು ಪೂರಾ ನಿಷ್ಪ್ರಯೋಜಕನೆಂದು ಎಣಿಸುವೆಯಾ? ಕುರುಡನಾಗಿದ್ದರೂ ನಿನ್ನ ಬಯಕೆಗಳನ್ನೆಲ್ಲಾ, ಸ್ವಲ್ಪವೂ ಊನಬಾರದಂತೆ, ಸಲ್ಲಿಸಲಾರದೆ ಹೋದೇನೆಂದು ತಿಳಿದಿರುವೆಯಾ?' ಎಂದು ಅವಳ ಕಡೆಗೆ ಹೋಗಿ, ಅವಳ ಕೈಯನ್ನು ಹಿಡಿದುಕೊಂಡನು

ಮೋಹಿನಿಯು ತನ್ನ ಕೈಯನ್ನು ಬಿಡಿಸಿಕೊಳ್ಳಲು ನೋಡಿದಳು ಅದು ಸಾಧ್ಯವಾಗದೆ ಹೋಗಲು, ಅಳುದನಿಯಿಂದ, 'ಬಿಡಿ, ನೋವಾಗುತ್ತದೆ' ಎಂದಳು

ಆನಂದನು, 'ಆದರೆ ನಿನ್ನ ಈ ರೀತಿಯಿಂದ ನನ್ನ ಮನಸ್ಸಿಗೆ ಎಷ್ಟು ನೋವಾಗುತ್ತದೆ ಬಲ್ಲೆಯಾ? ಇಗೋ ನಿನ್ನ ಕೈಯನ್ನು ಬಿಟ್ಟೆನು ಆದರೆ ನೀನೂ ಪೀಡದಲೇ ಅಸಹಾಯನಾದ ನನ್ನ ಕೈಯನ್ನೂ ಬಿಡುವೆಯಾ?' ಎನ್ನುತ್ತಾ ಅವಳ ಕೈಯನ್ನು ಬಿಟ್ಟು ನಿಂತನು

ಮೋಹಿನಿಯು ನಿರುತ್ತರಳಾಗಿ ನಿಂತಿದ್ದಳು

'ಮೋಹಿನಿ, ಪರಮಾತ್ಮನು ನನ್ನನ್ನು ದೃಷ್ಟಿಯ ಸುಖದಿಂದ ವಂಚಿಸಿದನು ಯಾವಾಗ ಬೆಳಗಾಯಿತು, ಯಾವಾಗ ಕತ್ತಲಾಯಿತು ಎಂಬುದನ್ನು, ಯಾವುದು ಆಹಾರ, ಯಾವುದು ಆಹಾರವಲ್ಲ ಎಂಬುದನ್ನು, ಯಾವುದು ನೀರು ಯಾವುದು ನೀರಲ್ಲ ಎಂಬುದನ್ನು ನಾನು ಬೇರೆಯವರಿಂದಲೇ ತಿಳಿದುಕೊಳ್ಳಬೇಕಾಗಿದೆ ಹೆಚ್ಚೇಕೆ ನಾನು ಜೀವವನ್ನು ಧರಿಸಿಕೊಂಡಿರುವುದೇ ಇತರರ ಸಹಾಯದಿಂದ ಆದರೆ ನನಗಿರುವ ಅಪಾರ ಆಸ್ತಿಯಿಂದಾಗಿ ನಾನು ಅದಾವುದಕ್ಕೂ ಹೆದರಬೇಕಾಗಿಲ್ಲ ಆದರೆ ಬರೀ ಉಂಡುತಿಂದು ಹಾಯಾಗಿ ಇದ್ದುಬಿಟ್ಟುದರಿಂದಲೇ ಜೀವಿತದ ಸಾರ್ಥಕತೆಯಾಗದು ಅದನ್ನು ಮೃಗಪಕ್ಷಿಗಳೂ ಮಾಡಬಲ್ಲವು ಆದರೆ ಮಾನವ ಜಾತಿಯವರಾದ ನಮಗೆ ಅಷ್ಟರಿಂದ ತೃಪ್ತಿ ಇರುವುದಿಲ್ಲ ಅದಕ್ಕೆ ತೃಪ್ತಿ ಬರಬೇಕಾದರೆ ನನ್ನ ಜೀವನವು ನಿಜವಾಗಿಯೂ ಸಫಲವಾಗಬೇಕಾದರೆ, ಅದಕ್ಕೆ ತೀರ ಶ್ರೇಷ್ಠವಾದ ಇನ್ನೊಂದು ಆತ್ಮದ ಸಹಕಾರ ಬೇಕು ಇದಕ್ಕಾಗಿಯೇ ನಾನು ನಿನ್ನನ್ನು ಕೋರಿದೆ ನೀನು ನನ್ನ ಜನ್ಮವನ್ನು ಸಾರ್ಥಕ ಮಾಡಲಾರೆಯಾ?' ಆನಂದನ ಪರವಶತೆಯಿಂದ ಕೇಳಿದನು.

ಅವನ ಸ್ವರದಲ್ಲಿ ಅವರ್ಣನೀಯವಾದ ಒಂದು ಮನೋಭಾವವು ಕೇಳಿಬರುತ್ತಿತ್ತು ಮೋಹಿನಿಯ ಅಸಂಸ್ಕೃತವಾದ ಹೃದಯಕ್ಕೆ ಮಾತ್ರ ಅದರ ಅನುಭವವಾಗಲಿಲ್ಲ ಅವಳ ಅನನುಭವಸ್ಥವಾದ ಮನಸ್ಸಿಗೆ ಆನಂದನ ಮಾತುಗಳ ಅರ್ಥವು ನಾಟಲಿಲ್ಲ ಅವಳು ಇನ್ನೂ ಮೌನವಾಗಿಯೇ ಇದ್ದಳು.

ಆನಂದನು ಶೋಕಾಕುಲನಾದನು. ಅವಳು ತನ್ನನ್ನು ಪ್ರೀತಿಸುವುದಿಲ್ಲವೆಂದೇ ಅವನು ತಿಳಿದುಕೊಂಡನು. ಇನ್ನು ತಾನಾದರೂ ಅವಳನ್ನು ಯಾಕೆ ಕಾಡಬೇಕೆಂದು ಆನಂದನಿಗೆ ತೋಚಿತು

ಆನಂದನು, ಗಂಭೀರವಾಗಿ, 'ಮೋಹಿನಿ' ನೀನಾದರೂ ನನ್ನ ಜೀವನದ ಕತ್ತಲೆಯನ್ನು ಹರಿಸಿ ಬೆಳಕು ಕಾಣಿಸುವಿಯೆಂದು ನಂಬಿದ್ದೆ ಇನ್ನು ಅದಕ್ಕೂ ಎಡೆಯಿಲ್ಲವೆಂದು ಕಂಡೆನು ನನ್ನ ಜೀವನವಂತೂ ನಿಷ್ಫಲವೇ ಸೈ, ಆದರೆ, ಅದರೊಂದಿಗೆ ನಿನ್ನ ಜೀವನವನ್ನೂ ಹಾಳುಗೆಡಿಸಲು ನನಗೆ ಮನಸ್ಸಿಲ್ಲ - ನಾನು ನಿನ್ನನ್ನು ವರಿಸುವುದರಿಂದ ಒಂದು ತಪ್ಪನ್ನು ಮಾಡಿದೆನು. ಇನ್ನು ನಿನ್ನನ್ನು ನಿನ್ನ ಅಪೇಕ್ಷೆಗೆ ಎದುರಾಗಿ ಆಳುವ ಇನ್ನೊಂದು ಅಪರಾಧವನ್ನು ಮಾಡುವುದಕ್ಕೆ ನನ್ನ ಮನಸ್ಸು ಹೇಸುವುದು. ಇಗೋ, ಇಂದಿನಿಂದ ನೀನು ಸ್ವತಂತ್ರೆ. ನಾನು ನಿನ್ನನ್ನು ಯಾವ ವಿಷಯದಲ್ಲಿಯೂ ಆತಂಕಪಡಿಸೆನು. ನನ್ನ ದುಃಖವೇ ನನಗೆ ಸಾಕು, ಅದನ್ನು

ದುಃಸಗೊಳಿಸುವ ನೆವದಿಂದ ನಿನ್ನನ್ನು ದುಃಖಕ್ಕೆ ಈಡುಮಾಡಲಾರೆನು,'' ಎಂದು ಹೇಳಿದನು.

ಆನಂದನ ಮನಸ್ಸಿನ ಉದ್ವೇಗವು ಅತಿರೇಕವಾಗಲು, ಅವನು ಆ ಕೋಣೆಯಲ್ಲಿ ಇರಲಾರದೆ ಮೆಲ್ಲಮೆಲ್ಲಗೆ ಹೊರಗೆ ಉದ್ಯಾನದೆಡೆಗೆ ಹೋಗಿಬಿಟ್ಟನು.

೩

ಮೋಹಿನಿಯ ತವರೂರು ಮಂಗಳೂರು. ಅವಳು ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಬೇಸಿಗೆಕಾಲದ ರಜೆಯಲ್ಲೇ ಅವಳ ಮದುವೆಯಾದುದು. ರಜೆಯ ಸಮಯದಲ್ಲೇ ಅವಳು ಗಂಡನಲ್ಲಿ ಬಂದು ಉಳಿಕೊಂಡಿದ್ದಳು. ಆನಂದನ ಮಾತುಗಳಿಂದ ಅವಳ ಮನಸ್ಸಿನ ಮೇಲೆ ಹೆಚ್ಚಿನದೇನೂ ಪರಿಣಾಮವಾಗಿರದಿದ್ದರೂ ತನ್ನ ವಿದ್ಯಾಭ್ಯಾಸವನ್ನು ಮುಂದೊತ್ತಬೇಕೆಂದು ಅವಳು ಅಂದೇ ನಿರ್ಧಾರಮಾಡಿದ್ದಳು.

ಆನಂದನ ತಂದೆತಾಯಿಗಳು ಇದಕ್ಕೆ ತೀರ ವಿರೋಧವಾಗಿದ್ದರೂ ಆನಂದನು ಅವಳಿಗೆ ಅನುಕೂಲನಾದನು. ಪರಿಣಾಮವಾಗಿ ಮೋಹಿನಿಯು ಶಾಲೆ ಆರಂಭವಾಗುತ್ತಲೇ, ತಿರುಗಿ ಮಂಗಳೂರಿಗೆ ಹೋದಳು.

ಮೋಹಿನಿಯು ತವರ್ಮನೆಗೆ ಹೋದ ಮೇಲೆ ಆನಂದನು ತನ್ನ ದಿನಚರಿಯನ್ನುಪೂರ್ತಿಯಾಗಿ ಬದಲಾಯಿಸಿದನು. ಒಬ್ಬ ಪ್ರಖ್ಯಾತ ವೀಣಾಗಾಯಕನನ್ನು ಕರೆಯಿಸಿ ಆತನು ವೀಣಾವಾದನವನ್ನು ಅಭ್ಯಾಸಮಾಡಲಾರಂಭಿಸಿದನು. ತನ್ನ ಬಾಲ್ಯಮಿತ್ರನಾದ ಮನೋಹರನನ್ನು ಅವನು ತನ್ನಲ್ಲೇ ತನ್ನ ಸಂಗಾತಿಯಾಗಿ ನಿಲ್ಲಿಸಿಕೊಂಡನು. ಮನೋಹರನೂ ತಕ್ಕಮಟ್ಟಿಗೆ ಓದುಬರಹ ಬಲ್ಲವನು. ಹಲವು ಭಾಷೆಗಳ ಪರಿಚಯುಳ್ಳವನು; ಗಾಯನದಲ್ಲಿಯೂ ಅಭಿರುಚಿಯುಳ್ಳವನು; ಮನೋಹರನ ಸಂಗದಿಂದಲೂ, ಗಾಯನ ವ್ಯಾಸಂಗದಿಂದಲೂ ಆನಂದನು ತನ್ನ ಮನಸ್ಸಿನ ಹಂಬಲನ್ನು ಆದಷ್ಟು ಮಟ್ಟಿಗೆ ಮರೆಯಲು ಯತ್ನಿಸಿದನು.

ಆನಂದನ ಮನೆಯ ಸುತ್ತಲೂ ವಿಶಾಲವಾದ ಉದ್ಯಾನವಿತ್ತು. ಉದ್ಯಾನದಲ್ಲಿ ನಡುನಡುವೆ ಲತಾಗೃಹಗಳೂ, ಆಧಾರಾಸನಗಳೂ ಇದ್ದುವು. ಒಂದು ಕಡೆಯಲ್ಲಿ ನೇತ್ರಾವತಿಯು ಉದ್ಯಾನದ ಗಡಿಯಾಗಿ ಮಂದಗಮನದಿಂದ ಹರಿಯುತ್ತಿದ್ದಳು. ಉದ್ಯಾನದಿಂದ ನದಿಗೆ ಇಳಿಯಲು ಒಂದೆಡೆ ಸುಂದರವಾದ ಸೋಪಾನಗಳನ್ನು ಕಟ್ಟಿಸಿದ್ದರು.

ಆನಂದನು ಪ್ರತಿದಿನವೂ ಹೆಚ್ಚಿನ ಸಮಯವನ್ನು ಮನೋಹರನೊಂದಿಗೆ ಉದ್ಯಾನದಲ್ಲಿಯೇ ಕಳೆಯುವನು. ಉದ್ಯಾನದೊಳಗಿನ ಪ್ರತಿಯೊಂದು ಗಿಡವನ್ನೂ, ಪ್ರತಿಯೊಂದು ಬಳ್ಳಿಯನ್ನೂ ಅವನು ಬಲ್ಲವನಾಗಿದ್ದನು. ತನ್ನ ಗ್ರಹಣಶಕ್ತಿಯ ಬಲದಿಂದ ಅವನು ಪ್ರತಿಯೊಂದು ಪಾತಿ, ಕಟ್ಟೆ, ಲತಾಮಂಟಪ ಮುಂತಾದುದರ ಸರಿಯಾದ ಸ್ಥಾನವನ್ನು ತಿಳಿದುಕೊಂಡು ಯಾರ ಸಹಾಯವೂ ಇಲ್ಲದಾಗಲೂ ಸಹ ಉದ್ಯಾನವನ್ನು ನಿರಾತಂಕವಾಗಿ ಸುತ್ತಬಲ್ಲವನಾಗಿದ್ದನು.

ಆನಂದನು ತನ್ನ ಅತುಲಪ್ರೇಮವನ್ನು ತನ್ನ ಉದ್ಯಾನದ ಗಿಡಬಳ್ಳಿಗಳಿಗೆ ಹಂಚಿಕೊಟ್ಟಿದ್ದನು. ಅವುಗಳು ಕಾಲಕಾಲಕ್ಕೆ ಬಿಡುತ್ತಿದ್ದ ಹೂಗಳ ಮೇಲಂತೂ ಆನಂದನ ಪ್ರೇಮವು ಅವರ್ಣನೀಯ. ಅವನು ತನ್ನ ಉದ್ಯಾನದೊಳಗಿನ ಪ್ರತಿಯೊಂದು ಗಿಡವನ್ನೂ, ಬಳ್ಳಿಯನ್ನೂ ಒಂದೊಂದು ಹೆಸರಿನಿಂದ ಕರೆಯುತ್ತಿದ್ದನು. ಅವೆಲ್ಲವೂ ತನ್ನ ಮಕ್ಕಳೆಂದೂ, ಇಡೀ ಉದ್ಯಾನವೇ ತನ್ನ ಸಂಸಾರವೆಂದೂ ಆನಂದನ ಊಹನೆಯಾಗಿತ್ತು. ತನ್ನ ಉದ್ಯಾನದಲ್ಲಿ ಅರಳುವ ಹೂಗಳನ್ನೆಲ್ಲಾ ಅವನು ಆಯಾ ಗಿಡಬಳ್ಳಿಗಳ ಮೇಲೆಯೇ ಇರಗೊಡಿಸಿ ಅವುಗಳನ್ನು ಬಲುವಾಗಿ ಮುದ್ದಿಸುತ್ತಿದ್ದನು. ಪ್ರತಿದಿನ ಮುಂಜಾನೆ ಅರಳಿದ ಹೂಗಳ ಪರಿಮಳವನ್ನು ಮೂಸಿ ಅವುಗಳ ಮೇಲೆ ಬೆರಳಾಡಿಸಿ ಆನಂದನು ಅವುಗಳ ಸೌಂದರ್ಯವನ್ನು ಕಲ್ಪಿಸಿಕೊಳ್ಳುವನು, ಮತ್ತು ಅತ್ಯಂತ ಸಂತೋಷವನ್ನು ಅನುಭವಿಸುವನು; ಸಾಯಂಕಾಲದಲ್ಲಿ ಅವು ಬಾಡಿ, ಮುದುಡಿ ಬಿದ್ದುಹೋಗಲು ಆನಂದನ ಹೃದಯವೂ ಅವುಗಳಂತೆಯೇ ಬಾಡಿ ದುಃಖಪೂರ್ಣವಾಗುವುದು. ಅವನ ಮನಸ್ಸು ವೈರಾಗ್ಯವನ್ನು ಹೊಂದುವುದು.

ಅಂತಹ ಸಮಯದಲ್ಲಿ ಆನಂದನು ತನ್ನ ವೀಣೆಯನ್ನು ಕೈಯಲ್ಲಿ ತೆಗೆದುಕೊಂಡು, ಯಾವುದಾದರೊಂದು ಗಿಡದ ಕಟ್ಟೆಯ ಮೇಲಾಗಲಿ, ಲತಾಗೃಹದಲ್ಲಾಗಲಿ, ನದಿಗೆ ಇಳಿಯುವ ಸೋಪಾನಗಳ ಮೇಲಾಗಲಿ ಕುಳಿತು, ಸುಮಧುರವಾದ ಕಂಠದೊಡನೆ ವೀಣೆಯ ನಾದವನ್ನು ಸೇರಿಸುತ್ತಾ ಹಾಡುವನು:—

''ಅಯಿ ಕದಯಮ್—
ಕವ ಹೃದಯಮ್—
ಮಸ್ಯಣ ಸುಧಾ
ರಸ ಸರಣಮ್?
ಪುರುಷೇರಂ,
ಮದ ಸರಣಮ್?
ಕೃಷಿತಾನಾಮ್
ತನಯಾನಾಮ್
ಪುರುಷೇರಂ
ಮದ ಸರಣಮ್?—
ತನಹಿಕರೋ—
ಮೃದುಲತರೋ—
ನವ ನವ ಮಧು
ಕಣ ದಾಯೀ?
ಭೀಕರ ವಿಷ
ಲವ ದಾಯೀ?
ಕ್ಷುಧಿತಾನಾಮ್
ತನಯಾನಾಮ್
ಭೀಕರ ವಿಷ
ಲವ ದಾಯೀ?—''

ವೀಣೆಯು ಆನಂದನ ರಾಗಾಲಾಪನೆಯನ್ನು ಲಹರಿಲಹರಿಯಾಗಿ ಪ್ರತಿಧ್ವನಿಸುವುದು. ಒಂದೆರಡು ಘಂಟೆಗಳ ವರೆಗೆ ಆನಂದನು ಗಾನದಲ್ಲೇ ತನ್ಮಯನಾಗಿ ಕುಳಿತುಬಿಡುವನು.

ಆನಂದನು ಉದ್ಯಾನಸಂಚಾರದಲ್ಲಿಯೂ ಗಾಯನದಲ್ಲಿಯೂ ನಿರತನಾಗಿರದ ಸಮಯದಲ್ಲಿ ಮನೋಹರನು ಅವನಿಗೆ ನಾನಾ ಪುಸ್ತಕಗಳನ್ನು ಓದಿ ಹೇಳುವನು. ನಾನಾ ತರದ ಒಗಟು ಮುಂತಾದ ಮೆದುಳಿನ ಆಟಗಳಿಂದ ಆನಂದನ ಮನಸ್ಸನ್ನು ಉಲ್ಲಾಸಗೊಳಿಸುವನು. ಆತ್ಮೀಯವಾದ ಮಾತುಕತೆಗಳಿಂದ ಅವನ ಮನಸ್ಸನ್ನು ಯಾವಾಗಲೂ ಪ್ರಫುಲ್ಲವಾಗಿರಿಸಲು ಕೈಲಾದಷ್ಟು ಯತ್ನಿಸುವನು. ಹೆಚ್ಚೇಕೆ, ಆನಂದನು ತನ್ನ ಜೀವನದಲ್ಲಿ ಮೋಹಿನಿಯು ಯಾವ ಸ್ಥಾನವನ್ನು ಆಕ್ರಮಿಸಬೇಕೆಂದು ಬಯಸಿದ್ದನೋ ಆ ಸ್ಥಾನವನ್ನು ಮನೋಹರನು ಆಕ್ರಮಿಸಿದ್ದನು. ಮನೋಹರನ ಬದಲಿಗೆ ಮೋಹಿನಿಯೇ ಇರುತ್ತಿದ್ದರೆ! ಹಾ! ಆನಂದನ ಮನಸ್ಸು ಈ ಯೋಚನೆಯಿಂದ ಶಾಂತಿಯೆಂದರೇನೆಂಬುದನ್ನು ಕಾಣಲಾರದೇ ಹೋಯಿತು.

೪

ಮೋಹಿನಿಯು ಒಂದೇ ಪ್ರಕಾರ ವಿದ್ಯಾಭ್ಯಾಸಮಾಡುತ್ತಾ ಹೋದಳು. ಎಂದು ಅವಳು ಎಮ್. ಎ. ಉತ್ತೀರ್ಣಳಾದಳೋ ಅಂದು ಅವಳಿಗೆ ಇನ್ನುಮುಂದೆ ಏನು ಮಾಡುವುದೆಂದು ತೋಚದೇ ಹೋಯಿತು. ವಿದ್ಯಾರ್ಜನೆಯ ಮುಂದೆ ಅವಳಿಗೆ ಮತ್ತೆ ಇತರ ಯೋಚನೆಯೂ ಉಂಟಾಗಿರಲಿಲ್ಲ. ಅವಳ ಖರ್ಚಿಗೆ ಬೇಕಾದಷ್ಟು ಹಣವನ್ನು ಆನಂದನು ಆಗಿಂದಾಗ ಕಳುಹಿಸುತ್ತಿದ್ದನು. ಅವನು ತನ್ನ ಜೀವನವನ್ನು ಹಾಳುಮಾಡಿದವನೆಂಬ ಭಾವನೆಯು ಅವಳಲ್ಲಿ ಬಲು ಚೆನ್ನಾಗಿ ಬೇರೂರಿಕೊಂಡಿದ್ದು ಅದನ್ನು ಕಿತ್ತೆಸೆಯಲು ಅವಳಿಂದ ಕೈಗೂಡದೇ ಹೋಯಿತು. ಆದುದರಿಂದ ಆನಂದನ ಮೇಲಿನ ಸೇಡು ತೀರಿಸಲು ಎಂಬಂತೆ ಅವಳು ಈ ವರೆಗೆ ಆತನಿದ್ದಲ್ಲಿಗೆ ಹೋಗಿರಲೇ ಇಲ್ಲ.

ಇಷ್ಟರಲ್ಲೇ ಅವಳ ಅತ್ತೆಯೂ, ಮಾವನೂ ನಿರಾಶೆಯಿಂದ ಬೆಂದುಬೆಂದಾಗಿ, ಒಬ್ಬರ ಹಿಂದೆ ಒಬ್ಬರು, ಈ ಲೋಕದಿಂದ ಪಾರಾಗಿದ್ದರೆಂಬುದೂ ಅವಳ ಕಿವಿಯ ಮೇಲಿಂದ ಹೋಗಿತ್ತು. ಅದನ್ನೂ ಅವಳು ಒಂದು ಕಿವಿಯಿಂದ ಕೇಳಿ, ಇನ್ನೊಂದು ಕಿವಿಯಿಂದ ಬಿಟ್ಟಿದ್ದಳು. ಅವರು ತನ್ನನ್ನು ತಿಳಿದೂ ತಿಳಿದೂ ಮೋಸಮಾಡಿರಲಿಲ್ಲವೇ? ತನ್ನ ಇಡೀ ಭವಿಷ್ಯವನ್ನೇ ನಾಶಮಾಡಿರಲಿಲ್ಲವೇ? ಅಂತಹವರಿಗಾಗಿ ಅವಳ ಮನಸ್ಸು ಒಂದು ಕಂಬನಿಯನ್ನಾದರೂ ಸುರಿಸಲು ಒಡಂಬಡಲಿಲ್ಲ.

ಈಗ ಇನ್ನು ತನ್ನ ಜೀವನಧ್ಯೇಯವು ಯಾವುದೆಂಬುದನ್ನು ಊಹಿಸಲಾರದೆ ಇದ್ದಾಗ, ಮೋಹಿನಿಗೆ ಮೆಲ್ಲಮೆಲ್ಲನೆ ಭಾವೋದಯವಾಗತೊಡಗಿತು. ಅವಳು ಒಂದು ದಿನ ಸುಮ್ಮನಾಗಿ ಕುಳಿತಿದ್ದಾಗ, ತಾನು ಈ ವರೆಗೆ ಮಾಡಿದುದು ಸರಿಯೋ ಎಂದು ಎನಿಸಿತು.

ಎಷ್ಟೆಂದರೂ ತಪ್ಪು ಆನಂದನದಾಗಿರಲು ಕಾರಣವಿಲ್ಲ. ಯಾಕೆಂದರೆ, ನಿಜವಾಗಿಯೂ ಈ ಸಂಬಂಧದಲ್ಲಿ ಅವನು ಮಾಡಿದುದೇನು? ಬರೀ ತನ್ನ ಕುತ್ತಿಗೆಗೆ ಮಾಲೆ ಹಾಕಿದುದು. ಇದಕ್ಕೆ ಕಾರಣರು ಯಾರು? ಅವನ ತಂದೆತಾಯಿಗಳೇ ಅಲ್ಲವೇ? ಅವರು ತಮ್ಮ ಮಗನು ಕುರುಡನೆಂಬುದನ್ನು ಮರೆಯಿಸಿದುದರಿಂದಲೇ ಅಲ್ಲವೇ ಇಷ್ಟೆಲ್ಲಾ ಅನಾಹುತವಾಯಿತು? ಇದ್ದುದನ್ನು ಹೇಳದೆ ಹೆಣ್ಣನ್ನು ನಿಶ್ಚಯಿಸಿರುವರೆಂಬುದು ಆನಂದನಿಗೆ ತಿಳಿಯದಿದ್ದು, ಎಲ್ಲವೂ ಎಲ್ಲರ ಸಮ್ಮತಿಯಿಂದಲೇ ನಡೆದಿರುವುದೆಂಬ ಭಾವನೆಯಿಂದಲೇ ಆತನು ತನಗೆ ಮಾಲೆಹಾಕಿದ್ದಿರಬಹುದು. ಇದಕ್ಕಾಗಿ ತಾನು ಅವನನ್ನು ದೂರಲಾಗದು. ದೂರತಕ್ಕವರಂತೂ ತಕ್ಕ ಪ್ರಾಯಶ್ಚಿತ್ತ ಹೊಂದಿ ಇಹದಿಂದ ಮುಕ್ತರಾಗಿರುವರು. ಇನ್ನು ತಾನು ಎಲ್ಲೆಲ್ಲಿ ಇರುವುದರ ಬದಲಿಗೆ ಆನಂದನಲ್ಲಿಯೇ ಏಕೆ ಇದ್ದುಬಿಡಬಾರದು? ತನಗಂತೂ ಅವನು ಪೂರಾ ಸ್ವಾತಂತ್ರ್ಯವನ್ನು ಕೊಟ್ಟಿರುವುದರಿಂದ ತಾನು ಯಾವ ವಿಷಯದಲ್ಲಿಯೂ ಅಂಜಬೇಕಾಗಿಲ್ಲ—ಎಂದು ಮುಂತಾಗಿ ಮೋಹಿನಿಯು ಯೋಚಿಸಿದಳು. 'ಯೋಚನೆಯು ಕೃತಿಯ ಜನ್ಮದಾಯಕ' ಎಂಬಂತೆ ಯೋಚನೆಯು ಒಡನೆಯೇ ಕಾರ್ಯರೂಪದಲ್ಲಿ ಫಲವನ್ನು ಹೊಂದಿತು.

ಆನಂದನು ಮೋಹಿನಿಯನ್ನು ಬಹಳ ಗೌರವದಿಂದ ಸ್ವಾಗತಮಾಡಿದನು. ವೈರಾಗ್ಯದಿಂದ ಕಲ್ಲಾದ ಅವನ ಹೃದಯವು ಅವಳನ್ನು ತಣ್ಣಗಾಗಿಯೇ ಬರಮಾಡಿಕೊಂಡಿತು. ಮೋಹಿನಿಗೆ ಯಾವುದರಲ್ಲಿಯೂ ಎಂತಹ ಕೊರತೆಯೂ ಬರದಂತೆ ನೋಡಬೇಕೆಂದು ಆಳುಗಳಿಗೆಲ್ಲಾ ಕಟ್ಟಪ್ಪಣೆಯಾಯಿತು.

ಮೋಹಿನಿಯು ಬಂದ ಮೇಲಂತೂ ಆನಂದನು ತನ್ನ ಉದ್ಯಾನಸಂಚಾರವನ್ನೂ, ವೀಣೆಯ ಗಾಯನವನ್ನೂ ಮತ್ತಷ್ಟು ಏಕಾಗ್ರತೆಯಿಂದಲೂ, ಸ್ಥಿರ ಮನಸ್ಸಿನಿಂದಲೂ ಮಾಡತೊಡಗಿದನು. ಯಾವಾಗ ನೋಡಿದರೂ ಅವನು ವೈರಾಗ್ಯಭಾವದಿಂದ ವೀಣೆಯ ಸ್ವರದೊಂದಿಗೆ ಸ್ವರಕೂಡಿಸಿ ಹಾಡುವನು:—

''ನನು ಬಹುಶೋ
ಗತಮುದಯಮ್
ನನು ಬಹುಶೋ
ಪ್ರಸ್ತಮಯಮ್
ಸ್ಫುಟದಮಲತರ ಸುಮನಸೇ
ಪತದಮಲತರ ಸುಮನಸೇ.
ಹೃದಯಮಿದಂ
ಬಹು ವಿಕಸತಿ
ಹೃದಯಮಿದಂ
ಬಹು ಮುಕುಲತಿ
ಪತದಮಲತರ ಸುಮನಸೇ''

ಗಾಳಿಯು ಹಾಡಿನ ಲಹರಿ ಲಹರಿಗಳನ್ನು ತೇಲಿಸಿಕೊಂಡು ಹೋಗಿ, ಪ್ರತಿಯೊಂದು ಹೂವಿನ ಮೇಲೆ ಬಡಿದು ಅವುಗಳ ಪರಿಮಳವನ್ನು ಅಪಹರಿಸಿಕೊಂಡು, ಮೋಹಿನಿಯ ಕಿವಿಯನ್ನೂ, ಮೂಗನ್ನೂ ತುಂಬುವುದು. ಮೋಹಿನಿಯು ಮಾಯಾಬದ್ಧಳಾದಂತೆ ಆನಂದನ ಹಾಡನ್ನು ತನ್ನ ಕೋಣೆಯಿಂದ ಆಲಿಸಿ ಮುಗ್ಧಳಾಗುವಳು. ಅದು ನಿಂತೊಡನೆ ತಿರುಗಿ ಯಾವಾಗ ಕೇಳಬಂದೀತೆಂದು ಹಾರೈಸಿ ಕುಳಿತುಕೊಳ್ಳುವಳು. ಹಾಡಿನೊಳಗಿನ ಭಾವವು ಅವಳ ಹೃದಯವನ್ನು ಯಾಕೋ ನಡುಗುವಂತೆ ಮಾಡುತ್ತಿತ್ತು; ಅವಳ ಮನಸ್ಸು ಯಾವುದನ್ನೋ ಕೋರಿ, ಬಲೆಯೊಳಗೆ ಸಿಕ್ಕಿಬಿದ್ದ ಹಕ್ಕಿಯಂತೆ, ಚಡಪಡಿಸುತ್ತಲಿತ್ತು. ಅದನ್ನು ವರ್ಣಿಸಲಿಕ್ಕಾಗಲಿ, ಅದನ್ನು ಹುಡುಕಿಕೊಂಡು ಹೋಗಲಿಕ್ಕಾಗಲಿ ಅವಳಿಗೆ ಬಾರದಾಯಿತು. ಯಾವುದೋ ಒಂದು ನಿದ್ದೆಯ ಮುಸುಕು ಅವಳ ಮೇಲಿಂದ ಕಳಕ್ಕೆ ಜಾರಿ ಬಿದ್ದಿರುವಂತೆ ಅವಳಿಗೆ ಭಾಸವಾಯಿತು.

೫

ಆನಂದನ ಗಾಯನವನ್ನು ಮೋಹಿನಿಯು ದಿನ ಹೋದಂತೆ ಹೆಚ್ಚುಹೆಚ್ಚಾಗಿ ಪ್ರೀತಿಸತೊಡಗಿದಳು. ಯಾಕೆ, ಆನಂದನಲ್ಲಿಯೂ ಸಹ ಅವಳಿಗೆ ಕ್ರಮಕ್ರಮವಾಗಿ ಭಕ್ತಿಭಾವವು ಉದಯಿಸಲಾರಂಭಿಸಿತು. ಅವನನ್ನು ಮೊದಲು ದೂರದಿಂದಲೇ ನೋಡುತ್ತಿದ್ದವಳು ಈಗ ಅವನ ಹತ್ತಿರ ಹತ್ತಿರ ಸರಿಯ ಹತ್ತಿದಳು.

ಕ್ರಮೇಣ ತಾನು ಆನಂದನನ್ನು ಅಂದು, ಮದುವೆಯಾಗಿ ಬಂದ ಮೊದಲನೆಯ ಸಾರೆ, ಅಷ್ಟೇಕೆ ಜಿಗುಪ್ಸೆಯಿಂದ ಕಂಡಿದ್ದೆನೆಂದು ಎನಿಸತೊಡಗಿತು. ಅವನು ಕುರುಡನಾಗಿದ್ದುದು ಅವನ ತಪ್ಪೇ? ಅವನನ್ನಲ್ಲದಿದ್ದರೆ ತಾನು ಬೇರೆ ಎಂತಹ ನಿಕೃಷ್ಟ ತರಗತಿಯವನನ್ನು ವರಿಸುತ್ತಿದ್ದೆನೋ! ಹಾ! ತಾನು ಎಂತಹ ಪ್ರಮಾದವನ್ನು ಮಾಡಿದೆನು! ಆನಂದನ ಜೀವನದೊಳಗಿನ, ತಾನು ಸುಖಮಯವಾಗಿ ಮಾಡಬಹುದಾಗಿದ್ದ, ಹತ್ತು ವರ್ಷಗಳನ್ನು ತಾನು ಅಂಧಕಾರಮಯವಾಗಿ ಮಾಡಿದೆನಲ್ಲ! ತನ್ನಿಂದ ಎಂತಹ ಅಪರಾಧವಾಯಿತು! ಇನ್ನಾದರೂ ಇದಕ್ಕೆ ಪ್ರಾಯಶ್ಚಿತ್ತ ಮಾಡಲಾರೆನೇ?—ಎಂದು ಮುಂತಾಗಿ ಮೋಹಿನಿಯು ಹಲುಬುತ್ತಾ ಹಂಬಲಿಸ ತೊಡಗಿದಳು.

ಅಂದು ಮುಸ್ಸಂಜೆಯ ಹೊತ್ತಾಗಿತ್ತು. ಆನಂದನು ಹೊಳೆಯ ಸೋಪಾನಗಳ ಮೇಲೆ ಕುಳಿತು ವೀಣೆಯನ್ನು ನುಡಿಸುತ್ತಾ ಹಾಡಿನಲ್ಲಿ ಮಗ್ನನಾಗಿದ್ದನು. ಮೋಹಿನಿಯು ಮೆಲ್ಲಮೆಲ್ಲನೆ ಅವನಿದ್ದಲ್ಲಿಗೆ ಹೋದಳು. ಅವನ ಬಳಿಯಲ್ಲೇ ಸೋಪಾನಗಳ ಬದಿಯ ಪೌಳಿಯನ್ನು ಆನಿಸಿಕೊಂಡು ನಿಂತು, ಆನಂದನ ಸಂಗೀತದಲ್ಲಿ ತಲ್ಲೀನಳಾಗಿ ಹೋದಳು:

''ಯದ್ ವನಮಪಿ
ಮಮ ದಲೀಷು
ಅವ್ಯಕ್ತಮಪಿ ಚ
ಮಮ ಸುಮೇಷು
ಸುಪಿಂಚಿತಮ್.
ಸುಪಿಂಚಿತಮ್.
ಉಷಾ ರಮೇ!
ಮಧುರ ತಮೇ!
ಮಂಗಳತರ ಬಹು ಸುಖಮೇ!
ಪಿಲೀತಾಸಿ
ಮೃದು ದಲಾಸಿ
ವಿಶಿಥಿಲಾಸಿ
ನವ ಸುಮಾಸಿ
ಜೇ!—
ಮಂಗಳತರ ಬಹು ಸುಖಮೇ!''

ಮೋಹಿನಿಯು ಪಶ್ಚಾತ್ತಾಪದಿಂದ ಬೆಂದು ಬೇಗುದಿಗೊಂಡಳು. ಬಹು ಸಮಯದ ವರೆಗೆ ಆಲಾಪಿಸಿ ಆನಂದನು ಮೌನನಾಗುತ್ತಲೇ ಅವಳು, ''ನಾಥ! ನನ್ನನ್ನು ಕ್ಷಮಿಸಲಾರೆಯಾ?'' ಎಂದು ಅವನ ಕಾಲಿನ ಮೇಲೆ ಬಿದ್ದಳು. ಆದರೆ 'ನಾಥ'ನು ಕ್ಷಮಿಸಿದೆನೆಂದಾಗಲಿ, ಕ್ಷಮಿಸಲಿಲ್ಲವೆಂದಾಗಲಿ ತಿಳಿಸಲು ಯಾವ ರೀತಿಯಿಂದಲೂ ಮುಂಬರಿಯದಿರಲು ಮೋಹಿನಿಯು ಗಾಬರಿಯಿಂದ ಎದ್ದು, ನೋಡಿದಳು. ಆನಂದನು ವೀಣೆಯನ್ನು ಬಾರಿಸುವ ಸ್ಥಿತಿಯಲ್ಲೇ ಗಾಯನದಲ್ಲಿ ತನ್ಮಯನಾದವನಂತೆ ಇದ್ದನು. ಆದರೆ ಜೋಲು ಬಿದ್ದ ಅವನ ಮುಖದಲ್ಲಿ ಪ್ರಾಣದ ಚಿಹ್ನೆಯೇ ಇರಲಿಲ್ಲ.

''ಹಾ! ನಿಜವಾಗಿಯೂ ನನ್ನ ಕೈಬಿಟ್ಟೆಯಾ!'' ಎಂದ ಮೋಹಿನಿಯು ಮುಗ್ಗರಿಸಿ ಹಿಂದೆ ಬಿದ್ದಳು. ಹಿಂದಿನಿಂದ, ತುಂಬಿದ ನೀರಿನಿಂದ ಮೊರೆಯುತ್ತಾ ಹರಿಯುತ್ತಿದ್ದ ನೇತ್ರಾವತಿಯು, ''ಯಾರು ಕೈಬಿಟ್ಟರೂ ನಾನು ನಿನ್ನ ಕೈಬಿಡೆನು; ಬಾ, ಮಗೂ!'' ಎಂದು ಮೋಹಿನಿಯನ್ನು ತಬ್ಬಿಕೊಂಡು ಮುಂದಕ್ಕೆ ಹರಿದಳು.

ಪರೀಕ್ಷೆಯಿಂದ ವಿದ್ಯಾರ್ಥಿಗಳ ಯೋಗ್ಯತೆಯನ್ನು ತಿಳಿಯಬಹುದೆ?

ಮುಂಬಾಯಿ ಸ್ತ್ರೀಯರಿಂದ ಅನಾಥಾಲಯವು ಸ್ಥಾಪನೆಯಾಯಿತು.

ಪುರಂದರದಾಸರ ಕೀರ್ತನೆ.—ಮನುಷ್ಯರ ವಕ್ರತೆ. ವಿದ್ಯಾರ್ಥಿಗಳು ಸಿನೇಮಗಳನ್ನು ನೋಡಬಾರದು?

ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಸುದೈವವೇ?

"ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ಅದೃಷ್ಟಬಿರ ಬೇಕು. ಅವನ ಅದೃಷ್ಟ ಚೆನ್ನಾಗಿತ್ತು; ಆತನು ಪಾಸು ಮಾಡಿದ. ನನ್ನ ದುರ್ದೈವ, ತೇರ್ಗಡೆಯಾಗಲಿಲ್ಲ" ಎಂದು ಶಾಲಾ ವಿದ್ಯಾರ್ಥಿಗಳು ಮೇಲೆ ಮೇಲೆ ಹೇಳಿಕೊಳ್ಳುತ್ತಿರುವುದನ್ನು ಅನೇಕರು ಕೇಳಿರಬಹುದು. ಇದು ನಮ್ಮಲ್ಲಿ ಮಾತ್ರವಲ್ಲ—ಇಂಗ್ಲೆಂಡು ದೇಶದಲ್ಲಿ ಸಹ ವಿದ್ಯಾರ್ಥಿಗಳು 'Passing examinations is most often a question of luck" ಎಂದು ಹೇಳುತ್ತಾರಂತೆ. ಇದರ ವಿಚಾರವೇನೆಂದು ಕಂಡುಹಿಡಿಯಲು ಕೆಲವಂದಿ ಪ್ರಮುಖ ಬ್ರಿಟಿಷ ವಿದ್ಯಾಧಿಕಾರಿಗಳು (Expert Educationists) ಒಂದು ಕಮಿಟಿಯನ್ನೇರ್ಪಡಿಸಿ, ಈ ಸಂಗತಿಯನ್ನು ಕುರಿತು ದೀರ್ಘವಾಗಿ ವಿಚಾರ ನಡೆಸಿ ಅದರ ಫಲಿತಾಂಶವನ್ನು ಪ್ರಕಟಿಸಿದ್ದಾರೆ. ಆ ಕಮಿಟಿಯವರು ೧೫ ಮಂದಿ ವಿದ್ಯಾರ್ಥಿಗಳನ್ನು ಬೇರೆ ಬೇರೆ ವಿಷಯಗಳಲ್ಲಿ ಪರೀಕ್ಷಿಸಿ ಅವರ ಉತ್ತರ ಪತ್ರಿಕೆಗಳನ್ನು ೬ ಮಂದಿ ವಿಶೇಷ ಅನುಭವಸ್ಥರಿಗೆ [illegible] ಪರೀಕ್ಷೆಗಾಗಿ ವಹಿಸಿದ್ದರಂತೆ. ಆ [illegible] ಮಂದಿಯಲ್ಲಿ ಒಬ್ಬರು ಯಾವ ವಿದ್ಯಾರ್ಥಿಯನ್ನು 'ಫೈಲ್' ಮಾಡಿದರೋ [illegible] ಮಂದಿಯನ್ನು ವಿಶೇಷ ತರಗತಿಯಲ್ಲಿ ತೇರ್ಗಡೆ ಮಾಡಿಸಿದರು. ಮತ್ತೊಬ್ಬ ಪರೀಕ್ಷಕರು [illegible] ಮಂದಿ ವಿದ್ಯಾರ್ಥಿಗಳನ್ನು ಫೈಲ್ ಮಾಡಿಸಿ ಒಬ್ಬನನ್ನು ವಿಶೇಷ ತರಗತಿಯಲ್ಲಿ ತೇರ್ಗಡೆ ಮಾಡಿಸಿದ್ದಲ್ಲ. [illegible] ವಿದ್ಯಾರ್ಥಿಗೆ [illegible] ಮಂದಿ ಪರೀಕ್ಷಕರೂ ಕೊಟ್ಟ ನಂಬರು ಕ್ರಮವಾಗಿ [illegible] ಮತ್ತೊಬ್ಬ ವಿದ್ಯಾರ್ಥಿಗೆ [illegible] ನಂಬರು ಕೊಟ್ಟಿರು.

ಹೀಗಿದ್ದಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾಗುವುದು ಪರೀಕ್ಷಕರ ಅಭಿಪ್ರಾಯ ಅಥವಾ ಅವರ ಪ್ರತ್ಯೇಕ ಮನೋಭಾವ, ಅವರ ಅಪೇಕ್ಷೆ—ಅನಪೇಕ್ಷೆಗಳು ಇವುಗಳನ್ನು ಅನುಸರಿಸಿಯೇ ಹೊರತು ತಾವು ಓದಿದುದರ ಮಹತ್ವದಿಂದಲ್ಲವೆಂದು ಹೇಳಬೇಕಾಗುತ್ತದಲ್ಲವೇ? ಈ ವಿಚಾರವನ್ನು ದೀರ್ಘವಾಗಿ ಪರಿಶೀಲಿಸಿದ ಮೇಲೆ [illegible] ಕಮಿಟಿಯ ಪ್ರಮುಖರಾದ ಸರ್ ಫಿಲಿಪ್ [illegible] ಮತ್ತು ಡಾ [illegible] ಎಂಬ ಅಧಿಕಾರಿಗಳು Examinations are quite worthless ಎಂಬ ನಿರ್ಧಾರಕ್ಕೆ ಬಂದಿದ್ದಾರೆಂದು ಪ್ರಕಟವಾಗಿದೆ. ಸಂಡೇ [illegible]

ನಮ್ಮ ದೇಶದಲ್ಲಿ ನಡೆವ ಪರೀಕ್ಷಾ ಪದ್ಧತಿಯು ವಿದ್ಯಾರ್ಥಿಗಳ ನಿಜವಾದ ಅಭಿವೃದ್ಧಿಯನ್ನು ತಿಳಿಸುವ ಸಾಧನವಾಗಿದೆಯೇ ಎಂಬುವನ್ನು ವಿದ್ಯಾಧಿಕಾರಿಗಳು ಗಮನಿಸಲು ಅರ್ಹವಾಗಿದೆ. ಸದ್ಬೋಧ ಪತ್ರಿಕೆ

ಪುರಂದರ ದಾಸರ ಸ್ಮಾರಕ ದಿನ

ಗಾನ ಕೈಸ್ಕರಾದ ಶ್ರೀ ಪುರಂದರ ದಾಸರ ಪುಣ್ಯತಿಥಿ ದಿವಸ [illegible] ನಡೆಯಿತು. ಈ ಸಮಾರಂಭದ ಸಮಯ ಪ್ರಸಿದ್ಧ ಡಾ. ನಾಗರಾಜ ಶರ್ಮಾರವರು ಅವರ ಪದ್ಯದ ಕುರಿತು ಹಿಂದೂ ಪತ್ರಿಕೆಯಲ್ಲಿ ಒಂದು ವಿಚಾರದ ಲೇಖವನ್ನು ಬರೆದಿರುತ್ತಾರೆ. ಅದರ ಅಭಿಪ್ರಾಯವು ಹೀಗಿರುತ್ತದೆ. "ಗಾನವು ಮನುಷ್ಯನ ಬುದ್ಧಿ ವಿಕಾಸ ಮಾಡುವುದೆ? ಅವನಲ್ಲಿಯ ರಾಜಕೀಯ ವಕ್ರತೆ ಸಾಮಾಜಿಕ ವಕ್ರತೆ ಇತ್ಯಾದಿ ವಕ್ರತೆಗಳನ್ನು ಗಾನದಿಂದ ಸರಿಪಡಿಸಬಹುದೆ? ಗಾಯನಕ್ಕೆ ಮನುಷ್ಯರನ್ನು ಸುಧಾರಿಸುವ ಶಕ್ತಿಯು ಇದೆ. ಅತಿ ಹಿಂದಿನ ಕಾಲದಿಂದ ಪುರಂದರದಾಸರು ಪ್ರಸಿದ್ಧ ಕವಿ [illegible] ಇರುತ್ತಾರೆ. ಪದ್ಯಗಳನ್ನು ರಚಿಸಿರುತ್ತಾರೆ. ಗಾಯನವು ನಡೆದಿರುತ್ತದೆ. ಜನರು ಇವುಗಳಿಂದ ಅನೇಕ ರೀತಿಗಳಲ್ಲಿ ಸುಧಾರಣೆ ಹೊಂದುತ್ತಾ ಬಂದಿರುತ್ತಾರೆ. ಪುರಂದರ ದಾಸರ ಗಾಯನವು ಈ ಬಗೆಯು. ಅನೇಕ ರೀತಿ ವಿಚಾರಗಳು ಇವುಗಳಲ್ಲಿ [illegible]. ಗಾಯನವು ರಸವತ್ತಾಗಿದೆ. ಬುದ್ಧಿವಂತರನ್ನು ತಲೆತೂಗಿಸುತ್ತದೆ. ನಮ್ಮಲ್ಲಿ ವಿಚಾರಶಕ್ತಿಗಳನ್ನು ಉತ್ತೇಜಿಸಿ, ನಮ್ಮಲ್ಲಿ ಒಂದು ಬಗೆಯ ಸ್ಫೂರ್ತಿಯನ್ನು ಉಂಟುಮಾಡುತ್ತದೆ. ರಾಜಕೀಯ, ಸಾಮಾಜಿಕ, ಸುಧಾರಣೆಗಳು ಪುರಂದರದಾಸರ ಗಾನದಲ್ಲಿ ತುಂಬಾ ಹೊಂದಿಕೊಂಡಿದ್ದವೆ."

ಶಾಹಿದ್‌ಗಂಜ ಗಲಭೆ. ಲಾಹೋರು.

ಮುಸ್ಲಿಮರು ಸತ್ಯಾಗ್ರಹ ಚಳವಳವನ್ನು ಆರಂಭ ಮಾಡಿರುವರು. ಲಾಹೋರಿನ ಬಾದಶಾಹಿ ಮಸೀದಿಯಲ್ಲಿ ಮುಸ್ಲಿಮರ ಸಭೆಯೊಂದು ಜರಗಿತು. ಸತ್ಯಾಗ್ರಹ ಚಳವಳವನ್ನು ಪ್ರಾರಂಭ ಮಾಡಲು ಕಾರಣಗಳು ದವು. ಸಿಖ್ಖರು ಕೆಡವಿದ ಶಾಹಿದ್‌ಗಂಜ ಮಸೀದಿಗೆ ಜಂಗಡವಾಗಿ ಹೋಗಿ ಪ್ರಾರ್ಥನೆ ಮಾಡುವುದಾಗಿ ಕಾರ್ಯಕ್ರಮ ಮಾಡಲಾದವು. ಪ್ರಥಮ ಜಂಗಡವು ಆತ್ತ ಕಡೆಗೆ ಹೊರಟವರನ್ನು ಹಾದಿಯಲ್ಲಿ ಪೋಲೀಸರಿಂದ ಬಂಧಿಸಲಾಯಿತು. ಸಿಖ್ಖರು ಕರ್ಪನಗಳ ಮೇಲಿನ ನಿರ್ಬಂಧವನ್ನು ನಿಷೇಧಿಸಿ ಬಹಳ ಚಳವಳ ನಡೆಸುತ್ತಾರೆ. ಚಳವಳ ಮಾತ್ರ ಸತ್ಯಾಗ್ರಹಕರವಾಗಿದ್ದು ಬಹಳ ಶಾಂತರೀತಿಯಲ್ಲಿ ನಡೆಯುತ್ತಿದೆ. ಸುತ್ತ ಮುತ್ತಲಿನ ನಗರಗಳಿಂದ ಸಿಖ್ಖರ ತಂಡಗಳು ಈ ಹೊಸ ಕಾನೂನನ್ನು ಮುರಿಯಲು ಲಾಹೋರಿಗೆ ಬರುತ್ತಿದ್ದಾರೆ. ಪೋಲೀಸರು ಇವರನ್ನು ಬಂಧಿಸುತ್ತಿದ್ದಾರೆ. ನ್ಯಾಯ ವಿಚಾರಣೆಯಾಗುತ್ತಿದೆ. ಕೆಲವರಿಗೆ ಸೆರೆಮನೆ ಇತ್ಯಾದಿ ಶಿಕ್ಷೆಗಳು ವಿಧಿಸಲಾಗುತ್ತಿವೆ. ಹಿಂದಿನ [illegible] ಸಮಯ ಮಂಜೂರು ಮಾಡಿದ [illegible] ದೆಯು ಕ್ಷಿಪ್ರದಲ್ಲಿ ಮುಗಿಯುವುದರಿಂದ ಅದನ್ನು ಮುಂದುವರಿಸದಿದ್ದರೂ ಮುಂದಕ್ಕೆ ಲೈಸನ್ಸುಗಳನ್ನು ಪಡೆದ ವಿನಹ ಮೆರವಣಿಗೆಗಳನ್ನು ನಡೆಯಿಸಬಾರದಾಗಿ ಹೊಸ ಆಜ್ಞೆಯು ಜಾರಿಯಾಗುವುದಂತೆ.

ಅಮೇರಿಕದ ಪ್ರಸಿದ್ಧ ಸಂಪಾದಕರು

ಅಮೇರಿಕದ ಪ್ರಸಿದ್ಧ ಸಂಪಾದಕರಾದ ಮಿ। ಹೊವರ್ಡರವರು ಈಗ [illegible] ಬಂದಿರುವರು. ವಿಮಾನದಲ್ಲಿ ಚೆನ್ನೆ [illegible] ದಿ [illegible] ಮಿಲಿಯಗಟ್ಟಲೆ ಪ್ರತಿಗಳನ್ನು ನಡೆಸುವ ಒಂದು ಅಮೇರಿಕದ ಪ್ರಸಿದ್ಧ ಪತ್ರಿಕೆ ಸಂಸ್ಥೆಯವರು. ಮಹಾತ್ಮಾಗಾಂಧಿಯವರ ಭೇಟಿ ಮಾಡಬೇಕೆಂದು ಇವರಿಗೆ [illegible] ಆದರೆ [illegible] ಅದು ಸಾಧ್ಯವಾಗಲಿಲ್ಲ. [illegible] ಹಿಂದುಸ್ಥಾನದ [illegible] ಈ [illegible] ಪದ್ಧತಿ ನಾಶವಾಗಬೇಕು ಎಂದಿನ [illegible] ಹೇಳಿದರು. [illegible] ಸಂಯುಕ್ತ ಅಮೇರಿಕವು [illegible] ಭಾರತೀಯರ [illegible] ವರ್ಣಭೇದಗಳು [illegible] ಅಗ್ಗೆ ಅವರಲ್ಲಿ [illegible] ಯೋಗ್ಯತೆಗಳು [illegible] ವಿದ್ಯಾರ್ಥಿಗಳ ಸ್ವಾತಂತ್ರ್ಯ ಚಳವಳದ ಸಮಯ ಒಂದು ಕಡೆ ಅವರಿಗೆ ಸ್ವಾತಂತ್ರ್ಯ ಕೊಡಬೇಕೆಂತಲೂ ಇನ್ನೊಂದೆಡೆ ಫಿಲಿಪಿನೋರಿಗೆ ಸ್ವಾತಂತ್ರ್ಯ ಒಪ್ಪತಕ್ಕದಲ್ಲವೆಂದು ಅಭಿಪ್ರಾಯಪಟ್ಟವರು ಇವರು. ಯಾಕೆಂದರೆ ಸಾಂಪತ್ತಿಕ ಸ್ಥಿತಿಯು ಸರಿಯಾಗಿದ್ದರೆ ಸ್ವಾತಂತ್ರ್ಯವು ರುಚಿಸುವುದು. ಫಿಲಿಪೈನ ದೀವಗಳ ಸಾಂಪತ್ತಿಕ ಸ್ಥಿತಿಯು ಸಂಪೂರ್ಣ ಅಮೇರಿಕದ ಮೇಲೆ ಹೊಂದಿಕೊಂಡಿದೆ. ಹೀಗಾಗಿ ಸ್ವಾತಂತ್ರ್ಯದಿಂದ ಅಮೇರಿಕಾದ ಬೆಂಬಲವು ತಪ್ಪಿಹೋಗುವುದು. ಆ [illegible] ಕೆಳಗೆ ಬಿದ್ದವಾಗಿದ್ದ ಫಿಲಿಪಿನೋರ [illegible] ಕೈಯಲ್ಲಿ ಬೀಳಬೇಕಾಗುವುದು ಎಂಬುದು ಅವರ ಅಭಿಪ್ರಾಯವಾಗಿತ್ತು.

ಕಲ್ಕತ್ತದಲ್ಲಿ ಸ್ತ್ರೀಯರ ಪರಿಷತ್ತು.

ಕಲ್ಕತ್ತಾದಲ್ಲಿ ಸ್ತ್ರೀಯರ [illegible] ಈಗ [illegible] ಸಿದ್ಧತೆಗಳಾಗುತ್ತಿವೆ. ಭಾರತೀಯ ರಾಷ್ಟ್ರೀಯ ಸ್ತ್ರೀ ಸಂಘದ [illegible] ಸಂಘಕ್ಕೆ ಕಲ್ಕತ್ತಾ [illegible] ಈ ಪರಿಷತ್ತು [illegible]

ಮುಂಬಾಯಿಯಲ್ಲಿ ಅನಾಥಾಲಯ

ಮುಂಬಾಯಿ [illegible]

ಶ್ರೀ ಸುಭಾಷ್ಚಂದ್ರ ಭೋಸರು

[illegible]

ದಲ್ಲಿರುವ ಇವರ [illegible] ಬಂದ ಪತ್ರದ ಪ್ರಕಾರ ಇವರು ಬೇಗನೇ (ಕಾಂ। ಅಧಿವೇಶನಕ್ಕೆ ಸರಿಯಾಗಿ) ಹಿಂದೂದೇಶಕ್ಕೆ ಬರಲಿರುತ್ತಾರೆ.

ಲಕ್ನೊ ಕಾಂಗ್ರೆಸ್ಸಿನ ಸಮಯ.

ಲಕ್ನೋ ಕಾಂಗ್ರೆಸ್ ತಾರೀಕನ್ನು ಮುಂದುವರಿಸಬಾರದು [illegible] ವರು. [illegible] ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಇದರಿಂದ ಬಹಳ [illegible] ತ್ತದೆ ಮಾತ್ರ ಅಲ್ಲದೆ ಅಧಿವೇಶನಕ್ಕೆ ಹೋಗುವ ಕಾಂಗ್ರೆಸ್ ಸದಸ್ಯರಿಗೆ ಲಕ್ನೋ ಕಾಂಗ್ರೆಸ್ಸನ್ನು ಎಪ್ರಿಲ್ ಮಧ್ಯಕ್ಕೆ [illegible] ಅನುಕೂಲವಾಗುವುದಂತೆ.

ಮದುವೆಯ ಸಂಖ್ಯೆಯು ವೃದ್ಧಿಯಾಗಿರುತ್ತದೆ. ಜನನ ಸಂಖ್ಯೆಯು ಮಾತ್ರ ಇಳಿದಿರುತ್ತದೆ

[illegible]

ಪಕ್ಕಾಯಿತರಿಗೆ ಉಪಾಹಾರಗಳನ್ನು ಒದಗಿಸುವವನು!

[illegible] ಮಾಡುವ [illegible] ಅವನ ಅಭ್ಯಾಸದಂತೆ [illegible] ಕೆಲವು ಸಮಯದ [illegible] ಒಂದು ಸಣ್ಣ [illegible]

ನಿಸ್ತೇಜಗೊಂಡ ಚರ್ಮ.

ಪ್ರಾಯವಾಗುವ ಮೊದಲೇ ಸ್ತ್ರೀಯು
ಮುದಿಕಿಯಂತೆ ತೋರುವಳು

ಇಷ್ಟು ಬೇಗನೇ ಮುಪ್ಪನ್ನು ಪಡೆಯುವುದರಿಂದ ಜೀವನ ಸೌಂದರ್ಯವನ್ನೇ ಕಳಕೊಂಡಂತಾಗುತ್ತದೆ. ಇದರಿಂದ ನಿಮ್ಮನ್ನು ರಕ್ಷಿಸಿ ನಿಮ್ಮ ಚರ್ಮವನ್ನು ನಯವಾಗಿಯೂ ಮೃದುವಾಗಿಯೂ ಮಾಡಿ, ನಿಮ್ಮ ಮುಖಕ್ಕೆ ಸೌಂದರ್ಯವನ್ನು ಕರುವ ಒಂದು ಔಷಧಿಯು ಇದೆ. ಅದು ಕಲೆಗಳನ್ನು [illegible] ಗಳನ್ನೂ ಬೊಕ್ಕೆಗಳನ್ನೂ ಮೊಡವೆಗಳನ್ನೂ [illegible] ತ್ತದೆ.

ಅಫ್ಘಾನ ಸ್ನೋ.

ನಿತ್ಯವೂ ಉಪಯೋಗಿಸಿದರೆ ಸೌಂದರ್ಯವೂ ಆರೋಗ್ಯವೂ ವೃದ್ಧಿಯಾಗುವುದು.
ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ.

ಇ. ಎಸ್. ಪಟಾನ್‌ವಾಲಾ,
132-84, ಎ. ಅಬ್ದುಲ್‌ರಹಿಮಾನ್ ಸ್ಟ್ರೀಟ್
ಬೊಂಬೇ, ೩.

[illegible] ಅಫ್ಘಾನ ಸ್ನೋ ಎಂಬ [illegible] ಯಾವುದೇ ತರದ ವಿಷಕರ ಪದಾರ್ಥವಾಗಲಿ [illegible] ಪದಾರ್ಥವಾಗಲಿ ಕಂಡುಹಿಡಿದಿಲ್ಲ. ಈ [illegible] ನಮ್ಮ ಸೌಂದರ್ಯಕ್ಕಾಗಿ ಏನೂ ಹಾನಿಯಿಲ್ಲದೆ ಚರ್ಮದ ಮೇಲೆ ಉಪಯೋಗ ಮಾಡಬಹುದು. (ಫ್ರಾನ್ಸ್)

ಮನನ್ನೋಯಿಸುವ ನೆವದಿಂದ ನಿನ್ನನ್ನು ದುಃಖಕ್ಕೀಡುಮಾಡಲಾರೆನು,' ಎಂದು ಹೇಳಿದನು.

ಆನಂದನ ಮನಸ್ಸಿನ ಉದ್ವೇಗವು ಅತಿ ತೀಕ್ಷವಾಗಲು, ಅವನು ಆ ಕೋಣೆಯಲ್ಲಿ ಇರಲಾರದೆ ಮೆಲ್ಲಮೆಲ್ಲಗೆ ಹೊರಗೆ ಉದ್ಯಾನದೆಡೆಗೆ ಹೋಗಿಬಿಟ್ಟನು.

೩

ಮೋಹಿನಿಯ ತವರೂರು ಮಂಗಳೂರು. ಅವಳು ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಸೆಕೆಗಾಲದ ರಜೆಯಲ್ಲೀ ಅವಳ ಮದುವೆಯಾದುದು. ರಜೆಯ ಸಮಯದಲ್ಲೇ ಅವಳು ಗಂಡನಲ್ಲಿ ಬಂದು ಉಳಕೊಂಡಿದ್ದಳು ಆನಂದನ ಮಾತುಗಳಿಂದ ಅವಳ ಮನಸ್ಸಿನ ಮೇಲೆ ಹೆಚ್ಚಿನದೇನೂ ಪರಿಣಾಮವಾಗಿರದಿದ್ದರೂ ತನ್ನ ವಿದ್ಯಾಭ್ಯಾಸವನ್ನು ಮುಂದೊತ್ತಬೇಕೆಂದು ಅವಳು ಅಂದೇ ನಿರ್ಧಾರಮಾಡಿದ್ದಳು

'ಆನಂದನ ತಂದೆತಾಯಿಗಳು ಇದಕ್ಕೆ ತೀರ ವಿರೋಧವಾಗಿದ್ದರೂ ಆನಂದನು ಅವಳಿಗೆ ಅನುಕೂಲನಾದನು ಪರಿಣಾಮವಾಗಿ ಮೋಹಿನಿಯು ಶಾಲೆ ಆರಂಭವಾಗುತ್ತಲೇ, ತಿರುಗಿ ಮಂಗಳೂರಿಗೆ ಹೋದಳು

ಮೋಹಿನಿಯು ತವರ್ಮನೆಗೆ ಹೋದ ಮೇಲೆ ಆನಂದನು ತನ್ನ ದಿನಚರಿಯನ್ನು ಪೂರ್ತಿಯಾಗಿ ಬದಲಾಯಿಸಿದನು ಒಬ್ಬ ಪ್ರಖ್ಯಾತ ವೀಣಾಗಾಯಕನನ್ನು ಕರೆಯಿಸಿ ಆತನ ವೀಣಾವಾದನವನ್ನು ಅಭ್ಯಾಸಮಾಡಲಾರಂಭಿಸಿದನು ತನ್ನ ಬಾಲ್ಯಮಿತ್ರನಾದ ಮನೋಹರನನ್ನು ಅವನು ತನ್ನಲ್ಲೀ ತನ್ನ ಸಂಗಾತಿಯಾಗಿ ನಿಲ್ಲಿಸಿಕೊಂಡನು. ಮನೋಹರನೂ ತಕ್ಕಮಟ್ಟಿಗೆ ಓದುಬರಹ ಬಲ್ಲವನು ಹಲವು ಭಾಷೆಗಳ ಪರಿಚಯವಿದ್ದವನು, ಗಾಯನದಲ್ಲಿಯೂ ಅಭಿರುಚಿಯುಳ್ಳವನು, ಮನೋಹರನ ಸಂಗದಿಂದಲೂ, ಗಾಯನ ವ್ಯಾಸಂಗದಿಂದಲೂ ಆನಂದನು ತನ್ನ ಮನಸ್ಸಿನ ಹಂಬಲನ್ನು ಆದಷ್ಟು ಮಟ್ಟಿಗೆ ಮರೆಯಲು ಯತ್ನಿಸಿದನು

ಆನಂದನ ಮನೆಯ ಸುತ್ತಲೂ ವಿಶಾಲವಾದ ಉದ್ಯಾನವಿತ್ತು ಉದ್ಯಾನದಲ್ಲಿ ನಡುನಡುವೆ ಲತಾಗೃಹಗಳೂ, ಆರಾಮಸದನಗಳೂ ಇದ್ದುವು ಒಂದು ಕಡೆಯಲ್ಲಿ ನೇತ್ರಾವತಿಯು ಉದ್ಯಾನದ ಗಡಿಯಾಗಿ ಮಂದಗಮನದಿಂದ ಹರಿಯುತ್ತಿದ್ದಳು ಉದ್ಯಾನದಿಂದ ನದಿಗೆ ಇಳಿಯಲು ಒಂದೆಡೆ ಸುಂದರವಾದ ಪಾವಟಿಗೆಗಳನ್ನು ಕಟ್ಟಿಸಿದ್ದರು

ಆನಂದನು ಪ್ರತಿದಿನವೂ ಹೆಚ್ಚಿನ ಸಮಯವನ್ನು ಮನೋಹರನೊಂದಿಗೆ ಉದ್ಯಾನದಲ್ಲಿಯೇ ಕಳೆಯುವನು ಉದ್ಯಾನದೊಳಗಿನ ಪ್ರತಿಯೊಂದು ಗಿಡವನ್ನೂ, ಪ್ರತಿಯೊಂದು ಬಳ್ಳಿಯನ್ನೂ ಅವನು ಬಲ್ಲವನಾಗಿದ್ದನು ತನ್ನ ಗ್ರಹಣಶಕ್ತಿಯ ಬಲದಿಂದ ಅವನು ಪ್ರತಿಯೊಂದು ಪಾತಿ, ಕಟ್ಟೆ, ಲತಾಮಂಟಪ ಮುಂತಾದುದರ ಸರಿಯಾದ ಸ್ಥಾನವನ್ನು ತಿಳಿದುಕೊಂಡು ಯಾರ ಸಹಾಯವೂ ಇಲ್ಲದಾಗಲೂ ಸಹ ಉದ್ಯಾನವನ್ನು ನಿರಾತಂಕವಾಗಿ ಸುತ್ತಬಲ್ಲವನಾಗಿದ್ದನು.

ಆನಂದನು ತನ್ನ ಅತುಲಪ್ರೇಮವನ್ನು ತನ್ನ ಉದ್ಯಾನದ ಗಿಡಬಳ್ಳಿಗಳಿಗೆ ಹಂಚಿಕೊಟ್ಟಿದ್ದನು ಅವುಗಳು ಕಾಲಕಾಲಕ್ಕೆ ಬಿಡುತ್ತಿದ್ದ ಹೂಗಳ ಮೇಲಂತೂ ಆನಂದನ ಪ್ರೇಮವು ಅವರ್ಣನೀಯ ಅವನು ತನ್ನ ಉದ್ಯಾನದೊಳಗಿನ ಪ್ರತಿಯೊಂದು ಗಿಡವನ್ನೂ, ಬಳ್ಳಿಯನ್ನೂ ಒಂದೊಂದು ಹೆಸರಿನಿಂದ ಕರೆಯುತ್ತಿದ್ದನು ಅವೆಲ್ಲವೂ ತನ್ನ ಮಕ್ಕಳೆಂದೂ, ಇಡೀ ಉದ್ಯಾನವೇ ತನ್ನ ಸಂಸಾರವೆಂದೂ ಆನಂದನ ಊಹನೆಯಾಗಿತ್ತು ತನ್ನ ಉದ್ಯಾನದಲ್ಲಿ ಅರಳುವ ಹೂಗಳನ್ನೆಲ್ಲಾ ಅವನು ಆಯಾ ಗಿಡಬಳ್ಳಿಗಳ ಮೇಲೆಯೇ ಇರಗೊಡಿಸಿ 'ಅವುಗಳನ್ನು ಬಲುವಾಗಿ ಮುದ್ದಿಸುತ್ತಿದ್ದನು ಪ್ರತಿದಿನ ಮುಂಜಾನೆ ಅರಳಿದ ಹೂಗಳ ಪರಿಮಳವನ್ನು ಮೂಸಿ ಅವುಗಳ ಮೇಲೆ ಬೆರಳಾಡಿಸಿ ಆನಂದನು ಅವುಗಳ ಸೌಂದರ್ಯವನ್ನು ಕಲ್ಪಿಸಿಕೊಳ್ಳುವನು, ಮತ್ತು ಅತ್ಯಂತ ಸಂತೋಷವನ್ನು ಅನುಭವಿಸುವನು; ಸಾಯಂಕಾಲದಲ್ಲಿ ಅವು ಬಾಡಿ, ಮುದುಡಿ ಬಿದ್ದುಹೋಗಲು ಆನಂದನ ಹೃದಯವೂ ಅವುಗಳಂತೆಯೇ ಬಾಡಿ ದುಃಖಪೂರ್ಣವಾಗುವುದು. ಅವನ ಮನಸ್ಸು ವೈರಾಗ್ಯವನ್ನು ಹೊಂದುವುದು.

ಅಂತಹ ಸಮಯದಲ್ಲಿ ಆನಂದನು ತನ್ನ ವೀಣೆಯನ್ನು ಕೈಯಲ್ಲಿ ತೆಗೆದುಕೊಂಡು, ಯಾವುದಾದರೊಂದು ಗಿಡದ ಕಟ್ಟೆಯ ಮೇಲಾಗಲಿ, ಲತಾಗೃಹದಲ್ಲಾಗಲಿ, ನದಿಗೆ ಇಳಿಯುವ ಸೋಪಾನಗಳ ಮೇಲಾಗಲಿ ಕುಳಿತು, ಸುಮಧುರವಾದ ಕಂಠದೊಡನೆ ವೀಣೆಯ ನಾದವನ್ನು ಸೇರಿಸುತ್ತಾ ಹಾಡುವನು.–

"ಅಮಿತದಯಮ್–
ತವ ಹೃದಯಮ್–
ಮಸೃಣ ಸುಧಾ
ರಸ ಸರಣಮ್?
ಪುರುಷೇರಂ
ಮದ ಸರಣಮ್?
ತೃಷಿತಾನಾಮ್
ತನಯಾನಾಮ್
ಪುರುಷೇರಂ
ಮದ ಸರಣಮ್?–
ತವಹಿತರೋ–
ಮೃದುಲತರೋ–
ನವ ನವ ಮಧು
ಕಣ ದಾಯೊ?
ಭೀಕರ ವಿಷ
ಲವ ದಾಯೊ?
ತ್ಸ್ಮಧಿತಾನಾಮ್
ತನಯಾನಾಮ್
ಭೀಕರ ವಿಷ
ಲವ ದಾಯೊ?– '

ವೀಣೆಯ ಆನಂದನ ರಾಗಾಲಾಪನೆಯನ್ನು ಲಹರಿಲಹರಿಯಾಗಿ ಪ್ರತಿಧ್ವನಿಸುವುದು ಒಂದೆರಡು ಘಂಟೆಗಳ ವರೆಗೆ ಆನಂದನು ಗಾನದಲ್ಲೀ ತನ್ಮಯನಾಗಿ ಕುಳಿತುಬಿಡುವನು

ಆನಂದನು ಉದ್ಯಾನಸಂಚಾರದಲ್ಲಿಯೂ ಗಾಯನದಲ್ಲಿಯೂ ಉದ್ಯುಕ್ತನಾಗಿರದ ಸಮಯದಲ್ಲಿ ಮನೋಹರನು ಅವನಿಗೆ ನಾನಾ ಪುಸ್ತಕಗಳನ್ನು ಓದಿ ಹೇಳುವನು ನಾನಾ ತರದ ಒಗಟು ಮುಂತಾದ ಮೆದುಳಿನ ಆಟಗಳಿಂದ ಆನಂದನ ಮನಸ್ಸನ್ನು ಉಲ್ಲಾಸಗೊಳಿಸುವನು ಆತ್ಮೀಯವಾದ ಮಾತುಕತೆಗಳಿಂದ ಅವನ ಮನಸ್ಸನ್ನು ಯಾವಾಗಲೂ ಹಗುರವಾಗಿರಿಸಲು ಕೈಲಾದಷ್ಟು ಯತ್ನಿಸುವನು ಹೆಚ್ಚೇಕೆ, ಆನಂದನು ತನ್ನ ಜೀವನದಲ್ಲಿ ಮೋಹಿನಿಯು ಯಾವ ಸ್ಥಾನವನ್ನು ಆಕ್ರಮಿಸಬೇಕೆಂದು ಬಯಸಿದ್ದನೋ ಆ ಸ್ಥಾನವನ್ನು ಮನೋಹರನು ಆಕ್ರಮಿಸಿದ್ದನು ಮನೋಹರನ ಬದಲಿಗೆ ಮೋಹಿನಿಯೇ ಇರುತ್ತಿದ್ದರೆ! ಹಾ! ಆನಂದನ ಮನಸ್ಸು ಈ ಯೋಚನೆಯಿಂದ ಶಾಂತಿಯೆಂದರೇನೆಂಬುದನ್ನು ಕಾಣಲಾರದೇ ಹೋಯಿತು

೪

ಮೋಹಿನಿಯು ಒಂದೇ ಪ್ರಕಾರ ವಿದ್ಯಾಭ್ಯಾಸಮಾಡುತ್ತಾ ಹೋದಳು ಎಂದು ಅವಳು ಎಮ್ ಎ ಉತ್ತೀರ್ಣಳಾದಳೋ ಅಂದು ಅವಳಿಗೆ ಇನ್ನುಮುಂದೆ ಏನು ಮಾಡುವುದೆಂದು ತೋಚದೇ ಹೋಯಿತು ವಿದ್ಯಾರ್ಜನೆಯ ಮುಂದೆ ಅವಳಿಗೆ ಮತ್ತೆ ಏತರ ಯೋಚನೆಯೂ ಉಂಟಾಗಿರಲಿಲ್ಲ ಅವಳ ಖರ್ಚಿಗೆ ಬೇಕಾದಷ್ಟು ಹಣವನ್ನು ಆನಂದನು ಆಗಿಂದಾಗ ಕಳುಹಿಸುತ್ತಿದ್ದನು ಅವನು ತನ್ನ ಜೀವನವನ್ನು ಹಾಳುಮಾಡಿದವನೆಂಬ ಭಾವನೆಯು ಅವಳಲ್ಲಿ ಬಲು ಚೆನ್ನಾಗಿ ಬೇರೂರಿಕೊಂಡಿದ್ದು ಅದನ್ನು ಕಿತ್ತೆಸೆಯಲು ಅವಳಿಂದ ಕೈಗೂಡದೇ ಹೋಯಿತು ಆದುದರಿಂದ ಆನಂದನ ಮೇಲಿನ ಸೇಡು ತೀರಿಸಲು ಎಂಬಂತೆ ಅವಳು ಈ ವರೆಗೆ ಆತನಿದ್ದಲ್ಲಿಗೆ ಹೋಗಿರಲೇ ಇಲ್ಲ

ಇಷ್ಟರಲ್ಲೇ ಅವಳ ಅತ್ತೆಯೂ, ಮಾವನೂ ನಿರಾಶೆಯಿಂದ ಬೆಂದುಬೆಂಡಾಗಿ, ಒಬ್ಬರ ಹಿಂದೆ ಒಬ್ಬರು, ಈ ಲೋಕದಿಂದ ಪಾರಾಗಿದ್ದರೆಂಬುದೂ ಅವಳ ಕಿವಿಯ ಮೇಲಿಂದ ಹೋಗಿತ್ತು ಅದನ್ನೂ ಅವಳು ಒಂದು ಕಿವಿಯಿಂದ ಕೇಳಿ, ಇನ್ನೊಂದು ಕಿವಿಯಿಂದ ಬಿಟ್ಟಿದ್ದಳು ಅವರು ತನ್ನನ್ನು ತಿಳಿದೂ ತಿಳಿದೂ ಮೋಸಮಾಡಿರಲಿಲ್ಲವೇ? ತನ್ನ ಇಡೀ ಭವಿಷ್ಯವನ್ನೇ ನಾಶಮಾಡಿರಲಿಲ್ಲವೇ? ಅಂತಹವರಿಗಾಗಿ ಅವಳ ಮನಸ್ಸು ಒಂದು ಕಂಬನಿಯನ್ನಾದರೂ ಸುರಿಸಲು ಒಡಂಬಡಲಿಲ್ಲ.

ಈಗ ಇನ್ನು ತನ್ನ ಜೀವನಧ್ಯೇಯವು ಯಾವುದೆಂಬುದನ್ನು ಊಹಿಸಲಾರದೆ ಇದ್ದಾಗ ಮೋಹಿನಿಗೆ ಮೆಲ್ಲಮೆಲ್ಲನೆ ಭಾವೋದಯವಾಗತೊಡಗಿತು. ಅವಳು ಒಂದು ದಿನ ಸುಖವಾಗಿ ಕುಳಿತಿದ್ದಾಗ, ತಾನು ಈ ವರೆಗೆ ಮಾಡಿದುದು ಸರಿಯೋ ಎಂದು ಎನಿಸಿತು

ಎಷ್ಟೆಂದರೂ ತಪ್ಪು ಆನಂದನದಾಗಿರಲು ಕಾರಣವಿಲ್ಲ. ಯಾಕೆಂದರೆ, ನಿಜವಾಗಿಯೂ ಈ ಸಂಬಂಧದಲ್ಲಿ ಅವನು ಮಾಡಿದುದೇನು? ಬರೇ ತನ್ನ ಕುತ್ತಿಗೆಗೆ ಮಾಲೆ ಹಾಕಿದುದು ಇದಕ್ಕೆ ಕಾರಣರು ಯಾರು? ಅವನ ತಂದೆತಾಯಿಗಳೇ ಅಲ್ಲವೇ? ಅವರು ತಮ್ಮ ಮಗನು ಕುರುಡನೆಂಬುದನ್ನು ಮರೆಯಿಸಿದುದರಿಂದಲೇ ಅಲ್ಲವೇ ಇಷ್ಟೆಲ್ಲಾ ಅನಾಹುತವಾಯಿತು? ಇದ್ದುದನ್ನು ಹೇಳದೆ ಹೆಣ್ಣನ್ನು ಸಿಕ್ಕಿಸಿರುವರೆಂಬುದು ಆನಂದನಿಗೆ ತಿಳಿಯದಿದ್ದು, ಎಲ್ಲವೂ ಎಲ್ಲರ ಸಮ್ಮತಿಯಿಂದಲೇ ನಡೆದಿರುವುದೆಂಬ ಭಾವನೆಯಿಂದಲೇ ಆತನು ತನಗೆ ಮಾಲೆಹಾಕಿದ್ದಿರಬಹುದು ಇದಕ್ಕಾಗಿ ತಾನು ಆತನನ್ನು ದೂರಲಾಗದು ದೂರತಕ್ಕವರಂತೂ ತಕ್ಕ ಪ್ರಾಯಶ್ಚಿತ್ತ ಹೊಂದಿ ಇಹದಿಂದ ಮುಕ್ತರಾಗಿರುವರು ಇನ್ನು ತಾನು ಎಲ್ಲೆಲ್ಲಿ ಇರುವುದರ ಬದಲಿಗೆ ಆನಂದನಲ್ಲಿಯೇ ಏಕೆ ಇದ್ದುಬಿಡಬಾರದು? ತನಗಂತೂ ಅವನು ಪೂರಾ ಸ್ವಾತಂತ್ರ್ಯವನ್ನು ಕೊಟ್ಟಿರುವುದರಿಂದ ತಾನು ಯಾವ ವಿಷಯದಲ್ಲಿಯೂ ಅಂಜಬೇಕಾಗಿಲ್ಲ

ಎಂದು ಮುಂತಾಗಿ ಮೋಹಿನಿಯ ಯೋಚಿಸಿದಳು 'ಯೋಚನೆಯು ಕೃತಿಯ ಜನ್ಮದಾಯಕ' ಎಂಬಂತೆ ಯೋಚನೆಯು ಒಡನೆಯೇ ಕಾರ್ಯರೂಪದಲ್ಲಿ ಫಲವನ್ನೂ ಹೊಂದಿತ

ಆನಂದನು ಮೋಹಿನಿಯನ್ನು ಬಹಳ ಗೌರವದಿಂದ ಸ್ವಾಗತವಮಾಡಿದನು. ವೈರಾಗ್ಯದಿಂದ ಕಲ್ಲಾದ ಅವನ ಹೃದಯವು ಅವಳನ್ನು ತಣ್ಣಗಾಗಿಯೇ ಬರಮಾಡಿಕೊಂಡಿತು ಮೋಹಿನಿಗೆ ಯಾವುದರಲ್ಲಿಯೂ ಎಂತಹ ಕೊರತೆಯೂ ಬರದಂತೆ ನೋಡಬೇಕೆಂದ ಆಳುಗಳಿಗೆಲ್ಲಾ ಕಟ್ಟಪ್ಪಣೆಯಾಯಿತು.

ಮೋಹಿನಿಯು ಬಂದ ಮೇಲಂತೂ ಆನಂದನ ತನ್ನ ಉದ್ಯಾನಸಂಚಾರವನ್ನೂ ವೀಣೆಯ ಗಾಯನವನ್ನೂ ಮತ್ತಷ್ಟು ಏಕಾಗ್ರತೆಯಿಂದಲೂ, ಸ್ಥಿರ ಮನಸ್ಸಿನಿಂದಲೂ ಮಾಡತೊಡಗಿದನು ಯಾವಾಗ ನೋಡಿದರೂ ಅವನ ವೈರಾಗ್ಯಭಾವದಿಂದ ವೀಣೆಯ ಸ್ವರದೊಂದಿಗೆ ಸ್ವರಕೂಡಿಸಿ ಹಾಡುವನು.

"ನನು ಬಹುಶೋ
ಗತ್ವಮುದಯಮ್
ನನು ಬಹುಶೋ
ಪ್ಯಸ್ತಮಯಮ್
ಸ್ಫುಟದಮಲತರ ಸುಮನಸೇ
ಪತದಮಲತರ ಸುಮನಸೇ
ಹೃದಯಮಿದಂ
ಬಹು ವಿಕಸತಿ
ಹೃದಯಮಿದಂ
ಬಹು ಮುಕುಲತಿ
ಪತದಮಲತರ ಸುಮನಸೇ"

ಗಾಳಿಯು ಹಾಡಿನ ಲಹರಿ ಲಹರಿಗಳನ್ನು ತೇಲಿಸಿಕೊಂಡು ಹೋಗಿ, ಪ್ರತಿಯೊಂದು ಹೂವಿನ ಮೇಲೆ ಬಡಿದು ಅವುಗಳ ಪರಿಮಳವನ್ನು ಅಪಹರಿಸಿಕೊಂಡು ಮೋಹಿನಿಯ ಕಿವಿಯನ್ನೂ, ಮೂಗನ್ನೂ ತುಂಬುವುದು ಮೋಹಿನಿಯು ಮಾಯಾಬದ್ಧಳಾದಂತೆ ಆನಂದನ ಹಾಡನ್ನು ತನ್ನ ಕೋಣೆಯಿಂದ ಆಲಿಸಿ ಮುಗ್ಧಳಾಗುವಳು ಅದು ನಿಂತೊಡನೆ ತಿರುಗಿ ಯಾವಾಗ ಕೇಳಿಬಂದೀತೆಂದು ಹಾರೈಸಿ ಕುಳಿತುಕೊಳ್ಳುವಳು ಹಾಡಿನೊಳಗಿನ ಭಾವವು ಅವಳ ಹೃದಯವನ್ನು ಯಾಕೋ ನಡುಗುವಂತೆ ಮಾಡುತ್ತಿತ್ತು, ಅವಳ ಮನಸ್ಸು ಯಾವುದನ್ನೋ ಕೋರಿ, ಬಲೆಯೊಳಗೆ ಸಿಕ್ಕಿಬಿದ್ದ ಹಕ್ಕಿಯಂತೆ, ಚಡಪಡಿಸುತ್ತಲಿತ್ತು ಅದನ್ನು ವರ್ಣಿಸಲಿಕ್ಕಾಗಲಿ, ಅದನ್ನು ಹುಡುಕಿಕೊಂಡು ಹೋಗಲಿಕ್ಕಾಗಲಿ ಅವಳಿಗೆ ಬಾರದಾಯಿತು. ಯಾವುದೋ ಒಂದು ನಿದ್ದೆಯ ಮುಸುಕು ಅವಳ ಮೇಲಿಂದ ಕೆಳಕ್ಕೆ ಜಾರಿ ಬಿದ್ದಿರುವಂತೆ ಅವಳಿಗೆ ಭಾಸವಾಯಿತು.

೫

ಆನಂದನ ಗಾಯನವನ್ನು ಮೋಹಿನಿಯು ದಿನ ಹೋದಂತೆ ಹೆಚ್ಚುಹೆಚ್ಚಾಗಿ ಪ್ರೀತಿಸತೊಡಗಿದಳು. ಯಾಕೆ, ಆನಂದನಲ್ಲಿಯೂ ಸಹ ಅವಳಿಗೆ ಕ್ರಮಕ್ರಮವಾಗಿ ಭಕ್ತಿಭಾವವು ಉದಯಿಸಲಾರಂಭಿಸಿತು. ಅವನನ್ನು ಮೊದಲು ದೂರದಿಂದಲೇ ನೋಡುತ್ತಿದ್ದವಳು ಈಗ ಅವನ ಹತ್ತಿರ ಹತ್ತಿರ ಸರಿಯ ಹತ್ತಿದಳು

ಕ್ರಮೇಣ ತಾನು ಆನಂದನನ್ನು ಅಂದು, ಮದುವೆಯಾಗಿ ಬಂದ ಮೊದಲನೆಯ ಸಾರಿ, ಅಷ್ಟೇಕೆ ಜಿಗುಪ್ಸೆಯಿಂದ ಕಂಡಿದ್ದೆನೆಂದು ಎನಿಸತೊಡಗಿತು ಅವನು ಕುರುಡನಾಗಿದ್ದುದು ಅವನ ತಪ್ಪೇ? ಅವನನ್ನಲ್ಲದಿದ್ದರೆ ತಾನು ಬೇರೆ ಎಂತಹ ನಿಕೃಷ್ಟ ತರಗತಿಯವನನ್ನು ವರಿಸುತ್ತಿದ್ದೆನೋ! ಹಾ ತಾನು ಎಂತಹ ಪ್ರಮಾದವನ್ನು ಮಾಡಿದೆನು! ಆನಂದನ ಜೀವನದೊಳಗಿನ, ತಾನು ಸುಖಮಯವಾಗಿ ಮಾಡಬಹುದಾಗಿದ್ದ, ಹತ್ತು ವರ್ಷಗಳನ್ನು ತಾನು ಅಂಧಕಾರಮಯವಾಗಿ ಮಾಡಿದೆನಲ್ಲ! ತನ್ನಿಂದ ಎಂತಹ ಅಪರಾಧವಾಯಿತು! ಇನ್ನಾದರೂ ಇದಕ್ಕೆ ಪ್ರಾಯಶ್ಚಿತ್ತ ಮಾಡಲಾರೆನೇ?–ಎಂದು ಮುಂತಾಗಿ ಮೋಹಿನಿಯು ಹಲುಬುತ್ತಾ ಹಂಬಲಿಸ ತೊಡಗಿದಳು

ಅಂದು ಮುಸ್ಸಂಜೆಯ ಹೊತ್ತಾಗಿತ್ತು. ಆನಂದನು ಹೊಳೆಯ ಪಾವಟಿಗೆಗಳ ಮೇಲೆ ಕುಳಿತು ವೀಣೆಯನ್ನು ನುಡಿಸುತ್ತಾ ಹಾಡಿನಲ್ಲಿ ಮಗ್ನನಾಗಿದ್ದನ ಮೋಹಿನಿಯು ಮೆಲ್ಲಮೆಲ್ಲನೆ ಅವನಿದ್ದಲ್ಲಿಗೆ ಹೋದಳು ಅವನ ಬಳಿಯಲ್ಲೀ ಪಾವಟಿಗೆಗಳ ಬದಿಯ ಪಾಳಿಯನ್ನು ಆನಿಸಿಕೊಂಡು ನಿಂತು, ಆನಂದನ ಸಂಗೀತದಲ್ಲಿ ತಲ್ಲೀನಳಾಗಿ ಹೋದಳು

'ಯೌವನಮಪಿ
ಮಮ ದಲೀಷು
ಅವ್ಯಕ್ತಮ ೦ ಚ
ದೇವ ಸುಮೋಷು
ಸುಷಿಂಚಿತಮ್
ಸುಷಿ ಚಿತನ್
ಕುಸುಮ ರಮೇ
ಮಧುರ ತವೇ
ಮಂಗಳತರ ಬಹು ಸುಷಮೇ!
ಎಲ ಪ್ಲ
ಮೃದು ದಲಾನಿ
ವಿಶಿಥಿಲಾನಿ
ನವ ಸುಮಾನಿ
ಹೇ!–
ಮಂಗಳತರ ಬಹು ಸುಷಮೇ!''

ಮೋಹಿನಿಯು ಪಶ್ಚಾತ್ತಾಪದಿಂದ ಬೆಂದು ಬೇಗುದಿಗೊಂಡಳು ಬಹು ಸಮಯದ ವರೆಗೆ ಆಲಾಪಿಸಿ ಆನಂದನು ಮೌನನಾಗುತ್ತಲೇ ಅವಳು, "ನಾಥ! ನನ್ನನ್ನು ಕ್ಷಮಿಸಲಾರೆಯಾ?" ಎಂದು ಅವನ ಕಾಲಿನ ಮೇಲೆ ಬಿದ್ದಳು ಆದರೆ 'ನಾಥ'ನು ಕ್ಷಮಿಸಿದೆನೆಂದಾಗಲಿ, ಕ್ಷಮಿಸಲಿಲ್ಲವೆಂದಾಗಲಿ ತಿಳಿಸಲು ಯಾವ ರೀತಿಯಿಂದಲೂ ಮುಂಬರಿಯದಿರಲು ಮೋಹಿನಿಯು ಗಾಬರಿಯಿಂದ ಎದ್ದು, ನೋಡಿದಳು ಆನಂದನು ವೀಣೆಯನ್ನು ಬಾರಿಸುವ ಸ್ಥಿತಿಯಲ್ಲೇ ಗಾಯನದಲ್ಲಿ ತನ್ಮಯನಾದವನಂತೆ ಇದ್ದನು ಆದರೆ ಜೋಲು ಬಿದ್ದ ಅವನ ಮುಖದಲ್ಲಿ ಪ್ರಾಣದ ಚಿಹ್ನೆಯೇ ಇರಲಿಲ್ಲ

"ಹಾ! ನಿಜವಾಗಿಯೂ ನನ್ನ ಕೈಬಿಟ್ಟೆಯಾ" ಎಂದ ಮೋಹಿನಿಯು ಮೂರ್ಛೆಗರಿಸಿ ಹಿಂದೆ ಬಿದ್ದಳು ಹ್ಲಾದಿನಿಂದ, ತುಂಬಿದ ನೀರಿನಿಂದ ನೊರೆಯುತ್ತಾ ಹರಿಯುತ್ತಿದ್ದ ನೇತ್ರಾವತಿಯು, "ಯಾರು ಕೈಬಿಟ್ಟರೂ ನಾನು ನಿನ್ನ ಕೈಬಿಡೆನು, ಬಾ, ಮಗೂ!" ಎಂದು ಮೋಹಿನಿಯನ್ನು ತಬ್ಬಿಕೊಂಡು ಮುಂದಕ್ಕೆ ಹರಿದಳು

ಪರೀಕ್ಷೆಯಿಂದ ವಿದ್ಯಾರ್ಥಿಗಳ ಯೋಗ್ಯತೆಯನ್ನು ತಿಳಿಯಬಹುದೆ?

ಮುಂಬಾಯಿ ಸ್ತ್ರೀಯರಿಂದ ಅನಾಥಾಲಯವು ಸ್ಥಾಪನೆಯಾಯಿತು.

ಪುರಂದರದಾಸರ ಕೀರ್ತನೆ.— ಮನುಷ್ಯರ ವಕ್ರತೆ.

ವಿದ್ಯಾರ್ಥಿಗಳು ಸಿನೇಮಗಳನ್ನು ನೋಡಬಾರದು?

ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಸುದೈವವೇ?

"ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ಅದೃಷ್ಟವಿರಬೇಕು. ಅವನ ಅದೃಷ್ಟ ಚೆನ್ನಾಗಿತ್ತು, ಅವನು ಪಾಸು ಮಾಡಿದ; ನನ್ನ ದುರ್ದೈವ, ತೇರ್ಗಡೆಯಾಗಲಿಲ್ಲ" ಎಂದು ಶಾಲಾ ವಿದ್ಯಾರ್ಥಿಗಳು ನೋಲಿ ಮೇಲೆ ಹೇಳಿಕೊಳ್ಳುತ್ತಿರುವುದನ್ನು ಅನೇಕರು ಕೇಳಿರಬಹುದು. ಇದು ನಮ್ಮಲ್ಲಿ ಮಾತ್ರವಲ್ಲ—ಇಂಗ್ಲೆಂಡು ದೇಶದಲ್ಲಿ ಸಹ ವಿದ್ಯಾರ್ಥಿಗಳು 'Passing examinations is most often a question of luck" ಎಂದು ಹೇಳುತ್ತಾರಂತೆ. ಇದರ ವಿಚಾರವೇನೆಂದು ಕಂಡುಹಿಡಿಯಲು ಕೆಲಮಂದಿ ಪ್ರಬುದ್ಧ ಬ್ರಿಟಿಷ ವಿದ್ಯಾಧಿಕಾರಿಗಳು (Expert Educationists) ಒಂದು ಕಮಿಟಿಯನ್ನೇರ್ಪಡಿಸಿ, ಈ ಸಂಗತಿಯನ್ನು ಕುರಿತು ದೀರ್ಘವಾಗಿ ವಿಚಾರ ನಡಸಿ ಅದರ ಫಲಿತಾಂಶವನ್ನು ಪ್ರಕಟಿಸಿದ್ದಾರೆ. ಆ ಕಮಿಟಿಯವರು ೪೫ ಮಂದಿ ವಿದ್ಯಾರ್ಥಿಗಳನ್ನು ಬೇರೆ ಬೇರೆ ವಿಷಯಗಳಲ್ಲಿ ಪರೀಕ್ಷೆನಡಸಿ ಅವರ ಉತ್ತರ ಪತ್ರಿಕೆಗಳನ್ನು ೬ ಮಂದಿ ವಿಶೇಷ ಅನುಭವಸ್ಥರೆನಿಸಿಕೊಂಡ ಪರೀಕ್ಷಕರಿಗೆ ವಹಿಸಿದ್ದರಂತೆ. ಆ ಆರು ಮಂದಿಯಲ್ಲಿ ಒಬ್ಬರು ಯಾವ ವಿದ್ಯಾರ್ಥಿಯನ್ನೂ 'ಫೈಲ್' ಮಾಡಿಸದೆ, ೧೩ ಮಂದಿಯನ್ನು ವಿಶೇಷ ತರಗತಿಯಲ್ಲಿ ತೇರ್ಗಡೆ ಮಾಡಿಸಿದರು. ಮತ್ತೊಬ್ಬ ಪರೀಕ್ಷಕರು ೧೯ ಮಂದಿ ವಿದ್ಯಾರ್ಥಿಗಳನ್ನು ಫೈಲ್ ಮಾಡಿಸಿ ಒಬ್ಬನನ್ನೂ ವಿಶೇಷ ತರಗತಿಯಲ್ಲಿ ತೇರ್ಗಡೆಮಾಡಿಸಲಿಲ್ಲ. ಒಬ್ಬ—ವಿದ್ಯಾರ್ಥಿಗೆ ನಿಬಂಧ ಲೇಖನಕ್ಕಾಗಿ ೬ ಮಂದಿ ಪರೀಕ್ಷಕರೂ ಕೊಟ್ಟ ನಂಬರು ಕ್ರಮವಾಗಿ ನೂರಕ್ಕೆ ೨೮, ೩೩, ೪೩, ೫೩, ೫೮, ೬೦ ಹೀಗಿದ್ದುವು. ಮತ್ತೊಬ್ಬ ವಿದ್ಯಾರ್ಥಿಗೆ ಆರು ಮಂದಿಯೂ ನೂರಕ್ಕೆ ೧೯, ೪೧, ೪೫, ೪೮, ೪೯, ೫೮ ಹೀಗೆ ನಂಬರು ಕೊಟ್ಟರು.

ಹೀಗಿದ್ದಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾಗುವುದು ಪರೀಕ್ಷಕರ ಅಭಿಪ್ರಾಯ ಅಥವಾ ಅವರ ಪ್ರತ್ಯೇಕ ಮನೋಭಾವ, ಅವರ ಅಪೇಕ್ಷೆ—ಅನಪೇಕ್ಷೆಗಳು ಇವುಗಳನ್ನು ಅನುಸರಿಸಿಯೇ ಹೊರತು ತಾವು ಓದಿದುದರ ಮಹತ್ವದಿಂದಲ್ಲವೆಂದು ಹೇಳಬೇಕಾಗುತ್ತದಲ್ಲವೇ? ಈ ವಿಚಾರವನ್ನು ದೀರ್ಘವಾಗಿ ಪರಿಶೀಲಿಸಿದ ಮೇಲ್ಕಂಡ ಕಮಿಟಿಯ ಪ್ರಮುಖರಾದ ಸರ್ ಫಿಲಿಪ್ ಹಾರ್‍ಟಾಗ್ ಮತ್ತು ಡಾ| ಇ. ಸಿ. ರ್‍ಹೋಡ್ಸ್ ಎಂಬೀ ಅಧಿಕಾರಿಗಳು Examinations are quite worth less ಎಂಬ ನಿರ್ಧಾರಕ್ಕೆ ಬಂದಿದ್ದಾರೆಂದು ಪ್ರಕಟವಾಗಿದೆ. — ಸಂಡೇ ಟೈಮ್ಸ್

ನಮ್ಮ ದೇಶದಲ್ಲಿ ನಡೆವ ಪರೀಕ್ಷಾ ಪದ್ಧತಿಯು ವಿದ್ಯಾರ್ಥಿಗಳ ನಿಜವಾದ ಅಭಿವೃದ್ಧಿಯನ್ನು ತಿಳಿಸುವ ಸಾಧನವಾಗಿದೆಯೇ ಎಂಬುದನ್ನು ವಿದ್ಯಾಧಿಕಾರಿಗಳು ಗಮನಿಸಲು ಅರ್ಹವಾಗಿದೆ. — ಸದ್ಬೋಧ ಪತ್ರಿಕೆ

ಪುರಂದರ ದಾಸರ ಸ್ಮಾರಕ ದಿನ

ಗಾನ ಶ್ರೇಷ್ಠರಾದ ಕವಿ ಪುರಂದರ ದಾಸರ ಮೃತತಿಥಿ ಪೂನಾದಲ್ಲಿ ತಾ. ೨೫ರಲ್ಲಿ ನಡೆಯಿತು. ಈ ಸಮಾರಂಭದ ಸಮಯ ಪ್ರಸಿದ್ಧ ಡಾ| ನಾಗರಾಜ ಶರ್ಮಾರವರು ಅವರ ಪದ್ಯದ ಕುರಿತು ಹಿಂದೂ ಪತ್ರಿಕೆಯಲ್ಲಿ ಒಂದು ವಿಚಾರಪರ ಲೇಖವನ್ನು ಬರೆದಿರುತ್ತಾರೆ. ಅದರ ಅಭಿಪ್ರಾಯವು ಹೀಗಿರುತ್ತದೆ. "ಗಾನವು ಮನುಷ್ಯನ ಬುದ್ಧಿ ವಿಕಾಸ ಮಾಡುವುದೆ? ಅವನಲ್ಲಿಯ ರಾಜಕೀಯ ವಕ್ರತೆ ಸಾಮಾಜಿಕ ವಕ್ರತೆ, ಇತ್ಯಾದಿ ವಕ್ರತೆಗಳನ್ನು ಗಾನದಿಂದ ಸಂಪಾದಿಸಬಹುದೊ? ಗಾಯನಕ್ಕೆ ಮನುಷ್ಯರನ್ನು ಶುದ್ಧಗೊಳಿಸುವ ಪ್ರತಿಭೆಯು ಇದೆ. ಅತೀ ಹಿಂದಿನ ಕಾಲದಿಂದ ಪ್ರತಿಯೊಂದು ಶತಮಾನದಲ್ಲಿ ಪ್ರಸಿದ್ಧ ಕವಿ ಜನಿಸಿದ್ದಾರೆ. ಪದ್ಯಗಳನ್ನು ರಚಿಸಿರುತ್ತಾರೆ. ಗಾಯನವು ನಡೆದಿರುತ್ತದೆ. ಜನರು ಇವುಗಳಿಂದ ಅನೇಕ ರೀತಿಗಳಲ್ಲಿ ಸುಧಾರಣೆ ಹೊಂದುತ್ತಾ ಬಂದಿರುತ್ತಾರೆ. ಪುರಂದರ ದಾಸರ ಗಾಯನವು ಈ ಬಗೆಯದು. ಅನೇಕ ರೀತಿ ವಿಚಾರಗಳು ಇವುಗಳಲ್ಲಿ ಕೂಡಿವೆ. ಗಾಯನವು ರಸವತ್ತಾಗಿದೆ, ಬುದ್ಧಿ ಮಂತರನ್ನು ಕಳೆಕೂಗಿಸುತ್ತದೆ, ನಮ್ಮಲ್ಲಿ ವಿಚಾರತರಂಗಗಳನ್ನೂ ಉತ್ಪಾದಿಸಿ, ನಮ್ಮಲ್ಲಿ ಒಂದು ಬಗೆಯ ಸ್ಫೂರ್ತಿಯನ್ನು ಉಂಟುಮಾಡುತ್ತದೆ. ರಾಜಕೀಯ, ಸಾಮಾಜಿಕ, ಸುಧಾರಣೆಗಳು ಪುರಂದರದಾಸರ ಗಾನದಲ್ಲಿ ತುಂಬಾ ತ್ವೊಂದಿಕೊಂಡಿದ್ದೇವೆ" .

ಶಾಹಿದ್‌ಗಂಜ ಗಲಭೆ. ಲಾಹೋರು.

ಮುಸ್ಲಿಮರು ಸತ್ಯಾಗ್ರಹ ಚಳವಳವನ್ನು ಆರಂಭ ಮಾಡಿರುವರು. ಲಾಹೋರಿನ ಬಾದಶಾಹಿ ಮಸೀದಿನಲ್ಲಿ ಮುಸ್ಲಿಮರ ಸಭೆಯೊಂದು ಜರಗಿತು. ಸತ್ಯಾಗ್ರಹ ಚಳವಳವನ್ನು ಪ್ರಾರಂಭ ಮಾಡಲು ಠರಾವುಗಳಾದವು. ಸಿಖ್ಖರು ಕೆಡವಿದ ಶಾಹಿದ್‌ಗಂಜ ಮಸೀದಿಗೆ ಪಂಗಡವಾರು ಹೋಗಿ ಪ್ರಾರ್ಥನೆ ಮಾಡುವುದಾಗಿ ಕಾರ್ಯಕ್ರಮ ಮಾಡಲಾದವು. ಪ್ರಥಮ ಪಂಗಡವು ಅತ್ತಕಡೆಗೆ ಹೊರಟವರನ್ನು ಹಾದಿಯಲ್ಲಿ ಪೋಲಿಸರಿಂದ ಬಂಧಿಸಲಾಯಿತು. ಸಿಖ್ಖರು ಕರ್ಪಾನಗಳ ಮೇಲಿನ ನಿರ್ಬಂಧವನ್ನೂ ನಿಷೇಧಿಸಿ ಬಹಳ ಚಳವಳ ನಡೆಸುತ್ತಾರೆ. ಚಳವಳ ಮಾತ್ರ ಸತ್ಯಾಗ್ರಹಕರವಾಗಿದ್ದು ಬಹಳ ಶಾಂತರೀತಿಯಲ್ಲಿ ನಡೆಯುತ್ತಿದೆ. ಸುತ್ತ ಮುತ್ತಲಿನ ನಗರಗಳಿಂದ ಸಿಖ್ಖರ ತಂಡಗಳು ಈ ಹೊಸ ಕಾನೂನನ್ನು ಮುರಿಯಲು ಲಾಹೋರಿಗೆ ಬರುತ್ತಿದ್ದಾರೆ. ಪೋಲಿಸರು ಇವರನ್ನು ಬಂಧಿಸುತ್ತಿದ್ದಾರೆ. ನ್ಯಾಯ ವಿಚಾರಣೆಯಾಗುತ್ತಿದೆ. ಕೆಲವರಿಗೆ ಸೆರೆಮನೆ ಇತ್ಯಾದಿ ಶಿಕ್ಷೆಗಳು ವಿಧಿಸಲಾಗುತ್ತಿವೆ. ಹಿಂದಿನ ಕಸ್ಮೀರಿಯ ಸಮಯ ಮಂಜೂರು ಮಾಡಿದ ೧೪೪ ಕ್ರಮದ ನಾಕೆಬಂದಿಯು ಶೀಘ್ರದಲ್ಲೇ ಮುಗಿಯುವುದರಿಂದ ಅದನ್ನು ಮುಂದುವರಿಸದಿದ್ದರೂ, ಮುಂದಕ್ಕೆ ಲೈಸನ್ಸುಗಳನ್ನು ಪಡೆದ ವಿನಹ ಮೆರವಣಿಗೆಗಳನ್ನು ನಡೆಯಿಸಬಾರದಾಗಿ ಹೊಸ ಅಪ್ಪಣೆಯು ಜಾರಿಯಾಗುವುದಂತೆ.

ಅಮೇರಿಕದ ಪ್ರಸಿದ್ಧ ಸಂಪಾದಕರು

ಅಮೇರಿಕದ ಪ್ರಸಿದ್ಧ ಸಂಪಾದಕರಾದ ಮಿ| ಹೊವರ್ಡರವರು ಈಗ ಪೂರ್ವದೇಶದ ಯಾತ್ರೆ ಕೈಕೊಂಡಿರುವರು. ವಿಮಾನದಲ್ಲಿ ಹಿಂದೂದೇಶಕ್ಕೆ ಬಂದಿದ್ದಾರೆ. ಮಿಳಿಯಗಟ್ಟಲೆ ಚಂದಾದಾರರಿರುವ ೩೪ ಪತ್ರಿಕೆಗಳನ್ನು ನಡೆಯಿಸುವ ಒಂದು ಅಮೇರಿಕದ ಪ್ರಸಿದ್ಧ ಪತ್ರಿಕೆ ಸಂಸ್ಥೆಯವರು ಮಹಾತ್ಮಾಗಾಂಧಿಯವರ ಭೇಟಿ ಮಾಡಬೇಕೆಂದು ಇವರಿಗೆ ತಂಬಾ ಆತುರವಿತ್ತು. ಆದರೆ ಯಾವನೋ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಹಿಂದೂದೇಶದ ಮತಪದ್ಧತಿಯ ಕುರಿತು ಹೀಗೆಂದರು— ಹಿಂದೂದೇಶ ಈ ತರದ ಪದ್ಧತಿ ನಾಶವಾಗಬೇಕು. ಎಂದಿನ ವರೆಗೆ ಹಿಂದೂ ದೇಶದಲ್ಲಿ ಕೋಮುವಾರು ಭೇದಗಳಿರುವವೊ, ಅಂದಿನ ವರೆಗೆ ಸಂಯುಕ್ತ ಅಮೇರಿಕವು ಭಾರತಖಂಡದೊಡನೆ ಯಾವತ್ತು ವಿಚಾರದಲ್ಲಿ ಸಹಕರಿಸಲಾರದು. ಭಾರತೀಯರ ಬ್ರಾಹ್ಮಣ ಶೂದ್ರ ಇತ್ಯಾದಿ ವರ್ಣಭೇದಗಳು ನಾಶವಾಗಿ ಜನರೆಲ್ಲಾ ಒಂದಾಗಬೇಕು. ಆಗ್ಯೆ ಅವರಲ್ಲಿ ಪ್ರಜಾಪ್ರಭುತ್ವದ ಯೋಗ್ಯತೆಗಳು ಜನಿಸುವುವು" ಫಿಲಿಪ್ಪಾನು ದ್ವೀಪಗಳ ಸ್ವಾತಂತ್ರ್ಯ ಚಳವಳದ ಸಮಯ ಒಂದು ಕಡೆ ಅವರಿಗೆ ಸ್ವಾತಂತ್ರ್ಯ ಕೊಡಬೇಕೆಂಬಲೂ, ಇನ್ನೊಂದೆಡೆ, ಫಿಲಿಪಿನೋರಿಗೆ ಸ್ವಾತಂತ್ರ್ಯ ಒಪ್ಪತಕ್ಕದ್ದಲ್ಲವೆಂದು ಅಭಿಪ್ರಾಯಪಟ್ಟವರು ಇವರು. ಯಾಕೆಂದರೆ, ಸಾಂಪತ್ತಿಕ ಸ್ಥಿತಿಯು ಸರಿಯಾಗಿದ್ದರೆ ಸ್ವಾತಂತ್ರ್ಯವು ರುಚಿಸುವುದು. ಫಿಲಿಪ್ಪಾಯಿನ ದ್ವೀಪಗಳ ಸಾಂಪತ್ತಿಕ ಸ್ಥಿತಿಯು ಸಂಪೂರ್ಣ ಅಮೇರಿಕದ ಮೇಲೆ ಹೊಂದಿಕೊಂಡಿದೆ. ಹೀಗಾಗಿ ಸ್ವಾತಂತ್ರ್ಯದಿಂದ ಅಮೇರಿಕಾನರ ಬೆಂಬಲವು ತಪ್ಪಿಹೋಗುವುದು. ಅಮೇರಿಕಾನರ ಕೈಕೆಳಗೆ ಬದ್ಧವಾಗಿದ್ದ ಫಿಲಿಪಿನೋರು ಜಪಾನರ ಕೈಯಲ್ಲಿ ಬೀಳಬೇಕಾಗುವುದು ಎಂಬುದು ಅವರ ಅಭಿಪ್ರಾಯವಾಗಿತ್ತು.

ಕಲ್ಕತ್ತದಲ್ಲಿ ಸ್ತ್ರೀಯರ ಪರಿಷತ್ತು.

ಕಲ್ಕತ್ತಾದಲ್ಲಿ ಸ್ತ್ರೀಯರ ಪರಿಷತ್ತನ್ನು ಜರಗಿಸಲು ಈಗ ವಿಶೇಷ ಸಿದ್ಧತೆಗಳಾಗುತ್ತಿವೆ. ಭಾರತೀಯ ರಾಷ್ಟ್ರೀಯ ಸ್ತ್ರೀ ಸಂಘದ ಆಮಂತ್ರಣ ಮೇರೆಗೆ ಅಂತರರಾಷ್ಟ್ರೀಯ ಸ್ತ್ರೀ ಸಂಘದ ಸದಸ್ಯರು ಈ ಪರಿಷತ್ತಿಗೆ ಬರುವವರಿರುವರು. ಹಿಂದೂದೇಶದ ರಾಷ್ಟ್ರೀಯ ಸ್ತ್ರೀ ಸಂಘಕ್ಕೆ ಕಲ್ಕತ್ತಾ ನಗರವೇ ಕೇಂದ್ರ ಸ್ಥಳವಾಗಿರುತ್ತದೆ. ಈ ಪರಿಷತ್ತು ಒಂದು ವಾರ ನಡೆಯುವುದೆಂದು ತಿಳಿದು ಬರುತ್ತದೆ. ಸ್ತ್ರೀ ಸುಧಾರಣೆಯ ಕುರಿತು ಅನೇಕ ವಿಶೇಷ ಪ್ರಶ್ನೆಗಳು ಈ ಪರಿಷತ್ತಿನಲ್ಲಿ ಚರ್ಚೆಗೆ ಬರುವವು.

ಮುಂಬಾಯಿಯಲ್ಲಿ ಅನಾಥಾಲಯ

ಮುಂಬಾಯಿ ಅಧಿಪತ್ಯದ ಸ್ತ್ರೀ ಸಂಘದವರು ಇದೇ ತಾ ೨೩ರಲ್ಲಿ ಸಭೆಸೇರಿ ಚಕ್ರವರ್ತಿಯವರ ನಿಧನದ ಕುರಿತು ಸಂತಾಪಸೂಚಕ ಠರಾವುಗಳನ್ನು ಮಾಡಿದರು. ಅನೇಕ ಭಾರತೀಯ ಪ್ರಮುಖ ಸ್ತ್ರೀಯರು ನೆರೆದಿದ್ದರು. ಅವರಲ್ಲಿ ಶ್ರೀ| ಸರೋಜಿನಿದೇವಿ ನಾಯುಡು ಒಬ್ಬರು.

ಮುಂಬಯಿ ನಗರದ ಬೀದಿಗಳಲ್ಲಿ ಅಲೆದಾಡುವ ಭಿಕ್ಷುಕರ ಸಂಖ್ಯೆಯನ್ನು ಕಡಿಮೆಮಾಡಲು, ಅವರನ್ನು ನೋಡಿಕೊಳ್ಳಲು ಒಂದು ಅನಾಥಾಲಯ ವನ್ನು ನಿರ್ಮಿಸಬೇಕಾಗಿ ಆ ಕಾರ್ಯಕ್ಕೆ ಇಪ್ಪತ್ತು ತನಕ ರೂ. ೧೯ ಲಕ್ಷ ಒಟ್ಟುಗೂಡಿಸಿದ ಮರೆಂದೂ ಸಭೆಯು ನಿರ್ಣಯಿಸಿತು. ಈ ಅನಾಥಾಲಯವನ್ನು ಪ್ರಕೃತ ಕುರುಡರ ಬಗ್ಗೆ ಉಪಯೋಗಿಸಲಾಗುವುದು.

ಶ್ರೀ| ಸುಭಾಷ್ಚಂದ್ರ ಭೋಸರು—

ವಿಯನ್ನದಿಂದ ಐರ್ಲೇಂಡಿನ ಡಬ್ಲಿನಿಗೆ ತೆರಳಿರುವರು. ದಿವಂಗತ ವಿ ಜೆ ಪಟೇಲರಿಂದ ಸ್ಥಾಪನೆಯಾದ ಇಂಡೋ ಐರಿಷ್ ಲೀಗನ್ನು ವ್ಯವಸ್ಥೆಗೊಳಿಸಲು ಅತ್ತಕಡೆ ಪ್ರಯಾಣಬೆಳಸಿರುವರೆಂದು ತಿಳಿದುಬರುತ್ತದೆ. ಕಲ್ಕತ್ತದಲ್ಲಿರುವ ಅವರ ಹಿರಿಯ ಮಿತ್ರರಿಗೆ ಬಂದ ಪತ್ರದ ಪ್ರಕಾರ ಇವರು ಬೇಗನೇ (ಕಾಂ| ಅಧಿವೇಶನಕ್ಕೆ ಸರಿಯಾಗಿ) ಹಿಂದೂದೇಶಕ್ಕೆ ಬರಲಿರುತ್ತಾರೆ.

ಲಕ್ನೊ ಕಾಂಗ್ರೆಸ್ಸಿನ ಸಮಯ.

ಲಕ್ನೋ ಕಾಂಗ್ರೆಸ್ ತಾರೀಕನ್ನು ಮುಂದುವರಿಸಲಾಯಿತು. ಇದರಿಂದಾಗಿ ಸರ್ವರೂ ತೃಪ್ತಿಯಾಗಿರುವರು. ಕಲಹ ನಿವಾರಣೆಯಾಗದ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಇದರಿಂದ ಬಹಳ ಉಪಕಾರವಾಗಿರುತ್ತದೆ. ಮತ್ತು ಅಸಂಬ್ಲಿ ಅಧಿವೇಶನಕ್ಕೆ ಹೋಗುವ ಕಾಂಗ್ರೆಸ್ ಸದಸ್ಯರಿಗೆ ಲಕ್ನೋ ಕಾಂಗ್ರೆಸ್ಸನ್ನು ಎಪ್ರಿಲ್ ಮಧ್ಯಕ್ಕೆ ಜರಗಿಸಿದರೆ ಬಹಳ ಅನುಕೂಲವಾಗುವುದಂತೆ.

ಮದುವೆಯ ಸಂಖ್ಯೆಯು ವೃದ್ಧಿಯಾಗಿರುತ್ತದೆ. ಜನನ ಸಂಖ್ಯೆಯು ಮಾತ್ರ ಇಳಿದಿರುತ್ತದೆ.

ಕಳೆದ ಮಹಾ ಯುದ್ಧದ ನಂತರ ಇಂಗ್ಲೆಂಡಿನ ಮದುವೆಗಳ ಸಂಖ್ಯೆಯು ಅತಿರೇಕವಾಗಿ ವೃದ್ಧಿ ಹೊಂದಿರುತ್ತದೆ. ಆದರೆ ಜನನಗಳ ಸಂಖ್ಯೆ ದಿನೇ ದಿನೇ ಕ್ಷೀಣ ಹೊಂದುತ್ತಾ ಬಂದು ಈಗ ಅಲ್ಲಿನ ಸರಕಾರವನ್ನು ಬೆರಗುಗೊಳಿಸಲಾರಂಭಿಸಿದೆ. ಜನರ ಸರಾಸರಿ ಆಯುಷ್ಯವು ಸ್ವಲ್ಪ ಹೆಚ್ಚಾಗಿರುತ್ತದೆ. ಪುರುಷರ ಸರಾಸರಿ ಆಯುಷ್ಯ ೫೮.೨ ಸ್ತ್ರೀಯರ ಸರಾಸರಿ ಆಯುಷ್ಯವು ೬೨ ೯ ೩೧೮ ... ವಿವಾಹಗಳು ನಡೆದಿರುತ್ತವೆ. ಅನೇಕ ವಿವಾಹಗಳು ರದ್ದಾಗಿವೆ. ಹೆಚ್ಚಾಗಿ ವಿಧುರರು ಮತ್ತು ವಿಧವೆಯರು ವಿವಾಹವಾಗುತ್ತಿದ್ದಾರೆ. ವಿವಾಹದಿಂದಾಗಿ ಮಕ್ಕಳನ್ನು ಪಡೆಯುವ ಸಂಕಷ್ಟಗಳನ್ನು ಅನುಭವಿಸಿ ಆರೋಗ್ಯವಂತರಾಗಿ ಜೀವಿಸುವವರ ಸಂಖ್ಯೆಯು ಅವಿವಾಹಿತ ಸ್ತ್ರೀಯರಲ್ಲಿನ ಆರೋಗ್ಯವಂತರ ಸಂಖ್ಯೆಗಿಂತ ಮಿಗಿಲಾಗಿರುತ್ತದೆ.

ಡಕಾಯಿತರಿಗೆ ತುಪಾಕಿಗಳನ್ನು ಒದಗಿಸುವವನು!

ಕಲ್ಕತ್ತಾದ ಡೈಮಂಡ್ ಹಾರ್ಬರ್ ಪ್ರದೇಶದಲ್ಲಿ ಒಬ್ಬ ಮುಸ್ಲಿಮನು ಮನೆಯಿಂದ ನಾಲ್ಕು ತಪಾಕಿಗಳನ್ನು (ಇದರಲ್ಲಿ ಒಂದು ದೇಶೀ ತಯಾರಿದ್ದು) ಒಂದು ಪಿಸ್ತೂಲನ್ನೂ ಪೋಲೀಸರು ಹಿಡಿದಿರುವರು. ಡಕಾಯಿತರಿಗೆ ಬೇಕಾಗುವ ತುಪಾಕಿ ಪಿಸ್ತೂಲುಗಳನ್ನು ಒದಗಿಸಿಕೊಟ್ಟು ಅದರಿಂದ ಲೂಟಿಯಾದರ ಒಂದಂಶವನ್ನು ಪ್ರತಿಫಲವಾಗಿ ಸ್ವೀಕರಿಸುವುದು ಇವನ ಅಭ್ಯಾಸವಂತೆ. ಕೆಲವು ಸಮಯದ ಹಿಂದೆ ಇಲ್ಲಿಯೇ ಬೇರೊಂದು ಕಡೆಯಲ್ಲಿ ತುಪಾಕಿಗಳನ್ನು ತಯಾರಿಸುವ ಒಂದು ಸಣ್ಣ ಕಾರ್ಖಾನೆಯನ್ನೂ ಹಿಡಿದಿರುವರು.

ನಿಸ್ತೇಜಗೊಂಡ ಚರ್ಮ.

ಪ್ರಾಯವಾಗುವ ಮೊದಲೇ ಸ್ತ್ರೀಯು ಮುದುಕಿಯಂತೆ ತೋರುವಳು.

ಇಷ್ಟು ಬೇಗನೇ ಮುಪ್ಪನ್ನು ಪಡೆಯುವುದೆಂದರೆ, ಜೀವನ ಸೌಂದರ್ಯವನ್ನೇ ಕಳಕೊಂಡಂತಾಗುತ್ತದೆ. ಇದರಿಂದ ನಿಮ್ಮನ್ನು ರಕ್ಷಿಸಿ, ನಿಮ್ಮ ಚರ್ಮವನ್ನು ನಯವಾಗಿಯೂ ನುಣುಪಾಗಿಯೂ ಮಾಡಿ, ನಿಮ್ಮ ಮುಖಕ್ಕೆ ಸೌಂದರ್ಯವನ್ನು ತರುವ ಒಂದು ಔಷಧಿಯು ಇದೆ. ಅದು ಕಲೆಗಳನ್ನೂ ಹುಣ್ಣುಗಳನ್ನೂ ಬೊಕ್ಕೆಗಳನ್ನೂ ಮುಡಿಮೊಗಳನ್ನೂ ನಾಶಮಾಡುತ್ತದೆ.

ಅಫ್ಘಾನ ಸ್ನೊ.

ನಿತ್ಯವೂ ಉಪಯೋಗಿಸಿದರೆ ಸೌಂದರ್ಯವೂ ಆರೋಗ್ಯವೂ ವೃದ್ಧಿಯಾಗುವುದು.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ

ಇ. ಎಸ್. ಪಟಾನ್‌ವಾಲಾ,
182-84, ಎ ಅಬ್ದುಲ್‌ರಹಿಮಾನ್ ಸ್ಟ್ರೀಟ್
ಬೊಂಬೇ, ೩.

ಲೌಸ್ ಬನಾರ್ಡನೆಂಬ ಅನುಭವಸಿದ್ಧನಾದ ರಸಾಯನಶಾಸ್ತ್ರಜ್ಞನಾದ ನಾನು ಈ ಮೂಲಕ ವ್ಯಕ್ತಪಡಿಸುವುದೇನೆಂದರೆ, ಅಫ್ಘಾನ ಸ್ನೊ ಎಂಬ ಕ್ರೀಮನ್ನು ವಿಂಗಡಿಸಿ ಅದರಲ್ಲಿ ಯಾವುದೇ ತರದ ವಿಷಕರ ಪದಾರ್ಥವಾಗಲಿ ಹಾನಿಕರ ಪದಾರ್ಥವಾಗಲಿ ಕಂಡುಹಿಡಿದಿಲ್ಲ. ಈ ಕ್ರೀಮನ್ನು ಸರ್ವದಾ ತಮ್ಮ ಸೌಂದರ್ಯಕ್ಕಾಗಿ ಏನೂ ಹಾನಿಯಿಲ್ಲದೆ ಚರ್ಮದ ಮೇಲೆ ಉಪಯೋಗ ಮಾಡಬಹುದು. (ಫ್ರಾನ್ಸ್)

ಅನುಕ್ರಮಣಿಕೆ.

ಸೂಚನೆಗಳು ೩
ಹಿಂದೂದೇಶವನ್ನೂ ಐಗುಸ್ತ್ರವನ್ನೂ ಬಿಟ್ಟು ಕೊಡಬೇಕು ೩
ಮಹಿಳಾ ಸಮಾಜ ೫
ಪ್ರಕೃತಿಯ ಪ್ರತೀಕಾರ ೬
ವಿವಿಧ ಸಮಾಚಾರಗಳು ೯
ಅಗ್ರಲೇಖ -
ಬೋರ್ಡುಗಳೂ ಜನಮತವೂ ೧೦
ಸ್ಫುಟವಿಚಾರಗಳು ,,
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ವನಿತಾ ವಿಭಾಗ ೧೩
ಸಂಪಾದಕರ ಟಪ್ಪಾಲು ಪೆಟ್ಟಿಗೆ ೧೬

ಸ್ವದೇಶಾಭಿಮಾನಿ

ಕಾ. ೩೧ನೇ ಶುಕ್ರವಾರ ಜನವರಿ ೧೯೩೬

ಬೋರ್ಡುಗಳೂ ಜನಮತವೂ

ಸ್ಥಳೀಯ ಸ್ವರಾಜ್ಯದ ಅನುಭವವು ನಮ್ಮ ಪ್ರಾಂತ್ಯದಲ್ಲಿ ಸಾಕಷ್ಟು ದೀರ್ಘ ಕಾಲದಿಂದ ದೊರೆತೇ ಇದೆ ಗ್ರಾಮ ಪಂಚಾಯತು, ನಗರಗಳಲ್ಲಿ ಮ್ಯುನಿಸಿಪಾಲಿಟಿ, ಜಿಲ್ಲೆಗಳಲ್ಲಿ ಬೋರ್ಡುಗಳು ಉಂಟಾಗಿ ಬಹಳ ವರ್ಷಗಳಾಗಿವೆ ಹೊಸ ರಾಜ್ಯಭಾರ ಕ್ರಮವು ಬರುತ್ತಲೇ, ಈ ಸಂಸ್ಥೆಗಳಿಗೆ ಇನ್ನಷ್ಟು ಅಧಿಕಾರವೂ ಮಹತ್ವವೂ ಬರುವಂತಿದೆ

ಆದರೆ, ಈ ಸ್ವರಾಜ್ಯವು ಜನತೆಗೆ ಉತ್ತಮ ಪರಿಣಾಮಗಳನ್ನು ಉಂಟುಮಾಡುವಂತೆ, ಜನತೆಯಲ್ಲೂ ಜವಾಬುದಾರಿಯು ಹೆಚ್ಚಲೇಬೇಕಾಗಿದೆ ಈ ಸಂಸ್ಥೆಗಳು ಮಾಡುವ ಕೆಲಸವೆಲ್ಲವೂ ತಮ್ಮ ಕೆಲಸವೆಂದೇ ಜನರು ತಿಳಿದುಕೊಳ್ಳುವ ತನಕ, 'ನಿರುಪಯೋಗ, ದುರುಪಯೋಗ'ಗಳೇ ಈ ಸಂಸ್ಥೆಗಳಿಂದ ಉಂಟಾಗುವ ಪರಿಣಾಮ ಫಲಗಳಾಗುವುದು ಖಂಡಿತ

ಜನತೆಯು ಎಲ್ಲಿ ಸ್ವಯಂ ವ್ಯಕ್ತವಾಗಿ ಜವಾಬುದಾರಿ ವಹಿಸಿಕೊಳ್ಳದೋ, ಅಲ್ಲಿ ಈ ಸಂಸ್ಥೆಗಳು ಕೆಲವರ ಆಟಗೊಂಬೆಗಳಾಗಿಯೆ ಬಾಳುವುದು ನಿಶ್ಚಯವಾಗಿದೆ

ಪ್ರತಿಯೊಬ್ಬ ತೆರಿಗೆದಾರನಿಗೆ ಹಕ್ಕು ಇದೆ, ಜವಾಬುದಾರಿ ಇದೆ ಇವನ್ನು ಅವನು ಚೆನ್ನಾಗಿ ತಿಳಿದುಕೊಂಡು ನಡೆದರೆ ಮಾತ್ರ, ಈ ಸಂಸ್ಥೆಗಳಲ್ಲಿ ಅವನೂ ಭಾಗವಹಿಸಿದಂತಾಗುವುದು ಇಲ್ಲದಿದ್ದರೆ,-ಸಂಸ್ಥೆಗಳು ಕೆಲವರ ಕಾರ್ಯಕ್ಷೇತ್ರಗಳಾಗಿ ಸ್ವಾರ್ಥದ ಪೂಜಾರಾಧನೆಗಾಗಿಯೇ ಉಳಿಯುವುವು ಹೊರತು,ಮಿಕ್ಕಯಾರಿಗೂ ಇವುಗಳಿಂದ ಆಗಬೇಕಾಗುವಷ್ಟು ಸೇವೆ ದೊರೆಯಲಾರದು .

"ಈ ಸಂಸ್ಥೆಗಳ ವರದಿಗಳನ್ನು ಪ್ರತಿ ವರ್ಷವೂ ಸರಕಾರವು ವಿಮರ್ಶಿಸುತ್ತ ಬರುವುದನ್ನು ಓದಿದರೆ,-ಒಂದೇ ಬಗೆಯ ದೂರು, ಒಂದೇ ಸ್ವರದ ಆಕ್ಷೇಪ ಮಾತ್ರವೇ ಕೇಳಿ ಬರುವುವು. ಮೆಂಬರರೂ ಪ್ರೆಸಿಡೆಂಟರೂ ತಮ್ಮ ಅಧಿಕಾರಗಳ ದುರುಪಯೋಗ ಮಾಡುತ್ತಿರುವುದನ್ನು ನೋಡಬಹುದು" ಎಂದು ಮೊನ್ನೆ ಪಬ್ಲಿಕ್ ಸರ್ವಿಸಸ್ ಕಮಿಶನಿನ ಮೆಂಬರರಾಗಿರುವ ಶ್ರೀ. ಎಮ್. ರತ್ನಸಾಮಿಯವರು ಒಂದು ಭಾಷಣದಲ್ಲಿ ವಿವರಿಸಿದರು

"ಈ ಬೋರ್ಡುಗಳಿಂದ ಅತ್ಯಧಿಕ ಅನ್ಯಾಯ ಹೊಂದುವವರು ಉಪಾಧ್ಯಾಯರು, ಬೋರ್ಡುಗಳಿಗೆ ಸಲ್ಲಬೇಕಾಗಿರುವ ಗ್ರೇಂಟುಗಳು ಸರಕಾರದಿಂದ ದೊರೆತರೂ, ಉಪಾಧ್ಯಾಯರಿಗೆ ಅವರ ಸಂಬಳಗಳು ಸಂದುದಿಲ್ಲ ಎಂದೇ ದೂರುಗಳಿವೆ. ಜವಾಬುದಾರಿಯ ತೀವ್ರ ಕಡಮೆಯಾಗಿದೆ ಎಂದು ಇದರಿಂದ ತಿಳಿಯದೇ? ಕಲ್ಕತ್ತ ಕೊರ್ಪೊರೇಶನಿನಲ್ಲಿ ಇನ್ನೂ ನಾಲ್ವತ್ತು ಲಕ್ಷ ರೂಪಾಯಿ ತೆರಿಗೆಯು ವಸೂಲಾಗದೆ ಬಾಕಿಯಿದೆಯಂತೆ ಇದು ಆ ಮುನಿಸಿಪಾಲಿಟಿಯೊಂದರ ಮಾತೇನೂ ಅಲ್ಲ ಎನ್ನಬೇಕು, ಪ್ರತಿಯೊಂದು ಲೋಕಲ್ ಬೋರ್ಡೂ, ಮ್ಯುನಿಸಿಪಾಲಿಟಿಯೂ ಹೀಗೆಯೆ ಇರುವುದೂ ಎಂಬಂತೆ ಇದೇ ಬಗೆಯ ಟೀಕೆಗಳಾಗಿವೆ."

ಹೊಸ ರಾಜ್ಯಭಾರ ಕ್ರಮಗಳು ರೂಢಿಗೊಳ್ಳಬೇಕಾದರೆ, ಅವನ್ನು ಜನರ ಹಿತಕ್ಕಾಗಿಯೆ ಬಳಸಬೇಕು, ಹೊರತು ಕೆಲವೇ ಮಂದಿ ಮಹನೀಯರ ಉದ್ಧಾರಕ್ಕಾಗಿ ಅಲ್ಲ ಜನಮತವೇ ಇಂತಹ ಬೋಧನೆಯನ್ನೂ ಕಾರ್ಯಕ್ರಮವನ್ನೂ ಘಟಿಸಿ ತರಬಲ್ಲುದು ಸರಕಾರವು, ಅದರಲ್ಲೂ ಪ್ರಜಾಸತ್ತೆಯು, ಜನಮತವನ್ನು ನಿರಂತರವೂ ಅವಲಂಬಿಸಿಯೇ ಇರುವುದು "ತಮ್ಮನ್ನು ಆಳುವವರ ಕೃತ್ಯಗಳನ್ನು ಅಳಿಸಿಕೊಳ್ಳುವವರು ವಿಮರ್ಶಿಸುವುದೇ ಜನಾಭಿಪ್ರಾಯ, ಜನಮತ " ಈ ಸಂಸ್ಥೆಗಳಿಗೆ ಕೆಲವರನ್ನು ಚುನಾಯಿಸಿ ಕಳಿಸಿದ ಕೂಡಲೆ, ಜನರ ಜವಾಬುದಾರಿಯು ಮುಗಿಯಲಿಲ್ಲ, ಅವರು ಮಾಡುವ ಕೃತ್ಯ(ಕರ್ಮ)ಗಳನ್ನು ತಿಳಿದುಕೊಂಡು ವಿಮರ್ಶಿಸುತ್ತಿರಬೇಕಾಗಿದೆ

"ಜನಮತವೆಂಬುದು ನಮ್ಮಲ್ಲಿ ಇನ್ನೂ ರೂಪುಗೊಂಡಿಲ್ಲವೆಂದು ವಿಷಾದಿಸಬೇಕಾಗಿದೆ ಅಲ್ಲಲ್ಲಿ ಕೇಳಬರುತ್ತಿರುವ ದುರಾಡಳಿತದ ಪ್ರಸ್ತಾಪವು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿಲ್ಲ, ಪ್ರಕಟವಾದರೆ, ಪ್ರಬಲರಾದವರು ಅದನ್ನು ಅಲ್ಲಗಳೆವ ಶತಪ್ರಯತ್ನಗಳನ್ನೂ ಮಾಡುವರು, ಟೀಕಿಸುವವರು ಸುಮ್ಮನಾಗುವರು, ಇಲ್ಲವೆ ಇನ್ನೂ ಟೀಕಿಸುವರು, ಓದುವವರು ಇದೊಂದು ತಮಾಷೆ ಎಂದೇ ಬಗೆವರಲ್ಲದೆ, ತಾವು ಇದರಲ್ಲಿ ವಹಿಸಿಕೊಳ್ಳಬೇಕಾಗಿರುವ ಕರ್ತವ್ಯವೇನೆಂಬುದನ್ನು ಎಣಿಸುವುದೇ ಇಲ್ಲ" ಎಂದೆನ್ನುತ್ತ ಶ್ರೀ. ರತ್ನಸಾಮಿಯವರು "ದುರಾಡಳಿತವನ್ನು ಇದಿರಾಡಲು ಜನಮತವು ಎಚ್ಚತ್ತುಕೊಳ್ಳುವಂತೆ (ಉದ್ರೇಕಗೊಳ್ಳುವಂತೆ) ಪ್ರಯತ್ನಗಳು ನಡೆವುದಿಲ್ಲ ಅಧಿಕಾರವನ್ನು ಹಾಗೆ ಅನುಚಿತವಾದ ರೀತಿಯಲ್ಲಿ ಉಪಯೋಗಿಸಿದವರನ್ನು ತಳ್ಳಿ ಹಾಕಲು ಜನಮತವು ಎದ್ದು ನಿಲ್ಲುವುದಿಲ್ಲ" ಎಂದೂ ಕರ್ತವ್ಯಕ್ಕೆ ವಿಮುಖವಾಗಿರುವ ನಮ್ಮ ಜನತೆಯನ್ನೂ ದೂರಿ ಆಕ್ಷೇಪಿಸಿದರು

ಪಕ್ಷಗಳು ಇರಬೇಕು, ಹಾಗಿದ್ದರೆನೆ ಆಡಳಿತವು ಸರಿಯಾಗಿ ನಡೆವುದು ಆದರೆ ಪಕ್ಷಪಾತ ಬುದ್ಧಿಯು ಇರಬಾರದು, ಇದರಿಂದ ಆಡಳಿತದ ಒಂದು ಪಕ್ಷವಾದರೂ ಕೆಟ್ಟು ಹೋಗುವುದು ನಿಶ್ಚಯ ಕೆಲವೇ ಜನರ ಅಭ್ಯುದಯಕ್ಕಾಗಿ ಒಂದು ಪಕ್ಷವು ಸಾಧಿಸುತ್ತಿದ್ದರೆ, ಅದನ್ನು ಮುರಿದಿಕ್ಕುವುದು ಇತರರ ಕರ್ತವ್ಯವಾಗಿರಬೇಕು ಬಹುಜನರ ಹಿತವನ್ನು ಬಹುಮತವು ಸಾಧಿಸುವಂತೆ ವರ್ತಿಸಿದರೆ ಮಾತ್ರ ಆಡಳಿತವು ಉತ್ತಮವಾಗುವುದಲ್ಲದೆ, ಪಂಗಡ ಕಟ್ಟಿಕೊಂಡು ಆಳುವುದು ಆಡಳಿತದ ಸಲ್ಲಕ್ಷಣವಾಗಿಲ್ಲ

ಪಕ್ಷಗಳಲ್ಲಾದರೂ ಐಕ್ಯದ ಕೈ, ಶಿಸ್ತು, ಸಹಕಾರವಿರಬೇಕು ಕೆಲವರೇ ಕಟ್ಟಿಕೊಳ್ಳುವ ಕೂಟವು ಒಂದು ಅಕ್ರಮ ಕೂಟದಷ್ಟೆ ಹಾನಿಕರವಾಗಿದೆ ಇಂಗ್ಲಿಷಿನಲ್ಲಿ ಹೇಳುವಂತೆ 'ಪಾರ್ಟಿ' ಎಂಬುದು ವಿಹಿತವಾದುದು, 'ಫೆಕ್ಶನ್' ಎಂಬುದು ಅನ್ಯಾಯಗಾರರ ಕೂಟ

"ನವರಾಜ್ಯಭಾರ ವ್ಯವಸ್ಥೆಯಲ್ಲಿ, ನಮ್ಮ ಪ್ರಾಂತ್ಯಗಳಿಗೆ ಎಷ್ಟೋ ವಿಧವಾಗಿ ಹೆಚ್ಚಿನ ಸ್ವಾತಂತ್ರ್ಯವನ್ನು ಕೊಡಲಾಗಿದೆ ಅದು ಕಡಮೆಯೆ' ಆಗಿದೆಯಾದರೂ, ಅದನ್ನಾದರೂ ದಕ್ಕಿಸಿಕೊಳ್ಳುವುದಕ್ಕೂ ಇನ್ನೂ ಹೆಚ್ಚಿನ ಅಧಿಕಾರಗಳನ್ನು ವಹಿಸಿಕೊಳ್ಳುವುದಕ್ಕೂ ನಮ್ಮಲ್ಲಿ ಚೇತನ ತುಂಬಬೇಕು. ನ್ಯಾಯವಿಧಾಯಕ ಸಭೆಯಲ್ಲೂ ನ್ಯಾಯವಿದ್ಯಾಲಯದಲ್ಲೂ ಹೆಚ್ಚಿನನುಭವವನ್ನು ಪಡೆದು, ಸರಕಾರದ ಉದ್ಯೋಗಗಳಿಗೆ ಉಮೇದುವಾರರನ್ನು ಚುನಾಯಿಸುವ ಕಮಿಟಿಯ ಸದಸ್ಯರಾಗಿರುವವರೇ ಈ ಬಗೆಯಾಗಿ ಬೋಧಿಸಿರುವಾಗ, ಪ್ರತಿಯೊಬ್ಬ ನಾಗರಿಕನೂ ಈ ವಿಚಾರಗಳನ್ನು ತಿಳಿದುಕೊಂಡು, ತನಗೆ ಸಂಬಂಧಪಟ್ಟಿರುವ ಬೋರ್ಡು ಅಥವಾ ಮ್ಯುನಿಸಿಪಾಲಿಟಿ ಅಥವಾ ಪಂಚಾಯತು,ಸಭೆ, ಕೌನ್ಸಿಲು ಮೊದಲಾದುವುಗಳು ಸರಿಯಾಗಿ ಕಾರ್ಯ ನಡೆಸಿ ಜನಹಿತವು ಹೆಚ್ಚುವ ಹಾಗೆ,- ತನ್ನ ಹಕ್ಕನ್ನು ಉಪಯೋಗಿಸಲು ಕಲಿಯುವಂತೆ, ಜವಾಬುದಾರಿ ಹೊರಲೂ ಕಲಿತುಕೊಳ್ಳಬೇಡವೆ? ಬೇಡವಾದರೆ, ಆ ವೋಟು ಏತಕ್ಕೆ ಬೇಕು?

ಸ್ಫುಟವಿಚಾರಗಳು

ಮಾಯಾಭಂಜನೆ

'ಮದರ್ ಇಂಡಿಯಾ' ಭಾರತಮಾತೆ ಎಂಬ ಹೆಸರನ್ನಿತ್ತು ಒಂದು ಕುತ್ಸಿತವಾದ ಗ್ರಂಥ ಬರೆದು ಅದೇ ವೇದ ಪ್ರಮಾಣವಾಗುವಂತೆ ಪ್ರಚಾರವನ್ನೂ ಮಾಡಿ, ತನ್ನ ಹೆಸರನ್ನೂ ತನ್ನಂತಹ ಎಷ್ಟೋ ಗ್ರಂಥಕರ್ತರ ಹೆಸರನ್ನೂ ಕೆಡಿಸಿಕೊಂಡು ಮಾಯಾದೇವಿಗೆ, ಅಮೇರಿಕದ ವಾತಾವರಣವು ಅದೇಕೊ ರುಚಿಸದೆ, ಪುನಃ ಭಾರತವರ್ಷದ ಮುಖವೇ ಆಕರ್ಷಿಸಿತು ಫಲಿತಾಂಶವೇನು? ಯಾರ ಆದರ ಸತ್ಕಾರಗಳಿಂದ ತಾನು ಮೆರೆಯಬಹುದಾಗಿ ಎಣಿಸಿಕೊಂಡಿದ್ದಳೋ, ಅವರಿಂದಲೇ ಈಗ ಗಡೀಪಾರಿಗೆ ಅವಳ ಗ್ರಂಥವು ಅಪ್ಪಣೆ (ದಂಡನೆ) ಹೊಂದಿದೆ "ಈ ಪುಸ್ತಕವನ್ನು, ಅದರಿಂದ ವಾಕ್ಯಗಳನ್ನು, ಭಾಷಾಂತರಗಳನ್ನು ಇತ್ಯಾದಿ ಯಾವುದನ್ನೂ ಭಾರತವರ್ಷದ ಚತುಃ ಸೀಮೆಯೊಳಕ್ಕೆ ಪ್ರವೇಶಿಸದಂತೆ ಸರಕಾರವು ಈಗ ಕಟ್ಟಪ್ಪಣೆ ಕೊಟ್ಟಿರುವುದು" ಎಷ್ಟು ವಿಧಾನಗಳಿಂದ ಈ ಪುಸ್ತಕವನ್ನು ದಂಡಿಸಬಹುದೋ ಅಷ್ಟು ವಿಧಾನಗಳಿಂದ ಅದರ ಉಚ್ಚಾಟನೆ ಮಾಡಲಾಗಿದೆ ಹಿಂದುಗಳಿಗೆ ಮಾತ್ರವೇ ಅಲ್ಲದೆ, ಹಿಂದೂ-ಮುಸ್ಲಿಮರೊಳಗಣ ಸಂಬಂಧವನ್ನು ಸಹ ಕೆಡಿಸುವಂತಹ ಮಾತುಗಳಿವೆ ಎಂದೇ ಕಾರಣ ಕೊಟ್ಟು ಸರಕಾರವು ಈ ಪುಸ್ತಕವನ್ನು ಅಸ್ಪೃಶ್ಯತೆಯ ದೃಷ್ಟಿಯಿಂದ ಹೊರಗಿಟ್ಟಿದೆ ಮಿಸ್ ಮೇಯೋ! ಮಾಯೆಯ ಶಕ್ತಿಗೂ ಒಂದು ಮಿತಿ, ಒಂದು ಅವಧಿ ಇದ್ದೇ ಇದೆ

ಗಾನಾಲೇ ದೋರಿಯಾ

ಎಂಬುದು ಅಬಿಸೀನಿಯದಲ್ಲಿ ಒಂದು ಯುದ್ಧರಂಗ ಇದು ವರೆಗೆ ಇಟಲಿ ಅಬಿಸೀನಿಯಗಳೊಳಗೆ ನಡೆದ ಯುದ್ಧಗಳಲ್ಲೆಲ್ಲ ಭಯಂಕರವಾದುದು ಇಂಥ ಅದ್ವಿತೀಯ ವಿಜಯವು ನಮಗೆಂದೂ ಉಂಟಾದುದಿಲ್ಲೆಂದು ಇಟಲಿಯನರು ಎನ್ನುವರು ಅಬಿಸೀನಿಯದ ಸೇನೆಯು ಪಲಾಯನ ಮಾಡಿದುದೇ ಅಲ್ಲದೆ, ೪೦೦೦ ಹೆಣಗಳನ್ನು ಹಿಂದೆ ಬಿಟ್ಟುಹೋದುದೆಂದೂ, ಒಂದೆರಡು ವರ್ಷಕ್ಕೆ ಬೇಕಾಗುವಷ್ಟು ಆಹಾರ ಪದಾರ್ಥಗಳು ಇಟಲಿಯಾನರ ವಶವಾದುವೆಂದೂ ಅವರ ಇಸ್ತಿಹಾರು ಅಬಿಸೀನಿಯದಲ್ಲಿ ಮಾತ್ರ ಮಾತೇ ಬೇರೆ. ಇಟಲಿಯವರು ರೋಮಿನಲ್ಲಿ ೩೫ ಆಫೀಸರರು, ೬೯೯ ಸಿಪಾಯರು (೭೦೦ ಅಲ್ಲ, ಅಷ್ಟು ಸರಿಯಿದೆ ಲೆಕ್ಕ) ೧೯ ಗಾಯಪೊಡೆದವರು (೨೦ ಅಲ್ಲ, ನೆನಪಿರಲಿ) ತಮ್ಮ ಪಕ್ಷದಲ್ಲಿದ್ದರೆಂದೂ, ಅಬಿಸಿನಿಯದವರಲ್ಲಿ ಸತ್ತವರೂ ಗಾಯಗೊಂಡವರೂ ೫೦೦ಂಕ್ಕೆ ಕಡಿಮೆಯಿಲ್ಲೆಂದೂ ಸಾರಿದ್ದಾರೆ ರಾಸ್‌ಕಾಸ್ಸಾ, ರಾಸ್ ಸಿಯ್ಯೂಮ್ಮ ಎಂಬ ಅಬಿಸೀನಿಯದ ದಂಡನಾಯಕರು ಒಂದಾಗಿ ಇಟಲಿಯ ಸೇನೆಗಳ ಮೇಲೆ ಬಿದ್ದು, ತಮಗಿಂತ ನೂರುಮಡಿ ಹೆಚ್ಚಾದ ಇಟಲಿಯ ಸೇನೆಗಳನ್ನು ಎದುರಾದಿ, ಆ ಸೇನೆಗಳು ಎಲ್ಲಿಂದ ಬಂದಿದ್ದವೊ ಅಲ್ಲಿಗೇ ಹಿಂದೆ ಹೋಗುವಂತೆ ಪಲಾಯನಗೊಳಿಸಿದರು, ಇಟಲಿಯವರು ಕಟ್ಟಿದ ಎರಡು ಕೋಟೆಗಳನ್ನು ಅಬಿಸೀನಿಯದವರು ನುಗ್ಗಿದರು, ಹತ್ತು ಭಾರವಾದ ಫಿರಂಗಿಗಳನಷ್ಟೆ ೧೦೦ ಮೆಶಿನ್ ಗನ್ನುಗಳನ್ನೂ ಇನ್ನೂ ಊರಿಗೆ ಸಾಗಿಸುತ್ತಲೇ ಇದ್ದಾರೆ, ೫೦೦೦೦ ನಾಗಸೇನೆಯವರು ರಾಸ್‌ದೆಸ್ಟಾನ ಕಡೆಗೆ ನಡೆಯುತ್ತಿದ್ದಾರೆ ಎಂದು ಅಡ್ಡಿಸ್ ಅಬಾಬದಲ್ಲಿ ಸರಕಾರವು ವಾರ್ತೆ ಪ್ರಕಟಿಸಿಯದೆ, ಅಂತೂ, ಎಬಿಸಿನಿಯದಲ್ಲಿ ಸುಧಾರಣೆಗಳು ಸುಳ್ಳುಗಳ ರೂಪದಲ್ಲೂ ನುಗ್ಗುತ್ತಿವೆ

ಉದ್ಯೋಗಿಗಳ ಪ್ರಯುಕ್ತಿಗಳು

ಕೌನ್ಪುರದಲ್ಲಿ ಸುಶಿಕ್ಷಿತ ನಿರುದ್ಯೋಗಿಗಳು ತಾವೇ ಹುಡುಕಿಕೊಂಡು ಹೊಸ ಉದ್ಯೋಗಗಳನ್ನು ಕೈಗೊಳ್ಳದಿರುವರು, ಇದುವರೆಗೆ ಕಡೆಗಣ್ಣಿನಿಂದ ಶಿಕ್ಷಿತರು ನೋಡುತಿದ್ದ ವೃತ್ತಿಗಳಿಗೆ ಇವರು ತಾವಾಗಿಯೆ ಕೈಹಚ್ಚಿರುವರು. ಮೆಟ್ರಿಕ್ಯುಲೇಶನ್ ಪಾಸಾದ ಇಬ್ಬರು ಕಡವಿನ ದೋಣಿಗಳನ್ನು ನಡೆಯಿಸುತ್ತಿದ್ದಾರೆ, ಎಂಗ್ಲೋ ಇಂಡಿಯನನೊಬ್ಬನು ಜಟ್ಕಾ ಗಾಡಿ ಹೊಡೆಯುತ್ತ ಚೆನ್ನಾಗಿ ದುಡಿಯುತ್ತಿದ್ದಾನೆ, ಕೆಲವರು ಒಂದಾಗಿ, ಮಾರ್ಕೇಟಿನಲ್ಲಿ ಪಲ್ಯಕಾಯಿಗಳ ವ್ಯಾಪಾರ ಮಾಡುತ್ತಿದ್ದಾರೆ, ಹರಿಜನ ಶಾಲಾ ಉಪಾಧ್ಯಾಯರೊಬ್ಬ ಗ್ರೆಜ್ಯುವೇಟರು ಬೂಟ್ಸುಗಳಿಗೆ ಬಣ್ಣ ಹಾಕಿ ಮೆರುಗಿಸುವ ವೃತ್ತಿಯಿಂದ ಸಂಪಾದನೆ ಮಾಡುತಿದ್ದಾನೆ ಇಷ್ಟೆಲ್ಲವೂ ಕಳೆದ ವಾರದ ವಿಚಿತ್ರ ಸುದ್ದಿಗಳಲ್ಲಿ, ನಿಜವಾದುವು ಅಶಿಕ್ಷಿತರು ಸಾಮಾನ್ಯವಾಗಿ ಕೈಯಿಕ್ಕುವ ಕೆಲಸಗಳನ್ನು ಕೈಗೊಂಡರೆ, ಅಶಿಕ್ಷಿತರು ಶಿಕ್ಷಿತರ ಮೇಲೆ ಮುನಿದು ಬೀಳುವ ಸಂಭವಗಳಿಲ್ಲ,-ಏಕೆಂದರೆ, ನಮ್ಮ ಉತ್ತಮ ವಿದ್ಯಾಭ್ಯಾಸದ ಫಲವಾಗಿ ಜೀವನೋಪಾರ್ಜನೆಯ ಪಾಠಗಳನ್ನು ಶಿಕ್ಷಿತರು ಅಶಿಕ್ಷಿತರೆಂಬವರಿಂದಲೇ ಕಲಿತುಕೊಳ್ಳಬೇಕಾಗಿದೆ ಅಶಿಕ್ಷಿತರಿಗೆ ಸಾಮಾನ್ಯ ತಿಳುವಳಿಕೆಯು ಹೆಚ್ಚಾಗುವಂತೆ ಶಿಕ್ಷಿತರು ಪಾಠ ಹೇಳಿ, ಅವರೊಡನೆ ಕಲಿತು, ಅವರಿಂದ ಜೀವನೋಪಾಯಗಳನ್ನು ಕಲಿತುಕೊಳ್ಳುವ ವಿನಿಮಯವು ಈಗ ಅತ್ಯಾವಶ್ಯಕವಾಗಿದೆ

ವಿದೇಶಗಳಲ್ಲಿ ಭಾರತೀಯರು

ಪ್ರತಿವಾರವೂ ಪ್ರಕಟವಾಗ ವರ್ತಮಾನಗಳಲ್ಲಿ ಹೆಚ್ಚಿನ ಮಹತ್ವದ್ದೊಂದು ಕಳೆದವಾರ ಪ್ರಕಟವಾದುದೇ ಮಾತವಲ್ಲದೆ ಎಲ್ಲೆಲ್ಲಿಯೂ ಕಳವಳವನ್ನೋ ಚಳವಳವನ್ನೋ ಉಂಟುಮಾಡಿದೆ ಇಂಡಿಯಾ ಸರಕಾರದ ಏಜಂಟ ಜನರಲ್ ರಾಗಿ ದಕ್ಷಿಣಾಫ್ರಿಕದಲ್ಲಿರುವ ಸರ್ ಸಯ್ಯದ್ ರಾಜಾ ಅಲಿಯವರು (ಮುಸಲ್ಮಾನ ಮಾತ್ರ) ಶ್ರೀಮತಿ ವಿ ಸಾಮಿ ಎಂಬ ಕಂಟ್ರಿಯ ಹಿಂದೂಗೃಹಸ್ಥನೊಬ್ಬನ (ಶ್ರೀಮಂತನ) ಮಗಳನ್ನು ವಿವಾಹವಾದರು ಇಂತಹ ಮಹಾಧಿಕಾರಿ ವರನೊಡನೆ ದಕ್ಷಿಣಾಫ್ರಿಕದಲ್ಲಿ ಹಿಂದೂ ಕನ್ಯೆಯು ವಿವಾಹವಾದುದು ಇದೇ ಮೊದಲು. ಇದಾಗದಂತೆ ಬಹಳ ಪ್ರಯತ್ನ ಮಾಡಿದವರೂ ಇರುವರು ರಿಜಿಸ್ಟ್ರೇಶನ್ ವಿವಾಹವಾಗಿಯೇ ಹೋಯಿತು ಕನ್ಯೆಯು ಮುಸ್ಲಿಮ ಮತವನ್ನು ಅಂಗೀಕರಿಸಿದುದಿಲ್ಲ ಶೇಕ್ಸಪಿಯರಿನ ವಚನಗಳಲ್ಲಿ 'ಫಾಶಿಶಿಕ್ಷೆ ಮತ್ತು ಮದುವೆ ಇವೆರಡು ಬೃಹಸ್ಪತಿಯಂತೆ ನಡೆವುವು" ಎಂದಿರುವುದನ್ನು ಮನ್ನಿಸಲೇ ಬೇಕಾಗುತ್ತದೆ

ಹಿಂದೀ ಚಿತ್ರಗಳು

ಎಷ್ಟೆಂದರೂ ಪರದೇಶೀಯ ಅನುಕರಣ ಮಾತ್ರವೇ ಆಗುತ್ತವೆ ಹೊರತು, ಅಚ್ಚ ದೇಶೀಯತೆಯನ್ನು ಕಳೆದುಕೊಳ್ಳುತ್ತ ಬರುವುದು ಶೋಚನೀಯವಾಗಿದೆ ಎಂದು ಹಾಲಿವುಡ್ಡಿನಲ್ಲಿ ಫಿಲ್ಮ್‌ಗಳನ್ನು ತಯಾರಿಸುವವರೇ ಟೀಕಿಸುತ್ತಾರೆ "ಅಚ್ಚ ಜಾತೀಯ ಚಿತ್ರಗಳನ್ನು ಹೊರಡಿಸುವ ಬದಲು, ನಕಲೀ ಅಮೇರಿಕನ್ ಅಥವಾ ಯುರೋಪಿಯನ್ ಚಿತ್ರಗಳನ್ನವರು ಹಿಂದೂದೇಶದಲ್ಲಿಯೂ ರಚಿಸುತ್ತಿರುವುದು ನಾಚಿಕೆಗೇಡಾಗಿದೆ ನಾವು ೧೮೯೦ರಲ್ಲಿ ಎಂತಹ ಚಿತ್ರಗಳನ್ನು ಪ್ರಕಟಿಸುತಿದ್ದೆವೋ ಅಂಥವನ್ನು ಈಗ ಹಿಂದೂದೇಶದಲ್ಲಿ ಪ್ರಕಟಿಸುವರೆ ಅಭಿನಯಿಸುತ್ತಿದ್ದಾರೆ ಅಂಥ ಚಿತ್ರಗಳಲ್ಲಿ ಹಿಂದೂ ಸ್ವಭಾವ, ಸಂಸ್ಕೃತಿ, ವಾತಾವರಣ ಒಂದೂ ಇಲ್ಲವಾಗಿದೆ " ಎಲ್ಲವುಗಳಲ್ಲೂ ಸ್ವದೇಶಿಯತೆ ಉತ್ತಮವಾದರೆ ಚಿತ್ರಗಳಲ್ಲಿ ಏತಕ್ಕೆ ಕೂಡದು? ಅಥವಾ ಅಮೇರಿಕದ ರೀತಿಯ ಫಿಲ್ಮುಗಳಿಗಾಗಿ ಅವನ್ನೆ ತರಿಸಿ ನೋಡೋಣ, ನಮ್ಮವೆಂಬವೂ ಜಾತಿಗೆಟ್ಟ ಚಿತ್ರಗಳಾಗಿ ಪ್ರದರ್ಶನ ಹೊಂದಬೇಕೇ?

ಮಂಗಳೂರು.

ಸಿಟಿ ಆರ್ಯಸಮಾಜದಲ್ಲಿ ಭಾಷಣ.

ಇದೇ ಬರುವ ಫೆಬ್ರವರಿ ತಿಂಗಳ ೩ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮-೩೦ಕ್ಕೆ ಇಲ್ಲಿಯ ಸಿಟಿ ಆರ್ಯಸಮಾಜ ಮಂದಿರದಲ್ಲಿ "ಭೂತ" ಎಂಬ ಕುರಿತು ಪ್ರಾಕಟಣೆಗಳಾಗುವವು. ಬಂಧುಭಗಿನಿಯರೆಲ್ಲರೂ ತಪ್ಪದೆ ಸಮಯದಲ್ಲಿ ಬಂದು ಸಹಕರಿಸಬೇಕಾಗಿ ವಿನಂತಿ ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ಮಂಗಳೂರಿನ ದಿ ಕೆನರಾ ಹೋಸ್ಟೆಲ್ ಯೂನಿಯನಿನ ವರ್ಧಂತಿ ಉತ್ಸವವು ಇದೇ ತಾ. ೧-೨-೩೬ನೇ ಶನಿವಾರ ಸಂಜೆ ೬-೩೦ ಗಂಟೆಗೆ ಡಾ| ರಾಮರಾವ್ ಬಿ. ಎ. ಎಂ. ಬಿ. ಸಿ. ಎಂ. ಇವರ ಅಧ್ಯಕ್ಷತೆಯಲ್ಲಿ ಹೋಸ್ಟೆಲ್ ಆವಾರದಲ್ಲಿ ಜರಗಲಿರುವುದು.

ದಿವಂಗತ ಚಕ್ರವರ್ತಿಯವರ ಶವಸಂಸ್ಕಾರ.

ಇಂದು ದಿವಂಗತ ಚಕ್ರವರ್ತಿಗಳ ಶವಸಂಸ್ಕಾರದ ದಿನವಾದುದರಿಂದ ಇಲ್ಲಿನ ಸರಕಾರಿ ಆಫೀಸುಗಳೂ ಅಲ್ಲದೆ ಸಾರ್ವಜನಿಕ ಕಾರ್ಯಾಲಯ, ವ್ಯಾಪಾರ ಸಂಸ್ಥೆಗಳಾದಿಯಾಗಿಯೂ ಮುಚ್ಚಲ್ಪಟ್ಟು ದಿವಂಗತರ ಕುರಿತು ರಾಜಭಕ್ತಿಯನ್ನು ಪ್ರದರ್ಶಿಸಲಾಗಿದೆ.

ಮುದ್ದಣ್ಣ ಕವಿ ಸ್ಮಾರಕ.

ಕಳೆದ ತಾ. ೨೫ರಲ್ಲಿ ಶ್ರೀ ಎಂ. ಎನ್. ಕಾಮತರ ಅಧ್ಯಕ್ಷತೆಯಲ್ಲಿ ನಮ್ಮ ಜಿಲ್ಲೆಯ ಕನ್ನಡ ಸಾಹಿತ್ಯಕ್ಕೆ ಆಧುನಿಕತೆಯನ್ನು ಕೊಡುವುದರಲ್ಲಿ ಮೊದಲಿಗನಾದ ಮಹಾಕವಿ ಮುದ್ದಣ್ಣನ ಸ್ಮಾರಕ ವಿಚಾರಕ್ಕಾಗಿ ಒಂದು ಕೂಟವು ಜರಗಿ ಮುದ್ದಣ್ಣ ಕವಿಯ ಜೀವನ ಚರಿತ್ರೆಯ ಮತ್ತು ಗ್ರಂಥರಚನೆಯ ವಿಮರ್ಶಾತ್ಮಕವಾದ ಲೇಖನಗಳು ಪ್ರಕಟವಾಗುವಂತೆ ಬೇಕಾದ ನಾನಾ ಅನುಭವಗಳನ್ನು [illegible] ಪ್ರತಿವರ್ಷವೂ ಮುದ್ದಣ್ಣ ಸ್ಮಾರಕವಾಗಿ [illegible] ಪ್ರಬಂಧವನ್ನು ಕೋಲೇಜ್ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಂದ ಬರೆದು ಅವುಗಳಲ್ಲಿ ಉತ್ತಮ ಬರಹಗಳಿಗೆ ಒಂದೊಂದು ಪಾರಿತೋಷಕವನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕಾಗಿಯೂ ಒಂದು ಸಮಿತಿಯು ನಿರ್ಧರಿಸಿತು.

ಮಹಿಳಾಸಭಾ ಮಂಗಳೂರು.

ಮಹಿಳಾ ಸಭಾ ಮಂಗಳೂರು ಇದರ ಸದಸ್ಯರ ಜನವರಿ ತಾ. ೨೭ನೇ ಸೋಮವಾರ ಬೇಗಮ್ [illegible] ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಜರಗಿಸಿದರು. [illegible] ಈ ಕೆಳಗಿನ ಠರಾವನ್ನು ಮಂಜೂರು ಮಾಡಿದರು. ಈ ಸಂಘದ ಸದಸ್ಯರು ನಮ್ಮ ಪ್ರೀತಿಪಾತ್ರರಾದ ಚಕ್ರವರ್ತಿಗಳ [illegible] ಅಗಲುವಿಕೆಯ [illegible] ಎಂಬುದನ್ನು [illegible] ಚಕ್ರವರ್ತಿಗಳವರಿಗೆ ತಿಳಿಸ ಬೇಕು.

ಡಿ. ಸಿ. ಮಿಶ್ಶನ್ ಸ್ಥಾಪಕರ ದಿನಾಚರಣೆ.

ಡಿ. ಸಿ. ಮಿಶ್ಶನಿನ ಸ್ಥಾಪಕರ ದಿನಾಚರಣೆಯು ಇದೇ ಜನವರಿ ತಾ. ೩೧-೧-೩೬ನೇ ಶುಕ್ರವಾರ ಅಪರಾಹ್ನ ಗಂಟೆ ೫-೩೦ಕ್ಕೆ ಮಿಶ್ಶನಿನ ಹಾಲಿನಲ್ಲಿ ಜರಗಲಿರುವುದು. ಗಂಟೆ ೭ಕ್ಕೆ ಸ್ವಾಮಿ ಆನಂದರವರ ಬಂಗಲೆಯ ದಕ್ಷಿಣದ ತಿಟ್ಟಿನಲ್ಲಿಯೂ (camp fire) ಇರುವುದು. ಎಲ್ಲರಿಗೂ ಸ್ವಾಗತವಿದೆ.

ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವ.

ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದ ಉತ್ಸವವು ಬಹಳ ವಿಜೃಂಭಣೆಯಿಂದ ಜರಗುತ್ತಲಿದೆ. ಈ ವರುಷ ದೇಶದ ಎಲ್ಲ ಕಡೆಗಳಿಂದಲೂ ಜನರು ಧಾವಿಸಿ ಬಂದಿರುವರು. ಪರಸ್ಥಳದಿಂದ ಜನಸ್ತೋಮದಿಂದ ತಿಕ್ಕಿರಿದು ಹೋಗಿದೆ. ಶ್ರೀ ಕಾಶೀ ಮಠಾಧಿಪತಿಗಳಾದ ಶ್ರೀ ಸುಕೃತೀಂದ್ರ ಶ್ರೀಪಾದಂಗಳವರು ಮಂಗಳೂರು ರಥೋತ್ಸವಕ್ಕಾಗಿ ಕಲ್ಯಾಣಪುರದಿಂದ ಇಲ್ಲಿಗೆ ಬಂದಿವೆ. ಇವರ ಕಾರಣವಾಗಿದೆ ಪ್ರಸಿದ್ಧ ಬೇಂಡ್ ವಾದ್ಯಗಾರರನ್ನೂ ಚಂಡೆಯ ಕೂಟವನ್ನೂ ಹೊರಬಿಟ್ಟ ವಿಧಿಸಿದ್ದಾರೆ. ಮಂಗಳೂರಿನ ಇತಿಹಾಸದಲ್ಲಿ ಇದೊಂದು ವಿಶೇಷ ಘಟನೆ [illegible] ರಥೋತ್ಸವದ [illegible] ದೇವಸ್ಥಾನದ [illegible] ಆವಶ್ಯಕವಾದವು ಎಂದು ತಿಳಿದುಬರುತ್ತದೆ.

ಬಾಂಧವಬಳಗ ಮಂಗಳೂರು.

ಇದರ ಎಂಟನೇ ವಾರ್ಷಿಕೋತ್ಸವವು ಬಹಳ ಸಂಭ್ರಮದಿಂದ ಜನವರಿ ತಾ. ೨೬ನೇ ಆದಿತ್ಯವಾರ ಕೆನರಾ ಹೈಸ್ಕೂಲಿನ ಭುವನೇಂದ್ರ ಹೋಲಿನಲ್ಲಿ ಸೆಂಟ್ ಆಗ್ನೆಸ್ ಕಾಲೇಜಿನ ಕನ್ನಡ ಪಂಡಿತರಾದ ವಿದ್ವಾನ್ ಕಡಂಗೋಡ್ಲು ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ಅಪರಾಹ್ನ ೪-೩೦ಗಂಟೆಗೆ ಜರಗಿತು. ಫಲಾಹಾರದ ನಂತರ ವರದಿ ವಾಚನ, ಬಹುಮಾನ ಹಂಚೋಣವಾಯಿತು. ಸಾಹಿತ್ಯಗಳಲ್ಲಿ ಕೆಲವು ದುಃಖ ಕವನಗಳನ್ನು ಹೇಳಿ ಶ್ರೀ ಪಡುಕೋಣೆ ರಮಾನಂದ ರಾಯರೂ, ಬಿ. ನಾರಾಯಣ ಭಟ್ಟರೂ ಸಭಿಕರಿಗೆ ಓದಿ ಹೇಳಿದರು. ಅನಂತರ ಸಾಹಿತ್ಯದ ಕುರಿತು ಶ್ರೀ ಎಮ್. ಎನ್. ಕಾಮತರು ಸಮಯೋಚಿತವಾಗಿ ಚಿಕ್ಕ ಭಾಷಣ ಮಾಡಿದರು. ಇದಾದ ಮೇಲೆ ಶ್ರೀಯುತ ಹೊಳ್ಳರು ಕೆಲವು ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿದರು. ಕಡೆಗೆ ಅಧ್ಯಕ್ಷರು ಕಾಲೋಚಿತ ಭಾಷಣವನ್ನು ಮಾಡಿದ ನಂತರ ರಾಷ್ಟ್ರಗೀತದೊಂದಿಗೆ ಸಭೆಯು ಮುಕ್ತಾಯವಾಯಿತು.

ತಾಲೂಕುಗಳಿಂದ

ಕಲ್ಲಡ್ಕ:— ಈ ಸೆಂಟರಿನ ಅಧ್ಯಾಪಕರ ಸಂಘದ ಮಾಸಿಕ ಸಭೆಯು ಜನವರಿ ತಾ. ೧೮ರಲ್ಲು ಅಪರಾಹ್ನ ಗಂಟೆ ೨-೩೦ಕ್ಕೆ ನರಹರಿಪರ್ವತದಲ್ಲಿ ಶಿರಾಡಿ ಶಾಲಾ ಅಧ್ಯಾಪಕ ಪಕ್ಕಣ್ಣ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಕಲ್ಲಡ್ಕ ಶಾಲಾ ಅಧ್ಯಾಪಕ [illegible] ಸೌಂದರ್ಯ [illegible] ಭಾಗಗಳ [illegible] ಮಾಡಿದರು. ಸಂಘದ [illegible] ಶ್ರೀ ರಾಮಣ್ಣ ಶೆಟ್ಟರೂ [illegible] ಮುಂದಿನ ಸಭೆಯು ಫೆಬ್ರವರಿ [illegible] ನಂದಾವರ ದೇವಸ್ಥಾನದಲ್ಲಿ ಜರಗಿಸುವದೆಂದು ನಿಶ್ಚಯವಾಗಿದೆ.

ಕಲ್ಲಡ್ಕ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ [illegible] ವಿದ್ಯಾರ್ಥಿಗಳ [illegible] ಸಮಿತಿಯು [illegible] ಈ ಸಂಘದ ಸ್ಥಳೀಯ [illegible] ಅಧ್ಯಕ್ಷರು ತಿಳಿಸುತ್ತಾರೆ.

ಕಲ್ಲಡ್ಕ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಈ ವರ್ಷದ ವಾರ್ಷಿಕ ವರ್ಧಂತಿ ಉತ್ಸವವು ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಜರಗಲಿಕ್ಕಿರುವದೆಂದು ಮುಖ್ಯೋಪಾಧ್ಯಾಯರು ತಿಳಿಸುತ್ತಾರೆ.

ಪಣಂಬೂರು— ಉತ್ಸವದ ಸಮಯ ಪಳ್ಳಿ [illegible] ಕಲಾ ಶೋಭಿಪರರಾದ ಬಿ. ಗುಂಡುರಾವ್ [illegible] ಉದೆ [illegible] ಇವರ [illegible] ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಒಂದು ಯಕ್ಷಗಾನ ನಾಟಕವನ್ನು ಆಡಲಿದ್ದಾರೆ. [illegible]

ಪುತ್ತೂರು— ಬೋರ್ಡ್ ಹೈಸ್ಕೂಲಿನ ವಾರ್ಷಿಕ ವರ್ಧಂತಿಯನ್ನು ಇದೇ ಬರುವ ಫೆಬ್ರವರಿ ತಿಂಗಳ ತಾ. ೯ನೇ ಆದಿತ್ಯವಾರ ಸಾಯಂಕಾಲ ಗಂಟೆ ೫ಕ್ಕೆ ಜರಗಿಸಲು ನಿಶ್ಚಯಿಸಲಾಗಿದೆ. ಮೋಡರ್ನ್ ಮಿಡ್ [illegible] ಬಿ. ಎ. (ಆನರ್ಸ್) ಇವರು ಅಧ್ಯಕ್ಷಸ್ಥಾನವನ್ನು [illegible] ಒಪ್ಪಿರುತ್ತಾರೆ. [illegible] ವಿದ್ಯಾರ್ಥಿಗಳ [illegible] ಅನುಮತಿ [illegible] ದೀವರ ಶಾಲೆಯ ಮೇಲೆ ಆಧಿಪತ್ಯ [illegible] ಭಾಗಿಗಳಾಗಬೇಕಾಗಿಯೂ ತಕ್ಕ ಸಹಾಯವನ್ನು [illegible] ಯಮಾಡಬೇಕಾಗಿಯೂ ಈ ಮೂಲಕ ಕೇಳಿಕೊಳ್ಳಲಾಗುತ್ತದೆ.

ಮಿತ್ತೂರು— ಸ್ಥಳೀಯ ಬೋರ್ಡ್ ಶಾಲೆಯಲ್ಲಿ ಕಳೆದ ೧೮-೧-೩೬ನೇ ಶನಿವಾರ ದಿನ ಅಪರಾಹ್ನ ೨ ಗಂಟೆಗೆ ಸ್ಥಳೀಯ ಟೀಚರ್ಸ್ ಸೆಂಟರಿನ ೧೯೩೬ನೇ ವರುಷದ ಪ್ರಥಮ ಸಭೆಯು ಸೇಡಿಯಾಪು [illegible] ನಾರಾಯಣ ಜೋಯಿಸರ ಅಧ್ಯಕ್ಷತೆಯಲ್ಲಿ ಜರುಗಿತು.

ಊರವರು ಮತ್ತು ಸದ್ರಿ ಶಾಲಾ ಉಪಾಧ್ಯಾಯರುಗಳು ತಕ್ಕಮಟ್ಟಿನ ಉಪಚಾರದ ಮೂಲಕ ಆತಿಥ್ಯ ಸತ್ಕಾರ ಮಾಡಿದ್ದರು. ೧೮-೧-೩೬ನೇ ರಾತ್ರಿ ಗಂಟೆ ೮ಕ್ಕೆ ತಾಳಮದ್ದಳೆ ಕೂಟವೂ ನಡೆಯಿತು. ಮುಂದಿನ ತಾಳಮದ್ದಳೆ ಕೂಟವು ಬರುವ ತಾ. ೧-೨-೧೯೩೬ನೇ ಶನಿವಾರ ರಾತ್ರಿ ನಡೆಯಲಿಕ್ಕಿರುತ್ತದೆ. ಸರ್ವರಿಗೂ ಸುಸ್ವಾಗತವಿದೆ.

ಕುಂದಾಪುರ ಬೋರ್ಡು ಹೈಸ್ಕೂಲಿನ ಮಾಜಿ ಹೆಡ್ಮಾಸ್ಟರರಾದ ಶ್ರೀಯುತ ಬಂಟ್ವಾಳ ರಘುನಾಥರಾಯರು ತಾ. ೨೬ನೇ ಭಾನುವಾರ ಬೆಳಿಗ್ಗೆ ೮-೩೦ಕ್ಕೆ ಪರಂಧಾಮವನ್ನೈದಿದರು. ಶ್ರೀಯುತರು ಬೋರ್ಡ್ ಹೈಸ್ಕೂಲಿನಲ್ಲಿ ಬಹಳ ಕಾಲದ ವರೆಗೆ ಮುಖ್ಯೋಪಾಧ್ಯಾಯರಾಗಿದ್ದುದು ಮಾತ್ರವಲ್ಲದೆ ಹಲವು ಸಾರ್ವಜನಿಕ ಸಂಸ್ಥೆಗಳಲ್ಲಿ ಮುಂದಾಳಾಗಿ ಕೆಲಸಮಾಡಿ ಯಶಸ್ಸನ್ನು ಪಡೆದಿರುವರು. ಕುಂದಾಪುರದ ಥಿಯೋಸೋಫಿಕಲ್ ಸೊಸೈಟಿಯ ಪ್ರೆಸಿಡೆಂಟರು ಕರ್ನಾಟಕ ಸಾಹಿತ್ಯ ಸಂಘದ ಅಧ್ಯಕ್ಷರು ಒಂದು ಕಾಲದ ಮಾನೇಜಿಂಗ್ ಟ್ರಸ್ಟಿ [illegible] ಆಗಿದ್ದರು. ಉತ್ತಮ ವಾಗ್ಮಿಗಳೆಂದು ಖ್ಯಾತಿ ಪಡೆದಿದ್ದರು. ಅವರ ಮರಣವಾರ್ತೆಯಿಂದ [illegible] ಪುರಕ್ಕೆ ಮಾತ್ರವಲ್ಲದೆ ನಮ್ಮ ಜಿಲ್ಲೆಗೇ ಒಂದು ದೊಡ್ಡ ನಷ್ಟವೆಂದರೆ ಅತಿಶಯೋಕ್ತಿಯಾಗಲಾರದು. ಸ್ಮಶಾನ ಯಾತ್ರೆಯು ಬಹು ಸಂಭ್ರಮದಲ್ಲಿ ಜರಗಿತು. ಸ್ಥಳೀಯ ಆಫೀಸರರೆಲ್ಲರೂ ಬಂದಿದ್ದರಲ್ಲದೆ ಹೈಸ್ಕೂಲು ಪ್ರಯು [illegible] ಶಾಲಾ ವಿದ್ಯಾರ್ಥಿಗಳೂ ಕೂಡಾ ನೆರೆದಿದ್ದರು. ಮೃತರ ಆತ್ಮಕ್ಕೆ ಶಾಂತಿಯುಂಟಾಗಲಿ.

ಇಲ್ಲಿಯ ವಕೀಲರಾದ ಶ್ರೀಯುತ ಬಿ. ಶಿವರಾಮ ಶೆಟ್ಟಿ ಪ್ರತಿಸ್ಪರ್ಧಿಯಿಲ್ಲದೆ ಇತ್ತೀಚಿನ ಡಿ. ಬೋರ್ಡು ಮೆಂಬರನಾಗಿ ಚುನಾವಣೆ ಹೊಂದಿದ ಸಂತೋಷಕ್ಕಾಗಿ ಮುನ್ಸಿಫ್ ಕೋರ್ಟಿನಲ್ಲಿ ಕೋರ್ಟು ಉದ್ಯೋಗಸ್ಥರಿಗೂ ಇತರ ವ ಕೀಲರುಗಳಿಗೂ ಟೀಪಾರ್ಟಿ ಸತ್ಕಾರವನ್ನು ಮಾಡಿದರು.

ಅಖಿಲಭಾರತ-ಕಾಂಗ್ರೆಸ್ ಸುವರ್ಣೋತ್ಸವ ಸಮಾರಂಭ ಮತ್ತು ಸದ್ರಿ ಸಮಾರಂಭದ ಸ್ಮಾರಕಾರ್ಥವಾಗಿ ಕಟ್ಟಿಸುವ ಹರಿಜನ ಹೋಸ್ಟೆಲ್ ಕಟ್ಟೋಣ ವಿಧಿಗೆ ತಾ. ೬-೧೨-೩೫ರಲ್ಲಿ ಸೇರಿದ ಕಮಿಟಿ ಸಭೆಯಲ್ಲಿ ಮಂಜೂರಾದ ಪ್ರಕಾರ ಆಯಾ ಒಟ್ಟಿನ ವಿವರ [illegible] [illegible] ಕಾಂಗ್ರೆಸ್ ಸಂದೇಶವನ್ನು [illegible] [illegible]

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಸಮ್ಬಂಧಪಟ್ಟ ಶ್ರೀ ಪದ್ಮಾವತಿ ದೇವಸ್ಥಾನದಲ್ಲಿ ಹೊಸತಾಗಿ ಕಲ್ಲಿನಿಂದ ಮಾಡಿದ ಶ್ರೀ ಪದ್ಮಾವತಿ ಅಮ್ಮನ ಪ್ರತಿಮೆಯನ್ನು ಶ್ರೀಮತ್ ಕಾಶೀಮಠ ಸಂಸ್ಥಾನದ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರ ದಿವ್ಯ ಕರಕಮಲದಿಂದ ಇದೇ [illegible] ಸಂವತ್ಸರದ ಮಾಘ ಶುದ್ಧ [illegible] ತಾ. ೨೨-೧-೩೬ನೇ ರವಿವಾರ ದಿವಸ ಪ್ರಾತಃಕಾಲ ಘಂಟೆ [illegible] ಒದಗುವ [illegible] ನೋತ್ಸವ ಮತ್ತು ಪ್ರಸಾದ ಪ್ರತಿಷ್ಠೆ ಮಾಡಿಸುವದಾಗಿ ನಿಶ್ಚಯಿಸಿದೆ.

ತಾ. ೨೬-೧-೩೬ನೇ ಆದಿತ್ಯವಾರ ಇಲ್ಲಿ ಸಂಪೂರ್ಣ ಸ್ವಾತಂತ್ರ್ಯ ದಿನವು ಆಚರಿಸಲ್ಪಟ್ಟಿತು. ಬೆಳಿಗ್ಗೆ ೭-೩೦ಕ್ಕೆ ೪೦ ಜನಗಳ ಕಡೆಯಿಂದ ಆರ್ಯಸಮಾಜ ಮಂದಿರದಲ್ಲಿ ಧ್ವಜಾರೋಹಣವು ನೆರವೇರಿತು. ಸಾಯಂಕಾಲ ಪುರಮೆರವಣಿಗೆಯಾಗಿ ಸಾರ್ವಜನಿಕ ಸಭೆ ಸೇರಿ ಸಂಪೂರ್ಣ ಸ್ವಾತಂತ್ರ್ಯದ ಪ್ರತಿಜ್ಞೆಯು ಓದಲ್ಪಟ್ಟು ಮಂಜೂರಾಯಿತು.

ಇಲ್ಲಿಯ ಸತ್ಯಾರ್ಥ ಸಂಘದವರು ತಾ. ೨೫-೧-೩೬ರ ದಿನ ಧರ್ಮರಾಯ ರಾಜಸೂಯ ನಾಟಕವನ್ನಾಡಿ ಬಂದ ಉತ್ಪತ್ತಿಯನ್ನು ಶ್ರೀ ಪದ್ಮಾವತಿ ದೇವಿಯ ಪ್ರತಿಷ್ಠಾಪನೋತ್ಸವದ ಖರ್ಚಿಗೆ ಕೊಟ್ಟರು.

ಸ್ಥಳೀಯ ಆರ್ಯಸಮಾಜದ ಒಬ್ಬ ಸದಸ್ಯರ ಪುತ್ರನ ನಾಮಕರಣ ಸಮಾರಂಭ ಸಂದರ್ಭದಲ್ಲಿ ಇಲ್ಲಿ ಒಂದು ಅಂತರ್ಜಾತೀಯ ಮಿತ್ರ ಭೋಜನವು ನಡೆಯಿತಾಗಿ ತಿಳಿದುಬರುತ್ತದೆ. ಮುಧೋಳಕರು ಈ ಸಂತೋಷಕರ ಶಕ್ತಿ ವರ್ಧಮಾನವಾದುದು.

ದೇವಿ ಮಹಾತ್ಮೆ.

ಪಡುಬಿದ್ರೆಯ ಈಶ್ವರ ದೇವಸ್ಥಾನದ ಸಮೀಪ ಒಂದು ಅಕ್ಕಸಾಲಿಗರ ಮನೆಯ ವಿಧವೆ ಹೆಂಗಸೊಬ್ಬಳ ಮೈಯಲ್ಲಿ ದೇವಿ ದರ್ಶನ ಬಂದು ಅನೇಕ ತರದ ಅದ್ಭುತ ಕೆಲಸಗಳು ನಡೆಯುತ್ತಿರುತ್ತವೆ. ಅವುಗಳ ಕೆಲವನ್ನು ಈ ಕೆಳಗೆ ವಿವರಿಸಿದ್ದೇನೆ.

(೧) ಸದ್ರಿ ಹೆಂಗಸಿಗೆ ಆವೇಶ ಬರುತ್ತಿರುವಾಗ ಸ್ಪಷ್ಟವಾಗಿ ಕಣ್ಣುಗಳಿಂದ ಸಾಧಾರಣ ¼ ರಾಡುಕೆಂಪನ್ನು ಹಾಲು ಬೆಲ್ಲಿಸ್ತದೆ ನಂತರ ಮುಖವು ವಿಕಾರವಾಗಿ ಒಂದು ಭಾಗ ಕಪ್ಪಾಗಿಯೂ ಒಂದು ಭಾಗ ಕೆಂಪು ಮಿಶ್ರವಾಗಿಯೂ ಕಾಣುತ್ತದೆ. ಹಣೆಯಲ್ಲಿ ಚಂದ್ರಾಕಾರವಾದ ಗುರ್ತು ಕಾಣುತ್ತದೆ.

(೨) ಭಕ್ತರು ಸದ್ರಿ ಹೆಂಗಸಿಂದ ಅಲಂಕೃತ ಮಾಡಿದ ದೇವ ಮಂದಿರಕ್ಕೆ ಎದುರಾಗಿ ಭಕ್ತಿಪೂರ್ವಕ ನಮಸ್ಕಾರ ಮಾಡಿದರೆ ಅಲ್ಲಿಯೇ ಪ್ರಸಾದವು ಮೇಲಿಂದ ಬೀಳುತ್ತದೆ. ಹಣ್ಣುಕಾಯಿ ಕೊಟ್ಟಲ್ಲಿ ಅದನ್ನು ಒಡೆಯುವಾಗ್ಗೆ ಕಾಯಿಯ ಒಳಗೆ ತರತರದ ಹೂವು ಕೊಳಲಿಗಳ ಪ್ರಸಾದ ಇವು ಕಣ್ಣಿಗೆ ಬೀಳುತ್ತದೆ.

(೩) ಆವೇಶ ಬರುವಾಗ್ಗೆ ಹೆಂಗಸು ಕೂತುಕೊಂಡು ತನ್ನ ತಲೆಕೂದಲನ್ನು ಬಿಡಿಸಿ ಎಳೆಯುತ್ತಾಳೆ. ಎಳೆದಂತೆ ಕಣ್ಣಿಪ್ಪತ್ತೇನೇ ಒಂದು ಕಟ್ಟು ಕರ್ಪೂರ ಬೀಳುತ್ತದೆ. ಅದನ್ನು ಹೆತ್ತಿ ಆ ಬೆಂಕಿಗೆ ಕೈಯನ್ನು ಹಿಡಿಕೊಂಡು ಬಿಸಿ ಕೂದಲನ್ನು ಎಳೆದಂತೆ ಉಂಟುಮಾಡು ನೆಲಕ್ಕೆ ಹಿಡಿದಾಗ ಬೀಳುತ್ತದೆ. ನಂತರ ಹೂವು ಸ್ಕೆಪ್ತ ಹಾಲಿನಲ್ಲಿ ಬೀಳುತ್ತದೆ. ಭಕ್ತಾದಿಗಳು ಹೇಳಿದ ಪ್ರಶ್ನೆಗಳಿಗೆ ಅಭಯ ಸಿಕ್ಕುತ್ತದೆ. ರೋಗಿಷ್ಠರು ಕೇಳಿಕೊಂಡರೆ ಒಂದು ತರದ ಬೇರುವು ಕಣ್ಣಿಪ್ಪಕ್ಕೇನೇ ದೊರಕುತ್ತದೆ.

(೪) ಒಂದೊಂದು ಸಲ ಎಂಗಲ ಪ್ರತಿಷ್ಠೆಯಾಗಿ ಭಕ್ತರ ಎದುರು ಲಿಂಗದಲ್ಲಿ (ಸಾಲಿಗ್ರಾಮ ಕಲ್ಲಿನಂತಹ ಸಣ್ಣ ದೊಂದು ತಿಂಗಳ ಕಾಲಯಷ್ಟು ಗಾತ್ರದ) ತನ್ನಷ್ಟಕ್ಕೆ ಹಾಲಿನಭಿಷೇಕವಾಗುತ್ತದೆ. ಪ ದಿನದ ಆದೇ ಸ್ವಲ್ಪದಲ್ಲಿ ಸಕ್ಕರೆ ಮಿಶ್ರಿತ ಪ್ರಸಾದವಾಗಿ ಪರಿಣಮಿಸಿ ಭಕ್ತಾದಿಗಳಿಗೆ ಹಂಚಲ್ಪಡುತ್ತದೆ.

ಭಕ್ತಾದಿಗಳು ಹಣ್ಣುಕಾಯಿ ಹೂ ಇತ್ಯಾದಿಗಳನ್ನು ಬಹಳವಾಗಿ ತಂದು ಅರ್ಪಿಸುತ್ತಾರೆ. ಸದ್ರಿ ಹೆಂಗಸಿಗೆ ದಿನೇ ದಿನೇ ಹಣ [illegible] ತೀರ್ಥವು ಕೊಡಲ್ಪಡುತ್ತದೆ. ಹೆಂಗಸು [illegible] ಸ್ವಭಾವ ವಿದ್ದು ಕಪಟ ಇತ್ಯಾದಿಗಳಿಲ್ಲದೆ ಧೈರ್ಯವಾಗಿ ಹೇಳುವದು.

ಜನರು ದಿನ ನಿತ್ಯ ತುಂಬಾ ಬಂದು ನೆರೆದು ಪತ್ರ್ಯೆ ದರ್ಶನ ಪ್ರತಿ ದಿನ ಇರುತ್ತದೆಂದು ಹೇಳಲಾಗುವುದಿಲ್ಲ. ಭಕ್ತಾದಿಗಳು ಭಕ್ತಿಯಿಂದ ಬಂದಲ್ಲಿ ಒಮ್ಮೊಮ್ಮೆ ಬೇಕಾದ ಆ ಸಮಯ ತಾನು ದರ್ಶನ ಕೊಡುತ್ತೇನೆ" ಎಂದು ದೇವಿಯ ಅಪ್ಪಣೆಯಾಗಿರುತ್ತದೆಂದು ತಿಳಿದು ಬರುತ್ತದೆ. ಮಾರ್ಗಶಿರ [illegible] ದೇವಿಯ ಆವೇಶವೆಂದು ತಿಳಿದು ಬರುತ್ತದೆ. ಅಂತಹ ಬಸ್ಸಿಗಳ ವಾಹನದಲ್ಲಿಯೂ ಬಾಡಿಗೆಗಳಲ್ಲಿಯೂ ಪ ಲಾಗುವದು. ಬಂಟ್ವಾಳ ಉಡುಪಿ ಕುಂದಾಪುರ ಗಟ್ಟದ ಮೇಲಿಂದ ಜನರು ಬಹಳವಾಗಿ ನೆರೆದು ತಮ್ಮ ತಮ್ಮ ಕೋರಿಕೆಗಳನ್ನು ಹೇಳಿಕೊಂಡು ಅಭಯ ಪಡೆದು ಹೋಗುತ್ತಿದ್ದಾರೆ. ಕೆಲವು ಪ್ರಮಾಣದ ವಿಷಯಗಳನ್ನು ಮುಂದಕ್ಕೆ ತಿಳಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಕಾಸರಗೋಡು— ಪಾಲೋಕ್ ಬೇಕಲ್ಲದು ಗ್ರಾಮದಲ್ಲಿರುವ ತಿಕ್ಕಿಮಾನಿ ದೈವಗಳ ಮುಖ್ಯಂತೆ ಎಂಬ ಸ್ಥಾನದಲ್ಲಿ ವಾಡಿಕೆಯ ಪ್ರಕಾರ ವರ್ಷಕ್ಕೆ ಆಚರಿಸುವ ನೇಮವು ಇದೇ ಮಕರ ಮಾಸ ೧೩ (ತಾ. ೩೧-೧-೩೬)ನೇ ಗುರುವಾರ ದಿವಸ ಮೊದಲ್ಗೊಂಡು ದೈವಗಳ ಭಂಡಾರ ತೆಗೆದು ಮಕರ ಮಾಸ ೧೭-೧೮-೧೯ ತಾ. ೪-೫-೬ ತಾ. ೭-೨-೩೬ನೇ ದಿವಸಗಳಲ್ಲಿ ತಿಕ್ಕಿಮಾನಿ ಪ್ರಧಾನ ದೇವರುಗಳ ಧೂಮಾವತಿ ಮುಂತಾದ ದೈವಗಳ ನೇಮವು ಜರಗುವದರಿಂದ ಈ ಬಗ್ಗೆ ಮಹಾಜನರು ದಯಮಾಡಿ ಬಂದು ಶ್ರೀಸ್ವಾಮಿ ಅರಸಿನ ಕೃಪೆಯನ್ನು ಸ್ವೀಕರಿಸಿ ನೇಮವನ್ನು ಚೆಂದಗಾಣಿಸುವಂತೆ ಮಾಡಬೇಕಾಗಿ ವಿನಂತಿ.

ವನಿತಾ ವಿಭಾಗ.

ಹೆಂಡತಿಯರಿಗೆ ಕೂಲಿ ಕೊಡಬೇಕೇ?

ಕೆಲವು ದಿವಸಗಳ ಹಿಂದೆ ಅಕ್ಸ್‌ಫರ್ಡ್ ಕೌಂಟಿ ಕೋರ್ಟಿನವರು ಒಂದು ನವೀನ ತೀರ್ಪನ್ನು ಇತ್ತರು. ಒಬ್ಬ ಹೆಂಗಸು ಸಾಲತೀರಿಸುವ ವಿಷಯದಲ್ಲಿ, ಸಾಲವನ್ನೆಲ್ಲಾ ತಿಂಗಳು ತಿಂಗಳಿಗೆ ಸರಿಯಾಗಿ ತಾನೇ ತೀರಿಸಬೇಕೆಂದೂ ತನ್ನ ಗಂಡನು ಏನನ್ನೂ ತೀರಿಸಲಿಲ್ಲವೆಂದೂ ವಾದಿಸಿದಳು. ಈ ವ್ಯಾಜ್ಯದಲ್ಲಿ ಜಡ್ಜಿ ರಾಂಡೋಲ್ಫರು ಈ ಕೆಳಗಿನ ತೀರ್ಪು ಕೊಟ್ಟರು. "ಗಂಡನು ಸ್ವಲ್ಪ ಹಣವನ್ನು ಸಂಸಾರ ನಿರ್ವಹಣಕ್ಕಾಗಿ ಹೆಂಡತಿಯ ಕೈಗೆ ಕೊಟ್ಟರೆ ಅದರಲ್ಲಿ ಉಳಿದ ಹಣವು ಗಂಡನಿಗೆ ಸೇರಬೇಕು" ಎಂದು.

ಇಂತಹ ಹೊಸ ವಿಧದ ತೀರ್ಪು ಈ ವರೆಗೆ ಆಗಿರಲಿಲ್ಲ. ಕೂಡಲೇ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಟೀಕೆಗೆ ಆರಂಭವಾಯಿತು. ಸಂಸಾರಿ ಹೆಂಗಸರಲ್ಲಿ ಬಹಳ ಮಂದಿಯ ಬಳಿ ಒಂದು ಕಾಸು ಕೂಡಾ ಇರದೆ ಎಷ್ಟೋ ತೊಂದರೆ ಪಡುತ್ತಾ ಇದ್ದಾರೆ. ಇವರಿಗೆ ಸ್ವತಂತ್ರವಾಗಿ ಸಂಪಾದಿಸಲಿಕ್ಕೆ ಅವಕಾಶವಿರುವುದಿಲ್ಲ. ಹೆಂಗಸರಲ್ಲಿ ಹೆಚ್ಚು ಮಂದಿ ಅಡಿಗೆ ಮತ್ತು ಗೃಹಕೃತ್ಯಗಳನ್ನು ನೋಡಿಕೊಳ್ಳುವ ಕೆಲಸದಲ್ಲಿಯೇ ತಮ್ಮ ಕಾಲವನ್ನು ಕಳೆಯುತ್ತಾರೆ.

ಕೆಲವು ಸಂಸಾರಗಳಲ್ಲಿ ನೋಡಿದರೆ ಹಣದ ಜಮಾ ಖರ್ಚೆಲ್ಲಾ ಹೆಂಗಸರ ಕೈಯಲ್ಲೇ ಇರುತ್ತದೆ. ಗಂಡಸು ದುಡಿದು ತಂದ ಹಣವೆಲ್ಲಾ ಹೆಂಡತಿಯು ಇಟ್ಟುಕೊಂಡು ಅವನ ಖರ್ಚಿಗೂ ಮನೆಯ ಖರ್ಚಿಗೂ ಸರಿದೂಗಿಸುವಳು. ಇನ್ನೂ ಕೆಲವು ಮನೆಗಳಲ್ಲಿ ಹೆಂಗಸರು ಕಾಲಾಣೆಗೋಸ್ಕರ ಗಂಡಂದಿರನ್ನು ಪ್ರಾರ್ಥಿಸಬೇಕಾಗುತ್ತದೆ. ಕೆಲವು ವರ್ಷಗಳು ಸಂಸಾರಮಾಡಿದ ಮೇಲೆ ಕೂಡ ಹೆಂಡತಿಯ ಹತ್ತಿರ ಗಂಡನು ಕಾಸೂ ಇಡದೆ ಹೋಗಿ ಎಷ್ಟೋ ತೊಂದರೆಗಳುಂಟಾಗಿವೆ. ಇವೆಲ್ಲವನ್ನೂ ನೋಡಿದರೆ ಹೆಂಗಸಿನ ಬಳಿ ಸ್ವಂತ ಹಣವೇನೂ ಇಲ್ಲದೆ ಅವಳು ಒಬ್ಬ ಕೂಲಿ ಹೆಂಗಸಿನ ಮಾತ್ರಕ್ಕೆ ಗಣಿಸಲ್ಪಡುವಳು. ಮನೆಯಲ್ಲಿ ರಾತ್ರಿಹಗಲು ದುಡಿಯುವವಳು ಹೆಂಗಸು. ಆಕೆಯು ಮಾಡುವ ಕೆಲಸಗಳೆಲ್ಲ ಗಂಡಮಕ್ಕಳಿಗಾಗಿಯೇ ಬೇರೆ ಅಲ್ಲ. ಹೆಂಡತಿ ಸತ್ತುಹೋದಾಗ ಮನೆ ಕೆಲಸ ಮಾಡಲಿಕ್ಕೆ, ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಗಂಡನ ಸುಖಾದಿಗಳನ್ನು ನೋಡಿಕೊಳ್ಳಲಿಕ್ಕೆ ಬೇರೊಬ್ಬ ಹೆಂಗಸನ್ನು ಇಡಬೇಕಾದರೆ ಆಕೆಗೆ ಹಣವನ್ನು ಸಂಬಳದ ರೀತ್ಯಾ ಕೊಡಬೇಕಾದದ್ದು. ಆದರೆ ಈ ಕೆಲಸವನ್ನೆಲ್ಲಾ ಮಾಡುವ ಹೆಂಡತಿಗೆ ಮಾತ್ರ ಕೂಲಿ ಕೊಡಬೇಕಾಗಿಲ್ಲ. ಇದು ಆಶ್ಚರ್ಯವಲ್ಲವೇ?

ಓಲ್ಡ್‌ಫೀಲ್ಡ್ ಇಂದುಮತಿಯಾದಳು.

ಲಾಹೋರಿನಲ್ಲಿ ಪ್ರಸಿದ್ಧ ಕಲಾವತಿಯಾದ ಮಿಸ್ ನೋರಾ ಓಲ್ಡ್‌ಫೀಲ್ಡ್ ಎಂಬ ಯುವತಿಯು ಆರ್ಯ ಸಮಾಜದ ಅನುಯಾಯಿಗಳ ಮತ್ತು ಹಿಂದೂಗಳ ಎದುರಿನಲ್ಲಿ ಹಿಂದೂಧರ್ಮವನ್ನು ಸ್ವೀಕರಿಸಿ ಮಿಸ್ ಇಂದುಮತಿ ನಾಮಧಾರಿಣಿಯಾದಳು. ಧರ್ಮಾಂತರದ ಮೊದಲು ಆಕೆ ಮೂರು ದಿನಗಳ ಕಟ್ಟು ಉಪವಾಸ ಮಾಡಿದಳು.

ಹೆಂಗಸರ ಈಗಿನ ಪ್ರಶ್ನೆಗಳು,

(ನಿಜಾಂ ರಾಜ್ಯದ ೪ನೇ ಆಂಧ್ರಮಹಿಳಾ ಸಭೆಯ ಸ್ವಾಗತಾಧ್ಯಕ್ಷರಾದ ಶ್ರೀಮತಿ ರಾಧಾಬಾಯಿಯವರ ಭಾಷಣ ಸಾರಾಂಶ)

"ಬಲವೇ ನ್ಯಾಯ" ಎಂಬುದು ಸಧ್ಯದ ರೂಢಿಯಾಗಿದೆ. ಬಲವಿದ್ದವರು ನ್ಯಾಯಾನ್ಯಾಯಗಳಿಗೆ ಕಣ್ಣು ಮುಚ್ಚಿರುವುದನ್ನು ನೋಡಿದರೆ, ಶಾಂತಿಸಹನಾ ಮಾರ್ಗಗಳು ಸಧ್ಯದಲ್ಲಿ ಪ್ರಯೋಜನವಿಲ್ಲದ ಹಾಗೆ ತೋರುತ್ತದೆ. ಗಂಡಸರೂ ಹೆಂಗಸರೂ ಇಬ್ಬರೂ ಸಂಘದ ಸರಿಸಮಾನ ಅಂಶಗಳು. ಒಬ್ಬರನ್ನು ಬಿಟ್ಟು ಒಬ್ಬರು ಇರಲಾರರು. ಇವರಿಬ್ಬರಿಗಿರುವ ಸಂಬಂಧವನ್ನು ಹರಿದುಹಾಕುವುದೆಂದರೆ ಅಸಾಧ್ಯದ ಮಾತು. ಆದರೆ ಗಂಡಸು ತಾನೇ ದೊಡ್ಡವನೆಂದೂ ತನ್ನದೇ ಹೆಚ್ಚು ಹಕ್ಕೆಂದೂ ಹಾರುವುದು ನೋಡಿದರೆ ಹೆಂಗಸಿನ ಇಂದಿನ ಮಾರ್ಗದಲ್ಲಿ ಯಾವುದೋ ಬಲವತ್ತರವಾದ ಲೋಪವಿದೆಯೆಂದು ಕಾಣುವುದು.

ಯಾವ ಪುರಾಣದಲ್ಲಿ ನೋಡಲಿ, ಸ್ತ್ರೀಜಾತಿಗೆ ಹೆಚ್ಚಿನ ಗೌರವ, ಸ್ತ್ರೀಯರ ಪ್ರಾಮುಖ್ಯತೆಯನ್ನು ಎತ್ತಿರುವುದಕ್ಕಾಗಿ ದೇವದೇವತೆಗಳನ್ನು ಸದಾ ಗೌರೀ ಶಂಕರ, ಲಕ್ಷ್ಮೀನಾರಾಯಣ, ರತಿಮನ್ಮಥ ಇತ್ಯಾದಿಯಾಗಿ ಕರೆಯುತ್ತೇವೆ ಹೊರತು, ಶಂಕರಗೌರಿ ಎಂದು ಮೊದಲಾಗಿ ಕರೆಯುವುದಿಲ್ಲ. ಅಲ್ಲದೆ ವಿದ್ಯಾದೇವತೆ, ಸ್ತ್ರೀ ಭಾಗ್ಯದೇವತೆ ಸ್ತ್ರೀ, ಪರಿಪೂರ್ಣ ಭೋಗಾದಿಗಳನ್ನು ಕೊಡುವವಳು ಸ್ತ್ರೀ. ಹೀಗೆ ಸ್ತ್ರೀಯರೇ ಸರ್ವವಿಧದಲ್ಲಿಯೂ ಅಧಿಕ ಶ್ರೇಷ್ಠರೆಂಬುದಕ್ಕೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಈಗಿನ ಪ್ರಪಂಚದಲ್ಲಿ ವಸ್ತುತಃ ಸ್ತ್ರೀಯರು ಪುರುಷರ ಭೋಗ್ಯವಸ್ತುಗಳಾಗಿ ಮಾತ್ರವೇ ಸೃಷ್ಟಿಸಲಾಗಿವೆಯೆಂದು ಪುರುಷರು ತಿಳಿಯುತ್ತಾರೆ. ಆದಾಗ್ಯೂ ಪ್ರಪಂಚದಲ್ಲಿ ಕೆಲವರು ಸ್ತ್ರೀಯರಿಗೆ ಬಹು ದೊಡ್ಡ ಗೌರವಪದವಿಯನ್ನು ಕೊಡುತ್ತಾರೆ. ಸ್ತ್ರೀಯರ ಶಕ್ತಿ, ವೀರ ಮಾತೃತ್ವ, ಗೃಹಲಕ್ಷ್ಮೀತ್ವಗಳನ್ನು ಕುರಿತು ಕವಿತೆಗಳನ್ನು ಕಟ್ಟಿ ಪ್ರಬಂಧಗಳನ್ನು ಬರೆಯುವರು.

ನಿಜಸ್ಥಿತಿಯನ್ನು ನೋಡಿದರೆ ಈ ಕವಿತೆಗಳ ವಿಷಯ ಮಿಥ್ಯಾಮೃತದ ರಹಸ್ಯವು ಕಾಣದೆ ಇರದು. ಸ್ತ್ರೀಯರಿಗೆ ಸ್ವಾತಂತ್ರ್ಯವಿಚಾರಾದಿಗಳು ಇರಬೇಕೆಂದು ಹೇಳುವರು. ಆದರೆ ಅವರ ಶಿಕ್ಷಣಕ್ಕೆ ಗಂಡಸರು ಗಮನಕೊಡುತ್ತಿಲ್ಲ. ಅಲ್ಲದೆ ಅನುಕೂಲಕ್ಕಿಂತಲೂ ಅನೇಕ ಕಡೆ ಪ್ರತಿಕೂಲರೇ ಆಗಿದ್ದಾರೆ. ಅಂತೂ ಸ್ತ್ರೀಯರನ್ನು ಮಾನಸಿಕವಾಗಿ, ಶಾರೀರಿಕವಾಗಿ ಆರ್ಥಿಕವಾಗಿ ದೊಡ್ಡ ಸೊನ್ನೆಯನ್ನಾಗಿ ಮಾಡಿದ್ದಾರೆ. ಮತ್ತೆ ಹೆಂಗಸನ್ನು "ಚಪ್ಪಲಿಯ ಕೆಳಗಿನ ಚೇಳಿನ್ನರದ ಹಾಗೆ ಅರಿಯಬೇಕು" ಎನ್ನುವರೆಷ್ಟೋ ಮಹಾತ್ಮರು.

ಜಗತ್ತಿನ ಸ್ತ್ರೀಯರೆಲ್ಲರೂ ಸ್ವಾತಂತ್ರ್ಯೋಪಾಸನೆ ಮಾಡಹತ್ತಿದ್ದಾರೆ. ಅವರ ಕಾರ್ಯಗಳಿಗನುಸಾರವಾದ ಫಲಗಳೂ ದೊರೆಯುತ್ತಿವೆ. ರಷ್ಯದಲ್ಲಿ ಕಾರ್ಮಿಕರ ಕ್ರಾಂತಿಯನ್ನುಂಟುಮಾಡಿ ಕಾರ್ಮಿಕರ ಪ್ರಭುತ್ವವನ್ನು ಉಂಟುಮಾಡಿರುವ ಲೆನಿನನು ಸಂಘದಲ್ಲಿ ಸ್ತ್ರೀಯ ಸ್ಥಾನವನ್ನು ಕುರಿತು ಒಂದೇ ವಾಕ್ಯವನ್ನು ಹೇಳಿದ್ದಾನೆ– "ಅಡುಗೆ ಮಾಡುವ ಪ್ರತಿ ಹೆಂಗಸೂ ಆಳಲಿಕ್ಕೆ ಕಲಿಯಬೇಕು" ಎಂದು. ಟರ್ಕಿಯಲ್ಲಿ ಕೆಲವು ವರುಷಗಳ ಹಿಂದೆ ಬುರುಕಾದಲ್ಲಿದ್ದ ಹೆಂಗಸರು ಕಮಲ್ ಪಾಷಾರವರ ಪ್ರಭುತ್ವದಲ್ಲಿ ಯೂರೋಪಿನ ಎಲ್ಲ ಜನಾಂಗಗಳ ಹೆಂಗಸರಿಗಿಂತಲೂ ಹೆಚ್ಚು ಹಕ್ಕುಗಳನ್ನು ಪಡೆದಿದ್ದಾರೆ. ಹೆಂಗಸು ಪೋಲೀಸ್, ಹೆಂಗಸು ಸೈನಿಕರನ್ನು ಸಹ ಸಾಮಾನ್ಯವಾಗಿ ಕಾಣಬಹುದು.

ಈ ದೇಶಗಳ ಹೆಂಗಸರೊಂದಿಗೆ ಹಿಂದೀ ಹೆಂಗಸರನ್ನು ಹೋಲಿಸುವದೆಂದರೆ ನಾವು ಬಹಳ ಪೆಚ್ಚಾಗಿ ಕಾಣುವೆವು. ನಮ್ಮ ಹೀನ ಸ್ಥಿತಿಗೆ ನಮ್ಮಲ್ಲಿರುವ ದುರಾಚಾರಗಳೇ ಕಾರಣ. ಇಂದಿನ ವಿಚಾರಸ್ಥ ಹೆಂಗಸರ ಮುಂದಿರುವ ಕಠಿಣವಾದ ಪ್ರಶ್ನೆಗಳೆಂದರೆ ಮೂರು. ಬಾಲ್ಯ ವಿವಾಹ ವಿಧವಾ ಸೂಳೆಯರ ಪ್ರಶ್ನೆ. ಶಾರದಾ ಕಾಯಿದೆಯು ಬ್ರಿಟಿಷ ಪ್ರಾಂತ್ಯಗಳಲ್ಲಿ ರೂಢಿಯಲ್ಲಿದ್ದರೂ ಬಾಲ್ಯವಿವಾಹವು ಕಡಿಮೆಯಾಗಿಲ್ಲ. ವಿಧವಾ ವಿವಾಹವು ಪಾಪ ವಿರುದ್ಧವಂತೆ. ಇನ್ನು ವ್ಯಭಿಚಾರದ ವಿಷಯ. ಒಂದೆರಡು ಸಂಸ್ಥಾನಗಳು ವ್ಯಭಿಚಾರ ನಿರೋಧದ ಕಾನೂನುಗಳನ್ನು ಮಾಡಲೆತ್ನಿಸಿದರೂ ಆ ಕಾನೂನು ಜಾರಿಯಲ್ಲಿ ಬಂದು ಅಂಥ ಹೆಂಗಸರ ಮುಂದಿನ ಗತಿ ಏನು? ಎಂಬುದು ಸ್ವಲ್ಪವೂ ವಿಶದವಾಗಿಲ್ಲ. ವ್ಯಭಿಚಾರವು ನಿರ್ಮೂಲವಾಗಬೇಕು. ಆ ವೃತ್ತಿಯಲ್ಲಿದ್ದ ಹೆಂಗಸರಿಗೆ ಬೇರೆ ಜೀವನೋಪಾಯ ಸಿಗುವ ವರೆಗೆ ಅದು ಬರೀ ಕಾನೂನಿನಿಂದ ಹೋಗುವುದು ಸಾಧ್ಯವೇ?

ಜಪಾನಿಯ ತರುಣಿಯರ ವಿಷಯ ಕೆಲವು ನೋಟಗಳು.

ಕೆಲಸಕ್ಕೆ ಕೊತ್ತುಗಳೇ ಸಿಗುವುದಿಲ್ಲ.

ಜಪಾನಿನಲ್ಲಿ ದಾಸಿಯರು ಸಿಗುವುದಿಲ್ಲವೆಂದು ಸಿರಿವಂತರ ಬೊಬ್ಬಾಳಿಕೆಯು ಹೆಚ್ಚಾಗುತ್ತಿದೆ. ಇದರ ಕಾರಣವೇನೆಂದು ಜಪಾನನ್ನು ಸಂದರ್ಶಿಸುವವನಿಗೆ ಸರಿಯಾಗಿ ಖಚಿತವಾಗದಿರದು. ಜಪಾನಿನಲ್ಲಿ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಗಳು ಈಗ ಬಹಳ ಹೆಚ್ಚಿವೆ. ಈ ಕೆಲಸಗಾರರು ಮನೆಕೆಲಸಕ್ಕಿಂತಲೂ ಈ ಕಾರ್ಖಾನೆಗಳ ಕೆಲಸವು ಲಾಭದಾಯಕವಾದುವುಗಳು ಎಂದು ಮನಗಂಡು ಹೆಚ್ಚಾಗಿ ಕಾರ್ಖಾನೆಗಳಿಗೆನೇ ಪದಾರ್ಪಣಮಾಡಿರುತ್ತಾರೆ. ಒಬ್ಬೊಬ್ಬರು ತಿಂಗಳಿಗೆ ೧೩೦ ಯೆನ್ನುಗಳನ್ನು ಸಂಪಾದಿಸಿದ್ದು ಇದೆ. ಇದರಿಂದ ಜಪಾನಿನ ಪ್ರಗತಿಯು ಯಾವ ತೆರನಾಗಿದೆ ಎಂಬುದನ್ನು ತಿಳಿಯಬಹುದು.

ಬ್ಲೂ ಸ್ಟೋಕಿಂಗ್ಸ್ ಸಂಘ

ಬ್ಲೂ ಸ್ಟೋಕಿಂಗ್ಸ್ ಸಂಘವೆಂಬ ಸ್ತ್ರೀ ಗ್ರಂಥಕರ್ತರ ಸಂಘದ ಸಭೆಯೊಂದು ಜರಗಿ ೧೯೩೬ನೇ ವರ್ಷದ ಪ್ರಾರಂಭೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿತು. ಈ ಸಂಘದ ಸದಸ್ಯರು ೪೦೦ ಮಂದಿ ಇದ್ದು ಪ್ರತಿಯೊಬ್ಬರು ಪುರುಷವೇಷಧಾರಿಗಳಾಗಿದ್ದರು. ಇವರಲ್ಲಿ ಟೋಕಿಯೋ ನಗರದ ಸುಪ್ರಸಿದ್ಧ ಗ್ರಂಥಕರ್ತರಾದ ಮಿಸೆಸ್ ಶಿಗೂರ ಹಾಸೆಗಾವಾ ಮಿಚೈರ್ ನೋಶೊಯವರೂ ಮಿಸ್ ಕುನಿಕೊ ಇಮ್ಮಾ ಮತ್ತು ಮಿಸ್ ಸುಮಾಕೊ ಪ್ರೊಕೊ ಇವರೂ ಇದ್ದರು.



ಶಂಗಾಯಿ ನಗರದಲ್ಲಿ ಜಪಾನಿಸ್ತ್ರೀಯರು

ಶಂಗಾಯಿಯಲ್ಲಿರುವ ಜಪಾನೀ ಸ್ತ್ರೀಯರು ಬಹಳೇ ಕಾರ್ಯಶಾಲಿಗಳಾಗಿರುವರು. ಪರದೇಶದಲ್ಲಿದ್ದು ತಮ್ಮ ಶಕ್ತಿಸಾಮರ್ಥ್ಯಗಳಿಂದ ದಿನವನ್ನು ಸಾಗಿಸುವರೆಂದು ಜಪಾನಿ ಸ್ತ್ರೀಯರ ವಿಶ್ವವಿದ್ಯಾಲಯದ ಪ್ರೊಫೆಸರರಾದ ಡಾ. ಫುಮಿಕೋ ಕೋರಾರವರು ಹೇಳಿರುವರು. ಇದೆಲ್ಲವೂ ತಾನು ಸ್ವಂತ ಕಣ್ಣಿನಿಂದ ನೋಡಿ ತಿಳಿದ ವಿಷಯವೆಂದು ಅವರು ಹಿಂದೂದೇಶದ ಅಖಿಲ ಭಾರತ ಮಹಿಳಾ ಪರಿಷತ್ತಿನ ಸಮಯದಲ್ಲಿ ತಮ್ಮ ಭಾಷಣದಲ್ಲಿ ಹೇಳಿದಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ದೇಶದ ಬಹಿರ್ಭಾಗಗಳಿಗೆ ಹೋಗಿ ಅಲ್ಲಿಯ ರೀತಿನೀತಿಗಳನ್ನು ಅರಿತು ಅಲ್ಲಿ ತಮ್ಮ ಮೇಲ್ಮೆಯನ್ನು ಸಿದ್ಧೀಕರಿಸಿದರೆ ನಿಜವಾಗಿಯೂ ದೇಶವು ಉನ್ನತಿಯನ್ನು ತಾಳುವುದರಲ್ಲಿ ಸಂದೇಹವಿಲ್ಲವೆಂದೇ ಅವಳ ಭಾಷಣದ ಸಾರಾಂಶ. ಇದರಲ್ಲೆಲ್ಲಾ ಬಾಕಿ ಜನಾಂಗದವರಿಗೆಲ್ಲಾ ಜಪಾನು ಆದರ್ಶಪ್ರಾಯವಾಗಿದೆ.

ಯುವತಿಯರ ಬಳಿ ಸಾವಿರಗಟ್ಲೆ ರೂಪಾಯಿ.

ಗವರ್ನಮೆಂಟ್ ಛಾಪಖಾನೆಯಲ್ಲಿ ಕೆಲಸಮಾಡುತ್ತಿದ್ದ ಯುವತಿಯರನೇಕರು ಹತ್ತು ಯೆನ್ನುಗಳ ಅಚ್ಚನ್ನು (ಇಲ್ಲಿಯ ನೋಟುಗಳ ಅಚ್ಚಿನಂತಿರುವ) ಕಳಚುವ ಮೊದಲು ತಮ್ಮಲ್ಲಿದ್ದ ೪–೫ ಸಾವಿರ ಕಾಗದ ತುಂಡುಗಳ ಮೇಲೆ ಹೊಡೆದು ಛಾಪಖಾನೆಯ ಅಧಿಕಾರಿಗಳಿಗೆ ತಿಳಿದಂತೆ ಅದನ್ನು ಮನೆಗೆ ಸಾಗಿಸುತ್ತಿದ್ದು, ತಿಂಗಳಿಗೆ ೪–೫ ಯೆನ್ನುಗಳು ಸಿಕ್ಕುವವರಿಗೆ ಇದೊಂದು ದೊಡ್ಡ ಸಂಪತ್ತಲ್ಲವೇ?

ಹೆಂಗಸರ ಮೋಸ ಕೃತ್ಯ

ಹೆಂಗಸರ ಅಂಗಶೃಂಗಾರದ ವಸ್ತುಗಳನ್ನು ಮಾಡುತ್ತಿರುವ ಹರಧರರವರಲ್ಲೊಬ್ಬಳು ಓರ್ವ ಆಫೀಸರನ ಹೆಂಡತಿಯ ಮನೆಗೆ ಹೋಗಿ "ನಿನ್ನ ಕೂದಲುಗಳು ದಿವಸ ಹೋಗುತ್ತಾ ಉದುರುತ್ತಾ ಬರುತ್ತಿವೆ. ನೀನು ನಾನು ತಯಾರಿಸಿದ ಎಣ್ಣೆಯನ್ನು ತಲೆಗೆ ಹಚ್ಚದಿದ್ದರೆ ಕೆಲವೇ ತಿಂಗಳಲ್ಲಿ ನಿನ್ನ ತಲೆಕೂದಲೆಲ್ಲಾ ನಾಶವಾಗುವುದು" ಎಂದಳು. ಅದನ್ನು ಕೇಳಿ ಆ ಆಫೀಸರನ ಹೆಂಡತಿ ೫೦ ಯೆನ್ನುಗಳನ್ನು ಕೊಟ್ಟು ಆ ಎಣ್ಣೆಯನ್ನು ಪಡಕೊಂಡಳಂತೆ. ಆಫೀಸರನು ಇದನ್ನು ತಿಳಿದು, ತನ್ನ ಹೆಂಡತಿಗೆ ಮನ ಬಂದಂತೆ ಬೈದನೆಂದೂ, ಕಡೆಗೆ ಆ ಎಣ್ಣೆಯಿಂದ ಏನೂ ಪ್ರಯೋಜನವಾಗಲಿಲ್ಲವೆಂದೂ, ಮಾರಿದವಳು ದೊಡ್ಡ ಮೋಸಗಾರ್ತಿಯೆಂದೂ ತಿಳಿದುಬಂದಿದೆ.

ಆ ಹಾಳು ಸೌಂದರ್ಯ.

ಮಿಸ್ ಅಡಾಮೇರಿ ಎಂಬ ೧೮ ವರ್ಷದ ಬರ್ಮಿಂಗಹಾಮ್ ಪಟ್ಟಣದ ಯುವತಿಗೆ ತನ್ನ ಮುಖವನ್ನು ಇನ್ನಷ್ಟು ಸುಂದರಗೊಳಿಸುವ ಬಯಕೆಯಾಯಿತು. ಆಗ ಅವಳು ತನ್ನ ಹುಬ್ಬಿನ ಕೂದಲುಗಳನ್ನು ಕಿತ್ತು ತೆಗೆದರೆ ಶೋಭೆಯಾಗುವುದೆಂದು ಕೇಳಿ ಆ ಪ್ರಕಾರ ತೆಗೆದುಕೊಂಡಳು. ಆಗ ಆ ಸ್ಥಾನದಲ್ಲಿ ಹುಣ್ಣುಗಳಾಗಿ ಕಡೆಗೆ ಅವಳು ಸತ್ತು ಹೋದಳು.

ಈ ಭಯಂಕರ ದುಷ್ಘಟನನ್ನು ಅಂಟಿಸಿಕೊಳ್ಳಬಾರದೆಂದು ಪ್ರಸಿದ್ಧ ಡಾಕ್ಟರ್ ಬಿ. ಟಿ. ರೋಸರವರು ಈ ಪ್ರಕಾರವಾಗಿ ಸೂಚಿಸಿದ್ದಾರೆ–ಸೌಂದರ್ಯವು ಪ್ರಕೃತಿಯಾಗಲೆಂದು. ಇಂಥ ಅನೇಕ ಹುಚ್ಚುತನದ ಕಾರ್ಯಗಳನ್ನು ಕೈಕೊಳ್ಳುವುದು ಅತಿ ನಿಂದ್ಯಕರವಾದುದು. ಇದರಿಂದ ಸ್ತ್ರೀ ಚಿತ್ತವೃತ್ತಿಯು ಎಷ್ಟು ಹೀನಾವಸ್ಥೆಗೆ ಬಂದಿದೆಯೆಂಬುದು ಕಂಡುಬರುತ್ತದೆ.

ಪ್ರಾಣಾಂತಿಕ ಲಾಠಿ ಪ್ರಯೋಗ

೧೯೩೦ ಸತ್ಯಾಗ್ರಹ ಚಳವಳದಲ್ಲಿ ಮುಂಬಾಯಿ ನಗರದಲ್ಲಿ ಲಾಠಿ ಪ್ರಯೋಗದಲ್ಲಿ ಮೃತರಾದ ಶ್ರೀ ಹರಿಲಾಲ್ ಯವರ ಪತ್ನಿಯವರು ಹಿಂದೂದೇಶದ ಸೆಕ್ರೆಟರಿ ಆಫ್ ಸ್ಟೇಟರ ಮೇಲೆ ರೂ. ೧ ಲಕ್ಷ ನಷ್ಟಪರಿಹಾರಕ್ಕೆ ಹೂಡಿದ ದಾವೆಯು ಮೊನ್ನೆ ಅಲ್ಲಿನ ಹೈಕೋರ್ಟಿನ ಜಸ್ಟಿಸ್ ರಂಗ್ನೇಕರರಿಂದ ತೀರ್ಮಾನಿಸಲ್ಪಟ್ಟಿತು. ಪೋಲೀಸರ ಅಪ್ಪಣೆ ಮೇರೆಗೆ ಶಾಂತತೆಯಿಂದ ಚದರದೆ, ಕಾಯಿದೆ ಭಂಗ ಮಾಡಿದುದರಿಂದ ಆ ಜೊತೆ ಅನ್ಯಾಯಸಭೆಯಾಗಿ ಪರಿಣಮಿಸಿದುದರಿಂದ ಪೋಲೀಸರಿಗೆ ಅಂಥಾ ಸಭೆಗಳನ್ನು ಚದರಿಸಲು ಹಕ್ಕು ಇರುವುದರಿಂದ ಈ ದಾವೆಯಲ್ಲಿ ಸೆಕ್ರೆಟರಿ ಆಫ್ ಸ್ಟೇಟಿಗೂ ವ್ಯಕ್ತಿಗೂ ಯಾವ ತರದ ಸಂಬಂಧವೂ ಇಲ್ಲವೆಂದೂ ಜಡ್ಜರ ತೀರ್ಪು.

ಫ್ರಾನ್ಸಿಗೆ ಹೊಸ ಸರಕಾರ.

ಫ್ರಾನ್ಸಿನ ಹೊಸ ಸರಕಾರದ ರಚನೆಯು ಸಂಪೂರ್ಣವಾಗಿರುತ್ತದೆ. ಈ ನವೀನಸರಕಾರ ಮುಂದೆ ಜನಾಂಗಸಭೆಯ ಮೇಲೆ ಸಂಪೂರ್ಣ ವಿಶ್ವಾಸವುಳ್ಳದ್ದೆಂದೂ ಅದರಿಂದ ಇಟೇಲಿ–ಹಬಶಿಯವರ ಕಲಹದ ಕಡೆಗಿನ ಇದರ ದೃಷ್ಟಿಯು ಬದಲಾಗದು ಎಂದೂ ವಾರ್ತೆ.

ಪರಸ್ಪರ ಸಹಕಾರ

ಬ್ರಿಟನಿನ ಮೇಲೆ ಇಟೇಲಿಯು ಬೀಳುವ ಸಂಭವದಲ್ಲಿ ಯುರೋಪದ ಅನೇಕ ಜನಾಂಗಗಳು ಅಂದರೆ ಮೆಡಿಟರೇನಿಯನ್ ಸಾಗರದ ಸ್ಥಳವುಳ್ಳವರು ಅವರೊಡನೆ ಸಹಕರಿಸುವರೆಂದೂ ಪ್ರತಿಜ್ಞೆ ಕೊಟ್ಟಿರುವರು. ಸ್ಪೈನ ದೇಶವೂ ಕೂಡ ಬ್ರಿಟನಿನೊಡನೆ ಸಹಕರಿಸುವುದಂತೆ. ಇಟೇಲಿಯು ಈ ಜನಾಂಗಗಳ ವರ್ತನೆಯನ್ನು ಖಂಡಿಸಿ, ಬ್ರಿಟನು ಈ ವಿಚಾರದಲ್ಲಿ ಜನಾಂಗಸಭೆಯ ಹೊರಗಾಗಿ ಮಾಡುತ್ತದೆಂದೂ, ಇಟಲಿ ಹಬಶಿ ಕಲಹವು ಕೇವಲ ವಸಾಹತುಗಳಿಗಾಗಿ ಬಂದ ಪ್ರಯಾಸವೆಂದೂ, ಯುರೋಪದ ಯಾವತಕ್ಕೂ ಜನಾಂಗಗಳಿಗೆ ಇದರಿಂದ ಹಾನಿಯೊದಗದೆಂದೂ ಮುಸಲೋನಿಯ ಗರ್ಜನೆಯು ಹೊರಟಿರುತ್ತದೆ.

ಮೆಡಿಟರೇನಿಯನ್ ಸಾಗರದಲ್ಲಿ ಯುದ್ಧನಟನೆ.

ಮೆಡಿಟರೇನಿಯನ್ ಸಾಗರದಲ್ಲಿರುವ ನೌಕಾಬಲದ ಸತ್ವಪರೀಕ್ಷೆಗಾಗಿ ಒಂದು ಯುದ್ಧನಟನೆಯು ಮೊನ್ನೆ ಜರಗಿತು. ಯುದ್ಧದಲ್ಲಿ ನಡೆಯುವಂತೆ–ಯುದ್ಧ ನಾವೆಗಳಿಂದ ತುಪಾಕಿ ಇತ್ಯಾದಿಗಳನ್ನು ಹಾರಿಸಲಾಯಿತು. ವಿಮಾನಗಳಿಂದ ನೌಕಾ ಅಧಿಕ್ರಮ ಇತ್ಯಾದಿಗಳಲ್ಲಿ ನೌಕಾಬಲದ ಪರೀಕ್ಷೆಯನ್ನು ಮಾಡಲಾಯಿತು.

ನೋಟೀಸು.

ಕಾಸ್ರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O P No 3/1936

1 ವಲಿಯಪೀಡಿಗೆಯಿಲ್ ಮುಂಡಕುಂಡಿಲ್ ಕುಂಞಾಮಿನ, 2 ವಲಿಯ ಅಬ್ದುಲ್ಲ, 3. ಅಸ್ಸನಾರ್; 4 ನೆ ಬೀಸು, 5. ಸುಲೈಮಾನ, 6 ಪಾತ್ತು; 7 ಅಬ್ದುಲ್ ರಹಿಮಾನ–

—ಅರ್ಜಿದಾರರು

1ನೇಯವಳು ಮೃತಪಟ್ಟ ಬ್ಯೆತಾನ ಹಾಜಿಯ ಹೆಂಡ್ತಿ 2ರಿಂದ 7ನೇ ವರೇಗಿನವರು ಮೃತಪಟ್ಟ ಬ್ಯೆತಾನ ಹಾಜಿಯ ಮಕ್ಕಳು ಎಲ್ಲರೂ ಕಾಸರಗೋಡು ತಾಲೂಕು ತೆಂಕು ತ್ರಿಕ್ಕರ್ಪುರ ಗ್ರಾಮದಲ್ಲಿರುವರ–

ಮೇಲ್ಕಂಡ 1ನೇ ಅರ್ಜಿದಾರಳ ಗಂಡನ, 2ರಿಂದ 7ನೇ ವರೆಗಿನವರ ತಂದೆ ಮೃತಪಟ್ಟ ಮೊಟ್ಟಮ್ಮಲ್ ಅಂಜಲ್ಲತ್ತ ಬ್ಯೆತ್ತಾನ್ ಹಾಜಿಗೆ ತೆಂಕು ತ್ರಿಕ್ಕರ್ಪುರ ಗ್ರಾಮದಲ್ಲಿರುವ ದುಟ್ಟಮ್ಮಲ್ ಮಾಪಿಳ್ಳಾ ಎಯಿಡೆಡ್ ಶಾಲೆಯ ಕುರಿತು ವಿದ್ಯಾ ಇಲಾಖೆಯವರಿಂದ ಕಳೆದ 1935ನೇ ಇಸವಿಗೆ ಶಿಕ್ಷಕರಿಗೆ ಗ್ರಾಂಟಿನ ಬಾಬ್ತು ರೂಪಾಯಿ 100/-ನ್ನು ವಸೂಲು ಪಡೆಯುವರೆ ಮೃತನ ನ್ಯಾಯವಾದ ಪ್ರತಿನಿಧಿ ವಾರಿಸದಾರರೂ ಹಕ್ಕುದಾರರೂ ಆದ ಅರ್ಜಿದಾರರ ಪೈಕಿ 7ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರ ಕೊಟ್ಟ ಸದ್ರಿ ಅರ್ಜಿಯು ತಾ. 6-2-36ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತ ಆಕ್ಷೇಪವುಳ್ಳವರು ಸದ್ರಿ ತಾರೀಖು ದಿವಸ ಈ ಕೋರ್ಟಿಗೆ ಬಂದು ಹಾಜರಾಗಿ ಉದಹರಿಸದಿದ್ದಲ್ಲಿ ಅವರ ಗೈರುಹಾಜರಿಯಿಂದ ಸದ್ರಿ ಅರ್ಜಿಯು ತೀರ್ಮಾನಿಸಲಾದೀತೆಂದ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗಿದ ಕ್ಕದೆ

ಕಾಸರಗೋಡು } K Rama Varma Rajah
27 1 36 } B A B L
[illegible]

ಗೋಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ಯಾಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೋಡ್ರೆಜ್ ಟ್ಯಾಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೋಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

ಗೋಡ್ರೆಜ್

ವೆಜಿಟೇಬಲ್ ಟ್ಯಾಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಒಫ್ ಕಾಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ ಮೈಕ್ರೊಸ್ಕೊಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಜ್ಞರಾಗಿರುವ

ಡಾ| ಬಿಫ್ರೆಚ್ಟ್ ಎಂಬವರು.— ನಾನು ಗೋಡ್ರೆಜ್ ವೆಜಿಟೇಬಲ್ ಟ್ಯಾಲೆಟ್ ಸಾಬೂನುಗಳನ್ನು ಪರೀಕ್ಷಿಸಿರ ವೆನು ನನ ಅಭಿಪ್ರಾಯದಂತೆ ಅವುಗಳ ಸ್ಟೆಫ್ಫಾಕೊಕಸ್ ಮತ್ತು ಸ್ಟ್ರೆಪ್ಟೊಕೊಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ'' ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾಲ್ ಉಸುರ್ನ್ ಎಂಬವರು ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧೆ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ'' ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು — ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ'' ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ| ಎಂ ಎ ಅನ್ಸಾರಿ, ಎಂ ಡಿ ಎಂ ಎಸ್ ರವರು— ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದ ಹೇಳಬಲೆ ಅದರ ಪಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ' ಎಂದಿರುವರು

ಫಕ್ಟರಿ – **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು – **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್‌ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ

ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು

Motor Accessories Of Approved Manufacture Always in Stock.

Exide Batteries Uncharged	Rs. 20 0 - 0
Fully Charged	Rs. 24 – 0 0
Genuine Lockheed Hydraulic Brake fluid Quart tins factory Sealed	Rs 2 12 0
Genuine Lockheed ,, locally filled	Rs 2 4 0

All Hydraulic Brake parts held in stock and available at Bombay Prices less 5% discount

Chevrolet Springs of approved American Make available at less than Bombay Prices

Brake liners, Automobile lamp bulbs, Bronze bushings and bars Bolts and Nuts of S A E threads, Special tools, Drilling Machines, Spanner sets of all types

An Enquiry with us will save you money

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು ಮಂಗಳೂರು

The Canara Public Conveyance Company Ltd., Kodialbail, Mangalore.

ಉಪವಾಸಾಚರಣೆಯ ೭೩ನೇ ದಿವಸ!

ಕಲ್ಕತ್ತ ನಗರಸಭೆ.

ಕಲ್ಕತ್ತಾ ಮುನ್ಸಿಪಲ್ ಕಾರ್ಪೋರೇಶನಿನ ಉದ್ಯೋಗಗಳಲ್ಲಿ ಮುಸ್ಲಿಮರಿಗೆ ನ್ಯಾಯಕರವಾದ ಸ್ಥಾನ ದೊರೆಯಲಿಲ್ಲವೆಂದೂ ಅವುಗಳಲ್ಲಿ ಶೇಕಡಾ ೩೫ರ ಪಾಲು ಅವರಿಗೆ ವಿಂಗಡಿಸಿಡಬೇಕೆಂದೂ ನಗರಸಭೆಯ ಮುಂದೆ ಬಂದ ಠರಾವಿಗೆ ಯೋಗ್ಯ ಮನ್ನಣೆಯು ದೊರೆಯದಿರುವುದರಿಂದ ನಗರಸಭೆಯ ಮುಸ್ಲಿಮ ಸದಸ್ಯರು, ನಗರಸಭಾಧ್ಯಕ್ಷರು, (ಮುಸ್ಲಿಮರು) ತಮ್ಮ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿದ್ದಾರೆ. ನಗರಸಭೆಯಲ್ಲಿ ಇದರಿಂದ ಬಹಳ ದಿಗಿಲು ಉಂಟಾಯಿತು. ಕೆಲವು ಮಂದಿ ಸದಸ್ಯರು ತಮ್ಮ ರಾಜಿನಾಮೆಯನ್ನು ಹಿಂತೆಗೆಯಲು ಸಿದ್ಧರಿದ್ದಾರೆ. ಮುಸ್ಲಿಮರ ಸಾರ್ವಜನಿಕ ಸಭೆಗಳು ಸೇರಿದವು. ಕಾರ್ಪೋರೇಶನಿನಲ್ಲಿ ತಮಗೆ ಯೋಗ್ಯ ಸ್ಥಳ ದೊರೆಯಬೇಕೆಂದೂ ಠರಾವುಗಳನ್ನು ಮಾಡಿದರು. ಈಗಿನ ದಿಗಿಲಿನ ನಿವಾರಣೆಯಾಗಿ ಅನೇಕ ಮಂದಿ ಹಿಂದೂಗಳೂ ಮುಸ್ಲಿಮರೂ ಶಾಂತಿ ಪ್ರಯತ್ನಪಡುತ್ತಿದ್ದಾರೆ.

ದಿವಂಗತ ಚಕ್ರವರ್ತಿಯವರ ಶವಸಂಸ್ಕಾರ.

ಕಳೆದ ಮಂಗಳವಾರ ತಾ ೨೮ರಲ್ಲಿ ಲಂಡನಿನಲ್ಲಿ ದಿವಂಗತ ಚಕ್ರವರ್ತಿ ಐದನೇ ಜಾರ್ಜರ ಶವಸಂಸ್ಕಾರವು ಬಹಳ ವಿಜೃಂಭಣೆಯಿಂದ ನಡೆಯಿತು. ಸಾರ್ವಭೌಮ ಎಂಟನೆ ಎಡ್ವರ್ಡರು ನೌಕಾ ದುಸ್ತನ್ನು ಧರಿಸಿಯೂ ಅವರ ಅನುಜರು ಅದೇ ರೀತಿ ವಿವಿಧ ಗೌರವಿತ ದುಸ್ತುಗಳನ್ನು ಧರಿಸಿ ಶವದ ಪೆಟ್ಟಿಗೆಯ ಹಿಂದೆ ನಡೆದರು. ಎಲ್ಲಾ ಬಹಿರ್ ಜನಾಂಗದ ಪ್ರತಿನಿಧಿಗಳು, ಬ್ರಿಟಿಷ ಸಾಮ್ರಾಜ್ಯದ ವಿವಿಧ ರಾಜ್ಯಗಳ ಪ್ರತಿನಿಧಿಗಳು, ಅಂಗ್ಲೇಯ ಮಹತ್ಪುರುಷರು ಈ ಸಂಸ್ಕಾರಕ್ಕೆ ನೆರೆದಿದ್ದರು. ಬ್ರಿಟಿಷ ಮಿಲಿಟರಿಯವರಿಂದ ಕೂಡಿದ್ದ ಚಕ್ರವರ್ತಿಯವರ ಶವಸಂಸ್ಕಾರ ಮೆರವಣಿಗೆಯು ನಡೆಯಿತು. ಚಕ್ರವರ್ತಿಯವರ ಈ ಕೊನೆಯ ಯಾತ್ರೆಯನ್ನು ನಿರೀಕ್ಷಿಸಲು ಜನಸಂದಣಿಗಳು ಅಲ್ಲಲ್ಲಿ ಕಿಕ್ಕಿರಿದು ನೆರೆದಿದ್ದವು. ಮೆರವಣಿಗೆಯು ಲಂಡನ್ ನಗರವನ್ನು ಸಂಚರಿಸಿ ಚಕ್ರವರ್ತಿಯವರ ಕೊನೆಯ ವಿಶ್ರಾಂತಿಸ್ಥಾನಕ್ಕೆ ಸರಿಯಿತು. ಬಹಳ ವೈಭವದಿಂದ ಚಕ್ರವರ್ತಿಯವರನ್ನು ಭೂಮಾತೆಗೆ ಒಪ್ಪಿಸಿದರು.

ಉಪವಾಸಾಚರಣೆಯ ೭೩ನೆ ದಿವಸ.

ಜೋಗೇಶಚಂದ್ರ ಚಟರ್ಜಿ ಎಂಬ ಕಾನ್ಸ್ಪಿರಸಿ ಮೊಕದ್ದಮೆ ಕೈದಿಗಳು ಉಪವಾಸಾಚರಣೆ ಪ್ರಾರಂಭಮಾಡಿ ೭೩ ದಿವಸಗಳಾದುವು. ಸರಕಾರವು ಜೈಲಿನಲ್ಲಿರುವ ರಾಜಕೀಯ ಕೈದಿಗಳ ಸ್ಥಿತಿಯನ್ನು ಉತ್ತಮಗೊಳಿಸದಿರುವುದೇ ಈ ಉಪವಾಸದ ಮುಖ್ಯ ಉದ್ದೇಶ. ಶ್ರೀ ಚಟರ್ಜಿಯವರ ಸ್ಥಿತಿ ಬಹಳ ವಿಷಮ ಅವಸ್ಥೆಯಲ್ಲಿದೆಯೆಂದು ತಿಳಿದು ಲಕ್ನೋ ಕಾಂಗ್ರೆಸ ಕಮಿಟಿಯವರು ಈ ಕುರಿತು ಒಂದು ಸಭೆಯನ್ನು ಸೇರಿಸಿ, ಶ್ರೀ ಚಟರ್ಜಿಯವರ ಕುರಿತು ದುಃಖಸೂಚಕ ಮತ್ತು ಫೆಬ್ರುವರಿ ೩ನೇ ತಾರೀಕನ್ನು ಜೋಗೇಶ ದಿನವನ್ನಾಗಿ ಆಚರಿಸಲು ಠರಾವನ್ನು ಮಾಡಿರುವರು. ಶ್ರೀ ಜೋಗೇಶ್ ಚಟರ್ಜಿಯವರು ರಾಜಕೀಯ ಕೈದಿಗಳ ಸ್ಥಿತಿಯ ಸುಧಾರಣೆಯ ಕುರಿತು ಸರಕಾರಕ್ಕೆ ನಾಲ್ಕು ಸಲಹೆಗಳನ್ನು ಕೊಟ್ಟಿರುವರು. ಸರಕಾರವು ಅವುಗಳನ್ನು ಪೂರೈಸುವ ವರೆಗೆ ತಾನು ಉಪವಾಸಗೈಯುವೆನೆಂದು ದೃಢಸಂಕಲ್ಪ ಮಾಡಿರುವರು.

ಐಗುಪ್ತದ ರಾಜಕೀಯ ವ್ಯವಸ್ಥೆ.

ಇನ್ನೂ ಕೊನೆಗೊಂಡಂತೆ ಕಾಣುವುದಿಲ್ಲ. ಕೆಲವು ಬೇಧಗಳು ಈಗ ನವೀನವಾಗಿ ಬಂದಿವೆ. ವಿವಿಧ ಪಂಗಡಗಳಲ್ಲಿ ಸ್ಪರ್ಧೆಯುಂಟಾಗಿರುತ್ತದೆ. ಈ ಪಂಗಡಗಳು ಯಾವತ್ತೂ ಒಂದು ಯೋಗ್ಯ ಒಪ್ಪಂದಕ್ಕೆ ಬರುವ ಸಂಭವಗಳು ಕಡಿಮೆಯೆಂದು ಕೆಲವರು ಅಭಿಪ್ರಾಯಪಡುತ್ತಿದ್ದಾರೆ. ರಾಜಕೀಯ ವಾತಾವರಣದಲ್ಲಿ ಭಯಂಕರ ಕ್ಷೋಭೆಯು ಉಂಟಾಗಿರುತ್ತದೆ. ಸೈನ್ಯ ಮಂಡಳಿಗಳನ್ನು ಅಲ್ಲಲ್ಲಿ ನಿಲ್ಲಿಸಿರುತ್ತಾರೆ. ಭಯಂಕರ ಘಟನೆಗಳು ನಡೆಯುವ ಅನೇಕ ಸಂಭವಗಳಿವೆ.

ಹೊಗೆಸೊಪ್ಪಿನ ಮೇಲೆ ತೆರಿಗೆ ವಿಧಿಸುವ ಬಿಲು ಬಿದ್ದುಹೋಯಿತು.

ಮಧ್ಯಪ್ರಾಂತ್ಯದ ನ್ಯಾಯವಿಧಾಯಕ ಸಭೆಯ ಮುಂದೆ ಹೊಗೆಸೊಪ್ಪಿನ ಮೇಲೆ ತೆರಿಗೆ ವಿಧಿಸುವ ಬಿಲು ಅನೇಕ ಸಮಯದಿಂದ ಚರ್ಚೆ ನಡೆದಿದ್ದು, ಈ ಭಾರಿಯ ಸಭೆಯಲ್ಲಿ ಬಿದ್ದುಹೋಗಿರುತ್ತದೆ.

ಬ್ರಿಟಿಷ ಸಾಮ್ರಾಜ್ಯದ ಈಗಿನ ಚಕ್ರವರ್ತಿಗಳಾದ
ಎಂಟನೇ ಎಡ್ವರ್ಡರು.

ಸನಾತನ ಧರ್ಮ.

ಸನಾತನ ಧರ್ಮದ ಮಹಾಸಭೆಯು ಮಾಘಮೇಳದ ಸಮಯ ಅಲ್ಲಹಾಬಾದಿನಲ್ಲಿ ಜರಗಿತು. ಪಂಡಿತ ಮಾಲವೀಯರು ತಾನು ಸನಾತನ ಧರ್ಮವನ್ನು ಬಹಳವಾಗಿ ಪ್ರೀತಿಸುವವನೆಂದೂ ಅದು ಈಗ ಇದ್ದ ನಿಕೃಷ್ಟ ಸ್ಥಿತಿಯಿಂದ ಸುಧಾರಣೆಗೊಳಿಸಬೇಕೆಂದೂ ಸನಾತನಿಗಳು ಉತ್ಸಾಹ ಪಡೆದು ಕಾರ್ಯ ನಡೆಯಿಸಿ ಪ್ರಜೆಗಳ ಅಭ್ಯುದಯವನ್ನೂ ಹರಿಜನೋದ್ಧಾರವನ್ನು ಸಾಧಿಸಬೇಕೆಂದೂ ಭಾಷಣಮಾಡಿದರು. ಮರುದಿವಸ ಸೇರಿದ ಸನಾತನ ಧರ್ಮದ ಸಭೆಯ ಅಧ್ಯಕ್ಷರು ದರ್ಭಾಂಗದ ಮಹಾರಾಜರಾಗಿದ್ದರು. ಭರತಖಂಡದ ವಿವಿಧ ದಿಕ್ಕುಗಳಿಂದ ನೂರಾರು ಮಂದಿ ಪಂಡಿತಶ್ರೇಷ್ಠರು ಈ ಸಭೆಗೆ ಬಂದಿದ್ದರು.

ಬರುವ ಎಸೆಂಬ್ಲಿ ಸಭೆ.

ಬರುವ ಫೆಬ್ರುವರಿ ತಿಂಗಳ ತಾ ೩ಕ್ಕೆ ಎಸೆಂಬ್ಲಿಯ ಅಧಿವೇಶನವು ಪ್ರಾರಂಭವಾಗುವುದು. ಈ ದಿವಸ ಚಕ್ರವರ್ತಿಯವರ ನಿಧನದ ಕುರಿತು ಸಂತಾಪ ಸೂಚಕ ಠರಾವನ್ನು ಮಾಡಿ ಸಭೆಯನ್ನು ಮುಂದುವರಿಸಲಾಗುವುದು. ಇಟೇಲಿಯ ಮೇಲೆ ಸೆಂಕ್ಷನುಗಳ ಕುರಿತು ಜ್ಯಾರಿಯಾದ ಓರ್ಡಿನೆನ್ಸುಗಳ ಕುರಿತು ಈ ಭಾರಿಯ ಎಸೆಂಬ್ಲಿಯಲ್ಲಿ ಚರ್ಚೆ ನಡೆಯುವುದು. ಚಕ್ರವರ್ತಿಯವರ ನಿಧನದಿಂದ ಎಸೆಂಬ್ಲಿ ಸದಸ್ಯರು ಮತ್ತೊಮ್ಮೆ ಪ್ರತಿಜ್ಞೆಗಳನ್ನು ಮಾಡಬೇಕಾಗಿ ಬರುವುದೆಂದು ಊಹೆಗಳಿದ್ದುವು. ಆದರೆ ಈ ಪ್ರತಿಜ್ಞಾ ಸಮಾರಂಭ ಮತ್ತೊಮ್ಮೆ ನಡೆಯುವುದಿಲ್ಲವೆಂದು ವಾರ್ತೆ. ಈ ಭಾರಿಯ ಎಸೆಂಬ್ಲಿಯಲ್ಲಿ ವಿದ್ಯಾರ್ಥಿಗಳು ಸಿನೆಮಾಗಳನ್ನು ನೋಡದ ಹಾಗೆ ನಿರ್ಬಂಧ ತರುವ ಒಂದು ಬಿಲು ಬರುವುದಂತೆ. ವಿದ್ಯಾರ್ಥಿಗಳು ಬೋಧಪರ ಚಿತ್ರಗಳನ್ನು ಮಾತ್ರ ನೋಡಬೇಕೆಂದು, ಈ ಬಿಲನ್ನು ತರಲಿರುವ ನ್ಯಾಸನಲಿಸ್ಟ ಸದಸ್ಯರ ಅಭಿಪ್ರಾಯವಂತೆ. ಈ ಭಾರಿಯ ಎಸೆಂಬ್ಲಿಯ ಅಧಿವೇಶನದೊಡನೆ ಕಾಂಗ್ರೆಸ್ಸ ಅಧಿವೇಶನವು ನಡೆಯುವುದು. ಆದರಿಂದ ಎಸೆಂಬ್ಲಿ ಸದಸ್ಯರಾದ ಕೆಲವು ಕಾಂಗ್ರೆಸ್ಸವಾಲರು ಕಾಂಗ್ರೆಸ್ಸಿನಲ್ಲಿ ಭಾಗವಹಿಸಲು ಹೇಗೆ ಅನುಕೂಲವಾಗುವುದೆಂದೂ, ಅವರು ಕಾಂಗ್ರೆಸ್ಸಿಗೆ ಹೋದರೆ ಅನೇಕ ಮುಖ್ಯ ಪ್ರಶ್ನೆಗಳ ಚರ್ಚೆ ನಡೆಯುವ ಸಮಯ ಅವರು ಗೈರು ಹಾಜರು ಆಗುವರೆಂದೂ, ಎಲ್ಲದಕ್ಕೂ ಅನುಕೂಲವಾಗುವ ರೀತಿಯಲ್ಲಿ ಕಾಂಗ್ರೆಸ್ಸು ಜರಗಿಸಲಾಗುವುದೆಂದು ತಿಳಿದುಬರುತ್ತದೆ.

Canara Bank, Ltd ,
City—Mangalore

ಕೆನರಾ ಬೇಂಕ್, ಲಿಮಿಟೆಡ್,
ಸಿಟಿ-ಮಂಗಳೂರು.

ಇದೇ ಕಳೆದ ತಾ 17—1 1936ನೇ ಸ್ವದೇಶಾಭಿಮಾನಿ ಸಂಚಿಕೆಯ ಕರಪತ್ರದಲ್ಲಿ ಪ್ರಕಟಿಸಿದ ಪ್ರಕಟಣೆ ಮೇರೆಗೆ ಮಂಗಳೂರು ಶಹರು ಉದ್ರೋಳಿ ದೇವಸ್ಥಾನದ ಬಳಿ ಇರುವ ಗೂಮುನವರ ಮಗ ಚೆನ್ನಪ್ಪನವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಕಳೆದ ತಾ 24—1—1936ನೇ ದಿನ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಲಿಲಾಂ ಪಡಿಸಿ ಹುಟ್ಟಿಬಂದ ಮೊಬಲಗಿನಲ್ಲಿ ಸದರೀ ಲೋನಿನ ಸಂಬಂಧ ಬೇಂಕಿಗೆ ಬಹು ಐವೇಜನ್ನು ಕಳೆದು ಬಾಕಿ ಉಳಿದಿರುವ ರೂಪಾಯಿ 39—15—9ನ್ನು ಬೇಂಕಿನ ಅಮಾನತ್ ಲೆಕ್ಕದಲ್ಲಿಟ್ಟಿರುತ್ತಾರಾಗಿಯೂ ಸದರೀ ಐವೇಜಿಗೆ ಬಡ್ಡಿ ನಡೆಯುವುದಿಲ್ಲವಾಗಿಯೂ ಸದರೀ ಐವೇಜನ್ನು ಸಾಲಗಾರರು ಅವರಿಗೆ ಇಷ್ಟಬಿದ್ದ ವೇಳೆ ಪಡಕೊಂಡು ಹೋಗಬಹುದಾಗಿಯೂ ಈ ಮೂಲಕ ತಿಳಿಸಲಾಗುತ್ತದೆ. ಹಣ ಪಡಕೊಳ್ಳುವಾಗ್ಗೆ ಈ ನೋಟೀಸಿನ ಖರ್ಚು ಕೊಡಬೇಕಾಗುವುದು.

ಮಂಗಳೂರು ಶಹರು ಪೈಕಿ ಮಹಾಮ್ಮಾಯಿ ದೇವಸ್ಥಾನದ ಬಳಿ ಇರುವ ಶಂಕರಮೂಲ್ಯರ ಮಗ ನೇಮುಚಂದಯ್ಯಮೂಲ್ಯರು ಈ ಬೇಂಕಿನಿಂದ ತಾರೀಕು 15—10—34ರಲ್ಲು ಚಿನ್ನದ ನಗಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವಲ್ಲಿ ಅವರಿಗೆ ಬಿಲ್ಲು ಟಪಾಲು ರಿಜಿಸ್ಟ್ರಿ ನೋಟೀಸು ಅವರು ಕಾಣಸಿಕ್ಕದ್ದಾಗಿ ಬಟವಡೆಯಾಗದೆ ವಾಪಾಸು ಬಂದಿರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ— ಸದರಿ ಸಾಲಗಾರರು ಬೇಂಕಿಗೆ ಬಹಾ ಅಸಲು ಬಡ್ಡಿ ಐವೇಜನ್ನು ಇದೇ ಫೆಬ್ರವರಿ ತಾ 1೮ರ ವರೆಗೆ ಸಲ್ಲಿಸಿ ಅಡವಿಟ್ಟ ನಗಗಳನ್ನು ಪಡಕೊಂಡು ಹೋಗುವರೆ ತಪ್ಪಿದ್ದಲ್ಲಿ ಸದರೀ ನಗಗಳನ್ನು 1936ನೇ ಇಸವಿ ಫೆಬ್ರುವರಿ ತಾ 2?ನೇ ಗುರುವಾರ ಮಧ್ಯಾಹ್ನ 2 ಗಂಟೆಗೆ ಯಾ ಬೇಂಕಿನವರಿಗೆ ಅನುಕೂಲವಿರುವ ಬೇರೆ ಸಮಯ ಯಾ ದಿನದಲ್ಲಿ ಬೇಂಕಿನ ದೊಂಗರಕೇರಿ ಆಫೀಸಿನಲ್ಲಿ ಬಹಿರಂಗವಾಗಿ ಲಿಲಾಂ ಮಾಡಲಾದೀತು. ಲೋನ್ ನಂಬ್ರ 3 L 60/14 ಮೊಬಲಗು ರೂ 10 ಲಿಲಾಂ ತಾರೀಕು ವರೆಗೆ ಆಗುವ ಬಡ್ಡಿ ಟಪಾಲು ಖರ್ಚು ಕೂಡಾ 2—1 ಈ ನೋಟೀಸಿನ ಖರ್ಚು ಅಲ್ಲಾದದ್ದು.

ಆಫೀಸು 29ನೇ ಜನವರಿ 36 | M Mukunda Kini, Agent

ನಿಮಗೆ ಗಂಟಲು ನೋವಿದೆಯೆ?

ನಿಮಗೆ ಗಂಟಲು ನೋವು ಪ್ರಾರಂಭವಾದರೆ ಅದನ್ನು ತಕ್ಷಣವೇ ಗುಣಪಡಿಸಿಕೊಳ್ಳಿರಿ. ಕಾರಣ ಅದು ಸಂತರ ಬರುವ ಭಯಂಕರ ಉತ್ಪಾತದ ಕುರುಹಾಗಿರುವುದು. ಗಂಟಲು ಉಬ್ಬುವುದು ಗಂಟಲಲ್ಲಿ ಗುಳ್ಳೆಗಳು ಏಳುವುದು ಇನ್‌ಫ್ಲುಯೆಂಜ ಇವೆಲ್ಲವುಗಳೂ ಈ ಗಂಟಲು ನೋವಿನಿಂದ ಉಂಟಾಗತಕ್ಕದಾದ ರೋಗಗಳು. ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಆಗಾಗ ಸೇವಿಸಿ ಇವೆಲ್ಲವುಗಳನ್ನು ನೀಗಿಕೊಳ್ಳಿರಿ. ಪೆಪ್ಸ್ ಗುಳಿಗೆಗಳು ರುಚಿಕರವಾಗಿಯೂ, ಗುಣಲಾಭವನ್ನು ಕೊಡುವವುಗಳಾಗಿಯೂ ಇರುವುವು. ಅವುಗಳು ವಿಷಹಾರಕ ಸೊರೆಯು ಎಂತಹ ರೋಗಾಣುವನ್ನಾದರೂ ಕೊಲ್ಲಬಹುದು. ಗಂಟಲು ನೋವುಗಳಿಗೂ ಕೆಮ್ಮಿಗೂ, ಶೀತಜ್ವರಗಳಿಗೂ ಪೆಪ್ಸ್ ಮಾತ್ರೆಗಳಿಗೆ ಸರಿಸಾಟಿಯಾದ ಬೇರೊಂದು ಔಷಧವಿಲ್ಲ. ಎಲ್ಲಾ ಔಷಧಿಯ ಅಂಗಡಿಗಳಲ್ಲೂ ಮಾರಲ್ಪಡುತ್ತದೆ. ಬಾಟ್ಲಿ 1ಕ್ಕೆ ರೂ 1

ವಿಷಹಾರಿ ಶ್ವಾಸನೀಯ ಗುಳಿಗೆಗಳು.

ಪೆಪ್ಸ್
PEPS

ವಿಗ್ರಹಗಳ ಪ್ರತಿಷ್ಠೆ.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಇತ್ಯಾದಿ ಶ್ರೀಬಿರುದಾಂಕಿತರಾದ ಕುಂದಾಪುರ ವ್ಯಾಸರಾಜ ಮಠಾಧೀಶರಾದ ಶ್ರೀಮಲ್ಲಕ್ಷ್ಮೀಪ್ರಿಯ ತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರಾದ ಶ್ರೀ ಪ್ರಸನ್ನ ತೀರ್ಥ ಪಾದಂಗಳವರು ಮೈಸೂರು ಕನ್ನಂಬಾಡಿ ನೀರುಮಾರ್ಗದೆಯಾದ ಶ್ರೀ ವೇಣುಗೋಪಾಲ ಕೃಷ್ಣಸ್ವಾಮಿ, ಶ್ರೀ ಆಂಜನೇಯ ಶ್ರೀ ಚಂದ್ರಮೌಳೀಶ್ವರ ವಿಗ್ರಹಗಳನ್ನು ಅನೇಕ ಆಸ್ತಿಕ ಮಹಾಜನಗಳ ಸಹಾಯದಿಂದ ಸಾಗರಕಟ್ಟೆ ರೈಲ್ವೆಸ್ಟೇಶನು ಬಳಿ ಕಾವೇರಿ ಲಕ್ಷ್ಮಣತೀರ್ಥ ಹೇಮಾವತಿ ನದಿಗಳ ಸಂಗಮಸ್ಥಾನದಲ್ಲಿ ಕಟ್ಟಿರುವ ನೂತನ ದೇವಾಲಯದಲ್ಲಿ ಇದೇ ಮಾಘ ಶುದ್ಧ ತ್ರಯೋದಶಿ ಬುಧವಾರ (ತಾ ೫—೨—೩೬) ಉದಯಾದಿ ೬ ಘಳಿಗೆ ವೇಳೆ ಸಲ್ಲುವ ದಿವ್ಯ ಮೀನಲಗ್ನದಲ್ಲಿ ಪ್ರತಿಷ್ಠಾಪನ ಮಾಡಲಾಗಿ ಈ ಶುಭಕಾರ್ಯದಲ್ಲಿ ಮೊದಲಿನಿಂದಲೂ ಸಹಾಯಕರಾಗಿರುವ ಮಹಾಜನಗಳು (ಪ್ರತಿಯೊಬ್ಬರಿಗೂ ಪ್ರತ್ಯೇಕ ಆಹ್ವಾನಪತ್ರಿಕೆಗಳನ್ನು ಕಳುಹಿಸಲು ಅಸಾಧ್ಯವಾದ್ದರಿಂದ ಕ್ಷಮಿಸಿ) ತಮ್ಮ ಮಿತ್ರ ಬಾಂಧವರೊಡನೆ ದಯಮಾಡಿ ಈ ಮಹೋತ್ಸವವನ್ನು ನೆರವೇರಿಸಿ ದೇವತಾ ದರ್ಶನ ಪ್ರಸಾದ ಫಲಮಂತ್ರಾಕ್ಷತೆಗಳನ್ನು ಪಡೆದು ಶ್ರೀ ವೇಣುಗೋಪಾಲಕೃಷ್ಣ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುತ್ತಾರೆ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೮ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ— ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಇಂದು ನಿಶ್ಚಯದಂತೆ ಸಭಿಕರ ಹಾಗೂ ಸಮಾಜದ ಹಿತಚಿಂತಕರ ಕಾಲಕ್ಷೇಪಕ ಭಾಷಣವಾದ ಮೇಲೆ ಭಗಿನೀ ಸಮಾಜದಲ್ಲಿನ ಸಹೋದರಿಯರಲ್ಲಿ ಕೆಲವರು ತಮ್ಮ ಹಿಂದಿನ ಸುಖದುಃಖಗಳ ತಾರತಮ್ಯಗಳನ್ನು ಸಭಿಕರಿಗೆ ಮನದಟ್ಟು ಮಾಡುತ್ತಿರುವರು

ಮಹಿಳಾ ಸಮಾಜ.

(ಒಂದು ಕಾಲ್ಪನಿಕ ಸಮಾಜ ಚಿತ್ರ)

ಲೇಖಕಃ— ಯಂ. ಬಿ. ಎಸ್. ಮೂಲ್ಕಿ.

೧. ಕಮಲಾಃ— ಕಮಲೆಯು ತನ್ನ ಪೂರ್ವ ವೃತ್ತಾಂತವನ್ನು ಈ ರೀತಿ ಪ್ರಾರಂಭಿಸಿದಳು. "ನಾನೊಬ್ಬ ಹವೀಕ ಮನೆತನದ ಕುಲೀನ ಕುಟುಂಬದಲ್ಲಿ ಜನ್ಮವೆತ್ತಿದೆನು ಆಗಲೇ ಪ್ರೌಢ ವಿದ್ಯಾಭ್ಯಾಸವನ್ನು ಪಡೆಯುತ್ತಿರುವಾಗಲೇ ಎಂಬಂತೆ B A ಕಲಿತ ಸುಂದರನಾದ ವರನಿಗೆ (ವಿನಯ ಚಂದ B A) ನನ್ನನ್ನು ಕೊಟ್ಟು ವಿವಾಹವಾಯಿತು. ಆಗ ನನ್ನ ವಯಸ್ಸು ಹದಿನೆರಡು ಆ ಸಮಯ ನನಗೆ ಸಾಕಷ್ಟು ಅನುಭವವಿಲ್ಲದೂ ಇನ್ನೂ ಓದುತ್ತಲೇ ಇದ್ದೆನು ನನ್ನ ಪತಿಯೂ ಆಗ ವ್ಯಾಸಂಗದಲ್ಲಿದ್ದರು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಮುಂಬಾಯಿಗೆ ಹೊರಟರು ಮುಂಬಾಯಿಯಂತಹ ದೊಡ್ಡ ಪಟ್ಟಣದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡುವುದಕ್ಕೆ ಹೇರಳ ಹಣ ವ್ಯಯವಾಯಿತು ಆಸ್ತಿಪಾಸ್ತಿಗಳು ಒಂದರ ಹಿಂದೊಂದು ಕಂಡವರ ಪಾಲಾಯಿತು ದುಸ್ಸಂಗತಿಗಳಿಂದ ವೇಶ್ಯಾಗೃಹ ಪ್ರವೇಶವಾಯಿತು ವ್ಯಾಸಂಗವು ಅರ್ಧದಲ್ಲಿ ಮುಗಿಯಿತು ದುರ್ನಡತೆಗಳು ವಿಪರೀತವಾದವು ಆ ಸಮಯ ನನ್ನ ವ್ಯಾಸಂಗವು ಮುಗಿದು ಮನೆಯಲ್ಲಿ ನಿಲ್ಲಬೇಕಾಯಿತು ಪ್ರಥಮತಃ ಬರುತ್ತಿದ್ದ ಪ್ರೀತಿಯ ಕಾಗದಗಳು ನಿಂತುಹೋಯಿತು

ಒಂದು ದಿನ ಮನೆಗೊಂದು ತಂತಿ ವರ್ತಮಾನ "ಜೆ ಜೆ ಹಾಸ್ಪಿಟಲಿನ ಒಂದು ವಾರ್ಡಿನಲ್ಲಿ ನನ್ನ ಪತಿಯು ಮೃತ್ಯು ಶಯ್ಯೆಯಲ್ಲಿ ಮಲಗಿರುವರೆಂದು" ಅಲ್ಲಿಗೆ ಮುಗಿಯಿತು ಅಂತ್ಯ ದರುಶನವೂ ಆಯಿತು ಭಯಂಕರ ಕ್ಷಯರೋಗವು ಪ್ರಾಣವಾಯುವನ್ನು ಸೆಳೆಯಿತು ನನ್ನ ಭಾವೀ ಸುಖವು ಅದರೊಂದಿಗೆ ಮಣ್ಣುಪಾಲಾಗಿ ಹೋಯಿತು ಕಣ್ಣೀರು ಸುರಿಸುವಳು

೨. ಗಂಗಮ್ಮಃ— ಅದೊಂದು ಶುಕ್ಲಪಕ್ಷದ ಸೋಮವಾರ ದಿನದ ಎಂಟು ಗಂಟೆ ರಾತ್ರಿ ಆನಂದಭವನದಲ್ಲಿ ತಳಿರು ತೋರಣ ಕಟ್ಟಿದರಂತೆ ವಾಲಗ ಶ್ರುತಿ, ಬೇಂಡು, ವಾದ್ಯಘೋಷದ ಸಮಾರಂಭದಲ್ಲಿ ನನಗೆ ಒಂದು ಮದುವೆಯಾಗಿತ್ತಂತೆ ಆಗ ನನಗೆ ಬರೀ ಏಳು ವರ್ಷವೆಂದು ನನ್ನ ತಾಯಿ ಹೇಳಿದ್ದಳು ಅದೇನು ಆಟದ ಗೊಂಬೆಯೋ ಎಂಬಂತೆ ನನಗೆ ಒಬ್ಬನೊಡನೆ ಕಲ್ಯಾಣವಾಯಿತಂತೆ ಮದುವೆಯಾದ ಹದಿನೈದು ದಿವಸಗಳಲ್ಲೇ ನನ್ನ ಪತಿಯು ಪರಲೋಕವಾಸಿಯಾದರಂತೆ ಎಲ್ಲಾ ಅಂತೆ ಕಂತೆಗಳೇ ನನ್ನ ಪಾಲಿಗೆ

ನಾನೀಗ ಹದಿನೈದು ವರ್ಷದವಳು ಈಗಾಗಲೇ ಮಡಿಮಾಡಬೇಕಂತೆ ಪಕ್ವಾಯ. ಮಡಿ ಅಂದರೆ ಗೊತ್ತೇ ಇದೆ ತಲೆ ಕೂದಲು ತೆಗಿಸುವುದು ಚಿನ್ನಾಭರಣಗಳನ್ನು ತ್ಯಜಿಸುವುದು ಇತ್ಯಾದಿ. ಇದರಿಂದ ಮನೆಯವರಿಗೆ ಅದೇನು ಸುಖವೋ ನಾನರಿಯೆ. ಇಲ್ಲದಿದ್ದರೆ ಶುಭಶೋಭನೆಗಳು ಸರಿಯಾಗಿ ನಡೆಯಲಾರದಂತೆ. ನನಗಿಂತ ದೊಡ್ಡವರು ಇನ್ನಿಬ್ಬರು ಅಕ್ಕಂದಿರು ಇರುವರು. ಅವರಿಗೆ ಎರಡೆರಡು ಮಕ್ಕಳಿರುವರು ನನ್ನ ಮಾತುಶ್ರೀಯವರು ಎರಡು ತಿಂಗಳ ಕೆಳಗೆ ತನ್ನ ನಾಲ್ವತ್ತೈದನೆಯ ವರ್ಷದಲ್ಲಿ ಕಾಲವಾದರು. ಕಳೆದ ಒಂದು ತಿಂಗಳ ಮುಂಚೆ ನನ್ನ ತಂದೆಗೆ ಪುನರ್ವಿವಾಹವಾಯಿತು. ನವ ವಧುವಿಗೆ ಹದಿನೆರಡು ವರ್ಷ. ನನ್ನ ತಂದೆಗೆ ಮೂವತ್ತರ ಮೇಲೆ ಇಪ್ಪತ್ತೈದು ವರ್ಷ ಪ್ರಾಯ. ಮುದುಕರಿಗೆ ಇನ್ನೂ ಮದುವೆಯ ಆಶೆ ತೀರಲಿಲ್ಲ ಆದರೆ ನಾನು ಮಡಿಯಾಗಿರಬೇಕು ಇಲ್ಲದಿದ್ದರೆ ಚಿಕ್ಕಮ್ಮಗೆ (ಅಲ್ಪ ತಪ್ಪಾಯಿತು ನನಗಿಂತಲೂ ಕಿರಿಯವಳು) ಮಡಿ ಮೈಲಿಗೆಯಾಗುತ್ತದಂತೆ ಹಾಯ್! ದೈವವೇ ಇದೇನು ಮಾಡುತ್ತಿರುವೆ? ನಿನ್ನ ಲೀಲೆಯು ಅಗಾಧವಾದದ್ದು ನನ್ನಂತಹ ನಾರಿಯರಿಗೆ ನಾಚಿಕೆ, ಮರ್ಯಾದೆ, ಸತೀತ್ವವನ್ನು ಕೊಟ್ಟಿರುವೆ, ಆಚಾರವನ್ನು ಅರೆಅಂಗುಲದಷ್ಟು ತಪ್ಪಿ ನಡೆಯಬಾರದು. ಆದರೆ ಗಂಡಸಾದವನು ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಬೇಡವೆ? ಇರಲಿ! ಭಾರತ ಮಹಿಳೆಯರ ಪರೀಕ್ಷೆಯನ್ನು ಮಾಡಬೇಕೆಂದಿರುವಿಯಲ್ಲಾ! ನೋಡು ಅದಾರು ಬೇಡವೆಂದು ಹೇಳುವರು? ಆದರೆ ಕಳಂಕಿತರಾಗದಂತೆ ಎಚ್ಚರ ನೋಡು ಇದೇ ನನ್ನ ಬೇಡಿಕೆಗಳು

೩. ಭಾರತಿಃ— ಸಹೋದರ— ಸಹೋದರಿಯರೆ ಇಂದು ನನ್ನಂತಹ ಅನೇಕ ಸಹೋದರಿಯರು ಭಾರತಮಾತೆಯ ಸೇವೆಗೆ ಬದ್ಧ ಕಂಕಣರಾಗಿ ನಿಂತಿರುವುದು ಭೂಷಣವೇ ಸರಿ ನಾನೊಬ್ಬ ಕಬೇರನ ಪತ್ನಿಯೇ ಎಂಬಂತೆ ಕೆಲವು ಕಾಲ ಸುಖದಿಂದ ಕಳೆದೆನು ಆದರೆ, ಅದು ಕ್ಷಣಿಕ ಸುಖವೆಂದು ಆ ಮೇಲೆ ತಿಳಿದೆನು ನನ್ನ ಭಾಗ್ಯ ದೇವತೆಯಾದರೋ ತಿಂಗಳಿಗೆ ಹತ್ತು ಸಾವಿರ ಸಂಪಾದನೆ ಇರುವ ವಕೀಲತನ ಬಿಟ್ಟು ಪವಿತ್ರವಾದ ದೇಶಸೇವೆಗೆ ಇಳಿದರು ಆದ ನನಗೆ ಪ್ರಥಮತಃ ಅಸಹನೀಯವಾಗಿ ತೋರಿದರೂ ನನ್ನಂತಹ ನಾವಿರಾರು ಮಹಿಳೆಯರು ಸೆರೆಮನೆಗೋ, ಸೋದರರು ಲಾಠಿ ಪ್ರಹಾರಕ್ಕೋ ಸಿಲುಕಿ ಧಾರಾ ತೀರ್ಥದಲ್ಲಿ ಶೋಭಿಸುತ್ತಿರುವಾಗ್ಯೆ ನಮ್ಮ ಕೆಲಸವನ್ನು ನಾವು ಮಾಡಬೇಕಲ್ಲವೇ ಎಂದು ಅನಿಸಿತು ನನ್ನ ಪತಿದೇವರೂ ಮತ್ತಷ್ಟು ಉತ್ತೇಜನ ಕೊಟ್ಟನು. ಸಮರವು ಉದ್ವಿಗ್ನವಾಯಿತು ಭಾರತಾಂಬೆಯ ಗೋಳು ದಶದಿಕ್ಕುಗಳಿಗೂ ತಿಳಿದು ಎಚ್ಚತ್ತ ಕಾಲವದು ನಾವೂ ಧಾರಾತೀರ್ಥಕ್ಕೆ ಇಳಿದೆವು ನಮ್ಮ ಪಾಲಿಗೆ ಸೆರೆಮನೆ ಪ್ರಾಪ್ತವಾಯಿತು. ದಂಡನೆಗಾಗಿ ಚರ ಸ್ವತ್ತುಗಳನ್ನೂ ಬೇಂಕಿನಲ್ಲಿದ್ದ ಹಣವನ್ನೂ ಮುಟ್ಟುಗೋಲು ಹಾಕಿದ ಸಂಗತಿ ಜೈಲಿನಿಂದ ಹೊರಗೆ ಬಂದ ಮೇಲೆ ತಿಳಿದು ಬಂತು "ಕರುವಿನ ಮೇಲೆ ಬೊಕ್ಕೆ ಎದ್ದಂತೆ" ಪತಿದೇವರಿಗೆ ಹೃದ್ರೋಗವು ಪ್ರಾಪ್ತಿಯಾಯಿತು ಹಾಗೂ ಬಿಡುಗಡೆಯಾದ ಕೆಲವು ದಿವಸಗಳಲ್ಲೇ ಇಹಲೋಕವನ್ನು ಅಗಲಿ ಹೋದರು ಅಂದಿನಿಂದ ನಾನು ಒಂಟಿಯಾಗಿ ಈ ಪವಿತ್ರ ಸಂಘದ ಸೇವೆಯನ್ನು ಮಾಡುತ್ತಿರುವೆನು ಉಳಿದ ಅಲ್ಪ, ಸ್ವಲ್ಪ ಧನ, ಕನಕ ವಸ್ತುಗಳನ್ನು ಆಗಲೇ ಈ ಸಂಸ್ಥೆಗೆ ಅರ್ಪಿಸಿರುವೆನು ರಾಮಾಯಣ, ಭಾರತದ ಕಾಲದಲ್ಲಿಯೂ, ಈಚೆಗೆ ರಜಪೂತರ ಕಾಲದಲ್ಲಿಯೂ ರಮಣಿಯರು ತಮ್ಮ, ತಮ್ಮ ಪುರುಷರ ಜೊತೆ ತಮ್ಮತಮ್ಮ ಪೌರುಷಗಳನ್ನು ವೈರಿಗಳಿಗೆ ತೋರಿಸುತಿದ್ದರು ಆದುದರಿಂದ ನಾವೂ ಕೂಡಾ ನಮ್ಮ ಕರ್ತವ್ಯಗಳನ್ನು ಸರಿಯಾಗಿ ನಡೆಸಿಕೊಂಡು ಮಾತೆಯನ್ನು ಸಂತುಷ್ಟಗೊಳಿಸುವ. ಅಂತೆಯೇ ಭಾರತಮಾತೆಯು ಸಕಲರಿಗೂ ಸದ್ಬುದ್ಧಿಯನ್ನೀಯುವಂತೆ ಸರ್ವಶಕ್ತನೊಡನೆ ಬೇಡುವ ಎಂದು ತನ್ನ ಭಾಷಣವನ್ನು ಮುಗಿಸಿದಳು.

೪. ಇಂದಿರೆ— ಕಡು ಲೋಭಿಗಳೋ ಎಂಬಂಥವರ ಗೃಹದಲ್ಲಿ ನನ್ನ ಜನನವಾಯಿತು. ಆಗಲೇ ಹತ್ತು ವರುಷ ತುಂಬುವಾಗಲೇ ದೊಡ್ಡ ಶ್ರೀಮಂತನೊಬ್ಬನಿಗೆ ನನ್ನನ್ನು ಕೊಟ್ಟು ಸಂಭ್ರಮದ ವಿವಾಹವಾಯಿತು ಅದೇನು ಚಿತ್ರಪಟದಲ್ಲಿನ ಸುಕುಮಾರನೋ ಆ ಇಲೆಕ್ಟ್ರಿಕ್ ದೀಪದಲ್ಲಿ ಪತಿಯ ಮುಖವು ಶೋಭಿಸಿತು. ಕಾರಣ, ಅಂತಹ ಭಾವ ಚಿತ್ರವೇ ನನ್ನ ಮನಸ್ಸಿನಾಳಕ್ಕಿಳಿಸಿತು. ಅಂದಿನ ಶುಭಕಾರ್ಯದ ದಿನ ಅದೆಷ್ಟು ಸಂತೋಷದಲ್ಲಿದ್ದೆನೋ ಒಂದೇ ಐದಾರು ದಿವಸಗಳಲ್ಲಿ ಪತಿಗೃಹದಲ್ಲಿ ದುಃಖದ ಹೊರೆಯಿಂದ ಮಿನ್ನಳಾದೆನ ಮದುವೆಯ ದಿನದ ರಾತ್ರಿಯಲ್ಲಿನ ದೀಪದ ಬೆಳಕಿನಲ್ಲಿ ಕಂಡ ಪ್ರಫುಲ್ಲಿತ ಮುಖವೆಲ್ಲಿ? ಈಗಿನ ಜೋಲು ಹಾಗೂ ನೆರಿಗೆ ಕಟ್ಟಿದ ಕೋತಿ ಮುಖವೆಲ್ಲಿ? ನನಗೆ ಆಕಾಶವೇ ಭೂಮಿ ಭೂಮಿಯೇ ಆಕಾಶವೆ ಎಂತ ತೋರಿತು ರಾತ್ರಿ ಮುಖಕ್ಕೆ ಬಣ್ಣ ವಿಶ್ರಿತ ಪೌಡರ್ ಹಚ್ಚಿ, ತಲೆಗೆ ಜರತಾರಿ ಪೇಟಾವನ್ನು ಸುತ್ತಿ ನಾಲ್ಕುದುದಕ್ಕೆ ದೃಷ್ಟಿ ಚಕ್ರವನ್ನು ಇಟ್ಟು ತೆಗೆದ ಸುಂದರ ಮುಖದ ಭಾವಚಿತ್ರಕ್ಕೆ ಒಲಿಬಿದ್ದ ಈಗ ನರಕ ಯಾತನೆಗೆ ಬೀಳಬೇಕಾಯಿತು ಮನಸ್ಸಿನಲ್ಲಿ ಅದಾವ ಸುಖವನ್ನು ಹೊಂದಿ ಸಂತೋಷಪಡೆಯಬೇಕೆಂದಿದ್ದೆನೋ ಅದು ಮಣ್ಣುಪಾಲಾಯಿತು ಸಂಸಾರ ಸುಖವು ಬೇಡವಾಯಿತು ನನ್ನ ತಾಯಿತಂದೆಗಳಾದರೋ ಹಣದ ಆಶೆಗಾಗಿ ನನ್ನನ್ನು ಮಾರಿದ್ದುದು ನನಗೆ ಆ ವೇಳೆ ತಿಳಿಯಿತು. ಮಾನ ಸಂರಕ್ಷಣೆ ಮಾಡಬೇಕಲ್ಲಾ ಎಂಬ ಲೋಕದ ಹೆದರಿಕೆ ಆಗಲೂ ನನ್ನನ್ನು ಆವರಿಸಿತ್ತು ಹಾಗೂ ಹೀಗೂ ನಾಲ್ಕು ವರ್ಷ ಕಳೆದೆನು ಆಗ ತುಂಬಿದ ಯೌವನೆ ನನ್ನ ಪತಿಗೆ ಆವಾಗಲೇ ಅರ್ವತ್ತು ವರ್ಷ ತುಂಬಿಹೋಗಿತ್ತು ನನ್ನಂತಹ ಬಾಲೆಯನ್ನು ತಂದು ತಾನು ಅದೆಂತಹ ಸುಖವನ್ನು ಪಡೆದಾರು. ಮುಗಿಯಿತು. ಆಗಲೇ ತಲೆದೋರಿದ ಸೋಂಕು ರೋಗವು ಪತಿಯ ಪ್ರಾಣವನ್ನು ಸೆಳೆದುಕೊಂಡು ಹೋಯಿತು

ಭಿಕಾರಿಯಾಗಿ ತಿರುಗುವ ಅದೊಂದ ಸನ್ನಿವೇಶವು ನನಗೆ ದೊರಕಿತು ಕಾರಣ ಮನೆಯ ಇನ್ನಿತರರು ವಿಷದೃಷ್ಟಿಯಿಂದ ನೋಡಲು ಪ್ರಾರಂಭಿಸಿದರು ಆಗಂತೂ ಪ್ರಾಣದ ಆಶೆಯನ್ನು ತ್ಯಜಿಸಿದೆನು "ಆತ್ಮಘಾತ" ಮಾಡಿಕೊಳ್ಳೋಣವೆಂದು ತೋರಿತು ಆದರೆ, ಮನಸ್ಸು ಹಿಂಜರಿಯಿತು ನೆಪಹಿಡಿದ ತವರುಮನೆಗೆ ತಲ್ಪಿಸಿ ಬಂದೆನು ಆದರೆ ಅಲ್ಲಿ ಸುಖವೆತ್ತಣದು? ವಕ್ರದೃಷ್ಟಿ ಸದಾ ನನ್ನ ಮೇಲೆ ಇದ್ದೇ ಇದ್ದಿತು ಬೈಸಿಕೊಂಡುದೂ ಪೆಟ್ಟು ತಿಂದುದೂ ಆಯಿತು ಅಂತೂ ಕಷ್ಟವೆಷ್ಟಿದೆಯೋ ಅಷ್ಟನ್ನೆಲ್ಲಾ ಅನುಭವಿಸಿಯಾಯಿತು ಆಗಲೇ "ಭಗಿನೀ ಸೇವಾ ಸಂಘ" ಎಂಬ ಸಂಸ್ಥೆಯು ಕಮಲಾಬಾಯಿಯವರ ಮುಂದಾಳುತನದಲ್ಲಿ ನಡೆಯುತ್ತಿದೆಂದು ಕೇಳಿದೆನು. ಮನಸ್ಸು ಈ ಕಡೆ ಎಳೆಯಿತು ಆದರೆ, ಸಂಕೋಚ ಅದೆಲ್ಲಿ ಜನರು ಏನು ಆಡಿಕೊಳ್ಳುತ್ತಾರೋ ಎಂಬ ಭಯ. ಪಕ್ಕದ ದೇವಸ್ಥಾನಕ್ಕೆ ದೇವದರ್ಶನಕ್ಕೆಂದು ಹೋಗಿ ಬರುತ್ತಿದ್ದೆನು ಅರ್ಚಕ ನಾರಾಯಣ ಶಾಸ್ತ್ರೀಯ ಮೇಲೆ ಎಲ್ಲವರೂ ಅಪವಾದ ಹೊರಿಸುತ್ತಿದ್ದರು. ಸ್ವಪರೀಕ್ಷೆಯೋ ಎಂಬಂತೆ ಆ ದುಷ್ಟನು ನನ್ನ ಮೇಲೆ ಕೈಮಾಡಲಿಚ್ಛಿಸಿದನು. ಆಗಂತೂ ಸಹಿಸಲಾರದ ದುಃಖವಾಯಿತು. ಈ ಸಂಗತಿ ಹಾಗೂ ಹೀಗೂ ಮನೆ ವರೆಗೆ ಮುಟ್ಟಿತು. ನಾನಂತೂ ಅಬಲೆಯು. ಆ ಕಪಟ ಶಾಸ್ತ್ರಿಯ ಆಟವೇ ನಡೆದು ನಾನೇ ತಪ್ಪಿತಸ್ಥೆಯೆಂದು ಮನೆಯಿಂದ ಹೊರ ಹಾಕಿಸಲ್ಪಟ್ಟೆನು (ಧಿಕ್ಕಾರ! ಶಾಸ್ತ್ರೀಯ ದುರ್ಬುದ್ಧಿಗೆ ಎಂಬ ಧ್ವನಿ ಸಭೆಯಿಂದ ಕೇಳಿಸಿತು) ಅಂದಿನಿಂದ ನಿಮ್ಮ ಜೊತೆಯಲ್ಲಿ ನನ್ನಿಂದ ಸಾಧ್ಯವಿದಷ್ಟು ಸೇವೆಯನ್ನು ಮಾಡುತ್ತಿರುವೆನು. ಹಾ! ಭಾರತ ಮಾತೆಯೇ ಎಂದಿನ ವರೆಗೆ ನನ್ನಂತಹ ಅಬಲೆಯರ ಉದ್ಧಾರವಾಗುವುದಿಲ್ಲವೋ ಅಲ್ಲಿನ ವರೆಗೆ ನಿನಗೆಲ್ಲಿಯ 'ಸ್ವಾತಂತ್ರ್ಯ'? ಧರ್ಮಕ್ಕೆ ಲೋಪವಾಯಿತು ದೇವಾ ಅನಾಥಬಂಧೂ ತೋದ್ಧಾರಕನೇ ನಿನ್ನ ಅಕಳಂಕಿತ ಕೀರ್ತಿ ಸೊಡರನ್ನು ಚೆನ್ನಾಗಿ ಬೆಳಗಿಸು. ಕರುಣೆ ದೋರು. ಅಬಲೆಯರನ್ನು, ಅನಾಥರನ್ನು ಕೈಬಿಡಬೇಡ ಭಾರತಮಾತೆಯ ಕೀರ್ತಿಯನ್ನು ಹೆಚ್ಚಿಸು. ಇದೇ ನನ್ನ ಪ್ರಾರ್ಥನೆ ಕಣ್ಣೀರು ಸುರಿಸುವಳು

ಸಭೆಯು ನಿಶ್ಶಬ್ದವಾಗಿತ್ತು ಪುರುಷರ ಕಡೆಯಿಂದ ರಮಾಧವನನು ಎದ್ದು, ಸಹೋದರ ಸಹೋದರಿಯರೇ ಈಗಾಗಲೇ ತಮ್ಮ ತಮ್ಮ ಕಷ್ಟಪರಂಪರೆಗಳನ್ನು ಮನನಮಾಡಿಕೊಂಡದ್ದು ಸರ್ವರಿಗೂ ವಿದಿತವಾಗಿಯೇ ಇದೆ ಇದು ಈಗ ಹೆಚ್ಚುಕಡಮೆ ಎಲ್ಲಾ ಕಡೆಗಳಲ್ಲಿ ನಡೆಯುವ ಹೃದಯ ದ್ರಾವಕ ಸಂಗತಿಗಳು ಎಂದು ಕಮಲಾಬಾಯಿಯವರು ನನ್ನ ಭಾರ್ಯೆ ಸೀತಾಬಾಯಿಗೆ ವಿವೇಕವನ್ನು ಹೇಳಿಕೊಂಡು ಬಂದರೋ ಅದೆಲ್ಲವನ್ನು ಸಂಗ್ರಹಿಸಿ ಮನನ ಮಾಡಿಕೊಂಡ ನಂತರ ನನ್ನನ್ನು ನಿಮ್ಮೆಲ್ಲರ ಸೇವೆಗೆ ತಂದೆಳೆಯಿತು. ಇಂದು ನಿಮ್ಮಂತಹ ಸುಶಿಕ್ಷಿತ ಭಗಿನಿಯರಿಗೆ ಬಂದಿರುವ ವಿಪತ್ತುಗಳು ನಮ್ಮ ಮುಂದಿನ ಜನಾಂಗಕ್ಕೆ ಬಾರದಿರಲಿ ಇಂದಿನ ಆರ್ಯಾವರ್ತವು ಭಿನ್ನ ಭಿನ್ನ ಅಭಿಪ್ರಾಯಗಳಿಗೆ ಸಿಲುಕಿ ಅಲ್ಲೋಲ ಕಲ್ಲೋಲವಾಗಿದೆ ಪೂರ್ವಕಾಲದ ಅಭಿಮನ್ಯು, ಕರ್ಣ, ಹನುಮ, ಪೃಥ್ವಿರಾಜ, ಛತ್ರಪತಿ ಶಿವಾಜಿ ಮುಂತಾದ ವೀರಶಿಖಾಮಣಿಗಳೂ, ಸೀತಾ, ದ್ರೌಪದಿ, ಸಾವಿತ್ರಿ, ಪದ್ಮಿನಿ ಮುಂತಾದ ಮಹಿಳಾಮಣಿಗಳೂ ಈಗ ದೊರೆಯಲಾರರು. ಭಾರತೀಯರೇ ಯಾವಾಗ ನಮ್ಮ ಪವಿತ್ರ ಭಾರತಮಾತೆಯ ಐಶ್ವರ್ಯವನ್ನು ಅಪಹರಿಸಲು ಪ್ರಾರಂಭಿಸಿದರು. ಇಲ್ಲಿಗೆ ಸಮುದ್ರ ದಾಟಿ ಕಾಲಿಟ್ಟರೋ ಅಂದಿನಿಂದ ನಮ್ಮ ಅಧಃಪತನಕ್ಕೆ ಪ್ರಾರಂಭವಾಯಿತು. ಒಂದು ಸಮಯ (ಈಗಲೂ) ಸುವರ್ಣ ಭೂಮಿಯೆಂದು ಹೆಸರುಗೊಂಡ ಭಾರತಮಾತೆಯು ಈಗ ನನ್ನ ಮಕ್ಕಳಿಗೆ ಒಂದು ತುತ್ತು ಅನ್ನ ಕೊಡುವ ಯೋಗ್ಯತೆ ಪಡೆಯಲ್ಲ ಇಂದಿಗೂ ಪರದೇಶಿಯರನ್ನು ಸದಾ ಸಾಕುತ್ತಿರುವ ಭಾರತಮಾತೆಯು ಇಂದ ನಮ್ಮನ್ನು ಉಪವಾಸ ಕೆಡವಿದ್ದಾಳೆ ಇದೆಲ್ಲಾ ನಮ್ಮ ಅಸಡ್ಡೆ ವ್ಯಂಗ್ಯತನವಲ್ಲದೆ ಮತ್ತೇನು! ಇಂದಿಗೆ ನಮ್ಮಲ್ಲಿ ಅಂಟಿಕೊಂಡಿರುವ ಸಹೋದರ ದ್ವೇಷ, ಪರಮತ ದ್ವೇಷ, ಮಾತ್ಸರ್ಯತನ ಪರಾವಲಂಬತನ ಇತ್ಯಾದಿ ತೊಲಗುವುದಿಲ್ಲವೋ ಅಂದಿನ ವರೆಗೆ ನಾವು ಏಳಿಗೆ ಹೊಂದವಂತಿಲ್ಲ ಹಾಗೂ ನಾವು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಐಕ್ಯಮನಸ್ಸು, ಐಕ್ಯಭಾವ, ಪರೋಪಕಾರ, ಬುದ್ಧಿ, ಸಂಘ ರಚನಾಕಾರ್ಯ ಮುಂದೊತ್ತಿ ಹೋದರೆ ಭಾರತಮಾತೆಯ ದಾಸ್ಯ ಸಂಕೋಲೆಯು ತನಗೆ ತಾನೇ ತಪ್ಪಿ ಹೋಗುವುದು ಅಂತೇ ಬಗಲೆಂದು ಪರಮೇಶನೊಡನೆ ಬೇಡುವಾ

ಈಗ ನಾವು ಕೈಕೊಂಡಿರುವ ಈ ಸೇವೆಯನ್ನು ಲೋಪ ಬಾರದಂತೆ ನಡಿಸುತ್ತಾ ಹೋದಂತೆ ಇದಕ್ಕೆ ಬೆಂಬಲವು ತನಗೆ ತಾನೇ ಬರುವುದು. ಅನ್ಯೋನ್ಯ ಭಾವ, ಪರೋಪಕಾರತ್ವದಿಂದ ನಡೆಯುತ್ತಿರುವ ಈ ಸಂಸ್ಥೆಗಳು ಅನೇಕವಾಗಿ ಮುಂದಕ್ಕೆ ಬರಲೀವೆ. ಸಮಾಜ ಸೇವೆ ಹಾಗೂ ದೇಶಸೇವೆಯನ್ನು ಮಾಡುತ್ತಿರಲಿ ಮಾರ್ಗದರ್ಶಕರಾದ ನಳಿನೀರಂಜನ ರಘುನಾಥ, ವಿಶ್ವನಾಥರಂಥಾ ಗಂಡಸರು ಇಂಥಾ ಸಂಸ್ಥೆಗಳಿಗೆ ಉತ್ತೇಜನ ಕೊಟ್ಟಂತೆ ಇವು ಸುಸೂತ್ರವಾಗಿ ನಡೆಯುವ ಸಂಭವವುಂಟು. ಪ್ರಥಮತಃ ಇಂಥಾ ಸಂಸ್ಥೆಗಳು ಅನೇಕರಿಗೆ ಅಸಹಿತವಾಗಿ ತೋರಬಹುದು.

(ಇನ್ನೂ ಇದೆ ಮುಂದುವರಿಯುವುದು)

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಸಿದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

[illegible]

ಅನುಮಾನವಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ ಪೂರ್ಣ ಗುಣಲಾಭ ಸಿಗುತ್ತದೆ.

ಈ ರೋಗಬಾಧಿತರಿಗೊಂದು ಮಹಾ ವರದಾನ

ಕ್ರಯ ಬಾಟ್ಲಿಗೆ ರೂ. 4-8-0. 1/6ರಷ್ಟು ಅಂಚೆಚೀಟು ಹೆಚ್ಚು

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು.

[illegible]

Canara Bank Ltd., Mangalore.

NOTICE.

Is hereby given that unde Section 37 of the Indian Companie Act No. VII of 1913, the Register of Members the Bank will be closed from Monday the 3rd February 1936 to Saturday the 22nd February 1936 (both days inclusive)

ಕೆನರಾ ಬೇಂಕ್ ಲಿಮಿಟೆಡ್,

ಮಂಗಳೂರು.

ನೋಟೀಸು.

1913ನೇ ಇಸವಿಯ ನಂಬ್ರ 7ನೇ ಇಂಡಿಯನ್ ಕಂಪೆನೀಸ್ ಏಕ್ಟಿನ 37ನೇ ಸೆಕ್ಷನಿಗೆ ಅನುಗುಣವಾಗಿ ಈ ಬೇಂಕಿನ ಮೆಂಬರರ ರಿಜಿಸ್ತರ 1936ನೇ ಇಸವಿ ಫೆಬ್ರವರಿ ತಾ. 3ನೇ ಸೋಮವಾರದಿಂದ 1936ನೇ ಇಸವಿ ಫೆಬ್ರವರಿ ತಾ 22ನೇ ಶನಿವಾರದ ವರೆಗೆ (ಉಭಯ ದಿವಸಗಳು ಕೂಡಿ) ಮುಚ್ಚಲ್ಪಡುವುದು

By Order,

Office of the Bank Bunder [illegible] Date 25—1 1936 } P. Sarvotham Nayak, *General Manager*

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
[illegible]	3— 6	3— 13
[illegible]	3—10	4— 2
ಗುಡ್ಡ [illegible]	3— 8	3—14
[illegible]	4— 0	4— 8
ರಂಗೂನು [illegible] ಗೋ ಗಳ್ಳೆ	6— 4	7— 0
[illegible] ಗಳ್ಳೆ	4— 4	4— 8
[illegible] ಗೋಣಿ ಗಳ್ಳೆ	8 — 8	10— 4
[illegible] ಗೋಣಿ ಗಳ್ಳೆ	9 —[illegible]	9 — 6
[illegible] ಗೋಣಿ ಗಳ್ಳೆ	5— 4	5— 12
[illegible] ಗೋಣಿ ಗಳ್ಳೆ	7 — 4	9 — 8
[illegible] ಗೋಣಿ ಗಳ್ಳೆ	11— 0	15— 8
ಉದ್ದು ಗೋಣಿ ಗಳ್ಳೆ	9 8	10 — 0
[illegible] ಗೋಣಿ ಗಳ್ಳೆ	9— 4	9— 12
[illegible] ಕಂಡಿ ಗಳ್ಳೆ	32— 0	40— 8
ಉಪ್ಪು ಗೋಣಿ ಗಳ್ಳೆ	4— 8	4— 8
[illegible] ಕಂಡಿ ಗಳ್ಳೆ	60— 0	70— 0
[illegible] ಕಂಡಿ ಗಳ್ಳೆ	28— 0	29— 0
[illegible] ಕಂಡಿ ಗಳ್ಳೆ	33 —12	35— 0
[illegible] ಗಳ್ಳೆ	5— 0	6— 0
ಎಳ್ಳೆಣ್ಣೆ [illegible] ಗಳ್ಳೆ	7— 0	7— 0
[illegible] ಗಳ್ಳೆ	6— 5	6— 5
[illegible] ಗಳ್ಳೆ	3— 9	3 — 9
ಮೆಣಸು	2— 8	4— 0
[illegible] ಗಳ್ಳೆ	5 — 8	6— 0
[illegible] ಗಳ್ಳೆ	102— 8	105—
[illegible] ಗಳ್ಳೆ	38— 0	39— 0
[illegible] ಗಳ್ಳೆ	4— 6	4 — 8
[illegible] ಕಂಡಿ ಗಳ್ಳೆ	35— 0	37— 8
[illegible] ಗಳ್ಳೆ	9— 12	9— 14
[illegible] ಗಳ್ಳೆ	12— 8	14— 0
[illegible] ಗಳ್ಳೆ	17— 8	18— 0
[illegible] ಗಳ್ಳೆ	10— 0	10—
[illegible] ಗಳ್ಳೆ	22— 8	22— 8
[illegible] ಕಂಡಿ ಗಳ್ಳೆ	20— 0	25— 8
[illegible] ಕಂಡಿ ಗಳ್ಳೆ	145— 0	150— 0
[illegible] ಕಂಡಿ ಗಳ್ಳೆ	185— 0	190— 8
[illegible]	25— 0	26 — 0

Shiromani Narayanacharya & Co.,

S [illegible] & Cloth [illegible]

Choukhamba Benares City

THIS MAN
OUR CUSTOMER

[illegible]

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

HASAG



ಹಸಾಗ್

ದೀಪಗಳಿಗೆ ಅತ್ಯುತ್ತಮವಾದುದು ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಲ್ಲವೂ ಹೊಸ ಮಾದರಿ ಈಗಾಗಲೆ ಸಾವಿರಗಳ್ಳಳ ಜನರು ಇದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ ಹಸಾಗ ದೀಪದ ವೃತ್ತಿಯನ್ನು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ [illegible] ಇದಕ್ಕಿಂತ ಉತ್ತಮವಾದ ದೀಪವು [illegible] ಕ್ರಯವು ಬಹಳ ಕಡಿಮೆ [illegible]

EFAR



ಎಫಾರ್

[illegible] ಬಹಳ ಕಡಿಮೆ [illegible]

Sole Representatives F. Racek & Co.,

Bombay	Calcutta	Madras	Colombo
P O Box	P O Box	P O Box	P O Box
2006	2121	1248	369

೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

[illegible]

ಬಿ.ಪಿ.ಎಸ್ Bengal Mesmarism House

5–7 Panchpota, Bengal (s. D)

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಮಾಘ ಶು॥ ೯ ಶನಿವಾರದಿಂದ ಮಾಘ ಶು॥ ೧೫ ಶುಕ್ರವಾರದ ವರೆಗಿನ ಪಂಚಾಂಗ (೧೯೩೬ನೇಯ ಮಕರ ಪುಯಿಂಕಿಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
1	ಶನಿ	೯	೪೧	ಕೃತ್ತಿಕಾ	೪೩	೧೮	[illegible]
2	ರವಿ	೧೦	೨೬	ರೋಹಿಣೀ	೪೪	೧೯	
3	ಸೋಮ	೧೧	೨೫	ಮೃಗಶಿರಾ	೪೩	೨೦	
4	ಮಂಗಳ	೧೨	೨೪	ಆರ್ದ್ರಾ	೪೪	೨೧	
5	ಬುಧ	೧೩	೨೩	ಪುನರ್ವಸು	೪೫	೨೨	
6	ಗುರು	೧೪	೨೪	ಪುಷ್ಯ	೪೬	೨೩	
7	ಶುಕ್ರ	೧೫	೨೫	ಆಶ್ಲೇಷಾ	೫೨	೨೪	

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು. ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ - (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ - (ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ - (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ - (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ ಕಟಪಾಡಿ ದ. ಕನ್ನಡ



Distributors for South Kanara —

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು:— ಕಾಮತ್ಸ್ ಸ್ವದೇಶೀ ಎಂಪೋರಿಯಂ

1936

ಇಸವಿಯ

ಶಾರದಾ ಡೈರಿಗಳು

ತಯಾರಾಗಿವೆ

ಶಾರದಾ ಛಾಪಖಾನೆಗೆ

ಬರೆಯಿರಿ

ಅಥವಾ

ಬನ್ನಿ

ತಯಾರಾಗಿದೆ!

ಗೌ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಶಿಯೋಲೋಜಿ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗ ಸಿದ್ಧವಾಗಿದೆ. ಇದನ್ನು ಗವರ್ನ್ಮೆಂಟ್ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್ ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ   ಅಜ್ಜಿ ಕಥೆಗಳು (ಸಚಿತ್ರ)

ಚರಿತ್ರೆ ಮತ್ತು ಕಥೆಗಳು.	ರೂ ಆ ಪೈ	ಸಾಮಾನ್ಯ ವಿಜ್ಞಾನ.		ಅಜ್ಜಿ ಕಥೆಗಳು
		ಎರಡನೇ ದರ್ಜೆ	0 8 0	ಮೂರು ಕರಡಿಗಳು
ನಾಲ್ಕನೇ ದರ್ಜೆ	0 6 0	ಮೂರನೇ ,,	0 8 0	ಹೇನು ಸತ್ತು ಕಾಗೆ ಬಡವಾಯಿತು
ಮೂರನೇ ,,	0 4 6	ನಾಲ್ಕನೇ ,,	0 6 0	ಮೆಣಸಿನ ಕಾಳಪ್ಪ
ಎರಡನೇ ,,	0 4 0	ಐದನೇ ,,	0 5 0	ಅರಗಿನ ಮುದ್ದೆ
ಸಮಾಜಶಾಸ್ತ್ರ.				ಇಲಿಗಳ ಧಕ್ಕ ಧೈ
ಐದನೇ ದರ್ಜೆ	0 8 0			ಅಂಗಳ ದುಗ್ಗ
ನಾಲ್ಕನೇ ,,	0 8 0	ಆರನೇ ದರ್ಜೆ	0 4 0	ಗುಡುಗುಡು ಗುಮ್ಮಟ ದೇವರು
ಮೂರನೇ ,,	0 2 6	ಏಳನೇ ,,	0 5 0	ಒಡ್ಡನ ಓಟ
		ಎಂಟನೇ ,,	0 6 0	(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಶಿಯೋಲೋಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ 2-40
ಶಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 3.20	ಸಂಜೆ 6 15

([illegible])

ಆದುದರಿಂದ ... ಅನೇಕ ತೊಂದರೆಗಳೂ ಸಂಭವಿಸಬಹುದು. ಆದರೆ ಈ ಸಂಸ್ಥೆಗಳಿಂದ ಧರ್ಮ ಸಂಘಟನೆಯು ಪ್ರಯೋಜನ ದೊರಿತು ದೇಶಕಲ್ಯಾಣವಾಗದಿರದು. ಭಾರತಮಾತೆಯು ತನ್ನ ಉದರದಿಂದ ಯೋಧರನ್ನು ಪ್ರಸವಿಸಲಿ ಸುಶೀಲೆಯರೂ, ತೇಜವಂತರೂ ಆದ ಸಹೋದರಿಯರಿಗೆ ಜನನ ಕೊಡಲಿ ಇದೇ ನನ್ನ ಬೇಡಿಕೆಗಳು.

ಇಂದಿನ ವಿಷಯವು ಸಭಾಮಂದಿರದ ಹೆಚ್ಚಿನ ಸಭಿಕರ ಮನಸ್ಸಿಗೆ ಒಳ್ಳೆ ಪರಿಣಾಮವನ್ನುಂಟುಮಾಡಿತು ಮಹಿಳಾ ಸಮಾಜಕ್ಕೆ ಹೆಚ್ಚಿನ ಸಹಾಯ ಒದಗಿಸಿದ್ದ ತರುಣ ಸಂಘದ ಮುಖಂಡರಾದ ನಳಿನೀರಂಜನ, ರಘುನಾಥ ಮತ್ತು ವಿಶ್ವನಾಥರು ಕೂಡಾ ಹಾಜರಿದ್ದರು. ಮುಖಂಡನಾದ ನಳಿನೀ ರಂಜನನು ಎದ್ದುನಿಂತು ಸಭಿಕರಿಗೆ ವಂದಿಸಿ, ಬಂಧು ಭಗಿನಿಯರೇ ಈ ದಿನದ ಈ ಸಭೆಯಲ್ಲಿ ಸುಶಿಕ್ಷಿತರಾದ ಕಮಲಾ ಬಾಯಿ, ಗಂಗಮ್ಮ, ಇಂದಿರಾ ಬಾಯಿ ಇವರ ಹೃದಯದ್ರಾವಕ ಚರಿತ್ರೆಗಳನ್ನು ಕೇಳಿ ತಿಳಿದು ಅದಾವ ಗಂಡಸನು ನಾಚಿಕೆಗೊಳ್ಳದಿರನು?

ಕಪಟ ನಾರಾಯಣ ಶಾಸ್ತ್ರಿಯು ವಿಧವೆ ಕನಕಮ್ಮಳ ಐಶ್ವರ್ಯವನ್ನು ನುಂಗಿ ಅವಳಿಗೆ ಇಲ್ಲದ ಆಶೆ ತೋರಿಸಿ ಕಡೆಗೆ ಅವಳಿಂದ ಅವಮಾನವನ್ನು ಹೊಂದಿದನು ಈ ಸಂಗತಿ ಊರವರಿಗೆ ತಿಳಿದು ಸಮಾಜದವರು "ಬಹಿಷ್ಕಾರ"ವನ್ನು ಹಾಕಿದರು ಇತ್ತೀಚೆಗೆ ಅವನು ವೈಶ್ಯೆ ವಿಶಾಲಾಕ್ಷಿಯ ಪಂಜರದೊಳಗೆ ಬಿದ್ದಿರುವ ಸಂಗ್ತಿ ತಿಳಿದೆನು ಮೊನ್ನೆ ತಾನೇ ಅವನನ್ನು ಆಸ್ಪತ್ರೆಗೆ ಹೊತ್ತು ಹೋದರೆಂದೂ ಭಯಂಕರ ರೋಗಕ್ಕೆ ಬಲಿ ಬಿದ್ದಿರುವನೆಂದೂ ತಿಳಿದವು ತನ್ನ ಪಾಪಕೃತ್ಯಕ್ಕೆ ಮನಮರುಗಿ ಪರಿತಪಿಸುತ್ತಿರುವನು ಈಗಾಗಲೇ ಪ್ರಾಣಪಕ್ಷಿಯು ಹಾರಿಹೋಗಿರಲೂ ಬಹುದು

ನಮ್ಮ ತರುಣ ಸಮುದಾಯದಿಂದ ಮಹಿಳಾ ಸಮಾಜಕ್ಕೆ ಬೇಕಾದ ಸಹಾಯವನ್ನು ಒದಗಿಸುತ್ತಿದ್ದೆವು ಹಾಗೂ ಒದಗಿಸಲಿರುವೆವು ನಮ್ಮ ನಿಶ್ಚಿತ ಕಾರ್ಯವನ್ನು ಸಭಿಕರಿಗೂ, ಮಹಿಳಾ ಸಮಾಜಕ್ಕೂ ತಿಳಿಸುವುದೇ ನಮ್ಮ ಧ್ಯೇಯ ಕಮಲಾ ಬಾಯಿ, ಇಂದಿರೆ, ಗಂಗಮ್ಮರೇ ಮುಂತಾದ ಸ್ತ್ರೀರತ್ನಗಳು ಸಮಾಜ ಸೇವೆ ಮಾಡುತ್ತಿರುವುದು ಭೂಷಣವಾದರೂ ಅವರಿಗೆ ಗಂಡಸರ ಸಹಾಯವಿಲ್ಲದೆ ಸಂಕುಚಿತರಾಗಿರುವರು ಸಂಕುಚಿತವನ್ನು ಹೋಗಲಾಡಿಸುವರೆ ನಾವು ಮೂವರು ಮುಂದೆ ಬಂದಿರುತ್ತೇವೆ ಶಾಸ್ತ್ರವಿಧಿಯಾಗಿ ಈ ಮೂರು ಸ್ತ್ರೀರತ್ನಗಳನ್ನು ನಾವು ಮೂವರೂ ವಿವಾಹವಾಗಲಿರುವೆವು ಈ ವಿಷಯದಲ್ಲಿ ಸಭಿಕರ ಹಾಗೂ ಸ್ತ್ರೀ ರತ್ನಗಳ ಅಭಿಪ್ರಾಯವು ನಮಗೆ ಬೇಕಾಗಿರುವುದು ಎಂದನು ಸಭಿಕರಿಂದ ಉಲ್ಲಾಸಧ್ವನಿಯು ಆವೇಶಗೊಂಡಿತು ಎಲ್ಲರೂ ತರುಣ ಸಂಘಕ್ಕೆ ಜಯವಾಗಲಿ! ಮಹಿಳಾ ಸಮಾಜಕ್ಕೆ ಜಯವಾಗಲಿ! ಎಂದು ಜಯಘೋಷ ಮಾಡಿದರು

ಅಂದೇ ಸಭೆಯಲ್ಲಿ ಕಮಲಾ ಬಾಯಿಯನ್ನು ನಳಿನೀ ರಂಜನನಿಗೂ, ಗಂಗಮ್ಮನನ್ನು ರಘುನಾಥನಿಗೂ, ಇಂದಿರೆಯನ್ನು ವಿಶ್ವನಾಥನಿಗೂ ಕೊಟ್ಟು ಶಾಸ್ತ್ರವಿಧಿಯಾಗಿ ಮದುವೆ ಸಮಾರಂಭವು ನೆರವೇರಿತು ಸುಖಸಂತೋಷದೊಡನೆ ಸಭೆಯು ವಿರಾಮ ಹೊಂದಿತು.

ಉಪಸಂಹಾರ

ನಳಿನೀರಂಜನ,–ಕಮಲಾ ಬಾಯಿ, ರಘುನಾಥ,–ಗಂಗಮ್ಮ, ವಿಶ್ವನಾಥ–ಇಂದಿರೆ ಇವರ ಚಾಲಕತ್ವದಿಂದ ನಡೆಯುತ್ತಿರುವ ಮಹಿಳಾ ಸಮಾಜವು ಕ್ರಮೇಣ ವೃದ್ಧಿಯನ್ನೈದಿ ಅನೇಕ ಉಪಶಾಖೆಗಳು ತಲೆ ಎತ್ತಿದವು ಯುವಕ ಸಂಘಗಳು ಆಗಾಗ್ಗೆ ತಮ್ಮ ಸಹಾನುಭೂತಿಗಳನ್ನು ತೋರಿಸಿ ಇನ್ನಷ್ಟು ಏಳಿಗೆಗೆ ತರುವಂತಾಯಿತು. ದಾಂಭಿಕ ಸನಾತನಿಗಳು ಬೆರಳುಗಳನ್ನು ಮೂಗಿನ ಮೇಲಿಟ್ಟು "ಈಗಿನ ತರುಣ ಹೃದಯವು ಎಂಥಾ ಕಾರ್ಯವನ್ನು ಮಾಡಲು ಸಮರ್ಥವೋ ತರುಣ ಹೃದಯವೇ ಈಗಿನ ಕಾಲಕ್ಕೆ ಯೋಗ್ಯವು" ಎಂದು ಆಡಿಕೊಳ್ಳುತ್ತಿರುವರು. ಇಂದು ಕಮಲಾ ಬಾಯಿ ನಳಿನೀ ರಂಜನರೇ ಮುಂತಾದ ಸಮಾಜ ಸೇವಕರ ಹೆಸರು, ಭಾಷಣಗಳನ್ನು ಪ್ರಚುರಪಡಿಸದ ವರ್ತಮಾನ ಪತ್ರಿಕೆಗಳಿಲ್ಲ

– ಸಂಪೂರ್ಣ –

---

೧೪ ವರ್ಷಗಳ ಅಗ್ನಿಮಾಂದ್ಯ, ವಾತ ಮತ್ತು ಚಳಿಜ್ವರ.

ಆ ಮೇಲೆ ಪೂರ್ಣ ಗುಣ.

14 ವರ್ಷಗಳ ಅಗ್ನಿಮಾಂದ್ಯದ ವೇದನೆಯ ಬಾಧೆ, ಆ ಮೇಲೆ ಪೂರ್ಣ ಮತ್ತು ಶಾಶ್ವತ ಗುಣ! ಯೋಚಿಸಿರಿ! Mrs M. ಇವರ ನಿಜವಾದ ಅನುಭವ, ವಾಯು ಬಾಧೆ ಮತ್ತು ಚಳಿಜ್ವರವಿಲ್ಲದೆ ಅವಳಿಗೆ ಒಂದು ದಿನ ನಿದ್ದೆ ಇಲ್ಲ ಎಲ್ಲಾ ಉದರವೇದನೆಗಳಿಗೂ ಅತ್ಯಮೋಘವೂ ಆಸ್ಪತ್ರೆಗಳಲ್ಲಿ ಡಾಕ್ಟರರು ಶಿಫಾರಸು ಮಾಡಿದ್ದೂ ಆದ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸುವ ವರೆಗೆ ಅವಳಿಗೆ ಈ ಕಷ್ಟ

Mrs M ಬರೆದ ಪತ್ರವನ್ನೋದಿ –

"ನಿಮ್ಮ ಅದ್ಭುತಕಾರ ಮೆಕ್‌ಲೀನ್ ಬ್ರೇಂಡ್ ಪೌಡರನ್ನುಪಯೋಗಿಸಿ ನನಗೆ ಸಿಕ್ಕಿದ ಗುಣಕ್ಕಾಗಿ ನಿಮಗೆ ವಂದನೆಗಳು ವಾತ ಮತ್ತು ಅಗ್ನಿಮಾಂದ್ಯಗಳಿಂದ ಕಳೆದ 14 ವರ್ಷಗಳಿಂದಲೂ ಬಾಧಿತಳಾಗುತ್ತಿದ್ದೆ ರಾತ್ರಿ ಮಲಗಿದೊಡನೆ ಏಳುತ್ತಿದ್ದೆ ಗಂಟೆಗಟ್ಟಲೆಯಾಗಿ ವಾಯುವಿನ ಉಪದ್ರವು ಇರುತ್ತಿತ್ತು ಹೃದಯವು ನಡುಕವುಂಟಾಗುತ್ತಿತ್ತು ಚಳಿಯಿಂದ ದೇಹವು ಕಂಪಿಸುತ್ತಿತ್ತು ಸಣ್ಣ ತುಂಡು ಮಾಂಸವನ್ನು ತಿಂದೊಡನೆ ನನ್ನ ಹೊಟ್ಟೆಯು ಅಡಿಮೇಲಾದಂತಾಗುತ್ತಿತ್ತು ಎಲ್ಲಾ ಬಗೆಯಿಂದಲೂ ಸಾಧಿಸಿದೆ. ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನುಪಯೋಗಿಸುವ ವರೆಗೆ ಯಾವುದರಿಂದಲೂ ಪ್ರಯೋಜನವಾಗಲಿಲ್ಲ

Mrs M ಗೆ ದೊರೆತಷ್ಟೇ ಗುಣವು ನಿಮಗೂ ಸಿಗಬಹುದು ಆದರೆ ಕೆಲವು ಅಂಗಡಿಗಳ ವಾಸಿಗಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ ಕೆಂಪು ಮುದ್ರೆಯುರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ನಮ್ಮ ಕೆಮಿಸ್ಟರಿಂದ ಪಡೆಯಿರಿ ಸೀಲು ರಕ್ಷಾಪತ್ರ ಮತ್ತು ಬಿಲ್ಲೆಗಳ ಮೇಲೆ

Alex. C. Maclean

ಎಂಬ ದಸ್ಕತು ಇದೆ ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೪ ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು

ಇಲ್ಲಿಗೆ ಬರೆಯಿರಿ



ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P. ನಂಬ್ರ 4/1936

ಕಮಲ ಸೆಟ್ಟಿಗಾರ್ತಿ–ಬಿ ಶೀನ ಸೆಟ್ಟಿಗಾರನ ವಿಧವೆ–ಮಂಗಳೂರು ತಾಲೂಕು ಸುರತಕಲ್ಲು ಗ್ರಾಮದಲ್ಲಿರುವವಳು–ಅರ್ಜಿದಾರಳು

ಮತ್ತು

ಗಂಗು ಸೆಟ್ಟಿಗಾರ್ತಿ–ಅಪ್ಪಯ್ಯ ಸೆಟ್ಟಿಗಾರನ ವಿಧವೆ–ಉಡುಪಿ ತಾಲೂಕು ಕಡೇಕಾರು ಗ್ರಾಮದ ಕಿನ್ನಿ ಮುಲ್ಕಿಯಲ್ಲಿರುವವಳು–ಎದ್ರಿಳು

ಇವರೊಳಗೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:–

ಅರ್ಜಿದಾರಳ ಗಂಡ ವ ಎದ್ರಿಳ ಮಗ ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದ ಬನ್ನಂಜೆಯಲ್ಲಿ ತಾ 11–12–35ರಲ್ಲಿ ಮೃತಪಟ್ಟ ಬಿ ಶೀನು ಸೆಟ್ಟಿಗಾರರಿಗೆ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರಳು ದಾಖ್ಲೆ ಮಾಡಿದ ಮೇಲ್ಕಂಡ ಅರ್ಜಿಯು ತಾ. 18–2–36ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನ್ಖಿ ಸಮಯ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ

Udipi, 28–1–1936 } M Damodar Kamath, *Advocate for Ptrs*

FROM FIRST WEEK OF

MARCH 1936

N.I.P.

HIGH GRADE–HIGH TEST

PETROL

WILL BE DISTRIBUTED IN VARIOUS PARTS OF INDIA

For *Agency terms apply*

International Oil Co, Ltd.

Jiji House Ravelin Street, Fort, BOMBAY

Sole Distributors for India.

ನೆಪ್ಚೂನ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್

ಬಡವರಿಗೂ ಮಧ್ಯಮತರಗತಿಯವರಿಗೂ ತೆರೆದ ವಿಮಾಸಂಸ್ಥೆಯೆಂದರೆ

ಜಗತ್ತಿನಲ್ಲಿ ಇದೊಂದೇ!

ಜನತೆಯೂ, ಪತ್ರಿಕೆಗಳೂ ಇದರ ಗುಣಗಾನ ಮಾಡುತ್ತಿರುವುವು.

ಇದರ ಪ್ರತಿನಿಧಿಗಳಾದರೆ ತುಂಬಾ ಧನಪ್ರಾಪ್ತಿ ಮಾಡಬಹುದು

ಬೋನಸ್

ರೂಪಾಯಿ

54

ಮತ್ತು

45

ಇಡೀ ಜೀವಮಾನದ ವಿಮೆಯ ಪಾಲಿಸಿಗಳ ಮತ್ತು ಎಂಡೋವಮೆಂಟ ಮೇಲೆ ವರುಷಗಳಿಗೆ ಪ್ರತಿ ಸಾವಿರಕ್ಕೆ

ಏಜನ್ಸಿಯ ಶರ್ತಗಳಿಗೆ ಇಲ್ಲಿಗೆ ಬರೆದುಕೊಳ್ಳಿ –

ದಿ ನೆಪ್ಚೂನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

109 ಪಾರ್ಶಿ ಬಜಾರ್ ಸ್ಟ್ರೀಟ್, ಮುಂಬಾಯಿ

ಲೋಕಲ್ ಏಜಂಟರ

ಎಚ್. ಕೆ. ತಿಂಗಳಾಯ,

ಹಂಪನಕಟ್ಟೆ ಬಜಾರ್, ಮಂಗಳೂರು

ಬೇಕಾಗಿದ್ದಾರೆ!

ದಿ ನ್ಯೂ ಏಶ್ಯಾಟಿಕ್ ಲಾಯಿಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಕಂಪೆನಿಯ ಕಾರ್ಯಪ್ರಚಾರಕ್ಕಾಗಿ,–ದಕ್ಷಿಣ ಕನ್ನಡ, ಮಲಬಾರು, ತಿರುವಾಂಕೂರು ಪ್ರಾಂತ್ಯಗಳಲ್ಲಿ, ಉತ್ತಮವಾಗಿ ಪ್ರಚಾರ ಮಾಡಿ ವಿಮೆದಾರರನ್ನು ಕೂಡಿಸಿಕೊಡಬಲ್ಲ ಅರ್ಹರೂ ಯೋಗ್ಯರೂ ಆಗಿರುವ ಸ್ತ್ರೀ ಪುರುಷರು ಬೇಕಾಗಿದ್ದಾರೆ.

ಮೆಸರ್ಸ್ ಬಿರ್ಲಾ ಬ್ರದರ್ಸ್ ಲಿಮಿಟೆಡ್, ಇವರ ಆಡಳಿತದಿಂದಾಗಿ ಅಭ್ಯುದಯವನ್ನು ಹೊಂದಿ, ಈ ಕಂಪೆನಿಯು ತನ್ನ ಮೊದಲನೆ ಎರಡು ವರ್ಷಗಳೊಳಗಾಗಿಯೆ

೫೦ ಲಕ್ಷ ರೂಪಾಯಿ ಮೊಬಲಗಿನ ವಿಮಾ ಗಳಿಸಿಕೊಂಡಿದೆ

ಇನ್ನೂ ಇನ್ನೂ ವಿಮಾದಾರರನ್ನು ಜಮೆಮಾಡಲು ನಿಜವಾಗಿಯೂ ದಕ್ಷರಾಗಿರುವ ಉದ್ಯಮಶೀಲರು ಬೇಕಾಗಿರುವರು, ಇದಕ್ಕಾಗಿ ನಮ್ಮ ಬ್ರಾಂಚ್ ಮೆನೇಜರರು ಈ ಪ್ರಾಂತ್ಯಗಳಲ್ಲಿ ಸಂಚರಿಸುವರು,

ಎಲ್ಲ ಅರ್ಜಿಗಳನ್ನು ಇಂಗ್ಲಿಷಿನಲ್ಲಿ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳುವುದು

ಬ್ರಾಂಚ್ ಮೆನೆಜರರು,—

ದಿ ನ್ಯೂ ಏಶ್ಯಾಟಿಕ್ ಲಾಯಿಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

15, ಎಸ್ಪ್ಲೆನೇಡ್ ರೋಡ್, ಫೋರ್ಟ್, ಮುಂಬಾಯಿ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟ್ಯಾಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು.

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು–ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು

ಎಲ್ಲಾ ಜವಳಿ ಬೆಲೆಗೆ ಏರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಪೈಯವರಲ್ಲಿ ಬಂದು ನೋಡಿಕೊಳ್ಳಿರಿ

ಯಂ. ವೆಂಕಟೇಶ ರಂಗ ಪೈ, ಪ್ರೊಪ್ರೈಟರ್.

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್ ಸಾರಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳ್ತಾರೆ
ಡಾ॥ ಗೌತಮ ರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨

ಸ್ಟೋಕಿಸ್ಟ್ ಪಾ ಕಂಪೆನಿ ಮಂಗಳೂರು

[ಕತ್ತರಿಸಿದಾದ ಇಂಗ್ಲಿಷ್ ಅಥವಾ ಮರಾಠಿಯ...

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೋರ ಹೋಗುವಿಕೆ, ಸೊಂಟ ನೋವು, ಕೈಕಾಲು ಒಚ್ಚುವುದು, ಮಲ ಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದ ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ 3 ಬಾಟ್ಲಿಗಳಿಗೆ ರೂ. 1-12-0.

ಅಲ್ಲದೆ ಬಾಲಗ್ರಹ ತೈಲ ಬಾಲಗ್ರಹ ದ್ರವ ಸಹಾ ದೊರೆಯುತ್ತವೆ ...ಕೆಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ
ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1 0-0

ಮಲೇರಿಯಾ ನಿವಾರಿಣಿ

ಪಾಲಿಯದ್ಧತಿ ಚಳಿಜ್ವರ ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ ಪುರಾಣ ಜ್ವರ ಕಫ ಜ್ವರ ಜ್ವರಗೆಡ್ಡೆ ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ... ಮಾಡುವುದು ಮಲೇರಿಯಾ ಜ್ವರ ಏರುತ್ತ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1 8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13

ಮೇಹಕುಠಾರ

ಪ್ರಮೇಹ, ಸೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದ, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ಡಬ್ಬಿ 1ಕ್ಕೆ ರೂ 2-8-0 ಮಾತ್ರ

ಎಮ್. ಗಣಪಯ್ಯ ಎಂಡ್ ಸನ್ಸ್ ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:– ಶ್ರೀ ರಾಮಾ ಸ್ಟೋರ್ಸು ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ಡಾ॥ ಶ್ರೀನಿವಾಸ ಪೈ, ಪುತ್ತೂರು. ಮೆಸರ್ಸ್ ಮುಲ್ಲರ ಪಟೇಲ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ, ಕಾರಾಕೌಸ್, ಗಿರಗಾಂವ್, ಬೇಕ್‌ರೋಡ್ ಮುಂಬಯಿ, ನಂ. 4. ದಿ ಪಬ್ಲಿಕ್ ಹೋಟೆಲ್, ಮಡಿಕೇರಿ ಕೂರ್ಗ್. ರಾಜ್ ಫಾರ್ಮಸಿ, ಸಾಗರ

The Canara Banking Corporation Udipi Ltd.

Head office:—UDIPI, S. K. (Incorporated in British India) TEL. 'BANKING' **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras (George Town), **6. Bunder Mangalore, 7. Mercara** (North Coorg), **& 8. Virarajendrapet** (South Coorg).

DEPOSITS:

1922	1926	1930	1934	30-11-'35
Rs. 2,28,419/	6,48,940/	20,28,887/	24,95,329/	**27,40,312/-**

SAVINGS BANK ACCOUNTS

INTEREST allowed at 3½ %

Facilities 1. Withdrawal by **CHEQUES.** 2. Production of pass books unnecessary at the time of withdrawal 3 Accounts transferred **FREE** of charge from one office to another

---

TO INSURE OR TO REPRESENT

CONSULT.—

The Bombay Life Assurance Company Ltd.

ESTD 1908

Offers:
(1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra
(5) *Increased rate of Bonuses*
(6) Accident Risk on a small extra payment

Attractive Rates of Commission & Bonuses to Agents

For particulars apply to any of our Offices:

Kochikar Brothers. Branch Secretaries

OFFICES (1) "Gautam Nivas" Charni Rd., Girgaum, Bombay No 4 (2) P B 837 Mount Road Madras (3) Visveshwarapuram Circle, Bangalore City. (4) Hazur Road, Calicut (5) Car Street, Mangalore, S. K (6) Udipi, (S India)

The Eternal Triangle

"No man can serve two masters" is a familiar quotation—but it has little place in the scheme of things for the Banker He serves three and their interests must be carefully weighed and balanced to keep them all happy It requires straight, level-headed thinking and action, since often the interests are conflicting

The sound Banker must balance the natural demands and expectations of DEPOSITOR—SHAREHOLDER—BORROWER And to these must always be added the best interests of the PUBLIC at Large

The DEPOSITOR wants safety and service. So long as his money is safe and always available when he wants it he is not concerned whether the Shareholder draws a handsome dividend or not

On the second side of the triangle is the SHAREHOLDER. He wants and expects a return on his investment. To yield too much on his side might mean a tendency on the part of the bank to loan too freely and to charge high interest rates

Finally comes the BORROWER Naturally he asks for the greatest possible amount of credit at the lowest possible rate To give him too much credit endangers the interests of the depositor. Too low an interest rate may mean no return to the shareholder.

Such is the triangle of interests which it has always been the aim of the Canara Bank Ltd. to keep in equilibrium.

ESTD. 1906.

Canara Bank

LIMITED.

ವಾರ್ಷಿಕ ಚಂದಾ 3 ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M.3406

ಟಪ್ಪಾಲು ಹಾಸಲು ಸೇರಿ ರೂ. 3-12-0

For Quality Snuff
H. Rama Rao and Sons,
High Class Snuff Manufacturers
Mangalore, S. K.
RAMA SNUFF
The charmost Snuff ...

ಸ್ವದೇಶಾಭಿಮಾನಿ
SWADESHABHIMANI

LIFE ASSURANCE
IS
NO EXPENSE
BUT
AN INVESTMENT
Safeguard yourself & your family TODAY.
Buy a policy in
THE BOMBAY LIFE
Madras Branch Secretaries
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906

(ದಿ. ... ಶ್ರೀನಿವಾಸ ಕಾಮತ್ ... ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಂಗದರಿಂ । ಹರುಷವಾಯಿತೆ! ಮತ್ತೆ ವಿಷದ ಸುಡುತ ಬರುತಿರುವ ॥
ಗರಳಕದರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೦, ಮಂಗಳೂರು ತಾ. ೭ನೇ ಶುಕ್ರವಾರ ಫೆಬ್ರವರಿ ೧೯೩೬. (7—2—'36) ಸಂಚಿಕೆ ೬

ಹೊಲಿವುಡಿನ ಪ್ರಖ್ಯಾತ ಸಿನೆಮ ನಟಿಯಾದ ಜೀನ್ ಆರ್ಥರ್.

ನೋಟಿಗಳು.
NOTE.....S.

ಹಿಂದೂದೇಶದಲ್ಲಿ ಜಾತಿಭೇದಗಳು ಇರುವ ವರೆಗೆ, ಅಮೇರಿಕವು ಹಿಂದೀಯರ ಸ್ವಾತಂತ್ರ್ಯಾಭಿಲಾಷೆಗೆ ಯಾವ ಉತ್ತೇಜನವನ್ನೂ ಕೊಡಲಾರದೆಂದು, ಅಲ್ಲಿನ ಪ್ರಮುಖ ಪತ್ರಿಕೆಗಳ ಪಂಗಡದ ಕೂಗು.

\+ + + +

ಅಮೇರಿಕದ ನಿಗ್ರೋ ಜನಗಳನ್ನು ಅಮೇರಿಕಾದವರೇ ಚಿತ್ರಹಿಂಸೆ ಮಾಡುವ ಆ ಕ್ರಮವನ್ನು ತ್ಯಜಿಸಿ, ಸಂಪೂರ್ಣಪ್ರಾಯಶ್ಚಿತ್ತ ಮಾಡುವ ತನಕ; ಅಮೇರಿಕದ ಪತ್ರಿಕೆಗಳು ಎಂಥ ಸಹಾಯಮಾಡಲು ಮುಂದಕ್ಕೆ ಬಂದರೂ, ಗಂಗಾಯಮುನೆಗಳು ಸಹ ಆ ಪತ್ರಿಕೆಗಳು ಲೇಪಿಸಿಕೊಂಡ ಪಾಪವನ್ನು ತೊಳೆಯಲಾರದೆ ಉಳಿಯುವುವಲ್ಲ ಎಂದೇ ನಮ್ಮ ಬೇಸರ. ಡೋಲಿನ ಧ್ವನಿಗಾಗಿ ಮದ್ದಳೆಗೆ ತಲೆ ಸಿಡಿತವುಂಟಾಗಿದೆ, ಅಮೇರಿಕದಲ್ಲಿ!

× × × × × ×

ಕೌನ್ಸಿಲ್ ಆಫ್ ಸ್ಟೇಟ್ ಎಂಬ ಆ ವಸಿಷ್ಠರ ಸಭೆ ಸದ್ಯದಲ್ಲೇ ಮುಕ್ತಾಯ ಹೊಂದುವುದಂತೆ. ಜೂನ್ ತಿಂಗಳಲ್ಲಿ ಮಂಗಳ, ಅಗೋಸ್ಟಿನೊಳಗೆ ಹೊಸ ಚುನಾವಣೆ,—ಎಂದು ಸರ್ಕಾರಿ ವಾರ್ತೆ. ಇರಲಿ,—ಅಲ್ಲಿಯಾದರೂ ಅಷ್ಟು ಬೇಗನೆ ಏಕೆ ಹೊಸ ಚುನಾವಣೆಗಳು? ಇನ್ನೊಂದು ವರ್ಷದ ತರುವಾಯವಾದರೆ ಏನ ನ್ಯಾಯ? ನಮ್ಮ ಮದ್ರಾಸು ಕೌನ್ಸಿಲ್ಲು ನೋಡಬಾರದೇ? ಕೃತ, ತ್ರೇತ, ದ್ವಾಪರ ಯುಗಗಳ ಮಾಂಧಾತರೂ ಯುಗಪುರುಷರೂ ಇನ್ನೂ ಅಲ್ಲೇ ಇದ್ದು, ಈಗಣ ಮನುಗಳಾಗಿ ನ್ಯಾಯವಿಧಾನಮಾಡುತ್ತಿರುವರು!

× × × × ×

ಜನವರಿ ತಾ 21—28ರಲ್ಲಾದ ಅಬಿಸಿನಿಯ ಯುದ್ಧದ ವಾರ್ತೆ ಇಷ್ಟು ತಡವಾಗಿಯೇ ಆದರೂ ಹೊರಟಿದೆ. ತಡವಾದಷ್ಟು ನಿಜವಾಗಬಹುದಂತೆ. ಇಟಲಿ ಸೇನೆಗಳು 8000 ಮಂದಿಯನ್ನು ಕಳೆದುಕೊಂಡುವು, 5000ಕ್ಕೆ ಗಾಯಗಳಾದುವು. ಅಬಿಸಿನಿಯಾದವರಿಗೆ ಕೆಲವು ತೋಟೆಗಳು, 88 ಫಿರಂಗಿಗಳು, 175 ಯಾಂತ್ರಿಕ ಕೋವಿಗಳು, 2654 ಕೋವಿಗಳು, 18 ಟೇಂಕುಗಳು ಸಿಕ್ಕಿದುವು! ಅಬಿಸಿನಿಯದಲ್ಲಿ ಸತ್ತದ್ದೂ ಗಾಯಪಟ್ಟದ್ದೂ ಒಟ್ಟು 1200!—ಇದು ಅಬಿಸಿನಿಯದ ವಾರ್ತೆಯಾಗಿ ಲಂಡನು ಮಾರ್ಗವಾಗಿ ಇಂಡಿಯಕ್ಕೆ ಬಂದುದು. 10000ವಾದರೂ ಅಬಿಸಿನಿಯ ಸೈನಿಕರು ಸತ್ತರೆಂದು ಮೊದಲು ನುಡಿದ ಇಟಲಿಯ ವಾರ್ತಾದಾಯಕನು, ಈಗ ಈ ದಿನ ಹೇಳತಕ್ಕಷ್ಟು ಏನೂ ನಡೆದಿಲ್ಲ ಎಂದು ರೋಮ್ ನಗರದಿಂದ ಬರೆವನು ಉತ್ತರಕ್ರಿಯೆಗಳಾದುವೆಂದು ಬರೆದಿಲ್ಲವೇಕೆ?

\+ + + +

ಕಳೆದ ವರ್ಷ ಪಾರಿಸ್ ನಗರದಿಂದ 2832 ಗಂಡಂದಿರು ಕಾಣೆಯಾಗಿದ್ದರು, ಇವರಲ್ಲಿ ಅತಿ ವಾಸಿ ದೊರೆತರು ಉಳಿದವರು,—ಮಾವನ ಮನೆಯಲ್ಲಿಯೋ? 2105 ಹೆಂಡಿರೇ ಮಾಯವಾದರು ಗಂಡಂದಿರಲ್ಲಿ ಅರೆವಾಸಿ ಕಾಣೆಯಾಗಿ ಉಳಿದವರನ್ನು ಇವರ ಮೂಲಕ ಪತ್ತೆಹಚ್ಚಬಹುದು, 1205 ಯುವಕರೂ, 1207 ಯುವತಿಯರೂ ಕಾಣೆ! ವಿವಾಹ ರಜಿಸ್ಟ್ರಿಗಳನ್ನು ಹುಡುಕಬೇಕು ವಿಚಿತ್ರವೆಂದರೆ,—880 'ತಂದೆ' '288' ತಾಯಮ್ಮನವರು ಸಹ ಕಾಣೆ, ತೀರಿತು!

\+ + + +

ಬೋರ್ಡುಗಳ ಶಿಕ್ಷಣಸಮಿತಿಗಳು ಫರೋಜಪುರ ಜಿಲ್ಲಾ ಬೋರ್ಡಿನ ಸಮಿತಿಯಂತಿರಬೇಕು. ಆ ಸಮಿತಿಗೆ 7 ಮಂದಿ ನಿಪುಣರು ಮೆಂಬರರು, ಇವರೊಬ್ಬರೇ ಆದರೂ ಅಕ್ಷರಜ್ಞಾನವುಳ್ಳವರಾಗಿಲ್ಲ! ಹೀಗಾದ್ದಲ್ಲಿ, ಹೊಸ ಹೈಸ್ಕೂಲು ನಿರ್ಮಾಣ, ಉಪಾಧ್ಯಾಯರ ಸಂಬಳ ಕಡಿತ, ನಾನಾ ವರ್ಗಾವರ್ಗಿಗಳು, ನೇಮಕಗಳು, ರಿಪೋರ್ಟಿಗೆ ನಿರುತ್ತರವಾಗೋಣ ಎಲ್ಲಕ್ಕೂ ಅವಕಾಶಗಳೇ ಇರಲಾರವು. ಮಾದರಿ ಜಿಲ್ಲಾ ಬೋರ್ಡು!

ನೇ ಪುಟಕ್ಕೆ ಮುಂದರಿಸಿದೆ.



ಕಳೆದುಹೋದ ಶಕ್ತಿಯನ್ನು ಪುನಃ ಪಡೆಯಬೇಕಾದರೆ
ಒವಲ್‌ಟಿನ್ನನ್ನು ಅತ್ಯಾವಶ್ಯಕವಾಗಿ ಸೇವಿಸಿರಿ.

ಅಸೌಖ್ಯದಿಂದಿರುವಾಗ ಒವಲ್‌ಟಿನ್ ಸೇವನೆಯೇ ನಿಮ್ಮನ್ನು ಕಾಪಾಡುವುದು ಸೌಖ್ಯದಿಂದಿರುವಾಗ ನವಶಕ್ತಿಯು ಅದರ ಸೇವನೆಯಿಂದಲೇ ಬರುವುದು

ಒವಲ್‌ಟಿನ್ ನರಗಳನ್ನು ವೃದ್ಧಿಗೊಳಿಸಿ, ಶರೀರಕ್ಕೆ ಹೊಸ ಚೈತನ್ಯವನ್ನು ಕೊಟ್ಟು ಸುಖವಾದ ನಿದ್ರೆಯನ್ನೂ ಸದಾಕಾಲವೂ ಆರೋಗ್ಯದಿಂದಿರುವಿಕೆಯನ್ನೂ ಕರುಣಿಸುತ್ತದೆ ದೇಹದ ಬೆಳವಣಿಗೆಗೆ ಒವಲ್‌ಟಿನ್ ಸೇವನೆಯೇ ಬಹಳ ಪ್ರಯೋಜನಕಾರಿ

ಒವಲ್‌ಟಿನ್ ಪರಿಮಳಯುಕ್ತವೂ ರುಚಿಕರವೂ ಆಗಿ ಪ್ರಪಂಚದಲ್ಲಿ ಇರುವ ಒಳ್ಳೇ ಆಹಾರಗಳ ಸತ್ವದಿಂದಲೇ ತಯಾರಿಸಲ್ಪಟ್ಟದ್ದಾಗಿರುತ್ತದೆ ಇದರಲ್ಲಿ ಬೆಳೆದ ಬಾರ್ಲಿ, ದನದ ಕೆನೆಹಾಲು, ಕೊಕ್ಕೋವಿನ ಸತ್ವವು ಮಿಶ್ರವಾಗಿದೆ ಆದರೆ ಪರಕೀಯರ ಮೋಸಕ್ಕೆ ಗುರಿಯಾಗಬೇಡಿ ನಮ್ಮ ಮ್ಹಾಲು ಅತೀ ಉಚ್ಚವಾದುದು

ಒವಲ್‌ಟಿನ್
ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ

OVALTINE

ಇದರ ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮತ್ತು ಬಜಾರುಗಳಲ್ಲಿಯೂ ಮಾರಾಟಕ್ಕೆ ಸಿಗುತ್ತದೆ
ಏಜೆಂಟರು— ಜೇಮ್ಸ್ ರೈಟ್, 55ಎ ರೀಪನ್ ಸ್ಟ್ರೀಟ್, ಕಲ್ಕತ್ತಾ ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿಯೂ ದೊರೆಯುತ್ತದೆ

OV/430

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK
LIMITED.

ಜಪಾನೀಯ ಸಾಮ್ರಾಜ್ಯರಚನೆ.

[ಶಂಕರ]

ಚೀನಾದೇಶದ ಮೇಲಿರುವ ಜಪಾನಿನ ನೆರಳು ದಿನೇ ದಿನೇ ದೊಡ್ಡದಾಗುತ್ತಾ ಬರುತ್ತಿದೆ ಕಳೆದ ವಾರ ಶಾಂಗಾಯಿಯಲ್ಲಿ ಒಂದು ದಂಗೆಯು ನಡೆಯಿತು ಜಪಾನೀಯ ಪ್ರೇರಣೆ ಒಳಗಾಗ್ಗ ಓರ್ವ ಮಂತ್ರಿವರ್ಯರ ಕೊಲೆಯಾಗಿರುತ್ತದೆ. ಅಂತರಾಷ್ಟ್ರೀಯ ಜನರು ವಾಸವಾಗಿರುವ ಪ್ರದೇಶಗಳನ್ನು ರಕ್ಷಣಾ ಸೈನ್ಯ ಸಮೂಹಗಳು ಹಗಳಿರುಲು ಕಾಯುತ್ತಿವೆ. ಕೆಲವೆಡೆಗಳಲ್ಲಿ ಮಾರ್ಸೆಲ್ ಲಾ ಜ್ಯಾರಿಯಾಗಿರುತ್ತದೆ.

ಇಲ್ಲಿನ ಎಲ್ಲಾ ಘಟನೆಗಳು ಒಂದು ಮಹಾ ವಿಷಮಸ್ಥಿತಿಯನ್ನು ಸೂಚಿಸುತ್ತಿವೆ.

330,000,000 ಜನರುವ, 1500 ಮೈಲು ಉದ್ದವಿರುವ ಈ ಪ್ರದೇಶವಲ್ಲಿ, ಪ್ರಪಂಚದ ಶಾಂತಿಭಂಗಕ್ಕೆ ಒಂದು ಮಹಾಕಾರಣವು ಅಡಕವಾಗಿರುತ್ತದೆ

ಈ ಅಪಾಯದ ಕಾರಣಗಳೇನು?

ಜಾಪಾನು ಪಾಶ್ಚಾತ್ಯ ಜನಾಂಗಗಳಿಗೆ ಈ ಮೊದಲೆ, ಪೌರ್ವಾತ್ಯದಲ್ಲಿ ತಾವು ಪಾಶ್ಚಾತ್ಯ ಪ್ರೇರಣೆಯನ್ನು ಸಹಿಸುವುದಿಲ್ಲವೆಂದು ಎಚ್ಚರಿಕೆಯನ್ನು ಕೊಟ್ಟಿರುತ್ತದೆ. ಆದರೆ ಮುಂದಕ್ಕೆ ಬರಬಹುದಾದ ಅಪಾಯಕ್ಕೆ ಇದೊಂದೆ ಕಾರಣವಲ್ಲ, ಇನ್ನೂ ಹಿಂದಿನ ಘಟನೆಗಳನ್ನು ನಾವು ಪರಿಶೀಲಿಸತಕ್ಕದು

ಪಾಶ್ಚಾತ್ಯ ಪ್ರೇರಣೆಯ ಬೀಜದ ಬಿತ್ತುವಿಕೆ

ಸಾಧಾರಣ 400 ವರ್ಷಗಳ ಹಿಂದಿನ ಚರಿತ್ರೆಯನ್ನು ನಾವು ತಿಳಕೊಳ್ಳತಕ್ಕದು ಪೋರ್ತುಗೀಸರ ಒಂದು ಹಡಗವು ಜಪಾನಿನ ಕರಾವಳಿಯನ್ನು ಸೇರಿತು. ಪ್ರಾಚೀನ ಜಪಾನೀಯರು ಇವರನ್ನು ಬಹಳ ಸಂಭ್ರಮದಿಂದ ಸ್ವಾಗತೀಕರಿಸಿದರು. ಅವರಿಗೆ ವಿಶ್ರಾಂತಿಯನ್ನೂ ಆಹಾರವನ್ನೂ ಕೊಟ್ಟರು, ಪೋರ್ತುಗೀಸರು ಹಿಂತೆರಳಿದರು. ಕೆಲವು ಮಿಶಿನರಿಗಳೊಡನೆ ತಿರಿಗಿ ಅಲ್ಲಿಗೆ ಬಂದರು ಮತಪ್ರಚಾರಕರ ಹಿಂದೆ ವ್ಯಾಪಾರಿಗಳು ಬರಲಾರಂಭಿಸಿದರು ಪಾಶ್ಚಾತ್ಯ ಪ್ರೇರಣೆಯ–ಪಾಶ್ಚಾತ್ಯ ಇಸ್ವಾರ್ಥಗಳ ಬೀಜಗಳು ಬಿತ್ತಲಾದುವು

\+ + + +

ಐವತ್ತು ವರ್ಷಗಳು ದಾಟಿದ ನಂತರ, ಅಂದರೆ ಹದಿನಾರನೆ ಶತಮಾನದ ಅಂತ್ಯದಲ್ಲಿ ಚೀನಾದೇಶದ ಕೋರಿಯಾವನ್ನು ವಶೀಕರಿಸಲು 300,000 ದೇಶಪ್ರೇಮಿ ಸೈನಿಕರಿರುವ ಜಪಾನೀಯ ಸೈನ್ಯ ದಂಡು ಒಂದು ಅತ್ತಕಡೆಗೆ ಕಳುಹಿಸಲಾಯಿತು ಕೋರಿಯಾ ದೇಶವು ಇವರ ಕೈಸೇರಿತು ಆದರೆ ಜಪಾನೀಯ ನೌಕಾಬಲವು ಚದರಿಹೋಗಿತ್ತು ಮಾತೃಭೂಮಿಯಿಂದ ವಿಂಗಡಿಸಲ್ಪಟ್ಟ ಆ ಸೈನ್ಯದಂಡವು ಆರು ವರ್ಷಗಳ ಸಮಯ ಅಲ್ಲಿ ಇದ್ದು, ಅನೇಕ ಕದನಗಳನ್ನು ನಡೆಯಿಸಿ, ಪ್ರತೀ ಭಾರಿಯೂ ಜಯಶೀಲರಾದರು

ಜಪಾನಿನ ಶ್ರೇಯಸ್ಸಿನ ಪ್ರಾರಂಭ.

ದಕ್ಷಿಣ ಜಪಾನಿನ ಕ್ಯೋಟೊ ಎಂಬಲ್ಲಿ ಈಗಲೂ ಒಂದು ಮಹಾ ದಿಣ್ಣೆಯನ್ನು ಕಾಣಬಹುದು ಇದರಡಿಯಲ್ಲಿ 38,000 ಜೋಡಿ ಚೀನಿಯರ ಕಿವಿಗಳು ಹೂಣಿಡಲ್ಪಟ್ಟಿವೆ 1598ರಲ್ಲಿ ಇವರಿಗೆ ಚೀನಿಯರ ಮೇಲೆ ಒದಗಿದ ಜಯದ ಸ್ಮಾರಕವಾಗಿ ಈ ದಿಣ್ಣೆಯು ರಚಿಸಲಾಯಿತು.

ಈ ಜಯದಿಂದ,ನಿದ್ರೆಹೋದ ಚೀನಾಸಿಂಹವು ಎಚ್ಚರವಾಯಿತು. ಜಪಾನೀಯ ನಾಯಕರು ಮೃತರಾದರು, ಇದರ ಪರಿಣಾಮವಾಗಿ, ಚೀನದಲ್ಲಿರುವ ಜಪಾನೀಯ ಸೈನ್ಯಮಂಡಳವು ಹಿಂದೆ ಕರೆಯಲಾಯಿತು

ಈ ಸಮಯದಲ್ಲಿ ರೋಮನ್ ಕೆಥೋಲಿಕ್ ಮತಪ್ರಚಾರಕರು ಜಪಾನಿಗೆ ಬರುವವರಾದರು, ಆದರೆ, ರೋಮನ್ ಕೆಥೋಲಿಕ್ ಯಾ ಪ್ರೊಟೆಸ್ಟಾಂಟ್ ಮತಗಳಲ್ಲಿ ಜಪಾನ್ ಸಮ್ರಾಟರು ಸಾರಸ್ಯವನ್ನು ಕಾಣದೆ, ಪಾಶ್ಚಾತ್ಯ ಪ್ರೇರಣೆಯು ಬಹಳ ಹಾನಿಕರವಾದುದೆಂದು ಅಭಿಪ್ರಾಯ ಪಡುವವರಾದರು

1638ರಲ್ಲಿ ಜಪಾನಿನಿಂದ ಪಾಶ್ಚಾತ್ಯ ಜನಾಂಗಿಕರು ಹೊರಗಟ್ಟಲ್ಪಟ್ಟರು ಕ್ರೈಸ್ತ ಮತಾವಲಂಬಿಗಳಾದ ಜಪಾನೀಯರನ್ನು ಕೊಲೆ ಮಾಡಿದರು ಅವರ ಅತಿ ಪುರಾತನವಾದ ಶ್ರೇಷ್ಠ 'ಶಿಂಟೊ' ಧರ್ಮವೇ ಮೇಲಕ್ಕೆ ಬಂತು

ಇದರ ನಂತರ ಜಪಾನು ತನ್ನದೆ ಕೆಲವು ಕಾನೂನುಗಳನ್ನು ರಚಿಸಿತು 200 ವರ್ಷಗಳ ಸಮಯ ಜಪಾನಿನಲ್ಲಿ ಕಾಲಿಡಲು ಇತರ ಯಾವ ಅನ್ಯರಿಗೂ ಅವಕಾಶವಿದ್ದಿಲ್ಲ ಈ ಪ್ರಪಂಚದಲ್ಲಿ ಜಪಾನಿನ ಅರಿವೇ ಕಡಿಮೆಯಾಗುತ್ತಾ ಬಂತು

1868ರ ವರೆಗೆ ಇವರ ಪಾಶ್ಚಾತ್ಯರನ್ನು ಹೊರಗಿಡುವ ಪಂಕ್ರಮಗಳು ಫಲಕಾರಿಗಳಾದುವು ಆದರೆ ಬಹಳ ರೇಗಿಕೊಂಡಿದ್ದ ಪಾಶ್ಚಾತ್ಯರು, ಜಪಾನನ್ನು ಈ ವರ್ಷದಲ್ಲಿ ಸದೆಬಡೆದರ ಒಂದು ಬ್ರಿಟಿಷ್ ನೌಕಾಬಲವು ಜಪಾನಿನ ಕಗೊಸಿಮಾ ಕೊಲ್ಲಿಯನ್ನ ಸೇರಿ ತೋಪುಗಳನ್ನು ಹಾರಿಸಿ, ಜಪಾನಿನ ಬಾಗಿಲನ್ನು ತೆರೆಯಿತು

ಆಗ ಜಪಾನಿನ ಸ್ಥಿತಿಯು ಭಯಂಕರವಾಗಿದ್ದಿತು ಇಡೀ ದೇಶವು ಸ್ವಾರ್ಥಿಗಳಾದ ಕೆಲವು ಇನಾಮುದಾರರ ಕೈಕೆಳಗಿತ್ತು ಈ ಇನಾಮುದಾರರ ಹೊರತು ಇತರರು ಬಹಳ ಕೀಳು ಜೀವನವನ್ನು ಸಾಗಿಸುತ್ತಿದ್ದರು ಇವರಿಗೆ ಪ್ರಗತಿಹೊಂದಲು ಅವಕಾಶವು ಕೂಡ ಇರಲಿಲ್ಲ

ಬ್ರಿಟಿಷರ ಆಭಿಕ್ರಮದಿಂದ ಇದು ಒಂದು ನವೀನ ಪಾಠವನ್ನು ಕಲಿತುಕೊಂಡಿತ ತನಗಿಂತ ಮಹತ್ತಾದ ಜನಾಂಗಗಳೊಡನೆ ಸಮರ ಬೆಳೆಯಿಸುವುದನ್ನು ಸಿಲ್ಲಿಸಿಬಿಟ್ಟಿತು ಪಾಶ್ಚಾತ್ಯರನ್ನು ಅನುಸರಿಸಲು ಸಂಕಲ್ಪಮಾಡಿತು

ಜಪಾನೀಯ ಮಂತ್ರಿವರ್ಯರು ಪರದೇಶಾಟನಕ್ಕೆ ಹೊರಟರು ಜಪಾನೀಯ ಯುವಕರ ಕೈಗಾರಿಕೆಗಳಲ್ಲಿ ತರಬೇತಿಹೊಂದಲು ಪಾಶ್ಚಾತ್ಯ ದೇಶಗಳಿಗೆ ನಡೆದರು ಸಂಪೂರ್ಣ ತರಬೇತಿ ಹೊಂದಿದವರಾಗಿ ಹಿಂತಿರುಗಿ ಬಂದ ತಮ್ಮ ಸ್ವದೇಶದಲ್ಲಿ ಕೈಗಾರಿಕೆಯ ಬೀಜವನ್ನು ಬಿತ್ತಿದರು

ಪಾಶ್ಚಾತ್ಯ ಕೆಲಸಗಾರರ ತಲಬು ಬಹಳ ಹೆಚ್ಚು ಆದುದರಿಂದ ವ್ಯಾಪಾರದ ಮಾರ್ಕೆಟುಗಳಲ್ಲಿ ಪ್ರತಿಸ್ಪರ್ಧಿಸಲು ಇವರಿಗೆ ಸಾಧ್ಯವಾಗುವುದಿಲ್ಲ ಜಪಾನು ಹಿಂದುಳಿದ ಜನಾಂಗವಾದುದರಿಂದ ಇಲ್ಲಿ ಕೂಲಿಯು ಬಹಳ ಕಡಿಮೆ ಪ್ರತಿಸ್ಪರ್ಧಿಸಲು ಸಾಧ್ಯವಾಗುವ ರೀತಿ ಸಾಮಾನುಗಳನ್ನು ತಯಾರಿಸಿ, ವ್ಯಾಪಾರ ಪ್ರಪಂಚದಲ್ಲಿ ಬಹಳ ಪ್ರಗತಿಹೊಂದಿಕೊಂಡು ದೊಡ್ಡ ಗೌರವಸ್ಥಾನವನ್ನು ಪಡೆದಿರುತ್ತಾರೆ ಪಾಶ್ಚಾತ್ಯ ಜನಾಂಗಗಳಿಗೆ ಅವರ ವಿಶೇಷ ತಲುಬಿನ ಕಾರಣವಾಗಿ, ಇವರೊಡನೆ ಪ್ರತಿಸ್ಪರ್ಧಿಸಲು ಸಾಧ್ಯವಾಗುವುದಿಲ್ಲ

1894ರಲ್ಲಿ ಇವರ ಪ್ರಬಲತ್ವದ ಪ್ರದರ್ಶನವು ಪ್ರಥಮ ಬಾರಿಗೆ ನಡೆಯಿತು ಚೀನಾದೇಶದ ಕೋರಿಯಾದಲ್ಲಿ ಒಂದು ದಂಗೆ ಉಂಟಾಯಿತು ಚೀನಾದೇಶಕ್ಕೆ ಸಹಕಾರವಾಗಿ ಒಂದು ಸೈನ್ಯಮಂಡಳವನ್ನು ಕಳುಹಿಸಿಕೊಟ್ಟರು ದಂಗೆಯನ್ನು ತಣಿಸಿದರು ಜಪಾನೀಯ ಸೈನ್ಯವು ಅಲ್ಲಿಯೆ ನೆಲಸಿತು

ಚೀನಾ-ಜಪಾನು ಯುದ್ಧ ಇದರ ಪರಿಣಾಮವಾಯಿತು ಕೋರಿಯಾವು ಜಪಾನಿಯರ ವಶವಾಯಿತು ಅದೊಂದು ಜಪಾನೀಯ ಆಶ್ರಿತ ರಾಜ್ಯವಾಯಿತು ಹಾಗೆಯೇ ಅಲ್ಲಿನ ಮಂಚೂರಿಯಾವು ಇವರ ವಶವಾಯಿತು.

1902ರಲ್ಲಿ ಪೌರ್ವಾತ್ಯದಲ್ಲಿ ಹಿತವುಳ್ಳ ಪಾಶ್ಚಾತ್ಯ ಜನಾಂಗಗಳೊಡನೆ ಒಂದು ಒಪ್ಪಂದವನ್ನು ಮಾಡಿತು

ಉತ್ತರದಲ್ಲಿ ರಷ್ಯಾದವರಿಗೂ ಇವರಿಗೂ ವೈರತ್ವ ಪ್ರಾರಂಭವಾಯಿತು. ಮಂಚೂರಿಯಾದಲ್ಲಿ ರಷ್ಯದವರು ಒಂದು ರೈಲ್ವೆಯನ್ನು ರಚಿಸಿದ್ದರು ಇದರ ರಕ್ಷಣಾರ್ಥವಾಗಿ ಅಲ್ಲಿಗೆ ಒಂದು ಸೈನ್ಯಮಂಡಳವನ್ನು ಕಳುಹಿಸಿಕೊಟ್ಟಿದ್ದರು ಅಲ್ಲಿನ ಪೋರ್ಟ್ ಆರ್ಥರನ್ನು ಭದ್ರಪಡಿಸಿದ್ದರು ಸೈನ್ಯವನ್ನು ಹಿಂತೆಗೆಯಬೇಕೆಂದು ಕಳುಹಿಸಿಕೊಟ್ಟ ಜಪಾನೀಯ ಎಚ್ಚರಿಕೆಯನ್ನು ತಿರಸ್ಕರಿಸಿದರು ಜಪಾನಿನೊಡನೆ ಯಾವತ್ತೂ ಒಪ್ಪಂದಗಳನ್ನು ನಡೆಯಿಸಲು, ಒಪ್ಪಲಾರದವರಾದರು ಇದರಿಂದ ಜಪಾನಿಗೆ ಯುದ್ಧ ಸಾಧಿಸಬೇಕಾಯಿತು ಜಪಾನಿನ ಪ್ರಗತಿಯ ದ್ವಿತೀಯ ಪ್ರದರ್ಶನವಿದು ಪೋರ್ಟ್ ಆರ್ಥರನ್ನು ವಶೀಕರಿಸಿದರು ಎಡಮಿರಲ್ ಟಾಗೊ ಎಂಬವರ ಅಧಿಕಾರದಲ್ಲಿ ಜಪಾನಿಯನ್ ನೌಕಾಬಲವು ರಷ್ಯಿಯನ್ ನೌಕಾಬಲವನ್ನು ನುಚ್ಚುನೂರು ಮಾಡಿತು

ಸಂಧಾನ ಕರಾರುಗಳಾಗಲು, ಮಂಚೂರಿಯಾ ರೈಲ್ವೆ ಮತ್ತು ಮಂಚೂರಿಯಾದಲ್ಲಿರುವ ರಷ್ಯಾದವರ ಎಲ್ಲಾ ಹಕ್ಕುಬಾಧ್ಯತೆಗಳು ಇವರ ಕೈಸೇರಿದವು

ಇವರು ಬಹಳ ಪ್ರಗತಿಹೊಂದಿದುದು ಕಳೆದ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷರೊಡನೆ ಮೈತ್ರಿಯ ನಿಮಿತ್ತ ಕೆಲವು ಶಾಂತಸಾಗರದ ದ್ವೀಪಗಳ ಮೇಲೆ ಇವರಿಗೆ ಮ್ಯಾಂಡೇಟ ಹಕ್ಕುಗಳು ದೊರಕಿದುವು ಅದರ ನಂತರ, ಈಗ ಜಪಾನ ಜನಾಂಗಸಭೆಯ ಸ್ನು ತ್ಯಜಿಸಿರುತ್ತದೆ ಆದರೆ ಮ್ಯಾಂಡೇಟಾಗಿ ದೊರಕಿದ ಈ ದ್ವೀಪಗಳನ್ನು ತಮ್ಮಲ್ಲ ಇಟ್ಟುಕೊಂಡಿರುವರು ಮಾತ್ರವಲ್ಲದೆ ಆ ದ್ವೀಪಗಳನ್ನು ಬಹಳವಾಗಿ ಭದ್ರೀಕರಿಸಿದ್ದಾರಂತೆ

ಮೇಲಿನ ಅವರ ಪ್ರಗತಿಯು ಒಂದು ಕಲ್ಪಿತ ಪ್ಲೇನನ್ನು ಅನುಸರಿಸಿ ನಡೆದಿರುತ್ತದೆ ಎಂಟು ವರ್ಷಗಳ ಹಿಂದೆ ಅಲ್ಲಿನ ಪ್ರಸಿದ್ಧ ಬೆರನ್ ತನಕಾರವರು ಈ ಕೆಳಗಿನ ಪ್ಲೇನನ್ನು ರಚಿಸಿದ್ದರು 'ಚೀನಾದೇಶದ ರಾಜಕೀಯ ಸಾಂಪತ್ತಿನ ಮತ್ತು ಸಾಂಗ್ರಮಿಕ ಪ್ರಗತಿಯು ನಡೆಯದಂತೆಯೂ, ರಷ್ಯದವರ ಪ್ರೇರಣೆಯು ಹರಡದಂತೆಯೂ, ನಾವು ಅಲ್ಲಿನ ಮಂಚೂರಿಯಾವನ್ನೂ ಮೋಂಗೊಲಿಯಾವನ್ನೂ ವಶೀಕರಿಸತಕ್ಕದು

"ಚೀನಾವನ್ನು ನಮ್ಮ ಅಧಿಕಾರಕ್ಕೆ ಒಳಪಡಿಸಿದರೆ, ಹಿಂದೂದೇಶ, ಆರ್ಚಿಪೆಲೊಗೊ," ಏಸ್ಯಾಮೈನರ್, ಮಧ್ಯ ಆಸ್ಯಾ ಮೊದಲಾದ ದೇಶಗಳನ್ನು ಹಿಡಿಯಲು ಸುಲಭವಾಗುವುದು ಯುರೋಪು ಖಂಡವಲ್ಲೂ ಕೂಡ ಕಾಲಿಡಬಹುದು

'ನಮ್ಮಲ್ಲಿ ಜಾಸ್ತಿಯಾಗಿರುವ ಜನರಿಗೆ ವರ್ಷಂಪ್ರತಿ ೭೦೦ ೦೦೦ ಪ್ರಕಾರ ನವೀನ ನೆಲೆಯನ್ನು ಒದಗಿಸುವ ಏರ್ಪಾಡು ಮಾಡಬಹುದು '

ಸಮಸ್ತ ಪ್ರಪಂಚವನ್ನು ಹಿಡಿಯುವ ಪ್ಲೇನು

ಬೆರನ್ ತಾನಾಕಾರವರು ಕ್ರಮೇಣ ಸಮಸ್ತ ಪ್ರಪಂಚವನ್ನು ಹಿಡಿಯುವ ಪ್ಲೇನನ್ನು ರಚಿಸಿರುವರು ಅವರ ಈ ಮಹತ್ತಾದ ಪ್ಲೇನಿನ ಪ್ರಥಮ ಪ್ರಕರಣಗಳು ಈಗ ನಡೆದಿವೆ

೧೯೩೧ರಲ್ಲಿ ಜಾಪಾನು, ಚೀನಾದಲ್ಲಿ ಸಿರಿವಂತಾಗಿರುವ ಮಂಚೂರಿಯಾವನ್ನು ವಶೀಕರಿಸಿತು ೧೯೩೩ರಲ್ಲಿ ಜೆಹೋಲನ್ನು ಹಿಡಿಯಿತು, ಚೀನದ ಗಡಿಯಲ್ಲಿರುವ ಸೈನ್ಯಮಂಡಳವನ್ನು ಹಿಂತೆಗೆಯುವಂತೆ ಮಾಡಿದರು

೧೯೩೪ರ ಏಪ್ರಿಲ್ ತಿಂಗಳಲ್ಲಿ ಚೀನಾದೊಡನೆ ಸಹಕರಿಸುವ ಅಂತರ್‌ರಾಷ್ಟ್ರೀಯ ಜನಾಂಗಗಳನ್ನು ಪ್ರತಿಭಟಿಸಲು ಯುದ್ಧಮಾಡುವನೆಂದು ಎಚ್ಚರಿಕೆಯನ್ನು ಸಾರಿತು ಜೂನ್ ತಿಂಗಳಲ್ಲಿ ಚೀನಾದೇಶದಲ್ಲಿ ತನ್ನ ಸೈನ್ಯಮಂಡಳವನ್ನು ಪ್ರಸರಿಸಿತು

ಈಗ ಉತ್ತರ ಚೀನಾಕ್ಕೆ 'ಸ್ವರಾಜ್ಯ' ಒದಗಿಸುವ ಕಾರ್ಯವನ್ನು ಕೊಡಗಿರುತ್ತದೆ ಇಲ್ಲಿನ ಪ್ರಾಂತ್ಯಗಳಲ್ಲಿ ತಮ್ಮ ಅಧಿಕಾರಕ್ಕೆ ಸೇರಿದ ಸ್ವಯಂ ಪ್ರಭುತ್ವದ ರಾಜ್ಯಗಳನ್ನು ಸ್ಥಾಪಿಸಲು ಶ್ರಮಪಡುತ್ತಿದೆ

ಜಾಪಾನಿನ ಈ ವರ್ತನೆಯು ಪಾಶ್ಚಾತ್ಯರಲ್ಲಿ ಆಶ್ಚರಿಯನ್ನೂ ದಿಗಿಲನ್ನೂ ಉಂಟುಮಾಡಿರುತ್ತದೆ ಇವರು ಪ್ರಗತಿ ಹೊಂದಿದ ವಿಧಗಳು ಬಹಳ ವಿಚಿತ್ರಕರವು ಪಾಶ್ಚಾತ್ಯರಿಗೆ ತಿಳಿಯಲು ಸಾಧ್ಯವಾಗದ 'ಭೂಸಿಡೊ' ಕ್ರಮವೆ, ಜಾಪಾನಿನ ಮರ್ಮವಾಗಿರುತ್ತದೆ

ರಶ್ಯಾವು ಜಾಪಾನಿನ ಮಹಾ ವೈರಿ

'ಭೂಸಿಡೊ' ಕ್ರಮವು ಮುಸಲೀನಿಯು ಪೋಷಿಸುತ್ತಿ ಕ್ರಮದಂತೆಯೆ ಇನ್ನೊಂದು ರಾಜಕೀಯ ಕ್ರಮವು ಈ ಭೂಸಿಡೊ' ಪ್ರೇರಣೆ ಉತ್ತರ ಚೀನಾದ ಹೂಪ್ಪೆ, ಶಾಂಟುಂಗ್ ಚಾಹಾರ್ ಮತ್ತು ಶಾನ್ಸಿ ಪ್ರಾಂತ್ಯಗಳಲ್ಲಿ ಜಾಪಾನಿಯ ಚಟುವಟಿಕೆಗಳ ಕಾರಣವು

ರಶ್ಯಾವು ಜಾಪಾನಿನ ಮಹಾ ವೈರಿ ರಶ್ಯಾದ ಪೌರ್ವಾತ್ಯದಲಿನ ಹಿತಕ್ಕೆ ವಿಶೇಷ ರೀತಿಗಳಲ್ಲಿ ಇವರಿಂದ ಆತಂಕ ಬರುವುದೆ ಇದರ ಕಾರಣವು ಅದಲ್ಲದೆ ರಶ್ಯಾದ ಸಾಪತ್ತಿಕ ಸ್ಥಿತಿಯು ಜಾಪಾನನ್ನು ಭೀತಿಮಯ ಮಾಡಿರುತ್ತದೆ ಆದದರಿಂದ ರಶ್ಯಾವನ್ನು ಹಿಡಿಯ ಇವರಿಗೆ ಒಂದು ಸ್ಥಾನ ಬೇಕಾಗಿದೆ ಅವರು ಈ ಉದ್ದೇಶವನ್ನು ಸಾಧಿಸುತ್ತಿರುವಾಗ ಉತ್ತರ ಚೀನಾದಲ್ಲಿರುವ ಇತರ ಜನಾಂಗಗಳ ಮೇಲೆ ಇವರು ಕೈಮಾಡಿದಂತಾಗ ವುದ ಅದರ ಪರಿಣಾಮ ಏನಾಗುವುದ ?

ಒಪ್ಪಂದವನ್ನು ತುಚ್ಛೀಕರಿಸಿದೆ

ಬ್ರಿಟಿಷ ಮತ್ತು ಅಮೇರಿಕಾದ ಧನಾಢ್ಯರು ಚೀನಾ ದೇಶದಲ್ಲಿ ಕೆಲವು ರೈಲ್ವೆ ಸಂಸ್ಥೆಗಳ ಮೇಲೂ ಫೇಗಳ ಮೇಲೂ ಧಂರಾಳಹಣವನ್ನು ಸಂಚಯಿಸಿದ್ದಾರೆ ಈ ಜನಾಂಗಗಳ ಪ್ರತಿನಿಧ್ಯ ಮಂಡಳಗಳು ಅಲ್ಲಿನ ಪೈಪಿಂಗ್ ಮತ್ತು ಹೂಪ್ಪೆ ಪ್ರಾಂತ್ಯಗಳಲ್ಲಿವೆ

೧೯೨೧ರಲ್ಲಿ ಜರಗಿದ ವಾಶಿಂಗ್ಟನ್ ಪರಿಷತ್ತಿನ ನಿಮಿತ್ತ ಇವರಿಗೂ ಆಂಗ್ಲೇಯರಿಗೂ ನಡೆದ ಒಪ್ಪಂದವು ಕಳಚಿ ಹೋಯಿತ ಈ ಪರಿಷತ್ತಿನಿಂದಾಗಿ, ಅಮೇರಿಕಾಕ್ಕೆ ಪೌರ್ವಾತ್ಯದಲ್ಲಿ ನೆಲೆ ಸಿಕ್ಕಿತು ನೌಕಾಬಲದ ಕುರಿತ ಆಂಗ್ಲೇಯರಿಗೂ ಅಮೇರಿಕಾನರಿಗೂ–ಇವರಿಗೂ ೫ ೫ ೩ರ ದಾಮಾಶಾಯ ಇರಬೇಕೆಂದ ಒಪ್ಪಂದಗಳಾದವು

ಈಗ ಜಾಪಾನು ಈ ವಾಶಿಂಗ್ಟನ್ ಒಪ್ಪಂದವನ್ನು ಮುರಿದಿರುತ್ತದೆ ಪ್ರಪಂಚದಲ್ಲಿರುವ ಬಹಳ ಪ್ರಬಲವಾದ ಮತ್ತು ಶಿಷ್ಟವಾದ ನೌಕಾಬಲವನ್ನು ರಚಿಸಲು ದೃಢಸಂಕಲ್ಪ ಮಾಡಿರುತ್ತದೆ

ಜಪಾನಿನ ರಾಜಕೀಯ ವ್ಯವಸ್ಥೆಯು ಸಂಗ್ರಾಮಿಕರ ಕೈಗಳಲ್ಲಿದೆ ರಷ್ಯದೊಡನೆ ಉಂಟಾದ ವೈಮನಸ್ಯವು ಬೆಳೆಯುತ್ತಾ ಇದೆ ಮಂಚೂರಿಯಾ–ರಷ್ಯದ ಗಡಿಯ ಹತ್ತಿರ ಪತಿವಾರವೂ ವಿಶೇಷ ಘಟನೆಗಳು ನಡೆಯುತ್ತಿವೆ ಇನ್ನು ಕೆಲ್ಲೊಂದು, ಜಪಾನನ್ನು ಒಂದು ಮಹಾ ಯುದ್ಧಕ್ಕೆ ಒಡ್ಡದೆ ಇರದು

ಲೋದ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದೇ ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,

ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಆಲಯದಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ಸಿದ್ಧಯೋಗಗಳ ಆಧಾರದಿಂದ ನಾವು ಸಿದ್ಧಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ,

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾವಳಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣಾ ವಿಧಿ)

ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.

ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

(30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಆತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ—ಅದು ಪೂರ್ಣವಾದ ಟೋನಿಕ್ ಆಹಾರ. ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ.

ರೂ. 3-4-0 ಮತ್ತು ರೂ. 1-12-0

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Estd 1920] **THE** [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು

ಠೇವಣಾತಿಗಳ ದರ

ಸಿರಖು ಠೇವಣಾತಿಗಳು—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳ ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳ ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಜಾಸ್ತಿ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು

Puttur, Dated 10—4—1935

G. N. Lakshman Pai,
Secreatry

ಬೇಕಾಗಿದ್ದಾರೆ!

ದಿ ನ್ಯೂ ಏಸ್ಯಾಟಿಕ್ ಲಾಯಿಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಕಂಪೆನಿಯ ಕಾರ್ಯಪ್ರಚಾರಕ್ಕಾಗಿ,-ದಕ್ಷಿಣ ಕನ್ನಡ, ಮಲಬಾರು, ತಿರುವಾಂಕೂರು ಪ್ರಾಂತ್ಯಗಳಲ್ಲಿ, ಉತ್ತಮವಾಗಿ ಪ್ರಚಾರ ಮಾಡಿ ವಿಮೆದಾರರನ್ನು ಕೂಡಿಸಿಕೊಡಬಲ್ಲ ಆರ್ಹ್ಯರೂ ಯೋಗ್ಯರೂ ಆಗಿರುವ ಸ್ತ್ರೀ ಪುರುಷರು ಬೇಕಾಗಿದ್ದಾರೆ.

ಮೆಸರ್ಸ್ ಬಿರ್ಲಾ ಬ್ರದರ್ಸ್ ಲಿಮಿಟೆಡ್, ಇವರ ಆದಳಿತದಿಂದಾಗಿ ಅಭ್ಯುದಯವನ್ನು ಹೊಂದಿ, ಈ ಕಂಪೆನಿಯು ತನ್ನ ಮೊದಲನೆ ಎರಡು ವರ್ಷಗಳೊಳಗಾಗಿಯೆ

೫೦ ಲಕ್ಷ ರೂಪಾಯಿ ಮೊಬಲಗಿನ ವಿಮೆ ಗಳಿಸಿಕೊಂಡಿದೆ.

ಇನ್ನೂ ಇನ್ನೂ ವಿಮಾದಾರರನ್ನು ಜಮೆಮಾಡಲು, ನಿಜವಾಗಿಯೂ ದಕ್ಷರಾಗಿರುವ ಉತ್ತಮ ಶೀಲರು ಬೇಕಾಗಿರುವರು, ಇದಕ್ಕಾಗಿ, ನಮ್ಮ ಬ್ರೆಂಚ್ ಮೆನೇಜರರು ಈ ಪ್ರಾಂತ್ಯಗಳಲ್ಲಿ ಸಂಚರಿಸುವರು.

ಎಲ್ಲ ಅರ್ಜಿಗಳನ್ನು ಇಂಗ್ಲಿಷಿನಲ್ಲಿ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳುವುದು.

ಬ್ರೆಂಚ್ ಮೆನೆಜರರು,—

ದಿ ನ್ಯೂ ಎಸ್ಯಾಟಿಕ್ ಲಾಯಿಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, 15, ಎಸ್ಪ್ಲೆನೆಡ್ ರೋಡ್, ಫೋರ್ಟ್, ಮುಂಬಾಯಿ

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯು ಇದು ಸ್ತ್ರೀಸಂಗಮದಿಂದ ಮನುಷ್ಯ ಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯ ದೆಸೆಯಿಂದ ಕೋಲೂರಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು

ದೀರ್ಘಕಾಲದ ವ್ಯಾಧಿಗಳೂ ಕೂಡ ನಶಿಸಿ ಪಲಾಯನವಾಗುವುವು ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು ಸೇವಿಸುವುದಕ್ಕೆ ಹಿತಕರ.

ಕ್ರಯ:-ದೊಡ್ಡ ಬಾಟ್ಲಿಗೆ ರೂ. 4 ಮಿಡಿಯಂ 2-4-0 ಚಿಕ್ಕದು 1-2-0.

ತಯಾರಿಸುವವರು:— ಲಸ್ಟರ್ ಡಿಪೋ, ಚಿಕ್ಕಮಗಳೂರು.

ಬ್ರೇಂಚ್.—ಚಿಕ್ಕಪೇಟೆ, ಬೆಂಗಳೂರು.

ಮುಖ್ಯ ಏಜಂಟರು:— ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

'ಸ್ವದೇಶಾಭಿಮಾನಿ' ಉತ್ತಮವರ್ಗದ ವಾರಪತ್ರಿಕೆ.

ಇಂದೇ ಪಡಕೊಳ್ಳಿರಿ—ಓದಿರಿ!

ಮಿಥ್ಯಜೀವನದ ಸತ್ಯ ಕಥೆಗಳು

(All Rights Reserved)

ಲೇಖಕ ..... 'ರಸಿಕರಂಜನ'

(Truth is stranger than Fiction)

೩. ಸಾಧ್ವಿಯರ ಸಾಧು.

೧

ಮಂಗಳೂರಿನ ಮೈದಾನಿನ ಬಳಿಯ ಒಂದು ಆಲದ-ಮರದ ಕೆಳಗೆ ಒಂದು ದಿನ ಬೆಳಿಗ್ಗೆ ದಟ್ಟವಾದ ಜನಸಂದಣಿಯು ನೆರೆದಿತ್ತು. ಯಾಕೆಂದು ಬಹಳ ಸಮಯದ ವರೆಗೆ ಯಾರಿಗೂ ತಿಳಿದಿರಲಿಲ್ಲ. ಮೊದಲು ದಾರಿಹೋಕನೊಬ್ಬನಿಗೆ ಮರದ ಮೇಲಿಂದ ಏನೋ ಶಬ್ದ ಕೇಳಿಬಂದು ಅವನು ಅದೇನೆಂದು ಕಂಡುಹಿಡಿಯಲು ಮೇಲೆ ನೋಡುತ್ತಾ ನಿಂತನು. ಅವನು ಅತ್ತಿತ್ತ ಇಣುಕುವಷ್ಟರಲ್ಲಿ ಇನ್ನೂ ಹತ್ತು ಮಂದಿ ದಾರಿಗರು ಅವನಂತೆಯೇ ನಿಂತು ಕತ್ತು ಉದ್ದ ಮಾಡತೊಡಗಿದರು. ಅಷ್ಟರಲ್ಲಿ ಅಲ್ಲೇನೋ ವಿಚಿತ್ರ ನಡೆದಿರುವುದೆಂದು ಅಚೆ ಈಚೆಯ ಮಾರ್ಗದಲ್ಲಿ ಹೋಗುತ್ತಿದ್ದವರೆಲ್ಲಾ ಅಲ್ಲಿಗೆ ಓಡಿಬಂದು ಮುತ್ತಿದರು.

ಕಡೆಗೆ ಯಾರೋ ಒಬ್ಬನು, "ಮಂಗನೆಂದು ಕಾಣುತ್ತದೆ," ಎಂದನು.

ಹತ್ತು ಮಂದಿ ಒಂದೇ ಸ್ವರದಲ್ಲಿ, 'ಮಂಗ! ಮಂಗ!' ಎಂದರು.

ಒಡನೆ "ಮಂಗ ಮಂಗ!" ಎಂಬ ಕೂಗಿನಿಂದ ನಾಲ್ಕೂ ದಿಕ್ಕುಗಳು ಪ್ರತಿಧ್ವನಿಸತೊಡಗಿದುವು.

ಆಗ ಕೆಲವು ಪೋಕರಿಗಳು ಕಲ್ಲು, ಹಂಚಿನ ತುಂಡು ಮುಂತಾದುವನ್ನು ಮರಕ್ಕೆ ಗುರಿಯಿಟ್ಟು ಹೊಡೆಯಲಾರಂಭಿಸಿದರು.

ಅಷ್ಟರಲ್ಲಿ ಮರದ ಮೇಲಿನಿಂದ ಮನುಷ್ಯ ಸ್ವರದಲ್ಲಿ ಮಾತಾಡಿದುದು ಕೇಳಿಬಂತು. ಎಲ್ಲರೂ ಸುಮ್ಮನಾಗಿ ಆಲಿಸತೊಡಗಿದರು.

ಮರದ ತುದಿಯಲ್ಲಿನ ದಪ್ಪವಾದ ಎಲೆಗಳ ನಡುವಿನಿಂದ ಯಾರೋ ಒಬ್ಬನು ಕೆಳಕ್ಕೆ ಇಳಿಯುತ್ತಿದ್ದುದು ಗೋಚರಿಸಿತು. ಅವನು ಮೈಬಣ್ಣದಲ್ಲಿ ತೊಳೆದ ಕೆಂಡದಂತಿದ್ದು, ಬರೀ ಒಂದು ಲಂಗೋಟಿಯನ್ನು ಧರಿಸಿಕೊಂಡಿದ್ದನು. ತಲೆಯು ನುಣ್ಣನೆ ಬೋಳಿಸಲ್ಪಟ್ಟು ಥಳಥಳಿಸುತ್ತಿತ್ತು.

ಒಡನೆ ಕೂಡಿದವರು, "ಸಾಧು! ಸಾಧು!" ಎಂದು ಬೊಬ್ಬಿಡತೊಡಗಿದರು. ಕೆಲವರು "ಅಯ್ಯೋ, ಎಂತಹ ದಿವ್ಯ ಪುರುಷ! ನಮ್ಮ ಮೂಢತನಕ್ಕಾಗಿ ನಮಗೆ ಶಾಪ ಕೊಡದಿದ್ದರೆ ಸಾಕು!" ಎಂದು ನಡುಗಿದರು. ಒಬ್ಬಿಬ್ಬರಂತೂ ಕೈಮುಗಿಯುತ್ತಾ, "ಸ್ವಾಮಿ! ನಾವು ಅಜ್ಞಾನದಿಂದ ಮಾಡಿದ ಅಪರಾಧವನ್ನು ಕ್ಷಮಿಸಿ, ನಮ್ಮನ್ನು ಧನ್ಯರಾಗಿಮಾಡಿರಿ!" ಎಂದು ಬೇಡಿಕೊಂಡರು.

ಸಾಧುವು ಮೇಲಿನ ರೆಂಬೆಗಳಿಂದ ಇಳಿದು ಕೆಳಗಿನ ರೆಂಬೆಯ ಮೇಲೆ ಬಂದು, ನಿಂತು, ಕೈಸನ್ನೆಯಿಂದ ಎಲ್ಲರನ್ನೂ ಸಮಾಧಾನವಾಗಿರಲು ತಿಳಿಸಿದನು.

ಕೆಲವು ಧೈರ್ಯವಂತರು, "ತಮ್ಮಂತಹ ಮಹಾಪುರುಷರ ಪಾದಧೂಳಿನಿಂದ ನಮ್ಮ ಊರು ಇಂದು ಧನ್ಯವಾಯಿತು. ತಮ್ಮ ಹೆಸರೇನೆಂದು ತಿಳಿಸಿ ನಮ್ಮ ಜೀವನವನ್ನು ಸಾರ್ಥಕಗೊಳಿಸಬೇಕು!" ಎಂದು ದೈನ್ಯದಿಂದ ಬೇಡಿಕೊಂಡರು.

ಸಾಧುವು, ಬಹು ಗಂಭೀರವಾಣಿಯಿಂದ "ಹೆದರಬೇಡಿ, ನಾನು ಸಾಧು ಸದಾನಂದ. ಬೇಕಾದುದನ್ನು ಕೇಳಿ, ಎಲ್ಲವನ್ನೂ ಕೊಡುವೆನು," ಎಂದು ಅಭಯದಾನ ಮಾಡಿದನು.

ಸಾಧುವಿನ ಈ ಮಾತುಗಳನ್ನು ಕೇಳಿ ಕೆಲವರು ನಕ್ಕು ತಮಾಷೆ ಮಾಡಿದರು. ಕೆಲವರು, "ಈ ಕಲಿಯುಗದಲ್ಲಿಯೂ ವರ ಕೊಡುವವರೂ ತೆಗೆದುಕೊಳ್ಳುವವರೂ ಇರುವರೇ!" ಎಂದು ಹೇಳುತ್ತಾ ತಂತಮ್ಮ ಕೆಲಸದ ಮೇಲೆ ಹೋದರು. ಉಳಿದ ಕೆಲವರು, ತಾವು ಏನನ್ನು ಕೇಳಿ ಪಡೆಯಲಿ?—ಎಂಬ ಯೋಚನೆಯಲ್ಲಿ ತೊಡಗಿದರು.

ಅಷ್ಟರಲ್ಲಿ ಕಣ್ಣುನೋವಿಗಾಗಿ ಆಸ್ಪತ್ರೆಗೆ ಹೋಗಲೆಂದು ಹೊರಟು ಬಂದಿದ್ದ ರಾಮಣ್ಣನು "ನನಗೆ ಕಣ್ಣುನೋವಿಗೆ ಔಷಧ ಕೊಡಬಹುದೇ?" ಎಂದು ಸಂಕೋಚಪಡುತ್ತಾ ಕೇಳಿದನು.

ಸಾಧು ಸದಾನಂದನು ಮರದ ಒಂದು ಎಲೆಯನ್ನು ಕಿತ್ತು ರಾಮಣ್ಣನ ಕಡೆಗೆ ಬಿಸಾಡಿ, "ಇದರ ರಸವನ್ನು ತೆಗೆದು ಕಣ್ಣಿಗೆ ಹಾಕಿಕೊಳ್ಳು," ಎಂದು ಅಪ್ಪಣೆ ಕೊಟ್ಟನು.

ರಾಮಣ್ಣನು ದೈನ್ಯದಿಂದ ಅವನೆಂದಂತೆ ಮಾಡಿದನು. ಎಲ್ಲರೂ ಸಾಧುವಿನ ಶಕ್ತಿಯ ಪರೀಕ್ಷೆಗಾಗಿ ಕಾಯ್ದು ನಿಂತರು. ರಾಮಣ್ಣನು ಕಣ್ಣಿಗೆ ಎಲೆಯ ರಸವನ್ನು ಹಾಕಿಕೊಂಡು ಸ್ವಲ್ಪ ಸಮಯವಾಗುತ್ತಲೇ, ಮೆಲ್ಲ ಮೆಲ್ಲಗೆ ಕಣ್ಣು ಬಿಟ್ಟು ಆಚೆ ಈಚೆ ನೋಡಿದನು. ಅವನಿಗೆ ನೋವು ಕಡಿಮೆಯಾದಂತೆ ಕಂಡಿತು. "ಹಾ! ಎಂತಹ ದಿವ್ಯ ಔಷಧಿ! ಈಗ ನೋವು ಸ್ವಲ್ಪವೂ ಇಲ್ಲ," ಎಂದು ಬಿಟ್ಟನು.

ಒಡನೆ ಕೋಟ್ಯಣ್ಣನು ಮುಂದೆ ಬಂದು, "ಹತ್ತು ವರ್ಷದಿಂದ ನನ್ನ ಹೆಂಡತಿಯು ವಾತರೋಗದಿಂದ ನರಳುತ್ತಿರುವಳು," ಎನ್ನುವಷ್ಟರಲ್ಲೇ ಸಾಧುವು ಹತ್ತು ಎಲೆಗಳನ್ನು ಕೆಳಕ್ಕೆ ಉದುರಿಸಿ, ಅವುಗಳ ಲೇಪಮಾಡಿ ಕಾಲಿಗೆ ಹಚ್ಚಲು ಆಜ್ಞಾಪಿಸಿದನು.

ಕೃಷ್ಣಪ್ಪನು ತನ್ನ ಅಜ್ಜಿಗೆ ಕಣ್ಣು ಕಾಣುವಂತೆ ಮಾಡಲು ಏನಾದರೂ ಔಷಧ ಬೇಕೆನ್ನುತ್ತಲೇ ಸಾಧುವು ಎರಡು ಎಲೆಗಳನ್ನು ಕೆಳಕ್ಕೆ ಬಿಸುಟು ಅದರ ರಸವನ್ನು ಅವಳ ಕಣ್ಣಿಗೆ ಹಾಕಬೇಕೆಂದನು.

ರಾಜಾರಾವ ರಾಯರು ತನ್ನ ಯಾವುದೋ ಒಂದು ಗೂಢ ರೋಗಕ್ಕೆ ಏನು ಮಾಡಲೆಂದು ಕೇಳಲು ಸಾಧುವು ಐದು ಎಲೆಗಳನ್ನು ಉದುರಿಸಿದನು.

ತುಂಗಮ್ಮನು ತನ್ನ ಮಗಳಿಗೆ ಕಾಲ ಸಫೂರವಾಗಲು ಔಷಧ ಬೇಕೆನ್ನುತ್ತಲೇ ಸಾಧುವು ಆರು ಎಲೆಗಳನ್ನು ಕಿತ್ತು ಬಿಸುಟನು.

ಹೀಗೆ ಇಡೀ ದಿನ ಸದಾನಂದನು ಬಂದ ಬಂದವರಿಗೆಲ್ಲಾ ಎಲ್ಲಾ ತರದ ರೋಗಗಳಿಗೂ ಆಲದಮರದ ಎಲೆಗಳನ್ನು ಕೊಟ್ಟು ಕಳುಹಿಸಿದನು. ಸಾಯಂಕಾಲವಾಗಬೇಕಾದರೆ ಸಾಧುವಿನ ಕೀರ್ತಿಯು ಊರು, ಹೊರಊರುಗಳಿಗೂ ವ್ಯಾಪಿಸಿತು. ಎಲ್ಲೆಡೆಗಳಿಂದಲೂ ಜನರು ಬಂದು ಎಲೆಗಳನ್ನು ಪಡಕೊಂಡು ಹೋದರು. ಹೋದವರೊಬ್ಬರೂ ತಿರುಗಿ ಬಂದು ತಾವು ಪಡೆದ ದಿವ್ಯವಾದ ಎಲೆಗಳ ಪ್ರಯೋಜನವನ್ನು ತಿಳಿಸಲು ಆಸ್ಪದವೇ ಇರದುದರಿಂದ ಎಲ್ಲರ ಎಲ್ಲಾ ರೋಗಗಳೂ ಆ ಎಲೆಗಳ ಮೂಲಕ ಗುಣಹೊಂದಿದುವೆಂದು ಜನರು ಗಾಢವಾಗಿ ನಂಬುವಂತಾಯಿತು.

ಅದರಲ್ಲಿಯೂ ಸಾಧುವು ಬೆಳಗ್ಗಿನಿಂದಲೂ ಅದೇ ಮರದ ರೆಂಬೆಯ ಮೇಲೆ ನಿಂತಿದ್ದು ಒಂದು ತಟಕು ನೀರನ್ನು ಕೂಡ ಸ್ವೀಕರಿಸಿರಲಿಲ್ಲ. ಜನರನೇಕರು ಆತನಿಗಾಗಿ ಹಾಲು, ಬಾಳೆ ಹಣ್ಣು, ಕಿತ್ತಳೆ ಮುಂತಾದುವನ್ನು ತಂದಿದ್ದರೂ ಆತನು ಅದೆಲ್ಲವನ್ನೂ ನಿರಾಕರಿಸಿ ಅವರನ್ನು ಹಿಂದೆ ಕಳುಹಿಸಿಕೊಟ್ಟಿದ್ದನು. ಇದರಿಂದ ಸಾಧು ಸದಾನಂದನು ಬರೀ ವಾಯು ಭಕ್ಷಕನೆಂದೂ, ಆತನು ನಿಜವಾಗಿಯೂ ದೇವರ ಅವತಾರವೇ ಎಂದೂ ಎಲ್ಲರೂ ಆಡಿಕೊಳ್ಳತೊಡಗಿದರು.

ಸಾಯಂಕಾಲ ಆರು ಘಂಟೆಯ ಸನ್ನಿಯಕ್ಕೆ ಆ ಆಲದ ಮರದ ಸುತ್ತಲೂ ಸಾವಿರಾರು ಮಂದಿ ಗಂಡಸರೂ, ಹೆಂಗಸರೂ ನೆರೆದಿದ್ದರು. ಅವರೆಲ್ಲರೂ ಸಾಧುವನ್ನು ರಾತ್ರೆ ಅಲ್ಲಿಯೇ ಇರಗೊಡಿಸಬಾರದೆಂದೂ, ಅವನನ್ನು ಬಿಟ್ಟು ಹೋದರೆ ಮರುದಿನ ಅವನು ಕಾಣೆಯಾಗಿ, ನಮ್ಮೂರಿಗೆ ದೊಡ್ಡ ನಷ್ಟವಾದೀತೆಂದೂ ಪಿಸುಗುಟ್ಟಲಾರಂಭಿಸಿದರು. ಕಡೆಗೆ ರಾಧಾಬಾಯಿ ಎಂಬ ಸಂತೆಯೊಬ್ಬಳು ಸಾಧುವನ್ನು ಏನಾದರೂ ಮಾಡಿ ತಮ್ಮಲ್ಲಿ ಒಯ್ದು ಉಪಚರಿಸುವ ವ್ಯವಸ್ಥೆ ಮಾಡುವುದೆಂದು ನಿರ್ಧರಿಸಿ, ಅವನಿಗೆ ಬಹಳ ದೈನ್ಯದಿಂದ ಆ ವಿಚಾರವನ್ನು ತಿಳಿಸಿದಳು.

ಸಾಧುವು, 'ನನಗೆ ಬಯಲೂ, ಮನೆಯೂ ಎರಡೂ ಒಂದೇ. ಇಲ್ಲೇ ಇದ್ದುಬಿಡಲು ನನಗೆ ಅತ್ಯವು ಪ್ರೇರಿಸುವುದು,' ಎಂದನು.

ಸಂತೆಯು, 'ಬಯಲೂ, ಮನೆಯೂ ಎರಡೂ ಒಂದೇ ಆದ ಪಕ್ಷಕ್ಕೆ, ಮನೆಯಲ್ಲೇ ಇದ್ದು ನಮ್ಮನ್ನೆಲ್ಲಾ ಸಂತೋಷಪಡಿಸಬಾರದೆ?' ಎಂದು ಅತ್ಯಂತ ದೀನಳಾಗಿ ಕೇಳಿದಳು.

ಸಾಧುವಿನ ಮನಸ್ಸು ಕರಗಿತು. 'ನನಗೆ ಎಲ್ಲವೂ ಒಂದೇ, ಎಲ್ಲರೂ ಒಂದೇ. ಯಾವುದರಲ್ಲಿಯೂ ಸುಖವೂ ಇಲ್ಲ, ದುಃಖವೂ ಇಲ್ಲ. ಎಲ್ಲಿದ್ದರೂ ಹಾಗೆಯೇ,' ಎಂದು ವೇದಾಂತವನ್ನು ಬಿಚ್ಚಿ, ಎಲ್ಲರನ್ನೂ ಮತ್ತಷ್ಟು ಮುಗ್ಧರಾಗಿ ಮಾಡಿದನು.

ಕಡೆಗೆ ಸಾಧುವನ್ನು ರಾಧಾಬಾಯಿಯ ಮನೆಗೇ ಒಯ್ಯುವುದೆಂದು ಖಂಡಿತವಾಯಿತು. ಕತ್ತಲಾಗುತ್ತಲೇ ನೆರೆದ ಜನರು ಸಾಧುವನ್ನು ಬೇಂಡ್ ವಾದ್ಯದ ಘೋಷದೊಂದಿಗೆ ಕಾರಿನಲ್ಲಿ ಕುಳ್ಳಿರಿಸಿ ಮೆರವಣಿಗೆಯಲ್ಲಿ ಮುಖ್ಯ ಮಾರ್ಗಗಳ ದಾರಿಯಾಗಿ ರಾಧಾಬಾಯಿಯ ಮನೆಗೆ ಕರೆದುಕೊಂಡು ಹೋದರು.

೨

ರಾಧಾ ಬಾಯಿಯ ಮನೆಯಲ್ಲಿ ಸಾಧುವಿಗೆ ಒಂದು ಪ್ರತ್ಯೇಕ ಕೋಣೆಯನ್ನು ಕೊಟ್ಟರು. ಅಲ್ಲಿ ಅವನನ್ನು ರಾಧಾಬಾಯಿಯ ಸಂತಕೂಟದ ಸಾಧ್ವಿಯರನೇಕರು ಬಳಸಿ ಕೂತರು. ಕೆಲವರು ಆತನ ಕಾಲುಗಳನ್ನೂ, ಕೆಲವರು ಆತನ ಕೈಗಳನ್ನೂ ಒತ್ತಿ ದಣಿವನ್ನು ನೀಗಿಸಲು ಎರವಾದರು. ನಾಲ್ಕೂ ದಿಕ್ಕಿನಿಂದ ಸಾಧುವಿಗೆ ಹಾಲು, ಹಣ್ಣುಹಂಪಲುಗಳ ಕಾಣಿಕೆಗಳು ಬಂದುವು. ಸಾಧುವು ಅದಾವುದೂ ಬೇಡವೆನ್ನಲು ರಾಧಾಬಾಯಿಯು ಸ್ವಂತವಾಗಿ ಬಾಳೆ ಹಣ್ಣುಗಳನ್ನು ಸುಲಿದು ಆತನ ಬಾಯಿಗೆ ತುರುಕಿಸಿದಳು, ಬೆಳ್ಳಿಯ ತಟ್ಟೆಯಿಂದ ಹಾಲನ್ನು ಕುಡಿಸಿದಳು. ನಾಲ್ಕೈದು ಮಂದಿ ಸಾಧ್ವಿಯರು ಆತನಿಗೆ ಮೈಯ ಬೆವರನ್ನು ಉಜ್ಜಿ, ಗಾಳಿ ಬೀಸಿ, ಪರವಶ್ನೇ ಮರೆಯುವಂತೆ ಮಾಡಿದರು. ಎಲ್ಲವೂ ಮುಗಿದ ಬಳಿಕ ಸಾಧ್ವಿಯರೆಲ್ಲರೂ ಸಾಧುವಿನ ಉಪದೇಶವಾಕ್ಯಗಳನ್ನು ಕೇಳುತ್ತಾ ಬಹು ರಾತ್ರಿಯ ವರೆಗೆ ಕುಳಿತರು. ಕಡೆಗೆ ನಡುರಾತ್ರೆಯಲ್ಲಿ ಸಾಧುವು ಸುಪ್ಪತ್ತಿಗೆಯಂತಹ ಮೆತ್ತಗಿನ ಹಾಸಿಗೆಯಲ್ಲಿ ಮಲಗಿ, ಬೆಳಿಗ್ಗೆ ಎಂಟು ಘಂಟೆಯ ತನಕ ನಿದ್ದೆ ಮಾಡಿದನು.

ಮರುದಿನ ರಾಧಾಬಾಯಿಯ ಮನೆಯಲ್ಲೇ ಸಾಧುವಿನ ದರ್ಶನವನ್ನು ಎಲ್ಲರೂ ಪಡೆಯುವ ಏರ್ಪಾಡಾಯಿತು. ಎಲ್ಲೆಲ್ಲಿಂದ ಜನರು ಬಂದು ಸಾಧುವಿನ ಕೈಯಿಂದ ಯಾವ ಯಾವ ಮರದೆಲೆಗಳನ್ನು ಔಷಧವಾಗಿ ಪಡೆದು ರೋಗಿಗಳ ಉಪಚಾರಕ್ಕಾಗಿ ಹೋದರು.

ಹಲವು ಮುದುಕಿಯರೂ, ವಿಧವೆಯರಾದ ತರುಣಿಯರೂ, ಗಂಡ ಹೊರ ಊರಲ್ಲಿರುವವರೂ, ಗಂಡನನ್ನು ಬಿಟ್ಟವರೂ ಸದಾ ಸರ್ವಕಾಲವೂ ಸಾಧುವಿನ ಸಂಗದಲ್ಲೇ ಇದ್ದು ಬಿಟ್ಟು ಆತನ ಅಮೂಲ್ಯವಾದ ವೇದಾಂತವನ್ನು ಪಾನ ಮಾಡತೊಡಗಿದರು. ಕೆಲವರಂತೂ ಆತನ ಆ ವೇದಾಂತವಾಕ್ಯಗಳನ್ನು ಸಂಗ್ರಹಿಸಿ ಪುಸ್ತಕರೂಪದಲ್ಲಿ ಮುದ್ರಿಸಿಯೂ ಬಿಟ್ಟರು. ಸದಾನಂದನ ನಕ್ಷೆಯನ್ನೂ ತೆಗೆದು ಅವನ ಅದ್ಭುತ ಸಾಮರ್ಥ್ಯದ ಪರಿಚಯದೊಂದಿಗೆ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಎಲ್ಲಿ ನೋಡಿದರೂ ಅವನ ಮಹಿಮೆಯನ್ನು ಕೊಂಡಾಡದವರೇ ಇಲ್ಲದಂತಾಯಿತು.

ದಿನಕ್ಕೆ ಮೂರು ಸಲ ಮೃಷ್ಟಾನ್ನ ಭೋಜನ, ಆರು ಸಲ ಫಲಾಹಾರ, ಮೂರು ದಿನಕ್ಕೊಮ್ಮೆ ತೈಲಾಭ್ಯಂಗ ಸ್ನಾನ, ಈ ಪ್ರಕಾರ ಎರಡು ತಿಂಗಳ ವರೆಗೆ ರಾಧಾಬಾಯಿಯ ಮನೆಯಲ್ಲಿ ಸಾಧ್ವಿಯರ ಉಪಚಾರ ಹೊಂದುತ್ತಲೇ ಸದಾನಂದನು ದೇಹದಲ್ಲಿ ಎರಡು ಮಣ ಭಾರ ಹೆಚ್ಚಿದನು. ಅವನ ಮುಖದಲ್ಲಿ ಎಲ್ಲಿಯೂ ಇಲ್ಲದ ಪ್ರಕಾಶವು ಹೊಳೆಯಲಾರಂಭಿಸಿತು. ಅವನ ವೇದಾಂತವೂ ಹೆಚ್ಚಿನ ಹುರುಪಿನಿಂದ ಹೊರ ಬರತೊಡಗಿತು. "ಎಲ್ಲವೂ ನಾನೇ, ನಾನೇ ಎಲ್ಲವೂ" ಎಂಬ ಮಾತು ಅವನ ಬಾಯಿಂದ ಪ್ರತಿಕ್ಷಣಕ್ಕೂ ಹೊರಡುತ್ತಿತ್ತು. "ನೀವೇಕೆ ನನ್ನನ್ನು ತಿನ್ನಿಸುವಿರಿ? ನನಗೆ ಏನೂ ಬೇಕಾಗಿಲ್ಲ," ಎನ್ನುತ್ತಲೇ ಅಲ್ಲಾ, ಆ ಸಾಧ್ವಿಯರು ಬಾಯಿಗೆ ತುರುಕಿಸಿದ ತುಪ್ಪದ ಖಾದ್ಯಗಳನ್ನೆಲ್ಲಾ ನಿರಾಯಾಸವಾಗಿ ನುಂಗಿಬಿಡುತ್ತಿದ್ದನು. "ನನ್ನ ಕೈಕಾಲುಗಳನ್ನು ಒತ್ತುವಿರೇಕೆ?" ಎನ್ನುತ್ತಾ ಅವುಗಳನ್ನು ಮತ್ತಷ್ಟು ನಿಶ್ಚಿಂತೆಯಿಂದ ಚಾಚಿ ಹಾಯಾಗಿ ಬಿದ್ದುಕೊಳ್ಳುತ್ತಿದ್ದನು.

ರಾಧಾಬಾಯಿಯು ಆತನ ಪೋಷಾಕಿನ ವಿಷಯದಲ್ಲಿ ಸಮಾಧಾನಪಡದೆ ಒಂದೊಂದು ಸಲ ದೂರದ ಊರಲ್ಲಿ ಕೆಲಸದ ಮೇಲಿದ್ದ ತನ್ನ ಗಂಡನ ಚಲ್ಲಣ, ಅಂಗಿ, ಟೋಪಿಗಳನ್ನು ತೊಡಿಸಿಬಿಡುವಳು. ಸದಾನಂದನು ತನಗೆ ಯಾವ ಪೋಷಾಕಾದರೂ ಒಂದೇ ಎಂದು ಹೇಳುತ್ತಾ, ಕೆಲವು ಸಲ ಆ ಯುರೋಪಿಯನ್ ಪೋಷಾಕಿನಲ್ಲೇ, ಕೈಯಲ್ಲಿ ಬೆತ್ತವನ್ನು ಹಿಡಿದು ಬೀಸುತ್ತಾ, ಮಂಗಳೂರಿನ ಮುಖ್ಯ ಬೀದಿಗಳಲ್ಲೆಲ್ಲಾ ಸುತ್ತಾಡಿ ಬರುತ್ತಿದ್ದನು. ಆಗ ಅವನ ಕಿಸೆಯಲ್ಲಿ ರಾಧಾಬಾಯಿಯು ತುರುಕಿಸಿದ ನಾಣ್ಯಗಳನ್ನು ಸಿಕ್ಕ ಸಿಕ್ಕವರಿಗೆ ಹಂಚಿ ಚೆಲ್ಲಿದುದೂ ಉಂಟು, ಮಕ್ಕಳಿಗೆ ತಿಂಡಿಗಳನ್ನು ತೆಗೆಯಿಸಿ ಕೊಟ್ಟುದೂ ಉಂಟು. ಅಂತೂ, ಕಡೆಗೆ ಮಾತ್ರ ಸಾಧುವು ತಿರುಗಿ ರಾಧಾಬಾಯಿಯ ಮನೆಗೆ, ಸಾಧ್ವಿಯರ ಕೂಟದೊಳಗೆ, ಹೋಗಿ ಸೇರಲು ಮರೆಯುತ್ತಿರಲಿಲ್ಲ.

೩

ಯಮುನೆಯು ಬಾಲ್ಯದಲ್ಲೇ ಗಂಡನನ್ನು ಕಳೆದುಕೊಂಡ ಒಬ್ಬ ಸಾಧ್ವಿ. ರಾಧಾಬಾಯಿಯ ಸಾಧ್ವಿಯರ ಕೂಟದ ಒಬ್ಬ ಸದಸ್ಯೆ. ಅವಳೂ ಸದಾನಂದನ ಕೈಕಾಲುಗಳನ್ನು ಎಷ್ಟೋ ಸಲ ಒತ್ತಿದ್ದಳು. ಎಷ್ಟೋ ಸಲ ಅವನಿಗೆ ಮೈಬೆವರು ಉಜ್ಜಿ ಗಾಳಿಬೀಸಿದ್ದಳು. ಎಷ್ಟೋ ಸಲ ಅವನಿಗೆ ತಿಂಡಿಯನ್ನು ತಿನ್ನಿಸಿದ್ದಳು, ಹಾಲನ್ನು ಕುಡಿಸಿದ್ದಳು. ಅವನ ವೇದಾಂತವನ್ನು ಮೊದಲಿನಿಂದಲೂ ಮನಸ್ಸುಕೊಟ್ಟು ಕೇಳಿದ್ದಳು.

ಒಂದು ದಿನ ಬೆಳಿಗ್ಗೆ ನೋಡುವಾಗ ಆ ಸಾಧುವೂ ಕಾಣೆ, ಈ ಸಾಧ್ವಿಯೂ ಕಾಣೆ. ಜನರೆಲ್ಲರೂ ಏನೇನೋ ಎಂದುಕೊಳ್ಳತೊಡಗಿದರು. ಅನೇಕರು ಸದಾನಂದನನ್ನು ಬಾಯಿಗೆ ಬಂದಂತೆ ಬೈದರು. ಹೆಂಗಸರನ್ನು ಅವರ ಹೆಡ್ಡತನಕ್ಕಾಗಿ ಹೀಯಾಳಿಸಿದರು. ಕಡೆಗೆ ಎಲ್ಲಕ್ಕೂ ಅವರೇ ಕಾರಣರೆಂದು ದೂರಿದರು. ಆದರೆ ಅವರು ಕಾರಣರಾಗುತ್ತಿದ್ದ ಸಮಯದಲ್ಲಿ, ಅವರನ್ನು ತಡೆಯಲು ಸಾಧ್ಯವಿದ್ದಾಗ ಮಾತ್ರ, ಯಾರೂ ಅವರನ್ನು ಅಡ್ಡಿ ಮಾಡಿರಲಿಲ್ಲ. ಮತ್ತೆ ಈಗೇಕೆ ದೂರಲಿ?

ರಾಧಾಬಾಯಿಯನ್ನು ಮಾತ್ರ ಈಗಲೂ ಯಾರಾದರೂ, 'ಹೇಗೆ ನಿಮ್ಮ ಸಾಧು ಶಿಷ್ಯೆಯೊಂದಿಗೆ ಸುಖವಾಗಿರುವನಂತೆಯೋ?' ಎಂದು ಕೇಳಿದರೆ ಅವಳು, "ಛೆ! ವ್ಯರ್ಥವಾಗಿ ಆ ದಿವ್ಯ ಪುರುಷನನ್ನು ಹೀನೈಸಿ ನರಕಕ್ಕೆ ಹೋಗಬೇಡಿ. ಸಾಧು ಸದಾನಂದನು ಈಗಲೂ ಸಾಧುವಾಗಿಯೇ ಇರುವನು. ಆತನನ್ನು ಅಂದು ನಾನೇ ರೈಲಿನಲ್ಲಿ ಕಳುಹಿಸಿ ಕೊಟ್ಟೆನು. ಈಗಲೂ ಅವನು ಹಳೆದುರ್ಗದ ಒಂದು ಗವಿಯಲ್ಲಿ ತನ್ನ ಶಿಷ್ಯೆಯೊಂದಿಗೆ ಕೂಡಿ ತಪಸ್ಸು ಮಾಡುತ್ತಿರುವನು. ಅಂತಹ ಪುಣ್ಯಾತ್ಮರ ಮೇಲೆ ಕಲಂಕ ಹೊರಿಸಿದವರಿಗೆ ಖಂಡಿತವಾಗಿಯೂ ನರಕ ತಪ್ಪದು," ಎನ್ನುವಳು.

ಸತ್ಯ ಯಾವುದೋ, ಅಸತ್ಯ ಯಾವುದೋ ಪರಮಾತ್ಮನೇ ಬಲ್ಲ. ಇದಿಷ್ಟು ಎಲ್ಲರ ಬಾಯಿಯಿಂದ ಕೇಳಿಬರುತ್ತಿದೆ ಎಂಬುದು ಮಾತ್ರ ಪೂರಾ ನಿಜ.

ಬರುವ ವಾರ

ಮಿಥ್ಯಜೀವನದ ಸತ್ಯ ಕಥೆಗಳು

೪. "ಹಣಕ್ಕಾಗಿ ಹೆಣ!"

ಓದಲು ಮರೆಯಬೇಡಿ

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಜ್ವರ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ದಿಳುಬಾಧೆ, ಗುಂಡಿಗೆಯ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖ ಬಿಳುಪು, ರಕ್ತ ಉಗುಳುವುದು, ಸ್ವಪ್ನಸ್ಖಲನ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ಕಲೆಸಿದಂತೆ, ಉಸಿರು ಕಟ್ಟುವಿಕೆ, ದಿನೇ ದಿನೇ ಕೃಶವಾಗುವುದು, ನಿಶ್ಶಕ್ತಿ, ಭಾರವು ಕಡಿಮೆಯಾಗುವುದು.

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ. ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ.

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ವೀರ್ಯವರ್ಧನೆಗೆ ಔಷಧಿಗಳೂ, ವಾತಕ್ಕೆ ಕ್ಷೀರಬಲವೂ, ಮುಟ್ಟಾಗುವಾಗ ನೋವಾಗುವುದಕ್ಕೆ, ಗುಹ್ಯ ರೋಗಗಳಿಗೆ, ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 374/1935

ನೀಲಾವತಿ ಬಾಯಿ—ಬಸರೂರು ಅನಂತಯ್ಯ ಆಚಾರ್ಯರ ಹೆಂಡತಿ—ಕುಂದಾಪುರ ತಾಲೂಕು ಕಾವರಾಡಿ ಗ್ರಾಮದ ಕೇಡ್ಸುರಲ್ಲಿ ಇರು ತ್ತಾರೆ—ವಾದಿಳು.

ಭೀಮರಾವ್—ಸಾಂಬ್ರಾಣಿ ರಾಮಕೃಷ್ಣಪ್ಪನವರ ಮಗ—ಕುಂದಾಪುರ ತಾಲೂಕು ಬಸರೂರು ಗ್ರಾಮದಲ್ಲಿರುವವ—ಪ್ರತಿವಾದಿ.

ವಾದಿಳು ಪ್ರತಿವಾದಿಯ ಮೇಲೆ ಮೂಲ ಗೇಣಿ ಬಾಕಿ ಬಗ್ಗೆ ರೂಪಾಯಿ 72-11-6ಕ್ಕೆ ಮಾಡಿದ ಸದರಿ ವ್ಯಾಜ್ಯವನ್ನು ತಾರೀಖು 8-2-1936ಕ್ಕೆ ತನಿಖೆಗೆ ಇಟ್ಟಿರುವುದರಿಂದ ಸದರಿ ವ್ಯಾಜ್ಯದ ವಿಷಯವಾಗಿ ಪ್ರತಿವಾದಿಯು ಉದಾಹರಣೆ ಕೊಡುವಂಥಾದಿದ್ದರೆ ಅದನ್ನು ತನಿಖೆಗಿಂತ ಮುಂದಾಗಿ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಬೇಕಾಗಿ ಈ ಮೂಲಕ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

ಕುಂದಾಪುರ 29-1-36 — **M. Ananthaya,** *Advocate for Plff.*

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 6	3— 12
ಹೊಸ ಮುಸ್ಸಿ	3—10	4— 2
ಗುಡ್ಡ ಸುಗ್ಗಿ	3— 8	3—14
ಉಂಡೆ ಅಕ್ಕಲ್ ಬೆಳ್ತಿಗೆ	4— 0	4— 8
ರಂಗೂನು ಬಿ. ಗೋ. ರಕ್ಕೆ	6— 4	7— 0
ಎಲ್ಲೂರು ಬಿ. ಮು ರಕ್ಕೆ	4— 4	4— 8
ಗೋಧಿ ಗೋಣಿ ರಕ್ಕೆ	8 — 8	10— 4
ತೊಗರಿ ಗೋಣಿ ರಕ್ಕೆ	9 —0	9 — 8
ಹುರುಳಿ ಗೋಣಿ ರಕ್ಕೆ	5— 4	5— 12
ಕಡಲೆ ಗೋಣಿ ರಕ್ಕೆ	7 — 4	9 — 8
ಕಾಗಂಬೇಳೆ ಗೋಣಿ ರಕ್ಕೆ	11— 0	15— 8
ಉದ್ದು ಗೋಣಿ ರಕ್ಕೆ	9— 8	10 — 0
ಹೆಸರು ಗೋಣಿ ರಕ್ಕೆ	9— 4	9—12
ಊರುಬೆಲ್ಲ ಖಂಡಿ ರಕ್ಕೆ	32— 0	40— 8
ಉಪ್ಪು ಗೋಣಿ ರಕ್ಕೆ	4— 8	4— 8
ಕೊಬ್ಬರಿ ಖಂಡಿ ರಕ್ಕೆ	60— 0	70— 0
ಕೊಬ್ಬರಿ ಹಿಂಡಿ ಖಂಡಿ ರಕ್ಕೆ	28— 0	29— 0
ಎಳ್ಳಿಂಡಿ ಖಂಡಿ ರಕ್ಕೆ	33 —12	35— 0
ಕೊಬ್ಬರಿ ಎಣ್ಣೆ ಮುಡಿ ರಕ್ಕೆ	5— 0	6— 0
ಎಳ್ಳೆಣ್ಣೆ ಮುಡಿ ರಕ್ಕೆ	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ರಕ್ಕೆ	6— 5	6— 5
ಮೋರಿಸ ಸಕ್ಕರೆ ಮು. ರಕ್ಕೆ	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ರಕ್ಕೆ	5 — 8	6— 0
ಕಾಳುಮೆಣಸು ಖ. ರಕ್ಕೆ	102— 8	105—
ಮೇಲಕ್ಕಿ ಜೀರಿಗೆ ಮಣರಕ್ಕೆ	38— 0	39— 0
ಗೇರುಬೀಜ ಮು. ರಕ್ಕೆ	4— 6	4 — 8
ಕಬ್ಬಿಣ ಖಂಡಿ ರಕ್ಕೆ	35— 0	37— 8
ಕಾಂಡ್ಲಾಕಗಡು ಮು. ರಕ್ಕೆ	9— 12	9— 14
ಕಾಂಡ್ಲಾಚಕ್ಕೆಗಳು ಮು ರಕ್ಕೆ	12— 8	14— 0
ಅಣಲೆಕಾಯಿ ಸೇರು ರಕ್ಕೆ	17— 8	18— 0
ಹಿತ್ತಾಳೆ ತಗಡು ಮು. ರಕ್ಕೆ	10— 0	10—
ತವರು ರಕ್ಕೆ	22— 8	23— 8
ಹುಣಸೆ ಹುಳಿ ಖಂಡಿ ರಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ರಕ್ಕೆ	145— 0	150— 0
ಪ್ಲಾಂಟರ್ ಕಾಫಿ ಖಂಡಿ ರಕ್ಕೆ	185— 0	190— 8
ಮಡಿಕೇರಿ ಏಲಕ್ಕಿ	25— 0	26 — 0

Shiromani Narayanacharya & Co.,
Silk Lace & Cloth Manufacturers
Choukhamba Benares City

THIS MAN
OUR CUSTOMER

ಕೃಷ್ಣರಾಯರು—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು. ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲ ಬಹಳ ಆನಂದಗೊಂಡರು. ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು— ಅದರ ಕ್ರಯವೆಷ್ಟು?

ಆನಂದರಾಯರು—ಎಲ್ಲಾ ಅಂಗಡಿಗಳಿಗಿಂತ ಶೇಕಡಾ 25 ಕಡಿಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಪಟ್ಟಿ ತಕ್ಕ ಜರಿಯ ಖಂಡಿತ ಜರಿ, ರಂಗು ಮಾದರಿಯ ಸೀರೆಗಳು ಸಿಗುತ್ತವೆ, 18 ಮೊಳ ಉದ್ದ 2½ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ. ಜರಿಯ ಬುಟ್ಟಿ ಇರುವುದು 18 ಮೊಳ ಸೀರೆ 1ಕ್ಕೆ ರೂ. 45ರಿಂದ 150ರ ವರೆಗೆ 16 ಮೊಳ ಜರಿಯ ಸದ ಸೀರೆ 1ಕ್ಕೆ ರೂ. 10ರಿಂದ 55ರ ವರೆಗೆ ರವಿಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಿಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ. 8 ಮೊಳದ ಶಲ್ಯ 1ಕ್ಕೆ ರೂ. 7ರಿಂದ 15ರ ವರೆಗೆ. 8 ಮೊಳದ ಜರಿ ಮುಂಡು 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಪಟಕ 1ಕ್ಕೆ ರೂ. 4ರಿಂದ 16ರ ವರೆಗೆ. 6 ಮೊಳದ ಪಟಕ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲಾ ತರದ ವಸ್ತ್ರಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕಟ್ಟಲಾಗಿಕೊಂಡಿಗೆ ಕಳುಹಿಸುವೆವು. ಇತರ ವಿವರಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.



HASAG
ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟದೆ ಎಲ್ಲವೂ ಹೊಸ ಮಾದರಿ ಈಗಾಗಲೆ ಸಾವಿರಗಳ್ಟಳೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR



ಎಫಾರ್

ಎಂಬುದು ಇನ್ನೊಂದು ಅಮೋಘ ದೀಪ ಇದು ಪಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಮನೆಯ ಶೃಂಗಾರಕ್ಕೆ ಬಹಳ ಯೋಗ್ಯವಾಗಿರುವದು

Sole Representatives F Racek & Co.,

Bombay	Calcutta	Madras	Colombo
P. O Box	P O. Box	P. O Box	P O Box
2006	2121	1248	389

೧೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಕಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನಟ್ಟದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ. ಧನ ಸಿಗುತ್ತದೆ. ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಪ್ರಾರಂಭಿಸಿದರೂ ಜಯವಾಗುತ್ತದೆ. ಇದರಿಂದಾಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ. ಇನ್ನೊಬ್ಬರಿಗೆ ಹಾಜರದಾಗಿ ಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು. ಜಯ, ಬೆಲೆ ರೂ ೨ ಮಾತ್ರ.

01.P.8 — Bengal Mesmarism House
5-7 Panchpota, Bengal (E.B)

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಮಾಘ ಬ॥ ೧ ಶನಿವಾರದಿಂದ ಮಾಘ ಬ॥ ೭ ಶುಕ್ರವಾರದ ವರೇಗಿನ ಪಂಚಾಂಗ.(೧೯೩೬ನೇಯ ಮಕರ ಪುಯಿಂತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
8	ಶನಿ	೧	೪೦	ಮಘ	೫೭	೨೫	ಕುಂಭಸಂಕ್ರಮಣ
9	ರವಿ	೨	೩೪	ಹುಬ್ಬ	೬೦	೨೬	
10	ಸೋಮ	೩	೪೯	ಹುಬ್ಬ	೪	೨೭	
11	ಮಂಗಳ	೪	೪೫	ಉತ್ತರ	೧೦	೨೮	
12	*ಬುಧ	೫	೫೦	ಹಸ್ತ	೧೬	೨೯	
13	ಗುರು	೬	೫೪	ಚಿತ್ರ	೨೨	೨೦	
14	ಶುಕ್ರ	೭	೫೮	ಸ್ವಾತಿ	೨೮	೨	

ಯುದ್ಧಸಾಮಗ್ರಿಗಳನ್ನು ತಯಾರಿಸುವವರೂ ಪ್ರಪಂಚದ ಶಾಂತಿಯೂ.

[ಒಂದು ಆಂಗ್ಲೇಯ ಲೇಖನದ ಅನುವಾದ.]

ಅಂತರ್ರಾಷ್ಟ್ರೀಯ, ಶಸ್ತ್ರಗಳನ್ನು ತಯಾರಿಸುವ ಕೈಗಾರಿಕೆ, ನೌಕೆಗಳನ್ನು ತಯಾರಿಸುವ ಕೈಗಾರಿಕೆ, ವಿಮಾನಗಳನ್ನು ತಯಾರಿಸುವ ಕೈಗಾರಿಕೆ ಮತ್ತು ಇತರ ಯುದ್ಧ ಸಾಮಗ್ರಿಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳಿಗೆ, ಕೆಲವು ವರ್ಷಗಳಿಂದ ಬಹಳ ಉಚ್ಚ ಅವಸ್ಥೆಯು ಪ್ರಾಪ್ತವಾಗಿರುತ್ತದೆ. ಸಮಸ್ತ ಪ್ರಪಂಚವೆ ಸಾಂಪತ್ತಿಕ ಮುಗ್ಗಟ್ಟಿನ ಒಳಗಿದ್ದು, ಅಸಂಖ್ಯಾತ ಜನರು ಬಟ್ಟೆ ಬರೆ ಆಹಾರಗಳಿಲ್ಲದೆ ನಿರುದ್ಯೋಗಿಗಳಾಗಿ ನರಳುತ್ತಿರುವಾಗ, ವಿದ್ಯಾ ಸಂಸ್ಥೆಗಳು ಆರ್ಥಿಕ ದುಃಸ್ಥಿತಿಯಿಂದ ಶ್ರಮಪಡುತ್ತಿರುವಾಗ, ಕೆಲವು ಸರಕಾರಗಳು ತಾವು ಪಡೆದುಕೊಂಡ ಸಾಲಗಳನ್ನು ಮರುಪಾವತಿ ಮಾಡದೆ ಸುಮ್ಮನಿರುವಾಗ, ಕೆಲವು ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಸಂಸ್ಥೆಗಳು ಭಯಂಕರ ಲಾಭಗಳನ್ನು ಗಳಿಸಿ, ತಮ್ಮ ಪಾಲುಗಾರರಿಗೆ ಶೇಕಡಾ ೧೨, ೨೦ ಮತ್ತು 80 ಸಲ ಡಿವಿಡೆಂಡುಗಳನ್ನು ಹಂಚುತ್ತಿವೆ.

ಕಳೆದ ಮಹಾಯುದ್ಧದ ದುಷ್ಪರಿಣಾಮಗಳಿಂದ ಹೊರಗಾಗಲು ಈ ಪ್ರಪಂಚವು ಪ್ರಯತ್ನಿಸುತ್ತಿರುವ ಈ ಸಮಯದಲ್ಲಿ, ಕೆಲವು ಯುದ್ಧ ಸಾಮಗ್ರಿ ಕಾರ್ಖಾನೆಗಳು, ಯುದ್ಧ ಸಂಭವಿಸಲು ಅನುಕೂಲವಾಗುವ ವಾರ್ತೆಗಳನ್ನು ಪ್ರಚಾರ ಮಾಡುತ್ತಿದ್ದಾವೆ. ಕೆಲವು ಜನಾಂಗಗಳು ಈಗ ಯುದ್ಧಸಾಮಗ್ರಿಗಳ ಮೇಲೆ ವ್ಯಯಿಸುತ್ತಿರುವ ದ್ರವ್ಯವನ್ನು ಅತಿ ಕಡಮೆ ದರದಲ್ಲಿ ಅಂದರೆ ಶೇಕಡಾ 1½ ಸಲ ಸಂಚಯಿಸಿದರೆ, ಈ ಪ್ರಪಂಚದ ಎಲ್ಲಾ ಸರಕಾರಗಳ, ಪ್ರಾಂತ್ಯಗಳ, ನಗರ ಸಭೆಗಳ ಸಾಲಗಳನ್ನು ಅತಿ ಸ್ವಲ್ಪ ಸಮಯದಲ್ಲಿ ಜೀರ್ಣ ಮಾಡಬಹುದು. ಕಳೆದ ಮಹಾಯುದ್ಧದಲ್ಲಿ ಓರ್ವ ಸೈನಿಕನನ್ನು ಕೊಲ್ಲಲು ರೂ ೫೦ ಸಾವಿರ ವೆಚ್ಚ ತಗಲಿರುತ್ತದೆ.

ಕಳೆದ ಮಹಾಯುದ್ಧವು ಈ ಪ್ರಪಂಚವನ್ನು ಪ್ರಜಾಪ್ರಭುತ್ವಕ್ಕೆ ಯೋಗ್ಯವಾಗಿ ಮಾಡುವುದಕೋಸ್ಕರ ನಡೆದುದಾಗಿರುತ್ತದೆ ಈ ಪ್ರಪಂಚವನ್ನು ಬಾಧಿಸುತ್ತಿರುವ ಕೆಲವು ಕೇಡುಗಳಿಂದ ಹೊರಪಡಿಸುವುದೆ ಇದರ ಉದ್ದೇಶವಾಗಿತ್ತು ಯುದ್ಧವು ನಡೆದು ಇವತ್ತಿಗೆ ೨೦ ವರ್ಷಗಳಾಗಿವೆ. ಆದರೆ ಪ್ರಪಂಚದ ಸ್ಥಿತಿಯು ಹೇಗೆ ಪರಿಣಮಿಸಿರುತ್ತದೆ. ಏಕಾಧಿಪತಿಗಳೂ, ಯುದ್ಧ ಪ್ರಚಾರಕರು ಹೆಚ್ಚುತಿದ್ದಾರೆ. ಕೈಗಾರಿಕೆಗಳ ವ್ಯಾಪಾರಗಳ ಸ್ಥಾನಗಳು ಮಾಯವಾಗಲಾರಂಭಿಸಿವೆ. ಆದರೂ, ಯುದ್ಧ ಸನ್ನಾಹಗಳಿಗೆ ಸಲ್ಲುವ ವ್ಯಯವು ದಿನೇ ದಿನೇ ವೃದ್ಧಿಯಾಗುತ್ತಿದೆ ಹೊರತು ಕಡಿಮೆಯಾಗುವ ಚಿಹ್ನೆಗಳು ಎಲ್ಲಿಯೂ ಕಾಣಿಸಿಗಲಾರವು.

ಯುದ್ಧಸಾಮಗ್ರಿ ಕಾರ್ಖಾನೆಗಳನ್ನು ನಡೆಯಿಸುವ ಸಂಸ್ಥೆಗಳ ಪ್ರಮುಖ ಸದಸ್ಯರಿಗೆ, ಸರಕಾರದ ಧೋರಣೆಗಳಲ್ಲಿ ಸ್ಥಾನಗಳಿವೆ. ಸರಕಾರಗಳ ಮೇಲೆ ಇವರಿಗೆ ತುಂಬಾ ಪ್ರೇರಣೆಯು ಇದೆ. ತಮ್ಮ ವ್ಯಾಪಾರದ ಹಿತವನ್ನು ಸಾಧಿಸುವ ಭರದಲ್ಲಿ, ತಮ್ಮ ದೇಶವನ್ನು, ವಿವಿಧ ಜನಾಂಗಗಳನ್ನು ಯುದ್ಧರಂಗಕ್ಕೆ ಸೆಳೆಯುತಿದ್ದಾರೆ. ಇವರಿಗೆ ರಾಷ್ಟ್ರೀಯ ಅಭಿಮತವು ಕಡಿಮೆ. ಲಾಭ ಗಳಿಸುವ ಎದುರು ಇವರು ಯಾವ ಧರ್ಮವನ್ನೂ ತತ್ವವನ್ನೂ ಗಣ್ಯಮಾಡುವವರಲ್ಲ.

ಜರ್ಮನಿಯ ಪ್ರಸಿದ್ಧ ಕ್ರುಪ್ ಸಂಸ್ಥೆಯವರು ಕಳೆದ ಮಹಾಯುದ್ಧದ ಮುಂಚೆ ಸಾಧಾರಣ ೫೨ ದೇಶಗಳಿಗೆ ಯುದ್ಧ ಸಾಮಗ್ರಿಗಳನ್ನು ಒದಗಿಸಿ ಕೊಟ್ಟಿರುತ್ತದೆ. ಕಳೆದ ಮಹಾಯುದ್ಧದಲ್ಲಿ ನಡೆದ ಅನೇಕ ಅಪಘಾತ ಇತ್ಯಾದಿಗಳಿಗೆ ಇವರೇ ಕಾರಣಭೂತರು. ಆದರೂ ಇದರ ಜರ್ಮನಿಯ ದೇಶಪ್ರೇಮಿಗಳೆನಿಸುವ ಚಾಲಕರಿಗೆ ಜರ್ಮನಿಯರ ವೈರಿ ಜನಾಂಗಗಳಿಂದ ಗೌರವ ಬಿರುದುಗಳು ಕೊಡಲಾದುವು. ಈ ಜನಾಂಗಗಳಿಗೆ ಬೇಕಾಗುವ ಯುದ್ಧ ಸಾಮಗ್ರಿಗಳನ್ನು ಒದಗಿಸಿ ಕೊಟ್ಟದಕ್ಕೆ.

ಸ್ನೆಂಡರ್ — ಕ್ರೂಸೋಟ ಎಂಬುದು ಇನ್ನೊಂದು ಮಹತ್ತಾದ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಫ್ರೆಂಚ ಸಂಸ್ಥೆಯು. ಈ ಸಂಸ್ಥೆಗೆ ಜಗತ್ತಿನ ಎಲ್ಲಾ ಕಡೆಗಳಲ್ಲಿ ಸಾಧಾರಣ ೪೦೦ ಶಾಖೆಗಳಿವೆ. ಈ ಸಂಸ್ಥೆಯು, ಹಿಟ್ಲರನು ಫ್ರಾನ್ಸಿನ ಮೇಲೆ ರೇಗುವಂತೆ ಸಾಧಿಸುತ್ತಿರುವಾಗ, ಅತ್ತಲಾಗೆ ಫ್ರಾನ್ಸು ಜರ್ಮನಿಯು ಎದುರಾಗಿ ಯುದ್ಧ ಸನ್ನಾಹಗಳನ್ನು ಮಾಡಲು, ಪೆರಿಸ್ ನಗರದ ಕೆಲವು ಪತ್ರಿಕೆಗಳ ಮೂಲಕ ಸಾಧಿಸುತ್ತವೆ

ಇಂಗ್ಲಾಂಡಿನ 'ವಿಕ್ಕರ್ಸ ಅರ್ಮಸ್ಟ್ರೋಂಗ' ಎಂಬ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಸಂಸ್ಥೆಯು ಜಗತ್ತಿನಲ್ಲಿ ಅತೀ ಮಹತ್ತಾದ ಪ್ರಖ್ಯಾತ ಸಂಸ್ಥೆಯು. ಈ ಸಂಸ್ಥೆಗೆ ರೊಮೆನಿಯಾ, ಚೆಕೊಸ್ಲೆವೆಕಿಯಾ, ಅಯರ್‌ಲೆಂಡ್ ಇಟೇಲಿ, ಜಾಪಾನ್, ಸ್ವಿಡರ್‌ಲೇಂಡ್ ಮತ್ತು ಕೆನಡಾ ದೇಶಗಳಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳಿವೆ. ಬ್ರಿಟಿಷ ರಾಜಕೀಯ ರಂಗದ ಅನೇಕ ಪ್ರಸಿದ್ಧ ಪುರುಷರು ಈ ಸಂಸ್ಥೆಯಲ್ಲಿ ತುಂಬಾ ಹಣವನ್ನು ಸಂಚಯಿಸಿದ್ದಾರೆ. ಅನೇಕರು ಈ ಸಂಸ್ಥೆಯ ಡೈರೆಕ್ಟರರಾಗಿರುತ್ತಾರೆ. ಅನೇಕ ನ್ಯಾಯವಿಚಾರಗಳನ್ನು ಸಾರುವ, ದೇಶಪ್ರೇಮಿಗಳಾದ ಆಢ್ಯಪುರುಷರೆ, ಈ ಸಂಸ್ಥೆ ಡೈರೆಕ್ಟರ್ ಸ್ಥಾನಗಳನ್ನು ಆಗಾಗ ಪಡೆದಿರುವರು ಇವರು ಸಂಸ್ಥೆಯ ಹಿತ ಸಾಧಿಸಲು, ಧಾರಾಳ ಲಾಭವನ್ನು ಗಳಿಸುವಂತೆ, ಜನಾಂಗಗಳನ್ನು ಪರಸ್ಪರ ಯುದ್ಧಕಾರ್ಯದಲ್ಲಿ ನಿರತರಾಗುವಂತೆಯೂ, ತಮ್ಮ ಸ್ವದೇಶವನ್ನು ಯುದ್ಧರಂಗಕ್ಕೆ ಇಳಿಸಲು ಹಿಂಜರಿಯಲಾರರು. ಅಸಂಖ್ಯಾತ ಜನರ ಕೊಲೆಯಿಂದ, ಇನ್ನಿತರ ಸಂಕಷ್ಟಗಳಿಂದ ತುಂಬಾ ಹಣ ಗಳಿಸುವುದೆ ಇವರ ಧ್ಯೇಯವು. ಈ ಸಂಸ್ಥೆಗಳು ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯಾಗುವುದನ್ನು ಎಷ್ಟಕ್ಕೂ ಸಹಿಸಲಾರರು. ಬದಲಾಗಿ ಅಂತರ್ರಾಷ್ಟ್ರೀಯ ಕಲಹಗಳನ್ನು ಬೆಳೆಯಿಸುವರು.

ಈ ಸಂಸ್ಥೆಗಳು ಪ್ರಪಂಚದ ಶಾಂತಿಭಂಗ ಕಾರ್ಯದಲ್ಲಿ ಹೇಗೆ ತೊಡಗಿರುವರೆಂದು, ಅನೇಕ ಪ್ರಸಿದ್ಧ ಆಂಗ್ಲೇಯ ಕವಿಗಳ ಪುಸ್ತಕಗಳಲ್ಲಿ ವ್ಯಕ್ತವಾಗಿರುತ್ತದೆ. ಯುದ್ಧಪ್ರಚಾರ ಕಾರ್ಯಗಳಿಗೆ, ಶಾಂತಿಭಂಗ ಕಾರ್ಯಗಳಿಗೆ, ಈ ಸಂಸ್ಥೆಗಳು ಧಾರಾಳ ಹಣವನ್ನು ವ್ಯಯಿಸುತ್ತಿವೆ. ಯುದ್ಧದಿಂದ ದಣಿದ ಸಮಸ್ತ ಪ್ರಪಂಚವೆ ಶಾಂತಿಸ್ಥಾಪನೆ ಕಾರ್ಯದಲ್ಲಿ ಮಗ್ನರಾಗಿರುವಾಗ, ಸ್ವಾರ್ಥಿಗಳಾದ ಈ ಸಂಸ್ಥೆಗಳ ಸಂಚಾಲಕರ ಒಂದು ಸಣ್ಣ ಗುಂಪು ಲಾಭದೃಷ್ಟಿಯಿಂದ ಜನಾಂಗಸಭೆಯ ಕ್ರಮಗಳನ್ನು ಅಲ್ಲಗಳೆಯುತ್ತಿದ್ದಾರೆ. ಈ ಕಾರ್ಯದಲ್ಲಿ ಅನೇಕ ಪಾಶ್ಚಾತ್ಯ ಸಂಸ್ಥೆಗಳು ಮತ್ತು ಕೆಲವು ಅಮೇರಿಕನ್ ಸಂಸ್ಥೆಗಳು ನಿರತರಾಗಿರುವರಂತೆ. 1927ರಲ್ಲಿ ಪ್ರಪಂಚದ ಶಾಂತಿಸ್ಥಾಪನೆಯು ಜನಾಂಗಸಭೆಯಿಂದ ಸಾಧ್ಯವಾಗುವ ಸಂಭವಗಳಿದ್ದುವು. ಆದರೆ ಮೇಲಿನ ಸಂಸ್ಥೆಯವರು ಇದನ್ನು ಕೆಡಿಸಿದರು. ಈ ಸಂಸ್ಥೆಗಳು ಯುದ್ಧಕಾಲದಲ್ಲಿ ತಮ್ಮ ವೈರಿ ಜನಾಂಗಗಳಿಗೆ ಯುದ್ಧ ಸಾಮಗ್ರಿಗಳನ್ನು ಒದಗಿಸಿಕೊಡುವರು. ಶಾಂತತೆಯ ಸಮಯದಲ್ಲಿ ಇತರ ದೇಶಗಳಲ್ಲಿ ರಾಜಕೀಯ ಚಳವಳಗಳನ್ನು ಹೂಡಲು ನಿರತರಾಗುವರು ಇವರ ಮೇಲಿನ ವರ್ತನೆಗಳಿಗೆ ಡೊಕ್ಯುಮೆಂಟುಗಳ ಮೂಲಕ ಅನೇಕ ಸಾಕ್ಷ್ಯಗಳು ದೊರಕಿವೆ. ಕಳೆದ ಮಹಾಯುದ್ಧದಲ್ಲಿ ಆಂಗ್ಲೇಯ ಮತ್ತು ಫ್ರೆಂಚ್ ಕಂಪೆನಿಗಳು ಜರ್ಮನಿಗೆ ಬೇಕಾದ ಯುದ್ಧಸಾಮಗ್ರಿಗಳನ್ನೂ, ಕೆಲವು ನ್ಯೂಟ್ರಲ್ ದೇಶಗಳ ಮೂಲಕ ಒದಗಿಸಿಕೊಟ್ಟಿರುತ್ತಾರೆ. ಆದರೆ ಈ ಅತ್ಯಾಚಾರವನ್ನು ನಿಲ್ಲಿಸಲು ಯಾವ ಪ್ರಯತ್ನಗಳೂ ನಡೆಯಲಿಲ್ಲ

ಈ ಯುದ್ಧಸಾಮಗ್ರಿ ತಯಾರಿಸುವ ಸಂಸ್ಥೆಗಳಿಗೆ ದೇಶವಿಲ್ಲ, ಯಾವ ಒಪ್ಪಂದಗಳೂ ಇವರಿಗೆ ಸಂಬಂಧಿಸುವುದಿಲ್ಲ ಕಳೆದ ಮಹಾಯುದ್ಧದಲ್ಲಿ ಜರ್ಮನಿಯವರಿಂದ ಹಿಡಿದ ಫಿರಂಗಿಗಳ ಮೇಲೂ, ತುಪಾಕಿಗಳ ಮೇಲೂ, ಬ್ರಿಟಿಷ ಟ್ರೇಡ್ ಮಾರ್ಕುಗಳಿದ್ದುವು ಇದರಿಂದ ಮಹಾಯುದ್ಧದಲ್ಲಿ ಆಂಗ್ಲೇಯ ಬುಲ್ಲೇಟುಗಳಿಂದಲೆ, ಆಂಗ್ಲೇಯ ಸೈನಿಕರು ಮಡಿದಿರುವರು. ಆಂಗ್ಲೇಯ ಬೋಂಬುಗಳಿಂದ, ಆಂಗ್ಲೇಯ ಸ್ಟೀಮರುಗಳು ಕೆಡವಲ್ಪಟ್ಟವೆ ಸೋವಿಯಟ್ ರಷ್ಯವು ಈಗ ಯುರೋಪ್ ಖಂಡದ ಶಾಂತಿ ಮುರಿಯಲಿರುವ ಈ ಸಮಯದಲ್ಲಿ ಆಂಗ್ಲೇಯರ ವಿಕ್ಕರ್ಸ್ ಸಂಸ್ಥೆಯವರು, ಇವರಿಗೆ 60 ಟೇಂಕುಗಳ ಮಾರಾಟಮಾಡಿರುತ್ತದೆ. ಜರ್ಮನಿಯು ಉಪಯೋಗಿಸಿದ ಸಿಡಿಮದ್ದಿನ ಹೆಚ್ಚಿನಂಶವು ಫ್ರಾನ್ಸಿನ ಗನಿಗಳಿಂದ ತೆಗೆದ ಲೋಹಗಳಿಂದ ಸಿದ್ಧವಾಗಿತ್ತು ಆದರಿಂದ ಈ ಗನಿಗಳಿದ್ದ ಸ್ಥಳವನ್ನು ಹಿಡಿಯಬೇಕೆಂದು ಜರ್ಮನಿಯರಿಗೆ ಮಹಾಕಾಂಕ್ಷೆಗಳಿದ್ದವು. ಫ್ರಾನ್ಸಿನ ಇತರ ಪ್ರದೇಶಗಳ ಮೇಲೆ ಜರ್ಮನಿಯರು ಧಾರಾಳ ಬೋಂಬಿನ ಪ್ರಯೋಗವನ್ನು ಮಾಡಿರುತ್ತಾರೆ. ಆದರೆ ಮೇಲೆ ಗನಿಗಳಿರುವ ಪ್ರದೇಶ ಪ್ರಾರಂಭದಿಂದ ಕೊನೆಯು ಯಾವ ತರದ ಹಾನಿಯನ್ನೂ ಅನುಭವಿಸಲಿಲ್ಲ. ಈ ಗನಿಗಳನ್ನು ಮುಚ್ಚಲು ಫ್ರಾನ್ಸ್ ಪಾರ್ಲಿಮೆಂಟಿನಲ್ಲಿ ನಡೆದ ಕೆಲವರ ಪ್ರಯತ್ನಗಳು ಫಲಕಾರಿಯಾಗಲಿಲ್ಲ. ಗನಿಗಳಿಂದ ಒದಗಿದ ಕೆಲವು ಲೋಹಗಳು ಫ್ರೆಂಚ್ ಸೈನಿಕರನ್ನು ಹರಿಯುತ್ತಿರುವಾಗ, ಜರ್ಮನಿಯ ಕಬ್ಬಿಣವು ಜರ್ಮನಿ ಸೈನಿಕರನ್ನು ಕೊಲೆಮಾಡುತ್ತಿತ್ತು. ಜರ್ಮನಿಯು ಫ್ರಾನ್ಸಿಗೆ ಯುದ್ಧಕಾರ್ಯಕ್ಕೆ ಬೇಕಾದಷ್ಟು ಕಬ್ಬಿಣವನ್ನು ಒದಗಿಸುತ್ತಿತ್ತು ಒಟ್ಟಾರೆ ಮೇಲೆ ನೋಡಿದರೆ ಈ ಮಹಾಯುದ್ಧದ ಸಮಯ ಮತ್ತು ಈಗಲೂ ಈ ಸಂಸ್ಥೆಗಳು ಲಾಭಕ್ಕಾಗಿ, ದೇಶದ್ರೋಹಿಗಳಾಗಿ ವರ್ತಿಸುತ್ತಿದ್ದಾರೆ. ನಿತ್ಯಜೀವನದಲ್ಲಿ ಕೊಲೆಮಾಡಿದವರಿಗೆ, ಪೋಲೀಸರು, ಕೋರ್ಟುಗಳು ನ್ಯಾಯಸಿಗುವಂತೆ ಸಾಧಿಸುವರು. ಆದರೆ ಲಾಭದೃಷ್ಟಿಯಿಂದ ಅಸಂಖ್ಯಾತ ಮನುಷ್ಯರ ಕೊಲೆಗೆ ಕಾರಣರಾದ, ಅಸಂಖ್ಯಾತ ಜನರನ್ನು ಕೊಲೆಮಾಡುವ ಈ ಸಂಸ್ಥೆಗಳು ಯಾವ ಕೋರ್ಟಿನ ಶಿಕ್ಷೆಗಳಿಗೂ ಒಳಗಾಗುವುದಿಲ್ಲ. ಬದಲಾಗಿ ಇದರ ಸಂಚಾಲಕರಿಗೆ ಬಿರುದಾವಳಿಗಳೆ ಸಿಗುತ್ತಿವೆ ದೇಶದ್ರೋಹ ಕಾರ್ಯಗಳನ್ನು ನಡೆಯಿಸಿ, ಅದಕ್ಕೆ ಬಹುಮಾನ ಪಡೆಯುವವರು ಇವರು.

ಮೇಲಿನ ದುಃಸ್ಥಿತಿಯ ನಿವಾರಣೆಯು ಬಗೆಯೆಂತು? ಈ ಯುದ್ಧಸಾಮಗ್ರಿ ವ್ಯಾಪಾರವು ವ್ಯಾಪಾರಿಕ ಸಂಸ್ಥೆಗಳ ಕೈಯಲ್ಲಿರುವುದರಿಂದ, ಅವಸ್ಥೆಯು ಹೀಗಾಗಿರುತ್ತದೆ. ಈ ಸ್ಥಿತಿಯ ನಿವಾರಣೆ ಯುದ್ಧಸಾಮಗ್ರಿ ತಯಾರಿಯನ್ನು ಆಯಾಯ ದೇಶದ ಸರಕಾರದವರೆ ನಡೆಯಿಸುವುದಲ್ಲದೆ, ಯುದ್ಧಸಾಮಗ್ರಿಗಳು ವ್ಯಾಪಾರದ ಸಾಮಾನುಗಳಾಗಬಾರದು. ಹಾಗಾದರೆ, ಪ್ರಪಂಚದಲ್ಲಿ ಶಾಂತಿಸ್ಥಾಪನೆಯಾಗುವ ಸುಮುಹೂರ್ತವು ಬರುವುದು. ಜನಾಂಗಸಭೆಯ ಕ್ರಮಗಳೂ, ವೆಚ್ಚವೂ ಸಾರ್ಥಕವೆನಿಸುವುದು ಈಗಾಗಲೆ ಫ್ರಾನ್ಸ್, ಇಂಗ್ಲಾಂಡ್, ಅಮೇರಿಕಾ, ಜರ್ಮನಿ ಇತ್ಯಾದಿ ದೇಶದಲ್ಲಿ ಸರಕಾರವೆ ಯುದ್ಧಸಾಮಗ್ರಿಗಳನ್ನು ತಯಾರಿಸುತ್ತಿವೆ. ಆದರೆ, ಯುದ್ಧಸನ್ನಾಹವಾಗುವ ಈಗಿನ ಓಟದಲ್ಲಿ ನವೀನ ಯುದ್ಧಸಾಮಗ್ರಿಗಳ ರಚನೆಯು ಈ ವ್ಯಾಪಾರಿಕ ಸಂಸ್ಥೆಗಳಿದ್ದರೆ ಮಾತ್ರ ನಡೆಯುತ್ತದೆಂದು ಕೆಲವು ಸರಕಾರಗಳು ಅಭಿಪ್ರಾಯಪಡುತ್ತಿದ್ದಾವೆ. ಆದರೆ ಇದು ಕೇವಲ ತಪ್ಪುಭಾವನೆಯು! ಈ ಯುದ್ಧಸಾಮಗ್ರಿಗಳ ಕೈಗಾರಿಕೆ, ಸಾರ್ವಭೌಮತೆಯ ಮತ್ತು ಧನಾಢ್ಯರ ಕೈಗಳಲ್ಲಿವೆ. ಈಗಿನ ಸ್ಥಿತಿಯು ಸುಧಾರಣೆಹೊಂದಬೇಕಾದರೆ ಈ ಎರಡು ಪಂಗಡಗಳು ನಾಶವಾಗಬೇಕು. ಸಮತಾವಾದವು ಮುಂದೆ ಬರಬೇಕು.

ಕಾಲುನೋವು, ಕಾಲು ಬಾತುಹೋಗುವಿಕೆ,

ಗಾಯಗಳು ಇವುಗಳಿಗೆಲ್ಲಾ
ಸಾಂಬಕ್
ದಿವ್ಯ ಔಷಧ.

ಅಚ್ಚ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟದ್ದು.

ಕ್ಷಣ ಕ್ಷಣಕ್ಕೂ ವೇದನೆಯನ್ನು ಹೊರಸೂಸುತ್ತಿರುವ ಕಾಲುನೋವುಗಳಿಗೂ, ಹುಣ್ಣುಗಳಿಗೂ, ಸುಟ್ಟ ಗಾಯಗಳಿಗೂ, ಪೆಟ್ಟಿನ ಗಾಯಗಳಿಗೂ ಮತ್ತು ಇನ್ನಿತರ ಚರ್ಮ ವ್ಯಾಧಿಗಳಿಗೂ ಸಾಂಬಕ್ಕನ್ನು ಹಚ್ಚಿ ಗುಣಲಾಭವನ್ನು ಪಡೆಯಿರಿ. ಇದರ ಗುಣವನ್ನು ಚರ್ಮಕ್ಕೆ ತಿಕ್ಕಿದಾಕ್ಷಣವೇ ತಿಳಿಯುವಿರಿ. ಕಾರಣ, ಉರಿಯುವಿಕೆ ನೋವು ಇವುಗಳನ್ನೆಲ್ಲಾ ಹೋಗಲಾಡಿಸಿ, ದೇಹಕ್ಕೆ ಸೌಖ್ಯವನ್ನೀಯುವುದು. ವಿಷಕರವಾದ ಕ್ರಿಮಿಗಳನ್ನು ನಾಶಪಡಿಸುವುದರಲ್ಲಿ ಅದ್ವಿತೀಯವಾದುದು. ಹಳೇ ಚರ್ಮವನ್ನು ನಾಶಗೊಳಿಸಿ, ಹೊಸ ಕಾಂತಿಯುತ ಚರ್ಮವನ್ನು ಕೊಡುವುದು ಹುಣ್ಣುಗಳನ್ನು ತೀವ್ರವಾಗಿ ಗುಣಪಡಿಸಿ ಕಲೆಯು ಉಳಿಯದಂತೆ ಅಳಿಸುವುದು. ಹುಳ ಮೇಯುವಿಕೆ, ಪಾತರೋಗಗಳು, ಸುಟ್ಟಿನ ಗಾಯಗಳು, ಬಾತುಹೋಗುವಿಕೆ, ಮೂಲವ್ಯಾಧಿ ಇತ್ಯಾದಿ ರೋಗಗಳಿಗೆಲ್ಲಾ ಸಾಂಬಕ್ ದಿವ್ಯ ಔಷಧ. ಎಲ್ಲಾ ಔಷಧಿಯ ಅಂಗಡಿಗಳಲ್ಲೂ ಮಾರಾಟಕ್ಕೆ ಸಿಗುತ್ತದೆ. ಬೆಲೆ ರೂ. 1 ಅಥವಾ 2-4-0.

ಏಜಂಟರು—ಮೆಸರ್ಸ್ ಧಾಧಾ ಎಂಡ್ ಕಂಪೆನಿ, ಮದರಾಸು

ಇದರಲ್ಲಿ ಜಂತುಗಳ ಕೊಬ್ಬಿನ ಮಿಶ್ರವಿಲ್ಲ.

ಸಾಂಬಕ್

Zam Buk

ಎಸೆಂಬ್ಲಿ ಬಜೇಟ್ ಅಧಿವೇಶನವು ಪ್ರಾರಂಭವಾಗಿದೆ.

ಕರ್ನಲ್ ಬೋಲಾನಾಥರ ನಿಧನ!

ಲಾಹೋರಿನ ಸಿಖ್ಖರ ಚಳವಳ!

ಐಗುಪ್ತದಲ್ಲಿ ಬ್ರಿಟಿಷರ ಹಿತಗಳು!

ಎಸೆಂಬ್ಲಿ ಬಜೇಟ್ ಅಧಿವೇಶನವು ಪ್ರಾರಂಭವಾಗಿರುತ್ತದೆ.

ಅಸೆಂಬ್ಲಿ ಬಜ್ಜೇಟ ಅಧಿವೇಶನವು ನವ ದಿಲ್ಲಿಯಲ್ಲಿ ಮೊನ್ನೆ ತಾ. ೩ರಲ್ಲಿ ಪ್ರಾರಂಭವಾಗಿರುತ್ತದೆ. ಚಕ್ರವರ್ತಿಯವರ ನಿಧನದ ಸಂತಾಪಸೂಚಕವಾಗಿ ಎಲ್ಲರೂ ಕಪ್ಪು ನೆಕ್‌ಟ್ಯಾಗಳನ್ನು ಧರಿಸಿದ್ದರು. ವಾಡಿಕೆಯಂತೆ ಕೆಲವು ವೈಭವಗಳನ್ನು ಸಂತಾಪಸೂಚಕವಾಗಿ ನಡೆಯಿಸಲ್ಪಡಲಿಲ್ಲ. ಸರ್ ಎನ್. ಎನ್. ಸರಕಾರ್ ರವರು ದಿವಂಗತ ಚಕ್ರವರ್ತಿಯವರ ಕುರಿತು ಭಾಷಣಮಾಡಿದ ನಂತರ ಸಂತಾಪಸೂಚಕ ಠರಾವನ್ನು ಎಲ್ಲರೂ ನಿಂತು, ಮಂಜೂರುಮಾಡಿದರು: ನವಚಕ್ರವರ್ತಿಯವರನ್ನು ಅಭಿವಂದಿಸಿ ಒಂದು ಠರಾವು ಮಾಡಲಾಯಿತು.

ಹಿಂದೂದೇಶದ ಕೌನ್ಸಿಲ್ ಒಫ್ ಸ್ಟೇಟ್.

ನಮ್ಮ ಕೌನ್ಸಿಲ್ ಒಫ್ ಸ್ಟೇಟ್ ಬೇಗನೇ ರದ್ದಾಗಿ, ಹೊಸ ಕೌನ್ಸಿಲ್ ಒಫ್ ಚುನಾವಣೆಯು ನಡೆಯುವುದೆಂದು ಸರಕಾರದ ಸರ್ಕಿಲಾರು ಹೊರಡಿರುತ್ತದೆ.

15 ಮಿಲಿಯ ರೂಪಾಯಿಗಳನ್ನು ವ್ಯಯಿಸುವರು.

ಅಮೇರಿಕದ ಯುನೈಟೆಡ್ ಸ್ಟೇಟಿನ ಕಾಂಗ್ರೆಸ್ಸು, ಸಾಗುವಳಿಯ ಅಭಿವೃದ್ಧಿಗಾಗಿ, 15 ಮಿಲಿಯ ರೂಪಾಯಿಗಳನ್ನು ವ್ಯಯಿಸಲು ನಿರ್ಧರಿಸುವುದೆಂದೂ, ಅದರ ಅಧ್ಯಕ್ಷರಾದ ಮಿ। ರೂಸ್‌ವೆಲ್ಟರು, ಅಲ್ಲಿ ಜರಗಿದ ಪತ್ರಿಕೆಗಳ ಪರಿಷತ್ತಿನಲ್ಲಿ ಮಾಡಿದ ಭಾಷಣದಲ್ಲಿ ಸೂಚಿಸಿದರು.

ಈ ವ್ಯಯದಿಂದ ಹೊಸ ತೆರಿಗೆಗಳು ವ್ಯಯಿಸಲಾಗುವುದಿಲ್ಲವೆಂದು ಭರವಸೆಕೊಟ್ಟಿರುತ್ತಾರೆ. ಅಮೇರಿಕಾವನ್ನು ಪ್ರಗತಿಗೊಳಿಸುವ ಅನೇಕ ನವಕ್ರಮಗಳು ಜ್ಯಾರಿಯಾಗುವುವಂತೆ.

ಐಗುಪ್ತದಲ್ಲಿ ಬ್ರಿಟಿಷರ ಹಿತಗಳು.

ಎಲ್ಲಾ ಪಂಗಡಗಳ ಪ್ರತಿನಿಧಿಗಳಿಂದ ಕೂಡಿದ ನ್ಯೂಟ್ರಲ್ ಸರಕಾರ ಮಂಡಳ ರಚನೆಯಿಂದ, ಐಗುಪ್ತದ ಅರಸರಾದ ಫೋಡರು ಬಹಳ ಧನ್ಯರಾಗಿರುವರು. ಬ್ರಿಟಿಷರು ಮುಂದಕ್ಕೆ ನಡೆಯಲಿರುವ ಮಾತುಕತೆಗಳಲ್ಲಿ, ಐಗುಪ್ತದವರಿಗೆ ಅನೇಕ ರಿಯಾಯತಿಗಳನ್ನು ಕೊಡುವರೆಂದು, ಆಂಗ್ಲೇಯ ಪತ್ರಿಕೆಗಳ ಊಹೆ. ಆದರೆ ಬ್ರಿಟಿಷರ ಹಿತಗಳಿಗೆ ಯಾವತ್ತೂ ಹಾನಿಬಾರದಂತೆ ನೋಡಿಕೊಳ್ಳಬೇಕಂತೆ. ಈ ಪ್ರದೇಶವು ಪಾಶ್ಚಾತ್ಯವನ್ನೂ ಪೌರ್ವಾತ್ಯವನ್ನೂ ಒಟ್ಟುಕೂಡಿಸುವ ಒಂದು ಮುಖ್ಯ ಸೋಪಾನವಾಗಿರುವುದರಿಂದ, ಅವರು ಇಲ್ಲಿನ ಹಿತಗಳನ್ನು ಅತಿ ಜಾಗರೂಕತೆಯಿಂದ ರಕ್ಷಿಸಿಕೊಳ್ಳಬೇಕೆಂದು ಅಲ್ಲಿನ ಕೆಲವು ಪತ್ರಿಕೆಗಳ ಬೋಧನೆ. ಬ್ರಿಟಿಷರ ಮಿಲಿಟರಿಯು ಐಗುಪ್ತದಿಂದ ತೆಗೆಯಲಾಗುವುದಿಲ್ಲ. ಯಾಕೆಂದರೆ ಐಗುಪ್ತದ ಸ್ವತಂತ್ರ ರಕ್ಷಣೆಗೆ ಇದು ಅತ್ಯಗತ್ಯವಾದುದಂತೆ.

ಲಾಹೋರಿನ ಸಿಖ್ಖರ ಚಳವಳ.

ಜನವರಿ ತಾ. 31, ಕರ್ಪನಗಳ ಮೇಲೆ ನಿರ್ಬಂಧದ ಆಖೈರಿ ದಿನ. ಅನ್ನರ ತನಕ ಸಾಧಾರಣ 2000 ಸಿಖ್ಖರು ತರತರದ ಶಿಕ್ಷೆಗಳನ್ನು ಅನುಭವಿಸಿದ್ದಾರೆ. ಸ್ತ್ರೀಯರು, ಕರ್ಪನಗಳ ನಿರ್ಬಂಧ ಕ್ರಮವನ್ನು ವಿರೋಧಿಸುವ ಚಳವಳದಲ್ಲಿ ಭಾಗ ವಹಿಸಿದ್ದರು. ಈ ನಿರ್ಬಂಧವು ಮೇಲಿನ ತಾರೀಕಿನ ನಂತರ ಮುಂದುವರಿಸಲಾಗುವುದಿಲ್ಲವೆಂದು ಅಲ್ಲಿನ ಜಿಲ್ಲಾ ಕಲೆಕ್ಟರರು ತಿಳಿಸಿರುವರು.

ಲಕ್ನೊ ಕಾಂಗ್ರೆಸ್ಸು.

ಲಕ್ನೊ ಕಾಂಗ್ರೆಸ್ಸಿನ ಸಮಯ ಕೆಲಸ ಮಾಡಲು ಸ್ತ್ರೀ ವೊಲಂಟಿಯರ ಕರಬೇಕು ಮಾಡಲು ಒಂದು ಸಂಸ್ಥೆಯು ಸ್ಥಾಪನೆಯಾಗಿರುತ್ತದೆ. ಈ ಕುರಿತು ಕಾರ್ಯ ನಡೆಯಿಸಲು, ಒಂದು ಕಮಿಟಿಯು ರಚನೆಯಾಗಿರುತ್ತದೆ. ಪ್ರತಿ ಮಂಗಳವಾರ ಇವರ ಸಾಪ್ತಾಹಿಕ ಸಭೆಗಳು ಜರಗುತ್ತವೆ. ಕರಬೇಕು ಕಾರ್ಯವು ಯೋಗ್ಯ ರೀತಿಯಲ್ಲಿ ನಡೆಯುತ್ತಿದೆ.

ಕರ್ನಲ್ ಬೋಲಾನಾಥರ ನಿಧನ.

ಅಖಿಲಭಾರತ ಮೆಡಿಕಲ್ ಎಸೋಸಿಯೇಶನಿನ ಅಧ್ಯಕ್ಷರಾದ, ಕೆಲಸಮಯದ ಹಿಂದೆ ನಮ್ಮ ಜಿಲ್ಲೆಯನ್ನೂ, ಸಮಸ್ತ ಭರತಖಂಡವನ್ನೂ ಪ್ರಚಾರಕಾರ್ಯಕ್ಕಾಗಿ ಸಂದರ್ಶಿಸಿದ, ಕರ್ನಲ್ ಬೋಲಾನಾಥರು ದಿವಂಗತರಾಗಿರುವರು. ಇವರ ಶವಸಂಸ್ಕಾರವು ಬಹಳ ವಿಜೃಂಭಣೆಯಿಂದ ನಡೆಯಿತು. ಅನೇಕ ಕಡೆಗಳಿಂದ ಗೌರವೋಕ್ತಿಗಳಿಂದ ಕೂಡಿದ ಸಂತಾಪಸೂಚಕ ತಂತಿಗಳು ಬಂದಿವೆ.

ಮಹಾತ್ಮಾ ಗಾಂಧಿಯವರ ಆರೋಗ್ಯ.

ಮಹಾತ್ಮಾ ಗಾಂಧಿಯವರ ರಕ್ತವೇಗವು ಸಹಜಸ್ಥಿತಿಗೆ ಬಂದಿರುತ್ತದೆ. ಅಹಮದಾಬಾದಿಗೆ ಹೋದುದರಿಂದ ಅವರ ಆರೋಗ್ಯವು ಈ ರೀತಿ ಪ್ರಗತಿಹೊಂದಿತೆಂದು ಕೆಲವರು ಅಭಿಪ್ರಾಯಪಡುತ್ತಿದ್ದಾರೆ. ಈಗ ಸ್ವಲ್ಪ ನಡೆಯುತ್ತಿದ್ದಾರೆ; ಹಸಿವೆಯೂ ಸ್ವಲ್ಪ ವೃದ್ಧಿಯಾಗಿರುತ್ತದೆ; ಒಳ್ಳೆ ಆಹಾರವನ್ನು ಸ್ವೀಕರಿಸುತ್ತಿದ್ದಾರೆ; ತಮ್ಮ ಕಾರ್ಯವನ್ನು ಸಾಧಿಸುವ ಚೈತನ್ಯವುಳ್ಳವರಾಗಿದ್ದಾರೆ ಆದರೆ ಡಾಕ್ಟರರು, ಇವರು ಇನ್ನೂ ವಿಶ್ರಾಂತಿ ಪಡೆಯಬೇಕೆಂದು ಒತ್ತಾಯ ಮಾಡಿರುವರು. ತುಂಬಾ ವಿಶ್ರಾಂತಿಯನ್ನು ಪಡಕೊಳ್ಳುತ್ತಿದ್ದಾರೆ.

ಇಜಿಪ್ತಿನಲ್ಲಿ

ಇಟೆಲಿಗೆ ಅಬಿಸೀನಿಯದಲ್ಲಿ ಸಂಪೂರ್ಣ ಜಯಲಾಭವಾದರೆ, ಇಜಿಪ್ತಿನಲ್ಲಿ ರೈತರ ಜೀವನಕ್ಕೂ ವ್ಯಾಪಾರಕ್ಕೂ ಹಾನಿಯಾಗುವ ಸಂಭವವಿದೆ ಎಂಬ ಬೆದರಿಕೆಯು ಇಜಿಪ್ತಿನವರಲ್ಲಿ ಉಂಟಾಗಿದೆ. ಅದಕ್ಕಾಗಿ ಇಜಿಪ್ತಿನ ಸರಕಾರವೂ, ಜನಾಂಗಸಂಘವು ಇಟೆಲಿಯನ್ನು ಈ ಯುದ್ಧ ಮಾಡದಂತೆ ತಡೆವ ಪ್ರಯತ್ನಗಳಲ್ಲಿ ಸಹಕರಿಸಬೇಕೆಂದಿದೆ. ಇಟೆಲಿಯು ಇಜಿಪ್ತಿನ ಸರಕುಗಳಿಗೆ ಒಳ್ಳೇ ಗಿರಾಕಿಯಾಗಿದೆ, ಅದರೂ ಈ ಬಗೆಯ ಕಾರ್ಯಕ್ರಮವನ್ನೆ ಅದು ಕೈಗೊಳ್ಳಬೇಕಾಯಿತು. ಇತರ ರಾಷ್ಟ್ರೀಯರು ಇಜಿಪ್ತನ್ನು ನುಗ್ಗಿದರೆ, ಇಜಿಪ್ತನ್ನು ಕಾಪಾಡುವ ಭಾರವನ್ನು ಇಂಗ್ಲಿಷರೇ ವಹಿಸಬೇಕೋ ಬೇಡವೋ ಎಂಬ ಪ್ರಶ್ನೆಯು ೧೯೩೬ರಿಂದ ಇನ್ನೂ ನಿರ್ಧಾರವಾಗಿಲ್ಲ. ಇದರಿಂದ, ಇಜಿಪ್ತಿನ ಸರಹದ್ದಿನಲ್ಲಿ ಬ್ರಿಟಿಷ ಸೇನೆಗಳೂ ನಾವೆಗಳೂ ಜಮೆಯಾಗುತ್ತಲೇ ಇಜಿಪ್ತಿನವರು ಎದುರಾಡುವುದಕ್ಕೆ ತೊಡಗಿ ಇಂಗ್ಲೆಂಡು—ಇಜಿಪ್ತುಗಳೊಳಗೆ ಸರಿಯಾದ ಕರಾರು ಉಂಟಾಗಬೇಕೆಂದು ಚಳವಳ ನಡೆಸುತ್ತಿದ್ದಾರೆ. ಇಟೆಲಿಯು ಇಂಗ್ಲೆಂಡನ್ನೂ ಇಜಿಪ್ತನ್ನೂ ಬೆದರಿಸುತ್ತಿದೆ. ಇತ್ತ ಬ್ರಿಟನ್ನಿನೊಡನೆ ಸಹಕರಿಸಲು ಇಟೆಲಿಯ ನೆರೆರಾಷ್ಟ್ರಗಳೆಲ್ಲ ಒಪ್ಪಿವೆ. ಆದರೂ, ಇಜಿಪ್ತಿನಲ್ಲಿ ಇನ್ನೂ ಬ್ರಿಟಿಷರ ವಿಷಯವಾಗಿ ದೃಢವಾದೊಂದು ಅಭಿಪ್ರಾಯವು ಅನುಕೂಲವಾಗಿ ಹುಟ್ಟಿಲ್ಲ. ವಿದ್ಯಾರ್ಥಿಗಳು ನಡೆಸಿದ ಮೆರವಣಿಗೆ ಮೊದಲಾದುವುಗಳಿಂದ, ಇಜಿಪ್ತದ ಸರಕಾರವು ಈಗ ಬ್ರಿಟನ್ನರೊಡನೆ ಇಂತಹ ಸಂದರ್ಭಗಳಲ್ಲಿ ಸರಿಯಾದ ನಡೆವಳಿಕವೇನೆಂದು ನಿರ್ಣಯಿಸಿಕೊಳ್ಳುವ ಕರಾರನ್ನು ಮಾಡಿಕೊಳ್ಳುವುದರಲ್ಲಿದೆ. ಈ ವಿಚಾರಗಳು ನಡೆವಾಗಲೇ, ಎಣ್ಣೆಯನ್ನು ಇಟಲಿಗೆ ಮಾರದಂತಹ ನಿರ್ಬಂಧಗಳನ್ನು ಜನಾಂಗಸಂಘವು ವಿಧಿಸಿದರೆ,—ಆಫ್ರಿಕದಲ್ಲೊಂದು ಕಡೆ ಮಾತ್ರ ಹತ್ತಿರುವ ಯುದ್ಧಜ್ವಾಲೆಗಳು ಯುರೋಪಿಗೂ ಹರಡಬಹುದೇನೋ ಎಂಬ ಪ್ರಶ್ನೆಯು ಹುಟ್ಟುತ್ತಿದೆ. ಮುಂದಿನ ವಾರ ಈ ಪ್ರಶ್ನೆಗೆ ಉತ್ತರ ಸಿಗಬಹುದು.

೧೯೩೪ರ ವರದಿ

ಸರಕಾರವು ಪ್ರಕಟಿಸುವ ಈ ವರದಿಯಲ್ಲಿ ಸಹ, ಬಂಗಾಳ ಸರಕಾರವು ಶ್ರೀ। ಜವಾಹರಲಾಲರನ್ನು ಕುರಿತು ಕೈಕಪ್ಪಿ ಬರೆದಂತೆಯು ಹಲವು ತಪ್ಪು ವಿಚಾರಗಳು ಬರೆಯಲಾದುವೆಂದೇ ಪತ್ರಿಕೆಗಳು ಎನ್ನುತ್ತಿವೆ. ಹರಿಜನೋದ್ಧಾರಕ್ಕಾಗಿ ಎತ್ತಿದ ನಿಧಿ ಮತ್ತು ಬಿಹಾರ ಭೂಕಂಪದ ಹಾನಿಯನ್ನು ನಿವಾರಿಸಲು ಕೂಡಿಸಿದ ನಿಧಿ ಮತ್ತು ಕಾಂಗ್ರೆಸ್ ಕೂಟವು ಮಾಡಿದ್ದ ಸಹಾಯ ಮುಂತಾದ ವಿಷಯಗಳಲ್ಲಿ ಸರಕಾರದ ವರದೀ ಲೇಖಕರು ಹೇಗೋ ಹಾಗೆ ಬರೆದಿರುವಂತಿದೆ. ರಾಷ್ಟ್ರೀಯರಿಗೆ ಇದು ಎಷ್ಟು ಆಕ್ಷೇಪಕರವಾಗಿ ತೋರುತ್ತಿದೆ ಎಂದರೆ, ಕೆಲವು ಎಸೆಂಬ್ಲಿ ಮೆಂಬರರು ಇಂತಹ ವರದಿಗಳನ್ನು ಪ್ರಕಟಿಸುವುದು ತಪ್ಪೆಂದೇ ಅಥವಾ ಇವು ಇನ್ನು ಪ್ರಕಟವಾಗುವುದು ಬೇಡವೆಂದೇ ನುಡಿಯುತ್ತಿರುವರು. ಹರಿಜನ ಮುಖಂಡರೇ ತಮ್ಮ ಉದ್ಧಾರಕ್ಕಾಗಿ ಮಹಾತ್ಮಾಜೀಯವರು ಮಾಡಿರುವ ಸಮಸ್ತ ಪ್ರಯತ್ನಗಳಿಗೆ ತಾವು ಕೃತಜ್ಞರಾಗಿದ್ದು, ಆ ನಿಧಿಯ ಪ್ರತಿಯೊಂದು ಕಾಸಿನ ಲೆಕ್ಕವೂ ಸರಿಯಾಗಿದೆ ಎನ್ನುವರಲ್ಲದೆ, ಹರಿಜನ ಚಳವಳವು ಇನ್ನಾವುದೋ ಚಳವಳವನ್ನು ಮರೆಯಲ್ಲಿ ನಡೆಸುವುದಕ್ಕಾಗಿ ಅದುದಲ್ಲವೆನ್ನುತ್ತಾರೆ. ಇತ್ತ ಬಾಬು ರಾಜೇಂದ್ರ ಪ್ರಸಾದರು ಕಾಂಗ್ರೆಸ್ಸಿನ ನಿಧಿಯಿಂದ ಬಿಹಾರ ಭೂಕಂಪದ ಹಾವಳಿ ನಿವಾರಣೆಗಾಗಿ ಮಾಡಿದ ಸಹಾಯವನ್ನು ವಿವರಿಸಿ, ಕೆಲವಂಶದಲ್ಲಿ ತಮಗೆ ಇತರರ ಸಹಕಾರವೇ ಇದ್ದಿಲ್ಲವೆಂದೂ ಪ್ರಕಟಿಸಿಬಿಟ್ಟಿದ್ದಾರೆ. ಎಸೆಂಬ್ಲಿಯಲ್ಲಿ ಇದು ಚರ್ಚೆಯಾಗುವುದಾದರೂ, ವರದಿ ಸರಕಾರವು ತಪ್ಪಾಗಿರುವುದೆಂಬುದನ್ನು ಒಪ್ಪಿಕೊಳ್ಳುವಂತಿರದೆ, ಸಮರ್ಥಿಸುವುದಾಗಿಯೂ ಪ್ರವಾದಗಳಾಗಿವೆ.

ಕೌನ್ಸಿಲಿನ ಒಂದು ತೀರ್ಮಾನ.

ವಿಶಾಖಪಟ್ಟಣದ ಕೊಲೇಜಿನ ಮತ್ತು ಜೋರ್ಜ್ ಆಸ್ಪತ್ರೆಗಳ ಉಪಯೋಗವು ಹೆಚ್ಚುವಂತೆ ಬೇಕಾಗುವ ಹಣವನ್ನು ಕೊಡಲಾಗುವುದಿಲ್ಲವೆಂದು ಫೈನೆನ್ಸ್ ಕಮಿಟಿಯು ಶಿಫಾರಸು ಮಾಡಿದುದನ್ನು ಕೌನ್ಸಿಲು ರದ್ದುಪಡಿಸಿ ಹಣವನ್ನು ಸೆಂಕ್ಷನ್ ಮಾಡಿರುವುದು. ಇವೆರಡು ಸಂಸ್ಥೆಗಳಲ್ಲಿ ಬೇಕಾಗಿರುವಷ್ಟು ಜನರಿಲ್ಲ, ಉದ್ಯೋಗಗಳಿಲ್ಲ, ಉಪಕರಣ ಸನ್ನಾಹವಿಲ್ಲ. ಆ ಆಸ್ಪತ್ರೆಯಲ್ಲಿ ಒಬ್ಬಳೇ ದಾದಿಯಿರುವಳಂತೆ; ರಾತ್ರಿಕಾಲದಲ್ಲಿ ರೋಗಿಗಳ ಉಪಚಾರಕ್ಕೆ ಧಾತ್ರೀ ವಿದ್ಯೆ ಕಲಿಯುವ ವಿದ್ಯಾರ್ಥಿನಿಯರೇ ಮಾತ್ರ ಇರುವರಂತೆ. ವಿಶಾಖಪಟ್ಟದ ಮೆಡಿಕಲ್ ಕೊಲೇಜಿನಿಂದ ಉತ್ತೀರ್ಣರಾಗುವವರ ಡಿಗ್ರಿಗಳನ್ನು ಮೆಡಿಕಲ್ ಕೌನ್ಸಿಲ್ ಅಂಗೀಕರಿಸುವುದಿಲ್ಲ. ಕೊಲೇಜನ್ನು ಸರಿಯಾದ ಸ್ಥಿತಿಯಲ್ಲಿ ಇರಿಸಲು ಹಣಬೇಕು; ಅದನ್ನು ಈ ಕಮಿಟಿಯು ಸೆಂಕ್ಷನ್ ಮಾಡಿಲ್ಲ. ಹಾಗಿದ್ದರೆ ಅದನ್ನು ಮುಚ್ಚಬೇಕಾಗುವುದು. ಮುಚ್ಚಿದರೆ ಕೌನ್ಸಿಲನ್ನು ದೂರುವರು; ಇದುವಂತೆ ಇರಿಸಿದರೆ ಅಲ್ಲಿ ಕಲಿತವರಿಗೆ ಗೌರವವಿಲ್ಲ. ಏನವಸ್ಥೆ! ಕೌನ್ಸಿಲು ಮೆಂಬರರು ಇದನ್ನು ತಿಳಿದೇ ಹಣವನ್ನು ಸೆಂಕ್ಷನ್ ಮಾಡಿರುವರು. ಹೀಗೆಯೇ ನ್ಯಾಯವಾದ ವಿಷಯಗಳಿಗಾಗಿ ಹಣವು ಸಿಕ್ಕುವಂತೆ ಯಾವಾಗಲೂ ಕೌನ್ಸಿಲು ವರ್ತಿಸಿದರೆ, ಎಷ್ಟೋ ಕೀರ್ತಿಯಿದೆ; ಜನತೆಗೆ ಹಿತವಿದೆ.

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ. ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರ್.
(ಸನ್ 1868ರಲ್ಲಿ ಸ್ಥಾಪಿತವಾದದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಅನೇಕ ಶತಮಾನಗಳ ಸಮಯ ಜೀವಿಸಬಹುದು.

೧೬,೦೦೦ ಜನರು ಮಾಯವಾಗಿರುವರು.

ಉಕ್ಕಿಯ ಬದಲಾಗಿ ಮೋಟಾರು ಕಾರುಗಳು—

ಸಿರಿಯಾದಲ್ಲಿ ದಂಗೆ!

ಮದ್ರಾಸು ನ್ಯಾಯವಿಧಾಯಕ ಸಭೆ.

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಅನೇಕ ವಿಚಾರಗಳ ಮೇಲೆ ಚರ್ಚೆ ನಡೆಯುತ್ತಿದೆ. ಜಿಲ್ಲಾ ಬೋರ್ಡುಗಳ ವಿಭಜನೆ ಕಾರ್ಯಕ್ಕಾಗಿ ಓರ್ವ ಉದ್ಯೋಗಸ್ಥರ ನೇಮಕ, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಚುನಾವಣೆ, ಜಿಲ್ಲಾ ಬೋರ್ಡಿನ ಅಧಿಕಾರದಲ್ಲಿರುವ ಶಾಲೆಗಳಲ್ಲಿ ಕೆಲಸ ಮಾಡುವ ಪಂಡಿತರ ಸಂಬಳದ ವಿಚಾರ, ಇವೇ ಮೊದಲಾದವುಗಳು ಚರ್ಚಿಸಲಾದವು. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಚುನಾವಣೆಯ ಕುರಿತು ಶ್ರೀಗಳಾದ ಸುಬ್ರಹ್ಮಣ್ಯ ಭಟ್ಟರು ಅನೇಕ ಪ್ರಶ್ನೆಗಳನ್ನು ಕೇಳಿದರು. ಸದಸ್ಯರ ಚುನಾವಣೆಯು ಸಂಪೂರ್ಣವಾಗದಿದ್ದುದರಿಂದ ಅಧ್ಯಕ್ಷರ ಚುನಾವಣೆಯು ಮಾಡಲಾಗುತ್ತದೆಂದು, ಸುರತ್ಕಲ್ಲ ಪಿರ್ಕಿನ ಚುನಾವಣೆಯ ವಿಚಾರ ವ್ಯವಹಾರವು ಇತ್ಯರ್ಥವಾಗದೆ ಇದ್ದುದರಿಂದ ಸರಕಾರವು ಜಿಲ್ಲಾ ಕಲೆಕ್ಟರಿಗೆ ಅಧ್ಯಕ್ಷರ ಚುನಾವಣೆಯನ್ನು ಮಾಡಬಾರದಾಗಿ ಹುಕುಂ ಕೊಟ್ಟಿತೆಂದು ಶ್ರೀ ಭಟ್ಟರ ಪ್ರಶ್ನೆಗಳ ಉತ್ತರದಲ್ಲಿ ತಿಳಿದುಬಂತು. ಈ ವಿಚಾರ ಚರ್ಚೆ ನಡೆಯಲು ಶ್ರೀ ಭಟ್ಟರು ಒಂದು ಅಡ್ಜರ್ನಮೆಂಟ್ ಮೋಶನನ್ನು ತಂದಿದ್ದರು. ಆದರೆ ಇದು ಹಿಂತೆಗೆಯಲಾಯಿತು. ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರಿಗೆ ಉಳಕೊಳ್ಳಲು ಆದಂ ಈಗಿನ ನಿಲಯವನ್ನು ಕ್ರಯಕ್ಕೆ ಪಡಕೊಳ್ಳಲು ನಿರ್ಧಾರಗಳಾದವು. ಶ್ರೀ ಭಟ್ಟರು ಕಳೆದ ಒಕ್ಟೋಬರ ತಿಂಗಳಲ್ಲಿ ಕಂದಾಯ ವಸೂಲಿಕ್ಕಾಗಿ ಅಸಿಸ್ಟೆಂಟ್ ರೆವಿನ್ಯೂ ಓರ್ವರನ್ನು ನೇಮಿಸಿದ ಕುರಿತು ಪ್ರಶ್ನೆಗಳ ಕೇಳಲಾಗಿ ಸರಕಾರವು ಈ ಉಪನಿಯಮವನ್ನು ಬೇಗನೆ ಬದಲಾವಣೆ ಮಾಡುವರೆಂದು ಉತ್ತರ ಕೊಟ್ಟರು. ಆ ವಿಚಾರದಲ್ಲಿ ಪುನಹ ಪ್ರಶ್ನೆಗಳು ಕೇಳಲಾದವು.

ಉಕ್ಕಿಯ ಬದಲಾಗಿ ಮೋಟಾರು ಕಾರುಗಳು

ಆಸ್ಟ್ರೇಲಿಯದಿಂದ ಜನ ಸರಿಯಾಗಿ ತಮಗೆ ಬೇಕಾದ ಉಕ್ಕಿಯನ್ನು ಮೋಟಾರು ವಾಹನಗಳನ್ನು ಕೊಟ್ಟು ಪಡಕೊಳ್ಳುತ್ತಿದ್ದಾರೆ. ಇದರಿಂದ ಬ್ರಿಟಿಷ ಮೋಟಾರು ಕಾರುಗಳ ವ್ಯಾಪಾರವು ಬಿದ್ದಿರುತ್ತದೆ. ಆದುದರಿಂದ ಈ ಅಭ್ಯಾಸವನ್ನು ಬಿಡಬೇಕೆಂದು ಸರಕಾರದವರು ಅಲ್ಲಿನ ವ್ಯಾಪಾರ ಸಚಿವರಿಗೆ ಸೂಚನೆ ಕೊಟ್ಟಿರುವರು. ಆಸ್ಟ್ರೇಲಿಯದ ಧನಾಡ್ಯರಿಂದ ನಡೆಯಿಸಲ್ಪಡುವ ಒಂದು ಜರ್ಮನ ಮೋಟಾರು ಕಾರುಗಳ ಕಾರ್ಖಾನೆಯು ಈ ಅಭ್ಯಾಸದಿಂದ ಹೆಚ್ಚಿನ ಲಾಭವನ್ನು ಗಳಿಸುತ್ತಿದ್ದಾರಂತೆ.

ಚೀನಾದಲ್ಲಿ ಕೊಮ್ಯುನಿಷ್ಟರ ಜಯ

ಚೀನಾದೇಶದಲ್ಲಿ ಸ್ವಯಂಪ್ರಭುತ್ವದ ಚಳವಳಿಯು ಪ್ರಾರಂಭವಾಗಿ ಬಹಳ ಕ್ಷೋಭೆಯುಂಟಾಗಿದೆ. ದಕ್ಷಿಣದಲ್ಲಿನ ಕೆಲವು ಸೋವಿಯಾಟ ಜನರು ಕೊಮ್ಯುನಿಷ್ಟ ಮತವನ್ನು ಪ್ರಚಾರ ಮಾಡುವರಂತೆ. ಅಲ್ಲಿನ ಅನೇಕ ನಗರಗಳನ್ನು ಹಿಡಿದಿರುವರು. ಅಲ್ಲಿರುವ ಬ್ರಿಟಿಷ ಮತ್ತು ಅಮೇರಿಕಾದ ಜನರು ಆ ದೇಶವನ್ನು ಬೇಗನೆ ತ್ಯಜಿಸಬೇಕಾಗಿ ಸೂಚನೆಗಳು ಹೊರಟಿವೆ. ಚೀನದಲ್ಲಿ ಬೇಗನೆ ಒಂದು ಭೀಕರ ಯುದ್ಧವು ಪ್ರಾರಂಭವಾಗುವುದು.

ಸಿರಿಯಾದಲ್ಲಿ ದಂಗೆ.

ಅರೇಬಿಯದ ಫ್ರೆಂಚ ಮೆಂಡೇಟಿನ ಅಡಿಯಲ್ಲಿರುವ ಸಿರಿಯಾದಲ್ಲಿ ಜನರು ಫ್ರೆಂಚರ ಅಧಿಕಾರವನ್ನು ವಿರೋಧಿಸಿ ದಂಗೆ ಎಬ್ಬಿರುವರು. ಇಲ್ಲಿನ ಸ್ವಾತಂತ್ರ್ಯ ಸಂಘದವರು ಅಲ್ಲಲ್ಲಿ ಸ್ವಾತಂತ್ರ್ಯ ರಾಜಕೀಯ ಕ್ಲಬ್ಬುಗಳನ್ನು ಮಾಡಿ, ಫ್ರೆಂಚ ಸರಕಾರವನ್ನು ವಿರೋಧಿಸುವ ಚಳವಳಿಗಳನ್ನು ಕೆಲಸಮಯದ ಹಿಂದೆ ಪ್ರಾರಂಭ ಮಾಡಿದ್ದರು. ಈ ಸ್ವಾತಂತ್ರ್ಯ ಸಂಘದ ನಾಯಕರನ್ನು ಹಿಡಿದು ಸೆರೆಮನೆಗೆ ಕಳುಹಿಸಲು, ದಂಗೆಯು ಪ್ರಾರಂಭವಾಗಿರುತ್ತದೆ. ಈ ಸಂಘದವರು ಈ ಕುರಿತು ಜನಾಂಗಸಭೆಗೆ ತಂತಿ ಬಿಟ್ಟಿರುವರು. ಫ್ರೆಂಚರು ಇಲ್ಲಿ ಅನೇಕ ಅನಾಹುತಗಳು ನಡೆಯಿಸಿದ್ದಾರಂತೆ. ಈ ಕುರಿತು ಪ್ರತಿಕೂಲನಾ ತಂತಿಗಳನೇಕ ಜನಾಂಗ ಸಭೆಗೆ ಹೋಗಿವೆ. ತಮಗೆ ಸ್ವಾತಂತ್ರ್ಯ ಕೊಡಬೇಕಾಗಿ ಇವರು ಹಟ ಹಿಡಿದಿರುತ್ತಾರೆ. ಕಳೆದ ಮಹಾಯುದ್ಧದಲ್ಲಿ ಇವರು ಬಹಳ ಶ್ರಮ ಪಟ್ಟಿರುವರು. ಒಪ್ಪಂದದ ಷರತ್ತುಗಳು ಬೇಗನೇ ನಡೆಯುವವು. ಈಗ ಶಾಂತಿಯು ತಲೆದೋರಿದೆ.

ಬೂಜಾಟದಲ್ಲಿ ಗಲಭೆ.

ಸಿಂಗಾಪುರದ ಒಂದು ಜಪಾನಿಯು ಕಟ್ಟಿಸಿದ ಗನಿಯಲ್ಲಿ ಕೆಲಸ ಮಾಡುತ್ತಿರುವ ಎರಡು ಸಾವಿರ ಮಜೂರರಲ್ಲಿ ಜೂಜಾಟದ ನಿಮಿತ್ತ ಗಲಭೆಯು ಉಂಟಾಗಿ, ಬಹಳ ಕ್ಷೋಭೆ ಎದ್ದು, ೩ ಜನರು ಮಡಿದಿರುವರು. ೩೦ ಜನರು ಗಾಯ ಹೊಂದಿರುವರು.

ಜನಾಂಗಸಭೆಯ ಉದ್ಯೋಗಸ್ಥರು ಹಿಂದೂದೇಶಕ್ಕೆ ಬರುವರು

ಮಿ. ಇ. ಪೆಲ್ಟರೆಂಬ ಜನಾಂಗ ಮಂಡಳದ ಪ್ರಚಾರ ಕಾರ್ಯ ಇಲಾಖೆಯ ಡೈರೆಕ್ಟರರು ಹಿಂದೂದೇಶದ ಪತ್ರಿಕೆಗಳೊಡನೆ ಸಂಬಂಧ ಬೆಳೆಯಿಸಲು ಹಿಂದೂದೇಶಕ್ಕೆ ಬೇಗನೆ ಬರುವರು. ಸಾಧಾರಣ ಎರಡು ತಿಂಗಳ ಸಮಯ ಇಲ್ಲಿ ಕಳೆಯುವರು.

ಸಾರ್ವಭೌಮರು ಸಾಮ್ರಾಜ್ಯದ ಪ್ರಯಾಣ ಮಾಡುವರು.

ಬ್ರಿಟಿಷ ಸಾರ್ವಭೌಮರಾದ ಎಂಟನೇ ಎಡ್ವರ್ಡ ಚಕ್ರವರ್ತಿಯವರು ಬೇಗನೆ ತಮ್ಮ ಸಾಮ್ರಾಜ್ಯದ ಪ್ರಯಾಣಗೈವರು. ಈ ಕಾರ್ಯವನ್ನು ಕಿರೀಟ ಧಾರಣೆಯಾದ ನಂತರ ಕೈಗೊಳ್ಳುವರೆಂದು ವಾರ್ತೆ. ಇವರ ಕಿರೀಟ ಧಾರಣೆ ಸಮಾರಂಭವು ೧೯೩೭ರಲ್ಲಿ ಮೇ ತಿಂಗಳಲ್ಲಿ ಜರಗುವುದೆಂದು ವಾರ್ತೆ ಹರಡಿರುತ್ತದೆ. ಆದರೆ ಸರಕಾರದ ನಿರ್ಣಯವು ಆಗಿಲ್ಲ. ಇವರು ಬ್ರಿಟಿಷ ಸಾಮ್ರಾಜ್ಯದ ಪ್ರಯಾಣ ಮಾಡುವಾಗ ಹಿಂದೂದೇಶದ ಪ್ರಯಾಣಕ್ಕೆ ಇವರಿಗೆ ೮ ತಿಂಗಳು ಬೇಕಾಗುವುದೆಂದೂ ಈ ಎಂಟು ತಿಂಗಳಲ್ಲಿ ಇಲ್ಲಿಯ ನಿಜಯದಲ್ಲಿ ಕಿರೀಟಧಾರಣೆ ಸಮಾರಂಭವು ನಡೆಯುವುದಂತೆ.

ಅಮೇರಿಕಾದ ಸಿನೆಮಾ ನಟನೆಗಾರರ ತಲಬು

ಅಮೇರಿಕಾದಲ್ಲಿ ೧೯೩೪ನೇ ಇಸವಿಯಲ್ಲಿ ಸಿಕ್ಕಿದ ಉತ್ಪತ್ತಿಯ ಒಂದು ಪಟ್ಟಿಯು ಎಂಬ ಪುಸ್ತಕವು ಸರಕಾರದಿಂದ ಪ್ರಕಟವಾಗಿರುತ್ತದೆ. ಅವುಗಳಲ್ಲಿ ಸಿನೆಮಾ ನಟನೆಗಾರರ ಹೆಸರು ಬಹಳವಾಗಿ ಕಣ್ಣಿಗೆ ಬೀಳುತ್ತಿವೆ. ಇವರಿಗೆ ಲಕ್ಷಾಂತರ ರೂಪಾಯಿ ಸಂಬಳವಿರುತ್ತದೆಂದು ಇದರಲ್ಲಿ ವ್ಯಕ್ತವಾಗುತ್ತದೆ. ಅಲ್ಲಿನ ಪ್ರಸಿದ್ಧ ನಟನೆಗಾರಳಾದ ಮೆ. ವೆಸ್ಟ್ ಎಂಬವಳಿಗೆ ಒಂದು ವರ್ಷಕ್ಕೆ ಬರುವ ೬೬೯೬೬ (ಸಾಧಾರಣ ೪೦ ಲಕ್ಷ) ಉತ್ಪತ್ತಿಯಂತೆ. ಸಿನೆಮಾ ನಟನೆಗಾರರ ಉತ್ಪತ್ತಿಯಲ್ಲಿ ಇವಳಿಗೆ ಪ್ರಥಮ ಸ್ಥಾನ ದೊರಕಿರುತ್ತದೆ. ಹೀಗೆ ೮ ಲಕ್ಷ, ೬ ಲಕ್ಷ, ೪ ಲಕ್ಷ ರೂಪಾಯಿ ಸಂಬಳ ಅನೇಕ ನಟನೆಗಾರರಿಗೆ ಅಮೇರಿಕಾದಲ್ಲಿ ಈ ರೀತಿ ಉತ್ಪತ್ತಿಯಾಗುತ್ತದೆ.

16000 ಜನರು ಮಾಯವಾಗಿರುವರು

ಫ್ರಾನ್ಸ್ ದೇಶದ ಪೆರಿಸ್ಸ ನಗರದಲ್ಲಿ ಗತವರ್ಷದಲ್ಲಿ ೧೬,೦೦೦ ಜನರು ಮಾಯವಾಗಿರುವರೆಂದು ವರದಿ ಹೊರಬಿದ್ದಿರುತ್ತದೆ. ಈ ಸಂಖ್ಯೆಯು ಹಿಂದಿನ ವರ್ಷಕ್ಕಿಂತ ೧೫೦೦ ಹೆಚ್ಚಾಗಿರುತ್ತದಂತೆ. ಇದರಲ್ಲಿ ೬೦೦೦ ಜನರು ಮಾತ್ರ ಸಿಕ್ಕಿರುವರು. ಮಾಯವಾದವರಲ್ಲಿ ೬೪೬೩ ಗಂಡಂದಿರು (ಅವರಲ್ಲಿ ಅರ್ಧಾಂಗಿಯನ್ನು ಕಂಡುಹಿಡಿದಿರುವರು) ೩೦೦೫ ಪತ್ನಿಯರು ೧೨೦೫ ಪ್ರಾಯದವರು, ೨೦೦೬ ಸ್ತ್ರೀಯರು (ಪ್ರಾಯಭರಿತರಲ್ಲದವರು. ಇವರಲ್ಲಿ ೬೦೦ ಜನ ತಂದೆತಾಯಿಗಳು ಮಾಯವಾಗಿರುವರಂತೆ.

ಪ್ರಪಂಚದ ಪ್ರಮುಖ ಬೆಸ್ತರು.

ಜಪಾನು ಪ್ರಪಂಚದ ಅತಿ ದೊಡ್ಡದಾದ ಬೆಸ್ತಗಾರ ಜನಾಂಗವಾಗಿರುತ್ತದೆ. ಬೆಸ್ತಗಾರಿಕೆಯಿಂದ ಇವರ ಉತ್ಪತ್ತಿಯು ಸಾಧಾರಣ ರೂ ೩೩೦,೦೦೦,೦೦೦ ವಾಗಿರುತ್ತದೆ. ಇವರೂ ಅವರಿಗೆ ಈ ವ್ಯವಸಾಯದಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಹೊಂದುವ ಇಚ್ಛೆ ಇದೆ. ಬೆಸ್ತಗಾರಿಕೆಯನ್ನು ಉದ್ಧರಿಸುವ ಅನೇಕ ಸಂಸ್ಥೆಗಳನ್ನು ಸ್ಥಾಪನೆ ಮಾಡಿರುತ್ತಾರೆ.

ಬ್ರಿಟಿಷರ ಇರೇಕಿನ ವ್ಯಾಪಾರವು ಬಿದ್ದಿರುತ್ತದೆ.

ಜಪಾನಿಯರ ನಿಮಿತ್ತ ಬ್ರಿಟಿಷರ ಇರೇಕಿನೊಡನೆ ವ್ಯಾಪಾರವು ಬಹಳವಾಗಿ ಇಳಿದಿರುತ್ತದೆಂದು ವಾರ್ತೆ. ೧೯೩೩—೩೪ರಲ್ಲಿ ಬ್ರಿಟಿಷ ಆಮದಿನ ೩,೧೮೯,೦೦೦ ಮೌಲ್ಯವು ಬೌಂಡು ೧,೫೪೩,೦೦೦ಕ್ಕೆ ಇಳಿದಿರುತ್ತದೆ. ಜಪಾನಿಯರ ವ್ಯಾಪಾರ ೧೯೩೩—೩೪ರಲ್ಲಿ ಬೌಂಡು ೪೩೦,೦೦೦ ಈಗ ಬೌಂಡು ೧೩೩೪,೦೦೦ ಬ್ರಿಟಿಷ ವ್ಯಾಪಾರವು ಜಪಾನಿಯರಿಗೆ ಸಂದಿರುತ್ತದೆ.

ಐಗುಪ್ತದ ನವರಾಜ ಮಂಡಳ

ಎಲ್ಲಾ ಪಂಗಡದವರು ಕೂಡಿದ ಒಂದು ಸ್ವಾತಂತ್ರ್ಯದ ರಾಜ ಮಂಡಳವು ಐಗುಪ್ತದ ಅರಸರ ರಾಜಕೀಯ ಮಂತ್ರಿಗಳಾದ ಅಲಿಪಾಶಾ ಮಹೇರರಿಂದ ರಚಿಸಲಾಗುವುದು. ವಾಫ್ದ ಪಂಗಡದವರಿಗೂ ಸರಕಾರಕ್ಕೂ ಮತ್ತು ಇತರ ಪಂಗಡಗಳಿಗೂ ಭಿನ್ನಾಭಿಪ್ರಾಯಗಳುಂಟಾಗಿ ಯಾವದೆ ಒಂದು ಪಂಗಡದ ಸರಕಾರವು ನಿರ್ಮಾಣವಾಗದಿದ್ದುದರಿಂದಲೇ ಈ ತರದ ಸಂಯುಕ್ತ ಮಂಡಳವು ರಚನೆಯಾಗಿರುತ್ತದೆ. ಬ್ರಿಟಿಷರೊಡನೆ ಒಪ್ಪಂದ ಮಾತುಗಳನ್ನು ಇನ್ನು ನಡೆಯಿಸಲಾಗುವದು. ಐಗುಪ್ತಕ್ಕೆ ಜನಾಂಗಸಭೆಯ ಸದಸ್ಯತ್ವವನ್ನು ದೊರೆಯಿಸಲೂ ಅಲ್ಲಿ ಒಂದು ನವೀನ ಚಳವಳಿಯು ಪ್ರಾರಂಭವಾಗಿರುತ್ತದೆ.

ಲಂಡನಿನಲ್ಲಿ ಶ್ರೀ ಜವಾಹರಲಾಲರು

ಶ್ರೀ ಜವಾಹರಲಾಲರು ಲಂಡನಿಗೆ ತಲಪಿರುವರು. ಹಿಂದೂ ಪತ್ರಿಕೆಯ ಪ್ರತಿನಿಧಿಗಳು ಅವರಿಗೆ ಕಾಂಗ್ರೆಸ ಅಧ್ಯಕ್ಷ ಪದವಿ ಕೊಡಲಾಗಿದೆಯೆಂದು ತಿಳಿಸಲು ತಾನು ಬಹಳ ಧನ್ಯನಾದೆನೆಂದು ತಿಳಿಸಿದರು. ಇನ್ನು ಅನೇಕ ಕಾಂಗ್ರೆಸ್ಸಿನ ವಿಚಾರ ಪ್ರಶ್ನೆಗಳು ಇವರಿಗೆ ಕೇಳಲಾಗಲು ಒಕ್ಕೊ ಕಾಂಗ್ರೆಸ್ಸು ಜರಗುವ ತನಕ ಯಾವ ತರದ ಅಭಿಪ್ರಾಯ ಕೊಡಲು ಸಿದ್ಧನಿಲ್ಲವೆಂದು ತಿಳಿಸಿದರು. ಶ್ರೀಮತಿ ಕಮಲಾ ನೆಹರು ಅವರ ಸ್ಥಿತಿಯು ಸುಧಾರಣೆಯನ್ನು ಹೊಂದುತ್ತಿದೆ.

ಇಟಲಿಯನ ಸಿದ್ಧತೆಗಳು

ಬ್ರಿಟಿಷರು ತಮ್ಮ ನೌಕಾಬಲವನ್ನು ಮೆಡಿಟರೇನಿಯನ ಸಮುದ್ರದಲ್ಲಿ ಹೆಚ್ಚಿಸಿರಲು ಫ್ರೆಂಚರು ಮತ್ತು ಇತರ ಜನಾಂಗಗಳು ಇವರೊಡನೆ ಸಹಕರಿಸಲು ಮುಂದೆ ಬಂದಿರಲು ಇಟಲಿಯರು ಸಿದ್ಧತೆಗಳ ಸಂಪೂರ್ಣ ಮಾಡುವರು. ಉತ್ತರ ಆಫ್ರಿಕಾ ದೇಶಕ್ಕೆ ೫೦,೦೦೦ ಇಟಲಿಯನ ಸೈನಿಕರನ್ನು ಕಳುಹಿಸಲಾಗುವುದೆಂದು ಮುಸೊಲಿನಿಯವರು ತಿಳಿಸಿರುವರು. ಈ ಕೆಲಸಗಳ ಅಲ್ಲದೆ ಸಮುದ್ರ ನೌಕೆಗಳನ್ನು ಸಜ್ಜು ಮಾಡಲು ತಯಾರಿ.

ಅವುಗಳು ಯಾವ ಅತಿ ಸಕ್ಕರೆ ಕಾಗದ ಸಮಯದಲ್ಲೂ ಉಪಯೋಗಕ್ಕೆ ಬೀಳುವಂತ ಪ್ರಮಾಣದಲ್ಲಿ ಸಾಧ್ಯವಾಗುವುದಂತೆ. ಪೂರ್ವ ಆಫ್ರಿಕಾಕ್ಕೆ ತೆರಳಿದ ಒಂದು ಲಕ್ಷ ಸೈನಿಕರಿಗೆ ಬಹಳ ಶೀತದ ಕಷ್ಟಗಳು ಸಂಭವಿಸಿದೆವೆಂದು ಇದರು ತಿಳಿಸಿದರು. ಇಟೇಲಿಯಿಂದ ೫೦೦೦ ಸೈನಿಕರಿರುವ ಒಂದು ಸೈನ್ಯ ಮಂಡಳವು ಪೂರ್ವ ಆಫ್ರಿಕಾಕ್ಕೆ ಹೋಗಿರುವುದು.

ಅನೇಕ ಶತಮಾನಗಳ ಸಮಯ ಜೀವಿಸಬಹುದು

ಮನುಷ್ಯನು ಚಿರಂಜೀವಿಯಾಗುವುದು ಅಸಾಧ್ಯ. ಆದರೆ ಆತನು ಅನೇಕ ಶತಮಾನಗಳ ತನಕ ಜೀವಿಸಲು ಸಾಧ್ಯವಾಗುವ ಒಂದು ಯೋಜನೆಯನ್ನು ಕಂಡುಹಿಡಿದಿರುವರು. ಮನುಷ್ಯರನ್ನು ಭಯಂಕರ ಶೀತವಿರುವ ಪೆಟ್ಟಿಗೆಗಳಲ್ಲಿ ಬಹಳ ಸಮಯ ಹಾಕಿಡಬಹುದು. ಇವರ ದೇಹದಲ್ಲಿ ಯಾವ ಬದಲಾವಣೆಗಳು ಆಗಲಾರವು. ಹೀಗೆ ಕೆಲವು ಶತಮಾನಗಳ ತನಕ ಈ ರೀತಿ ಮನುಷ್ಯನನ್ನು ಹೀಗೆ ಪೆಟ್ಟಿಯೊಳಗಿಡಲು ಸಾಧ್ಯವಿದೆಯಂತೆ. ಬೇಕಾದಾಗ ಆತನನ್ನು ಹೊರಗೆ ತೆಗೆದು ಜೀವಕೊಡಲು ಸಾಧ್ಯವಿದೆಯಂತೆ. ಈ ರೀತಿ ಮನುಷ್ಯನು ಅನೇಕ ಶತಮಾನಗಳು ಜೀವಿಸುವಂತೆ ಮಾಡಬಹುದು.

೨ನೇ ಪುಟದಿಂದ ಮುಂದರಿಸಿದುದು.

ಕಾಂಗ್ರೆಸ್ ಪಕ್ಷದೊಡ ಲಿಬರಲ್ ಪಕ್ಷದವರು ಸೇರಲು ತಯಾರಾಗಿದ್ದರು. ಆದರೆ,—ಧ್ಯೇಯವು ಬದಲಾಗಬಾರದು, ಶಾಸನೋಲ್ಲಂಘನೆಯು ಮಾಡಬಾರದು, ಸರಕಾರದ ಪ್ರತಿ ವಿರೋಧ ಬಾರದು, ಬಹಿಷ್ಕಾರ ನೀತಿ ವಿರೋಧವಿರದು ಎಂದರೆ—ಕಾಂಗ್ರೆಸ್ಸು ಇರಬಾರದು. ಲಿಬರಲರೊಳಗೇ ಕಾಂಗ್ರೆಸ್ ಸೇರಿ ಮಾಯವಾಗಬೇಕು ಎಂದರ್ಥವಾಗುತ್ತಿದೆಯೆ?

ಗಂಡಾಗಬಾರದು, ಹಸೆಗೆ ಕುಳ್ಳಿರಬಾರದು, ಹಿರಿಯರಿಗೆ ನಮಸ್ಕರಿಸಬಾರದು, ಕನ್ಯೆಗೆ ಲಗ್ನವಾಗಬೇಕು ಎಂದಾಗುತ್ತಿದೆಯೆ?

\+ \+ \+ \+

ಇತಿಹಾಸದಲ್ಲಿ ಆತಿ ಮಹತ್ವದ್ದೆನ್ನುವ ಇಂಡಿಯಾ ಪಕ್ಷದ ಲಕ್ನೋ ಬೈಠಕಿನ ವಿಷಯ. ಮುಂದಿನ ಜವಾಹಿರಲಾಲರೇ ಈ ಸಲದ ಕಾಂಗ್ರೆಸ ಅಧಿವೇಶನದಲ್ಲಿ ಅಧ್ಯಕ್ಷರು. ಚುನಾವಣೆಯಾಗಿದೆ. ಅವರೂ ಒಪ್ಪಿದ್ದಾರೆ. ಆದರೆ—ಹೇಗೆ?

ಅನುಕ್ರಮಣಿಕೆ.

ಟಿಪ್ಪಣಿಗಳು ೨
ಜಪಾನೀಯರ ಸಾಮ್ರಾಜ್ಯರಚನೆ ೪
ಸಾಧ್ವಿಯರ ಸಾಕ್ಷ್ಯ ೫
ಕಳೆದ ಮಹಾಯುದ್ಧದ ನಿಜವಾದ ಚಿತ್ರ ೬
ಎಸೆಂಬ್ಲಿ ಅಧಿವೇಶನವು ಪ್ರಾರಂಭವಾಗಿರುತ್ತದೆ ೮
ವಿವಿಧ ಸಮಾಚಾರಗಳು ೯
ಅಗ್ರಲೇಖ
ಜನಸಂಖ್ಯೆಯ ಸಮಸ್ಯೆ ೧೦
ಸ್ಫುಟವಿಚಾರಗಳು ೧೧
ವರ್ತಮಾನ ಸಂಗ್ರಹ
ಸ್ಥಳಗಳಿಂದ, ತಾಲೂಕುಗಳಿಂದ ೧೧
ವನಿತಾ ವಿಭಾಗ ೧೬

ಸ್ವದೇಶಾಭಿಮಾನಿ.

ಫಾ. ೭ನೇ ಶುಕ್ರವಾರ ಫೆಬ್ರವರಿ ೧೯೩೬

ಜನಸಂಖ್ಯೆಯ ಸಮಸ್ಯೆ

ಇದು ಸಮಸ್ಯೆಗಳ ಯುಗ ಎಷ್ಟೋ ಕಾಲದಿಂದ ಜೀವನದಲ್ಲಿ ಪರಿಣಾಮವನ್ನುಂಟು ಮಾಡುವ ಎಲ್ಲ ವಿಷಯಗಳನ್ನೂ ವಿಮರ್ಶಿಸಿ, ಹೊಸ ಶೋಧಗಳನ್ನು ಕಂಡುಕೊಂಡು, ನವೀನ ಉದ್ಯಮಗಳನ್ನು ಕೈಕೊಳ್ಳುವುದಕ್ಕೆ ನವಸೂಚನೆಗಳನ್ನು ಕೊಡುವ ವಿಚಾರಕರ ಯುಗವೇ ಇದು ಜನಸಂಖ್ಯಾ ವಿಚಾರವಾಗಿ ಪ್ರಥಮ ಪರಿಷತ್ತೊಂದು ಲಖನೌದಲ್ಲಿ ಸೇರಿತು ಅಲ್ಲಿ ವಿಮರ್ಶಿತವಾದ ವಿಷಯವೇ ಜನಸಂಖ್ಯೆಯ ಸಮಸ್ಯೆ

ಹತ್ತು ವರ್ಷಗಳಿಗೊಮ್ಮೆ ಜನಸಂಖ್ಯೆ ಎಷ್ಟೆಂದು ಲೆಕ್ಕವಾಗುವುದು ಜನನ ಮರಣಗಳನ್ನು ಆಗಾಗಲಿ ರಿಕಾರ್ಡು ಮಾಡುತ್ತಿರುವರು ಮಹಾರೋಗಗಳೂ ಕ್ಷಾಮಗಳೂ ಉತ್ಪಾತಗಳೂ ಉಂಟಾಗಿ ಹಾವಳಿಯಾದುದರ ಲೆಕ್ಕಗಳೂ ಇವೆ ಇಷ್ಟೆಲ್ಲ ಜನರು ದುಡಿಯುವುದೇನನ್ನು, ನಿರುದ್ಯೋಗಿಗಳು ಎಷ್ಟು ಮಂದಿ, ಪರಿಹಾರ್ಯಗಳಾದ ಮರಣಗಳೆಷ್ಟು, ನಿರಕ್ಷರತೆ ಎಷ್ಟಿದೆ, ಇಷ್ಟು ಮುಂದಿಗೆ ಬೇಕಾಗುವ ಆಹಾರವಸ್ತುಗಳೂ ಸೌಕರ್ಯಗಳೂ ಸಾಕಷ್ಟಿವೆಯೋ, ಹೆಚ್ಚಾಗಬಹುದೋ, ಇತ್ಯಾದಿ ವಿಮರ್ಶೆ ಮಾಡಿ,-ಜನಸಂಖ್ಯೆ ಹೆಚ್ಚುತ್ತ ಬರಲಿ ದೇವರ ಸೃಷ್ಟಿಕ್ರಮವು ಸಾಗಲಿ ಎನ್ನುವವರೂ ಇದ್ದವರಿಗೇ ಕೂಳಿಗಿಲ್ಲ ಇನ್ನೇಕೋ ಸದಾಶಿವ ಎನ್ನುವವರೂ ತರ್ಕಿಸುತ್ತ, ಜನಸಂಖ್ಯಾ ವೃದ್ಧಿಯ ಅಭಿಪ್ರಾಯದಲ್ಲಿ ಇತ್ತಂಡಗಳಾಗಿವೆ

ಪಶುವಿಗೂ ಕಡೆಮೆಯಾಗಿರದ ಮನುಷ್ಯನು, ಪಶುಗಳಷ್ಟೆ ನೈಸರ್ಗಿಕವಾದ ಕಾಲಕ್ರಮ ಧರ್ಮದಂತೆ ವರ್ತಿಸಿದಲ್ಲಿ ಸಮಾಜಕ್ಕೇನೂ ಹಾನಿಬಾರದೆಂದೂ, ಬ್ರಹ್ಮಚರ್ಯಾದಿ ಧರ್ಮ ಸಮ್ಮತವಾಗಿರುವ ಉಪಾಯಗಳೇ ಜನಸಂಖ್ಯೆಯ ಮಿತಿಯನ್ನು ಕಾವಾಗಿ ಇಡುವುವೆಂದೂ, ಮಹಾತ್ಮಾಜಿಯವರಂತಹರೂ,ಸಂತಾನವರ್ಧನೆಗೊಂದು ನಿಯಮವಿರಬೇಕು ಎಂಬುದನ್ನು ಜನರು ಮರೆವ ಕಾರಣ,ಬ್ರಹ್ಮಚರ್ಯಾದಿ ವ್ರತಪಾಲನೆಯು ಸಾಧ್ಯವಲ್ಲದವರು ಕೃತಕೋಪಾಯಗಳಿಂದ ತಮ್ಮ ಲಾಲಸೆಯ ತೃಪ್ತಿಗೂ ಜನನಗಳ ಮಿತಿಗೂ ಅನುಕೂಲವಾಗಿ ವರ್ತಿಸದೆ ಸಂಖ್ಯಾಮಿತಿಗೆ ಬೇರೆ ಉಪಾಯವಿಲ್ಲವೆಂದು ಉದ್ದಾಮ ವಿಜ್ಞಾನಿಗಳೂ ಸುಧಾರಕರೂ ಸಾರುತ್ತಿರುವರು ಕುರುಡು ಬುದ್ಧಿಯ ಕ್ರಿಮಿ ಕೀಟಗಳು ಸೃಷ್ಟಿಯಾಗುವ ಬದಲಾಗಿ, ಕಾಲದೀಪಕಳಾಗಿ ಕೆಲವರೇ ಜನ್ಮವೆತ್ತುವುದು ನ್ಯಾಯವೆಂದೂ; ದುಡಿತಕ್ಕೆ ತಕ್ಕಂತೆ ಸಂಸಾರದ ಪರಿಮಿತಿಯಿರುವುದು ನ್ಯಾಯವೆಂದೂ, ಸಂಸಾರವು ಬೆಳೆಯುತ್ತ ಬರುವಂತೆ ಕುಟುಂಬದ ಆಯುವೂ ಕಡಮೆಯಾದರೆ ಯಾರಿಗೂ ಕ್ಷೇಮವಲ್ಲೆಂದೂ ಸಮಾಜ ಶಾಸ್ತ್ರಜ್ಞರು ಪರಾಮರ್ಶೆ ಕೊಡುತ್ತಿರುವರು, ಹಲವು ಮತಾವಲಂಬಿಗಳ ದೃಷ್ಟಿಯಲ್ಲಿ ಸಂತಾನದಮಿತಿಯ ಕೃತ್ರಿಮೋಪಾಯಗಳು ಧರ್ಮವಿರುದ್ಧವಾಗಿವೆ ಎಂದೂ ಆಕ್ಷೇಪಗಳು ಕೇಳಿಸುತ್ತಲೇ ಇವೆ.

“ಶಿಕ್ಷಣವೂ, ಆರೋಗ್ಯ ರಕ್ಷಣೆಯೂ, ನೂತನ ಚಿಕಿತ್ಸಾ ಕ್ರಮಗಳೂ ಹಳ್ಳಿಗಳಿಗೆ ಮುಟ್ಟಿರುವ ಪ್ರಯುಕ್ತ, ಮಿತಸಂತತಿಯ ಕ್ರಮಗಳನ್ನು ಹಳ್ಳಿಗಳಲ್ಲಿ ಬಳಕೆಗೆ ತರುವುದು ಕಷ್ಟವಾಗಿಲ್ಲ ಅದರಂತೆ ಆದಾಯಕ್ಕೆ ತಕ್ಕಷ್ಟೇ ಮಂದಿ ಇದ್ದು ಜೀವಿಸುವ ಹಾಗೆ ಕುಟುಂಬಗಳನ್ನು ತಿದ್ದಿ ತರಲು ಬೋಧಿಸುವುದೂ ಕಷ್ಟವಾಗದು ಇವೆರಡು ರೀತಿಗಳಿಂದ, ತೀರ ಪಾಮರರಾದವರೂ ಸಹ ಸಮಾಜ ಶಾಸ್ತ್ರದ ನಿಯಮಗಳನ್ನು ಅನುಸರಿಸುವಂತೆ ಮಾಡಿದರೆ, ಆಗಲೇ ಈ ದೇಶದ ಅಭ್ಯುದಯಕ್ಕೆ ಪ್ರಾರಂಭವಾಗುವುದು” ಎಂದು ಒಬ್ಬರು ಘಂಟಾಘೋಷವಾಗಿ ಸಾರಿರುವರು ಆದರೆ,-

ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಜನಸಂಖ್ಯೆಯು ೧೦೦ಕ್ಕೆ ೧೧೦ ಮಾತ್ರವಾಗಿದೆ. ಇಷ್ಟನ್ನು ಕಂಡು, ‘ಹತ್ತು ಐವತ್ತು ನೂರು ವರ್ಷಗಳಾಗುವಷ್ಟರಲ್ಲಿ ನಮ್ಮ ಜನಸಂಖ್ಯೆ ದುಬಾರಿಯಾಗುವುದೆಂದು ಎಷ್ಟೋ ಮಂದಿ ದಿಗಿಲುಹೊಂದಿರುವರು ಆದರೆ, ಅಷ್ಟು ಜನಸಂಖ್ಯೆ ಹೆಚ್ಚುವ ದಾಮಾಶಾಯದಲ್ಲಿಯೆ ಆಹಾರ ವಸ್ತುಗಳೂ ಹೆಚ್ಚಾಗಿ ಉಂಟಾಗುತ್ತಿವೆಯೇ? ಎಂಬುದನ್ನು ನೋಡಬೇಕಾಗಿದೆಯಲ್ಲವೆ? ೨೫ ವರ್ಷಗಳಲ್ಲಿ ಆಹಾರ ವಸ್ತುಗಳು ೧೦೦ಕ್ಕೆ ೧೨೯ರಷ್ಟಾಗಿ ಹೆಚ್ಚಿರುವಾಗ, ೨೫ ವರ್ಷಗಳಲ್ಲಿ ಜನಸಂಖ್ಯೆಯು ೧೦೦ಕ್ಕೆ ೧೧೩ರಷ್ಟೆ ಆಗಿ ಹೆಚ್ಚಿದೆ ಎಂದರೆ, ಜನಸಂಖ್ಯೆಯಲ್ಲಿ ಎಷ್ಟೊ ಭಾಗವು ಹೆಚ್ಚಿನ ಆಹಾರ ವಸ್ತುಗಳನ್ನು ಉಪಯೋಗಿಸುತ್ತಿಲ್ಲ ಎಂದೇ ಹೇಳಬೇಕಲ್ಲವೆ? ಇದೂ ಅಲ್ಲದೆ, ಜನರಲ್ಲಿ ಶಿಕ್ಷಣವೂ, ಆರೋಗ್ಯ ಪಾಲನೆಯ ನಿಯಮಗಳೂ ಹರಡುತ್ತ ಬರುವಂತೆ, ಅವರು ಹೆಚ್ಚಾಗಿ ಬೇಕಾಗುವಷ್ಟು ಆಹಾರವನ್ನು ತಿನ್ನಲು ಅಪೇಕ್ಷಿಸುವರು, ಅದಕ್ಕಾಗಿ, ದುಡಿಯುವರು ಅವರ ಆಯುವೂ ಹೆಚ್ಚುವಂತೆ ಸಾಧನಗಳಾಗಬೇಕು ಕೃಷಿಯ ಕ್ರಮಗಳೂ,ವ್ಯಾಪಾರಾನುಕೂಲತೆಗಳೂಸುಧಾರಣೆ ಹೊಂದುತ್ತ ಬರುವಂತೆ, ಆಗ ಕೃಷಿಗೆ ಒಳಪಟ್ಟಿರದ ಜಮೀನನ್ನು ಜನರು ಕೃಷಿಮಾಡಿ, ಇನ್ನಷ್ಟು ಹೆಚ್ಚಿನ ಸುಖದಿಂದ ಜೀವನಮಾಡಲು ಸಿದ್ಧರಾಗುವರು ಬಂಗಾಳದಷ್ಟೆ ದಟ್ಟ ಜನಸಂಖ್ಯೆಯ ಪ್ರಾಂತ್ಯವಿಲ್ಲ, ಅಲ್ಲಿ ಈಗಲೇ ಅಲ್ಲಿರುವ ಜನಸಂಖ್ಯೆಯ ಇಮ್ಮಡಿಯಷ್ಟನ್ನು ಸಾಕಲು ಬೇಕಾಗುವಷ್ಟು ಆಹಾರ ವಸ್ತುಗಳು ಉತ್ಪನ್ನವಾಗುತ್ತಿವೆ ಹೀಗಿರುವಾಗ, ಜನಸಂಖ್ಯೆಯ ಸಮಸ್ಯೆಯೊಂದೊಂದು. ಗಾಬರಿಯ ಪ್ರಕರಣವನ್ನು ಹುಟ್ಟಿಸಿ ಫಲವಿಲ್ಲ

ಜನಸಂಖ್ಯೆಯು ಹೆಚ್ಚುವ ಭೀತಿ ಹಾಗಿರಲಿ, ಜನರಿಗೆ ಆಯುವು ಹೆಚ್ಚಾಗುವ ವಿಧಾನಗಳು ಇನ್ನೂ ಏಕೆ ಹೆಚ್ಚುವುದಿಲ್ಲ ಎಂಬ ಭೀತಿ ಇರಲಿ, ಜನರು ಕಡಿಮೆಯಾಗುವಂತೆ ಏನು ಮಾಡೋಣ ಎಂದು ಚಿಂತಿಸುವ ಬದಲು, ಜನರಿಗೆ ಆಹಾರವು ಹೆಚ್ಚಾಗಿ ಅವರಿಗೆ ದೊರೆಯುವಂತೆ ಏನು ಮಾಡೋಣ ಎಂಬ ಚಿಂತೆ ಇರಲಿ.

ಸ್ಫುಟವಿಚಾರಗಳು

ಹಿಟ್ಲರ ಉವಾಚ

ತಮ್ಮ ನಡಿಗೆಯನ್ನು ತಿದ್ದಿ ಕಲಿಸಿಕೊಡಬೇಕೆಂದು, ಹಿಂದೀಯರು ಎಂದಿಗೂ ಪ್ರತಿನಿಧಿಗಳನ್ನು ಇಂಗ್ಲೆಂಡಿಗೆ ಕಳಿಸಿದ್ದಿಲ್ಲ, ಇಂಗ್ಲಿಷರೇ ಇಂಡಿಯಕ್ಕೆ ತೆರಳಿ ಹಿಂದೀಯರಿಗೆ ನಡೆ ಕಲಿಸಿದರು ಎಂದು ಆರು ಸಾವಿರ ನಾಜಿ ಯುವಕರಿಗೆ ಹಿಟ್ಲರ್ ಸಾಹೇಬರು ಬೋಧಿಸಿದರು ಶಾಂತಿಗಾಗಿ ‘ಅಳುವ ಜನಾಂಗಗಳು’ ಸಾಧಿಸತೊಡಗಿದರೆ, ಅಥವಾ ವಸಾಹತುಗಳು ತಾವೇ ಆಳಿಕೊಳ್ಳಲೆಂದು ಬಿಟ್ಟರೆ, ತಮಗೆ ಇನ್ನು ಯುರೋಪೇ ಬೇಡವೆಂದು ವಸಾಹತುಗಳು ಎಂದಾವು ಎಂದೂ, ಲೀಗ್ ಆಫ್ ನೇಶನ್ಸ್ ಕೂಟದ ಸಹಾಯವು ಬೇಡವಾಗಿರುವಷ್ಟು ಬಲವು ಜರ್ಮನಿಗಿರುವುದೆಂದೂ, ಅದಕ್ಕಿನ್ನು ಯಾವ ಕರಾರುಗಳೂ ಆಗತ್ಯವಿಲ್ಲವೆಂದೂ, ಯುರೋಪೀಯರಿಗೆ ಇತರ ಭೂಭಾಗಗಳಲ್ಲಿ ನೆಲೆ ನಿಂತು ಅವನ್ನು ಆಳಲು ಹಕ್ಕು ಇರುವುದೆಂದೂ, ಅವರಿಗೇ ಮಾತ್ರ ಪೌರುಷತ್ವದ ಅಥವಾ ವೀರತೆಯ ಭಾವನೆಗಳು ಇರುವುವೆಂದೂ, ಬಿಳೀ ಜನಾಂಗಗಳು ಆಳುವುದಕ್ಕಾಗಿಯೇ ಸೃಷ್ಟಿ ಹೊಂದಿದುವೆಂದೂ, ಇವರ ಇತರ ವಚನಗಳು ಹಿಟ್ಲರರ ಜರ್ಮನಿಯಿಂದ ಹಟ್ಲೀರಿ ಮಾತ್ರ ಇಲ್ಲಿಗೆ ಬರುವುದಲ್ಲ, ಇಂತಹ ಭಾವನೆಗಳಿಂದಾಗಿ ಏನೇನು ಬರುತಿತ್ತೋ? ಈಗ ಕಾಣುವುದಿಲ್ಲವೆ,—ಮಹಾಯುದ್ಧವು ಏತರಿಂದಾಗಿದ್ದಿರೆಂದು? ಆ ಚರಿತ್ರೆಯಿಂದ ಪಾಠವನ್ನೂ ಕಲಿಯದೆ, ಹಿಂದೀ ಚರಿತ್ರೆಯ ವಿಚಾರಗಳೂ ತಿಳಿಯದೆ, ಇರುವ ಡಿಕ್ಟೇಟರನಿಂದ ಇಂತಹ ಸೂಚನೆಗಳೇ ಜನರಿಗೆ ಹೊರಬೀಳದೆ ಮತ್ತೇನು ತಿಳಿದು ಬಂದೀತು? ಯುರೋಪಿನಲ್ಲಿ ಕೈಕಾಲು ನೀಡಲು ಅವಕಾಶವಿಲ್ಲದೆ ಇಷ್ಟು ಮಾತು, ನಿಜವಾಗಿಯೂ, ಹಿಂದೀಯರು ಅದರಿಸಿರುವುದಕ್ಕೆ ಇಷ್ಟು ಕೃತಜ್ಞತೆ ಮುಸಲೀನಿಯೂ ಕರೀಬಣ್ಣದವರನ್ನು ಕುರಿತಾಡಿ, ಈಗ ಚಡಪಡಿಸಿರುವುದೂ ಕಣ್ಣಿಗೆ ಕಾಣದೆ, ಡಿಕ್ಟೇಟರ ಬಂಧುವಿಗೆ?

ಒಟ್ಟಾವಾ ಕರಾರಿನ ಫಲ

ಏನೆಂದು ಈಗ ವಿಮರ್ಶೆಗೆ ಬರಬೇಕಾಗಿರುವಾಗ, ಏಳು ಲೇಖಗಳನ್ನು ಇದೇ ವಿಚಾರವಾಗಿ ಸರಕಾರವು ಪ್ರಕಟಿಸಿರುವುದು ಇತ್ತ, ಹಿಂದೀ ವಾಣಿಜ್ಯ ಸಮಿತಿಗಳ ಸಮ್ಮೇಲನವು, ಹಲವು ಅಭಿಪ್ರಾಯಗಳನ್ನು ಪ್ರಕಟಿಸಿರುವುದು ಸಾಮ್ರಾಜ್ಯದೊಳಗೆ ವ್ಯಾಪಾರ ನಡೆವ ಈ ಕರಾರನ್ನು ಕಂಡು, ಸಾಮ್ರಾಜ್ಯ ಬಾಹಿರರಾಗಿರುವ ಸರಕಾರಗಳು ತಕರಾರನ್ನು ಪ್ರಾರಂಭಿಸಿ, ಹಿಂದೀ ವ್ಯಾಪಾರವನ್ನು ಕೆಡಿಸಿವೆ ಎಂದೇ ಸಮ್ಮೇಲನದ ದೂರು ಸಾಮ್ರಾಜ್ಯದೊಳಗಣ ವಸಾಹತುಗಳ ಸರಕಾರಗಳಾವುವೂ ತಮ್ಮೊಳಗೆ ನಡೆವ ವ್ಯಾಪಾರದ ಸಂಬಂಧವಾದಯಾವ ಸುಂಕಗಳನ್ನೂ ಕಡಿಮೆ ಮಾಡಿಲ್ಲವೆಂಬುದು ಸರ್ವ ಸಮ್ಮತವಾದ ಆಕ್ಷೇಪ, ಇವುಗಳು ಮಾಡಿರುವ ರಿಯಾಯತಿಗಳನ್ನು ನೋಡಿ, ಇತರ ಸರಕಾರಗಳಾದರೂ ತಾವಾಗಿ ರಿಯಾಯತಿಗಳನ್ನು ವ್ಯಾಪಾರದ ಸಲುವಾಗಿ ಮಾಡಿಕೊಟ್ಟಿಲ್ಲ ಒಟ್ಟಾವಾ ಕರಾರನ್ನು ಅನುಮೋದಿಸಿದವರೇ ಆದರೂ, ಈಗ ಅದರಲ್ಲಿ ಹುರುಳಿಲ್ಲವೆನ್ನುತ್ತಾರೆ ಕಾಫಿ, ಲಿನ್ಸೀಡ್ ಎಣ್ಣೆ, ಇವೆರಡೇ ಸರಕುಗಳನ್ನು ಕುರಿತು ಅಂಕೆ ಸಂಖ್ಯೆಗಳನ್ನು ನೋಡಿ, ಅವರೂ ಬಲವಾಗಿ ಕರಾರನ್ನು ಆಕ್ಷೇಪಿಸುತ್ತಾರೆಂಬಂತೆ ತೋರುತ್ತಿದೆ ಇನ್ನು ಇದನ್ನು ತಿದ್ದುವ ಬದಲಾಗಿ, ರದ್ದುಗೊಳಿಸುವುದೇ ಉತ್ತಮವೆನ್ನಬೇಕೆಂದೇ ಬಹುಜನರ ಆಕ್ಷೇಪದ ಸೂಚನೆ

ಹಿಟ್ಲರಿಗೆ ಉತ್ತರ

ಜೋರ್ಜ್ ಸ್ಲೊಕೊಂಬರೆಂಬವರು ಡೈಲಿ ಹೆರಲ್ಡ್ ಪತ್ರಿಕಾ ಲೇಖಕರು ಇವರು ಪ್ರಕಟಿಸಿರುವ ಗ್ರಂಥವೊಂದರಲ್ಲಿ, ಹಿಟ್ಲರ ಸಾಹೆಬನು ಸೂಚಿಸಿದ “ಇತರ ಜನಾಂಗಗಳನ್ನು ಆಳುವ ಬಿಳೀ ಜನರ ಜನ್ಮಸಿದ್ಧ ಹಕ್ಕಿನ ವಿಚಾರ”ವಾಗಿಯೆ ಎಂಬಂತೆ ಕೆಲ ಮಾತುಗಳಿವೆ. “ತನ್ನ ಧರ್ಮಶಾಸ್ತ್ರಗಳ ವಚನಗಳನ್ನು ಮೀರಬಾರದೆಂಬ ಕಟ್ಟಿನಿಂದ ಮಾತ್ರ ಹಿಂದುಗಳು ಹಿಂದುಳಿದಿರುವರಲ್ಲದೆ,ಇಲ್ಲದಿದ್ದರೆ ಎಂದೋ ಪ್ರಪಂಚವನ್ನು ಗೆಲ್ಲುತ್ತಿದ್ದರು. ಭಾಷೆಗಳನ್ನೂ ವಿಜ್ಞಾನ ಶಾಸ್ತ್ರಭಾಗಗಳನ್ನೂ ಆಧುನಿಕ ಶೋಧಗಳನ್ನೂ ಸಹ ಹಿಂದುವು ಅತಿಶೀಘ್ರವಾಗಿ ಕಲಿತುಕೊಳ್ಳುವನು. ಬ್ರಿಟಿಷರ ಆಟಗಳಲ್ಲೂ ಅವನು ಅದ್ವಿತೀಯನು ಮಾಡುವುದೇನು? ಅವನು ಕಡು ಧರ್ಮವಾದಿ, ಆತ್ಮವಿಚಾರಪರನು ಕರ್ಮಬಂಧನ ತತ್ವವೇ ಅವನನ್ನು ಬಾಧಿಸಿದೆ. ಧರ್ಮ ಕರ್ತವ್ಯ, ಅಪರಾಧ, ಪಾಪಪುಣ್ಯ ಇವುಗಳ ವಿಚಾರಗಳಿಂದಾಗಿಯೆ ತನ್ನ ಸಂಕಷ್ಟಗಳನ್ನು ಅನುಭವಿಸಿ, ದೈವದ ಮೇಲೆ ಭಾರವನ್ನು ಇಟ್ಟು ಅವನು ಇನ್ನೂ ಜೀವಿಸಿರುವನು ಇಂತಹ ಜನಾಂಗವು ಎಂದೂ ನಿರ್ಮೂಲವಾಗದು. ಹಿಂದುವು ಸೋತುದೂ ಇಲ್ಲ, ಗೆದ್ದುದೂ ಇಲ್ಲ. ಅಸ್ಥಿ ಖಂಡದ ಮೇಲೆ ಸಾಗಿ ಹೋಗುವ ಪ್ರತಾಪಿಗಳ ಅಥವಾ ಪ್ರಬಲಾಭಿಪ್ರಾಯಗಳ ಮೇಲೆ ದಿಗ್ವಿಜಯ ಹೊಂದುವಂತಹ ಅದಾವುದೋ ಒಂದು ಅಪ್ರತಿಮ ತತ್ವವು ಆತನಲ್ಲಿದ್ದು, ಅವನು ಕದಲದೆ ಇರುವನು ಹಿಂದುವಿನಂತಹ ನಮ್ರನೂ ಇಲ್ಲ, ಅವನಷ್ಟು ಗೌರವಾನ್ವಿತನೂ ಇಲ್ಲ ಈಗ ತಾನೆ ನವಜೀವನವನ್ನು ಆರಂಭಿಸುವ ಮುಹೂರ್ತವು ಅವನಿಗೆ ಒದಗಿದೆ ದೇಶವೇ ಪ್ರಸವವೇದನೆ ತಳೆದಿದೆ ಪ್ರಾರ್ಥನೆಗಳೂ ಆಶಾಕಾಂಕ್ಷೆಗಳೂ ಭರವಸೆಗಳೂ ಈಗ ಹಿಂದುವಿನ ಪ್ರಾಣದಿಂದ ಉಚ್ಚರಿತವಾಗುತ್ತಿವೆ ಭಾರತ ವರ್ಷವು ಪುನಃ ಜೀವನಲಾಭಕ್ಕಾಗಿ ಹೋರಾಡುತ್ತಿದೆ” ಹಲವು ಹಿಟ್ಲರರ ಮಾತುಗಳನ್ನು ಅಸಡ್ಡೆಯಿಂದ ನೋಡುವ ಧೈರ್ಯವು ಹಿಂದುವಿಗಿದೆ

ಶಿಕ್ಷಣದಲ್ಲಿ ತಿದ್ದುಪಾಟುಗಳು

“ಜನಾಂಗದಲ್ಲಿ ಶಿಕ್ಷಣವು ಹೆಚ್ಚುವಂತೆ ಸರ್ವಸಂಘನೆಗಳಲ್ಲ ಮಾಡುವ ಕರ್ತವ್ಯವು ಸರಕಾರದ್ದೇ ಆಗಿದೆ, ಬೋರ್ಡುಗಳು ಖಾಸಗಿ ಆಡಳಿತಗಳು ಮೊದಲಾದವೆಲ್ಲವು ಸರಕಾರದೊಡನೆ ಸಹಕರಿಸಿ ಈ ಕರ್ತವ್ಯವನ್ನು ಪಾಲಿಸಲು ಮುಂದೆ ಬರಬೇಕು” ಎಂದು ಇಂಗ್ಲಿಷ ವಿದ್ಯಾಖಾತೆಯು ಹೊಸ ಸರ್ಕಲಾರನ್ನು ಹೊರಡಿಸಿಯದೆ ನಮ್ಮ ದೇಶದಲ್ಲಿ, ಸರಕಾರವು ಶಿಕ್ಷಣ ವಿಚಾರದಲ್ಲಿ ಬೋರ್ಡುಗಳು ಮೊದಲಾದುವನ್ನು ಪಾಲುಗಾರರೆಂದು ಎಣಿಸದೆ, ಪ್ರೋತ್ಸಾಹಕವಾಗಿರದೆ, ಬರೀ ‘ಒಂದನೆ ಮೊಕ್ತೇಸರಿಕೆ’ ಮಾತ್ರ ವಹಿಸಿದೆ ಶೈಶವದಿಂದಲೂ ೧೬ ವರ್ಷ ವಯಸ್ಸಾಗುವ ತನಕ ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಜವಾಬುದಾರಿ ತನ್ನದೆಂದು ಇಂಗ್ಲಿಷ ವಿದ್ಯಾ ಇಲಾಖೆಯು ಖಚಿತಪಡಿಸಿರುವುದು, ಸೆಕೆಂಡರಿ ತರಗತಿಗಳಲ್ಲಾದರೂ, ವಿದ್ಯಾರ್ಥಿಯು ತನ್ನ ರಕ್ಷಕರ ಸ್ಥಿತಿಗೆ ಸರಿಯಾಗಿಯೆ ಸಂಬಳ ತೆರಬೇಕಾಗಿದೆ, ವೇತನಗಳ ಸಂಖ್ಯೆಯನ್ನು ಸರಕಾರವು ಹೆಚ್ಚಿಸಿದೆ; ಪ್ರಾಥಮಿಕ ಶಾಲೆಗಳ ಕಟ್ಟಡಗಳಿಗೆ ಸರಕಾರವು ತೆರುತಿದ್ದ ಸೇಕಡಾ ೨೦ರ ಗ್ರೇಂಟನ್ನು ಈಗ ೫೦ಕ್ಕೆ ಏರಿಸಿದೆ, ಆಗಾಗ ತಮ್ಮ ಸರಹದ್ದಿನಲ್ಲಿ ವಿದ್ಯಾ ಪ್ರಚಾರವು ಎಷ್ಟಾಗಿದೆಯೆಂದು ವಿಮರ್ಶಿಸಲು ಪ್ರತಿಯೊಂದು ಬೋರ್ಡು ಸಂಸ್ಥೆಯೂ ಕಮಿಟಿಗಳನ್ನು ನೇಮಿಸಬೇಕಾಗಿದೆ ಸಕಲರಿಗೂ ವ್ಯಾಯಾಮ ಶಿಕ್ಷಣವು ದೊರೆವಂತೆ, ೧೨ ಮಿಲ್ಲಿಯ ಪವನುಗಳನ್ನು ಕೆಲವೇ ವರ್ಷಗಳಲ್ಲಿ ವ್ಯಯಿಸಬೇಕಾಗಿಯೂ ನಿರ್ಧಾರವಾಗಿದೆ ವೃತ್ತಿ ಶಿಕ್ಷಣದಿಂದಾಗಿ ಶಿಕ್ಷಿತರಲ್ಲಿ ನಿರುದ್ಯೋಗಿಗಳು ಇರದಂತೆ ಮಾಡಲು ವ್ಯವಸ್ಥೆ ಮಾಡಲಾಗಿದೆ ನಮ್ಮಲ್ಲಿ ಇವೊಂದೂ ಲಕ್ಷಣಗಳು ಈಗ ಮಾತ್ರವೆ ಅಲ್ಲದೆ, ಇನ್ನೆಷ್ಟು ವರ್ಷಗಳಲ್ಲಿ ಕಿಂಚಿತ್ತಾದರೂ ತಲೆದೋರುವಂತೆ, ಬ್ರಿಟಿಷವಿದ್ಯಾಖಾತೆಯ ಪ್ರಭಾವವು ಹೇಗೆ ಪರಿಣಮಿಸಬಹುದು?

ಮಂಗಳೂರು.

ಹಿಂದೀ ವಿದ್ಯಾರ್ಥಿಗಳಿಗೆ ಸುಸಂದರ್ಭ

ಇದೇ ಬರುವ ಮಾರ್ಚಿ ತಿಂಗಳ ತಾ ೧೮ ಬುಧವಾರ ದಂತು ಇಲ್ಲಿಯ ಹಿಂದೂಸ್ಥಾನ ಸಿನೇಮ (ಶ್ರೀ ಚಿತ್ರ ಟಾಕೀಸ್) ಥಿಯೇಟರಿನ ಎದುರುಗಡೆಯ (ಅಲಕೆ ರಸ್ತೆಯಲ್ಲಿರುವ) ಸಿಟಿ ಆರ್ಯಸಮಾಜ ಮಂದಿರ ಅಥವಾ ಸ್ವತಂತ್ರ ಪ್ರಚಾರಕ ಕಾರ್ಯಾಲಯದಲ್ಲಿ ಹಿಂದೀ ರಾತ್ರಿಶಾಲೆಯು ಪ್ರಾರಂಭಿಸಲ್ಪಡುವುದು. ಪ್ರತಿ ದಿನ ಸಾಯಂಕಾಲ ಗಂಟೆ ೬-೩೦ರಿಂದ ೮-೪೫ರ ವರೆಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ ಕ್ಲಾಸುಗಳು ನಡೆಸಲ್ಪಡುವುದು. ಹಗಲುಹೊತ್ತಿನಲ್ಲಿ ಕಲಿಯುವವರಿಗೆ ಪ್ರತಿ ವಾರಗಳಲ್ಲಿ ಮೂರು ದಿವಸ ನಡೆಸಲಾಗುವುದು. ಮಹಿಳೆಯರಿಗೂ ಪ್ರತ್ಯೇಕ ಸುವ್ಯವಸ್ಥಿತವಾದ ವ್ಯವಸ್ಥೆಯನ್ನು ಮಾಡಲಾಗುವುದು. ಅಸಹಾಯ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಬೇಕಾಗುವ ಪುಸ್ತಕಗಳನ್ನು ಇಲ್ಲಿಂದಲೇ ಒದಗಿಸಿಕೊಡಲಾಗುವುದು. ಈ ಸುಸಂದರ್ಭವನ್ನು ಎಲ್ಲರೂ ಉಪಯೋಗಿಸಿಕೊಳ್ಳಬೇಕಾಗಿ ವಿನಂತಿ. (ವಿಶೇಷ ಮಾಹಿತಿಯ ಬಗ್ಗೆ ನಮ್ಮಲ್ಲಿ ಬಂದು ಮುಖತಃ ವ ಪತ್ರಮುಖೇನ ತಿಳಿದುಕೊಳ್ಳಬಹುದು) ಎಂದು ಪಿ. ಲಕ್ಷ್ಮಣದೇವ ವಿದ್ಯಾರ್ಥಿ ವ್ಯವಸ್ಥಾಪಕ, ಭಾರತ ಭಾಷಾ ರಾತ್ರಿಶಾಲೆ, ಇವರು ತಿಳಿಸುತ್ತಾರೆ.

ಇದೇ ತಿಂಗಳ ತಾ ೯ನೇ ಆದಿತ್ಯವಾರ ಸಾಯಂಕಾಲ ಗಂಟೆ ೬-೩೦ಕ್ಕೆ ಇಲ್ಲಿಯ ಸಿಟಿ ಆರ್ಯಸಮಾಜ ಮಂದಿರದಲ್ಲಿ ಶ್ರೀಮಾನ್ ಗೋಪಾಲಕೃಷ್ಣರಾವ್ ಇವರು ಅಸ್ಪೃಶ್ಯತೆಯ ಕುರಿತು ಭಾಷಣಮಾಡುವರು. ಸರ್ವರಿಗೂ ಸ್ವಾಗತವಿದೆ ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ಶ್ರೀ ಕೃಷ್ಣಾ ಸಿನೆಮಾದಲ್ಲಿ— ಈಗ ಪ್ರದರ್ಶಿಸಲ್ಪಡುತ್ತಿರುವ ಕನ್ನಡ ಮಾತಾಡುವ "ಸದಾರಮೆ" ಚಿತ್ರದ ನಂತರ ಬೆಳ್ಳಿಯ ಜಾಹೀರಾದ ಸಲೀತಾದೇವಿಯು ಅಭಿನಯಿಸಿದ ಹಾಸ್ಯ ಅಭಿನಯ ಹಾಡುಗಾರಿಕೆ ಧೀರ ದೃಶ್ಯಗಳು ಉತ್ತಮ ಕೋಲಾಹಲ ಮಂತ್ರದ ಚಮತ್ಕಾರಗಳಿಂದ ತುಂಬಿದ ಉತ್ತಮ ಚಿತ್ರವಾದ "ಸಿಲ್ವರ್ ಕಿಂಗ್" ಪ್ರದರ್ಶಿಸಲ್ಪಡುವುದು. ಸಲೀತಾದೇವಿಯ ಜತೆಗೆ ಮಿಸ್ ಮೋತಿಯೂ ಟ್ ಮುಂತಾದವರೂ ಅಭಿನಯಿಸುವರು.

ಇದೇ ತಾ ೧೮ರಿಂದ ನಾಟಕ ಶಿರೋಮಣಿ—ಕೀ ಶೇಷ ವರದಾಚಾರ್ಯರ ಸಮ್ಮಾನಿತರಿಂದಲೂ ಶಿಷ್ಯವರ್ಗದವರಿಂದಲೂ ಅಭಿನಯಿಸಲ್ಪಟ್ಟ ಉತ್ತಮ ಕನ್ನಡ ಚಿತ್ರವಾದ "ಭಕ್ತಕುಮಾರ"ವು ಮಂ ಇಂಡಿಯ ಟಿಲ್ಲ ವರ ಶ್ರೀ ಗೋವರ್ಧನ ದೇವಸ್ಥಾನದ ಸಹಾಯಾರ್ಥವಾಗಿ ಪ್ರದರ್ಶಿಸಲ್ಪಡುವುದು. ಇದರಲ್ಲಿ ನಾಟಕ ಶಿರೋಮಣಿಗಳ ೬ ವರ್ಷದ "ಮುತ್ತು" ಮತ್ತು ೪ ವರ್ಷದ "ತಾರಾ" ಎಂಬ ಇಬ್ಬರು ಚಿಕ್ಕ ಮಕ್ಕಳೂ ರಂಗಭೂಮಿಯಲ್ಲಿ ಹೆಸರುವಾಸಿತ ಜಿ ನಾಗೇಶರಾವ್ ಮಂಗಳೂರ ಮುಂರಾವ್ ಕಮಲಲಕ್ಷ್ಮಿ ದೇವಿ ಎಂ ಎ ಮುಂತಾದವರು ಅಭಿನಯಿಸಿರುವರು.

ಜನನ ಮರಣ.

ಜನವರಿ ತಾ ೩೧ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೬ ಮರಣಗಳೂ ೪೭ ಜನನಗಳೂ ಫೆಬ್ರವರಿ ತಾ ೧ಕ್ಕೆ ಅಂತ್ಯವಾಗುವ ವಾರದಲ್ಲಿ ೧೫ ಮರಣಗಳೂ ೪೭ ಜನನಗಳೂ ಆದುವು.

ಪಂಡಿತ ರಾಘವಾಚಾರಿ ಸ್ಮಾರಕ ನಿಧಿಗೆ

ಈ ವರೆಗೆ ಒಟ್ಟು ೭೫ ೧೬೬-೧೩-೦ ಶೇಖರಿಸಲ್ಪಟ್ಟಿರುವುದು. ಈ ಹಣವನ್ನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ವಶ ಕೊಟ್ಟು ಅದರ ಬಡ್ಡಿಯಿಂದ ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ಸಭೆಯ ಕಡೆಯಿಂದ ನಡೆಯುವ ಹಿಂದೀ ರಾಷ್ಟ್ರಭಾಷಾ ಪರೀಕ್ಷೆಯಲ್ಲಿ, ದಕ್ಷಿಣ ಭಾರತದಲ್ಲಿ ಮತ್ತು ದಕ್ಷಿಣ ಕನ್ನಡದಲ್ಲಿ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗುವ ಎರಡು ವಿದ್ಯಾರ್ಥಿಗಳಿಗೆ ಬೆಳ್ಳಿಯ ಪದಕ ಯಾ ಹಿಂದೀ ಪುಸ್ತಕಗಳ ಬಹುಮಾನವನ್ನು ಕೊಡುವುದಾಗಿ ನಿಶ್ಚೈಸಲ್ಪಟ್ಟಿದೆ. ನಿಧಿಗೆ ಉದಾರ ಸಹಾಯಮಾಡಿದವರೆಲ್ಲರಿಗೂ ಸ್ಮಾರಕ ಸಮಿತಿಯು ತುಂಬಾ ಆಭಾರಿಯಾಗಿದೆ. ದಿವಂಗತರ ಅನೇಕ ವಿದ್ಯಾರ್ಥಿಗಳನ್ನೂ ಸ್ನೇಹಿತರನ್ನೂ ಹಾಗೂ ಇತರ ಹಿತೈಷಿಗಳನ್ನೂ ಸ್ವತಃ ಕಂಡು ವರ್ಗಣೆಯನ್ನು ತೆಗೆದುಕೊಳ್ಳುವರೆ ಅಸಾಧುಕೂಲವಾಗಿರುವುದು. ಸ್ಮಾರಕನಿಧಿಗೆ ತಮ್ಮ ಕೈಲಾದ ಸಹಾಯವನ್ನು ಮಾಡಬೇಕೆಂದಿರುವವರು ತಮ್ಮ ಹಣವನ್ನು ಪ್ರಧಾನ ಕಾರ್ಯದರ್ಶಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಜಿ ಟಿ ಮದ್ರಾಸು, ಅವರಿಗೆ ಕಳುಹಿಸಿಕೊಡಬಹುದು ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

ತಾಲೂಕುಗಳಿಂದ.

ಅಜೆಕಾರು— ತಾ. ೧-೨-೩೬ರಲ್ಲು ಇಲ್ಲಿಂದ ಕಾರ್ಕಳಕ್ಕೆ ವರ್ಗವಾಗಿ ಹೋಗುವ ಎಕ್ಸೈಜ್ ಸಬ್ ಇನ್ಸ್ಪೆಕ್ಟರ್ ಶ್ರೀ ಎನ್ ಶಿವಶಂಕರ ಮಸೂರರಿಗೆ ವಿದಾಯವನ್ನೀಯಲು ಊರ ಪ್ರಮುಖರ ಆದಿಂದು ಸಭೆಯು ಸ್ಥಳೀಯ ಶಾಲಾಮಂದಿರದಲ್ಲಿ ಜರಗಿತು. ಶ್ರೀಯುತರು ಸಿಪ್ಪತ್ತಬಾತಿಗಳಿಂ ಕರ್ತವ್ಯದಕ್ಷರೂ ಆಗಿದ್ದು, ಸಕಲ ಜನ ದುಚ್ಚಿಕೆಗೆ ಪಾತ್ರರಾಗಿದ್ದ ವಿಷಯ ಶ್ರೀ ಕೆ ಗೋಪಾಲಶೆಟ್ಟಿ ಮತ್ತು ಹೆಡ್ ಮಾಸ್ತರರಾದ ದೇವರಾಯರು ಭಾಷಣಮಾಡಿದರು. ತದನಂತರ ಟೀ ಪಾರ್ಟಿ ಸತ್ಕಾರವಾಗಿ ಸಭೆಯು ಚದರಿತು.

ಅಜೆಕಾರ ಸಹಕಾರ ಸಂಘವು ಈಗ ಸ್ವಲ್ಪ ಚೇತರಿಸಿಕೊಂಡು ಹೊಸ ಪಟಿವಾಟು ಮಾಡುವಂತಿದೆ. ಹಿಂದಿನ ಘಟನೆಯನ್ನು ನೆನಪಿಟ್ಟು ಈಗಿನ ಪಂಚಾಯತರು ಕಾರ್ಯತತ್ಪರರಾಗಿರುವುದು ಲೇಸು.

ಸ್ಥಳೀಯ ಶಾಲಾ ವಿಸ್ತರಣಕಲೆಯ ಕೆಲಸವು ಸಾಗುತ್ತಿರುವುದು. ಮಹಾಜನರು ತಮ್ಮ ಉದಾರಹಸ್ತದ ಸ್ನೇಹದೆಗೆ ಚಾಚಿ, ಊರವರು ಕೈಕೊಂಡ ಈ ಕಾರ್ಯವನ್ನು ಸಾರ್ಥಕಗೊಳಿಸಲಿ!

ಮುದ್ರಾಡಿ— ಶ್ರೀ ರಾಮಕೃಷ್ಣ ಕಲ್ಕೂರರ ಅಧ್ಯಕ್ಷತೆಯಲ್ಲಿ ಊರವ್ಯವ ೨೩ ವ್ಯಕ್ತಿಗಳ ಒಂದು ಸಭೆಯು ತಾ ೪-೧-೩೬ರಲ್ಲು ಶಾಲಾಮಂದಿರದಲ್ಲಿ ಜರಗಿ "ಸಮಾಜ ಸೇವಾಸಂಘ ವಾಚನಾಲಯ"ವೆಂಬುದನ್ನು ಸ್ಥಾಪಿಸಲಾಯಿತು. ಮು ರಾ ನಾಗಪ್ಪ ಹೆಗ್ಗಡೆ ಅಧ್ಯಕ್ಷರೂ ಶ್ರೀಗಳಾದ ಸಿದ್ದಯ್ಯ ಶೆಟ್ಟಿ ಮತ್ತು ಶೇಷಗಿರಿ ಉಪ್ಪಿನವರು ಜತೆಕಾರ್ಯದರ್ಶಿಗಳೂ ರಾ ಬಾಬುಶೆಟ್ಟಿ ಗಾರರು ಕೋಶಾಧಿಕಾರಿಗಳೂ ಆಗಿ ಆರಿಸಲ್ಪಟ್ಟರು. ಪತ್ರಿಕೆಗಳ ಸಂಪಾದಕರು ತಮ್ಮ ಅಮೂಲ್ಯವಾದ ಒಂದೊಂದು ಪ್ರತಿಗಳನ್ನು ದಯವಿಟ್ಟು ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಬೇಕಾಗಿ ಸವಿನಯ ವಿನಂತಿ ಮಾಡಿಕೊಂಡಿರುವರು.

ಉಳ್ಳಾಲ— ಮೊಗವೀರ ಆರ್ಯಯುವಜನ ವ್ಯಾಯಾಮ ಸಂಘದ ಸಹಾಯಾರ್ಥವಾಗಿ ಇದೇ ಕಳೆದ ತಾ ೨೬-೧-೩೬ನೇ ಆದಿತ್ಯವಾರ ಸಾಯಂಕಾಲ ಗಂಟೆ ೩ಕ್ಕೆ ಮಂಜೇಶ್ವರದ ರಥಬೀದಿಯಲ್ಲಿ ಪ್ರಖ್ಯಾತ ಪ್ರೊ. ಡಿ. ಟಿ ಮಂಗಳೂರ ನವಜೀವನ ವ್ಯಾಯಾಮಶಾಲೆಯ ಪ್ರೊ. ಲಕ್ಷ್ಮಣ್ ಪುತ್ರನ್ ಮತ್ತು ಆರ್ಯಯುವಜನ ವ್ಯಾಯಾಮ ಸಂಘದವರ ಅಪ್ರತಿಮ ಹಿರಿಯ ಭಾರಿಗಳ ಅಂಗಸಾಧನೆಯ ಆಟಗಳೂ ಇನ್ನಿತರ ಸಾಹಸದ ಚಮತ್ಕಾರ ಪ್ರದರ್ಶನ ದೃಶ್ಯಗಳೂ ಮಂಜೇಶ್ವರ ಮಹಾಮಾನ್ಯ ಶ್ರೀ ವೆಂಕಟ್ರಾಯ ಭಕ್ತರ ಅಧ್ಯಕ್ಷತೆಯಲ್ಲಿ ನೆರವೇರಲ್ಪಟ್ಟಿತು. ಈ ವ್ಯಾಯಾಮ ಪ್ರದರ್ಶನಕ್ಕೆ ಬೇಕಾದ ಸಾಮಗ್ರಿಗಳ ಹಾಗೂ ಜನದ ಸರ್ವಭಾರವನ್ನು ಹೊತ್ತ ಶ್ರೀ ವೆಂಕಟ್ರಾಯ ಭಕ್ತರು ವ್ಯಾಯಾಮ ಸಂಘದವರಲ್ಲಿ ಲಕ್ಷ್ಮಣ್ ಅಮೀನ್ ಮತ್ತು ತ್ಯಾಗಿ ಪುತ್ರನ್‌ರಿಂಬ ರಿಗೆದು ಬಂಗಾರದ ಮೆಡಲುಗಳನ್ನು ಸನ್ಮಾನಿಸಿದ್ದು ಶ್ಲಾಘನೀಯ. ಅಲ್ಲದೆ ವಾದೀ ವ್ಯಾಯಾಮ ಸಂಘಕ್ಕೆ ಜೆಟ್ಟಿನ ಪ್ರೋತ್ಸಾಹವನ್ನಿತ್ತುದ್ದಕ್ಕಾಗಿಯೂ ಅವರಿಗೆ ನಾವು ತುಂಬಾ ಕೃತಜ್ಞರಾಗಿರುವೆವೆಂದು ಸಂಘದ ಸೆಕ್ರೆಟರಿಯವರು ತಿಳಿಸುತ್ತಾರೆ.

ಉಡುಪಿ— ತಾ ೩೧ನೇ ಅಪರಾಹ್ನ ಗಂಟೆ ೩ಕ್ಕೆ ಗೌಡಸಾರಸ್ವತ ವೃಂದದ ಶ್ರೀ ಪಾದಂಗಳವರಾದ ಶ್ರೀ ಕಾಶೀಮಠದ ಶ್ರೀ ಸುಕೃತೀಂದ್ರ ಸ್ವಾಮಿಜೀಯವರು ಕಲ್ಯಾಣಪುರದಿಂದ ಮಂಗಳೂರಿಗೆ ಹೋಗತಕ್ಕವರು ಪಾಂಗಾಳ ನಾಯಕರ ಬಂದರಿಂದ ಬನ್ನಿಸಲ್ಪಟ್ಟವರಾಗಿ, ನಾಯಕ್ ಬ್ಯಾಂಕ್ ಲಿಮಿಟೆಡ್‌ನಲ್ಲಿ ಪಾದಪೂಜೆ ನಡೆದಲುವ ಉಪಚಾರದಿಂದ ಉಪಚರಿಸಲ್ಪಟ್ಟರು. ನದಿ ಬ್ಯಾಂಕನ್ನು ಸಂದರ್ಶನಮಾಡಿ ಸಂತೋಷಪಟ್ಟವರಾಗಿ ಬ್ಯಾಂಕಿಗೆ ಯಶಸ್ಸನ್ನೂ ವೃದ್ಧಿಯನ್ನೂ ಕೋರಿ ಆಶೀರ್ವದಿಸಿದರು.

ತಾ ೨೮ಕ್ಕೆ ಸಾಯಂಕಾಲ ೫ ಗಂಟೆಗೆ ಮಂಗಳೂರಿನ ಬೋರ್ಡ್ ಹೈಸ್ಕೂಲಿನವರು ಇಲ್ಲಿನ ಪೇಟೆಗೆ ಶಾಲಾ ಪಥಿ ಸಂದರ್ಶನಕ್ಕೆ ಬಿಜಯಂಗೈದರು. ಊರ ಬೋರ್ಡ್ ಹೈಸ್ಕೂಲು ವಿದ್ಯಾರ್ಥಿಗಳ ವಾದ್ಯಘೋಷಗಳಿಂದ ಶಾಲೆಯು ಕಚೇರಿಯ ಬಳಿ ಎದುರುಗೊಂಡು ಭಾರಿಯ ಮೆರವಣಿಗೆಯಿಂದ ತಮ್ಮ ದೇವಾಲಯಕ್ಕೆ ಬರಮಾಡಿದರು. ಬೋರ್ಡ್ ಹೈಸ್ಕೂಲಿನವರು ಮರುದಿನ ಸಾಯಂಕಾಲ ಕಲ್ಯಾಣಪುರಕ್ಕೆ ತೆರಳಿದರು.

ಐದನೇ ಜಾರ್ಜ್ ಸಾರ್ವಭೌಮರ ಶವಧಹನದ ಸಂಬಂಧವಾಗಿ ತಾ ೨೮ನೇ ದಿವಸವನ್ನು ರಜಾ ದಿವಸವಾಗಿ ಸಾರ್ವಜನಿಕರು ನಿತ್ಯದ್ವಾರದ ವ್ಯವಹಾರಗಳನ್ನು ರದ್ದು ಮಾಡಬೇಕಾಗಿ ಅಪೇಕ್ಷಿಸಿದಂತೆ ಉಡುಪಿಯಲ್ಲಿ ಶಾಲಾ ಆಫೀಸುಗಳಿಗೆ ರಜೆಯಿದ್ದುದಲ್ಲದೆ, ಅಂಗಡಿಬಾಗಿಲುಗಳು ಮುಚ್ಚಲ್ಪಟ್ಟಿದ್ದುವು. ಕೆಲ ಅಂಗಡಿಗಳು ಪೂರ್ವಾಹ್ನ ತೆರೆದಿದ್ದರೂ ಮಧ್ಯಾಹ್ನದ ನಂತರ ಮುಚ್ಚಲ್ಪಟ್ಟಿದ್ದುವು.

ಈಚೆಗೆ ನಡೆದ ಶ್ರೀ ಕೃಷ್ಣಸ್ವಾಮಿಯ ಪರ್ಯಾಯ ಮಹೋತ್ಸವದ ಕಾಲದಲ್ಲಿ ಮಹಾಸಭೆಗೆ ಆಮಂತ್ರಿಸಲ್ಪಟ್ಟ ಅನೇಕ ಊರ ಪರವೂರ ಮಹನೀಯರನ್ನು ಪ್ರವೇಶ ಟಿಕೇಟು ಇದ್ದರೂ ಕೂಡ ಒಳಪ್ರವೇಶಿಸಲಿಲ್ಲವಾಗಿ ಬಹಳ ಬೇಡಾಪತ್ತದವೆನಿಸಿದೆ. ಇನ್ನೊಂದು ಬಗೆಯ ಸ್ಪೆಶಲ್ ಪಾಸು ಇದ್ದವರನ್ನೇ ಮಾತ್ರ ಪ್ರವೇಶಗೊಳಿಸಿದರಂತೆ! ಇದರರ್ಥವೇನು?

ಕಳೆದ ತಾ ೨೬ಕ್ಕೆ ಸ್ಥಳೀಯ ಬಾರ್ ಎಸೋಶಿಯೇಶನಿನವರು ಸಭೆಸೇರಿ ದಿವಂಗತ ಸಾರ್ವಭೌಮ ಐದನೇ ಜಾರ್ಜರ ನಿಧನಕ್ಕಾಗಿ ಸಂತಾಪಸೂಚಕ ಠರಾವನ್ನು ಸರ್ವಾನುಮತದಿಂದ ಮಂಜೂರುಮಾಡಿ ಅದನ್ನು ಅವರ ಕುಟುಂಬದವರಿಗೆ ಮಹಾರಾಜ್ಞಿ ಮೇರಿ ರಾಣಿಯವರಿಗೂ ಹೊಸತಾಗಿ ಸಾರ್ವಭೌಮರೆಂದು ಸಾರಲಾಗಿರುವ ಎಂಟನೆ ಎಡ್ವರ್ಡರಿಗೆ ಅ ಪಹಬೇಕೆಂದು ವ ದ್ರ್ಯಾಸಿ ತಂತೀ ಮೂಲಕ ತಿಳಿಸಲಾಗಿದೆ.

ಕಳೆದ ಜಿಲ್ಲಾ ಬೋರ್ಡ್ ಮೆಂಬರರ ಸಭೆಯಲ್ಲಿ ಕಾಂಗ್ರೆಸ್ ಮೆಂಬರರಲ್ಲಿ ಕೆಲವರು ಖಾದಿಯನ್ನು ಧರಿಸಿಲ್ಲವೆಂದು ಪತ್ರಗಳಿಂದ ತಿಳಿದುಬಂದದ್ದು ಸರಿಯೇ? ಅಲ್ಲವೋ ಖಾದಿಧಾರಣದ ಸೂತ್ರವನ್ನು ಪಾಲಿಸಿದಿದ್ದಲ್ಲಿ ಅದಕ್ಕೆ ಕಾರಣವೇನು? ಈ ಶಿಸ್ತನ್ನು ಪಾಲಿಸಲಾಗದೆ ಹೋಯಿತೇ? ಇಲ್ಲವೆ ಈ ಶಿಸ್ತನ್ನು ಸಡಿಲಿಸಲಾಗಿದೆ! ಎಂಬುದರ ಬಗ್ಗೆ ಕಾಂಗ್ರೆಸ್ ಕಮಿಟಿಯ ಮುಖಂಡರು ಜನತೆಗೆ ಸಮಾಧಾನವಿತ್ತರೆ ಒಳಿತು!

ಕಾರ್ಕಳ— ತಾ ೨-೨-೩೬ರಲ್ಲಿ ನಡೆದ ಶ್ರೀ ಪದ್ಮಾವತಿ ದೇವಿಯ ಉತ್ಸವ ಮೂರ್ತಿಯ ಪ್ರತಿಷ್ಠಾಪನೋತ್ಸವವನ್ನು ತಮ್ಮ ಕರಕಮಲಗಳಿಂದ ಜಾಸ್ತಿಯಾಗಿ ನೆರವೇರಿಸಲಿಕ್ಕೂ ತಮ್ಮ ಶಿಷ್ಯಸಮೂಹಕ್ಕೆ ದರ್ಶನವನ್ನಿತ್ತು ಅವರಿಗೆ ದಿವ್ಯಾಶೀರ್ವಾದಗಳನ್ನು ಕೊಡಲಿಕ್ಕೂ ಬಿಜಯಂಗೈದಿರುವ ಶ್ರೀಮತ್ ಸುಕೃತೀಂದ್ರ ತೀರ್ಥ ಸ್ವಾಮಿಯವರನ್ನು ಕಾರ್ಕಳ ಊರ ಮತ್ತು ಹೊರಊರಿನ ಗೌಡಸಾರಸ್ವತ ಬ್ರಾಹ್ಮಣ ಸಮೂಹದ ಪಕ್ಷ ಸಮಸ್ತರು ಮುಖ್ಯಗಳನ್ನು ಕೊಟ್ಟು ಅಪೂರ್ವ ಶೋಭೆಯನ್ನು ಕೊಡುವ ಸಕಲ ವಾದ್ಯಗಳಿಂದ ಶೃಂಗರಿಸಿದ ಊರ ಮುಖ್ಯ ಬೀದಿಯ ಮೂಲಕ ವೇದ ವಾದ್ಯಘೋಷಗಳಿಂದ ಸಹಿತ ಆ ವಾಲಗೋಪಾಲರಾದಿಯಾಗಿ ಸಿದ್ದವಾದ ಮೆರವಣಿಗೆಯಿಂದ ಕರತಂದು ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಬಿಜಯಗೈದ ಮಠದ ಮರ್ಯಾದೆಗಳಿಂದ ಪೂಜಿಸಿ ಜನರು ತಮ್ಮನ್ನು ಕೃತಾರ್ಥರೆಂದು ತಿಳಿದು ಸಂತೋಷದ ಸಾಗರದಲ್ಲಿ ತಲ್ಲೀನರಾಗಿರುವರು.

ಶ್ರೀ ವೆಂಕಟರಮಣ ದೇವಾಲಯದ ಹಾಯರ್ ಎಲಿಮೆಂಟರಿ ಶಾಲೆಯ ಸಹಾಯಾರ್ಥ ಶಾಲೆಯ ಚಿಕ್ಕ ಬಾಲಕರು ಕೂಡಿ "ಶ್ರೀಮತಿ ಪರಿಣಯ"ವೆಂಬ ಸಾಗ್ರಸಂಗೀತ ಐದಂಕದ ನಾಟಕವನ್ನು ಶದ್ಯದಲ್ಲಿಯೇ ಜನಮನರಂಜನೆಯಾಗುವಂತೆ ಅಭಿನಯಿಸಲಿಕ್ಕಿರುವರು. ಮಹಾಜನರು ತನುಮನಧನಗಳಿಂದ ಪ್ರೋತ್ಸಾಹಿಸಿ ಸಹಕರಿಸುವರೆಂದು ನಂಬಲಾಗಿದೆ.

ಇಲ್ಲಿಯ ಪಂಚಾಯತಿನವರು ಮುಖ್ಯ ರಸ್ತೆಗಳಿಗೆ ನೀರುಹಾಕಲಾರಂಭಿಸಿದ್ದಾರೆ. ಈ ನೀರು ಹಾಕುವ ಹೊಟ್ಟೆಗೆ ಕಾಸಿನ ಮಚ್ಚಗೆಯಂತಾಗಿದ್ದುದರಿಂದಲೂ ಹಿಂದಿನ ವರ್ಷಗಳಿಂತ ಹೆಚ್ಚು ಕಾಲ ಈಗ ರಸ್ತೆಗಳಿಗೆ ಹಾಕುತ್ತಿರುವುದರಿಂದ ಸಿಕ್ಕಿದ್ದೇ ಲಾಭವೆಂದು ಜನರು ಆನಂದಿತರಾಗಿರುವರು.

ಬೋರ್ಡು ಮಿಡ್ಲಿನ ಎಲಿಮೆಂಟರಿ ಶಾಲೆಯ ಅಧ್ಯಾಪಕರಾಗಿದ್ದ ಶ್ರೀ ಲಕ್ಷ್ಮಣರಾಯರು ಕೆಲವು ದಿವಸಗಳ ಅಸ್ವಸ್ಥದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ಸರಳಸ್ವಭಾವದವರೂ ಸಜ್ಜನರೂ ಆಗಿದ್ದರು. ಮೃತರ ಕುಟುಂಬದೊಡನೆ ನಮ್ಮ ಸಮವೇದನೆಯನ್ನು ಪ್ರಕಟಿಸುವುದರೊಂದಿಗೆ ಅವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದು ಭಗವಂತನನ್ನು ಪ್ರಾರ್ಥಿಸುವೆವು.

ನಿಟ್ಟೆ ಶಿವಮೊಗ್ಗ— ಇಲ್ಲಿಯ ಶ್ರೀ ದುರ್ಗಾದೇವಿಯ ದೇವಸ್ಥಾನದಲ್ಲಿ ಎಂದಿನಂತೆ ಜಾತ್ರೆಗಳ್ಳ ವಾರ್ಷಿಕೋತ್ಸವವು ಇದೇ ಬರುವ ಕುಂಭಸಂಕ್ರಮ ತಾ ೧೧-೨-೩೬ನೇ ಬುಧವಾರ ಆರಂಭಿಸಿ, ತಾರೀಖು ೧೫-೧೨-೩೬ನೇ ಶನಿವಾರ ರಥೋತ್ಸವ ಮುಂತಾದ ಅವಭೃಥ ಇತ್ಯಾದಿ ಅಗತ್ಯವಾದ ಕಾರ್ಯಕ್ರಮಗಳೊಡನೆ ವಿಜೃಂಭಣೆ ರೀತಿಯಲ್ಲಿ ಜರಗಲಿಕ್ಕಿರುವುದು. ತಾರೀಖು ೧೫-೨-೩೬ನೇ ಶನಿವಾರ ರಾತ್ರಿ ನಮ್ಮ ಜಿಲ್ಲೆಯ ತೆಂಕು ಮತ್ತು ಬಡಗುತಿಟ್ಟಿನ ಪ್ರಸಿದ್ಧ ಯಕ್ಷಗಾನ ಕಲಾ ಸಿಧ್ಧರನ್ನು ಒಟ್ಟುಗೂಡಿಸಿ, ಒಂದು ತಾಳಮದ್ದಲೆಯನ್ನು ಜರಗಿಸುವುದಾಗಿಯೂ ನಿಶ್ಚಯಿಸಿರುವುದರಿಂದ ಮಹಾಜನರು ತಮ್ಮ ಮಿತ್ರರೊಡನೆ ಬಂದು, ದೇವಿಯ ಶ್ರೀ ಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ, ಉತ್ಸವದಲ್ಲಿ ಸಹಭಾಗಿಗಳಾಗಬೇಕಾಗಿ ಮೊಕ್ತೇಸರರ ಅಪೇಕ್ಷೆ ಇದೆ.

ಮೂಲ್ಕಿ— ಸ್ಥಳೀಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕಸಭೆಯು ಇದೇ ಕಳೆದ ತಾ. ೨೫-೧-೩೬ನೇ ಶನಿವಾರ ಅಪರಾಹ್ನ ಗಂಟೆ ೩ಗೆ ಕಾರ್ನಾಡು ಬಿ ಇ ಎಂ ಎಲಿಮೆಂಟರಿ ಶಾಲೆಯಲ್ಲಿ ರೆವರೆಂಡ್ ಎಸ್ ಡಿ ಪ್ರಾಣಾನಂದರವರ ಅಧ್ಯಕ್ಷತೆಯಲ್ಲಿ ಜರಗಿತು. ಸದರಿ ಶಾಲಾ ಬಾಲಿಕೆಯರು ಶ್ರೀ ದೇವತಾ ಪ್ರಾರ್ಥನೆಯನ್ನು ಮಾಡಿದುದಲ್ಲದೆ ಕೆಲವು ಅಭಿನಯ ಗೀತಗಳನ್ನೂ ಡ್ರಿಲ್ ಆಟಗಳನ್ನೂ ಆಡಿತೋರಿಸಿದರು. ಆತ್ಮವಿದ ಸಾರ್ವಭೌಮರಾದ ಜಾರ್ಜ್ ಪ್ರಭುಗಳ ಅಕಾಲಿಕ ನಿಧನದ ಕುರಿತು ಸಭೆಯು ಎದ್ದು ನಿಂತು ಮೌನ ಸಂತಾಪ ಸೂಚಿಸಿತು. ಅನಂತರ ಕೆಲ ವೊಂದು ಕಾರ್ಯಕ್ರಮಗಳು ನಡೆದು ಅಧ್ಯಕ್ಷರ ಉಪಸಂಹಾರ ಭಾಷಣದಿಂದ ಸಭೆಯು ಮುಕ್ತಾಯಗೊಂಡಿತು. ಮುಂದಿನ ಸಭೆಯು ಬಿ ಎಂ ತಾ ೧೫-೨-೩೬ನೇ ಶನಿವಾರ ಕಿನ್ನಿಗೋಳಿ ಬೋರ್ಡ್ ಮಾಪಿಳ್ಳೆ ಯರ ಶಾಲೆಯಲ್ಲಿ ಜರಗಲಿರುವುದು.

ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿಶಾಲೆಯ ಕಲ್ಪಾಡಿ ಶಾಖೆಯ ಉದ್ಘಾಟನಾ ಸಮಾರಂಭವು ಪಕ್ಕ ತಾ ೧-೨-೩೬ನೇ ಶನಿವಾರ ಸಾಯಂಕಾಲ ಗಂಟೆ ೬ಕ್ಕೆ ಕಲ್ಪಾಡಿ ಹಿಂದೂಸ್ಥಾನಿ ಶಾಲೆಯಲ್ಲಿ ಜರಗಿತು. ಪಟ್ಟಣದ ಹಲಕೆಲವು ಹಾಗೂ ಗ್ರಾಮದ ಮುಖ್ಯ ನೇತಾರರುಗಳ ಮುಖಂಡರು ದಯಮಾಡಿದ್ದರು. ಈ ಸಂದರ್ಭದಲ್ಲಿ ಶ್ರೀ ಡಾಕ್ಟರ್ ಎಂ ಅರ್ ಶಾಮರಾವ್ ಎಲ್ ಎಂ ಪಿ. ರವರು ಅಧ್ಯಕ್ಷರಾಗಿದ್ದರು.

ನಮ್ಮ ಊರಿನವರಾಗಿಯೂ ಸಂಸ್ಥಾನದ ಮೇರೆ ಕಡೆಗಳಲ್ಲಿ ವಿದ್ಯಾಧಿಕಾರಿಗಳಾಗಿ ಕೆಲಸಮಾಡುತ್ತಿರುವ ಶ್ರೀ ಎ ತಿಮ್ಮಪ್ಪಪೂಂಜ ಬಿ ಎ, ರವರು ದೇಹಾಲಸ್ಯದ ನಿಮಿತ್ತ ಮದ್ರಾಸಿನಲ್ಲಿ ಚಿಕಿತ್ಸೆಹೊಂದುತ್ತಿರುವರು. ಅವರು ಗುಣಮುಖರಾಗಿ ಬರುತ್ತಿರುವರು ಎಂದು ತಿಳಿದು ನಮಗೆ ಸಂತೋಷವಾಗುತ್ತದೆ. ಶ್ರೀ ಪರಮಾತ್ಮನ ದಯೆಯಿಂದ ಅವರಿಗೆ ಬೇಗನೆ ಆರೋಗ್ಯವಾಗಲೆಂದು ಹಾರೈಸುವೆವು.

ಇಲ್ಲಿ ಸುಮಾರು ೧ ವರ್ಷಗಳಿಂದ ಎಕ್ಸೈಜ್ ಇನ್ಸ್ಪೆಕ್ಟರರಾಗಿ ಕೆಲಸಮಾಡುತ್ತಿದ್ದ ಶ್ರೀ ಎನ್ ಕೆ ರಾಮಚಂದ್ರರಾವ್‌ರವರಿಗೆ ಸುರತ್ಕಲ್ ರೇಂಜಿಗೆ ವರ್ಗವಾಯಿತು. ಇವರು ಇಲ್ಲಿದ್ದಷ್ಟು ಕಾಲ ನ್ಯಾಯನೀತಿಯಿಂದ ಕೆಲಸನಡಸಿ ಜನಪ್ರೀತಿಗೆ ಪಾತ್ರರಾಗಿರುವರು.

ಹೊಸ್ಟೆಲ್ ವರ್ಧಂತಿ

ಸ್ಥಳೀಯ ಕೆನರಾ ಹೊಸ್ಟೆಲ್‌ನವರು ತಮ್ಮ ಹೊಸ್ಟೆಲಿನ ವಾರ್ಷಿಕೋತ್ಸವವನ್ನು ಫೆಬ್ರವರಿ ೩-೧ನೇ ಶನಿವಾರ ಸಾಯಂಕಾಲ ಗಂಟೆ ೬-೩೦ಕ್ಕೆ ಶ್ರೀ ಡಾ ಕೆ ರಾಮಚಂದ್ರನ್ ಬಿ ಎ ಎಂ ಬಿ ಬಿ ಎಸ್ ಇವರ ಅಧ್ಯಕ್ಷತೆಯಲ್ಲಿ ಸದರಿ ಹೊಸ್ಟೆಲಿನಲ್ಲಿಯೇ ಬಹಳ ವಿಜೃಂಭಣೆಯಿಂದ ಜರಗಿಸಿದರು.

ಬಾಲವಿಧವಾ ವಿವಾಹ— ಕೆನರಾ ಬ್ಯಾಂಕ್ ಜುಡಿಷಲ್ ಎಕ್ಸ್ಪ್ರೆಸ್ ಶ್ರೀ ಎಮ್ ನರಸಿಂಹಶೆಣೈಯವರು ರಾಜಾ ಬಾಬೂರಾವ ಗೋಪಾಲ ಶೆಣೈಯವರ ದ್ವಿತೀಯ ಪುತ್ರಿ ಬಾಲವಿಧವೆ ಸಖೂಬಾಯಿಯವರ ಇದೇ ತಾ. ೩ನೇ ಆದಿತ್ಯವಾರ ಮಂಗಳೂರಿನ ರಾಜಾ ಸದನದಲ್ಲಿ ಕುಲಪುರೋಹಿತರಿಂದ ಮಂಗಳೂರು ಟೌನ್ ಮೆಜಿಸ್ಟ್ರೇಟ್ ರಾ ಬಿ ನರಸಿಂಹರಾಯರೇ ಗೌಡಬ್ರಾಹ್ಮಣ ಸಮುದಾಯದಲ್ಲಿ ಶಾಸ್ತ್ರೋಕ್ತ ವಿಧಿಪ್ರಕಾರ ವಿವಾಹವಾಯಿತೆಂದು ...

ಖಾದಿ ಬಜಾರು.

ದ. ಕ. ಜಿಲ್ಲಾ ಗ್ರಾಮ ಉದ್ಯೋಗ ಸಂಘ, ಮಂಗಳೂರು.

ಗ್ರಾಮ ಉದ್ಯೋಗ ಸಂಘದ ಕಾರ್ಯಕ್ರಮಗಳಲ್ಲಿ ಖಾದೀ ಮಾರಾಟವನ್ನು ಒಂದು ಪ್ರಧಾನ ಕಾರ್ಯವನ್ನಾಗಿ ಇಟ್ಟುಕೊಂಡಿರುವೆವು. ಈ ಬಗ್ಗೆ ಜಿಲ್ಲೆಯ ಮುಖ್ಯ ಮುಖ್ಯ ಪೇಟೆಗಳಲ್ಲಿ ಖಾದಿ ಬಜಾರು ಅಥವಾ ಸಂತೆಗಳನ್ನು ಆರಿಸಲಾಗುವುದು. ಕ್ರಮೇಣ ಗ್ರಾಮ ಉದ್ಯೋಗಗಳಿಂದ ಉತ್ಪನ್ನವಾಗುವ ಇತರ ಸಾಮಾನುಗಳನ್ನೂ ಇದರ ಜೊತೆಯಲ್ಲೇ ಮಾರಾಟಮಾಡುವ ವ್ಯವಸ್ಥೆ ಮಾಡಲಾಗುವುದು.

ಪ್ರತ್ಯೇಕ ದ. ಕ. ಜಿಲ್ಲಾ ಗ್ರಾಮ ಉದ್ಯೋಗ ಸಂಘದವರು ರೂಪಾಯಿ ೫ ಮತ್ತು ರೂಪಾಯಿ ಒಂದರ ಖಾದೀ ಹುಂಡೀ ಪತ್ರಗಳನ್ನು ತಯಾರಿಸಿರುವರು. ಈ ಹುಂಡಿ ಪತ್ರಗಳನ್ನು ಕಂಡು ಕೊಡುವವರಿಗೆ ಗ್ರಾಮ ಉದ್ಯೋಗ ಸಂಘದ ಖಾದಿ ಬಜಾರುಗಳಲ್ಲಿ ಹಾಗೆಯೇ ಚರಕಾ ಸಂಘದ ಮಂಗಳೂರು ಖಾದಿ ಭಂಡಾರದಲ್ಲಿ ಕೂಡಾ ಆಯಾ ಹುಂಡಿ ಪತ್ರದ ಬೆಲೆಯಷ್ಟು ಖಾದಿಯು ಕೊಡಲಾಗುವುದು. ಖಾದಿಯನ್ನು ಮನೆಯಿಂದ ಮನೆಗೆ ಹೊತ್ತುಕೊಂಡು ಹೋಗುವುದಕ್ಕಿಂತ ಈ ವ್ಯವಸ್ಥೆಯು ಹೆಚ್ಚು ಅನುಕೂಲವಿರುತ್ತದೆ. ಮನೆಯಿಂದ ಮನೆಗೆ ಕೊಂಡುಹೋಗುವಾಗ ಎಲ್ಲಾ ನಮೂನೆಯ ಬಟ್ಟೆಗಳನ್ನು ಕೊಂಡುಹೋಗುವುದು ಸಾಧ್ಯವಿಲ್ಲ. ಮಾತ್ರವಲ್ಲ, ನಾವು ಹೋದ ಸಮಯವು ಗಿರಾಕಿಗಳಿಗೆ ಅನುಕೂಲವಲ್ಲದ ಸಮಯವಿರಬಹುದು. ಹುಂಡಿ ಕ್ರಮದಲ್ಲಿ ಗಿರಾಕಿಗಳು ತಮಗೆ ಅನುಕೂಲವಿದ್ದ ಸಮಯದಲ್ಲಿ ಬಂದು ಬೇಕುಬೇಕಾದ ನಮೂನೆಯ ಬಟ್ಟೆಯನ್ನು ನಮ್ಮ ಬಜಾರಿನಲ್ಲಿ ಆಯ್ದುಕೊಳ್ಳಬಹುದು. ಮಾತ್ರವಲ್ಲ ಅವರಿಗೆ ಬೇಕಾದ ತರದ ಬಟ್ಟೆಯು ಒಂದು ವೇಳೆ ನಮ್ಮ ಬಜಾರಿನಲ್ಲಿ ದೊರೆಯದಿದ್ದರೆ ಮಂಗಳೂರಿಗೆ ಹೋದಾಗ ಖಾದಿ ಭಂಡಾರದಿಂದ ಹೆಕ್ಕಿ ತೆಗೆದುಕೊಳ್ಳಬಹುದು. ಇವೆಲ್ಲ ಅನುಕೂಲತೆಗಳಿಂದ ನಮ್ಮ ಖಾದೀ ಬಜಾರುಗಳನ್ನು ಮಹಾಜನರು ಹೆಚ್ಚುಹೆಚ್ಚಾಗಿ ಪ್ರೋತ್ಸಾಹಿಸಿ ಯಶಸ್ವಿಗೊಳಿಸುವರೆಂದು ನಂಬಿಕೆ.

ಅಖಿಲ ಭಾರತ ಚರಕ ಸಂಘದವರು ಸದ್ಯದಲ್ಲೇ ಖಾದಿ ಬೆಲೆಯನ್ನು ಸ್ವಲ್ಪ ಮಟ್ಟಿಗೆ ಏರಿಸಲಿರುವರು. ಚರಕ ಸಂಘದ ಮತ್ತು ಗ್ರಾಮ ಉದ್ಯೋಗ ಸಂಘದವರು ನಡಿಸುವ ಉದ್ಯೋಗಗಳಲ್ಲಿ ಕೆಲಸಗಾರರಿಗೆ ಊಟದ ಮಟ್ಟಿಗಾದರೂ ಮಜೂರಿ ಕೊಡಬೇಕೆಂದು ನಿರ್ಧಾರವಾಗಿರುತ್ತದೆ. ಒಬ್ಬ ಹೆಣ್ಣು ಮಗಳು ನೂಲುವಾದಲು ಕಲಿತಿದ್ದು ದಿನ ಒಂದರ ಎಂಟು ತಾಸು ಕೆಲಸ ಮಾಡಿದರೆ ಅವಳಿಗೆ ಒಬ್ಬಳ ಊಟದ ಮಟ್ಟಿನ ಮಜೂರಿಯಾದರೂ ಕೊಡಬೇಡವೇ? ಈಗ ಬೇರೆ ಉದ್ಯೋಗವೇ ಇಲ್ಲವಿರುವುದರಿಂದ ಇಷ್ಟು ಕೂಲಿ ಕೊಡದಿದ್ದರೂ ಅವರು ಕೆಲಸಮಾಡಲು ತಯಾರಿದ್ದಾರೆಂಬುದು ನಿಜವಾದರೂ, ಈ ಪರಿಸ್ಥಿತಿಯ ದುರುಪಯೋಗವನ್ನು ಮಾಡಿ ಲಾಭಮಾಡಲೆಳಸುವುದು ಚರಕ ಸಂಘದಂತಹ ಸಂಸ್ಥೆಗೆ ಹೇಳಿಸಿದ್ದಲ್ಲ. ಚರಕ ಸಂಘದ ಸ್ಥಾಪನೆಯೇ ಇಂಥ ಬಡ ಜನರ ಉಪಕಾರಕ್ಕೆಂದ ಮೇಲೆ ಅವರೆಲ್ಲರಿಗೆ ಊಟಕ್ಕಾದರೂ ಸಿಕ್ಕುವಂತೆ ಮಾಡುವುದು ಚರಕ ಸಂಘದ ಕರ್ತವ್ಯವಿರುತ್ತದೆ. ಇದೇ ನಿಯಮವನ್ನು ಗ್ರಾಮ ಉದ್ಯೋಗ ಸಂಘದವರೂ ಇಟ್ಟುಕೊಂಡಿರುವರು. ಈ ನಿಯಮದಿಂದಾಗಿ ಖಾದಿಯ ಬೆಲೆಯನ್ನು ಸ್ವಲ್ಪ ಮಟ್ಟಿಗೆ ಏರಿಸಬೇಕಾಗಿದೆ. ಎಂಟು ಗಂಟೆ ಕೆಲಸ ಮಾಡಿದ ಹೆಣ್ಣುಮಗಳಿಗೆ ದಿನ ಒಂದರ ಊಟದ ಬಗ್ಗೆ ೩ ಆಣೆಗಳಾದರೂ ಸಿಕ್ಕುವಂತೆ ಮಾಡಬೇಕೆಂದೂ, ಇದರಿಂದಾಗಿ ಖಾದಿಯ ಬೆಲೆಯು ಸ್ವಲ್ಪ ಮಟ್ಟಿಗೆ ಏರಿದರೆ ಖಾದಿ ಧರಿಸುವವರಾರೂ ಬೇಸರಪಡಲಿಕ್ಕಿಲ್ಲವೆಂದೂ ಗಾಂಧಿಜಿಯವರು ದೃಢವಿಶ್ವಾಸವಿಟ್ಟುಕೊಂಡಿರುವುದರಿಂದ ಈ ಬದಲಾವಣೆಯನ್ನು ಮಾಡಲಾಗಿದೆ. ಇದರಿಂದಾಗಿ ಖಾದಿ ಮಾರಾಟಕ್ಕೆ ಕಡಿಮೆಯಾಗದಂತೆ ಮಾಡಿ ಗಾಂಧಿಜಿಯವರ ವಿಶ್ವಾಸವು ಸರಿಯೆಂದು ತೋರಿಸುವ ಕರ್ತವ್ಯವು ನಮ್ಮೆಲ್ಲರಿಗೆ ಸೇರಿದೆ. ದ. ಕ. ಜಿಲ್ಲಾ ಗ್ರಾಮ ಉದ್ಯೋಗ ಸಂಘದವರು ಜಿಲ್ಲೆಯಲ್ಲಿ ಅಲ್ಲಲ್ಲಿ ಜರಗಿಸುವ ಖಾದಿ ಬಜಾರುಗಳ ಕಾರ್ಯದಲ್ಲಿ ಸಕಲ ವಿಧಗಳಿಂದ ಸಹಕರಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ಈ ಜಿಲ್ಲೆಯ ಕೆಲಸಗಾರರು ಹಾಗೂ ಮಹಾಜನರೊಡನೆ ಪ್ರಾರ್ಥಿಸಿಕೊಂಡು ಪ. ರಾಮರಾಯ ಮಲ್ಯರು (ಕಾರ್ಯದರ್ಶಿ) ತಿಳಿಸುತ್ತಾರೆ.

ಶಿಕ್ಷಣಪ್ರಚಾರದ ದಶವಾರ್ಷಿಕ ಕಾರ್ಯಕ್ರಮ.

ಒಂದು ಕಾರ್ಯವು ಪೂರ್ಣವಾಯಿತೆಂಬ ತೃಪ್ತಿಯು ಅನೇಕ ಸಂದರ್ಭಗಳಲ್ಲಿ ಮನುಷ್ಯನ ಉನ್ನತಿಯನ್ನು ತಡೆಯುತ್ತದೆ. ಒಬ್ಬನು ಉತ್ತರೋತ್ತರ ಅಭಿವೃದ್ಧಿಯನ್ನು ಪಡೆಯುತ್ತಿರಬೇಕಾದರೆ ಅದು ವರೆಗೆ ಸಾಧಿಸಿದುದರಲ್ಲಿ ಅತೃಪ್ತಿಯುಳ್ಳವನಾಗಿ ತಾನು ಹೆಚ್ಚು ಕಾರ್ಯನಿರತನಾಗಬೇಕು. ಅಂಥ ಸಂದರ್ಭದಲ್ಲಿ ಮಾತ್ರ ಅವನು ಮೆಲ್ಲಮೆಲ್ಲನೆ ಆತ್ಮಸ್ವರೂಪವನ್ನು ಪೂರ್ಣ ತಿಳಕೊಳ್ಳುವ ಯೋಗ್ಯತೆಯನ್ನು ಸಂಪಾದಿಸುವನು. ಆ ಯೋಗ್ಯತೆಯನ್ನು ಪಡೆಯುವದೇ ಮನುಷ್ಯಮಾತ್ರರ ಜೀವನ ಧ್ಯೇಯವಾಗಿರುವದು.

ಈ ಅತೃಪ್ತಿಯು ಪಾಶ್ಚಾತ್ಯರಲ್ಲಿ ವಿಶೇಷ ರೂಪದಿಂದ ಕಂಡುಬರುತ್ತದೆ. ಅದ ಪ್ರಯುಕ್ತ ಅವರು ಅಷ್ಟು ಅಭಿವೃದ್ಧಿಯನ್ನು ಹೊಂದಿರುವರು. ಶಿಕ್ಷಣ ವಿಷಯದಲ್ಲಿಯೂ ಕೂಡ ಅವರು ಸದಾಕಾಲ ಅತೃಪ್ತರಾಗಿಯೇ ಇರುತ್ತಾರೆ. ಅಲ್ಲಿ ಶಿಕ್ಷಣ ತತ್ವಜ್ಞರು ಯಾವಾಗಲೂ ಶಿಕ್ಷಣದ ಉದ್ದೇಶ ಆದರ್ಶಗಳ ವಿಚಾರ ಮಾಡುತ್ತಲೇ ಇರುತ್ತಾರೆ. ಹೀಗೆ ದೊರೆತ ಅನುಭವವನ್ನು ಪ್ರಯೋಜನಕಾರಿಯಾಗುವಂತೆ ಕಾರ್ಯದಲ್ಲಿ ಉಪಯೋಗಿಸುತ್ತಾರೆ. ಇಂಗ್ಲಂಡಿನಲ್ಲಿ ಈಚೆಗೆ ಕೆಲವು ದಿನಗಳಿಂದ ನಡೆಯುತ್ತಿರುವದೊಂದು ಹೊಸ ಆಂದೋಲನವು ನಮ್ಮ ಮಾತಿಗೆ ದೊಡ್ಡ ಸಾಕ್ಷಿಯಾಗಿರುವದು.

ಇಂಗ್ಲಂಡಿನ ಕೆಲವು ಶಿಕ್ಷಣವೇತ್ತರೂ ಪಾರ್ಲಿಮೆಂಟಿನ ಸದಸ್ಯರೂ ಬೇರೆ ಕೆಲವು ಶಿಕ್ಷಣ ಪ್ರೇಮಿಗಳೂ ಕೂಡಿ "ಮಕ್ಕಳ ಶಿಕ್ಷಣದ ದಶವಾರ್ಷಿಕ ಕಾರ್ಯಕ್ರಮ" ಎಂಬ ಚಿಕ್ಕದೊಂದು ಪುಸ್ತಕವನ್ನು ಬರೆಸಿ ಪ್ರಕಟಿಸಿರುವರು. ಲೇಡಿ ಎಸ್ಟರ ಎಂಬ ಪ್ರಸಿದ್ಧ ವಿದ್ವಾಂಸ ಮಹಿಳೆಯು ಈ ಸಣ್ಣ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿರುವಳೆಂಬುದರಿಂದ ಪುಸ್ತಕದ ಮಹತ್ವವು ಒಡೆದು ಕಾಣುತ್ತದೆ.

ಆ ಪುಸ್ತಕದ ಅಭಿಪ್ರಾಯವು ಈ ಪ್ರಕಾರ ಇರುತ್ತದೆ. ಮಕ್ಕಳು ಶಾರೀರಕ ಮಾನಸಿಕ ಉನ್ನತಿಯನ್ನು ಪಡೆಯಬೇಕಾದರೆ ಅವರಿಗೆ ತಕ್ಕ ಪರಿಮಾಣದಲ್ಲಿ ಪುಷ್ಟಿಕರವಾದ ಆಹಾರವನ್ನು ಕೊಡಬೇಕು. ಮಾತ್ರವಲ್ಲ, ಅವರಿಗೆ ಶುದ್ಧವಾದ ವಾಯು ನೈರ್ಮಲ್ಯ ವ್ಯಾಯಾಮ ನಿದ್ರೆಗಳೂ ಅವಶ್ಯಕವಾಗಿವೆ. ಆದರೆ ಈ ಯಾವತ್ತು ಆವಶ್ಯಕತೆಗಳು ಪೂರ್ತಿಯಾಗುವಂತೆ ಇಂಗ್ಲೆಂಡಿನ ಎಲ್ಲ ಮನೆಗಳಲ್ಲಿ ಅಥವಾ ಶಾಲೆಗಳಲ್ಲಿ ಅನುಕೂಲತೆಗಳಿಲ್ಲ. ಗಾಳಿ ಬೆಳಕು ಚೆನ್ನಾಗಿ ಸಂಚರಿಸುವ ಹಾಗೂ ಈ ವರೆಗಾದ ವಿವಿಧ ಶೋಧ ಅನುಭವಗಳ ಪ್ರಯೋಜನವನ್ನು ಪಡೆದೂ ನವೀನ ಕ್ರಮ ಪದ್ಧತಿಗಳಿಗೆ ಒಪ್ಪುವ ತೆರದಲ್ಲಿ ಶಾಲಾ ಮನೆಗಳು ಕಟ್ಟಲ್ಪಟ್ಟಿರುವದಿಲ್ಲ. ಬೇರೆ ಬೇರೆ ಮಕ್ಕಳ ವಯೋಮಾನ ದೇಹಸ್ಥಿತಿಗೆ ತಕ್ಕಂತೆ ಆಟದ ಬಯಲುಗಳು ಪ್ರತ್ಯಪ್ರತ್ಯೇಕವಾಗಿಯೂ ವಿಶಾಲವಾಗಿಯೂ ಇರುವದಿಲ್ಲ. ಇರುವ ಚಿಕ್ಕ ಚಿಕ್ಕ ಬಯಲುಗಳಲ್ಲಿ ಸಣ್ಣ ದೊಡ್ಡ ಮಕ್ಕಳು ಆಡುತ್ತಿರುತ್ತಾರೆ. ಶಾಲಾ ಮನೆಗಳಲ್ಲಿರುವ ವಸ್ತು ಒಡವೆಗಳು ಕೂಡ ಮಕ್ಕಳ ಬೆಳವಣಿಗೆ ಸಹಾಯಕವಾಗುವಂತಿರುವದಿಲ್ಲ. ಸಣ್ಣ ದೊಡ್ಡ ಎಲ್ಲ ಮಕ್ಕಳಿಗೆ ಒಂದೇ ಅಳತೆಯ ಬೆಂಚು ಮೇಜುಗಳಿರುತ್ತವೆ. ಶಾಲಾ ಮನೆಗಳ ರುವ ಎಲ್ಲವು ನಿರ್ಮಲವಾಗಿಯೂ ಆರೋಗ್ಯ ಪ್ರದಾಯಕವಾಗಿಯೂ ಇರುವದಿಲ್ಲ. ಎಷ್ಟೋ ಶಾಲೆಗಳಲ್ಲಿ ಕಲಿಸುವಿಕೆಗೆ ಬೇಕಾದ ಸಾಹಿತ್ಯೋಪಕರಣಗಳ ಅಭಾವವಿರುತ್ತದೆ. ಬೇರೆ ಬೇರೆ ವರ್ಗಗಳನ್ನು ಕಲಿಸಲಿಕ್ಕೆ ಅಥವಾ ಉಪಾಧ್ಯಾಯರಿಗಾಗಿ ಬೇರೆ ಬೇರೆ ಕೋಣೆಗಳು ಇರುವದಿಲ್ಲ. ಈಗ ಇರುವ ಹತ್ತಿನ ಕಟ್ಟೋಣಗಳು ೩ ವರ್ಷ ವಯಸ್ಸಿನೊಳಗಿನ ಮಕ್ಕಳ ಶಿಕ್ಷಣಕ್ಕೆ ತೀರಾ ಅಯೋಗ್ಯವಾಗಿರುತ್ತವೆ. ಈ ಕಾರಣದಿಂದ ತಮ್ಮ ಮನೆಯಲ್ಲಿದ್ದು ಆರೋಗ್ಯವನ್ನು ಪಡೆದು ಉತ್ತಮ ಗುಣನಡತೆಗಳನ್ನು ಕಲಿತು ಸರ್ವತೋಮುಖವಾದ ಉನ್ನತಿಯನ್ನು ಪಡೆಯಲಾರದ ಆ ಮಕ್ಕಳು ಇಚ್ಛಾನುಸಾರ ತೋರಿ ಶಿಕ್ಷಣ ಬಾಲೋಪಯೋಗಿ ಶಿಕ್ಷಣ ಪಡೆಯಲಿಕ್ಕಾಗುವಂತೆ ಈಗಿರುವ ಶಿಕ್ಷಣಾಲಯಗಳ ಜೀರ್ಣೋದ್ಧಾರ, ಪುನರ್ನಿರ್ಮಾಣ ಮಾಡಬೇಕಾದ್ದು ಅಥವಾ ಅವುಗಳನ್ನೆ ಸಂಪೂರ್ಣ ಪ್ರತ್ಯೇಕವಾಗಿ ಕಟ್ಟಿಸಬೇಕಾದ್ದು ಅಗತ್ಯವಾಗಿದೆ.

ಇಷ್ಟು ಮಾತ್ರವಲ್ಲ, ಶಾಲೆ ಬಿಟ್ಟ ಮಕ್ಕಳ ಬಗ್ಗೆ ಶಿಕ್ಷಣದ ನಿರ್ಧಾರವು ಆಗಬೇಕಾಗಿದೆ. ಅವರಿಗಾಗಿ ಹಗಲು ಶಾಲೆಗಳೂ ೧೫ರಿಂದ ೧೮ ವರ್ಷದೊಳಗಿನ ಎಲ್ಲ ಮಕ್ಕಳು ಬಂದು ವಾರದಲ್ಲಿ ಒಂದೆರಡು ಸಲವಾದರೂ ಬಂದು ಕೂತು ಶಿಕ್ಷಣ ಪಡೆಯಲಿಕ್ಕಾಗುವಷ್ಟು ಪ್ರತ್ಯೇಕ ವಿಶಾಲವಾದ ಕೋಣೆಗಳುಳ್ಳ ಶಾಲೆಗಳ ವ್ಯವಸ್ಥೆ ಮಾಡುವದಲ್ಲದೆ, ಅವರಿಗೆ ಆಡಲಿಕ್ಕೆ ಬೇಕಾದಷ್ಟು ವಿಸ್ತಾರವಾದ ಬಯಲುಗಳನ್ನು ಒದಗಿಸಿಕೊಡಬೇಕಾಗಿದೆ.

ಇಂಗ್ಲಂಡಿನ ಈಗಿನ ಸ್ಥಿತಿಯು ಹೀಗೆ ಇರುವದರಿಂದ ಈ ಕೊರತೆಗಳನ್ನು ನೀಗಿಸಿ ಆವಶ್ಯಕ ಸುಧಾರಣೆಗಳನ್ನು ಮಾಡುವದಕ್ಕಾಗಿ ಪುಸ್ತಕಕರ್ತರು ಕೆಳಗೆ ಕಂಡ ಶಿಫಾರಸುಗಳನ್ನು ಮಾಡಿದ್ದಾರೆ. ೧ ಈಗ ಇರುವ ಅನುಪಯುಕ್ತ ಮತ್ತು ಅಯೋಗ್ಯವಾದ ಎಲ್ಲ ಶಾಲಾ ಕಟ್ಟೋಣಗಳನ್ನು ಪೂರ್ಣ ಕೆಡವಿ ಹಾಕಿ ಅವುಗಳ ಸ್ಥಾನದಲ್ಲಿ ಹೊಸ ಕಟ್ಟೋಣಗಳನ್ನು ಕಟ್ಟಿಸಬೇಕು. ಅಥವಾ ಹಳೆ ಕಟ್ಟೋಣಗಳ ಆವಶ್ಯಕತೆಗಳಿಗೆ ತಕ್ಕಂತೆ ದುರುಸ್ತಿ ಮಾಡಬೇಕು. ೨ ಗಾಳಿ ಬಿಸಿಲು ಪ್ರಕಾಶಗಳು ತುಂಬಾ ಸಂಚಾರವಾಗುವಂತೆ ವಿಶಾಲವಾದ ಕೋಣೆಗಳಿಂದಲೂ ಸುತ್ತಮುತ್ತಲೂ ಹೂ ಹಣ್ಣು ಹಂಪಲು ತರಕಾರಿಗಳ ತೋಟಗಳಿಂದಲೂ ಆಟದ ಬಯಲುಗಳಿಂದಲೂ ಹೊಸ ಶಿಶು ಶಿಕ್ಷಣಾಲಯಗಳನ್ನು ಏರ್ಪಡಿಸಬೇಕು. ೩ ಎರಡರಿಂದ ೫ ವರ್ಷ ಪ್ರಾಯದ ಮಕ್ಕಳು ಇಚ್ಛಾನುಸಾರ ಬಂದು ಶಿಕ್ಷಣ ಪಡೆಯುವಂತೆ ಆಶಿಸುವ ಶಿಕ್ಷಣಾಲಯಗಳಲ್ಲಿ ಎಲ್ಲರಿಗೆ ಬಹು ಸೌಕರ್ಯಗಳನ್ನು ಒದಗಿಸಿ ಕೊಡಬೇಕು. ೪ ಅನುಪಯುಕ್ತ ಮತ್ತು ಅಯೋಗ್ಯವೆಂದು ಕಂಡುಬಂದ ಎಲ್ಲ ಶಾಲೆಗಳ ಬದಲಿಗೆ ಇನ್ನು ೧೦ ವರ್ಷಗಳೊಳಗಾಗಿ ಬೇರೆ ಉಪಯುಕ್ತ ಮತ್ತು ಯೋಗ್ಯ ಶಾಲೆಗಳನ್ನು ಕಟ್ಟುವ ಖರ್ಚದ ವೆಚ್ಚ ಶಾಲಾ ವ್ಯವಸ್ಥಾಪಕರುಗಳಿಗೆ ಸರಕಾರವು ಹೆಚ್ಚಿನ ದ್ರವ್ಯಸಹಾಯ ಮಾಡಬೇಕು.

ಈ ದಶವಾರ್ಷಿಕ ಯೋಜನೆಯನ್ನು ಕೈಕೊಂಡ ಸಂದರ್ಭದಲ್ಲಿ ಸೇಕಡಾ ೩ರ ದರದ ಬಡ್ಡಿಯಿಂದ ೫೦ ವರ್ಷಗಳ ಒಳಗೆ ಮರುಪಾವತಿ ಮಾಡುವ ೩ ೧೦ ೦೦೦೦ ಪವನುಗಳ ಸಾಲವನ್ನು ಶಿಶು ಶಿಕ್ಷಣಾಲಯಗಳಿಗಾಗಿಯೂ ೩ ೫೫೦ ೦೦೦ ಪವನುಗಳ ಸಾಲವನ್ನು ಪ್ರಾಥಮಿಕ ಶಿಕ್ಷಣಾಲಯಗಳಿಗಾಗಿಯೂ ಎತ್ತಬೇಕಾಗಬಹುದೆಂದು ಪುಸ್ತಕದ ಲೇಖಕರು ಅಂದಾಜು ಮಾಡಿರುವರು. ಸರಕಾರವು ಈ ಕಾರ್ಯಕ್ರಮವನ್ನು ಸ್ವೀಕರಿಸುವಂತೆ ಲೋಕಮತ ಪ್ರಚಾರಾದಿಗಳ ಮೂಲಕ ಬಲವಾದ ಪ್ರಯತ್ನವು ಕೈಕೊಳ್ಳಲ್ಪಟ್ಟಿದೆ.

ನಮ್ಮ ಹಿಂದೂದೇಶದಲ್ಲಿ ಶಿಕ್ಷಣ ಪ್ರಗತಿಯು ಇಂಗ್ಲಂಡಿಗಿಂತ ಎಷ್ಟೋ ಪಾಲು ಕಡಿಮೆಯೂ ನಿಕೃಷ್ಟವೂ ಆಗಿರುವಾಗ ಇಂಥ ಕಾರ್ಯಕ್ರಮಗಳ ಆವಶ್ಯಕತೆಯು ಇಂಗ್ಲಂಡಿನ ಜನರಿಗಿಂತ ನಮಗೆ ಹೆಚ್ಚು ಆವಶ್ಯಕವಾಗಿರುವದೆಂದು ನಮಗನ್ನಿಸುವದಿಲ್ಲವೆ? ಆದರೆ ಅಲ್ಲಿ ಕಂಡು ಬರುವ ಉತ್ಸಾಹ ಪ್ರೋತ್ಸಾಹಗಳು ಇಲ್ಲಿರುವವೆ? ಎಂಬುದು ಆಲೋಚನೀಯ ವಿಷಯವಾಗಿರುವದು.

ಕಟಪಾಡಿ ಶ್ರೀನಿವಾಸ ಶೆಣೈ

ಜ್ಯೋತಿಷ್ಯ ಫಲ ಪ್ರತ್ಯಕ್ಷ

ಮಂಗಳೂರು ಜಿಲ್ಲಾ ಸರ್ಜನರಾಗಿದ್ದ ಕೆ ಜಿ ತ್ರಿಯಂಬಕ್ ವೆ ನೋನ್ ಇವರು ಕಳೆದ ೧೯೫೫ರ ಮೇ ತಿಂಗಳಲ್ಲಿ ಇವರ ಪ್ರಥಮ ಪುತ್ರಿಯ ವಿವಾಹಕ್ಕೆ ಬಹುಮಾನ ಪಡೆಯುವರೆ ಬಂದಿದ್ದ ಬ್ರಹ್ಮಶ್ರೀ ಪಣಂಬೂರು ಗುಡ್ಡೆಮನೆ ಗಣಪತಿ ಜೋಯಿಸರ ಹತ್ತಿರ ಇವರ ತನೇ ಕುಮಾರಿಯ ಜಾತಕವನ್ನು ತೋರಿಸಿದ್ದಲ್ಲಿ ಅವರು ಲಗ್ನದ ಸಮಯವನ್ನು ಬರೆಕೊಟ್ಟಿರು ನಿಮ್ಮ ಮಾತಿನಂತೆಯೇ ನಡೆದರೆ ನಾವು ಯಾವ ಊರಿನಲ್ಲಿದ್ದರೂ ನಿಮ್ಮನ್ನು ಕರೆತರಿಸಿ ನಿಮಗೆ ಆ ವಿವಾಹ ಕಾಲದಲ್ಲಿ ಹಿಂದಿನಂತೆ ಒಂದುನೂರು ರೂಪಾಯಿಗಳನ್ನು ಬಹುಮಾನ ಕೊಡುವುದಾಗಿ ನಿಶ್ಚಯಿಸಿದ್ದರು.

ಸದ್ರಿ ಜೋಯಿಸರು ಜಾತಕ ನೋಡಿ ೧೯೩೬ನೇ ಇಸವಿಯಲ್ಲಿಯೇ ಲಗ್ನ ನಡೆಯುತ್ತದೆಂದು ಬರೆಕೊಟ್ಟ ಪ್ರಕಾರ ಇದೇ ಕಳೆದ ತಾ ೨೬ನೇ ಆದಿತ್ಯವಾರ ಕೊಯಂಬುತ್ತೂರಿನಲ್ಲಿ ನಡೆದ ಲಗ್ನಕ್ಕೆ ಸದ್ರಿ ಜೋಯಿಸರನ್ನು ಕರೆತರಿಸಿ ತಾ ೨೭ನೇ ದಿನ ಗಾರ್ಡನ್ ಪಾರ್ಟಿ ಸಭೆಯಲ್ಲಿ ಸರ್ಜನರ ಪ್ರತಿನಿಧಿಯಾಗಿ ಮಿ। ರಾ। ಎಂ ಟಿ ನಾರಾಯಣ ಮೆನೋನ್ ಇವರು ಸಂಭಾಷಣ ಸಹಿತ ರೂ ೧೦೦ನ್ನು ಜೋಯಿಸರಿಗೆ ಬಹುಮಾನ ಮಾಡಿದರು. ಜೋಯಿಸರು ವಧುವರರನ್ನು ಆಶೀರ್ವದಿಸಿ ಸಂಭಾಷಿಸಿದ ಕನ್ನಡ ಮಾತನ್ನು ರಾ। ರೇಂಜರ್ ತಿಂಕರನಾಯರವರು ಮಲೆಯಾಳದಲ್ಲಿಯೂ ಅದನ್ನೇ ಪೆನಶನ್ ಜಿಲ್ಲಾ ಜಡ್ಜರಾದ ರಾ। ಶಂಕರ ಅಯ್ಯರವರು ಇಂಗ್ಲೀಷಿನಲ್ಲಿ ಸರ್ವರಿಗೂ ತಿಳಿಯುವಂತೆ ವಿವರಿಸಿದರು.

ಕನ್ನಡ ಸಂಗೀತ ಸಭಾ, ಎಮೆಚೂರ್ಸ

ಮುಂಬಾಯಿ —

ಇವರು ದಕ್ಷಿಣ ಕನ್ನಡ ಬೋರ್ಡ ವಿದ್ಯಾ ಫಂಡಿನ ಸಹಾಯಾರ್ಥವಾಗಿ, ಶ್ರೀ। ಪಿ ಆರ್ ಪೋಲೀಸಾರ್, ಬಿ. ಎ ಇವರಿಂದ ನಾಟಕ ರೂಪವಾಗಿ ಬರೆಯಲ್ಪಟ್ಟ ಕನ್ನಡ ಸಂಗೀತ ಸಭೆಯ ೭ನೇ ಪುಷ್ಪವಾದ "ಕೇಸರಿ ಕುಮಾರಿ ಅಥವಾ ಸತಿ ಸುಲೋಚನಾ" ಎಂಬ ನವರಸಭರಿತವಾದ ಹಾಗೂ ನೀತಿಬೋಧಪ್ರದವಾದ ಪೌರಾಣಿಕ ನಾಟಕವನ್ನು ಇದೇ ತಾ ೭-೩-೩೬ನೇ ದಿನ ಕಲ್ಬಾದೇವಿಯ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸುವರು.

ಸದಾರಮಾ

ಇದೊಂದು ಕೊಯಂಬತ್ತೂರಿನ ಸೆಂಟ್ರಲ್ ಫಿಲ್ಮ್ ಕಂಪೆನಿ ಇವರಿಂದ ತಯಾರಿಸಲ್ಪಟ್ಟ ಕನ್ನಡ ನಾಡಿನಲ್ಲಿ ಹೆಸರು ಪಡೆದ ಗುಬ್ಬಿ ಕಂಪೆನಿಯ ನಟಮಹಾನಟರಿಂದ ಅಭಿನಯಿಸಲ್ಪಟ್ಟ ಉತ್ತಮ ಕನ್ನಡ ಚಲಚಿತ್ರ. ಇದರಲ್ಲಿ ನಾಡಿನಲ್ಲೆಲ್ಲಾ ಸುಪ್ರಸಿದ್ಧ ಹಾಸ್ಯಗಾರ ಅಭಿನಯ ಕೇಸರಿ ಎಂದು ಹೆಸರು ಪಡೆದ ಗುಬ್ಬಿ ವೀರಣ್ಣ ಇಡೀ ಭರತಖಂಡದಲ್ಲೇ ಪ್ರಖ್ಯಾತರಾದ ಗಾನ [illegible] ಅಶ್ವತಮ್ಮ ಮತ್ತು ಅಭಿನಯ ಕಲಾಕುಶಲರಾದ ಮರಾಠಾಚಾರ್ ಪಿಯಮ್ಮ ಮುಂತಾದವರು ಅಭಿನಯಿಸಿರುವರು. ಇದರಲ್ಲಿ ಅಶ್ವತಮ್ಮನವರ [illegible] ಗಾಯನ ಕಲಾ ನೈಪುಣ್ಯತೆಯನ್ನು ಸಂಪೂರ್ಣವಾಗಿ ಕಾಣಬಹುದು. ಹಾಗೆಯೇ ಇವರ ಮತ್ತು ವೀರಣ್ಣ ಮರಾಠಾಚಾರ್‌ರ ಅಭಿನಯದ ಸೊಬಗು ಒಡೆದು ತೋರುವುದು. ಅದರ ಉತ್ತಮತೆಗೆ ಸರಿಯಾಗಿ ಅದನ್ನು ಪ್ರದರ್ಶಿಸಿದ ನೂತನ ಆದರ್ಶ ಮಂದಿರವಾದ ಶ್ರೀ ಕೃಷ್ಣಾ ಸಿನೆಮಾ ಮಂದಿರವು ಸಹಾಯಕವಾಯಿತು. ಅವರ ತಮ್ಮ ಯಂತ್ರ ಇದೀಗ ಡಬ್ಬಲ್ ಪ್ರೊಜೆಕ್ಟರ್ ಉಪಯೋಗಿಸುವುದರಿಂದ ಗಂಭೀರ ಧ್ವನಿಯೂ ಮಧುರಗಾನವೂ ಸುಶ್ರಾವ್ಯವಾಗಿಯೂ ವಿರಳವಾಗಿ ಮನೋಹರವಾಗಿಯೂ ಕೇಳಿಸುವುದು. ಬೆಳಕಿನ (light) ತೊಂದರೆಗಳಾಗಲೀ ಅಲ್ಲಲ್ಲಿ ಅವಸ್ವರದ ಸುದ್ದಿಯಾಗಲೀ—ತೊಂದರೆಯಾಗಲೀ ಇಲ್ಲದೆ ಚೆನ್ನಾಗಿ ಪ್ರದರ್ಶಿಸಲ್ಪಟ್ಟಿತ. ಎಲ್ಲದರಲ್ಲೂ ಸುಧಾರಿಸಿದ ಚಿತ್ರಕ್ಕೆ ಆದರ್ಶ ಮಂದಿರವು ದೊರೆತುದರಿಂದ ಆದರ್ಶಪ್ರಾಯವಾಗಿದೆ. ನಾಡನುಡಿಯಲ್ಲಿ ಪ್ರೇಮವುಳ್ಳವ ಪ್ರತಿಯೊಬ್ಬನೂ ನೋಡಲೇ ಬೇಕಾದ [illegible] ಚಿತ್ರ.

ಪ್ರೇಕ್ಷಕ

ಭೂಮಂಡಲದ ಸ್ತ್ರೀಯರ ಪರಿಷತ್ತು

ಅಂತರರಾಷ್ಟ್ರೀಯ ಸ್ತ್ರೀಯರ ಪರಿಷತ್ತು ಕಲ್ಕತ್ತಾ ನಗರದಲ್ಲಿ ಮೊನ್ನೆ ಪ್ರಾರಂಭವಾಗಿರುತ್ತದೆ. ಬರೋಡಾದ ಮಹಾರಾಣಿಯವರು ಅಧ್ಯಕ್ಷಿಯರು. ಪ್ರಾರಂಭದಲ್ಲಿ ವಂದೇ ಮಾತರಂ ಗಾನ ಸಂತೋಷ ಸೂಚಕವಾಗಿ ಸ್ವಲ್ಪ ಸಮಯ ಮೌನದಲ್ಲಿ ನಿಂತರು. ಪರಿಷತ್ತಿಗೆ ಬ್ರಿಟೀಶ್ ದೇಶದಿಂದ ಅನೇಕ ಪ್ರಮುಖ ಸ್ತ್ರೀಯರು ಬಂದಿರುತ್ತಾರೆ. ಸ್ತ್ರೀ ಅಭ್ಯುದಯದ ಕುರಿತು ಅನೇಕ ವಿಚಾರಗಳು ಈ ಪರಿಷತ್ತಿನಲ್ಲಿ ಚರ್ಚಿಸಲಾಗುವವು. ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಈ ಪರಿಷತ್ತಿನ ಪೂರ್ವ ಪ್ರೇಕ್ಷಕರು.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ -

The Scientific Gold Bangles Co , Ltd

Head Office—43, Byragimatam Street,

Post Box No. 203, Madras

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. 5/1936.

ಅರ್ಜಿದಾರರು, ಮ್ಯಾನರ ರಾಮಚಂದ್ರ ಶ್ಯಾನುಭಾಗ ಕೂಡಾ 2 ಜನರು ಇವರ ರಕ್ಷಕ ದೊಡ್ಡ ತಂದೆ ಲಕ್ಷ್ಮಣ ಶ್ಯಾನುಭಾಗ

ಸದ್ರಿ ಮ್ಯಾನರ 1ನೇ ಅರ್ಜಿದಾರ ರಾಮಚಂದ್ರ, 2ನೇ ಅರ್ಜಿದಾರ ನರಸಿಂಹ ಯಾನೆ ಮಂಜುನಾಥ 1, ಸಹಾ 2 ಜನರ ತಂದೆ ಕುಂದಾಪುರ ಕಸಬಾ ಗ್ರಾಮದ ಮುದ್ರಮಕ್ಕಿಯಲ್ಲಿ ತಾ 4-8-1928ರಲ್ಲಿ ಮೃತವಾದ ವೈಕುಂಠ ಶ್ಯಾನುಭಾಗಗೆ, ಬೊಂಬ್ಯಾ ಲೈಫ್ ಇನ್ಸೂರೆನ್ಸ್ ಕಂಪೆನಿಯಲ್ಲಿರುತ್ತಿದ್ದ ನಂಬ್ರ 6291, 6292, 6298 ಲೈಫ್ ಪೋಲಿಶಿಗಳ ಬಾಬ್ತು ಒಟ್ಟು ರೂಪಾಯಿ 8000 ಪಡಿಯುವ ಬಗ್ಗೆ ತಮಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ 14-2-1936ಕ್ಕೆ ತನಿಖೆಗೆ ಇಡೋಣಾಗಿಯದೆ ಆ ಕುರಿತು ಆಕ್ಷೇಪ ಹೇಳುವವರು ಆ ದಿವಸ ಹಗಲು ಘಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಲಿಕ್ಕೆ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನ ವಾದೀತು

ಕುಂದಾಪುರ ತಾ 24-1-'36 } K. Vittaldas Shenai, ಅರ್ಜಿದಾರ ಕಡೆ ಎಡ್ವೊಕೇಟ್

ಎಚ್ಚರ!! — ಎಚ್ಚರ!!!

ರೋಗ ಬಂದ ಮೇಲೆ ನರಳಬೇಡಿರಿ!

ಕುಷಾನಂದ (ಗಂಡಸರಿಗೆ) ಸೊಗಸಾದ ರಬ್ಬರು ಸಾಧನ ರತಿ ಕ್ರೀಡೆಗೆ ಆತಂಕವಿಲ್ಲ ಆದರೂ ಪ್ರೇಮಕರ ಗರ್ಭೋತ್ಪತ್ತಿಯುಂಟಾಗದು ಮೇಹ ರೋಗಗಳಂತೂ ಬರುವಂತೆಯೇ ಇಲ್ಲ

ಬೆಲೆ 1ಕ್ಕೆ ರೂ 1-6-0

ಪೆಸಾರಿಸ್ (ಹೆಂಗಸರಿಗೆ) ಸರ್ವೋತ್ಕೃಷ್ಟವಾದ ರಬ್ಬರು ಸಾಧನ ಗರ್ಭಧಾರಣವಾಗುವಂತಿಲ್ಲ ಉಪಯೋಗಿಸುವಾಗ ನೋವಾಗುವಂತಿಲ್ಲ ಬಹುಕಾಲ ಬಾಳಿಕೆ ಬರುವುದು ಬೆಲೆ 1ಕ್ಕೆ ರೂ 2-4-0

ಆರ್ಡರಿನೊಡನೆ ¼ ಅಡೆಯು ಕಳುಹಿಸಬೇಕು.

ಸಿಗುವ ವಿಳಾಸ — ಸ್ಟಾರ್ ಅಂಡ್ ಕಂಪೆನಿ, ಕೃಷ್ಣಪ್ಪ ನಾಯಕನ ಬೇಂಕ್ ಬೀದಿ ಮದರಾಸ

ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿರುದನ್ನು ಕೇಳಿ. ಜರ್ಮನ್ ವರ್ತಕರು ತನ್ನ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

ಗೊಡ್ರೆಜ್

ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಒಫ್ ಕೊಮರ್ಸ್ ಇದಕ್ಕು ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ ಮೈಕ್ರೊಸ್ಕೋಪಿ ಎಂಡ್ ಬೆಕ್ಟೀರಿಯೊಲೊಜಿ ಇದಕ್ಕು ರಸಾಯನಶಾಸ್ತ್ರಿಗಳಾಗಿರುವ

ಡಾ| ಬಿಶ್ಲೆ್ಟ್ಸ್ ಎಂಬವರು — "ನಾನು ಗೊಡ್ರೆಜ್ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಪ್ಟೊಕೊಕಸ್ ಮತ್ತು ಸ್ಟೆಫಿಲೊಕೊಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯುಳ್ಳದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಸ್ಟ್ ಎಂಬವರು. — "ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧೆ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು — "ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ| ಎಂ ಎ ಅನ್ಸಾರಿ, ಎ ಡಿ ಎಂ ಎಸ್ ರವರು — "ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳ ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು.

ಫೆಕ್ಟರಿ — **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು. **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

12½ ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ೪ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ ಮಂಗಳೂರು, ಬಂಟವಾಳ, ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ.

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ

The Canara Public Conveyance Co., Ltd, Kodialbail Mangalore.

The Sakaleshwara Motor Service Ltd., Saklaspur

ಚೀನಾ ಮಂಚೂರಿಯಾದಲ್ಲಿ ಸೈನಿಕರ ದಂಗೆ!

ಕಲ್ಲಿಕ್ಷಲಿನ ನಗರಗಳಲ್ಲಿ ಭಯಂಕರ ಬೆಂಕಿ! ಕಾಂಗ್ರೆಸ್ಸಿನ ವಿರೋಧ ಪಕ್ಷ!

[illegible]

ಕಾಂಗ್ರೆಸ್ಸಿಗೆ ಎಂದು ವಿರೋಧ ಪಕ್ಷ

[illegible]

ಸಂಯುಕ್ತ ಅಮೇರಿಕಾದಲ್ಲಿ

[illegible]

೩೦೦೦ ಇಟೇಲಿಯನರು ಮಡಿದರು. ೫೦೦೦ ಮಂದಿ ಗಾಯ ಹೊಂದಿರುವರು

[illegible]

ಕೆನರಾ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1906.

[illegible]

ಮೊಳ್ಳಿಯಾಲ್ಲಿ

[illegible]

ನೋಟೀಸು.

ಹಿಂದೂಸ್ತಾನ ಸಿನೇಮಾ ಲಿಮಿಟೆಡ್,
ಮಂಗಳೂರು.

[illegible]

Mangalore, [illegible] Keshava Pai
[illegible]

In the Court of the Dt. Munsiff of Mangalore.

I. P. No. 9/1936.

Between—

K Hasane Beary, son of Kulai Hamma Beary, Kulai Village of Mangalore Taluk—Petitioner, Debtor.

and

Alphonse Pais & others—Respondents, Creditors.

Notice is hereby given that the abovenamed petitioner has applied to the above court to be adjudged an insolvent and the said petition is posted to 19 2—1936 for hearing Such of those who are interested in the petition may appear in person or by pleador on the above said date at 11 a m before the said court In their absence the petition will be heard exparte

Mangalore, S Venkat Rao,
5 2 1936 Vakil for Ptr

In the Court of the Dt Judge of South Kanara.

O P No. 10/36

In the matter of the guardianship of the minors Saraswathi and Dayananda.

Between—

Pappadakaran Raman—Ptnr

and

Parvathi Respt

To the Respondent and all the persons concerned

Please hereby take notice that the above Petitioner has applied to this court that he should be appointed the guardian of the person and property of his minor children aforesaid and that sanction for raising a loan of Rs 100/ by pledging [illegible] life Insurance policy [illegible] the Empire of India Life Assurance Co Ltd, be granted to him The same stands posted to 20 2 1936 for hearing If any one is interested in opposing the same one may come and oppose the application by the aforesaid date, otherwise it will be decided in their absence

Mangalore Kasargod P. Vasudeva
[illegible] Rao
Vakil for Petitioner

ಸ್ವಸ್ತಿಕಾ
ಪಿಕ್‌ನಿಕ್ ಬಾತ್ ಸಾಬೂನು.
[illegible]

WARNING

ಉದರವೇದನೆಯಿರುವವರಿಗೆ ಎಚ್ಚರಿಕೆ!

Alex C. Maclean

ಮೆಕ್ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರ್

ಮೆಕ್ಲೀನ್ ಬ್ರ್ಯಾಂಡ್ ಸ್ಟೊಮಕ್ ಪೌಡರ್

Alex C. Maclean

THE 1936 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA—AND—MANGALORE.



ನವರತ್ನ ...

Now For Sale.

Poholium (Balm) (German make). ... Headache. ... complete substitute ...

Superior Red Balm for relieving pains in muscles ... Price As. 12 ...

Wormtonic ... remedy against all sorts of worms ... Price As. 10 per packet.

Pocket Inhaler for coughs and hoarseness ...

Po-Ho Fluid ...

Cough Cure An infallible remedy for coughs ... bronchitis, hoarseness. ... Price As. 12 ... bottle.

The New Curative Earth ...

Toilet Soaps—Scientifically prepared German soaps excellent for health. ...

Basel Mission Book Depot

Mangalore, Branches in Codialbail, ...

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ಚೀನಾ ಮೆಂಚೂರಿಯಾದಲ್ಲಿ ಸೈನಿಕರ ದಂಗೆ!

ಕಲ್ಲಿದ್ದಲಿನ ಗಣಿಗಳಲ್ಲಿ ಭಯಂಕರ ಬೆಂಕಿ! ಕಾಂಗ್ರೆಸ್ಸಿನ ವಿರೋಧ ಪಕ್ಷ!

ಕಲ್ಲಿದ್ದಲಿನ ಗಣಿಗಳಲ್ಲಿ ಭಯಂಕರ ಬೆಂಕಿ.

ಬಿಹಾರಿನ ಜ್ಹಾರಿಯಾ ಎಂಬಲ್ಲಿನ ಒಂದು ಕಲ್ಲಿದ್ದಲಿನ ಗಣಿಯಲ್ಲಿ ಭಯಂಕರ ಬೆಂಕಿಯು ಉಂಟಾಗಿರುತ್ತದೆ. ಸಾಧಾರಣ ೪೨ ಜನರು ಮಡಿದಿರುವರು. ಗಣಿಗಳಲ್ಲಿ ಹುಟ್ಟುವ ಒಂದು ತರದ ಗ್ಯಾಸಿನ ಸ್ಫೋಟನದಿಂದ ಈ ಬೆಂಕಿಯು ಉಂಟಾಗಿರುತ್ತದೆ. ಘಟನೆಯು ಬಹಳ ಅಕಸ್ಮಾತ್ತಾಗಿ ನಡೆದಿರುತ್ತದೆ. ಗಣಿಯ ಅನೇಕ ಉದ್ಯೋಗಸ್ತರು ಮೃತರಾಗಿರುವರು. ಸಾಧಾರಣ ೬ ದೊಡ್ಡ ಉದ್ಯೋಗಸ್ತರು ಮಡಿದಿರುವರೆಂದು ತಿಳಿದು ಬರುತ್ತದೆ. ಸರಕಾರವು ಈ ಗಣಿಗಳನ್ನು ತತ್ಕಾಲಕ್ಕೆ ಮುಚ್ಚಲ್ಪಡುವ ಕ್ರಮವನ್ನು ಜ್ಯಾರಿಮಾಡುವ ವಿಚಾರ ಆಲೋಚಿಸುತ್ತಿದೆ. ಗಣಿಗಳಲ್ಲಿ ನೀರು ಬಿಡುವುದೇ ಈ ಕಷ್ಟ ನಿವಾರಣೆಯ ಒಂದು ಉಪಾಯ. ಆದರೆ ಹೀಗೆ ಮಾಡಿದರೆ ಸಾಧಾರಣ ೧೮ ತಿಂಗಳ ವರೆಗೆ ಕೆಲಸ ನಡೆಯಿಸಲು ಸಾಧ್ಯವಾಗದು. ಅಂದರೆ, ಈ ಸಮಯ ಸಾವಿರ ಗಟ್ಟಲೆ ಜನರು ನಿರುದ್ಯೋಗಿಗಳಾಗುವರು. ಆದುದರಿಂದ ಈ ಬೆಂಕಿಯನ್ನು ತಡೆಯಲು ಬೇರೆ ಉಪಾಯಗಳನ್ನು ನಡೆಯಿಸುತ್ತಿದ್ದಾರೆ. ಸಾಧ್ಯವಾಗದಿದ್ದರೆ ಮೇಲಿನ ಉಪಾಯವನ್ನೇ ಅನುಸರಿಸುವರು.

ಗೂಡ್ಸ್ ಟ್ರೈನೊಂದು ಸ್ಟೇಶನನ್ನು ನುಗ್ಗಿತು

ಮೊನ್ನೆ ರಾತ್ರಿ ಸಾಧಾರಣ ೨-೩೦ಕ್ಕೆ ಬಿಹಾರಿನ ಒಂದು ರೈಲ್ವೇ ಸ್ಟೇಶನಿನಲ್ಲಿ ಒಂದು ಭಯಂಕರ ಅಪಘಾತವು ನಡೆಯಿತು. ಅಲ್ಲಿಯೇ ಹತ್ತಿರ ಓಡುತ್ತಿರುವ ಒಂದು ಗೂಡ್ಸ್ ಟ್ರೈನು ನಿಲ್ಲಿಸಲಿಕ್ಕೆ ಸಾಧ್ಯವಾಗದೆ, ಹತ್ತಿರವಿರುವ ಸೆಕೆಂಡ್ ಕ್ಲಾಸ್ ವೈಟಿಂಗ್ ರೂಮಿಗೆ ಡಿಕ್ಕಿ ಹೊಡೆದು ಬುಕಿಂಗ್ ಆಫೀಸನ್ನು ನುಗ್ಗಿ ಮೂರನೆ ತರಗತಿಯ ಪ್ರಯಾಣಿಕರು ಕುಳಿತುಕೊಳ್ಳುವ ಸ್ಥಳದ ವರೆಗೆ ಚಲಿಸಿರುತ್ತದೆ. ೫ ಜನರು ಮೃತರಾಗಿರುವರು. ಮೃತರಾದವರು ಪುಡಿಪುಡಿಯಾಗಿದ್ದುದರಿಂದ ಅವರ ಗುರುತು ಹಿಡಿಯಲು ಸಾಧ್ಯವಾಗಲಿಲ್ಲ. ಸ್ಟೇಶನು ಮಾಸ್ತರರೂ ಮಡಿದಿರುತ್ತಾರೆ.

ಕಾಂಗ್ರೆಸ್ಸಿಗೆ ಒಂದು ವಿರೋಧ ಪಕ್ಷ.

ಬ್ರಿಟಿಷ ಲೇಬರ್ ಪಕ್ಷದ ಸೂತ್ರಗಳನ್ನನುಸರಿಸಿ ಮದ್ರಾಸು ಜಸ್ಟಿಸ್ ಪಂಗಡದವರ ರಾಜಕೀಯ ಮತಗಳುಳ್ಳ ಕಾಂಗ್ರೆಸ್ಸನ್ನು ವಿರೋಧಿಸುವ ಒಂದು ಅಖಿಲ ಭಾರತ ಸಂಸ್ಥೆಯು ಇದೇ ತಿಂಗಳಲ್ಲಿ ನಾಸಿಕದಲ್ಲಿ ಜನ್ಮ ಹೊಂದುವುದು. ಕಾಂಗ್ರೆಸ್ಸು ಈಗ ಹಿಡಿದಿರುವ ರಾಜಕೀಯ ವಾತಾವರಣದಿಂದ ದೂರಮಾಡುವುದೇ ಈ ಸಂಘದ ಮುಖ್ಯ ಉದ್ದೇಶ. ಈ ಸಂಘದ ಆರ್ಥಿಕ ಮತ್ತು ಇತರ ಸಹಕಾರವನ್ನು ಅನೇಕರು ವಾಗ್ದಾನ ಮಾಡಿರುತ್ತಾರಂತೆ.

ಫ್ರೆಂಚರ ಉದ್ಗಾರ.

ಮಿ। ಲಾವಲರ ನಾಯಕತ್ವದಲ್ಲಿರುವ ಫ್ರೆಂಚ ಸರಕಾರವು ರದ್ದಾಗಿರುತ್ತದೆ. ಹೋದಂತೆ ಲಾವಲರೂ ತನ್ನ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟಿರುತ್ತಾರೆ.

ಫ್ರೆಂಚರ ರಿಪಬ್ಲಿಕನ ಸರಕಾರವು ಚುನಾವಣೆ ಕಾರ್ಯವನ್ನು ಪ್ರಜಾಪ್ರಭುತ್ವದ ಸೂತ್ರಗಳನ್ನನುಸರಿಸಿ, ಎಲ್ಲರೂ ಅದರಲ್ಲಿ ಕೈಯಿಡುವಂತೆ ನಡೆಯಿಸುವರೆಂದು ಭರವಸೆ ಕೊಟ್ಟಿರುತ್ತದೆ. ವಿರೋಧದ ಕಾಂತರಕ್ಕೆಗೆ ಆಂಗ್ಲೋ-ಫ್ರೆಂಚ ಮೈತ್ರಿಯು ಅತಿಗತ್ಯವಾದುದೆಂದು ಇವರ ಅಭಿಪ್ರಾಯ. ಜರ್ಮನಿಯು ಕೂಡ, ಶಾಂತಿ ಪ್ರೇರಣೆಯ ಜನಾಂಗವಾಗುವುದೆಂದು ಅವರ ಮಹದಾಶೆ. ಈ ಭಾವಿ ಸರಕಾರಕ್ಕೆ ೧೫೦ ಸದಸ್ಯತನಗಳು ಅಧಿಕವಾಗಿ ದೊರಕುವುದೆಂದು ಊಹಿಸಲಾಗಿದೆ.

ಆಂಗ್ಲೇಯ ಐಗುಪ್ತ ಮಾತುಕತೆಗಳು.

ಐಗುಪ್ತದ ಪ್ರಾತಿನಿಧ್ಯ ಮಂಡಲಕ್ಕೂ, ಬ್ರಿಟಿಷ ಹೈಕಮಿಶನರಿಗೂ ಆಂಗ್ಲೇಯ ಐಗುಪ್ತ ಸಂಬಂಧದ ಕುರಿತು ಮಾತುಕತೆಗಳು ನಡೆಯಿಸಲು ಸಿದ್ಧತೆಗಳಾಗುತ್ತಿವೆ. ಐಗುಪ್ತವು ೧೯೧೪ರಲ್ಲಿ ಬ್ರಿಟಿಷರ ರಕ್ಷಣೆಗೆ ಒಳಗಾಯಿತು. ೧೯೨೨ರಲ್ಲಿ ಸುಲ್ತಾನರಿಗೆ ಪಟ್ಟಕಟ್ಟಲಾಯಿತು. ಈ ಸಮಯದಲ್ಲಿ ಕೆಳಗಿನ ನಾಲ್ಕು ವಿಚಾರಗಳ ಇತ್ಯರ್ಥವಾಗಿರಲಿಲ್ಲ.

ಸುಯೇಜ ಕಾಲುವೆ ಇತ್ಯಾದಿ ಇಂಪೀರಿಯಲ್ ಮಾರ್ಗೋಪಾಯಗಳ ಅಧಿಕಾರ, ಹೊರಗಿನ ಆಕ್ರಮಣಗಳಿಂದ ಐಗುಪ್ತದ ರಕ್ಷಣೆ, ಐಗುಪ್ತದಲ್ಲಿರುವ ಇತರ ಯುರೋಪ್ ಜನಾಂಗಗಳ ಹಿತವನ್ನು ರಕ್ಷಿಸುವುದು ಮತ್ತು ಸುಡಾನಿನ ಸ್ಥಿತಿ.

ಇತ್ತೀಚೆಗೆ ರಚನೆಯಾದ ನ್ಯೂಟ್ರಲ್ ಸರಕಾರದ ರಚನೆಯಿಂದ, ಐಗುಪ್ತದ ಕ್ಷೋಭೆಯು ಶಾಂತವಾಗಿರುತ್ತದೆ. ಮಾತ್ರವಲ್ಲದೆ ಒಪ್ಪಂದದ ಮಾತುಕತೆಗಳಿಗೆ ಒಂದು ಹಾದಿ ಉಂಟಾಗಿರುತ್ತದೆ. ಇವುಗಳು ಜಯಕಾರಿಯಾಗುವವೆಂದು ಭರವಸೆ ಉಂಟು.

ಸಂಯುಕ್ತ ಅಮೇರಿಕಾದಲ್ಲಿ.

ಜ್ಯಾರಿಯಾದ ಕೆಲವು ಸಾಂಪತ್ತಿಕ ದುಸ್ಥಿತಿ ನಿವಾರಣೆ ಯೋಜನೆಗಳು,-ಎಗ್ರಿಕಲ್ಚರ್ ಎಡ್ಮಿನಿಸ್ಟ್ರೇಶನ್ ಎಕ್ಟು, ನೇಶನಲ್ ರಿಕವರಿ ಎಕ್ಟು ಇವೇ ಮೊದಲಾದ ಸಾಗುವಳಿಯ ಮತ್ತು ಕೈಗಾರಿಕೆಗಳ ಅಭ್ಯುದಯದಾಗುವ, ನಿರುದ್ಯೋಗ ನಿವಾರಣೆಯಾಗುವ, ಪ್ರೆಸಿಡೆಂಟ ರೂಸ್‌ವೆಲ್ಟರ ಹೊಸ ಯೋಜನೆಗಳು ಅನ್ಯಾಯಕರವೆಂದು ಅಲ್ಲಿನ ಸುಪ್ರಿಮ್ ಕೋರ್ಟಿನವರಿಂದ ಇತ್ಯರ್ಥವಾಗಿರುತ್ತದೆ. ಅಮೇರಿಕಾದಲ್ಲಿ ಸ್ವಾತಂತ್ರ್ಯ ರಾಜ್ಯ ಸ್ಥಾಪನೆಯಾಗುತ್ತಿರುವ ಸಮಯ, ಸ್ಥಾಪನೆಯಾದ ಸರಕಾರದ ಶಾಸನಗಳ ಪ್ರಕಾರ ಅಲ್ಲಿನ ಕಾಂಗ್ರೆಸ್ಸಿನಲ್ಲಿ ಜ್ಯಾರಿಯಾಗುವ ಮಸೂದೆಗಳು ಸುಪ್ರೀಮ್ ಕೋರ್ಟಿನವರ ಅಭಿಮತ ಪಡೆಯಬೇಕು. ರೂಸ್‌ವೆಲ್ಟರ ಕ್ರಮಗಳು ಕೆಲಸಗಾರರ ಮಧ್ಯತರಗತಿಯ ಜನರ, ರೈತರು ಮೊದಲಾದವರಿಗೆ ಬಹಳ ಉಪಕಾರಿಗಳಾಗಿದ್ದವು. ರೈತರ ಫಲಗಳಿಗೆ ಯೋಗ್ಯ ಬೆಲೆಯು ಬರುವಂತೆಯೂ, ಸಾಗುವಳಿಯ ಅಭಿವೃದ್ಧಿ ಮಾಡಲು, ಈ ಸಾಗುವಳಿ ವಸ್ತುಗಳನ್ನು ಉಪಯೋಗ ಮಾಡುವವರಿಗೊಂದು ತೆರಿಗೆಯನ್ನು ವಿಧಿಸುವಂತೆಯೂ, ಕೈಗಾರಿಕೆಯು ಕೆಲಸಗಾರರಿಗೆ ಹಿತವಾಗುವ ರೀತಿ ನಡೆಯುವಂತೆಯೂ ಮಾಡುವುದು ರೂಸವೆಲ್ಟರ ಮೇಲಿನ ಕ್ರಮಗಳ ಮುಖ್ಯ ಉದ್ದೇಶಗಳಾಗಿದ್ದವು. ಆದರೆ ಅಲ್ಲಿನ ಸಿರಿವಂತ ಧನಿಕರು ಮಿಲಿಯಾಧಿಪತಿಗಳು ತಮಗೆ ಹಾನಿಕರವೆನಿಸುವ ಸಾರ್ವಜನಿಕ ಹಿತವಾದ ಈ ಮೇಲಿನ ಕ್ರಮಗಳನ್ನು ಎಂದಿಗೂ ಸಹಿಸಲಾರರು. ಇವರಿಂದಲೆ ಸುಪ್ರಿಮ್ ಕೋರ್ಟಿನವರು ಇವನ್ನು ಖಂಡಿಸಿದ್ದಾರೆ. ಪ್ರೆಸಿಡೆಂಟ ರೂಸವೆಲ್ಟರ ಅಧ್ಯಕ್ಷತನಕ್ಕೆ ಇನ್ನು ಸ್ವಲ್ಪ ಸಮಯವೇ ಇರುವುದು. ಅವರು ಮತ್ತೊಮ್ಮೆ ಅಧಿಕಾರಕ್ಕೆ ಬಾರದಿದ್ದರೆ, ಆಗ ರೈತರ ಸಂಕಷ್ಟನಿವಾರಣೆ, ಆರ್ಥಿಕ ಮುಗ್ಗಟ್ಟಿನ ನಿವಾರಣೆ ಮಜೂರರ ಸುಧಾರಣೆ, ಇದೇ ಅಮೇರಿಕ ಸಾಂಪತ್ತಿಕ ಸ್ಥಿತಿಯ ಉದ್ಧಾರವಾಗಲು ಸಂಭವಗಳು ದೊರಕಲಾರವು. ಒಂದೂವರೆ ಶತಮಾನದ ಹಿಂದೆ ರಚನೆಯಾದ ಈಗಿನ ಅಲ್ಲಿನ ರಾಜಶಾಸನವು ರಾಷ್ಟ್ರೀಯ ಹಿತಕ್ಕಾಗಿ ಬದಲಾವಣೆ ಹೊಂದತಕ್ಕದು. ಹೀಗಾಗದಿದ್ದರೆ ನೊಂದ ಅಮೇರಿಕಾನರು ಕ್ರಾಂತಿಯೆಬ್ಬಿಸದೆ ಇರಲಾರರು.

ಸೆಂಕ್ಷನುಗಳ ಪರಿಣಾಮ

ಇವುಗಳ ಪರಿಣಾಮಗಳನ್ನು ಸರಿಯಾಗಿ ತಿಳಿಯುವಂತೆ ಜನಾಂಗಸಭೆಯ ಸೆಂಕ್ಷನು ಕಮಿಟಿಯು ಸೆಂಕ್ಷನುಗಳಲ್ಲಿ ಭಾಗವಹಿಸದ ಎಲ್ಲಾ ಸದಸ್ಯರಲ್ಲದ ಜನಾಂಗಗಳಿಂದ ಅಂದರೆ ಆಸ್ಟ್ರೀಯ ಹಂಗೇರಿ ಮತ್ತು ಅಲ್ಬೇನಿಯಾ ದೇಶಗಳೂ ಇಟೇಲಿಯೊಡನೆ ನಡೆಯಿಸಿದ ವ್ಯಾಪಾರ ವ್ಯವಹಾರದ ವರದಿಗಳನ್ನು ಕರೆದಿರುತ್ತದೆ.

ಮುಸಲೋಲಿನಿಯವರ ಭಾಷಣ

ಕಳೆದ ಆದಿತ್ಯವಾರ ಮುಸಲೋನಿಯವರು ಇಟಲಿಯ ಫೆಸಿಯಿಸ್ಟರ ಗ್ರೆಂಡ್ ಕೌನ್ಸಿಲಿನಲ್ಲಿ ಎರಡು ತಾಸಿನ ತನಕ ಒಂದು ಗಂಭೀರ ಭಾಷಣವನ್ನು ಮಾಡಿದರು. ಇದರಲ್ಲಿ ಇಟೇಲಿಯ ಸಂಗ್ರಾಮಿಕ ಮತ್ತು ರಾಜಕೀಯ ಸ್ಥಿತಿಗಳು ವಿವರಿಸಲಾದುವು. ಈ ಕೌನ್ಸಿಲು ಫೆಬ್ರವರಿ ತಾ ೪ರಲ್ಲಿ ಪುನಹ ಸಭೆಸೇರಲು ನಿರ್ಧಾರವಾಗಿತ್ತು. ತಾ ೩ರಲ್ಲಿ ಎಣ್ಣೆ ಸೆಂಕ್ಷನುಗಳನ್ನು ಜ್ಯಾರಿಮಾಡುವ ಕುರಿತು ಆಲೋಚಿಸಲು ಜನಪದಮಂಡಳದ ಸಭೆಯು ಸೇರಿತು. ಆದ್ದರಿಂದ ೪ನೇ ತಾರೀಕಿನಲ್ಲಿ ಜರಗಿದ ಇವರ ಸಭೆಯು ಬಹುಶಃ ಎಣ್ಣೆಯ ಸೆಂಕ್ಷನುಗಳು ಜ್ಯಾರಿಗೆ ಬರುವ ಸಂಭವದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ನಿರ್ಧರಿಸಲು ಸೇರಲಾಗುವುದೆಂದು ಊಹೆ.

ಚೀನಾದ ಮೆಂಚ್ಯೂರಿಯಾದಲ್ಲಿ ಸೈನಿಕರ ದಂಗೆ.

ಜಪಾನಿಯರಿಗೆ ವಿರೋಧವಾಗಿ ಮೆಂಚ್ಯೂರಿಯಾದ ಮಂಚುಕ್ಕೊ ಸೈನಿಕರು ದಂಗೆ ಎಬ್ಬಿಸಿರುವರೆಂದು 'ಟೋಕಿಯೊ' ಎಂಬ ಜಪಾನಿನ ಮೂಲ ನಗರದಿಂದ ವಾರ್ತೆ ಬಂದಿರುತ್ತದೆ. ಮಂಚುಕ್ಕೊ ಸೈನಿಕರಿಗೂ ಜಪಾನಿಯರಿಗೂ ಬಹಳ ಕದನ ನಡೆದು ಇತ್ತಂಡದವರಿಗೂ ಸರಿಸಮಾನವಾದ ಹಾನಿಯುಂಟಾಗಿರುತ್ತದೆ. ೧೧ ಜನ ಜಪಾನಿಯರ ಸೈನಿಕರು ಮಡಿದರು. ೧೦ ಜನರು ಗಾಯ ಹೊಂದಿರುವರು. ಆದರೆ ಮಂಚೂಕ್ಕೊ ದಂಗೆದಲ್ಲಿ ಈರ್ವರು ಮಡಿದಿರುವರೆಂದೂ, ಈರ್ವರಿಗೆ ಜಖಂ ಆಗಿದೆಂದು ವಾರ್ತೆ ಬಂದಿರುತ್ತದೆ.

ಆದರೆ ದಂಗೆಯೆದ್ದ ಅನೇಕ ಸೈನಿಕರನ್ನು ಕೊಲೆಮಾಡಿರುವರೆಂದೂ ಅನೇಕರು ಜಖಂ ಹೊಂದಿರುವರೆಂದು ಇನ್ನೊಂದು ವಾರ್ತೆಯು ಬಂದಿರುತ್ತದೆ. ಸತ್ತವರಲ್ಲಿ ಓರ್ವ ದಳಪತಿಯೂ ಇರುವನಂತೆ.

8000 ಇಟೇಲಿಯಾನರು ಮಡಿದರು.
5000 ಮಂದಿ ಗಾಯ ಹೊಂದಿರುವರು

ಎಬಿಸೀನಿಯಾದ ತೆಂಬಿಯನ್ ಪ್ರಾಂತ್ಯದಲ್ಲಿ ನಡೆದ ಸಮರದ ಕುರಿತು ಹೊಸ ವಾರ್ತೆಯು ಬಂದಿರುತ್ತದೆ. ಇಟೇಲಿಯಾನರನ್ನು ಸಂಪೂರ್ಣ ಸದೆಬಡೆದುದು ಇದು ಪ್ರಥಮ ಸಲವಾಗಿರುತ್ತದೆ. ಇಟೇಲಿಯಾನರ ಆಶಾಭಂಗವು ಇಲ್ಲಿ ಸಂಪೂರ್ಣವಾಗಿದೆ. ಆದರೆ ಇಟೇಲಿಯಾನರಿಗೆ ಇಲ್ಲಿ ಜಯ ಲಭಿಸಿದೆಂದು, ರೋಮು ನಗರದಿಂದ ವಾರ್ತೆ ಹರಡಿತ್ತು. ೮೦೦೦ ಇಟೇಲಿಯಾನ ಸೈನಿಕರು ಮಡಿದಿರುವರು. ೫೦೦೦ ಗಾಯ ಹೊಂದಿರುವರು. ೧೫೦೦ ಹಬಸಿ ಸೈನಿಕರು ಮಡಿದಿರುವರು. ಮಕಾಲೆಯನ್ನು ಹಿಡಿಯುವುದರಲ್ಲಿ ಹಬಸಿಗಳು ತುಂಬಾ ಭರವಸೆಯುಳ್ಳವರಾಗಿದ್ದಾರೆ. ಎರಿಟ್ರಿಯಾದಿಂದ ಮಕಾಲೆಗೆ ಹೋಗುವ ೭೫ ಮೈಲು ಉದ್ದ ರಸ್ತೆಯನ್ನು ವಶೀಕರಿಸಲು ಬಹಳ ಪ್ರಯತ್ನಪಡುತ್ತಿದ್ದಾರೆ.

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪನೆ: 1906.

ಇದೇ ತಿಂಗಳ ತಾ 14ನೇ ಶುಕ್ರವಾರ ನಮ್ಮ ಎಲ್ಲ ಬಗೆಯ ಬ್ಯಾಂಕಿಂಗ ವಹಿವಾಟುಗಳನ್ನು ಯಥಾ ಪ್ರಕಾರ ನಡಿಸುವ ಸಲುವಾಗಿ

ಮೂಲ್ಕಿಯಲ್ಲಿ

ನಮ್ಮದೊಂದು ಶಾಖೆಯನ್ನು ತೆರೆಯಲಿರುವೆವು ಎಂದು ತಿಳಿಸುವುದಕ್ಕೆ ಸಂತೋಷಪಡುತ್ತೇವೆ

ನೋಟೀಸು.

ಹಿಂದೂಸ್ಥಾನ ಸಿನೇಮಾ ಲಿಮಿಟೆಡ್, ಮಂಗಳೂರು.

ಸದರಿ ಕಂಪೆನಿಯ ಪಾಲುವಸ್ತಾಲಿಕರ ಪೈಕಿ ಪೂರ್ಣ ಪಾಲುಭಂಡವಾಳವನ್ನು ಸಲ್ಲಿಸದೆ ಇದ್ದವರೆಲ್ಲರೂ ಬಾಕಿಯನ್ನು ಇದೇ ತಾರೀಖು 17ರ ವಳಗೆ ಲಿಕ್ವಿಡೇಟರನಾದ ನನಗೆ ವಸೂಲು ಕೊಡತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ದಾವೆಗಳು ದಾಖಲಾಗುವವು

Mangalore, 6—2—'36 — **M Keshava Pai,** *Liquidator*

In the Court of the Dt. Munsiff of Mangalore.

I. P. No. 2/1936.

Between—

K Hasane Beary son of Kulai Hamma Beary, Kulai Village of Mangalore Taluk—Petitioner. Debtor.

and

Alphonse Pais & others—Respondents Creditors

Notice is hereby given that the abovenamed petitioner has applied to the above court to be adjudged an insolvent and the said petition is posted to 19—2—1936 for hearing Such of those who are interested in the petition may appear in person or by pleader on the above said date at 11 a. m before the said court In their absence the petition will be heard exparte

Mangalore, 3-2-1936 — **S Venkat Rao,** Vakil for Ptr

In the Court of the Dt Judge of South Kanara

O. P No 10/36

In the matter of the guardianship of the minors Saraswathi and Dayananda

Between—

Pappadakaran Raman—Pter

and

Parvathi— Respt

To the Respondent and all the persons concerned

Please hereby take notice that the above Petitioner has applied to this court that he should be appointed the guardian of the person and property of his minor children aforesaid and that sanction for raising a loan of Rs 100/ by pledging his own life Insurance policy No 56400 in the Empire of India Life Assurance Co, Ltd, be granted to him The same stands posted to 20-2-1936 for hearing If any one is interested in opposing the same he may come and oppose the application by the aforesaid date. Otherwise it will be decided in their absence

Mangalore, 5-2 36 — **Kasargod P. Vasudeva Rao**, *Counsel for Petitioner.*



WARNING

ಉದರವೇದನೆಯಿರುವವರಿಗೆ ಎಚ್ಚರಿಕೆ!

ಪ್ರತಿಯೊಂದು ತಾಜಾ ಬಿಲ್ಲೆಯ ಮೇಲೆ ಈ ಕೆಂಪು ಮುದ್ರೆಯಿದೆಯೋ ನೋಡಿ.

ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಇರುವ ಪ್ರತಿಯೊಂದು ತಾಜಾ ಬಿಲ್ಲೆಯ ಮೇಲೆ ಮೇಲಿನ ಮುದ್ರೆಯು ಅದರ ತಲೆಯಲ್ಲೂ ಬುಡದಲ್ಲೂ ಇದೆ

Alex C Maclean

ಎಂಬ ಸಹಿಯು ಸೀಲ್, ಬಿಲ್ಲೆ ಮುಚ್ಚಾದಲೆಗಳ ಮೇಲಿದೆ ಮಾರ್ಟಿನ್ ಎಂಡ್ ಹೆರಿಸ್, ಲಿಮಿಟೆಡ್ 15 ಸಂಕುರಾಮ ಚೆಟ್ಟಿಸ್ಟ್ರೀಟ್ ಮದ್ರಾಸು



ಅಜೀರ್ಣ, ಆಮ್ಲ, ಅಗ್ನಿಮಾಂದ್ಯ ವಾತ, ಎದೆಯುರಿ, ಜಠರಾಗ್ನಿ ಮತ್ತು ಉದರ ಬಾಧೆಗಳ ಹಲವು ರೋಗಗಳನ್ನು ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಅತ್ಯದ್ಭುತಕರವಾಗಿ ಗುಣಪಡಿಸಿದುದರ ಫಲವಾಗಿ ಮಾರ್ಕೆಟಿಗೆ ಹಲವು ನಕಲಿ ಮಾಲುಗಳು ಬಂದಿವೆ. ಆದುದರಿಂದ Alex C Maclean ಎಂಬ ದಸ್ಕತಿರುವ ಮಾಲಸ್ತುವನ್ನೇ ಪಡೆಯುವಂತೆ ಎಚ್ಚರಿಕೆ!

ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸಶ ಶೋಧಿತವಾದ ಸೂತ್ರಗಳ ಮೇಲೆ ಆಧರಿಸಿಟ್ಟು ತಯಾರಿಸಲಾಗುತ್ತದೆ ಯಾವ ಬಗೆಯ ಅಸಮರ್ಪಕತೆಯೂ, ಅಶುದ್ಧತೆಯೂ ಅದನ್ನು ಪರಿಪೂರ್ಣ ನಿಷ್ಪ್ರಯೋಜಕವನ್ನಾಗಿ ಮಾಡುವುದು ಖಂಡಿತ, ಕೆಲವು ನಕಲಿ ಮಾಲುಗಳ ಕ್ರಿಯೆಯನ್ನು ಗಣಿಸುವಾಗ ಮೆಕ್‌ಲೀನ್ಸ್ ಲಿಮಿಟೆಡ್‌ನವರು ತಮ್ಮ ತಯಾರಿಯಲ್ಲಿಟ್ಟ ಜಾಗ್ರತೆಯೂ ಅವುಗಳ ತಯಾರಿಯಲ್ಲಿ ಇಲ್ಲವೆಂದು ವ್ಯಕ್ತವಾಗುತ್ತದೆ. ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನಲ್ಲಿ ಅತ್ಯುತ್ಕೃಷ್ಟ ಸಾರವನ್ನೇ ಪ್ರಯೋಗಿಸಲಾಗಿದೆ ಅದರ ಮಿಶ್ರಣ ಕಾರ್ಯವನ್ನು ಅನುಭವಶಾಲಿಗಳಾದ ಕೆಮಿಸ್ಟರರು ಆರೋಗ್ಯ ಸೂತ್ರಗಳನ್ನು ಲಕ್ಷಿಸಿಯೇ ಮಾಡುವರು

ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಪಡೆಯುವಂತೆ ಎಚ್ಚರಿರಿ Alex C Maclean ಎಂಬ ದಸ್ಕತಿದೆಯೋ ನೋಡಿ ಅದನ್ನು ಬಿಡಿಯಾಗಿ ಮಾರುವುದಿಲ್ಲ ಬಾಟ್ಲಿಯಲ್ಲಿ ಪೌಡರಿನ ರೂಪದಲ್ಲಿ ಮಾರಲಾಗುತ್ತದೆ ಸ್ಥಳೀಯ ಕೆಮಿಸ್ಟರಿಂದಾಗಲೀ, ಸ್ಟೋರುಗಳಲ್ಲಾಗಲೀ ದೊರೆಯದಿದ್ದರೆ— **ಮಾರ್ಟಿನ್ ಎಂಡ್ ಹೆರಿಸ್, ಲಿಮಿಟೆಡ್.** ಇಲ್ಲಿಗೆ ಬರೆಯಿರಿ

546

935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA—AND—MANGALORE.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1-8-0 8 ಔನ್ಸ್ ರೂ. 0-14-0.

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಅಯೊಡ್ಯಾಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

4 ಔನ್ಸ್ ರೂ. 1—0—0 8 ಔನ್ಸ್ ರೂ 1—8—0.

ದಕ್ಷಿಣ ಕನ್ನಡದ ಏಜಂಟರು—ಪೊಪ್ಯುಲರ ಸ್ಟೋರ್ಸ್, ಮಂಗಳೂರು.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds Cuts, Colds, Headache It is a complete substitute for the domestic medicine chest Try once this unequalled remedy In ¼oz tin As 3/- In oz jar As 12/-

Superior Red Balm For relieving pains in muscles and on skin Directions for use with the bottle Price As 12/- only

Wurmteufel Is a soverign remedy against all sorts of worms in stomach and in the intestines Physicians enjoying authoritativeness describe it as radical remedy and warmly recommed it All those who suffer from worms, children and adults, try this unique remedy and be freed from your ailment. Price As 10 per packet.

Pocket Inhaler For coughs and hoarseness, headache catarrh, colds use this inhaler and you will be relieved immediately Price per inhaler As 6 & As 8/-

'Po-Ho Fluid For Asthma, colds, indigestion, toothache lumbago, a sure remedy in all cases Price As 6/- and Re 1/- per phial.

Cough Cure An infallible remedy for coughs of all kinds bronchitis, hoarseness Particulars in bottle. Price As. 12/- for 8 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health. Price As. 1/3, 2/6, 3/-, 4,

Basel Mission Book Depot

Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ವನಿತಾ ವಿಭಾಗ.

ಹೆಂಗಸರಿಗೆ ವಿಶೇಷವಾಗಿ ಬೇಕಾದ್ದೇನು?

ಹೆಂಗಸರಿಗೆ ವಿಶೇಷವಾಗಿ ಬೇಕಾದ್ದೇನು? ಪ್ರೇಮವೇ? ಮಕ್ಕಳೇ? ಮನೆಯೇ? ಯಶಸ್ಸೇ? ಹೀಗೆಂದು ಪಿಯರ್ಸನ್ಸ್ ವೀಕ್ಲಿಯ ಸಂಪಾದಕರು ಹಲವು ಪ್ರಸಿದ್ಧ ಹೆಂಗಸರನ್ನು ಕೇಳಿದ್ದಕ್ಕೆ ಕೆಲವು ಕೆಳಗೆ ಕಂಡ ಉತ್ತರಗಳು ಬಂದಿವೆ.

ಎಲೆನ್ ವಿಲ್ಕಿನ್ಸನ್ (ಪಾರ್ಲಿಮೆಂಟಿನ ಸದಸ್ಯರು) ಹೆಂಗಸಿನ ಜೀವನದಲ್ಲಿ ಮುಖ್ಯವಾದದ್ದು ಕೆಲಸ. ಜನತೆಯ ಸುಖಕ್ಕೆ ಯಾವುದಾದರೊಂದು ಹೊಸಸಾಧನೆಯನ್ನು ಹುಡುಕಲೆತ್ನಿಸುವ ಹೆಂಗಸೇ ನಿಜವಾದ ಆನಂದಶಾಲಿ.

ಯೌವನದ ವಿಷಯಾಸಕ್ತಿಗಳನ್ನು ವಯಸ್ಸಾದ ಮೇಲೆ ಕೂಡ ಮುಂದುವರಿಸಬೇಕೆನ್ನುವವರಿಗೆ ಬೇಗನೇ ಜೀವನವು ಟೊಳ್ಳಾಗಿ ಕಾಣುವದು.

ಹೆಂಗಸಿಗೆ ಮದುವೆಯೂ ಒಂದು ಮುಖ್ಯವಾದ ವಿಷಯವೇ ಆದರೂ ಅದು ಸ್ವಾರ್ಥ ಸುಖದ ಗಮ್ಯವಾಗಿರಬಾರದು, ಜನತೆಯ ಸುಖಕ್ಕೆ, ತಾನು ದುಡಿಯುತ್ತಿರುವ ಕಾರ್ಯಕ್ಕೆ ಮದುವೆಯು ಎಷ್ಟರ ಮಟ್ಟಿಗೆ ನೆರವಾಗುವದೆಂಬುದನ್ನು ನೋಡಬೇಕು.

ಅರ್ನಾಲ್ಡ್ ಬೆನ್ನೆಟ್ (ಕಾದಂಬರಿಕಾರರು) — ಆಧುನಿಕ ಮಾರ್ಗವು ಒಂದು ಉದ್ಯೋಗ ಸಂಪಾದಿಸುವ ರೀತಿಯಲ್ಲಿದ್ದರೂ ಪ್ರೇಮವು ಹೆಂಗಸಿನ ಹೆಚ್ಚಿನ ಜೀವನ ಭಾಗವನ್ನು ಆವರಿಸುತ್ತದೆ. ಪ್ರೇಮವೇ ಜೀವನ ಸರ್ವಸ್ವ ಎಂದು ಬೈರನ್ ಕವಿ ಹೇಳಿದ್ದು ಸರಿಯೆಂದು ನನಗೆ ಕಾಣುತ್ತದೆ.

ಹೆಂಗಸು ತನ್ನ ಪ್ರೇಮ ಜೀವನದಲ್ಲಿ ಅಸುಖಿಯಾಗಿದ್ದರೆ ಜೀವನದ ಮತ್ತಾವ ರಂಗದಲ್ಲಿಯೂ ಹೆಚ್ಚಿನ ಕಾರ್ಯಸಾಧನೆಯನ್ನು ಮಾಡಲಾರಳೆಂದು ಸುಮಾರಾಗಿ ಹೇಳಬಹುದು. ಒಂದರ ಛಾಯೆಯು ಮತ್ತೊಂದರ ಮೇಲೆ ಬಿದ್ದೇ ಬೀಳುತ್ತದೆ. ಗಂಡಸಿನಲ್ಲಿ ಪ್ರೇಮವು ಪ್ರಥಮ ಸ್ಥಾನವನ್ನು ಪಡೆದಿರುವುದಿಲ್ಲ. ಪ್ರೇಮ ಜೀವಿತವು ಸಿಗದೆ ಹೋದರೆ ಇತರ ಕಾರ್ಯರಂಗಗಳೆಷ್ಟೊ ಇವೆ ಅವನಿಗೆ.

ಆದರೆ ಹೆಂಗಸು ಅಂಥ ಸಂದರ್ಭಗಳಲ್ಲಿ ಧೈರ್ಯವಾದ ತೋರಿಕೆಯನ್ನು ಹಾಕಿಕೊಂಡಿದ್ದರೂ ಅವಳ ಹೃದಯ ವೇದನೆಗೆ ಪಾರವಿರುವದಿಲ್ಲ. ಒಟ್ಟಾರೆ ಮನೆ, ಗಂಡು ಮಕ್ಕಳು—ಎಲ್ಲಾ ಪ್ರೇಮದಲ್ಲಿ ಕೂಡಿ ಹೋಗುತ್ತದೆ.

ಜೆಸ್ಸಿ ಮೆಥ್ಯೂಸ್ (ಪ್ರಸಿದ್ಧ ನಟಿ)—ಹೆಂಗಸಿಗೆ ಆರೋಗ್ಯವು ಮುಖ್ಯವೆಂದು ಹೇಳುತ್ತೇನೆ. ಆದರೆ ಜೀವನದಲ್ಲಿ ಆರೋಗ್ಯವೇ ಮುಖ್ಯವೆಂದು ಹೇಳಿದ ಮೇಲೆ ಅದನ್ನು ತಾನೊಬ್ಬಳೇ ಅನುಭವಿಸುವದು ಉಚಿತವಲ್ಲ. ಆದ್ದರಿಂದ ನನಗನ್ನಿಸುವದೇನೆಂದರೆ ಆರೋಗ್ಯಕ್ಕೆ ಜೊತೆಯಲ್ಲಿ ಪ್ರೇಮಿಸುವವರು ಯಾರಾದರೊಬ್ಬರಿರಬೇಕು.

ಉದ್ಯೋಗ ಗೃಹಜೀವನ—ಇವೆರಡನ್ನು ನನ್ನ ಮುಂದಿಟ್ಟು ಒಂದನ್ನು ಆರಿಸು ಎಂದು ಯಾರಾದರೂ ಕೇಳಿದರೆ, ಉದ್ಯೋಗವೆಷ್ಟು ಲಾಭದಾಯಕವಾಗಿರಲಿ ಗೃಹಜೀವನವನ್ನೇ ಆರಿಸುವೆನು.

ಗೃಹಕೃತ್ಯ ನಡೆಸಬೇಕಾದರೆ ಆರೋಗ್ಯವು ಮುಖ್ಯ. ಆರೋಗ್ಯವಿಲ್ಲದೆ ರೋಗರುಜಿನಾದಿಗಳಿಂದ ಮನೆಗೆಲಸಗಳನ್ನು ನಡೆಸುವದೆಂದರೆ ಬಹಳ ಅಸಹ್ಯವಾಗಿ ಕಾಣಿಸುವದು. ಅದರ ಜೊತೆಗೆ ರೋಗದ ಹೆಂಗಸು ಬಹಳ ಅವಲಕ್ಷಣವಾಗಿರುವಳು.

ಹಣ ಬಟ್ಟೆಬರೆಗಳೂ ಬೇಕು. ಇನ್ನೊಂದೂ ಮುಖ್ಯವಾದ್ದೊಂದು — ಗೌರವ. ಇತರ ಹೆಂಗಸರ ಮುಂದೆ ಅವಮಾನಕ್ಕೀಡಾಗದೆ ಇರುವದು.

ಸ್ತ್ರೀ ಪ್ರಧಾನಿ.

ಬ್ರಿಟನ್ನಿನಲ್ಲಿ ಇಂದಿನ ವರೆಗೂ ಗಂಡಸರೇ ಪ್ರಧಾನ ಮಂತ್ರಿಗಳಾಗಿದ್ದಾರಷ್ಟೆ.

ಇನ್ನು ಮುಂದೆ ಹೆಂಗಸರು ಸಹ ಪ್ರಧಾನಿಗಳಾಗಬಹುದು ಎಂದು ಲೇಡಿ ಎಸ್ಟರ್ ಎಂಬ ಪಾರ್ಲಿಮೆಂಟಿನ ಸದಸ್ಯಳು 'ಸಂಡೇ ಕ್ರಾನಿಕಲ್'ಗೆ ತಿಳಿಸುತ್ತಾಳೆ.

ರಾಜಕೀಯ ರಂಗದಲ್ಲಿ ಹೆಂಗಸರು ಕೀರ್ತಿಶಾಲಿಗಳಾಗಿ ಕೆಲಸ ಮಾಡಿರುವರೇ ಎಂದು ಅನೇಕರು ನನ್ನನ್ನು ಕೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೆಂಗಸಿಗೆ ವೋಟಿಂಗ್ ಹಕ್ಕು ಕೆಲವು ವರ್ಷಗಳ ಹಿಂದೆ ಮಾತ್ರ ಬಂದಿದ್ದರೂ, ಆ ಹಕ್ಕನ್ನು ಯೋಗ್ಯ ರೀತಿಯಲ್ಲಿ ಉಪಯೋಗ ಮಾಡಿಕೊಂಡಿರುವುದನ್ನೂ, ಪಾರ್ಲಿಮೆಂಟಿನ ಮೆಂಬರುಗಳಾಗಿ ದುಡಿದಿರುವುದನ್ನೂ ನೋಡಿದರೆ ತಪ್ಪಿಂದ ಅಧಿಕ ಲ್ಪಟ್ಟಿದ್ದಕ್ಕಿಂತಲೂ ಹೆಚ್ಚಾಗಿ ಮಾಡಿದ್ದಾರೆಂದು ತೋರುತ್ತದೆ.

'ಪಾರ್ಲಿಮೆಂಟಿನಲ್ಲಿ ಹಾಜರಿ, ಚರ್ಚೆಗಳಲ್ಲಿ ಅವರು ಭಾಗವಹಿಸುವಿಕೆ ಮೊದಲಾದುದನ್ನು ನೋಡಿದರೆ ಸ್ತ್ರೀ ಸದಸ್ಯರು ನಿಜವಾಗಿಯೂ ಜಾಗ್ರತರಾಗಿ ಕೆಲಸ ಮಾಡುತ್ತಿದ್ದಾರೆಂದು ಅನ್ನಿಸುತ್ತದೆ.

'ಬ್ರಿಟನ್ನಿನಲ್ಲಿ ಹೆಂಗಸಿಗೆ ವೋಟಿಂಗ ಹಕ್ಕು ಕೊಡಲ್ಪಟ್ಟದು ಕೇವಲ ಹದಿನೇಳು ವರ್ಷಗಳ ಹಿಂದೆ ಮಾತ್ರವೇ ಆದರೂ ಈ ಸ್ವಲ್ಪ ಕಾಲದಲ್ಲಿ ಅವರು ಗಳಿಸಿರುವ ಮಾನ್ಯತೆಯನ್ನು ನೋಡಿದರೆ ಇನ್ನು ಸುಮಾರು ನೂರು ವರ್ಷಗಳಲ್ಲಿ ಪಾರ್ಲಿಮೆಂಟಿನ ಸದಸ್ಯರಲ್ಲಿ ಅರ್ಧಭಾಗವು ಹೆಂಗಸರಿರಬಹುದೆಂಬುದಕ್ಕೆ ಸಂದೇಹವಿಲ್ಲ.

'ಆಗ ಪ್ರಧಾನ ಮಂತ್ರಿಯು ಹೆಂಗಸು ಆಗಬಹುದು, ಯಾಕಾಗಬಾರದು?

ಪಾರ್ಲಿಮೆಂಟಿನಲ್ಲಿ ಹೆಚ್ಚುತ್ತಿರುವ ಹೆಂಗಸರ ಪ್ರಭಾವವನ್ನು ಕುರಿತು ಲೇಡಿ ಎಸ್ಟರಳು ಸಂತೋಷಿಸಿದರೂ ಸರಕಾರವೆಲ್ಲವೂ ಹೆಂಗಸರದೇ ಆಗಬೇಕೆಂದು ಆಕೆ ಹೇಳುವುದಿಲ್ಲ.

'ಪಾರ್ಲಿಮೆಂಟಿಗೆ ಬುದ್ಧಿವಿಚಾರ ಕಾರ್ಯದಕ್ಷತೆಗಳು ಬೇಕು. ಅಂಥವು ಹೆಂಗಸರಲ್ಲಿರಲಿ, ಗಂಡಸರಲ್ಲಿರಲಿ, ಯಾರಲ್ಲಿದ್ದರೂ ಅವನ್ನು ಆಹ್ವಾನಿಸಬೇಕು.

'ಬರೀ ಗಂಡಸರೇ ಇರುವ ಸರಕಾರದಲ್ಲಿ ನನಗೆಷ್ಟು ಅಸಹ್ಯವೋ ಅಷ್ಟೇ ಅಸಹ್ಯವು ಬರೀ ಹೆಂಗಸರಿರುವ ಸರಕಾರದಲ್ಲಿದೆ.

'ನನಗನ್ನಿಸುವದೇನೆಂದರೆ ಗಂಡಸರಲ್ಲಿ ಹೆಚ್ಚಿನ ನ್ಯಾಯ ವಿಚಾರಗಳಿವೆ;

'ಹೆಂಗಸರಲ್ಲಿ ಹೆಚ್ಚಿನ ದಯಾ ಗುಣಗಳಿವೆ.

'ಹೆಂಗಸರಿಂದ ಗಂಡಸರು ದಯೆಯನ್ನೂ, ಗಂಡಸರಿಂದ ಹೆಂಗಸರು ನ್ಯಾಯ ವಿಚಾರಗಳನ್ನೂ ಕಲಿಯಬೇಕು.'

ಕೊನೆಯಲ್ಲಿ ಲೇಡಿ ಎಸ್ಟರಳು ಬ್ರಿಟನ್ನಿನಲ್ಲಿ ಹೆಂಗಸರಿಗೆ ರಾಜಕೀಯ ಹಕ್ಕುಗಳಿದ್ದು ಹೆಂಗಸರು ಅವನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುತ್ತಿದ್ದರೂ ಫ್ರಾನ್ಸ್, ಜರ್ಮನಿ, ಇಟಲಿಗಳಲ್ಲಿ ವೋಟಿಂಗ್ ಹಕ್ಕಿಲ್ಲದುದಕ್ಕಾಗಿ ಮರುಗಿದಳು.

ಪ್ರಜಾಮತ.

ಕುಂಕುಮದ ತಿಲಕವೂ ನಮಗೂ ಬೇಕು ಎಂದೇ ಹಿಂದೂ ವಿಧವೆಯರ ವಾಗ್ವಾದ

ಬೊಂಬಾಯಿಯಲ್ಲಿ ಇತ್ತೀಚೆಗೆ ಹೆಂಗಸರ ಸಭೆಯೊಂದು ಸೇರಿ ವಿಧವೆಯರು ಕುಂಕುಮದ ತಿಲಕವನ್ನು ಧರಿಸಬಹುದೊ ಎಂಬುದರ ಕುರಿತು ಚರ್ಚೆಯಾಯಿತು. ಇಷ್ಟರ ವರೆಗೆ ಈ ತಿಲಕದ ಹಕ್ಕು ಬಾಲಕಿಯರ, ಹೆಮ್ಮಕ್ಕಳ ಮದುವೆಯಾಗಿ ಗಂಡಂದಿರಿದ್ದ ಹೆಂಗಸರದಾಗಿತ್ತು. ಆದರೆ ಈ ವಿಧವೆಯರು ನಾವೂ ಅದನ್ನು ಧರಿಸಿದರೆ ಅದರಿಂದ ಬರುವ ಹಾನಿ ಏನೆಂಬುದನ್ನು ಪ್ರಶ್ನಿಸಿದರು. ಗಂಡನು ಸತ್ತ ಕೂಡಲೆ ಬೊಟ್ಟನ್ನು ಅಳಿಸುವ ಪದ್ಧತಿಯು ಬಹಳ ಪುರಾತನ ಕಾಲದ್ದಿರುತ್ತದೆ. ಆಧುನಿಕ ಭಾರತವು ಅಂತಹ ಕ್ಷುಲ್ಲಕ ವಿಚಾರಗಳಿಗೆ ಆಸ್ಪದ ಕೊಡದಿರುವಾಗ ಇದೊಂದು ಕಾನೂನನ್ನು ನಾವು ಶಿರಸಾವಹಿಸಿರಲು ಕಾರಣವೇನು. ಸರಿಯಾಗಿ ಪರ್ಯಾಲೋಚಿಸಿದ್ದಲ್ಲಿ ನಿಜವಾಗಿಯೂ ಗಂಡನಾದ ಮೇಲೆಯೇ ನಾವು ಬೊಟ್ಟನ್ನು ಧರಿಸುವುದಿಲ್ಲ. ಚಿಕ್ಕಂದಿನಿಂದಲೂ ನಾವು ಈ ಬೊಟ್ಟನ್ನು ಧರಿಸುತ್ತೇವೆ. ಆದ್ದರಿಂದ ಗಂಡನು ಅದರ ಅಧಿಪತಿಯಲ್ಲ. ಅಂತಿರುವಾಗ ಅವನು ಸತ್ತ ಕೂಡಲೆ ನಾವು ಅದನ್ನು ತ್ಯಜಿಸುವದೇಕೆ. ಅದಲ್ಲದೆ ಅದೊಂದು ಹಣೆಯಲ್ಲಿ ವಿರಾಜಿಸದಿದ್ದರೆ ನಾವು ಯಾವ ಕೆಲಸವನ್ನು ಮಾಡಲು ಸಾಧ್ಯವಿಲ್ಲ. ದೇವತಾಕಾರ್ಯದ ಸಮಯ ಯಾವ ತರದ ತೀರ್ಥಗಳನ್ನು ಮಾಡಬಾರದು. ತಲೆಕೂದಲನ್ನು ಕತ್ತರಿಸಬೇಕು. ಬಂಗಾರದ ಆಭರಣಗಳನ್ನು ತೊಟ್ಟುಕೊಳ್ಳಬಾರದು ಇವೆಲ್ಲವುಗಳೂ ಈ ತಿಲಕದಿಂದ ಹೋಯಿತು. ಆದ್ದರಿಂದ ಗಂಡಸಿಗೂ ತಿಲಕಕ್ಕೂ ಏನೂ ಪರಸ್ಪರ ಗೋಷ್ಠಿ ಇಲ್ಲದಿರುವುದರಿಂದ ನಾವು ಅದನ್ನು ಧರಿಸಿದರೆ ನೀತಿ ಬಾಹಿರರಾಗಲಿಕ್ಕಿಲ್ಲವೆಂದು ಹಲವು ವಿಧವೆಯರು ಉಸುರಿದರು. ಅವರಲ್ಲೊಬ್ಬಳು ತಾನೊಂದು ಕುಂಕುಮದ ತಿಲಕವನ್ನು ಹಣೆಯಲ್ಲಿಟ್ಟ ತನ್ನ ಹಾವ ಭಾವಗಳಿಂದ ಎಲ್ಲರಿಗೂ ಮನಮೆಚ್ಚುವಂತೆ ಭಾಷಣ ಮಾಡಿದಳು. ಎಲ್ಲಾ ವಿಧವೆಯರು ಇನ್ನು ಮುಂದೆ ಹಣೆಯಲ್ಲಿ ತಿಲಕವನ್ನು ಧರಿಸಬಹುದೆಂದು ನಿರ್ಧಾರವಾಯಿತು.

ಆಧುನಿಕ ಭಾರತದಲ್ಲಿ ತಿಲಕವೂ ಸಿದ್ಧವಾಗುತ್ತಾ ಬಂದು ಕಡೆಗೆ ತಿಲಕವೆ ಸ್ತ್ರೀ ಜಾತಿಯಿಂದ ಮಾಯವಾಗುತ್ತದೊ ಎಂಬ ಬೆದರಿಕೆಯು ಇರುವಾಗ ಈಗ ವಿಧವೆಯರು ಅದನ್ನು ಧರಿಸಲು ಪ್ರಾರಂಭಿಸಿದ್ದರಿಂದ ಅನ್ನದರ ಬೆದರಿಕೆಯು ಮಾಯವಾಯಿತೆನ್ನಬೇಕು.

ಕೆನಡಾ ದೇಶದ ಕೂಲಿ ಹೆಂಗಸರು.

ಕೆನಡಾ ದೇಶದ ಕೂಲಿ ಹೆಂಗಸರು ಬಹಳ ಪರಿಶ್ರಮ ಪಡುವ ಜೀವಿಗಳಾಗಿರುತ್ತವೆ. ಕೆಲವು ವರ್ಷಗಳಲ್ಲಿಯೆ ಅವರು ಹೇರಳ ಧನಪ್ರಾಪ್ತಿಯನ್ನು ಮಾಡಿಕೊಂಡುದೇ ಇದರ ಕಾರಣವಾಗಿದೆ. ಅವರು ನಗರಕ್ಕೆ ತೆರಳಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವುದಲ್ಲಿ ಉಳಿದ ಸಮಯದ ಸದ್ವಿನಿಯೋಗ ಮಾಡುವುದನ್ನು ಕಂಡರೆ ಯಾವಾತನಿಗೂ ಅವರಲ್ಲಿರುವ ಧೈರ್ಯ ಸ್ಥೈರ್ಯಗಳ ಮರ್ಮವು ತಿಳಿಯದಿರದು. ಪ್ರಸ್ತುತ ಈ ದೇಶದಲ್ಲಿ ಇಂತಹ ಹೆಂಗಸರ ೨೦೩ ಸಂಘಗಳಿವೆ ಮತ್ತು ಅವುಗಳಲ್ಲಿ ಒಟ್ಟಾಗಿ ೮೮೯೭ ಸದಸ್ಯರಿರುತ್ತಾರೆ. ಪ್ರತಿಯೊಬ್ಬರೂ ಅನ್ಯೋನ್ಯ ಪ್ರೇಮದಿಂದ ಕೆಲಸವನ್ನು ಮಾಡಿ ಬಂದ ಲಾಭವನ್ನು ಸರಿಯಾಗಿ ಹಂಚಿಕೊಳ್ಳುತ್ತಾರೆ. ಇವರ ಪೆಟ್ಟಿಗೆಗಳ ವ್ಯಾಪಾರವು ಬಹಳ ಪ್ರಶಂಸನೀಯವಾದುದು. ವರುಷಕ್ಕೆ ೮೯೮೦೦೦ ಪೆಟ್ಟಿಗೆಗಳನ್ನು ಮಾರುತ್ತಾರೆ. ಇವರು ಪಕ್ಷಿಗಳ ತೋಟಗಳನ್ನೂ ಹೂಗಿಡಗಳ ತೋಟಗಳನ್ನೂ ಮಾಡಿ, ಹೂಗಳನ್ನು ಕಾಯಿಪಲ್ಯಗಳನ್ನೂ ರಫ್ತುಗಳನ್ನಾಗಿ ಮಾಡುತ್ತಾರೆ. ಜೇನುಗಳನ್ನು ಸಾಕುವುದೂ ಜೇನುಹುಳುಗಳನ್ನು ಸಾಕಿ ಜೇನು ರಸವನ್ನು ಪಡೆಯುವುದೂ ಇವು ಇವರ ಅನೇಕ ವೃತ್ತಿಗಳಲ್ಲಿ ಒಂದು. ಕೆಲಸ ಇಲ್ಲದೆ ಸುಮ್ಮನೆ ಕುಳಿತಿರುವ ಹೆಂಗಸರಿಗೂ, ಇದರಲ್ಲಿ ಕೆಲಸಕೊಟ್ಟು ಅದಷ್ಟು ಮಟ್ಟಿಗೆ ದೇಶದಿಂದ ಬಡತನವನ್ನು ಹೋಗಲಾಡಿಸುವ ಪ್ರಯತ್ನವನ್ನು ಅವರು ಮಾಡುತ್ತಿರುವರು.

ಆಂಗ್ಲೇಯಳೇನನ್ನುತ್ತಾಳೆ?

ತಿರುವಾಂಕೂರಿನ ರಾಜಧಾನಿಯಾದ ತಿರುವನಂತಪುರದಲ್ಲಿ ಕಳೆದ ತಿಂಗಳು ಮಹಾರಾಣಿ ಸೇತುಪಾರ್ವತಿಯವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನವು ನಡೆಯಿತು. ಆ ಮಹಾಸಮ್ಮೇಳನಕ್ಕೆ ಕೆಲವು ಆಂಗ್ಲೇಯ ಮಹಿಳೆಯರು ಆಹ್ವಾನಿತರಾಗಿ ದಯಮಾಡಿಸಿದ್ದರು. ಅವರಲ್ಲಿ ಮಹಾತ್ಮರ ಅಕ್ರಗೋಷ್ಠಿಯಲ್ಲಿ ಭಾಗವಹಿಸಲು ಲಂಡನಿಗೆ ಹೋಗಿದ್ದಾಗ ಅವರಿಗೆ ಆಹ್ವಾನವಿತ್ತು, ತನ್ನ ಮನೆಯಲ್ಲಿ ಇಳಿಸಿಕೊಂಡಿದ್ದ ಶ್ರೀಮತಿ ಮುರಿಯಲ್ ಲೆಸ್ಟರ ಎಂಬಾಕೆಯೊಬ್ಬಳು ಎಂದ ಮೇಲೆ ಭಾರತದ ಮೇಲೂ ಆಕೆಗಿರುವ ಕರುಣ ಹೃದಯವೆಷ್ಟೆಂದು ಗೊತ್ತಾಗುತ್ತದೆ.

ಸಮ್ಮೇಳನದಲ್ಲಿ ಭಾಗವಹಿಸಿ ಅಲ್ಲಿ ಆದ ನಿರ್ಣಯಗಳನ್ನು ಪರಿಶೀಲಿಸಿ ಆಕೆಯು ಈ ರೀತಿ ಅಭಿಪ್ರಾಯಪಡುತ್ತಾಳೆ. ಆಕೆಯ ಮಾತಿನಲ್ಲಿ ಮುಂದಿನ ಚುನಾವಣೆಯ ದಿನಗಳ ಮೇಲೆಯೇ ಎಲ್ಲ ಗಮನವೂ ಇದೆ. ಚುನಾವಣೆಗಳ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಆದ ನಿರ್ಣಯಗಳು ಸ್ಪಟಿಕಸ್ಪಷ್ಟವಾಗಿವೆ. ಭಾರತೀಯ ಹೆಂಗಸರು ಉದಾರಹೃದಯಿಗಳು. ಅವರಿಗೆ ಕಾದಿಟ್ಟ ಸ್ಥಾನಗಳು ಶಾಸನಸಭೆಗಳಲ್ಲಿ ಬೇಕಾಗಿಲ್ಲ. ಅಥವಾ ಅವರಿಗೆ ಕೋಮುವಾರು ಚುನಾವಣೆಯು ಬೇಕಾಗಿಲ್ಲ. ಸ್ವತಂತ್ರವಾಗಿ ಚುನಾವಣಾಧಿಕಾರವನ್ನು ಸಂಪಾದಿಸಲು ಅವರು ಹಂಬಲಿಸುತ್ತಾರೆ. ಪ್ರತ್ಯಕ್ಷ ಚುನಾವಣೆಯನ್ನು ಅಪೇಕ್ಷಿಸುತ್ತಾರೆ. ಮುಂದೆ ಬರಲಿರುವ ರಾಜ್ಯಾಂಗದಂತೆ ಈ ವಿಲ್ಲ ಉದಾರ ಉದಾತ್ತ ಭಾವನೆಗಳಿಗೂ ಸರಕಾರವು ಕಲ್ಲುಹಾಕದೆ, ಎಲ್ಲವೂ ಇವರ ಅಪೇಕ್ಷೆಗಳಿಗೆ ವ್ಯತಿರಿಕ್ತವಾಗಿ ನಡೆದುಹೋಗುತ್ತಿದೆ. ಇವೆಲ್ಲ ಪ್ರಯುಕ್ತ ತಂತ್ರ. ಸಂಘಶಕ್ತಿಯನ್ನು ಮುರಿದು ಮಟ್ಟಿ ಹಾಕಬೇಕೆನ್ನುವುದು ಸರಕಾರದ ಗಾಯತ್ರಿಯಾಗಿದೆ.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

(ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ—ಸಂಪಾದಕ ಸ್ವ.)

ಜಿಲ್ಲಾ ಬೋರ್ಡಿನ ಮಂಜೇಶ್ವರ ಸರ್ಕಲಿನ ಓಟರ ತಿಳುವಳಿಕೆ ಬಗ್ಗೆ.

ನಮಗೂ ಮಂಜೇಶ್ವರ ಸರ್ಕಲಿಗೂ ಯಾವ ಸಂಬಂಧವೂ ಇಲ್ಲ. ನನ್ನ ಊರು ಆ ಸ್ಥಳದಿಂದ ಬಹಳ ದೂರವಿದ್ದು ನಾನು ಅಲ್ಲಿಗೆ ಅಪರಿಚಿತನು. ನನಗೆ ಅಲ್ಲಿ ಹಂಗಿಗರಾಗಲೀ, ಸಂಬಂಧಿಕರಾಗಲೀ, ವಕ್ಕಲುಗಳಾಗಲೀ ಪರಿಚಯಸ್ಥರಾಗಲೀ ಇಲ್ಲ. ಆದರೂ ಆ ಸರ್ಕಲಿನವರು ಯಾರೂ ಉಮೇದ್ವಾರನಾಗಿ ನಿಲ್ಲದ ಕಾರಣ ನಾನು ಕಳೆದ ಚುನಾವಣೆಯಲ್ಲಿ ಮಂಜೇಶ್ವರ ಸರ್ಕಲಿನ ರಿಜರ್ವ್ ಸೀಟಿಗೆ ಕೆಲವು ಸ್ನೇಹಿತರ ಅಪೇಕ್ಷೆ ಮೇರೆಗೆ ಉಮೇದ್ವಾರನಾಗಿ ನಿಲ್ಲಬೇಕಾಗಿ ಬಂತು. ನನ್ನ ಎದುರು ಸ್ಥಾನಾರ್ಥಿಗೆ ರಾ। ಅಮೃತಕೃಷ್ಣರಾಯರವರ ಪೂರ್ಣ ಸಹಾಯ ಸಿಕ್ಕಿದರೂ ನನಗೆ ಸಹಾಯ ಮಾಡಲೊಪ್ಪಿದ್ದ ನನ್ನ ಜೊತೆಯಲ್ಲಿದ್ದವರು ವಿಶ್ವಾಸಘಾತಕ ಮಾಡಿ ನನಗೆ ಮೋಸಕೊಟ್ಟರು. ಹೀಗೆಲ್ಲಾ ಇದ್ದರೂ ಹಲವು ಓಟರರು ಬಹಳ ದೂರದಿಂದ ಬಿಸಲಿಗೆ ನಡೆದು ಬಂದು ನನಗೆ ಓಟು ಕೊಟ್ಟು ನನ್ನ ಲೆಕ್ಕಕ್ಕೆ ಬಂದಿಷ್ಟು ಚೀಟಿ ಕೂಡಿಯದೆ ಹೋದದ್ದು ನೋಡುವಾಗ್ಯೆ ಅಂಥವರಿಗೂ, ನನಗೆ ಈ ವಿಷಯದಲ್ಲಿ ತಮ್ಮ ಅಮೂಲ್ಯ ಸಮಯವನ್ನು ಹಾಳುಮಾಡಿದ ಹಲವು ಗೃಹಸ್ಥರಿಗೂ ನಾನು ಯಾವ ವಿಧದಲ್ಲಿ ಕೃತಜ್ಞತೆಯನ್ನರ್ಪಿಸಿದರೂ ಸಾಲದು. ಅವರಿಗೆ ನಾಕಷ್ಟು ಧನ್ಯವಾದಗಳನ್ನರ್ಪಿಸಲೂ ನಾನು ಶಕ್ತನಲ್ಲ.

ನಾನು ಹಲವು ವರ್ಷಗಳಿಂದ ಕೊಂಗ್ರೆಸ್ ತತ್ವಗಳನ್ನನುಸರಿಸಿ ನಡಕೊಂಡಿದ್ದವನಾದ್ದರಿಂದ ಕೊಂಗ್ರೆಸ್ ಟಿಕೇಟಿನಿಂದ ಜಿಲ್ಲಾ ಬೋರ್ಡಿಗೆ ಹೋಗಬಹುದೆಂತ ನೆನಸಿ ಸಿವಿಲ್ ಬೋರ್ಡಿಗೆ ಅರ್ಜಿಹಾಕಿದೆ. ಆ ಸರ್ಕಲಿಗೆ ಬೇರೆ ಇಬ್ಬರು ಹಿಂದೂ ಸಹೋದರರೂ ಅರ್ಜಿಕೊಟ್ಟಿದ್ದರು. ಅವರ ಪೈಕಿ ಒಬ್ಬರನ್ನು ಮಂಜೇಶ್ವರ ಸರ್ಕಲಿಗೂ, ಇನ್ನೊಬ್ಬರನ್ನು ಬೇರೊಂದು ಸರ್ಕಲಿಗೂ ಸಿವಿಲ್ ಬೋರ್ಡಿನವರು ಆರಿಸಿದರು. ನನ್ನನ್ನು ಹೊರಗೆ ದೂಡಿಯೇ ಬಿಟ್ಟರು. ಇದೇ ಜಿಲ್ಲೆಯಿಂದ ಜನರಲ್ ಸೀಟಿನಿಂದ ಹೋದ ಒಂದೇ ಒಂದು ಮುಸ್ಲಿಮ್ ಉಮೇದ್ವಾರನಾಗಿದ್ದ ನನ್ನ ಒಂದೇ ಒಂದು ಅರ್ಜಿಯನ್ನು ಸಿವಿಲ್ ಬೋರ್ಡಿನವರು ಯಾವ ಉದ್ದೇಶದಿಂದ ತಳ್ಳಿಹಾಕಿದರೆಂದು ತಿಳಿಯುವುದಿಲ್ಲ. ಅವರು ನನ್ನನ್ನು ದೂರಬಿಟ್ಟರೂ ಚಿಂತೆಯಿಲ್ಲ. ಅವರು ಒಳಗೆ ತೆಗೆದ ಉಮೇದ್ವಾರರಿಗೂ ನನಗೂ ಆಗಿರುವ ವ್ಯತ್ಯಾಸ ಸಿವಿಲ್ ಬೋರ್ಡಿನವರಿಂದ ನನಗಾದ ಗುಣಾವಗುಣಗಳು ಸಿವಿಲ್ ಬೋರ್ಡಿನವರಿಗೂ ನನಗೂ ತಿಳಿಯುವಂತಾದ್ದೇ.

ಎಂ. ಪಿ. ಮೊಹಿದ್ದೀನ್.

ಮೈಸೂರು ಯುವರಾಜರು ಮೊಡರ್ನ್ ಕೆಫೆಯನ್ನು ಸಂದರ್ಶಿಸಿದರು

ಮೈಸೂರು ಯುವರಾಜರು ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ ಜಿ. ಸಿ. ಐ. ಇ. ರವರೂ ಪಾರ್ಟಿಯೂ ಇದೇ ತಾ. ೩೦—೧—೩೩ರಲ್ಲಿ ಮೊಡರ್ನ್ ಕೆಫೆಯನ್ನು ಸಂದರ್ಶಿಸಿದರು. ಕೆಫೆಯ ಭವನವು ಸಮಯೋಚಿತವಾಗಿ ತೋರಣಪತಾಕೆಗಳಿಂದ ಶೃಂಗರಿಸಲ್ಪಟ್ಟಿದ್ದಿತು. ಸ್ವಲ್ಪ ಕಾಲಕ್ಕೆ ಸರಿಯಾಗಿ ಯುವರಾಜರೂ ಪಾರ್ಟಿಯೂ ಬರಲಾಗಿ, ಕೆಫೆಯ ಪ್ರೊಪ್ರೈಟರಾದ ಕೆ. ಸೀತಾರಾಮರಾಯರು ಆದರದಿಂದ ಎದುರುಗೊಂಡು ಮುಖ್ಯ ಮುಖ್ಯ ವ್ಯಕ್ತಿಗಳನ್ನು ತೋರಿಸಿ, ವಿಸ್ತರಿಸಿ ಅಲಂಕರಿಸಿದ್ದ ಕೆಫೆನ ಹೌಸ್ ಆಫ್ ಲೊರ್ಡಿಗೆ ಕರೆದೊಯ್ದರು. ಪೀಠವನ್ನು ಸ್ವೀಕರಿಸಿ, ಕೆಫೆ ಹೊಟೆಲುಗಳ ವಿಷಯವಾಗಿ ಸುಮಾರು ಮುಕ್ಕಾಲು ತಾಸು ಮಾತನಾಡಿ ಅನೇಕ ವಿಷಯಗಳನ್ನು ತಿಳಕೊಂಡು ಕೆಲವು ನೂತನ ರೀತಿಯ ವಿಷಯಗಳನ್ನು ತಿಳಿಸಿದರು. ಪಾಶ್ಚಾತ್ಯ ದೇಶದ ಹೊಟೆಲುಗಳ ವಿಷಯ ತಿಳಿದವರಾಗಿ ಹಿಂದೂ ದೇಶದಲ್ಲಿಯೂ ಮೊಡರ್ನ್ ಕೆಫೆಯು ಉಚ್ಚಸ್ಥಾನವನ್ನು ಪಡೆಯಲೆಂದು ಬಯಸಿದರು.

ಯುವರಾಜರ ಪಾರ್ಟಿಯಲ್ಲಿ—ಸರ್ ಆರ್. ಕೆ. ಷಣ್ಮುಗಂ ಚೆಟ್ಟಿಯಾರ್, ಕೊಚ್ಚಿನ್ ದಿವಾನರು; ಸರ್ ಮೀರಾ ರಮೇಶನ್, ರಾಜಾ ಸರ್ ವಾಸುದೇವರಾಜ ಆಫ್ ಕೊಲ್ಲಂಗೋಡು, ಮಿಸ್ಟರ್ ಕೃಷ್ಣಮೆನನ್ (ಕೊಚ್ಚಿನ್ ಮಹಾರಾಜರ ಮಗ), ಮಿಸ್ಟರ್ ಮನ್ನಡಿಯಾರ್, ಕೊಚ್ಚಿನ್ ಮಹಾರಾಜರ ಎ. ಡಿ. ಸಿ. ಮಿಸ್ಟರ್ ಬ್ಲೂ ಮೆಂಥಾಲ್, ಮಿಸ್ಟರ್ ರಶೀದ್, ಮಿಸ್ಟರ್ ತಿಮ್ಮಯ್ಯ, ಯುವರಾಜರ ಪ್ರೈವೇಟ್ ಸೆಕ್ರಿಟರಿ, ಮೊದಲಾದವರು ಭಾಗಿಗಳಾಗಿದ್ದರು. ಬೀಳ್ಕೊಂಬುವ ಸತ್ಕಾರವು ಇತ್ತು.

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವಿಕಾಸವ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ - (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ - (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ - (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ - (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ ಕಟಪಾಡಿ ದ. ಕನ್ನಡ



Distributors for South Kanara —

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು. — ಕಾಮತ್ಸ್ ಸ್ವದೇಶೀ ಎಂಪೋರಿಯಂ

1936

ಇಸವಿಯ ಶಾರದಾ ಡೈರಿಗಳು ತಯಾರಾಗಿವೆ! ಶಾರದಾ ಛಾಪಖಾನೆಗೆ ...

ತಯಾರಾಗಿದೆ!

ಗೌ ... ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಸಿಯೋಲಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗ ಸಿದ್ಧವಾಗಿದೆ. ಇದನ್ನು ... ಪಾಠಪಟ್ಟಿಗನುಸಾರವಾಗಿ ...

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವೂ ಮಾರಾಟಕ್ಕೆ ಸಿದ್ಧವಿದೆ

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕೂಡಲೇ ಬರೆಯಿರಿ.

ಮ್ಯಾನೇಜರ್,
ಶಾರದಾ ಛಾಪಖಾನೆ
ಮಂಗಳೂರು

ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಕೆಟಲ್	ಸಂಜೆ 5 25	ಬೆಳಗ್ಗೆ 9 25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 8 20	ಸಂಜೆ 6 15

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.	ರೂ ಅ ಪೈ	ಸಾಮಾನ್ಯ ವಿಜ್ಞಾನ.	
		ಎರಡನೇ ದರ್ಜೆ	0 3 0
ನಾಲ್ಕನೇ ದರ್ಜೆ	0 6 0	ಮೂರನೇ ,,	0 8 0
ಮೂರನೇ ,,	0 4 6	ನಾಲ್ಕನೇ ,,	0 6 0
ಎರಡನೇ ,,	0 4 0	ಐದನೇ ,,	0 5 0
ಸಮಾಜಶಾಸ್ತ್ರ			
ಐದನೇ ದರ್ಜೆ	0 3 0		
ನಾಲ್ಕನೇ ,,	0 3 0	ಆರನೇ ದರ್ಜೆ	0 4 0
ಮೂರನೇ ,,	0 2 6	ಏಳನೇ ,,	0 5 0
		ಎಂಟನೇ ,,	0 6 0

ಅಜ್ಜಿ ಕಥೆಗಳು (ಸಚಿತ್ರ)

ನೂರ ಕರಡಿಗಳ
ಸೇನ ಸತ್ತು ಕಾಗೆ ಬಡವಾಯಿತು
ಮೊಣಸಿನ ಗಾಳಪ್ಪ
ಅರಗಿಣಿ ಮುದ್ದೆ
ಇಲಿಗಳ ಧಕ್ಕ ಥೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ' ಕ್ರಯ ರೂ. 1

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಭಯಂಕರ ರೈಲ್ವೆ ಅಪಘಾತ!

ತೆರೆಗಳಿಂದ ಶಕ್ತಿ! ಕಿವುಡರಿಗೆ ಕೇಳಿಸುವ ಗ್ರಾಮೊಫೋನು! ವಿಚಿತ್ರತರದ ಕಳ್ಳತನ!

ತೆರೆಗಳಿಂದ ಶಕ್ತಿ

ಈ ಕೈಗಾರಿಕೆಯ ಯುಗದಲ್ಲಿ ಧಾರಾಳ ಶಕ್ತಿಯನ್ನು ಅತಿ ಸುಲಭ ದರದಲ್ಲಿ ಪಡೆಯುವುದು ಒಂದು ಮಹಾ ಕಾಂಕ್ಷೆಯಾಗಿರುತ್ತದೆ ವಿದ್ಯುತ್‌ಶಕ್ತಿಯು ಇದಕ್ಕೆ ಬಹಳ ಸಹಕಾರಿಯಾಗಿದೆ. ಆದರೆ ವಿದ್ಯುತ್‌ಶಕ್ತಿಯನ್ನು ತಯಾರಿಸಬೇಕು. ಸೃಷ್ಟಿಯಿಂದಲೇ ಈ ಶಕ್ತಿಯನ್ನು ರಚಿಸುವ ಪ್ರಯತ್ನಗಳು ನಡೆಯುತ್ತಿವೆ. ನೀರಿನ ಪ್ರವಾಹಗಳಿಂದ ವಿದ್ಯುತ್‌ಶಕ್ತಿಯನ್ನು ತೆಗೆಯುವ ಅನೇಕ ಶಕ್ತಿ ನಿಲಯಗಳು ಪ್ರಪಂಚದ ವಿವಿಧ ಭಾಗಗಳಲ್ಲಿವೆ. ದಕ್ಷಿಣ ಆಫ್ರಿಕಾದ ಓರ್ವ ನಿಪುಣ ಇಂಜಿನಿಯರನು ಸಮುದ್ರದ ತೆರೆಗಳಿಂದ ಶಕ್ತಿ ಪಡೆಯುವ ವಿಧಾನವನ್ನು ಕಂಡುಹಿಡಿದಿರುವರು. ತೆರೆಯ ರಭಸದಿಂದ ಶಕ್ತಿಯನ್ನು ತಯಾರಿಸಲು ಈತನು ಕಂಡುಹಿಡಿದ ಯಂತ್ರದಿಂದ ಸಾಧ್ಯವಾಗುವುದಂತೆ.

ಕಿವುಡರಿಗೆ ಮಾತ್ರ ಕೇಳಿಸುವ ಗ್ರಾಮೊಫೋನು

ಕಿವುಡರಿಗೆ ಮಾತ್ರ ಕೇಳಿಸುವ ಗ್ರಾಮೊಫೋನು ಯಂತ್ರವನ್ನು ಸಿದ್ಧಪಡಿಸಿದ್ದಾರೆ. ಸಹಜವಾಗಿದ್ದ ಮನುಷ್ಯರು ಈ ಗ್ರಾಮೊಫೋನು ನಿಶ್ಶಬ್ದವಾಗಿ ಚಲಿಸುವುದನ್ನು ನಿರೀಕ್ಷಿಸಬಹುದು ಆದರೆ ಅದು ಅವರ ಕಿವುಡು ಸ್ನೇಹಿತರಿಗೆ ಕೇಳಿಸುತ್ತದೆ. ಗ್ರಾಮೊಫೋನಿನ ಶಬ್ದ ಹೊರಡಿಸುವ ಯೋಜನೆ ಬದಲಾಗಿ, ಹಲವು ದಿಂಬುಗಳಿಂದ ಕೂಡಿದ ಒಂದು ಹೇಂಡ್ಲು ಇದಕ್ಕಿದೆ. ಇದನ್ನು ಕಿವುಡನ ತಲೆಗೆ ಕಟ್ಟಿದರೆ, ಆತನಿಗೆ ಆ ಗ್ರಾಮೊಫೋನಿನಿಂದ ಉಂಟಾಗುವ ಗಾಯನವು ಕೇಳಿಸುವುದು. ಈ ಯಂತ್ರವನ್ನು ತಯಾರಿಸಿದ ಶೋಧಕರು ಇವನ್ನು ಕಿವುಡ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ತಯಾರಿಸಿದ್ದಾರಂತೆ. ಈ ಯಂತ್ರದ ಮೂಲಕ ಕಿವುಡರು ಹಲ್ಲುಗಳ ಮೂಲಕ ಕೇಳಿಸಲು ಸಾಧ್ಯವಾಗುವುದಂತೆ

ನಮ್ಮ ಟಪ್ಪಾಲು ಇಲಾಖೆ.

1934–35, ನಮ್ಮ ಟಪ್ಪಾಲು ಮತ್ತು ಟೆಲಿಗ್ರಾಫ್ ಇಲಾಖೆಯ ವರದಿ ಈಗ ಪ್ರಕಟವಾಗಿರುತ್ತದೆ ಇತರ ಇಲಾಖೆಗಳಂತೆ, ಕಳೆದ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ, ಇದರ ಆರ್ಥಿಕ ಸ್ಥಿತಿ ಬಹಳ ಹಾಳಾಗಿತ್ತು. ಆದರೆ ಗತವರ್ಷದಲ್ಲಿ ವ್ಯಾಪಾರದ ಉದ್ಧರಣೆಯೊಂದಿಗೆ ಈ ಇಲಾಖೆಯು ಉತ್ಪತ್ತಿಯ ವೃದ್ಧಿ ಹೊಂದಿರುತ್ತದೆ. ಮುಂಚಿನ ಸ್ಥಿತಿಯಿಂದ ಈ ಇಲಾಖೆಯು ಪಾರಾದುದಲ್ಲದೆ, ಇಲಾಖೆಯು ಗತವರ್ಷದಲ್ಲಿ ಲಾಭವನ್ನು ಗಳಿಸಿರುತ್ತದೆ ಗತವರ್ಷದಲ್ಲಿ ನಡೆಸಿದ ಪ್ರಚಾರಕಾರ್ಯ ಇತ್ಯಾದಿಗಳು ಇದಕ್ಕೆ ಕಾರಣವಂತೆ ಉತ್ಪತ್ತಿಯಲ್ಲಿ ರೂ 47 ಲಕ್ಷ ಅಭಿವೃದ್ಧಿಯು ಕಾಣಬರುತ್ತದೆ ರೂ 24 ಲಕ್ಷದ ಉಳಿತಾಯವಾಗಿರುತ್ತದೆ

ಭಯಂಕರ ರೈಲ್ವೆ ಅಪಘಾತ.

ಅಮೇರಿಕದಲ್ಲಿ ಭಯಂಕರವೇಗದಿಂದ ಚಲಿಸುವ ಒಂದು ಎಕ್ಸ್‌ಪ್ರೆಸ್ ಟ್ರೈನು, ಒಂದು ಸಂಕವನ್ನು ಹಾದುತ್ತಿರುವಾಗ, ಕಂಬಿಗಳನ್ನು ಬಿಟ್ಟು ನದಿಗೆ ಹಾರಿತು ರೈಲ್ವೆ ಟ್ರೈನಿನ ಎಲ್ಲಾ ಗಾಡಿಗಳೂ ನೀರಿನಲ್ಲಿ ಮುಳುಗಿಹೋದುವು ಅಪಘಾತವು ನಡೆದುದು ನಡುರಾತ್ರಿಯ ಸಮಯ ಆದುದರಿಂದ ರಕ್ಷಣಾಕಾರ್ಯವನ್ನು ಸರಿಯಾಗಿ ನಡೆಯಿಸಲು ಸಾಧ್ಯವಾಗಲಿಲ್ಲ 8 ಜನರು ಮಡಿದಿರುವರು; 40 ಜನರಿಗೆ ಜಖಂ ಆಗಿರುವುದು.

ಸರಕಾರದ ಅಧಿಕಾರದಲ್ಲಿರುವ ರೈಲ್ವೆ

ಕಂಪೆನಿಗಳಿಗೆ ಬೇಕಾಗುವ ಎಲ್ಲಾ ಸಾಮುಗ್ರಿಗಳನ್ನು ಹಿಂದೂದೇಶದಲ್ಲೆ ಪಡೆಯಬೇಕೆಂದು ಸರಕಾರವು ನಿರ್ಧರಿಸಿದೆ ಆದುದರಿಂದ ರೈಲ್ವೆ ಸಂಸ್ಥೆಗಳಿಗೆ ಮುಂದಕ್ಕೆ ತಗಲಲಿರುವ ಮೂಲ ವೆಚ್ಚದ ಹೆಚ್ಚಿನಂಶವು ಹಿಂದೂದೇಶದಲ್ಲಿ ಉಳಿಯುವಂತಿದೆ 1936–37ರಲ್ಲಿ ರೂ 10¼ ಕೋಟಿಯಷ್ಟು ಈ ತರದಲ್ಲಿ ವ್ಯಯಿಸಬೇಕೆಂದು ಸ್ಟಾಂಡಿಂಗ್ ಕಮಿಟಿಯವರು ಸೂಚನೆ ಕೊಟ್ಟಿರುವರು.

ಕ್ಷಾಮನಿವಾರಣೆ ಕಾರ್ಯ

ತಿರುಚಿನಾಪಲ್ಲಿಯ ಮಾತೂರು, ಪೈರಂಬಲೂರು ಮತ್ತು ಲಾಲ್‌ಗುಡಿ ಎಂಬಲ್ಲಿ ಕ್ಷಾಮನಿವಾರಣೆಕಾರ್ಯಕ್ಕೆ ಅಲ್ಲಿನ ಜಿಲ್ಲಾ ಬೋರ್ಡಿನವರು 67,160 ರೂಪಾಯಿ ಸೆಂಕ್ಷನ್ ಮಾಡಿರುವರು ಈ ಹಣವನ್ನು ಕ್ಷಾಮದ ಸಮಯ ವ್ಯಯಿಸುವರಂತೆ

ವಿಚಿತ್ರತರದ ಕಳ್ಳತನ.

ವಿಯೆನ್ನಾದಲ್ಲಿ ನಡೆದಿರುತ್ತದೆ ಇದರಿಂದ ಅಲ್ಲಿನ ಆಸ್ಪತ್ರೆಯ ಡಾಕ್ಟರರಿಗೆ ಸ್ವಲ್ಪ ಕೆಲಸವು ಉಂಟಾಯಿತು ಒಬ್ಬನು ಮೂರು ವರ್ಷ ಪ್ರಾಯದ ಒಂದು ಮಗುವಿನ ಮೇಲಿನ ಒಂದು ಭಂಗಾರದ ಆಭರಣವನ್ನು ಎಳಕೊಂಡು ಪಲಾಯನ ಮಾಡಿದನು. ಮಗುವಿನ ದಾದಿಯು ಬೊಬ್ಬಿಡಲು ಪೋಲೀಸರು ಆತನನ್ನು ಹಿಂಬಾಲಿಸಿಕೊಂಡು ಹೋದರು. ಓಡುತ್ತಿರುವಾಗ ಭಂಗಾರದ ಸರಪಳಿಯನ್ನು ಬಾಯಿಯಲ್ಲಿ ಹಾಕಿದನು ಪೋಲೀಸರು ಈತನನ್ನು ಹಿಡಿದು, ಬಾಯಿಯಲ್ಲಿರುವ ಸರಪಳಿಯನ್ನು ತೆಗೆಯಲು ಪ್ರಯತ್ನಿಸಲು, ಆತನು ಅದನ್ನು ನುಂಗಿ ಬಿಟ್ಟನು. ಸರಪಳಿಯು ಆತನ ಹೊಟ್ಟೆಯಲ್ಲಿರುವುದೆಂದು ಡಾಕ್ಟರರು ಕಂಡುಹಿಡಿದಿರುವರು. ಇದನ್ನು ಹೊರತೆಗೆಯಲು ಪ್ರಯತ್ನಪಡುತ್ತಿದ್ದಾರೆ

ಪರಮೋಶಿಯಿಂದ ಕೊಲೆಮಾಡಲ್ಪಟ್ಟನು.

ಸಿಂಧದೇಶದ ಹೈದರಾಬಾದಿನಲ್ಲಿ ಓರ್ವ ರೈಲ್ವೆ ಉದ್ಯೋಗಸ್ಥರು, ಪರಮೋಶಿಯಿಂದ ಅರ್ಜುನದಾಸ ಎಂಬವನಿಂದ ಕೊಲ್ಲಲ್ಪಟ್ಟರು ಈ ರೈಲ್ವೆ ಉದ್ಯೋಗಸ್ಥರು, ಕಾರ್ಯನಿಮಿತ್ತ ಪ್ರಯಾಣಮಾಡುತ್ತಿರುವಾಗ ಚೆಡ್ಡೀರ್ ಎಂಬ ರೈಲ್ವೆ ನಿಲ್ದಾಣದಲ್ಲಿ ಇಳಿದಿದ್ದರು ಆ ದಿವಸ ರಾತ್ರೆ ಅಲ್ಲಿಯೆ ಇರಬೇಕಾದುದರಿಂದ ಪ್ಲೇಟ್‌ಫೋರ್ಮಿನಲ್ಲಿರುವ ಒಂದು ಮಂಚದಲ್ಲಿ ನಿದ್ರಿಸಿದರು ನಿತ್ಯವೂ ಆ ಮಂಚವು ಬೇರೊಬ್ಬನಿಂದ ಉಪಯೋಗವಾಗುತ್ತಿತ್ತು ಆತನನ್ನು ಕೊಲೆಮಾಡುವ ಉದ್ದೇಶದಿಂದ ಬಂದ ಅರ್ಜುನರಾಜನು, ರೈಲ್ವೆ ಉದ್ಯೋಗಸ್ಥರನ್ನು ಕತ್ತಲೆಯಲ್ಲಿ ತಿವಿದು ಕೊಲೆಮಾಡಿದನು ಈತನಿಗೆ ಫಾಶೀಶಿಕ್ಷೆ ವಿಧಿಸಲಾಗಿದೆ

ವಿಮಾ ಇತಿಹಾಸದಲ್ಲಿ ಅತ್ಯಪೂರ್ವವಾದ ದಾಖಲೆಯನ್ನು ಸ್ಥಾಪಿಸಿತು

ಬೋನಸ್

ರೂ. 54

ಇಡೀ ಜೀವಮಾನದ ಮೇಲೆ

ರೂ. 45

ಎಂಡೋವ್‌ಮೆಂಟ್ ಪಾಲಿಸಿಗಳ ಮೇಲೆ

ಪ್ರತಿ ಸಾವಿರಕ್ಕೆ ಮೂರು ವರುಷಗಳಿಗೆ

ಲೆಖ್ಖ ಪತ್ರಗಳಿಗೆ, ಪ್ರೊಸ್‌ಪೆಕ್ಟಸ್‌ಗಳಿಗೆ ಮತ್ತಿತರ ಸಂಗತಿಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ:–

ದಿ ನೆಪ್ಚ್ಯೂನ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್,

109 ಪಾರ್ಸಿ ಬಜಾರ್ ಸ್ಟ್ರೀಟ್ ಫೋರ್ಟ್ ಬೊಂಬಾಯಿ.

ಅಲ್ಲದೆ

ಕಲ್ಕತ್ತಾ, ಲಾಹೋರು, ಅಹಮ್ಮದಾಬಾದ್, ನಾಗಪುರ, ಕರಾಚಿ.

ನೆಪ್ಚ್ಯೂನ್ ಎಶ್ಯೂರೆನ್ಸ್ ಕಂಪೆನಿ,

ಲಿಮಿಟೆಡ್,

ಈ ಕಂಪೆನಿಯ ಮೊದಲನೇ ಸಲದ ಲೆಖ್ಖಾಚಾರವು ಇದೀಗ ನಡೆದು ಭಾರತದ ಯಾವ ವಿಮಾ ಕಂಪೆನಿಗೂ ಸಾರಿರದ ಬೋನಸನ್ನು ಸಾರಲ್ಪಟ್ಟಿದೆ

ಈ ಕಂಪೆನಿಯ ಲೆಖ್ಖಪರಿಶೋಧಕರಾದ ಶ್ರೀ। ಜಿ. ಎಸ್. ಮರಾಠೆ,ಎಂ ಎ ಎ ಐ ಎ ಇವರು ಹೀಗೆ ಬರೆಯುತ್ತಾರೆ –

"ಯಶಸ್ವಿಯಾಗಿ ಕಾರ್ಯ ನಡೆಸಿದುದಕ್ಕಾಗಿ ನನ್ನ ಅಭಿವಂದನೆಗಳು ಪ್ರಥಮ ಸಲದ ಲೆಖ್ಖಾಚಾರದಲ್ಲಿ ತನ್ನ ಪೋಲಿಸಿದಾರರಿಗೆ ಸಂತೋಷವನ್ನುಂಟುಮಾಡಿದ ನಿಮ್ಮ ದೃಂಢ್ಯವಾದರೂ ಮಹತ್ವದ್ದಿರಬೇಕು ಆದಷ್ಟು ಕಡಿಮೆ ಖರ್ಚಿನಲ್ಲಿ ಕಂಪೆನಿಯ ವಹಿವಾಟುಗಳನ್ನು ನಡೆಸಿದ್ದು ಶ್ಲಾಘನೀಯ ಎರಡನೇಯದಾಗಿ ಕಂಪೆನಿಯು ಪ್ರಾರಂಭಿಸುವಾಗ ಕಂಪೆನಿಯ ಬಗ್ಗೆ ದುಂದುಮ್ಮಾಯ ಮಾಡದೆ ಉಚ್ಚ ತರಗತಿಯ ಧ್ಯೇಯಗಳನ್ನೆ ದೃಷ್ಟಿದಲ್ಲಿಟ್ಟು ಕೆಲಸ ಸಾಗಿಸಿದ್ದು ಮೂರನೆಯದಾಗಿ ಶೇಕಡಾ 99ರಷ್ಟು ಬೋನಸನ್ನು ಪೋಲಿಸಿದಾರರಿಗೆ ಹಂಚಿ ಶೇಕಡಾ 1ರಷ್ಟು ಲಾಭವನ್ನು ಪೋಷಕರಿಗೆ ಕೊಟ್ಟದ್ದು ಇದರಷ್ಟು ಗಣನೀಯವಾದ ಸಂಗತಿಯು ಕಂಪೆನಿಗೆ ಬೇರೊಂದಿಲ್ಲ

ಜಿ. ಎಸ್. ಮರಾಠೇ.

ಜಿಲ್ಲೆಯಲ್ಲೆಲ್ಲಾ ಏಜಂಟರೂ, ಕಾರ್ಯನಿರ್ವಾಹಕರೂ ಬೇಕಾಗಿರುವರು ವಿಶ್ವಾಸಾರ್ಹರೂ, ಕಾರ್ಯಸಮರ್ಥರೂ ಆದವರು ಹೆಡ್ ಆಫೀಸು ಅಥವಾ ಹತ್ತಿರದ ಬ್ರಾಂಚ್ ಆಫೀಸಿಗೆ ಬರೆದುಕೊಳ್ಳಿ.

ಮಂಗಳೂರು ಏಜಂಟರು:–

ಎಚ್. ಕೆ. ತಿಂಗಳಾಯ ಹೊಗೆ ಬಜಾರ್, ಮಂಗಳೂರು.

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc., in guaranteed colours. Silk Sarees & Coatings a Speciality. Work is conducted under the supervision of Textile experts. We undertake special orders to suit individual tastes.

Please inspect our goods at:–

Raghavendra Ranga Pai, Car Street, Mangalore.

We deal in grey & Coloured Yarns Dyes Chemicals & Handloom accessories.

M. Venkatesha Ranga Pai,
Proprietor

New Era Technical School.
Near Market Square, Udipi.

Commercial classes–approved by th Madras Government–New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)
ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

ಡಾಕ್ಟರ ವಾಮನ ಗೋಪಾಳರವರ

ಬಿಡಿಹಾಯುತ್ತ
ಸಾಕರ ಪರಿಲಾ
ಕೆಟ್ಟ ರಕಕ್ಕೆ ಪರಮೌಷಧ
೪೫ ವರ್ಷದ ಅನುಭವ.
ಉಪಯೋಗಿಸಿದವರೇ ಹೇಳ್ವರ
ಡಾ|| ಗೌತಮ ರಾವ್ ಕೇಶವರವರ
ಫ್ರೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್
ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಯಿ ೩
ಕ್ರಿಶ್ಚನ್ಸ್ ಹಾ ಕಂಪನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ]

ನಿಮ್ಮ ಮಿತ್ರರನ್ನು
ಸ್ವದೇಶಾಭಿಮಾನಿಯ
ಚಂದಾದಾರರನ್ನಾಗಿ ಮಾಡಿರಿ.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ
(ಸುವರ್ಣ, ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲ ಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2–8–0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ.   8 ಬಾಟ್ಲಿಗಳಿಗೆ ರೂ. 1–12–0.



ಅಲ್ಲದೆ ಬಾಲಗ್ರಹ ತೈಲ, ಬಾಲಗ್ರಹ ದ್ರವ ಸಹಾ ದೊರೆಯುತ್ತವೆ   ಕ್ರಯ ಬಾಲಗ್ರಹ ತೈಲ ಬಾಟ್ಲಿ 1ಕ್ಕೆ 8 ಆಣೆ
ಬಾಲಗ್ರಹ ದ್ರವ ಬಾಟ್ಲಿ 1ಕ್ಕೆ ರೂ 1—0—0

ಮಲೇರಿಯಾ ನಿವಾರಿಣಿ

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ ಕಫ ಜ್ವರ, ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತ ಉತ್ತಮವಾದ ಔಷಧಿಯು ಬೇರೊಂದಿಲ್ಲ

ಬಾಟ್ಲಿ 1ಕ್ಕೆ ರೂ 1 8–0   ಸಣ್ಣ ಬಾಟ್ಲಿ 1ಕ್ಕೆ ಆಣೆ 18

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು   ಕ್ರಯ ಡಬ್ಬಿ 1ಕ್ಕೆ ರೂ 2–8–0 ಮಾತ್ರ.

ಎಮ್. ಗಣಪಯ್ಯ ಎಂಡ್ ಸನ್ಸ್ ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ– ಶ್ರೀ ರಾಮಾ ಸ್ಟೋರ್ಸ್ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ಶ್ರೀನಿವಾಸ ಕೈ, ಪುತ್ತೂರು, ಮೆಸರ್ಸ ಮುಲ್ಲರ ಕೆಮಿಸ್ಟ್ ಟ್ರೇಡರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ ಕಾಮತ್ ಎಂಡ್ ಕೊ, ಕಾರಾಹೌಸ್, ಗಿರಗಾಂವ್, ಪೋರ್ಚುಗೀಜ್ ಮುಂಬಯಿ, ನಂ. 4, ದಿ ಮರ್ಕ್ಯಾಟ ಹೋಲ್, ಮಡಿಕೇರಿ ಕೂರ್ಗ್, ರಾವ್ ಫಾರ್ಮಸಿ, ಸಾಗರ

The Canara Banking Corporation Udipi Ltd.

Head office:—UDIPI, S. K (Incorporated in British India) Tele-'BANKING' **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras (George Town), **6. Bunder Mangalore, 7. Mercara** (North Coorg), **& 8. Virarajendrapet** (South Coorg)

NOTICE.

The Ordinary Annual General Meeting of the share holders of the Corporation will be held at its Registered office at Udipi on Saturday the 22 February 1936 at 2 P. M to transact the following business —1 To receive and consider the Balance Sheet for the year ended 31-12-1935 with the Auditor's Certificate, the Profit and Loss Statement and the Directors' Report. 2 Fixing the rate of dividend and bonus to be paid to the share-holders. 3. Appointment of new Directors in the place of—Messrs 1 P Gopal Naik, 2. Karnad Rama Rao, 3 K. Narsimha Kamath, 4 B Vaikunta Baliga who retire under Art 57 & 60 (All are eligible for re-election under Art 61) 4. The appointment of an Auditor or Auditors for the current year and fixing the amount of his or their remuneration (The last year's Auditor is eligible for re-election and is willing to accept the office) Dr. K R Kini, a share holder of the bank proposes Mr. A. Umanath Rao, B A, Dip' Econ, G D. A, R. A., Registered Accountant & Auditor, as Auditor for 1936

It is requested that you will be good enough to attend the meeting If it should be inconvenient for you to attend the meeting in person, you may appoint a Share holder of this Corporation as your proxy The proxy should be stamped with 2 one anna revenue stamps, bear your signature and should reach the Head office by 2 P M on 21-2-1936.

N. B—The transfer Books of the Corporation will remain closed from 7-2-'36 to 29-2-'36 both days inclusive.

(By order)

Office of the Corporation, UDIPI, 30-1-'36 M. Shrinivas Prabhu, Manager

---

TO INSURE OR TO REPRESENT

CONSULT—

The Bombay Life Assurance Company Ltd.

ESTD 1908

are (1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra
(5) Increased rate of Bonuses
(6) Accident Risk on a small extra payment

Attractive Rates of Commission & Bonuses to Agents

particulars apply to any of our Offices

Kochikar Brothers Branch Secretaries

OFFICES 1) "Gautam Nivas Charni Rd, Girgaum Bombay No 4 2) P B 337 Mount Road Madras (3) Visveshwarapuram Circle, Bangalore City (4) Hazur Road Calicut (5 Car Street, Mangalore, S K (6) Udipi (S India)

Regd)

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ.

ಅಮೃತಾಂಜನ ಡಿಪೋವಿನ ಹುಳು ಕಡ್ಡಿಯ ಮುಲಾಮು ಇಲ್ಲಿಯ ವರೆಗಿನ ನಮ್ಮ ವಿಲ್ಲಿಯಮ್ ಮತ್ತು ಕಂಪೆನಿಯ ಹುಳು ಕಡ್ಡಿಯ ಮುಲಾಮಿನ 'ಕಿಂಗ್ ಎಂಡ್ ಕ್ವೀನ್' ಎಂಬ ವ್ಯಾಪಾರದ ಗುರುತನ್ನು ಈ ಕೆಳಗಿನಂತೆ ಈಗ ಬದಲಾಯಿಸಲ್ಪಟ್ಟಿದೆ

ಅಮೃತಾಂಜನ ಡಿಪೋವಿನ, ಮೂರು ಬಣ್ಣದ 'ರೈಸಿಂಗ್ ಸನ್'

ಈ ಮೇಲಿನ ಬದಲಾವಣೆಯನ್ನು ನಮ್ಮ ಗಿರಾಕಿಗಳೆಲ್ಲರೂ ಪ್ರಾಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ನಾವು ಅಂಕೆಮಾಡಿಕೊಳ್ಳುತ್ತೇವೆ ಅಲ್ಲದೆ ಈ ವ್ಯಾಪಾರದ ಗುರುತನ್ನು ಬದಲಾಯಿಸಿದ ಮಾತ್ರದಿಂದ ನಮ್ಮ ಔಷಧದ ತಯಾರಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದೂ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ

ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು

ಬ್ರಿಟಿಷ್ ಕರ್ಣಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ

ಮೊದಲನೇ ೮ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ. ——— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವಾರ್ಷಿಕ ಚಂದಾ ೩ ರೂಪಾಯಿ.
ಬಿಡಿ ಸಂಚಿಕೆ ೧ ಆಣೆ.

Registered No. M.3406

ಟಪ್ಪಾಲು ಹಾಸಲು ಸೇರಿ ರೂ. ೩-೧೫-೦

?
for Quality Snuff
H. Rama Rao
and Sons.
High Class Snuff Manufacturers
Mangalore, S. I.
ASK FOR
RAMA SNUFF
The charm of Snuff Users

ಸ್ವದೇಶಾಭಿಮಾನಿ

SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in the
THE BOMBAY LIFE
Madras Branch Secretaries
Kochikar Brothers,
Udipi Mangalore Bangalore Madras Bombay and Calicut

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳ ಸಾ । ಗರವ ಮಥಿಸಲು ಸುರರಿಗದರಿಂ ಹರ ಪವಾಖಕೆ ಮುತ್ತೆ ವಿಷ್ಣವ ಸುಡುತ ಬರುತಿರ ವ ॥
ಗರಲಕವರಂಜಿದರೆ ಸುಧೆಯನು ಮರೆತು ಕ್ಷುದರ ತೆರದಿ ಕ ಳೆತರೆ ತೆರಳ ಬಲ್ಲರೆ ...ರೆದ ಧೀರರ ನಿಶ್ಚಿತಾರ್ಥವನು । ೧ ।

ಪುಸ್ತಕ ೩೦. ಮಂಗಳೂರು ತಾ. ೧೪ನೇ ಶುಕ್ರವಾರ ಫೆಬ್ರವರಿ ೧೯೩೬ (14 – 2 – '36) ಸಂಚಿಕೆ ೭



ಅಮೇರಿಕಾದ ಪ್ರಖ್ಯಾತ ಬೌಲ್ಡರ್
ಡೆಮ್ ಎಂಬ ಅಣೆಕಟ್ಟಿನ ಚಿತ್ರ
ಸಮಸ್ತ ಪ್ರಪಂಚದಲ್ಲಿ ನೀರಾರಿವೆ
ಕಾರ್ಯದಲ್ಲಿ ಇದೊಂದು
ಮಹಾ ಅದ್ಭುತವಾಗಿರುತ್ತದೆ.
ಪ್ರೆಸಿಡೆಂಟ ರೂಸ್‌ವೆಲ್ಟರು ಇದರ
ಪ್ರಾರಂಭೋತ್ಸವ ಮಾಡುವ ಸಮಯ
ತಗದ ಚಿತ್ರವಿದು ಪ್ರೆಸಿಡೆಂಟರನ್ನು
ಚಿತ್ರದಲ್ಲಿ ಕಾಣಬಹುದು

ಕರಾಚಿ ಹರಿಜನ ಹೆಂಡಿಕ್ರೆಪ್ಟ್
ಶಾಲೆಯ ಒಂದು ಕೋಣೆಯ
ಚಿತ್ರ.
ಈ ಕುರಿತು ಒಳಗಡೆಯಿರುವ ಲೇಖವನ್ನು
ನೋಡುವುದು)

ನೋಟಗಳು..
NOTE....S.

ಯುದ್ಧವಾರ್ತೆಯು ಈಗ ತುಂಬ ಕ್ರಮವಾಗಿಯೂ ಸರಿಯಾಗಿಯೂ ಸಿಗುತ್ತಲೇ ಇದೆ. ಬೆಳಗ್ಗೆ ಪ್ರಕಟವಾಗುವ ಪತ್ರಿಕೆಗಳೆಲ್ಲ ಇಟಲಿಯ ಜಯವಾರ್ತೆಯೂ, ಸಾಯಂ ಪ್ರಕಟವಾಗುವುವುಗಳಲ್ಲಿ ಅಬಿಸೀನಿಯದ ಜಯವಾರ್ತೆಯೂ ತಪ್ಪದೆ ಬರುತ್ತಿವೆ.

\+ + + +

ಬೈಬಲಿನಂತಹ ಅತಿ ಪ್ರಚಾರಗೊಂಡಿರುವ ಪುಸ್ತಕವೇ ಇಲ್ಲ. ಇದನ್ನು ಯಾವ ಪರೀಕ್ಷೆಗೂ ಇಟ್ಟಿಲ್ಲ, ಇದರಲ್ಲಿದ್ದುದನ್ನು ಪಾಠ ಮಾಡಿ ಒಪ್ಪಿಸಬೇಕೆಂದೇನೂ ಇಲ್ಲ. ಉಂಟೆಂದರೆ ಕೀರ್ತಿ, ಸುಧಾರಣೆಯ ಗುರುತು. ಬೈಬಲಿನೊಳಗೆ, ನಮ್ಮ ಪುರಾಣದಲ್ಲಿರುವಹೆಂಬ ಬದನೆಕಾಯಿಗಳು ಇಲ್ಲವೆಂದಿಲ್ಲ; ಆದರೆ ಅದು ಪುರಾಣವಲ್ಲ,—ಇತಿಹಾಸ

ಬೈಬಲಿನಲ್ಲಿ ವಿಶೇಷ ಶ್ರದ್ಧೆಯುಳ್ಳ ವಿಲಾಯತಿಯ ಜನಾಂಗಗಳು, ಬೈಬಲನ್ನು ಬಹಳವಾಗಿ ಕೊಂಡುಕೊಂಡು, ಹಂಚಿ, ಭಾಷಾಂತರಿಸಿ, ಪ್ರಚಾರಗೊಳಿಸಿ, ಕೈಯಲ್ಲಿ ಹಿಡಿದುಕೊಂಡು ಅದು ಇತಿಹಾಸವೆಂದು ತಿಳಿದೇ,-ಇತಿ ಎಂದು ನಗುತ್ತಿದ್ದಾರೆ. ಹಾಗಿಲ್ಲದಿದ್ದಲ್ಲಿ, ಇಷ್ಟೆಲ್ಲ ನಗೆಗೇಡು ವರ್ತನವು ಧರ್ಮಪ್ರಾಣರಿಗೇಕೆಂದು ಅಬಿಸೀನಿಯ ಯುದ್ಧ ಪ್ರಸ್ತಾಪದಲ್ಲಿ ಸುಧಾರಿತರಲ್ಲದವರು ಬೈಬಲಭಕ್ತ ಇಟಲಿಗೆ ಕೇಳುತ್ತಿದ್ದರೆ?

\+ + + +

ಕೆಲವರು ಕಾಂಗ್ರೆಸ್ ಪಂಗಡದಲ್ಲಿ ಸೇರುವುದಿಲ್ಲ ಎಂದು ಹೇಳಿ, ಕಾಂಗ್ರೆಸಿನ ಕೆಲಸವನ್ನು ಮುಂದರಿಸುತ್ತಾರೆ. ಕೆಲವರು ಸೇರಿ ಕಾಂಗ್ರೆಸ ಕಾರ್ಯಕ್ರಮವನ್ನು ತ್ಯಜಿಸುತ್ತಾರೆ, ಕೆಲವರು ಕಾಂಗ್ರೆಸಿನವರು ತಾವೆಂದು ಅತ್ಯಾವೇಶದಿಂದ ನುಡಿದು ಕಾಂಗ್ರೆಸ್ ಕೆಲಸವನ್ನೆ ಹಾಳುಮಾಡುತ್ತಾರೆ ಕೆಲವರಿಗೆ ಕಾಂಗ್ರೆಸ್ ಎಂಬ ಪದಬೇಕು, ಪದವಿ ಬೇಡವಾಗಿದೆ ಕೆಲವರಿಗೆ ಕಾಂಗ್ರೆಸು ತಮ್ಮಂತಿರಬೇಕೆಂಬ ಆತುರ ಇದೆ ಅಂತೂ ಕಾಂಗ್ರೆಸ್‌ಮಯವಾಗಿದೆ ಈಗ

× × × × ×

ಹೊಸ ಕಾಂಗ್ರೆಸ್ ಅಧ್ಯಕ್ಷ ಜವಾಹರಲಾಲರೂ ಹೊಸ ವೈಸ್ರಾಯರೂ ಒಂದಾಗಿ ಪರಾಮರ್ಶಿಸಿ ಒಂದು ಬಗೆಯ ಧೋರಣೆಯನ್ನು ಇಬ್ಬರೂ ಕೈಕೊಳ್ಳಬಹುದೆಂದು ಲೇಖ ಬರೆಯುವರು ಆಶಿಸುತ್ತಾರೆ ಹಳಬರ ಹಿತಚಿಂತನೆಯೆ ಹೀಗೆ ಹಳೆಯ ಅಧ್ಯಕ್ಷರೂ ಹಳೆಯ ವೈಸ್ರಾಯರೂ ಒಂದೇ ಬಗೆಯ ಧೋರಣೆಗಾಗಿ ಗಾಂಧಿ-ಇರ್ವಿನ ಕರಾರನ್ನು ಮಾಡಿಕೊಂಡುದು ಮರೆತಿದೆಯೆ?

× × × × × ×

ಕಣ್ಣೀರು ಸುರಿಸುವಿರಾದರೆ,-ಕೌನ್ಸಿಲ್ ಒಫ್ ಸ್ಟೇಟ್ ಸಭೆಯ ವಿಸರ್ಜನೆಗೆ ದಿನ ಇಟ್ಟಿದೆ ಎಂದ ಒಂದೆರಡು ತಟಕು ಸುರಿಸಿರಿ ಜನಮತವು ಎಸೆಂಬ್ಲಿಯಲ್ಲಿ ನಿರಾಕರಿಸಿದ ಎಷ್ಟೋ ಮಸೂದೆಗಳನ್ನು ಈ ಸಭೆಯ ಮೆಂಬರರು ಸಂಜೀವನ ಪ್ರಯೋಗದಿಂದ ದೇಶದ ಮೇಲೆ ಪ್ರಯೋಗಿಸಲು ಬಹಳ ಸಹಾಯ ಮಾಡಿದ್ದರು ಬೇಡವಾದ ಕಾನೂನುಗಳಿಗೆ ಸಂಜೀವನ ಕುಡಿಸಿದ ಮೆಂಬರರು ಕೌನ್ಸಿಲು ಜೀವನ ಮುಗಿಸಬೇಕಾಗಿ ಬಂದಿರುವುದು. ಕೃತಜ್ಞರಾದ ಭಾರತೀಯರು ಕಣ್ಣೀರು ಮಿಡಿಯಲಿ!

× × × × ×

"ರಾಜಪುತರ ಸಾಹಸ ಕಾರ್ಯಗಳು" ಎಂಬ ಪುಸ್ತಕವನ್ನು ಕಲ್ಕತ್ತ ವಿಶ್ವವಿದ್ಯಾಲಯವು ಪರೀಕ್ಷೆಗೆ ನೇಮಿಸಿದ್ದು, ಅದನ್ನೀಗಲೆ ಪ್ರಕಟಿಸುವುದರೊಳಗೆ, ಮುಸ್ಲಿಮರ ಸಾಹಸಕಾರ್ಯಗಳೇನೂ ಇಲ್ಲವೇ ಎಂದೊಬ್ಬ ಮೆಂಬರರು ಆಕ್ಷೇಪಿಸಿದ ಕಾರಣ, "ಹಿಂದೀಯರ ಸಾಹಸಕಾರ್ಯಗಳು" ಎಂಬ ಹೊಸ ಪುಸ್ತಕವನ್ನೇ ಈಗ ಪ್ರಕಟಿಸುವರಂತೆ ಕ್ರಿಸ್ತೀಯರ ಸಾಹಸಕಾರ್ಯಗಳೇಕೆ ಇರಬಾರದು ಎಂದು ಒಬ್ಬ ಕ್ರಿಸ್ತೀಯ ಮೆಂಬರನೂ ಆಕ್ಷೇಪವೆತ್ತದಿದ್ದುದು ತುಂಬ ಆಕ್ಷೇಪಕರವಾಗಿದೆ

\+ + + +

ತಾತಾ ಗಣಿಗಳಲ್ಲಿ ಹೆಂಗಸರ ಕೂಲಿ,—ದಿನಕ್ಕೆ ಆರು ಪೈ! ಚರ್ಕದಲ್ಲಿ ನೂಲೆತ್ತಿದರೆ ದಿನಕ್ಕೆ ಎರಡಾಣೆಗೆ ಕಡಿಮೆ ಎಂದೂ ದೊರೆಯಲಾರದು. ಅದಕ್ಕಾಗಿಯೆ ತಾತಾರವರ ಖಾದೀ ಕಾರ್ಖಾನೆಗಳಿಲ್ಲ!

ಕೆನರಾ ಬೇಂಕ್, ಲಿಮಿಟೆಡ್.

ಸ್ಥಾಪನೆ 1906.

ಇದೇ ತಿಂಗಳ ತಾ 14ನೇ ಶುಕ್ರವಾರ ನಮ್ಮ ಎಲ್ಲಾ ಬಗೆಯ ಬೇಂಕಿಂಗ್ ವಹಿವಾಟುಗಳನ್ನು ಯಥಾಪ್ರಕಾರ ನಡಿಸುವ ಸಲುವಾಗಿ

ಮೂಲ್ಕಿಯಲ್ಲಿ

ನಮ್ಮದೊಂದು ಶಾಖೆಯನ್ನು ತೆರೆಯಲಿರುವೆವು ಎಂದು ತಿಳಿಸುವುದಕ್ಕೆ ಸಂತೋಷಪಡುತ್ತೇವೆ.

CANARA BANK LTD

ಸಿರಿಯಾದ ಸ್ವಾತಂತ್ರ

ಸಿರಿಯಾವು ಅರಬಸ್ಥಾನದ ಒಂದು ದೇಶ. ಮಹಾಯುದ್ಧದ ನಂತರ ಅದು ಫ್ರೆಂಚ್ ಮ್ಯಾಂಡೇಟಿನ ಒಳಗಾಗಿರುತ್ತದೆ. ಸಿರಿಯಾ ದೇಶದವರು ಫ್ರೆಂಚರ ಅಧಿಕಾರ ವಿರೋಧಿಸಿ ಚಳವಳಿಯನ್ನು ನಡೆಯಿಸುತ್ತಿದ್ದಾರೆ. ಅವರು ಹೀಗೆನ್ನುತ್ತಿದ್ದಾರೆ—

“ಕಳೆದ ಮಹಾ ಯುದ್ಧದ ನಂತರ ಟರ್ಕಿ ಸರಕಾರ ಅಧಿಕಾರದಿಂದ ನಮ್ಮನ್ನೂ, ಇಲ್ಲಿನ ಅವರ ಇತರ ರಾಜ್ಯಗಳನ್ನೂ ಜನಾಂಗಸಭೆಯವರು ಹೊರಮಾಡಿದರು. ನಮಗೆ ಅಗ್ನಿ ಸ್ವಾತಂತ್ರ್ಯವು ಬೇಗನೆ ಕೊಡಲಾಗುವುದೆಂದು ವಾಗ್ದಾನಗಳಾಗಿದ್ದವು. ನಾವು ತತ್ಕಾಲಕ್ಕೆ ಅಂದರೆ ಹತ್ತು ವರ್ಷಗಳವರೆಗೆ ಫ್ರೆಂಚ ಅಧಿಕಾರದ ಒಳ ಇರಬೇಕೆಂಬುದು, ಆಗಿನ ಶರ್ತಗಳಾಗಿದ್ದವು. ಇಲ್ಲಿನ ಇರೇಕು ದೇಶವನ್ನು ಬ್ರಿಟಿಷ ಸರಕಾರದ ಅಧಿಕಾರಕ್ಕೆ ಸೇರಿಸಿದರು.

“ಬ್ರಿಟಿಷ ಸರಕಾರದವರು, ಇರೇಕಿಗೆ ಸ್ವಾತಂತ್ರ್ಯವನ್ನು ಕೊಟ್ಟರು. ಇರೇಕು ಜನಾಂಗ ಸಭೆಯ ಸದಸ್ಯತನವನ್ನು ಪಡೆಯಿತು. ಆದರೆ, ನಮ್ಮ ದೇಶವು ಫ್ರೆಂಚ್ ಅಧಿಕಾರದ ಕೆಳಗೆ ಇನ್ನೂ ಅಸಂಖ್ಯಾತ ಸಂಕಷ್ಟಗಳನ್ನು ಅನುಭವಿಸುತ್ತಿದೆ. ನಮ್ಮ ಇಚ್ಛೆಗಳಿಗೆ ವಿರುದ್ಧವಾಗಿ ಜೀವ್ಸರನ್ನು ನಮ್ಮ ದೇಶದೊಳಗೆ ಸೇರಿಸುತ್ತಿದ್ದಾರೆ. ೧೯೩೬ರಲ್ಲಿ ನಾವು ನಡೆಸಿದ ಚಳವಳಿಯ ಫಲಿತಾಂಶವಾಗಿ ನಮಗೆ ನವರಾಜಶಾಸನವು ಕೊಡಲಾಯಿತು. ಆಗ ನಮಗೆ ಹಾನಿಕರವೆನಿಸುವ ಒಂದು ಒಪ್ಪಂದವನ್ನು ಫ್ರೆಂಚ ಸರಕಾರವು ಮುಂದೆ ತಂದಿತು. ನಮ್ಮ ಪಾರ್ಲಮೆಂಟು ಅದನ್ನು ತಳ್ಳಿಹಾಕಿತು. ಇದರಿಂದ ರೇಗಿದ ಫ್ರೆಂಚ್ ಹೈ ಕಮಿಶನರರು, ಜನರಿಂದ ಚುನಾವಣೆ ಹೊಂದಿದ ಪಾರ್ಲಮೆಂಟನ್ನು ರದ್ದುಪಡಿಸಿ, ಅವರಿಂದಲೆ ನೇಮಕವಾದ ಸದಸ್ಯರಿಂದೊಡಗೂಡಿದ ಪಾರ್ಲಮೆಂಟನ್ನು ಸೇರಿಸಿದರು. ಮತ್ತು ನಮಗೆ ಅಸಂಖ್ಯಾತ ಸಂಕಷ್ಟಗಳನ್ನು ಒದಗಿಸಿದರು. ನಮ್ಮ ಮೇಲೆ ಅನೇಕ ಕ್ರೂರ ಕೃತ್ಯಗಳನ್ನು ನಡೆಯಿಸಿದರು. ನಾವು ಈಗ ಅವರ ಅಧಿಕಾರ ಭಾರದಲ್ಲಿ ನರಳುತ್ತಿದ್ದೇವೆ. ಕ ದಂಡ ತೆರಿಗೆಗಳು ಅವರಿಗೆ ಇಚ್ಛೆ ಬಂದಂತೆ, ಅನ್ಯಾಯಕರವಾದ ರೀತಿಗಳಲ್ಲಿ ವಿಧಿಸಲ್ಪಡುವವು. ನಮ್ಮ ರಾಷ್ಟ್ರೀಯ ನಾಯಕರನ್ನು ದೇಶಭ್ರಷ್ಟರನ್ನಾಗಿ ಮಾಡಿದರು. ನಮ್ಮ ಕಳೆದ ೨೬ ವರ್ಷಗಳ ಅನುಭವದಿಂದ, ಫ್ರೆಂಚ ಸರಕಾರವು ನಮಗೆ ಅಯೋಗ್ಯವಾದುದೆಂದು, ನಾವು ತಿಳಿದಿರುತ್ತೇವೆ. ಸುಧಾರಣೆಗಾಗಿ, ನಾವು ಪೆರಿಸ್ ನಗರದಲ್ಲಿ ವಕ್ತು ಜಿನಿವಾದಲ್ಲಿ ಹಾಕಿದ ಕೂಗು, ಯಾರೂ ಕೇಳಲಾರದೆ ಹೋಯಿತು. ಆದುದರಿಂದ ನಮಗೆ ಈಗ ಸಂಪೂರ್ಣ ಸ್ವಾತಂತ್ರ್ಯ ಬೇಕು. ಸ್ವಾತಂತ್ರ್ಯ ಸಾಧನೆಗಾಗಿ ಪ್ರಾಣತ್ಯಾಗ ಮಾಡಲೂ ನಾವು ಸಿದ್ಧರಿದ್ದೇವೆ.

ಕಾಮನ್ಸ ಸಭೆಯಲ್ಲಿ ಹಿಂದೂದೇಶವು

ಕಳೆದ ವಾರ ಕಾಮನ್ಸ ಸಭೆಯಲ್ಲಿ ನವರಾಜಶಾಸನದ ಕುರಿತು ಮಾತುಗಳು ಬಂದವು. ನವರಾಜಶಾಸನದ ಪ್ರಾರಂಭಕ್ಕೆ ಸಿದ್ಧತೆಗಳು ಯೋಗ್ಯರೀತಿ ನಡೆದಿರುತ್ತವೆಂದೂ, ಸರ್ ಒಟ್ಟೊ ನೇಮಿಯರ್ ಆರ್ಥಿಕ ವ್ಯವಸ್ಥಾಕಾರ್ಯವು ಪೂರ್ಣಗೊಂಡನಂತರ, ಎಂದರೆ ೧೯೩೭ರಲ್ಲಿ ನವರಾಜಶಾಸನದ ಪ್ರಾರಂಭ ಮಾಡಬಹುದೆಂದೂ ಸೂಚನೆಗಳಾದವು. ಸಿಂದ್ ಮತ್ತು ಒರಿಸ್ಸಾ ಪ್ರಾಂತ್ಯಗಳ ಕುರಿತು ಸ್ವಲ್ಪ ಚರ್ಚೆಯು ನಡೆದಿರುತ್ತದೆ.

ಶ್ರೀ। ಜವಾಹರಲಾಲರು

ಶ್ರೀ। ಜವಾಹರಲಾಲರು ತಮ್ಮ ಲಂಡನಿನ ಪ್ರಯಾಣ ಮುಗಿಸಿ, ಈಗ ಫ್ರಾನ್ಸಿನ ಲೌಸೇನಾಕ್ಕೆ ಪ್ರಯಾಣ ಮಾಡಿರುವರು. ಶ್ರೀಮತಿ ಕಮಲಾ ನೆಹರೂಜಿಗಳವರ ಸ್ಥಿತಿ ಉತ್ತಮವಿರುವುದೆಂದು ತಿಳಿದುಬರುತ್ತದೆ.

ಹಿಟ್ಲರನ ಹೊಸ ಧರ್ಮ

ಮಾನವನಿಗೆ ವಂದಿಸಲು ಯಾವುದಾದರೊಂದು ವಸ್ತು ಬೇಕೆ ಬೇಕು ಎಂದು ಹಿಟ್ಲರನ ದೃಢವಾದ ನಂಬಿಕೆ. ಒಂದು ಹೊಸ ಧರ್ಮದ ಸ್ಥಾಪನೆ ಮಾಡಿರುವನು, ತಾನು ಅದರ ರಕ್ಷಕನೂ, ಪೈಗಂಬರನೂ ಆಗಿರುವನು.

ಜರ್ಮನಿಯು ‘ದೇವರು’ ಎಂದು ಈ ಹೊಸ ಧರ್ಮದ ತತ್ವ. ಈ ಹೊಸ ದೇವರು ಹಿಟ್ಲರನಿಗೆ ಅನೇಕ ಮಹತ್ಕಾರ್ಯಗಳಲ್ಲಿ ಆಶೀರ್ವದಿಸಿದಂತೆ ಕಾಣುತ್ತದೆ. ಹಿಟ್ಲರನಿಗೆ ಮಹಾ ಪ್ರಭುತ್ವವನ್ನು ಸಂಪಾದಿಸಿರುತ್ತದೆ. “ನಮಗೆ ದೈವಸಹಾಯವು ಇದೆ” ಎಂದು ಹಿಟ್ಲರನ ಮಾತು, “ನಮಗೆ ಆತನು ಅನೇಕ ರೀತಿಗಳಲ್ಲಿ ಹರಸಿರುವನು” ಎಂದು ಆತನ ಹಿತವಾದಿಗಳ ಕಂಠನಾದ. ‘ನಾನು ಆದರ್ಶವಾಗಿ ಹೇಳಿದ ಸಂಗತಿಗಳು ಇಂದಿಗೆ ನಿಜವಾಗಿವೆ’ ಎಂದು ಒಂದು ಭಾರಿ ಈತನು ಸಾರಿರುವನು. ಕೊಮ್ಯುನಿಸ್ಟರು, ಸಮತಾವಾದಿಗಳು, ಇತ್ಯಾದಿ ಅಪಜಯದ ನಂತರ ಸಂಪೂರ್ಣವಾಗಿ ಮರೆತುಹೋಗುವವು. ಇದಕ್ಕೆ ಕಾರಣವೇನು? ಇವರ ದೇವರು ಯಾರು? ಜರ್ಮನಿಯು ದೇವರು. ಹಿಟ್ಲರನು ಪೈಗಂಬರನು. ಹಿಟ್ಲರನು ಜರ್ಮನಿಯ ಪೂರ್ವಚರಿತ್ರೆಯು ಒಂದು ಸುಂದರವಾದ ಕಥೆಯಾಗಿರುತ್ತದೆ. ಹಿಟ್ಲರನಿಂದ ಜರ್ಮನಿಯಲ್ಲಿ ಒಂದು ಹೊಸ ಪ್ರಾರಂಭವು ಆಗಿರುತ್ತದೆ. ಆದುದರಿಂದ ಜರ್ಮನಿಯಲ್ಲಿ ಕ್ರೈಸ್ತನಿಗೆ ಹೇಗೆ ಸ್ಥಾನ ಸಿಗುವುದು?

“ಕ್ರೈಸ್ತ ಧರ್ಮ ತಾವಾದವನ ದರ್ಶನ ಸಿಯ ತತ್ವ. ಇದು ಎಲ್ಲವನ್ನು ಆವರಿಸಿಕೊಂಡಿದೆ. ನಾವು ಹೇಗಿದ್ದರೂ ನವ ಸ್ವಾರ್ಥ ಮತಗಳನ್ನು ಇಲ್ಲಿ ಎತ್ತಬಾರದು. ಇವುಗಳ ಬದಲಾಗಿ ಸ್ವೈರ ಹಿಟ್ಲರವೆನ್ನಬೇಕು. ಕೇಳ ಹೆದ್ದು ಮಾಡಬಾರದು. ಬಲಗೈಯನ್ನು ಎತ್ತುವುದೆ ಈಗಿನ ನಮಸ್ಕಾರದ ಕ್ರಮ. ಹಿಟ್ಲರನ ಮಾತೆ ಸಿದ್ಧವಾಗಿರಬೇಕು. ಆತನು ನಡೆಸಿದ್ದು ಒಳ್ಳೆಯದು. ಆತನ ಜಾತಿ ದಸ್ತ ಆತನದು. ಎಲ್ಲರೂ ಒಂದೆ ಸಮವಾದ ಕ್ರಮಗಳೂ ರಚನೆಗಳೂ ಇರಬೇಕು. ಎಲ್ಲರೂ ಒಂದೆ ರೀತಿಯಲ್ಲಿ ವರ್ತಿಸಬೇಕು. ಇದರ ದಿನ ಜರ್ಮನಿಯ ಒಂದೇ ತರದ ಉಡುಪನ್ನು ಧರಿಸುವ ವರ್ತನೆಯುಳ್ಳ ಕೆಲಸಗಾರರ ಸಮೂಹವಾಗಿರುತ್ತದೆ.

ವಾರ್ತಾಪತ್ರಗಳ ಬಾಯಿಗಳಿಗೆ ಬೀಗಮುದ್ರೆಗಳು ಹಾಕಲ್ಪಟ್ಟಿವೆ. ರೇಡಿಯೋ ಪ್ರಚಾರಕ್ಕೆ ವಿಲಾಸ ಮಂದಿರಗಳಿಗೂ ಇದೆ ಸ್ಥಿತಿ ಒದಗುವುದರಲ್ಲಿ ಏನೂ ಸಂದೇಹಗಳಿಲ್ಲ. ವಿದ್ಯಾವ್ಯಾಸಂಗವು ಮೇಲಿನ ಹಿಟ್ಲರ ಸೂತ್ರವನ್ನೆ ಅನುಸರಿಸಿ ನಡೆಯುತ್ತಿದೆ. ಇತರ ಯಾವ ಮತಗಳಿಗೂ ತತ್ವಗಳಿಗೂ ಇಲ್ಲಿ ಅವಕಾಶವೆ ದೊರೆಯದು. ಎಲ್ಲೆಲ್ಲೂ ನಾಜಿ ಗಾಳಿಯೆ ಬೀಸುತ್ತಿದೆ.

‘ಜರ್ಮನಿಯ ಹೊರತು ಬೇರೆ ದೇವರಿಲ್ಲ’ ಎಂಬುದು ಅವರ ದೃಢವಾದ ನಂಬಿಕೆ.

'The Catholic World

ಶ್ರೀ। ಬಿ. ರಾಮರಾಯರು

ನಮ್ಮೂರಿನವರಾದ ಶ್ರೀ। ಬಿ. ರಾಮರಾಯರು, ಲಂಡನಿನಲ್ಲಿ ಗ್ರೇಟ್ ಬ್ರಿಟಿಸಿನ ಹಿಂದೂದೇಶದ ಡೆಪ್ಯೂಟಿ ಹೈ ಕಮಿಶನರಾಗಿದ್ದರು. ಈಗ ಅವರನ್ನು ಹೈ ಕಮಿಶನರುಗಳಾಗಿ ಮಾಡಬೇಕಾಗಿ ಸೆಕ್ರೆಟರಿ ಒಫ್ ಸ್ಟೇಟನವರು ನಿರ್ಧಾರ ಮಾಡಿರುವರೆಂದು ವಾರ್ತೆ ಬಂದಿರುತ್ತದೆ.

ಒಟೋವಾ ಒಪ್ಪಂದ!

ಒಟೋವಾ ಒಪ್ಪಂದದ ಕುರಿತು ಚರ್ಚೆಯು ತಾ. ೧೦ರಲ್ಲಿ ಪ್ರಾರಂಭವಾಗಿರುತ್ತದೆ. ಈ ಒಪ್ಪಂದವು ಹೇಗೆ ನಡೆದಿರುತ್ತದೆಂದು ತಿಳಿದುಕೊಳ್ಳಲು ಒಂದು ಕಮಿಟಿಯು ನೇಮಕವಾಗುವುದು.

ಕರ್ಣಾಟಕದಲ್ಲಿ ಪತ್ರಿಕಾ ವ್ಯವಸಾಯ

(ಡಾ। ಎನ್. ಎಸ್. ಹರ್ಡೀಕರ್)

ನಾನು ಪತ್ರಿಕಾ ವ್ಯವಸಾಯಿ ಅಲ್ಲ. ಈ ಉದ್ಯಮವನ್ನು ನಾನು ಕಲಿತುದು ಇಲ್ಲ. ಆದರೆ ಅನೇಕ ವರ್ಷಗಳ ತನಕ, ಪತ್ರಿಕಾ ವ್ಯವಸಾಯದ ಪ್ರದೇಶಗಳಲ್ಲಿ ನಾನು ಕಾಲ ಕಳೆದುದರಿಂದ, ಅದರ ಮರ್ಮವು ನನಗೆ ತಿಳಿದಿರುತ್ತದೆ. ಒಂದು ರಾಷ್ಟ್ರದ ರಚನೆಯಲ್ಲಿ, ಇದು ತುಂಬಾ ಸಹಕಾರಿಯಾಗಿದೆ. ಅಮೇರಿಕಾದ ಯುನೈಟೆಡ್ ಸ್ಟೇಟಿನಲ್ಲಿಯೂ, ಭರತಖಂಡದಲ್ಲೂ, ಪ್ರಚಾರಕಾರ್ಯ ನಿಮಿತ್ತ ನನ್ನ ಅರ್ಧ ಆಯುಷ್ಯವನ್ನು ಕಳೆದುದರಿಂದ ಪತ್ರಿಕೆ ವ್ಯವಸಾಯದ ಮಹತ್ವವು ನನಗೆ ಸರಿಯಾಗಿ ತಿಳಿದಿರುತ್ತದೆ. ಪಾಶ್ಚಾತ್ಯರು ಪತ್ರಿಕಾ ವ್ಯವಸಾಯವನ್ನು ಸರಿಯಾಗಿ ತಿಳಕೊಂಡಿರುವರು. ಅದರಲ್ಲಿ ಪಾಂಡಿತ್ಯವನ್ನು ಪಡೆದಿರುವರು. ಅದನ್ನು ತಮ್ಮ ಪ್ರಗತಿಗಾಗಿ ಉಪಯೋಗಿಸಬಲ್ಲರು. ಕಳೆದ ಕಾಲು ಶತಮಾನದಲ್ಲಿ ಈ ವ್ಯವಸಾಯವು ಭಯಂಕರ ರೀತಿಯಲ್ಲಿ ಪ್ರಗತಿಹೊಂದಿರುತ್ತದೆ. ರಾಷ್ಟ್ರಗಳನ್ನು ಇದರಿಂದ ಸೃಷ್ಟಿಸಲೂ ಕೆಡಿಸಲೂ ಸಾಧ್ಯವಾಗುತ್ತದೆ. ಪತ್ರಿಕಾ ವ್ಯವಸಾಯದಿಂದ ಅನೇಕ ರಾಜಕೀಯ, ಸಾಂಪತ್ತಿಕ ಸುಧಾರಣೆಗಳು ಪಾಶ್ಚಾತ್ಯ ದೇಶಗಳಲ್ಲಿ ಆಗುತ್ತಿವೆ. ಅವರಿಗೆ ಇದೊಂದು ಮಹಾ ವರವಾಗಿರುತ್ತದೆ.

ಕರ್ನಾಟಕದ ಪತ್ರಿಕಾ ವ್ಯವಸಾಯದ ಆಯುವು ಅರ್ಧ ಶತಮಾನವಾಗಿದ್ದರೂ ಅದೂ ಯಾವ ರೀತಿಯಲ್ಲೂ ಪ್ರಗತಿ ಹೊಂದಿದುದು ಕಾಣುವುದಿಲ್ಲ. ಅದು ಬಾಲ್ಯಾವಸ್ಥೆಯಿಂದ ಇನ್ನೂ ಹೊರಗಾಗಲಿಲ್ಲ. ಕರ್ನಾಟಕವು ಈ ವಿಚಾರದಲ್ಲಿ ಬಹಳವಾಗಿ ಹಿಂದುಳಿದಿದೆ. ಇದೊಂದು ಮಹಾ ವಿಷಾದಕರ ವಿಷಯವು. ಆದರೆ ಇದನ್ನು ಎಲ್ಲರೂ ಧೈರ್ಯದಿಂದ ಹೇಳುತ್ತಿದ್ದಾರೆ. ಕೇಳುತ್ತಿದ್ದಾರೆ.

ಈ ಪ್ರಾಂತ್ಯದ ಅಭ್ಯುದಯಕ್ಕೆ ಕಾರಣವಾದ ಈ ವ್ಯವಸಾಯವನ್ನು ಯಾರೂ ತಿಳಿಕೊಳ್ಳಲಿಲ್ಲವೆಂದು ನನ್ನ ಅಭಿಪ್ರಾಯವಲ್ಲ. ಅನೇಕ ವ್ಯಕ್ತಿಗಳೂ ಸಂಸ್ಥೆಗಳೂ ಈ ವಿಚಾರದಲ್ಲಿ ಬಹಳವಾಗಿ ಶ್ರಮಪಟ್ಟಿರುವರು. ಆದರೆ ಅವರ ಪ್ರಯತ್ನಗಳು ಫಲಕಾರಿಯಾಗಲಿಲ್ಲ. ಶ್ರದ್ಧೆಯಿಲ್ಲದಿರುವಿಕೆ, ಭಿನ್ನಮತೆಯುಳ್ಳದಿರುವಿಕೆ ಇತ್ಯಾದಿಗಳು ಇದಕ್ಕೆ ಕಾರಣಗಳು. ಕರ್ನಾಟಕ ರಾಜಕೀಯ ಘಟನೆ ಜನಸಮೂಹವನ್ನು ಚೇತರಿಸಿ ಗಟ್ಟಿ ಮಾಡುವ ಮುಖಂಡರ ಕಾರ್ಯಗಳಿಗೆ ಅದು ಸಂಗತಿಯೆನಿಸಿತು. ಈ ತತ್ವ ವಿಷಯದ ಕಡೆಗೆ ಏನೂ ಗಮನಕೊಡದೆ ಹೋದರು. ಅವರ ಮನಸ್ಸನ್ನು ಕೆಡಿಸಿತು. ಹೀಗಾಗಿ ಕರ್ನಾಟಕವು ಪತ್ರಿಕಾ ವ್ಯವಸಾಯದಲ್ಲಿ ಬಹಳ ಹಿಂದೆ ಬಿದ್ದಿದೆ.

ಆದರೆ ಈ ಬಗೆ ಕರ್ನಾಟಕವು ತನ್ನ ಸುತ್ತಮುತ್ತಲಿನ ಪ್ರಾಂತ್ಯಗಳ ಮೇಲೆ ಅವಲಂಬಿಸಿಕೊಳ್ಳಬೇಕಾಯಿತು. ಇದರಿಂದ ಕನ್ನಡಿಗರು ತಮ್ಮ ಮಾತೃಭಾಷೆಯಲ್ಲಿ ಪತ್ರಿಕೆಗಳನ್ನು ಓದಲು ಅಸಾಧ್ಯವಾಯಿತು. ಕನ್ನಡಿಗರಿಗೆ ಬೇಕಾದ ಆಲೋಚನೆ ಮತ್ತು ಕಲ್ಪನೆಗಳು ಹೊರಗಿನಿಂದ ಬರಬೇಕಾಯಿತು. ಕನ್ನಡಿಗರು ಪ್ರಪಂಚದ ವಾರ್ತೆಗಳನ್ನು ತಿಳಿಯದೆ ಕಾಲಹರಣ ಮಾಡಬೇಕಾಯಿತು. ಈ ರೀತಿ ಕನ್ನಡ ಭಾಷಾಭಿವೃದ್ಧಿಯು ತಡೆಯಲ್ಪಟ್ಟಿತು—ಜನರಲ್ಲಿ ಐಕ್ಯಮತ್ಯವನ್ನುಂಟು ಮಾಡಲು ಕಷ್ಟಸಾಧ್ಯವಾಯಿತು—ನಮ್ಮ ಪ್ರಾಂತ್ಯವು ಅಜ್ಞಾನದ ಕತ್ತಲೆಯಲ್ಲಿರಲೇಕಾಯಿತು. ಕನ್ನಡಿಗರು ಇಷ್ಟು ಕಷ್ಟಗಳನ್ನು ಅನುಭವಿಸಬೇಕಾಯಿತು. ಪತ್ರಿಕಾ ವ್ಯವಸಾಯ ಎಂಬ ಕಲೆಯು, ಒಂದು ರೋಗಿಯಂತೆ ಬಾಳಬೇಕಾಯಿತು—ರೋಗಿಯ ಉಪಶಮನವು ಯಾವ ರೀತಿಯಲ್ಲೂ ನಡೆಯುವುದಿಲ್ಲ.

ಪ್ರಸಿದ್ಧ ಬರಹಗಾರರು ನಮ್ಮಲ್ಲಿ ಹಲವರಿರುವರು. ಪತ್ರಿಕಾ ವ್ಯವಸಾಯವನ್ನು ಅರಿತವರು, ಅದನ್ನು ಜೀವನಕ್ಕಾಗಿ ಬೇರೆ ಪ್ರಾಂತ್ಯಗಳಿಗೆ ಮಾರಬೇಕಾಯಿತು. ಕೆಲವರ, ತಮ್ಮ ಈ ವಿಚಾರದಲ್ಲಿರುವ ಶಕ್ತಿಯನ್ನು, ಒಂದು ವಾರಪತ್ರಿಕೆ ನಡೆಸ ಪ್ರಾರಂಭಿಸಿ, ಮಾಸ ಪತ್ರಿಕೆಯನ್ನು ನಡೆಸುವುದರಲ್ಲಿ, ಯಾವತ್ತೂ ಫಲಗಳನ್ನು ಪಡೆಯದೆ ಉಪಯೋಗ ಮಾಡುತ್ತಿದ್ದಾರೆ. ಹೀಗಾಗಿ ಅವರು ಹತಾಶರಾದರು. ಅನೇಕ ಪತ್ರಿಕೆಗಳು ನಮ್ಮಲ್ಲಿ ಹುಟ್ಟಿದುವು—ಹುಟ್ಟುತ್ತಿವೆ—ಹುಟ್ಟುವವು. ಹುಟ್ಟಿದ ಕೆಲವೇ ದಿನಗಳಲ್ಲಿ ಸಾಯುವವಾಗುವುವು. ಸಾಧಾರಣ ಜನರಿಗೆ ಈ ವ್ಯವಸಾಯದ ಮಹತ್ವವು ತಿಳಿದಿಲ್ಲ. ಪತ್ರಿಕಾ ವ್ಯವಸಾಯಿಗಳು ಕೂಡ ನಿರುತ್ಸಾಹಿಗಳಾಗಿರುತ್ತಾರೆ.

ಭಾರತೀಯ ಸಂಸ್ಕೃತಿಯ ಮೂಲ

ಭಾರತೀಯ ಸಂಸ್ಕೃತಿಯ ವಿಚಾರದಲ್ಲಿ ಕಳೆದ ಹತ್ತೊಂಬತ್ತನೇ ಶತಮಾನದವರೆಗೆ ಅನೇಕ ವ್ಯತ್ಯಾಸವಾದ ಆಲೋಚನೆಗಳಿದ್ದವು. ತಮ್ಮ ಸಂಸ್ಕೃತಿ ಅತಿ ಪ್ರಾಚೀನಕಾಲದ್ದು; ಅದು ಬ್ರಹ್ಮದಿಂದ ಉಂಟಾದುದು, ಧರ್ಮವನ್ನು ಮನ್ನಿಸದಿದ್ದುದರಿಂದ ಅನೇಕ ಸಂಕಷ್ಟಗಳು ಒದಗಿದವು ಎಂದು ಹಿಂದೂಗಳ ಅಭಿಪ್ರಾಯವಾಗಿತ್ತು. ಪಾಶ್ಚಾತ್ಯರು ಭಾರತೀಯ ಸಂಸ್ಕೃತಿಯು ಆಧುನಿಕ ಕಾಲದೆಂದು ನಂಬುತ್ತಿದ್ದರು. ಸಂಸ್ಕೃತವು ಬರೀ ಬ್ರಾಹ್ಮಣ ಕಲ್ಪನೆ ಎಂದೂ, ಮತ್ತು ಅವರ ವೀರ ಕಾವ್ಯಗಳು, ಗ್ರೀಕರನ್ನು ಮತ್ತು ರೋಮನ್ನರನ್ನು ಅನುಸರಿಸಿಕೊಂಡಿವೆ ಎಂದೂ ಕೆಲವು ಪಾಶ್ಚಾತ್ಯ ವಿದ್ವಾಂಸರ ಊಹೆಗಳಾಗಿದ್ದವು. ಹಿಂದೂಧರ್ಮವು ಬ್ಯಾಬಿಲೋನಿಯಿಂದಲೂ, ಗ್ರೀಕರ ವಿವಿಧ ಶಾಸ್ತ್ರಗಳಿಂದಲೂ, ಜನ್ಮಹೊಂದಿತ್ತೆಂದು ಅವರಲ್ಲಿ ಕೆಲವರಿಗೆ ಭಾವನೆಗಳಾಗಿದ್ದವು. ಆದರೆ ಬಂಗಾಳದ ಏಶಿಯಾಟಿಕ್ ಸೊಸೈಟಿಯವರ ಒಂದು ಶತಮಾನದ ಕಾರ್ಯಗಳ (ಇಂಡಿಯಾ ಸರಕಾರದ ವ್ಯಯದಿಂದ) ಈ ಮೇಲಿನ ಊಹೆಗಳನ್ನು ಅಲ್ಲಗಳೆದಿರುತ್ತವೆ. ಭರತಖಂಡದ ಶ್ರೇಷ್ಠ ಪ್ರಾಚೀನ ಕಾಲದ ಹೆಬ್ಬಾಗಿಲುಗಳನ್ನು ತೆರೆದಿರುತ್ತದೆ. ಅನೇಕ ಶಾಸನಗಳೂ, ಶಿಲ್ಪಗಳು ಕಂಡುಹಿಡಿಯಲ್ಪಟ್ಟಿವೆ. ಇವುಗಳ ಆಧಾರದಿಂದ, ಭರತಖಂಡದ ಪ್ರಾಚೀನ ನಾಗರೀಕತೆ ಸಂಸ್ಕೃತಿಗಳ ಅರಿವು ಮಾಡಿಕೊಳ್ಳಲು ಸಾಧ್ಯವಾಗಿರುತ್ತದೆ. ಇವುಗಳ ಆಧಾರದ ಮೇಲೆ ಪ್ರಸಿದ್ಧ ಪಾಶ್ಚಾತ್ಯ ಚರಿತ್ರಕಾರರು, ಹಿಂದೂದೇಶದ ಸಂಸ್ಕೃತಿಯೂ, ಅತೀ ಪ್ರಾಚೀನ ಕಾಲದ್ದು—ಅದೂ ಸಾಧಾರಣ ೫೦೦೦ ವರ್ಷಗಳ ಹಿಂದಿನಿಂದ ಬೆಳೆದಿರಬಹುದೆಂದೂ, ದೃಢಮಾಡಿರುತ್ತಾರೆ. ಹಿಂದೂದೇಶವು ಸಮಸ್ತ ಏಶ್ಯಾಖಂಡಕ್ಕೆ ಹರಡಿದ ಶ್ರೇಷ್ಠ ಬೌದ್ಧಧರ್ಮದ ಮೂಲಸ್ಥಾನವಾಗಿತ್ತೆಂದೂ, (ಈಗ ಬೌದ್ಧ ಧರ್ಮವು ಇಲ್ಲಿ ಮರೆತುಹೋಗಿರುತ್ತದೆ) ಆ ಧರ್ಮವು ಕ್ರೈಸ್ತ ಧರ್ಮಕ್ಕಿಂತ ಹಳೆದಾದುದೆಂದೂ ಕಂಡುಹಿಡಿಯಲ್ಪಟ್ಟಿದೆ. ಆದುದರಿಂದ ಹತ್ತೊಂಬತ್ತನೇ ಶತಮಾನದ ಪಾಶ್ಚಾತ್ಯ ಊಹನೆಗಳಿಗೆ ಏನು ಬೆಲೆ ಇಲ್ಲ ಎಂಬುದು ಇದರಿಂದ ಸಿದ್ಧವಾಗುತ್ತದೆ.

ಸರಕಾರದ ಉಪಕಾರತ್ವದಿಂದ, ಅನೇಕ ಪ್ರಾಚೀನ ಸ್ಥಳಗಳನ್ನು ಅಗೆಯಲು ನಮಗೆ ಅವಕಾಶವು ದೊರಕಿತು. ಈ ಪ್ರಯತ್ನವು ೧೯೨೨ರಲ್ಲಿ ಮಹಂಜೋದಾರೋ ಎಂಬಲ್ಲಿ ಕಂಡುಹಿಡಿಯಲ್ಪಟ್ಟಿತು. ಮಹಂಜೋದಾರೊ ೧೯೨೨ರಲ್ಲಿ ಬ್ಯಾನರ್ಜಿ ಎಂಬುವರಿಂದ ಕಂಡುಹಿಡಿಯಲ್ಪಟ್ಟಿತು. ಇದರಿಂದ ಭರತಖಂಡದ ಪ್ರಾಚೀನತೆಯ ಕುರಿತು ಅನೇಕ ಶ್ರೇಷ್ಠ ಸಂಗತಿಗಳು ತಿಳಿದುಬಂದವು. ಈ ಶೋಧಗಳಿಂದ ಹಿಂದೂದೇಶದ ಸಂಸ್ಕೃತಿಯ ಪ್ರಾಚೀನತೆಯು ತಿಳಿದು ಬಂತು. ಪಾಶ್ಚಾತ್ಯರು ಇದರಿಂದ ಆಶ್ಚರ್ಯಚಕಿತರಾಗಿರುವರು. ಭರತಖಂಡವು ಮಾನವನ ನಾಗರೀಕತೆಯ ಅತ್ಯಂತ ಪ್ರಾಚೀನ ನೆಲೆಯಾಗಿತ್ತೆಂದೂ ಪಾಶ್ಚಾತ್ಯರ ಮೂಲ ಜನರಾಗಿ, ಎಲೆಗಳನ್ನು ಧರಿಸಿ ಬೆಟ್ಟ ಅರಣ್ಯಗಳಲ್ಲಿ ಸುಳಿದಾಡುತ್ತಿದ್ದು, ಮೃಗಗಳೊಂದಿಗೆ ಗುಹೆಗಳಲ್ಲಿ ವಾಸ ಮಾಡುತ್ತಿರುವಾಗ ಭರತಖಂಡದಲ್ಲಿ ಈಗ ಪ್ರಪಂಚದಲ್ಲಿ ವಾದಿಸಲ್ಪಡುತ್ತಿರುವ ಸಂಸ್ಕೃತಿಗಿಂತ ಶ್ರೇಷ್ಠವಾದ ಸಂಸ್ಕೃತಿಯು ಪ್ರಚಾರದಲ್ಲಿತ್ತೆಂದು ದೃಢವಾಗಿರುತ್ತದೆ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗುದೇಶದ ಏಜಂಟರು,
ಪೋಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮೆಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಿಸಮಾಡುತ್ತೇವೆ, ಈ ಧರ್ಮಸಂಸ್ಥೆಯ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ

ಸೆಕ್ರೆಟರಿ,

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ ಕ.

ಟಿಪ್ಪಣಿಯುಕ್ತ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ ಎ , ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ – ಅದು ಪೂರ್ಣವಾದ ಟೋನಿಕ್ ಆಹಾರ ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ.
ರೂ 3–4–0 ಮತ್ತು ರೂ 1–12–0

ತಯಾರಿಸುವವರು — ಆಯುರ್ವೇದಾಶ್ರಮ , ಪೋ. ಬೋಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬೇಕಾಗಿದ್ದಾರೆ!

ದಿ ನ್ಯೂ ಏಸ್ಯಾಟಿಕ್ ಲಾಯಿಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಕಂಪೆನಿಯ ಕಾರ್ಯಪ್ರಚಾರಕ್ಕಾಗಿ,-ದಕ್ಷಿಣ ಕನ್ನಡ, ಮಲಬಾರು, ತಿರುವಾಂಕೂರು ಪ್ರಾಂತ್ಯಗಳಲ್ಲಿ, ಉತ್ತಮವಾಗಿ ಪ್ರಚಾರ ಮಾಡಿ ವಿಮೆದಾರರನ್ನು ಕೂಡಿಸಿಕೊಡಬಲ್ಲ ಅರ್ಹರೂ ಯೋಗ್ಯರೂ ಆಗಿರುವ ಸ್ತ್ರೀ ಪುರುಷರು ಬೇಕಾಗಿದ್ದಾರೆ.

ಮೆ.ಸಸ ್ ಬಿಲಾರ್ ಬ್ರದರ್ಸ್ ಲಿಮಿಟೆಡ್, ಇವರ ಏಜೆನ್ಸಿದಾರಿಗಾಗಿ ಅಭ್ಯುದಯವನ್ನು ಹೊಂದಿ, ಈ ಕಂಪೆನಿಯು ತನ್ನ ಮೊದಲನೆ ಎರಡು ವರ್ಷಗಳೊಳಗಾಗಿಯೆ

೫೦ ಲಕ್ಷ ರೂಪಾಯಿ ಮೊಬಲಗಿನ ವಿಮೆ ಗಳಿಸಿಕೊಂಡಿದೆ.

ಇನ್ನೂ ಇನ್ನೂ ವಿಮಾದಾರರನ್ನು ಜಮೆಮಾಡಲು ನಿಜವಾಗಿಯೂ ದಕ್ಷರಾಗಿರುವ ಉದ್ಯಮಶೀಲರು ಬೇಕಾಗಿರುವರು ಇದಕ್ಕಾಗಿ, ನಮ್ಮ ಬ್ರೆಂಚ್ ಮೆನೇಜರರು ಈ ಪ್ರಾಂತ್ಯಗಳಲ್ಲಿ ಸಂಚರಿಸುವರು

ಎಲ್ಲ ಅರ್ಜಿಗಳನ್ನು ಇಂಗ್ಲಿಷಿನಲ್ಲಿ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳುವುದು

ಬ್ರೆಂಚ್ ಮೆನೆಜರರು,—

ದಿ ನ್ಯೂ ಏಸ್ಯಾಟಿಕ್ ಲಾಯಿಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
51, ಎಸ್‌ಪ್ಲೆನೆಡ್ ರೋಡ್, ಫೋರ್ಟ್, ಮುಂಬಾಯಿ

'ಸ್ವದೇಶಾಭಿಮಾನಿ' ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

Estd 1920] THE [1920ರಲ್ಲು ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು 3 ತಿಂಗಳಿಗೆ ಶೇಕಡಾ 5ರಂತೆ 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳ ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳ ಕೊಡಲ್ಪಡುವವು
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು
ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur
Dated 10—4—1935

G N Lakshman Pai,
Secreatry

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ಪ್ರಾಪ್ತಿಯ ಇದು ಸ್ತ್ರೀಸಂಗಮದಿಂದ ಮನುಷ್ಯಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯ ದೆಸೆಯಿಂದ ಕೊಲ್ಲೂರಿಕೊಂಡು ತಿರುಗುತ್ತಿದ್ದಾರೆ ಕುಂಟುತ್ತಾ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು

ದೀರ್ಘಕಾಲದ ವ್ಯಾಧಿಗಳೂ ಕೂಡ ನಶಿಸಿ ಪಲಾಯನವಾಗುವುವು ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು ಸೇವಿಸುವುದಕ್ಕೆ ಹಿತಕರ

ಕ್ರಯ -ದೊಡ್ಡ ಬಾಟ್ಲಿಗೆ ರೂ. 4 ಮೀಡಿಯಂ 2–4–0 ಚಿಕ್ಕದು 1–2–0

ತಯಾರಿಸುವವರು — ಲಸ್ಟರ್ ಡಿಪೋ, ಚಿಕ್ಕಮಗಳೂರು,
ಬ್ರೇಂಚ್ —ಚಿಕ್ಕಪೇಟೆ, ಬೆಂಗಳೂರು
ಮುಖ್ಯ ಏಜಂಟರು —ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

ಮಿಥ್ಯಜೀವನದ ಸತ್ಯಕಥೆಗಳು

(All Rights Reserved)

ಲೇಖಕ—ಶ್ರೀ 'ದಮಯಂತಿ'

"Truth is stranger than Fiction"

೪. ಹಣಕ್ಕಾಗಿ "ಹೆಣ"!

೧

'ಯಾರವನು, ನಿನ್ನ ಗಂಟು ಮುಳುಗಿಸಿದವನು?' ಕೋಣೆಯೊಳಗೆ ಕಾಲಿಡುವಾಗಲೇ ನನಗೆ ನಾಣಿಯ ಪ್ರಶ್ನೆ.

'ಎಲ್ಲಿಯ ಗಂಟು, ಮಹಾರಾಯ? ನಿನಗೆ ಯಾರು ಹೇಳಿದರು?' ರಾತ್ರಿ ಊಟ ಮುಗಿಸಿ ಏನೋ ಯೋಚಿಸುತ್ತ ಕುಳಿತ ನಾನು ವಿಸ್ಮಯದಿಂದ ಕೇಳಿದೆ.

'ಯಾರೇಕೆ? ನಿನ್ನ ಮುಖವೇ ಹೇಳುವುದಿಲ್ಲವೇ?' ನಾಣಿಯು ವಿವರಿಸಿದನು.

'ನಾಣಿ, ನೀನು ಈ ಕೃತಘ್ನ ಹಿಂದೂಗಳ ನಡುವೆ ಹುಟ್ಟಿದುದು ನಿನ್ನ ದುರಾದೃಷ್ಟ. ನೀನು ಜನಿಸಬೇಕಾಗಿದ್ದುದು ಪಾಶ್ಚಾತ್ಯ ದೇಶಗಳಲ್ಲಿ. ಆಗ ನೋಡಬೇಕಿತ್ತು ನಿನ್ನ ಅದೃಷ್ಟವನ್ನು. ಇಂತಹ ಇಂಗಿತಜ್ಞಾನದ ಅಸದೃಶ ಸಾಮರ್ಥ್ಯವುಳ್ಳ ನೀನು ಕ್ಷಣಾರ್ಧದಲ್ಲಿ ಲಕ್ಷಾನುಲಕ್ಷ ಪವನುಗಳನ್ನು ಗಳಿಸಿ ನಮ್ಮಂತಹವರನ್ನು ಕಡೆಗಣಿಸಿಯೂ ನೋಡುತ್ತಿರಲಿಲ್ಲ,' ನಾನೆಂದೆ.

'ನಾಳು, ನಿನ್ನ ತಮಾಷೆ ಒಬವಾಗಿಯೂ ನೀನು ಕೈಬಿಟ್ಟು ಹೋಗುತ್ತಿದ್ದ ಹಣದ ಯೋಚನೆಯಲ್ಲಿದ್ದೆಯೋ ಇಲ್ಲ?' ನಾಣಿಯು ತಿರುಗಿ ಕೇಳಿದನು.

'ನಿಜವಾಗಿಯೂ ಇಲ್ಲ. ಆದರೆ ಈಗ ನಿನ್ನ ಕೈಯೊಳಗಿನ ಸಿನಿಮಾ ನೋಟೀಸನ್ನು ನೋಡುವಾಗ ನಾನು ಕೈಬಿಟ್ಟು ಹೋಗಲಿರುವ ಹಣದ ಯೋಚನೆ ಮಾಡಬೇಕಾಗುವುದೆಂದು ಕಾಣುವುದು' ನಾನು ಉತ್ತರವಿತ್ತೆನು.

'ಸರಿಹೋಯಿತು. ನನ್ನ ಇಂಗಿತಜ್ಞಾನ ಕೌಶಲವೂ ನಿನ್ನದೇ ಮೇಲುಗೈಯಾಯಿತು. ಇಗೋ, ನಿನಗೆ ನಮಸ್ಕಾರ!' ಎಂದು ನಾಣಿಯು ತಲೆಬಾಗಿ ಅಭಿನಯ ಮಾಡಿದನು.

'ನನ್ನಿಂದ ಸಾಧ್ಯವಾಗುತ್ತಿದ್ದರೆ ನಾನೇ ನಿನಗೆ, ದೂರದಿಂದಲೇ, ನಮಸ್ಕಾರ ಮಾಡುತ್ತಿದ್ದೆನು. ಆದರೇನು ಮಾಡಲಿ? ಪೂರ್ವಜನ್ಮದ ಋಣಾನುಬಂಧ ಎನ್ನುವರಲ್ಲ?—ಅಂತಹುದು ನಮ್ಮ ನಡುವೆ ಬಂದು ನಮ್ಮ ಕೈಯಲ್ಲೇನೂ ಸಾಗದಂತಾಗಿ ಬೇಸವಾಗಿದೆ. ಅದಿರಲಿ, ಇದು ಯಾವ ಸಿನೆಮಾ ಕಂಪೆನಿಯ ನೋಟೀಸು?' ನಾನು ಕುತೂಹಲದಿಂದ ಕೇಳಿದೆ.

'ಭಾರತ ಸಿನೆಮಾ ಕಂಪೆನಿಯದು. ವಿಶೇಷ ಮಹತ್ವದ ಪ್ರೋಗ್ರಾಮ್ ಇದೆ. ಇನ್ನು ತಡಮಾಡಬೇಡ. ಹತ್ತೇ ನಿಮಿಷ ಉಳಿದಿದೆ, ಒಂಭತ್ತೂವರೆಗೆ, ಹೊರಡು'' ನಾಣಿಯ ಕಟ್ಟಪ್ಪಣೆಯಾಯಿತು.

ನಾನು ಮರುಮಾತಿಲ್ಲದೆ ಶರ್ಟಿನ ಮೇಲೆ ಶಲ್ಯವನ್ನು ಹಾಕಿಕೊಂಡು ಬೀದಿಗೆ ಕಾಲಿಟ್ಟೆ. ಆಗ ನಾಣಿಯು ಹತ್ತು ಹೆಜ್ಜೆ ಮುಂದಿದ್ದನು.

೨

ನಾವು ಟಿಕೇಟು ತೆಗೆದುಕೊಳ್ಳುತ್ತಿರುವಾಗಲೇ ಮೂರನೆಯ ಗಂಟೆ ಬಾರಿಸಲ್ಪಟ್ಟಿತು. ಹಾಗಾಗಿ ನಾವು ಪ್ರದರ್ಶನಶಾಲೆಯೊಳಗೆ ಕತ್ತಲೆಯಲ್ಲೇ ಹೊಕ್ಕು, ಕುರ್ಚಿಗಳನ್ನು ಸ್ಪರ್ಶದಿಂದಲೇ ತಿಳಿದುಕೊಂಡು ಕುಳಿತುಕೊಳ್ಳಬೇಕಾಯಿತು.

ಒಂದೆರಡು ರೀಲುಗಳು ತೆರೆಯ ಮೇಲೆ ಪ್ರದರ್ಶಿಸಲ್ಪಟ್ಟರೂ ಅದರಲ್ಲೇನೂ ವಿಶೇಷ ಕಾಣಲಾರದೆಹೋದೆನು.

'ಮಹತ್ವದ ಪ್ರೋಗ್ರಾಮ್ ಎಂದಿದ್ದೆಯಲ್ಲ? ಇದರಲ್ಲಿ ನನಗೇನೂ ಮಹತ್ವ ಕಾಣದಲ್ಲ?' ಎಂದು ನಾಣಿಯನ್ನು ಕೇಳಿದೆನು.

'ಓಹೋ! 'ಚರ್' ಎಂದೊಡನೆ ಚಕ್ಕುಲಿಯಾಗುವುದೇ? ಸ್ವಲ್ಪ ತಾಳು, ಮುಂದೆ ನೋಡುವಿಯಂತೆ!' ಎಂದು ನಾಣಿಯು ಒಗಟಿನಲ್ಲೇ ಸಮಾಧಾನ ಹೇಳಿದನು.

ಇನ್ನೊಂದು ರೀಲು ಆಗುತ್ತಲೇ ಪ್ರದರ್ಶನಶಾಲೆಯೊಳಗೆ ಬೆಳಕಾಯಿತು. ರಂಗಸ್ಥಳದ ಮೇಲೆ ಉಜ್ವಲವಾದ ಬೆಳಕುಗಳಾದುವು. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಕೆಲವು ಆಳುಗಳು ರಂಗಸ್ಥಳದ ಮೇಲೆ ಕೆಲವು ಮೇಜುಗಳನ್ನೂ, ಕೆಲವು ಪೆಟ್ಟಿಗೆಗಳನ್ನೂ ತಂದಿಟ್ಟು ಮರೆಯಾದರು.

ಒಡನೆ ಯುರೋಪೀಯ ಪೋಷಾಕಿನಲ್ಲಿದ್ದ ಒಬ್ಬ ಕಪ್ಪಗಿನ ಉದ್ದ ಮನುಷ್ಯನೂ, ಒಬ್ಬ ಬೆಳ್ಳಗಿನ ಧೃಷ್ಟಪುಷ್ಟ ಕಾಯದ, ಬೊಬ್ ಕಟ್ ಮಾಡಿದ ಕಲಿಕೂದಲಿನ ಹೆಂಗಸೂ, ಒಬ್ಬ ಚಿಕ್ಕ ಹುಡುಗಿಯೂ ರಂಗಸ್ಥಳವನ್ನು ಪ್ರವೇಶಿಸಿದರು.

'ಇದು ಯಾರು? ಏನು ಮಾಡುವರು?' ಎಂದು ನಾಣಿಯನ್ನು ಕೇಳಿದೆ.

'ಇದೊಂದು ಇಂದ್ರಜಾಲಿಕರ ಪರಿವಾರ. ಅವನು ಪ್ರೊಫೆಸರ್ ರೋ, ಅವಳು ಆತನ ಹೆಂಡತಿ, ಹುಡುಗಿ ಮಗಳು,' ನಾಣಿಯು ವಿವರಿಸಿದನು.

'ಎಂಗ್ಲೋ ಇಂಡಿಯನರೇ?' ನಾನು ಕುತೂಹಲದಿಂದ ಕೇಳಿದೆ.

'ನೀನೆಲ್ಲಿದ್ದಿ? ಅವರ ತಾಜಾ ಯುರೋಪಿಯನರಲ್ಲವೇ?' ನಾಣಿಯೆಂದನು.

'ಹಾಗಾದರೆ ಅವನು ವೇಷಕ್ಕಾಗಿ ಮೈಗೆ ಮಸಿ ಬಳಿದುಕೊಂಡಿರುವನೇ?' ನಾನು ಆಶ್ಚರ್ಯದಿಂದ ಕೇಳಿದೆನು.

'ನೀನು ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಳ್ಳುವಿಯೋ ಇಲ್ಲ? ಎಲ್ಲವೂ ಆಮೇಲೆ ಸ್ಪಷ್ಟವಾಗುವುದು' ಎಂದು ನಾಣಿಯು ನನ್ನ ಬಾಯಿ ಮುಚ್ಚಿದನು.

ಇಷ್ಟರಲ್ಲೇ ಇಂದ್ರಜಾಲಿಕರ ಇಂದ್ರಜಾಲಗಳು ಪ್ರಾರಂಭವಾಗಿದ್ದುವು. ಮೊದಲು ಅವನ ತನ್ನ ಬಲಕೈಯೊಳಗಿನ ಮಂತ್ರದಂಡವನ್ನು ಎಡಕೈಯೊಳಗಿನ ಒಂದಾದ ಹೇಟಿನ ಸುತ್ತಲೂ ಮೂರು ಸಾರಿ ತಿರುಗಿಸಿ ದಂಡವನ್ನು ಅದರೊಳಗೆ ಅದ್ದಿ ಮೇಲೆತ್ತಿದನು. ಆ ದಂಡದ ಕೊನೆಗೆ ತಾಗಿಕೊಂಡು ಒಂದು ಬಣ್ಣಬಣ್ಣದ ಹೂವಿನ ಮಾಲೆಯು ಬಂತು. ಕೊನೆಯಿತ್ತು. ಅವನು ದಂಡವನ್ನು ಅಚೆಗೆ ಒಯ್ದಷ್ಟಕ್ಕೂ ಆ ಮಾಲೆಯು ಉದ್ದಕ್ಕೆ ಹೊರಗೆ ಬರುತ್ತಾ ಇತ್ತು. ಒಡನೆ ಅವನ ಹೆಂಡತಿಯು ಮಾಲೆಯ ಕೊನೆಯನ್ನು ಹಿಡಿದುಕೊಂಡು ಇನ್ನೂ ಆಚೆಗೆ ಒಯ್ದಳು. ಇಂದ್ರಜಾಲಿಕನು ತನ್ನ ಮಂತ್ರದಂಡವನ್ನು ಮಾಲೆಯ ಬುಡಕ್ಕೆ, ಹೇಟಿನೊಳಗೆ, ಒಯ್ದು ತಿರುಗಿ ಹೊರಕ್ಕೆ ತಂದನು. ಮಾಲೆಯು ಉದ್ದ ಉದ್ದವಾಗುತ್ತಾ ಬಂತು. ಅವನ ಹೆಂಡತಿಯು ಮಾಲೆಯನ್ನು ರಂಗಸ್ಥಳದ ಆಚೆಯ ಮೂಲೆಗೆ ಒಯ್ದು ಅಲ್ಲಿ ಮೊದಲೇ ಕಟ್ಟಿದ್ದ ಒಂದು ಸರಿಗೆಯ ಮೇಲೆ ಅದನ್ನು ರಾಶಿರಾಶಿಯಾಗಿ ತೂಗಾಡಿಸುತ್ತಾ ಬಂದಳು. ಐದು ನಿಮಿಷಗಳವರೆಗೆ ಇದೇ ರೀತಿ ಹೇಟಿನೊಳಗಿನಿಂದ ಕೊನೆಯಿಲ್ಲದಷ್ಟು ಉದ್ದದ ಹೂಮಾಲೆ ಹೊರಕ್ಕೆ ಬರುತ್ತಾ ಇದ್ದು, ಕಡೆಗೆ ಕೊನೆಗಂಡಿತು. ಸಭಿಕರೆಲ್ಲರೂ ಆಶ್ಚರ್ಯದಿಂದ ಸ್ತಂಭಿತರಾಗಿ ಎರಡು ನಿಮಿಷಗಳವರೆಗೆ ಕೈಚಪ್ಪಾಳೆ ತಟ್ಟಿದರು.

ಎರಡನೆಯದಾಗಿ ಪ್ರೊಫೆಸರ್ ರೋ ಸಭಿಕರೊಳಗಿನ ಒಬ್ಬನಿಂದ ಒಂದು ಕಿಸೆಗಡಿಯಾರವನ್ನು ತೆಗೆದುಕೊಂಡು ಒಂದು ಕರವಸ್ತ್ರದಲ್ಲಿ ಕಟ್ಟಿ ಅದನ್ನು ದಢಬಡನೆ ಮೇಜಿಗೆ ಬಡಿದು ಚೂರುಚೂರಾಗಿ ಮಾಡಿದನು.

ಅದರ ಯಜಮಾನನು, 'ಇವನಿಗೇನು ಕಿಸಿ ಹಿಡಿದಿದೆಯೋ?' ಎಂದು ಯೋಚಿಸಿ, ಮೋರೆಯನ್ನು ಸಪ್ಪೆಮಾಡಿ, 'ನನ್ನ ಗಡಿಯಾರವನ್ನು ನನಗೆ ಕೊಟ್ಟರಾಯಿತು,' ಎಂದನು.

'ನಿಮ್ಮ ಗಡಿಯಾರ? ಅದು ಯಾರ ಬಳಿಯಿದೆ?' ಎಂದು ಇಂದ್ರಜಾಲಿಕನು ಮೋಜಿನಿಂದ ಕೇಳಿದನು.

'ನೀವು ತೆಗೆದುಕೊಂಡು ಹೀಗೆನ್ನುವಿರಾ?' ಎಂದು ಗಡಿಯಾರದವನು ಸಿಟ್ಟಿಗೆದ್ದು ಕೇಳಿದನು.

'ಹಾಗಾದರೆ ನಿಮ್ಮ ಕಿಸೆಯಲ್ಲಿ ಅದೇನು?' ಎಂದು ಪ್ರೊಫೆಸರ್ ರೋ ಆತನ ಕಿಸೆಯ ಕಡೆಗೆ ತೋರಿಸಿದನು.

ಗಡಿಯಾರದವನು ತನ್ನ ಕಿಸೆಯಲ್ಲಿ ನೋಡಲು, ಆತನ ಗಡಿಯಾರವು ಇದ್ದಂತೆಯೇ ಇತ್ತು. ಎಲ್ಲರೂ ಘೊಳ್ಳೆಂದು ನಕ್ಕು, ಕೈಚಪ್ಪಾಳೆ ತಟ್ಟಿದರು.

ಆಮೇಲೆ ಒಂದು ಘಂಟೆಯ ತನಕ ಪ್ರೊಫೆಸರ್ ರೋ ಮತ್ತು ಅವನ ಸಹಾಯಕಿಯರು ಅನೇಕ ಇಂದ್ರಜಾಲಗಳನ್ನು ಮಾಡಿ ತೋರಿಸಿ ಸಭಿಕರನ್ನು ಆಶ್ಚರ್ಯದಲ್ಲಿ ಮುಳುಗೇಳಿಸಿದರು.

ಪ್ರೊಫೆಸರ್ ರೋ ಸಾಮಾನ್ಯವಾದ ಇಸ್ಪೀಟು ಎಲೆಗಳಿಂದ ಮಾಡಿದ ಇಂದ್ರಜಾಲಗಳೇ ಅಸಂಖ್ಯಾತವಾಗಿದ್ದುವು. ತನ್ನ ಕೈಯೊಳಗಿನ ಇಸ್ಪೀಟು ಪೆಟ್ಟಿಗೆಯೊಳಗಿನ ಎಲೆಗಳೊಳಗೆ ಸಭಿಕರಲ್ಲಿ ಯಾರಾದರೊಬ್ಬನು ಊಹಿಸಿದ ಎಲೆಯನ್ನು ಆತನ ಕಿಸೆಯೊಳಗಿಂದಲೇ ತೆಗೆದುಕೊಡುವುದು, ಸಭಿಕರು ಊಹಿಸಿದ ಎಲೆಗಳನ್ನು ರಂಗಸ್ಥಳದಲ್ಲಿ ಎಲ್ಲಿಸಿದ ಒಂದು ಕಂಬದ ಮೇಲಕ್ಕೆ ಸಂಖ್ಯಾನುಕ್ರಮವಾಗಿ, ಸಾಲುಸಾಲಾಗಿ ಬಿಸುಟು ಅಂಟಿಕೊಳ್ಳುವಂತೆ ಮಾಡುವುದು, ಎಲೆಗಳನ್ನು ಇಡೀ ಸಭೆಯ ಮೇಲಿನಿಂದ ಒಂದು ಕೊನೆಯಿಂದ ಒಂದು ಕೊನೆಗೆ ಶಕ್ತಿಯಿಂದ ಹಾರಿಸುವುದು, ನಾಲ್ಕು ಎಲೆಗಳನ್ನು ಕೈಯಲ್ಲಿ ಹಿಡಿದು ಪ್ರದರ್ಶಿಸಿ, ಅವುಗಳ ಮೇಲಿನ ಚಿತ್ರಗಳನ್ನು ಇದ್ದಕ್ಕಿದ್ದಂತೆಯೇ ಬದಲಾಯಿಸುವುದು—ಇವೇ ಮೊದಲಾದ ವೃತ್ತಗಳಲ್ಲಿ ಬರೇ ಕೆಲವು.

ಇದರ ಮೇಲೆ ಪ್ರೊಫೆಸರ್ ರೋ ಸಭಿಕರ ಕೈಯಿಂದ ಅವರ ಟೊಪ್ಪಿ ಕರವಸ್ತ್ರ ಕೊಡೆ ಮುಂತಾದವನ್ನು ಇಸಕೊಂಡು ಅವುಗಳನ್ನು ಕೊಡಹಿ ಅವುಗಳಿಂದ ರೂಪಾಯಿಗಳನ್ನು ರಾಶಿರಾಶಿಯಾಗಿ ಸುರಿದು ತೋರಿಸಿದನು.

ಕೊನೆಯದಾಗಿ ಅವನು ತನ್ನ ಮಗಳನ್ನು ನೇರವಾಗಿ ನಿಲ್ಲಿಸಿ ತನ್ನ ಮಂತ್ರದಂಡದಿಂದ ಮಂತ್ರಿಸಿ ಮಾಯಾನಿದ್ರೆಯನ್ನು ಹೊಂದುವಂತೆ ಮಾಡಿ ಅವಳ ಮರಕಟ್ಟಿದ ದೇಹವನ್ನು ಎತ್ತಿ ಗೋಡೆಯ ಬಳಿಯ ಒಂದು ಉದ್ದವಾದ ಮೇಜಿನ ಮೇಲೆ ಮಲಗಿಸಿ ತನ್ನ ದಂಡವನ್ನು ಬೀಸುತ್ತಾ ಆ ದೇಹವನ್ನು ಮಲಗಿದ ಸ್ಥಿತಿಯಲ್ಲೇ ಮೇಜು ಬಿಟ್ಟು ಮೆಲ್ಲಮೆಲ್ಲನೆ ಮೇಲಕ್ಕೇರಿ ನಾಲ್ಕೈದು ಅಡಿಗಳ ಎತ್ತರಕ್ಕೆ ತೇಲಿಕೊಂಡು ಹೋಗುವಂತೆ ಮಾಡಿದನು. ಇದನ್ನು ನೋಡುತ್ತಲೇ ಸಭಿಕರೆಲ್ಲರೂ ಬೆರಗುಬಡಿದ ಅವಾಕ್ಕಾಗಿ ಹೋದರು.

ಒಡನೆ ಸ್ವಲ್ಪ ಸಮಯದಲ್ಲೇ ತಿರುಗಿ ಸಿನೆಮಾ ಪ್ರದರ್ಶನವು ಮುಂದುವರಿಯಿತು.

'ಇದೇ ಯೋ ನೀನ ಮಹತ್ವದ ಪ್ರೋಗ್ರಾಮ್ ಎಂದುದು? ಇದನ್ನೂ, ಇದಕ್ಕಿಂತ ಹೆಚ್ಚಿನದನ್ನೂ ನಾನು ಮೊದಲೊಮ್ಮೆ ಇದೇ ಊರಲ್ಲೇ, ಪ್ರೊಫೆಸರ್ ಎಲ್. ಕೆ. ಶಹಾರವರು ಮಾಡಿದುದನ್ನು ನೋಡಿದ್ದೇನೆ. ಇದಕ್ಕಾಗಿಯೇ ನನಗೆ ಇಷ್ಟು ರಗಳೆಗೆ ಈಡು ಮಾಡಿದೆ?'' ನಾನು ನಾಣಿಯನ್ನು ದೂರಿದೆನು.

''ನಿನ್ನ ಬಾಯಲ್ಲಿ ನಾನು ಸತ್ತೆ, ಮಹಾರಾಯ! ನೀನು ಆರೇಳು ತಿಂಗಳಲ್ಲಿ ಹುಟ್ಟಿದ್ದೆಯಾ? ಇನ್ನೆರಡು ರೀಲು ಮುಗಿಯಲಿ ಮತ್ತೆ ನೋಡು'' ನಾಣಿಯು ಸಮಾಧಾನ ಹೇಳಿದನು.

ನಾನು ಉಪಾಯ ಕಾಣದೆ ತಾಳಿಕೊಂಡಿರಬೇಕಾಯಿತು.

೩

ಎರಡು ಸಾರಿ ಬೆಳಕಾಗುತ್ತಲೇ ರಂಗಸ್ಥಳದಲ್ಲಿ ಒಂದು ಕಡೆ ಹಾರ್ಮೋನಿಯಂ ಮತ್ತು ತಬಲೆಗಳು ಇಡಲ್ಪಟ್ಟಿದ್ದುದು ಕಂಡು ಬಂತು. ಮರುಕ್ಷಣದಲ್ಲೇ ಅವುಗಳನ್ನು ಬಾರಿಸುವವರಿಬ್ಬರು ಮುಸಲ್ಮಾನರು ಬಂದು ತಮ್ಮ ಕೆಲಸವನ್ನು ಪ್ರಾರಂಭಿಸಿದರು. ಹಾರ್ಮೋನಿಯಮಿನಲ್ಲಿ ನಾಟ್ಯದ ಹಾಡು ಕೇಳಿ ಬಂತು. ಇನ್ನೊಂದು ಕ್ಷಣದಲ್ಲೇ ಬದಿಯ ತೆರೆಯ ಹಿಂದಿನಿಂದ ಅದೇ ಹಾಡು ಸುಮಧುರವಾದ ಸ್ವರದಲ್ಲಿ ಕೇಳಿ ಬಂದು, ಅದನ್ನು ಹಾಡುತ್ತಿದ್ದ ವ್ಯಕ್ತಿಯು ವೈಯ್ಯಾರದಿಂದ ತೆರೆಯೆತ್ತಿ ರಂಗಸ್ಥಳವನ್ನು ಪ್ರವೇಶಿಸಿತು.

ವ್ಯಕ್ತಿಯು ಬೇರೆ ಯಾರೂ ಆಗಿರದೆ ಇಂದ್ರಜಾಲಿಕನ ಹೆಂಡತಿಯೇ ಆಗಿದ್ದಳೆಂದು ಮೈಕಟ್ಟಿನಿಂದಲೂ, ಮುಖದಿಂದಲೂ ವ್ಯಕ್ತವಾಯಿತು. ಅವಳು ಒಂದು ಬಣ್ಣಬಣ್ಣದ ಹೂಗಳ ಚಿತ್ರವಿದ್ದ ತೆಳ್ಳಗಿನ ಜವನಿಕೆಯನ್ನು ತಲೆಯಿಂದ ಕಾಲಿನವರೆಗೆ ಅರೆಮೈಯನ್ನು ಮುಚ್ಚುವಂತೆ ತೂಗಾಡಿಸಿಕೊಂಡಿದ್ದಳು. ಹಾಡಿನ ಒಂದೊಂದು ಸೊಲ್ಲನ್ನು ಮಂದಹಾಸದೊಡನೆ ಹಾಡುತ್ತಾ, ಮುಖವನ್ನು ಮೋಡಿಯಿಂದ ಅಲುಗಾಡಿಸುತ್ತಾ, ಕಣ್ಣುಗಳನ್ನು ಅದಕ್ಕೆ ಸರಿಯಾಗಿ ಮಿಡುಕಿಸುತ್ತಾ, ಕಾಲಿನ ಗೆಜ್ಜೆಗಳನ್ನು ಹಾರಿಸುತ್ತಾ ರಂಗಸ್ಥಳದ ಒಂದು ಕೊನೆಯಿಂದ ಒಂದು ಕೊನೆಗೆ ಸರಿದಾಡಿದಳು. ಆಗಿಂದಾಗ ಕೈಗಳನ್ನು ಎತ್ತಿ ಅಭಿನಯ ಮಾಡುವಾಗ ಮೈಮೇಲೆ ತೂಗಾಡಿಸಿಕೊಂಡಿದ್ದ ಜವನಿಕೆಯನ್ನೂ ಕ್ಷಣಾರ್ಧಕ್ಕೆ ಪೂರ್ತಿಯಾಗಿ ಎತ್ತುತ್ತಿರಲು ಅವಳ ಲಂಗಮಾತ್ರ ಧರಿಸಿದ ದೇಹದ ದಿಗ್ದರ್ಶನವು ಮಿಂಚಿನಂತೆ ಸಭಿಕರೆಲ್ಲರಿಗೂ ದೊರೆತು ಇಹವನ್ನೇ ಮರೆಯುವಂತೆ ಮಾಡುತ್ತಿತ್ತು. ನಡುನಡುವೆ ಒಂದು ಸೊಲ್ಲನ್ನು ಹಾಡಿ ಮುಗಿಸಿದೊಡನೆಯೇ, ಅವಳು ಎರಡೂ ಕೈಗಳನ್ನು ಚಾಚಿ ಹಿಡಿದ, ಒಂದೆರಡು ಸುತ್ತು ಗರಗರನೆ ನಿಂತಲ್ಲೇ ತಿರುಗುತ್ತಿದ್ದಳು. ಆಗಂತೂ ಸಭಿಕರೊಳಗಿನ ಚೀರಾಟ, ಕೈಚಪ್ಪಾಳೆಗಳಿಗೆ ಮಿತಿಯೇ ಇರದಂತಾಯಿತು. ಒಂದರ್ಧ ಘಂಟೆಯವರೆಗೆ ಹೀಗೆ ಕಳೆದು, ಕಡೆಗೆ ಸಭಿಕರಿಗೆ ತನ್ನ ವಂದನೆಗಳನ್ನು ಕೈಸನ್ನೆಯಿಂದ ತೆಗೆದು ಚೆಲ್ಲುತ್ತಾ ತೆರೆಯ ಮರೆಗೆ ಸರಿದಳು.

''ಅವಳ ಪ್ರೊಫೆಸರನ ಹೆಂಡತಿಯೇ ಯೋ ಅಥವಾ ?''—ಅವಳ ಮಾನಗೇಡಿತನಕ್ಕಾಗಿ ನನಗುಂಟಾದ ಜುಗುಪ್ಸೆಯೊಡನೆ ನಾನು ನಾಣಿಯನ್ನು ಕೇಳಿದೆನು.

'ಛೆ, ಎನೇನು ಅಲ್ಲಸಲ್ಲದುದನ್ನು ಎನ್ನುವಿ? ಅವಳ ಮಾವ ಪ್ರೊಫೆಸರನ ಪಟ್ಟದ ರಾಣಿ. ಧರ್ಮಪೂರ್ವಕವಾಗಿಯೇ ವರಿಸಿದ ಧರ್ಮಪತ್ನಿ, ಅವಳ ಕೊರಳಿಗೆ ಮಂಗಲಸೂತ್ರ ಕೂಡ ಇರುವುದು, ಅಥವಾ ಇರಬೇಕಾಗಿರುವುದು. ಇಲ್ಲವೆ ದಾದರೆ, ಪಾಪ, ಅವರ ಆ ಕಷ್ಟಕಾಲದಲ್ಲಿ ಈ ಕಲಾ ವೃತ್ತಿಯನ್ನು ಕೈಕೊಳ್ಳಲು ಅಷ್ಟು ಬಾಕಿಯಿದ್ದ ಸಮಯದಲ್ಲಿ, ಆದ ಕೆಲವು ದಿನಗಳ ಅನ್ನಾಹಾರಗಳನ್ನು ಒದಗಿಸಿಕೊಡಲು ನೆರವಾಯಿತೋ ಏನೋ' ನಾಣಿಯು ಗಂಭೀರವಾಗಿ ಎಂದನು.

ನಾಣಿಯ ಒಗಟು ನನಗೆ ಬಿಚ್ಚಲಸದಳವಾಯಿತು.

''ನೀನು ಇನ್ನೂ ಒಗಟನ್ನೊಮ್ಮೆ ಬಿಚ್ಚಿ ಹೇಳಲಾರೆಯಾ? ನನ್ನ ತಿಳುವಳಿಕೆಗೆ ಅದು ಉಕ್ಕಿನ ಕಡಲೆಯೇ ಆಗಿರುವುದು. ಆಗ ಎಂದರೆ ಅವರ ಯುರೋಪಿಯನರೆಂದು ಈಗ ಎನ್ನುವಿ. ಅವಳಿಗೆ ಮಂಗಲಸೂತ್ರ ಇರಬೇಕೆಂದು. ಯುರೋಪಿಯನರು ಮಂಗಲಸೂತ್ರವನ್ನು ಧರಿಸುತ್ತಿರುವುದೂ, ಅವರಲ್ಲಿ ಕಪ್ಪು ಮನುಷ್ಯರಿರುವುದೂ ನನ್ನ ತಿಳುವಳಿಕೆಗೆ ಮೀರಿದುದಾಗಿರುವುದು!'' ನಾನು ಹತಾಶನಾಗಿ ಕೇಳಿದೆ.

''ಪಾಪ, ರಾಮಾಚಾರ್ಯರು ಈ ದಿನದ ಈ ಪ್ರದರ್ಶನ ನೋಡಲು ಬದುಕಿರಬೇಕಿತ್ತು. ಅವರು ಬದುಕಿದ್ದಾಗ, ನಮ್ಮ ಹಿಂದೂಮತವು ಇನ್ನು ಕ್ರಮೇಣ ಇಡೀ ಪ್ರಪಂಚಕ್ಕೆ ವ್ಯಾಪಿಸುವುದೆಂದೂ, ಯುರೋಪಿಯನ್ ಸ್ತ್ರೀಯರೂ ಕೂಡ ಮಂಗಲಸೂತ್ರ ಧರಿಸುವಂತಾಗುವುದೆಂದೂ ಹೇಳುತ್ತಿದ್ದರು. ಆದರೆ ಈಗ ಮಾತ್ರ ಅವರ ಹೇಳಿಕೆಗೆ ಸರಿಯಾಗಿ ವಿರುದ್ಧವಾದುದೇ ಸಂಭವಿಸಿರುವುದು. ಹಿಂದೂ ಸ್ತ್ರೀಯೇ ಅದರಲ್ಲಿಯೂ ಬ್ರಾಹ್ಮಣ ಸ್ತ್ರೀಯೇ, ಅದೂ ಅವರ

(ಆಕೇ ಘಟಬನ್ನು ನೋಡುವುದು)

ಮಲಯಾಳ ವನಸ್ಪತಿ ಔಷಧಿಗಳು.

ಮಲಬಾರಿನ ಕಾಡುಗಳಲ್ಲಿ ಅಪರೂಪವಾಗಿ ಸಿಗುವ ಬೇರುಗಳಿಂದ ತಯಾರಿಯಾದುದು.

ಕ್ಷಯ ಸಂಹಾರಿ
KSHAYA SAMHARI

ಈ ಔಷಧಿಯನ್ನು 48 ದಿನಗಳ ವರೆಗೆ ಬಿಡದೆ ಉಪಯೋಗಿಸಿದರೆ ಪರಿಣಾಮಕಾರಿ ಗುಣ ಸಿಗುವುದು.

ಕೆಳಗಣ ರೋಗಚಿಹ್ನೆಗಳಿರುವ ಎಲ್ಲರೂ ಕ್ಷಯಸಂಹಾರಿಯನ್ನು ಉಪಯೋಗಿಸಬೇಕು:—

ಸಂಜೆ ಚಳಿ, ಸಾಧಾರಣ ಜ್ವರ, ಆಗಾಗ್ಗೆ ಕೆಮ್ಮು, ಒಣಗಿದ ಕಂಠನಾಳ, ಬಿಳುಪಾದ, ಗುಂಡಿಗಿಳಿದ ನೀರು ತುಂಬಿದ ಕಣ್ಣು, ಇಳಿದ ಮುಖ, ಮುಖದಲ್ಲಿ ಕೆಂಪು, ರಕ್ತ ಉಗುಳುವುದು, ಸ್ವಪ್ನೇಂದ್ರಿಯ, ಹಸಿವಿಲ್ಲದಿರುವಿಕೆ, ಮಲಮೂತ್ರ ವಿಸರ್ಜನೆಯಲ್ಲಿ ಕಷ್ಟ, ಕಲಿಸಿಡಿತ, ಉಸಿರು ಕಟ್ಟುವಿಕೆ ದಿನೇ ದಿನೇ ಕೃಶವಾಗುವುದು, ಶಕ್ತಿ ಭಾರವು ಕಡಿಮೆಯಾಗುವುದು.

ಅನುಪಾನದಂತೆ ಕ್ಷಯಸಂಹಾರಿಯನ್ನುಪಯೋಗಿಸಿದ್ದಲ್ಲಿ ಕೆಮ್ಮು ಒಡನೆ ನಿಲ್ಲುತ್ತದೆ ಪೂರ್ಣ ಗುಣಲಾಭ ಸಿಗುತ್ತದೆ

ಈ ರೋಗಬಾಧಿತರಿಗೊಂದು ಮಹಾ ವರದಾನ

ಕ್ರಯ ಬಾಟ್ಲಿಗೆ ರೂ. 4-8-0 1/6ರಷ್ಟು ಅಂಚೆಚೀಟು ಹೆಚ್ಚು.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟು ಚಾಲಪುರಂ, ಮಲಬಾರು

ನಮ್ಮಲ್ಲಿ ಸಂತಾನಪ್ರತಿಬಂಧಕಕ್ಕೆ, ದೇಹವರ್ಧನೆಗೆ ಔಷಧಿಗಳೂ ವಾತಕ್ಕೆ ಕ್ಷೀರಬಲವೂ ಮುಟ್ಟಾಗುವಾಗ ನೋವಾಗುವುದಕ್ಕೆ ಗುಹ್ಯ ರೋಗಗಳಿಗೆ ಇಳಿದುಹೋದ ವಕ್ಷಸ್ಥಳವು ಉರುಟಾಗಿರುವಂತೆ ಮದ್ದುಗಳೂ ಇವೆ

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟ್ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-

The Scientific Gold Bangles Co., Ltd

Head Office:-43, Byragimatam Street,

Post Box No 203, Madras

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 6	3— 13
ಹೊಸ ಮುಕ್ತಿ	3—10	4— 2
ಗುಡ್ಡೆ ಸುಗ್ಗಿ	3— 8	3—14
ಊರ ಅವ್ವಲ್ ಬೆಳ್ತಿಗೆ	4— 0	4— 8
ರಂಗೂನು ಬೆ. ಗೋ. ಗಳ್ಳೆ	6— 4	7— 0
ಎಲ್ಲೂರು ಬೆ. ಮು. ಗಳ್ಳೆ	4— 4	4— 8
ಗೋಧಿ ಗೋಣಿ ಗಳ್ಳೆ	8 — 8	10— 4
ಕೊಗರಿ ಗೋಣಿ ಗಳ್ಳೆ	9 —	9 — 8
ಹುರುಳಿ ಗೋಣಿ ಗಳ್ಳೆ	5 — 4	5 12
ಕಡಲೆ ಗೋಣಿ ಗಳ್ಳೆ	7 — 4	9 — 8
ತೊಗರಿಬೇಳೆ ಗೋಣಿ ಗಳ್ಳೆ	11— 0	15— 8
ಉದ್ದು ಗೋಣಿ ಗಳ್ಳೆ	9— 8	10 — 0
ಹೆಸರು ಗೋಣಿ ಗಳ್ಳೆ	9— 4	9—12
ಊರುಬೆಲ್ಲ ಕಂಡಿ ಗಳ್ಳೆ	32— 0	40— 8
ಉಪ್ಪು ಗೋಣಿ ಗಳ್ಳೆ	4— 6	4— 8
ಕೊಬ್ರಿ ಕಂಡಿ ಗಳ್ಳೆ	60— 0	70— 0
ಕೊಬ್ರಿ ಹಿಂಡಿ ಕಂಡಿ ಗಳ್ಳೆ	28— 0	29— 0
ಎಳ್ಳೆಂಡಿ ಕಂಡಿ ಗಳ್ಳೆ	33 —12	35— 0
ಕೊಬ್ರಿ ಎಣ್ಣೆ ಮುಡಿ ಗಳ್ಳೆ	5— 0	6— 0
ಎಳ್ಳೆಣ್ಣೆ ಮುಡಿ ಗಳ್ಳೆ	7— 0	7— 0
ಚಿಮಿಣೆಣ್ಣೆ ಪೆಟ್ಟಿಗೆ ಗಳ್ಳೆ	6— 5	6— 5
ಮೋರಿಸ ಸಕ್ಕರೆ ಮು. ಗಳ್ಳೆ	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ಗಳ್ಳೆ	5 — 8	6— 0
ಕಾಳುಮೆಣಸು ಕಂ. ಗಳ್ಳೆ	102— 8	105—
ಯೇಲಕ್ಕಿ ಬೀಜ ಮುಡಿ ಗಳ್ಳೆ	38— 0	39— 0
ಗೇರುಬೀಜ ಮು. ಗಳ್ಳೆ	4— 6	4 — 8
ಕಬ್ಬಿಣ ಕಂಡಿ ಗಳ್ಳೆ	35— 0	37— 8
ತಾಂಬ್ರತಗಡು ಮ. ಗಳ್ಳೆ	9— 12	9— 14
ತಾಂಬ್ರಪಾತ್ರಗಳು ಮ. ಗಳ್ಳೆ	12— 8	14— 0
ಬೇಟೆಬೆಳ್ಳಿ ಸೇರು ಗಳ್ಳೆ	17— 8	18— 0
ಹಿತ್ತಾಳೆ ತಗಡು ಮ. ಗಳ್ಳೆ	10— 0	10—
ಹವನು ಗಳ್ಳೆ	22— 8	22— 8
ಹುಣಸೆ ಹುಳಿ ಕಂಡಿ ಗಳ್ಳೆ	20— 0	25— 8
ನೇಟಿವ್ ಕಾಫಿ ಕಂಡಿ ಗಳ್ಳೆ	145— 0	150— 0
ಪ್ಲಾಂಟೇಶನ್ ಕಾಫಿ ಕಂಡಿ ಗಳ್ಳೆ	185— 0	190— 8
ಮಡಿಕೇರಿ ಏಲಕ್ಕಿ	25 - 0	26 — 0

Shiromani Narayanacharya & Co.,

Silk Lace & Cloth Manufacturers

Choukhamba Benares City

ಕೃಷ್ಣರಾಯರು—ಸ್ವಾಮಿ ಆನಂದರಾಯರೆ ತಾವು ತಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ.

ಕೃಷ್ಣರಾಯರು:— ಅದರ ಕ್ರಯವೆಷ್ಟು?"

ಆನಂದರಾಯರು—ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಒಂದಿಷ್ಟು ಜರಿ, ರಂಗು ಬೆಲೆಯದ ಸೀರೆಗಳು ಸಿಗುತ್ತವೆ 18 ಮೊಳ ಉದ್ದ 2½ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ. ಜರಿಯ ಬುಟ್ಟಿ ಇರುವುದು 18 ಮೊಳ ಸೀರೆ 1ಕ್ಕೆ ರೂ. 45ರಿಂದ 150ರ ವರೆಗೆ. 16 ಮೊಳ ಜರಿಯ ಸಾದ ಸೀರೆ 1ಕ್ಕೆ ರೂ. 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ. 3ರಿಂದ 10ರ ವರೆಗೆ. 8 ಮೊಳದ ಸರಮುಡಿ 1ಕ್ಕೆ ರೂ 7ರಿಂದ 15ರ ವರೆಗೆ 8 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ 5 ಮೊಳದ ಪಟಾರಿ 1ಕ್ಕೆ ರೂ. 4ರಿಂದ 16ರ ವರೆಗೆ 6 ಮೊಳದ ಪಟಾರಿ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲಾ ತರದ ಮಸ್ಲುಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

ನವೀನವಾದ ಸ್ವಸ್ತಿಕಾ ಸಾಮಾನುಗಳು.



NEEM SOAP

ಸ್ವಸ್ತಿಕ ಸಾಬೂನಿನಲ್ಲಿ ನೀಮ್ (ಬೇವಿನ) ನ ದಲ್ಲಿರುವ ಕ್ರಿಮಿನಾಶಕ ಗುಣಗಳು ಪೂರ್ಣಾಯಿವೆ ಇದು ಟಾಯ್ಲೆಟ್ (ಅಂಗಶೃಂಗಾರ) ಸಾಬೂನುಗಳಲ್ಲಿ ಅತೀ ಉತ್ತಮವಾದುದು ಇದರ ನಿತ್ಯ ಉಪಯೋಗವು ಚರ್ಮರೋಗಗಳು ಬಾರದಂತೆ ತಡೆಯುವುದು ಗಾಯಗಳು ಸುಟ್ಟಗಾಯ ಗಳ ಬೇಗನೆ ವಾಸಿಯಾಗುವುದು—ಅದರ ಸುಗಮವಾದ ನೊರೆಯು ಆನಂದವನ್ನುಂಟುಮಾಡುವುದು ಸ್ವಸ್ತಿಕಾ ನೀಮ್ ಸಾಬೂನನ್ನು ಸ್ವಲ್ಪ ದಿನ ಉಪಯೋಗಿಸಿದೆಂದರೆ ಇದೆಲ್ಲಾ ಸ್ವತಃ ಮನಸವಾಗ ವುದು.

ಸ್ವಸ್ತಿಕಾ ಒಯಿಲ್ ಮಿಲ್ಸ್, ಲಿಮಿಟೆಡ್, ವಡಾಲ ಮುಂಬಾಯ್ 15

೧೦೦ ರೂಪಾಯಿ ಬಹುಮಾನ
(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಕಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ ವ್ಯವಹಾರದಲ್ಲಿ ಜಯ, ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ, ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಶ್ರಮವಿಲ್ಲ, ಇನ್ನೊಬ್ಬರಿಗೆ ಹಾಜರರಾಗಬೇಕಾದ ಅವಶ್ಯಕತೆಯಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ, ಬೆಲೆ ರೂ ೩ ಮಾತ್ರ.

೧೩ ೨ ೩ Bengal Mesmarism House
5-7 Panchpota, Bengal (ಬ. ಬ)

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಮಾಘ ಬ. ೮ ಶನಿವಾರದಿಂದ ಮಾಘ ಬ. ೧೪ ಶುಕ್ರವಾರದ ವರೆಗಿನ ಪಂಚಾಂಗ (೧೧ನೇಯ ಕುಂಭ ಮಾಸ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
15	ಶನಿ	೮	೩೦	ವಿಶಾಖ	೬೦	೧	*ಮಹಾಶಿವರಾತ್ರಿ
16	ರವಿ	೮	೧	ಅನೂರಾಧಾ	೩೫	೨	
17	ಸೋಮ	೯	೨	ಜ್ಯೇಷ್ಠ	೩೬	೩	
18	ಕುಜ	೧೦	೨	ಮೂಲ	೩೮	೬	
19	ಬುಧ	೧೧	೫೬	ಪೂ ಷಾಢ	೩೮	೭	
20	*ಗುರು	೧೩	೫೫	ಉ ಷಾಢ	೩೬	೮	
21	ಶುಕ್ರ	೧೪	೫೧	ಶ್ರವಣ	೩೪	೯	

ಜರ್ಮನಿಯ ನಾಜಿಗಳು.

ಕಳೆದಮಹಾ ಯುದ್ಧವು, ವರ್ಸಲೆಯಲ್ಲಿ ನಡೆದ ಒಪ್ಪಂದದಿಂದಾಗಿ ಮುಕ್ತಾಯವಾಯಿತು. ಈ ಒಪ್ಪಂದದಿಂದ ಜರ್ಮನಿಯ ಕೈ ಕಾಲಿನ ಕಾಲುಗಳನ್ನು ಕಡಿದಂತಾಯಿತು-ಯುದ್ಧದಿಂದ ಉಂಟಾದ, ವೈರಿ ಜನಾಂಗಗಳ ವ್ಯಯವು ಜರ್ಮನಿಯು ಹೋರಬೇಕಾಯಿತು ಜರ್ಮನಿಯ ಮೇಲೆ ಅನೇಕ ನಿರ್ಬಂಧಗಳು ಹಾಕಲ್ಪಟ್ಟವು. ಜರ್ಮನಿಯ ಸ್ಥಿತಿಯು ಬಹಳ ಶೀಘ್ರವಾಗಿ ಪರಿಣಮಿಸಿತು ಜರ್ಮನಿಯ ಶಸ್ತ್ರಧಾರಿಗಳಾಗದ ಹಾಗೆ, ಇತರ ಜನಾಂಗಗಳು ನೋಡಿಕೊಂಡವು ಜರ್ಮನಿಯು ಆಗಿಂದಾಗ್ಗೆ ಪ್ರತಿಕೂಲಿಸಿದರೂ, ಅವರ ಪ್ರಯತ್ನಗಳ ನಿಷ್ಫಲವಾದುವು. ಜರ್ಮನಿಯು ಈ ಸ್ಥಿತಿಯಲ್ಲಿ ಕಳೆದ ಪ್ರಪಂಚದ ಸಾಂಪತ್ತಿಕ ಮುಗ್ಗಟ್ಟಿನ ವರೆಗೆ ಇರಬೇಕಾಯಿತು ಜರ್ಮನಿಯಲ್ಲಿ ಇತರ ಜನಾಂಗಗಳೊಡನೆ ತಮಗೆ ಸರಿಸಮಾನತೆಯನ್ನು ಪಡೆಯಲು ಚಳವಳಿ ಪ್ರಾರಂಭವಾಯಿತು. ವಾರ್ಸಲೆ ಒಪ್ಪಂದವೆಂಬ ಶೃಂಖಲೆಯನ್ನು ಮುರಿಯಲು ಪ್ರಯತ್ನಗಳಾದವು ಅದನ್ನು ಮುರಿದೂಬಿಟ್ಟಿತು ಜರ್ಮನಿ ರಾಷ್ಟ್ರದ ಅಭ್ಯುದಯವನ್ನು ಸಾಧಿಸುವ ನಾಜಿಗಳು ಜಯಶೀಲರಾದರು ಜೀವ್ಸರು ಹೊರಗಟ್ಟಲ್ಪಟ್ಟರು ನಾಜಿಯರಿಂದ ನವಜರ್ಮನಿಯು ಜನಿಸಿತು

ಜರ್ಮನ್ ಅಲ್ಪಸಂಖ್ಯಾಕರು

ಆಸ್ಟ್ರಿಯಾ, ಜೆಕೊಸ್ಲೊವೆಕಿಯಾ, ಪೋಲೆಂಡ, ಮತ್ತು ಲಿಥುನಿಯಾ, ಇವುಗಳು ಜರ್ಮನಿಯ ಅಲ್ಪಸಂಖ್ಯಾಕರಿರುವ ಕೆಲವು ಜರ್ಮನಿಯ ಗಡಿಗಳಲ್ಲಿರುವ ಪ್ರದೇಶಗಳು ಇವುಗಳ ರಾಜಕೀಯ ಧೋರಣೆಗಳಲ್ಲಿ ನಾಜಿಯರ ಕೈಹಾಕದ ಹಾಗೆ, ರಷ್ಯಾ, ಫ್ರಾನ್ಸ, ಇಟಲಿ ಈ ಮೂರ ಜನಾಂಗಗಳು ಜಾಗರೂಕರಾಗಿರುತ್ತಾರೆ ತಾನು ಅವುಗಳಲ್ಲಿ ಕೈಹಾಕುವುದಿಲ್ಲವೆಂದು ಹಿಟ್ಲರನ ವಚನವಿದ್ದರೂ-ಆತನು ಸುಮ್ಮನಿರುವನೆಂದು ಯಾರಿಗೂ ಭರವಸೆಯಿಲ್ಲ ಆಸ್ಟ್ರಿಯವು ಇಟಲಿಗೂ ಜರ್ಮನಿಗೂ ಮಧ್ಯವಿರುವ ದೇಶ ಈ ದೇಶವು ಜರ್ಮನಿಗೆ ಸೇರದಂತೆ, ಯುದ್ಧ ಮಾಡಲೂ ಇಟಲಿಯು ಸಿದ್ಧವಿದೆ ಅಂತೆಯೆ ಫ್ರಾನ್ಸು ರಷ್ಯಾವು ಪೋಲೆಂಡು ಮತ್ತು ಲಿಥೂನಿಯಾ ಮೇಲೆ ಅಭಿರುಚಿವುಳ್ಳದಾಗಿದೆ ಫ್ರಾನ್ಸು ಜೆಕೊಸ್ಲೊವೆಕಿಯಾ ಮೇಲೆ ಕಣ್ಣಿಟ್ಟಿರುತ್ತದೆ ಜರ್ಮನಿಯು ತನ್ನ ಅಭ್ಯುದಯಕ್ಕಾಗಿ ಈ ದೇಶಗಳನ್ನು ಸೇರ್ಪಡಿಸಿಕೊಳ್ಳದೆ ಇರದು ಈ ದೇಶಗಳು ಅವರಿಗೆ ಸೇರಿದರೆ, ಜರ್ಮನಿಯ ಬಲವು ಹೆಚ್ಚಿದಂತಾಗುವುದು ಅವರು ವೈರಿ ಜನಾಂಗಗಳಾದ ರಷ್ಯ, ಫ್ರಾನ್ಸು ದೇಶದ ಗಡಿಗಳ ಹತ್ತಿರವಾಗುವರು ಇದರಿಂದ, ಕಳೆದ ಮಹಾಯುದ್ಧದ ಸೋತನ್ನು ಅವರ ಮೇಲೆ ತೀರಿಸಲು ಅವರಿಗೆ ಸುಲಭವಾಗುವುದು ಈ ಕಾರಣದಿಂದ ಮೇಲಿನ ಮೂರು ರಾಷ್ಟ್ರಗಳು ತೊಂದರೆಯ ರಂಗಗಳಾಗಿವೆ

ಜರ್ಮನಿಯನ್ನು ತಡೆಯಲು ಮೇಲಿನ ರಾಷ್ಟ್ರಗಳು ಯುದ್ಧ ಸನ್ನಾಹಿತರಾಗಿರುತ್ತಾರೆ ಜರ್ಮನಿಯೂ ತಕ್ಕ ಸಿದ್ಧತೆಗಳನ್ನು ಮಾಡಿಯಿಟ್ಟಿರಿಸಿದೆ. ಈ ರಾಷ್ಟ್ರಗಳೊಡನೆ ಸಹಕರಿಸಲು ರಷ್ಯಾ, ಫ್ರಾನ್ಸು ದೇಶಗಳು ತಕ್ಕ ಸಿದ್ಧತೆಗಳನ್ನು ಮಾಡಿವೆ.

ಮೆಮಲ್ ಮತ್ತು ವಿಲ್ನಾ

ಈ ಕಾರಣಗಳಿಂದಲೆ, ಲಿಥೂನಿಯಾದ ಮೆಮಲ್, ಪೋಲೆಂಡಿನ ವಿಲ್ನಾದಲ್ಲಿಯೂ, ಬಹಳ ತೊಂದರೆಗಳು ಉಂಟಾಗಿರುತ್ತವೆ. ಮೇಮಲ್ ಜರ್ಮನಿಯ ಬಾಲ್ಟಿಕ್ ಸಮುದ್ರದ ಒಂದು ಬಂದರವಾಗಿತ್ತು ವಾರ್ಸಲೆ ಒಪ್ಪಂದದಿಂದಾಗಿ, ಇದು ಗೆದ್ದ ಜನಾಂಗಗಳಿಗೆ ಸೇರಿತು. ಕ್ರಮೇಣ ಇದು ಲಿಥೂನಿಯಾವು ವಶೀಕರಿಸಿತು. ಇದೆ ರೀತಿಯಲ್ಲಿ ಲಿಥೂನಿಯಾವು ವಿಲ್ನಾವನ್ನು ಹಿಡಿದಿತ್ತು. ಆದರೆ ಅದೂ ಈಗ ಪೋಲೆಂಡು ಹಿಡಿದಿರುತ್ತದೆ. ವಿಲ್ನಾವನ್ನು ಪೋಲೆಂಡು ಹಿಡಿಯುವಾಗಲೂ, ಮೆಮಲನ್ನು ಲಿಥೂನಿಯಾವು ವಶೀಕರಿಸುವಾಗಲೂ, ಕಳೆದ ಮಹಾಯುದ್ಧದ ಪಕ್ಷ ಜನಾಂಗಗಳಾದ ಆಂಗ್ಲೇಯ, ಫ್ರೆಂಚ ಮೊದಲಾದವರು ಮೌನವಾಗಿ ಕುಳಿತರು. ಇದರಿಂದ ಪೋಲೆಂಡು, ಮೆಮಲನ್ನು ಲಿಥೂನಿಯಾದಿಂದ ಹಿಡಿಯಲು ಪ್ರಯತ್ನಪಟ್ಟಿತು. ಆದರೆ, ಮೆಮಲಿನಲ್ಲಿ

ಪ್ರಪಂಚದ ಶಾಂತಿಭಂಗಕ್ಕೆ ಕೆಲವು ಕಾರಣಗಳು

ಸ್ವಯಂ ಪ್ರಭುತ್ವದ ರಾಜ್ಯವು ಸ್ಥಾಪಿಸಲಾಯಿತು ಈ ಸ್ವಯಂ ಪ್ರಭುತ್ವದ ರಾಜ್ಯಕ್ಕೆ ಬ್ರಿಟನು, ಫ್ರಾನ್ಸು, ಇಟಲಿ ಮತ್ತು ಜಾಪಾನು ಒಂದು ಕರಾರಿನಿಂದ ಹೊಣೆಗಾರರಾದರು ಹಾಗೆಯೆ ೩ ಶತಮಾನಗಳ ತನಕ ಪೋಲೆಂಡಿನ ಬಂದರವಾಗಿರುವ, ಅವರ ವ್ಯಾಪಾರ ವಹಿವಾಟುಗಳು ಹೆಚ್ಚಾಗಿರುವ ಡಾಂಜಿಜ್ಗು, ಜರ್ಮನಿಯರ ವಶವಾದುದು, ವಾರ್ಸಲೆ ಒಪ್ಪಂದದ ನಂತರ, ಸ್ವಾತಂತ್ರ ರಾಜ್ಯವಾಗಿರುತ್ತದೆ ಆದರೆ ಪೋಲೆಂಡಿಗೆ ಇದನ್ನು ವ್ಯಾಪಾರದ ಬಗ್ಗೆ ಉಪಯೋಗಿಸಲು ಹಕ್ಕುಗಳಿವೆ ಈ ದೇಶಗಳಲ್ಲಿ ಸ್ವಯಂ ಪ್ರಭುತ್ವದ ರಾಜ್ಯಗಳು ಸ್ಥಾಪನೆಯಾಗಿದ್ದರೂ, ಇಲ್ಲಿ ನಡೆಯುವ ತೊಂದರೆಗಳು ಅವರಿಂದ ನಿವಾರಣೆಯಾಗದು ಅಲ್ಲಿರುವ ಅಲ್ಪ ಸಂಖ್ಯಾತ ನಾಜಿ ಜರ್ಮನಿಯರು, ಈ ದೇಶಗಳಲ್ಲಿ ಒಂದು ಪಂಗಡವನ್ನು ರಚಿಸಿ, ಈ ದೇಶಗಳನ್ನು ನಾಜಿ ಜರ್ಮನಿಗೆ ಕೂಡಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ

ಲಿಥೂನಿಯಾ ಮತ್ತು ಜರ್ಮನಿ

ಮೆಮಲಿನಲ್ಲಿ ಒಂದು ಕ್ರಾಂತಿ ನಡೆಸಿದುದಕ್ಕಾಗಿ, ೧೬೦ ನಾಜಿಗಳನ್ನು ಕ್ರಿಮಿನಲ್ ವ್ಯವಹಾರಕ್ಕೆ ಒಳಪಡಿಸಿದರು ಕೆಲವರಿಗೆ ಮರಣ ದಂಡನೆಯು ವಿಧಿಸಲಾಯಿತು. ಈ ಕ್ರಾಂತಿಗೆ ೩೦,೦೦೦ ನಾಜಿ ಸೈನಿಕರ ಬಲವಿತ್ತಂತೆ ಆದರೆ ನಾಜಿ ಜರ್ಮನಿಗೆ ಇದರಲ್ಲಿ ಕೈಯಿತ್ತ ಆದ ದರಿಂದ, ವ್ಯವಹಾರ ನಡೆದುದು ೧೬೦ ನಾಜಿಯ ಮೇಲಲ್ಲ ಅದು ಜರ್ಮನಿಯ ಮೇಲೆ ನಡೆದ ಹಾಗಾಯಿತು ಹೀಗೆ ಅವಮಾನವಟ್ಟ ಜರ್ಮನಿಯು ಹಲ್ಲು ಕಡಿಯುತ್ತಿದೆ ಈ ವ್ಯವಹಾರವು ಲಿಥೂನಿಯಾಕ್ಕೂ ಜರ್ಮನಿಗೂ ಒದ್ದಾಟದ ಒಂದು ಪರಿಚ್ಛೇದವಾಗಿರುತ್ತದೆ ೧,೦೦,೦೦೦,೦೦೦ ಜರ್ಮನ್ ನಾಜಿಗಳು ಇಲ್ಲಿನ ನಾಜಿಗಳ ಬೆನ್ನ ಹಿಂದಿರುತ್ತಾರೆ ಈ ಅವಮಾನವನ್ನು ನಾಜಿ ಜರ್ಮನಿಯು ಮರೆಯುವಂತಿಲ್ಲ

ಜರ್ಮನಿ ಮತ್ತು ರಶ್ಯಾ

ರಶ್ಯವು ಜರ್ಮನಿಯ ಪೂರ್ವದಿಕ್ಕಿನಲ್ಲಿರುವ ಈ ಪ್ರಾಂತ್ಯಗಳ ಕುರಿತಾಗಿ ಒಂದು ಒಪ್ಪಂದವನ್ನು ಬೆಳೆಯಿಸಲು ಮುಂದೆ ಬಂದಿತ್ತು ಜರ್ಮನಿಯು ಈ ಸೂಚನೆಯನ್ನು ತುಚ್ಛೀಕರಿಸಿತ ರಶ್ಯವು ಜರ್ಮನಿಯ ತಮಗೊಂದು ಪರಮ ಶತ್ರುವೆ ದುಭಾವಿಸುತ್ತದೆ ರಶ್ಯವು ಯುರೋಪು ಖಂಡದ ಒಂದು ಮಹಾ ಸಾಂಕ್ರಮಿಕ ರೋಗವಾಗಿರುತ್ತದೆ ಹಿಟ್ಲರನು ಬ್ರಿಟಿಷರು ಇವರ ಮೇಲೆ ರೇಗುವಂತೆ, ಅವರ ಕೋವನ್ನು ಸಿಸವನ್ನು ಖಂಡಿಸಿ, ಬಾರಿ ಬೊಬ್ಬಿಟ್ಟನು ಹಿಂದಿನ ಕಾಲವಾಗುತ್ತಿದ್ದರೆ ಕೋವನ್ನು ನಿಸ್ತ ರಶ್ಯವ ಪೌರ್ವಾತ್ಯದ ತನ್ನ ಪ್ರಭುತ್ವಕ್ಕೆ ಹಾನಿ ತರಬಹುದೆಂಬ ಭಾವನೆಯಿಂದ, ಬ್ರಿಟಿಷರು ಇವನೊಡನೆ ಸೇರುತ್ತಿದ್ದರು ಆದರೆ, ಹಿಟ್ಲರನ ಬೊಬ್ಬೆ ಬಹಳ ಹೆಚ್ಚಾಯಿತು. ತನ್ನನು ರಕ್ಷಿಸಿಕೊಳ್ಳಲು ಈತನು ಈ ರೀತಿ ವರ್ತಿಸುತ್ತಿದ್ದಾನೆಂದು ಅವರಿಗೆ ತಿಳಿದು ಬಂತು

ನಾಜಿಗಳು ರಶ್ಯಕ್ಕೆ ಹೆದರುವರಾಗಿದ್ದಾರೆ ಸೋವಿಯಟ ತತ್ವವು ಇವರಿಗೆ ವಿರೋಧವರವಾಗಿದೆ ಜರ್ಮನಿಯು ಪ್ರಬಲವಾದರೆ ತಮಗೆ ಹಾನಿ ಉಂಟಾಗುವುದೆಂದು ರಷ್ಯದ ಭಾವನೆ ಜರ್ಮನಿಯ ಪ್ರಗತಿಯು, ತಮ್ಮ ಅವಸಾನಕ್ಕೆ ಕಾರಣವಾಗುವುದೆಂದು ಇವರ ನಂಬಿಗೆ ಹೀಗಾಗಿ ನಾಜಿಗಳು ಅಧಿಕಾರಕ್ಕೆ ಬಂದಂದಿನಿಂದ ರಶ್ಯ—ಜರ್ಮನ್ ವೈರತ್ವವು ಪ್ರಾರಂಭವಾಗಿರುತ್ತದೆ. ದಿನೇ ದಿನೇ ಈ ವೈರವ್ಯವು ಬೆಳೆಯುತ್ತಿದೆ ಸಾಧ್ಯವಾದರೆ ಸಮಸ್ತ ರಶ್ಯಾದನ್ನು ವಶೀಕರಿಸುವುದು, ನಾಜಿಪಂಗಡದ ನಾಯಕನಾದ ಹಿಟ್ಲರನ ಉದ್ದೇಶವಾಗಿರುತ್ತದೆ ಸಂಪೂರ್ಣ ರಶ್ಯಾವನ್ನು ಹಿಡಿಯಲು ಅಸಾಧ್ಯವಾದರೆ, ಹತ್ತಿರವಿರುವ ಅವರ ಕೆಲವು ದೇಶಗಳನ್ನಾದರೂ ಹಿಡಿಯಬೇಕೆಂದು ಹಿಟ್ಲರನ ಆಶೆ.

ಆದುದರಿಂದ, ರಶ್ಯಾವು ಭಯಂಕರ ಯುದ್ಧಸಿದ್ಧತೆಗಳನ್ನು ಮಾಡಿದುದರಲ್ಲಿ ಆಶ್ಚರ್ಯವೇನೂ. ರಶ್ಯವು ಒಪ್ಪಂದ ಸಾಧಿಸಿದುದರಲ್ಲಿ ಆಶ್ಚರ್ಯವೇನು? ಜರ್ಮನಿಯ ಹತ್ತಿರವಿರುವ ಗಡಿನಾಡನ್ನು ಭದ್ರಪಡಿಸಬೇಕಾಗಿದೆ. ಇವರಿಬ್ಬರ ಮಧ್ಯದಲ್ಲಿರುವ ಪೋಲೆಂಡು ಭೀತಿಯಿಂದ ನಡುಗುತ್ತಿದೆ, ಫ್ರಾನ್ಸಿನ ಮತ್ತು ರಶ್ಯದ ಬದಿ ಸೇರುವುದೊ, ಅಥವಾ ಜರ್ಮನಿಯೊಡನೆ ಸಹಕರಿಸುವುದೊ ಎಂದು ಇದು ತಳಮಳಗೊಳ್ಳುತ್ತಿದೆ

ಶಾಂತಿ ಸ್ಥಾಪನೆ ಬಗ್ಗೆ ನವೀನ ಕ್ರಮಗಳು ಬೇಕಾಗಿವೆ

ಲಿಥೂನಿಯಾ, ಪೋಲೆಂಡ್, ಆಸ್ಟ್ರಿಯಾ, ಜೆಕೊಸ್ಲೊವೆಕಿಯಾದ ಕುರಿತಾಗಿ ಒಂದು ಒಪ್ಪಂದ ಮಾಡಲು ಜರ್ಮನಿಯು ಸಿದ್ಧವಿಲ್ಲ ಈ ಒಪ್ಪಂದದಿಂದ ತಾನು ಸುತ್ತಲೂ ಬಂಧಿಸಲ್ಪಡುವೆನೆಂದು ಹಿಟ್ಲರನ ಭಾವನೆ ಈ ಒಪ್ಪಂದವು ಫ್ರಾನ್ಸಿಗೂ ರಶ್ಯಾಕ್ಕೂ ಒಪ್ಪಂದವಾಗುವ ಸಂದರ್ಭದಲ್ಲಿ ತನಗೆ ಬಹಳ ಹಾನಿಕರವೆಂದು ಇವನ್ನು ತಿಳಿದಿರುವನ ರಶ್ಯಾ ಮತ್ತು ಫ್ರಾನ್ಸ ಭೀತಿವಶರಾಗಿರುತ್ತಾರೆ ಯುದ್ಧ ಸಿದ್ಧತೆಗಳನ್ನು ಮಾಡುತ್ತಿದ್ದಾರೆ ಇತರರನ್ನು ಭೀತಿಮಯ ಮಾಡುವುದೇ ನಾಜಿಗಳ ಅಭ್ಯಾಸ—ಮತ್ತ ಎಲ್ಲರೂ ರಕ್ಷಣೆಗಾಗಿ ಒಟ್ಟಾಗಿರುವರೆಂದು ಬೊಬ್ಬಿಡುವುದು ಇವರೆ

ಆದುದರಿಂದ ಜರ್ಮನಿಯೊಡನೆ ಒಪ್ಪಂದ ಮಾಡಲು ನವೀನ ಮಾರ್ಗಗಳು ಹುಡುಕಬೇಕಾಗಿದೆ ಈಗಿನ ಸ್ಥಿತಿಯು ನಿವಾರಣೆಯಾಗಬೇಕಾದರೆ ಯಾವತ್ತು ತರದಲ್ಲಿ ನಡೆಯುವುದು ಬಹಳ ಕಷ್ಟ ಪ್ರಥಮತವಾಗಿ ಅವರಿಗೆ ಸಮ್ಮತವಿರುವ ವಿಷಯಗಳನ್ನು ತಿಳಕೊಳ್ಳಬೇಕು ಇವುಗಳು, ಇವರ ಪಶ್ಚಿಮ ಗಡಿಯಲ್ಲಿರುವ ಆಸ್ಟ್ರಿಯ ಮತ್ತು ಹಂಗೇರಿಗಳಲ್ಲಿ ಇವರಿಗೆ ಯೋಗ್ಯ ನೆಲೆ ಸಿಗಬೇಕು ವಾಯು ಬಲದ ಕರಿತು ಒಂದು ಕರಾರಾಗಬೇಕು, ಶಸ್ತ್ರಧಾರಿಗಳಾಗುವುದರಲ್ಲಿ ಇತರ ಜನಾಂಗಗಳೊಡನೆ ಸರಿಸಮಾನತೆ ದೊರಕಬೇಕು ಇತರ ಜನಾಂಗಗಳ ಹಾಗೆಯೆ ನಡೆಸುವುದಾದರೆ ಜರ್ಮನಿಯು ಅವರಂತೆಯೆ ಶಸ್ತ್ರತ್ಯಾಗ ಮಾಡಲು ಸಿದ್ಧವಿದೆ

ನವ ಜರ್ಮನಿಗೆ ಭೀತರಾಗಿ ಸರ್ವರೂ ಯುದ್ಧ ಸಿದ್ಧತೆಗಳನ್ನು ಮಾಡುವ ಬದಲಾಗಿ ಸರ್ವರೂ ಶಸ್ತ್ರತ್ಯಾಗ ಮಾಡುವ ಪ್ರಯತ್ನಗಳ ಯಾಕೆ ಮಾಡಬಾರದು? ಫ್ರೆಂಚರು ಸಂಗ್ರಾಮ ಸಿದ್ಧತೆಗಳನ್ನು ಮಾಡುತ್ತಿದ್ದಾರೆ ಹಾಗೆಯೆ ಬ್ರಿಟನಿನಲ್ಲಿ ಸಂಗ್ರಾಮ ಸಿದ್ಧತೆಗಳ ಮಾಡುವ ಕಾರ್ಯಗಳು ಕಾಣುತ್ತಿವೆ ರಶ್ಯಾದ ಸೋವಿಯಟ್ ಸರಕಾರವು ತನ್ನ ನವವರ್ಷದ ಬಜೆಟ್ಟನಲ್ಲಿ ಹೆಚ್ಚಿನಂಶವನ್ನು ಯುದ್ಧಸಿದ್ಧತೆಗೆ ವಿನಿಗದಿಸಿದೆ ಆದರೆ, ಇಲ್ಲಿನ ಪ್ರಜೆಗಳಿಗೆ ಯಾರಿಗೂ ಯುದ್ಧವು ಬೇಕಾಗಿಲ್ಲ ಆದುದರಿಂದ ಎಲ್ಲರೂ ಒಟ್ಟು ಪರಸ್ಪರ ಹಿತಕಾರಿಯಾಗುವ ಒಪ್ಪಂದಗಳನ್ನು ಮಾಡಿ, ಶಾಂತಿಸ್ಥಾಪನೆ ಏಕೆ ಮಾಡಬಾರದು? ಎಂದು ನವ್ಯ ಮಾಜಿ ವೈಸರಾಯರಾದ ಇರ್ವಿನರ ಸಂದೇಶ

ಬ್ರಿಟನಿನ ವರ್ತನೆ

ಆದರೆ ಬ್ರಿಟನಿನ ಈಗಿನ ನೇಶನಲ್ ಸರಕಾರಕ್ಕೆ ಇದು ಒಪ್ಪದು ಪ್ರಪಂಚದಲ್ಲಿ ಶಾಂತಿಯುಂಟಾಗುವಂತೆ ವಿವಿಧ ಜನಾಂಗಗಳು ಶಸ್ತ್ರಧಾರಿಯಾಗುವ ಕಾರಣಗಳನ್ನು ಜನಾಂಗಸಭೆಯ ನರ ಪರೀಕ್ಷೆ ಮಾಡಬೇಕಾಗಿ ಅಮೇರಿಕಾನರ ಸೂಚನೆ ಒಂದ ಉಂದಿತ, ತನ್ನ ತನ್ನ ವೈರಿ ಜನಾಂಗಗಳ ಸಮ್ಮತಿಗಳನ್ನು ಗಳಿಸಿ ಹೊಸಿ ಕಕ್ಷೆಗಳ ಸಲಿಕ ಕೇಳಿ ಅವನ್ನು ಅಳಿಸಿ, ಅನೇಕ ಜನಾಂಗಗಳ ತನ್ನ ಸ ಗ್ರಾಮ ಯೋಗ್ಯತೆಗಳನ್ನು ಇನ್ನು ವೃದ್ಧಿ ಪಡಿಸುವುದು ಉಚಿತವಾಗಿದೆ ಅಮೇರಿಕಾನರ ವ ತ ಕಿಪಿಗೀಯ ಕೇಳಿದನ್ನು ಕಣ್ಣಿಟ್ಟು ನೋಡಿದರೆ ಉತ್ತರ ನಿಲ್ಲವೆ ಶಸ್ತ್ರತ್ಯಾಗದ ಬಗ್ಗೆ ಜನಾಂಗಸಭೆಯು ಕಾರ್ಯ ತರವುಳ್ಳದಾಗಿತ್ತು, ಆದರೆ ನಿಲ್ಲ ಈ ಕಾರ್ಯಕ್ಕೆ ಕಲ್ಪ ಹಾಕಿರುತ್ತದೆ ಎಲ್ಲ ಜನಾಂಗಗಳ ಸಂಗ್ರಾಮ ಯೋಗ್ಯತೆಯ ಪರೀಕ್ಷಿಸುತ್ತಿದ್ದರೆ, ಅವರೆಲ್ಲರ ಪ್ರ ಈಗಿನ ಪ್ರಸ್ತ ಸಂಶಯಗಳು ಮಾಯವಾಗುತ್ತಿದ್ದವು ಜರ್ಮನಿಯು, ಇತರ ಜನಾಂಗಗಳ ಈ ಶರ್ತಗಳ ಒಪ್ಪಿದರೆ ತಾನು ಒಪ್ಪುವನೆಂದು ತಿಳಿಸಿತ್ತು ಆದರೆ ಈ ಸೂಚನೆಯನ್ನು ಬ್ರಿಟಿಷರು ಸ್ವೀಕರಿಸದಿರಲು ಕಾರಣವೇನು? ಎಲ್ಲರೂ ಈ ಕಾರ್ಯಕ್ಕೆ ಉತ್ಸಾಹಿಗಳಾಗಿ ಮುಂದೆ ಬಂದಿರುವಾಗ, ಬ್ರಿಟನು ನಿರುತ್ಸಾಹಪಡುವುದೇಕೆ?

ಜಾಪಾನಿನ ಸಾರ್ವಭೌಮತೆ

ರಷ್ಯದ ವಿಚಾರ ಪಶ್ಚಿಮದಲ್ಲಿ ರಷ್ಯಕ್ಕೆ ಜರ್ಮನಿಯು ಭಯಪಡಿಸುತ್ತಿದೆ ಪೂರ್ವದಲ್ಲಿ ಜಾಪಾನು ನಾಜಿಗಳು ಅಧಿಕಾರಕ್ಕೆ ಬರುವ ಮೊದಲು, ಇವರಿಗೂ ಜರ್ಮನಿಗೂ ಒಳ್ಳೆ ಸಂಬಂಧಗಳಿದ್ದವು ಜಾಪಾನು ಬ್ರಿಟಿಷರ ಮಿತ್ರ ಜನಾಂಗವಾಗಿದ್ದು, ಪೌರ್ವಾತ್ಯದಲ್ಲಿ ಕೊಮ್ಯುನಿಸಮನ್ನು ತಡೆಯುವುದರಲ್ಲಿ ಮಾತ್ರ ಕೈಹಾಕಿತ್ತು. ಈಗ ನಾಜಿಗಳ ಪ್ರಭುತ್ವದಿಂದ ರಷ್ಯಾ-ಜರ್ಮನ್ ವೈರವ್ಯ ಉಂಟಾಗಿರುತ್ತದೆ. ಅತ್ತಲಾಗಿ ರಷ್ಯದ ಚೀನಾದಲ್ಲಿ ಹರಡುವಿಕೆಯು ಜಾಪಾನು ತಡೆಯುವುದು ಮಾತ್ರವಲ್ಲದೆ-ಸಮಸ್ತ ಚೀನಾವನ್ನು ಜಪಾನೀಯ ಸಾಮ್ರಾಜ್ಯವನ್ನಾಗಿ ಮಾಡಲು ಉದ್ದೇಶಪಟ್ಟಿರುತ್ತದೆ.

ಪಾಶಾತ್ಯ ಸಂಸ್ಕೃತಿಯನ್ನು ಹೊಂದಿಕೊಂಡು ಭಯಂಕರ ರೀತಿಯಲ್ಲಿ ಪ್ರಗತಿ ಹೊಂದಿದ ಜಾಪಾನು, ಪಾಶ್ಚಾತ್ಯರಿಗೆ ಮತ್ತು ಅಮೇರಿಕನ್ನರಿಗೆ ಪೌರ್ವಾತ್ಯದಲ್ಲಿ ಒಂದು ಅಡ್ಡಿಯಾಗಿ ಪರಿಣಮಿಸಿರುತ್ತದೆ ಆದರೆ, ಜಪಾನು ಮೆಂಚೂರಿಯಾವನ್ನು ನುಂಗುತ್ತಿರುವಾಗ, ಆಗ ರಷ್ಯಾದ ಮೇಲೆ ಸ್ವಲ್ಪ ವಕ್ರದೃಷ್ಟಿಯಿರುವುದರಿಂದ, ಬ್ರಿಟಿಷರು ಸುಮ್ಮನೆ ಕುಳಿತರು. ಜನಾಂಗಸಭೆಯಲ್ಲಿ ಆ ಕುರಿತು ಯಾವತ್ತೂ ಮಾತುಗಳನ್ನು ಎತ್ತದೆ ಮೌನವಾಗಿ ಕುಳಿತರು.

ಈಗ ಜಾಪಾನಿನ ಸಾರ್ವಭೌಮತೆಯು ತನ್ನ ಉದ್ದೇಶವನ್ನು ಸರಿಯಾಗಿ ಪ್ರಕಟ ಮಾಡಿರುತ್ತದೆ ಏಸ್ಯಾಖಂಡದಲ್ಲಿ ಇನ್ನೊಂದು ಜನಾಂಗಸಭೆಯ ರಚಿಸಿ ಆಗ ಸಮಸ್ತ ಏಸ್ಯಾಖಂಡವನ್ನು ತನ್ನ ಅಧಿಕಾರಕ್ಕೆ ಒಳಪಡಿಸುವುದು ಇವರ ಉದ್ದೇಶ. ಈಗ ಜಾಪಾನು ಜನಾಂಗಮಂಡಳದ ಹೊರಗಿರುತ್ತದೆ ಬ್ರಿಟನು, ಜಪಾನಿನ ಕುರಿತು ಬುದ್ಧಿ ಬದಲಾವಣೆ ಮಾಡಿರುತ್ತದೆ ಅಮೇರಿಕಾವು ಶಾಂತಿಸಾಗರದ ಅವರ ವ್ಯಾಪಾರಕ್ಕೆ ಇವರಿಂದ ಪೈಪೋಟಿ ಬರಲು, ಇವರ ಮೇಲೆ ಅಸೂಯೆಪಡುತ್ತಿದ್ದಾರೆ.

ಜಾಪಾನಿನ ಸಾಂಪತ್ತಿಕ ಸ್ಥಿತಿ

ಜಾಪಾನಿನ ಜನಸಂಖ್ಯೆಯು ದಿನೆ ದಿನೆ ವೃದ್ಧಿಯಾಗುತ್ತಿದೆ ಅವರಿಗೆ ಉಳಕೊಳ್ಳಲು ನೆಲ ಬೇಕಾಗಿದೆ ಬರೀ ನೆಲ ಸಿಕ್ಕಿದರೆ ಸಾಲದು ಅಲ್ಲಿ ಕೈಗಾರಿಕೆಗಳನ್ನು ನಡೆಯಿಸಲು ಸಾಧ್ಯವಾಗಬೇಕು ಇದಕ್ಕೆ ಕಾರಣ ಸಾಮಗ್ರಿಗಳು ಬೇಕು. ತಯಾರಾದ ಸಾಮಾನುಗಳಿಗೆ ಮಾರ್ಕೆಟುಗಳು ಬೇಕು ಹೀಗಾಗಿ ಜಪಾನು ಏಸ್ಯಾಖಂಡವನ್ನು ತನ್ನ ಸಾಂಪತ್ತಿಕ ದುಃಸ್ಥಿತಿಯ ನಿವಾರಣೆಗಾಗಿ ಉಪಯೋಗಮಾಡುತ್ತಿದೆ ಚೀನಾದಲ್ಲಿ ಜಪಾನೀಯರು ನೆಲಸುತ್ತಿದ್ದಾರೆ ಅಲ್ಲಿ ಜಪಾನೀಯ ಸಾಮ್ರಾಜ್ಯವು ರಚನೆಯಾಗುತ್ತಿದೆ ಜಪಾನೀಯ ಸಾಮಾನುಗಳು ಬಹಿರ್ ಮಾರ್ಕೆಟುಗಳಲ್ಲಿ ಪಾಶ್ಚಾತ್ಯ ಒಡಿವೆಗಳೊಡನೆ ಪ್ರತಿಸ್ಪರ್ಧಿಸುತ್ತವೆ ಪಾಶ್ಚಾತ್ಯ ಜನಾಂಗಗಳ ಇದನ್ನು ಸಹಿಸಲಾರವು ಮುಖ್ಯತವಾಗಿ ಅಮೇರಿಕವು

ಆದರಿಂದ ಅಮೇರಿಕಾವು ಜಪಾನಿನೊಡನೆ ಯುದ್ಧಮಾಡಲು ಸಿದ್ಧತೆಗಳನ್ನು ಮಾಡುತ್ತಿದೆ ಪೆಸಿಫಿಕ್ ಸಾಗರದ ಕೆಲವು ದ್ವೀಪಗಳಲ್ಲಿ, ಈ ಕಾರ್ಯಕ್ಕೆ ಸಹಕಾರಿಯಾಗುವಂತೆ, ನೌಕಾಬಲದ ನಿಲ್ದಾಣಗಳನ್ನು ರಚಿಸಿರುತ್ತದೆ ಕೆಲವು ದ್ವೀಪಗಳಲ್ಲಿ ವಾಯುಬಲವನ್ನು ಶೇಖರಿಸಿದೆ ಅಲ್ಲದೆ ತನ್ನ ಯುದ್ಧಸಿದ್ಧತೆ ಕೆಲಸವನ್ನು ಬಹಳ ಬಿರುಸಾಗಿ ನಡೆಯಿಸುತ್ತಿದೆ ದೊಡ್ಡ ದೊಡ್ಡ ಯುದ್ಧನಾವೆಗಳನ್ನು ನಿರ್ಮಿಸುತ್ತಿದೆ

ಜಾಪಾನಿನ ಈಗಿನ ವರ್ತನೆಗೆ ಬ್ರಿಟನೆ ಕಾರಣವು ಅದನ್ನು ತಡೆಯಬೇಕಾದ ಸಮಯದಲ್ಲಿ ಸುಮ್ಮನೆ ಕುಳಿತರು ಹಿಂದೂ ದೇಶದಲ್ಲಿ ಇವರ ಪ್ರಭುತ್ವವಿದ್ದುದರಿಂದ ಈ ಜಪಾನೀಯ ಮರವು ಬೆಳೆಯುವ ಮೊದಲೆ ಸಸಿಯಾಗಿರುವಾಗ ಕಿತ್ತು ಬಿಸಾಡುವ ಯೋಗ್ಯತೆಯು ಬ್ರಿಟಿಷರಲ್ಲಿತ್ತು ಆದರೆ ಅವರು ಸುಮ್ಮನೆ ಕುಳಿತರು. ಜಪಾನೀಯ ಸಾರ್ವಭೌಮತೆಕನ್ನ ಕಾರ್ಯಗಳು ನಡೆಯುತ ಚೀನಾದ ಅನೇಕ ಬೆಂಕಗಳ ಇವರಿಗೆ ಸೇರಿದೆ ಸಮಸ್ತದನೆ ಭೂಜಸವರ ಯೋಗ್ಯತೆಗಳ ಇವರಿಗೆ ಬಂದಿದೆ ಏಂದ ಕೆಲವು ಬ್ರಿಟಿಷ ಪತ್ರಿಕೆಗಳ ಕೆಲತಿಂಗಳ ಹಿಂದೆ ಸಂದೇಶವು

ಅಮೇರಿಕಾವು ಜಪಾನಿನೊಡನೆ ಯುದ್ಧ ಸಿದ್ಧತೆ ನಡೆಸುತ್ತಿರುವಾಗ, ಜಪಾನು ಏಸ್ಯದಲ್ಲಿ ಹರಡುತ್ತಿದ್ದಾರೆ ರಶ್ಯವು ಜರ್ಮನಿಗೆ ಹೆದರಿದಷ್ಟು ಜಪಾನಿಗೆ ಹೆದರುವುದಿಲ್ಲ ಅದುದರಿಂದಲೆ ಮೆಂಚೂರಿಯದಲ್ಲಿ ನಡೆದ ಒಪ್ಪಂದವು ಜಪಾನಿಗೆ ಅನುಕೂಲವಾಗುವ ಶರ್ತಗಳಿಗೆ ಒಪ್ಪಿದುದು ಆದರೆ, ಜಪಾನ ರಷ್ಯದ ಸೈಬಿರಿಯದ ಮೇಲೆ ದೃಷ್ಟಿ ಹಾಕಿರುತ್ತದೆ ಇಲ್ಲಿ ಕಲ್ಲಿದ್ದಲು, ಕಬ್ಬಿಣ ಇತ್ಯಾದಿ ಲೋಹಗಳ ತುಂಬಿವೆ ಈ ದೇಶವನ್ನು ಹಿಡಿದರೆ ಜಪಾನಿಗೆ ಬೇಕಾದ ಕಾರಣ ಸಾಮಗ್ರಿಗಳ ಒದಗುವವು

ಜರ್ಮನಿಯ ಅಧಿಕಾರದಲ್ಲಿದ್ದ ಕೆಲವು ಶಾಂತಸಾಗರದಲ್ಲಿರ ದ್ವೀಪಗಳು ವಾರ್ಸಲೆ ಒಪ್ಪಂದದಿಂದ ಜಪಾನೀಯರಿಗೆ ಸೇರಿದ್ದವು ಇವು ಈಗ ಜಪಾನೀಯರಿಗೆ ಅಮೇರಿಕವನ್ನು ತಡೆಯಲು ಬಹಳ ಉಪಯುಕ್ತವಾಗುವವು ಜರ್ಮನಿಯು-ಇವುಗಳನ್ನು ಇವರಿಂದ ಪುನಃ ಕೇಳಲಿಲ್ಲ ಜರ್ಮನ ಜಪಾನಿಗೂ ರಷ್ಯವನ್ನು ಸದೆಬಡಿಯಲು ಒಂದು ಒಪ್ಪಂದವಾಗುವುದೆಂದೂ ಒಂದು ವಾರ್ತೆ ಹರಡಿರುತ್ತದೆ ಮೆಂಚೂರಿಯದಿಂದ ರಷ್ಯದ ಸೈಬಿರಿಯದ ಕಡೆಗೆ ಪೋಗಲು ಅನುಕೂಲವಾಗುವ ರೈಲ್ವೆಯ ನಿರ್ಮಾಣವು ಕೆಲವು ಜರ್ಮನ್ ಇಂಜಿನಿಯರರು ನಡೆಯಿಸುತಿದ್ದಾರಂತೆ ಸೈಬಿರಿಯಾವನ್ನು ವಶೀಕರಿಸಿದರೆ ಅತ್ತ ಕಡೆಯಿಂದ ಸಾಮಾನುಗಳನ್ನು ಒಯ್ಯಲು ಈ ರೈಲ್ವೆಯ ಅನುಕೂಲವಾಗುವುದಂತೆ.

ಅಂತೂ ಇಂತೂ ಪ್ರಪಂಚದಲ್ಲಿ ಶಾಂತಿಯುಂಟಾಗಲು ಅನೇಕ ಆತಂಕಗಳು ಕಾಣುತ್ತವೆ. ರಶ್ಯಾ-ಜಪಾನ-ಜರ್ಮನಿ ಇವರಿಂದ, ಪಾಶ್ಚಾತ್ಯ-ಪೌರ್ವಾತ್ಯ ಯುದ್ಧವು ಬೇಗನೆ ಪ್ರಾರಂಭವಾಗುವುದೊ, ಏನೊ ನೋಡಬೇಕು.

(೧೩ನೇ ಪುಟದಿಂದ ಮುಂದುವರಿದುದು)

ಸ್ತಾಂತ ಮಗಳೇ, ತಲೆಕೂದಲನ್ನು ಬೊಬ್ ಕಟ್ ಮಾಡಿಕೊಂಡು, ಮಂಗಲಸೂತ್ರವನ್ನು ಕಿತ್ತೆಸೆದು, ಅರ್ಧನಗ್ನ ಸ್ಥಿತಿಯಲ್ಲಿ, ತುಂಬಿದ ಸಭೆಯ ಮುಂದೆ ನರ್ತನಕ್ಕೆ ಇಳಿದಿರುವಳು! ಛೀ, ಎಂತಹ 'ವಿಪರ್ಯಾಸ!'' ನಾಣಿಯು ಮರುಗಿದನು.

ರಾಮಾಚಾರ್ಯ ಎನ್ನುತ್ತಲೇ ನನ್ನ ಮತಿಗೆ ಮುಸುಕಿದ ಮಂಕು ಪೂರಾ ಬಿಟ್ಟು ಹೋಯಿತು. ಅವರ ಅಳಿಯನು ಐಂದ್ರಜಾಲಿಕನಾಗಿದ್ದನೆಂಬುದು ಎಂದೋ ನನ್ನ ಕಿವಿಗಳ ಮೇಲಿನಿಂದ ಸರಿದುಹೋಗಿತ್ತು.

"ರಾಮಾಚಾರ್ಯರ ಅಳಿಯನು ಇಂದ್ರಜಾಲ ವಿದ್ಯೆಯಿಂದ ಒಳ್ಳೇ ಸಂಪಾದನೆ ಮಾಡುತ್ತಿದ್ದನಂತೆ, ಹಾಗಿದ್ದು ಇದೇಕೆ ಹೀಗಾಯಿತು?'' ನಾನು ದಿಗಿಲಿನಿಂದ ಕೇಳಿದೆ.

"ಎಲ್ಲವೂ ಕಾಲಗತಿ. ಅವನು ಒಬ್ಬನೇ ಇರುವಾಗ ಅಲ್ಲಿ ಇಲ್ಲಿ ತಿರುಗಾಡಿ ಪ್ರದರ್ಶನ ಮಾಡಿ ಹೊಟ್ಟೆ ಹೊರಕೊಳ್ಳುತ್ತಿದ್ದನು. ಹೆಂಡತಿಯಾದಮೇಲೆ ಅವಳನ್ನು ತನ್ನ ಸಹಾಯಕಿಯಾಗಿ ಮಾಡಿಕೊಂಡು ನಾಲ್ಕಾರು ಸುತ್ತಿ ಕೆಲವು ಕಾಲ ಕಳೆದ. ಕಾಲವು ಯಾವಾಗಲೂ ಒಂದೇ ರೀತಿ ಇರುವುದೇ? ಒಮ್ಮೆ ಒಂದೂರಿನಲ್ಲಿ ಊಟಕ್ಕೇ ತತ್ವಾರವಾಗುವಂತಾಗಲು, ಅವರು ಮಾನದ ಬಿಗುಮಾನವನ್ನು ಸಡಲಿಸಬೇಕಾಯಿತು. ಆ ಮೇಲಂತೂ 'ಜಾತಿಕೆಟ್ಟರೂ ಸುಖಪಡಿಯಬೇಕಲ್ಲವೇ? ಈಗ ಈ ವೇಷ. ಯಾವುದರಿಂದ ದಿನ ಹೋಗುವುದೋ, ಯಾವುದರಿಂದ ಹಣ ಬರುವುದೋ ಅದೇ ವ್ಯಾಪ್ತಿ!'' ನಾಣಿಯು ಒಗಟನ್ನು ಬಿಚ್ಚಿ ಹೇಳಿದನು.

'ಅಯ್ಯೋ! ಎಲ್ಲವೂ ಹೊಟ್ಟೆಗಾಗಿ! ಎಲ್ಲವೂ ಹಣಕ್ಕಾಗಿ. ಈಗ ಅವನು ಹಣಕ್ಕಾಗಿ 'ಹೆಣ'ವೇ ಸೈ'' ಒಂದು ನಿಟ್ಟುಸಿರಿನೊಂದಿಗೆ ಹೇಳಿದೆನು

ಬರುವ ವಾರ:

ಮಿಥ್ಯಜೀವನದ ಸತ್ಯಕಥೆಗಳು:

೬. ದೇವತಾ ದುರ್ಲಭ ದಾಂಪತ್ಯ.

ಓದಲು ಮರೆಯಬೇಡಿ!

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 240/1931
R. E. P. No. 1115/1935

1 ವಾದಿ ತಮ್ಮಯ್ಯ ಬಟ್ಟ ಮಂಜಯ್ಯ ಬಟ್ಟನ ಮಗ-ಬೀಜಾಡಿ ಗ್ರಾಮದ ಹುದ್ರಾಳಿಯಲ್ಲಿರುವವ-

2 ಪ್ರತಿವಾದಿರು

1 ಅಬ್ದುಲ ರಹಿಮಾನ ಸ್ಯಾಬ ಯಾನೆ ಉಮ್ಮರ ಸ್ಯಾಬ-ಕಾದಿರ ಸ್ಯಾಬನ ಮಗ 2 ಶ್ಯಾಬು ಸ್ಯಾಬ, 3 ಅಮೀನಾಬಿ, 4 ನಾಫರ ಸ್ಯಾಬ, 5. ಹಮ್ಮುಂಜಿ ಸ್ಯಾಬ, 6 ಲಾಲಾ ಸ್ಯಾಬ-ಕಾದಿರ ಸ್ಯಾಬರ ಮಕ್ಕಳು--ನಾಬಾಲಿಕರಾಗಿ ಮೈನರರು ಇವರ ಗಾರ್ಡಿಯನ್ 1ನೇ ಪ್ರತಿವಾದಿ. ಪ್ರತಿವಾದಿರು ಕೋಟೇಶ್ವರ ಗ್ರಾಮದ ಎಡಾಕೆರೆಯಲ್ಲಿರುವವರು.

ವಾದಿಯು ಪ್ರತಿವಾದಿರ ಹಕ್ಕಿನ ದಿಕ್ರಿಯಲ್ಲಿ ಜವಾಬುದಾರಿಯಿರುವ ಸ್ಥಿರ ಆಸ್ತಿಗಳನ್ನು ಲೀಲಾವಿಗೆ ಅಪೇಕ್ಷಿಸಿದ್ದಾನೆ. ಸದ್ರಿ ಲೀಲಾಂ ಇಸ್ತಿಹಾರಿನ ಶರ್ತಗಳನ್ನು ನಿಶ್ಚಯಿಸುವರೇ ತಾರೀಖು 19—2—1936ಕ್ಕೆ ತಸ್ಕಿಗೆ ಇಟ್ಟಿದೆ. ಈ ಕುರಿತು ಆಕ್ಷೇಪವಿದ್ದರೆ ಮೇಲ್ಕಂಡ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಹೇಳತಕ್ಕದು.

ಕುಂದಾಪುರ, 12—3—'36. } **K. Narayana Shenai,** ಅರ್ಜಿದಾರನ ಕಡೆ ವಕೀಲ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 415/1935.

ವಾದಿ-ಟಿ. ನಾರಾಯಣರಾವ.
ಪ್ರತಿವಾದಿರು-ಶ್ರೀನಿವಾಸ ಹತ್ವಾರ ಕೂಡಾ.
4ನೇ ಪ್ರತಿವಾದಿ-ಸುಬ್ಬಣ್ಣ ಹತ್ವಾರರಿಗೆ—
6ನೇ ಪ್ರತಿವಾದಿ-ಪದ್ಮನಾಭ ಹತ್ವಾರರಿಗೆ—
ಸಹಾ

ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಕುಂಭಾಪುರ ತಾಲೂಕು ತಕ್ಕಟೆ ಗ್ರಾಮದ 42ನೇ ಪಟ್ಟೆಗಳಿಗೆ 1842ನೇ ಫಸಲಿ ಬಗ್ಗೆ ವಾದಿಯು ಹೆಚ್ಚಿಗೆಯಾಗಿ ತೆತ್ತ ರೂ 25-3-1 ಇದರ ಬಾಬ್ತು ಬಡ್ಡಿ ರೂ. 6 11-2 ಕೂಡಾ ರೂ. 31-14-3ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ್ದ ಮಜ್ಕೂರು ದಾವೆಯು ತಾ 25-2-36ಕ್ಕೆ ತಸ್ಕಿಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವಿದ್ದರೆ ಆ ದಿವಸ ಹಗಲು 11 ಘಂಟೆಗೆ ಹಾಜರಾಗಿ ಉದಾಹರಿಸತಕ್ಕದು ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆ.

ಕುಂದಾಪುರ 29-1-36 } **K. Vittaldas Shenai,** ವಾದಿಯ ಕಡೆ ಎಡ್ವೋಕೇಟು.

---

೧೪ ವರ್ಷಗಳ ಅಗ್ನಿಮಾಂದ್ಯ, ಮತ್ತು ಚಳಿಜ್ವರ.

ಆ ಮೇಲೆ ಪೂರ್ಣ ಗುಣ.

14 ವರ್ಷಗಳ ಅಗ್ನಿಮಾಂದ್ಯದ ವೇದನೆಯ ಬಾಧೆ; ಆ ಮೇಲೆ ಪೂರ್ಣ ಮತ್ತು ಶಾಶ್ವತ ಗುಣ! ಯೋಚಿಸಿರಿ! Mrs. M. ಇದರ ನಿಜವಾದ ಅನುಭವ ವಾಯು ಬಾಧೆ ಮತ್ತು ಚಳಿಜ್ವರವಿಲ್ಲದೆ ಅವಳಿಗೆ ಒಂದು ದಿನ ನಿದ್ದೆ ಇಲ್ಲ. ಎಲ್ಲಾ ಉದರವೇದನೆಗಳಿಗೂ ಅತ್ಯನೋಘವೂ, ಆಸ್ಪತ್ರೆಗಳಲ್ಲಿ ಡಾಕ್ಟರರು ಶಿಫಾರಸು ಮಾಡಿದ್ದೂ ಆದ ಮೆಕ್‌ಲೀನ್ ಬ್ರೆಂಡ್ ಸ್ಟೊಮಕ್ ಪೌಡರನ್ನು ಸೇವಿಸುವ ವರೆಗೆ ಅವಳಿಗೆ ಈ ಕಷ್ಟ.

Mrs M ಬರೆದ ಪತ್ರವನ್ನೋದಿ —

"ನಿಮ್ಮ ಅದ್ಭುತಕರ ಮೆಕ್‌ಲೀನ್ ಬ್ರೆಂಡ್ ಸ್ಟೊಮಕ್ ಪೌಡರನ್ನುಪಯೋಗಿಸಿ ನನಗೆ ಸಿಕ್ಕಿದ ಗುಣಕ್ಕಾಗಿ ನಿಮಗೆ ವಂದನೆಗಳು ವಾತ ಮತ್ತು ಅಗ್ನಿಮಾಂದ್ಯಗಳಿಂದ ಕಳೆದ 14 ವರ್ಷಗಳಿಂದಲೂ ಬಾಧಿತಳಾಗುತ್ತಿದ್ದೆ ರಾತ್ರಿ ಮಲಗಿದೊಡನೆ ಏಳುತ್ತಿದ್ದೆ ಗಂಟೆಗಟ್ಟಲೆಯಾಗಿ ವಾಯುವಿನ ಉಪದ್ರವು ಇರುತ್ತಿತ್ತು. ಹೃದಯ ನಡುಕವುಂಟಾಗುತ್ತಿತ್ತು ಚಳಿಯಿಂದ ದೇಹವು ಕಂಪಿಸುತ್ತಿತ್ತು ಸಣ್ಣ ತುಂಡು ಬ್ರೆಡನ್ನು ತಿಂದೊಡನೆ ನನ್ನ ಹೊಟ್ಟೆಯು ಅಡಿಮೇಲಾದಂತಾಗುತ್ತಿತ್ತು ಎಲ್ಲಾ ಬಗೆಯಿಂದಲೂ ಸಾಧಿಸಿದೆ ಮೆಕ್‌ಲೀನ್ ಬ್ರೆಂಡ್ ಸ್ಟೊಮಕ್ ಪೌಡರನ್ನು ಉಪಯೋಗಿಸುವವರೆಗೆ ಯಾವುದರಿಂದಲೂ ಪ್ರಯೋಜನವಾಗಲಿಲ್ಲ.

Mrs M.ಗೆ ದೊರೆತಷ್ಟೇ ಗುಣವು ನಿಮಗೂ ಸಿಗಬಹುದು. ಆದರೆ ಕೆಲವು ಅಂಗಡಿಗಳ ದಾಸಿಗಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ. ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೆಂಡ್ ಸ್ಟೊಮಕ್ ಪೌಡರನ್ನೇ ನಮ್ಮ ಕೆಮಿಸ್ಟರಿಂದ ಪಡೆಯಿರಿ. ಸೀಲು, ರಕ್ಷಾಪತ್ರ ಮತ್ತು ಬಿಲ್ಲೆಗಳ ಮೇಲೆ

ಎಂಬ ದಸ್ಕತು ಇದೆ. ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವದರಲ್ಲಿ ಕಷ್ಟವಿರುವದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್
೧೩ ಸಂಟುಂಕಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,
ಇಲ್ಲಿಗೆ ಬರೆಯಿರಿ.

ನೋಟೀಸು.

The Canara Banking Corporation Udipi Ltd., Car Street, Mangalore.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವ್ಯಾದೆಗೆ ಕೊಡದೆ ಇದ್ದುದರಿಂದಲೂ ಸದ್ರಿಯವರಿಗೆ ಬಿಟ್ಟ ರಜಿಸ್ಟ್ರಿ ನೋಟೀಸು ಅವರಿಗೆ ಪಾವತಿ ಆಗದೆ ಇರುವ ಕಾರಣದಿಂದಲೂ ಈಗ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು, ಬಡ್ಡಿ ಐವಜು, ರಜಿಸ್ಟ್ರಿ ನೋಟೀಸು ಖರ್ಚು ಮತ್ತು ಈ ನೋಟೀಸು ಖರ್ಚು ವ ಬಡ್ಡಿಗೆ ಬಡ್ಡಿ ಕೂಡಿಸಿ, 1936ನೇ ಇಸವಿ ಮಾರ್ಚ ತಿಂಗಳ ತಾ 5ನೇ ಗುರುವಾರದ ಒಳಗೆ ತಂದುಕೊಟ್ಟು ಅದವಿಟ್ಟ ನಗಗಳನ್ನು ಸದ್ರಿಯವರು ಬಿಡಿಸಿಕೊಂಡು ಹೋಗದಿದ್ದರೆ ಅವರು ಈಡಾಗಿ ಇಟ್ಟ ನಗಗಳನ್ನು ಇದೇ 1936ನೇ ಇಸವಿ ಮಾರ್ಚ ತಿಂಗಳ ತಾ 7ನೇ ಶನಿವಾರ ದಿವಸ ಮಧ್ಯಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ.

ಸಾಲಗಾರರ ಹೆಸರು Yekkar Siddu Shetty N/o Sheshu Muddya at Toledar Vaman Shet's Compound Bibi alabi Road, Mangalore ಸಾಲದ ನಂಬ್ರ 884/34 ಸಾಲದ ಮೊಬಲಗು ರೂ 20-0-0 ಸಾಲದ ನಂಬ್ರ 63/35 ಸಾಲದ ಮೊಬಲಗು ರೂ 35 ಸಾಲದ ನಂಬ್ರ 114/35 ಸಾಲದಮೊಬಲಗು ರೂ 10

Office of the Corporation Car Street Mangalore 10—2—36 } K Vittal Bhandary *Agent*

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 9/36

1 ಅಮ್ಮುಂಜೆ ವಾಮನ ನ್ಯಾಕ, ಗೋವಿಂದ ನ್ಯಾಕರ ಮಗ 2 ಸಾವಿತ್ರಿ ಅಮ್ಮ, 1ನೇ ಅರ್ಜಿದಾರನ ಹೆಂಡ್ತಿ

3 ನಾರಾಯಣ ನ್ಯಾಕ
4 ರಾಮಕೃಷ್ಣ ನ್ಯಾಕ } 1ನೇ 2ನೇ ಅರ್ಜಿದಾರರ ಮಕ್ಕಳು.
5 ಗೋವಿಂದ ನ್ಯಾಕ

1—2—5ನೇ ಅರ್ಜಿದಾರರು ಉಡ್ಪಿ ತಾಲ್ಲೂಕು ಉಪ್ಪೂರು ಗ್ರಾಮದ ಅಮ್ಮುಂಜೆ-

3ನೇ 4ನೇ ಅರ್ಜಿದಾರರು ಉಡ್ಪಿ ಕಸಬಾ ಶಿವಳ್ಳಿ ಗ್ರಾಮದ ಕುಂಜಬೆಟ್ಟು, ಅರ್ಜಿದಾರರು.

1ನೇ 2ನೇ ಅರ್ಜಿದಾರರ ಮಗ 3ನೇ 4ನೇ 5ನೇ ಅರ್ಜಿದಾರರ ಸಹೋದರ ಮೃತ ಅಮ್ಮುಂಜೆ ಜಗನ್ನಾಥ ನ್ಯಾಕರ ಬಾಬ್ತು New India Life Assurance Co Ltd, Bombay ಈ ಕಂಪೆನಿಯಿಂದ Life Insurance Policy No 10457 11-1-33ನೇ ಪೊಲಿಸಿ ಬಾಬ್ತು ಬರತಕ್ಕ ಐವೇಜು ರೂ 1022-9-0 ವಸೂಲಿ ಕೊಡತಕ್ಕ 1ನೇ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾ 27 2—36ರಲ್ಲು ಇಡೋಣಾಗಿಯದೆ ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ದಿವಸ ಬೆಳಗ್ಗೆ 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಆಕ್ಷೇಪ ಜಾಹೀರು ಮಾಡತಕ್ಕದ್ದು.

Udipi, S. K 10—2—36 } **K Ramanath Pai,** *Pleader for Petitioners*

'ಸ್ವದೇಶಾಭಿಮಾನಿ'

ವಾರಪತ್ರಿಕೆಗೆ
ಇಂದೇ ಚಂದಾದಾರರಾಗಿರಿ!

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಅಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್'' ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1858ರಲ್ಲಿ ಸ್ಥಾಪಿತವಾದ್ದು)
ನೂಲು ಮತ್ತು ಜವುಳಿ ವ್ಯಾಪಾರಸ್ಥರು.

೧೯೦೮ರ ಕ್ರಿಮಿನಲ್ ಲೊ ಎಮೆಂಡ್‌ಮೆಂಟ ಆಕ್ಟು ಬಿದ್ದುಹೋಯಿತು.

ಪೌರ್ವಾತ್ಯದಲ್ಲಿ ರಷ್ಯಾ ಜಪಾನಿಗೆ ಯುದ್ಧವು ಪ್ರಾರಂಭವಾಗುವುದು.

ಸಿರಿಯಾದಲ್ಲಿ ದಂಗೆ.

ಜರ್ಮನಿಯ ಮೇಲೆ ಬಹಿಷ್ಕಾರ.

ಜಾಡುಮಾಲಿಗಳ ಪರಿಷತ್ತು.

ಅಖಿಲ ಭಾರತ ಜಾಡುಮಾಲಿಗಳ ಪರಿಷತ್ತು ಮೀರತ್‌ನಲ್ಲಿ ಸೇರಿತು. ಮುಸ್ಲಿಮ, ಸಿಕ್ಖ, ಕ್ರೈಸ್ತ, ಆರ್ಯಸಮಾಜ, ಧರ್ಮದವರ ಮಾತುಗಳನ್ನು ಕೇಳಿ, ಅವರು ಸನಾತನ ಧರ್ಮವನ್ನು ಎಂದಿಗೂ ತ್ಯಜಿಸಬಾರದಾಗಿ ನಿರ್ಧಾರ ಮಾಡಿರುವರು. ತಾವು ಕೀಳು ಜನರೆಂದು ಭಾವಿಸಬಾರದಾಗಿಯೂ ಸಮಾಜದಲ್ಲಿ ಸರಿಸಮಾನವಾದ ಹಕ್ಕುಗಳನ್ನು ತಾವು ಪಡೆಯಬೇಕೆಂದೂ, ಪ್ರಾಂತೀಯ ಸಭೆಗಳಲ್ಲೂ ಕೇಂದ್ರ ಸಭೆಯಲ್ಲೂ, ತಮಗೆ ಸದಸ್ಯತನವನ್ನು ಸರಕಾರದವರು ಕೊಡಿಸಬೇಕಾಗಿಯೂ, ಇವೆ ಮೊದಲಾದ ಅವರ ಅಭ್ಯುದಯದ ಕುರಿತು ಅನೇಕ ಠರಾವುಗಳನ್ನು ಮಾಡಿದರು

ವಸ್ತ್ರದ ಮೇಲಿನ ಸುಂಕವು ಕಡಿಮೆಮಾಡಲಾಗಿದೆ.

ವಸ್ತ್ರದ ಮೇಲೆ ಇಷ್ಟರ ತನಕ ಶೇಕಡಾ ೨೫ರ ಸಲ ಸುಂಕವು ವಿಧಿಸಲಾಗುತ್ತಿತ್ತು. ಇದರಿಂದ ಕೆಲವು ವರ್ತಕರು ಗುಪ್ತವಾದ ರೀತಿಗಳಲ್ಲಿ ವಸ್ತ್ರಗಳನ್ನು ತರಿಸಿ ಸುಂಕವನ್ನು ತಪ್ಪಿಸಿ ಅತೀ ಕಡಿಮೆ ದರಗಳಲ್ಲಿ ಅವುಗಳನ್ನು ಮಾರಿ ವಸ್ತ್ರದ ವ್ಯಾಪಾರವನ್ನು ಕೆಡಿಸಿದ್ದರು. ಇದರ ನಿವಾರಣೆ ಬಗ್ಗೆ ಈ ಸುಂಕವನ್ನು ಇಳಿಸಬೇಕಾಗಿ ಸರಕಾರದೊಡನೆ ಕೆಲವು ಪ್ರತಿನಿಧಿಗಳು ಮತ್ತು ವ್ಯಾಪಾರಿಗಳು ಮಾಡಿದ ಚಳುವಳಿಗಳು ಫಲಕಾರಿಯಾಗಿವೆ. ವಸ್ತ್ರದ ಮೇಲಿನ ಸುಂಕ ಕಡಿಮೆಮಾಡಲಾಗುವುದು. ಗುಪ್ತವಾದ ರೀತಿ ವಸ್ತ್ರವು ಹಿಂದೂದೇಶವನ್ನು ಸೇರದಂತೆ ಜಾಗ್ರತೆ ತೆಗೆದುಕೊಳ್ಳಲಾಗುವುದು

ಸಿರಿಯಾದಲ್ಲಿ ದಂಗೆ

ರಾಜಕೀಯ ಕಾರಣಗಳಿಂದ ಸಿರಿಯಾದಲ್ಲಿ ಉಂಟಾದ ದಂಗೆಯು ಇನ್ನೂ ಶಾಂತಗೊಳ್ಳಲಿಲ್ಲ. ಸೈನ್ಯ ಸಮೂಹಗಳು ಈ ದಂಗೆಯನ್ನು ತಣಿಸುವ ಕಾರ್ಯದಲ್ಲಿ ನಿರತರಾಗಿರುವರು. ಸೈನ್ಯ ಸಮೂಹಗಳಿಗೂ ಜನರಿಗೂ ಸಮರ ಉಂಟಾಗಿ ಹನ್ನೊಂದು ಜನರು ಮಡಿದಿರುವರು. ಸರಕಾರದ ಸೈನ್ಯ ಸಮೂಹದ ೪೯ ಮಂದಿಗಳಿಗೆ ಹಾನಿ ಉಂಟಾಗಿರುತ್ತದೆ. ಅಲ್ಲಿನ ಎಲ್ಲಾ ಬಜಾರುಗಳು ಮುಚ್ಚಲ್ಪಟ್ಟಿವೆ

ಚೀನಾದ ಗಾಜಿನ ವ್ಯಾಪಾರದ ಅವಸ್ಥೆ.

ಚೀನಾದೇಶದ ಗಾಜಿನ ಸಾಮಾನುಗಳು ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠವಾದುವುಗಳು. ಆದುದರಿಂದ ಅದರ ಗಾಜಿನ ವ್ಯಾಪಾರವು ಬಹಳ ಯಶಸ್ವಿತೆಯಿಂದ ನಡೆದು ದೊಡ್ಡ ದೊಡ್ಡ ಗಾಜಿನ ಕಾರ್ಖಾನೆಗಳು ಅಲ್ಲಿಯ ಅನೇಕ ಪ್ರಾಂತ್ಯಗಳಲ್ಲಿ ಕಾರ್ಯಗೈಯುತ್ತಿದ್ದುವು. ಆದರೆ, ಪ್ರಪಂಚದ ಈಗಿನ ವ್ಯಾಪಾರದ ಸ್ಥಿತಿಯಿಂದಾಗಿ ಈ ಕೈಗಾರಿಕೆಗೆ ದುರ್ದೆಸೆಯುಂಟಾಗಿರುತ್ತದೆಂದು ವರ್ತಮಾನ ಬಂದಿರುತ್ತದೆ. ಅವರ ಗಾಜಿನ ವ್ಯಾಪಾರವು ಅತಿರೇಕವಾಗಿ ಬಿದ್ದಿರುತ್ತದೆ. ಲಕ್ಷಾಂತರ ಜನರು ಉದ್ಯೋಗ ಕಳಕೊಳ್ಳಬೇಕಾಗಿದೆ. ಕಾರ್ಖಾನೆಯಲ್ಲಿ ಒಂದು ದಿನಕ್ಕೆ ಸ್ವಲ್ಪ ಗಂಟೆಗಳ ಕೆಲಸ ಮಾತ್ರ ನಡೆಯುತ್ತದಂತೆ

ಅಸೆಂಬ್ಲಿಯಲ್ಲಿ ಕ್ರಿಮಿನಲ್ ‘ಲೊ ಬಿಲ್ಲು’ ಕಾಂಗ್ರೆಸ್ಸಿನ ಜಯ! ಲಿಬರಲ್ ಪಂಗಡದವರ ಬೆಂಬಲ.

ಶ್ರೀ ಬಿ. ದಾಸರು ತಂದ ಕ್ರಿಮಿನಲ್ ಲೊ ಅಮೆಂಡಮೆಂಟ್ ಆಕ್ಟನ್ನು ರದ್ದು ಮಾಡುವ ಬಿಲ್ಲು ಕಳೆದ ವಾರ ಅಸೆಂಬ್ಲಿಯಲ್ಲಿ ಚರ್ಚೆಗೆ ಬಂತು. ಶ್ರೀ ಪ್ರಕಾಶರು ಈ ಬಿಲಿನ ಆಗತ್ಯದ ಕುರಿತಾಗಿ ಮೂರು ತಾಸುಗಳ ಕಾಲ ಭಾಷಣಮಾಡಿದರು. ಈ ಆಕ್ಟು ೧೯೦೮ರಲ್ಲಿ ಜ್ಯಾರಿಯಾದುದು. ಈ ಆಕ್ಟಿನಿಂದಾಗಿ ಅನೇಕ ನಿರ್ದೋಷಿಗಳು ಅಸಂಖ್ಯಾತ ಕಷ್ಟಗಳನ್ನು ಸಹಿಸಿದ್ದಾರೆಂದು ಅನೇಕ ದೃಷ್ಟಾಂತಗಳನ್ನು ಕೊಟ್ಟು ಅವರು ವಿವರಿಸಿದರು. ಸರಕಾರದ ಕಡೆಯ ಸದಸ್ಯರು ಈ ಬಿಲ್ಲನ್ನು ತಡೆಯಲು ಪ್ರಯತ್ನಿಸಿದ್ದರು. ಆದರೆ ಕೆಲವು ಲಿಬರಲ್ ಸದಸ್ಯರ ಬೆಂಬಲವು ಕಾಂಗ್ರೆಸ್ಸಿನವರಿಗೆ ದೊರಕಿತು. ಕೊನೆಗೆ ಮತ ತೆಗೆಯಲು, ಬಿಲಿಗೆ ೬೦ ಮತಗಳು ದೊರೆತವು. ಸರಕಾರದ ಪಕ್ಷಕ್ಕೆ ೩೮ ಓಟುಗಳು ದೊರೆತವು. ಶ್ರೀ ಕವಾಸ್ಜಿ ಜಹಾಂಗಿರ್ ಮೊದಲಾದ ಲಿಬರಲ್ ಪಂಗಡದವರು ಕಾಂಗ್ರೆಸ್ ಪಕ್ಷಕ್ಕೆ ನಡೆದುದರಿಂದ, ಕಾಂಗ್ರೆಸ್ಸಿಗೆ ೨ ಓಟುಗಳ ಜಯವು ಲಭಿಸಿರುತ್ತದೆ. ೧೯೦೮ರ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಆಕ್ಟನ್ನು ರದ್ದುಪಡಿಸಬೇಕಾಗಿ ತಂದ ಬಿಲ್ಲು ಮಂಜೂರಾಯಿತು

ಕೊಂಗ್ರೆಸ್ಸ್ ನಗರಕ್ಕೆ ಬೇಕಾದ ನೀರಿನ ಸರಬರಾಯಿ.

ಲಕ್ನೋದಲ್ಲಿ ಜರಗಲಿರುವ ಕಾಂಗ್ರೆಸ್ಸ್ ಅಧಿವೇಶನವು ನಡೆಯುವ ಕಾಂಗ್ರೆಸ್ಸ್ ನಗರಕ್ಕೆ ಬೇಕಾದ ನೀರಿನ ಸರಬರಾಯಿ ಕಾರ್ಯಗಳು ನಗರ ಸಭೆಯವರ ವೆಚ್ಚದಿಂದ ನಡೆಯುವುದೆಂದು ಈ ಮೊದಲು ಗೊತ್ತಾಗಿತ್ತು. ಆದರೆ ನಗರ ಸಭೆಯು ಕಾಂಗ್ರೆಸ್ಸ್ ನಗರಕ್ಕೆ ನೀರನ್ನು ಒದಗಿಸಲು ತಗಲುವ ಖರ್ಚನ್ನು ವಹಿಸಲು, ತಮಗೆ ಇಷ್ಟವಿಲ್ಲವೆಂದು ತಿಳಿಸಿರುತ್ತದೆ. ಈ ಕುರಿತು ಮಾತುಕತೆಗಳು ಈಗ ನಡೆಯುತ್ತವೆ

ಭಾರತೀಯನಿಗೆ ಓಕ್ಸ್‌ಫೋರ್ಡಿನಿಂದ ಗೌರವ.

ಪ್ರೊ. ಎಸ. ರಾಧಾಕೃಷ್ಣನ್ ಇವರು ಹಿಂದೂದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸ್ಥಾನ ಪಡೆದುದಲ್ಲದೆ ಓಕ್ಸ್‌ಫೋರ್ಡ್ ಮತ್ತು ಚಿಕಾಗೊ ವಿಶ್ವವಿದ್ಯಾಲಯಗಳ ಭೂಷಣಕರರಾಗಿದ್ದರು. ಓಕ್ಸ್‌ಫೋರ್ಡ್ ವಿಶ್ವವಿದ್ಯಾಲಯದವರು ಇವರನ್ನು ಪೌರ್ವಾತ್ಯದ ಧರ್ಮಶಾಸ್ತ್ರ ಮತ್ತು ತತ್ವದ ಪ್ರೊಫೆಸರರಾಗಿ ನೇಮಕಮಾಡಿರುವರು

ಕಳೆದ ವಾರ ಅಸೆಂಬ್ಲಿಯಲ್ಲಿ

ಪೇಮೆಂಟ್ ಒಫ್ ವೇಜಸ್ ಬಿಲ್ಲು ಕ್ರಿಮಿನಲ್ ಲೊ ಎಮೆಂಡ್ ಬಿಲ್ಲುಗಳ ಹೊರತು ಮುಖ್ಯ ಬಿಲ್ಲುಗಳಾವವೂ ಚರ್ಚಿಸಲ್ಪಡಲಿಲ್ಲ. ಆದರೆ ಪ್ರಶ್ನಾ ಸಮಯದಲ್ಲಿ ಅಸಂಖ್ಯಾತ ವಿಚಾರಗಳ ಮೇಲೆ ಪ್ರಶ್ನೆಗಳು ಕೇಳಲಾದವು. ಸರಕಾರದಿಂದ ಈ ಪ್ರಶ್ನೆಗಳಿಗೆ ಉತ್ತರಗಳೂ ದೊರಕಿರುತ್ತವೆ. ಶ್ರೀ ಸತ್ಯಮೂರ್ತಿಯವರು ಪ್ರಶ್ನಾ ಸಮಯದ ಹೆಚ್ಚಿನಂಶವನ್ನು ಬಳಕೊಂಡಿದ್ದರು

ಶ್ರೀ ಮೋತಿಲಾಲ ನೆಹರುಗಳವರ ದಿನಾಚರಣೆ.

ಸಮಗ್ರ ಭಾರತದಲ್ಲಿನ ಎಲ್ಲಾ ಪ್ರಾಂತೀಯ ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿಗಳವರಿಂದ ಭರತಖಂಡದ ಸುಪ್ರಸಿದ್ಧ ರಾಷ್ಟ್ರನಾಯಕರಾದ ದಿವಂಗತ ಶ್ರೀ ಪಂಡಿತ ಮೋತಿಲಾಲ ನೆಹರೂರವರ ದಿನಾಚರಣೆಯು ಕಳೆದ ೬ನೇ ತಾರೀಖಿನಲ್ಲಿ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಎಲ್ಲೆಲ್ಲೂ ಶ್ರೀ ನೆಹರುಗಳವರ ಗುಣಕಥನಮಾಡಿಯೂ ಅವರ ರಾಜಕೀಯ ಸಮರದ ವಿಚಾರವಾಗಿಯೂ ಧಾರಾಪೂರ್ವಕ ಭಾಷಣಗಳು ನಡೆದುವು. ಭರತಮಾತೆಯ ಸೇವೆಗಾಗಿ ಸರ್ವಸ್ವವನ್ನು ತ್ಯಾಗಮಾಡಿ ಹಗಲಿರುಳು ದಣಿದ ನೆಹರುಗಳವರಿಗೂ ಅವರ ಕುಟುಂಬಕ್ಕೂ ಮಹಾ ಗೌರವವನ್ನು ಕೊಡಲಾಯಿತು

ಲಂಡನಿನಲ್ಲಿ ಶ್ರೀ ಜವಾಹರಲಾಲರ ಆಗಮನ

ಶ್ರೀ ಜವಾಹರಲಾಲರು ದ್ವಿತೀಯಬಾರಿಗೆ ಜರ್ಮನಿಯ ಬೆಡನ್‌ವಿಲರ್ ಪಟ್ಟಣದಿಂದ ಲಂಡನಿಗೆ ಪ್ರಯಾಣಮಾಡಿರುವರು. ಲಂಡನ್ ನಗರದಲ್ಲಿ ಹತ್ತು ಹನ್ನೆರಡು ದಿವಸಗಳ ಸಮಯವನ್ನು ಕಳೆದರು. ಅನೇಕ ಕಡೆಗಳಲ್ಲಿ ಭರತಖಂಡದ ಸ್ಥಿತಿಯ ಕುರಿತು ಪ್ರಚಾರಭಾಷಣಗಳನ್ನು ಮಾಡಿದರು. ಅಲ್ಲಿನ ಹೌಸ್ ಒಫ್ ಕೊಮನ್ಸಿನಲ್ಲಿ ಕೆಲವು ಪಾರ್ಲಿಮೆಂಟ್ ಸದಸ್ಯರ ಸಭೆಯಲ್ಲಿ ಹಿಂದೂದೇಶದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣ ಮಾಡಿದರು. ಅನೇಕ ಆಂಗ್ಲೇಯ ಮಹಾಪುರುಷರು ಇವರ ಭೇಟಿಮಾಡಿದರು. ಹಿಂದೂದೇಶದ ನವ ರಾಜಶಾಸನದ ಕುರಿತಾಗಿಯೂ, ಇನ್ನೂ ಅನೇಕ ರಾಜಕೀಯ ವಿಚಾರಗಳ ಮೇಲೆ ಸಂಭಾಷಣೆ ನಡೆಯಿಸಿದರು. ಪತ್ರಿಕಾ ಪ್ರತಿನಿಧಿಗಳು ಹಗಲಿರುಳು ಇವರ ಬೆನ್ನು ಹಿಡಿದಿದ್ದರು. ಅನೇಕ ಭಾರತೀಯ ವಿಚಾರಗಳ ಮೇಲೆ ಇವರ ಅಭಿಪ್ರಾಯಗಳನ್ನು ಕೇಳಿ ಅವುಗಳನ್ನು ಆಮೇಲೆ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಕಾಂಗ್ರೆಸ್ಸಿನ ಅಧ್ಯಕ್ಷಪದವಿಯು ದೊರಕಿದುದಕ್ಕಾಗಿ ಇವರಿಗೆ ಅಭಿನಂದನೆಗಳು ದೊರಕಿವೆ

ಜರ್ಮನಿಯ ಮೇಲೆ ಬಹಿಷ್ಕಾರ ಬರುವುದೊ?

ಇತ್ತೀಚೆಗೆ ಜರ್ಮನಿಯವರು ಭರತಖಂಡದ ಕಡೆಗೆ ಬಹಳ ವಕ್ರದೃಷ್ಟಿಯನ್ನು ಹಾಕಿರುವರು. ಈ ಕುರಿತು ವಾರ್ತೆಯು ಹಿಂದಿನ ವಾರದಲ್ಲಿ ಕೊಡಲಾಗಿದೆ. ಕರಾಚಿಯ ವರ್ತಕಸಂಘದವರು ಸಭೆಸೇರಿ, ಹಿಟ್ಲರನ ಈ ವರ್ತನೆಯನ್ನು ಖಂಡಿಸಿ, ಅವನು ತೀವ್ರದಲ್ಲಿಯೇ ತನ್ನ ವರ್ತನೆಯನ್ನು ಬದಲಾಯಿಸದಿದ್ದಲ್ಲಿ ಜರ್ಮನಿಯ ಸಾಮಾನುಗಳ ಮೇಲೆ ಬಹಿಷ್ಕಾರ ಹಾಕಬೇಕಾಗಿ ಠರಾವು ಮಾಡಿರುವರು. ಈ ಠರಾವನ್ನು ಜರ್ಮನಿಯ ವ್ಯಾಪಾರ ಸಂಘಕ್ಕೆ ತಿಳಿಸಲಾಗಿದೆ

ಪೌರ್ವಾತ್ಯದಲ್ಲಿ ಯುದ್ಧ ಮೋಡಗಳು.

ಜಪಾನೀಯರ ಮತ್ತು ಮಂಚೂಕೊ ಸೇನಾಸಮೂಹವು ಮೊಂಗೋಲಿಯಾದ ಗಡಿಗಳಿಗೆ ಮುಂದೊತ್ತಲು ನಿರ್ಧಾರಮಾಡಿರುತ್ತಾರೆ. ಮೊಂಗೋಲಿಯವು ಜಪಾನೀಯರು ವಶೀಕರಿಸಿದ ಮಂಚೂರಿಯಾದ ಹತ್ತಿರವಿರುವ ಪ್ರದೇಶವು. ಇಲ್ಲಿ ರಷ್ಯಾದ ಕೊಮ್ಯೂನಿಸ್ಟರ ಪ್ರೇರಣೆಯು ತುಂಬಾ ಇದೆ. ಈ ದೇಶದಲ್ಲಿ ಯುದ್ಧಸಿದ್ಧತೆಗಳು ನಡೆಯುತ್ತಿವೆ. ಜಪಾನೀಯರ ನಿರ್ಧಾರಕ್ಕೆ ಇದೇ ಕಾರಣವಾಗಿರುತ್ತದೆ. ಇತ್ತೀಚೆಗೆ ಮಂಗೋಲಿಯಾದ ಈ ಕೊಮ್ಯೂನಿಸ್ಟ ಪಂಗಡದವರು ಆರು ಜಪ್ಪಿಗಳನ್ನು ಹಿಡಿದಿರುವರು. ಈ ಭಯದಿಂದ ತುಂಬಾ ಉತ್ಸಾಹ ಭರಿತರಾಗಿ ಇನ್ನೂ ಮುಂದೊತ್ತಲು ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಚೀನೀಯ ಸರಕಾರವು ಇವರ ಅಧಿಕೃತವನ್ನು ತಡೆಯಲು ತಕ್ಕ ವಿಚಾರಣೆಗಳನ್ನು ಮಾಡುತ್ತಿದೆ

ಹಬಸಿ ರಣರಂಗದ ವಾರ್ತೆಗಳು.

ಕೆಂಬಿಯನ್ ಪ್ರಾಂತ್ಯದ ಜಯದಿಂದ ಕಳೆದ ಹೋದ ದೊಡ್ಡ ಪ್ರದೇಶವು ಹಬಸಿಯವರ ವಶವಾಗಿರುತ್ತದೆ. ಇದರಿಂದ ಮುಸೊಲಿಯನ್ನು ಪುನಹ ವಶೀಕರಿಸಲು ಇವರಿಗೆ ಅತಿ ಸುಲಭವಾಗುವುದು. ದಿವಸ ೧೫ರ ಯುದ್ಧದಲ್ಲಿ ಹಬಸಿಯವರು ಕೆಲವಾರು ಸಾವಿರ ಇಟಾಲಿಯನ್ ಸೈನಿಕರನ್ನು ಕೊಂದು ಅವರ ಆಯುಧಗಳು, ಕುದುರೆಗಳು, ಟೆಂಟುಗಳು ಇತ್ಯಾದಿ ಹಬಸಿಗಳು ಇಟೇಲಿಯಾದವರನ್ನು ಹಿಡಿದಿರುವರು. ಇದರ ಈ ವರ್ತನೆಯಿಂದ ಇಟೇಲಿಯಾದವರು ಹತಾಶರಾಗಿರುವರು. ಉತ್ತರರಣರಂಗದಲ್ಲಿ ಎಲ್ಲೆಲ್ಲೂ ಹಬಸಿಗಳು ಈ ಕೃತ್ಯವನ್ನು ಆಚರಿಸುತ್ತಿದ್ದಾರೆ

೧೦ ವರ್ಷಗಳ ನಂತರ ಸಿಕ್ಕಿರುವಳು.

ಇದು ಕಥೆಯಲ್ಲಿ ನಡೆದ ಘಟನೆ. ಹತ್ತು ವರ್ಷಗಳ ಹಿಂದೆ ಅಲ್ಲಿನ ಕಾಂಡಕೋಟ ಹಳ್ಳಿಯಲ್ಲಿ ಓರ್ವ ಹದಿನೆಂಟು ವರ್ಷ ಪ್ರಾಯದ ಓರ್ವ ಬಾಲಕಿಯು ಸಿಂಧೂ ನದಿಯಲ್ಲಿ ಸ್ನಾನಮಾಡುತ್ತಿರುವಾಗ ನೀರಿನ ಸೆಳೆತಕ್ಕೆ ಸಿಕ್ಕಿ ಕಾಣದಾದಳು. ಆಕೆಯ ತಂದೆತಾಯಿಗಳು ಆಕೆಯು ಮೃತಳಾಗಿರುವಳೆಂಬ ಭಾವನೆಯಿಂದ ಸುಮ್ಮನೆ ಕೂತಿದ್ದರು. ಆದರೆ ನೈವದ ಬಲದಿಂದ ಅವಳನ್ನು ಒಬ್ಬ ಬೆಸ್ತರವನು ರಕ್ಷಣೆಮಾಡಿದ್ದನು. ಈತನು ಆಕೆಯನ್ನು ಓರ್ವ ಹಿಂದುವಿಗೆ ಮದುವೆಮಾಡಿ ಕೊಂಡನು. ಗಂಡನೊಂದಿಗೆ ಸುಖವಾಗಿ ಕಾಲಹರಣ ನಡೆಯಿಸುತ್ತಿದ್ದಳು. ಎರಡು ಮಕ್ಕಳು ಜನಿಸಿದ್ದುವು. ಕೊನೆಗೆ ಆಕೆಯ ಗಂಡನು ಮೃತನಾದನು. ವಾರಸುದಾರರು ತನ್ನ ತಂದೆತಾಯಿಗಳನ್ನು ಹುಡುಕುವವಳಾದಳು. ಅವರೊಡನೆ ಪತ್ರವ್ಯವಹಾರ ನಡೆಯಿಸಿದಳು. ಈಗ ಆಕೆಯ ತಂದೆತಾಯಿಂದಿರು ಅವಳು ಅತ್ತೆಯ ಬಳಿಗೆ ಹೋಗಿರುವರು.

ಜಂಜಿಬಾರಿನಲ್ಲಿ ಭಾರತೀಯರ ವಿಷಮ ಸ್ಥಿತಿ.

ನವೀನವಾಗಿ ಜ್ಯಾರಿಯಾದ ಲಂಡ ಎಲಿಯನೇಶನ್ ಆಕ್ಟು, ಲವಂಗ ಬೆಳೆಸುವವರ ರಕ್ಷಾರ್ಥ ಆಕ್ಟು ಎಂಬ ಹೊಸ ಆಕ್ಟುಗಳಿಂದ ಜಂಜಿಬಾರಿನ ಭಾರತೀಯ ವ್ಯಾಪಾರಿಗಳಿಗೆ ಬಹಳ ಹಾನಿ ಉಂಟಾಗಿರುತ್ತದೆ. ಭಾರತೀಯರು ಅಲ್ಲಿನ ಮೂಲನಿವಾಸಿಗಳಿಗೆ ಮತ್ತು ಅರಬರಿಗೆ ಕೊಟ್ಟ ಸಾಲಗಳನ್ನು ವಸೂಲು ಮಾಡುವದೆ ಬಹಳ ಕಷ್ಟವಾಗುತ್ತದೆ. ಸರಕಾರದವರು ಭಾರತೀಯ ಕಡೆಯ ಈ ವರ್ತನೆಯಿಂದ, ಇವರಿಗೆ ರಕ್ಷಿಸುತ್ತಿದ್ದರೂ ಇಂಡಿಯಾ ಸರಕಾರವು ಈ ಸ್ಥಿತಿಯ ಹೊರಗೆ ಭಾರತೀಯ ಹಿತಕ್ಕಾಗಿ ಬ್ರಿಟಿಷ ಸರಕಾರದೊಡನೆ ಬೇಗನೆ ಮಾತುಕತೆಗಳನ್ನು ನಡೆಯಿಸಬೇಕು. ಇಲ್ಲವಾದರೆ ಭಾರತೀಯರಿಗೆ ಅನೇಕ ರೀತಿಗಳಲ್ಲಿ ಹಾನಿಬರುವುದೆಂದು ಆಕ್ಷೇಪದಿಂದ ಹಿಂತಿರುಗಿದ ಓರ್ವ ಮುಖಂಡರು ಹೇಳಿದರು.

ನೋಟೀಸು.

ಈ ಮೂಲಕ ತಿಳಿಯಪಡಿಸುವದೇನಂದರೆ —

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ—

O P No 10/1936

ಅರ್ಜಿದಾರರು

1 ಮೂಲ್ಕಿ ಯಾನೆ ದುರ್ಗಮ್ಮ—ಪಿ ಸುಬ್ಬಣ್ಣ ನರಸಿಂಹ ಪ್ರಭುಗಳ ವಿಧವೆ 2 P ಸರ್ವೋತ್ತಮ ಪ್ರಭು— 3 P ದಾಮೋದರ ಪ್ರಭು —4 P ಉಪೇಂದ್ರ ಪ್ರಭು (ಮೈನರ) 2-3-4ನೆಯವರು P ಸುಬ್ಬಣ್ಣ ನರಸಿಂಹ ಪ್ರಭು ಮಕ್ಕಳು-ಮೈನರ-4ನೇ ಉಪೇಂದ್ರ ಪ್ರಭು ಕ್ಷೇಮಚಿಂತಕಳು 1ನೇ ಅರ್ಜಿದಾರಳು ಉದ್ಯಾವರ ಕಸಬಾ ಬ್ರಹ್ಮಗಿರಿಯಲ್ಲಿ—

1ನೇ ಅರ್ಜಿದಾರಳ ಗಂಡ 2 3-4ನೇ ಅರ್ಜಿದಾರರ ತಂದೆ P ಸುಬ್ಬಣ್ಣ ನರಸಿಂಹ ಪ್ರಭು ತಾ 6—12—35ರಲ್ಲಿ ಸ್ವರ್ಗಸ್ಥನಾಗಿದ್ದಾನೆ — ಅವನು Oriental Government Security Life Assurance Co Ltd ಈ ಕಂಪೆನಿಯಲ್ಲಿ ರೂ 1000ಕ್ಕೆ (Policy No 19774) ಇನ್ಶೂರು ಮಾಡಿದ್ದನು, ಆತನು ಉಡುಪಿ ಬ್ಯಾಂಕಿನಲ್ಲಿ ನಂ 292 (ರೂ 40)ನೆ ಒಂದು ಶೇರ್ ಪಡೆದಿದ್ದ ಮತ್ತು ಕಲ್ಯಾಣಪುರ ಕೋಓಪರೇಟಿವ್ ಎಗ್ರಿಕಲ್ಚರಲ್ ಮತ್ತು ಇಂಡಸ್ಟ್ರಿಯಲ್ ಸೊಸ್ಯಾಟಿಯಲ್ಲಿ ನಂ 99—100 (ರೂ 20) ಎರಡು Shares ಪಡೆದಿದ್ದ. ಆತನಿಗೆ 1ನೇ ಅರ್ಜಿದಾರಳು ಹೆಂಡತಿಯಾಗಿಯೂ 2—3—4ನೇ ಅರ್ಜಿದಾರರು ಗಂಡುಮಕ್ಕಳಾಗಿಯೂ ವಾರೀಸುದಾರರು ವ ಪ್ರತಿನಿಧಿಯರಾಗಿಯೂ ಆತನ ಹಕ್ಕಿನ ಸೊತ್ತುಗಳಿಗೆ ಹಕ್ಕುದಾರರಾಗಿಯೂ ಇದ್ದು ಪೈಕಿ 2ನೇ ಅರ್ಜಿದಾರನು ಈಗ ಕುಟುಂಬದ ಎಜಮಾನನ ಅಧಿಕಾರದಾರನಾಗಿರುತ್ತಾನೆ. ಸದ್ರಿ ಇನ್ಶೂರೆನ್ಸ್ ಹಣ ರೂ 1171-12-0ನ್ನು ಕುಟುಂಬದ ಎಜಮಾನನಾದ 2ನೆ ಅರ್ಜಿದಾರನು ಪಡೆಯುವಂತೆಯೂ, ಸದ್ರಿ ಶೇರ್ಸ್‌ಗಳು 2ನೇ ಅರ್ಜಿದಾರನ ಹೆಸರಲ್ಲಿ ಟ್ರಾನ್ಸ್‌ಫರ್ ಆಗುವಂತೆಯೂ ಸಹಾ ಸಕ್ಸೆಶನ್ ಸರ್ಟಿಫಿಕೇಟು 2ನೇ ಅರ್ಜಿದಾರನಿಗೆ ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಸದ್ರಿ ಅರ್ಜಿ ತಾ 28—2—36ಕ್ಕೆ ಚೌಕಿಗೆ ಇಟ್ಟಿದೆ. ಆಕ್ಷೇಪ ಇದ್ದವರು ಆ ದಿವಸ ಹಗಲು 10 ಗಂಟೆಗೆ ಸದ್ರಿ ಕೋರ್ಟಿಗೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಕೊಳ್ಳತಕ್ಕದು ಎಂಬ ಸಂಗ್ತಿ ಈ ಮೂಲಕ ಪ್ರಕಟಿಸಲಾಗಿದೆ

ಉಡುಪಿ, 7-2-36. } M Vittal Kamath
B. A. B. L.
Vakil for Petitioners.

ಅನುಕ್ರಮಣಿಕೆ.

ಕೋಟೆಗಳು ೨
ಸರಿಯಾದ ಸ್ವಾತಂತ್ರ್ಯ ೪
ಹಣಕ್ಕಾಗಿ ಜಣ ೫
ಪ್ರಪಂಚದ ಶಾಂತಿಭಂಗಕ್ಕೆ ಕೆಲವು ಕಾರಣಗಳು ೭
ವಿವಿಧ ಸಮಾಚಾರಗಳು ೯
ಅಗ್ರಲೇಖ
ಹರಿಜನ ಸೇವಕ ಸಂಘ ೧೦
ಸ್ಫುಟವಿಚಾರಗಳು „
ವರ್ತಮಾನ ಸಂಗ್ರಹ
ಮಂಗಳೂರು, ತಾಲೂಕುಗಳಿಂದ ೧೧
ಅಮೇರಿಕಾದ ಆಡಿಯಲ್ಲಿ ಫಿಲಿಪ್ಪೈನ್ ದ್ವೀಪಗಳು ಅನುಭವಿಸಿದ ಫಲಗಳು ೧೨
ವನಿತಾ ವಿಭಾಗ ೧೩

ಸ್ವದೇಶಾಭಿಮಾನಿ.

ತಾ ೧೪ನೇ ಶುಕ್ರವಾರ ಫೆಬ್ರವರಿ ೧೯೩೬.

ಹರಿಜನ ಸೇವಕಸಂಘ

ಹರಿಜನರ ಅಭ್ಯುದಯ ಸಾಧನೆಗಾಗಿ ಈ ಸಂಘವು ಮಾಡುತ್ತಿರುವ ಕಾರ್ಯಗಳಲ್ಲಿ ಸ್ವಲ್ಪ ಲೋಪದೋಷಗಳು ಇವೆಯೆಂದು ಕಳೆದ ವಾರ ಡಿಲ್ಲಿಯಲ್ಲಿ ಸಂಘದ ಕೇಂದ್ರದಲ್ಲಿ ನಡೆದ ತೃತೀಯ ವಾರ್ಷಿಕ ಕೂಟದ ಕಾರ್ಯಕಲಾಪಗಳಿಂದ ಗೊತ್ತಾಗುತ್ತಿದೆ

ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶ ದೊರೆಯಲು ಇನ್ನು ವಿಳಂಬ ನಡೆದರೆ, ಹರಿಜನರು ಇನ್ನು ಹಿಂದೂಮತದಲ್ಲಿರುವ ತಮ್ಮ ಆಸಕ್ತಿ ಭಕ್ತಿಗಳನ್ನು ಕಳೆದುಕೊಳ್ಳುವರಾಗಿ ಬೆದರಿಕೆ ಇರುವ ಕಾರಣ, ಕೂಡಲೇ ಇವರಿಗೆ ದೇವಾಲಯಗಳಲ್ಲಿ ಪ್ರವೇಶವು ಸಿಗುವಂತೆ ಪ್ರಯತ್ನಗಳಾಗಬೇಕು—ಎಂಬುದು ಒಂದು ನಿರ್ಣಯವು ಹಿಂದೆಯೇ ಇರುತ್ತಾ, ಕಳೆದ ವರ್ಷ ಪ್ರತ್ಯೇಕ ದೇವಾಲಯಗಳೂ ಪ್ರತ್ಯೇಕ ಕೆರೆಬಾವಿಗಳೂ, ಪ್ರತ್ಯೇಕ ಶಾಲೆಗಳೂ ಹರಿಜನರಿಗಾಗಿ ನಿರ್ಮಾಣವಾದುವು, ಹರಿಜನರಿಗೆ ಪ್ರವೇಶ ಕೊಡಲು ಸಿದ್ಧವಿರುವ ದೇವಾಲಯಗಳ ಸಂಖ್ಯೆ ೫೩! ಸಾವಿರದಲ್ಲೊಂದು! ಆದರೆ,—ಮಹಾಜನರ ಮನಸ್ಸು ನೋಯದಂತೆ ಎಷ್ಟು ಸಾಂಗವಾಗಿ ಹರಿಜನರ ಉದ್ಧಾರಕ್ಕಾಗಿ ಕೆಲಸ ನಡೆಸಬಹುದೋ ಅಷ್ಟನ್ನು ಈ ಸಂಘವು ಮಾಡಿರುವುದು ನಿಜ ಹೀಗೆ ಮುಂದರಿದುದೂ ಉಚಿತವೇ ಮಹಾಜನರ ಧನಸಹಾಯದಿಂದ ಬಾಳಬೇಕಾಗುವ ಸಂಸ್ಥೆಯು ಈ ರೀತಿಯಾಗಿ ತಾನೆ, ಮಹಾಜನರ ವಿರೋಧವನ್ನು ಸೆಳೆಯದ ತನ್ನ ಕರ್ತವ್ಯವನ್ನು ಮಾಡಿರುವುದು

ಡಾ। ಅಂಬೇಡ್ಕರರು, ಮತಗೌರವದ ಮಾತಿಗೆ ಏನೂ ಹೇಳಲಿ ಹರಿಜನರಿಗೆ ಮೊದಲಾಗಿ ಬೇಕಾಗಿರುವುದು ಸಾಂಪತ್ತಿಕ ಗೌರವ, ವಿದ್ಯಾಪ್ರವೀಣತೆ, ಸಾಮಾಜಿಕ ಉನ್ನತಿ ಹೊರತು, ಮತ-ಧರ್ಮ-ಬಲವೇ ಅಲ್ಲ ಹರಿಜನರು ದೂರ ದೂರವಾಗಿ ಪ್ರತ್ಯೇಕತೆಯಲ್ಲೇ ಇರುವಾಗ, ಅವರನ್ನು ಉದ್ಧರಿಸುವುದಕ್ಕಾಗಿ ಇನ್ನೂ ಪ್ರತ್ಯೇಕ ದೇವಾಲಯ ಪ್ರತ್ಯೇಕ ಶಾಲೆ, ಪ್ರತ್ಯೇಕ ಬಾವಿಗಳೆಂದೇ ನಿರ್ಮಿಸುತ್ತ ಹೋಗುವುದಾದರೆ, ಅವರು ಇನ್ನೂ ಪ್ರತ್ಯೇಕವಾಗಿಯೇ ಇರುವಂತಾಗಿದೆ ಹರಿಜನರ ಪ್ರತ್ಯೇಕತೆಯನ್ನು ಶಾಸನಗೊಳಿಸುವುದಕ್ಕೆ ಈ ಸಂಘವು ಕೆಲಸಮಾಡಬೇಕಾಗಿಲ್ಲ. ಆಮೇಲೆ ಮಹಾತ್ಮಾಜೀಯವರೇ ಮುಖ್ಯವಾಗಿ ಕೂಡಿಸುವ ಹಣವನ್ನು ಸಾಂಪತ್ತಿಕ, ಶೈಕ್ಷಣಿಕ, ಸಾಮಾಜಿಕ ಪ್ರಗತಿಯು ಹೇಗೆ ಸಾಧ್ಯವಾಗುವುದೆಂಬುದನ್ನು ಪ್ರದರ್ಶಿಸಿ ಪ್ರಚಾರಗೊಳಿಸುವುದಕ್ಕಾಗಿಯೆ ವ್ಯಯಿಸುವುದು ಸಂಘದ ಉದ್ದೇಶಕ್ಕೆ ಸರಿಯಾಗುವುದು. ದೇವಾಲಯ ಪ್ರವೇಶಕ್ಕಿಂತ, ದೇವಾಲಯವಿರುವ ಗ್ರಾಮದಲ್ಲಿ ಗ್ರಾಮಜೀವನದಲ್ಲಿ ಹರಿಜನರಿಗೆ ಯೋಗ್ಯ ಪ್ರವೇಶ ದೊರೆವಂತಾದರೆ ಸದ್ಯಕ್ಕೆ ಯಥೇಷ್ಟವಾಯಿತು!

ಪ್ರಾಂತಿಕ ಸರಕಾರಗಳೂ ಪ್ರತ್ಯೇಕ ಶಾಲೆಗಳನ್ನು, ದುಡ್ಡಿಲ್ಲದ ಕಾಲದಲ್ಲಿ ಹರಿಜನರಿಗಾಗಿಟ್ಟಿರುವುದೂ ಒಂದು ಅಪವ್ಯಯ. ಸರಕಾರದ ಗ್ರೇಂಟು ದೊರೆವ ಶಾಲೆಗಳಲ್ಲೆಲ್ಲ ಹರಿಜನರನ್ನು ತೆಗೆದುಕೊಳ್ಳಬೇಕೆಂಬ ನಿಯಮವಿರುವಾಗ, ಹರಿಜನ ಸೇವಕ ಸಂಘದವರು ಸರಕಾರದ ವಿದ್ಯಾ ಇಲಾಖೆಯೊಡನೆ ಸಮ್ಮಿಳಿತವಾಗಿ ಸಾಧಿಸಿ, ಎಲ್ಲಾ ಶಾಲೆಗಳಲ್ಲೂ ಹರಿಜನರು ಸೇರುವ ಹಾಗೂ, ಹರಿಜನರಿಗೆಂದೇ ಬೇರೆ ಶಾಲೆಗಳು ಇರದ ಹಾಗೂ ಮಾಡಲು ಹಿಂತೆಗೆವುದೇಕೆ? ಅಂತಹ ಶಾಲೆಗಳಲ್ಲಿ ಓದುವ ಹರಿಜನ ವಿದ್ಯಾರ್ಥಿಗಳ ಸಂಬಳ ತೆರಲೂ, ಅಂತಹ ಶಾಲೆಗಳಿಗೆ ಗ್ರೇಂಟು ಕೊಡಲೂ ಹರಿಜನ ಸೇವಕ ಸಂಘವು ಏಕೆ ಮುಂದೆ ಬರಬಾರದು?

ಪ್ರತ್ಯೇಕತೆಯು ಉಳಿದೀತೆಂದಲ್ಲ ಇವರೇ ಒಂದು ಕ್ಷೇತ್ರವನ್ನು ಅಭಿವೃದ್ಧಿಗೆ ತಂದು ಸ್ವತಂತ್ರವಾಗಿ ಜೀವಿಸುವ ಹಾಗೆ, ಗ್ರಾಮಗಳಲ್ಲಿ ಜೀವಿಸುವ ಹಾಗೆ, ಗ್ರಾಮಗಳಲ್ಲಿ ಹರಿಜನ ಕ್ಷೇತ್ರಗಳನ್ನು ಸಹ ಏಕೆ ರಚಿಸಬಾರದ? ಸಹಕಾರಿ ಸಂಘಗಳ ಮೂಲಕವಾಗಿ ಹರಿಜನರಲ್ಲಿ ಪರಸ್ಪರ ಸಹಾಯತತ್ವಗಳು ತಿಳಿದುಬರುವಂತೆ ಸಂಘವು ಸಾಧಿಸಿಯದೆ, ಆದರೆ, ಮೇಲ್ಜಾತಿಯವರೂ ಇಂತಹ ಸಂಘಗಳಲ್ಲಿ ಹರಿಜನರೊಡನೆ ಸೇರಿ ಸಂಘಗಳ ಕಾರ್ಯಗಳನ್ನು ನಡೆಸುತ್ತಿರುವರೇ ಎಂದು ಸಂಘವು ನೋಡಿಕೊಳ್ಳಬೇಕು

ಸಂಘಕ್ಕೆ ಧನವನ್ನೆಲ್ಲ ಕೂಡಿಸಿ ತರುವ ಭಾರವನ್ನು ಮಹಾತ್ಮಾಜೀಯವರೇ ಹೆಚ್ಚಾಗಿ ವಹಿಸಿಕೊಂಡಿರುವುದು ಅನ್ಯಾಯವೂ ಅಸಂಗತವೂ ಎಂದು ತಿಳಿದು, ಒಂದೂವರೆ ಲಕ್ಷ ರೂಪಾಯಿಗಳನ್ನಾದರೂ ಈಗಣ ಆಡಳಿತ ಕಮಿಟಿಯು ತಾನೇ ಕೂಡಿಸಬೇಕಾಗಿ ನಿರ್ಧರಿಸಿಯದೆ ಹಣವೂ ಕೂಡಿ ಬರುವುದು ಕಡಮೆಯಾದಲ್ಲಿ, ಪ್ರತಿ ವರ್ಷವೂ (ಇಷ್ಟು ಕೂಡಿಸಿ, ಇಷ್ಟು ವ್ಯಯಿಸಿ) ಬರೇ ಕೈಗೆ-ಬಾಯಿಗೆ ಎಂಬಂತೆ ಜೀವನ ನಡೆಸಬೇಕಾಗುವುದು ಸಂಘವು ಎಷ್ಟು ಕಾರ್ಯಸಾಧನೆ ಮಾಡುವುದೋ, ಅಷ್ಟು ಹೆಚ್ಚಾಗಿ ಅದರ ಉದ್ದೇಶಗಳ ಪರಿಚಯವು ಜನರಿಗೆ ತಿಳಿದು ಸಹಾಯವೂ ಹೆಚ್ಚಾಗಿ ಸಿಗುವುದು, ಈ ಸಹಾಯವೂ ಸಂಘದ ಕಾರ್ಯಪ್ರಚಾರವೂ ಪರಸ್ಪರವಾಗಿ ಆಧರಿಸಿಕೊಂಡಿವೆ

ಸ್ಫುಟವಿಚಾರಗಳು

ಮತ್ತೊಂದು ಯುದ್ಧ

ಉತ್ತರ ಚೀನ, ಮಂಚೂರಿಯ ಪ್ರಾಂತ್ಯಗಳಲ್ಲಿ ಎಷ್ಟೋ ಕಾಲದಿಂದ ಆಗಾಗ ಕಾದಾಟಗಳಾದ ವಾರ್ತೆಗಳು ಬರುತ್ತಲೇ ಇವೆ ಚೀನದ ಉತ್ತರಕ್ಕೆ ಮಂಚೂರಿಯಕ್ಕೆ ಒತ್ತಾಗಿ ಇರುವ ಮಂಗೋಲಿಯ ರಾಜ್ಯದಲ್ಲಿ ಅವ್ಯವಸ್ಥೆಯು ಟಾಗಿರುವ ಪ್ರಯುಕ್ತ, ಮಂಗೋಲಿಯದ ಬೆಂಬಲಕ್ಕಿರುವ ರಷ್ಯವೂ, ಮಂಚೂರಿಯದ ಬೆಂಬಲಕ್ಕಿರುವ ಜಪಾನೂ ತಾವೂ ಒಂದು ಕೈ ನೋಡುವುವೊ ಎನ್ನುವಂತಿದೆ ಚೀನದಲ್ಲಿ ಹಿಮಗಡ್ಡೆ ಮುಚ್ಚದ ತೀರವೂ ಜಪಾನಿಗೆ ಬೇಕಾಗಿದೆ, ಆಸ್ಯದಲ್ಲಿ ಜಪಾನಿನ ಪ್ರಾಬಲ್ಯವು ಹೆಚ್ಚುತ್ತಿರುವಾಗ ರಷ್ಯವೂ ಅಲ್ಲೇ ತನ್ನ ಪ್ರಾಬಲ್ಯವನ್ನೂ ಮೆರೆಯಿಸಬೇಕೆಂದಿದೆ ಜಪಾನಿನ ಜನಸಂಖ್ಯೆ ಹೆಚ್ಚುತ್ತಿದೆ, ಗಿರಾಕಿಗಳು ಹೆಚ್ಚಾಗಬೇಕಾಗಿದೆ, ಅದಕ್ಕಾಗಿ ಚೀನದಲ್ಲಿ ಆಗುವಷ್ಟು ಹೆಚ್ಚು ವಿಸ್ತೀರ್ಣದ ಮೇಲೆ ಅಧಿಕಾರ ನಡೆಸಲು ಸೌಕರ್ಯಗಳು ದೊರೆಯಬೇಕಾಗಿವೆ. ಇಷ್ಟು ಭಾವನೆಗಳು ಅವರವರ ಮನಸ್ಸಿನಲ್ಲಿ ಹುದುಗಿದ್ದ ಕಾರಣ, ಅಲ್ಲಿ ಇಲ್ಲಿ ಕೈಕದನಗಳಾದುವು ಎಂದ ಕೂಡಲೆ, ಇನ್ನು ಬಹಿರಂಗವಾಗಿ ಮಹಾ ಸಮಾರೋಹದಿಂದ ಯುದ್ಧ ನಡೆಯಲು ಹೆಚ್ಚಿನ ವಿಳಂಬವುಂಟಾಗದು ಎನ್ನುವಂತಿದೆ ಜಪಾನು ರಷ್ಯಗಳ ಸೇನೆಗಳು ತುಂಬ ನಡೆದಿವೆ ಯುದ್ಧವಾದರೆ ಇವೆರಡೇ ರಾಜ್ಯಗಳು ಮಾತ್ರ ಈ ರಣರಂಗದಲ್ಲಿ ನಲಿಯುವುವೆಂದು ನಂಬಕೂಡದು ಚೀನವು ಈಗಲೆ ಬೆದರಿರುವುದು ಎಷ್ಟೋ ಭಾಗದಲ್ಲಿನ ಅಧಿಕಾರಿಗಳು ಚೀನದಲ್ಲಿ ಪರಿಷ್ಟ ಸರಕಾರಕ್ಕೆ ಭಕ್ತಿಯುತರಾಗುವಂತೆ ತೋರಿಲ್ಲ

ದೇಶಭಾಷೆಗಳು

ಸರ್ವತ್ರವೂ ಶಿಕ್ಷಣದ ಭಾಷೆಗಳಾಗಿ ಈ ದೇಶದಲ್ಲಿ ವ್ಯವಸ್ಥೆ ಹೊಂದಬೇಕು ಎಂದು ಕಲ್ಕತ್ತದಲ್ಲಿ ಶಿಕ್ಷಣ ಸಪ್ತಾಹವಾದಾಗ ಸರ್ ರೊಸ್ ಮಸೂದ್ ಎಂಬವರು ಭಾಷಣಮಾಡಿದರು, ಮರುದಿನದ ಭಾಷಣದಲ್ಲಿ ಕವೀಂದ್ರ ಠಾಕೂರರು ಅದೇ ಸಲಹೆಯನ್ನು ಪುಷ್ಟೀಕರಿಸಿ ತೀರ ನಾಚುಗೆಗೇಡಾಗಿ ಇಂದಿಗೆ ಇಡೀ ಪ್ರಪಂಚದಲ್ಲಿನ ರಾಷ್ಟ್ರಗಳಲ್ಲೆಲ್ಲ ಭಾರತವರ್ಷದ ಶಿಕ್ಷಣ ಪದ್ಧತಿಯೊಂದು ಉಳಿದಿದೆ ಎಂದು ನುಡಿದರು ದೇಶಭಾಷೆಗಳಲ್ಲೇ ಶಿಕ್ಷಣ ಕೊಡಬೇಕೆಂಬ ದನ್ನ ತಿಳಿಯದವರಿಲ್ಲ ಕೆಲವರಿಗೆ ಹಾಗೆ ಶಿಕ್ಷಣ ಕೊಡಲು ಧೈರ್ಯ ಸಾಲದು, ಮಿಕ್ಕವರಿಗೆ ಅನುಕೂಲತೆಯಿಲ್ಲ ಇಂಗ್ಲಿಷಿನ ಮೂಲಕವಾಗಿಯೆ ಯಾವ ತತ್ವ ಶಿಕ್ಷಣ ಸಾಗಿಸಲು, ವ್ಯಯವೂ ಸಮಯವೂ ಅಧಿಕವಾಗಿಯೆ ಇವೆ, ಅಷ್ಟು ಅಧಿಕ ಪರಿಶ್ರಮದಿಂದಾದರೂ ದೊರೆತಿರುವ ಗುಣವು ಅತ್ಯಲ್ಪವೆನ್ನಬಹುದು ಸೆಕೆಂಡರಿ ಶಾಲೆಗಳಲ್ಲಿ ಸಹ ಇಂಗ್ಲಿಷನ್ನೆ ಶಿಕ್ಷಣದ ಭಾಷೆಯನ್ನಾಗಿ ಮಾಡಿಕೊಂಡಿರುವರು, ಹೈದರಾಬಾದಿನ ನಿಜಾಮರ ವಿಶ್ವವಿದ್ಯಾಲಯದಲ್ಲಿ ಮಾತ್ರ, ಎಲ್ಲವೂ ಅತ್ಯುಚ್ಚ ಪರೀಕ್ಷೆಯ ತನಕವೂ ದೇಶಭಾಷೆಯಲ್ಲಿಯೆ ಸಾಗುತ್ತಲಿದೆ ನೂರರಲ್ಲಿ ಎಷ್ಟು ಮಂದಿ ಹಿರಿಯರು ತಾವೆ ದೇಶಭಾಷೆಯಲ್ಲಿ ಉಚ್ಚ ತರಗತಿಗಳಲ್ಲಿ ಶಿಕ್ಷಣ ಸಂದರೆ ಮೆಚ್ಚುವರ? ಈ ವಿಷಯಗಳನ್ನು ಬೋಧಿಸುವುದಕ್ಕೆ ಅವಶ್ಯವಾಗಿರುವ ಪುಸ್ತಕಗಳಾದರೂ ದೇಶಭಾಷೆಗಳಲ್ಲಿ ಇನ್ನೂ ಏಕೆ ಬೇಕಾಗಿರುವಷ್ಟು ಹೆಚ್ಚು ದೊರೆಯುತ್ತಿಲ್ಲ? ಶಿಕ್ಷಣ ಇಲಾಖಾಧಿಕಾರಿಗಳಿಗಂತೂ ಇದೊಂದು ಅವಾಂತರದಂತೆ ಕಾಣುತ್ತಿದೆಯೇಕೆ? ಇಡೀ ದೇಶವನ್ನೆ ಹಲವು ಭಾಷಾನ್ವಯ ಪ್ರಪಂಚಗಳಲ್ಲಿ ವಿಭಾಗಿಸಿಕೊಂಡು ಅಂತಹ ಪ್ರಾಂತ್ಯಕೊಂದು ಭಾಷೆಯನ್ನೆ ಮೂಲವಾಗಿಟ್ಟುಕೊಳ್ಳುವ ಒಂದು ವಿಶ್ವ ವಿದ್ಯಾಲಯವನ್ನು ಒದಗಿಸಿ ಕೊಟ್ಟರೆ ತಗಬಹುದೆಂದು ಸರ್ ಮಸೂದ್‌ರವರ ಸೂಚನೆ ಬಲು ಕಷ್ಟಸಾಧ್ಯ

ಇಟೆಲಿಗೆ ತಡೆ

ಯುದ್ಧವು ತಡೆಯಬೇಕಾದರೆ, ಪೆಟ್ರೋಲ್ (ಎಣ್ಣೆ)ನ್ನು ಇಟೆಲಿಗೆ ಸಿಗದಂತೆ ತಡೆಯಬೇಕೆನ್ನುವ ಸೂಚನೆಯದೆ ಜನಾಂಗ ಸಂಘದಲ್ಲಿ ಸೇರಿರುವ ರಾಷ್ಟ್ರಗಳಲ್ಲಿ, ಈಗ ನಡೆವ ಈ ಯುದ್ಧವು ಸಲ್ಲದೆಂದು ಅಭಿಪ್ರಾಯ ಪಟ್ಟು ಇಟಲಿಯೇ ಯುದ್ಧಕಾರಕನೆಂದು ಯಾರು ದೂರಿದರೋ ಅವರೇ ಈ ವಿಷಯವನ್ನು ಪರ್ಯಾಲೋಚಿಸಬೇಕಾಗಿ ಎರಡು ತಿಂಗಳಿಂದಲೂ ಸಭೆಗಳು ಜರಗುತ್ತಿವೆ ಎಣ್ಣೆ ಸಿಕ್ಕದಿರುವಲ್ಲಿ ಇಟೆಲಿಯ ಕಾದಾಟವು ಮುಗಿಯುವುದು ಎಂದೇ ಇವರು ನಂಬಿರುವರು ಕೆಲವರು, ಇನ್ನೂ ಎಂಟು ತಿಂಗಳ ಯುದ್ಧಕ್ಕೆ ಬೇಕಾಗುವಷ್ಟು ಎಣ್ಣೆ ಇಟೆಲಿಯ ಬಳಿಯಲ್ಲಿದೆ ಎನ್ನುವರು ಎಣ್ಣೆಯ ಬದಲಾಗಿ ಇತರ ಯಾವ ಜೀನಸನ್ನೂ ಪ್ರಯೋಗಿಸಲು ಇಟೆಲಿಗೆ ಯಂತ್ರ ಸಹಾಯವೂ ಸನ್ನಾಹವೂ ಇಲ್ಲ ಇನ್ನು ಈ ಪ್ರತಿಬಂಧಕ ಮಾಡುವುದನ್ನೆ ಉಳಿದಿದೆ ಮಹಾ ಮಹಾ ರಾಷ್ಟ್ರಗಳು ಯಾವುದೊಂದು ತೀರ್ಮಾನವನ್ನೂ ಹುಡುಕಿ ಮಾಡಲಾರದರವು ನಿಜ, ಆದರೆ, ಕ್ಷಣ ಕ್ಷಣವೂ ಏಬಿಸೀನಿಯದ ಎದೆಯ ನೆತ್ತರನ್ನು ಬೊಂಬು ಚೆಲ್ಲಿ ಹರಿಯುವಂತೆ ಮಾಡುತ್ತಿರುವ ಇಟೆಲಿಯ ಕೈಕಡೆಯಲು ಕೂಲಂಕಷ ವಿಧಾನಗಳನ್ನೆ ಕೈಕೊಂಡು ಕಾಲಹರಣ ಮಾಡುವುದೇ ಜನಾಂಗ ಸಂಘದ ನಿಯಮಗಳಲ್ಲೊಂದಾದರೆ,—ಅಂತಹ ತಡವಾಗಿ ಹಾಕಲಾಗುವ ತಡೆಯಿಂದ ಪ್ರಯೋಜನವೇನು?

ವಿಧುರರು

ವಿಧವೆಯರನ್ನೆ ಮಾತ್ರ ವಿವಾಹವಾಗತಕ್ಕದೆಂಬ ವಿಧಿಯುಳ್ಳ ಒಂದು ಮಸೂದೆಯನ್ನು ಎಸೆಂಬ್ಲಿಯ ಮುಂದೆ ಶ್ರೀ ಸೂರ್ಯಕುಮಾರ ಸೋಮ ಎಂಬ ಮೆಂಬರರು ತಂದಿಟ್ಟಿರುವರು ವಿಧವೆಯರು ವಿಧುರರನ್ನಾಗಲಿ, ಬ್ರಹ್ಮಚಾರಿಗಳನ್ನೆ ಆಗಲಿ ವಿವಾಹವಾಗಬಹುದು ವಿಧವೆಯರ ಅತಿ ಶೋಚನೀಯ ಸ್ಥಿತಿಯನ್ನು ಕಂಡು, ಇತರ ಯಾವ ಬಗೆಯ ಸುಧಾರಣೋಪಾಯಗಳನ್ನೂ ಕಾಣದೆ, ಈ ಮಸೂದೆಗೆ ಶ್ರೀಯುತರು ಕೈಯಿಕ್ಕಿದರು ವಿಧವೆಯ ಪುನರ್ವಿವಾಹವನ್ನು ಕುರಿತಾದ ಕಾನೂನು ಇದೆಯಾದರೂ, ಪುನರ್ವಿವಾಹಗಳು ಸಾಕಷ್ಟು ಹೆಚ್ಚಾಗಿ ಬಳಕೆಗೆ ಬಂದಿಲ್ಲ ವಿಧವಾವಿವಾಹಗಳನ್ನೇ ರೂಢಿಗೆ ತರಲು ಇನ್ನು ಪ್ರಯತ್ನಗಳಾಗಬೇಕು' ಎಂದು ಅವರ ನಿರ್ಧಾರವಿದೆ ಹಿಂದಿನ ಗಳೇ ಎಂದೇನು, ಯಾವ ವತದ ವಿಧವೆಯರೇ ಆದರೂ, ವಿವಾಹಿತೆಯರಾಗಿ ಸುಖವಾಗಿ ಬಾಳಬೇಕೆಂಬುದೂ ನಿಜ, ಅದನ್ನು ಇತರರು ಏತಕ್ಕೆ ಆಕ್ಷೇಪಿಸಬೇಕು? ಆದರೆ, ಅವರಿಗೆ ಸುಖವಾಗಲೆಂದು, ತಾವು ದುಃಖ ಅಥವಾ ಸಂಕೋಚತೆ ಹೊಂದುವ ಹಾಗೆ ವಿಧುರರು ಮಾಡಿರುವ ಅಪರಾಧವೇನು? ಕನ್ಯೆಯರು ವಿಧುರರನ್ನಾಗಲಿ ಬ್ರಹ್ಮಚಾರಿಗಳನ್ನಾಗಲಿ ಆರಿಸಿಕೊಳ್ಳುವಂತಾಗಲಿ, ವಿಧುರರು ಕನ್ಯೆಯರನ್ನಾಗಲಿ, ವಿಧವೆಯರನ್ನಾಗಲಿ ಆರಿಸಿಕೊಂಡರಾಗದೆ? ಈ ಕಡ್ಡಾಯ ವಿಧವಾವಿವಾಹವೇಕೆ? ಜನಮತವು ಈ ಬಗೆಯ ವ್ಯಕ್ತಿಸ್ವಾತಂತ್ರ್ಯವನ್ನು ಸಂಕೋಚಗೊಳಿಸುವುದಕ್ಕೆ ಎಂದೂ ಸಹಾಯವಾಗಲಾರದ ಕಾರಣವೊ, ಸಮಾಜ ಸುಧಾರಕರು ಜನಮತವನ್ನು ತಿದ್ದಿ ತರಲು ಸಾಧ್ಯವಾಗದ ಕೂಡಲೆ ಕಾನೂನು ಮಾಡಿಸಿಕೊಳ್ಳಲು ತವಕಪಡುವ ಕಾರಣವೊ,—ಈ ಮಸೂದೆಯು ಕಾನೂನಾಗಲಾರದೆಂದೇ ನಂಬಬೇಕಾಗಿದೆ

ಆಹಾರದ ಶುದ್ಧತೆ

ಈ ವಿಚಾರದಲ್ಲಿ ಮ್ಯುನಿಸಿಪಾಲಿಟಿಗಳು ಬಹಳ ಪರಿಶ್ರಮ ತೆಗೆದುಕೊಳ್ಳುತ್ತಿರುವಂತೆ ಸರಕಾರದ ರಿಪೋರ್ಟು ಸೂಚಿಸುತ್ತಿದೆ ಸರಕಾರದ ಆಹಾರ ವಸ್ತು ಪರೀಕ್ಷಕರಿಗೆ ಕಳೆದ ವರ್ಷ ೩೯೭೬ 'ಸ್ಯಾಂಪಲ್'ಗಳನ್ನು ಮ್ಯುನಿಸಿಪಾಲಿಟಿಗಳು ಕಳಿಸಿದುವು ಇವುಗಳಲ್ಲಿ ಸುಮಾರು ಅರೆವಾಸಿ ವಸ್ತುಗಳಲ್ಲಿ ಬೆರೆಸಿದ ಕಶ್ಮಲ ವಸ್ತುಗಳಿದ್ದುವು ಮುಖ್ಯವಾಗಿ ಬೆರಸಿ ಹಾಳುಮಾಡಿರುವ ವಸ್ತುಗಳೆಂದರೆ, ಹಾಲು ಮತ್ತು ತುಪ್ಪ ಸರ್ವರೂ ದೇಹಕ್ಕೆ ಹಿತಕರವಾಗಲೆಂದೂ ಅತ್ಯಾವಶ್ಯಕ ವಸ್ತುಗಳೆಂದೂ ಯಾವುವನ್ನು ತರಿಸಿಕೊಳ್ಳುವರೋ ಅವುಗಳೇ ಈ ರೀತಿಯಾಗಿ ರಕ್ಷ್ಯಪದಾರ್ಥಗಳಿಂದ ಹಾಳಾಗಿಯೆ ಬೆರೆತು ಮಾರಲು ಬರುವುವಾದರೆ, ವ್ಯಾಪಾರಿಗಳಲ್ಲಿ ವ್ಯಾಪಾರ ಧರ್ಮವೆಂಬುದು ಎಲ್ಲಿ ಉಳಿದಿದೆ ಎಂದಾಯಿತು ಇಂತಹ ೧೫೧೧ ವ್ಯಾಪಾರಿಯರಿಗೆ ಜುಲುಮಾನೆ ವಿಧಿಸಲಾಗಿದೆ, ಆ ಜುಲುಮಾನೆಯ ಹಣದಿಂದ ಸರಕಾರದ ಖಜಾನೆಗೆ ಈ ಇಲಾಖೆಯ ಖರ್ಚು ಹುಟ್ಟಿಲ್ಲ ಪದೇ ಪದೇ ಆಹಾರಪದಾರ್ಥಗಳನ್ನು ಕೆಡಿಸಿ ಮಾರುವವರಿಗೆ ಅತಿ ಕಠಿನ ಶಿಕ್ಷೆಯಾಗದಿದ್ದರೆ, ದಂಡನೆಯ ಹಣವನ್ನೂ ಮಾರುವ ಬೆಲೆಗೆ ಕೂಡಿಸಿ ಮಾರಿ, ಪತ್ತೆಯಾಗದಿರುವಾಗ ನಫೆಗಳಿಸುವವರಿರಬಹುದಲ್ಲವೆ?

ಮಂಗಳೂರು.

ಶ್ರೀ ಕೃಷ್ಣ ರೆಸ್ಟೋರೆಂಟ್.

ಇದೇ ಕಳೆದ ತಾ. ೯-೨-೩೬ನೇ ರವಿವಾರ ಇದರ ವಾರ್ಷಿಕೋತ್ಸವ ಸಮಾರಂಭವು ಸ್ಯೆಂಟ್ ಎಲೋಸಿಯಸ್ ಕೊಲೆಜಿನ ಪ್ರೊಫೆಸರರಾದ ಶ್ರೀ. ಭುಜಂಗರಾವ್ ಬಿ. ಎ., ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸಂಚಾಲಕರಾದ ಶ್ರೀ. ಎ. ಪದ್ಮನಾಭರಾಯರು ಅತಿಥಿಗಳಿಗೆ ಉತ್ತಮ ತರಗತಿಯ ಸತ್ಕಾರಕೂಟವನ್ನೇರ್ಪಡಿಸಿದ ಮೇಲೆ ಶ್ರೀ. ಶಂಕರ ಅಯ್ಯರವರು ರೆಸ್ಟೋರೆಂಟಿನ ಶ್ರೇಯೋಭಿಲಾಷೆಯನ್ನು ಕೋರಿ ಮಾತಾಡಿದರು. ಆ ಮೇಲೆ ಶ್ರೀಗಳಾದ ಪ್ರೊಫೆಸರ್ ಕೃಷ್ಣಮೂರ್ತಿ ಬಿ. ಎ. (ಆನರ್ಸ್), ಟಿ. ಶೀನಪ್ಪ ಹೆಗ್ಗಡೆ, ಕಯ್ಯಾರ ಕಿಂಞಣ್ಣ ರೈ ವಿದ್ವಾನ್, ಸರ್ವೋತ್ತಮ ಶೆಟ್ಟಿ ಇವರೇ ಮೊದಲಾದ ಮಹನೀಯರು ಅಭ್ಯುದಯವನ್ನು ಹಾರೈಸಿ ಭಾಷಣವಿತ್ತರು. ಬ್ಯಾಡ್ಮಿಂಟನ್, ಟೆನ್ನಿಸ್ ಪಂದ್ಯಾಟಗಳಲ್ಲಿ ವಿಜಯಿಗಳಾದವರಿಗೆ ರಜತಪದಕ ಮತ್ತು ಇತರ ಬಹುಮಾನಗಳನ್ನು ಹಂಚಿ ಅಧ್ಯಕ್ಷರು ತಮ್ಮ ಅಮೂಲ್ಯ ಭಾಷಣವನ್ನಿತ್ತರು. ಅನಂತರ "ಗ್ರೂಪ್ ಫೋಟೋ" ತೆಗೆಯಲಾಯಿತು.

ಭಾಷಣ.

ಇದೇ ತಿಂಗಳ ೩೦ ೧೬ನೇ ಆದಿತ್ಯವಾರ ಸಾಯಂಕಾಲ ಗಂಟೆ ೬ಕ್ಕೆ ಇಲ್ಲಿಯ ಅಳಕೆ ಸ್ಕೂಲಿನ ಪ ಮಂಗಳೂರು ಸಿಟಿ ಆರ್ಯಸಮಾಜ ಮಂದಿರದಲ್ಲಿ "ಜೀವಾತ್ಮ ಮತ್ತು ಪರಮಾತ್ಮ" ಎಂಬ ಕುರಿತು ಭಾಷಣವಿದೆ. ಸರ್ವರ ಸಹಕರಿಸಬೇಕಾಗಿ ವಿನಂತಿ.

ಭ್ರಾತೃಸಮಿತಿಯ ವರ್ಧಂತಿ

ಭ್ರಾತೃಸಮಿತಿಯ ವರ್ಧಂತ್ಯುತ್ಸವವು ೧೯೩೬ನೇ ಇಸವಿ ಫೆಬ್ರುವರಿ ೭ರ ೯ರಲ್ಲಿ ಕೊಡಿಯಾಲ ಗುಡ್ಡೆಯಲ್ಲಿ ಡಾ. ಗಿರಿಧರರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿಗಳ [illegible] ವರದಿಯನ್ನು ಓದಿದೇಲೆ ಬಳಿಕ ಶ್ರೀ. ಶಂಕರ ಅಯ್ಯರ್, ಶ್ರೀ. ಬಿ. ಎಸ್. ನಾರಾಯಣ ರಾವ್ [illegible] ಭಾಷಣಗಳಿದ್ದವು. [illegible] ಬೆಡ್ಮಿಂಟನ್ ಪಂದ್ಯಾಟದಲ್ಲಿ ಭಾಗವಹಿಸಿದವರಿಗೆ ಬಹುಮಾನಗಳು ಹಂಚಲ್ಪಟ್ಟವು. ಡಾ. ಗಿರಿಧರರಾಯರ ಭಾಷಣದ ನಂತರ ವಂದನಾರ್ಪಣೆಯೊಡನೆ ಸಭೆಯು ಮುಕ್ತಾಯವಾಯಿತು.

ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿ ಮಂಗಳೂರು

ಶಿವರಾತ್ರಿಯ ಉತ್ಸವವು ಗೋಕರ್ಣ ಕ್ಷೇತ್ರದಲ್ಲಿ [illegible] ಫೆಬ್ರುವರಿ ತಾರೀಕು ೨೧ರಲ್ಲಿ ಬರುವುದು. ಫೆಬ್ರುವರಿ ತಾರೀಕು ೨೩ರಲ್ಲಿ ಸಮುದ್ರಸ್ನಾನವೂ ೨೪ರಲ್ಲಿ ರಥೋತ್ಸವ ಸಮಾರಂಭವೂ ನೆರವೇರುವುದು. ತತ್ಸಂಬಂಧ ಮಂಗಳೂರಿನಿಂದ ಬೊಂಬಾಯಿಗೂ ಬೊಂಬಾಯಿಯಿಂದ ಮಂಗಳೂರಿಗೂ ಹೋಗಿ ಬರುವ ದಿವಸಗಳನ್ನು ಕೆಳಗೆ ಕಾಣಿಸಿಯದೆ.

ಮಂಗಳೂರಿನಿಂದ ಫೆಬ್ರುವರಿ ತಾ ೧೧ನೇ ಮಂಗಳವಾರ ಮತ್ತು ತಾ ೧೮ನೇ ಮಂಗಳವಾರ, ಬೊಂಬಾಯಿಯಿಂದ ಫೆಬ್ರುವರಿ ತಾ ೭ನೇ ಶುಕ್ರವಾರ ಮತ್ತು ತಾ ೧೪ನೇ ಶುಕ್ರವಾರ ಈ ದಿವಸಗಳಲ್ಲಿ ಹೊರಡುವುದು. ಮಂಗಳೂರಿನಿಂದ ಅಲ್ಲಿಗೆ ಹೋಗಲು ೧ನೇ ಕ್ಲಾಸಿಗೆ ರೂ ೧೧, ೨ನೇ ಕ್ಲಾಸಿಗೆ ರೂ ೬, ೩ನೇ ಕ್ಲಾಸಿಗೆ ರೂ. ೪-೮-೦ ಮತ್ತು ೪ನೇ ಕ್ಲಾಸಿಗೆ ರಿಟರ್ನ್ ಟಿಕೇಟಿಗೆ ರೂ ೬-೮-೦. ಆದರೆ ಅವರು ಮಾರ್ಚ ೫ನೇ ತಾರೀಕಿನೊಳಗೆ ಹಿಂತಿರುಗಿ ಬರಬೇಕು.

ಕಾಶಿ ಕರ್ನಾಟಕ ಎಸೋಸಿಯೇಶನ್

ನಮ್ಮ ಕನ್ನಡ ನಾಡಿನ ಹಲವು ಭಾಗಗಳಿಂದ ಕಾಶಿಯ ವಿಶ್ವವಿದ್ಯಾನಿಲಯದಲ್ಲಿ ಓದಿಗಾಗಿ ಹೋಗಿರುವ, ಹಲವು ಮಂದಿ ಭಾಷಾಭಿಮಾನಿಗಳಾದ ಕರ್ನಾಟಕ ವಿದ್ಯಾರ್ಥಿಗಳ ಸಮಾವೇಶವಿರುವ ಕಾಶೀ ಕರ್ನಾಟಕ ಎಸೋಸಿಯೇಶನಿನ ವಾರ್ಷಿಕ ಮಹೋತ್ಸವವು, ಶ್ರೀಮಾನ್ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಉತ್ಸಾಹಪೂರ್ವಕವಾಗಿ ನಡೆಯಿತು. ಈ ಸಂಘದ ಕಾರ್ಯದರ್ಶಿಗಳಾದ ಆ ವಿಶ್ವವಿದ್ಯಾಲಯದ ಕಾಲೇಜಿನ ಪ್ರೊಫೆಸರ್ ದಾಸಣ್ಣಾಚಾರ್ಯರ ಕಾರ್ಯದಕ್ಷತೆಯಿಂದ ಈ ಸಂಘವು ಇನ್ನಷ್ಟು ಹುರುಪಿನಿಂದ ಮುನ್ನಡೆದು ಕೃತಕಾರ್ಯವಾದೀತೆಂದು ಹಾರೈಕೆ.

ಡಿ. ಬೋರ್ಡಿನ ಕಡೆಯಿಂದ ಸೆನೆಟಿಗೆ ಡಾ. ಶಿವಲಪಟ್ಟರು ಚುನಾಯಿಸಲ್ಪಟ್ಟಿರುವರು.

ಚುನಾವಣೆ.

ಸಾರ್ವತ್ರಿಕ ಸರ್ಕಲಿನ ಡಿ. ಬೋ. ಮೆಂಬರಿಗೆಯ ಸಂಬಂಧ ನೋಮಿನೇಶನ್ ಪತ್ರಗಳನ್ನು ಸ್ವೀಕರಿಸುವ ದಿನವಾದ ಕಳೆದ ೩ನೇ ಶನಿವಾರ್ದ ದಿವಾನ್ ಬಹದ್ದೂರ್ ಬಿ. ಮಹಾಬಲ ಹೆಗ್ಗಡೆಯವರೊಬ್ಬರೇ ಆ ಪತ್ರವನ್ನು ದಾಖಲು ಮಾಡುವಂತಾದುದರಿಂದ, ಅವರು ಯಾವ ಪ್ರತಿಸ್ಪರ್ಧಿಗಳೂ ಇಲ್ಲದೆ ಆ ಸರ್ಕಲಿನ ಮೆಂಬರರಾಗಿ ಆರಿಸಿ ಬಂದಿರುವರು. ಇನ್ನು ಈ ತಿಂಗಳ ಅಂತ್ಯದೊಳಗಾಗಿ ಡಿ. ಬೋ. ಪ್ರೆಸಿಡೆಂಟರ ಮತ್ತು ವೈಸ್ ಪ್ರೆಸಿಡೆಂಟರ ಚುನಾವಣೆಯಾದೀತೆಂದು ನಿರೀಕ್ಷಿಸಬಹುದು.

ಅನೇಕ ವರ್ಷಗಳ ತನಕ ಮಂಗಳೂರಿನ ನಗರಸಭೆಯ ಅಧ್ಯಕ್ಷರಾಗಿ [illegible] ಶ್ರೀ ನೆಟ್ಟಾರು ವೆಂಕಟ [illegible] ಮಂಗಳೂರಿನ [illegible] ಅಧ್ಯಕ್ಷರಾಗಿ [illegible]

ಸೆಂಟಲೆಂಡ್ ಪೇಟೆಯ ಸ್ಪೋರ್ಟ್ಸ್ ಎಸೋಸಿಯೇಶನ್

ಇದರ ವಾರ್ಷಿಕೋತ್ಸವವು ಕಳೆದ [illegible] ಎಂ ದಾಮೋದರ [illegible] (ಸಬ್ ರಿಜಿಸ್ಟ್ರಾರ್) ಇವರ ಅಧ್ಯಕ್ಷತೆಯಲ್ಲಿ [illegible] ಸಂಘದ ಕಾರ್ಯದರ್ಶಿ [illegible] ಶ್ರೀ [illegible] ಓದಿದ ಬಳಿಕ [illegible] ಪಂದ್ಯಾಟಗಳಲ್ಲಿ [illegible] ಬಹುಮಾನಗಳ [illegible] ಶ್ರೀ [illegible] ನ್ಯಾಶನಲ್ ಮತ್ತು ಎ. [illegible] ಸಂಘದ ಶ್ರೇಯೋಭಿವೃದ್ಧಿಯನ್ನು ಕೋರಿ ಭಾಷಣ ಮಾಡಿದ ಮೇಲೆ ಗ್ರೂಪ್ ಫೋಟೋದೊಂದಿಗೆ ಸಭೆಯು ಮುಕ್ತಾಯವಾಯಿತು.

ತಾಲೂಕುಗಳಿಂದ

ಹೊಸಪೇಟೆ — ತಾ ೨೬-೧-೩೬ನೇ ದಿನ ಇಲ್ಲಿ ಸಂಪೂರ್ಣ ಸ್ವಾತಂತ್ರ್ಯ ದಿನಾಚರಣೆ ಬಗ್ಗೆ ತಾರೀಕು ೧-೨-೩೬ನೇ ಶನಿವಾರ ದಿವಸ ವಕೀಲರಾದ ಕೃಷ್ಣ ಭಟ್ಟರು ಇವರು ೧೫೦೦ ಬಡಜನರಿಗೆ ಅನ್ನದಾನ ಮಾಡಿದ್ದಾರೆ.

ಇವರು ಕುಂದಾಪುರ ತಾಲೂಕು ವಕ್ವಾಡಿ ಗ್ರಾಮದ ವಿ. ಅನಂತ ಐತಾಳರ ಪುತ್ರರು. ಇವರು ೧೯೩೦ರಿಂದ ಈ ವರೆಗೂ ದೇಶಸೇವೆ ಮಾಡುತ್ತಲಿರುವರು. ಇಂದಿನ ವರೆಗೂ ಖಾದಿಯನ್ನು ಧರಿಸುತ್ತಲಿರುವರು. ಅಲ್ಲದೆ ಇವರು ಸೇವಾಧ್ಯಮ ಸಂಪನ್ನರಾಗಿಯೂ ಸಾದ್ವೀಕರಾಗಿಯೂ ಇರುವರು. ಈ ಧೀರಭಕ್ತರು ದೇಶಸೇವೆಗಾಗಿ ಅನೇಕ ಸಾರಿ ಕಾರಾಗೃಹವಾಸವನ್ನು ಸಹ ಅನುಭವಿಸಿರುವರು.

ಇವರು ಬಡವರಾದರೂ ವರ್ಷಕ್ಕೆ ಒಂದು ಸಲ ಕಾಂಗ್ರೆಸ್ಸಿನ ಪರವಾಗಿ ಇತರ ಬಡಜನರಿಗೆ ಊಟವನ್ನು ಹಾಕುತ್ತ ಬೇಸಿಗೆಯ ಕಾಲದಲ್ಲಿ ನೀರಿನ ಅರವಟ್ಟಿಗೆಯನ್ನು ಇಡುತ್ತಾ ಅಸ್ಪೃಶ್ಯನಿವಾರಣೆಯ ವಿಷಯದಾಗಿ ಹೆಚ್ಚಾಗಿ ಶ್ರದ್ಧೆಯನ್ನು ತೆಗೆದುಕೊಂಡು ತಮ್ಮ ತನುಮನಧನಗಳಿಂದ ಸಹಾಯ ಮಾಡುತ್ತ ಬಂದಿರುವರು. ಪರಮಾತ್ಮನು ಇವರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕೊಡಲಿ.

ಇವರನ್ನು ಹೊಸಪೇಟೆ ಕಾಂಗ್ರೆಸ್ ಕಮಿಟಿಯವರು ಕಾರ್ಯಕಾರಿ ಮಂಡಲಿಗೆ ಒಬ್ಬ ಮೆಂಬರರನ್ನಾಗಿ ಚುನಾಯಿಸಿರುವರು.

ಕುಂದಾಪುರ:— ಕೆನರಾ ಬೇಂಕ್ ಲಿಮಿಟೆಡ್, ಕೆನರಾ ಬೇಂಕಿಂಗ್ ಕೋಪರೇಶನ್, ಇಂಡಸ್ಟ್ರಿಯಲ್ ಸಿಂಡಿಕೇಟ್ ಮೊದಲಾದ ಬೇಂಕುಗಳ ಬ್ರೇಂಚಾಫೀಸುಗಳು ಕುಂದಾಪುರದಲ್ಲಿರುತ್ತವಾದರೂ ಕುಂದಾಪುರದ ಸ್ವತಂತ್ರವಾದ ಮತ್ತು ಬಲಿಷ್ಠವಾದ ಒಂದು ಬೇಂಕು ಇಲ್ಲದಿರುವುದು ನಿಜವಾಗಿ ಕುಂದಾಪುರಕ್ಕೆ ಶೋಚನೀಯವಾದ ಸಂಗತಿಯೆಂದರೆ ಅತ್ಯುಕ್ತಿಯಾಗಲಾರದು. ಆದರೆ ಅಂತಹ ಕೊರತೆಯನ್ನು ಕಳೆದ ವರ್ಷದಲ್ಲಿ ಸ್ಥಾಪಿತವಾದ ದಿ ಎಗ್ರಿಕಲ್ಚರ್ ಮತ್ತು ಇಂಡಸ್ಟ್ರಿಯಲ್ ಬೇಂಕು ಪರಿಹರಿಸಿತೆಂದು ಹೇಳಬಹುದು. ಈ ಸಂಸ್ಥೆಯು ಕಳೆದ ವರ್ಷದಲ್ಲಿ ಕುಂದಾಪುರದಲ್ಲಿ ಸ್ಥಾಪಿತವಾಗಿ ಒಂದು ಶಾಖಾ ಆಫೀಸನ್ನು ಉಡುಪಿಯಲ್ಲಿ ತೆರೆದಿರುತ್ತದೆ. ಅಲ್ಲದೆ ಗತವರ್ಷದ ವರದಿಯಂತೆ ಈ ಬೇಂಕಿನಲ್ಲಿ ರೂ ೮೯ ೮೧೭-೯-೧೦ ಠೇವಣಿ ಇರುತ್ತದೆಂದೂ ರೂ ೩ ೯೦೫-೧೧-೬ರಷ್ಟು ಆದಾಯವಾಗಿರುತ್ತದೆಂದೂ ಖರ್ಚು ಕಳೆದು ರೂ ೫೬೬-೧೪-೯ ನಿವ್ವಳ ಲಾಭವೆಂದೂ ತಿಳಿದುಬರುತ್ತದೆ. ಈ ಬೇಂಕು ಇನ್ನಷ್ಟು ಅಭಿವೃದ್ಧಿಯಾಗಿ ಜನೋಪಕಾರವನ್ನೆಸಗುವ ಸಂಸ್ಥೆಯಾಗಲೆಂದು ಹಾರೈಸುವೆವು.

ಕರ್ನಾಟಕ ಸಾಹಿತ್ಯ ಸಂಘದ ೧೦ನೇ ಸಭೆಯು ಇದೇ ಕಳೆದ ತಾ ೯ನೇ ಭಾನುವಾರ ಅಪರಾಹ್ನ ೪ ಗಂಟೆ ಹೊತ್ತಿಗೆ ಸರಿಯಾಗಿ ಇಲ್ಲಿಯ ವಕೀಲರಾದ ಶ್ರೀಯುತ ಬಗ್ವಾಡಿ ಗಣೇಶರಾವ್ ಬಿ. ಎ. ವಕೀಲ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಬೋರ್ಡು ಹೈಸ್ಕೂಲಿನ ಸಂಸ್ಕೃತ ಪಂಡಿತರಾದ ಶ್ರೀಯುತ ಎ. ನಾರಾಯಣಾಚಾರ್ಯರು ಶ್ರೀ ಭಗವದ್ಗೀತೆಯ ವಿಷಯದಲ್ಲಿ ಅರ್ಧ ಗಂಟೆಯ ವರೆಗೆ ಉತ್ತಮ ಭಾಷಣವನ್ನು ಮಾಡಿದರು. ಅಧ್ಯಕ್ಷರು ಗೀತೆಯನ್ನು ಪಠಿಸುವುದರ ಆವಶ್ಯಕತೆ ಮತ್ತು ಮಹತ್ವಗಳನ್ನು [illegible] ಸರಳವಾದ ಭಾಷಣವನ್ನು ಮಾಡಿದ ಮೇಲೆ ಸಭೆಯು ಅಂತ್ಯವಾಯಿತು.

ಮಂಗಳೂರಿನ ರಾಮಕೃಷ್ಣ ವಿದ್ಯಾರ್ಥಿ ಭವನದ ೩೦ ಮಂದಿ ವಿದ್ಯಾರ್ಥಿಗಳು ಕುಂದಾಪುರದ ಬಂಟರ ವಿದ್ಯಾರ್ಥಿ ಭವನಕ್ಕೆ ಅತಿಥಿಗಳಾಗಿ ಬಂದಿದ್ದು ತಾ. ೭ನೇ ಶುಕ್ರವಾರ ಅಪರಾಹ್ನ ೪ ಗಂಟೆ ಹೊತ್ತಿಗೆ ಸರಿಯಾಗಿ ಕುಂದಾಪುರ ಟೌನ್ ಮತ್ತು ಹೈಸ್ಕೂಲಿನ ವಿದ್ಯಾರ್ಥಿಗಳೊಡನೆ ನಡೆಸಿದ ಫುಟ್ ಬಾಲ್ ಪಂದ್ಯಾಟದಲ್ಲಿ ಇಲ್ಲಿಯ ಟೌನ್ ಮತ್ತು ಹೈಸ್ಕೂಲು ವಿದ್ಯಾರ್ಥಿಗಳೇ ಜಯಶಾಲಿಗಳಾದರು. [illegible] ದಿವಸ ಬೆಳಿಗ್ಗೆ ಬೋರ್ಡು ಹೈಸ್ಕೂಲ್ ವಿದ್ಯಾರ್ಥಿಗಳಿಗೂ ಮಂಗಳೂರಿನವರಿಗೂ ನಡೆದ ಟೆನ್ನಿಸ್ ಪಂದ್ಯಾಟದಲ್ಲಿಯೂ ಇಲ್ಲಿಯ ಹೈಸ್ಕೂಲಿನ ವಿದ್ಯಾರ್ಥಿಗಳೇ ಜಯಶಾಲಿಗಳಾದರು. ಸಾಯಂಕಾಲ ನಡೆದ ಕುಂದಾಪುರ ಟೌನ್ ಮತ್ತು ಮಂಗಳೂರಿನವರಿಗೆ ನಡೆದ ಬೇಡ್ಮಿಂಟನ್ ಪಂದ್ಯಾಟದಲ್ಲಿ ಮಂಗಳೂರಿನವರು ಜಯಶಾಲಿಗಳಾಗಿರುವರು. ಮೊದಲಿನ ಎರಡು ಆಟಗಳಲ್ಲಿಯೂ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳು ಜಯಶಾಲಿಗಳಾದುದು ಸ್ತುತ್ಯವಾಗಿರುತ್ತದೆ.

ಕಟಪಾಡಿ:— ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರ ಪ್ರಾಥಮಿಕ ಹಿಂದೀ ಪರೀಕ್ಷೆಗಳು ಇದೇ ತಾ ೯ರಲ್ಲಿ ಬ್ರಹ್ಮಾವರ ಬಾರಕೂರು ಮಂದರ್ತಿ ಕೊಕ್ಕರ್ಣೆ ಪೇತ್ರಿ ಸ್ಯಾಬರಕಟ್ಟೆ ಹಂಗಾರಕಟ್ಟೆ ಕೇಂದ್ರಗಳಲ್ಲಿ ಕ್ರಮವಾಗಿ ಶ್ರೀಗಳಾದ ಕೋಟ ಶಂಕರನಾರಾಯಣ ಕಾರಂತ ಬಿ. ಎ. ಬಿ. ಎಲ್. ರಾಮಣ್ಣ ಶೆಟ್ಟಿ ಹೆಡ್ಮಾಸ್ಟರ್, ವಿಕ್ಕಿ ಶೆಟ್ಟಿ ಎಲ್. ಎಫ್. ಕಂಟ್ರಾಕ್ಟರ್ ಸೂರಾಲ್ ಅರಮನೆ ಪದ್ಮನಾಭಯ್ಯ ಸೂರಾಲ್ ಅರಮನೆ ಜನಾರ್ದನಯ್ಯ, ಶಂಕರನಾರಾಯಣರಾವ್ ಎಲ್. ಎಫ್. ಕಂಟ್ರಾಕ್ಟರ್, ಸುಬ್ಬಣ್ಣ ಶೆಟ್ಟಿ ಹೆಡ್ಮಾಸ್ಟರ್, ಇವರುಗಳ ನೇತೃತ್ವದಲ್ಲಿ ಸಾಂಗವಾಗಿ ಜರಗಿದವು. ಹಿಂದೀ ಪ್ರಚಾರಕ್ಕಾಗಿ ತಮ್ಮ ಅಮೂಲ್ಯ ಸಮಯವನ್ನು ಸ್ವಾರ್ಪಿಸಿದುದಕ್ಕಾಗಿ ಈ ಎಲ್ಲಾ ಮಹಾಶಯರಿಗೆ ತಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಈ ಪರಿ ಕೇಂದ್ರಗಳ ಪರವಾಗಿ ಜಿಲ್ಲಾ ಪ್ರಚಾರಕರಾದ ಕಟೀಲ್ ಗಣಪತಿ ಶರ್ಮರು ಈ ಮೂಲಕ ಅರ್ಪಿಸುತ್ತಾರೆ.

ಮಿತ್ತೂರು:— ಸ್ಥಳೀಕ ಬೋರ್ಡುಶಾಲೆಯಲ್ಲಿ ಕಳೆದ ತಾ ೮-೨-೩೬ನೇ ಶನಿವಾರ ದಿನ ರಾತ್ರಿ ಗಂಟೆ ೯ ರಿಂದ ೪ರ ವರೆಗೆ ಶ್ರೀಯುತ ಶಿವ ಈಶ್ವರ ಭಟ್ಟರಿಂದ "ತುಲಸೀದಾಸ ಚರಿತ್ರೆ" ಎಂಬ ಹರಿಕಥೆಯು ಅಭಿನಯಿಸಲ್ಪಟ್ಟಿತು. ಜನಸಮೂಹವು ಸಾಧಾರಣ ೩೦೦ರಷ್ಟಿತ್ತು. ಹರಿಕಥೆಯು ಚಲೋ ರೀತಿಯಲ್ಲಿ ಅಭಿನಯಿಸಲ್ಪಟ್ಟಿತು.

ಬರುವ ತಾ. ೧೫-೨-೩೬ನೇ ಶನಿವಾರ ರಾತ್ರಿ ಗಂಟೆ ೯ಕ್ಕೆ ಸರಿಯಾಗಿ ಮುಂದಿನ "ಶಾರದಾಮಧ್ವಸ್ಥಿ" ಕೊಟ್ಟ ಸಡಿ ಶ್ರೀಯುತ ಶಿವ ಈಶ್ವರ ಭಟ್ಟರ [illegible] ನಡೆಸಲಿರುವ [illegible] ಯಿಂದ ಮಿತ್ತೂರು ಶಾಲೆಯಲ್ಲಿ ನಡೆಯಲಿರುವುದರಿಂದ, ಸರ್ವರೂ ಬರಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇನೆ.

ಬಕ್ರಾಡಿ:— ಮೈಸೂರು ಸೀಮೆಗಳಲ್ಲೂ, ಮುಂಬಾಯಿ ಕರ್ನಾಟಕ ಪ್ರಾಂತ್ಯಗಳಲ್ಲೂ ಸುಪ್ರಸಿದ್ಧರಾದ ಶ್ರೀ. ಸಿದ್ಧಾನಂದ ಕಲಾವಿಚಕ್ಷಣ ಜ್ಯೋತಿಷ ಮತ್ತು ಹರಿಕಥಾ ವಿದ್ವಾನ್ ಅಲ್ಲದೆ, ರಿಟಾಯರ್ಡ್ ಮಿಡ್ಲ್ ಸ್ಕೂಲು ಮುಖ್ಯೋಪಾಧ್ಯಾಯರಾದ ಬ್ರಹ್ಮಶ್ರೀ ವೈ. ಎಸ್. ನಾಗೇಶಶಾಸ್ತ್ರಿಗಳ ಹರಿಕಥಾ ವಾಚನವು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೊಪ್ಪ ತಾಲೂಕು ಕಸಬಕ್ಕೆ ಸಂಬಂಧಪಟ್ಟ ಬಾಳಗಡಿಯ ಬ್ರಹ್ಮಮಂಟಪದಲ್ಲಿ ಕಳೆದ ಫೆಬ್ರುವರಿ ೩ ೩ನೇ ಸೋಮವಾರ ಸಾಯಂಕಾಲ ಬಹಳ ಚಲೋ ರೀತಿಯಲ್ಲಿ ಜರಗಿತು. ಶಾಸ್ತ್ರಿಗಳ ಪಾಂಡಿತ್ಯವನ್ನು ಕೇಳಿಯೇ ಅನೇಕ ಕಡೆಗಳಿಂದ ಜನರು ಕಿಕ್ಕಿರಿದು ಬಂದಿದ್ದರು. ಶ್ರೀಯುತರ ಹರಿಕಥಾ ವಾಚನವು ಸಂಸ್ಕೃತ ಮತ್ತು ಕನ್ನಡ ಭಾಷಾ ಪದ್ಯಗಳಿಂದಲೂ ಸುಲಲಿತವೂ ಸರಳವೂ ಆದ ಪಾತ್ರರಂಜನೆಗಳಿಂದಲೂ ಮನೋರಂಜಕವಾಗಿದ್ದು, ಕಥೆಯ ಮನಸ್ಸಿಗೆ ಮಂತ್ರದಂತಾಗಿತ್ತು. ಸಂದರ್ಭೋಚಿತ ತರದ ಉಪಕಥೆಗಳೂ ಸುಶ್ರಾವ್ಯವಾಗಿದ್ದವು. ಇಂತಹ ಅಪೂರ್ವ ಕಾರ್ಯ ಗೌರವವನ್ನು ಕೈಕೊಂಡಿರುವ ಈ ಮಹನೀಯರಿಗೆ ಎಲ್ಲಾ ಕಡೆಗಳಿಂದಲೂ ಪ್ರೋತ್ಸಾಹ ದೊರೆಯುವುದಾಗಿ ಭಾವಿಸಲಾಗಿದೆ.

ಉಡುಪಿ.— ವ್ಯಾಯಾಮ ಶಿಕ್ಷಣ ಶಿಬಿರವು ತಾ ೨೩-೨-೩೬ನೇ ಆದಿತ್ಯವಾರ ಬೆಳಿಗ್ಗೆ ೬ ಗಂಟೆಗೆ ಸರಿಯಾಗಿ ಸಿಂಡಿಕೇಟ್ ಬೇಂಕಿನ ಬಳಿ ಇರುವ ವ್ಯಾಯಾಮ ಶಾಲೆಯಲ್ಲಿ ಪ್ರಾರಂಭವಾಗುವುದು. ಈ ಶಿಬಿರದಲ್ಲಿ ತರಬೇತಿಯನ್ನು ಹೊಂದಲು ಇಚ್ಛೆಯುಳ್ಳವರು ತಾರೀಕು ೨೨-೨-೩೬ನೇ ಶನಿವಾರ ಸಂಜೆ ೫ ಗಂಟೆಗೆ ಅಜ್ಜರಕಾಡಿನ ಮೆಡಿಕಲ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸೇರುವ ಪ್ರಥಮ ಕೂಟಕ್ಕೆ ತಪ್ಪದೆ ಹಾಜರಾಗತಕ್ಕದ್ದು. ಬರುವಾಗ್ಗೆ ಖಾಕಿ ನಿಕ್ಕರ್ ಕೈಯಿಲ್ಲದ ಬಿಳಿ ಬನಿಯನ್ ಕಿವಿಯ ವರೆಗೆ ಸ್ಪಷ್ಟವಾದ ದಂಡ ಲೇಜಿಮ್ ಇವಿಷ್ಟನ್ನು ತಪ್ಪದೆ ತರಬೇಕು ಎಂದು ಕೋಶಾಧ್ಯಕ್ಷರೂ ಕಾರ್ಯದರ್ಶಿಯೂ ತಿಳಿಸುತ್ತಾರೆ.

ದ. ಕ. ಜಿಲ್ಲಾ ಬೋರ್ಡಿನಿಂದ ಮದ್ರಾಸು ಯೂನಿವರ್ಸಿಟಿ ಸೆನೇಟಿಗೆ ಒಬ್ಬ ಸದಸ್ಯನನ್ನು ಆರಿಸತಕ್ಕದ್ದಿದೆಯಷ್ಟೆ. ಒಂದು ಕಡೆಯಿಂದ ಕಾಂಗ್ರೆಸ್ ಪಕ್ಷದವರು ತಮ್ಮವರಿಂದ ಡಾ. ಕೆ. ಶಿವರಾಮ ಕಾರಂತರನ್ನು [illegible] ಸ್ಥಾನಕ್ಕೆ ಅರಿಸಿದ ತೀರ್ಮಾನವು ಪ್ರಕಟವಾಗಿದೆ. ಇನ್ನೊಂದೆಡೆ ಕಾಂಗ್ರೆಸ್ ಪಕ್ಷದವರಾದ ಡಾ. ಪಿ. ಪಿ. ಅಚಾರ್ಯರು ಸ್ವತಂತ್ರವಾಗಿ ಸದರಿ ಸ್ಥಾನಕ್ಕೆ ತಮ್ಮ ನೋಮಿನೇಶನ್ ಪತ್ರವನ್ನು ಹಾಕಿರುವ ಸುದ್ದಿಯೂ ಪ್ರಕಟವಾಗಿದೆ. ಕಾಂಗ್ರೆಸ್ ಪಕ್ಷದವರೊಳಗಿನ ಈ ಪಂಥ ಗಲಭೆ ಹೇಗೆಯೋ? ದ. ಕ. ಜಿಲ್ಲಾ ಸಿವಿಲ್ ಬೋರ್ಡಿನವರು ಇದರ ತೀರ್ಮಾನವನ್ನು ಹೇಗೆ ಮಾಡುವರು? ವಾಕ್ಯದೊಳಗೇ ಕಲಹ ಸುರುವಾದರೆ ಜಿಲ್ಲಾ ಬೋರ್ಡಿನಲ್ಲಿ ಇನ್ನು ಮುಂದೆ ನಡೆಸಲಿರುವ ಕಾರ್ಯಕಲಾಪಗಳ ಗತಿಯೇನು? ಇದಕ್ಕಾಗಿಯೇ ಸಿವಿಲ್ ಬೋರ್ಡಿನವರು ತಮ್ಮೊಳಗಿನ ವ್ಯವಹಾರಕ್ರಮಗಳಿಗೆ ವಕ್ತು ಶಿಸ್ತಿನ ಬಗೆ (ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರಿಂದ) ನಿರ್ಣಯಗಳನ್ನು ಸ್ಪಷ್ಟವಾಗಿ ಮಾಡಿಕೊಂಡು ಪ್ರತಿಯೊಬ್ಬ ಸದಸ್ಯನಿಂದ ಪ್ರಮಾಣಪತ್ರ ತೆಗೆದುಕೊಳ್ಳುವುದು ಉಚಿತವೇನೋ. ಹೀಗೆ ಮಾಡಿದ್ದಲ್ಲಿ ಸದರಿ ನಿರ್ಣಯಗಳ ಮತ್ತು ಇತರ ವಿಷಯಗಳ ಬಗ್ಗೆ ಜಿಲ್ಲೆಯ ಎಲ್ಲಾ ವೃತ್ತಪತ್ರಗಳಲ್ಲಿ ಆಗಿಂದಾಗ ಪ್ರಕಟಣೆ ಮಾಡುತ್ತಿದ್ದು ಜಿಲ್ಲಾ ಮಹಾಜನರಿಗೂ ತಿಳಿಯಗೊಡುವುದು ಅವಶ್ಯ. ಇದರಿಂದ ಯಾರ್‍ಯಾರು ಕಾಂಗ್ರೆಸ್ಸಿನ ನಿಜಭಕ್ತರು ಯಾರು ಅಲ್ಲ ಎಂಬುದಾಗಿ ವ್ಯಕ್ತವಾಗುವುದಲ್ಲದೆ ಇನ್ನು ಮುಂದಣ ಚುನಾವಣೆಯಲ್ಲಿ ಜನತೆಯವರ ಕರ್ತವ್ಯವು ಸುಗಮವಾಗುವುದಷ್ಟೆ!

ಇದೇ ತಾ ೮ಕ್ಕೆ ಉಡುಪಿ ತಾಲೂಕು ಸರಾಯಿ ಅಂಗಡಿ ಹರಾಜು ಕುಂದಾಪುರ ಡಿವಿಜನಲ್ ಆಫೀಸರರಿಂದ ನಡೆಸಲಾಯಿತು. ಉಡುಪಿ ಟೌನ್ ಅಂಗಡಿಯೊಂದಕ್ಕಲ್ಲದೆ ಉಳಿದ ಎಲ್ಲಾ ಅಂಗಡಿಗಳು ಬಹಳ ಕಡಿಮೆಗೇ ಬೇಡಲ್ಪಟ್ಟವು. ಹಲವು ಅಂಗಡಿಗಳಿಗೆ ತೀರಾ ಕಡಿಮೆ ಬೇಡಿಕೆಯುಳ್ಳದರಿಂದ ಅವುಗಳ ಹರಾಜು ಇದೇ ತಾ ೨೪ಕ್ಕೆ ಮುಂದರಿಸಲಾಗಿದೆ. ಹಕ್ಕಿನ ಅಧಿಕ ಅಡಚಣೆಯಿಂದಲೋ ಇನ್ನಾವ ಕಾರಣದಿಂದಲೋ ಸರಾಯಿ ಅಂಗಡಿಗಳ ದರ್ಶನ ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ಆದರೆ ಉಡುಪಿ ಕಸಬಿನ ಸಂಗತಿಯು ಬೇರೆ. ಅದೇನು ಮುನಿಸಿಪಾಲಿಟಿಯು ಹೊಸತಾಗಿ ನಿರ್ಮಾಣವಾಗಿ ಗೌರವಾನ್ವಿತವಾದುದೇ? ಹೆಚ್ಚು ಸರಾಯಿ ಖರ್ಚಾಗುತ್ತಿದ್ದು ಮುಂದಣ ವರ್ಷಕ್ಕೆ ವ್ಯಾಪಾರ ವೃದ್ಧಿಗೊಳ್ಳುವುದಾಗಿ ಈ ಪೋಟಾಪೋಟಿ "ನೋಟ".

ಅಮೇರಿಕಾದ ಅಡಿಯಲ್ಲಿ ಫಿಲಿಪ್ಪೈನ್ ದ್ವೀಪಗಳು ಅನುಭವಿಸಿದ ಫಲಗಳು.

ಅಮೇರಿಕಾದವರು ಈ ದ್ವೀಪಗಳಲ್ಲಿ ಮೂವತ್ತೈದು ವರ್ಷಗಳ ಸಮಯ ಅಧಿಕಾರ ನಡೆಯಿಸಿ, ಇವತ್ತಿಗೆ ಅವರಿಗೆ ಸ್ವಯಂ ಪ್ರಭುತ್ವದ ಹಕ್ಕುಗಳನ್ನು ಕೊಟ್ಟಿರುವರು. ಈಗಿನ ಶರ್ತಗಳ ಪ್ರಕಾರ ಇನ್ನೂ ೧೦ ವರ್ಷಗಳ ತನಕ ಇವರು ಸಂಯುಕ್ತ ಅಮೇರಿಕಾದವರ ಸಾಮ್ರಾಜ್ಯತ್ವದಲ್ಲಿ ಇರತಕ್ಕದ್ದು. ನಂತರ ಇವರಿಗೆ ಪೂರ್ಣ ಸ್ವರಾಜ್ಯವು ಸಿಗುವುದಂತೆ. ಈ ಮೂವತ್ತೈದು ವರ್ಷ ಕಾಲದ ಅಮೇರಿಕನ್ ಆಳ್ವಿಕೆಯಿಂದ ಇವರಿಗೆ ದೊರಕಿದ ಫಲಗಳಾವವು. ಅಮೇರಿಕಾನರು ಕೈಸೇರಿದ ಬರಿ ಅರ್ಧ ಶತಮಾನದಲ್ಲಿ ಇವರಿಗೆ ಸ್ವರಾಜ್ಯ ದೊರಕುವುದು.

ಕಾಲೇರಾ ಮತ್ತು ಪ್ಲೇಗು, ಫಿಲಿಪ್ಪೈನ ದ್ವೀಪಗಳಿಂದ ಅಟ್ಟಲ್ಪಟ್ಟಿವೆ. ಆದರೆ ಯೋಗ್ಯ ಆಹಾರವನ್ನು ತಿನ್ನದೆ ಜನರು ಕ್ಷೀಣರಾಗಿ ಬೆಳೆಯುವುದು ಮಾತ್ರ ಅಲ್ಲಿ ಕಾಣಬರುತ್ತದೆ. ಇದರ ನಿವಾರಣೆ ಕಾರ್ಯವನ್ನು ಸರಕಾರವು ಕೈಗೊಂಡಿರುತ್ತದೆ. ಅಮೇರಿಕಾನರು ಇದನ್ನು ವಶೀಕರಿಸಿದ ಸಮಯ ಇಲ್ಲಿನ ಮರಣಗಳ ಸಂಖ್ಯೆಯು ಸಾವಿರಕ್ಕೆ ೪೬ರ ಪ್ರಕಾರವಾಗಿತ್ತು. ಅದು ಈಗ ೧೮ಕ್ಕೆ ಇಳಿದಿರುತ್ತದೆ. ಜನನ ಸಂಖ್ಯೆಯು ಸಾವಿರಕ್ಕೆ ೩೫ ಇದ್ದಿತು ಹಂಕ್ಕೆ ಏರಿರುತ್ತದೆ. ಅಮೇರಿಕಾನರು ಇಲ್ಲಿ ಪ್ರಥಮ ಬಾರಿಗೆ ಕಾಲಿರಿದಾಗ, ಇಲ್ಲಿ ಮಾನಿಲಾ ಎಂಬ ಮುಖ್ಯ ಪಟ್ಟಣದಲ್ಲಿ ಶಿಶು ಮರಣಗಳ ಸಂಖ್ಯೆಯು ತಿಳಿಯಲಾಯಿತು. ಇದು ಶೇಕಡಾ ೮೦ ಆಗಿತ್ತು. (ಭಯಂಕರ ಸಂಖ್ಯೆ). ಇಂದಿನ ದಿವಸಕ್ಕೆ ಅದು ಶೇಕಡಾ ೩ಕ್ಕೆ ಇಳಿದಿರುತ್ತದೆ. (ಶ್ಲಾಘನೀಯ ಪ್ರಗತಿ). ಶಿಶು ರಕ್ಷಣೆಗಾಗಿಯೂ ಮಾತೃತ್ವವು ಸರಿಯಾಗಿ ನಡೆಯುವಂತೆ ಯೋಗ್ಯ ಏರ್ಪಾಡುಗಳಾಗಿವೆ. ಅಮೇರಿಕಾನರ ಪ್ರಭುತ್ವದ ಪ್ರಾರಂಭದಲ್ಲಿ ೨೦೦,೦೦೦ ಮಾತ್ರ ಶಿಕ್ಷಣ ಪಡೆಯುತ್ತಿದ್ದರು. ೧೯೩೫ರಲ್ಲಿ ಈ ಸಂಖ್ಯೆಯು, ೧,೩೦೦,೦೦೦ಕ್ಕೆ ಏರಿರುತ್ತದೆ. ಅಲ್ಲಿನ ಜನಸಂಖ್ಯೆಯ ಹತ್ತನೆ ಒಂದಂಶವು ವಿದ್ಯಾಭ್ಯಾಸಂಗ ಮಾಡುತ್ತದೆ. ಈ ಮೂವತ್ತೈದು ವರ್ಷಗಳಲ್ಲಿ ಫಿಲಿಪ್ಪೈನ ಸರಕಾರದವರು ತನ್ನ ಉತ್ಪತ್ತಿಯ ಮೂರನೆ ಒಂದಂಶವನ್ನು, ಆರೋಗ್ಯ ರಕ್ಷಣೆಗೂ ವಿದ್ಯಾ ಪ್ರಚಾರಕ್ಕೂ ವ್ಯಯ ಮಾಡಿರುವರು. ಅಲ್ಲಿನ ಸರಕಾರವು ಸ್ವಯಂಪ್ರಭುತ್ವದ ರೂಪವನ್ನು ಹೊಂದಿರುತ್ತದೆ. ಅಲ್ಲಿನ ನ್ಯಾಯವಿಧಾಯಕ ಸಭೆಗಳು ಬಹುಸಂಖ್ಯಾತರಿಂದ ಚುನಾವಣೆಯಾಗುತ್ತದೆ. (ಓದ ಬರಹ ತಿಳಿಯದವರಿಗೆ ಮಾತ್ರ ಓಟಿನ ಹಕ್ಕಿಲ್ಲ). ಫಿಲಿಪ್ಪೈನ ದ್ವೀಪಗಳು ಸಂಪೂರ್ಣ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯದಿದ್ದರೂ, ಅಲ್ಲಿನ ಸರಕಾರವು ಸ್ವತಂತ್ರವಾಗಿರುತ್ತದೆ. ಅಧುನಿಕ ಕಾಲದ ನಾಗರೀಕನ ಸಂಪೂರ್ಣ ಹಕ್ಕುಗಳು ಇಲ್ಲಿನವರಿಗೆ ದೊರಕಿರುತ್ತವೆ. ಸಂಸ್ಕೃತಿಯ ವಿಚಾರದಲ್ಲಿ ಈ ಮೂವತ್ತೈದು ವರ್ಷಗಳಲ್ಲಿ ಅಮೇರಿಕನರ ಸ್ಪರ್ಶದಿಂದ, ಇವರು ತುಂಬಾ ಸಂಸ್ಕೃತಿ ಹೊಂದಿರುತ್ತಾರೆ. ಪಾಶ್ಚಾತ್ಯ ಸಂಸ್ಕೃತಿಯ ಕುರುಹುಗಳನ್ನು ಈ ದ್ವೀಪಗಳಲ್ಲಿ ಎಲ್ಲೆಲ್ಲಿ ಕಾಣಬಹುದು. ಇದರಿಂದ ಇವರ ಜೀವಮಾನದಲ್ಲಿ ಸಾವಿರಗಟ್ಟಲೆ ಒಳ್ಳೆ ಬದಲಾವಣೆಗಳು ಆಗಿವೆ. ಅಲ್ಲಿನ ಎಂಟು ಮಿಲಿಯ ಜನರು ಈಗ ಬೂಟ್ಸುಗಳನ್ನು ಧರಿಸುತ್ತಿದ್ದಾರೆ. ೧೯೦೦ ರಲ್ಲಿ ಸಾವಿರ ಗಟ್ಟಲೆಯಲ್ಲಿ ಆಗುತ್ತಿರುವ ವಾರ್ತಾಪತ್ರಿಕೆಗಳೂ ಮಾಸಪತ್ರಿಕೆಗಳು ಇತ್ಯಾದಿಗಳು ಈಗ ಲಕ್ಷಾಂತರವಾಗಿ ಮುದ್ರಣಗೊಳ್ಳುತ್ತಿವೆ. ಅಲ್ಲಿ ಪ್ರತಿಯೊಂದು ನಗರದಲ್ಲಿ ಒಂದು ಆಸ್ಪತ್ರೆ, ದವಾಖಾನೆ, ಮತ್ತು ಶಾಲೆ ಇರುವುದಲ್ಲದೆ, ಸಿನಿಮಾ ಮಂದಿರಗಳೂ, ಸಾರ್ವಜನಿಕ ಆಟದ ಸ್ಥಳಗಳೂ ಟೆನ್ನಿಸ್ ಕೋರ್ಟುಗಳೂ, ಮೋಟಾರು ವಾಹನಗಳೂ, ಇವೆ. ಸಾಂಪತ್ತಿಕ ಪ್ರಗತಿ ವಿಚಾರ ಇವರ ವ್ಯಾಪಾರವು ೧೯೦೩ರಕ್ಕಿಂತ, ನಾಲ್ಕು ಪಾಲಷ್ಟು ಏರಿಕೆಯಾಗಿರುತ್ತದೆ. ಕೆಲವು ಸಾವಿರ ಟನ್ನು ಹಾಳು ತರದ ಸಕ್ಕರೆಯನ್ನು ತಯಾರಿಸುವವರು ಇವರು ಈಗ ಒಂದು ಮಿಲಿಯ ಟನ್‌ಗಳಿಗಿಂತ ಹೆಚ್ಚಾದ ಸಕ್ಕರೆಯನ್ನು ತಯಾರಿಸುತ್ತಿದ್ದಾರೆ. ಇದರಿಂದ ಅಮೇರಿಕನ್ ಸಕ್ಕರೆ ವ್ಯಾಪಾರಕ್ಕೆ ಬಹಳ ತೊಂದರೆ ಉಂಟಾಗಿರುತ್ತದೆ.

ಲಕ್ನೋ ಕಾಂಗ್ರೆಸ್ಸಿಗೆ ಸ್ವಯಂಸೇವಕರು ಬೇಕಾಗಿಲ್ಲ.

ಡಾ|| ಎನ್. ಎಸ್. ಹರ್ಡಿಕರ್.

ಈ ಮುಂಚೆ ಸ್ವಯಂಸೇವಕರಾಗಿ ಕಾಂಗ್ರೆಸ್ಸಿನ ಸೇವೆ ಮಾಡಿದ ನನ್ನ ಮಿತ್ರರಿಂದ ನನಗೆ ಅವರನ್ನು ಲಕ್ನೋ ಕಾಂಗ್ರೆಸ್ಸಿನ ಸ್ವಯಂಸೇವಕರಾಗಿ ಕೂಡಿಸಿಕೊಳ್ಳಲು ವಿನಂತಿ ಪತ್ರಗಳು ಬಂದಿವೆ. ಅವರ ಉತ್ಸಾಹವನ್ನೂ ಸೇವಾಕಾರ್ಯ ಆತುರವನ್ನು ನೋಡಿ ನಾನು ಬಹಳ ಸಂತೋಷಪಡುವವನಾಗಿದ್ದೇನೆ. ಈ ಸ್ಥಿತಿಯು ನಿಜವಾಗಿ ಶ್ಲಾಘನೀಯವು.

ಆದರೆ, ಲಕ್ನೋ ಕಾಂಗ್ರೆಸ್ಸ ಕಮಿಟಿಯವರು, ಅವರ ಸ್ವಯಂಸೇವಕರ ಮಂಡಳವನ್ನು ವ್ಯವಸ್ಥೆಗೊಳಿಸಲು, ಅವರ ತರಬೇತು ಮಾಡಲು ಮಾತ್ರ ನನ್ನನ್ನು ಕರೆದಿರುವರು. ಅವರಿಗೆ ಹೊರಗಿನಿಂದ ಸ್ವಯಂಸೇವಕರು ಬೇಕಾಗಿಲ್ಲ. ಕೆಲವು ಉಪದೇಶಿಗಳು ಮಾತ್ರ ಬೇಕಾಗಿದ್ದರು. ಅವರನ್ನು ನಾನು ಕಳುಹಿಸಿದ್ದೇನೆ. ಆದ್ದರಿಂದ ನನ್ನ ಅನೇಕ ಮಿತ್ರರನ್ನು ನಿರಾಶೆಗೊಳಿಸಲು ಬಹಳ ಕನಿಕರ ಪಡುತ್ತೇನೆ. ಲಕ್ನೋ ಕಾಂಗ್ರೆಸ್ಸ ಅಧಿವೇಶನಕ್ಕೆ ಯಾರನ್ನೂ ಒಯ್ಯಲು ನನ್ನಿಂದ ಸಾಧ್ಯವಾಗುವುದಿಲ್ಲ.

ಇತರ ಪ್ರಾಂತ್ಯದ ಸ್ವಯಂಸೇವಕರು ಅವರನ್ನು ಸೇರಿಸಿಕೊಳ್ಳಲು ಕಾಂಗ್ರೆಸ್ಸಿನ ಸ್ವಾಗತ ಕಮಿಟಿಗೆ ಬರೆಕೊಳ್ಳಬೇಕಾಗಿಲ್ಲ. ಕಾಂಗ್ರೆಸ್ಸು ಯಾವ ಪ್ರಾಂತ್ಯದಲ್ಲಿ ಜರಗುವುದೊ, ಆ ಪ್ರಾಂತದವರನ್ನೆ ಮಾತ್ರ ಸ್ವಯಂಸೇವಕರನ್ನಾಗಿ ಕೂಡಿಸಿಕೊಳ್ಳುವುದು ಒಂದು ಕ್ರಮವಾಗಿರುತ್ತದೆ. ಲಕ್ನೋ ಮತ್ತು ಸಂಯುಕ್ತ ಪ್ರಾಂತ್ಯದವರು ಈ ನಿರ್ಧಾರವನ್ನು ಮಾಡಿರುವರು.

ಮಿಸ್ ಮೆಯೋ ದೇಶದಲ್ಲಿ

ಒಂದು ಕ್ರೈಮ್ ಬ್ರಾಂಚಿನ ಬಿಲ್ಲಿಗಾಗಿ ೨,೩೦೦,೦೦೦,೦೦೦ ಪೌನುಗಳು ಪ್ರತಿ ಸಂವತ್ಸರವೂ ಸೆಂಕ್ಷನ್ ಆಗುತ್ತಿದೆ.

ಈ ಮಜಾರ ಖರ್ಚನ್ನು ಕೇಳುತ್ತಲೆ ಪ್ರತಿಯೊಬ್ಬನಿಗೂ ಭಯವಾಗುತ್ತದೆ. ನಾಗರಿಕ ದೇಶವೆಂದು ಕೂಗಾಡುತ್ತಿರುವ ಅಮೇರಿಕದ ಯುನೈಟೆಡ್ ಸ್ಟೇಟ್ಸನಲ್ಲಿ ಇಷ್ಟು ಭಾರಿ ಹಣವು ಬರೇ ಒಂದು ಕ್ರೈಮ್ ಬ್ರಾಂಚಿಗಾಗಿ ಖರ್ಚಾಗುತ್ತಿದೆ ಎಂದರೆ ಅವರ ನಾಗರಿಕತೆಯ ಪಂಚಾಂಗಗಳು ಇನ್ನೇನಾದೀತೋ ಎಂದು ಊಹೆಗೆ ಸಹ ಹತ್ತದು.

ಯುನೈಟೆಡ್ ಸ್ಟೇಟ್ಸನಲ್ಲಿ ಸಂಯುಕ್ತ ರಾಷ್ಟ್ರ ರಕ್ಷಾ ಸಂಘ ಎಂಬ ಒಂದು ಸಂಸ್ಥೆ ಇದೆ. ಅದಕ್ಕೆ ಅಧ್ಯಕ್ಷರು ಪ್ರೆಸಿಡೆಂಟ್ ರೂಸ್ ವೆಲ್ಟರೇ ಅಂದ ಮೇಲೆ ಆ ಸಂಸ್ಥೆಯವರು ಪ್ರಕಟಿಸುವ ಸಂಖ್ಯೆಗಳನ್ನು ನಂಬಲು ಯಾವ ಅಡ್ಡಿಯೂ ಇಲ್ಲ. ಅದರ ಪ್ರಕಟಣೆ ಹೀಗಿದೆ:

ಪ್ರತಿ ವರ್ಷವೂ ೧೨,೦೦೦ ಜನರು ಖೂನಿ ಪಗ್ಗೆರಿಗರಿಂದ ಹತರಾಗುತ್ತಿದ್ದಾರೆ. ೩೦೦೦ ಜನರು ಕದ್ದುಕೊಂಡು ಹೋಗಲ್ಪಡುತ್ತಿದ್ದಾರೆ; ೧,೧೦,೦೦೦ ಜನರು ಹೆದರಿಸಲ್ಪಟ್ಟು, ಏಟು ತಿನ್ನುತ್ತಿದ್ದಾರೆ. ೫೦,೦೦೦ ಧನಿಕರ ಧನವು ಸೂರೆಗೊಳ್ಳಲ್ಪಡುತ್ತಿದೆ.

ಇಷ್ಟು, ಅತಿನಾಗರಿಕವಾದ ಯುನೈಟೆಡ್ ಸ್ಟೇಟ್ಸನಲ್ಲಿ; ಮಿಸ್ ಮೆಯೋ ತೌರುಮನೆಯಾದ ದೇಶದಲ್ಲಿ!

ಅಮೇರಿಕದಲ್ಲೊಂದು ಮುಖ್ಯ ವೃತ್ತಿ.

ಪ್ರತಿ ವರ್ಷವೂ ಸರಕಾರದ ಕ್ರೈಮು ಬ್ರಾಂಚಿಗಾಗಿ ೨,೩೦೦,೦೦೦,೦೦೦ ಪೌನುಗಳು ವೆಚ್ಚವಾಗುತ್ತಿದೆಯೆಂದು ಮೇಲೆಯೇ ಹೇಳಿದೆಯಷ್ಟೆ. ೧೯೨೫ರಲ್ಲಿ ನಾಗರಿಕ ಅಮೇರಿಕೆಯಲ್ಲಿ ಮುಖ್ಯ ವೃತ್ತಿಗಳು ಮೂರಿದ್ದವು. ೧ ಮೋಟಾರು ತಯಾರು ಮಾಡುವುದು ೨. ಮಾಂಸಾಹಾರಗಳನ್ನು ಪಕ್ವಮಾಡಿ ಪರದೇಶಗಳಿಗೆ ಕಳಿಸುವದು ೩. ಉಕ್ಕಿನ ಪರಿಶ್ರಮಗಳು. ಆದರೆ ಈಗ ಅವುಗಳ ಜೊತೆಗೆ ದೋಚುವದೂ ಒಂದು ದೊಡ್ಡ ವೃತ್ತಿಯಾಗಿ ಬಿಟ್ಟಿದೆ.

ಈಗ ಸದ್ಯಕ್ಕೆ ೧೨೦ ಸಾವಿರ ಕಳ್ಳರು ಸರಕಾರದವರ ಕೈಗೆ ಸಿಕ್ಕದೆ ಕಲಿ ತಪ್ಪಿಸಿಕೊಂಡಿದ್ದಾರೆ. ಸುಮಾರು ೪೦,೦೦,೦೦೦ ಪ್ರಜೆಗಳೇ ಕಳ್ಳತನದಿಂದ ಜೀವನಾಧಾರ ಮಾಡುತ್ತಿದ್ದಾರಂತೆ.

ಅಲಿಕೆಪೋನ ಎಂಬವನ ದೋಚುಗಾರನ ವರ್ಷದ ಉತ್ಪತ್ತಿಯು ೨೦ ಲಕ್ಷ ಪೌನುಗಳು.

ಇಷ್ಟು ಆದಾಯವಿದ್ದರೂ ಕಡೆಗೊಂದಿಗೆ ಕೈಗೆ ಹತ್ತಿದ್ದುದು ಕೇವಲ ೧೫ಲಕ್ಷ. ಮಿಕ್ಕಿದ್ದೆಲ್ಲ ಅವನ ಸಹಭಾಗಿಗಳಾದ ಗೌರವಸ್ಥರು, ಪೋಲೀಸು ಆಫೀಸರುಗಳ ಖರ್ಚಿಗೆ ಸರಿಹೋಗುತ್ತಿತ್ತು.

ಸರಕಾರದ ಭಾರೀ ಉದ್ಯೋಗಿಗಳೇ ಈ ದರೋಡೆಕಾರರನ್ನು ಹಿಡಿದು ಶಿಕ್ಷಿಸುವುದಕ್ಕೆ ಭಯಪಡುತ್ತಿದ್ದಾರೆ.

ಈ ರೀತಿಯಾಗಿ ಅಮೇರಿಕದಲ್ಲಿ ಎಲ್ಲಿ ನೋಡಿದರೂ ಕಳ್ಳತನಗಳೇ, ಸೂಳೆಯರ ಮನೆಗಳೇ ಕಾಣಿಸುತ್ತಿದೆ. ಇದೊಂದು ಭೂಲೋಕದ ನರಕವೋ ಎಂಬ ಸಂದೇಹವುಂಟಾಗುವುದು.

ವಿವಾಹ ವಿಚ್ಛೇದಗಳು.

ಮೂರು ತಿಂಗಳಲ್ಲಿ ಕೊನೆಪಕ್ಷ ೬೦೦ ವಿವಾಹ ವಿಚ್ಛೇದನದ ಕೇಸುಗಳಾದರೂ ಕೋರ್ಟಿನಲ್ಲಿ ತೀರ್ಮಾನಗುತ್ತಿರುತ್ತವೆ. ಕೋರ್ಟಿನಲ್ಲಿ ಸಾಧಾರಣ ೨೦೦ ವಿವಾಹ ವಿಚ್ಛೇದನಗಳಾದರೂ ನಡೆಯುತ್ತಲೇ ಇರುತ್ತಿವೆ.

೨೦ ವರ್ಷಗಳ ಮೊದಲು ವರ್ಷಕ್ಕೆ ಕೆಲವು ನೂರು ಗಂಡಹೆಂಡಿರು ಇಷ್ಟಾನುಸಾರ ಬೇರೆಯಾಗುತ್ತಿದ್ದರು. ಆದರೆ ಬರುತ್ತ ಬರುತ್ತ ಅವು ಸಾವಿರಗಳ ಸಂಖ್ಯೆಗೇರಿದೆ. ನಾಗರೀಕತೆಯ ಹೆಸರಿನಲ್ಲಿ ಹೆಂಗಸು ತನಗಿಷ್ಟಬಂದವನನ್ನು ಮದುವೆಯಾಗುವುದೂ, ಇಷ್ಟ ಬಂದಾಗ ಅವನನ್ನು ಬಿಟ್ಟು ಬೇರೊಬ್ಬನನ್ನು, ಹೀಗೆ ಎಷ್ಟೋ ಜನ ಗಂಡಂದಿರನ್ನು ಮಾಡಿಕೊಳ್ಳುವುದು ಒಂದು ರೂಢಿಯೋ ಎಂಬುವ ಹುಟ್ಟಿಗಾಗಿಹೋಗಿದೆ.

೨೦ ವರ್ಷಗಳ ಹಿಂದೆ ಹೆಂಡತಿಯು ಗಂಡನನ್ನು ಬಿಡಬೇಕಾದರೆ ಅವನು ಅವಳಿಗೆ ಕ್ರೂರ ಹಿಂಸೆಮಾಡಿರುವನೆಂದು ತೋರಿಸಬೇಕಾಗಿತ್ತು. ಈಗಲೋ ಸಣ್ಣ ಪುಟ್ಟ ನೈಮಿತ್ತಿಗೆಲ್ಲ ಗಂಡಹೆಂಡಿರು ಪರಸ್ಪರ ತ್ಯಾಗವಾಗುವುದೇ ಆಗಿದೆ. ತನ್ನ ಗಂಡ ರಾತ್ರಿ ಹೊತ್ತು ಗೊರಕೆ ಹೊಡೆಯುತ್ತಾನೆಂಬುದೊಂದು; ದಿನಾಲೂ ಮನೆಗೆ ಹೊತ್ತಿಗೆ ಸರಿಯಾಗಿ ಬರುವುದಿಲ್ಲವೆಂಬುದಿನ್ನೊಂದು. ಇವೆಲ್ಲ ವಿವಾಹ ವಿಚ್ಛೇದನಕ್ಕೆ ಕಾರಣಗಳಾಗಿಬಿಟ್ಟಿವೆ.

ಮಿಸ್ ಮೇಯೋ ನಮ್ಮ ದೇಶಕ್ಕೆ ಬಂದು ಇಲ್ಲದ್ದು ಸಲ್ಲದ್ದು ನೀಚ ವಿಷಯಗಳೆಲ್ಲ ಬರೆದು ಪ್ರಪಂಚದಲ್ಲೇನೊ ಬಿತ್ತಿದಳು. ಆದರೆ ತನ್ನ ಜನ್ಮಭೂಮಿಯಾದ ಅಮೇರಿಕದಲ್ಲಿ ನಡೆಯುತ್ತಿರುವ ದೋಷಗಳು, ವ್ಯಭಿಚಾರಗಳು, ನೀಚಕೃತ್ಯಗಳು ಸಂಸ್ಕೃತಿಯುಳ್ಳ ಯಾವ ಜನಾಂಗಕ್ಕಾದರೂ ಗಾಬರಿಪಡಿಸದು. ತನ್ನ ದೇಶದ ಅನೀತಿಗಳನ್ನೂ ದುರ್ನೀತಿಗಳನ್ನೂ ಮುಚ್ಚಿಡುವುದಕ್ಕೋ ಏನೋ ಆ ಮುದುಕಿಯು ನಮ್ಮ ದೇಶದ ವಿಷಯವಾಗಿ ಹಾಗೆ ವಿಷಕಾರಿದ್ದು.

[ಪ್ರಜಾಮತ]

ಮಹಾಕವಿ ಶ್ರೀ ನಿಜಗುಣ ಶಿವಯೋಗಿ ಸ್ಮಾರಕೋತ್ಸವ ಮತ್ತು ಸಾಹಿತ್ಯದ ಸುಗ್ಗಿ

ಕಡೂರು ಹತ್ತಿರವಿರುವ ಶ್ರೀ ಶಿವಾನಂದಾಶ್ರಮದಲ್ಲಿ ಆಶ್ರಮಾಧ್ಯಕ್ಷರಾದ ಶ್ರೀ ಶ್ರೀ ಚನ್ನಬಸವ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯಾಶ್ರಯದಲ್ಲಿ ತಾ. ೨೪-೨-೩೬ನೇ ಸೋಮವಾರ "ಶ್ರೀ ನಿಜಗುಣ ಶಿವಯೋಗಿ ಸ್ಮಾರಕೋತ್ಸವ"ವೂ, ತಾ. ೨೫-೨-೩೬ನೇ ಮಂಗಳವಾರ "ಸಾಹಿತ್ಯದ ಸುಗ್ಗಿ" ಎಂಬ ಮಹೋತ್ಸವವೂ ನಡೆಸಲ್ಪಡುತ್ತವೆ.

ಸ್ಮಾರಕೋತ್ಸವದ ಅಧ್ಯಕ್ಷತೆಯನ್ನು ಅಖಿಲ ಕರ್ನಾಟಕದಲ್ಲಿ ವಿಖ್ಯಾತ ವಿದ್ವಾಂಸರೂ, ಬೆಳಗಾವಿ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲರೂ ಆದ ಶ್ರೀಮಾನ್ ಡಾ|| ಎಸ್. ಸಿ. ನಂದೀಮಠ ಎಂ. ಎ., ಪಿ. ಎಚ್. ಡಿ. ಅವರೂ, "ಸಾಹಿತ್ಯದ ಸುಗ್ಗಿ"ಯ ಅಧ್ಯಕ್ಷತೆಯನ್ನು ಚಿಕ್ಕಮಗಳೂರಿನಲ್ಲಿ ಮುನಸೀಫರೂ ಸಾಹಿತ್ಯಪ್ರಿಯರೂ ಆದ ಶ್ರೀಮಾನ್ ಟಿ. ಎಸ್. ಮಲ್ಲಪ್ಪನವರು ಬಿ. ಎ. ಎಲ್. ಎಲ್. ಬಿ. ಅವರೂ ವಹಿಸಲು ದಯಮಾಡಿ ಒಪ್ಪಿಕೊಂಡಿದ್ದಾರೆ.

ಹರತಾಳವನ್ನು ಆಚರಿಸದಿದ್ದರೆ ಭಯಂಕರ ಶಿಕ್ಷೆಗೆ ಒಳಪಡುವಿರಿ.

ಅಂಕೋಲೆ,

ತಾ. ೨೮-೧-೩೬ನೇ ದಿನವು ಅರಸರ ಶವಸಂಸ್ಕಾರ ದಿನವಾದ್ದರಿಂದ ಅಂಕೋಲೆಯ ಜನರಿಗೆ ಅಂದು ಹರತಾಳವನ್ನು ಆಚರಿಸಬೇಕೆಂದು ಹಿಂದಿನ ದಿನವೆ ಮಾಮ್ಲೆದಾರರ ಕಟ್ಟಪ್ಪಣೆ. ಆಚರಿಸದಿದ್ದರೆ ಪರಿಣಾಮದಿಂದಲೂ ಟಿವಂಕೆಯನ್ನು ಹಾಕಿದರು. ಆಗ ಅಂಕೋಲೆಯವರು ಒಟ್ಟುಗೂಡಿ ಬೆದರಿಕೆಯ ಮಾತುಗಳನ್ನು ಮಾಮ್ಲೆದಾರರು ಹಿಂತೆಗೆಯದಿದ್ದರೆ ಹರತಾಳವನ್ನು ಆಚರಿಸುವುದಿಲ್ಲವೆಂದು ಏಕಕಂಠದಿಂದ ಹೇಳಿದರು. ಮಾಮ್ಲೆದಾರರು ಅದಕ್ಕೆ ಒಪ್ಪಿಗೆಯನ್ನಿತ್ತರು. ಅನಂತರ ತಾ. ೨೯-೧-೩೬ರಲ್ಲಿ ಅಂಕೋಲೆಯ ಪ್ರಮುಖ ಪುರುಷರಾದ ಶ್ರೀ|| ಶೆಣಿವಿ ಶ್ಯಾಮರಾವ್ ಎಂಬವರಿಗೆ ಇದೇ ಮಾಮ್ಲೆದಾರರು ಆಸ್ಪತ್ರೆ ಮರದ ಬಳಿಯಲ್ಲಿದ್ದ ರಾಷ್ಟ್ರಧ್ವಜವನ್ನು ತೆಗೆಯಬೇಕೆಂದು ಅಪ್ಪಣೆಕೊಟ್ಟರು. ಸದ್ರಿ ಶೆಣಿವಿಯವರು ವಕೀಲರ ಬಳಿ ಇದರ ಪ್ರಸ್ತಾಪವನ್ನು ತೆಗೆದು ಅವರ ಅಭಿಪ್ರಾಯವನ್ನು ಪಡೆದು ಕಡೆಗೆ ತನಗೆ ಮಾತ್ರ ಆ ಕೆಲಸವನ್ನು ನೇಮಿಸಲು ಕಾರಣವೇನೆಂದು ಮಾಮ್ಲೆದಾರರನ್ನು ಕೇಳಿದರು. ಇದನ್ನೆಲ್ಲಾ ಕೇಳಿದ ಮಾಮ್ಲೆದಾರರು ಕೆಲವು ಜನರನ್ನು ಕರೆಕೊಂಡು ತಾನೇ ಅದನ್ನು ಕಿತ್ತೊಗೆದರು.

ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನಾ ಶಿವಮೊಗ್ಗಾ

(೧) ಈ ಸಮ್ಮೇಳನವು ಎಪ್ರಿಲ್ ತಿಂಗಳ ಅಂತ್ಯದಲ್ಲಿ ನಡೆಯಬೇಕೆಂದು ಇದರ ಜೊತೆಯಲ್ಲಿ ವೈದ್ಯ ವಿದ್ಯಾತ್ ಪರಿಷತ್ತು ರಸಾಯನಶಾಸ್ತ್ರ ಮತ್ತು ವಸ್ತು ಪ್ರದರ್ಶನವು ಸಹಾ ನಡೆಯಬೇಕೆಂದು ತಾ. ೩೦-೧-೩೬ ರಲ್ಲಿ ಶಿವಮೊಗ್ಗಾ ವೈದ್ಯ ಸಭೆಯವರು ತೀರ್ಮಾನಿಸಿರುತ್ತಾರೆ.

(೨) ಈ ಸಭೆಯವರು ಪ್ರಮುಖ ದೊಡ್ಡ ಮನುಷ್ಯರನ್ನೊಳಗೊಂಡ ಸ್ವಾಗತಸಮಿತಿಯನ್ನು ಸ್ಥಾಪಿಸಿರುವರು. ಮೈಸೂರು ಸರಕಾರದ ಹಾಜಿ ವಾಹಿನ್ನ ಮತ್ತು ಕೈಗಾರಿಕೆ ಖಾತೆಯ ಡೈರೆಕ್ಟರ್ ಆದ ನವರತ್ನ ರಾಮರಾವ್ ಬಿ. ಎ. ಬಿ. ಎಲ್. ಯವರು ಅಧ್ಯಕ್ಷರಾಗಲು ಒಪ್ಪಿರುವರು. ಕರ್ನಾಟಕದ ನಾನಾ ಭಾಗಗಳಿಂದ ಸುಮಾರು ಮುನ್ನೂರು ಜನ ಆಯುರ್ವೇದ ವಿದ್ವಾಂಸರು ಬರಬಹುದು. ಸಮ್ಮೇಳನವು ಆಯುರ್ವೇದಾಭಿವೃದ್ಧಿ ಪ್ರಾಮುಖ್ಯವಾಗಿರುವುದರಿಂದ ಪ್ರತಿಯೊಬ್ಬನು ಅದನ್ನು ಯಶಸ್ವೀ ಮಾಡುವುದು ಅವನ ಕರ್ತವ್ಯವಾಗಿದೆ.

(೩) ಎಲ್ಲಾ ವೈದ್ಯರು ಸಮ್ಮೇಳನ ಕಾಲಕ್ಕೆ ಸರಿಯಾಗಿ ದಯಮಾಡಿಸಿ ತಮ್ಮ ಅಮೂಲ್ಯಾನುಭವಗಳನ್ನು ತಿಳಿಸಿ ಆಯುರ್ವೇದಾಭಿವೃದ್ಧಿಗೆ ಬೇಕಾದ ಸಲಹೆಗಳನ್ನು ಕೊಟ್ಟು ಸಹಕರಿಸಬೇಕಾಗಿ ಕೋರುತ್ತೇವೆ. ಅಲ್ಲದೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಲ್ಲಾ ಮಹಾಜನರೂ ಮುಂದೆ ಬಂದು ಸ್ವಾಗತ ಸಮಿತಿಯ ಸದಸ್ಯರಾಗಿ ಸಮ್ಮೇಳನವನ್ನು ಯಶಸ್ವಿಯನ್ನಾಗಿ ಮಾಡಿ ಆಯುರ್ವೇದಾಭಿವೃದ್ಧಿಗೆ ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.

(೪) ಕರ್ನಾಟಕದೊಳಗಿನ ಎಲ್ಲ ವೈದ್ಯರ ಪತ್ತೆಯು ಸಂಪೂರ್ಣವಾಗಿ ಸಿಕ್ಕಿಲ್ಲವಾದ್ದರಿಂದ ದಯವಿಟ್ಟು ಆಯಾ ತಾಲೂಕುಗಳಲ್ಲಿರುವ ವೈದ್ಯರ ಪಟ್ಟಿಯನ್ನು ಕಳುಹಿಸಿ ಕೊಟ್ಟವರಿಗೆ ನಾನು ತುಂಬಾ ಕೃತಜ್ಞನಾಗಿರುತ್ತೇನೆ.

ಬೀಜಗಳು.

೨೫ ವ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ರೂ. ೪.
೨೫ ,, ಯೂರೋಪ ,, ,, ೫.
೨೫ ,, ಹೂವಿನ ಬೀಜಗಳು ,, ೫

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ರೂ ೧೦.

ಸಿಂಬೆ, ಕೊಡಗು ಕಿತ್ತಳೆ ಚೇಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಲೇವು, ಬಿಟ್ರೀಸ್, ಅಂಜೂರ, ವಾಕ್ಟೆ ಗಿಡಗಳು ಡಜನ್ ೧ಕ್ಕೆ ರೂ. ೯.

ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ರೂ. ೧೨.

ಪಾರಿಜಾತ, ನಂದಿವರ್ಧನ, ದಾಶಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ರೂ. ೬.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕೆಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,

ಇಂಟರ್ ನ್ಯಾಷನಲ್ ಸೀಡ್ ಕಂಪೆನಿ,
ಲಾಲ್ ಬಾಗ್ ಫೋರ್ಟ್ ರೋಡ್,
ಬೆಂಗಳೂರು ಸಿಟಿ.

The Canara Bank Ltd., Kasaragod.

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಕಾಸರಗೋಡು.

NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಮೇಲಿನ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಜಾರಿ ಆಗದೆ ಬಂದಿರುವುದರಿಂದಲೂ, ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಐವೇಜುಗಳನ್ನು ಇದೇ 1936ನೇ ಇಸವಿ ಮಾರ್ಚ ತಾರೀಕು 10ನೇ ಮಂಗಳವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ, ಇದೇ 1936ನೇ ಇಸವಿ ಮಾರ್ಚ ತಾರೀಕು 11ನೇ ಬುಧವಾರ ದಿವಸ ಮಧ್ಯಾಹ್ನ 1 ಗಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

ಜ ನಂ 1 ಲೋನ್ ನಂ S L 104/84 ಹೆಸರು Shankara Achary, S/o Somaya Achary Carpenter, Paivalike, Mangalpady ಅಸ್ಲು ರೂ 10-0-0

ಜ ನಂ 2 ಲೋನ್ ನಂ L 1419/84 ಹೆಸರು Abdulkadar, S/o Abdulrahiman, Fisherman Padne, Badhekatil, Pilicode ಅಸ್ಲು ರೂಪಾಯಿ 80 0-0

ಜ ನಂ 3 ಲೋನ್ ನಂ L 493 84 ಹೆಸರು Abdulrahiman S/o Abdula Cultivator, Adoor, Adur Kasaragod. ಅಸ್ಲು ರೂ 60-0-0

ಜ. ನಂ 4. ಲೋನ್ ನಂ L 2588/88. ಹೆಸರು Kunhi, N/o Subbunhi, Toddy Shop Keeper, Koipady, Kumbla ಅಸ್ಲು ರೂ 50-0-0.

ಜ ನಂ 5 ಲೋನ್ ನಂ L 2551/88. ಹೆಸರು Anduman, N/o Abdula, Cultivator, Ajanoor, Kanhangad ಅಸ್ಲು ರೂ 110-0-0.

ಜ. ನಂ 6 ಲೋನ್ ನಂ L 2157/84 ಹೆಸರು B Devaraya Bhakta, S/o Venkatesha Bhakta, Merchant, Kotachery, Kanhangad ಅಸ್ಲು ರೂ 80-0 0

Office of the Bank Kasaragod 10-2-1936

M. A Bhat, *Agent*

ಎಚ್ಚರ!! — ಎಚ್ಚರ!!!

ರೋಗ ಬಂದ ಮೇಲೆ ನರಳಬೇಡಿರಿ!

ಸುಖಾನಂದ (ಗಂಡಸರಿಗೆ) ಸೊಗಸಾದ ರಬ್ಬರು ಸಾಧನ ರತಿ ಕ್ರೀಡೆಗೆ ಅತಂಕವಿಲ್ಲ. ಆದರೂ ಪ್ರೇಮಕರ ಗರ್ಭ ಶಕ್ತಿಯುಳ್ಳದ್ದು ದೇಹ ರೋಗಗಳಂತೂ ಬರುವಂತೆಯೇ ಇಲ್ಲ

ಬೆಲೆ 1ಕ್ಕೆ ರೂ 1-8-0

ಪೆಸಾರಿಸ್ (ಹೆಂಗಸರಿಗೆ) ಸರ್ವೋತ್ಕೃಷ್ಟವಾದ ರಬ್ಬರು ಸಾಧನ ಗರ್ಭಧಾರಣವಾಗುವದಿಲ್ಲ ಉಪಯೋಗಿಸುವಾಗ ಗೊತ್ತಾಗುವದಿಲ್ಲ ಬಹುಕಾಲ ಬಾಳಿಕೆ ಬರುವುದು ಬೆಲೆ 1ಕ್ಕೆ ರೂ 2-1-0

ಆರ್ಡರಿನೊಡನೆ 4 ಆಣೆಯ ಸ್ಟಾಂಪಿರಬೇಕು

ಸಿಗುವ ವಿಳಾಸ —ಸ್ಟಾರ್ ಅಂಡ್ ಕಂಪೆನಿ, ಕೃಷ್ಣಪ್ಪ ನಾಯಕನ ಟೇಂಕ್ ಬೀದಿ ಮದರಾಸು.

ದೇಹವನ್ನು ಕೊರಗಿಸುವ ಕೆಟ್ಟ ಕೆಮ್ಮನ್ನೂ, ಚಳಿಯನ್ನೂ ನಾಶಗೊಳಿಸಿರಿ.

ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.



ಚಳಿಜ್ವರದಿಂದಲೂ, ಕೆಟ್ಟ ಕೆಮ್ಮಿನಿಂದಲೂ ಸುರಕ್ಷಿತವಾಗಿರಬೇಕೆ? ಹಾಗಾದರೆ ಕೂಡಲೇ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ. ಅವುಗಳಿಂದ ಬರುವ ಸ್ವಾದಯುಕ್ತ ಹೊಗೆಯು ಎಂತಹ ವಿಷಾಣುಗಳನ್ನು ನಾಶಗೊಳಿಸಬಲ್ಲದು. ಈ ಹೊಗೆಯೇ ಗಂಟಲಿಗೂ ಶ್ವಾಸಕೋಶಗಳಿಗೂ ಹೋಗಿ ನಿಮಗೆ ನವಚೇತನವನ್ನು ಕೊಡುವುದು. ಗಂಟಲಿನಲ್ಲಿರುವ ಕಫವನ್ನು ಹೊರಗೆಡವಿ ಸುಖನಿದ್ರೆಯುಂಟಾಗುವುದು. ಆದ್ದರಿಂದ ಎಡೆಸೋಂಪು, ಜ್ವರ ಇವುಗಳಿಂದ ಪೀಡಿತರಾಗಿದ್ದರೆ ದಿನಾಲೂ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ. ಎಲ್ಲಾ ಔಷಧಿಯ ಅಂಗಡಿಗಳಲ್ಲೂ ಬಾಟ 1ಕ್ಕೆ ರೂ 1ರಂತೆ ಮಾರಲ್ಪಡುವುದು

ಏಜಂಟರ –

ಮೆಸರ್ಸ್ ಥಾಥಾ ಎಂಡ್ ಕಂಪೆನಿ, ಪಿ ಟಿ ಮದ್ರಾಸು

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಪೆಪ್ಸ್ PEPS

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿಕ್ಕಮಗಳೂರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಾಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.

ಮುಂಬಾಯಿಯಿಂದ – ಪೂನಾ – ಬೆಳಗಾಂವ – ಧಾರವಾಡ – ಹುಬ್ಬಳ್ಳಿ – ಗೋವಾ ಇವಲ್ಲ ಕಡೆಗಳಿಂದ ಮಂಗಳೂರಿಗೆ – ಪುತ್ತೂರು – ಉಡುಪಿ - ಕಾರ್ಕಳ – ಬೆಳ್ತಂಗಡಿ ವೇಣೂರು – ಬಂಟವಾಳ ಮೊದಲಾದ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

ಶೀಘ್ರ ಪ್ರಯಾಣ- ಅನುಕೂಲ ಸೌಕರ್ಯ- ಅತ್ಯಲ್ಪ ಖರ್ಚು- ಸುಂದರವಾದ ನೋಟ.

ಅಲ್ಲದೆ

ಮೈಸೂರಿನ ಅರಸರ ಶಿಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ – ಕೈಗಾರಿಕೆಯ ಕೇಂದ್ರವಾದ ಭದ್ರಾವತಿ – ಶಿಲಾಶಿಲ್ಪದ ಬೇಲೂರು, ಹಳೆಬೀಡು – ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು –

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ

Chikmagalur Public Conveyance Motor Service,

CHIKMAGALUR.

ಹಿಂದೂದೇಶಕ್ಕೆ ಬ್ರಿಟಿಷ ಕೆಲಸಗಾರರು ಬರುವರೆ?

ಕಾಂ|| ಪಾರ್ಲಿಮೆಂಟರಿ ಬೋರ್ಡಿನ ಸಭೆ.

ಪಂಡಿತ ನೆಹರುಗಳ ವಿಚಾರ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳು.

ಕಲ್ಲಿಕೋಟೆಯಲ್ಲಿ ಭಯಂಕರ ವಿಷಪ್ರಯೋಗ.

ಹಿಂದೂದೇಶಕ್ಕೆ ಬ್ರಿಟಿಷ ಕೆಲಸಗಾರರು ಬರುವರೆ?

ಇಂಡಿಯಾ ಸರಕಾರದ ಲೇಬರ್ ಮತ್ತು ಇಂಡಸ್ಟ್ರಿಸ್ ಸದಸ್ಯರಾದ ಸರ್ ಫ್ರೆಂಕ ನೊಯ್ಸರು, "ಹಿಂದೂದೇಶಕ್ಕೆ ಬ್ರಿಟಿಷ ಕೆಲಸಗಾರರನ್ನು ಕರೆವ ವಿಚಾರ, ಸೆಕ್ರೆಟರಿ ಆಫ್ ಸ್ಟೇಟಿನವರಿಗೂ, ಇಂಡಿಯಾ ಸರಕಾರಕ್ಕೂ ಪತ್ರವ್ಯವಹಾರ ನಡೆದಿರುತ್ತದೆಯೊ," ಎಂದು ಶ್ರೀ ಅಖಿಲ್ ಚಂದ್ರದತ್ತರೆಂಬ ಸದಸ್ಯರು ಅಸೆಂಬ್ಲಿಯಲ್ಲಿ ಕೇಳಿದ ಪ್ರಶ್ನೆಗೆ ಯಾವತ್ತು ಪತ್ರವ್ಯವಹಾರ ನಡೆಯಲಿಲ್ಲವೆಂದು ತಿಳಿಸಿದರು. ಬ್ರಿಟನಿನಲ್ಲಿ ನಿರುದ್ಯೋಗಿಗಳಾದ ಕೆಲಸಗಾರರಿಗೆ ಹಿಂದೂದೇಶದಲ್ಲಿ ಉದ್ಯೋಗ ದೊರಕಿಸುವ ಆಲೋಚನೆಯು ಬ್ರಿಟಿಷ ಸರಕಾರಕ್ಕೆ ಇತ್ತೆಂದು ಒಂದು ವಾರ್ತೆಯು ಹರಡಿತ್ತು.

ಎಸೆಂಬ್ಲಿ ಅಧಿವೇಶನಗಳ ವ್ಯಯ.

ಸರ್. ಎನ್. ಎನ್. ಸರಕಾರ್‌ರವರು, ಕಳೆದ ಎರಡು ಎಸೆಂಬ್ಲಿ ಅಧಿವೇಶನಗಳ ಖರ್ಚಿನ ಪಟ್ಟಿಯನ್ನು ಈ ಭಾರಿಯ ಎಸೆಂಬ್ಲಿಯಲ್ಲಿ ಪ್ರಕಟಮಾಡಿರುವರು ೧೯೩೫ರಲ್ಲಿ ಡಿಲ್ಲಿಯಲ್ಲಿ ನಡೆದ ಅಧಿವೇಶನಕ್ಕೆ ಸರಕಾರಿ ಸದಸ್ಯರಿಗೆ ರೂ. ೩೫೦೫೫ಯನ್ನೂ ಇತರ ಸದಸ್ಯರಿಗೆ ರೂ. ೨೫೫,೭೪೩ನ್ನೂ ಭತ್ತೆ ಸಂದಿರುತ್ತದೆಂದೂ, ಅದೇ ವರ್ಷದಲ್ಲಿ ಸಿಮ್ಲಾ ಅಧಿವೇಶನಕ್ಕೆ, ಸರಕಾರಿ ಸದಸ್ಯರಿಗೆ ರೂ. ೧೧,೨೮೦, ಇತರ ಸದಸ್ಯರಿಗೆ, ರೂ. ೧೦೪,೪೩೨ ಭತ್ತೆ ಸಂದಿರುತ್ತದೆಂದೂ ಇದರಿಂದ ವ್ಯಕ್ತವಾಗುತ್ತದೆ.

ಕಲ್ಲಿಕೋಟೆಯಲ್ಲಿ ಭಯಂಕರ ವಿಷಪ್ರಯೋಗ

ಕಲ್ಲಿಕೋಟೆಯಲ್ಲಿ ಹರಿಜನರ ಹಬ್ಬವೊಂದು ನಡೆಯಿತು. ಒಂದು ಕಡೆಯಲ್ಲಿ ಒಂದು ಭಕ್ಷ್ಯವು ಹಂಚಲ್ಪಟ್ಟಿತು. ಈ ಭಕ್ಷ್ಯದ ತಯಾರಿಸುವಿಕೆಯಲ್ಲಿ ಒಂದು ವಿಷಕರ ವಸ್ತುವು ಬಿದ್ದುದರಿಂದ, ಸಾಧಾರಣ ೭೦ ಜನರಿಗೆ ವಿಷಪ್ರಯೋಗವಾಗಿರುತ್ತದೆ. ೩೪ ಜನರು ಮಡಿದಿರುವರು ಬಾಕಿ ಇದ್ದವರು ಭಯಂಕರ ಸ್ಥಿತಿಯಲ್ಲಿರುವರು ಕಾಲೇರಾ ತಗಲಿದಂತೆ, ವಿಷಪ್ರಯೋಗವಾದವರು ಕಾಣುತ್ತಿದ್ದಾರಂತೆ.

ಹಿಂದೂದೇಶದ ಮೋಟರು ಕೈಗಾರಿಕೆ.

ಈ ವಿಚಾರದಲ್ಲಿ ಅನುಭವ ಪಡೆಯಲು, ನಮ್ಮ ಪ್ರಸಿದ್ಧ ಶ್ರೀ ಸರ್ ವಿಶ್ವೇಶ್ವರಯ್ಯನವರು ಪಾಶ್ಚಾತ್ಯ ದೇಶದ ಕಾರ್ಖಾನೆಗಳನ್ನು ಸಂದರ್ಶಿಸಿ ಬಂದಿರುವರು. ಈ ಅನುಭವದಿಂದ ಹಿಂದೂದೇಶದಲ್ಲಿ ಒಂದು ಮೋಟರು ಕಾರ್ಖಾನೆಯನ್ನು ಸ್ಥಾಪಿಸಬೇಕಾಗುವ ಕುರಿತು ಇವರ ವರದಿಯು ಬೇಗನೇ ಪ್ರಕಟವಾಗುವುದು ಈ ಸಂಸ್ಥೆಯ ನಿರ್ಮಾಣಕ್ಕೆ ಧನಾಢ್ಯರ ಸಭೆಯೊಂದು ಬೇಗನೇ ಸೇರುವುದು ಈ ವರ್ಷದ ಅಂತ್ಯದೊಳಗೆ ಭಾರತೀಯ ತಯಾರಿಯ ಮೋಟಾರು ವಾಹನಗಳು ಹೊರಬರುವುವು.

ದೆಸ್ಸಿ ನಗರದ ಮೇಲೆ ಭಯಂಕರ ಬೋಂಬಿನ ಪ್ರಯೋಗ.

ಇಟೆಲಿಯಾನರು ಹಬಸಿ ಸೈನ್ಯವು ಸೇರಿರುವ ದೆಸ್ಸಿ ನಗರದ ಮೇಲೆ ಭಯಂಕರ ಬೋಂಬಿನ ಪ್ರಯೋಗ ಮಾಡಿರುವರು. ಹಬಸಿ ಚಕ್ರವರ್ತಿಯವರನ್ನು ಹೇಗಾದರೂ ಕೊಲೆ ಮಾಡುವುದು ಈ ಕ್ರೂರ ಕೃತ್ಯದ ಉದ್ದೇಶವಂತೆ. ಇವುಗಳಿಂದ ವಿಶೇಷ ಹಾನಿಯೇನೂ ಉಂಟಾಗಲಿಲ್ಲ.

ಹಬಸಿಗಳು ಹಿಂದೆ ಸರಿದರು!

ಮಕಾಲೆಯನ್ನು ಹಿಡಿಯಲು ಮಾಡಿದ ಹಬಸಿಯವರ ಪ್ರಯತ್ನಗಳು, ಭಾರೀ ಸಮರದ ನಂತರ, ನಿಷ್ಫಲವಾಗಿರುತ್ತವೆ, ಹಬಸಿಗಳು ಹಿಂದೆ ಸರಿಯಬೇಕಾಯಿತು, ಇಟೇಲಿಯಾನರು ಮಾಡಿದ ಭದ್ರತಾ ಯೋಜನೆಗಳು ಬಹಳ ಶ್ರೇಷ್ಠವಾಗಿದ್ದವಂತೆ ಸುತ್ತ ಹಾಕಿದ ಮುಳ್ಳುಬೇಲಿಯಲ್ಲಿ ಹಬಸಿಗಳು ಸಿಲುಕಿ ಭಾರಿ ಪ್ರಯಾಸಪಟ್ಟಿರುವರು. ಹಬಸಿ ನಾಯಕನಾದ ರಾಸ್‌ಸೆಯೋಮ್‌ರಿಗೆ ಇಟೇಲಿಯಾನರ ಅಷ್ಟು ಬಿದ್ದ ಕಗ್ಗಳ ಎದುರು, ಹಿಂದೆ ಸರಿಯಬೇಕಾಯಿತು.

7000 ಮಂದಿ ಇಟೇಲಿಯನರು ಹಿಂದಿರುಗಿರುವರು

೭೦೦೦ ಮಂದಿ ಇಟೇಲಿಯಾನ ಸೈನಿಕರು, ರೋಗಪೀಡಿತರಾದುದರಿಂದಲೂ, ಗಾಯ ಹೊಂದಿದುದರಿಂದಲೂ, ಮಾತೃಭೂಮಿಗೆ ಹಿಂದೆ ಹೋಗಿರುತ್ತಾರೆ. ಕಳೆದ ಜನವರಿ ೩೧ ಮತ್ತು ಫೆಬ್ರವರಿ ೭ರ ಒಳಗೆ ೩೦,೦೦೦ ಸೈನಿಕರು ಇಟೇಲಿಯಾನಿಂದ ರಣರಂಗಕ್ಕೆ ಹೋಗಿರುವರು. ಇನ್ನೂ ಹೆಚ್ಚಿನ ಸೈನ್ಯ ದಂಡಳವು ಅತ್ತಕಡೆಗೆ ಹೋಗಲಿದೆ. ಇವರೊಂದಿಗೆ ೩೪೦೦ ಟನ್ ಸಿಡಿಮದ್ದೂ, ೪೦೦೦ ಟನ್ ಎಣ್ಣೆ ಮತ್ತು ಸಿಮೆಂಟು ಇತ್ಯಾದಿ ಸಾಮಾನುಗಳು ಹೋಗಿವೆ. ಸುಯೇಜ ಕಾಲುವೆ ಸಂಸ್ಥೆಗೆ ಸಾಧಾರಣ ೪೦,೦೦೦ ಪೌಂಡು ಸುಂಕದ ರೂಪದಲ್ಲಿ ಕೊಟ್ಟಿರುವರು

ತಿರುವಾಂಕೂರಿನ ಮಹಾರಾಣಿಯವರಾದ ಶ್ರೀಮತಿ ಸೇತು ಪಾರ್ವತಿ ಬಾಯಿಯವರು.

ಇವರು ಅಖಿಲ ಭಾರತ ಸ್ತ್ರೀಯರ ಪರಿಷತ್ತಿನ ಕಳೆದ ದಸಂಬರದಲ್ಲಿ ತಿರುವಾಂಕೂರಿನಲ್ಲಿ ಜರಗಿದ ೧೦ನೇ ಅಧಿವೇಶನದ ಅಧ್ಯಕ್ಷರಾಗಿದ್ದರು ಈ ಭಾರಿ ಶ್ರೀ ಮಹಾರಾಣಿಯವರ ಕೃಪೆಯಿಂದ ಬಹಳ ವೈಭವದಿಂದ ಪರಿಷತ್ತಿನ ಕಾರ್ಯವು ಇತರ ವರ್ಷಗಳಿಗಿಂತಲೂ ಯಶಸ್ವಿಯಾಗಿ ನಡೆಯಿತು. ಶ್ರೀ ಮಹಾರಾಣಿಯವರು ಅಂದಿನ ಅಧಿವೇಶನದ ಒಂದು ದಿನದಲ್ಲಿ ಅತಿಥಿಗಳಿಗೆ ತಮ್ಮ ಕುದಿರ್ ಅರಮನೆಯಲ್ಲಿ ಬಹಳ ವೈಭವದಿಂದ ಒಂದು ವಿಹಾರಕೂಟವನ್ನು ಕೊಟ್ಟರು ಅತಿಥಿಗಳಿಗಾಗಿ ಅನೇಕ ವಿನೋದಗಳು ನಡೆದಿದ್ದವು.

ಸಿಂಗಾಪುರದಲ್ಲಿ ಬ್ರಿಟಿಷರು ಸೇನಾಬಲವನ್ನು ಹೆಚ್ಚಿಸುವರು.

ಸಿಂಗಾಪುರದಲ್ಲಿ ಬ್ರಿಟಿಷ ಸೇನಾಬಲವನ್ನು ಈಗಿನದಕ್ಕಿಂತ ಮೂರುಪಾಲಷ್ಟು ಹೆಚ್ಚಿಸಲು ಸಿದ್ಧತೆಗಳಾಗುತ್ತಿವೆ ಮೆಶಿನ್‌ಗನ್‌ಗಳ ಉಪಯೋಗಕ್ಕೆ ತರಬೇತು ಹೊಂದಿದ ಸೇನಾಸಮೂಹವು ಇಲ್ಲಿಗೆ ಕಳುಹಿಸಲಾಗುವುದು ಪೌರ್ವಾತ್ಯದಲ್ಲಿ ಸ್ವಲ್ಪ ಗಲಭೆಯು ಉಂಟಾಗಿರಲು ಬ್ರಿಟಿಷರು ಈ ರೀತಿ ವರ್ತಿಸಿರುವರೆಂದು ಕೆಲವರ ಊಹೆ

ಹರಿಜನರು ಮತ್ತು ದೇವಾಲಯಗಳ ಪ್ರವೇಶ.

ಡಾ। ಅಂಬೇಡ್ಕರರು ಹಿಂದೂ ಧರ್ಮವನ್ನು ತ್ಯಜಿಸುವ ನಿರ್ಧಾರವು ಮೊನ್ನೆ ಡಿಲ್ಲಿಯಲ್ಲಿ ನಡೆದ ಹರಿಜನರ ಸೇವಕ ಸೆಂಟ್ರಲ್ ಸಂಘದ ಸದಸ್ಯರಲ್ಲಿ ಅಷ್ಟೊಂದು ಭಯವನ್ನು ಉಂಟುಮಾಡಲಿಲ್ಲ. ಆದರೆ ಇತ್ತೀಚೆಗೆ ಹರಿಜನರಲ್ಲಿ ಉಂಟಾದ ಅಸಮಾಧಾನವು, ಹರಿಜನರಿಗೆ ಹಿಂದೂಧರ್ಮದಲ್ಲಿ ನ್ಯಾಯ ದೊರಕುವಂತೆ ಸಾಧಿಸಬೇಕಾಗಿ ನಿರ್ಧಾರ ಮಾಡುವಂತೆ ಮಾಡಿರುತ್ತದೆ. ಈ ಸಂಘವು ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ಕೊಡುವ ವಿಚಾರವನ್ನು ಆಲೋಚಿಸಲು ಒಂದು ಸಂಪೂರ್ಣ ದಿನವನ್ನು ಕಳೆದಿರುವರು. ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ದೊರಕುವಂತೆ, ಸೆಂಟ್ರಲ್ ಸೇವಕ ಸಂಘವು ಸಾಧಿಸತಕ್ಕದೆಂದು ಠರಾವುಗಳಾದವು. ಈ ಕಾರ್ಯದಲ್ಲಿ ಮಹಾತ್ಮಾ ಗಾಂಧಿಯವರನ್ನು ಅಗಿಂಥಾಗ್ಯೆ ವಿಚಾರಿಸಬೇಕೆಂದಾಗಿದೆ.

ಮಿ। ಡಿ. ವೆಲೆರರು ದುಃಖಿತರಾಗಿರುವರು.

ಐರಿಷ್ ಫ್ರೀಸ್ಟೇಟಿನ ಅಧ್ಯಕ್ಷರಾದ ಡಿ. ವೆಲೆರರ ಮಗನಾದ ಮಿ। ಬ್ರಾಯಾ ಪ್ರಡಿ ವೆಲರರು ತನ್ನ ಹಿರ್ಯ ಬಂಧುಗಳೊಡನೆ ಕುದುರೆಸವಾರಿ ಮಾಡುತ್ತಿರುವಾಗ, ತಲೆಯು ಒಂದು ಮರದ ಗೆಲ್ಲಿಗೆ ತಗಲಿ, ಸ್ವಾಧೀನತಪ್ಪಿ ಕುದುರೆಯಿಂದ ಕೆಳಗೆ ಬಿದ್ದು ವಿಶೇಷತರದ ಹಾನಿಪಡೆದರು ಆಸ್ಪತ್ರೆಗೆ ಒಯ್ಯಲಾಗಿ ಅಲ್ಲಿ ಮೃತರಾಗಿರುವರು. ತಂದೆ ಡಿ. ವೆಲರರು ಮರಣದ ಸಮಯ ಮಗನ ಹತ್ತಿರವಿದ್ದರು.

ಕಾಂಗ್ರೆಸ್ ಮತ್ತು ಚುನಾವಣೆ.

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸಭೆಯು ಮೊನ್ನೆ ಡಿಲ್ಲಿಯಲ್ಲಿ ಭುಲಾಬಾಯಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು ಕಾಂಗ್ರೆಸ್ ನವರಾಜಶಾಸನದಿಂದಾಗಿ ನಿರ್ಮಾಣವಾಗುವ ಪ್ರಾಂತಿಕ ಎಸೆಂಬ್ಲಿಗಳಲ್ಲಿ ಭಾಗವಹಿಸತಕ್ಕದೊ ಮತ್ತು ಮುಂದಿನ ಸರಕಾರದಲ್ಲಿ ಅಧಿಕಾರಸೂತ್ರವನ್ನು ವಹಿಸತಕ್ಕದ್ದೊ ಎಂಬ ಚರ್ಚೆಯು ಮುಖ್ಯ ವಿಷಯವಾಗಿತ್ತು ಅನೇಕ ಪ್ರಮುಖ ಕಾಂಗ್ರೆಸ್‌ವಾಲರು ಈ ಸಭೆಗೆ ಬಂದಿದ್ದರು. ಎರಡು ದಿವಸ ಸಭೆನಡೆದು, ಬಹಳ ಚರ್ಚೆನಡೆದು, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಸೂಚನೆಗಳನ್ನನುಸರಿಸಿ ಆಗತಕ್ಕಂಥ ಪ್ರಾಂತಿಕ ಎಸೆಂಬ್ಲಿ ಚುನಾವಣೆಯಲ್ಲಿ ಭಾಗವಹಿಸತಕ್ಕದೆಂದು ನವರಾಜಶಾಸನವನ್ನು ಸುಧಾರಣೆಗೊಳಿಸಲು, ನವೀನ ಸರಕಾರದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಸೂತ್ರವನ್ನು ವಹಿಸಬೇಕೆಂದೂ ನಿರ್ಧಾರಗಳಾದುವು. ಈ ಸಭೆಯು ವರದಿಯು ಭುಲಾಬಾಯಿ ದೇಸಾಯಿಯವರಿಂದ ಕಾಂಗ್ರೆಸ್ ವರ್ಕಿಂಗ್‌ಕಮಿಟಿಗೆ ಕಳುಹಿಸಲಾಗುವುದು.

ಲಾಹೋರಿನಲ್ಲಿ ಮುಸ್ಲಿಮರ ಚಳವಳ.

ಲಾಹೋರಿನ ಮುಸ್ಲಿಮರು ವಿಶೇಷತರದ ಚಳವಳವನ್ನು ಪ್ರಾರಂಭಮಾಡಿರುವರು. ಚಳವಳದ ನಾಯಕರಾದ ಮೌಲಾ ಬಕ್ಷರೂ, ಯಸಬುಲ್ ಹಸನರೂ ಪೋಲೀಸರಿಂದ ತಪ್ಪಿಸಿಕೊಳ್ಳಲು ಬಾದಾಶಾಯಿ ಮಸೀದಿಯನ್ನು ಸೇರಿರುವರು ಇವರನ್ನು ಹಿಡಿಯಲು ಪೋಲಿಸರು, ಗುಪ್ತ ಪೋಲೀಸರು ಭಾರಿ ಪ್ರಯತ್ನಪಡುತ್ತಿದ್ದಾರೆ ಆದರೆ ಇಷ್ಟರ ತನಕ ಇವರನ್ನು ಹಿಡಿಯಲು ಸಾಧ್ಯವಾಗಲಿಲ್ಲ ಈ ನಾಯಕರು ಶಾಹಿದ್‌ಗಂಜ ಮಸೀದಿಯಲ್ಲಿ ಪ್ರಾರ್ಥನೆಮಾಡಲು ೬ ಮಂದಿಗಳಂತೆ ತಂಡತಂಡಗಳನ್ನೇ ಕಳುಹಿಸಿಕೊಡುತ್ತಿದ್ದಾರೆ. ಇವರನ್ನು ಪೋಲೀಸರು ಕೈದು ಮಾಡುತ್ತಿದ್ದಾರೆ. ಮುಸ್ಲಿಮ ಸ್ತ್ರೀಯರು ಬುರ್ಕೆಗಳನ್ನು ಧರಿಸಿ ಬಾದಶಾಯಿ ಮಸೀದಿಯಲ್ಲಿ ಪ್ರಾರ್ಥನೆ ಮಾಡಿದರು. ಕೋರ್ಟಿನಲ್ಲಿ ನ್ಯಾಯವು ಇತ್ಯರ್ಥವಾಗುವ ವರೆಗೆ ಶಾಹಿದ್‌ಗಂಜ ಮಸೀದಿಯನ್ನು ಅಧಿಕಾರಿಗಳು ವಶೀಕರಿಸಿದರೆ ಮುಸ್ಲಿಮರು ಸಮಾಧಾನಪಡುವರಂತೆ

ಪಂಡಿತ ನೆಹರುಗಳವರ ಲಂಡನ್ ಪ್ರವಾಸದ ಕುರಿತು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳು.

ಓರ್ವ ಸಭಾಸ್ಯರು ಕೇಳಿದ ಪ್ರಶ್ನೆಗೆ, ಹಿಂದೂದೇಶದ ಅಂಡರ್ ಸೆಕ್ರಿಟರಿಗಳವರಾದ ಮಿ। ಬಟ್ಲರರವರು, ಪಂಡಿತ ನೆಹರುಗಳ ಸಜೆಯು ಫೆಬ್ರವರಿ ೧೫ರ ವರೇಗೆ ಇರುವುದೆಂದು ಅವರ ಪತ್ನಿಯರ ಆರೋಗ್ಯ ಸ್ಥಿತಿಯಿಂದಾಗಿ ಅವರ ಅವಧಿ ಮುಗಿಯುವ ಮೊದಲೇ ವಿಮುಕ್ತಗೊಳಿಸಿದರೆಂದು. ಮತ್ತು ಅವರ ಸಜೆಯನ್ನು ಫೆಬ್ರವರಿ ೧೫ರಿಂದ ಮುಂದುವರಿಸಲಾಗುವುದಿಲ್ಲವೆಂದೂ ಉತ್ತರವಿತ್ತರು. ಅವರ ಶಿಕ್ಷೆಯ ಅವಧಿಯು ಮುಗಿಯುವುದರಿಂದ, ಅವರನ್ನು ಬ್ರಿಟನಿನಲ್ಲಿ ಪ್ರಚಾರಕಾರ್ಯ ನಿಮಿತ್ತ ಸಂದರ್ಶಿಸಲು ಯಾಕೆ ಬಿಟ್ಟದ್ದು ಎಂಬುದಾಗಿ ಕೇಳಿದ ಪ್ರಶ್ನೆಗೆ ಆ ಕುರಿತು ಪಂಡಿತ ನೆಹರುಗಳವರಿಗೂ ಸರಕಾರಕ್ಕೂ ಪತ್ರವ್ಯವಹಾರ ನಡೆದಿರುತ್ತದೆಂದೂ, ಸರಕಾರವು ಇವರ ಮೇಲೆ ಯಾವತ್ತೂ ನಿರ್ಬಂಧಗಳನ್ನು ಹಾಕಿಲ್ಲವೆಂದೂ ಉತ್ತರ ದೊರಕಿತು. ಬಂಗಾಳ ಸರಕಾರ ವರದಿಯಲ್ಲಿರುವ ಶ್ರೀ ಜವಾಹರ್ ಲಾಲರನ್ನು ಅವಮಾನಗೊಳಿಸುವ ವಿಷಯವು ತೆಗೆಯಲಾಗಿದೆಯೊ ಎಂಬ ಪ್ರಶ್ನೆಗೆ ಸರಕಾರವು ತಮ್ಮ ಹತ್ತಿರ ಇರುವ ಪ್ರತಿಗಳಲ್ಲಿ ಅದನ್ನು ತೆಗೆದಿರುವರೆಂದು ತಿಳಿದು ಬಂತು.

ಯೌವನ ಮುಸಲೋನಿಯು. 1911

೧೯೧೧ರಲ್ಲಿ ಇಟೇಲಿಯವು ಟ್ರಿಪೋಲಿ ಎಂಬ ಎಬಿಸೀನಿಯಾದ ಒಂದು ದೇಶದ ಮೇಲೆ ಯುದ್ಧ ನಡೆಯಿಸಲು, ತನ್ನ ಸೈನಿಕರನ್ನು ಅತ್ತಕಡೆಗೆ ಕಳುಹಿಸುತ್ತಿರುವಾಗ, ಈಗ ಹಬಸಿಗಳ ಮೇಲೆ ಯುದ್ಧವೊಡ್ಡಿದ ಮುಸಲೋನಿಯವರು ಆ ಯುದ್ಧವನ್ನು ಖಂಡಿಸಿ ಇಟೇಲಿಯಾನರ ಕುರಿತು ಹೀಗೆಂದು ಭಾಷಣ ಮಾಡಿದ್ದರು.

"ಸೈನಿಕರನ್ನು ಅತ್ತಕಡೆಗೆ ಕೊಂಡೊಯ್ಯುವ,—— ನಿಮ್ಮ ಮಕ್ಕಳನ್ನು ಮೃತ್ಯುವಿನ ಬಾಯಿಯಿಂದ ತಪ್ಪಿಸಲು,



ರೈಲು ನಡೆಯದಂತೆ ಅವುಗಳ ಕಂಬಿಗಳ ಮೇಲೆ ಮಲಗಿರಿ ಈ ಧನಾಢ್ಯ ಸರಕಾರದಿಂದ, ಬಡವರ ಸುಧಾರಣೆಯಾಗುವುದಿಲ್ಲ. ಇವರಿಗಾಗಿ ನಾವೆಲ್ಲರು ನಮ್ಮ ಬಡಜನರು ಪ್ರಾಣಕೊಡಬೇಕಾಗುವುದು ಇದೇ ಅವರ ದೇಶಪ್ರೇಮವು'

ಹೀಗೆಂದ ಮುಸಲೋನಿಯು ಈಗೇನು ಮಾಡುತ್ತಿದ್ದಾನೆ ಬಹುಶ ೧೯೧೧ರ ತನ್ನ ನುಡಿಗಳನ್ನು ಮರೆತಿರಬಹುದು

ರೈಲ್ವೇ ಚಕ್ರಗಳನ್ನು ತಯಾರಿಸುವ ಕಾರ್ಖಾನೆ

೭೫ ಲಕ್ಷ ರೂ ಡಿಬೆಂಚರುಗಳ ಮೂಲಕ ಒಟ್ಟುಗೂಡಿಸಿ, ದಿ ಇಂಡಿಯನ ಟಾಯರ್ ಎಂಡ್ ವೀಲ ಕಂಪೆನಿ ಎಂಬ ರೈಲ್ವೇ ಗಾಡಿಗಳಿಗೂ ಎಂಜಿನಿಗೂ ಬೇಕಾಗುವ ಚಕ್ರಗಳನ್ನು ತಯಾರಿಸುವ ಕಾರ್ಖಾನೆಯೊಂದು ಬೇಗನೇ ಸ್ಥಾಪನೆಯಾಗುವುದ ಈ ವರೆಗೆ, ಚಕ್ರಗಳು ನಮಗೆ ಹೊರಗಿನ ದೇಶಗಳಿಂದ ಬರುತ್ತಿದ್ದುವು.

ಫ್ರೆಂಚರು ಬ್ರಿಟಿಷರಿಂದ ಸಾಲ ಪಡೆಕೊಳ್ಳುವರು.

ಲಂಡನಿನ ಆರ್ಥಿಕ ಮಾರ್ಕೆಟಿನಲ್ಲಿ ಫ್ರೆಂಚ ಸರಕಾರವು ಸಾಲಪಡೆಯಲು ಬಂದಿರುತ್ತದೆ ಫ್ರೆಂಚ ಆರ್ಥಿಕ ಮಾರ್ಕೇಟುಗಳಿಗಿಂತ ಲಂಡನಿನ ದರಗಳು ಕಡಿಮೆಯಾದುದರಿಂದ ಬ್ರಿಟಿಷರಿಂದ ಸಾಲ ಪಡೆಯಲು ನಿರ್ಧಾರ ಮಾಡಿರುತ್ತಾರೆಂದು ತಿಳಿದು ಬರುತ್ತದೆ

ಶರೀರ ಮರ್ಮಶಾಸ್ತ್ರ.



ಇದರಲ್ಲಿ ಅನೇಕ ಜಾತಿ ಸ್ತ್ರೀಯರ ಲಕ್ಷಣದ ವರ್ಣನೆಗಳೂ, ಗರ್ಭದಾನ ಸಂತಾನನಿರೋಧ, ಅತಿಸಂಭೋಗದಿಂದಾಗುವ ಹಾನಿ, ಸಂಭೋಗದಲ್ಲಿ ಶುಕ್ಲ ನಷ್ಟ, ಗರ್ಭಚಿಹ್ನೆ, ಗರ್ಭಾಭಿವೃದ್ಧಿ ರೂಪ, ಶಿಶು ಉತ್ಪತ್ತಿ ವಿಧ, ಸ್ತ್ರೀಯರ ಜನನೇಂದ್ರಿಯ ವರ್ಣನೆ, ಇವಲ್ಲದೆ ಇನ್ನು ಸ್ತ್ರೀಪುರುಷರಿಗೆ ಬೇಕಾದ ಅನೇಕ ತರದ ಗುಪ್ತ ರಹಸ್ಯಗಳನ್ನು ೬೪ ಚಿತ್ರಪಟಗಳೊಡನೆ ೧೬೦ ಪುಟಗಳಲ್ಲಿ ಕನ್ನಡದಲ್ಲಿ ವಿವರಿಸಿರುತ್ತದೆ, ಬೆಲೆ ೧ಕ್ಕೆ ರೂ ೧, ಟ ಕ, ಬೇರೆ

ಇನ್ನಿತರ ಗ್ರಂಥಗಳು — ಕೈಗಾಂಕೆಯ ಮರ್ಮಶಾಸ್ತ್ರ ರೂ. ೧, ಪಾಕಶಾಸ್ತ್ರ ೦—೬—೦ ಗೃಹಸ್ಥಾಶ್ರಮ ರಹಸ್ಯ ೧—೮—೦, ರತಿಮನ್ಮಥ ರಹಸ್ಯ ೦—೧೨—೦.

ವಿಳಾಸ:— ಕರ್ನಾಟಕ ಏಜನ್ಸಿ,

ಕೃಷ್ಣಪ್ಪನಾಯಕನ ಬೀದಿ, ಜಿ. ಟಿ. ಮದರಾಸು.

HASAG



ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು. ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ. ಎಲ್ಲವೂ ಹೊಸ ಮಾದರಿ. ಈಗಾಗಲೆ ಸಾವಿರಗಳ್ಪಳೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ. ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ. ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ. ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು.

EFAR



ಎಫಾರ್

ಎಂಬುದು ಇನ್ನೊಂದು ಅಪೂರ್ವ ದೀಪ. ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಡಿಮೆ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ. ಕ್ರಯವು ಬಹಳ ಕಡಿಮೆ. ಮನೆಯ ಶೃಂಗಾರಕ್ಕೆ ಬಹಳ ಯೋಗ್ಯವಾಗಿರುವದು.

Sole Representatives: F. Racek & Co.,

Bombay.	Calcutta.	Madras.	Colombo.
P. O. Box	P. O. Box	P. O. Box	P. O. Box
2006	2121	1249	389

QUALITY-IMPORTS GERMAN MADE

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA—AND—MANGALORE.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂತಿಕಾ, ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು.

24 ಔನ್ಸ್ ರೂ. 2 16 ಔನ್ಸ್ ರೂ. 1-8-0 8 ಔನ್ಸ್ ರೂ. 0-14-0.

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ.

ಅಯೊಡ್ಯಾಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ.

4 ಔನ್ಸ್ ರೂ. 1—0—0 8 ಔನ್ಸ್ ರೂ. 1—8—0.

ದಕ್ಷಿಣ ಕನ್ನಡದ ಏಜಂಟರು—ಪೊಪ್ಯುಲರ ಸ್ಟೋರ್ಸ್, ಮಂಗಳೂರು.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds, Cuts, Colds, Headache. It is a complete substitute for the domestic medicine chest. Try once this unequalled remedy. In ¼oz tin ...As. 3/- In oz. jar......As. 12/-

Superior Red Balm For relieving pains in muscles and on skin. Directions for use with the bottle Price As. 12/- only

Wurmteufel: Is a soverign remedy against all sorts of worms in stomach and in the intestines. Physicians enjoying authoritativeness describe it as redical remedy and warmly recommed it. All those who suffer from worms, children and adults, try this unique remedy and be freed from your ailment. Price As. 10 per packet.

Pocket Inhaler: For coughs and hoarseness, headache catarrch, colds, use this inhaler and you will be relieved immediately. Price per inhaler As. 6 - & As. 8/-

"Po-Ho Fluid" For Asthma, colds, indigestion, toothache lumbago, a sure remedy in all cases. Price As. 6/- and Re. 1/- per phial.

Cough Cure: An infallible remedy for coughs of all kinds bronchitis, hoarseness. Particulars in bottle. Price As. 12/- for 3 oz bottle.

The New Curative Earth: A Radium cure for incurable diseases.

Mithra Toilet Soaps—Scientifically prepared German soaps excellent for health. Price As. 1/3; 2/6; 3/-; 4;

Basel Mission Book Depot

Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ವನಿತಾ ವಿಭಾಗ.

ಗಂಡಸರನ್ನು ಮೆಚ್ಚಿಸಲು ಹೆಂಗಸರು ಶೃಂಗಾರಮಯ ಉಡಿಗೆಗಳನ್ನು ಧರಿಸುತ್ತಾರೆಯೇ?

"ಹೆಂಗಸರು ಗಂಡಸರನ್ನು ಒಲಿಸಲು ನೂತನ ಉಡಿಗೆಗಳನ್ನು ತೊಡುತ್ತಾರೆ? ಸ್ತ್ರೀಯರ ವರೆಗೂ ಹಾಗೆ ಎಣಿಸಿರಲಿಲ್ಲ" ಎಂದು ಮಿ ಜೆಸ್ಸಿ ಶಿಮ್ಲರ್ ಎಂಬವನು "ಇವ್ನಿಂಗ್ ನ್ಯೂಸ್" ಎಂಬ ಪತ್ರಿಕೆಯಲ್ಲಿ ಹೀಗೆ ಬರೆದಿರುವನು—"ನನ್ನ ಅಭಿಪ್ರಾಯವೆಂದರೆ ಕಾಲಕ್ಕನುಗುಣವಾಗಿ ದರ್ಜಿಗಳು ಹೊಸ ಹೊಸ ನಮೂನೆಯ ಉಡಿಗೆಗಳನ್ನು ತಯಾರಿಸಿದ್ದರಿಂದ ಹೆಂಗಸರು ಅವುಗಳನ್ನು ಮೆಚ್ಚಿ ತಮ್ಮ ಗಂಡಂದಿರಿಗೆ ಉಪದ್ರವಕೊಟ್ಟು ಕೊಂಡುಕೊಳ್ಳುವಂತೆ ಮಾಡುತ್ತಿದ್ದರು. ಅವರ ಮಾತನ್ನೇ ವೇದವಾಕ್ಯವೆಂದು ಪರಿಗಣಿಸುತ್ತಿದ್ದ ನಾವು ಹಣದ ಅಭಾವವು ಬಹಳೇ ಇದ್ದರೂ ಅವರ ಮನವನ್ನು ಸಂತಸಗೊಳಿಸಲು ನಾವದನ್ನು ಕೊಂಡುಕೊಳ್ಳುತ್ತಿದ್ದೆವು. ಮತ್ತು ಅವರು ತಾವು ಕೊಂಡುಕೊಂಡ ಉಡುಗೆಗಳಲ್ಲಿ ಸಂತೃಪ್ತಿಯು ಅವರಿಗಿತ್ತೆಂದೂ ನಾನು ಭಾವಿಸಿದ್ದೆನು. ಆದರೆ ನನ್ನ ಸ್ನೇಹಿತನೊಬ್ಬನು, ನನ್ನ ಈ ಅಭಿಪ್ರಾಯಗಳನ್ನೆಲ್ಲಾ ಪರಿವರ್ತಿಸಿದನು. ಇದೆಲ್ಲವೂ ಅಬದ್ಧವೆಂದು ನೀವು ಮನಗಂಡರೂ ನನ್ನ ಸ್ನೇಹಿತನು ಬಹಳೇ ತೀಕ್ಷ್ಣ ಬುದ್ಧಿಯುಳ್ಳವನೆಂದೇ ಹೇಳಬೇಕು.

ನನ್ನ ಮಿತ್ರನ ಹೆಸರು ಡಾ। ಸಿ. ವಿಲ್ಲೆಟ್ ಕನ್ನಿಂಗ್ಟನ್ ಎಂದು. ಅವನು ಬರೆದ ಪುಸ್ತಕಗಳಲ್ಲಿ "೧೯ನೇ ಶತಮಾನದ ಹೆಂಗಸರ ಭಾವಗಳು" ಎಂಬುದು ಇದರ ವಿಷಯ ಸಂಪೂರ್ಣ ಮಾಹಿತಿಯನ್ನು ಕೊಡುತ್ತದೆ. ಹೆಂಗಸರ ಚುರುಕುತನವನ್ನು ಆ ಪುಸ್ತಕವು ಅಮೂಲಾಗ್ರವಾಗಿ ತಿಳಿಸುತ್ತದೆ. ೧೯ನೇ ಶತಮಾನದ ಹೆಂಗಸರಿಗೂ ಈಗಿನ ಹೆಂಗಸರ ಭಾವಗಳಿಗೂ ಇರುವ ಅಜಗಜಾಂತರ ಭಾವವಿಕಲ್ಪಗಳನ್ನು ಬಹಳ ಶ್ಲಾಘನೀಯ ರೀತಿಯಲ್ಲಿ ಬರೆದಿರುವನು. ಹೆಂಗಸರೇ ಇದನ್ನೆಲ್ಲಾ ಓದಿ ಆಶ್ಚರ್ಯಪಟ್ಟರು. ನಮ್ಮಗಳ ಮನಸ್ಸನ್ನು ಈ ಡಾಕ್ಟರರು ಹೇಗೆ ಅಂತುಕೊಂಡರೆಂದು ಅವರ ವಾಗ್ಸ್ವದ ೧೯ನೇ ಶತಮಾನದಲ್ಲಿ ಆಂಗ್ಲ ಮಹಿಳೆಯರ ಉಡಿಗೆ ತೊಡಿಗೆಗಳು ಜಗತ್ತನ್ನೇ ಮರುಳುಗೊಳಿಸುವಂತಿತ್ತು. ಆದರೆ ಡಾ। ಕನ್ನಿಂಗ್‌ಟನ್ ಇವರು ಕೇವಲ ಉಡಿಗೆಯ ಮೇಲೆಯೇ ಒಂದು ಪುಸ್ತಕವನ್ನು ರಚಿಸಿದರೆಂದು ಆಶ್ಚರ್ಯಪಡಲಾಗದು. ಅದರಲ್ಲೂ ತುಸು ವಿನೋದವು ಅದನ್ನು ಓದಿದೊಡನೆ ಕಂಡುಬರುವುದು.

ನಾನು ಮೊದಲು ಹೇಳಿದಂತೆ ಮೊದಲಾಗಿ ಹೊಲಿಗೆಯವರು ನಾನಾ ನಮೂನೆಯ ಉಡಿಗೆಗಳನ್ನು ತಯಾರಿಸುವುದು ಅನಂತರ ಹೆಂಗಸರು ತಮಗೆ ಇಷ್ಟವಾದ ಉಡುಗೆಯನ್ನು ಕೊಂಡುಕೊಳ್ಳುವರು ಎಂದು ಭಾವಿಸಿದ್ದೆನು. ಆದರೆ ಉಡಿಗೆಗಳಲ್ಲಿ ಬದಲಾವಣೆಯು ಹೊಲಿಗೆಯವರಿಂದಲ್ಲ. ಅದು ಆಗಾಗ ತೋರಿಬರುವ ಚಳವಳಗಳಿಂದಲೂ ಅನೇಕಾನೇಕ ದೇಶಗಳ ಪರ್ಯಟನದಿಂದಲೂ ಬಂದದ್ದಾಗಿರುತ್ತದೆ. ಒಂದು ಚಳವಳವು ಪ್ರಾರಂಭವಾಯಿತೆಂದರೆ ಅದರ ಪ್ರಭಾವವು ಇಡೀ ದೇಶದ ಮೇಲೆ ಉಂಟಾಗುತ್ತದೆಂದು ಮಾತ್ರ ಮರೆಯಬೇಡಿ. ಇದಕ್ಕೆಲ್ಲಾ ಕಾರಣ—ಮನುಷ್ಯನಲ್ಲೇ ಅಡಗಿರುವ ಕ್ರಿಯಾತ್ಮಕ ಬುದ್ಧಿ ಶಕ್ತಿ. ೧೯ನೇ ಶತಮಾನದಲ್ಲಿ ಹೆಂಗಸರ ಈ ಬುದ್ಧಿ ಶಕ್ತಿಯು ಅವರನ್ನು ಗಂಡಸರ ಆಕರ್ಷಣಾ ಶಕ್ತಿಗೆ ಬಲಿಯೊಡ್ಡಿತು. ಗಂಡಸರನ್ನು ಹೇಗಾದರೂ ತಮ್ಮ ಬಲೆಗೆ ಬೀಳಿಸಬೇಕೆಂಬ ಬಯಕೆಯು ಅವರಲ್ಲಿ ಒಡಮೂಡಿತು. ಇದನ್ನವರು ಅನೇಕ ದುರ್ಧರವಾದ ಸಾಧನೆಗಳಿಂದ ಸಾಧಿಸಿದರು. ಇದರಲ್ಲೊಂದು ಸಾಧನವು ಉಡಿಗೆಯಾಯಿತು.

ವಿಕ್ಟೋರಿಯಾ ಮಹಾರಾಣಿಯ ಕಾಲದಲ್ಲಿ ಸಣ್ಣಕ್ಕೆ ಗೇರುವ ರವಿಕೆಗಳು, ಬಿಗುವಾದ ಕೈಚೀಲಗಳು (ಗ್ಲೌಸ್) ಜೋರಳುವ ಗವನುಗಳು, ಅದಕ್ಕೆ ಸುತ್ತಲ್ ಲೇಸ್ ಕುತ್ತಿಗೆಯ ಹತ್ತಿರ ಸ್ಟಿಫ್ ಕಾಲ್ಲರ್ ಮತ್ತು ಸಪೂರವಾದ ಸೊಂಟ ಇದೆಲ್ಲವೂ ತಾನು ದೊಡ್ಡ ಕುಟುಂಬದವಳೆಂದೂ, ಘನಸ್ತಿಕೆಯುಳ್ಳವಳೆಂದು ತೋರಿಸುವ ಗುರಿಯಾಗಿತ್ತು. ಆಗಿನ ಕಾಲದ ಯುವತಿಯರು ಬಹಳೇ ಮೃದು ಸ್ವಭಾವದವರಾಗಿದ್ದರೂ ಸ್ಥಿರ ಮನಸ್ಸಿನವರಾದ ಗಂಡಸರನ್ನು ಒಲಿಸಿಕೊಳ್ಳಬೇಕೆಂಬ ಒಂದೇ ಧ್ಯೇಯವು ಅವರನ್ನು ಸಂಪೂರ್ಣವಾಗಿ ಆವರಿಸಿತ್ತು. ಆದರೆ ಹಾವಭಾವಗಳ ವಿಕಲ್ಪಗಳು ದೆಸೆಗಳು ಅವರಲ್ಲಿ ತುಂಬಾ ಇದ್ದವು. ಅವರು ತಮ್ಮ ಕೂದಲುಗಳನ್ನು ಎರಡು ಜಡೆಗಳಾಗಿ ಮಾಡಿ ತಲೆಯ ಹಿಂದೊಂದು ಕಡೆಯಿಂದ ಒಂದೊಂದು ಹಿಡಿಯನ್ನು ಪ್ರದರ್ಶಿಸುತ್ತಿದ್ದರು. ಔತಣಗಳಿಗೂ, ಸಭೆಗಳಿಗೂ ಥಿಯೇಟರ್‌ಗಳಿಗೂ ಹೋಗುವ

ಸಮಯ ಬೀಳೀ ಮಸ್ಲಿನ್ ವಸ್ತ್ರದ ಉಡಿಗೆಗಳನ್ನೂ ಬಿಗುವಾದ ಗ್ಲೌಸ್‌ಗಳನ್ನೂ ಹಾಕುತ್ತಿದ್ದರು. ಔತಣವಿದ್ದಾಗ ಕೇವಲ ಐಸ್‌ವಾಟರನ್ನು ಮಾತ್ರ ಕುಡಿಯುತ್ತಿದ್ದರು ಮತ್ತು ಬಹಳ ಬೆಲೆ ಬಾಳುವ ಕೇಕುಗಳನ್ನು ತಿನ್ನುತ್ತಿದ್ದರು.

ಅನಂತರ ಥಟ್ಟನೆ ಅವರ ಮನಸ್ಸಿನಲ್ಲಿ ವಿಪರೀತ ಧೋರಣೆಯು ಉಂಟಾಗ ತೊಡಗಿತು. ತಮ್ಮ ಬಂದು ಭಗಿನಿಯರನ್ನು ದ್ವೇಷಭಾವದಿಂದ ಕಾಣುವುದು, ಗಂಡಸರನ್ನು ಅಸಡ್ಡೆಯಿಂದ ಕಾಣುವುದು. ಇದನ್ನು ತೋರ್ಪಡಿಸಲು ವಿಚಿತ್ರಮಯ ಉಡುಗೆಯನ್ನು ತೊಡಲು ಪ್ರಾರಂಭಿಸಿದರು. ೧೯ನೇ ಶತಮಾನದ ಅಂತ್ಯದಲ್ಲಿ ಇದೆಲ್ಲವೂ ನಾಶವಾಗಿ ಅವರಲ್ಲಿ ಸ್ವತಂತ್ರವಾದ ಕಲ್ಪನೆಗಳು ಉದ್ಭವಿಸ ತೊಡಗಿದವು.

ಈಗ ಅವರು ಗಂಡಸರನ್ನು ಒಲಿಸುವ ಪ್ರಯತ್ನಕ್ಕೆ ಕೈಹಾಕುವುದಿಲ್ಲ. ಅವರಲ್ಲಿ ಸ್ವಾತಂತ್ರ್ಯ ಭಾವನೆಯು ಮೂಡಿದೆ. ಆದರೆ ಕೆಲವು ಕಡೆಗಳಲ್ಲಿ ಈಗಲೂ ಆ ಭಾವನೆಯು ಇನ್ನೂ ಪ್ರಜ್ವಲಿತವಾಗುತ್ತಿದೆ.

ನಾರೀಗಣದ ಕರ್ತವ್ಯ

ಭಾರತ ರಾಷ್ಟ್ರೀಯ ನಾರೀ ಸಮಿತಿಯ ನಾಲ್ಕನೇ ಅಧಿವೇಶನವು ೩೦—೧—೩೬ನೇ ದಿನ ಕಲಿಕತ್ತೆಯಲ್ಲಿ ಸೇರಿತು. ಬರೋಡಾ ಮಹಾರಾಣಿಯವರೇ ಅಧ್ಯಕ್ಷರು. ಇದು ಅವರ ಭಾಷಣ.

'ನಾನು ಈ ಪದವಿಗೆ ಬರಲು ನನಗೇನೂ ವಿಶೇಷ ಅರ್ಹತೆಯಿಲ್ಲ; ಅನುಭವವಿಲ್ಲ. ಆದರೆ ಅನೇಕ ಭಾರತ ಮಹಿಳೆಯರಂತೆ ನನಗೂ ಭಾರತದ ನಾರೀಗಣದ ಹಿತಚಿಂತನೆಯು ತೀವ್ರವಾಗಿದೆ. ನನ್ನ ಸೋದರಿಯರ ಮೇಲ್ಮೆಗಾಗಿ ನಾನು ಏನೇನು ಮಾಡಲು ಸಾಧ್ಯವೋ ಅದನ್ನೆಲ್ಲ ಮಾಡುತ್ತೇನೆ. ಮುಂದಿನ ಮಂಗಳ ಭಾರತದಲ್ಲಿ ನಾವು ಮಾಡಬೇಕಾದ ಕರ್ತವ್ಯಗಳನ್ನು ನಾವು ಖಂಡಿತವಾಗಿ ಪಾಲಿಸುತ್ತೇವೆ. ಪ್ರತಿಯೊಬ್ಬರೂ ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಭಾರತ ನಾರೀಗಣಕ್ಕೆ ನೆರವೇರಿಸಲೇ ಬೇಕು. ನಾವು ಕರ್ತವ್ಯಪರರಾದರೆ ನಮ್ಮ ಆದರ್ಶವು ಫಲಿಸುವುದು.

ಭಾರತ ರಾಷ್ಟ್ರೀಯ ನಾರೀಸಮಿತಿಯು ವಿಶ್ವಸಂಸ್ಥೆಯ ಕೇವಲ ಒಂದು ಅಂಗ. ಯಾವ ಜಾತಿ, ಕುಲಗೋತ್ರಕ್ಕೆ ಸೇರಿದವರಾದರೇನು? ಎಲ್ಲ ನಾಡಿನ ಸ್ತ್ರೀಯರ ಕಲ್ಯಾಣವೂ ನಮಗೆ ಬೇಕು. ನಾನಾ ದೇಶಗಳ ನಾರೀಜನ ಸಮಿತಿಗಳೊಂದಿಗೆ ನಾವು ಸಹಕಾರ ಮಾಡಬೇಕು.

ಉತ್ತಮ ಶಿಕ್ಷಣ ಬೇಕು

ಇದು ಶಿಕ್ಷಣ ಸಮ್ಮೇಳನವಲ್ಲ. ಆದರೆ ನಮ್ಮೆಲ್ಲರ ಉನ್ನತಿಗೆ ಶಿಕ್ಷಣವೇ ಅಡಿಗಲ್ಲು. ಆದಕಾರಣ ಒತ್ತಾಯದ ಪ್ರಾಥಮಿಕ ಶಿಕ್ಷಣ ಕೊಡಬೇಕು. ಈಗ ಶಾಲೆಗಳಲ್ಲೂ, ವಿಶ್ವವಿದ್ಯಾನಿಲಯಗಳಲ್ಲೂ ಸ್ತ್ರೀಯರಿಗೆ ಕೊಡುತ್ತಿರುವ ವಿದ್ಯಾಭ್ಯಾಸವು ಸ್ವಲ್ಪವಾದರೂ ಅವರಿಗೆ ಪ್ರಯೋಜನವಿಲ್ಲ. ಪ್ರಯೋಜನದ ಮಾತು ಹಾಗಿರಲಿ ಅದರಿಂದ ಅವರಿಗೆ ಅಪಾರ ಹಾನಿಯುಂಟಾಗುತ್ತಿದೆ. ಅವರ ಶಕ್ತಿಸಾಮರ್ಥ್ಯಗಳನ್ನೆಲ್ಲ ಸದುಪಯೋಗ ಪಡಿಸಿಕೊಳ್ಳಲು ಅವಕಾಶವಿದೆ. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಸಂಸ್ಕೃತಿಯ ಅಭಿವೃದ್ಧಿಗೆ ಲೇಶವೂ ಅವಕಾಶವಿಲ್ಲ! ಅದರ ಕಡೆಗೆ ಲಕ್ಷ್ಯವನ್ನೇ ಕೊಟ್ಟಿಲ್ಲ. ಮನೆಗಳಲ್ಲಿ ಉಂಟಾಗುವಂತಹ ಸಂಸ್ಕಾರವು ಲಭ್ಯವಾಗುವಂತೆ ಪರಿಣಾಮಕಾರಿಯಾದ ಸಂಸ್ಕೃತಿಯು ಇಲ್ಲವೇ ಇಲ್ಲ. ನಮ್ಮ ಹೆಣ್ಣು ಮಕ್ಕಳ ವಿದ್ಯಾಭ್ಯಾಸದಲ್ಲಿ ಆಗಬೇಕಾದ ಸುಧಾರಣೆಗಳು ಅನೇಕವಾಗಿವೆ. ಮುಂದಿನ ಭಾರತ ರಾಷ್ಟ್ರ ಜೀವನದಲ್ಲಿ ಅವರು ಪ್ರಧಾನ ಪಾತ್ರವನ್ನು ವಹಿಸಬೇಕಾಗಿದೆ. ಅದಕ್ಕೆ ಉಚಿತವಾದಂತಹ ಶಿಕ್ಷಣವನ್ನು ನಾವು ಅವರಿಗೆ ಕೊಡಬೇಕು. ಅಷ್ಟೇ ಅಲ್ಲ ಅವರನ್ನು ಅತ್ಯುತ್ತಮ ಮಾತೃಗಳನ್ನಾಗಿ ಮಾಡಬೇಕು. ನಾವು ಮುಂದೆ ಸ್ಥಾಪಿಸಬೇಕಾಗಿರುವ ಶಾಲೆಗಳಲ್ಲಿ ಶೀಲ ಸಂಪಾದನೆಗೆ ಬೇಕಾದ ಅಡಿಗಲ್ಲುಗಳನ್ನು ಹಾಕಬೇಕು. ಸಾಮಾಜಿಕ ಸದ್ಗುಣಗಳೆಲ್ಲ ಅಲ್ಲಿ ಲಭ್ಯವಾಗಬೇಕು. ಶಾಲೆಗಳಲ್ಲಿ ಸಿಗುವ ಶಿಕ್ಷಣವು ಅವರ ಜೀವನದ ಮೇಲೆ ಪ್ರಬಲ ಪರಿಣಾಮವನ್ನುಂಟುಮಾಡುವುದು. ಆದಕಾರಣ ಅವರಿಗೆ ಶಾಲೆಗಳಲ್ಲಿ ಅವರವರ ಸ್ವರೂಪಜ್ಞಾನವನ್ನುಂಟುಮಾಡಬೇಕು. ನೆರೆಹೊರೆಯ ಕಡೆ ಅವರಿಗಿರುವ ಕರ್ತವ್ಯಜ್ಞಾನವನ್ನು ಅವರಿಗುಂಟುಮಾಡಿಕೊಡಬೇಕು.' ನಾವು

ಬಿ. ಎ.ಗಳು ಎಂ. ಎ. ಗಳು ಎಂಬುದಾಗಿ ಅವರು ಜಂಭದ ಕೋಡುಗಳಂತೆ ಓಡಾಡಲು ಅವಕಾಶ ಕೊಡಬಾರದು.

ಅನೇಕ ಮಂದಿಗೆ ಉನ್ನತ ಶಿಕ್ಷಣವು ಸಿಗದೆ ಇರಬಹುದು. ಅವರಿಗಾದರೂ ವ್ಯವಹಾರ ಜ್ಞಾನವನ್ನು ಸಂಪಾದಿಸಿ ಕೊಡಬೇಕು. ಹಾಗೆ ನಾವು ಮಾಡದ ಹೋದರೆ ಅವರ ಕಡೆಯಿಂದ ನಾವು ಅಪೇಕ್ಷಿಸುತ್ತಿರುವ ಸಹಾಯವು ಲೇಶವಾದರೂ ಸಿಗುವುದಿಲ್ಲ.

ನಾವು ನಮ್ಮ ಸ್ತ್ರೀ ಗಣಕ್ಕೆ ಕೊಡಬೇಕಾದ ಅಂತಿಮ ಧ್ಯೇಯವು, 'ಲೋಕಾಸ್ಸಮಸ್ತಾಸ್ಸುಖಿನೋ ಭವಂತು' ಎಂಬುದಾಗಿರಬೇಕು. ಅದನ್ನು ಸಾಧಿಸಬೇಕಾದರೆ ನಾವೆಲ್ಲರೂ ಸ್ವಾರ್ಥವನ್ನು ಬಿಡಬೇಕು. ವೈಯುಕ್ತಿಕ ಶ್ರೇಷ್ಠತೆಯನ್ನು ಮರೆಯಬೇಕು. ಸರ್ವಜನ ಹಿತಕ್ಕಾಗಿ ಸಹಕಾರ ಮಾಡುವುದನ್ನು ಕಲಿಯಬೇಕು.

ರಾಜಕಾರಣದಲ್ಲಿ

ರಾಜಕೀಯ ಸುಧಾರಣೆಗಳು ಆಚರಣೆಗೆ ಬರಲಿವೆ. ಈ ಸುಧಾರಣೆಯ ವ್ಯವಸ್ಥೆಯಲ್ಲಿ ಸ್ತ್ರೀಯರ ಸ್ಥಾನವನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಸುಧಾರಣೆಗಳಂತೆ ಶಾಸನ ಸಭೆಗಳಿಗೆ ನಾವು ಹಲವರನ್ನು ಆರಿಸಿ ಕಳುಹಿಸಬಹುದು. ನಮಗೆ ವೋಟು ಮಾಡುವ ಹಕ್ಕು ದೊರೆತಿದೆ. ಭಾರತದ ನಾರೀಗಣವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಶಾಸನ ಸಭೆಗಳಲ್ಲಿ ನಮಗೆ ದೊರೆತಿರುವ ಸ್ಥಾನಗಳ ಪ್ರಮಾಣವು ತೀರ ಅಲ್ಪವಾಗಿದೆ. ಆದರೆ ಇದುವರೆಗೆ ನಮಗೆ ಅಷ್ಟು ಮಟ್ಟಿನ ಅವಕಾಶವೂ ಇರಲಿಲ್ಲ. ನಾವೆಲ್ಲ ಕೂಡಿ ಐಕಮತ್ಯವನ್ನು ಸಾಧಿಸಿದರೆ ಸುಧಾರಣೆಗಳು ರೂಪಗೊಳ್ಳುತ್ತಿದ್ದಾಗ ಚಕ್ರಗೋಷ್ಠಿಯಲ್ಲಿ ಏಕವಾಕ್ಯದಿಂದ ನಮಗಿಷ್ಟು ಬೇಕು ಎಂದು ಕೇಳಿದ್ದರೆ ಲಭ್ಯವಾಗುತ್ತಿತ್ತು. ಓಟು ಮಾಡುವ ಅರ್ಹತೆಗಳು ಹೀಗುಂಟಷ್ಟೆ. ೧೯೧೯ನೆಯ ಸುಧಾರಣೆಯ ಶಾಸನದಲ್ಲಿ ಸೂಚಿತವಾಗಿದ್ದುದಕ್ಕಿಂತ ಇನ್ನೂ ಹೆಚ್ಚಿನ ಅಧಿಕಾರಗಳು ಈ ಹೊಸ ಸುಧಾರಣೆಗಳ ಶಾಸನದಲ್ಲಿ ಸೂಚಿತವಾಗಿವೆ. ಓಟುಮಾಡುವವರಿಗೆ ಇಷ್ಟು ಆಸ್ತಿ ಇರಬೇಕು ಎಂಬ ವಿಧಿಯಿತ್ತು. ಈಗ ಪ್ರಮಾಣವನ್ನು ಕಡಿಮೆಮಾಡಿದೆ. ಪಟ್ಟಣಗಳಲ್ಲಿರುವ ಬಡಜನರಿಗೆ ಸಹ ಓಟುಮಾಡುವ ಅಧಿಕಾರವು ಲಭ್ಯವಾಗಿದೆ. ಆಸ್ತಿಪಾಸ್ತಿಗಳನ್ನುಳ್ಳ ಪುರುಷರಿಗೆ ಓಟುಕೊಡುವ ಅಧಿಕಾರವುಂಟಷ್ಟೆ. ಅಂತಹ ಪುರುಷರ ಪತ್ನಿಯರಿಗೂ ಒಂದುವೇಳೆ ಅಂಥ ಪುರುಷರು ಕಾಲವಶವಾದರೆ ವಿಧವೆಯರಿಗೂ ಸಹ ಓಟುಕೊಡುವ ಅಧಿಕಾರವಿದೆ. ಓಟು ಮಾಡುವವರಿಗೆ ಕೊಂಚಮಟ್ಟಿಗೆ ಶಿಕ್ಷಣವೂ ಇರಬೇಕೆಂಬ ವಿಧಿಯೂ ಇದೆ. ಪ್ರಾಪ್ತವಯಸ್ಕರಾದ ಸ್ತ್ರೀಯರಿಗೆಲ್ಲ ಓಟುಮಾಡುವ ಅಧಿಕಾರವಿದ್ದೇ ಇರಬೇಕು. ಅದನ್ನು ಸಾಧಿಸುವುದೇ ನಮ್ಮ ಧ್ಯೇಯವಾಗಿರಬೇಕು. ಈ ಉದ್ದಿಷ್ಟಸಾಧನೆಗಾಗಿ ನಾವು ನಾನಾಮುಖವಾಗಿ ಕೆಲಸಮಾಡುತ್ತ ಬರಬೇಕು. ದೇಶದಲ್ಲಿರುವ ಸ್ತ್ರೀಯರಿಗೆಲ್ಲರಿಗೂ ನಾವು ವಿದ್ಯಾದಾನ ಮಾಡಬೇಕು. ಅವರನ್ನು ಅಕ್ಷರಜ್ಞರನ್ನಾಗಿ ಮಾಡಿದರಾದರೂ ನಾರೀಗಣದ ಓಟಿನ ಬಲವು ಹೆಚ್ಚುತ್ತದೆ. ಹಿಂದೆ ೩,೧೫,೦೦೦ ಮಂದಿ ಸ್ತ್ರೀಯರಿಗೆ ಮಾತ್ರ ಓಟುಕೊಡುವ ಅಧಿಕಾರವಿತ್ತು. ಮುಂದೆ ಸುಧಾರಣೆಗಳಂತೆ ೬೦,೦೦,೦೦೦ ಮಂದಿ ಸ್ತ್ರೀಯರಿಗೆ ಓಟುಕೊಡುವ ಅಧಿಕಾರವು ಸಿಕ್ಕಿದೆ. ಆಸ್ತಿಪಾಸ್ತಿಗಳನ್ನು ಹೊಂದಿ ಓಟುಮಾಡುವ ಅರ್ಹತೆಯನ್ನು ಪಡೆದಿರುವ ವಿಚಾರದಲ್ಲಿ ಸ್ತ್ರೀಪುರುಷರಿಗೆ ಬಹಳ ವ್ಯತ್ಯಾಸವಿದೆ. ಶಾಸನದ ಈ ಅಂಶಗಳನ್ನೆಲ್ಲ ಸರಿಪಡಿಸಬೇಕು.

ಸಮಾಜ ಸುಧಾರಣೆ.

ಸಮಾಜ ಸುಧಾರಣೆಯ ಮಾತು. ದಾಂಪತ್ಯವಿಚ್ಛೇದ (ಡೈವೋರ್ಸ್) ವಿಚಾರವೊಂದಿದೆ. ಪಿತ್ರಾರ್ಜಿತವಾದ ಆಸ್ತಿಪಾಸ್ತಿಗಳಲ್ಲಿ ಸ್ತ್ರೀಪುರುಷರಿಬ್ಬರಿಗೂ ಸಮಾನವಾದ ಅಧಿಕಾರವಿರಬೇಕು. ಎಂದಿನವರೆಗೆ ಸ್ತ್ರೀಯರಿಗೆ ಆಸ್ತಿಪಾಸ್ತಿಗಳಲ್ಲಿ ಪುರುಷರಿಗಿರುವಂತೆಯೇ ಸಮಾನವಾದ ಹಕ್ಕು ಬರುವುದಿಲ್ಲವೋ ಅಂದಿನ ವರೆಗೆ ದಾಂಪತ್ಯ ವಿಚ್ಛೇದನ ಸುಧಾರಣೆಯು ಭಯಂಕರವಾದ ಶಸ್ತ್ರವಾಗಿ ಪರಿಣಮಿಸುತ್ತದೆ. ಪತಿಯನ್ನು ಬಿಟ್ಟ ಸತಿಯು ಸ್ವತಂತ್ರಳಾಗಿರಬೇಕಾದರೆ ಅವಳಿಗೆ ಸಾಕಾದಷ್ಟು ಜೀವನಾಧಾರವಿರಬೇಕು.

"ಭಿಕಾರಿ ಭಾರತವನ್ನು ಮರೆಯಿರಿ."

ಕಳೆದ ತಿಂಗಳು ತಾ ೩೦ನೆಯ ದಿನ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನವು ನಡೆಯಿತು. ಬರೋಡ ಮಹಾರಾಣಿಯವರು ಸಮ್ಮೇಳನಾಧ್ಯಕ್ಷರಾಗಿದ್ದರು. ಪರದೇಶಗಳಿಂದ ೩೪ ಮಂದಿ ಸ್ತ್ರೀಯರು ಪ್ರತಿನಿಧಿಗಳಾಗಿ ದಯಮಾಡಿಸಿದ್ದರು.

ಈ ಸಮ್ಮೇಳನಕ್ಕೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರೂ ಪ್ರತಿನಿಧಿಗಳಾಗಿ ಹೋಗಿದ್ದರು. ಅಧ್ಯಕ್ಷ ಭಾಷಣವಾದ ನಂತರ ಶ್ರೀಮತಿಯವರು ಪರದೇಶಗಳಿಂದ ಬಂದ ಸ್ತ್ರೀ ಸೋದರಿಯರನ್ನು ಕುರಿತು, "ನೀವು ಈಗ ಬಂದಿರುವ ಭಾರತವನ್ನು ಭಿಕ್ಷುಕರಗಳ ಭೂಮಿಯೆಂದು ತಿಳಿದುಕೊಳ್ಳಬೇಡಿ. ಈ ಭೂಮಿಯ ಪೂರ್ವ ಇತಿಹಾಸವನ್ನು ನಂಬಿ ಇದು ಕೋಹಿನೂರುಗಳ ಭೂಮಿಯೆಂದೂ ಸುಖಸಂಪದಗಳ ಸ್ವರ್ಗವೆಂದೂ ಭಾವಿಸಬೇಡಿ. ಈಗ ನೀವು ಬಂದಿರುವ ದೇಶವು ಭಿಕಾರಿ ಭಾರತ. ಈಗ ನೀವು ಬಂದಿರುವ ದೇಶವು ಹೊಟ್ಟೆಗಿಲ್ಲದೆ ಸೊರಗಿ ಕೊರಗುವವರ ಭಾರತ. ಒಂದು ಹೊತ್ತು ಹೊಟ್ಟೆಗಾಗಿ, ಒಂದು ಅಂಗುಲ ಬಟ್ಟೆಗಾಗಿ ಆ ದೇವರನ್ನು ದುಡಿದು ಕಡೆಗೂ ನಿರಂತರವಾಗಿ ನಶಿಸಿ ಹೋಗುತ್ತಿರುವ ಪಶುಗಳ ಭಾರತ. ಮರೆಯಬೇಡಿ, ಈ ಭಿಕಾರಿ ಭಾರತವನ್ನು ಮರೆಯಬೇಡಿ. ಸಾರಿಸಾರಿ ಬೇಡುತ್ತೇನೆ."

ಸ್ತ್ರೀ ಜನ ಸತ್ಯಾಗ್ರಹ.

ಸಹಟ ಜಿಲ್ಲೆಯ ರವೆಂಬ ಗ್ರಾಮದಲ್ಲಿ ಹೆಂಗಸರು ಮಕ್ಕಳು ಸಹ ಸತ್ಯಾಗ್ರಹಕ್ಕಾರಂಭಿಸಿರುವರೆಂದು ಪಾಟ್ನಾ ಸುದ್ದಿಯೊಂದು ಬಂದಿದೆ. ಜಮೀನ್‌ದಾರಿ ಅಧಿಕಾರಿಗಳು ಹೊಟ್ಟೆಗಿಲ್ಲದ ಬಡಜನರ ದನಸಧಾನ್ಯಗಳನ್ನೆಲ್ಲ ಕಂದಾಯಕ್ಕಾಗಿ ಮುಟ್ಟುಗೋಲು ಹಾಕಿಕೊಳ್ಳಲು ಬಂದರು. ಆಗ ಪರದಾ ಸ್ತ್ರೀಯರು ಸಹ ಹೊರಕ್ಕೆ ಬಂದು, ಪ್ರತಿಭಟಿಸಿ, ಸತ್ಯಾಗ್ರಹವನ್ನಾರಂಭಿಸಿದರು.

ಸ್ತ್ರೀಯರೂ ಪತ್ರಿಕಾವೃತ್ತಿಯೂ

ಕಲಿಕತ್ತೆಯಲ್ಲಿ ಅಂತರರಾಷ್ಟ್ರೀಯ ಮಹಿಳಾಸಮ್ಮೇಳನವಾಯಿತು. ಕಳೆದ ವಾರ ಅಲ್ಲಿ ಸ್ತ್ರೀಯರೂ ಪತ್ರಿಕಾವೃತ್ತಿಯೂ ಎಂಬ ವಿಚಾರ ಚರ್ಚೆಗೆ ಬಂತು. ಸ್ವಿಜರ್‌ಲೆಂಡಿನ ಶ್ರೀಮತಿ ಜೆಲ್‌ವೆಗರವರು

"ನಾನು ನಾನಾ ದೇಶಗಳಲ್ಲಿ ಸ್ತ್ರೀಯರಿಗೂ ಈ ವೃತ್ತಿಗೂ ಇರುವ ಸಂಬಂಧ ವಿಚಾರ ಮಾಡಿ ನೋಡಿದ್ದೇನೆ. ಯೂರೋಪು ಅಮೇರಿಕ ದಕ್ಷಿಣ ಆಫ್ರಿಕಾಗಳಲ್ಲಿ ಸ್ತ್ರೀಯರು ಈ ವೃತ್ತಿಯಲ್ಲಿ ಸಾಕಷ್ಟು ಮುಂದೆ ಸೇರಿ ಮುಂದುವರಿದಿದ್ದಾರೆ. ಈ ದೇಶದ ಸ್ಥಿತಿ ಹೇಗೋ ನನಗೆ ಗೊತ್ತಿಲ್ಲ. ಈ ಸಮ್ಮೇಳನದ ಸುದ್ದಿಗಳನ್ನು ಸಂಗ್ರಹಿಸಲು ಬಂದು ಕೂತಿರುವವರಲ್ಲಿ ಗಂಡಸರೇ ಹೊರತು ಸ್ತ್ರೀಯರೊಬ್ಬರೂ ಇಲ್ಲ" ಎಂದರು. 'ಜಪಾನಿನಲ್ಲಿ ೫೦೦ ಮಂದಿ ಪತ್ರಿಕಾಕರ್ತರಿದ್ದಾರೆ. ಅವರಲ್ಲಿ ೧೨ ಮಂದಿ ಮಾತ್ರ ಹೆಂಗಸರು" ಎಂದರು ಶ್ರೀಮತಿ ಇ. ಒ. ಯವರು. ಭರತಖಂಡದಲ್ಲಿ ವೃತ್ತಪತ್ರಿಕಾವೃತ್ತಿಗೆ ಬಹಳ ಅಡಚಣೆಗಳುಂಟೆಂದೂ, ಸ್ತ್ರೀಯರೂ ಪುರುಷರಿಗೆ ಸರಿಸಮಾನವಾಗಿ ಈ ವೃತ್ತಿಯನ್ನು ನಿರ್ವಹಿಸಬೇಕೆಂದೂ ಅನೇಕರು ಅಭಿಪ್ರಾಯಪಟ್ಟರು.

ವಿಶ್ವಕರ್ನಾಟಕ

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮಸಂಖ್ಯೆ 239/1923 R E P

No. 651/1935

ವಾದಿಳು ಪಾರ್ವತಿ ಅಮ್ಮ.

ಪ್ರತಿವಾದಿ ಅಣ್ಣಯ್ಯ ಹೆಗ್ಡೆ ಪೌತಿ ಕೂಡ

ವಾದಿಯು ಪ್ರತಿವಾದಿರ ಮೇಲೆ ಪಡೆದ ಮೇಲ್ಕಂಡ ಅಸಲಾರ್ಜಿದ ಡಿಕ್ರಿಯ ಹಣಗಳ ಬಗ್ಗೆ ಸದ್ರಿ ಡಿಕ್ರಿಯಲ್ಲಿ ಜವಾಬ್ದಾರಿ ಇರುವ ಸ್ಥಿರ ಆಸ್ತಿಗಳನ್ನು ಏಲಂ ಮಾಡಬೇಕಾಗಿ ಮೇಲ್ಕಂಡ ಅಮಲ್ದಾರಿಯಲ್ಲಿ ಏಲಂ ಇಸ್ತಿಹಾರು ಹಾಜರುಪಡಿಸಿಯದೆ. ಆ ಕುರಿತು ಆಕ್ಷೇಪ ಇದ್ದರೆ ತಾ 18—2—36ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳತಕ್ಕದ್ದು. ಇದಕ್ಕೆ ತಪ್ಪಿದರೆ ಸದ್ರಿ ಅಮಲ್ದಾರಿಯಲ್ಲಿ ಮುಂದಿನ ಕ್ರಮ ನಡಿಸಲಾಗುವದು.

6–2–36 ಕುಂದಾಪುರ

K. Narayana Shenai,
ವಾದಿಳ ವಕೀಲ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ – (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ – (ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ – (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ವ್ಯಾಪಾರಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ ಕಟಪಾಡಿ ದ. ಕನ್ನಡ



Distributors for South Kanara –

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು: – ಕಾಮತ್ಸ್ ಸ್ವದೇಶೀ ಎಂಪೋರಿಯಂ

ಕಾಫಿ ಎಸ್ಟೇಟುಗಳಿಗೆ

ಬೇಕಾಗಿರುವ

ಚಕ್‌ರೋಲು,

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆಗೆ

ಬರೆಯಿರಿ,

ಅಥವಾ

ಬನ್ನಿ

ತಯಾರಾಗಿದೆ!

೧೯೩೬ ಜೂ. ಎ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಶಿಯೋಲೋಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು

ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಇದನ್ನು ೧೯೩೬ರ ಪಾಠಪಟ್ಟಿಗನುಸಾರವಾಗಿ ರಚಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಬಹುಬೇಗನೆ ಸಿದ್ಧವಿದೆ

ಆರು ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವದ; ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.			
				ಎರಡನೇ ದರ್ಜೆ	0	3	0
ನಾಲ್ಕನೇ ದರ್ಜೆ	0	6	0	ಮೂರನೇ	0	3	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ							
ಐದನೇ ದರ್ಜೆ	0	3	0				
ನಾಲ್ಕನೇ ,,	0	3	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ	0	6	0
				ಎಂಟನೇ ,,	0	6	0

ಅಜ್ಜ ಕಥೆಗಳು (ಸಚಿತ್ರ)

ಮೂರು ಕರಡಿಗಳು
ಹೇಗೆ ಸತ್ಯ ಕಾಗೆ ಬದವಾಯಿತು
ಮೊಣಕಿನ ಕಾಳಪ್ಪ
ಅರಗಿನ ಗುಡ್ಡೆ
ಇಲಿಗಳ ಧಕ್ಕತ್ವೆ
ಅಂಗಳ ದಂಗು
ಗುಡುಗಿನ ದೇವರು
ಒಡ್ಡನ ಓಟ
(ಇವುಗಳ ಕ್ರಯ 1ಕ್ಕೆ 0–0–9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೋಜಿ ಅಥವಾ 'ಸಮಾಜಶಾಸ್ತ್ರ' ಕ್ರಯ ರೂ. 1

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ –

ಶಾರದಾ ಛಾಪಖಾನೆ, ಮಂಗಳೂರು.

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1-20
ಕಾಸರಗೋಡು ಪೆಸೆಂಜರು	ಸಂಜೆ 8.20	ಸಂಜೆ 6-15

ಹರಿಜನರಿಗೆ ಔದ್ಯೋಗಿಕ ಶಿಕ್ಷಣ

(ಎಂ. ಕಿ. ಗಾಂಧಿ)

ಮಹಾತ್ಮಾ ಗಾಂಧಿಯವರ ಹರಿಜನೋದ್ಧಾರ ಚಳವಳದ ದೆಸೆಯಿಂದ, ಹರಿಜನರ ಸೇವೆಗಾಗಿ ಅನೇಕ ಸಂಸ್ಥೆಗಳು ಭರತಖಂಡದ ವಿವಿಧ ಕಡೆಗಳಲ್ಲಿ ತೋರಿತೋರಿವೆ. ಅದರಲ್ಲಿ ಕರಾಚಿಯ ಹರಿಜನ ಹೆಂಡಿಕ್ರಾಫ್ಟ್ಸ್ (ಹಸ್ತಕ್ರಿಯೆಗಳ) ಶಾಲೆಯು ಒಂದಾಗಿರುತ್ತದೆ. ಹರಿಜನೋದ್ಧಾರ ಸಂಸ್ಥೆಗಳಲ್ಲಿ ಇದೊಂದು ಶ್ರೇಷ್ಠ ವಾದುದೆಂದು ಹೇಳಬಹುದು. ಧಾರಳ ಹಣವನ್ನು ಈ ಸಂಸ್ಥೆ ನಿರ್ಮಾಣದಲ್ಲಿ, ವ್ಯಯಿಸಿದ್ದಾರೆಂದಲ್ಲ. ಹರಿಜನ ಯುವಕರ ಅವರ ಮುಂದಿನ ಜೀವಮಾನ ಹಾದಿ ತೋರಿಸುವುದರಲ್ಲಿ ಈ ಸಂಸ್ಥೆಯಲ್ಲಿ ಹರಿಜನ ವಿದ್ಯಾರ್ಥಿಗಳನ್ನು ಅನೇಕ ಹಸ್ತಕ್ರಿಯೆಗಳಲ್ಲಿ ತರಬೇತುಮಾಡಬೇಕಾಗಿ ನಿಯಮಗಳಿದ್ದರೂ, ಈಗ ಪ್ರಕೃತಕ್ಕೆ ಇಲ್ಲಿ ಚರ್ಮದ ಸಾಮಾನುಗಳನ್ನು ತಯಾರಿಸುವುದರಲ್ಲಿ ಹುಡುಗರನ್ನು ತರಬೇತು ಮಾಡುತ್ತಿದ್ದಾರೆ

ಈ ಸಂಸ್ಥೆಗೆ ಮಹಾತ್ಮಾ ಗಾಂಧಿಯವರ ಶ್ರೇಷ್ಠವಾದ ಉಪವಾಸದ ಜಯಶೀಲವಾಗಿ ನಡೆದು, ಹರಿಜನರಿಗಾಗಿ ಪೂನಾಪೆಕ್ಟು ಜನಿಸಿದ ಸಮಯ ಕರಾಚಿಯ ದನಾಢ್ಯ ಪುರುಷರಾದ ಸೇಠ ರಾಮ ಗೋಪಾಲ ಎಂಬವರು ಅವರ ಅನುಜನ ಸ್ಮಾರಕಾರ್ಥವಾಗಿ, ರೂ ೫೦ ಸಾವಿರದ ಧನಸಹಾಯಮಾಡಿರುವರು. ಧಾನ ಶಾಸನದಲ್ಲಿ ಈ ಹಣದಿಂದ ಹರಿಜನರಿಗೂ ಇತರ ಹಿಂದೂಗಳಿಗೂ ತರಬೇತುಮಾಡಲು, ಒಂದು ಔದ್ಯೋಗಿಕ ಶಿಕ್ಷಣ ಕೊಡುವ ಸಂಸ್ಥೆಯು ಸ್ಥಾಪನೆಮಾಡಬೇಕೆಂದಿದೆ ಆದರೆ ಮೇಲೆ ಹೇಳಿದಂತೆ ಚರ್ಮದ ಕಾಮಗಾರಿ ತರಬೇತಿನಲ್ಲಿ ಈ ಸಂಸ್ಥೆಯು ಪ್ರಾರಂಭವಾಗಿರುತ್ತದೆ ಕ್ರಮೇಣ ದಾನಶಾಸನದ ಉದ್ದೇಶಗಳು ನೆರವೇರುವಂತಾಗುವವು

ಸ್ಥಾಪನೆಯಾದ ಕಿಂಚಿತ ಸಮಯದ ನಂತರ ಈ ಸಂಸ್ಥೆಯು ಕಾರ್ಯಿಸಲು ಪ್ರಾರಂಭ ಮಾಡಿತು ಪ್ರಥಮತದಲ್ಲಿ ಮಾರಾಟಮಾಡಲು ಸಾಧ್ಯವಾಗುವ ಸಾಮಾನುಗಳನ್ನು ಇವರು ತಯಾರಿಸುತ್ತಿದ್ದಿಲ್ಲ ಆದರೆ ಬರಬರುತ್ತಾ, ಇಲ್ಲಿ ತಯಾರಾದ ಚರ್ಮದ ಸಾಮಾನುಗಳು, ಜನರ ಮನಸ್ಸುಗಳನ್ನು ಸೆಳೆಯಲಾರಂಭಿಸಿದವು ಸಂಸ್ಥೆಯು ಸ್ಥಾಪನೆಯಾದ ಒಂದೇ ಒಂದು ವರ್ಷದಲ್ಲಿ ಇವರ ಒಡವೆಗಳಿಗೆ ಭರತ ಖಂಡದಲ್ಲೆಲ್ಲಾ ಯೋಗ್ಯ ಮಾರ್ಕೇಟುಗಳು ದೊರಕಿದವು. ವಿವಿಧ ಯಂತ್ರಸಾಧನೆಗಳನ್ನು ತರಲಾದವು ಚರ್ಮದ ಸಾಮಾನುಗಳ ಕೈಗಾರಿಕೆಯು ಜೋರಾಗಿ ನಡೆಯಲಾರಂಭಿಸಿತು ಬೂಟ್ಸುಗಳ ತಯಾರಿಯಲ್ಲಿ ಹುಡುಗರಿಗೆ ಇಲ್ಲಿ ವಿಶೇಷ ಮಾಹಿತಿಯನ್ನು ಕೊಡುತ್ತಿದ್ದಾರೆ ಮನುಷ್ಯನ ಕಾಲಿನ ಪ್ರಕೃತಿ ವಿಷಯ ಇವರಿಗೆ ಪಾಠಗಳು ನಡೆಯುತ್ತವೆ

ಇಲ್ಲಿ ವಿದ್ಯಾರ್ಥಿಗಳನ್ನು ಸಾಮಾನು ತಯಾರಿಸುವುದರಲ್ಲಿ ಮಾತ್ರವಲ್ಲದೆ, ಕ್ರಯದ ಅಂದಾಜುಪಟ್ಟಿ ತಯಾರಿಸುವುದು, ವ್ಯಾಪಾರ ನಡೆಯಿಸುವಿಕೆ, ಆಫೀಸು ಕೆಲಸ, ಮಾರಾಟ ಮಾಡುವುದು, ಇತ್ಯಾದಿಗಳಲ್ಲಿ ತರಬೇತು ಮಾಡುತ್ತಿದ್ದಾರೆ ಹರಿಜನರಿಗೆ ಜೀವನಮಾರ್ಗಗಳನ್ನು ತೋರಿಸಿಕೊಡುವುದೆ ಈ ಸಂಸ್ಥೆಯ ಮುಖ್ಯ ಧ್ಯೇಯವಾಗಿರುತ್ತದೆ

Hindustan Times

ಶ್ರೀ। ಸುಭಾಷ್ಚಂದ್ರ ಬೋಸರ ಕುರಿತು

ಶ್ರೀ। ಸುಭಾಷ್ಚಂದ್ರ ಬೋಸರು ಇಂಗ್ಲೆಂಡನ್ನು ಸೇರಲು ಯಾಕೆ ನಿರ್ಬಂಧಗಳು ಹಾಕಿವೆ ಎಂದು ಕೇಳಲಾದ ಶ್ರೀ ಸತ್ಯಮೂರ್ತಿಯವರ ಪ್ರಶ್ನೆಗೆ, ಇವರಿಗೆ ಇಂಗ್ಲೆಂಡನ್ನು ಸಂದರ್ಶಿಸಲು ಅಪ್ಪಣೆಯು ಕೊಡುವ ಅಧಿಕಾರವು ಸೆಕ್ರೆಟರಿ ಒಫ್ ಸ್ಟೇಟರ ಕೈಯಲ್ಲಿರುವುದೆಂದೂ, ಮತ್ತು ಅವರಿಗೆ ಪಾಸ್‌ಪೋರ್ಟು ಕೊಡದೆ ಇರುವ ಸಮಯದಲ್ಲಿ, ಇಂಡಿಯಾ ಸರಕಾರದವರನ್ನು ಕೇಳಲಿಲ್ಲವೆಂದೂ ತಿಳಿದುಬಂತು ಶ್ರೀ। ಸುಭಾಷ್ಚಂದ್ರ ಬೋಸರು ಇಂಗ್ಲೆಂಡು ಸಂದರ್ಶಿಸುವಂತೆ ನಿರ್ಬಂಧಗಳು ತೆಗಿಯಲು ಇಂಡಿಯಾ ಸರಕಾರವು ಪ್ರಯತ್ನಿಸುವುದಿಲ್ಲವಂತೆ.

ಹರಿಜನ ಸೇವಕ ಸಂಘ

ಹರಿಜನ ಸೇವಕಸಂಘದ ಸೆಂಟ್ರಲ್ ಬೋರ್ಡಿನ ಮೂರನೆ ವಾರ್ಷಿಕ ಸಭೆಯು ತಾ. ೩ರಲ್ಲಿ ನವದಿಲ್ಲಿಯಲ್ಲಿ ಸೇರಿತು. ಶ್ರೀ। ಜಿ. ಡಿ. ಬಿರ್ಲಾರವರು ಈ ಸಭೆಯ ಅಧ್ಯಕ್ಷರಾಗಿದ್ದರು. ೧೯೩೫-೩೬ರ ಬಜೆಟ ಎಸ್ಟಿಮೇಟುಗಳು ಸ್ವೀಕರಿಸಲಾದವು. ಇದರಲ್ಲಿ ರೂ ೧,೩೦,೬೩೬, (ಇದರಲ್ಲಿ ೮೫,೦೦೦ ಪ್ರಾಂತಿಕ ಸಂಘಗಳಿಗೆ ಗ್ರೆಂಟು) ವ್ಯಯವೂ, ೧೬೩,೬೭೫,-೭॥ ಉತ್ಪತ್ತಿಯೂ (ಇದರಲ್ಲಿ ೨೫,೦೦೦ ವಂತಿಗೆಯ ರೂಪದಲ್ಲಿ) ಆಗುವುದೆಂದು ವ್ಯಕ್ತವಾಗಿತ್ತು ಸಪ್ಟಂಬರದೊಳಗೆ ಸೆಂಟ್ರಲ್ ಬೋರ್ಡಿನವರು ರೂ ೧॥ ಲಕ್ಷವನ್ನು ಒಟ್ಟುಗೂಡಿಸಬೇಕಾಗಿ ಸೂಚನೆಗಳಾದವು ಪ್ರಾಂತೀಕಿಯ ಬಜೆಟಿನಲ್ಲಿ ರೂ. ೫,೨೩,೮೮೦ ವ್ಯಯ ರೂ ೫,೨೨,೦೬೫ ಆಯವೆಂದು ತಿಳಿದುಬರುತ್ತದೆ ಗತವರ್ಷ, ಜವಾ ಖರ್ಚು ಪಟ್ಟಿಯು ಕೊಡಲಾಗಿತ್ತು ಪಂಡಿತ ಕುಂಜ್ರೂರವರಿಗೆ ಸಲರಮತಿ ಹರಿಜನ ಆಶ್ರಮದ ಟ್ರಸ್ಟಿಗಳಾಗಿ ನೇಮಕಮಾಡಿದರು ಹರಿಜನರ ಸೇವೆಯ ಬಗ್ಗೆ ಸೇವಾಸಂಘದಲ್ಲಿ ಕೆಲವು ನವೀನ ನಿಯಮಗಳು ಮಾಡಲಾದವು ಹರಿಜನ ಸೇವಾಕಾರ್ಯದ ವರದಿಯನ್ನು ಆಗಿಂದ್ಯಾಗೆ ಪ್ರಕಟಿಸಲು ಠರಾವುಗಳಾದವು ಹರಿಜನರಿಗಾಗಿ ಅನೇಕ ಸಣ್ಣ ಗುಡಿ ಕೈಗಾರಿಗೆ ಸಂಸ್ಥೆಗಳು ಸ್ಥಾಪನೆಮಾಡಬೇಕಾಗಿ ಠರಾವುಗಳಾದವು ಶ್ರೀ। ದೇವದರ ಇವರೆ ಮೊದಲಾದ ಕೆಲವು ಪ್ರಸಿದ್ಧ ಪುರುಷರ ನಿಧನದ ಬಗ್ಗೆ ಸಂತಾಪಸೂಚಕ ಠರಾವುಗಳಾದವು ೧೯೩೫-೩೬ ಕುಮುಟೆಯ ಚುನಾವಣೆಯು ನಡೆಯಿತು ೧೯೩೫ರಲ್ಲಿ, ೧೬, ನವೀನ ಬಾವಿ ಹರಿಜನರಿಗೋಸ್ಕರ ತೋಡಲ್ಪಟ್ಟವು ಮತ್ತು ೪೭, ಬಾವಿಗಳ ರಿಪೇರಿ ರೂ ೨೬,೫೯೦ ವೆಚ್ಚದಲ್ಲಿ ನಡೆದಿರುತ್ತದೆ, ೫೩ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶ ಕೊಟ್ಟಿರುತ್ತದೆ ೩೫ ಸಹಕಾರಿ ಸಂಘಗಳು ಹರಿಜನರಿಗಾಗಿ ನಡೆಯುತ್ತಿವೆ, ವೈದ್ಯಕೀಯ ಸಹಾಯದ ಬಗ್ಗೆ ಧಾರಳ ವೆಚ್ಚವಾಗಿರುತ್ತದೆ, ೨೨೨ ಜಿಲ್ಲಾ ಕಮಿಟಿಗಳೂ, ೧೫೦ ತಾಲೂಕು ಕಮಿಟಿ, ಕಾರ್ಯ ನಡೆಯಿಸಿದ್ದಾವೆ, ಈ ಸಂಘದವರು ೧೦೦೮ ದಿನ ಶಾಲೆಗಳನ್ನೂ, ೨೯೦ ರಾತ್ರಿಶಾಲೆಗಳನ್ನೂ ನಡೆಯಿಸುತ್ತಿದ್ದಾರೆ, ಅನೇಕ ಹರಿಜನ ವಿದ್ಯಾರ್ಥಿಗಳನ್ನು ಆಶ್ರಮಗಳಲ್ಲಿ ಪೋಷಿಸಲಾಯಿತು

ಅವಳ ಮೈಭಾರವು ಅದ್ಭುತ ರೀತಿಯಲ್ಲಿ ಕಮ್ಮಿಯಾಯಿತು.

ಈಗ ಅವಳ ಗಂಡನ ಮೈಭಾರವು ಕಮ್ಮಿಯಾಗುತ್ತಿದೆ.

ಇಬ್ಬರಿಗೂ ಕ್ರುಶ್ಯನ ಲವಣವು ಗುಣಕಾರಿಯಾಯಿತು.

ಕ್ರುಶ್ಯನ್ ಸೇವನೆಯಿಂದ ಅವಳ ಮೈಭಾರವು ಕಡಮೆಯಾದದ್ದನ್ನು ಕಂಡು ಈಗ ಅವಳ ಗಂಡನು ಅದನ್ನು ಸೇವಿಸುತ್ತಿರುವನು ಪ್ರಥಮ ವಾರದಲ್ಲಿ 4 ಪೌಂಡು ಭಾರವು ಕಡಿಮೆಯಾಯಿತೆಂದು ಗಂಡನ ಹೇಳಿಕೆ ಅವನ ಹೆಂಡತಿಯ ಮಾತುಗಳನ್ನು ಆಲಿಸಿರಿ

“ದಿನೇ ದಿನೇ ನನ್ನ ಮೈ ಬೆಳೆಯುತ್ತಾ ಹೋಯಿತು ಕಡೆಗೆ ನನ್ನ ಮೈಭಾರವು ನನ್ನಿಂದ ಹೊರಲಸಾಧ್ಯವಾಯಿತು ಆಗ ನನ್ನ ಕೆಲವು ಮಿತ್ರರು ಈ ಲವಣದ ಪ್ರಶಂಸೆಯನ್ನು ಮಾಡಿದರು ಅಂತೆಯೆ ನಾನು ಕ್ರುಶ್ಯೆನ ಲವಣವನ್ನು ಸೇವಿಸಲು ಪ್ರಾರಂಭಿಸಿದೆನು ಕೆಲವೇ ವಾರಗಳಲ್ಲಿ ನನ್ನ ಮೈಭಾರವು ಕಮ್ಮಿಯಾಗುತ್ತಾ ಬಂತು ಇದನ್ನು ಕಂಡು ನನ್ನ ಗಂಡನೂ ಈ ಲವಣವನ್ನು ಸೇವಿಸಲು ಪ್ರಾರಂಭಿಸಿದನು ಈಗ ನಾವಿಬ್ಬರೂ ಮೊದಲಿಗಿಂತಲೂ ಸುಖವಾಗಿದ್ದೇವೆ ಕ್ರುಶ್ಯೆನ್ ಲವಣವನ್ನು ಸೇವಿಸುವ ಮೊದಲು 288½ ಪೌಂಡು ಭಾರವಿದ್ದೆನು ಸೇವಿಸಿದ ನಂತರ ಈಗ 278 ಪೌಂಡು ಭಾರವಿರುವೆನು ಆದುದರಿಂದ ನಿಮಗೆಲ್ಲರಿಗೂ ನಾನು ಇದನ್ನೆ ಶಿಫಾರಸು ಮಾಡುವೆನು

Mrs D. G

ಹೊಟ್ಟೆಯೊಳಗಿರುವ ಕೊಳೆ ಕಶ್ಮಲಗಳನ್ನು ಏನೊಂದು ಕಷ್ಟವಿಲ್ಲದೆ ಕ್ರುಶ್ಯೆನ್ ಲವಣವು ಹೊರಗೆಡಹುವುದು ಹಾಗೆಯೆ ಕ್ರಮಶಃ ಮೈಯಲ್ಲಿರುವ ಜಿಡ್ಡು ನಾಶವಾಗುವುದು ಆಹಾರವನ್ನು ಕಮ್ಮಿ ಮಾಡಿ ದೇಹದ ಜಿಡ್ಡನ್ನು ನಾಶಮಾಡುವದಕ್ಕಿಂತಲೂ ಈ ಲವಣ ಸೇವನೆಯು ಎಷ್ಟೋ ಶ್ರೇಯಸ್ಕರ ಲವಣವು ದೇಹಕ್ಕೆ ಬೆಡ್ಕಸೇರುವ ಪದಾರ್ಥಗಳನ್ನೂ ವಿಷವಾಣಿಗಳನ್ನೂ ಹೊರಗೆಳೆದು ಇಂದ್ರಿಯಗಳಿಗೆ ಪಚನ ಶಕ್ತಿಯನ್ನು ಕೊಡುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ

ಕ್ರುಶ್ಯೆನ್ ಸೋಲ್ಟ್ ದೊರೆಯುತ್ತದೆ

ನಾವು ಸೇವಿಸುವ ಅನ್ನ

ಆಹಾರದ ಕ್ರಮಗಳು ಹಾಳಾದರೆ, ಅನೇಕ ದುಷ್ಪರಿಣಾಮಗಳು ಫಲಿಸುವುವು ಅದೊಂದು ಒಂದು ಜನಾಂಗದ ಕ್ರೂರ ವೈರಿಯಾಗುವುದು ಅನ್ನವು ನಮ್ಮ ಮುಖ್ಯ ಆಹಾರವಾಗಿರುತ್ತದೆ ನಮ್ಮ ದೇಹಕ್ಕೆ ಹೆಚ್ಚಿನ ಪುಷ್ಟಿಯು ಇದರಿಂದಲೆ ಒದಗಬೇಕಾಗಿದೆ ಪುಷ್ಟಿಯು ನಮ್ಮಲ್ಲಿ ಕಡಿಮೆಯಾದರೆ, ರೋಗರುಜಿನಗಳು ನಮ್ಮನ್ನು ಪೀಡಿಸಿ, ಮೃತ್ಯುಲೋಕಕ್ಕೆ ಅಟ್ಟುವುವು ನಾವು ಬಲಿಷ್ಟರಾಗಿ ಬೆಳೆಯಬೇಕು ಆಗ ರೋಗವು ನಮ್ಮ ಬಳಿಗೆ ಬರಲಾರದು ಹಾಗಾಗಲು ನಮ್ಮ ಆಹಾರವು ಪೌಷ್ಟಿಕದಿಂದ ತುಂಬಿಕೊಂಡಿರಬೇಕು ದೇಹಕ್ಕೆ ಬೇಕಾಗುವ ಶಕ್ತಿಯನ್ನು ಉಂಟುಮಾಡುವ ಆಹಾರವೆ ನಮ್ಮ ಹೊಟ್ಟೆಯನ್ನು ಸೇರತಕ್ಕದು ಆಗ್ಗೆ ಒಂದು ಜನಾಂಗವು ಶ್ರೇಯಸ್ಕರವಾಗಿ ಬಾಳಬಹುದು

ಆದರೆ ಇತ್ತೀಚೆಗೆ ಇನ್ನಿತರ ವೈಭವಗಳೊಂದಿಗೆ, ಬಿಳಿ, ಪೋಲಿಶಾದ ಅನ್ನವು ರೂಢಿಗೆ ಬಂದಿರುತ್ತದೆ ಈ ತರದ ಅಕ್ಕಿಯನ್ನು ತಯಾರಿಸುವ ಗಿರಣಿಗಳು ನಮ್ಮಲ್ಲಿ ತುಂಬಾ ಇವೆ. ಅಕ್ಕಿ ತಯಾರಿಸುವ ಯೋಗ್ಯವಾದ ಪುರಾತನ ಕ್ರಮವು ಮೂಲೆಗೆ ಹೋಗುತ್ತಿದೆ ಬತ್ತದಿಂದ ಅಕ್ಕಿತಯಾರಿಸುತ್ತಿರುವಾಗ ಈ ಗಿರಣಿಗಳು, ಅಕ್ಕಿಯಲ್ಲಿರುವ ಮುಖ್ಯ ವಸ್ತುಗಳನ್ನೆಲ್ಲಾ ತೆಗೆದು ಬಿಡುವುವು ಅಕ್ಕಿಯ ಪೌಷ್ಟಿಕವನ್ನು ಒದಗಿಸುವ ಮುಖ್ಯ ಅಂಶವು ಮಿಲ್ಲಿನಲ್ಲಿ ಕಳೆದು ಹೋಗುವುವು ನಾವು ಧಾರಾಳ ಹಣವನ್ನು ವ್ಯಯಿಸಿ, ಬಿಳಿ ಅನ್ನವನ್ನು ಉಣ್ಣುತ್ತೇವೆ ಹೊಟ್ಟೆಗೆ ಬರಿ ಕಾಗದ ಸೇರಿಸಿದಂತೆ–ಬಿಳಿಯಾಗಿರುವ ಅನ್ನ, ಫಲಕಾರಿಯಾಗದೆ–ಇನ್ನೊಂದು ಬಣ್ಣವನ್ನು ತಾಳಿ, ಬಂದ ಹಾಗೆಯೆ ಇನ್ನೊಂದು ದಾರಿಯಲ್ಲಿ ಬಣ್ಣ ಬದಲಾಯಿಸಿ ಹೊರಗೆ ನಡೆಯುವುದು ಇದರಿಂದ ಮನುಷ್ಯ ದೇಹಕ್ಕೆ ಬೇಕಾಗುವ ಪೌಷ್ಟಿಯು ದೊರಕದೆ ಹೋಗಿ–ಆತನು ಕ್ಷೀಣನಾಗುವನು

ಅಕ್ಕಿಯನ್ನು ತಯಾರಿಸುವ ನಮ್ಮ ಹಳ್ಳಿಗರ ಕ್ರಮವು ಯೋಗ್ಯವಾದುದು ಅಕ್ಕಿಯ ಯಾವತ್ತೂ ಲಕ್ಷಣಗಳು, ಈ ತಯಾರಿಸುವಿಕೆಯಲ್ಲಿ ಹಾಳಾಗುವುದಿಲ್ಲ ಆದುದರಿಂದ ಈ ಹಳೇ ಪದ್ಧತಿಯನ್ನನುಸರಿಸಿ, ತಯಾರಿಸಿದ ಅಕ್ಕಿಯೆ ಶ್ರೇಷ್ಠವಾದುದು ಅನ್ನ ತಯಾರಿಸುವ ವಿಚಿತ್ರ ಕ್ರಮವು ನಮ್ಮಲ್ಲಿ ಪ್ರಚಾರದಲ್ಲಿದೆ ನೀರಿನಲ್ಲಿ ಅಕ್ಕಿಯನ್ನು ಕುದಿಸಿ, ನೀರನ್ನು ಬಿಸಾಡಿ ಬಿಡುತ್ತೇವೆ ಇದರಿಂದ ಅಕ್ಕಿಯ ಅನೇಕ ಗುಣಾಂಶಗಳು ಕಳೆದು ಹೋಗುವುವು ನೀರನ್ನು ಆರಿಸಿ ತೆಗೆಯುವ ಕ್ರಮದಿಂದ ಅನ್ನವನ್ನು ತಯಾರಿಸಬೇಕು ಆಗ ಅನ್ನವು ಒಂದು ಬಲಕಾರಿ ಆಹಾರವಾಗುವುದು

'The Modern Review'

ಹಿಟ್ಲರನು ಭರತಮಾತೆಯನ್ನು ಅವಮಾನಗೊಳಿಸಿರುವನು.

ಜರ್ಮನಿಯ ಏಕಾಧಿಪತಿಯಾದ ಹಿಟ್ಲರನು, ಕಳೆದವಾರ ಒಂದು ಭಾಷಣಮಾಡುತ್ತಿರುವಾಗ, ಭರತಖಂಡವನ್ನು ಅವಮಾನಗೊಳಿಸುವ ರೀತಿ ಮಾತುಗಳನ್ನಾಡಿರುವನು ಭಾರತೀಯರನ್ನು ಧಿಕ್ಕರಿಸಿರುವನು 'ಈ ಮೊದಲು ಜರ್ಮನಿಯರು ಭರತಖಂಡದ ಮೇಲೆ ತುಂಬಾ ಅಭಿಮಾನವುಳ್ಳವರಾಗಿದ್ದರು ಮೊನ್ನೆ ಜನಿಸಿದ ಈ ರಾಜಕೀಯ ಶಿಶುವು ಬಿದ್ದಿರುವ ಜರ್ಮನಿಯನ್ನು ಎಳಿಸಲು ಬಹಳ ಶ್ರಮಪಟ್ಟಿರುವುದು. ಇಂಥವನು ಹಿಂದೂದೇಶದವರಿಗೆ ಪಾಠ ಕಲಿಸಲು ಮುಂದೆಬಂದಿರುವನು ಹಿಟ್ಲರನ ಪ್ರಾಕ್ತನರು, ಅರಣ್ಯಗಳಲ್ಲಿ ಬತ್ತಲೆಯಾಗಿ ಸುಳಿದಾಡುತ್ತಿರುವಾಗ, ಈ ಭರತಖಂಡದಲ್ಲಿ ಪ್ರಜಾಪ್ರಭುತ್ವಗಳನ್ನನುಸರಿಸಿ ಮಹಾಂರಾಜ್ಯಗಳು ನಡೆಯುತ್ತಿದ್ದವು ಭರತಖಂಡದ ನಾಗರೀಕತೆ, ಸಂಸ್ಕೃತಿಯೂ ಬಹಳ ಶ್ರೇಷ್ಠವಾದುದು ಹಿಂದೂದೇಶದ ಕುರಿತು ಈತನಿಗೆ ಯಾವ ಅರಿವು ಇದ್ದಂತೆ ಭಾಸವಾಗುವುದಿಲ್ಲ ಈ ರೀತಿ ಜನಾನನ್ನು ಅವಮಾನಗೊಳಿಸಲು ಈತನಿಗೆ ಧೈರ್ಯ ಸಾಲದು ಇವನನ್ನು ಬುದ್ಧಿ ವಿಕಾಸಮಾಡುವ ಯೋಗ್ಯತೆಯು ಅವರಲ್ಲಿದೆ ಆದರಿಂದ ಹಿಂದೂದೇಶವು ತನ್ನ ರಾಷ್ಟ್ರೀಯ ಗೌರವವನ್ನು ಕಾಯ್ದುಕೊಳ್ಳಲು, ಜರ್ಮನಿಗೆ ತಕ್ಕ ಬುದ್ಧಿಪಾಠ ಆಗುವಂತೆ, ಅವರ ವರ್ತನೆಯನ್ನು ಖಂಡಿಸಿ, ನಾಜಿ ಜರ್ಮನಿಯರ ಸಾಮಾನುಗಳನ್ನು ಬಹಿಷ್ಕರಿಸುವ ಚಳವಳವನ್ನು ನಡೆಯಿಸತಕ್ಕದು' ಎಂದು ಶ್ರೀ ನರಿಮೋನರ ಸಂದೇಶ

WANTED

Energetic, Active and Influential men to work as organisers and agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

New Era Technical School.

Near Market Square, Udipi

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)
ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment Details may be had on application to the Manager

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು-ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಾಲು ತಯ್ಯಾರು ಆಗುತ್ತವೆ ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು

ಎಲ್ಲಾ ಜವಳಿ ಬೆಲೆಗೆ ಮೀರಿ! ಬಣ್ಣದಲ್ಲಿ ಪವನು ಬಾಳಿಕೆಯಲ್ಲಿ ಪವನು

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಶೈಯವರಲ್ಲಿ ಬಂದು ನೋಡಿಕೊಳ್ಳಿರಿ

ಯುಂ. ವೆಂಕಟೇಶ ರಂಗ ಶೈ, ಪ್ರೊಪ್ರೈಟರ್.

ಡಾಕ್ಟರ ವಾಮನ ಗೋಪಾಳರವರ



ಬಿಡಿಡಾಯಿಜ್ಞ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫ್ರೊಸ್ಫರಸ್ ಗುಳಿಗೆಗಳು

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ

ನಿಮ್ಮ ಮಿತ್ರರನ್ನು
ಸ್ವದೇಶಾಭಿಮಾನಿಯ
ಚಂದಾದಾರರನ್ನಾಗಿ
ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಲಿದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲ ಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ 1ಕ್ಕೆ ರೂ 2-8-0

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ, ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು

ಬಾಟ್ಲಿ 1ಕ್ಕೆ 10 ಆಣೆ 8 ಬಾಟ್ಲಿಗಳಿಗೆ ರೂ 1-12-0.



ಬಾಟ್ಲಿ 1ಕ್ಕೆ 8 ಆಣೆ ... ಬಾಟ್ಲಿ 1ಕ್ಕೆ ರೂ 1 0-0

ಮಲೇರಿಯಾ ನಿವಾರಿಣೀ

... ಇವುಗಳನ್ನೆಲ್ಲಾ ಹೋಗಲಾಡಿಸಿ ... ಮಲೇರಿಯಾ ಜ್ವರ ... ಉತ್ತಮವಾದ ಔಷಧಿ ...

ಬಾಟ್ಲಿ 1ಕ್ಕೆ ರೂ 1 8-0 ಸಣ್ಣ ಬಾಟ್ಲಿ 1ಕ್ಕೆ ಆಣೆ 13

ಮೇಹಕುಠಾರ

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟ ನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹ ರೋಗಗಳನ್ನು ಗುಣಪಡಿಸುವುದು ಕ್ರಯ ದಬ್ಬಿ 1ಕ್ಕೆ ರೂ 2-8-0 ಮಾತ್ರ

ಎಮ್. ಗಣಪಯ್ಯ ಎಂಡ್ ಸನ್ಸ್ ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ನಂಬ್ರ 8 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ- ಶ್ರೀ ರಾಮಾ ಸ್ಟೇಷನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. ದಾ॥ ಶ್ರೀನಿವಾಸ ಪೈ, ಪುತ್ತೂರು. ಮೆಸರ್ಸ್ ಮುಲ್ಲರ ಪೇಟೆನ್ ಬ್ರದರ್ಸ್, 91, ಚಿಕ್ಕಪೇಟೆ ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ, ತಾರಾಹೌಸ್, ಗಿರಗಾಂವ್, ಬೇಕ್‌ರೋಡ್ ಮುಂಬಾಯಿ, ನಂ. 4, ದಿ ಡಿಸ್ಪೆನ್ಸರಿ ಹೋಲ್, ಮಡಿಕೇರಿ ಕೂರ್ಗ್ ರಾವ್ ಫಾರ್ಮಸಿ, ಸಾಗರ

ನೋಟಗಳು :
NOTE.....S.

ಇವೇ ಒಂದೆರಡು ರಾತ್ರಿಗಳಿಂದ, ರಾತ್ರಿ ವೇಳೆಯೂ ನಮ್ಮೂರಿನ ಕಸ ಕೊಳೆ ಮಲ ಮೂತ್ರಗಳನ್ನು ಬಹಳ ಜೋರಿನಿಂದ ನಿರ್ಮಲಗೊಳಿಸುವ ಏರ್ಪಾಡು ಸಾಗುತ್ತಲಿದೆ ಎಂದು ಅಲ್ಲಲ್ಲಿ ಸಂಚರಿಸಿದವರ ಶಿಫಾರಸು.

× × × × ×

ದೇವಲೋಕದಿಂದ ನಮ್ಮೂರಿನ ಆರೋಗ್ಯ ಸಾಧನ ವಿಶೇಷಗಳನ್ನು ಗೋಪನವಾಗಿ ತಿಳಿದು ವಿಮರ್ಶಿಸಲು ಯಾರೂ ಬಂದಿದ್ದರೋ? ಅಥವಾ ಗೋಪನವಾಗಿ ತಿಳಿಯಬಂದಿದ್ದರೆ, ಇಷ್ಟು ಬಹಿರಂಗವಾಗಿ ಮಲವೊಯ್ಯುವ ಬಸ್ಸುಗಳು ರಾತ್ರಿಯಲ್ಲಿ ಓಡಾಡುತಿದ್ದುವೋ?

× × × × × ×

ಅದೆಂತೂ ಇರಲಿ. ತಿಂಗಳಿಗೊಮ್ಮೆ ಮ್ಯುನಿಸಿಪಲ್ ಮೀಟಿಂಗ್ ನಡೆವ ಮೊದಲು, ಈ ರೀತಿ ಊರಿನ ನೈರ್ಮಲ್ಯಕ್ಕಾಗಿ ಸಾಧನೆಗಳಾಗುವ ಹಾಗೆ, ಯಾವ ದೇವತೆಯ ಆರಾಧನೆ ನಡೆಯಬೇಕು?

× × × × ×

ಗ್ರಾಮೋಫೋನ್ ಸಂಗೀತದ ಮಹಾಪ್ರಯೋಗಗಳು ಆಗುವುದು ಹೆಚ್ಚುತ್ತಿದೆ. ಹೋಟೆಲುಗಳಲ್ಲಿ ಗಿರಾಕಿಗಳ ಮನೋರಂಜನೆಯಾಗತೊಡಗಿದೆ.

+ + + +

ಬಾಜೀರಾಯನ ಕಾಲದ ಕೆಲವು ದೋಸೆ ಪ್ಲೇಟುಗಳನ್ನು ಅವು ಬಹಳವಾಗಿ ಹುಳಿತುದನ್ನು ಗಣನೆಗೆ ತಾರದೆ, ಮುದ್ದಾಗಿ ನೆರೆಹೊರೆಯವರು ನಿಷ್ಪೇಕ್ಷಿತರಾಗುವ ಹಾಗೂ ಸಾಧ್ಯವಿದ್ದಷ್ಟು ನಿದ್ದೆಗೆಡುವ ಹಾಗೂ ಈ ಸಂಗೀತವನ್ನು ಪದೇ ಪದೇ ಹಾಡಿಸಿ ಕೊಡುವ ದೀಕ್ಷಾಬದ್ಧ ಮಹನೀಯರ ವಿಚಾರಗಳನ್ನು ಬಾತ್ಮಿಗಳು ತಿಳಿಸುತ್ತಿವೆ.

* * *

ಮೊದಲು ಸೂಚಿಸಲಾದ ಊರ ನೈರ್ಮಲ್ಯಸಾಧಕರು ಈ ಹುಳು ದೋಸೆಗಳನ್ನೂ ಒಯ್ದು ಬಿಟ್ಟಲ್ಲಿ ಊರು ಇನ್ನಷ್ಟು ನಿರ್ಮಲವಾಗುತ್ತಿತ್ತು. ಇವುಗಳ ಜತೆಯಲ್ಲಿ, ನಡುರಾತ್ರೆ ಬಾರಿಸಲಾಗುವ ನವೀನ ಪಾಠ ಸಾರುವವರ ಹಾರ್ಮೋನಿಯಮುಗಳನ್ನೂ, ಏನೇನೂ ಅಗತ್ಯವಿಲ್ಲದೆ ಒತ್ತಿ ಕೂಗಿಸುವ ಮೋಟರುಗಳ ಶಂಖಗಳನ್ನು ಓಡುವಾಗಲೆಲ್ಲ ಕಿರಿಚುವ ಸೈಕಲು ಗಂಟೆಗಳನ್ನು ಹೆದ್ದಾರಿಗಳಲ್ಲಿ ಮಾರಲಾಗುವ ತಿನಸುಗಳನ್ನೂ, ಕುಯ್ಯೋ ಎಂದು ಗಾಯನಮಾಡಿ ವಿಕಟವಾಗಿ ಕೂಗಿಡುವ ಭಿಕ್ಷುಕರನ್ನೂ ಇವೇ ಲೋಕಹಿತಕರವಾಗಿರುವ ಗಾಡಿಗಳಲ್ಲಿ ಒಯ್ದರೆ ದೇವಲೋಕದ ತನಕ ಯಾರೂ ತಲುಪದೆ ಅಲ್ಲಿಯೂ ಕ್ಷೇಮವಾಗುತ್ತಿತ್ತು.

× × × ×

ಚಿಕ್ಕ ಚಿಕ್ಕ ಮಕ್ಕಳನ್ನು ಪಾಸು ಟಿಕೇಟಿನ ಆಸೆಗೆ ಪ್ರದರ್ಶನ ಸರ್ಕಸು ಸಿನೇಮ, ಇತ್ಯಾದಿಗಳಿಗೆ ಒಯ್ಯುವ ಶಿಕ್ಷಕರು, ಮಕ್ಕಳನ್ನು ಅಲ್ಲಿಗೆ ಒಯ್ದುಬಿಟ್ಟಲ್ಲಿ ಮಾತ್ರ ಕೃತಾರ್ಥರಾಗುವುದಿಲ್ಲ. ಮಕ್ಕಳು ತಮ್ಮ ಮನೆಗಳಿಗೆ ಮರಳದೆ ಇದ್ದಲ್ಲಿ, ಇನ್ನಾವಾಗಲೂ ಇವರಿಗೆ ಪಾಸು ಟಿಕೇಟು ಪಡೆದು ಪ್ರದರ್ಶನಕ್ಕೆ ಹೋಗಲು ಸಾಧ್ಯವಿದ್ದೀತೆ?

× × × × × ×

ಮೊನ್ನೆ ಕೆಲ ಮಕ್ಕಳು ಇದೇ ರೀತಿ, ಜನ್ಮದಲ್ಲಿಂದೂ ಕಂಡಿರದ ಹೆದ್ದಾರಿಗಳಲ್ಲಿ, ಒಂಬತ್ತೂವರೆ ಗಂಟೆ ರಾತ್ರಿಗೆ ಸಂಚಾರಮಾಡುತ್ತ, ಅಳುತ್ತಲೂ ದಿಕ್ಕಿಲ್ಲದೆ ಅಲೆದಾಡಿ ಎಂತೂ ನಡುರಾತ್ರಿಗೆ ಮನೆಸೇರಿ, ಹೆತ್ತವರ ಹೊಟ್ಟೆ ತಣಿಸಿ, ಹುಲಿಸಿಂಹಗಳ ಬಾಯಿಗೆ ತಮ್ಮನ್ನು ದೇವರು ಒಪ್ಪಿಸಿಲ್ಲವೆಂದು ರುಜುಮಾಡಿದುವು.

+ + +

ಒಂದು ಕುರ್ಚಿಯ ಮೇಲೆ ಎರಡು ತಾಸು ಕೂತು ಸರ್ಕಸು ನೋಡಲು ಸಿಗುವ ಗೌರವ ದೊರೆಯುತ್ತೆಂದರೆ, ಊರ ಮಕ್ಕಳು ನಾಳೆಗೆ ಸಾಲೆಗೆ ಬಾರದಿದ್ದರೂ ಪರ್ವಾ ಇಲ್ಲ ಎನ್ನುವಷ್ಟು ಮರವೆ! ದೇವರೆ!

+ + + +

ಊರಲ್ಲಿ ನುಸಿಗಳು ಬಹಳವಾಗಿ ಸುತ್ತಾಡುತ್ತ ಕಾಡುತ್ತಿದ್ದಲ್ಲಿ ಈಗ ಕಾಟ ಬಹಳ ಕಡಿಮೆಯಾಗಿದೆ ಎಂದು ವಾರ್ತೆ. ಕಾರಣ,— ಅಲ್ಲಿ ತೋಡುಗಳಲ್ಲಿ ಚಿಮಿಣಿಎಣ್ಣೆ ವಂಶದ ತೈಲಗಳು ಸುರಿದಿಲ್ಲವಂತೆ.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK
LIMITED.

ಸಂಯುಕ್ತ ಅಮೇರಿಕಾದ ಅಧ್ಯಕ್ಷ ರೂಸವೆಲ್ಟರ ಸ್ಥಿತಿ.

ರೂಸವೆಲ್ಟರ ನವೀನ ಯೋಜನೆ ಯ 'AAA' (ಎಗ್ರಿಕಲ್ಚರ್ ಎಡ್ಮಿನಿಸ್ಟ್ರೇಶನ್ ಆಕ್ಟು) ಬಿದ್ದು ಹೋಯಿತು. ಅದು ಹೇಗೆ ಬಿದ್ದು ಹೋಯಿತು? ಪ್ರೆಸಿಡೆಂಟ ರೂಸವೆಲ್ಟರು ಮುಂದಕ್ಕೆ ಏನು ಮಾಡುವರು?

(ಒಂದು ಆಂಗ್ಲೇಯ ಲೇಖದ ಅನುವಾದ)

ನವೀನ ಯಂತ್ರೋಪಾಯ ಇತ್ಯಾದಿಗಳಿಂದ ಸಂಯುಕ್ತ ಅಮೇರಿಕದ ಸಾಗುವಳಿ ವ್ಯವಸಾಯವು ವಿಶೇಷ ತರದ ಉನ್ನತಿಯನ್ನು ಹೊಂದಿತು. ಕಡಿಮೆ ಶ್ರಮಗಳಿಂದ ಬೆಳೆಗಳನ್ನು ಹೆಚ್ಚಿಸಲು ಸಾಧ್ಯವಾಯಿತು. ಆದರೆ, ಸಾಗುವಳಿಯ ಬೆಳೆಯು ಹೆಚ್ಚಾದಷ್ಟಕ್ಕೆ ಅವುಗಳಿಗೆ ತಕ್ಕ ಮಾರ್ಕೆಟು ಒದಗಿಸಲು ಅಸಾಧ್ಯವಾಯಿತು. ಆ ದೇಶಕ್ಕೆ ಸಹಜವಾಗಿ ಬೇಕಾದಷ್ಟಕ್ಕಿಂತ ಅತಿರೇಕವಾಗಿ ಹೆಚ್ಚಾದ ಗೋದಿ ಇತ್ಯಾದಿಗಳು ತಯಾರಾದುವು. ಅವುಗಳಿಗೆ ಬಹಿರ್ ಮಾರ್ಕೆಟುಗಳೂ ಕೂಡ ದೊರಕದೆ ಹೋದವು. ಇದರ ಪರಿಣಾಮವೇನಾಯಿತು? ತುಂಬಲ್ಪಟ್ಟ ರೈತರ ಉಗ್ರಾಣಗಳು ಖಾಲಿಯಾಗದೆ ನಿಂತವು. ಸಾಗುವಳಿ ಫಲಗಳ ಧಾರಣೆಯು ಭಯಂಕರ ರೀತಿಯಲ್ಲಿ ಇಳಿಯಿತು. ತಯಾರಿಸಿದ ಜಿನಸುಗಳಿಗೆ ಗಿರಾಕಿಗಳಿಲ್ಲದೆಯೂ, ತಯಾರಿಸಿ ಉಗ್ರಾಣಗಳಲ್ಲಿ ಶೇಖರಿಸಿದ ಸಾಗುವಳಿ ಫಲಗಳನ್ನು, ನವೀನ ಫಲಗಳನ್ನು ಇಡಲು ಸ್ಥಳ ಸಂಕೋಚವಾಗದಂತೆ, ಮನೆಗಳಲ್ಲಿ ಕಟ್ಟಿಗೆಯ ಬದಲಾಗಿ ಉಪಯೋಗಿಸುವ ಅನುಪತ್ಯವು ಒದಗಿತು. ರೈತರ ಉತ್ಪನ್ನವು ಕಡಿಮೆಯಾಯಿತು ಅವರ ಸಾಲಗಳು ಏರಲಾರಂಭಿಸಿದವು. ಸ್ವಲ್ಪ ಸಮಯದಲ್ಲೇ ರೈತರು ಹತಾಶರಾದರು. ಆದರೆ, ತನ್ನ ದೇಶದ ಹಿತವನ್ನೂ ಸಾಧಿಸಲು ದೀಕ್ಷೆಗೊಂಡ ಪ್ರೆಸಿಡೆಂಟ ರೂಸವೆಲ್ಟರು ರೈತರ ಫಲಗಳಿಗೆ ಯೋಗ್ಯ ಧಾರಣೆ ನಿಲ್ಲುವಂತೆ, ಅವರು ಅನಾವಶ್ಯಕವಾಗಿ ಬೆಳೆಗಳನ್ನು ಬೆಳೆಯಿಸದಂತೆಯೂ, ಹಾಗೆ ಮಾಡಿ ಆದಾಯವು ಕಡಿಮೆಯಾದ ರೈತರಿಗೆ ಸರಕಾರದಿಂದ ಆರ್ಥಿಕ ಸಹಾಯವು ದೊರಕುವಂತೆ ಏರ್ಪಾಡುಗಳನ್ನು ಮಾಡಿದರು ಇದಕ್ಕೆ ಧಾರಾಳ ಹಣವು ಬೇಕಾಯಿತು ಅದನ್ನು ಎಲ್ಲಿಂದ ತರುವುದು? ಅವುಗಳನ್ನು ರೈತರ ಫಲಗಳನ್ನುಪಯೋಗಿಸುವ ಕಾರ್ಖಾನೆಗಳು ಕಂದಾಯ ರೂಪದಲ್ಲಿ ಸಲ್ಲಿಸಬೇಕಾಯಿತು ಈ ಕ್ರಮಕ್ಕೆ ಎಗ್ರಿಕಲ್ಚರಲ್ ಎಡ್ಮಿನಿಸ್ಟ್ರೇಶನ್ ಆಕ್ಟು 'AAA' ಎಂದು ನಾಮಾಂಕಿತವಾಯಿತು ಹಾಗೆಯೇ ನಿರುದ್ಯೋಗ ನಿವಾರಣೆಯಾಗುವಂತೆಯೂ, ಕೈಗಾರಿಕೆ ಪ್ರಪಂಚದಲ್ಲಿ ಸ್ಪರ್ಧೆ ನಿಲ್ಲಿಸಿ ದೇಶಹಿತವನ್ನು ಸಾಧಿಸುವಂತೆಯೂ ನೇಶನಲ್ ರಿಕವರಿ ಆಕ್ಟು 'N R A' ಇತ್ಯಾದಿ ಹೊಸ ಕ್ರಮಗಳನ್ನು ಪ್ರೆಸಿಡೆಂಟ ರೂಸವೆಲ್ಟರು ಮುಂಜೂರು ಮಾಡಿದರು ಇವುಗಳು ರೈತರಿಗೂ ಇತರ ಸಾಮಾನ್ಯ ಪ್ರಜೆಗಳಿಗೂ ಒಪ್ಪುವಂತಾದುವು

ರೈತರಿಗೆ ದ್ರವ್ಯ ಸಹಾಯ

ಆದರೆ, ಈಗ ಸಂಯುಕ್ತ ಅಮೇರಿಕಾದ (ಯುನೈಟೆಡ್ ಸ್ಟೇಟ್ಸಿನ) ಸೂಪ್ರೀಮ್ ಕೋರ್ಟಿನಿಂದ ಈ 'AAA' ಆಕ್ಟು ಶಾಸನ ಸಮ್ಮತವಲ್ಲವೆಂದು ಇತ್ಯರ್ಥವಾಗಿರುತ್ತದೆ ಈ ಸೂಪ್ರೀಮ್ ಕೋರ್ಟಿನವರು ಅದನ್ನು ಕೊಲ್ಲಲು ಕಾರಣವೇನು? ಪ್ರೆಸಿಡೆಂಟ ರೂಸವೆಲ್ಟರು, ಈ ಆಕ್ಟು ಬಿದ್ದು ಹೋಗಲು ಮುಂದಕ್ಕೆ ಏನು ಮಾಡುವರು?

ಸಾಗುವಳಿಯ ರಕ್ಷಣೆಗಾಗಿ 'AAA' ಯನ್ನು ಸೃಷ್ಟಿಸಿದ್ದಾಗಿತ್ತು ರೈತರಿಗೆ ಅದು ಒಪ್ಪಿತು. ಅವರ ಬೆಳೆಯನ್ನು ಕಡಿಮೆ ಮಾಡಿದುದಕ್ಕಾಗಿ ಅವರಿಗೆ ಸರಕಾರದಿಂದ ಸಹಾಯ ದ್ರವ್ಯವು ಕೊಡಲಾಯಿತು ಇವುಗಳಿಂದ ಸಾಗುವಳಿಯ ಫಲಗಳಿಗೆ ಒಂದು ಯೋಗ್ಯ ಧಾರಣೆಯು ದೊರಕುವಂತಾಯಿತು. ರೈತರ ಪಾಡು ನಿವಾರಣೆಯಾಯಿತು 'AAA' ಯು ಜಯಕಾರಿಯಾಯಿತು

• • •

ಆದರೆ, ಕೈಗಾರಿಕರು ತಮ್ಮ ಇಚ್ಛೆಗೆ ವಿರೋಧವಾಗಿ ಇವುಗಳನ್ನು ಶಿರಸ್ಸಾವಹಿಸಿದರು. ಆಗ ನವೀನವಾಗಿ ಆರಿಸಿ ಬಂದ ರೂಸವೆಲ್ಟರ ಯೋಜನೆಗಳಿಗೆ ಸಮ್ಮತಿಯಿಯಬೇಕಾಯಿತು. ಆದರೆ, ರೈತರ ಕಿಸೆಗಳನ್ನು ಸೇರುವ ಸಹಾಯ ದ್ರವ್ಯವನ್ನು ಒದಗಿಸಿ ಕೊಡಲು ಇವರಲ್ಲಿ ತುಂಬಾ ಅಸಮಾಧಾನವುಂಟಾಗಿತ್ತು ರೈತರ ಬೆಳೆಯು ಕಡಿಮೆ ಮಾಡುವಂತೆ ತಾವು ಹೊಣೆಗಾರರಾಗುವುದು ಅವರಿಗೆ ಎಷ್ಟು ಮಾತ್ರಕ್ಕೂ ಇಷ್ಟವಿರಲಿಲ್ಲ

ಆದರೂ ಈ ಯೋಜನೆಯು ಸರಕಾರದ ಒಂದು ಕಾನೂನಾಯಿತು ರೈತರ ಅನೇಕ ಸಂಕಷ್ಟಗಳು ನಿವಾರಣೆಯಾದುವು ರೈತರ ಸ್ಥಿತಿಯೂ ಅತಿರೇಕವಾಗಿ ಉದ್ಧಾರವಾಗದಿದ್ದರೂ, ಅವರಿಗೆ ತೃಪ್ತಿ ಉಂಟಾಯಿತು ರೂಸವೆಲ್ಟರ ವೈರಿಗಳಾದ ಕೈಗಾರರವಂತರೂ, ಧನಾಢ್ಯರೂ ಇದನ್ನು ಪ್ರತಿಕೂಲಿಸುವ ಪ್ರಯತ್ನಗಳನ್ನು ಮಾಡದೆ ಸುಮ್ಮನೆ ಕುಳಿತರು

ಹೀಗೆ ಕೆಲವು ಸಮಯವು ದಾಟಿತು ಅಲ್ಲಿನ ಮಾಸ್ಸಾಚೂಸೆಟ್ಸಿನ, ನ್ಯೂ ಬೆಡ್ಫೋರ್ಡಿನ, ಹೊಸೇರಿ ಮಿಲ್ಲಿಂಬ ದೊಡ್ಡ ಕಾರ್ಖಾನೆಯು ದಿವಾಳಿ ಹೊಂದಿತು ಆಗ ಆ ಮಿಲ್ಲಿನ ರಿಸೀವರರಾದ ಜೇಮ್ಸ್ ಮೆಕ್ ಡೊನಾಲ್ಡ ಮತ್ತು ವಿಲಿಯಮ್ ಬಟ್ಲರಿಗೆ AAA ಪ್ರಕಾರ ಆ ಮಿಲ್ಲಿನಿಂದ ಸಲ್ಲಬೇಕಾಗಿರುವ ರೂ ೨೨,೦೦೦ ಕಂದಾಯವು ಬಾಕಿ ಇರುವುದೆಂದು ಸರಕಾರದಿಂದ ಪತ್ರ ಬಂತು

ವಿಲಿಯಮ್ ಬಟ್ಲರರು ಪ್ರೆಸಿಡೆಂಟ ರೂಸವೆಲ್ಟರ ನವೀನ ಯೋಜನೆಗಳನ್ನು ವಿರೋಧಿಸುವವರು ಆದುದರಿಂದ ತೆರಿಗೆಯು ನ್ಯಾಯ ಸಮ್ಮತವಾದುದಲ್ಲ, ಅದನ್ನು ಕೊಡಲಿಕ್ಕಾಗುವುದಿಲ್ಲವೆಂದರು AAA ಕ್ರಮವು ಸರಕಾರದ ಶಾಸನಕ್ಕೆ ವಿರೋಧವಾಗಿರುವುದೆಂದು ಇವರು ವಾದಿಸಿದರು

• • •

ಹಾಗೆಯೇ ಒಂದು ವರ್ಷದ ಪರಿಯಂತರ ಅನೇಕ ಕಾರ್ಖಾನೆಗಳು ಆ ತೆರಿಗೆಯನ್ನು ಒಪ್ಪಿಸಲಾರದೆ ಹೋದುವು ಆದುದರಿಂದ ಸರಕಾರಕ್ಕೆ ಹೊಸೇರಿ ಮಿಲ್ಲುಗಳ ರಿಸೀವರರ ಮೇಲೆ ದಾವೆ ಮಾಡಬೇಕಾಯಿತು ಬೋಸ್ಟನ್ನಿನ ಫೆಡರಲ್ ಕೋರ್ಟಿನವರು ತೆರಿಗೆಯನ್ನು ಕೊಡಬೇಕಾಗಿ ವ್ಯವಹರಿಸಿದರು ಮೇಲಿನ ಕೋರ್ಟಿಗೆ ಅಪ್ಪೀಲು ಮಾಡಲಾಯಿತು ಬಟ್ಲರರು ತೆರಿಗೆಯನ್ನು ಕೊಡಬಾರದಾಗಿ ಇತ್ಯರ್ಥವಾಯಿತು

ಇದರಿಂದ ದಿಗಿಲು ಹೊಂದಿದ ಸರಕಾರವು ಅಮೇರಿಕದ ಮುಖ್ಯ ನ್ಯಾಯಸ್ಥಾನವಾದ "ಸೂಪ್ರೀಮ್ ಕೋರ್ಟ"ಗೆ ಹೋಗಬೇಕಾಯಿತು ಯುನೈಟೆಡ್ ಸ್ಟೇಟ್ಸಿನ ಸರಕಾರದ ಶಾಸನದ ಪ್ರಕಾರ ಈ ಸೂಪ್ರೀಮ್ ಕೋರ್ಟ್ ಅಲ್ಲಿನ ಎಲ್ಲಾ ಸರಕಾರ ಸಂಸ್ಥೆಗಳಿಗಿಂತ ಶ್ರೇಷ್ಠವಾದುದು ಸರಕಾರದ ವರ್ತನೆಯನ್ನು ಸರಿ ಮಾಡುವ ಅಧಿಕಾರವು ಇದರಲ್ಲಿದೆ ಈ ಸೂಪ್ರೀಮ್ ಕೋರ್ಟಿನಲ್ಲಿ ಪ್ರೆಸಿಡೆಂಟ ರೂಸವೆಲ್ಟರ 'A A A' ಯೋಜನೆಯು ಶಾಸನ ಸಮ್ಮತವಲ್ಲವೆಂದೂ ದೃಢ ಮಾಡಲಾಯಿತು ಇದರಿಂದ 'AAA' ಯು ಬಿದ್ದುಹೋಗಬೇಕಾಯಿತು

ಸರಕಾರವೂ ಸೂಪ್ರೀಮ್ ಕೋರ್ಟಿನ ಇತ್ಯರ್ಥವೂ.

ಇದರ ಪರಿಣಾಮವೇನಾಯಿತು. ಈ ಆಕ್ಟಿನ ಮೇರೆಗೆ ಸರಕಾರವು ಕೂಡಿಸಿದ ರೂ ೫೩೦,೦೦೦,೦೦೦ ಕೋರ್ಟಿನ ತೀರ್ಮಾನವನ್ನು ಕಾಯ್ದುಕೊಂಡು ಈ ಕೋರ್ಟುಗಳಲ್ಲಿ ಜಮೆಯಾಗಿರುವ ದ್ರವ್ಯವು ಸರಕಾರಕ್ಕೆ ಕಳೆದು ಹೋಯಿತು ರೈತರ ನಿವಾರಣೆಗೆ ೧೫ ಮಿಲಿಯ ರೂಪಾಯಿಗಳನ್ನು ಪ್ರೆಸಿಡೆಂಟರು ಮುಂದಿನ ಬಜೆಟಿನಲ್ಲಿ ಸೇಂಕ್ಷನು ಮಾಡಿರುವರು ಈಗ ಈ ಆಕ್ಟು ಬಿದ್ದುಹೋಗಲು ಭಯಂಕರ ಸ್ಥಿತಿಯು ಪರಿಣಮಿಸಿಯದೆ ರೈತರಿಗೆ ಕೊಟ್ಟ, ಕೊಡಬೇಕಾಗಿರುವ ದ್ರವ್ಯವನ್ನು ಹೇಗೆ ಉಂಟುಮಾಡುವುದು? ಇಷ್ಟರ ತನಕ ವಸೂಲಾದ ತೆರಿಗೆಯ ಗತಿಯೇನು? ಈ ಆಕ್ಟಿನ ಸ್ಥಿತಿಯು ಹೀಗಾದರೆ, ಪ್ರೆಸಿಡೆಂಟ ರೂಸವೆಲ್ಟರ 'ನವೀನ ಯೋಜನೆ'ಯಿಂದ ದೇಶ ಹಿತಕ್ಕಾಗಿ ಮಂಜೂರಾದ ಇತರ ಬಿಲ್ಲುಗಳ ಗತಿಯೇನು? ಸೂಪ್ರೀಮ್ ಕೋರ್ಟಿನವರು ಪ್ರೆಸಿಡೆಂಟ ರೂಸವೆಲ್ಟರ ನವೀನ ಯೋಜನೆಯನ್ನೆ ನಾಶಮಾಡಿದರೆ ರೂಸವೆಲ್ಟರ ಗತಿಯೇನಾಗುವುದು?

ಪ್ರೆಸಿಡೆಂಟ್ ರೂಸವೆಲ್ಟರು.

(ಸದ್ಯದಲ್ಲೇ ಪ್ರೆಸಿಡೆಂಟರ ಚುನಾವಣೆಯು ನಡೆಯಲಿದೆ) ರೂಸವೆಲ್ಟರ ಪಕ್ಷದವರು ಭೀತಿಯುಳ್ಳವರಾದರು ರೂಸವೆಲ್ಟರೂ ಮುಂದಕ್ಕೆ ಏನು ಮಾಡುವರೆಂದು ಇವರಿಗೆ ತಿಳಿಯಲು ಅಸಾಧ್ಯವಾಯಿತು ಆದರೆ ಸೂಪ್ರೀಮ್ ಕೋರ್ಟಿನ ನಿರ್ಧಾರದ ಮುಂದೆ ಏನಾದರೂ ಮಾಡಲೇ ಬೇಕು ಏಕೆಂದರೆ ಪ್ರೆಸಿಡೆಂಟ ರೂಸವೆಲ್ಟರ 'ನವಯೋಜನೆ'ಯನ್ನು ಬದುಕಿಸಬೇಕು ಇವರ ಬೆನ್ನ ಹಿಂದೆ ಈ ನವಯೋಜನೆಯಿಂದ ತೃಪ್ತಿಹೊಂದಿದ, ಅಸಂಖ್ಯಾತ ರೈತರೂ, ಮಜೂರರೂ, ಇತರ ಸಾಮಾನ್ಯ ಜನರೂ ಇರುವರು

• • •

ಸೂಪ್ರೀಮ್ ಕೋರ್ಟಿನವರು ರೈತರ ನಿವಾರಣೆಯಾಗಲು ಬಿಡಲಾರರು ಇದರ ಇತ್ಯರ್ಥದಿಂದ ಸಂಯುಕ್ತ ಅಮೇರಿಕದ ಫೆಡರಲ್ ಸರಕಾರದ ಅಧಿಕಾರದಲ್ಲಿರುವ ನಾಲ್ವತ್ತೆಂಟು ರಾಜ್ಯಗಳು ರೈತರ ಉದ್ಧರಣೆಯಾಗುವಂಥಾ ಈ ಕ್ರಮಗಳನ್ನು ನಡೆಯಿಸಲು ಸಾಧ್ಯವಾಗದು ಆದುದರಿಂದ ಅವರ ನಿವಾರಣೆಗೆ ಬೇರೆ ಹಾದಿ ಯಾವುದು?

(1) ರೈತರಿಗೆ ಇತರರ ಮೇಲೆ ಹೊಂದಿಕೊಂಡಿರದೆ ಸರಕಾರವೆ ಸ್ವತಂತ್ರವಾಗಿ ಸಹಾಯ ದ್ರವ್ಯವನ್ನು ಒದಗಿಸಬೇಕಾಗುವುದು.

(2) ರೈತರ ದುಸ್ಥಿತಿಯನ್ನು ನಿವಾರಣೆಗೊಳಿಸುವ ಶಾಸನ ಸಮ್ಮತವಾದ ಇತರ ಯೋಜನೆಗಳನ್ನು ಸೃಷ್ಟಿಸಬೇಕು.

ಇತರ ಆಕ್ಟುಗಳ ಗತಿ ಏನಾಗುವುದು?

ರೂಸವೆಲ್ಟರ 'ನವೀನ ಯೋಜನೆ'ಯ ಕೆಲವು ಅಂಗಗಳು ಮಾತ್ರ ಈಗ ಇವೆ ನೇಶನಲ್ ರಿಕವರಿ ಆಕ್ಟು "N R A, ಎಗ್ರಿಕಲ್ಚರ್ ಎಡ್ಮಿನಿಸ್ಟ್ರೇಶನ್ ಆಕ್ಟು' A A A" ಗಳು ಬಿದ್ದುಹೋಗಿವೆ ಹೀಗೆಯೆ ಕಲ್ಲಿದ್ದಲು, ಹತ್ತಿ, ಹೊಗೆಸೊಪ್ಪು ಮತ್ತು ಬಟಾಟೆ ಇವುಗಳ ಧಾರಣೆಯನ್ನು ಸರಿಪಡಿಸುವ ಇತರ ಎಲ್ಲಾ ಆಕ್ಟುಗಳು ಬಿದ್ದುಹೋಗುವ ಸಂಭವಗಳಿವೆ ಬೇರೆ ಆಕ್ಟುಗಳ ಮೇಲೂ ಗ್ರಹಣ ಬರುವಂತಿದೆ ಸೂಪ್ರೀಮ್ ಕೋರ್ಟಿನವರು ಇತ್ಯರ್ಥ ಮಾಡಿದರೆ ದೇಶಕ್ಕೆ ಬೇಕಾಗುವ ಮಾರ್ಗೋಪಾಯಗಳನ್ನು ರಚಿಸುವ ಕಾರ್ಯಗಳಿಗೂ ಅಡ್ಡಿ ಬರಬಹುದು ಸರಕಾರದ ಇತರ ಕಾರ್ಯಗಳನ್ನು ಶಾಸನ ಸಮ್ಮತವಲ್ಲವೆಂದೂ, ಸೂಪ್ರೀಮ್ ಕೋರ್ಟಿನವರು ಇದೇ ರೀತಿಯಲ್ಲಿ ಇತ್ಯರ್ಥಮಾಡಿದರೆ ಆಗ ಗತಿ ಏನು?

ರೂಸವೆಲ್ಟರು ಸಿದ್ಧಪಡಿಸಿದ ಹೊಸ ಬಜೆಟಿಗೆ ಇದರಿಂದ ಬಹಳ ಹಾನಿಯು ಉಂಟಾಗಿರುತ್ತದೆ ಸರಕಾರದ ಉತ್ಪತ್ತಿಯು ಬಿದ್ದುಹೋಗುವುದು ಸರಕಾರದ ಖರ್ಚು ವಿಶೇಷವಾಗಿ ಹೆಚ್ಚುವುದು ಆದುದರಿಂದ ಹೊಸ ತೆರಿಗೆಗಳು ವಿಧಿಸಲ್ಪಡುವುವೋ? ಪ್ರೆಸಿಡೆಂಟರ ಚುನಾವಣೆಯ ಸಮಯವು ಹತ್ತಿರವಿರುವುದರಿಂದ ಹೀಗೆ ಮಾಡಲು ಸಾಧ್ಯವೆ ಜನರು ತೆರಿಗೆಗಳನ್ನು ಹೆಚ್ಚಿಸುವ ಪ್ರೆಸಿಡೆಂಟರಿಗೆ ಓಟು ಕೊಡುವರೆ ಒಟ್ಟಾರೆ ರೂಸವೆಲ್ಟರ ಹಾದಿಯಲ್ಲಿ ಇದೊಂದು ದೊಡ್ಡ ಆತಂಕ

• • •

ರೂಸವೆಲ್ಟರ ಹಿತವಾದಿಗಳ ಸಂಪ ಕ್ಷ ಅಮೇರಿಕದ ರಾಜಶಾಸನ ಬದಲಾಗಬೇಕಾಗುವಂತೆ ಪ್ರೆಸಿಡೆಂಟ ರೂಸವೆಲ್ಟರು ಎಲೆಕ್ಷನ್ ಚಳವಳಿಯನ್ನು ಪ್ರಾರಂಭ ಮಾಡಬೇಕೆಂಬ ಸೂಚನೆ ಕೊಡುತ್ತಿದ್ದಾರೆ ಸೂಪ್ರೀಮ್ ಕೋರ್ಟಿಗೆ ಈ ಹಕ್ಕುಗಳು ಇರದಂತೆ ಮಾಡಬೇಕೆನ್ನುವುದು ಇವರು ಸರಕಾರವು ಸ್ವತಂತ್ರವಾಗಬೇಕು ಆದರೆ, ಶಾಸನದ ಬದಲಾವಣೆ ಮಾಡಲು ಬಹಳ ಸಮಯ ತಗಲುವುದು ದೇಶದಲ್ಲಿ ಇದರಿಂದ ಬಹಳ ಕ್ಷೋಭೆಯುಂಟಾಗುವುದು

ಆದರೆ, ಪ್ರೆಸಿಡೆಂಟ ರೂಸವೆಲ್ಟರು

ಭೀತಿಯುಳ್ಳವರಾಗುವವರಲ್ಲ ಅಪಾಯವೆಂದರೆ ಇವರಿಗೆ ಬಹಳ ಪ್ರೀತಿಯುಂಟು ಜಗಳವು ಇವರನ್ನು ಭೀತಿಯುಗೊಳಿಸದು ಜಗಳಪಾಡುವುದರಲ್ಲಿ ಇವರಿಗೆ ತುಂಬಾ ಅಭಿರುಚಿ ಇದೆ

ಸಮಸ್ತ ರೈತರ ಸಂಪೂರ್ಣ ಬೆಂಬಲವು ಇವರಿಗಿದೆ ಅಂತೆಯೇ ಇತರ ಎಲ್ಲಾ ಸಾಮಾನ್ಯ ಜನರು ಇವರ ಕಡೆಗೆ ಇದ್ದವರು ಸರಕಾರದ ಸುಧಾರಣೆಯನ್ನು ಇವರು ಈ ಭಾರಿಯ ಚುನಾವಣೆ ಮುಖ್ಯ ಧ್ಯೇಯವನ್ನಾಗಿ ಮಾಡಬೇಕಾಗುವುದು

ಆದರಿಂದ ಸಂಯುಕ್ತ ಅಮೇರಿಕದಲ್ಲಿ ಸದ್ಯದಲ್ಲಿ ರಾಜಕೀಯ ಗೊಂದಲವು ಪ್ರಾರಂಭವಾಗುವುದು ರೂಸವೆಲ್ಟರು ಯಾವತ್ತೂ ಕಷ್ಟಗಳಿಂದಾಗಿ ದಣಿಯುವವರಲ್ಲ ಇವರ 'N R A A A A ಇತ್ಯಾದಿ ಕ್ರಮಗಳನ್ನು ಮುರಿದು ಹಾಕಬಹುದು ಆದರೆ ಅವರ ಕಾರ್ಯದಕ್ಷತೆಯನ್ನು ಮುರಿಯಲು ಯಾರಿಂದಲೂ ಸಾಧ್ಯವಾಗದು ದೇಶಸೇವೆಯ ಉತ್ಸಾಹವು ಇವರಲ್ಲಿ ಎಂದಿಗೂ ಕಡಿಮೆಯಾಗದು ಈಗಿನ ಆತಂಕಗಳನ್ನು ನಾಶಗೊಳಿಸಲು, ಚುನಾವಣೆಯಲ್ಲಿ ಜಯಹೊಂದಲು, ಒಂದು ವಿಶೇಷ ತರದ ಸಮರವನ್ನು ಒಡ್ಡದಿರರು

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತ್ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. ೩ ಮತ್ತು 1—10—0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಧಾರ್ಮಿಕ ಆಲಾಪೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ಸಾಧ್ಯ ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ, ಈ ಧರ್ಮಸಂಸ್ಥೆಯ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ,

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾಹುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಶ್ವದೇವ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ
ಬೆಲೆ ಆಣೆ 8.
30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)
ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು
ಒಂದು ತಿಂಗಳಲ್ಲಿ ಅಮೋಘವಾದ ಗುಣ, ಇದು ಜಾಡ್ಯವನ್ನು ಗುಣಪಡಿಸವುದಲ್ಲದೆ
ವ್ಯಾಧಿಯು ಬಾರದಂತೆ ತಡೆಮಾಡುವುದು
ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು — ಆಯುರ್ವೇದಾಶ್ರಮ, ಪೋ ಬಾಕ್ಸ್ 287, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Ested 1920] THE [1920ರಲ್ಲು ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು
ಠೇವಣಾತಿಗಳ ದರ

ಖಿರಖು ಠೇವಣಾತಿಗಳು:—8 ತಿಂಗಳಿಗೆ ಶೇಕಡಾ 5ರಂತೆ 9 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ
"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳ ಶೇಕಡಾ 4ರಂತೆ
"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ
ಯೋಗ್ಯ ದಸ್ತಾವೇಜುಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು
ಬೇಂಕಿನ ಇತರ ಎಲ್ಲಾ ವ್ಯವಹಾರಗಳು ನಡೆಸಲ್ಪಡುವವು
ಹೆಚ್ಚಿನ ಮಾಹಿತಿ ಗೆ ಬೇಂಕಿಗೆ ಬರಕೊಳ್ಳಬಹುದು

Puttur
Dated 10—4—1935

G N Laksman Pai,
Secretary.

ಬೇಕಾಗಿದ್ದಾರೆ!

ದಿ ನ್ಯೂ ಏಸ್ಯಾಟಿಕ್ ಲಾಯಿಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಕಂಪೆನಿಯ ಕಾರ್ಯಪ್ರಚಾರಕ್ಕಾಗಿ,—ದಕ್ಷಿಣ ಕನ್ನಡ, ಮಲಬಾರು, ತಿರುವಾಂಕೂರು ಪ್ರಾಂತ್ಯಗಳಲ್ಲಿ, ಉತ್ತಮವಾಗಿ ಪ್ರಚಾರ ಮಾಡಿ ವಿಮೆದಾರರನ್ನು ಕೂಡಿಸಿಕೊಡಬಲ್ಲ ಅರ್ಹರೂ ಯೋಗ್ಯರೂ ಆಗಿರುವ ಸ್ತ್ರೀ ಪುರುಷರು ಬೇಕಾಗಿದ್ದಾರೆ.

ಮೆಸರ್ಸ್ ಬಿರ್ಲಾ ಬ್ರದರ್ಸ್ ಲಿಮಿಟೆಡ್, ಇವರ ಆಡಳಿತದಿಂದಾಗಿ ಅಭ್ಯುದಯವನ್ನು ಹೊಂದಿ, ಈ ಕಂಪೆನಿಯು ತನ್ನ ಮೊದಲನೆ ಎರಡು ವರ್ಷಗಳೊಳಗಾಗಿಯೆ

೫೦ ಲಕ್ಷ ರೂಪಾಯಿ ಮೊಬಲಗಿನ ವಿಮೆ ಗಳಿಸಿಕೊಂಡಿದೆ.

ಇನ್ನೂ ಇನ್ನೂ ವಿಮಾದಾರರನ್ನು ಜಮೆಮಾಡಲು ನಿಜವಾಗಿಯೂ ಪಕ್ವರಾಗಿರುವ ಉದ್ಯೋಗಿಗಳು ಬೇಕಾಗಿರುವವರು ಇದಕ್ಕಾಗಿ ನಮ್ಮ ಬ್ರೆಂಚ್ ಮೆನೇಜರರು ಈ ಪ್ರಾಂತ್ಯಗಳಲ್ಲಿ ಸಂಚರಿಸುವರು
ಎಲ್ಲ ಅರ್ಜಿಗಳನ್ನು ಇಂಗ್ಲಿಷಿನಲ್ಲಿ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳುವುದು

ಬ್ರೆಂಚ್ ಮೆನೆಜರರು,—
ದಿ ನ್ಯೂ ಏಸ್ಯಾಟಿಕ್ ಲಾಯಿಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
51, ಎಸ್ಪ್ಲೆನೆಡ್ ರೋಡ್, ಫೋರ್ಟ್, ಮುಂಬಾಯಿ

ಮೇಹಧ್ವಂಸಿನಿ. (ರಿಜಿಸ್ಟರ್ಡ್)

ಪ್ರಮೇಹವು ಯೌವನಮದದ ವ್ಯಾಪ್ತಿಯು ಇದು ಸ್ತ್ರೀಸಂಗಮದಿಂದ ಮನುಷ್ಯಶರೀರದೊಳಗೆ ವ್ಯಾಪಿಸಿ ಅನೇಕ ಕಾಹಿಲೆಗಳನ್ನುಂಟುಮಾಡುವುದು

ಅನೇಕರು ಕಾಹಿಲೆಯ ದೆಸೆಯಿಂದ ಕೊರಗಿಕೊಂಡು ತಿರುಗುತ್ತಿದ್ದಾರೆ ಉಂಟುಕಷ್ಟ ತಿರುಗುತ್ತಿರುವವರೆಷ್ಟೋ ಮಂದಿ ಹೃದ್ರೋಗಗಳನ್ನು ಸಂಪಾದಿಸಿಕೊಂಡಿರುವವರು ಅನೇಕ ಮಂದಿ ಇಂಥ ರೋಗಪೀಡಿತರ ಮೂಲಕ ಜನಿಸಿದ ಮಕ್ಕಳ ಪಾಡು ಹೇಳಬೇಕಾದ್ದೇ ಇಲ್ಲ! ಆದ್ದರಿಂದ ಈ ಕಾಯಿಲೆಯನ್ನು ಖಂಡಿಸುವುದಕ್ಕಾಗಿ ನಮ್ಮ 'ಮೇಹಧ್ವಂಸಿನಿ'ಯನ್ನು ಸೇವಿಸಿ ದೃಢಕಾಯರಾಗಿ ಇದರ ಸೇವನೆಯಿಂದ ಹಸರು, ಕೆಂಪು, ಬಿಳುಪು, ಮೂತ್ರಕೃಚ್ಛ್ರ, ಮೂತ್ರಘಾತ, ಮೂತ್ರದ ಉರಿ, ಮೇಹಗಡ್ಡೆ, ಮೇಹವಾಯು, ಮೇಹ ಸಂಬಂಧದ ಕಣ್ಣಿನ ಮಂಜು, ಮೇಹಜ್ವರ, ಕೀಲುಕೀಲುಗಳಲ್ಲಿ ನೋವು, ಮೂತ್ರ ವ್ಯಾಧಿ ವಗೈರೆ ನಾಶವಾಗಿ ಶರೀರಕ್ಕೆ ಕಾಂತಿಬರುವುದು.

ದೀರ್ಘಕಾಲದ ವ್ಯಾಧಿಗಳೂ ಕೂಡಾ ನಶಿಸಿ ಪಲಾಯನವಾಗುವುವು. ಕಾಹಿಲೆ ದೆಸೆಯಿಂದ ಉಂಟಾದ ಸ್ತ್ರೀಯರ ಪ್ರದರ ರೋಗಗಳು, ಬಿಳಿ ಸೆರಗು, ವಗೈರೆ ನಾಶವಾಗುವುವು ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವುಂಟು. ಸೇವಿಸುವುದಕ್ಕೆ ಹಿತಕರ

ಕ್ರಯ:—ದೊಡ್ಡ ಬಾಟ್ಲಿಗೆ ರೂ. 4 ಮೀಡಿಯಂ 2—4—0 ಚಿಕ್ಕದು 1—2—0.

ತಯಾರಿಸುವವರು — ಲಸ್ಟರ್ ಡಿಪೋ, ಚಿಕ್ಕಮಗಳೂರು
ಬ್ರೇಂಚ್ — ಚಿಕ್ಕಪೇಟೆ, ಬೆಂಗಳೂರು.
ಮುಖ್ಯ ಏಜಂಟರು.— ಪೊಪ್ಯುಲರ್ ಸ್ಟೋರ್ಸ್ಸು ಮಂಗಳೂರು.

'ಸ್ವದೇಶಾಭಿಮಾನಿ'

ಉತ್ತಮವರ್ಗದ ವಾರಪತ್ರಿಕೆ.
ಇಂದೇ ಪಡಕೊಳ್ಳಿರಿ—ಓದಿರಿ!

ನಮ್ಮ ಸಾಪ್ತಾಹಿಕ ಕಥೆ

ಮಿಥ್ಯಾಜೀವನದ ಸತ್ಯಕಥೆಗಳು

(All Rights Reserved)

ಲೇಖಕ.—ಶ್ರೀ 'ರಸಿಕರಂಜನ'

"Truth is stranger than Fiction"

೫. 'ದೇವತಾದುರ್ಲಭ' ದಾಂಪತ್ಯ

ಲಗ್ನಮಂಟಪದಲ್ಲಿ ಹಸೆಯ ಮೇಲೆ ಕುಳಿತ ಭಾಗೀರಥಿ, ಪದ್ಮನಾಭರನ್ನು ಕಂಡ 'ಇಷ್ಟಮಿತ್ರರೊಡಗೂಡಿ ಬಂದು ತಾಂಬೂಲಾದಿಗಳನ್ನು ಸ್ವೀಕರಿಸಿದ ರಾಮಚಂದ್ರರಾಯರ 'ಪ್ರಿಯ ಮಾನಾರ್ಹರೆ'ಲ್ಲರೂ, "ನಿಜವಾಗಿಯೂ ಇದು 'ದೇವತಾ ದುರ್ಲಭ' ದಾಂಪತ್ಯವೇ ಸರಿ!" ಎಂದು 'ವಧೂವರರನ್ನು ಆಶೀರ್ವದಿಸಿ,' ರಾಯರನ್ನು 'ಹರ್ಷಗೊಳಿಸಿ'ದರು

'ಅಷ್ಟ-ಅಷ್ಟ ಅಷ್ಟ' ಎಂದು ಮೂರು ಸಲ ಹೇಳಿಯೇ 'ವರ್ಷೇ ಭವೇತ್ಕನ್ಯಾ' ಎಂಬುದನ್ನು ಕೂಡಿಸಿ ಮಂತ್ರವನ್ನು ಉಚ್ಚರಿಸಿದರೆ ಮಾತ್ರ ಅದು ಸಮಯೋಚಿತವಾಗುವಷ್ಟು ಪ್ರಾಯಹೊಂದಿದ ಭಾಗೀರಥಿಯ ಅಂಗೋಪಾಂಗ, ರೂಪ ರೇಖೆ, ಹಾವ ಭಾವ, ಹಾಸ ವಿಲಾಸ ಮುಂತಾದ ಕಣ್ಣು ಕುಕ್ಕುವ ಸಾಕ್ಷ್ಯಗಳೂ, ವಧುವಿನ ಪ್ರಾಯಕ್ಕೆ ಯೋಗ್ಯವಾದ ವಯಸ್ಸನ್ನು ಪಡೆದ ಪದ್ಮನಾಭನ ಶರೀರ ಸಂಪತ್ತಿ, ಶ್ರೀಮದ್ಗಾಂಭೀರ್ಯ, ರೀತಿನೀತಿ ಮುಂತಾದ ಒಡೆದುತೋರುವ ಲಕ್ಷಣಗಳೂ ತ್ವರಿದ ಅತಿಥಿ ಅಭ್ಯಾಗತರ ಬಾಯಿಂದ ಅದು 'ದೇವತಾದುರ್ಲಭ' ದಾಂಪತ್ಯವೆಂದೆನ್ನಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ

ಹುಡುಗಿಯು-ತಪ್ಪಾಯಿತು, ಕ್ಷಮಿಸಿ-ವಧುವು ಸಾಲದುದಕ್ಕೆ ಬಿ ಎ ಉತ್ತೀರ್ಣಳಾಗಿದ್ದಳು ವರನೂ ಎಮ್ ಎಸ್ ಸಿ ಉಪಾಧಿಯನ್ನು ಪಡೆದಿದ್ದನು ಶ್ರೀಮಂತರಾಗಿದ್ದೂ ಮಗಳನ್ನು ಮದುವೆ ಮಾಡದೆ ಅಷ್ಟು ವರ್ಷ ಬೆಳೆಯಿಸಿ, ವಿದ್ಯಾಭ್ಯಾಸ ಕೊಟ್ಟಿದ್ದರೂ ಈ ದಿನ ಸಾರ್ಥಕವಾಯಿತೆಂಬ ಅಭಿನಂದನವಾಕ್ಯಗಳು ಎಲ್ಲರ ಬಾಯಿಂದಲೂ ತಾವಾಗಿಯೇ ಬಂದು, ರಾಮಚಂದ್ರರಾಯರನ್ನು ಸ್ವರ್ಗಕ್ಕೆ ಮೂರೇ ಗೇಣು ಕಡಿಮೆಯಾಗುವಷ್ಟು ಮೇಲಕ್ಕೆ ಎತ್ತುವಂತಾಯಿತು

'ಅಷ್ಟು' ಪ್ರಾಯದವಳಿಗೆ 'ಅಷ್ಟು' ಕಡಿಮೆ—ಎಂದರೆ 'ಬರೇ' ಹತ್ತು ಸಾವಿರ ರೂಪಾಯಿ—ವರದಕ್ಷಿಣೆಗೆ 'ಅಷ್ಟು' ಯೋಗ್ಯ ವರನು ದೊರಕಿದುದು ಅವರ ಪೂರ್ವಪುಣ್ಯ ಫಲದಿಂದಲೇ ಎಂದೆನ್ನುವ ಅದೃಷ್ಟವಾದಿಗಳೂ ಅಂದಿನ ಪ್ರೇಕ್ಷಕರೊಳಗೆ ಎಷ್ಟೋ ಮಂದಿ ಇದ್ದರು

ಅಂತೂ ವಧೂವರರ ಪಕ್ಷದವರ ಪರಿಶ್ರಮ, ಗೋವೆಯ ಬೇಂಡ್‌ವಾದ್ಯ ಮೇಳದ ಪರಾಕ್ರಮ, ತಿರುಪತಿಯ ಬ್ರಾಹ್ಮಣವರ್ಯರ ಮಂತ್ರಘೋಷದ ಸಂಭ್ರಮ ಮುಂತಾದುವುಗಳ ಫಲವಾಗಿ ಆ ದಿನ ಪದ್ಮನಾಭನಿಗೆ ಭಾಗೀರಥಿಯೂ, ರಾಮಚಂದ್ರರಾಯರಿಗೆ ಕೀರ್ತಿಯೂ, ಪ್ರೇಕ್ಷಕರಿಗೆ ಆನಂದೋನ್ಮಾದಗಳ ಸರ್ತಿಯೂ ದೊರಕಿ, ಮದುವೆಯು ವಿಜೃಂಭಣೆಯಿಂದ ನೆರವೇರಿತು

೨

ಪದ್ಮನಾಭನು ಎರಡು ತಿಂಗಳವರೆಗೆ ಮಾವನ ಮನೆಯ ಉಪಚಾರವನ್ನು ಸ್ವಲ್ಪವೂ ನ್ಯೂನ ಬಾರದಂತೆ ಸ್ವೀಕರಿಸಿದನು ಆ ಎರಡೂ ತಿಂಗಳಲ್ಲಿ ನೂತನ ವಧೂವರರು, ಪದ್ಮನಾಭ ಯಾರು, ಭಾಗೀರಥಿ ಯಾರು ಎಂದು ಬೇರ್ಪಡಿಸಿ ನೋಡಲಾಗದಂತಹ ರೀತಿಯಲ್ಲಿ, ಸದಾ ಸರ್ವ ಕಾಲವೂ ಕೂಡಿಕೊಂಡೇ ಎಲ್ಲರದೃಷ್ಟಿಗೂ ಕಂಡುಬರುತ್ತಿದ್ದರು. ಒಳಗೆ ಮನೆಯಲ್ಲಾಗಲಿ, ಹೊರಗೆ ತೋಟದಲ್ಲಾಗಲಿ, ಅದಕ್ಕೂ ಹೊರಗೆ ಪೇಟೆಯಲ್ಲಾಗಲಿ, ನಾಟಕ ಸಭೆಗಳಲ್ಲಾಗಲಿ ಕೂಡ ಅವರ ಈ ತರದ ನಡತೆಗೆ ಸ್ವಲ್ಪವೂ ಕುಂದು ಬರುತ್ತಿರಲಿಲ್ಲ. ಹೆಚ್ಚೇಕೆ, ಒಬ್ಬರ ಹೆಗಲ ಮೇಲೊಬ್ಬರು ಕೈಹಾಕಿಕೊಂಡೇ ಎಲ್ಲೆಲ್ಲಿಯೂ ಸುತ್ತಾಡುತ್ತ, ಎಲ್ಲೆಲ್ಲಿಯೂ ಕೂತುಕೊಳ್ಳುತ್ತ ಇದ್ದ ಅವರನ್ನು ಯಾರೊಬ್ಬರೂ ಪ್ರತ್ಯೇಕ ಹೆಸರುಗಳಿಂದ ಕರೆಯಲಾರದೆ 'ಗಂಡಭೇರುಂಡ'ವೆಂದೇ ಸಂಬೋಧಿಸುವಂತಾಯಿತು

ಹಾಗೆಯೇ ಇದ್ದಕ್ಕಿದ್ದಂತೆ ಒಂದು ದಿನ, ಎಲ್ಲರೂ ನೋಡುತ್ತಿದ್ದಂತೆಯೇ, ಈ 'ಗಂಡಭೇರುಂಡ'ದೊಳಗಿನ 'ಗಂಡ' ಮತ್ತು 'ಭೇರುಂಡ' ಬೇರೆಬೇರಾಗಲು, ಊರಲ್ಲಿ ಎಲ್ಲರೂ ಅತ್ಯಂತ ಆಶ್ಚರ್ಯ-ವಿಸ್ಮಯಗಳಿಗೆ ಈಡಾದರು

ಆದರೆ ಕೈಯೊಳಗಿನ ಕಾಸೆಲ್ಲವನ್ನೂ ಕೊಟ್ಟೂ, ಮೈಮೇಲಿನ ಆಭರಣಗಳೆಲ್ಲವನ್ನೂ ಈಡಾಗಿಟ್ಟೂ ಜೋಯಿಸರೆಲ್ಲರನ್ನೂ ಕೇಳಿ ನೋಡಿದರೂ ಇದರ ಕಾರಣವು, ಎಂದರೆ ನಿಜವಾದ ಕಾರಣವು, ಯಾರೊಬ್ಬ ಕುತೂಹಲಿಗೂ ತಿಳಿಯದಾಯಿತು ನಿಜವಲ್ಲವೆಂದು ಎಲ್ಲರಿಂದ ಊಹಿಸಲ್ಪಟ್ಟ ಕಾರಣವು ಮಾತ್ರ, ಪದ್ಮನಾಭನಿಗೆ ಮುಂಬಾಯಿಯಲ್ಲಿ ಒಂದು ದೊಡ್ಡ ನೌಕರಿಯು ದೊರಕಿದ್ದುದರಿಂದ ಅವನು ಅದನ್ನು ವಹಿಸುವ ಸಲುವಾಗಿ ಅಲ್ಲಿಗೆ ಹೋಗಿದ್ದನೆಂಬುದಾಗಿ ಇತ್ತು

ಅಂತೂ ಪದ್ಮನಾಭನು ಮುಂಬಾಯಿಗೆ ಹೋಗಿದ್ದನೆಂಬುದೂ, ನಾಲ್ಕು ತಿಂಗಳಿಂದ ಅಲ್ಲೇ ಇದ್ದನೆಂಬುದೂ ಪೂರಾ ನಿಜವಾಗಿತ್ತು ನೌಕರಿಯಲ್ಲಿರುವವನಾದರೆ, ಭಾಗೀರಥಿಯನ್ನೂ ಕರೆಯಿಸಿಕೊಂಡು ಮನೆಮಾಡಿ ಸಂಸಾರ ಹೂಡಿಕೊಂಡಿರಲಿಲ್ಲವೇಕೆಂಬುದೇ ಎಲ್ಲರ ಬಾಯೊಳಗಿನ ಪ್ರಶ್ನೆಯಾಗಿತ್ತು ಅದಕ್ಕೆ ಮುಂದೆ ಬಂದ ಸಮಾಧಾನಗಳು ಯಾವುವೂ ಅವರಿಗೆ ತೃಪ್ತಿಕರವಾಗಿರಲಿಲ್ಲ ಆದುದರಿಂದಲೇ ಅವರೆಲ್ಲರಿಗೆ ಈ ಸಂದೇಹ ರಾಮಚಂದ್ರರಾಯರಿಗೂ ತನ್ನ ಅಳಿಯನ ವಿಷಯ ಗೊತ್ತಿದ್ದುದು ಎಲ್ಲರಿಗೆ ತಿಳಿದಿದ್ದಷ್ಟೆ ಜನರಿಗೆ ಸಂದೇಹವಿದ್ದರೆ ಏನುಮಾಡಲಾಗುವುದು? ಅವರ ಬಾಯಿಗೆ, ಮನಸ್ಸಿಗೆ, ಬೀಗ ಹಾಕುವುದು ಯಾರಿಗೆ ಸಾಧ್ಯ? ಅದರಿಂದ ಯಾರಿಗೆ ನಷ್ಟ? —ಎಂಬುದೇ ರಾಮಚಂದ್ರರಾಯರ ತರ್ಕ ಮತ್ತು ಸಮಾಧಾನ

೩

ಊರವರೆಲ್ಲರೂ ಪದ್ಮನಾಭನ ವಿಷಯ ಇನ್ನೂ ಪೂರ್ತಿಯಾಗಿ ಮರೆಯಲಾರದೇ ಇರುತ್ತಿದ್ದಾಗಲೇ, ತಿರುಗಿ ಇದ್ದಕ್ಕಿದ್ದಂತೆಯೇ ಅವರ ಊಹನಾಶಕ್ತಿಯನ್ನು ಇನ್ನೊಂದು ಸಮಸ್ಯೆಯು ಬಂದು ಆಕ್ರಮಿಸಿತು ಪದ್ಮನಾಭನು ಮುಂಬಾಯಿಗೆ ಹೋದ ನಾಲ್ಕು ತಿಂಗಳಲ್ಲೇ ರಾಮಚಂದ್ರರಾಯರೂ, ಭಾಗೀರಥಿಯನ್ನು ಕರೆದುಕೊಂಡು, ಮದ್ರಾಸಿಗೆ ಹೋದರು ಮೂರು ತಿಂಗಳಿಂದಲೂ ಭಾಗೀರಥಿಯು ತನ್ನ ಕೋಣೆಯನ್ನು ಬಿಟ್ಟು ಹೊರಗೆ ಬರಲಾರದಷ್ಟು ಅಸ್ವಸ್ಥಳಾಗಿದ್ದಳೆಂದೂ, ಆದಕ್ಕಾಗಿಯೇ ರಾಯರು ಅವಳನ್ನು ಚಿಕಿತ್ಸೆಗಾಗಿ ಮದ್ರಾಸಿನ ಪ್ರಸಿದ್ಧ ವೈದ್ಯರ ಬಳಿಗೆ ಕರೆದೊಯ್ದಿದ್ದರೆಂದೂ ಮಾತ್ರವೇ ಹೊರಗಿನವರೆಲ್ಲರಿಗೂ ಕೇಳಿಬಂದ ಸಮಾಚಾರವಾಗಿತ್ತು ಆದರೆ ಅವಳ ಕಾಯಿಲೆಯು ಎಂತಹುದಾಗಿತ್ತೆಂಬುದು ಒಬ್ಬರಿಗೂ ತಿಳಿದುಬಾರದುದರಿಂದ ಅವರ ಕುತೂಹಲವು ಮೇರೆವರಿಯದಂತಹುದಾಯಿತು ಮನೆಯೊಳಗಿನವರಿಗೇ ಇದರ ಸುಳಿವು ಹತ್ತದಿದ್ದರಲು ಹೊರಗಿನವರ ಪಾಡೇನು?

ಆದರೆ ಜನರ ಊಹನಾಶಕ್ತಿಗೆ ಯಾರ ಅಂಕೆಯಿದೆ? ಹಾಗಾಗಿ ಒಬ್ಬೊಬ್ಬರು ಒಂದೊಂದು ವಿಧವಾಗಿ ತಮ್ಮ ಊಹನಾಶಕ್ತಿಗೆ ಮಿರುಗು ಕೊಟ್ಟರು ಕೆಲವರಂತೂ ರಾಯರ ಮನೆಯು ಮಾಟದ ಬೀಡೆಂದೂ, ಅವರ ಮನೆತನವು ಮಾಟದ ಕಾಟದಿಂದ ಪಕೋಟಿ ತಪ್ಪಿರುವುದೆಂದೂ ಎಂದುಕೊಳ್ಳತೊಡಗಿದರು ಇದನ್ನು ಕಂಡೇ ಪದ್ಮನಾಭನು ಊರುಬಿಟ್ಟು ಹೋಗಿರುವನೆಂದೂ, ರಾಯರು ಮಗಳಿಗೆ ಯಾರೋ ಮಾಡಿದ ಮಾಟದ ಫಲವಾಗಿ ತಾಗಿದ ಪಿಶಾಚವನ್ನು ಬಿಡಿಸುವುದಕ್ಕಾಗಿ ಅವಳನ್ನು ಮಲೆಯಾಳದತ್ತಕಡೆ ಕರೆದೊಯ್ದಿರುವರೆಂದೂ ಹೆಚ್ಚಿನವರು ನಂಬಿದರು ನಂಬಲಿ, ಇಲ್ಲದಿದ್ದರೆ ತಮ್ಮ ಹೊಟ್ಟೆಪಾಡನ್ನು ನೋಡುವ ಗೋಜಿಗೇ ಅದ್ದಿ ಬಂದು, ಎಲ್ಲರೂ ರಾಯರ ಮನೆತನದ ಹಾಡಿನ ಯೋಚನೆಯಲ್ಲೇ ಉಪವಾಸ ಬೀಳುವಂತಾಗಿ, ಒಂದು ಅಲ್ಪ ಕಾರಣದಿಂದ, ಅನಾವಶ್ಯಕವಾಗಿ ಊರಲ್ಲಿ ಬರಗಾಲ ಬರುವಂತಾಗಬಹುದೆಂಬ ಬೆದರಿಕೆಯು ಬ್ರಹ್ಮನಿಗೆ ಬೆನ್ನುಹತ್ತದೇ?

೪

ಡಾಕ್ಟರ್ ಡನ್‌ಕನ್‌ರವರು ಮದ್ರಾಸಿನ ಮೌಂಟ್ ರೋಡಿನಲ್ಲಿ ದೊಡ್ಡ ವೈದ್ಯಾಲಯವನ್ನು ಸ್ಥಾಪಿಸಿ, ಹಲವು ವರ್ಷಗಳಿಂದ ಆರ್ತ ಚಿಕಿತ್ಸೆಯನ್ನು ಮಾಡುತ್ತಿದ್ದ, ಒಳ್ಳೇ ಹೆಸರುವಾಸಿಯಾದ ಪಾಶ್ಚಾತ್ಯ ವೈದ್ಯರು ಅವರ ಚಿಕಿತ್ಸೆಯು ಪೂರ್ಣ ಗುಣಕಾರಿಯೇ ಆಗುವುದೆಂಬುದು ಜಗದ್ವಿಖ್ಯಾತವಾಗಿರುವುದಾದರೂ, ಅವರು ರೋಗಿಗಳಿಂದ ಪಡೆಯುವ ಪ್ರತಿಫಲವನ್ನು ಸಾಮಾನ್ಯರಿಂದ ಮನೆಮಾರಿದರೂ ಕೊಡಲಾಗುವುದಿಲ್ಲ ಆದುದರಿಂದ ಅವರಲ್ಲಿಗೆ ಶ್ರೀಮಂತ ರೋಗಿಗಳು ಮಾತ್ರವೇ ಹೋಗುತ್ತಿರುವರ ಅವರ ಆಸ್ಪತ್ರೆಯ ಹೆಸರೇ 'ಶ್ರೀಮಂತ ವೈದ್ಯಾಲಯ' (Hospital of Lords) ಎಂದು ಮೌಂಟ್ ರೋಡಿನಲ್ಲಿ ತಿರುಗಾಡುವವರಿಗೆಲ್ಲಾ 'ಸಿರ್ಗತಿಕರಾದ ದರಿದ್ರರಿಗೆ ಮಾತ್ರ ರೋಗ ಬರುವುದು ದೈವ ನಿಯಮವಲ್ಲ, ಸರ್ವಾನುಕೂಲತೆಗಳಿರುವ, ಸರ್ವವಿಧದ ಸುಖವಿಲಾಸಗಳಲ್ಲಿ ಲೋಲಾಡುತ್ತಿರುವ ಶ್ರೀಮಂತರಿಗೂ ರೋಗಗಳ ಬರಬೇಕೆಂಬುದೆ ದೈವೇಚ್ಛೆ' ಎಂದು ಈ ವೈದ್ಯಾಲಯವು ಸಾರುತ್ತಿರುವ ತೆ ಕಾಣುವುದು ಈ ಸೃಷ್ಟಿನಿಯಮವನ್ನು ಪ್ರಕಟಿಸುವುದಕ್ಕ ಬಡವರು ಈ ಯೋಚನೆಯಿಂದ ಸಮಾಧಾನಪಟ್ಟುಕೊಳ್ಳುವಂತಾಗ ಪುದಕ್ಕ ಈ ಆಸ್ಪತ್ರೆಯು ಸ್ಥಾಪಿತವಾಗಿರಬೇಕೆಂದ ತೋರುವುದು

ಶ್ರೀಮಂತ ವೈದ್ಯಾಲಯವನ್ನು ಹೊರಗಿನಿಂದ ನೋಡುವ ಭಾಗ್ಯವು ಎಲ್ಲರಿಗೂ ಲಭಿಸಿ ದಾದರೂ, ಒಳಗೆ ಹೋಗಿ ನೋಡುವ ಭಾಗ್ಯವು ಮಾತ್ರ ಕೆಲವರದೇ ಅಂತಹ ಭಾಗ್ಯವಿಸ್ಯ ಪಡೆದವರಲ್ಲಿ ಈ ದಿನ ಒಬ್ಬ ಹೊರವೂರಿನವನಿದ್ದನು ಅವನು ಪ್ರಾಯದಲ್ಲಿ ಯೌವನಸ್ಥನೇ ಆಗಿದ್ದರೂ ಆತನ ಮೋರೆ, ಕೈಕಾಲುಗಳು ಮಾತ್ರ ಪ್ರಾಯ ಹೋದವರವುಗಳಂತೆ ಕಾಣುತ್ತಿದ್ದವು

ಯುವಕನು ತನ್ನ ಕಿಸೆಯಿಂದ ಒಂದು ಭೇಟಿ ಚೀಟು (Visiting Card)ನ್ನು ತೆಗೆದು ಬಾಗಿಲ ಬಳಿಯ ಜವಾನನೊಡನೆ ಕೊಟ್ಟು ಅವನನ್ನು ಡಾಕ್ಟರ್ ಡನ್‌ಕನ್‌ರವರ ಬಳಿಗೆ ಕಳುಹಿಸಿದನು

ಸ್ವಲ್ಪ ಸಮಯದಲ್ಲೇ ಜವಾನನು ಮರಳಿ ಬಂದ, ಯುವಕನನ್ನು ಒಳಗಿನ ಒಂದು ಕೋಣೆಯೊಳಕ್ಕೆ ಕರೆದುಕೊಂಡು ಹೋಗಿ ಬಿಟ್ಟನು ಅದರಲ್ಲೇ ಡನ್‌ಕನ್‌ರವರು ಯುವಕನ ದಾರಿಯನ್ನು ಕಾಯುತ್ತಾ ಕುಳಿತಿದ್ದರು

ಯುವಕನ ಅವರನ್ನು ನೋಡುತ್ತಲೇ ಇಂಗ್ಲಿಷಿನಲ್ಲಿ ಅವರನ್ನು ಅಭಿನಂದಿಸಿ, ತನ್ನ ಜೇಬಿನೊಳಗಿನಿಂದ ಒಂದು ಲಕೋಟೆಯನ್ನು ತೆಗೆದು ಅವರ ಕೈಯಲ್ಲಿ ಕೊಟ್ಟನು ಡನ್‌ಕನ್‌ರವರು ಅವನಿಗೆ ಒಂದು ಕುರ್ಚಿಯಲ್ಲಿ ಕುಳಿತುಕೊಳ್ಳಲು ಸೂಚಿಸಿ, ಲಕೋಟೆಯನ್ನು ಒಡೆದು ಒಳಗಿನ ಕಾಗದವನ್ನು ತೆಗೆದು ಓದತೊಡಗಿದರು

ಕಾಗದವನ್ನು ಓದಿ ಮುಗಿಸುತ್ತಲೇ ಅವರು ಯುವಕನನ್ನು ನೋಡಿ ಮುಗುಳುನಗುತ್ತಾ, "ಮುಂಬಾಯಿಯ ಡಾಕ್ಟರ್ ವಾಡಿಯಾರವರು ನನ್ನ ಗೆಳೆಯರು ನೀವು ಈವರೆಗೆ ಅವರ ಚಿಕಿತ್ಸೆಯಲ್ಲಿದ್ದಿರೆಂದು ತಿಳಿಯುತ್ತೇನೆ. ಅವರ ಚಿಕಿತ್ಸೆಯಿಂದ ನಿಮಗೆ ಅಷ್ಟೊಂದು ಪ್ರಯೋಜನವಾಗಲಿಲ್ಲವೆಂದು ಬರೆಯುವವರು ಈ ರೋಗಕ್ಕೆ ನನ್ನಲ್ಲಿ ವಿಶಿಷ್ಟ ಇಂಜೆಕ್ಷನ್‌ಗಳಿರುವುದನ್ನು ಅವರು ತಿಳಿದೇ ನಿಮ್ಮನ್ನು ಈಗ ನನ್ನ ಬಳಿಗೆ ಕಳುಹಿಸಿದುದು ಒಳ್ಳೆಯದಾಯಿತು ಇರಲಿ, ಒಮ್ಮೆ ನಿಮ್ಮನ್ನು ಸರಿಯಾಗಿ ಪರೀಕ್ಷಿಸಬೇಕಾಗಿರುವುದು, ಈಚೆಗೆ ಬನ್ನಿ," ಎಂದು ರೋಗಿಗಳನ್ನು ಪರೀಕ್ಷಿಸುವ ಕೋಣೆಗೆ ಅವನನ್ನು ಕರೆದೊಯ್ದರು

ಡನ್‌ಕನ್‌ರವರು ಯುವಕನ ದೇಹ ಪರೀಕ್ಷೆಯನ್ನೂ, ರಕ್ತಪರೀಕ್ಷೆಯನ್ನೂ ಕೂಲಂಕಷವಾಗಿ ಮಾಡಿನೋಡಿದರು

ಕಡೆಗೆ, ಅವನಿಗೆ ರೋಗವು ಹತ್ತು ವರ್ಷಗಳ ಮೊದಲೇ ಅಂಟಿದ್ದಿರಬೇಕೆಂದೂ, ಅದಕ್ಕೆ ಈ ಅವಸ್ಥೆಯಲ್ಲಿ ಬಹಳ ಶಕ್ತಿಯುತ ಔಷಧಗಳ ಇಂಜೆಕ್ಷನ್‌ಗಳ ಆವಶ್ಯಕತೆಯಿರುವುದೆಂದೂ, ಆತನು ಕೆಲವು ತಿಂಗಳುಗಳ ವರೆಗೆ ಅಲ್ಲೇ ಇದ್ದುಕೊಂಡು ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದೂ ತಿಳಿಸಿದರು ಯುವಕನು ಅದಕ್ಕೆ ಒಪ್ಪಲು, ಆ ದಿನದಿಂದಲೇ ಚಿಕಿತ್ಸೆಗೆ ಪ್ರಾರಂಭ ಮಾಡುವುದೆಂದಾಯಿತು ಯುವಕನು ಕೂಡಲೆ 'ಇನ್‌ಪೇಶಂಟ್'ನೆಂದು ದಾಖಲಾಗಿ, ಒಂದು ಕೋಣೆಯನ್ನೂ ಪಡೆದನು ಒಡನೆ ಚಿಕಿತ್ಸೆಗೂ ಮೊದಲಾಯಿತು

೫

ಶ್ರೀಮಂತ ವೈದ್ಯಾಲಯದೊಳಗಿನ ಯುವಕ ರೋಗಿಯ ಕೆಲವು ದಿನಗಳಿಂದ ತನ್ನ ಕೋಣೆಯಲ್ಲೇ ಇದ್ದು ಇದ್ದು ಸಾಕಾಗಿ, ಹೊರಗೆ ಜಗಲಿಯ ಮೇಲೆ ಕಳ್ಳಹೆಜ್ಜೆಯಿಂದ ಮೆಲ್ಲನೆ ಸುತ್ತಾಡುತ್ತಿದ್ದನು ಅಷ್ಟರಲ್ಲಿ ಅವನಿಗೆ ಎದುರಿಗಡೆಯ ಹೆಂಗಸರ ವಾರ್ಡ (Female Ward)ದ ಜಗಲಿಯ ಮೇಲೆ ನಿಂತಿದ್ದ ಯಾರೋ ಒಬ್ಬರು ದೃಷ್ಟಿಯಲ್ಲಿ ಬಿದ್ದು ಅವನು ಒಮ್ಮೆ ಫಕ್ಕನೆ ಹಾರಿಬಿದ್ದನು ಅಷ್ಟರಲ್ಲಿ ಅವನಿಗೆ ಯಾವುದೋ ಯೋಚನೆಯಿಂದ ಮನಸ್ಸಿನಲ್ಲಿ ಸ್ವಲ್ಪ ಧೈರ್ಯ ಬಂದಂತಾಗಿ, ಆ ಮನುಷ್ಯನ ಅಲ್ಲಿರುವುದರ ಕಾರಣವೇನಿರಬಹುದೆಂಬ ಕುತೂಹಲವೂ ಉಂಟಾಯಿತು ಅವನು ಹಾಗೆಯೇ ಅಂಗಳಕ್ಕೆ ಇಳಿದು ಆಚೆಯ ಜಗಲಿಯನ್ನು ಸೇರಿದನು

ಅಲ್ಲಿ ನಿಂತಿದ್ದ ಮನುಷ್ಯನ ಪ್ರಾಯ ಐವತ್ತು ವರ್ಷದವನಾಗಿದ್ದನು ಆತನು ಯಾವುದೋ ಯೋಚನೆಯಲ್ಲಿ ಮಗ್ನನಾಗಿದ್ದುದರಿಂದ ಇದನ್ನು ಯುವಕನು ನೋಡಲಿಲ್ಲ ಯುವಕನು ಜಗಲಿಯನ್ನು ಹತ್ತುತ್ತಿರುವಾಗಲೇ ಆತನ ದೃಷ್ಟಿಯು ಅವನ ಮೇಲೆ ಬಿದ್ದುದು ಆಗಲೂ ಆತನಿಗೆ ಅವನು ಯಾವನೋ ಅಪರಿಚಿತನಂತೆ ಕಂಡುಬಂದು ಸುಮ್ಮನಿದ್ದನು ಯುವಕನು ಬಹಳ ಹತ್ತಿರಕ್ಕೆ, ಸುಮಾರು ಐದು ಮಾರು ದೂರಕ್ಕೆ ಬರುತ್ತಲೇ ಮುದುಕನು ಅವನನ್ನು ನೋಡಿ ದೆವ್ವವನ್ನು ಕಂಡವನಂತೆ ದಂಗುಬಡಿದು, "ಹೋ" ಎಂದು ಅರಚಿ, ಹತ್ತಿರವೇ ಇದ್ದ ಒಂದು ಕೋಣೆಯೊಳಕ್ಕೆ ಓಡಿದನು ಒಳಗೆ ಹೋಗುತ್ತಲೇ ಕೋಣೆಯ ಬಾಗಿಲನ್ನು ಹಾಕತೊಡಗಿದನು

ಯುವಕನು ಆತನ ವಿಚಿತ್ರ ವರ್ತನದಿಂದ ಆಶ್ಚರ್ಯಪಟ್ಟನು ಯಾಕೋ ಅವನ ಕುತೂಹಲವೂ ಇನ್ಮಡಿಸಿ, ಸ್ವಲ್ಪ ಸಂಶಯವೂ ತಲೆದೋರಿತು ಅವನೂ ಆ ಕೋಣೆಯ ಕಡೆಗೆ ಓಡಿ, ಬಾಗಿಲನ್ನು ಬಲವಾಗಿ ದೂಡಿದನು

ಹೊರಗಿನವನ ಬಲವು ಒಳಗಿನವನ ಬಲಕ್ಕಿಂತಲೂ ಹೆಚ್ಚಾಗಿರಲು ಬಾಗಿಲು ತೆರೆದುಕೊಂಡಿತು ಯುವಕನೂ ಒಳಗೆ ಹೋದನು

"ಅಯ್ಯೋ! ಭಾಗೂ, ಪದ್ಮನಾಭ ಬಂದುಬಿಟ್ಟನಲ್ಲಾ! ಹಾಳಾದೆವು!" ಎನ್ನುತ್ತಾ ಮುದುಕನು ನೆಲದ ಮೇಲೆ ಧೊಪ್ಪನೆ ಬಿದ್ದನು

'ಅಪ್ಪಾ! ನನ್ನನ್ನು ಬಿಟ್ಟುಹೋಗುವಿಯಾ?' ಎಂದು ಅಲ್ಲೇ ಮಂಚದ ಮೇಲೆ ಮಲಗಿಕೊಂಡಿದ್ದ ಕ್ಷೀಣಕಾಯಳಾದ ಭಗೀರಥಿಯು ಎದ್ದು ಕೆಳಗೆ ಬಿದ್ದ ರಾಮಚಂದ್ರರಾಯರ ಮೇಲೆ ಬಿದ್ದಳು

(ಎಳನೇ ಘಟವನ್ನು ನೋಡುವುದು.)

ಸ್ತನೋಸ್ತೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು ಮನುಷ್ಯನು ಹೆಂಗಸೋದರಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಲಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣಪರತ.

ಇದೆಲ್ಲವೂ ಮಲೆಯಾಳಿಗಳ ರಹಸ್ಯವುಳ್ಳ ಔಷಧವಾದ ಸ್ತನೋಸ್ತೇಧಾದಿಂದ ಸಾಧ್ಯ ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ಚಿಂತೆಯಿಂದಲೂ ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ ಅವುಗಳು ಜೋಲು ಬಿದ್ದಿದ್ದರೂ ಸರಿಯಾಗಿ ಬೆಳೆಯದೆ ಇದ್ದರೂ **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹ ಬೇಗನೆ ಪಾರುಮಾಡಬಲ್ಲರು ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಪುಷ್ಟ ಪುಷ್ಟವಾಗಿಯೂ ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟಿಯನ್ನೂ ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ ರಕ್ತಪ್ರವಾಹವನ್ನು ಸಂಗೊಳಿಸಿ ಸ್ತನಗಳನ್ನು ಅನವನಾಕರ್ಷಕಗಳನ್ನಾಗಿ ಮಾಡುವುದು ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು ಇದರಿಂದ ಸಾದಕ ವಿಶಹ ಬಾಧಕವಿಲ್ಲ ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು ಅಂತಹ ಗುಣವನ್ನು ನೀವೂ ಪಡೆಯಿರಿ

ಸ್ತನೋಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ 3 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ ೪
ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟ್ ಚಾಲಾಪುರ ಮಲಬಾರು

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1 ಮುಟ್ಟಿನದೋಷ 2 ಸಂತಾನ ಪ್ರತಿಬಂಧಕ, 3 ಧಾತುಪುಷ್ಟಿ 4 ಲಿಂಗವೃದ್ಧಿ 5 ಸ್ತ್ರೀರೋಗ, 6 ಕ್ಷಯ ಸಂಹಾರಿ 7 ವಾತರೋಗ

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ

The Scientific Gold Bangles Co , Ltd
Head Office -43 Byragimatam Street,
Post B x No 203 Madras

ಮಂಗಳೂರಿನ ಪೇಟೆಧಾರಣೆ

ಸಾಮಾನುಗಳು	ಇಂದ	ವರೆಗೆ
	ರೂ. ಆ	ರೂ ಆ
ಹೊಸ ರಾಶಿ ಅಕ್ಕಿ	3 6	3— 12
ಹೊಸ ಮಟ್ಟಿ	3—10	4— 2
ಗುಡ್ಡೆ ಮುಗ್ಗಿ	3 6	3—14
ಊರ ಅದ್ದರ್ ಬೆಳ್ತಿಗೆ	4 0	4— 8
ರಂಗೂನು ಬೆ ಗೋ ಗಿಳ್ಳೆ	6 4	7— 0
ಎಲ್ಲೂರು ಬೆ ಮು ಗಿಳ್ಳೆ	4 4	4— 8
ಗೋದಿ ಗೋಣಿ ಗಿಳ್ಳೆ	8 8	1 — 4
ಕೊಗರಿ ಗೋಣಿ ಗಿಳ್ಳೆ	9	[illegible]
ಹುರುಳಿ ಗೋಣಿ ಗಿಳ್ಳೆ	5 4	12
ಕಡಲೆ ಗೋಣಿ ಗಿಳ್ಳೆ	7 4	[illegible]
ಕೊಗರಿಬೇಳೆ ಗೋಣಿ ಗಿಳ್ಳೆ	11 0	15— 8
ಉದ್ದು ಗೋಣಿ ಗಿಳ್ಳೆ	[illegible] 8	10 0
ಹೆಸರು ಗೋಣಿ ಗಿಳ್ಳೆ	9 4	9—12
ಉಂಡೆಬೆಲ್ಲ ಖಂಡಿ ಗಿಳ್ಳೆ	3[illegible]— 8	40 8
ಉಪ್ಪು ಗೋಣಿ ಗಿಳ್ಳೆ	4	4 8
ಕೊಪ್ಪರಿ ಖಂಡಿ ಗಿಳ್ಳೆ	60— 0	70— 0
ಕೊಪ್ಪರಿ ಹಿಂಡಿ ಖಂಡಿ ಗಿಳ್ಳೆ	28 0	29—
ಎಳ್ಳಿಂಡಿ ಖಂಡಿ ಗಿಳ್ಳೆ	38 — 12	36 0
ಕೊಪ್ಪರಿ ಎಣ್ಣೆ ಮುಡಿ ಗಿಳ್ಳೆ	6— 0	0— 0
ಎಳ್ಳೆಣ್ಣೆ ಮುಡಿ ಗಿಳ್ಳೆ	7— 0	7 0
ಚಿಮಿಣಿಎಣ್ಣೆ ಪೆಟ್ಟಿಗೆ ಗಿಳ್ಳೆ	6— 5	6 5
ಮೋರಿಸ ಸಕ್ಕರೆ ಮು ಗಿಳ್ಳೆ	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ಗಿಳ್ಳೆ	5 — 8	6— 0
ಕಾಳುಮೆಣಸು ಖಂ ಗಿಳ್ಳೆ	102— 8	105—
ಮೆಂತ್ಯೆ ಮುಡಿ ಗಿಳ್ಳೆ	38— 0	39— 0
ಗೇರುಬೀಜ ಮು ಗಿಳ್ಳೆ	4 6	4 — 8
ಕಬ್ಬಿಣ ಖಂಡಿ ಗಿಳ್ಳೆ	85— 0	87— 8
ಕಾಂಡ್ಲುಕೆಗಡು ಮು ಗಿಳ್ಳೆ	9— 12	9— 14
ಕಾಂಡ್ಲುಪಾತ್ರಗಳು ಮು ಗಿಳ್ಳೆ	12— 8	14— 0
ಜೀನಬೆಲ್ಲ ಸೇರು ಗಿಳ್ಳೆ	17— 8	18— 0
ಹಿತ್ತಾಳೆ ತಗಡು ಮು ಗಿಳ್ಳೆ	10— 0	10—
ಭವನು ಗಿಳ್ಳೆ	22 8	22— 8
ಹುಣಸೆ ಹುಳಿ ಖಂಡಿ ಗಿಳ್ಳೆ	20— 0	25— 8
ನೇಟಿವ್ ಕಾಫಿ ಖಂಡಿ ಗಿಳ್ಳೆ	45— 0	150— 0
ಪ್ಲಂಟೇಶನ್ ಕಾಫಿ ಖಂಡಿ ಗಿಳ್ಳೆ	185— 0	190— 8
ಬಡಿಕೇಲ ಬೀಡಿ	25— 0	26 — [illegible]

Shiromani Narayanacharya & Co ,
Silk Lace & Cloth Manufacturers
Choukhamba Benares City

WISHES HE WAS

THIS MAN
OUR CUSTOMER

ಕೃಷ್ಣರಾಯರು ಸ್ವಾಮಿ ಅನಂದರಾಯರೆ ತಾವು ನಿಮ್ಮ ಮಗಳ ಮದುವೆಗೆ ಸೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಅನಂದರಾಯರು ಸ್ವಾಮಿ ಆ ಸೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ ಕಡೆಗೆ ನಮ್ಮ ಕಾಶೀ ಶಿರೋಮಣಿ ನಾರಾಯಣ ಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು — ಅದರ ಕ್ರಯವೆಷ್ಟು?

ಅನಂದರಾಯರು — ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಪಂಡಿತ ಜರಿ, ರಂಗು ಬಿಡದಿರುವ ಸೀರೆಗಳು ಗುತ್ತದ 18 ಮೊಳ ಉದ್ದ 2½ ಮೊಳ ಅಗಲ ಸೀರೆ 1ಕ್ಕೆ 20ರಿಂದ 65ರ ವರೆಗೆ. ಪಡಲು ಬುಟ್ಟಿ ಇರುವುದು 15 ಮೊಳ ಸೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪಡಲು ಸಹ ಸೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1 8 0ರಿಂದ 4ರ ವರೆಗೆ ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಜರಿಮಡಿ 1ಕ್ಕೆ ರೂ 7ರಿಂದ 15ರ ವರೆಗೆ 8 ಮೊಳದ ಜರಿ ಮಡಿ 1ಕ್ಕೆ ರೂ 10ರಿಂದ 35ರ ವರೆಗೆ 5 ಮೊಳದ ಪಟುರಿ 1ಕ್ಕೆ ರೂ 4ರಿಂದ 16ರ ವರೆಗೆ 6 ಮೊಳದ ಪಟುರಿ 1ಕ್ಕೆ ರೂ 6ರಿಂದ 35ರ ವರೆಗೆ ಬೇರೆಯೆಲ್ಲಾ ತರದ ವಸ್ತ್ರಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗೀಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್



೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು, ಅಲ್ಲದೆ ಕಾಂತಿಯುತವಾದುದು ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ. ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ ಕ್ರಮವಿಲ್ಲ ಇದಕ್ಕಿಂತ ಬೇರೆ ಪಾಸಿರಾಗಿ ಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ ಬೆಲೆ ರೂ ೩ ಮಾತ್ರ

01 1 3 Bengal Mesmarism House
1 5—7 Panchpota Bengal (B B)

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಮಾಘ ಬ ೩೦ ಶನಿವಾರದಿಂದ ಫಾಲ್ಗುಣ ಶು ೬ ಶುಕ್ರವಾರದ ವರೆಗಿನ ಪಂಚಾಂಗ (೧೯೩೬ನೇಯ ಕುಂಭ ಮಾಸ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
22	ಶನಿ	೩	೪೩	ಧನಿಷ್ಠ	೩೧	೧೦	ಶಿವರಾತ್ರಿ
23	ರವಿ	೧	೪೦	ಶತಭಿಷ	೩೮	೧೧	
24	ಸೋಮ	೨	೩೫	ಪೂ ಭಾದ್ರ	೩೪	೧೨	
25	ಮಂಗಳ	೩	೨೯	ಉ ಭಾದ್ರ	೦೯	೧೩	
26	ಬುಧ	೪	೨೩	ರೇವತೀ	೦೫	೧೪	
27	ಗುರು	೫	೧೮	ಅಶ್ವಿನೀ	೦೨	೦೫	
38	ಶುಕ್ರ	೬	೧೨	ಭರಣೀ	೫	೦೬	

೧೯೩೬-೩೭ರ ರೈಲ್ವೆ ಬಜೆಟ್ಟು

೧೯೩೬-೩೭ರ ರೈಲ್ವೆ ಬಜೆಟ್ಟು ಕೌನ್ಸಿಲ್ ಆಫ್ ಸ್ಟೇಟಿನ ಮುಂದೆ ಇಡಲ್ಪಟ್ಟಿದೆ. ಈ ವರ್ಷದಲ್ಲಿ ರೂ. ೪॥ ಕೋಟಿ ಡಿಫಿಸಿಟ್ಟು ಉಂಟಾಗುವುದೆಂದು ಇದರಲ್ಲಿ ವ್ಯಕ್ತವಾಗುತ್ತದೆ. ಸರಕಾರದ ಅಧಿಕಾರದಲ್ಲಿರುವ ರೈಲ್ವೆ ಸಂಸ್ಥೆಗಳು ಲಾಭಕರವಾಗಿ ಪರಿಣಮಿಸುವ ಬದಲಾಗಿ, ಅವುಗಳು ಸಾಲದ ಹೊರೆಗಳಾಗಿವೆ. ಇದಕ್ಕೆ ರೈಲ್ವೆ ಸದಸ್ಯರು ಅನೇಕ ಕಾರಣಗಳನ್ನು ಕೊಟ್ಟಿರುತ್ತಾರೆ. ಕಳೆದ ಐದು ವರ್ಷಗಳಲ್ಲಿ ರೈಲ್ವೆ ಇಲಾಖೆಯ ಡಿಫಿಸಿಟ್ಟು (ಉತ್ಪತ್ತಿಗಿಂತ ಹೆಚ್ಚಾಗಿರುವ ಖರ್ಚಿನ ಅಂಶ) ರೂ ೩೮ ಕೋಟಿಯಾಗಿರುತ್ತದೆ. ಹ್ಯಾಗೂ ವಿವಿಧ ಉಪಾಯಗಳಿಂದ ಇವುಗಳನ್ನು ಭರ್ತಿಮಾಡುತ್ತಾ ಬರುತ್ತಿದ್ದಾರೆ. ಇನ್ನೊಂದು ಐದು ವರ್ಷದಲ್ಲಿ ಈ ದುಃಸ್ಥಿತಿಯು ಉದ್ಧರಣೆ ಹೊಂದಿಕೊಂಡು, ಈ ಇಲಾಖೆಯಿಂದ ಸರಕಾರಕ್ಕೆ ಲಾಭವಾಗಬಹುದೆಂದು, ರೈಲ್ವೆ ಬೋರ್ಡಿನಲ್ಲಿ ಕೆಲವರ ಊಹೆ. ಆದರೆ ರೈಲ್ವೆ ಇಲಾಖೆಯಿಂದ, ಕೇಂದ್ರ ಸರಕಾರದ ಖಜಾನೆಗೆ ದ್ರವ್ಯವು, ಈ ಸಮಯದಲ್ಲಿ ಸುರಿಯುವ ಸಂಭವವೇ ಬರುವಂತಿಲ್ಲ ಎಂಬ, ರೈಲ್ವೆ ಕಮಿಶನರ ವರದಿಯು, ನಮ್ಮ ರೈಲ್ವೆಗಳ ಸ್ಥಿತಿಯು ಭಯಂಕರವಾಗಿರುವುದೆಂದು ಸೂಚಿಸುತ್ತದೆ.

ಹಾಗಾದರೆ ಈ ಇಲಾಖೆಯ ಸ್ಥಿತಿಯು ಯಾವಾಗ ಬದಲಾಗುವುದು- ಹೇಗೆ ಬದಲಾಗುವುದು. ಬಜೆಟ್ಟಿನ ಕುರಿತು ಭಾಷಣದಲ್ಲಿ ಮೇಲಿನ ಸ್ಥಿತಿಯ ಕಾರಣಗಳನ್ನು ಕೊಡಲ್ಪಟ್ಟವು. ಇವುಗಳು ವ್ಯಾಪಾರದ ದುಃಸ್ಥಿತಿ, ಮೋಟಾರು ವಾಹನಗಳಿಂದ ಸ್ಪರ್ಧೆ, ಟಿಕೇಟುಗಳನ್ನು ಪಡಕೊಳ್ಳದೆ ಪ್ರಯಾಣ ಮಾಡುವುದು ಇತ್ಯಾದಿ. ಹಿಂದೂದೇಶದ ಒಳಗಿನ ವ್ಯಾಪಾರವು ದಿನೇ ದಿನೇ ವೃದ್ಧಿ ಹೊಂದುತ್ತಿದೆ. ಇದರಿಂದ ರೈಲ್ವೆ ಇಲಾಖೆಗೆ ಬಹಳ ಪ್ರಯೋಜನವಿದೆ. ಆದುದರಿಂದ ಸರಕಾರದವರು, ಹಿಂದೂದೇಶದ ಕೈಗಾರಿಕೆಗಳು ಸರಿಯಾಗಿ ನಡೆಯುವಂತೆಯೂ, ನವೀನ ಕೈಗಾರಿಕೆಗಳು ಪ್ರಾರಂಭವಾಗುವಂತೆಯೂ ಸಾಧಿಸಬೇಕು. ನಮ್ಮಲ್ಲಿ ಕೈಗಾರಿಕೆಯು ಬರಿ ಬಾಲ್ಯಾವಸ್ಥೆಯಲ್ಲಿರುತ್ತದೆ. ಮೋಟಾರು ಕೈಗಾರಿಕೆ, ರಬ್ಬರ್ ಕೈಗಾರಿಕೆ, ಹಡಗಗಳನ್ನು ತಯಾರಿಸುವ ಕೈಗಾರಿಕೆ, ಇಲೆಕ್ಟ್ರಿಕ್ ಸಾಮಾನುಗಳನ್ನು ತಯಾರಿಸುವ ಕೈಗಾರಿಕೆ, ವಸ್ತ್ರ ಗಿರಣಿಗಳು, ಸಕ್ಕರೆ ಕಾರ್ಖಾನೆಗಳು, ಸಾಗಾಣಿಕೆಯ ಅಭ್ಯುದಯ, ಇವುಗಳಿಗೆ ತಕ್ಕ ಪ್ರೋತ್ಸಾಹ, ಧನಸಹಾಯ ಇತ್ಯಾದಿಗಳು ದೊರೆಕಿಸಿ, ಇತರ ಪಾಶ್ಚಾತ್ಯ ದೇಶಗಳಲ್ಲಿ ಇವುಗಳು ನಡೆದಂತೆ, ನಮ್ಮಲ್ಲೂ ನಡೆದರೆ ನಮಗೆ ಮತ್ತೇನು ಕಡಿಮೆ. ಆಗ ರೈಲ್ವೆಯಿಂದ ಧಾರಾಳ ಹಣವನ್ನು ಒಟ್ಟುಗೂಡಿಸಲು ಸಾಧ್ಯವಾಗುವುದು. ಪ್ರಜೆಗಳ ತೆರಿಗೆ ಹೊರೆಯನ್ನು ಕಡಿಮೆ ಮಾಡಲು ಸಾಧ್ಯವಾಗುವುದು. ಹಿಂದೂದೇಶದ ಸಾಂಪತ್ತಿಕ ಸ್ಥಿತಿಯು ಉದ್ಧಾರವಾಗುವುದು.

ನಮ್ಮ ರೈಲ್ವೆ ಕಂಪೆನಿಗಳ ಖರ್ಚಿನ ವಿಚಾರದಲ್ಲಿ- ಈಗ ಅನೇಕ ರೈಲ್ವೆ ಸಂಸ್ಥೆಗಳು ನಮ್ಮ ಸರಕಾರಕ್ಕೆ ಸೇರಿವೆ. ಇನ್ನೂ ಎರಡು ರೈಲ್ವೆ ಸಂಸ್ಥೆಗಳನ್ನು ಸೇರಿಸಿಕೊಳ್ಳಬೇಕಾಗಿ ಮೊನ್ನಿನ ಎಸೆಂಬ್ಲಿಯಲ್ಲಿ ಠರಾವಾಗಿರುತ್ತದೆ. ಈ ಸಂಸ್ಥೆಗಳನ್ನು ಈಗ ಹೇಗೆ ನಡೆಸುತ್ತಿದ್ದಾರೆ. ಅವುಗಳನ್ನು ಬೇರೆ ಬೇರೆಯಾಗಿ ನಡೆಯಿಸುತ್ತಿದ್ದಾರೆ. ಹೀಗಾಗಿ ಇವುಗಳಿಗೆ ವಿಶೇಷ ಖರ್ಚು ತಗಲುವ, (ಸಂಬಳ, ಭತ್ತೆ, ಪೆನ್‌ಶನ್ ಇತ್ಯಾದಿ ರೂಪಗಳಲ್ಲಿ) ಅನೇಕ ಶಿಬಂದಿಗಳನ್ನು ನಡೆಸಬೇಕಾಗಿದೆ. ವಿಶೇಷ ಖರ್ಚಿನಿಂದ ಸರಕಾರಕ್ಕೆ ಅನೇಕ ರೈಲ್ವೆ ವರ್ಕ್ ಶೋಪ್‌ಗಳನ್ನು ನಡೆಸಬೇಕಾಗಿದೆ.

ಅಮೇರಿಕಾದಲ್ಲಿ ಮಾಡಿದಂತೆ, ಇವುಗಳನ್ನೆಲ್ಲಾ ಒಂದಾಗಿ ಮಾಡಿ ಅದನ್ನು ಶಿಬಂದಿ ಇತ್ಯಾದಿಗಳನ್ನು ಯಾಕೆ ಕಡಿಮೆಮಾಡಬಾರದು. ಈ ರೈಲ್ವೆ ಇಲಾಖೆಗಳಿಗೆ ಬೇಕಾದ ಕೆಲವು ಸಾಮಾನುಗಳು ಬಹಿರ್ ದೇಶಗಳಿಂದ ಬರುತ್ತಿವೆ. ಹೆಚ್ಚಾಗಿ ಬ್ರಿಟನಿನಿಂದ. ಇವುಗಳನ್ನು ಕಡಿಮೆ ಖರ್ಚಿನಿಂದ ಇಲ್ಲಿಯೆ ಪಡಕೊಳ್ಳಬಹುದು. ಆದರೆ, ನಮ್ಮ ರೈಲ್ವೆ ಇಲಾಖೆಯು ಆಂಗ್ಲೇಯರ ಕೈಯಲ್ಲಿದೆ ಎಂದು ಹೇಳಬಹುದು. ಇವರು, ಬ್ರಿಟಿಷರ ವ್ಯಾಪಾರದ ಹಿತವನ್ನು ಸಾಧಿಸದೆ ಬಿಡರು. ಆದುದರಿಂದ ರೈಲ್ವೆ ಇಲಾಖೆಯ ಅಧಿಕಾರವು ಆದಷ್ಟು ಭಾರತೀಯವರ ಕೈಗಳಿಗೆ ಬರುವಂತೆ ಮಾಡುವುದು ಉತ್ತಮ. ನಮ್ಮ ಈ ರೈಲ್ವೆ ಸಂಸ್ಥೆಗಳು ಆಂಗ್ಲೇಯರಿಂದ ಸ್ಥಾಪನೆಯಾಗಿ, ಅವರಿಂದ ನಡೆಸಲ್ಪಟ್ಟು, ಈಗ ಸರಕಾರಕ್ಕೆ ಸೇರಿವೆ. ಇವರು ತಂದುಹಾಕಿದ ಬಹಳ ಕಲಬನ್ನು ಪಡೆಯುವ ಆಂಗ್ಲೇಯ ಉದ್ಯೋಗಸ್ತರು ಈಗಲೂ ತುಂಬಾ ಕೆಲಸದಲ್ಲಿದ್ದಾರೆ. ಅದೂ ಅಲ್ಲದೆ ನವೀನವಾಗಿ ಈ ಸಂಸ್ಥೆಗಳಲ್ಲಿ ಆಂಗ್ಲೇಯರು ಬರುತ್ತಿದ್ದಾರೆ. ಅದೂ ಅಲ್ಲದೆ, ಈ ಇಲಾಖೆಗೆ ಸಂಬಂಧಪಟ್ಟ ಯಾವತ್ತೂ ದೊಡ್ಡ ದೊಡ್ಡ ಉದ್ಯೋಗಸ್ತರೂ ವಿಶೇಷ ಕಲಬನ್ನು ಕೊಡುತ್ತಿದ್ದಾರೆ. ಇದೆಲ್ಲ ಅನಾವಶ್ಯಕನಲ್ಲವೆ. ಈ ರೀತಿಯಲ್ಲಿ ತಗಲುವ ಖರ್ಚನ್ನು ಕಡಿಮೆಮಾಡಲು ಸಾಧಿಸಬಹುದು.

ಟಿಕೇಟು ಇಲ್ಲದೆ ತಿರುಗಾಡುವ ವಿಚಾರದಲ್ಲಿ- ಮೂರನೆಯ ತರಗತಿಯ ಕಂಪಾರ್ಟ್ಮೆಂಟುಗಳು ಯಾವಾಗಲೂ, ಹದಮೀರಿ ತುಂಬಿಹೋಗುತ್ತವೆ. ಈ ಅವಸ್ಥೆಯಲ್ಲಿ ಅವರನ್ನು ಹುಡುಕಿ ತೆಗೆಯುವುದು ಹೇಗೆ? ಅನೇಕ ಸ್ಟೇಶನುಗಳಲ್ಲಿ ಇವರಿಗೆ ಸರಿಯಾಗಿ ಟಿಕೇಟು ಪಡಕೊಳ್ಳಲು ಎಡೆ ಸಿಕ್ಕುವುದಿಲ್ಲ. ಆದುದರಿಂದ, ಪ್ರಯಾಣದ ಗಡಿಬಿಡಿಯಲ್ಲಿ ಟ್ರೈನು ಬಂದ ಸಮಯ, ಇವರು ಅವುಗಳನ್ನು ಸೇರುತ್ತಾರೆ (ಟಿಕೇಟು ಇರಲಿ, ಇಲ್ಲದಿರಲಿ) ಸರಕಾರವು ಮೂರನೆ ತರಗತಿಯ ಪ್ರಯಾಣಿಕರ ಕಡೆಗೆ ಹೆಚ್ಚಿನ ಲಕ್ಷ್ಯಕೊಟ್ಟು, ಅವರಿಗೆ ಟಿಕೇಟು ಒದಗಿಸಿಕೊಳ್ಳಲು, ಆರಾಮದಿಂದ ಪ್ರಯಾಣ ಮಾಡಲು ವ್ಯವಸ್ಥೆಗಳನ್ನು ಮಾಡಿದರೆ, ಆಗ ಈ ವ್ಯಾಧಿಯು ಗುಣಹೊಂದಬಹುದು.

ನಮ್ಮ ರೈಲ್ವೆ ಕಂಪೆನಿಗಳ ಅಭ್ಯುದಯಕ್ಕೆ ಇನ್ನೊಂದು ಮುಖ್ಯ ಆತಂಕವೆಂದರೆ, ಅದರ ಶಿಬಂದಿ (ಸ್ಟೇಶನ್ ಮಾಸ್ತರರ, ಗುಡ್ಸ್ ಕ್ಲಾರ್ಕರ,) ಹಿಂದೂದೇಶದ ಇಷ್ಟು ವಿಸ್ತಾರವಾದ ರೈಲ್ವೆಯ ಕಾರ್ಯಸೂತ್ರರುವಾಗ ಇಲ್ಲಿ ಇನ್ನೂ ಎತ್ತಿನ ಗಾಡಿಗಳು ಸಂಚರಿಸಲು ಕಾರಣವೇನು? ಎಂಬ ಪ್ರಶ್ನೆಗೆ, ಅಮೇರಿಕದ ಓರ್ವ ನಿಪುಣರು ಹೀಗೆ ಉತ್ತರಕೊಟ್ಟಿರುವರು "ಹಿಂದೂದೇಶದ ರೈಲ್ವೆ ಸಂಸ್ಥೆಗಳು ಜನರಿಗೆ ಸೌಕರ್ಯಗಳನ್ನು ಒದಗಿಸಿಕೊಡುವುದಿಲ್ಲ. ವಸ್ತುಗಳು ಇಳಿಸುವುದರಲ್ಲಿ ಮತ್ತು ಹತ್ತಿಸುವುದರಲ್ಲಿ, ಅನಾವಶ್ಯಕವಾಗಿ ಬಹಳ ಸಮಯ ವಿಳಂಬವಾಗುತ್ತದೆ. ರೈಲ್ವೆಯ, ದರಗಳೇನೂ ನ್ಯಾಯಸಮ್ಮತವಾದುವುಗಳು. ಆದರೆ, ರೈಲ್ವೆ ಸಂಸ್ಥೆಗಳ ನೌಕರರು ಕೇಳುವ ಲಂಚವು ಬಹಳ ಅನ್ಯಾಯಕರವು. ಇವರಿಂದಲೆ ವರ್ತಕರ ದೃಷ್ಟಿಯು ಬೇರೆ ಉಪಾಯಗಳಿಗೆ ಸಂದಿರುತ್ತದೆ" ಹಣವು ಹೆಚ್ಚಾಗಿ, ವರ್ತಕರು ಇವರಿಗೆ ಲಂಚ ಕೊಡುವುದಲ್ಲ. ಇವರಿಗೆ ಲಂಚ ಕೊಡದೆ ನಿರ್ವಾಹವಿಲ್ಲ. ಆದುದರಿಂದ ಜನರಿಗೆ ಸೌಕರ್ಯಗಳನ್ನು ಹೆಚ್ಚಿಸಿದರೆ, ರೈಲ್ವೆ ಉದ್ಯೋಗಸ್ತರು ನ್ಯಾಯಪರವಾಗಿ ವರ್ತಿಸಿದರೆ ಆಗ ರೈಲ್ವೆಯ ಉಪಯೋಗವನ್ನು ಮಾಡಲು ಉತ್ಸಾಹವುಂಟಾಗುವುದು.

ಸರಕಾರವು ಇವೆಲ್ಲಾ ತೊಡಕುಗಳಿಂದ, ರೈಲ್ವೆ ಇಲಾಖೆಯನ್ನು ವಿಮೋಚನೆಗೊಳಿಸಿದರೆ, ಆಗ ರೈಲ್ವೆ ಇಲಾಖೆಯಿಂದ ಉಳಿತಾಯವಾಗಬಹುದು.

ಆಗಾಖಾನರ ಭಾಷಣ

ಮುಸ್ಲಿಮ ನಾಯಕರ ಪರಿಷತ್ತು ಮೊನ್ನೆ ನವಡಿಲ್ಲಿಯಲ್ಲಿ ಆಗಾಖಾನರ ಅಧ್ಯಕ್ಷತೆಯಲ್ಲಿ ಜರಗಿತು. ಇದರಲ್ಲಿ ಹಿಂದೂದೇಶದ ಮುಂದಿನ ರಾಜಕೀಯ ರಂಗದಲ್ಲಿ ಮುಸ್ಲಿಮರು ಯಾವ ರೀತಿ ವರ್ತಿಸಬೇಕೆಂಬುದು ನಿರ್ಧಾರವಾಗಿರುತ್ತದೆ. ಮುಸ್ಲಿಮರು ಹಿಂದೂದೇಶಕ್ಕೆ ಸ್ವತಂತ್ರ ಸರಕಾರವನ್ನು ಸ್ಥಾಪನೆ ಮಾಡುವುದರಲ್ಲಿ, ಶ್ರಮಪಡಬೇಕಾಗಿ ಆಗಾಖಾನರ ಬೋಧೆಯಾಗಿರುತ್ತದೆ. ಆಗಾಖಾನರ ಭಾಷಣದಲ್ಲಿ ಅನೇಕ ಉತ್ತಮ ಸೂಚನೆಗಳು ಹೊರಡಿವೆ. ಕಳೆದ ಶತಮಾನದ ಆದಿಯ ಅರ್ಧದಿಂದ ಮುಸ್ಲಿಮರು ರಾಜಕೀಯವಿಚಾರಗಳಲ್ಲಿ ಹೇಗೆ ವರ್ತಿಸಿದರು, ಅವರ ವರ್ತನೆಗಳಿಗೆ ಕಾರಣವೇನು, ಇವೆಲ್ಲಾ ಇವರ ಭಾಷಣದಲ್ಲಿ ಕೊಡಲಾದವು. ರಾಜಕೀಯ ವಿಮೋಚನೆ, ಮುಸ್ಲಿಮರು ಇತರ ಭಾರತೀಯರೊಡನೆ ಶ್ರಮ ವಹಿಸಬೇಕೆಂಬುದಾಗಿ, ಆಡಿದ ಆಗಾಖಾನರ ಮಾತು ಬಹಳ ಶ್ರೇಷ್ಠವಾದುದು. ನಮ್ಮ ದೇಶದಲ್ಲಿ ಎರಡನೆಯದಾಗಿರುವ ಈ ಮತವು,ಹಿಂದೂದೇಶದ ರಾಷ್ಟ್ರೀಯ ಪಂಥಗಳಲ್ಲಿ ಭಾಗವಹಿಸಬೇಕಾಗಿ, ಅವರ ನಿರ್ಧಾರವು ಶ್ಲಾಘನೀಯವು. ಹಿಂದೂದೇಶಕ್ಕೆ ಡೊಮಿನಿಯನ್ ಸ್ಟೇಟಸ್ ದೊರಕಬೇಕೆಂದೂ, ಹಿಂದೂದೇಶದ ರಾಜಕೀಯ ಅಭ್ಯುದಯವಾಗುವಂತೆ, ಸಮಸ್ತ ಭಾರತೀಯ ಮುಸ್ಲಿಮರು ಸಾಧಿಸಲು ಸಿದ್ಧರಿರುವರೆಂದು ಆಗಾಖಾನರ ಮತ. ಆದರೆ, ಹಿಂದೂದೇಶದ ನವಶಾಸನದ ಕುರಿತಾಗಿ ನೇಮಿದ ಕೆಲವು ಸಮಿತಿಗಳಲ್ಲಿ ಸದಸ್ಯರಾಗಿದ್ದ ಇವರಿಗೆ, ನಾವು ಈ ಮುಕ್ತಿಯಿಂದ ಎಷ್ಟು ದೂರಕ್ಕೆ ಇರುವೆವೆಂದು ತಿಳಿದೆ ಇರುತ್ತದೆ. ಹಿಂದೀಯರ ಅನೇಕ ಸಲಹೆಗಳು ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿಯಿಂದ ನಿರಾಕರಿಸಲ್ಪಟ್ಟಿವೆ. ನವೀನ ರಾಜಶಾಸನವನ್ನು ಒಪ್ಪದೆ, ಸ್ವರಾಜ್ಯ ಪಡೆಯಲು, ಕಾರ್ಯದಕ್ಷತೆಯಿಂದ ದುಡಿಯುವುದೆ ನಮ್ಮ ಕರ್ತವ್ಯವು. ಮುಸ್ಲಿಮರ ಧ್ಯೇಯವೂ ಇದೆ ಆಗಿರಬೇಕು. ಭಾರತೀಯರಿಗೆ ಬಹಿರ್ ದೇಶಗಳಲ್ಲಿ ತಕ್ಕ ಮನ್ನಣೆಯು ದೊರಕವುದಿಲ್ಲವೆಂಬೂ, ಭಾರತೀಯರು ಈ ಸ್ಥಿತಿಯನ್ನು ಕೊನೆಗೊಳ್ಳಿಸಬೇಕೆಂದೂ ಇವರ ಮಾತು. ಈ ಸ್ಥಿತಿಯು ನಿವಾರಣೆಯಾಗಬೇಕಾದರೆ, ಭಾರತೀಯರು ಹಲವು ಬಗೆಯಲ್ಲಿ ಆಧ್ಯಾತ್ಮಿಕ, ಸಾಂಪತ್ತಿಕ, ಸಾಮಾಜಿಕ, -ಇತ್ಯಾದಿಗಳಲ್ಲಿ ವಿಶೇಷವಾಗಿ ಪ್ರಗತಿಹೊಂದಬೇಕಾಗಿದೆ. ಇವುಗಳು ಸಾಧ್ಯವಾಗಬೇಕಾದರೆ ರಾಜಕೀಯ ಸ್ಥಿತಿಯು ಸುಧಾರಣೆಯಾಗಬೇಕು. ಹೀಗೆ ಸುಧಾರಣೆ ಹೊಂದಲು ಎಲ್ಲಾ ಭಾರತೀಯರು ಜಾತಿ, ಮತ, ಇತ್ಯಾದಿ ಭೇದಗಳನ್ನು ತ್ಯಜಿಸಿ ಐಕ್ಯದಿಂದ ಕಾರ್ಯಮಾಡಬೇಕಾಗಿದೆ' ಎಂದು ಆಗಾಖಾನರು ಹೇಳುವುದು ನಿಜ. ಆದರೆ, ನವ ರಾಜಶಾಸನದಿಂದ ನಮಗೆ ವಿಶೇಷ ಫಲಗಳೇನೂ ದೊರಕುವ ಹಾಗಿಲ್ಲ. ನಾವು ಇಷ್ಟರ ತನಕ ಅನುಭವಿಸಿದ ಸ್ವಯಂಪ್ರಭುತ್ವದ ಹಕ್ಕುಗಳು ಇದರಲ್ಲಿ ಮಾಯವಾಗಿವೆ. ಮಾತ್ರವಲ್ಲದೆ, ಈ ಸುಧಾರಣೆಗಳೆಲ್ಲಾ ಬ್ರಿಟಿಷರ ಹಿತದೃಷ್ಟಿಯಿಂದಲೆ ಮಾಡಿದ್ದಾಗಿರುತ್ತದೆ. ಹಾಗಿರುವಾಗ ಭಾರತೀಯ ಸುಧಾರಣೆಗೆ ಹಾದಿ ಯಾವದು? ಹಿಂದೀಯರಿಗೆ ಬಹಿರ್ ದೇಶಗಳಲ್ಲಿ ಹಾಗಾದರೆ ಹೇಗೆ ಮನ್ನಣೆಗಳು ದೊರಕುವುವು? ಆದರಿಂದ, ನಾವು ಸ್ವರಾಜ್ಯ ಸಾಧನೆಗಾಗಿ ಹೂಡಿದ ಚಳವಳವನ್ನು ಹಿಂತೆಗೆಯಬಾರದು. ಎಲ್ಲಾ ಮತಗಳು ಒಮ್ಮನಸ್ಸಿನವರಾದರೆ, ಈ ಚಳವಳವು ಇನ್ನೂ ಬಲಹೊಂದುವುದು; ಜಯದ ಸಂಭವಗಳು ಹೆಚ್ಚುವುವು'' 'ಮತಗಳಿಂದಾಗಿ ನಮ್ಮಲ್ಲಿ ಪರಸ್ಪರವೈರವುಂಟಾಗುವುದು'' ಎಂದು ಆಗಾಖಾನರು ಆಡಿದಮಾತುಗಳು ಯೋಗ್ಯವಾದುವುಗಳು. ಭಾರತೀಯ ಮುಸ್ಲೀಮರು ತಾವು ಭಾರತೀಯರೆಂದು ಭಾವಿಸಿ, ಯಾವತ್ತೂ ರಾಜಕೀಯ ಚಳವಳಗಳಲ್ಲಿ ಭಾಗಿಗಳಾಗಬೇಕು. ಸಾಮಾಜಿಕ ಮತ್ತು ಸಾಂಪತ್ತಿಕ ವಿಚಾರಗಳಲ್ಲಿ, ಭಾರತೀಯರೆಲ್ಲಾ ಕೋಮುವಾರು ಭೇದಗಳನ್ನು ಮರೆತು ಬಿಡಬೇಕು ಎಂಬುದಾಗಿ ಇವರು ನುಡಿಗಳನ್ನು ಅನುಸರಿಸಿ ಎಲ್ಲರೂ ವರ್ತಿಸಬೇಕು.

ದಿವಂಗತ ಸರ್ ದಿನ್‌ಶಾ ವಾಛಾರವರು

ತೊಂಭತ್ತೊಂದನೆಯ ವಯಸ್ಸಿನಲ್ಲಿ, ಮುಂಬಾಯಿಯ ವೃದ್ಧ ಪಿತಾಮಹರೆನಿಸಿಕೊಂಡಿದ್ದ ಇವರು (ದಾದಾಭಾಯಿ ನವರೋಜಿಯವರ ಅನಂತರದಲ್ಲಿ ಇವರೇ ವಯೋವೃದ್ಧರೂ ಜ್ಞಾನವೃದ್ಧರೂ ಎಂದು ಸರ್ವಪಕ್ಷೀಯರಿಂದಲೂ ಗೌರವ ಹೊಂದಿದರು) ಇದೇ ಸೋಮವಾರ ದಿವಂಗತರಾದರು. ಕೊಂಗ್ರೆಸ್ ಪಕ್ಷದ ಕಾರ್ಯಕ್ರಮದಲ್ಲಿ ಕೆಲವಂಶವನ್ನು ಇವರು ಮನ್ನಿಸುತ್ತಿದ್ದಿಲ್ಲ, ಆದರೂ ಸ್ವರಾಜ್ಯವು ಜನ್ಮಸಿದ್ಧವಾಗಿ ಪ್ರತಿಯೊಬ್ಬ ಭಾರತೀಯನದಾಗಿದೆ ಎಂದು ಎಚ್ಚರಿಸಿ ಬೋಧಿಸಿದವರಲ್ಲಿ ಇವರೂ ಒಬ್ಬರಾದುದರಿಂದ, ಇವರು ಎಲ್ಲರ ಕೃತಜ್ಞತೆಗೆ ಪಾತ್ರರಾಗಿಯೆ ಇರುತ್ತಿದ್ದರು. ಕೊಂಗ್ರೆಸ್ಸಿನ ಸ್ವರ್ಣೋತ್ಸವ ನಡೆದುದು ಇವರು ತೀರ ಬಲಹೀನರಾಗಿದ್ದರೂ, ಕೊಂಗ್ರೆಸ್ ಅಧ್ಯಕ್ಷರು ಇವರ ದರ್ಶನ ಪಡೆದು ವಂದನೆ ಸಲ್ಲಿಸಿಯೇ ಉತ್ಸವವನ್ನು ಆರಂಭಿಸಿದ್ದರು. ಸಾಂಪತ್ತಿಕ ಸಮಸ್ಯೆಗಳೆಂದರೆ ಇವರ ವಿಚಾರಕ್ಕೊಳಪಟ್ಟ ವಿಷಯಗಳಾಗಿದ್ದು, ಅವನ್ನು ಕುರಿತಾಗಿ ಇವರು ಕೊಡುತ್ತಿದ್ದ ಅಭಿಪ್ರಾಯಗಳನ್ನು ಸರ್ವರೂ ಮನ್ನಿಸುತ್ತಿದ್ದರು. ಎಸೆಂಬ್ಲಿಯಲ್ಲಿ ಗೋಖಲೆಯರೂ, ರಾಜ್ಯ ಸಭೆಯಲ್ಲಿ ವಾಛಾರವರೂ ಎಂದರೆ, ಅಶ್ವಿನೀ ಕುಮಾರರ ಹಾಗೆ ಜನತೆಯಲ್ಲಿ ಉತ್ತಮವಾಗಿ ಆಧಾರವುಳ್ಳ ಅಭಿಪ್ರಾಯ. ಒಂದು ಉಂಟಾದರೆ, ಸರಕಾರವು ಅದನ್ನು ಮನ್ನಿಸಲೇಬೇಕು ಎಂಬ ತತ್ವನನ್ನು ಇವರು ಅನುಸರಿಸುತ್ತಿದ್ದರು, ಬೋಧಿಸುತ್ತಿದ್ದರು. ಭಾರತದ ಸ್ವಾತಂತ್ರ್ಯ ಸಾಧನೆಗಳಿಗೆ ತಳಹದಿ ಹಾಕಿಕೊಟ್ಟವರಲ್ಲಿ ಇವರೊಬ್ಬರೆಂದು ಇವರನ್ನು ಭಾರತೀಯರು ಚಿರಕಾಲವೂ ಸ್ಮರಿಸದೆ ಇರಲಾರರು.

(೫ನೇ ಪುಟದಿಂದ ಮುಂದುವರಿದುದು

ಮಳೆಕನಂತೆ ಸ್ತಬ್ಧನಾಗಿ ನಿಂತುಬಿಟ್ಟಿದ್ದ ಪದ್ಮನಾಭನು ಅಚೆ ಈಚೆ ನೋಡಿದನು. ಮಂಚದ ಒಳಿಯಲ್ಲೇ ಒಂದು ತೊಟ್ಟಿಲಲ್ಲಿದ್ದ ಒಂದು ಸಣ್ಣ ಮಗುವು, ಕೆಲವೇ ದಿನಗಳ ಪ್ರಾಯದ್ದು ಗಲಭೆಯಿಂದ ಎಚ್ಚರವಾಗಿ ಚೀರ‍್ರನೆ ಚೀರಿತು.

ಅಷ್ಟರಲ್ಲಿ ಹೊರಗಿನಿಂದ ಪೋಲೀಸ್ ದನ್‌ಕನ್‌ರವರೂ ಕೆಲವು ದಾದಿಯರೂ ಓಡಿ ಬಂದು ಈ ನಾಟಕವನ್ನು ನೋಡಿ ಅವಾಕ್ಕಾದರು. ದನ್‌ಕನ್‌ರವರು ಪದ್ಮನಾಭನನ್ನು ಅಲ್ಲಿ ನೋಡುತ್ತಲೇ ಇಂಗ್ಲಿಷಿನಲ್ಲಿ "ಎಲೆಕಪ್ಪು ಈ ಸಿಫಿಲಿಸ್ ಪೇಶಂಟ್‌ನೇ ಕಾರಣನೆಂದು ಕಾಣುವುದು. ಅವನನ್ನು ಆಚೆಗೆ ಕೊಂಡೊಯ್ಯಿರಿ'' ಎಂದು ಅಪ್ಪಣೆಕೊಟ್ಟನು.

ಆಚೆಗೆ ಕೊಂಡೊಯ್ಯಲ್ಪಟ್ಟ ಪದ್ಮನಾಭನು ತಿರುಗಿ ಈಚೆಗೆ ಬರಲಿಲ್ಲ, ಆಚೆಗೇ ಹೋದನು. ಭಾಗೀರಥಿ, ಪದ್ಮನಾಭರ ದಾಂಪತ್ಯ ಮಾತ್ರವೇ ಅಲ್ಲ, ಇದೆಲ್ಲವೂ 'ದೇವತಾ ದುರ್ಲಭ'ವಾಗಿರುವುದೆಂಬುದು ಸ್ವಯಂವ್ಯಕ್ತವಲ್ಲವೇ?

ಬರುವ ವಾರ,

ಮಿಥ್ಯಾಜೀವನದ ಸತ್ಯಕಥೆಗಳು

೬. 'ಸಾಧುವಿನ ಸಾಧ್ವಿಯರು'

ಓದಲು ಮರೆಯಬೇಡಿ!

ಚಂದ್ರನನ್ನು ಸೇರಲು ಸಾಧ್ಯವಾಗುವುದೆ?

ವಿಜ್ಞಾನಯುಗವು ಮೂಡುತ್ತಲೇ ಅದರೊಂದಿಗೆ ಅಂತರಿಕ್ಷದಲ್ಲಿ ಸುಳಿದಾಡುವ ಅಭಿರುಚಿ ಮನುಷ್ಯರಲ್ಲಿ ಉಂಟಾಗಿರುತ್ತದೆ. ದೂರದಲ್ಲಿರುವ ಚಂದ್ರನನ್ನು ಸೇರಲು ಆತುರವು ಉಂಟಾಗಿರುತ್ತದೆ. ಅನೇಕ ಬೇಲೂನುಗಳೂ (ಹಗುರವಾದ ಗೇಸುಗಳಿಂದ ತುಂಬಿದ ಚೀಲಗಳು, ಈ ಗೇಸುಗಳ ತೂಕವು ಗಾಳಿಗಿಂತ ಕಡಿಮೆಯಾದುದರಿಂದ, ಈ ಚೀಲವು ಆಕಾಶಕ್ಕೆ ಎತ್ತಲ್ಪಡುವುದು. ಈ ಚೀಲಕ್ಕೆ ಮನುಷ್ಯನಿಗೆ ನಿಲ್ಲಲು ಒಂದು ತುಕ್ಕೆಯನ್ನು ಕಟ್ಟುತ್ತಿದ್ದರು. ಗಾಳಿಯ ಒತ್ತಾಟವು ಈ ಬೇಲೂನನ್ನು ಮನುಷ್ಯನೊಂದಿಗೆ ಅಂತರಿಕ್ಷಕ್ಕೆ ಒಯ್ಯುವುದು.) ರೊಕೇಟುಗಳು (ಸ್ಫೋಟನದಿಂದ ಚಲಿಸುವ ವಿಮಾನ) ನಿರ್ಮಾಣವಾದುವು. ಆದರೆ ಇವುಗಳಿಂದ ಬಹಳ ಎತ್ತರಕ್ಕೆ ಹಾರಾಡಲು ಸಾಧ್ಯವಾಗಲಿಲ್ಲ. ಅನೇಕ ವಿಜ್ಞಾನಿಗಳು ಈ ವಿಚಾರದಲ್ಲಿ ಕಾರ್ಯ ಮಾಡಲಾರಂಭಿಸಿದರು. ಕೆಲವರ ಶೋಧನಾಲಯಗಳಲ್ಲಿ ಉಂಟಾದ ಸ್ಫೋಟನಗಳಿಂದ ಅವರ ಸಕ್ಕೆ ಶೋಧೆಗಳು ನಮಗೆ ಕಳೆದು ಹೋದವು.

ಇತ್ತೀಚೆಗೆ 'ರೇಡಿಯೊ'ವಿನ ಸಹಕಾರದಿಂದ, ನಾವು ಉಸಿರಾಡುವ ವಾಯು ಮಂಡಳದ ಮೇಲಿರುವ ಪ್ರದೇಶದ ಅರಿವನ್ನು ಮಾಡಲು ಕೆಲವು ವಿಜ್ಞಾನಿಗಳು ಸಾಧಿಸುತ್ತಿದ್ದಾರೆ. (ರೇಡಿಯೊ ಎಂಬುದು ಒಂದು ತರದ ಶಕ್ತಿ. ಇದರಿಂದ ಒಂದು ದೇಶದಲ್ಲಿ ಮಾಡಿದ ಭಾಷಣ, ಗಾಯನ ಇತ್ಯಾದಿಗಳನ್ನು ಇನ್ನೊಂದು ದೇಶದಲ್ಲಿ ಕೇಳಬಹುದು.) ರೇಡಿಯೊ, ಉಷ್ಣ ಪ್ರಕಾಶ ಇತ್ಯಾದಿಗಳು ನೇರವಾಗಿ ಚಲಿಸುತ್ತಿದೆಂದೂ ವಿಜ್ಞಾನಿಗಳು ಕಂಡುಹಿಡಿದಿರುವರು. ಒಂದು ದೊಡ್ಡ ಸರ್ಚ ಲ್ಯಾಟಿನಿಂದ ರಾತ್ರಿ ಸಮಯದಲ್ಲಿ ಆಕಾಶದಲ್ಲಿ ಪ್ರಕಾಶ ಮಾಡಿದರೆ, ಇದರ ಸಕ್ಕವು ತಿಳಿಯುವುದು. ಮೇಲಕ್ಕೆಹೋದ ಹಾಗೆ, ಪ್ರಕಾಶವು ಅದರ್ಶವಾಗುತ್ತದೆ. ನಮ್ಮ ದೃಷ್ಟಿಗೆ ಗೋಚರವಾಗದ ಪ್ರಕಾಶದ ಗತಿಯು ಏನಾಗುವುದು? ಒಂದು ರೇಡಿಯೊ ಸ್ಟೇಷನಿನಿಂದ ರೇಡಿಯೊ ತೆರೆಗಳು ಕಳುಹಿಸಲ್ಪಡುತ್ತವೆ. ಇವುಗಳನ್ನು ಬಹಳ ದೂರವಾದ ದೇಶಗಳಲ್ಲಿ ಹಿಡಿಯಲು ಸಾಧ್ಯವಾಗುತ್ತದೆ. ಇದಕ್ಕೆ ಕಾರಣವೇನು? ಹವಾಗುಣವನ್ನು ಭವಿಷ್ಯವಾಗಿ ಹೇಳುವುದರಲ್ಲಿಯೂ ಅನೇಕ ಸಂಗತಿಗಳು ತಿಳಿದು ಬರಲಿಲ್ಲ. ಹವಾಗುಣವನ್ನು ಭವಿಷ್ಯವಾಗಿ ತಿಳಿಯಲು ಕೆಲವು ಪ್ರಯತ್ನಗಳು ನಡೆಯುತ್ತವೆ. ಹವಾಗುಣ ಬದಲಾವಣೆಗಳಿಗೆ ಅನೇಕ ಕಾರಣಗಳಿವೆ. ವಾಯುಮಂಡಳದ ಹೊರಗಿರುವ ಪ್ರದೇಶವು ಈ ಹವಾಗುಣ ಬದಲಾವಣೆಯ ಒಂದು ಕಾರಣವಾಗಿರುತ್ತದೆ. ರೇಡಿಯೊ ಶಕ್ತಿಯು ಚಲಿಸುವ ಹಾದಿಯೂಗಿರುತ್ತದೆ. ಪ್ರಕಾಶವು ನಾಯವಾಗುವ ಕಾರಣವಾಗಿರುತ್ತದೆ.

ವಾಯುಮಂಡಳದ ಹೊರಗಿರುವ ಈ ಪ್ರದೇಶಕ್ಕೆ ಸ್ಟೇಟೋಸ್ಫಿಯರ್ ಅನ್ನುತ್ತಾರೆ. ಈ ಪ್ರದೇಶದ ಶೋಧೆ ನಡೆಯಿಸಲು ಪ್ರೊಫೆಸರ್ ಪಿಕಾರ್ಡ ಎಂಬವರು ಬೇಲೂನಿಗೆ ಕಟ್ಟಲ್ಪಟ್ಟ ಒಂದು ಗೂಡಿನಲ್ಲಿ ಕುಳಿತು ಎರಡು ಸಲ ಮೇಲಕ್ಕೆ ಪ್ರಯಾಣ ಮಾಡಿರುವರು. ಇವರು ತನ್ನ ಬೇಲೂನಿನಲ್ಲಿ ಹ್ಯಾಡ್ರೋಜನ್ನು ಗೇಸನ್ನು ಉಪಯೋಗಿಸಿದ್ದರು. ಅದಕ್ಕೆ ಕಟ್ಟಿದ ಗೂಡು ಗಾಳಿ ಇತ್ಯಾದಿ ಒಳಸೇರದಂತೆ ಅಕಬಂಧಾಗಿ ಮಾಡುವಂತೆ ರಚಿಸಲ್ಪಟ್ಟಿತು. ಇದರಲ್ಲಿ ಶೋಧೆಗೆ ಬೇಕಾದ ಯಂತ್ರೋಪಕರಣಗಳನ್ನು ಇಟ್ಟಿದ್ದರು. ಸುತ್ತಲಿನ ಪ್ರದೇಶದ ಸ್ಥಿತಿಯ ಅನುಭವವು ಒಳಗಿದ್ದವರಿಗೆ ಆಗುತ್ತಿರಲಿಲ್ಲ. ಈ ಸ್ಥಿತಿಯನ್ನು ಒಳಗಿರುವ ಉಪಕರಣಗಳಿಂದ ತಿಳಿಯಬೇಕಾಗಿತ್ತು. ಪ್ರಾಣ ವಾಯುವನ್ನು ಈ ಗೂಡಿನಲ್ಲಿ ಒದಗಿಸಿದರಿಂದ, ಇದರ ಒಳಗಿರಲು ಸಾಧ್ಯವಾಯಿತು.

ಪ್ರೊಫೆಸರರು ಉಪಯೋಗಿಸಿದ ಈ ಬೆಲೂನನ್ನು ಬಹಳ ಜಾಗ್ರತೆಯಿಂದ ರಚಿಸಿದ್ದರು. ಸ್ಟೇಟೋಸ್ಫಿಯರ್ ಪ್ರದೇಶದಲ್ಲಿ ಗಾಳಿಯ ಒತ್ತಾಟ ಕಳೆದುಹೋಗುವುದರಿಂದ ಬೇಲೂನು ವಿಶೇಷವಾಗಿ ಉಬ್ಬುವಲ್ಲಿ ಅದನ್ನು ತಡೆಯುವ ಯೋಗ್ಯತೆಯುಳ್ಳದ್ದಾಗಿತ್ತು. ಪ್ರೊಫೆಸರರು ಕೂಡ್ರುವ ಪೆಟ್ಟಿಗೆಯ ನಿರ್ಮಾಣವೂ ಅದೇ ರೀತಿಯಲ್ಲಾಗಿತ್ತು. ಈ ಬೇಲೂನು ಎರಡು ಭಾರಿಯೂ ಹಾನಿಯಿಲ್ಲದೆ ಈ ಪ್ರದೇಶವನ್ನು ಸಂಚರಿಸಿ ಭದ್ರವಾಗಿ ಹಿಂತಿರುಗಿ ಬಂದಿರುತ್ತದೆಂದು ಹೇಳುವಾಗ, ಅದರ ಉತ್ಕೃಷ್ಟತೆಯನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಆ ಪ್ರದೇಶದ ಗುಣವನ್ನು ತಿಳಿದುಕೊಳ್ಳಲು ಪ್ರೊಫೆಸರರು ಅನೇಕ ತರದ ಯಂತ್ರಗಳನ್ನು ಕಂಡೊಯ್ದಿದ್ದರು. ಇವುಗಳಿಂದ, ಬೇಲೂನು ಮೆಲ್ಲನೆ ಇಳಿಯುವಂತೆ ಮಾಡಿ ಅವರ ಕೆಳಗಿಳಿಯುವ ಪ್ರಯಾಣದಲ್ಲಿ, ಒಳಗಿರುವ ಯಂತ್ರೋಪಕರಣಗಳಿಂದ ಅನೇಕ ಶೋಧೆಗಳನ್ನು ಮಾಡಿದರು. ಪ್ರಥಮ ಭಾರಿ ಪ್ರೊಫೆಸರರು ಶೀತವಲಯದ ಒಂದು ಗುಡ್ಡದ ಮೇಲೆ ಇಳಿಯಬೇಕಾಯಿತು. ಬೇಲೂನನ್ನು ಅಲ್ಲಿಯೆ ತ್ಯಜಿಸಬೇಕಾಯಿತು. ಆದರೆ ಅದರಲ್ಲಿರುವ ಯಂತ್ರಗಳು ತೆಗೆಯಲಾದುವು. ಪ್ರೊಫೆಸರರ ಪ್ರಥಮ ಭಾರಿಯ ಪ್ರಯಾಣ ಮಾಡಿದ ಗೂಡಿಗೆ ಕಪ್ಪು ಬಣ್ಣ ಕೊಟ್ಟಿದ್ದರು. ಇದರಿಂದ ಶೀತ ಪ್ರದೇಶವಾಗಿದ್ದ ಆ ಸ್ಟೇಟೋಸ್ಫಿಯರಿನಲ್ಲಿ ಇವರಿಗೆ ಸೂರ್ಯನ ರಶ್ಮಿಯು ದೊರಕುವಂತಾಯಿತು.

ಅವರ ಎರಡನೇ ಪ್ರಯಾಣದಲ್ಲಿ ಗೂಡಿಗೆ ಬಿಳೀ ಬಣ್ಣವನ್ನು ಕೊಟ್ಟಿದ್ದರು. ೧೯೩೨ರ ಆಗೋಸ್ತು ತಿಂಗಳ ತಾ. ೧೮ರಲ್ಲಿ ಪ್ರೊಫೆಸರ್ ಇನ್ನೊಬ್ಬ ಯುವಕ ವಿಜ್ಞಾನಿಗಳಿಂದ ಕೂಡಿದವರಾಗಿ ಈ ಬೆಲೂನನ್ನು ಹತ್ತಿದರು. ಬೆಲೂನನ್ನು ಭೂಮಿಯಲ್ಲಿ ನಿಲ್ಲಿಸಿದ ಹಗ್ಗಗಳು ಕಡಿಯಲಾದುವು. ಬೇಲೂನು ಮೇಲಕ್ಕೆ ಹಾರಿತು. ವಿಜ್ಞಾನಿಗಳಿಂದಲೂ, ವಿದ್ಯಾವಂತರಿಂದಲೂ ಕೂಡಿದ ಜನಸ್ತೋಮವು ಇವನ್ನು ನಿರೀಕ್ಷಿಸುವವರಾದರು.

ಈ ಸಾರಿ ಪ್ರೊಫೆಸರ್ ಬೇಲೂನು ಸಾಧಾರಣ ಹತ್ತು ಮೈಲು ಎತ್ತರಕ್ಕೆ ಹಾರಿತು. ಈ ಎತ್ತರದಲ್ಲಿ ಪ್ರದೇಶವು ಬಹಳ ಶೀತವಾಗಿತ್ತು. ಇದರಿಂದ ಒಳಗಿರುವ ವಿಜ್ಞಾನಿಗಳ, ಸಂಕಷ್ಟಗಳನ್ನು ಅನುಭವಿಸಬೇಕಾಯಿತು. ಕೊನೆಗೆ ಮೇಲಕ್ಕೆ ಹಾರುವ ಗಡಿಯನ್ನು ಸೇರಿದರು. ಅನಂತರ ಮೆಲ್ಲ ಮೆಲ್ಲನೆ ಇಳಿಯಲಾರಂಭಿಸಿದರು. ಕೆಳಗೆ ಬರುವ ಈ ಪ್ರಯಾಣದ ಪ್ರತಿಯೊಂದು ನಿಮಿಷವನ್ನು ಆ ಪ್ರದೇಶದ ಕುರಿತು ಯಂತ್ರೋಪಕರಣಗಳ ಉಪಯೋಗದಿಂದ, ಶೋಧನಾಕಾರ್ಯದಲ್ಲಿ ಕಳೆದರು. ಮುಂಜಾನೆ ೫ ಘಂಟೆಗೆ ಮೇಲಕ್ಕೆ ಹಾರಿದ ಬೇಲೂನು ಸಾಯಂಕಾಲ ೫ಕ್ಕೆ ಕೆಳಗೆ ಇಳಿಯಿತು. ಬಹಳ ಸಮಯ ಆ ಪ್ರದೇಶದಲ್ಲಿದ್ದುದರಿಂದ ಕೆಳಗೆ ಬಂದ ಪ್ರೊಫೆಸರರಿಗೆ ಭೂಮಿಯ ಹವಾಗುಣಗಳನ್ನು ಅನುಭವಿಸಲು ಸ್ವಲ್ಪ ಅಸಾಧ್ಯವಾಯಿತು. ಅಂತೂ ಇಂತೂ ಸ್ಟೇಟೋಸ್ಫಿಯರ್ ಯಾತ್ರೆಗಯ್ಯುವ ಪ್ರೊಫೆಸರ್ ಕಾರ್ಯವು ಜಯಶೀಲವಾಯಿತು.

ಇದರಿಂದ ಅಕಬಂಧಾದ ವಿಮಾನದಲ್ಲಿ ಕೂತು ಸ್ಟೇಟೋಸ್ಫಿಯರಿನ ಮೂಲಕ (ವಾಯುಮಂಡಳದ ಬಾಧೆಗಳನ್ನು ತಪ್ಪಿಸಲು) ಪ್ರಯಾಣ ಬೆಳೆಸುವ ಒಂದು ನವೀನ ಹಾದಿಯು ಉಂಟಾಗಿರುತ್ತದೆ. ಇದೇ ರೀತಿಯಲ್ಲಿ ಚಂದ್ರನ ತನಕ ಯಾಕೆ ಪ್ರಯಾಣ ಮಾಡಬಾರದು? ಇಷ್ಟು ಕಾರ್ಯ ನಡೆಯಿಸಿದ ಪ್ರೊಫೆಸರರು ಈ ಪ್ರಯತ್ನಗಳನ್ನು ಮಾಡದೆ ಇರರು.

ಸ್ಟೇಟೋಸ್ಫಿಯರ್ ಸಂಚಾರಕ್ಕೆ ಹೋಗಿದ ಪ್ರೊಫೆಸರ್ ಪಿಕಾರ್ಡರೂ ಅವರ ಬೆಲೂನೂ.

ನೋಟೀಸು.

ಎಂಪಾಯರ್ ಒಫ್ ಇಂಡಿಯಾ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

ಈ ಕಂಪೆನಿಯವರು ಈ ಮೂಲಕ ತಿಳಿಯಪಡಿಸುವುದೇನೆಂದರೆ:—ಪೊಲೀಸಿ ನಂಬ್ರ ೬೭೪೦೬ನೇ ಬಿ. ಸೇಸು ಸೆಟ್ಟಿಗಾರನೆಂಬವನು ಮೃತಪಟ್ಟಿರುವ ಕಾರಣ ಆ ಪೊಲೀಸಿಯ ಬೋನಸನ್ನು ಅವನ ಬಾಧ್ಯಸ್ಥರಿಗೆ ಕೊಡುವುದಾಗಿ ನಿಶ್ಚಯಿಸಿದ್ದೇವೆ. ಇದನ್ನು ಆಕ್ಷೇಪಿಸುವವರು ಈ ತಾರೀಕಿನಿಂದ ಒಂದು ತಿಂಗಳ ಒಳಗೆ ನಮಗಿದನ್ನು ಸೂಚಿಸತಕ್ಕದ್ದು.

ಬೊಂಬಾಯಿ, ತಾ. 16-2-36 | ALLUM BHARUCHA, MANAGERS.

ಇಂಡಿಯನ್ ಎಂಪಾಯರ್ ಪ್ರದರ್ಶನ, ಬೆಂಗಳೂರು ಸಿಟಿ.

ಬರುವ ಎಪ್ರಿಲ್ ತಾ. 10ರಿಂದ 25ರ ವರೆಗೆ

ಎಲ್ಲರೂ ನಮ್ಮೊಡನೆ ಸಹಕರಿಸುವದಾಗಿ ಕೋರಿಕೆ.

ನೀವು ಇದರಲ್ಲಿ ಹೇಗೆ ಭಾಗವಹಿಸಬಹುದು?

ನಿಮ್ಮ ಸಾಮಾನುಗಳನ್ನು ತಂದು ನಮ್ಮ ಪ್ರದರ್ಶನವನ್ನು ಯಶಸ್ವಿಯನ್ನಾಗಿ ಮಾಡಬಹುದು.

ಆಗ ನಡೆಯುವ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬರಬಹುದು.

ಆಗ ಜರಗಲಿರುವ ಪಂದ್ಯಾಟಗಳಲ್ಲಿ ಸೇರಿ ನಮ್ಮ ಕಾರ್ಯವನ್ನು ಚಂದಗಾಣಿಸಬಹುದು.

ಎಲ್ಲಾ ವಿಷಯಗಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ:—

ಕಾರ್ಯದರ್ಶಿ, ನಂ. 1 ಆಲ್ಬರ್ಟ ವಿಕ್ಟರ್ ರೋಡ್, ಬೆಂಗಳೂರು. ಸಿಟಿ.

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಅಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ರ"ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮಹಾತ್ಮಾಜಿಯವರ ಹಿರಿಯ ಪುತ್ರರು ಕ್ರೈಸ್ತಮತಾವಲಂಭಿಗಳಾಗುವರು!

ಹರಿಜನರಿಗೆ ಮಂತ್ರದೀಕ್ಷೆಯನ್ನು ಕೊಡಲಾಗುವುದು.

ಇನ್ನೊಂದು ಭೂಕಂಪದ ಭೀತಿ. ನಮ್ಮ ಎಸೆಂಬ್ಲಿ. ೧೯ ಜನರು ಭಸ್ಮರಾದರು!

ಹರಿಜನರಿಗೆ ಮಂತ್ರದೀಕ್ಷೆ ಕೊಡಲಾಗುವುದು.

ಮಹಾಶಿವರಾತ್ರಿ ಎಂಬುದು ಹಿಂದೂಗಳ ಅತ್ಯಂತ ಪವಿತ್ರವಾದ ಹಬ್ಬವು. ಮುಂದಿನ ವರ್ಷದಲ್ಲಿ ಮಂಗಳವುಂಟಾಗುವಂತೆಯೂ ಗತವರ್ಷದ ಪಾಪಕರ್ಮಗಳಿಂದ ನಿರ್ಮಲರಾಗಲು ಹಿಂದೂಗಳಿಂದ ಈ ಹಬ್ಬವು ಭಕ್ತಿಪೂರ್ವಕವಾಗಿ ಆಚರಿಸಲಾಗುತ್ತದೆ. ಈ ಶ್ರೇಷ್ಠವಾದ ಹಬ್ಬದಲ್ಲಿ ಸರ್ವರೂ ಭಾಗಿಗಳಾಗುವಂತೆ ಏರ್ಪಾಡು ಮಾಡುವಂತೆ ಸನಾತನ ಧರ್ಮದವರು ನಿರ್ಧಾರಮಾಡಿರುವರು. ಹಿಂದೂಗಳಿಗೆ ಎಲ್ಲಾ ಪವಿತ್ರ ಕ್ಷೇತ್ರಗಳಲ್ಲಿ ಮಂತ್ರದೀಕ್ಷೆಯನ್ನು ಕೊಡುವ ಏರ್ಪಾಡನ್ನು ಸನಾತನಿಗಳು ಮಾಡಿರುವರು. ಈ ಮಂತ್ರದೀಕ್ಷೆಯನ್ನು ಹರಿಜನರೂ ಪಡೆಯುವಂತೆ ಅವಕಾಶ ಕೊಡುವಂತೆ ಮಾಡಿರುವರು.

ಕೌನ್ಸಿಲ್ ಆಫ್ ಸ್ಟೇಟಿನ ಚುನಾವಣೆ.

ಈ ಚುನಾವಣೆಯು ಬೇಗನೇ ನಡೆಯಲಿರುವುದು. ಕಾಂಗ್ರೆಸು ಈ ಚುನಾವಣೆಯಲ್ಲಿ ಭಾಗವಹಿಸಿ ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಆದಷ್ಟು ಸದಸ್ಯತನಗಳನ್ನು ಪಡೆಯಬೇಕಾಗಿ ನಿರ್ಧಾರಮಾಡಿರುತ್ತದೆ. ಈ ಬಗ್ಗೆ ಎಲ್ಲಾ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳಿಗೆ ಸೂಚನೆಗಳು ಬಂದಿವೆ.

ಮಹಾತ್ಮಾಜಿಯವರ ಹಿರಿಯಪುತ್ರರು ಕ್ರೈಸ್ತಮತವನ್ನು ಸೇರುವರು

ಮಹಾತ್ಮಾ ಗಾಂಧಿಯವರ ಹಿರಿಯ ಪುತ್ರ ಶ್ರೀಯುತ ಹರಿಲಾಲ ಗಾಂಧಿಯವರು ಹಿಂದೂ ಧರ್ಮವನ್ನು ತ್ಯಜಿಸಿ, ಕ್ರೈಸ್ತಮತಾವಲಂಭಿಗಳಾಗಬೇಕಾಗಿ ನಿರ್ಧಾರ ಮಾಡಿರುವರು. ಕೆಲವು ವಿಚಾರಗಳಲ್ಲಿ ತನ್ನ ತಂದೆಯವರಿಗೂ ತನಗೂ ಉಂಟಾದ ಭೇದಭಾವಗಳಿಂದಾಗಿ ಎಲ್ಲೆಲ್ಲೂ ಹಿಂದೂಗಳು ತನ್ನನ್ನು ತಿರಸ್ಕೃತಿಯಿಂದ ನೋಡುತ್ತಿದ್ದು, ತನ್ನ ಜೀವನಸಾಗಿಸಲು ಅಸಾಧ್ಯವಾದುದರಿಂದ ಇವರು ಹಿಂದೂಧರ್ಮವನ್ನು ತ್ಯಜಿಸಿ ಕ್ರೈಸ್ತಮತವನ್ನಾಚರಿಸಬೇಕೆಂದಿದ್ದಾರೆ.

ಓರ್ವ ಸ್ತ್ರೀಯ ಸಾಹಸ

ಔರಂಗಾಬಾದ ಜಿಲ್ಲೆಯ ಒಕ್ಕಗ್ರಾ ಎಂಬ ಹಳ್ಳಿಯಲ್ಲಿ ಗದ್ದೆಕೆಲಸ ಮಾಡುತ್ತಿರುವ ಓರ್ವ ಸ್ತ್ರೀಯು ಪಕ್ಕದಲ್ಲಿ ಒಂದು ಕಡೆಯಲ್ಲಿ ತನ್ನ ಮಗುವನ್ನು ಮಲಗಿಸಿದ್ದಳು. ಸ್ತ್ರೀಯು ಕೆಲಸಮಾಡುತ್ತಿರುವ ಸಮಯ, ಒಂದು ತೋಳವು ಮಗುವನ್ನು ಹಿಡಕೊಂಡು ಓಡಲು ಪ್ರಯತ್ನಮಾಡಿತು. ಇದನ್ನು ಕಂಡು ಸ್ತ್ರೀಯು ತನ್ನ ಉದ್ದವಾದ ಕತ್ತಿ ಹಿಡಿದು ತೋಳದ ಕಡೆಗೆ ಧಾವಿಸಿದಳು. ತೋಳವು ಈಕೆಯ ಮೇಲೆ ಹಾರಿತು. ಧೈರ್ಯಗುಂದದೆ ಸ್ತ್ರೀಯು ತೋಳನೊಡನೆ ಹೋರಾಡಿದಳು. ಕತ್ತಿಯ ಏಟುಗಳನ್ನು ಸಹಿಸಲಾರದೆ ಕೊನೆಗೆ ತೋಳವು ಪಲಾಯನ ಮಾಡಿತು.

ಕ್ರಿಮಿನಲ್ ಲೋ ಎಕ್ಟು ರದ್ದುಮಾಡುವ ಬಿಲು.

ಕಳೆದ ವಾರ ಎಸೆಂಬ್ಲಿ ಅಧಿವೇಶದಲ್ಲಿ ಬಿ. ದಾಸರ ಕ್ರಿಮಿನಲ್ ಲೋ ರದ್ದುಮಾಡುವ ಬಿಲು ಬಿದ್ದುಹೋಯಿತು. ಈ ಬಿಲಿನ ಎರಡನೇ ಕರ್ಲದ ಮೇಲೆ ಚರ್ಚೆ ನಡೆದು, ಕೊನೆಗೆ ಮತ ತೆಗೆಯಲಾಗಿ, ಈ ಬಿಲಿಗೆ ೬೬ ಮತಗಳೂ, ಬಿಲಿಗೆ ವಿರೋಧವಾಗಿ ೬೬ ಮತಗಳು ದೊರೆತುದರಿಂದ, ಬಿ. ದಾಸರ ಬಿಲಿನ ಎರಡನೇ ಕರ್ಲವು ಬಿದ್ದುಹೋಯಿತು. ಇದರಿಂದಾಗಿ ಬಿ. ದಾಸರ ಬಿಲೇ ಬಿದ್ದುಹೋದಂತಾಯಿತು.

ಕೋತಿಯ ಕೈಯಿಂದ ಸಾವು

ಗುಲ್ಬರ್ಗದ ಒಂದು ಹಳ್ಳಿಯಲ್ಲಿ ಒಂದು ಮನೆಯಲ್ಲಿ ತೊಟ್ಟಿಲಿನಲ್ಲಿದ್ದ ಒಂದು ಎರಡು ವರ್ಷ ಪ್ರಾಯದ ಮಗುವು 'ಲಾಂಗೂರು' ಎಂಬ ದೊಡ್ಡ ಜಾತಿಯ ಕೋತಿಯಿಂದ ೪೦ ಅಡಿ ಎತ್ತರವಿರುವ ಒಂದು ಮರದ ತುದಿಗೆ ತೆಗೆದುಕೊಂಡು ಹೋಗಲಾಗಿ, ಕೆಲವು ಹಳ್ಳಿಗರು ಗದ್ದಲವೆಬ್ಬಿಸಲು, ಕೋತಿಯು ಮಗುವನ್ನು ಕೆಳಗೆ ಹಾಕಿತು. ಮಗುವು ಕೂಡಲೇ ಮೃತವಾಗಿರುತ್ತದೆ. ಕೋತಿಯು ಮಗುವಿನಿಂದ ತೊಟ್ಟಿಲನ್ನು ಕಸಕೊಳ್ಳಲು ಬಂದಿತಂತೆ. ಮಗುವು ಇದಕ್ಕೆ ವಿರೋಧಿಸಲು ಈ ಕೋತಿಯು ಅದನ್ನೆ ಹಿಡಿದು ಮರವನ್ನು ಸೇರಿತಂತೆ.

ಪೇಮೆಂಟ್ ಆಫ್ ವೇಜಸ್ ಬಿಲು— ಮಂಜೂರಾಯಿತು

ಎಸೆಂಬ್ಲಿಯಲ್ಲಿ, ಮಜೂರರ ಸಂಬಳದ ಕುರಿತು ಕೆಲ ಕ್ರಮಗಳನ್ನು ತರುವ ಶ್ರೀ ಮೋದಿಯವರ ಬಿಲು ಇನ್ನೂ ಭಾರಿ ಚರ್ಚೆಗೊಳಪಟ್ಟು ಕೊನೆಗೆ ಮಂಜೂರಾಗಿರುತ್ತದೆ. ಅನಂತರ, ಇಟಲಿಯ ಮೇಲೆ ಸೇಂಕ್ಷನುಗಳನ್ನು ತಂದ ಬಿಲು ಮುಂದೆ ಬಂತು. ಶ್ರೀ ಸತ್ಯಮೂರ್ತಿಯವರು ಈ ವಿಚಾರ ತಾವು ಇಟಲಿಯವರ ಮೇಲೆ ಕನಿಕರಪಡುತ್ತಿದ್ದರೂ ಬ್ರಿಟಿಷ ಸಾಮ್ರಾಜ್ಯಶಾಹಿಯು ಯುದ್ಧಕ್ಕೆ ಒಂದು ಕಾರಣವಾಗಿದೆಯೆಂದೂ ಅದ್ದರಿಂದ ತಾನು ಬಿಲನ್ನು ವಿರೋಧಿಸುತ್ತೇನೆಂದು ಭಾಷಣಮಾಡಿದರು. ಚರ್ಚೆಯು ಮುಂದುವರಿಯುವುದು.

ಲಾಹೋರಿನಲ್ಲಿ ಒಬ್ಬ ಅರಬಿಯ ವ್ಯಕ್ತಿ.

ನಾಣ್ಯಗಳನ್ನು ತಯಾರಿಸಿದುದಕ್ಕಾಗಿ ದಸ್ತಗಿರಿಗೊಳಗಾದ ಓರ್ವ ಅರಬನು ಸಿರಿಯಾದಿಂದ ಲಾಹೋರಿಗೆ ಬಂದಿರುವನು. ಈತನು ಕಳೆದ ಮಹಾಯುದ್ಧದಲ್ಲಿ ಒಬ್ಬ ಸೈನಿಕನಾಗಿದ್ದನು. ತರತರದ ಕ್ರಿಮಿನಲ್ ಅಪರಾಧಗಳಲ್ಲಿ ಸಿಲುಕಿ, ಸಜೆ ವಿಧಿಸಲ್ಪಡುವ ಸಮಯಕ್ಕೆ ತಪ್ಪಿಸಿ ಇಂದಿಗೆ ಅನೇಕ ವರ್ಷಗಳಿಂದ ದೇಶಾಟನ ಮಾಡುತ್ತಿದ್ದನು. ಇವನು ಒಂಟೂದೇಶಕ್ಕೆ ಚೀನಾದಿಂದ ಬಂದಿರುವನು. ಲಾಹೋರಿನಲ್ಲಿ ವೇಷಬದಲಾಯಿಸಿ ಓರ್ವ ಭಾರತೀಯನಂತೆ ಸಂಚರಣೆ ಮಾಡುತ್ತಿದ್ದನು. ಇವನ ಈ ಗುಟ್ಟು ಕೆಲವು ಪೋಲೀಸರಿಗೆ ಸಿಗಲು, ಇವನನ್ನು ಹಿಡಿಯುವ ಪ್ರಯತ್ನಗಳು ನಡೆದುವು. ಆದರೆ ಇವನು ಅವರಿಂದ ತಪ್ಪಿಸಿ ಪಲಾಯನಮಾಡಿರುವನು.

ಹರಿಜನರಿಗೆ ನಿಲಯಗಳು.

ಕಲ್ಕತ್ತಾ ನಗರಸಭೆಯವರು ಅಲ್ಲಿಯ ಹರಿಜನರಿಗೆ ಮನೆಗಳನ್ನು ಕಟ್ಟಿಸುವುದಕ್ಕಾಗಿ ರೂ. ೨ ಲಕ್ಷ,೦೦೦ವನ್ನು ಸೇಂಕ್ಷನು ಮಾಡಿರುವರು (ರೂ ೯೬ ೦೦೦ ನೆಲ ರೂ ೧೫೬ ೦೦೦ ನಿಲಯಗಳ ನಿರ್ಮಾಣಕ್ಕೆ)

15 ವರ್ಷ ವಯಸ್ಸಿನ ಹುಡುಗನ ಸಾಹಸ

ಹೈದರಾಬಾದಿನ ಒಂದು ಹಳ್ಳಿಯಲ್ಲಿ ಒಂದು ಹುಲಿಯು ಜನರಿಗೆ ಬಹಳ ಬಾಧೆಯನ್ನು ಕೊಡುತ್ತಿತ್ತು. ಈ ಹುಲಿಗೆ ಮನುಷ್ಯನ ರಕ್ತದ ರುಚಿಯುಂಟಾದುದರಿಂದ ಅನೇಕರು ಇದರ ಬಾಯಿಗೆ ತುತ್ತಾಗಿ ಮೃತ್ಯುವನ್ನೂ ಹಾನಿಯನ್ನೂ ಪಡೆದಿದ್ದರು. ಹಳ್ಳಿಗರು ಹತಾಶರಾಗಿದ್ದರು. ಇದನ್ನು ಕಂಡು ಓರ್ವ ೧೫ ವರ್ಷ ಪ್ರಾಯದ ಸಿಖ್ಖ ಹುಡುಗನು ಆ ಹುಲಿಯನ್ನು ಹಿಡಿಯಲು ಒಂದು ಉರುಲು ಇಟ್ಟನು. ಮರುದಿನ ಆ ಹುಲಿಯು ಆ ಉರುಲಿನೊಳಗೆ ಸಿಲುಕಿತು. ಹಳ್ಳಿಗರು ಒಟ್ಟುಗೂಡಿ ಅದನ್ನು ಕೊಂದರು. ಹುಡುಗನಿಗೆ ಬಹುಮಾನವು ಬಂದಿರುತ್ತದೆ.

ಇನ್ನೊಂದು ಭೂಕಂಪದ ಭೀತಿ!

ಕಳೆದ ಭಯಂಕರ ಭೂಕಂಪಕ್ಕೆ ಒಳಗಾದ ಬಿಹಾರ್, ಪಾಟ್ನಾ ಮೊದಲಾದ ಸ್ಥಳಗಳಲ್ಲಿ ಜೊನ್ನೆ ಭೂಮಿಯು ಸ್ವಲ್ಪ ಕಂಪಿಸಿತು. ಅಲ್ಲದೆ, ಅಲ್ಲಿ ಇನ್ನೊಂದು ಮಹಾ ಭೂಕಂಪವುಂಟಾಗುವುದೆಂದು ಯಾರೋ ಭವಿಷ್ಯವಾಗಿ ಹೇಳಿದುದರಿಂದ ಅಲ್ಲಿಯ ನಿವಾಸಿಗಳು ತಮ್ಮ ಮನೆಗಳನ್ನು ತ್ಯಜಿಸಿ, ರಾತ್ರಿ ಸಮಯವನ್ನೂ ಹಗಲುಸಮಯವನ್ನೂ ಮೈದಾನು ಸ್ಥಳಗಳಲ್ಲಿ ಡೇರೆಗಳಡಿಯಲ್ಲಿ ಕಳೆಯುತ್ತಿದ್ದಾರೆ. ಭೂಕಂಪನವು ಕಲ್ಕತ್ತಾದಲ್ಲೂ ಕಾಶಿಯಲ್ಲೂ ಸ್ವಲ್ಪ ಗೋಚರವಾದುದರಿಂದ ಇಲ್ಲಿನ ನಿವಾಸಿಗಳೂ ಕೂಡಾ ಭೀತಿಯುಕ್ತರಾಗಿರುವರು.

ಯುನೈಟೆಡ್ ಸ್ಟೇಟ್ಸಿನ ಅಧ್ಯಕ್ಷತನ.

ಇದರ ಚುನಾವಣೆಯು ಬರುವ ಎಪ್ರಿಲ್ ತಾರೀಖು ೧೪ರಲ್ಲಿ ನಡೆಯುವುದು. ಪ್ರೆಸಿಡೆಂಟ್ ರೂಸ್‌ವೆಲ್ಟರು ಮತ್ತೊಮ್ಮೆ ಈ ಸ್ಥಾನಕ್ಕೆ ಸ್ಪರ್ಧಿಸುವರೆಂದು ತಿಳಿದು ಬರುತ್ತದೆ.

ಸ್ವಿಜರ್‌ಲೆಂಡಿನ ನಾಜಿನಾಯಕರನ್ನು ಕೊಲೆಮಾಡಿದರು.

ಕಳೆದ ವಾರ ಯಾರೋ ಶಾಜಿಪಂಗಡದವರು ಸ್ವಿಜರ್‌ಲೇಂಡಿನ ನಾಜಿನಾಯಕರಾದ ಹರ್ ಗುಸ್ಟ್‌ಲೋಫರನ್ನು ಕೊಲೆಮಾಡಿದರು. ಈ ಕುರಿತು ಜರ್ಮನ್ ಸರಕಾರವು ತನ್ನ ಪ್ರತಿಕೂಲಿಗಳನ್ನು ಸ್ವಿಸ್ ಸರಕಾರಕ್ಕೆ ಕಳುಹಿಸಿರುತ್ತದೆ. ಈ ಕೊಲೆಯಲ್ಲಿ ಕೊಮ್ಯೂನಿಸ್ಟರಿಗೂ ಸೋಶಲಿಸ್ಟರಿಗೂ ಕೈಗಳಿದ್ದವೆಂದು ಜರ್ಮನಿ ಸರಕಾರದ ಅಭಿಪ್ರಾಯ. ಈ ಕುರಿತು ವಿಚಾರಣೆ ಮತ್ತು ಶೋಧ ನಡೆಯಿಸಬೇಕೆಂದು ಜರ್ಮನಿ ಸರಕಾರದ ವಿನಂತಿ.

ಮಹಾತ್ಮಾಗಾಂಧಿಯವರ ಆರೋಗ್ಯ

ಮಹಾತ್ಮಾಗಾಂಧಿಯವರ ಆರೋಗ್ಯವು ಸಹಜಸ್ಥಿತಿಗೆ ಬಂದಿರುತ್ತದೆ. ಇವರು ತನ್ನ ನಿತ್ಯದ ಕಾರ್ಯಕ್ರಮಗಳನ್ನು ನಡೆಯಿಸಬಹುದೆಂದು ಡಾಕ್ಟರರು ಅಭಿಪ್ರಾಯಪಟ್ಟಿರುತ್ತಾರೆ. ಸದ್ಯದಲ್ಲೇ ವಾರ್ಧಾಕ್ಕೆ ಪ್ರಯಾಣ ಮಾಡುವರು. ಪ್ರಯಾಣದಿಂದ ವಿಶೇಷ ಆಯಾಸವು ಒದಗದಂತೆ ಕೆಲವು ಕಡೆಗಳಲ್ಲಿ ನಿಂತು ವಿಶ್ರಾಂತಿ ಪಡೆದು ಪ್ರಯಾಣಮಾಡುವರಾಗಿ ತಿಳಿದುಬರುತ್ತದೆ. ಬೇಗನೇ ಯೂರೋಪ್ಯಾದಿಂದ ಕಾಂಗ್ರೆಸ್ ಕಾರ್ಯನಿಮಿತ್ತ ಬರಲಿರುವ ಶ್ರೀ ಜವಾಹರಲಾಲರನ್ನು ಭೇಟಿಯ ದಿಲ್ಲಿಗೆ ತೆರಳುವರು.

ಲಕ್ನೋ ಕಾಂಗ್ರೆಸ್ಸು

ಅಧಿವೇಶನ ಕಾರ್ಯಕ್ಕೆ ಸಿದ್ಧತೆಗಳು ಬಹಳ ಬಿರುಸಾಗಿ ನಡೆಯುತ್ತಿವೆ. ಈ ಕಾರ್ಯಕ್ಕೆ ಬೇಕಾಗುವ ದ್ರವ್ಯವನ್ನು ಕೂಡಿಸಲು ಅನೇಕರು ಸಂಯುಕ್ತಪ್ರಾಂತ್ಯವನ್ನು ಸಂಚರಿಸುತ್ತಿದ್ದಾರೆ.

ಶಾಹಿದ್‌ಗಂಜ್ ಗಲಭೆ

ಲಾಹೋರಿನ ಶಾಹಿದ್‌ಗಂಜ್ ವಾದವನ್ನು ಶಾಂತರೀತಿಯಲ್ಲಿ ಕೊನೆಗೊಳಿಸುವ ಕಾರ್ಯವನ್ನು ಶ್ರೀ ಜಿನ್ನಾರವರು ಕೈಗೊಂಡಿರುವರು. ಇವರು ಈ ಕಾರ್ಯನಿಮಿತ್ತ ಲಾಹೋರಿಗೆ ತೆರಳುವರು. ಇವರು ಅಲ್ಲಿಗೆ ಬರುವ ವರೆಗೆ ಮುಸ್ಲಿಮರು ತಮ್ಮ ಚಳವಳವನ್ನು ನಿಲ್ಲಿಸಬೇಕಾಗಿ ಕೆಲವು ಮುಸ್ಲಿಂ ಮುಖಂಡರು ಸಾರಿರುವರು. ಶ್ರೀ ಜಿನ್ನಾರವರು ಈ ಕಠಿಣಸಿವಾದದ ಕಾರ್ಯದಲ್ಲಿ ಜಯಶೀಲರಾಗುವರೆಂದು ಎಲ್ಲರಿಗೂ ಭರವಸೆ ಇದೆ.

19 ಮಂದಿಗಳು ಭಸ್ಮರಾದರು!

ನ್ಯೂಯೋರ್ಕಿನ ಒಂದು ಹೋಟೇಲಿನಲ್ಲಿ ಭಯಂಕರ ಬೆಂಕಿಯುಂಟಾಗಿ, ಅನೇಕ ಅನಾಹುತಗಳು ಉಂಟಾಗಿವೆ. ೧೯ ಮಂದಿಗಳು ಬೆಂಕಿಗೆ ಆಹುತಿಯಾಗಿ ಮೃತರಾಗಿರುವರು. ೫೦ ಮಂದಿಗಳು ವಿಶೇಷ ತರದ ಹಾನಿಯನ್ನು ಹೊಂದಿರುವರು. ಹೋಟೇಲಿನ ಕಟ್ಟಡವು ಸಂಪೂರ್ಣವಾಗಿ ಸುಟ್ಟುಹೋಗಿರುತ್ತದೆ.

ಬ್ರಿಟಿಷರು ಯುದ್ಧವನ್ನು ನಿಲ್ಲಿಸಬೇಕು!

ಯುದ್ಧವು ಒಂದು ಭಯಂಕರ ವ್ಯಾಧಿಯು. ಇದರಿಂದ ಅನಾವಶ್ಯಕವಾಗಿ ಧಾರಾಳ ದ್ರವ್ಯವೂ ಜೀವಗಳೂ ನಷ್ಟವಾಗುವವು. ಇಡೀ ಪ್ರಪಂಚವು ಸಂಕಷ್ಟಗಳಿಗೆ ಒಳಗಾಗುವುದು. ಆದುದರಿಂದ ಮುಂದಕ್ಕೆ ಯಾವುದೇ ಯುದ್ಧಗಳು ನಡೆಯದಂತೆ, ಎಲ್ಲಾ ಜನಾಂಗಗಳಲ್ಲಿ ಪರಸ್ಪರ ಮೈತ್ರಿ ಮತ್ತು ಎಲ್ಲರೂ ಪರಸ್ಪರ ಹಿತಸಾಧಿಸುವಂತಾಗಲು, ಈ ಯುದ್ಧಕ್ಕೆ ಮುಖ್ಯ ಕಾರಣಗಳಾಗಿರುವ ವಿವಿಧ ಜನಾಂಗಗಳ ಸಾಂಪತ್ತಿಕ ದುರ್ಗತಿಯನ್ನು ನಿವಾರಣೆಗೊಳಿಸಲು, ಒಂದು ಅಂತರ್ರಾಷ್ಟ್ರೀಯ ಸಭೆಯನ್ನು ಬ್ರಿಟಿಷ ಸರಕಾರವು ಕರೆಯಬೇಕೆಂದು ಮಿ। ಲಾನ್ಸ್‌ಬರಿಯವರು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಒಂದು ಠರಾವನ್ನು ತಂದಿದ್ದರು. ಆದರೆ ಈ ಠರಾವು ಬಿದ್ದುಹೋಗಿರುತ್ತದೆ. ಆದರೆ ಬ್ರಿಟಿಷರು ಪ್ರಪಂಚದ ಶಾಂತಿಭಂಗವಾಗದಂತೆ ಸಾಧಿಸಬೇಕಾಗಿ ಒಂದು ಠರಾವು ಮಂಜೂರಾಗಿರುತ್ತದೆ.

ವಿದ್ಯಾರ್ಥಿನಿಗಳು ಪ್ರಾಣತ್ಯಾಗ ಮಾಡಿದರು.

ಕಲ್ಕತ್ತಾದಲ್ಲಿ ಇಬ್ಬರು ವಿದ್ಯಾರ್ಥಿನಿಯರು, ಬರುವ ಸರಕಾರಿ ಪರೀಕ್ಷೆಗಾಗಿ ತಮ್ಮ ಸಿದ್ಧತೆಗಳು ಪೂರ್ಣಗೊಳ್ಳಲಿಲ್ಲವೆಂದು ಪೊಟೇಶಿಯಂ ಸಾಯನ್ನಾಯ್ಡ್ ಎಂಬ ಭಯಂಕರ ವಿಷವನ್ನು ಸೇವಿಸಿ ಪ್ರಾಣತ್ಯಾಗಮಾಡಿರುವರು. ಈ ವಿದ್ಯಾರ್ಥಿನಿಯರು ಇಂಟರ್ಮೀಡಿಯೇಟ್ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅವರ ಶವಗಳು ಅವರಲ್ಲೊಬ್ಬಳ ತಂದೆಯ ಮನೆಯಲ್ಲಿ ದೊರಕಿರುವವು. ಅವರು ಬರೆದಿಟ್ಟಿದ್ದ ಒಂದು ಪತ್ರವು ಸಿಕ್ಕಿರುತ್ತದೆ.

ಮಾರ್ಗದಲ್ಲಿ ವಿಮಾನದ ಅಪಘಾತ

ಜರ್ಮನಿಯ ಮ್ಯೂನಿಚ್ ಎಂಬಲ್ಲಿ ಗಗನದಲ್ಲಿ ಹಾರಾಡುತ್ತಿರುವ ಒಂದು ವಿಮಾನವು ಅಕಸ್ಮಾತ್ತಾಗಿ ಅಲ್ಲಿನ ಒಂದು ಮಾರ್ಗದ ಮೇಲೆ ಬಿದ್ದು ಮೂವರನ್ನು ಕೊಲೆಮಾಡಿರುತ್ತದೆ. ಅನೇಕರಿಗೆ ವಿಶೇಷ ತರದ ಹಾನಿಯು ಉಂಟಾಗಿರುತ್ತದೆ. ಆಕಾಶದಲ್ಲಿ ಮೋಡಗಳು ಕವಿತ್ತುದರಿಂದ ಸರಿಯಾಗಿ ದಾರಿಕಾಣದೆ ಆ ವಿಮಾನಕ್ಕೆ ಈ ಗತಿಯು ಪರಿಣಮಿಸಿತೆಂದು ತಿಳಿದು ಬರುತ್ತದೆ.

ವಿದ್ಯಾಭ್ಯಾಸವೂ ಮಾತೃಭಾಷೆಯೂ

ಭರತಖಂಡದ ಸಮಸ್ತ ಜನಸ್ತೋಮವು ವಿದ್ಯಾವಂತರಾಗುವಂತೆ ಅವರ ವಿದ್ಯಾಭ್ಯಾಸವು ಅವರವರ ಮಾತೃಭಾಷೆಯಲ್ಲಿ ನಡೆಯತಕ್ಕದೆಂದು ಶ್ರೀ ರವೀಂದ್ರನಾಥ ಠಾಕೂರರು ಕಲ್ಕತ್ತಾದಲ್ಲಿ ನಡೆದ ಬಂಗಾಳದ ವಿದ್ಯಾಸಪ್ತಾಹದ ಸಮಾರಂಭದಲ್ಲಿ ಭಾಷಣಮಾಡಿದರು. ಭಾರತೀಯರ ಸಾಂಪತ್ತಿಕ ಬಡತನವು ದುಃಖಕರವು. ಆದರೆ ಅವರ ಈಗಿನ ವಿದ್ಯಾಭ್ಯಾಸಕ್ರಮವು ಅವಮಾನದ ಸಂಗತಿಯಾಗಿರುತ್ತದೆ. ಅವರ ವಿದ್ಯಾಭ್ಯಾಸ ಕ್ರಮವು ಸಹಜವಾದುದಲ್ಲ. ಅವರ ಜೀವಮಾನಕ್ಕೂ ವಿದ್ಯಾಭ್ಯಾಸಕ್ಕೂ ಯಾವತರದ ಸಂಬಂಧವಿರುವುದಿಲ್ಲ. ಅವರ ವಿದ್ಯಾಭ್ಯಾಸವು ಅನ್ಯವಾದ ರೀತಿಯಲ್ಲಿ ನಡೆಯುತ್ತಿದೆ. ಇದು ಒಂದು ಕಲ್ಪಿತ ವಿದ್ಯಾಭ್ಯಾಸವಾಗಿರುತ್ತದೆ. ಇದರಿಂದಾಗಿ ಅವರ ಮಾನಸಶಕ್ತಿಯು ಕುಂದುತ್ತಾ ಬರುತ್ತಿದೆ. ಭಾರತೀಯರಲ್ಲಿ ಸೇಕಡಾ ೯೦ ಸಹ ಮಾತ್ರ ವಿದ್ಯಾವಂತರು. ಸಮಸ್ತ ಜನಾಂಗವು ವಿದ್ಯಾವಂತರಾಗಬೇಕು. ಹಾಗಾಗಲು ವಿದ್ಯಾಭ್ಯಾಸದಲ್ಲಿ ಹೆಚ್ಚಾಗಿ ಮಾತೃಭಾಷೆಯ ಉಪಯೋಗವಾಗಬೇಕು ಎಂಬುದು ಕವಿ ರವೀಂದ್ರರ ಅಭಿಪ್ರಾಯ.

ಕೆನರಾ ಕುಲಾಲರ ಸುಧಾರಕ ಸಂಘ, ಮುಂಬಾಯಿ.

ಮುಂಬಾಯಿಯಲ್ಲಿರುವ ಈ ಮೇಲಿನ ಸಂಘದ ೬ನೇ ವಾರ್ಷಿಕೋತ್ಸವವು ಇದೇ ತಾ. ೨ರಲ್ಲಿ ಮಧ್ಯಾಹ್ನ ಗಂಟೆ ೩ಕ್ಕೆ ಫೋರ್ಟ್ ಆರ್ಯಸಮಾಜದ ಕಾರ್ಯದರ್ಶಿಗಳಾದ ಶ್ರೀ ಎಂ ಚಂದ್ರೇಶ್ವರ ಸನ್ನ್ಯಾಸಿ ಅಧ್ಯಕ್ಷತೆಯಲ್ಲಿ ಫೋರ್ಟಿನಲ್ಲಿರುವ ಬೊಂಬೇ ಹಾಸ್ಟೆಲಿನ ೬ನೇ ಮಾಳಿಗೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು.

ಶರೀರ ಮರ್ಮಶಾಸ್ತ್ರ.



ಇದರಲ್ಲಿ ಅನೇಕ ಜಾತಿ ಸ್ತ್ರೀಯರ ಲಕ್ಷಣದ ವರ್ಣನೆಗಳೂ ಗರ್ಭದಾನ ಸಂತಾನನಿರೋಧ, ಅತಿಸಂಭೋಗದಿಂದಾಗುವ ಹಾನಿ, ಸಂಭೋಗದಲ್ಲಿ ದೃಷ್ಟಿ ನಷ್ಟ, ಗರ್ಭಚಿನ್ಹೆ, ಗರ್ಭಾಭಿವೃದ್ಧಿ ರೋಗ, ಶಿಶು ಉತ್ಪತ್ತಿ ವಿಧ, ಸ್ತ್ರೀಯರ ಜನನೇಂದ್ರಿಯ ವರ್ಣನೆ, ಇವಲ್ಲದೆ ಇನ್ನು ಸ್ತ್ರೀಪುರುಷರಿಗೆ ಬೇಕಾದ ಅನೇಕ ತರದ ಗುಪ್ತ ರಹಸ್ಯಗಳನ್ನು ೬೪ ಚಿತ್ರಪಟಗಳೊಡನೆ ೧೬೦ ಪುಟಗಳಲ್ಲಿ ಕನ್ನಡದಲ್ಲಿ ವಿವರಿಸಿ ಬರೆದಿದೆ. ಬೆಲೆ ೧ಕ್ಕೆ ರೂ. ೧, ಟ ೪ ಬೇರೆ.

ಇನ್ನಿತರ ಗ್ರಂಥಗಳು ಸ್ತ್ರೀಗಾರಿಕೆಯ ಮರ್ಮಶಾಸ್ತ್ರ ರೂ. ೧ ಶಾಕಶಾಸ್ತ್ರ ೦—೬—೦, ಗೃಹಸ್ಥಾಶ್ರಮ ರಹಸ್ಯ ೦—೮—೦, ರತಿಮನ್ಮಥ ರಹಸ್ಯ ೦—೧೨—೦,

ವಿಳಾಸ:—ಕರ್ನಾಟಕ ಏಜನ್ಸಿ,
ಕೃಷ್ಣಪ್ಪನಾಯಕನ ಛಲಿ, ತ, ೮ ಮದರಾಸು.

ಅನುಕ್ರಮಣಿಕೆ

ಟಿಪ್ಪಣಿಗಳು ... ೨
ಸಂಯುಕ್ತ ಅಮೇರಿಕದ ಅಧ್ಯಕ್ಷ ರೂಸವೆಲ್ಟರಸ್ಸು ... ೩
ಜೇನಾ ಮರ್ಳಿನ ದಾಂಪತ್ಯ ... ೫
ಅಗಾಖಾನರ ಭಾಷಣ ... ೬
ಅಂಧ್ರರನ್ನು ಸೇರಲು ಸಾಧ್ಯವಾಗುವುದೇ? ... ೫
ವಿವಿಧ ಸಮಾಚಾರಗಳು ... ೯

ಅಗ್ರಲೇಖ
ಸಂಗೀತ ... ೧೦
ಮಂಗಳೂರು, ತಾಲೂಕುಗಳಿಂದ ... ೧೧
ಸ್ವುಟವಿಚಾರಗಳು ... ೧೧

ವರ್ತಮಾನ ಸಂಗ್ರಹ
ಅಮೇರಿಕಾದ ಅಡಿಯಲ್ಲಿ ಫಿಲಿಪ್ಪೈನ್ ದ್ವೀಪಗಳು ಅನುಭವಿಸಿದ ಫಲಗಳು ೧೨
ವರ್ತಕ ವಿಭಾಗ ... ೧೩
ನಿಮಗೆ ತಿಳಿದಿರುವುದೇ? ... ೧೪

ಸ್ವದೇಶಾಭಿಮಾನಿ.

ತಾ.೨೧ನೇ ಶುಕ್ರವಾರ ಫೆಬ್ರವರಿ ೧೯೩೬

ಸಂಗೀತ

ಗಾಯನ ಮತ್ತು ನರ್ತನ ಇವೆರಡರ ಕಡೆಗೆ, ಧ್ವನಿಚಿತ್ರಗಳೂ ರೇಡಿಯೋ ಪ್ರಚಾರವೂ ನಮ್ಮ ಮನಸ್ಸನ್ನು ಧಾರಾಳವಾಗಿ ಸೆಳೆದಿವೆ. ವಿಶ್ವ ವಿದ್ಯಾಲಯಗಳೂ ಮಹಿಳಾ ಸಭೆಗಳೂ ಸಂಗೀತೋತ್ಸವಗಳೂ ಇವೆರಡು ಕಲೆಗಳಿಗೆ ಬಹಳವಾಗಿ ಪ್ರೋತ್ಸಾಹ ಕೊಡುತ್ತ ಬರುತ್ತಿವೆ. ಮದ್ರಾಸಿನಲ್ಲಿ ಅಖಿಳಭಾರತ ಪರಿಷತ್ತೂ, ಮುಂಬಾಯಿಯಲ್ಲಿ ಹಿಂದೂಸ್ಥಾನಿ ಸಂಗೀತ ಪರಿಷತ್ತೂ ಮತ್ತಿತರ ಸಂಗೀತ ಪರಿಷತ್ತುಗಳೂ ಸೇರಿವೆ. ಇವೆಲ್ಲವುಗಳಲ್ಲಿ ಮುಖ್ಯವಾಗಿ, ಜನತೆಗೆ ತಿಳಿದು ಬರಬೇಕಾಗಿರುವ ವಿಚಾರಗಳಾವುವು? ಕೆಲವನ್ನು ಕುರಿತು, ಅವು ಸುಧಾರಿತ ಸಮಾಜದ ಜೀವನಕ್ಕೆ ಅತ್ಯಾವಶ್ಯಕವಾಗಿರುವ ಪ್ರಯುಕ್ತ, ನಾಲ್ಕು ಮಾತುಗಳಲ್ಲಿ ಬರೆವೆವು.

ಹಿಂದುಸ್ಥಾನೀ ಅಥವಾ ಕರ್ಣಾಟಕೀ ಪದ್ಧತಿಯ ಮಾತು ಹಾಗಿರಲಿ, ಪ್ರತಿಯೊಂದು ಪ್ರಾಂತ್ಯವೂ ಪ್ರಾಂತ್ಯವಾಸಿಯರೂ ತಮ್ಮ ಸಂಸ್ಕೃತಿಗೆ ತಕ್ಕಂತೆ ಸಂಗೀತದಲ್ಲಿ ಮಾರ್ಪಾಟುಗಳನ್ನು ಮಾಡುವುದು ಸ್ವಾಭಾವಿಕವಾಗಿದೆಯಾದರೂ, ಮೂಲದಲ್ಲಿ ಸಂಗೀತ ಶಾಸ್ತ್ರದ ತತ್ವಗಳೆಲ್ಲವೂ ಒಂದೇ ಎಂದು ಬಲ್ಲವರೆಲ್ಲರು. ಜನಪದ ಸಂಗೀತ, ಪಿಸಾತ್ರದರದಿಂದ ಕಲಿತಂತೆ ಹಾಡುವ ರೀತಿಯ ಸಂಗೀತ, ಕೃತಿಗಳು, ಯಾಂತ್ರಿಕ ಮತ್ತು ಕಂಠ ಸ್ವರದ ಸಂಗೀತ ಎಂದಿಷ್ಟೋ ಭೇದಗಳೂ ಇವೆ. ಅಲ್ಲಲ್ಲಿ ಪ್ರಚಲಿತವಾಗಿರುವ ಸಂಗೀತ ಕ್ರಮಗಳನ್ನೂ ಹಾಡುಗಳನ್ನೂ ಕೂಡಿಸುವ ಉದ್ಯಮವನ್ನು ಮಾತ್ರ, ಕೇವಲ ಇತ್ತೀಚೆಗೆ ಪ್ರಾರಂಭಿಸಿರುವುದರಿಂದ, ಇಂತಹ ಉದ್ಯಮವು ಆಗುವಷ್ಟು ತುಂಬಾ ಸಾಹಸದಿಂದ ತ್ವರೆಯಾಗಿ ಸಾಗದಿರುವಲ್ಲಿ ಎಷ್ಟೋ ಅಮೂಲ್ಯ ಪುರಾತನ ಗೀತಗಳೂ ಕ್ರಮಗಳೂ ಕಣ್ಮರೆಯಾಗಬಹುದೆಂದೂ ಊಹಿಸುವುದು ಕಷ್ಟವಾಗಿಲ್ಲ.

ಇದಕ್ಕಾಗಿ ಪ್ರಾಂತಿಕವಾಗಿಯೇ ಆದರೂ, ಕಾರ್ಯಶೀಲರು ಪ್ರವರ್ತಿಸಿದರೆ, ಸಂಗೀತದ ಪ್ರಾಚೀನ ನಿಧಿಯು ಇನ್ನೂ ಉಳಿಯುವಂತಾಗುವುದು, ಆತ್ಮೋನ್ನತಿಗೂ ಸಂಸ್ಕೃತಿಯ ಉದ್ಧಾರ ಅಭ್ಯುದಯಾದಿಗಳಿಗೂ ತೀರ ಸಹಾಯಕವಾಗಿ ಇವರೆಲ್ಲರ ಪ್ರಯತ್ನಗಳು ಸಹಕರಿಸುವಂತಾಗುವುದು.

ಕ್ರಮ, ಪದ್ಧತಿ, ರೀತಿ, ಮಾದರಿ ಇತ್ಯಾದಿಗಳಲ್ಲಿ ಪ್ರಾಚೀನರಿಂದ ದೊರೆತ ಮಾತ್ರಕ್ಕೆ, ಅವು ಪರಿಶುದ್ಧವಾಗಿವೆಯೆ ಅಥವಾ ಅವನ್ನು ತಿದ್ದಿ ಶುದ್ಧಗೊಳಿಸಿ, ವರ್ತಮಾನ ಕಾಲಕ್ಕೆ ಅನ್ವಯಿಸುವಂತೆ ಮಾಡಬೇಕಾಗಿರುವುದು ಅಗತ್ಯವೇ ಎಂಬುದನ್ನು ಸಮಿತಿಗಳ ವಿದ್ವಾಂಸರು ನಿರ್ಧರಿಸಲೇ ಬೇಕಾಗಿದೆ. ಪುರಾತನವೆಂದು ಅಚ್ಚಳಿಯದೆ ಅದನ್ನೆಲ್ಲ ಇಡುವುದು ನ್ಯಾಯವೆಂದು ಪ್ರತಿಯೊಂದು ಭಾಗದಲ್ಲೂ ಹೇಳಲಾಗುವುದಿಲ್ಲ ಎಂದೇ ಪ್ರತಿ ಪರಿಷತ್ತಿನ ಅಧ್ಯಕ್ಷರ ಸೂಚನೆಗಳಾಗಿವೆ.

ಸಂಗೀತಾಭ್ಯಾಸವು ಸರ್ವತ್ರವೂ ಹರಡಿ ಜನಜೀವನದಲ್ಲಿ ವಿನೋದಾದಿ ಆಹ್ಲಾದವನ್ನು ಉತ್ಪನ್ನಗೊಳಿಸಬೇಕಾದರೆ, — ಸುಲಭವಾಗಿ ಮನೋರಂಜಕವಾಗದಂತೆಯೂ ಸಿದ್ಧವಾಗದಂತೆಯೂ ಯಾವುದು ಅಡಕಿಸುವುದೋ ಅದನ್ನು ತಿದ್ದಲೇ ಬೇಕು, ಅಗತ್ಯವಾದಲ್ಲಿ ತಿತ್ತೊಗೆಯಲೇ ಬೇಕು ಎಂದೂ ಈ ಪರಿಷತ್ತುಗಳು ನಿರ್ಣಯಿಸಿವೆ.

ಹಳೆಯ ಹಾಡು, ರಾಗ, ಕೃತಿಗಳನ್ನು ಶೇಖರಿಸಿ, ಶುದ್ಧೀಕರಿಸಿ, ಮುದ್ರಿಸಿ, ಪ್ರಚಾರಗೊಳಿಸುವುದು ಇಂತಹ ಪರಿಷತ್ತುಗಳ ಕರ್ತವ್ಯವೆಂದೂ, ಹಾಗೆ ಮಾಡುವುದರಿಂದ, ನಮ್ಮ ಅಪೂರ್ವ ಸಂಗೀತ ಸಂಪತ್ತು ಎಷ್ಟಿದೆ ಎಂಬ ವಿಷಯವೂ ಸರ್ವರಿಗೆ ವಿದಿತವಾಗುವುವು, ಅದರಲ್ಲೂ ದೇಶಭಾಷೆಗಳಲ್ಲಿರುವ ಹಾಡುಗಳು ಅಮೂಲ್ಯವಾಗಿವೆಯಾದ ಕಾರಣ, ಅವನ್ನು ಉಳಿಸಲೇ ಬೇಕಾಗಿದೆ. ಅವುಗಳಲ್ಲಿ ಎಷ್ಟು ವೈವಿಧ್ಯ, ವಿಭಿನ್ನತೆ, ವಿಸ್ತಾರ ಇವೆ ಎಂಬುದನ್ನು ತಿಳಿದುಕೊಂಡು, ಮುಂದೆ ಸಂಗೀತ ಬೆಳವಣಿಗೆಗೆ ಹೇಗೆ ಸಾಧಿಸಬೇಕೆಂಬುದನ್ನೂ ಗೊತ್ತು ಮಾಡಲು ಅನುಕೂಲವಾಗುವುದು.

ಸಂಗೀತವನ್ನೂ ಸಾಹಿತ್ಯವನ್ನೂ ಪ್ರತ್ಯೇಕಿಸಿರುವುದರಿಂದ ಜನಾಂಗದ ಸಂಸ್ಕೃತಿಗೆ ಅಪಾರವಾದ ಹಾನಿಯಿದೆ ಎಂಬುದನ್ನು ಈ ಪರಿಷತ್ತುಗಳು ಒತ್ತಿ ಹೇಳಿವೆ. ಶಿಕ್ಷಣ ಕ್ರಮದಲ್ಲಿ ಮಾರ್ಪಾಟುಗಳಾಗುವಾಗ, ಮೂಲ ಮತ್ತು ಮಹಾಜನ ಶಿಕ್ಷಣ ಕ್ರಮಗಳಲ್ಲಿ ಇವುಗಳಿಗೆ ಸಮ್ಮಿಳಿತವಾಗಿ ಸೇರಿ, ಪ್ರಚಾರಹೊಂದಲು ತುಂಬ ಅನುಕೂಲತೆಗಳಿವೆ.

ಪಾಶ್ಚಾತ್ಯರಲ್ಲಿನ ನವೀನ ವಾದ್ಯ ಯಂತ್ರಗಳನ್ನು ನೋಡಿ, ನಮ್ಮಲ್ಲಿಯೂ ಇವುಗಳಲ್ಲಿ ಸುಧಾರಣೆ ಮಾಡಲು ಅನುಕೂಲವಿದೆ ಎಂದು ಪ್ರತ್ಯಕ್ಷ ತೋರಿಸಲು, ಮುಂಬಾಯಿ ಪರಿಷತ್ತಿನ ಅಧ್ಯಕ್ಷರು ಎರಡು ಹೊಸ ವಾದ್ಯಯಂತ್ರಗಳನ್ನು ಪ್ರದರ್ಶಿಸಿ, ಇಲ್ಲಿನ ಕೈಗಾರಿಕೆಗಳಿಗೂ ಈ ಬಗೆಯಾಗಿ ಪ್ರೋತ್ಸಾಹಕೊಡಬಹುದೆಂದೂ ಸೂಚಿಸಿರುವರು.

ಹಿಂದೀ ಸಂಗೀತದಲ್ಲಿ ರಾಗಗಳು ಆಯಾ ಋತುವಿಗೂ ದಿನದ ಆಯಾ ಮುಹೂರ್ತಕ್ಕೂ ಎಂಬಂತೆ ಅನುಸರಿಸಿ ಇವೆ, ಹೀಗಿರುವುದರಿಂದ ಅವಕಾಶ ದೊರೆತಾಗ ಯಾವುದೊಂದು ರಾಗವನ್ನು ಹಾಡುವುದು ನಿಷ್ಫಲವೆಂದು 'ರೇಡಿಯೊ' ವ್ಯವಸ್ಥಾಪಕರೂ, ಮನೋಭಾವನೆಗಳಿಗೆ ಒಪ್ಪುವಂತಹ ಬಗೆಯ ಹಾಡುಗಳನ್ನು ಕುಂಬಿಸಿ, ವಿಕಟವಾಗಿ ಪ್ರದರ್ಶಿಸದಂತೆ ಧ್ವನಿಚಿತ್ರ ಕರ್ತೃಗಳೂ ವರ್ತಿಸುವುದುತ್ತಮವೆಂದೂ ಈ ಪರಿಷತ್ತಿನ ಅಭಿಪ್ರಾಯವಾಗಿದೆ.

ಸರಕಾರವು ದೇಶೀಯ ಸಂಗೀತಕ್ಕೆ ಪ್ರೋತ್ಸಾಹ ಕೊಡಲು ಹಿಂತೆಗೆದರೆ, ಅದರಿಂದ ಅದೊಂದು ಕರ್ತವ್ಯವನ್ನೆ ಮರೆತಂತಾಗುವುದು, ದೇಶಕ್ಕೂ ಒಂದು ಹಾನಿ ಮಾಡಿದಂತಾಗುವುದು.

ಸ್ವರಲಿಪಿಯ ಕ್ರಮ ಪಾಶ್ಚಾತ್ಯರಲ್ಲಿರುವಂತೆ ನಮ್ಮಲ್ಲಿರಬೇಕೆ? ಎಂಬೊಂದು ಪ್ರಶ್ನೆಯು ತೀವ್ರ ಚರ್ಚೆಗೆ ಒಳಪಟ್ಟಿರುವುದು. ನಮ್ಮ ಗಾಯನದಲ್ಲಿನ ಸ್ವರಗಳನ್ನು ಪಾಶ್ಚಾತ್ಯ ರೀತಿಯಲ್ಲಿ ಬರೆವುದು ಸುಲಭವಾಗಿಲ್ಲ; ಬರೆದರೂ ಸುಲಭವಾಗದು.

ಸ್ಫುಟವಿಚಾರಗಳು

ಶಿಕ್ಷಣ ವಿಚಾರಗಳಲ್ಲಿ ಸ್ವರಾಜ್ಯ

ಎಂಬ ವಿಷಯದಾಗಿ, ದಕ್ಷಿಣ ಭಾರತದ ಶಿಕ್ಷಕರ ಸಂಘದ ಕಾರ್ಯದರ್ಶಿಗಳು ಈ ವರ್ಷ ಶಿಕ್ಷಕರ ತರಬೇತಿನ ಕಾಲೇಜಿನಿಂದ ಹೊರಡುವ ಉಪಾಧ್ಯಾಯರಿಗೊಂದು ಭಾಷಣ ಕೊಟ್ಟರು. ಶಿಕ್ಷಕರು ಹಂಗಾಮಿ ತಮ್ಮ ದಲ್ಲಿಯೇ ದಿನಹರಣ ಮಾಡಲಾಗುವುದಿಲ್ಲವಾದರೂ, ತಮ್ಮ ಕರ್ತವ್ಯಗಳನ್ನು ಪೂರ್ಣ ಆಸಕ್ತಿಯಿಂದ ಪೂರೈಸಿದರೆ, ತಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳುವರೆಂಬುದೂ ತಮ್ಮಲ್ಲಿ ಸಹಕಾರವು ಹೆಚ್ಚಿದಲ್ಲಿ ಐಕ್ಯದ ಫಲವಾದ ಸಂಘ ಶಕ್ತಿಯು ಹೆಚ್ಚುವುದೆಂಬುದೂ ಅವರು ತಿಳಿಯಲೇ ಬೇಕಾಗಿರುವ ವಿಷಯಗಳೆಂದು ಈ ಭಾಷಣದ ಬೋಧೆ. ಸ್ಥಳೀಯ ಬೋರ್ಡುಗಳೇ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣದ ಗೊತ್ತುಗಾರರಾಗಿರುವದರಿಂದ, ಉಪಾಧ್ಯಾಯರ ಸ್ಥಿತಿಯು ಉತ್ತಮವಾಗುವ ಸಂಭವಗಳೇನೂ ಕಾಣುವುದಿಲ್ಲ; ಆದುಕಾರಣ ಅಧಿಕಾರಿಗಳಿಂದ ತಮ್ಮ ಕೊರತೆ ಅಥವಾ ಅನ್ಯಾಯಗಳನ್ನು ಹೋಗಲಾಡಿಸಿಕೊಳ್ಳಲು ಅವರು ಚಡಪಡಿಸಬೇಕಾದುದು ಸಹಜವೇ. ಆದರೆ, ಅಧಿಕಾರಿಗಳು ಇವರ ದೂರುಗಳನ್ನು ಕೇಳುವರೆಂದಾಗಲಿ, ಕೇಳಿದಲ್ಲಿ ಅವನ್ನು ಪರಿಹರಿಸುವರೆಂದಾಗಲಿ ವಿಶ್ವಾಸದಿಂದ ಹೇಳಬರುವಂತಿಲ್ಲ, ಏಕೆಂದರೆ, ಎಲ್ಲೆಲ್ಲಿಯೂ ಅವರವರ ಪ್ರಾಬಲ್ಯ ಅವರವರ ಪಕ್ಷ ಪಂಗಡಗಳ ತಂತ್ರ, ಸ್ಪರ್ಧೆ ಇದ್ದೇ ಇವೆ. ಆದರೆ, ಉಪಾಧ್ಯಾಯರು ತಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಲೂ, ಸಮಾಜ ಸೇವೆಯನ್ನು ಹೆಚ್ಚಾಗಿ ಮಾಡುತ್ತಿರಲೂ, ತಮ್ಮೊಳಗೆ ಐಕ್ಯತಾ ಬುದ್ಧಿಯನ್ನು ಪ್ರೋತ್ಸಾಹಿಸುತ್ತಲೂ ಬಂದಂತೆ ಉಪಾಧ್ಯಾಯರ ಮಾತಿಗೆ ಬೆಲೆ ಹೆಚ್ಚಲೇ ಬೇಕಾಗುವುದು. ಯಾವ ಜನತೆಯ ನಡುವೆ ತಾನು ಇರುತ್ತೇನೆಯೋ ಅವರಿಗೆ ಸಹಾಯಕನಾಗಿ ಅವರ ಮೆಚ್ಚುಗೆ ಪಡೆದು, ತನ್ನ ಕಾರ್ಯನಿರ್ವಾಹದಲ್ಲಿ ಪ್ರವೀಣನಾಗುವ ಉಪಾಧ್ಯಾಯನನ್ನು ಹಿಂದೊತ್ತಲೂ ಅನ್ಯಾಯ ಮಾಡಲೂ ಯಾರಿಗೂ ಸುಲಭದಲ್ಲಿ ಧೈರ್ಯವು ಉಂಟಾಗಲಾರದು.

ಆಂಧ್ರ ಪ್ರಾಂತ್ಯ

ಕೂಡಲೆ ಸಿಂಧ, ಒರಿಸ್ಸಗಳಂತೆ ನವೀನವಾಗಿ ನಿರ್ಮಾಣಹೊಂದಬೇಕೆಂದು ಚಳವಳವು ಪ್ರಬಲವಾಗಿ ತೊಡಗಿದೆ. ಆಗಲಿ ಆದರೆ, ತೆಲುಗು ಭಾಷೆ ಪ್ರಚಾರದಲ್ಲಿರುವ ಎಲ್ಲ ಜಿಲ್ಲೆಗಳನ್ನು ಕೂಡಿಸಿ ಈ ಪ್ರಾಂತ್ಯವನ್ನು ರಚಿಸಬೇಕಾಗಿಯೂ ಮದ್ರಾಸು ನಗರವೇ ಅದರ ರಾಜಧಾನಿಯಾಗಬೇಕಾಗಿಯೂ ಅವರ ಇಚ್ಛೆ. ರಾಯಲಸೀಮೆಯು ಮೊದಲೇ ಸಭೆ ಕೂಡಿಸಿ, ಆಂಧ್ರ ಪ್ರಾಂತ್ಯದೊಳಗೆ ತಾನು ಸೇರದಂತೆ ನಿರ್ಧಾರ ಮಾಡಿಕೊಂಡರೂ, ಆಂಧ್ರವು ಇದನ್ನು ನುಂಗುವುದೇ ಖಂಡಿತವೆಂದು ನಿಶ್ಚಯ ನುಡಿಯುತ್ತಿದೆ. "ರಾಯಲಸೀಮೆಯು ಎಲ್ಲರೂ ಇದಕ್ಕೆ ವಿರುದ್ಧವಾಗಿಲ್ಲ. ಆಂಧ್ರರು ಅವರ ಕ್ಷಾಮಕಾಲದಲ್ಲಿ ಸಹಾಯ ಮಾಡಿಲ್ಲವೆ? ಮೊನ್ನೆ ಚುನಾವಣೆಗಳ ಕಾಲದಲ್ಲಿ ಆಂಧ್ರರೇ ಅಲ್ಲಿಗೆ ಹೋಗಿ ಅವರಿಗೆ ಬೇಕಾಗುವ ಸಹಾಯ ಮಾಡಿಲ್ಲವೆ? ಈ ಬಗೆಯ ಸಹಾಯದಿಂದಲೇ ಬಾಂಧವ್ಯವು ಬೆಳೆಯಬೇಕಲ್ಲವೆ?" ಎಂದು ಪ್ರಶ್ನೆಗಳನ್ನು ಕೇಳಿ, ಉತ್ತರ ಸರಕಾರ ಜನಾಂಗವೆಲ್ಲ, ಯಾವುದೊಂದು ಜಾತಿ, ಮತ ಇತ್ಯಾದಿ ಭೇದಗಳನ್ನು ಮರೆತು, ಅನುಭವಿಸಬಹುದಾದುದು ಸಂಗೀತವೇ ಆದುದರಿಂದ, ಈ 'ಹೃದಯದ ಭಾಷೆ'ಯ ಪ್ರಚಾರವು ಎಷ್ಟಾಗುವುದೋ ಅಷ್ಟಕ್ಕೆ ಜನಾಂಗದಲ್ಲಿ ಶಾಂತಿ ಸೋದರತೆಗಳು ಹೆಚ್ಚುವುವು ಎಂಬುದರಲ್ಲಿ ಸಂದೇಹವಿಲ್ಲ.

ಆಂಧ್ರರು ತಮ್ಮ ಶ್ರೇಷ್ಠತೆಯನ್ನು ಮರೆಯಬೇಕೆಂದೂ ಸೂಚಿಸಿ, ಈ ಚಳವಳವು ಹೊರಟಿದೆ. ರಾಯಲಸೀಮೆಗೆ ಬರಗಾಲವುಂಟಾದಾಗ ಸಹಾಯವು ಎಲ್ಲೆಲ್ಲಿಂದ ಬಂದಿದೆಯೋ ಅವರೊಡನೆ ಸೇರಲು ರಾಯಲಸೀಮೆಯು ಸಿದ್ಧವೇ? ಕಾಂಗ್ರೆಸ್ ಸಭೆಯ ದಿಗ್ವಿಜಯಕ್ಕಾಗಿ ಆಂಧ್ರ ನಾಯಕರು ಎಲ್ಲೆಲ್ಲಿ ಹೋಗಿ ಪ್ರೋತ್ಸಾಹಿಸಿರುವರೋ, ಅಲ್ಲಿನವರೆಲ್ಲರೂ ಆಂಧ್ರ ಪ್ರಾಂತ್ಯಕ್ಕೆ ಸೇರಬೇಕೆ? ಎಂಬ ಪ್ರಶ್ನೆಗಳನ್ನು ಕೇಳಿದರಾಗದೇ? ಕನ್ನಡಿಗರನ್ನು ಹೇಗೂ ನುಂಗುವಿರಾದರೂ ಇಂತಹ ಕಟ್ಟಿನಿಂದ ನುಂಗುವುದೆ? ಆಂಧ್ರಪ್ರಾಂತ್ಯವಾಗಲಿ, ಅಂಧಪ್ರಾಂತ್ಯವಾಗಬೇಕೆ?

ಹಿಂದೂ ಧರ್ಮ

ದೊಡ್ಡದು, ಸನಾತನ ಮತ, ಪ್ರಾಚೀನ ಸಾಂಪ್ರದಾಯ ಆದರೂ, ಹಿಂದೂಗಳ ಸಂಖ್ಯೆ ದಿನ ದಿನಕ್ಕೂ ಕುಂದುತ್ತ ಬರುತ್ತಿದೆ. ನಮ್ಮ ದೇಶದಲ್ಲಿರುವ ಏಳು ಕೋಟಿ ಮುಸ್ಲಿಮರು ಎಲ್ಲರೂ ಅವರಾಗಿಯೇ ಹೊರಗಿನಿಂದಲೇ ಇಲ್ಲಿಗೆ ಬಂದವರಲ್ಲ. ಪ್ರತಿ ವರ್ಷವೂ ಕ್ರಿಸ್ತಿಯರ ಸಂಖ್ಯೆಯೂ ಹೆಚ್ಚುತ್ತಲೇ ಇದೆ. ಮುಸ್ಲಿಮರೂ ಕ್ರಿಸ್ತೀಯರೂ ತಮ್ಮ ಸಮಾಜಕ್ಕೆ ಇತರ ಸಮಾಜದವರಲ್ಲಿ ಕೂಡಿಸಿಕೊಳ್ಳುತ್ತಲೇ ಇದ್ದಾರೆ. ಜಾತಿ ಹಿಂದುಗಳಿಂದ ಉತ್ತಮ ರೀತಿಯಾಗಿ ಗೌರವ ಹೊಂದದ ಅಸ್ಪೃಶ್ಯರೇ ಮೊದಲಾದವರು ಇತರ ಮತಗಳನ್ನು ಅವಲಂಬಿಸುತ್ತಿದ್ದಾರೆ. ಹಿಂದುಗಳ ಸಂಖ್ಯೆ ಉಳಿದು, ಹಿಂದುಗಳಿಗೆ ಸಂಖ್ಯೆ ಬಲದಂತೆ ಗೌರವಬಲವೂ ಉಳಿಯಬೇಕಾದರೆ, ಅಸ್ಪೃಶ್ಯತೆ ನಿವಾರಣೆ ಹೊಂದಬೇಕು, ಸಾಮಾಜಿಕ ಸ್ವಾತಂತ್ರ್ಯ ಹೇಗೆಯೋ, ರಾಜಕೀಯ ಸ್ವಾತಂತ್ರ್ಯವೂ ಅಸ್ಪೃಶ್ಯತಾ ನಿವಾರಣೆಯೇ ಅಗತ್ಯವಾಗಿದೆ. ಹಿಂದುಗಳಲ್ಲಿ ಮೇಲು-ಕೀಳು ಎನಿಸಿದವರು ಒಂದೇ ಗೂಡಿ ದೇಶಕ್ಕಾಗಿ ದುಡಿದರೆ ಹಿಂದೂಧರ್ಮವೂ ಉಳಿಯುವುದು, ಹಿಂದೂದೇಶವೂ ಉಳಿಯುವುದು.

ಕಾಂಗ್ರೆಸ್ ಪಕ್ಷವು ಅಧಿಕಾರ ಸ್ವೀಕರಿಸುವುದೇ?

ಕಾಂಗ್ರೆಸ್ ಪಾರ್ಲಿಮೆಂಟರಿ ಕಮಿಟಿಯೂ ಕಾರ್ಯಕಾರೀ ಕಮಿಟಿಯೂ ಸಮ್ಮಿಳಿತವಾಗಿ ಈ ವಿಷಯವಾಗಿ ಚರ್ಚಿಸಿ, ಈ ಪ್ರಶ್ನೆಗೆ ಒಂದು ತೀರ್ಮಾನವನ್ನು ಕಾಂಗ್ರೆಸ್ ಅಧಿವೇಶನವು ಲಖನೌನಲ್ಲಿ ಸೇರುವ ಮೊದಲೇ ಪ್ರಕಟಿಸುವುದಾಗಿ ಈಗ ತಿಳಿದುಬರುತ್ತಿದೆ. ಈ ತೀರ್ಮಾನ ಮಾಡುವುದರಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಮೆಂಬರರಾಗಿ ಶ್ರೀ ಪಂಡಿತ ಜವಾಹಿರಲಾಲ ನೆಹರುರವರೂ ಸೇರುವರು. ಇಂತಹರ ಇತ್ಯರ್ಥವನ್ನು ಇದೀ ದೇಶವು ಚೆನ್ನಾಗಿ ಮೊದಲೇ ತಿಳಿದುಕೊಂಡು ಚರ್ಚಿಸಿ, ಅಧಿವೇಶನದಲ್ಲಿ ಎಲ್ಲ ಅಭಿಮತಗಳನ್ನೂ ಒಂದುಗೂಡಿಸಿ, ಮಹಾಮತವು ಹೇಗೆ ದೊರೆವುದೋ ಹಾಗೆ ಮುಂದೆ ನಡೆಯಲು ಅನುಕೂಲವಾಗುವುದಾಗಿ ಈಗ ಸೂಚಿತವಾಗಿದೆ. ಮದ್ರಾಸು ಪ್ರಾಂತ್ಯದಲ್ಲಿ ಅಧಿಕಾರ ಸ್ವೀಕರಣಕ್ಕಾಗಿ ಪ್ರಬಲ ಅಭಿಪ್ರಾಯಗಳು ದೊರೆತಿವೆ. ತಾವು ಅಧಿಕಾರಿಗಳಾದಲ್ಲಿ ತಮ್ಮ ಸಂಬಳವು ಇಷ್ಟು, ತಾವು ಮಾಡಲಿರುವ ಕಾರ್ಯಕ್ರಮವು ಇಂತಹದು ಎಂದೂ ವಿವರಿಸಿ ಹೇಳಿದವರು ಇರುವರು. ಆದಿದಂತೆ ಮಾಡುವುದಕ್ಕೆ ಇವರಿಗೆ ಸಂದರ್ಭವು ಸಿಗುವುದೋ, ಸಿಕ್ಕಿದಲ್ಲಿ ಹಾಗೆ ಮಾಡುವಂತೆ ವಿಧ್ಯವಸ್ಥಾನಗಳು ಕೂಡಿ ಬರುವುವೋ ಎಂಬುದು ಸರ್ವ ವಿದಿತವಾಗುವಂತೆ ಕಮಿಟಿಗಳ ಇತ್ಯರ್ಥಗಳು ಇವರಿಗೆ ಅನುಕೂಲವಾಗಲಿ.

ಮಂಗಳೂರು.

೫ ಜನರಿಗೆ ಮರಣದಂಡನೆ

ಪುತ್ತೂರು ತಾಲೂಕು ಬೆಳ್ಳಿಪಾಡಿ ಕುಟುಂಬಕ್ಕೆ ಸೇರಿದ ಶೇಷಪ್ಪ ರೈ ಎಂಬವರು ಬೆಳ್ಳಿಪಾಡಿಯಲ್ಲಿರುವ ತನ್ನ ತಮ್ಮನ ಮನೆಗೆ ಹೋಗಿ ಬೆಳಗಿನ ಊಟ ತೀರಿಸಿಕೊಂಡು ತಮ್ಮನೊಡನೆ ಕೋರ್ಟಿನ ವ್ಯವಹಾರ ನಿಮಿತ್ತ ಪುತ್ತೂರಿಗೆ ಹೋಗುವ ಉದ್ದೇಶದಿಂದಲೇ ಅಷ್ಟು ಮುಂಜಾನೆ ಅವರು ತಮ್ಮ ಮನೆಯಿಂದ ಹೊರಟಿದ್ದರು. ಮನೆಯಿಂದ ಸುಮಾರು ೩ ಮೈಲು ದೂರದಲ್ಲಿ ಉಪ್ಪಿನಂಗಡಿ ಪುತ್ತೂರು ರಾಜರಸ್ತೆಗೆ ಕೂಡುವ ಒಂದು ಒಳರಸ್ತೆಯಲ್ಲಿ ಹೋಗುತ್ತಿದ್ದಾಗ ಇವರು ಖೂನಿ ಮಾಡಲ್ಪಟ್ಟರು.

ಈ ಕಕ್ಷೀರಿನ ಸಂಬಂಧ ಅವರ ಅಳಿಯ ಬೀರಯ್ಯ ದುಗ್ಗಪ್ಪ ಆಳ್ವ, ಕೊರಗನಾಯ್ಕ, ಶಾಂತಪ್ಪ ಪೂಜಾರಿ, ದೇರಣ್ಣ ಶೆಟ್ಟಿ ಮತ್ತು ಗಣಪ ಆಚಾರಿ ಎಂಬ ೫ ಜನರನ್ನು ಪೋಲೀಸಿನವರು ತನಿಖೆ ನಡೆಸಿ ಚಾರ್ಜುಶೀಟು ಮಾಡಿದ್ದರು. ಪುತ್ತೂರು ಸಬ್ ಮೆಜಿಸ್ಟ್ರೇಟರು ೫ ಜನರನ್ನು ಇಂಡಿಯನ್ ಪೀನಲ್ ಕೋಡಿನ ೧೪೮ ಮತ್ತು ೩೦೨ನೇ ಕಲಮುಗಳ ಪ್ರಕಾರ ಶಿಕ್ಷಿಸಲ್ಪಡುವ ದೋಷ ಮತ್ತು ಖೂನಿ ತಪ್ಪುಗಳ ತನಿಖೆಗೋಸ್ಕರ ಮಂಗಳೂರು ಸೆಶನ್ಸ್ ಕೋರ್ಟಿಗೆ ಕಮಿಟ್ ಮಾಡಿದ್ದರು. ಹಾಗಾಗಿ ಅವರ ತನಿಖೆಯು ಮಂಗಳೂರಲ್ಲಿ ಇದೇ ತಿಂಗಳ ತಾ ೩ರಿಂದ ೬ರ ವರೆಗೆ ನಡೆಯಿತು.

ಅಪಾದಿತರು ತಾವು ಯಾವ ತಕ್ಸೀರನ್ನೂ ಮಾಡಿಲ್ಲವೆಂಬುವಾಗಿ ಸಾಧಿಸಿದ್ದಲ್ಲದೆ ಅಪಾದಿತರ ತಪ್ಪಿನ ಸಾಕ್ಷಿ ನಂಬತಕ್ಕದ್ದಲ್ಲ ಎಂತ ಸಹ ಪ್ರತಿವಾದಿಸಿದ್ದರು. ಅದರೆ ಸೆಶನ್ಸ್ ಜಡ್ಜರು ಎಸ್ಸೆಸ್ಸರ ಅಭಿಪ್ರಾಯವನ್ನು ಮಂಜೂರು ಮಾಡಿ ಅವರು ತಪ್ಪಿತಸ್ಥರೆಂದು ಅಭಿಪ್ರಾಯಪಟ್ಟರು ಮಾತ್ರವಲ್ಲದೆ, ಮೃತರನ್ನು ಕೊಚ್ಚಿ ಕೊಚ್ಚಿ ೨೨ ಗಾಯಗಳನ್ನು ಮಾಡಿ ಕುತ್ತಿಗೆಯನ್ನು ಹೆಚ್ಚಿನ ಅಂಶ ಕೊಯಿದು ಪಶುವೃತ್ತಿಯ ಹಿಂಸೆಯನ್ನು ಮಾಡಿದ ಕಾರಣ ೫ ಜನ ಅಪಾದಿತರಿಗೂ ಹೈಕೋರ್ಟಿನವರ ಮಂಜೂರಾತಿಗೆ ಒಳಪಟ್ಟು ಮರಣ ದಂಡನೆಯನ್ನು ವಿಧಿಸಿದರು. ಅಪಾದಿತರ ಕಡೆಯಿಂದ ಮ॥ ರಾ॥ ರಾ॥ ಸೋಮಶೇಖರರಾಯರೂ ಸರಕಾರ ಕಡೆಯಿಂದ ಸರಕಾರಿ ವಕೀಲ ಮ॥ ರಾ॥ ರಾ॥ ಕಾರ್ಕಳ ಸದಾಶಿವರಾಯರೂ ಕೇಸನ್ನು ನಡೆಸಿದ್ದರು.

ಹಿಂದೀ ವರ್ಗ.

ಇದೇ ಬರುವ ಮಾರ್ಚ ತಿಂಗಳ ತಾ ೩ರಿಂದ ಸ್ಥಳೀಯ ಶ್ರೀ ಕೃಷ್ಣ ಸಿನೇಮಾ ಮಂದಿರದ ಟೆರೇಸಿನಲ್ಲಿ ಸಂಜೆ ಗಂಟೆ ೬ರಿಂದ ೮ರ ವರೆಗೆ ಹಿಂದೀ ವರ್ಗವು ನಡೆಸಲ್ಪಡುವುದು. ವರ್ಗವು ಆದಿತ್ಯವಾರ ಮಂಗಳವಾರ ಮತ್ತು ಗುರುವಾರಗಳಲ್ಲಿ ನಡೆಸಲ್ಪಡುವುದು. ಯಾವ ಭೇದಭಾವವೂ ಇಲ್ಲದೆ ಎಲ್ಲರೂ ಬಂದು ಕಲಿಯಬಹುದು. ಬಡ ವಿದ್ಯಾರ್ಥಿಗಳಿಗೆ ಮಾತ್ರ ಧರ್ಮಾರ್ಥವಾಗಿ ಕಲಿಸಲಾಗುವುದು ಎಂದು ಕೆ ದೇಜಪ್ಪ ಆಳ್ವ, ಹಿಂದೀ ಪ್ರಚಾರಕರು ತಿಳಿಸುತ್ತಾರೆ.

ಜನನ ಮರಣ

ಇದೇ ತಾ ೧೫—೨—೩೭ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೨೪ ಮರಣಗಳೂ ೪೭ ಜನನಗಳೂ ಆಗಿವೆಯೆಂದು ತಿಳಿದುಬರುತ್ತದೆ.

ನಿರೇಶ್ವಾಲ್ಯ ವಿವೇಕೋದಯ ಯುವಕ ಸಂಘ.

ಈ ಸಂಘದಲ್ಲಿ ಇದೇ ಬರುವ ತಾ ೨೩ನೇ ಆದಿತ್ಯವಾರ ಅಪರಾಹ್ನ ಗಂಟೆ ೩-೩೦ಕ್ಕೆ ಒಂದು ವಿಶೇಷ ಸಭೆಯು ಜರಗಲಿದೆ. ಎಲ್ಲಾ ಸದಸ್ಯರು ಅಗತ್ಯವಾಗಿಯೂ ಬರಬೇಕಾಗಿ ಸಂಘದ ಸೆಕ್ರೆಟರಿಯವರ ವಿನಂತಿ.

ಹಿರ್ಜ ಸ್ತ್ರೀಯನ್ನು ಕೈದುಮಾಡಿರುವರು.

ಉರ್ವದಲ್ಲಿ ಮೊನ್ನೆ ತಾ. ೧೫ರಲ್ಲಿ ರಾತ್ರಿ ೨೨ ಗಂಟೆಗೆ ಒಂದು ಮುಳಿಮಾಡಿನ ಮನೆಗೆ ಬೆಂಕಿ ಇಡಲ್ಪಟ್ಟು ಒಳಗಿದ್ದವರು ಮೃತರಾಗುವ ಸಂಭವಗಳಿದ್ದವು. ಆದರೆ ದೈವವಶಾತ್ ಇವರನ್ನು ನೆರೆಹೊರೆಯವರು ರಕ್ಷಿಸಿದರು. ಆ ಬೆಂಕಿಯನ್ನು ಕೊಟ್ಟವಳು ಹಿರ್ಜ ಕ್ರೈಸ್ತ ಹೆಂಗಸೆಂದು ತಿಳಿದುಬಂದು ಆಕೆಯನ್ನು ಕೈದುಮಾಡಿರುತ್ತಾರೆ. ವಿಚಾರಣೆ ಆಗಲಾಗಿ ಆಕೆಗೆ ಬುದ್ಧಿಸ್ಥಿರತ್ವವಿಲ್ಲವೆಂದು ತಿಳಿದುಬಂದಿದೆ. ಇವಳಿಗೆ ಅನೇಕ ದಿವಸಗಳಿಂದ ಬುದ್ಧಿಸ್ಥಿರತ್ವ ತಪ್ಪಿಹೋಗಿರುತ್ತದೆಂದೂ, ಕೆಲವು ದಿವಸಗಳ ಹಿಂದೆ ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿಗೆ ಬಂದು, ಜಡ್ಜರ ಎದುರಿನಲ್ಲಿ ಸಾಷ್ಟಾಂಗ ಎರಗಿ ಏನೋ ಇಂಗ್ಲಿಷಿನಲ್ಲಿ ಮಾತಾಡಿದಳೆಂದೂ, ಅದರೆ ಅಲ್ಲಿಂದ ಅವಳನ್ನು ಹೊರಗೆ ಅಟ್ಟಿದರೆಂದೂ ತಿಳಿದುಬರುತ್ತದೆ.

ದ. ಕ. ಜಿಲ್ಲಾ ಕಾಂ. ಕಮಿಟಿಯ ಪ್ರಕಟಣೆ.

ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದರು ೧೯೩೭—೩೮ನೇ ವರುಷದ ಸಲುವಾಗಿ ಈಗಿನಿಂದಲೇ ಕಾಂಗ್ರೆಸ್ ಸದಸ್ಯರನ್ನು ಮಾಡಲು ಅಪ್ಪಣೆಕೊಟ್ಟಿದ್ದಾರೆ. ಹಳ್ಳಿಗರು ಸುಗ್ಗಿಯಲ್ಲಿರುವದರಿಂದ ನಾಲ್ಕಾಣೆ ಕೊಟ್ಟು ಸದಸ್ಯರಾಗಲು ಈಗ ಅವರಿಗೆ ವಿಶೇಷ ಭಾರವೆನಿಸುವುದಿಲ್ಲ. ಕಾರಣ ಕರ್ನಾಟಕದೊಳಗಿನ ಎಲ್ಲಾ ಕಾಂಗ್ರೆಸ್ ಕಮಿಟಿಗಳು ಈಗಿನಿಂದಲೇ ಈ ಕಾರ್ಯವನ್ನು ಕೈಕೊಳಬೇಕು. ಈ ಸಲ ಕನಿಷ್ಟ ೧ ಲಕ್ಷ ಸದಸ್ಯರನ್ನಾದರೂ ಮಾಡಬೇಕು. ಇಂದಿನಿಂದಲೇ ಒಳ್ಳೇ ಉತ್ಸಾಹದಿಂದ ಕಾರ್ಯಪ್ರಾರಂಭಿಸಿದ್ದಲ್ಲಿ ಅದೇನೂ ಅಶಕ್ಯದ ಮಾತಲ್ಲ. ಈ ಬಗ್ಗೆ ಕೆಳಗಿನ ನಿಯಮಗಳನ್ನು ಲಕ್ಷ್ಯದಲ್ಲಿಡಬೇಕು. (೧) ಈಗ ಮಾಡಿದ ಸದಸ್ಯರು ೧೯೩೭—೩೮ ವರ್ಷದ ಸದಸ್ಯರು (೧—೪—೩೭ರಿಂದ ೩೧—೩—೩೮ರ ವರೆಗೆ). (೨) ಕಳೆದ ವರ್ಷದ ರಜಿಸ್ಟರಿಗೂ ಈ ವರುಷದ ರಜಿಸ್ಟರಿಗೂ ಗೊಂದಲಬಾರದಂತೆ ಹೊಸ ವರ್ಷದ ಪಟ್ಟಿಯನ್ನು ಬೇರೆಯಾಗಿಡಬೇಕು. (೩) ಮತ ಕೊಡುವಾಗ್ಗೆ ಅಥವಾ ಬೇರೆ ಕೆಲಸಗಳಲ್ಲಿ ಈ ಸದಸ್ಯರು ೧ನೆಯ ಎಪ್ರಿಲ್ ೧೯೩೭ನೇ ದಿವಸ ಸದಸ್ಯರಾಗುವರೆಂದು ಎಣಿಸಬೇಕು.

ಬಿ ಭೋಜರಾವ್, ಕಾರ್ಯದರ್ಶಿ
ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿ

ಮಂಗಳೂರು ಆರ್ಯಸಮಾಜದ ೧೮ನೇ ವಾರ್ಷಿಕೋತ್ಸವವು

ಇದೇ ತಿಂಗಳ ೨೬ನೇ ಶುಕ್ರವಾರ ಮೊದಲ್ಗೊಂಡು ೨೭ನೇ ಶನಿವಾರದ ವರೆಗೆ ಜರಗುವುದು.

ಸಿಟಿ ಆರ್ಯಸಮಾಜ ಮಂದಿರದಲ್ಲಿ

ಇದೇ ಬರುವ ತಾರೀಕು ೨೬ನೇ ಶುಕ್ರವಾರ ಬೆಳಿಗ್ಗೆ ಗಂಟೆ ೬ ೩೦ಕ್ಕೆ ಮಂಗಳೂರು ಸಿಟಿ ಆರ್ಯಸಮಾಜ ಮಂದಿರದಲ್ಲಿ ದಯಾನಂದ ಋಷಿಬೋಧೋತ್ಸವ (ಶಿವರಾತ್ರಿ ಹಬ್ಬ) ಆಚರಿಸಲ್ಪಡುವುದು. ಅನೇಕ ಮಹನೀಯರು ಭಾಷಣಗಳನ್ನೀಯುವರು. ಭಜನೆ ಹವನ ಈಶ್ವರೋಪಾಸನೆ ಉಪಹಾರ ಇತ್ಯಾದಿಗಳಿವೆ. ಸ್ಥಳಸ್ಥರೆಲ್ಲ ಸಮಯಕ್ಕೆ ಬಂದು ಸಹಕರಿಸಬೇಕಾಗಿ ವಿನಂತಿ ಎಂದು ಸಂಘದ ಅಧಿಕಾರಿವರ್ಗಗಳು ತಿಳಿಸುತ್ತಾರೆ.

ಶ್ರೀ ಶಾಂತೀಶ್ವರಸ್ವಾಮಿ ಚೈತ್ಯಾಲಯ

ಮಂಗಳೂರು ಶ್ರೀ ಶಾಂತೀಶ್ವರಸ್ವಾಮಿ ಚೈತ್ಯಾಲಯದಲ್ಲಿ ನಡೆಯುವ ವರ್ಷಾವಧಿ ಮಹೋತ್ಸವವು ಇದೇ ತಾ ೬—೩—೩೭ನೇ ಶನಿವಾರ ಪ್ರಾರಂಭವಾಗಿ ತಾರೀಕು ೭—೩—೩೭ನೇ ರವಿವಾರ ೧೦೮ ಕಲಶ ಮಹಾಭಿಷೇಕವೂ, ತಾ ೮—೩—೩೭ನೇ ಸೋಮವಾರ ಪಂಚಾಮೃತ ಅಭಿಷೇಕ ಸಂಘ ಸಂತರ್ಪಣೆ ಇತ್ಯಾದಿ ಶ್ರೀ ಸನ್ನಿಧಿಯಲ್ಲಿ ನಡೆಯುವುದೆಂದು ನಾವು ತಿಳಿಯುತ್ತೇವೆ.

ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜು ಹೋಸ್ಟೆಲ್ ದಿನಾಚರಣೆ

ಇದೇ ತಾರೀಕು ೧೩ನೇ ಆದಿತ್ಯವಾರ ಸಾಯಂಕಾಲ ವಿಜೃಂಭಣೆಯಿಂದ ಜರಗಿತು. ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲರೂ ರೆಕ್ಟರರೂ ಆಗಿರುವ ರೆ ಫಾ॥ ಆಂಬ್ರೋಸಿಯವರು ಅಧ್ಯಕ್ಷಪದವಿಯನ್ನು ಅಲಂಕರಿಸಿದ್ದರು. ಅದೇ ಕಾಲೇಜಿನ ಪ ಇಂಗ್ಲಿಷ್ ಪ್ರಧಾನಾಧ್ಯಾಪಕರಾದ ಮಿ ಪೋಲ್ ಬಿ ಎ (ಆನರ್ಸ್) ಅವರು ಅಭ್ಯಾಗತ ಸ್ಥಾನವನ್ನು ಸೊಗಸಾದ ಮಾತಿನಿಂದ ವ್ಯಕ್ತಗೊಳಿಸಿದರು. ನಂತರ ಉಪಾಹಾರವಾದೊಡನೆಯೇ ಹೋಸ್ಟೆಲ್ ಸದಸ್ಯರಿಂದ ಭಾಷಣ, ವಿನೋದ ಇತ್ಯಾದಿಗಳಾದೊಡನೆಯೆ ಬಹುಮಾನ ಹಂಚೋಣವು ಪ್ರಾರಂಭವಾಯಿತು. ಮಿ ರಾಮಮೂರ್ತಿ ಕೆ.ಟಿ ರೊಸೇರಿಯೊ ಮತ್ತು ಮಿ ಬಿ ರಾಮಚಂದ್ರರಾವ್ ಇವರಿಗೆ ಭಾಷಣಸ್ಪರ್ಧೆಯ ರಜತ ಪದಕಗಳು ಕೊಡಲ್ಪಟ್ಟುವು. ಇನ್ನೂ ಒಂದೆರಡು ರಜತಪದಕಗಳೂ, ಕೆಲವು ಪುಸ್ತಕಗಳೂ ಕೆಲವು ಸದಸ್ಯರಿಗೆ ಬಹುಮಾನವಾಗಿ ಕೊಡಲ್ಪಟ್ಟ ನಂತರ, ಅಧ್ಯಕ್ಷರ ಬುದ್ಧಿವಾದಯುಕ್ತವಾದ ಭಾಷಣದೊಂದಿಗೆ ಸಭೆಯು ಮುಕ್ತಾಯವಾಯಿತು.

ಸಾದರ ಸ್ವೀಕಾರ.

ಈ ಕೆಳಗೆ ನಮೂದಿಸಿದ ಮಾಸಪತ್ರಿಕೆಗಳು ನಮ್ಮ ಹಸ್ತಗತವಾಗಿವೆ. ಅವುಗಳನ್ನು ಸಾದರದಿಂದ ಸ್ವೀಕರಿಸಿದ್ದೇವೆ. ೧. ಪ್ರಭಾತ, ಕಾಸರಗೋಡು. ೨. ಸದಾನಂದ, ಧಾರವಾಡ ೩. ವೈದ್ಯಕೀಯ ಎಕ್ಸ್‌ಪರ್ಟ್ಸ್, ಉಡುಪಿ.

ತಾಲೂಕುಗಳಿಂದ.

ಕಾಸರಗೋಡು:— ಸ್ಥಳೀಯ ಬೋರ್ಡು ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಸಂಘವು ಕಳೆದ ತಿಂಗಳಲ್ಲಿ ಜರಗಿದ ಶಾಲಾವರ್ಧಂತಿ ಸಮಾರಂಭದ ಸಂದರ್ಭದಲ್ಲಿ ಸ್ಥಾಪಿತವಾದ ವಿಚಾರವು ಪತ್ರಿಕಾ ವಾಚಕರಿಗೆಲ್ಲರಿಗೂ ತಿಳಿದ ವಿಷಯವೇ. ಏತತ್ಸಂಘವನ್ನು ವೃದ್ಧಿಗೊಳಿಸಿ, ತನ್ಮೂಲಕ ಶಾಲಾಭ್ಯುದಯ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದಿರುವುದರಿಂದ ಎಲ್ಲ ಹಳೆಯ ವಿದ್ಯಾರ್ಥಿಗಳೂ ಸದಸ್ಯರಾಗಿ ಸಹಕರಿಸಬೇಕಾಗಿ ವಿನಂತಿ. ಪ್ರತಿಯೊಬ್ಬ ವಿದ್ಯಾರ್ಥಿಯೂ ವರ್ಷಕ್ಕೆ ನಾಲ್ಕಾಣೆಯಂತೆ ಸದಸ್ಯರ ಹಣ ಸಲ್ಲಿಸುತ್ತ ಸಂಘವನ್ನು ಪ್ರೋತ್ಸಾಹಿಸಬೇಕೆಂದು ಈ ಮೂಲಕ ಅಪೇಕ್ಷಿಸಲಾಗುತ್ತದೆ ಎಂದು ಸಂಘದ ಕಾರ್ಯದರ್ಶಿಗಳಾದ ಸಿ ಎಮ್ ಕಾಮತ್ ಬಿ ಎ. ಅವರು ತಿಳಿಸುತ್ತಾರೆ. ಪರಸ್ಥಳದಲ್ಲಿರುವ ಹಳೆಯ ವಿದ್ಯಾರ್ಥಿಗಳು ನಾಲ್ಕಾಣೆಯ ಸ್ಟಾಂಪನ್ನು ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸಿಕೊಟ್ಟಲ್ಲಿ ಅತ್ಯಾದರದಿಂದ ಸ್ವೀಕರಿಸಲಾಗುವುದು.

ಪುತ್ತೂರು:— ಇಲ್ಲಿಯ ಬೋರ್ಡು ಹೈಸ್ಕೂಲಿನ ವರ್ಧಂತಿಯು ಇದೇ ಕಳೆದ ಫೆಬ್ರವರಿ ೫ರಲ್ಲಿ ಮಂಗಳೂರು ಕೆನರಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರು ಮ ರಾ. ರಾ ಬಿ ಅಚ್ಯುತಬಾಳಿಗ ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶಾಲಾ ಮನೆಯು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಸಭಿಕರು ಕಿಕ್ಕಿರಿದು ಕೂಡಿದ್ದರು. ಶಾಲೆಯ ಮುಖ್ಯೋಪಾಧ್ಯಾಯರು ವರದಿಯನ್ನೋದಿದ ಮೇಲೆ ಶ್ರೀಯುತ ಪಡಿಲ್ ಕೃಷ್ಣ ಭಟ್ಟ ಬಿ ಎ ಬಿ ಎಲ್ ಇವರು ಶಾಲಾ ಟೋಸ್ಟ್ ಓದಿದರು. ಅಧ್ಯಕ್ಷರು ಇನಾಮುಗಳನ್ನು ಹಂಚಿದ ತರುವಾಯ ಅರ್ಥಗರ್ಭಿತವಾದ ಭಾಷಣವನ್ನಿತ್ತರು. ಆ ಮೇಲೆ ವಿದ್ಯಾರ್ಥಿಗಳು ವಿವಿಧ ವಿನೋದಾವಳಿಗಳನ್ನು ಅಭಿನಯಿಸಿ ಸಭಿಕರನ್ನು ಸಂತೋಷಗೊಳಿಸಿದರು. ಅದೇ ದಿನ ಶಾಲೆಯಲ್ಲಿ ಬೆಳಿಗ್ಗೆ ೮ರಿಂದ ೧೧ರ ತನಕ ಸ್ಕೂಲಿನ ಹಳೆಯ ಮತ್ತು ಈಗಿನ ವಿದ್ಯಾರ್ಥಿಗಳಿಗೆ ಉಪಾಹಾರವಿತ್ತು. ಇದೇ ಸಂದರ್ಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘವೊಂದು ಸ್ಥಾಪಿತವಾಯಿತು.

ಕಾರ್ಕಳ:— ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಯವರು ತಾ ೧೩—೨—೩೭ರ ದಿನ ಸಾಯಂಕಾಲ ಶ್ರೀ ವೆಂಕಟರಮಣ ದೇವಾಲಯದ ವಸಂತ ಮಂಟಪದಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ತಮಗೆ ಶಿಷ್ಯವರ್ಗದವರೂ ಇತರರೂ ತೋರಿಸಿದ ಆದರಭಕ್ತಿವಿಶ್ವಾಸಗಳಿಗಾಗಿ ಸಂತೃಪ್ತಿಯನ್ನು ಸೂಚಿಸಿ ಅವರೆಲ್ಲರಿಗೆ ದೀರ್ಘಾಯುರಾರೋಗ್ಯ ಭಾಗ್ಯಾದಿಗಳು ಪ್ರಾಪ್ತವಾಗಲೆಂದು ಭಗವಂತನನ್ನು ಪ್ರಾರ್ಥಿಸಿದ ಬಳಿಕ ಶ್ರೀ ಸ್ವರೂಪಪ್ರಭುಗಳು [illegible] ಮಾತುಕ್ಕೆ ಶ್ರೀ ಸ್ವಾಮಿಯವರ ಸದ್ಗುಣಸಂಪತ್ತನ್ನು ಕೊಂಡಾಡಿ ಅವರ ಕೃಪೆಯು ಶಿಷ್ಯವರ್ಗದ ಮೇಲೆ ಸದಾಕಾಲ ಇರಬೇಕೆಂದು ಪ್ರಾರ್ಥಿಸಿ ಕೃತಜ್ಞತಾ ಸಮರ್ಪಣೆ ಮಾಡಿದ ಬಳಿಕ, ಶ್ರೀ ಸ್ವಾಮಿಯವರು ಶಿಷ್ಯವರ್ಗದವರಿಗೆ ಫಲಮಂತ್ರಾಕ್ಷತೆಗಳನ್ನು ಕೊಟ್ಟು ಗಂಗೊಳ್ಳಿಗೆ ಶುಭಪ್ರಯಾಣವನ್ನು ಬೆಳೆಸಿದರು. ಶಿಷ್ಯವರ್ಗದವರು ಶ್ರೀ ಸ್ವಾಮಿಯವರಿಗೆ ಮಂಗಲವನ್ನು ಕೋರಿದ ಬಳಿಕ ಪುರಮೆರವಣಿಗೆಯೊಂದಿಗೆ ವಿದಾಯೋತ್ಸವವು ಸಂಭ್ರಮದಿಂದ ನಡೆಯಿತು.

ಪಟ್ಟಣಶೆಟ್ಟಿ ಮಂತ್ರಿ ಮುದ್ರಾಧಿಕಾರಿ ರಾಮೇಶ್ವರದ ಶ್ರೀ ಕೋದಂಡರಾಮ ಮಠ ಮತ್ತು ದೇವಸ್ಥಾನದ ಜೀರ್ಣೋದ್ಧಾರ ದಂತಿಗೆ ಪಾದಪೂಜೆ ಮೊದಲಾದ ಸಕಲ ಮೂಲಗಳಿಂದ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಯವರಿಗೆ ಇಲ್ಲಿ ೩೦೦೦ ರೂಪಾಯಿಗಳಿಗೆ ಮಿಕ್ಕಿ ಧನ ಸಂಗ್ರಹವಾಗಿರುವುದು. ಇದಲ್ಲದೆ ೨೦೦೦ ರೂಪಾಯಿಗಳಿಗೆ ಮಿಕ್ಕಿ ವಾಗ್ದಾನವೂ ಆಗಿದೆ. ಆರ್ಥಿಕ ವಿಪನ್ನಾವಸ್ಥೆಯಲ್ಲಿ ನರಳುತ್ತಿದ್ದರೂ ಕೂಡ ಈ ಚಿಕ್ಕ ಊರಿನವರೂ ಅನುಯಾಯಿ ಹಳ್ಳಿಗರೂ ಐದು ಸಾವಿರ ರೂಪಾಯಿಗಳಿಗೆ ಮಿಕ್ಕಿದ ಮೊಬಲಗನ್ನು ಶ್ರೀ ಸ್ವಾಮಿಯವರಿಗೆ ಸಂಗ್ರಹಿಸಿಕೊಟ್ಟದ್ದು ಅವರ ಉದಾರತೆ ಮತ್ತು ಭಕ್ತಿಭಾವವನ್ನು ಪ್ರದರ್ಶಿಸುತ್ತದೆ.

ಈ ಕೇಂದ್ರದ ಪ್ರಾರಂಭಿಕ ಪರೀಕ್ಷೆಗಳು ತಾರೀಕು ೯—೨—೩೭ರ ದಿನ ಶ್ರೀ ಎಮ್. ಸರ್ವೋತ್ತಮ ಕಾಮತ್ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ನಿರ್ವಿಘ್ನವಾಗಿ ಜರಗಿದುವು. ಮುಂದಿನ ಹಿಂದೀ ಕ್ಲಾಸುಗಳು ಸದ್ಯದಲ್ಲಿಯೇ ತೆರೆಯಲಾಗುವವೆಂದೂ, ವಿವರಗಳನ್ನು ಸ್ಥಳೀಯ ಪ್ರಚಾರಕರಾದ ಶ್ರೀಯುತ ಕಟೀಲು ಶ್ರೀನಿವಾಸ ಶೆಟ್ಟಿ, ವಿಶಾರದ ಇವರಿಂದ ಪಡೆಕೊಳ್ಳಬಹುದೆಂದೂ ಸೂಚಿತವಾಗಿದೆ.

ಪೆರ್ಲ:— ಈ ಸೆಂಟರಿನ ಉಪಾಧ್ಯಾಯರ ಸಭೆಯು ತಾ ೧೩—೨—೩೭ನೇ ಶನಿವಾರ ಅಪರಾಹ್ನ ಗಂಟೆ ೧.೩೦ಕ್ಕೆ ಶ್ರೀಯುತ ಕೊಡಮ್ಮಂಜೆ ಸುಬ್ರಾಯ ಭಟ್ಟರವರ ಅಧ್ಯಕ್ಷತೆಯಲ್ಲಿ ಜರಗಿತು. ದೇವರ ಪ್ರಾರ್ಥನೆಯ ತರುವಾಯ ಶ್ರೀ ಎಂ. ವೆಂಕಟ್ರಮಣ ಭಟ್ಟರು ಮಾಜಿ ಜೋರ್ಜ್ ಸಾರ್ವಭೌಮರ ನಿಧನದ ಕುರಿತಾಗಿ ವಿಷಾದಸೂಚಕ ಠರಾವನ್ನು ಸಭೆಯು ಮುಂದಿಟ್ಟು ಅಂದಿನ ಕಾರ್ಯಕ್ರಮಗಳನ್ನು ಮುಂದುವರಿಸಬೇಕಾಗಿ ಭಾಷಣ ಮಾಡಿದರು. ಶ್ರೀ ಎ ಗಣಪತಿ ಭಟ್ಟರು ಅದನ್ನು ಅನುಮೋದಿಸಿ ಮಾತಾಡಿದರು. ತರುವಾಯ ಸೆಕ್ರೆಟರಿ ಶ್ರೀ ಬಿ ವೆಂಕಟ್ರಮಣ ಭಟ್ಟರು ರಾಜರ ಮಹತ್ವದ ಕುರಿತು ಮಾತಾಡಿದರು. ಆ ಬಳಿಕ ಅಧ್ಯಕ್ಷರು ಜೋರ್ಜರ ಮಹತ್ವವನ್ನು ಪ್ರಶಂಸಿಸಿ ಎಲ್ಲರೂ ರಾಜರ ಆತ್ಮಶಾಂತಿಗಾಗಿ ೫ ಮಿನಿಟುಗಳು ಮೌನಪ್ರಾರ್ಥನೆ ಮಾಡಿದ ತರುವಾಯ ಸಭೆಯು ಮುಂದುವರಿಸಲ್ಪಟ್ಟಿತು.

ಮಂಡೆಕೋಲು:— ಇಲ್ಲಿಗೆ ಸಮೀಪದ ಒಂದು ಆನೆಯನ್ನು ಕೆಲಸಕ್ಕಾಗಿ ಮಾವುತನು ಕರೆದೊಯ್ಯುತ್ತಿರುವಾಗ ಆನೆಯು ರೇಗಿ ಮಾವುತನನ್ನು ಕುಟ್ಟಿ ಹಿಂಸಿಸಿತು. ಗಾಯಗೊಂಡವನನ್ನು ಆಸ್ಪತ್ರೆಗೆ ಒಯ್ದು ಆನೆಯನ್ನು ಕೂಡಲೇ ಪ್ರಯತ್ನದಿಂದ ಪಳಗಿಸಿದರು.

ಅಜ್ಜಿ ಸಾಕಿದ ಮಗು— ಕಾಸರಗೋಡು ತಾಲೂಕು ಚೇಟ ಎಂಬಲ್ಲಿ ಪ್ರತಿಷ್ಠಿತ ಮುದುಕಿಯೊಬ್ಬಳು ಮತ್ತು ಅವಳ ಮೊಮ್ಮಗನ ಮಗ ಇವರಿಬ್ಬರು ಇರುವ ಒಂದು ಸಂಸಾರವಿದೆ. ಮುದುಕಿಯು ಹೆಚ್ಚು ಕಷ್ಟದಿಂದ ಒಂದು ನೂರು ರೂಪಾಯಿಗಳನ್ನು ಸಂಪಾದಿಸಿ ಮಡಿಕೆಯಲ್ಲಿ ಹಾಕಿ ಇಟ್ಟಿದ್ದಳು. ಮೊನ್ನೆ ಅವಳ ಮೊಮ್ಮಗನಿಗೆ ತಿಳಿಯಿತು. ಆತನು ತನ್ನ ಈ ಹೊಸ ಶೋಧನೆಯನ್ನು ಊರಿಡೀ ಹೇಳುತ್ತಾ ಬಂದು ಊರವರೆಲ್ಲಬ್ಬನ ದುರ್ಬೋಧನೆಗೊಳಗಾಗಿ ಆ ಹಣವೆಲ್ಲವನ್ನು ಅವನಿಗೆ ಕೊಟ್ಟುಬಿಟ್ಟನು. ಮುದುಕಿಯು ಇದನ್ನು ತಿಳಿದೊಡನೆಯೆ ತಲೆ ತಲೆ ಬಡೆದುಕೊಳ್ಳುತ್ತ ಅವಳ ಧನಿಯಾದ ಪಟೇಲ್ ಮಹಮ್ಮದರಲ್ಲಿ ದೂರು ಕೊಡಲು ಅವರ ಔದಾರ್ಯದಿಂದ ಅವಳ ಹಣವನ್ನು ಮೋಸಗಾರರಿಂದ ವಸೂಲು ಮಾಡಿ ಅವಳಿಗೆ ಕೊಟ್ಟರು.

ಬನ್ನಾಜೆ:— ನಿಡುಪೊಳ್ಳಿ ಗ್ರಾಮದ ಅನಾಜೆ ಐತು ಶೆಟ್ಟಿ ಎಂಬವರು ಮೊನ್ನೆ ಕೆಲ್ಲಾಸದ ಶಿಕಾರಿಗೆ ಕೆಲವರೊಂದಿಗೆ ಹೋಗಿದ್ದಾಗ ಶಿಕಾರಿಯಲ್ಲಿ ಗಾಯಗೊಂಡ ಹುಲಿಯು ಅವರ ಮೇಲೆ ಹಾರಿ ಅವರನ್ನು ಬಹಳವಾಗಿ ಹಿಂಸಿಸಿತು. ಇವರು ಈಗ ಆಸ್ಪತ್ರೆಗೆ ಒಯ್ಯಲ್ಪಟ್ಟಿರುವರು. ಪ್ರಾಣಾಪಾಯವಾಗಲಾರದೆಂದು ಡಾಕ್ಟರರು ಅಭಿಪ್ರಾಯಪಟ್ಟಿರುವರು.

ಉಡುಪಿ:— ಇದೇ ತಾ ೧೬ಕ್ಕೆ ಇಲ್ಲಿ ಮಂಗಳೂರಿನ ವಿಜಯಾ ಬ್ಯಾಂಕಿನ ಬ್ರಾಂಚೊಂದು ತೆರೆಯಲ್ಪಟ್ಟಿತು. ಅಂದಿನ ಸಮಾರಂಭಕ್ಕೆ ರಾ ಎಂ ವಿಠ್ಠಲಕಾಮತರು (ವಕೀಲರು) ಅಧ್ಯಕ್ಷರಾಗಿದ್ದರು. ಬಂಟರ ಯಾನೆ ನಾಡವರ ಸಂಘದ ಪ್ರಮುಖ ಗೃಹಸ್ಥರೂ ಊರ ಹಲವು ಪ್ರಮುಖರೂ ಉಪಸ್ಥಿತರಿದ್ದರು. ಸಂದರ್ಭೋಚಿತ ಭಾಷಣ ಉಪಭಾಷಣಗಳೂ ಉಪಹಾರ ಪಾನ ಸುಪಾರಿ ಸತ್ಕಾರಗಳೂ ಇದ್ದುವು. ಇದಕ್ಕೆ ಶುಭಾಗಮನ.

ಮೂಲ್ಕಿ:— ಈ ಮುಂಚೆಯೇ ಪ್ರಕಟಿಸಿದಂತೆ ಮಂಗಳೂರಿನ ಕೆನರಾ ಬ್ಯಾಂಕಿನ ಒಂದು ಶಾಖೆಯು ಕಳೆದ ತಾ ೧೪—೨—೩೭ರಲ್ಲಿ ಸ್ಥಳೀಯ ಹಾಜಿಮುಹಮ್ಮದ್ ಬಿಲ್ಡಿಂಗಿನಲ್ಲಿ ತೆರೆಯಲ್ಪಟ್ಟಿತು. ಆ ದಿನ ಸಾಯಂಕಾಲ ೩ ಗಂಟೆಯ ಸಮಯ ಊರ ಪ್ರಮುಖರೂ ಸಭಿಕರೂ ಬಹಳವಾಗಿ ನೆರೆದುಬಂದಿದ್ದರು. ಬಂದ ಸಭಿಕರಿಗೆ ಫಲಾಹಾರದ ಏರ್ಪಾಡೂ ಇತ್ತು. ಮೂಲ್ಕಿಯ ಅನಿವಾಸಿಗಳಾದರೂ ತದೂರ ಸ್ಥಳಿಗಳೂ ಆದ ಶ್ರೀ ಕೆ. ರಮಾನಾಥ ಪ್ರಭುಗಳನ್ನು ಏಜಂಟರನ್ನಾಗಿ ನೇಮಿಸಿರುವರೆಂದು ತಿಳಿದುಬರುತ್ತದೆ.

ಹಿಂದೀ ಪ್ರಚಾರದ ಕಳೆದ ತಾ ೯—೨—೩೭ನೇ ಪರೀಕ್ಷೆಗೆ ಇಲ್ಲಿಯ ವಿದ್ಯಾರ್ಥಿಗಳು ಪ್ರಥಮಕ್ಕೆ ೧೨ ಮಂದಿಯೂ ಮಾಧ್ಯಮಕ್ಕೆ ೧೧ ಮಂದಿಯೂ ರಾಷ್ಟ್ರಭಾಷಾಕ್ಕೆ ಒಬ್ಬರೂ ಕುಳಿತಿದ್ದರು. ಕಳೆದ ಎರಡು ವರ್ಷಗಳಿಂದ ಇಲ್ಲಿ ಹಿಂದೀ ಭಾಷೆಯನ್ನು ಕಲಿಸಲ್ಪಡುತ್ತಿದ್ದ ಇಲ್ಲಿಯ ಹಿಂದೀ ಪ್ರಚಾರಕರೂ ಹಿಂದೀ ಅಧ್ಯಾಪಕರೂ ಆದ ಶ್ರೀ ವೆಂಕಟ್ರಾವ್ ಉದ್ಯಾವರಕರ್, ಬಿ. ಎ ಇವರು ಬಹಳ ಶ್ರಮಪಟ್ಟು ಹಿಂದೀ ಸೇವೆಯನ್ನು ಮಾಡುತ್ತಿದ್ದರು. ಶ್ರೀಯುತರು ತಮ್ಮ ಸ್ವಂತ

(೧೧ನೇ ಪುಟಕ್ಕೆ ಮುಂದುವರಿದಿದೆ)

ಪುತ್ತೂರಿನಲ್ಲಿ ಹಿಂದೀ ಪ್ರಚಾರ.

ಕೆಲವು ವರ್ಷಗಳ ಹಿಂದೆ ಪುತ್ತೂರಿನ ಪ್ರಸಿದ್ಧ ಸಾರ್ವಜನಿಕ ಸೇವಾಸಕ್ತರಾದ ಮೊಳಹಳ್ಳಿ ಶಿವರಾಯರ ಪುತ್ರಿ ಶ್ರೀಮತಿ ಪಿ. ಸೀತಾದೇವಿಯವರೂ ಹಾಗೂ ಇಲ್ಲಿಯ ವಕೀಲರಾದ ಶ್ರೀ ಬಿ. ಪ್ರಭಾಕರರಾವ್, ಎಂ. ಎ. ಬಿ ಎಲ್. ಇವರ ಧರ್ಮಪತ್ನಿ ಶ್ರೀಮತಿ ಸುನಂದೀಬಾಯಿಯವರೂ ಮತ್ತು ವಕೀಲ ಶ್ರೀ ಬಿ. ರಾಮಚಂದ್ರ ರಾವ್, ಎಂ. ಎ. ಬಿ. ಎಲ್. ಇವರ ಧರ್ಮಪತ್ನಿ ಶ್ರೀಮತಿ ರತ್ನಾಬಾಯಿ ಇವರೇ ಮೊದಲಾದ ಮಹಿಳೆಯವರ ಹೆಚ್ಚಿನ ಪ್ರಯತ್ನದಿಂದಲೇ ಇಲ್ಲಿಯ "ಮಹಿಳಾ ಹಿಂದೀ ಪ್ರೇಮಿ ಮಂಡಲ"ವು ಸ್ಥಾಪಿಸಲ್ಪಟ್ಟು ಒಂದೆರಡು ವರ್ಷಗಳ ವರೆಗೆ ಉತ್ತಮ ರೀತಿಯಿಂದ ಹಿಂದೀ ಪ್ರಚಾರವು ನಡೆಯುತ್ತಿದ್ದು ಎಷ್ಟೋ ಮಹಿಳೆಯರು ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕ್ರಮೇಣ ಜನರ ಪ್ರೋತ್ಸಾಹವು ಕಡಿಮೆಯಾಗುತ್ತಾ ಈ ಮಂಡಳದ ಚಳವಳಿಯು ಕಮ್ಮಿಯಾಯಿತು. ಆದರೆ ಆಟಲೆಯುರಾದ ಮಹಿಳೆಯರೇ ಸಂಘಟನೆ ಮೂಲಕ ಇಷ್ಟೆಲ್ಲಾ ಕೆಲಸ ಮಾಡಿ ನೂರಾರು ಹಿಂದೀ ಪುಸ್ತಕಗಳನ್ನು ಸಂಗ್ರಹಿಸಿ ಒಂದು ಹಿಂದೀ ಪುಸ್ತಕಾಲಯವನ್ನು ಸ್ಥಾಪಿಸಿ ಸಾಹಸಪೂರ್ವಕವಾಗಿ ನಡೆಯಿಸಿದ ಈ ಪ್ರಬಲ ಯತಗಳು ವಿಶೇಷ ಸ್ತೋತ್ರಾರ್ಹವಾಗಿದೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ವಿಷಯವಾಗಿ ನಾವು ಅವರಿಗೆ ಎಷ್ಟು ಧನ್ಯವಾದಗಳನ್ನರ್ಪಿಸಿದರೂ ಸ್ವಲ್ಪವೇ ಸರಿ.

ಕಳೆದ ಜನವರಿ ೧೯೩೫ರಿಂದ ನಾನು "ದಕ್ಷಿಣ ಕನ್ನಡ ಹಿಂದೀ ಪ್ರಚಾರಕ ಸಂಘ"ದ ಕಡೆಯಿಂದ ಹಿಂದೀ ಪ್ರಚಾರಕ ನಿಯುಕ್ತನಾಗಿ ಇಲ್ಲಿಯ ಬೋರ್ಡ್ ಹೈಸ್ಕೂಲಿನಲ್ಲಿ ಹಿಂದೀ ಕ್ಲಾಸನ್ನು ನಡೆಯಿಸಿದೆನು ಕಳೆದ ಸಪ್ಟಂಬರದ ಹಿಂದೀ ಪರೀಕ್ಷೆಯಲ್ಲಿ ೨೩ ಜನರಲ್ಲಿ ೧೬ ಜನರು ಉತ್ತೀರ್ಣರಾದರು ತದನಂತರವೂ ಹಿಂದೀ ಕ್ಲಾಸು ನಡೆಯುತ್ತಿದ್ದು, ಕಳೆದ ಫೆಬ್ರವರಿ ತಾ ೯ರಲ್ಲಿ ನಡೆದ ಪರೀಕ್ಷೆಯಲ್ಲಿ ಪ್ರಾಥಮಿಕದಲ್ಲಿ ೨೫ ಜನರೂ, ಮಾಧ್ಯಮಿಕದಲ್ಲಿ ೮ ಜನರೂ ಮತ್ತು ರಾಷ್ಟ್ರಭಾಷೆಯಲ್ಲಿ ಒಟ್ಟೂ ಒಟ್ಟು ೩೪ ಜನರು ಪರೀಕ್ಷೆಗೆ ಕುಳಿತಿರುವರೆಂದು ತಿಳಿಸಲು ವಿಶೇಷ ಆನಂದವಾಗುತ್ತದೆ ಆ ಪೈಕಿ ರಾಮಕುಂಜದ ಸಂಸ್ಕೃತಪಾಠಶಾಲೆಯಿಂದ ಪರೀಕ್ಷೆಗೆ ಬಂದವರು ೮ ಜನರು ಈ ಪೈಕಿ ಅಧ್ಯಾಪಕರು ನಾಲ್ಕು ಜನರು ರಾಷ್ಟ್ರಭಾಷೆಗೆ ಇಂತ ಮಹಾಶಯರ ಶುಭನಾಮವು ಸಾಹಿತ್ಯ ಶಿರೋಮಣಿ ಮುಖ್ಯಪ್ರಾಣತಂತ್ರಿಗಳೆಂದು. ಈ ರೀತಿ ಸಂಸ್ಕೃತ ವಿದ್ವಾಂಸರು ಹಿಂದೀ ಅಭ್ಯಾಸದ ವಿಷಯವಾಗಿ ಹೆಚ್ಚಿನ ಪ್ರೇಮವನ್ನು ತೋರಿಸುವುದು ಬಹಳ ಮಹತ್ವದ ಮಾತೂ ಅನುಕರಣೀಯವೂ ಆಗಿದೆ ತನ್ನಿಮಿತ್ತ ನಾನು ರಾಮಕುಂಜ ಸಂಸ್ಕೃತ ಪಾಠಶಾಲೆಗೆ ಹೋಗಿ ಅಲ್ಲಿಯ ವ್ಯವಸ್ಥಾಪಕರೇ ಮೊದಲಾದ ಮಹಾಶಯರೊಡನೆ ಹಿಂದೀಯ ಮಹತ್ವದ ವಿಷಯ ಹೇಳಲು ಇನ್ನು ಮುಂದಕ್ಕೆ ಅಲ್ಲಿ ಸರ್ವದಾ ಹಿಂದೀ ಕಲಿಸುವ ವ್ಯವಸ್ಥೆಯು ಮಾಡುವೆವೆಂದು ವಚನವಿತ್ತಿರುವರೆಂದು ತಿಳಿಸಲು ಆನಂದವಾಗುತ್ತದೆ

ಇದೇ ರೀತಿ ಪುತ್ತೂರು ತಾಲೂಕಿಗೆ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಯ ವ್ಯವಸ್ಥಾಪಕರೂ ಹೆಡ್ಮಾಸ್ತರರೂ ನನ್ನಿಂದ ಅಲ್ಪ ಸ್ವಲ್ಪ ಸಹಾಯ ಪಡೆದು ತಮ್ಮಲ್ಲಿ ಹಿಂದೀ ಕ್ಲಾಸು ನಡೆಯಿಸುವುದಾದರೆ ನಾನು ಯಥಾಶಕ್ತಿ ಸೇವೆ ಮಾಡಲು ಸರ್ವದಾ ತಯಾರಾಗಿದ್ದೇನೆ ರಾಷ್ಟ್ರಭಾಷಾ ಪ್ರಚಾರವೇ ರಾಷ್ಟ್ರದ ಮುಖ್ಯ ಜೀವನವೆಂಬುದನ್ನು ತಿಳಿದುಕೊಂಡು ಹಿಂದೀ ಪ್ರೇಮಿಗಳೆಲ್ಲರೂ ಈ ಸುಸಂದರ್ಭದಲ್ಲಿ ಲಾಭಪಡೆಯದಿರಲಾರರೆಂದು ನಂಬಿಕೆ

ಇದೇ ಫೆಬ್ರವರಿ ತಾ. ೨೯ನೇ ದಿನ ಸಾಯಂಕಾಲ ಪುತ್ತೂರು ಕೋ ಒಪರೇಟಿವ್ ಬಿಲ್ಡಿಂಗ್‌ನಲ್ಲಿ ಕಳೆದ ಸಲ ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಹಿಂದೀ ಪ್ರಮಾಣಪತ್ರವನ್ನು ಕೊಡಲು "ಹಿಂದೀ ಪ್ರಮಾಣಪತ್ರ ವಿತರಣೋತ್ಸವ"ವನ್ನು ಮಂಗಳೂರಿನ ಕೆನರಾ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಯು. ಕೇಶವರಾವ್, ಬಿ. ಎ. ಎಲ್. ಟಿ. —ವಿಶಾರದರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದೂ ಮತ್ತು ಆ ಸಂದರ್ಭದಲ್ಲಿ ಗಣಪತಿ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ವಿಶ್ವೇಶ್ವರರಾವ್ ಬಿಜೂರ್, ಬಿ ಎಸ್.ಸಿ., ಎಲ್ ಟಿ. ಇವರು ಭಾಷಣವನ್ನು ಕೊಡಲಿಕ್ಕೆ ಸಮ್ಮತಿಸಿರುವರು. ಆದುದರಿಂದ ಹಿಂದೀ ಪ್ರೇಮಿಗಳೆಲ್ಲರೂ ಈ ಮಹೋತ್ಸವಕ್ಕೆ ಅವಶ್ಯವಾಗಿ ದಯಮಾಡಿ ಬರಬೇಕಾಗಿ ಪ್ರಾರ್ಥನೆ

ವರ್ಧಮಾನ ಹೆಗ್ಡೆ, 'ವಿಶಾರದ'
ಹಿಂದೀ ಪ್ರಚಾರಕ, ಪುತ್ತೂರು ದ. ಕ.

ಉಪಾಧ್ಯಾಯರಿಗೆ ಕಡಿಮೆ ಸಂಬಳ ಯಾಕೆ?

ಉಪಾಧ್ಯಾಯರಿಗೆ ಕಡಿಮೆ ಸಂಬಳವನ್ನು ಕೊಡುವವರಾಗಲೀ, ತೆಗೆದುಕೊಳ್ಳುವವರಾಗಲೀ ಅಥವಾ ಇತರ ಮೂರನೆಯವರಾಗಲೀ ಹಾಗೇಕೆ ಮಾಡುತ್ತಿರುವರೆಂಬುದಕ್ಕೆ ಸಮಾಧಾನಕರವಾದ ಉತ್ತರವನ್ನು ಕೊಡಲಾರರು. ಹೆಚ್ಚು ಸಂಬಳ ಕೊಡಲಿಕ್ಕೆ ಹಣ ಕಡಿಮೆಯಾಗಿದೆಯೆಂದು ಕೆಲವರು ಹೇಳುವರು ಉಪಾಧ್ಯಾಯರಲ್ಲಿ ತಕ್ಕಷ್ಟು ಯೋಗ್ಯತೆಯಿರುವುದಿಲ್ಲವೆಂದು ಮತ್ತೆ ಕೆಲವರು ಹೇಳುವರು ಸರಳಜೀವನ ಉಚ್ಚವಿಚಾರಿಗಳಾಗಿರಲಿಕ್ಕೆ ಅಷ್ಟೇ ಸಾಕೆಂದು ಉಳಿದವರು ಪ್ರತಿಪಾದಿಸುವರು. ಇವುಗಳಲ್ಲಿ ಯಾವುದು ಸತ್ಯ ಯಾವುದು ಸುಳ್ಳು ನನಗೊಂದೂ ಗೊತ್ತಾಗುವುದಿಲ್ಲ.

ಉಪಾಧ್ಯಾಯರಿಗೆ ಹೆಚ್ಚು ಸಂಬಳಕೊಡಲಿಕ್ಕೆ ಹಣ ಕಡಿಮೆಯಾಗಿದೆಯೆ? ಇದು ಸಂಪೂರ್ಣ ಸತ್ಯವಲ್ಲವೆಂದೇ ನಮ್ಮ ಅಭಿಪ್ರಾಯ. ವಿದ್ಯಾಪ್ರಚಾರಕ್ಕಾಗಿ ಸರಕಾರವು ಅಥವಾ ಜನತೆಯು ಮಾಡುವ ಖರ್ಚು ಎಷ್ಟು? ಅವರಲ್ಲಿ ಒಟ್ಟೊಟ್ಟು ಉಪಾಧ್ಯಾಯರ ಸಂಬಳಕ್ಕೆ ಪಾಲು ಹೋಗುತ್ತದೆ ಎಂಬ ವಿಚಾರಮಾಡಿದವರಿಗೆ 'ಹಣವಿಲ್ಲ' ಎಂಬ ಮಾತಿನ ಯಥಾರ್ಥತೆಯು ಸ್ಪಷ್ಟವಾಗುತ್ತದೆ ಸರಕಾರದ ಒಟ್ಟು ಆದಾಯದಲ್ಲಿ ವಿದ್ಯಾಪ್ರಚಾರ ಎಂಬ ಮುಖ್ಯ ವಿಷಯಕ್ಕೆ ವಿಂಗಡಿಸಿಟ್ಟ ಹಣ ಬಹು ಸ್ವಲ್ಪ ಮಾತ್ರ ಅದರಲ್ಲಿ ಉಪಾಧ್ಯಾಯರಿಗೆ ದೊರೆಯುವದು ನಗಣ್ಯವಾಗಿರುವದೆಂದರೆ ಅತಿಶಯೋಕ್ತಿಯಾಗಲಾರದು ಆದ್ದರಿಂದ ಹಣವಿಲ್ಲ, ಹಣವಿಲ್ಲ, ಎನ್ನುವದು ಬರೇ ಒಂದು ನಟನೆ ಮಾತ್ರ

ಉಪಾಧ್ಯಾಯರಿಗೆ ಹೆಚ್ಚು ಸಂಬಳ ಕೊಡುವುದಾದರೂ ಅವರಲ್ಲಿ ಯೋಗ್ಯತೆ ಇರಬೇಡವೇ? ಎಂದು ಕೆಲವರು ಪ್ರಶ್ನಿಸುತ್ತಿರುತ್ತಾರೆ ಸರಕಾರದಿಂದ ಅಥವಾ ಸರಕಾರದ ಅಂಗೀಕಾರವನ್ನು ಪಡೆದ ಖಾಸಗಿ ಜನರಿಂದ ಸ್ಥಾಪಿಸಲ್ಪಟ್ಟ ತರಬೇತಿ ಶಾಲೆಗಳಲ್ಲಿ ತರಬೇತಿಯನ್ನು ಪಡೆದು ಉಪಾಧ್ಯಾಯರು ಉಪಾಧ್ಯಾಯರಾಗಿರಲಿಕ್ಕೆ ಯೋಗ್ಯವೆಂದು ಪ್ರಶಸ್ತಿಪತ್ರಿಕೆಯನ್ನು ಪಡೆದ ಮೇಲೆ ಹೆಚ್ಚಿನ ಬೇರೆ ಯಾವ ಯೋಗ್ಯತೆ ಅವರಿಗೆ ಬೇಕು? ಅಂಥಾ ಹೆಚ್ಚಿನ ಯೋಗ್ಯತೆ ಬೇಕೆಂದ ಮಾತ್ರದಿಂದಲೇ ತರಬೇತಿ ಶಾಲೆಗಳು ಮುಖಕ್ಕೆ ಮಸಿಹಚ್ಚಿದಂತಾಗಲಿಲ್ಲವೇ? ತಮ್ಮ ಮುಖದ ಮೇಲೆ ತಾವೇ ಉಗುಳಿದಂತಾಗಲಿಲ್ಲವೇ? ಉಪಾಧ್ಯಾಯರ ತರಬೇತಿ ಕ್ರಮಗಳಲ್ಲಿ ದೋಷಗಳಿದ್ದರೆ, ಅವುಗಳಿಗೆ ಸರಕಾರವೇ ಜವಾಬ್ದಾರವು. ಅವುಗಳ ಪರಿಹಾರೋಪಾಯಗಳನ್ನು ಸರಕಾರವೇ ಚಿಂತಿಸಬೇಕು ಕಾಲನ ತಪ್ಪಿಗೆ ಬೋಳನನ್ನು ಗುರಿಮಾಡುವದು ಎಂದೂ ನ್ಯಾಯಸಮ್ಮತವಾಗುವುದಿಲ್ಲ

ಉಪಾಧ್ಯಾಯರು ಸರಳಜೀವಿಗಳೂ ಉಚ್ಚವಿಚಾರಗಳೂ ಆಗಿರಬೇಕಾದ್ದರಿಂದ ಅವರಿಗೆ ಕೊಟ್ಟದ್ದೇ ಯಥೇಷ್ಟವಾಯಿತೆಂದು ಕೆಲವರ ಅಂಬೋಣ 'ಸರಳಜೀವನ—ಉಚ್ಚ ವಿಚಾರ' ಇದು ಉತ್ತಮ ಜೀವನಧ್ಯೇಯವಾಗಿರುವದು ನಿಜ. ಆದರೆ, ಉಪವಾಸವಿರುವುದು ವ ಅರೆಹೊಟ್ಟೆ ಉಂಡುಕೊಂಡಿರುವುದು ಮತ್ತು ನಾಚಿಕೆಯನ್ನು ಮುಚ್ಚಿಕೊಳ್ಳಲಿಕ್ಕೆ ಮಾತ್ರ ಬಂದಿಬಟ್ಟೆಯನ್ನು ಉಟ್ಟುಕೊಳ್ಳುವದು ಅಥವಾ ಅದಕ್ಕೂ ತತ್ವಾರವಾಗಿರುವದು ಸಂಳಜೀವನವಾಗಿರುವುದಿಲ್ಲವೆಂದು ನಾವು ಹಲವು ಸಂದರ್ಭಗಳಲ್ಲಿ ಹೇಳಿಯೇ ಇದ್ದೇವೆ ಅನ್ನಬಟ್ಟೆಗಳಿಗೆ ಬೇಕಾದಷ್ಟು ಇಲ್ಲದೆ ಯಾರಿಗೂ ಉಚ್ಚವಿಚಾರಿಯಾಗಿರಲಿಕ್ಕೂ ಆಗುವುದಿಲ್ಲ ಎಂಬುದನ್ನು ನಾವು ಅಗತ್ಯವಾಗಿ ತಿಳಿದುಕೊಳ್ಳಬೇಕು ಆದ್ದರಿಂದ ಉಪಾಧ್ಯಾಯರು ಈಗ ಅವರಿಗೆ ದೊರೆಯುವ ಸ್ವಲ್ಪ ಸಂಬಳದಿಂದ ವಾಸ್ತವಿಕ ಅರ್ಥದಲ್ಲಿ ಸರಳಜೀವಿಗಳೂ ಉಚ್ಚವಿಚಾರಿಗಳೂ ಆಗಿರುವುದಿಲ್ಲ ಅದರ ಬದಲಿಗೆ ಅವರು ಈಗ ಕಷ್ಟಭೋಗಿಗಳಾಗಿದ್ದಾರೆ, ಸದಾಕಾಲ ಚಿಂತೆಯಲ್ಲಿ ಮುಳುಗಿರುತ್ತಾರೆ. ಚಿಂತೆಯೇ ಮುಪ್ಪು, ಸಂತೋಷವೇ ಯೌವನ, ಉಪಾಧ್ಯಾಯರಿಗೆ ಮೊದಲನೆಯದು ಇದೆ, ಎರಡನೆಯದು ಇರುವುದಿಲ್ಲ ಆದ್ದರಿಂದ ಅವರು ರೋಗಪೀಡಿತರೂ ಅಲ್ಪಾಯುಗಳೂ ಆಗುತ್ತಾರೆ. ಚಿಂತೆಗೂ ಚಿತೆಗೂ ಒಂದು ಬಿಂದುವಿನ ವ್ಯತ್ಯಾಸಮಾತ್ರ ಇರುವದಷ್ಟೆ. ಯಾರು ಹಾಳಾದರೆ ಯಾರಿಗೇನಾಗಬೇಕು ಎಂದು ಅಸಡ್ಡೆಯಿಂದಿರುವುದು ಯಾರಿಗೂ ಹಿತಕರವಾಗಿರುವುದಿಲ್ಲ. ಸಮಾಜದಲ್ಲಿ ವಕೀಲರು, ಸಾಹುಕಾರರು, ವೈದ್ಯರು, ಉಪಾಧ್ಯಾಯರು, ಕೂಲಿಗಳು, ರೈತರು ಶಿಲ್ಪಿಗಳು ಮೊದಲಾದವರೆಲ್ಲರ ಉನ್ನತಿ ಅವನತಿಗಳು, ಸುಖದುಃಖಗಳು, ಒಬ್ಬರೊಬ್ಬರ ಮೇಲೆ ಹೊಂದಿಕೊಂಡಿರುತ್ತದೆ. ಶರೀರದ ಒಂದು ಭಾಗದಲ್ಲುಂಟಾದ ರೋಗವು ಇಡೀ ಶರೀರದಲ್ಲಿ ಕಾಣಿಸಿಕೊಳ್ಳುವಂತೆ, ಇವರಲ್ಲಿ ಪ್ರತಿಯೊಬ್ಬರ ಮುಸ್ಥಿತಿಯ ದುಷ್ಪರಿಣಾಮವು ಉಳಿದೆಲ್ಲವರ ಮೇಲೆ ಅಗತ್ಯವಾಗಿಯೂ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಉಪಾಧ್ಯಾಯರ ಸಾಂಪತ್ತಿಕ ದುಸ್ಥಿತಿಯ ದುಷ್ಪರಿಣಾಮವು ಸಮಾಜದ ಮೇಲೆ ಹೇಗೆ ಎಷ್ಟು ಆಗಿದೆಯೆಂಬುದು ದೊಡ್ಡ ವಿಷಯವು. ಅದನ್ನು ಸಂಪೂರ್ಣವಾಗಿ ಇಲ್ಲಿ ಚರ್ಚಿಸಲು ಸಾಧ್ಯವಿಲ್ಲ ಆದರೆ ಸಮಾಜದ ಈಗಿನ ವಿಪನ್ನಾವಸ್ಥೆಗೆ ಉಪಾಧ್ಯಾಯರ ಸ್ಥಿತಿಯೂ ಒಂದು ಮುಖ್ಯ ಕಾರಣವಾಗಿರುವುದೆಂದು ಇಲ್ಲಿ ಒಂದೇ ಮಾತಿನಲ್ಲಿ ಹೇಳಿಬಿಡುತ್ತೇನೆ.

ಉಪಾಧ್ಯಾಯರ ಸಂಬಳ ಹೆಚ್ಚಿ ಅವರು ಜೀವನದಲ್ಲಿ ಸಂತೃಪ್ತರಾಗಿರುವದರಿಂದ ಸಮಾಜಕ್ಕೆ ನಷ್ಟವಿಲ್ಲದಿರುವದು ಮಾತ್ರವಲ್ಲ, ಲಾಭವೂ ಆಗುತ್ತದೆಂಬುದನ್ನು ಅಲ್ಲಗಳೆಯಲಿಕ್ಕಾಗುವದಿಲ್ಲ. ಈಗ ಉಪಾಧ್ಯಾಯರು ತಮ್ಮ ಉದ್ಯೋಗಕ್ಕೆ ಸಂಬಂಧಪಟ್ಟ ಕರ್ತವ್ಯಗಳನ್ನು, ಅವರ ಶಿಕ್ಷಣ ತರಬೇತಿಗೆ ತಕ್ಕಂತೆ ತೃಪ್ತಿಕರವಾಗಿ ಮಾಡಲಿಕ್ಕೆ ನಿಪುಣರೂ ಯೋಗ್ಯರೂ ಆಗಿರುವದು ಮಾತ್ರವಲ್ಲ ಅವರಲ್ಲಿಯೂ ಇತರರಂತೆ ವಕ್ತಾರರು ಲೇಖಕರು, ಗ್ರಂಥಕರ್ತರು, ಕವಿಗಳು, ದೇಶಧರ್ಮ ಸಮಾಜ ಸೇವಕರೂ ಆಗಲಿಕ್ಕೆ ಬೇಕಾದ ಎಲ್ಲ ಸದ್ಗುಣಗಳು ಉಪಲಬ್ಧವಾಗಿರುತ್ತವೆ ಅವರ ಸಾಂಪತ್ತಿಕ ದುಸ್ಥಿತಿಯು ಅವರ ಈ ಎಲ್ಲ ಗುಣಗಳನ್ನು ಪ್ರಕಟ ಮಾಡದೆ ಇವೆ ಸಾಂಸಾರಿಕ ಚಿಂತೆಯೇ ಅವರನ್ನು ಸದಾಕಾಲ ಪೀಡಿಸುತ್ತಿರುವಾಗ ಈ ಸಂಗತಿಗಳ ಕಡೆಗೆ ಅವರ ಮನಸ್ಸು ಹರಿಯುವದಾದರೂ ಹೇಗೆ? ಉಪಾಧ್ಯಾಯರ ಈ ಎಲ್ಲ ಗುಣಗಳ ಮೇಲೆ ಪ್ರಕಾಶವು ಬೀಳದೆ ಇರುವದರಿಂದ, ಅವುಗಳ ವಿಕಾಸವು ಆಗದೆ ಇರುವದರಿಂದ ಸಾಹಿತ್ಯಕ್ಕೆ ದೇಶಧರ್ಮ ಸಮಾಜಗಳಿಗೆ ಎಷ್ಟೆಷ್ಟು ಹಾನಿಯಾಯಿತು ಅವು ಯಾವ್ಯಾವ ಲಾಭಗಳಿಂದ ವಂಚಿತವಾಗಿರಬೇಕಾಯಿತು ಎಂಬುದನ್ನು ನಮ್ಮ ಸಾಹಿತ್ಯ ಮಹಾರಥಿಗಳೂ, ದೇಶಧರ್ಮ ಸಮಾಜ ಮುಖಂಡರೂ ಅಗತ್ಯವಾಗಿ ಆಲೋಚಿಸಿ ತಮ್ಮ ಮುಂದಿನ ಕರ್ತವ್ಯಗಳೇನಿರುವವೆಂಬುದನ್ನು ತಿಳಿದುಕೊಳ್ಳಬೇಕು

ಉಪಾಧ್ಯಾಯರ ಸಂಬಳವನ್ನು ಅವರ ಉದ್ಯೋಗ ಮರ್ಯಾದೆಗೆ ತಕ್ಕಂತೆ ಹೆಚ್ಚಿಸುವದು ಮಾತ್ರವಲ್ಲದೆ ಸರಕಾರಿ ಬೋರ್ಡ್ ಖಾಸಗಿ ಎಂಬ ಯಾವ ಭೇದವೂ ಇಲ್ಲದೆ ಸರ್ವತ್ರ ಏಕಪ್ರಕಾರವಾಗಿ ಅವರಿಗೆ ಸಂಬಳ ದೊರೆಯುತ್ತಿರುವಂತೆ ಸಂಬಂಧಪಟ್ಟವರನ್ನು ನಿರ್ಬಂಧಿಸುವದು ಸಾಹಿತ್ಯ ಮಹಾರಥಿಗಳ ಹಾಗೂ ದೇಶಧರ್ಮ ಸಮಾಜ ಮುಖಂಡರ ಒಂದು ಮುಖ್ಯ ಕರ್ತವ್ಯವಾಗಿರುತ್ತದೆ

ಕಟ್ಪಾಡಿ ಶ್ರೀನಿವಾಸ ಶೆಣೈ.

ಬಿನ್ನಹವು.

ಕಾಂಗ್ರೆಸ್ಸಿನ ಅಧ್ಯಕ್ಷರಾದ ಬಾಬೂರಾಜೇಂದ್ರ ಪ್ರಸಾದರು ೧-೪-೩೫ರಿಂದ ೩೧-೩-೩೬ರ ವರೆಗೆ ಆಗುವ ಕಾಂಗ್ರೆಸ್ ಸಭಾಸದರನ್ನು ಈಗಲೇ ಕೂಡಿಸಲು ಅಪ್ಪಣೆ ಕೊಡಿಸಿದ್ದು ಒಂದು ಉತ್ತಮ ಸುಸಂಧಿಯೆಂದೇ ಹೇಳಬಹುದು ನಾಲ್ಕಾಣೆ ಕೊಟ್ಟು ಸಭಾಸದರಾಗುವ ಕಾಂ। ಸಭಾಸದರೇ ಇಡೀ ಕಾಂಗ್ರೆಸ್ ಘಟನೆಯ ತಳಹದಿಯಾಗಿರುವರು ಅದುದರಿಂದ ಈ ಭಾರಿ ಕರ್ನಾಟಕ ಪ್ರಾಂತ್ಯದಲ್ಲಿ ಅತಿಶಯ ಪ್ರಯತ್ನಮಾಡಿ ಎಲ್ಲರೂ ಕಾಂಗ್ರೆಸ್ ಸಭಾಸದರನ್ನು ಹೆಚ್ಚಿಸುವುದು ಅವಶ್ಯವು ಎಲ್ಲ ಕಾಂಗ್ರೆಸ್ ಕಮಿಟಿಗಳೂ ಕಾಂಗ್ರೆಸ್ ಕಾರ್ಯಕರ್ತರೂ ಕೂಡಲೇ ಈ ಕಾರ್ಯದಲ್ಲಿ ತೊಡಗಬೇಕು ಎಂದು ನನ್ನ ನಮ್ರವಾದ ಬಿನ್ನಹವಿದೆ

ಕನಿಷ್ಠಪಕ್ಷಕ್ಕೆ ಮಾರ್ಚ ತಿಂಗಳ ಮೊದಲನೇ ತಾರೀಕಿನಿಂದಂತೂ ಕಾಂಗ್ರೆಸ್ ಸಭಾಸದರನ್ನು ಮಾಡುವ ಕಾರ್ಯವು ಬಹಳ ವೇಗದಿಂದ ಸಾಗಿಯೇ ತೀರಬೇಕೆಂದು ಬೇರೆ ಹೇಳಬೇಕಾಗಿಲ್ಲ ಈಗ ಆಗುವ ಸಭಾಸದರ ಪಟ್ಟಿಯನ್ನು ಹಾಗೂ ರಿಜಿಸ್ಟರನ್ನು ಮಾತ್ರ ಪ್ರತ್ಯೇಕವಾಗಿಡಬೇಕು. ಹಾಗೂ ಅದವರು ಮೇಲೆ ಕಾಣಿಸಿದ ೧-೪-೩೫ರಿಂದ ೩೧-೩-೩೬ರ ವರೆಗೆ ಆದವರು ಎಂಬದನ್ನು ಸ್ಪಷ್ಟವಾಗಿ ಉಲ್ಲೇಖಿಸಿರಬೇಕು ಸಭಾಸದರನ್ನು ಮಾಡುವ ಕಾರ್ಯವು ಪ್ರಾರಂಭವಾದೊಡನೆ ಆ ಮಾತನ್ನು ಈ ಕಚೇರಿಗೆ ತಿಳಿಸಬೇಕೆಂದು ಬಿನ್ನಹ.

ಧಾರವಾಡ ಸಿದ್ಧಪ್ಪಾ ಹೊಸಮನೆ,
೧೬-೨-೧೯೩೫. ಅಧ್ಯಕ್ಷ, ಕ. ಪ್ರಾ. ಕಾ. ಕ.

ಕರ್ನಾಟಕ ನೂತನ ಸಂಗೀತ ಸಭೆ, ಮುಂಬಾಯಿ.

ಈ ಸಭೆಯು ಕನ್ನಡ ಕಾರ್ಯರಂಗದಲ್ಲಿ ತಲೆಗತಿಯನ್ನಿಡಲು ಯೋಗ್ಯ ಸ್ಥಳದ ಆಭಾವವಿದ್ದುದು ಈಗಾಗಲೇ ಕನ್ನಡಿಗರ ಸಹಾನುಭೂತಿಯಿಂದ ನೀಗಿಸಲ್ಪಟ್ಟಿದೆ. ಸದ್ಯ ಸಭೆಯು ಮುಂದಿರವು ಈ ಕೆಳಗಿನ ವಿಳಾಸಕ್ಕೆ ಬಂದಿರುವುದು. ಕರ್ನಾಟಕ ನೂತನ ಸಂಗೀತ ಸಭೆಯ "ಮೊದ್ದಣ್ಣ ವಾಚನಾಲಯ", ೧೪೬ ಮೋದೀ ಸ್ಟ್ರೀಟ್, ಕೋಟೆ, ಮುಂಬಾಯಿ.

ಈಗಾಗಲೇ ಕನ್ನಡಿಗರ ಪ್ರೋತ್ಸಾಹದಿಂದ ವಾಚನಾಲಯಕ್ಕೆ ಸಭಾ ಬರುತ್ತಿರುವ ಪತ್ರಿಕೆಗಳು—ದೈನಿಕ—ತಾಯಿನಾಡು, ತರುಣ ಕರ್ನಾಟಕ, ಸಂಯುಕ್ತ ಕರ್ನಾಟಕ ವಾರಪತ್ರಿಕೆ—ಸ್ವದೇಶಾಭಿಮಾನಿ, ರಾಷ್ಟ್ರಬಂಧು ನವಯುಗ, ಕಂಠೀರವ, ವಿನೋದಭಾರತ, ಮಾಸಿಕ—ರಂಗಭೂಮಿ, ಕತೆಗಾರ, ಬಡವರ ಬಂಧು, ಕರ್ನಾಟಕ ಬಂಧು, ಕಥಾ ಕುಂಜ, ವಿಕಟವಿನೋದಿನಿ, ಸದ್ಧರ್ಮ ಪ್ರಚಾರಕ, ತ್ರೈಮಾಸಿಕ—ಪ್ರೇಮ.

ರಾಷ್ಟ್ರಪತಿ ಬಾಬೂರಾಜೇಂದ್ರ ಪ್ರಸಾದರ ಪ್ರಕಟಣೆ

ಮಹಾಕೋಸಲ ಪ್ರಾಂತಿಕ ಕಾಂ। ಕಮಿಟಿಯ ಅಧ್ಯಕ್ಷರು ಮುಂದಿನ ವರ್ಷದ ಸಲುವಾಗಿ (೧೯೩೫—೩೬ ಅಂದರೆ ೧ನೇ ಎಪ್ರಿಲ್ ೧೯೩೫ರಿಂದ ೩೧ನೆಯ ಮಾರ್ಚ ೧೯೩೬ರ ವರೆಗೆ, ಕಾಂಗ್ರೆಸ್ ಸದಸ್ಯರನ್ನು ಈಗಿನಿಂದಲೆ ಮಾಡುವುದನ್ನು ಪ್ರಾರಂಭಿಸುವ ಬಗ್ಗೆ ನನ್ನನ್ನು ವಿಚಾರಿಸಿದ್ದಾರೆ ಮತ್ತು ಅವರು ಈ ಬಗ್ಗೆ ಕೆಳಗಿನ ೧—೨ ಸೂಚನೆಗಳನ್ನು ಮಾಡಿದ್ದಾರೆ.

"ಪ್ರವಾಸವನ್ನು ಮಾಡಲು ಈ ದಿವಸಗಳು ಅನುಕೂಲವಿರುವವು ಮೇಲಾಗಿ ಈಗ ಸುಗ್ಗಿಯ ದಿವಸವಿರುವುದರಿಂದ ಸದಸ್ಯತ್ವದ ವಾರ್ಷಿಕ ನಾಲ್ಕಾಣೆ ಚಂದಾ ಕೊಡಲು ಹಳ್ಳಿಗರಿಗೆ ಹಗುರವೆನಿಸುವುದು" ಈ ಸೂಚನೆಗಳು ಯೋಗ್ಯವಿರುವೆಂದೆಣಿಸಿ (೧೯೩೫—೩೬) ವರುಷದ ಸಲುವಾಗಿ ಎಲ್ಲ ಕಡೆಯಲ್ಲಿಯೂ ಈಗಿನಿಂದಲೇ ಸದಸ್ಯರನ್ನು ಕೂಡಿಸಲು ಪ್ರಾರಂಭಿಸಬೇಕೆಂದು ಈ ಮೂಲಕ ಎಲ್ಲ ಕಾಂಗ್ರೆಸ್ ಕಮಿಟಿಗಳಿಗೆ ನಾನು ಅಪ್ಪಣೆಕೊಡುತ್ತೇನೆ ಈ ಸದಸ್ಯರ ಬಗ್ಗೆ ಮುಂದೆ ಘಟನಾವಿಷಯಕ ಅಥವಾ ಬೇರೆ ತಕರಾರು ಬಾರದಂತೆ ಕಾಂಗ್ರೆಸ್ ಕಮಿಟಿಗಳು ಅವಶ್ಯಕವಾಗಿದ್ದ ಹೊಸ ವರ್ಷದ ಸಲುವಾಗಿ ಕಾಂಗ್ರೆಸ್ ಸದಸ್ಯರ ಪ್ರತ್ಯೇಕ ಹೊಸ ರಿಜಿಸ್ಟರನ್ನು ಪ್ರಾರಂಭಿಸಬೇಕು ಮತಕೊಡುವಾಗ್ಗೆ ಅಥವಾ ಬೇರೆ ವಿಷಯಗಳಲ್ಲಿ, ಈ ಸದಸ್ಯರು ೧ನೇ ಎಪ್ರಿಲ್ ೧೯೩೫ನೇಯ ದಿವಸ ಸದಸ್ಯರಾದವರೆಂದು ಎಣಿಸಬೇಕು ಈ ವರ್ಷದ ಸಲುವಾಗಿ ಮಾತ್ರ ಈ ಪರವಾನಗಿ ಇರುವದು ಹಾಗೂ ವರ್ಕಿಂಗ್ ಕಮಿಟಿಯ ಮನ್ನಣೆಯು ಪಡೆಯಲಾಗುವದು.

ಝರಿಯಾ ತಮ್ಮ
೩-೨-೩೫ ರಾಜೇಂದ್ರಪ್ರಸಾದ

ಕ. ಪ್ರಾ. ಕಾಂಗ್ರೆಸ್ ಕಮಿಟಿಯ ಪ್ರಕಟಣೆ.

ರಾಷ್ಟ್ರಪತಿ ಬಾಬೂರಾಜೇಂದ್ರ ಪ್ರಸಾದರು ೧೯೩೫—೩೬ನೇ ವರುಷದ ಸಲುವಾಗಿ ಈಗಿನಿಂದಲೇ ಕಾಂಗ್ರೆಸ್ ಸದಸ್ಯರನ್ನು ಮಾಡಲು ಅಪ್ಪಣೆಕೊಟ್ಟಿದ್ದಾರೆ ಹಳ್ಳಿಗರು ಸುಗ್ಗಿಯಲ್ಲಿರುವದರಿಂದ ನಾಲ್ಕಾಣೆ ಕೊಟ್ಟು ಸದಸ್ಯರಾಗಲು ಈಗ ಅವರಿಗೆ ವಿಶೇಷ ಭಾರವೆನಿಸುವುದಿಲ್ಲ. ಕಾರಣ ಕರ್ನಾಟಕದೊಳಗಿನ ಎಲ್ಲಾ ಕಾಂಗ್ರೆಸ್ ಕಮಿಟಿಗಳು ಈಗಿನಿಂದಲೇ ಈ ಕಾರ್ಯವನ್ನು ಕೈಕೊಳ್ಳಬೇಕು ಈ ಸಲ ಕನಿಷ್ಠ ೧ ಲಕ್ಷ ಸದಸ್ಯರನ್ನಾದರೂ ಮಾಡಬೇಕು ಇಂದಿನಿಂದಲೇ ಒಳ್ಳೆ ಉತ್ಸಾಹದಿಂದ ಕಾರ್ಯಪ್ರಾರಂಭಿಸಿದ್ದಲ್ಲಿ ಅದೇನೂ ಅಶಕ್ಯದ ಮಾತಲ್ಲ. ಈ ಬಗ್ಗೆ ಕೆಳಗಿನ ನಿಯಮಗಳನ್ನು ಲಕ್ಷ್ಯದಲ್ಲಿಡಬೇಕು. (೧) ಈಗ ಮಾಡಿದ ಸದಸ್ಯರು ೧೯೩೫—೩೬ ವರ್ಷದ ಸದಸ್ಯರು (೧-೪-೩೫ರಿಂದ ೩೧-೩-೩೬ರ ವರೆಗೆ) (೨) ಕಳೆದ ವರ್ಷದ ರಿಜಿಸ್ಟರಿಗೂ ಈ ವರುಷದ ರಿಜಿಸ್ಟರಿಗೂ ಗೊಂದಲಬಾರದಂತೆ ಹೊಸ ವರ್ಷದ ಪಟ್ಟಿಯನ್ನು ಬೇರೆಯಾಗಿಡಬೇಕು. (೩) ಮತ ಕೊಡುವಾಗ್ಗೆ ಅಥವಾ ಬೇರೆ ಕೆಲಸಗಳಲ್ಲಿ ಈ ಸದಸ್ಯರು ೧ನೆಯ ಎಪ್ರಿಲ್ ೧೯೩೫ನೇ ದಿವಸ ಸದಸ್ಯರಾಗುವರೆಂದು ಎಣಿಸಬೇಕು.

ಧಾರವಾಡ, ರಂಗನಾಥ ದಿವಾಕರ,
೯-೨-೧೯೩೫. ಕಾರ್ಯದರ್ಶಿ, ಕ. ಪ್ರಾ. ಕಾ. ಕ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂ 3/1936.

ಅರ್ಕುಳ ಪುಂಡಲೀಕ ನ್ಯಾಕ್—ಅರ್ಕುಳ ವಾಸು ದೇವ ನ್ಯಾಕರ ಮಗ—ಮಂಗಳೂರು ಶಹರಿ ನಲ್ಲಿರುವವ—ದಿವಾಳಿ ಅರ್ಜಿದಾರ

ಮತ್ತು

ಬೋಳಾರ ವಿಟಲ ರಾವ್ ಕೂಡಾ-ಕ್ರೆಡಿಟರರು ರಿಸ್ಪಾಂಡೆಂಟರು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ -

ಸದ್ರಿ ಅರ್ಜಿದಾರನು ತನ್ನನ್ನು ದಿವಾಳಿ ಯೆಂತ ಮಾಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲು ಮಾಡಿದ ಸದ್ರಿ ಅರ್ಜಿಯು ತ್ಯ ಬಗ್ಗೆ ತಾ 2-3-1936ಕ್ಕೆ ಇಟ್ಟಿದೆ ಆದ್ದರಿಂದ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ತಾ 2-3-1936ರಲ್ಲು ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಜ್ಯಾಹೀರು ಮಾಡತಕ್ಕದ್ದು

ಮಂಗಳೂರು 13-2-36 — P Upendra Prabhu, *Vakil for Petitioner*

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P N 1? 1936

1 ಶಂಕರಾ 2 ಕೇಯು 3 ಶಂಕರಾ, 4 ಕಂಞಮ್ಮ 5 ಕರುಣಾಕರ 6 ಕೃಷ್ಣನ್ 7 ಕಲ್ಯಾಣಿ 8 ನಾರಾಯಣ—ಮ್ಯಾನರರು ಇವರ ಕ್ಷೇಮ ಚಿಂತಕಳು 2ನೇ ಅರ್ಜಿದಾರಳ ಕಾಸರಗೋಡು ತಾಲೂಕು ಕಳಂಗೆ ಗ್ರಾಮದ ಕೆರುವತ್ತಿನಲ್ಲಿರ ವವರು — ಅರ್ಜಿದಾರರು

1ನೇ ಅರ್ಜಿದಾರನ ಅಳಿಯು ವ 2ನೇ ಅರ್ಜಿದಾರಳ ಗಂಡ ಮತ್ತು 3ರಿಂದ 8ನೇ ವರೆಗಿನ ಅರ್ಜಿದಾರರ ತಂದೆಯಾಗಿದ್ದ ಮೃತಪಟ್ಟ ಚಾಡಚಂದು ಎಂಬವನಿಗೆ ಸದರಿ ಅರ್ಜಿಯಲ್ಲಿ ಕಾಣಿಸಿದ ರೀತಿ ಬರತಕ್ಕ ಹಣ ವಾರಿಸ್ದಾರರ ನೆಲೆಯಲ್ಲಿ ವಸೂಲು ಪಡಿಯುವ ತಮ್ಮ ಹಕ್ಕನ್ನು 2ರಿಂದ 8ನೇ ವರೆಗಿನ ಅರ್ಜಿದಾರರು 1ನೇ ಅರ್ಜಿದಾರನಿಗೆ ಟ್ರೇನ್ಸ್‌ಫರ್ ಕೊಟ್ಟು ಸದ್ರಿ ಹಣ ವಸೂಲು ಪಡೆಯುವರೆ 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖ್ಲು ಮಾಡಿದ ಸದರಿ ಅರ್ಜಿಯು ತಾ 3-3-1936ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿದೆ ಆ ಕುರಿತು ಆಕ್ಷೇಪಿಸುವವರು ಆ ತಾರೀಕಿನ ವಳಗೆ ತಮ್ಮ ಆಕ್ಷೇಪಣ ದಾಖ್ಲು ಮಾಡಬಹುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

ಕಾಸರಗೋಡು 13 2-36 — C. Rama Rao, ಅರ್ಜಿದಾರರ ಕಡೆ ವಕೀಲ್

WANTED.

ದ್ರಾವಿಡ ಬ್ರಾಹ್ಮಣರ 30 ವರ್ಷಕ್ಕಿಂತ ಮೇಲ್ಪಟ್ಟ 40 ವರ್ಷದೊಳಗಣ ಜ್ಯೋತಿಷ್ಯ ಮತ್ತು ಕನ್ನಡ ಕಲಿಸತಕ್ಕವನು ಬೇಕಾಗಿರುವನ ತಿಂಗಳಿಗೆ ಖರ್ಚು ಕಳೆದು 10 ರೂಪಾಯಿ ಸಂಬಳವನ್ನು ಪ್ರಾರಂಭದಲ್ಲಿ ಕೊಡಲ್ಪಡುವುದು ಆ ಮೇಲೆ ಹುಡುಗರ ಸಂಖ್ಯೆ ಹೆಚ್ಚಾದ ಹಾಗೆ ಸಂಬಳವು ಏರಿಸಲ್ಪಡುವುದು ಐವ್ವತ್ತರ ಒಡ್ಡಿಗೆ 15 ರೂ ಕೊಡಲ್ಪಡುವುದು ಹೀಗೆ ಬರುವವರು ಪ್ರಸ್ತುತದಲ್ಲಿರುವ ಎಮ್ಮಂಜ ಶಂಕರ ಜೋಯಿಸರಿಂದ ಯಾ ಜ್ಯೋತಿಷ್ಯ ಮು ಡಿದವರಿಂದ ಕಲಿಸುವ ಮಟ್ಟಿಗೆ ಸರ್ಟಿಫಿಕೇಟನ್ನು ತೆಗೆದು ಅವರ ಮೂಡಪ್ಪರು ಗ್ರಾಮದ ಕೆಯ್ಯಂ ಪರಮೇಶ್ವರಯ್ಯನವರಿಗೆ ಅರ್ಜಿ ಬರಕೊಳ್ಳಬೇಕು

In the Court of the District Munsiff of Kasaragod

O P. No 14/36

1 Korapulu, niece of Billa Pakira
2 Kanda, 3, Koraga, 4 Subbanbi—
Sons of the above said Korapulu—
—Petitioners

All the petitioners reside at Ichlampadi Village Kasargod Taluk

The above named Petitioners have applied for grant of succession certificate, as heirs and legal representatives of the deceased Kunhi, son of the 1st petitioner and brother of the other petitioners to realise the assets of the said deceased Kunhi and the petition stands posted to 4-3-36 for enquiry Any person who has objections may appear before the Court and do so

Kasargod 17-2-36 — K Venkatesha Nayak, *Advocate for Petrs*

ಎಚ್ಚರ!! — ಎಚ್ಚರ!!!

ರೋಗ ಬಂದ ಮೇಲೆ ನರಳಬೇಡಿರಿ!

ಸುಖಾನಂದ (ಗಂಡಸರಿಗೆ) ರೋಗದ ದಲ್ಲುರು ಸಾಧನ, ರತಿ ಕ್ರೀಡೆಗೆ ಅತಂಗವಿಲ್ಲ. ಆದರೂ ಪ್ರೇಮಕರ ಗರ್ಭೋತ್ಪತ್ತಿಯುಂಟಾಗದು ಮೇಹ ರೋಗಗಳಂತೂ ಬರುವಂತೆಯೇ ಇಲ್ಲ

ಬೆಲೆ 1ಕ್ಕೆ ರೂ 1-8-0

ಪೆಸ್ಸಾರ್ಸ್ (ಹೆಂಗಸರಿಗೆ) ಸರ್ವೋತ್ಕೃಷ್ಟವಾದ ದಲ್ಲುರು ಸಾಧನ ಗರ್ಭಧಾರಣಾ ಆಗುವಂತಿಲ್ಲ ಉಪಯೋಗಿಸುವಾಗ ಗೊತ್ತಾಗುವಂತಿಲ್ಲ ಬಹುಕಾಲ ಬಾಳಿಕೆ ಬರುವುದು ಬೆಲೆ 1ಕ್ಕೆ ರೂ 2—4 0

ಅರ್ಡರಿನೊಡನೆ 4 ಆಣೆಯ ಸ್ಟಾಂಪುಬೇಕು

ಸಿಗುವ ವಿಳಾಸ –ಸ್ಟ್ಯಾರ್ ಅಂಡ್ ಕಂಪೆನಿ, ಕೃಷ್ಣಪ್ಪ ನಾಯಕನ ಸ್ಟ್ರೀಟ್ ಬೀದಿ ಮದರಾಸು

ಶೀತದಿಂದ ದೂರವಾಗಿರಿ!

ಝಾಂಬಕ್ ಸಸ್ಯಜನ್ಯ ಲೇಪನವನ್ನುಪಯೋಗಿಸಿರಿ.

ರಾತ್ರಿ ಮಲಗುವ ಮೊದಲು ಝಾಂಬಕನ್ನು ಎದೆಗೆ ತಿಕ್ಕಿ ಕೆಟ್ಟ ಶೀತವನ್ನೂ ಚಳಿಯನ್ನೂ ಓಡಿಸಿರಿ. ನಿಮ್ಮ ದೇಹದ ಶಾಖವು ಝಾಂಬಕನ್ನು ನೀರುಮಾಡಿ, ನೀವು ಅದನ್ನು ಉಚ್ಛ್ವಾಸಿಸುತ್ತಿರುವಾಗ ನಿಮ್ಮ ಕಟ್ಟಿದ ಶ್ವಾಸವು ಸರಿಯಾಗುವುದು ಗಾಯ, ಎಕ್ಸಿಮಾ, ಕಜ್ಜಿ ಮೊದಲಾದುವುಗಳಿಗೆ ಝಾಂಬಕನ್ನುಪಯೋಗಿಸಿರಿ.

1 ರೂಪಾಯಿ ಅಥವಾ ರೂ 2-4-0ಕ್ಕೆ ಎಲ್ಲಾ ಔಷಧಿ ವಿಕ್ರಯಗಾರರಲ್ಲೂ ದೊರೆಯುತ್ತದೆ

ಝಾಂಬಕ್

Zam Buk

For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

Estimates Submitted without obligation

ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.

Electric fans, Household appliances, Table lamps,

Very Attractive chandeliers and other fittings

Everything in Electricity

Goods supplied on approval and guarantee of Manufacture

First class Goods First class Work First class Attendance

An Enquiry at our Electrical Show Rooms will cost you Nothing

And

Will gain You excellent Service.

The Canara Public Conveyance Company Ltd., Kodialbail, Mangalore.

ಬ್ರಿಟಿಷರು ಇನ್ನೊಂದು ಸುಯೇಜ್ ಕಾಲುವೆಯನ್ನು ರಚಿಸುವರು!

ಹಿಂದೂದೇಶದಲ್ಲಿ ರಚಿಸಿದ ಸ್ಟೀಮರು. ಜರ್ಮನಿಯಲ್ಲಿ ಭಾರತೀಯ ಆಹಾರ ಪ್ರಚಾರ.

ಚಹಾ ಪಾನದ ಪರಿಣಾಮವೇನಾಯಿತು?

ಜರ್ಮನ್ ಪೋಲೆಂಡ ವಾದ

ಜರ್ಮನಿಯ ಒಂದು ರೈಲ್ವೆಯು ಪೋಲೆಂಡಿನಿಂದ ಹಾದು ಹೋಗುತ್ತಿದೆ. ಇದಕ್ಕೆ ಜರ್ಮನಿಯು ಪೋಲೆಂಡಿಗೆ ಬಾಡಿಗೆ ಕೊಡಬೇಕಾಗಿತ್ತು. ಈ ಬಗ್ಗೆ ಜರ್ಮನಿಯು ಪೋಲೆಂಡಿಗೆ ೩॥ ಮಿಲಿಯ ಪವನುಗಳನ್ನು ಕೊಡಲು ಬಾಕಿ ಇದೆ. ಈ ದ್ರವ್ಯವನ್ನು ತನ್ನ ಸ್ವಂತ ಚಲಾವಣೆ ನಾಣ್ಯದಲ್ಲಿ ತಮ್ಮ ದೇಶದಲ್ಲಿ ಪೋಲೆಂಡಿನ ಲೆಕ್ಕಕ್ಕೆ ಜಮಾ ಮಾಡಿರುವರು. ಆದರೆ ಈ ಹಣವನ್ನು ಈಗಿನ ಎಕ್ಸ್‌ಚೇಂಜನ್ನು ಅನುಸರಿಸಿ, ತಮಗೆ ನಗದಾಗಿ ಕೊಡಬೇಕಾಗಿ ಪೋಲೆಂಡಿನವರ ವಾದ. ಜರ್ಮನಿಯು ಇದಕ್ಕೆ ಒಪ್ಪಲು ಸಿದ್ಧವಿಲ್ಲ. ಪೋಲೆಂಡು ರೈಲ್ವೇ ಚಲಾವಣೆಗೆ ಆತಂಕಗಳನ್ನು ಮಾಡುವದೆಂದು ಬೆದರಿಕೆಯನ್ನು ಕಳುಹಿಸಿಕೊಟ್ಟಿರುತ್ತದೆ.

ಸುಯೇಜ್ ಕಾಲುವೆಯಂತೆ ಇನ್ನೊಂದು ಕಾಲುವೆಯನ್ನು ರಚಿಸುವರು

ಸುಯೇಜ ಕಾಲುವೆಯ ಅಧಿಕಾರವು ಸಂಪೂರ್ಣ ಫ್ರೆಂಚರ ಕೈಯಲ್ಲಿದೆ. ಅದು ಬ್ರಿಟಿಷರ ಅನುಕೂಲತೆಗೆ ಒಪ್ಪುವುದಿಲ್ಲ. ಸಂಪೂರ್ಣ ತಮ್ಮ ಅಧಿಕಾರದಲ್ಲಿರುವಂತೆಯೂ ಇನ್ನಿತರ ಈಗಿನ ಸಂಕಷ್ಟಗಳಿಂದ ಪಾರಾಗಲು, ಬ್ರಿಟಿಷರು, ಸುಯೇಜ ಕಾಲುವೆಯಂತೆ, ಇದರೊಂದಿಗೆ ಇನ್ನೊಂದು ಕಾಲುವೆಯನ್ನು ಬ್ರಿಟಿಷ ಪ್ರದೇಶದ ಒಳಗೆ ತೊಡಬೇಕಾಗಿ ಆಲೋಚನೆಗಳನ್ನು ಮಾಡಿರುವರು. ಇದರ ಕೆಲಸವು ಬೇಗನೆ ಪ್ರಾರಂಭವಾಗುವುದು.

ಪೌರ್ವಾತ್ಯದಲ್ಲಿ ಯುದ್ಧ !

ಮಂಚೂರಿಯಾದ ಹತ್ತಿರವಿರುವ ಮೊಂಗೋಲಿಯಾದ ಗಡಿನಾಡುಗಳಲ್ಲಿ, ಮೊಂಗೋಲಿಯಾನರಿಗೂ ಜಪಾನೀಯರಿಗೂ ಸಮರಪ್ರಾರಂಭವಾಗಿರುತ್ತದೆ. ಜಪಾನೀಯರು ದೊಡ್ಡ ಸೈನ್ಯಮಂಡಳವನ್ನು ಇತ್ತಕಡೆಗೆ ಕಳುಹಿಸಿಕೊಟ್ಟಿರುವರು. ಮೊಂಗೋಲಿಯಾನರು ಈ ಮೊದಲು ಹಿಡಿದ ಪ್ರದೇಶಗಳನ್ನು ಬಿಟ್ಟು ಹಿಂದೆ ಸರಿದಿರುವರು. ಅನೇಕ ವಿಮಾನಗಳು ಇತ್ತಕಡೆಯ ಯುದ್ಧ ಕಾರ್ಯಗಳಲ್ಲಿ ಉಪಯೋಗಿಸಲ್ಪಟ್ಟಿವೆ. ಈ ಸಮರಕ್ಕೆ ಕಾರಣವು ರಷ್ಯವೆಂದು ವಾರ್ತೆ. ಇಲ್ಲಿ ರಷ್ಯದೊಡನೆ ಇನ್ನೊಂದು ಮಹಾಯುದ್ಧಕ್ಕೆ ಜಪಾನು ಸಿದ್ಧತೆಗಳನ್ನು ಮಾಡುತ್ತದೆ.

ಆಂಗ್ಲೋ ಇಜಿಪ್ಶಿಯನ್ ಒಪ್ಪಂದ.

ಆಂಗ್ಲೇಯರೊಡನೆ ಒಪ್ಪಂದದ ಮಾತುಕತೆಗಳನ್ನು ನಡೆಯಿಸಲು ೧೩ ಜನರ ಪ್ರತಿನಿಧಿಗಳಿದ್ದ ಒಂದು ಪ್ರತಿಮಂಡಳವು ಗೊತ್ತಾಗಿರುತ್ತದೆ. ನಾಹಾಸ ಪಾಶಾರವರು ಈ ಮಂಡಳದ ಅಧ್ಯಕ್ಷರು. ಇಬ್ಬರು ಪರಸ್ಪರ ಸಹಕಾರಿಯಾಗುವಂತೆಯೂ ಒಳ್ಳೆ ಮೈತ್ರಿಯು ಉಂಟಾಗುವಂತೆಯೂ, ಈ ಮಂಡಳವು ಸಾಧಿಸುವುದಂತೆ. ಈ ಮಂಡಳದಲ್ಲಿ ಎಲ್ಲಾ ಪಂಗಡದ ಪ್ರತಿನಿಧಿಗಳಿರುವರು. ಬ್ರಿಟಿಷ ಕಮಿಷನರಾದ ಸರ್ ಮ್ಯಾಲ್ಸ ಲೆಂಪ್‌ಸನರು ಈ ಒಪ್ಪಂದದ ಮಾತುಕತೆಗಳು ಸರಿಯಾಗಿ ನಡೆಯುವಂತೆ ಸಾಧಿಸುವೆನೆಂದು ಮಾತು ಕೊಟ್ಟಿರುವರು.

ಶಾಂತಿಸ್ಥಾಪನೆಗಾಗಿ

ಎರಡು ಅಮೇರಿಕಾ ಖಂಡಗಳ ವಿವಿಧ ರಾಜ್ಯಗಳ ಶಾಂತಿಸ್ಥಾಪನೆಯಾಗಲು ಒಂದು ಇಂಟರ್ ಅಮೇರಿಕಾ ಪರಿಷತ್ತನ್ನು ನಡೆಸಬೇಕಾಗಿ ಪ್ರೆಸಿಡೆಂಟ್ ರೂಸ್‌ವೆಲ್ಟರು ದಕ್ಷಿಣ ಅಮೇರಿಕಾ ಅರ್ಜೆಂಟೈನಾದ ಅಧ್ಯಕ್ಷರಿಗೆ ಒಂದು ಪತ್ರ ಬರೆದಿರುವರು. ಈ ಪರಿಷತ್ತನ್ನು ಯಾವ ದಿವಸ ಒಂದು ಅಮೇರಿಕಾದ ಮುಖ್ಯ ಪಟ್ಟಣದಲ್ಲಿ ಜರಗಿ, ಅಮೇರಿಕನ್ ರಿಪಬ್ಲಿಕ್‌ಗಳಲ್ಲಿ ಶಾಂತಿಸ್ಥಾಪನೆ ಮಾಡುವ ಉಪಾಯಗಳನ್ನು ಆಲೋಚಿಸಬೇಕೆಂದೂ, ಇದು ಎಲ್ಲಾ ಅಮೇರಿಕನ್ ದೇಶಗಳಲ್ಲಿ ರ ವ ಪರಸ್ಪರ ಶಾಂತಿ ಒಪ್ಪಂದಗಳನ್ನು ಬದಲಾವಣೆ ಮಾಡಲೂ ಇಲ್ಲ ಜರ್ರೆ ನಡೆಯಿಸಬೇಕಾಗಿಯೂ, ಹೀಗೆ ಮಾಡಿದರೆ, ಈ ಎಲ್ಲಾ ರಾಜ್ಯಗಳಲ್ಲಿ ಪರಸ್ಪರ ಮೈತ್ರಿಯು ಉಂಟಾಗುವುದೆಂದೂ ಇವರ ಮತ.

ಹಿಂದೂದೇಶದಲ್ಲಿ ರಚಿಸಿದ ಸ್ಟೀಮರು.

ನಮಗೆ ಬೇಕಾದ ಸ್ಟೀಮರುಗಳು ಪಾಶ್ಚಾತ್ಯದಿಂದ ಬರಬೇಕಾಗಿತ್ತು. ಆದರೆ, ಕಲ್ಕತ್ತೆಯ ಗಾರ್ಡನ ರೀಚ ಕಾರ್ಖಾನೆಯಲ್ಲಿ ಹರ್ವೆ ಇಂಜಿನಿಯರರು, ಒಂದು ಸ್ಟೀಮರನ್ನು ಸಿದ್ಧಪಡಿಸಿರುವರು. ಇದು ಮುಸ್ಸಿಂಬಾಯಿಗೆ ಬಂದಿರುತ್ತದೆ. ಅನೇಕ ಪತ್ರಿಕಾ ಪ್ರತಿನಿಧಿಗಳು ಇದನ್ನು ನೋಡಿ ಬಂದಿರುವರು. ಇದರ ಪ್ರಮಾಣವು ೧೪೧ ಅಡಿ x ೧೯॥ ಅಡಿ ಆಗಿರುತ್ತದೆ. ೩೨೦ ಅಶ್ವಶಕ್ತಿಯ ಇಂಜಿನಿನಿಂದ ಕೂಡಿರುತ್ತದೆ. ಇಂಜಿನ್ ಮಾತ್ರ ಹೊರಗಿನ ದೇಶದಲ್ಲಿ ತಯಾರಾದುದು. ಎಲ್ಲಾ ವಿಧದಲ್ಲೂ ಇದು ಪಾಶ್ಚಾತ್ಯದಲ್ಲಿ ತಯಾರಾಗುವ ಸ್ಟೀಮರುಗಳನ್ನು ಹೋಲುತ್ತದೆ. ನಾವೆಗಳನ್ನು ರಚಿಸುವ ನಮ್ಮ ಹಳೆ ಕೈಗಾರಿಕೆಯನ್ನು ಪ್ರಾರಂಭಿಸಲು ಇದೊಂದು ಸೂಚನಾವಾಗಿರುತ್ತದೆ. ಇತರ ಕೈಗಾರಿಕಾ ದೇಶಗಳಂತೆ, ನಮ್ಮಲ್ಲಿ ಎಲ್ಲಾ ಲೋಹಗಳೂ, ಕಲ್ಲಿದ್ದಲು ಇತ್ಯಾದಿಗಳು ದೊರಕುತ್ತವೆ. ಆದುದರಿಂದ ಬೇಗನೆ ಪ್ರಾರಂಭವಾಗುವ ಮೋಟಾರು ಕೈಗಾರಿಕೆಯೊಂದಿಗೆ ಈ ಕೈಗಾರಿಕೆಯು ಪ್ರಾರಂಭವಾದರೆ, ಆಗ್ಗೆ ಹಿಂದೂದೇಶದ ಸಾಂಪತ್ತಿಕ ಸ್ಥಿತಿಯು ಸ್ವಲ್ಪ ಸುಧಾರಣೆ ಹೊಂದಿದಂತಾಗುವುದು.

ಭಾರತೀಯ ಆಹಾರಗಳ ಪ್ರಚಾರ

ಜರ್ಮನಿಯಲ್ಲಿ ಭಾರತೀಯ ಆಹಾರವು ಅಷ್ಟು ಪ್ರಚಾರವಾಗಲಿಲ್ಲ. ಹಿಂದೀ ಚಹಾದ ಕುರಿತು ಅವರಿಗೆ ವಿಶೇಷ ಅರಿವೇ ಇಲ್ಲ. ಚಹಾವನ್ನು ತಯಾರಿಸಲು ಯಾರಿಗೂ ತಿಳಿಯುವುದಿಲ್ಲ. ಹಿಂದೂದೇಶದ ಅನೇಕ ಆಹಾರಪದಾರ್ಥಗಳ ಉಪಯೋಗವು ಅವರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಇಂಡಿಯಾ ಸರಕಾರವು ಹಿಂದೂದೇಶದ ರಫ್ತನ್ನು ಉದ್ಧರಿಸುವಂತೆ, ಭಾರತೀಯ ಆಹಾರ ಚಹಾ ಇತ್ಯಾದಿಗಳ ಕುರಿತು ಪ್ರಚಾರಕಾರ್ಯವನ್ನು ನಡೆಯಿಸುತ್ತಿದ್ದಾರೆ. ಅಲ್ಲಲ್ಲಿ ಸಂತೆಯಲ್ಲಿ ಭಾರತೀಯ ಸಾಮಾನುಗಳಿಂದ ಪದಾರ್ಥಗಳನ್ನು ತಯಾರಿಸುವ ಪ್ರದರ್ಶನಗಳೂ, ಚಾ ತಯಾರಿಸುವ ಪ್ರದರ್ಶನಗಳೂ ನಡೆಯುತ್ತವೆ.

ಹೌರಾ ಸಂಕದ ಕಂಟ್ರಾಕ್ಟು

ಕಲ್ಕತ್ತಾದ ಹಳೆ ಹೌರಾ ಸಂಕವನ್ನು ತೆಗೆದು ಈಗಿನ ಚಲಾವಣೆಗೆ ತಕ್ಕುದಾದ ಸಂಕವನ್ನು ನಿರ್ಮಿಸಬೇಕಾಗಿ ಇಂಡಿಯಾ ಸರಕಾರವು ನಿರ್ಧಾರಮಾಡಿರುತ್ತದೆ. ಈ ಸಂಕವು ಹಿಂದೂದೇಶದಲ್ಲಿ ಒಂದು ಮಹತ್ವದ ಸಂಕವಾಗುವುದು. ಇದರ ಕಂಟ್ರಾಕ್ಟಿಗೆ ಪಾಶ್ಚಾತ್ಯದೇಶಗಳಿಂದ ಟೆಂಡರುಗಳು ಬಂದಿವೆ. ಆದರೆ, ಬಂಗಾಳ ಸರಕಾರವು ಈ ಕಂಟ್ರಾಕ್ಟನ್ನು ಹಿಂದೂದೇಶದವರಿಗೇನೇ ಕೊಟ್ಟು, ಹಿಂದೂದೇಶದಲ್ಲಿ ತಯಾರಾಗುವ ಉಕ್ಕಿನ ವ್ಯಾಪಾರವು ಅಭಿವೃದ್ಧಿಗೊಳ್ಳುವಂತೆಯೂ, ಹಿಂದೂದೇಶದ ಹಣವು ಹೊರಗೆ ಹೋಗದಂತೆ ಮಾಡಬೇಕೆಂದೂ ಇಂಡಿಯಾ ಸರಕಾರದೊಡನೆ ಮನವಿಮಾಡಿರುವರು.

ಚಾ ಪಾನದ ಪರಿಣಾಮವೇನಾಯಿತು?

ಕಾನ್‌ಪುರದಲ್ಲಿ ಒಂದು ಮನೆಯಲ್ಲಿ ಮದುವೆ ದಿಬ್ಬಣವು ಬಂದಿತ್ತು. ಸಾಧಾರಣ ೨೫೦ ಜನರು ನೆರೆದಿದ್ದರು. ಬಂದವರಿಗೆ ಚಾ ಪಾನವು ಕೊಡಲಾಯಿತು. ಎಲ್ಲರೂ ಚಾವನ್ನು ಸೇವಿಸಿದರು. ಕೂಡಲೇ ಸಾಧಾರಣ ೨೦೦ ಮಂದಿ ಅಸ್ವಸ್ಥಹೊಂದಿ ಕಾರಲಿಕ್ಕಾರಂಭಿಸಿದರು. ಡಾಕ್ಟರನ್ನು ಕರೆಯಲಾಗಿ, ಅವರು ಉಪಯೋಗಿಸಿದ ಚಾದಲ್ಲಿ ವಿಷಪ್ರಯೋಗವಾಗಿರುತ್ತದೆಂದು ತಿಳಿದುಬಂತು. ಸರಿಯಾಗಿ ಕಲಾಯಿ ಇಲ್ಲದ ಪಾತ್ರೆಯಲ್ಲಿ ಚಾವನ್ನು ತಯಾರು ಮಾಡಿದ್ದರಂತೆ. ಎಲ್ಲರನ್ನೂ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಎಲ್ಲರೂ ಗುಣಹೊಂದಿದರು. ಮದುವೆಯು ಸಾಂಗವಾಗಿ ನಡೆಯಿತು.

ದಿಲ್ಲಿಯಲ್ಲಿ ಮುಸ್ಲಿಂ ನಾಯಕರ ಪರಿಷತ್ತು

ಅಖಿಲ ಭಾರತ ಮುಸ್ಲಿಮ ನಾಯಕರ ಪರಿಷತ್ತು ದಿಲ್ಲಿಯಲ್ಲಿ ಇದೇ ತಾ ೧೬ರಲ್ಲಿ ಆಘಾಖಾನರ ಅಧ್ಯಕ್ಷತೆಯಲ್ಲಿ ಜರಗಿತು. "ಹಿಂದೂದೇಶಕ್ಕೆ ಡೊಮಿನಿಯನ್ ಸ್ಟೇಟಸ್ಸಾದರೂ ದೊರಕಬೇಕು. ಭಾರತೀಯರಿಗೆ ಬಹೀರ್ ದೇಶಗಳಲ್ಲಿ ಯೋಗ್ಯ ಮಾನಮರ್ಯಾದೆಗಳು ದೊರಕುವುದಿಲ್ಲ. ಇದು ಅವರ ರಾಜಕೀಯ ಸ್ಥಿತಿಯಿಂದಾಗಿ, ಸ್ವತಂತ್ರ ಸಾಧನೆಕಾರ್ಯದಲ್ಲಿ ಎಲ್ಲಾ ಕೋಮುವಾರು ಬೇಧಗಳನ್ನು ಮರೆಯಬೇಕು. ಹಿಂದೂ ಮುಸ್ಲಿಮರೆಲ್ಲರೂ ಐಕ್ಯದಲ್ಲಿ ಚಳವಳವನ್ನು ನಡೆಸಬೇಕು" ಎಂದು ಅಧ್ಯಕ್ಷರು ಭಾಷಣಮಾಡಿದರು. ಇದರ ಮೇಲೆ ಹೊಂದಿಕೊಂಡು, ಮುಸ್ಲಿಮರ ಮುಂದಿನ ವರ್ತನೆಯ ಕುರಿತು ಠರಾವುಗಳಾದುವು.

ಕಂದಾಯ ರಿಯಾಯಿತಿ.

ಮದ್ರಾಸು ಸರಕಾರದವರು ಕಳೆದ ವರ್ಷದಂತೆಯೇ ಈ ವರ್ಷವೂ ಕಂದಾಯದಲ್ಲಿ ರಿಯಾಯಿತಿಯನ್ನು ತೋರಿಸಲು ನಿರ್ಧರಿಸಿದ್ದಾರೆ.

ಹಿಂದೂದೇಶದ ಬೆಂಕಿಪೆಟ್ಟಿಗೆಯ ಆಮದು

ಬಹೀರ್ ದೇಶದಿಂದ ಹಿಂದೂದೇಶಕ್ಕೆ ಬಂದ ಬೆಂಕಿಪೆಟ್ಟಿಗೆ

1923	24	ರೂ 140,92,000
1924	25	88,89000
1925	26	93,45000
1926	27	65,60000
1927	28	39,37000
1928	29	17 22000
1929	30	10 ~9000
1930	31	4,11000
1931	32	1 05000
1932	33	32000

ಉತ್ತರ ಚೀನಾದೇಶದ ಸ್ವಯಂ ಪ್ರಭುತ್ವ ಚಳವಳ.

ಉತ್ತರ ಚೀನಾದಲ್ಲಿ ಜಪಾನೀಯರ ಪ್ರೇರಣೆಯಿಂದ ಉಂಟಾದ ಸ್ವಯಂಪ್ರಭುತ್ವ ಚಳವಳವು ಮುಂದೆ ಸಾಗುತ್ತಿದೆ. ಚೀನಿಯ ವಿದ್ಯಾರ್ಥಿಗಳು ಜಪಾನೀಯರನ್ನು ಖಂಡಿಸಿ ಪ್ರಚಾರಕಾರ್ಯ ಮಾಡುತ್ತಿದ್ದಾರೆ. ಜಪಾನೀಯರು ತಮ್ಮ ಸಂಗ್ರಾಮ ಬಲದಿಂದ ತಮ್ಮ ಉದ್ದೇಶಗಳನ್ನು ಸಾಧಿಸುತ್ತಿದ್ದಾರೆ. ಆದಷ್ಟು ಬೇಗನೆ ಇಲ್ಲಿನ ಐದು ಪ್ರಾಂತ್ಯಗಳನ್ನು ಕಯ್ಯಲ್ಲಿ ಸೇರಿಸಿಕೊಳ್ಳುವುದು ಅವರ ಮುಖ್ಯ ಉದ್ದೇಶವಾಗಿರುತ್ತದೆ.

ಹಳೆಯ ಕಾಂ। ಅಧ್ಯಕ್ಷರಾದ ಸರ್ ದಿನ್ಶಾ ವಾಚಾರವರು ದಿವಂಗತರಾದರು.

ಆಖಿಲ ಹಳೆಯ ಕಾಂಗ್ರೆಸ್ ಅಧ್ಯಕ್ಷರಾದ ಸರ್ ದಿನ್ಶಾ ವಾಚಾ ಇವರು ತಮ್ಮ ೯೧ನೇ ಪ್ರಾಯದಲ್ಲಿ ಇದೇ ತಾ ೧೮ರಲ್ಲಿ ಸ್ವರ್ಗಸ್ಥರಾದರು. ಕೆಲವು ತಿಂಗಳ ಹಿಂದಿನಿಂದ ಇವರಿಗೆ ದೇಹಾಲಸ್ಯವಾಗಿತ್ತು. ಕಾಂಗ್ರೆಸ್ ಸುವರ್ಣಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಇವರಿಗೆ ಸಾಧ್ಯವಾಗಲಿಲ್ಲ. ಶ್ರೀ। ಬಾಬೂ ರಾಜೇಂದ್ರ ಪ್ರಸಾದರು ಆ ಸಮಯ ಅವರ ಭೇಟಿಮಾಡಿದ್ದರು. ದೇಶಸೇವಾ ಕಾರ್ಯಗಳಲ್ಲಿ ತುಂಬಾ ಉತ್ಸಾಹವಂತರಾಗಿದ್ದರು. ರಾಜಕೀಯ ರಂಗದಲ್ಲಿ ಭಾರೀ ಸಾಹಸಪಟ್ಟವರು ಅಲ್ಲದೆ ಬಹಳ ಗೌರವಸ್ಥಾನ ಪಡೆದಿದ್ದರು. ಇವರು ಕಾಂಗ್ರೆಸ್‌ನ ೧೬ನೇ ಅಧಿವೇಶನದ ಅಧ್ಯಕ್ಷರು. ಅನೇಕ ವ್ಯಾಪಾರ ಸಂಸ್ಥೆಗಳಲ್ಲೂ ಬೇಂಕಿಂಗ್ ಸಂಸ್ಥೆಗಳಲ್ಲೂ ಡೈರೆಕ್ಟರ್ ಪದವಿಯನ್ನು ಹೊಂದಿದವರು. ಇಂಪೀರಿಯಲ್ ಬೇಂಕಿನ ಗವರ್ನರರಾಗಿದ್ದರು. ಸಾರ್ವಜನಿಕ ಕಾರ್ಯಗಳಲ್ಲಿ ಇವರು ಹೆಸರು ಎಲ್ಲೆಲ್ಲೂ ಕಾಣುತ್ತಿತ್ತು. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ೧೮೯೬ರಿಂದ ೧೮ ವರ್ಷಗಳ ವರೆಗೆ ಜನರಲ್ ಸೆಕ್ರೆಟರಿಯಾಗಿ ಶ್ರಮಪಟ್ಟವರು. ಸರಕಾರದ ಅನೇಕ ಸಮಿತಿಗಳಲ್ಲಿ ಗೌರವಪದವಿಯನ್ನು ಹೊಂದಿದವರು. ೩೦ ವರ್ಷಗಳ ಸಮಯ ಮುಂಬಾಯಿ ನಗರಸಭೆಯ ಸದಸ್ಯರಾಗಿದ್ದರು. ಕಳೆದ ೪೫ ವರ್ಷಗಳಲ್ಲಿ ಅನೇಕ ಪತ್ರಿಕೆಗಳಿಗೆ ಅನೇಕ ವಿಚಾರಗಳ ಕುರಿತು ಲೇಖನಗಳನ್ನು ಕೊಟ್ಟಿರುವರು.

ಎಥಿಯೋಪಿಯಾದಲ್ಲಿ ಭಾರೀ ಮಳೆ

ಎಥಿಯೋಪಿಯಾದಲ್ಲಿ ಮಳೆಗಾಲವು ಪ್ರಾರಂಭವಾಗಿರುತ್ತದೆ. ಬಹಳ ಮಳೆಯು ಸುರಿಯುತ್ತದೆ. ಎಲ್ಲ ಮಾರ್ಗಗಳೂ ಭಯಂಕರ ಸ್ಥಿತಿಯಲ್ಲಿವೆ. ಅವುಗಳನ್ನು ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಮೋಟಾರು ವಾಹನಗಳ ಚಲಾವಣೆಯೂ ನಿಲ್ಲಿಸಬೇಕಾಗುವುದು. ಇಟೇಲಿಯಾನರ ಭಾರವಾದ ನವೀನ ಯಂತ್ರೋಪಕರಣಗಳನ್ನು ಅತ್ತ ಇತ್ತ ಸಾಗಿಸಲು ಇದರಿಂದ ದೊಡ್ಡ ಆತಂಕವಾಗಿದೆ. ಮಳೆಯು ಹಬಸಿಯರಿಗೆ ದೈವಸಹಾಯವೆನ್ನಬಹುದು.

ಎಡೊವಾ-ಮಕಾಲೆ ರಸ್ತೆಯನ್ನು ಕಡಿದು ಹಾಕಿರುವರು.

ಮಕಾಲೆಯನ್ನು ಭದ್ರಪಡಿಸುವ ಇಟೇಲಿಯಾನ ಸೈನಿಕರಿಗೆ ಆಹಾರ ಇತ್ಯಾದಿಗಳು ಎಡೋವಾದಿಂದ ಬರಬೇಕಾಗಿತ್ತು. ಆದರೆ, ಹಬಸಿಗಳು ಈ ಮಾರ್ಗವನ್ನು ಕಡಿದು ಹಾಕಿರುವರು. ವಾಹನಗಳಿಗೆ ಈ ರಸ್ತೆಯ ಉಪಯೋಗವನ್ನು ಮಾಡಲು ಸಾಧ್ಯವಿಲ್ಲ. ಮಕಾಲೆಗೆ ಹೋಗುವ ಇತರ ಹಾದಿಗಳಲ್ಲಿ ಹಬಸಿಸೈನಿಕರು ತುಂಬಾ ಇದ್ದಾರೆ. ಮಕಾಲೆಯಲ್ಲಿದ್ದ ಸೈನಿಕರಿಗೆ ಈಗ ವಿಮಾನಗಳಿಂದ ಆಹಾರಗಳನ್ನು ಚೆಲ್ಲಬೇಕಾಗಿದೆ.

10,000 ಜನರು ಇಟೇಲಿಯಾನರನ್ನು ಕೊಲೆಮಾಡಿದರು.

೪೦೦೦ ಇಟೇಲಿಯಾನರ ಇರಿಟ್ರಿಯಸ್ ದೇಶಿ ಸೈನಿಕರು ಇಟೇಲಿಯಾನರನ್ನು ಕೊಂದು ಪಲಾಯನ ಮಾಡಿರುವರು. ಅವರನ್ನು ಹಿಡಿಯಲು ಮಾಡಿದ ಇಟೇಲಿಯಾನರ ಪ್ರಯತ್ನಗಳು ನಿಷ್ಫಲವಾಗಿವೆ. ಇವರು ಪಲಾಯನ ಮಾಡಿ ಕೆನ್ಯಾ ಪ್ರದೇಶವನ್ನು ಸೇರಿರುವರು. ಒಟ್ಟಾರೆ ಇಟೇಲಿಯಾನರನ್ನು ತ್ಯಜಿಸಿದ ಇರಿಟ್ರಿಯಾನರ ಸಂಖ್ಯೆ ೧೦ ೦೦೦ವಾಗಬಹುದು.

೧೧ನೇ ಪುಟದಿಂದ ಮುಂದರಿಸಿದುದು

ತಾಪತ್ರಯಗಳಿಗಾಗಿ ಬೆಂಗಳೂರು ಆತ್ತಕಡೆ ತೆರೆಯಲಿರುವರಾಗಿ ತಿಳಿದು ಹಿಂದೀ ಪ್ರೇಮಿಗಳಿಗೆ ತುಂಬಾ ಬೇಸರವಾಗಿದೆ. ಆದರೂ ಶ್ರೀಯುತರು ಈ ವರೆಗೆ ಹಿಂದೀ ಭಾಷೆಯನ್ನು ಕಲಿಸಿ ಕೆಲವರನ್ನಾದರೂ ತರಬೇತು ಪಡಿಸಿದ ಬಗ್ಗೆ ಊರವರು ಆಭಾರಿಗಳಾಗಿರುವರು. ಊರ ಪ್ರಮುಖರು ತನ್ನಿಂದಾದಷ್ಟು ಹಿಂದೀ ಭಾಷೆಯ ಸೇವೆ ನಡೆಯುವಂತೆ ನೋಡಿಕೊಳ್ಳುವರಾಗಿ ಆಶಿಸಲಾಗಿದೆ.

ಮಿತ್ತೂರು:—ಸ್ಕೂಲ ಬೋರ್ಡ್ ಶಾಲೆಯಲ್ಲಿ ಆಗಾಗ್ಗೆ "ಯಕ್ಷಗಾನ" ಕೂಟವು ಜರಗುತ್ತಲೆಂದು ಈ ಮೊದಲೇ ತಿಳಿಸಿರುತ್ತದೆ. ಆ ಪ್ರಕಾರ ಆರನೆಯ ಕೂಟವು ಕಳೆದ ತಾ ೧೫—೨—೩೬ನೇ ಶನಿವಾರ ರಾತ್ರಿ ಶ್ರೀಯುತ ಪತ್ತಿ ಈಶ್ವರ ಭಟ್ಟರ ಭಾಗವತಿಕೆಯಿಂದ "ಪಾದುಕಾ ಪಟ್ಟಾಭಿಷೇಕ" ಎಂಬ ಪ್ರಸಂಗವು ಜರಗಿತು. ಜನಸಮೂಹವು ಸಾಧಾರಣ ೬೦೦ಕ್ಕಿತ್ತು.

ಉಡುಪಿ ಬೇಂಕ್ ಲಿಮಿಟೆಡ್.

ಸಿಬ್ಬಂದಿಯೂ ಉತ್ಸಾಹಿಗಳೂ ಆದ ಆಡಳಿತಗಾರರಿಂದ ಎಂತಹ ಅದ್ಭುತದ ಮಾರ್ಪಾಡನ್ನು ಕಾಣಬಹುದೆಂಬುದಕ್ಕೆ ಮೇಲಿನ ಸಂಸ್ಥೆಯೇ ಉದಾಹರಣೆ. ಮೂರು ವರ್ಷಗಳ ಹಿಂದೆ ಹಿಂದಣ ಅವ್ಯವಸ್ಥಿತ ಆಡಳಿತದ ದೆಸೆಯಿಂದ ಪಾಲುಗಾರರಿಗೆ ಲಾಭಾಂಶವನ್ನೇನೂ ತೆರಬೇಡಿಯಿಲ್ಲದ ಈ ಸಂಸ್ಥೆಯು ಕಳೆದ ವರ್ಷ ನಿವ್ವಳ ಲಾಭಾಂಶವಾಗಿ ದೊರೆತ ರೂ ೧೮೩—೬—೧೧ನ್ನು ಹಂಚಲಾಸ್ಪದವಿಲ್ಲದೆ ಈ ವರ್ಷ ಪತ್ತು ಮಡಿ ಲಾಭಗಳು ಕ್ಷೇಮನಿಧಿ ಮೊದಲಾದುವುಗಳಿಗೆ ಹೇರಳ ಹಣವನ್ನು ಕೂಡಿಸಿಟ್ಟು ಇಟಿದೆಂದು ಹೇಳಿರುವುದು ಇದು ಸ್ತುತ್ಯ! ಈ ಸಂಸ್ಥೆಗೆ ಜನಾದರವು ಹೆಚ್ಚುತ್ತಿರುವುದು ಈಗಣ ಸಮರ್ಪಕ ಆಡಳಿತದ ಫಲವೆನ್ನಬಹುದು. ಈಗಣ ಮೆನೇಜರಾದ ಶ್ರೀ ಎಲ ಎಸ್ ನಾಯಕರು ಸರ್ವಜನ ಪ್ರಿಯರು, ಡಾಯರೆಕ್ಟರುಗಳು ಇವರ ಸಂಚಾಲಕತ್ವದಲ್ಲಿ ಬೇಂಕಿನ ಅಭಿವೃದ್ಧಿಯು ಶೀಘ್ರಗತಿಯಲ್ಲಾಗುತ್ತಿ ಎವುದು ಆಶ್ಚರ್ಯವಲ್ಲ, ಆದರೆ ಆನಂದದ ವಿಷಯ.

WANTED

A manager for the Srimad Anantheshwar Temple Manjeshwar Pay according to qualifications Security for Rs. 3000 essential. Applications to reach the undersigned by the 15th of March 1936

K P Madhav Rau, M L
Trustee, Srimad Anantheshwar Temple,
MANJESHWAR.



HASAG

ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು. ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಲ್ಲವೂ ಹೊಸ ಮಾದರಿ. ಈಗಾಗಲೆ ಸಾವಿರಗಳಷ್ಟು ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ, ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR



ಎಫಾರ್

ಎಂಬುದು ಇನ್ನೊಂದು ಅಪೇಕ್ಷ ದೀಪ ಇದು ಎಲ್ಲ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಮನೆಯ ಕೆಲಸಗಳಿಗೆ ಬಹಳ ಯೋಗ್ಯವಾಗಿರುವದು

Sole Representatives F. Racek & Co.,

Bombay	Calcutta	Madras	Colombo
P O Box	P O Box	P O Box	P O Box
2006	2121	1248	8??

THE 1935 MODEL

HEAVY DUTY TRUCK



For Your Haulage

U SUBRAYA NAYAK,

FORD DEALER

SHIMOGA—AND—MANGALORE.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ರೋಗ ವಾಯುಗಳನ್ನು ಹಿಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ 1–8–0 8 ಔನ್ಸ್ ರೂ 0–14–0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಆಯೊಡ್ಯಾಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

4 ಔನ್ಸ್ ರೂ 1—0—0 8 ಔನ್ಸ್ ರೂ 1—8—0.

ದಕ್ಷಿಣ ಕನ್ನಡದ ಏಜಂಟರು—ಪ್ರೊವಿನ್ಶಿಯಲ್ ಸ್ಟೋರ್ಸ್, ಮಂಗಳೂರು.

Now For Sale.

Poholatum (Balm) (German make) This is a home remedy for Rheumatism Asthma Sciatica Lumbago Insect bites Herpes Wounds Cuts Colds Headache It is complete substitute for the domestic medicine chest Try once this unequalled remedy In ½oz tin As 6 - In oz jar As 12 -

Superior Red Balm For relieving pains in muscles and or skin Directions for use with the bottle Price As 12 - only

Wurmteufel Is a soverign remedy against all sorts of worms in stomach and in the intestines Physicians enjoying authoritativeness describe it as radical remedy and warmly recommed it All those who suffer from worms children and adults try this unique remedy and be freed from your ailment Price As 10 per packet

Pocket Inhaler For coughs and hoarseness headache catarrob, colds use this inhaler and you will be relieved immediately Price per inhaler As 6 & As 8 -

Po-Ho Fluid For Asthma colds indigestion toothache lumbago, a sure remedy in all cases Price As 8 - and Re 1/- per phial

Cough Cure An infallible remedy for coughs of all kinds bronchitis, hoarseness Particulars in bottle. Price As 12 - for 8 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health Price As 1/3, 2/6, 3/-, 4,

Basel Mission Book Depot

Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ಬ್ರಿಟಿಷರು ಇನ್ನೊಂದು ಸುಯೇಜ್ ಕಾಲುವೆಯನ್ನು ರಚಿಸುವರು!

ಹಿಂದೂದೇಶದಲ್ಲಿ ರಚಿಸಿದ ಸ್ಟೀಮರು. ಜರ್ಮನಿಯಲ್ಲಿ ಭಾರತೀಯ ಆಹಾರ ಪ್ರಚಾರ.

ಚಹಾ ಪಾನದ ಪರಿಣಾಮವೇನಾಯಿತು?

ಜರ್ಮನ್ ಪೋಲೆಂಡ ವಾದ

ಜರ್ಮನಿಯ ಒಂದು ರೈಲ್ವೆಯು ಪೋಲೆಂಡಿನಿಂದ ಹಾದು ಹೋಗುತ್ತಿದೆ. ಅದಕ್ಕೆ ಜರ್ಮನಿಯು ಪೋಲೆಂಡಿಗೆ ಬಾಡಿಗೆ ಕೊಡಬೇಕಾಗಿತ್ತು. ಈ ಬಗ್ಗೆ ಜರ್ಮನಿಯು ಪೋಲೆಂಡಿಗೆ ೩॥ ಮಿಲಿಯ ಪವನುಗಳನ್ನು ಕೊಡಲು ಬಾಕಿ ಇದೆ. ಈ ದ್ರವ್ಯವನ್ನು ತನ್ನ ಸ್ವಂತ ಚಲಾವಣೆ ನಾಣ್ಯದಲ್ಲಿ ತನ್ನ ದೇಶದಲ್ಲಿ ಪೋಲೆಂಡಿನ ಲೆಕ್ಕಕ್ಕೆ ಜಮಾ ಮಾಡಿರುವರು. ಆದರೆ ಈ ಹಣವನ್ನು ಈಗಿನ ಎಕ್ಸ್‌ಚೇಂಜನ್ನು ಅನುಸರಿಸಿ, ತನಗೆ ನಗದಾಗಿ ಕೊಡಬೇಕಾಗಿ ಪೋಲೆಂಡಿನವರ ವಾದ. ಜರ್ಮನಿಯು ಇದಕ್ಕೆ ಒಪ್ಪಲು ಸಿದ್ಧವಿಲ್ಲ. ಪೋಲೆಂಡು ರೈಲ್ವೇ ಚಲಾವಣೆಗೆ ಆತಂಕಗಳನ್ನು ಮಾಡುವದೆಂದು ಬೆದರಿಕೆಯನ್ನು ಕಳುಹಿಸಿಕೊಟ್ಟಿರುತ್ತದೆ.

ಸುಯೇಜ್ ಕಾಲುವೆಯಂತೆ ಇನ್ನೊಂದು ಕಾಲುವೆಯನ್ನು ರಚಿಸುವರು.

ಸುಯೇಜ ಕಾಲುವೆಯ ಅಧಿಕಾರವು ಸಂಪೂರ್ಣ ಫ್ರೆಂಚರ ಕೈಯಲ್ಲಿದೆ. ಅದು ಬ್ರಿಟಿಷರ ಅನುಕೂಲತೆಗಳಿಗೆ ಒಪ್ಪುವುದಿಲ್ಲ. ಸಂಪೂರ್ಣ ತಮ್ಮ ಅಧಿಕಾರದಲ್ಲಿರುವಂತೆಯೂ ಇನ್ನಿತರ ಈಗಿನ ಸಂಕಷ್ಟಗಳಿಂದ ಪಾರಾಗಲು, ಬ್ರಿಟಿಷರು, ಸುಯೇಜ ಕಾಲುವೆಯಂತೆ, ಅದರೊಂದಿಗೆ ಇನ್ನೊಂದು ಕಾಲುವೆಯನ್ನು ಬ್ರಿಟಿಷ ಪ್ರದೇಶದ ಒಳಗೆ ತೋಡಬೇಕಾಗಿ ಆಲೋಚನೆಗಳನ್ನು ಮಾಡಿರುವರು. ಇದರ ಕೆಲಸವು ಬೇಗನೆ ಪ್ರಾರಂಭವಾಗುವುದು.

ಪೌರ್ವಾತ್ಯದಲ್ಲಿ ಯುದ್ಧ!

ಮಂಚೂರಿಯಾದ ಹತ್ತಿರವಿರುವ ಮೊಂಗೋಲಿಯಾದ ಗಡಿನಾಡುಗಳಲ್ಲಿ, ಮೊಂಗೋಲಿಯಾನರಿಗೂ ಜಪಾನೀಯರಿಗೂ ಸಮರಪ್ರಾರಂಭವಾಗಿರುತ್ತದೆ. ಜಪಾನೀಯರು ದೊಡ್ಡ ಸೈನ್ಯಮಂಡಳವನ್ನು ಇತ್ತಕಡೆಗೆ ಕಳುಹಿಸಿಕೊಟ್ಟಿರುವರು. ಮೊಂಗೋಲಿಯಾನರು ಈ ಮೊದಲು ಹಿಡಿದ ಪ್ರದೇಶಗಳನ್ನು ಬಿಟ್ಟು ಹಿಂದ ಸರಿದಿರುವರು. ಅನೇಕ ವಿಮಾನಗಳು ಇತ್ತಕಡೆಯ ಯುದ್ಧ ಕಾರ್ಯಗಳಲ್ಲಿ ಉಪಯೋಗಿಸಲ್ಪಟ್ಟಿವೆ. ಈ ಸಮರಕ್ಕೆ ಕಾರಣವು ರಷ್ಯವೆಂದು ವಾರ್ತೆ. ಇಲ್ಲಿ ರಷ್ಯದೊಡನೆ ಇನ್ನೊಂದು ಮಹಾಯುದ್ಧಕ್ಕೆ ಜಪಾನು ಸಿದ್ಧತೆಗಳನ್ನು ಮಾಡುತ್ತದೆ.

ಆಂಗ್ಲೊ ಇಜಿಪ್ಶಿಯನ್ ಒಪ್ಪಂದ.

ಆಂಗ್ಲೇಯರೊಡನೆ ಒಪ್ಪಂದದ ಮಾತುಕತೆಗಳನ್ನು ನಡೆಯಿಸಲು, ೧೩ ಜನರು ಪ್ರತಿನಿಧಿಗಳಿರುವ ಒಂದು ಪ್ರತಿ ಮಂಡಳವು ಗೊತ್ತಾಗಿರುತ್ತದೆ. ನಹಾಸ ಪಾಶಾರವರು ಈ ಮಂಡಳದ ಅಧ್ಯಕ್ಷರು. ಇಬ್ಬರು ಪರಸ್ಪರ ಸಹಕಾರಿಗಳಾಗುವಂತೆಯೂ, ಒಳ್ಳೆ ಮೈತ್ರಿಯು ಉಂಟಾಗುವಂತೆಯೂ, ಈ ಮಂಡಳವು ಸಾಧಿಸುವುದಂತೆ. ಈ ಮಂಡಳದಲ್ಲಿ ಎಲ್ಲಾ ಪಂಗಡದ ಪ್ರತಿನಿಧಿಗಳಿರುವರು. ಬ್ರಿಟಿಷ ಕಮಿಶನರಾದ ಸರ್ ಮ್ಯಾಲ್ಸ ಲೆಂಪ್‌ಸನರು, ಈ ಒಪ್ಪಂದದ ಮಾತುಕತೆಗಳು ಸರಿಯಾಗಿ ನಡೆಯುವಂತೆ ಸಾಧಿಸುವೆನೆಂದು ಮಾತು ಕೊಟ್ಟಿರುವರು.

ಶಾಂತಿಸ್ಥಾಪನೆಗಾಗಿ.

ಎರಡು ಅಮೇರಿಕಾ ಖಂಡಗಳ ವಿವಿಧ ರಾಜ್ಯಗಳ ಶಾಂತಿಸ್ಥಾಪನೆಯಾಗಲು, ಒಂದು ಇಂಟರ್ ಅಮೇರಿಕಾ ಪರಿಷತ್ತನ್ನು ನಡೆಯಿಸಬೇಕಾಗಿ ಪ್ರೆಸಿಡೆಂಟ್ ರೂಸ್‌ವೆಲ್ಟರು ದಕ್ಷಿಣ ಅಮೇರಿಕಾ ಆರ್ಜೆಂಟಿನಾದ ಅಧ್ಯಕ್ಷರಿಗೆ ಒಂದು ಪತ್ರ ಬರೆದಿರುವರು. ಈ ಪರಿಷತ್ತನ್ನು ಯಾವದಾದರು ಒಂದು ಅಮೇರಿಕಾದ ಮುಖ್ಯ ಪಟ್ಟಣದಲ್ಲಿ ಕರೆಗಿಸಿ, ಅಮೇರಿಕನ್ ರಿಪಬ್ಲಿಕ್‌ಗಳಲ್ಲಿ ಶಾಂತಿಸ್ಥಾಪನೆ ಮಾಡುವ ಉಪಾಯಗಳನ್ನು ಆಲೋಚನೆಮಾಡಬೇಕೆಂದೂ, ಇದು ಎಲ್ಲಾ ಅಮೇರಿಕನ್ ದೇಶಗಳಲ್ಲಿರುವ ಪರಸ್ಪರ ಶಾಂತಿ ಒಪ್ಪಂದಗಳನ್ನು ಬದಲಾವಣೆ ಮಾಡಲೂ ಇಲ್ಲಿ ಚರ್ಚೆ ನಡೆಯಿಸಬೇಕಾಗಿಯೂ, ಹೀಗೆ ಮಾಡಿದರೆ, ಈ ಎಲ್ಲಾ ರಾಜ್ಯಗಳಲ್ಲಿ ಪರಸ್ಪರ ಮೈತ್ರಿಯು ಉಂಟಾಗುವುದೆಂದೂ ಇವರ ಮತ.

ಹಿಂದೂದೇಶದಲ್ಲಿ ರಚಿಸಿದ ಸ್ಟೀಮರು.

ನಮಗೆ ಬೇಕಾದ ಸ್ಟೀಮರುಗಳು ಪಾಶ್ಚಾತ್ಯದಿಂದ ಬರಬೇಕಾಗಿತ್ತು. ಆದರೆ, ಕಲ್ಕತ್ತೆಯ ರಾಜರ ಆಶ್ರಯದಲ್ಲಿ ಹಿಂದೀ ಇಂಜಿನಿಯರರು, ಒಂದು ಸ್ಟೀಮರನ್ನು ಸಿದ್ಧಪಡಿಸಿರುವರು. ಇದು ಮುಂಬಾಯಿಗೆ ಬಂದಿರುತ್ತದೆ. ಅನೇಕ ಪತ್ರಿಕಾ ಪ್ರತಿನಿಧಿಗಳು ಇದನ್ನು ನೋಡಿ ಬಂದಿರುವರು. ಇದರ ಪ್ರಮಾಣವು ೧೧೧ ಅಡಿ × ೧೯ ಅಡಿ ಆಗಿರುತ್ತದೆ. ೩೨೦ ಅಶ್ವಶಕ್ತಿಯ ಇಂಜಿನಿನಿಂದ ಕೂಡಿರುತ್ತದೆ. ಇಂಜಿನ್ ಮಾತ್ರ ಹೊರಗಿನ ದೇಶದಲ್ಲಿ ತಯಾರಾದುದು. ಎಲ್ಲಾ ವಿಧದಲ್ಲೂ ಇದು ಪಾಶ್ಚಾತ್ಯದಲ್ಲಿ ತಯಾರಾಗುವ ಸ್ಟೀಮರುಗಳನ್ನು ಹೋಲುತ್ತದೆ. ನಾವೆಗಳನ್ನು ರಚಿಸುವ ನಮ್ಮ ಹಳೆ ಕೈಗಾರಿಕೆಯನ್ನು ಪ್ರಾರಂಭಿಸಲು ಇದೊಂದು ಸೋಪಾನವಾಗಿರುತ್ತದೆ. ಇತರ ಕೈಗಾರಿಕಾ ದೇಶಗಳಂತೆ, ನಮ್ಮಲ್ಲಿ ಎಲ್ಲಾ ಲೋಹಗಳೂ, ಕಲ್ಲಿದ್ದಲು ಇತ್ಯಾದಿಗಳು ದೊರಕುತ್ತವೆ. ಆದುದರಿಂದ ಬೇಗನೆ ಪ್ರಾರಂಭವಾಗುವ ಮೋಟಾರು ಕೈಗಾರಿಕೆಯೊಂದಿಗೆ ಈ ಕೈಗಾರಿಕೆಯು ಪ್ರಾರಂಭವಾದರೆ, ಆಗ್ಗೆ ಹಿಂದೂದೇಶದ ಸಾಂಪತ್ತಿಕ ಸ್ಥಿತಿಯು ಸ್ವಲ್ಪ ಸುಧಾರಣೆ ಹೊಂದಿದಂತಾಗುವುದು.

ಭಾರತೀಯ ಆಹಾರಗಳ ಪ್ರಚಾರ.

ಜರ್ಮನಿಯಲ್ಲಿ, ಭಾರತೀಯ ಆಹಾರವು ಅಷ್ಟು ಪ್ರಚಾರವಾಗಲಿಲ್ಲ. ಹಿಂದೀ ಆಹಾರದ ಕುರಿತು ಅವರಿಗೆ ವಿಶೇಷ ಅರಿವೇ ಇಲ್ಲ. ಚಹಾವನ್ನು ತಯಾರಿಸಲು ಯಾರಿಗೂ ತಿಳಿಯುವುದಿಲ್ಲ. ಹಿಂದೂದೇಶದ ಅನೇಕ ಆಹಾರಪದಾರ್ಥಗಳ ಉಪಯೋಗವು ಅವರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಇಂಡಿಯಾ ಸರಕಾರವು ಹಿಂದೂದೇಶದ ರಫ್ತನ್ನು ಉದ್ಧರಿಸುವಂತೆ, ಭಾರತೀಯ ಆಹಾರ, ಚಹಾ ಇತ್ಯಾದಿಗಳ ಕುರಿತು ಪ್ರಚಾರಕಾರ್ಯವನ್ನು ನಡೆಯಿಸುತ್ತಿದ್ದಾರೆ. ಅಲ್ಲಲ್ಲಿ ಸಂತೆಯಲ್ಲಿ ಭಾರತೀಯ ಸಾಮಾನುಗಳಿಂದ ಪದಾರ್ಥಗಳನ್ನು ತಯಾರಿಸುವ ಪ್ರದರ್ಶನಗಳೂ, ಚಾ ತಯಾರಿಸುವ ಪ್ರದರ್ಶನಗಳೂ ನಡೆಯುತ್ತವೆ.

ಹೌರಾ ಸಂಕದ ಕಂಟ್ರಾಕ್ಟು.

ಕಲ್ಕತ್ತಾದ ಹಳೆ ಹೌರಾ ಸಂಕವನ್ನು ತೆಗೆದು ಈಗಿನ ಚಲಾವಣೆಗೆ ತಕ್ಕುದಾದ ಸಂಕವನ್ನು ನಿರ್ಮಿಸಬೇಕಾಗಿ ಇಂಡಿಯಾ ಸರಕಾರವು ನಿರ್ಧಾರಮಾಡಿರುತ್ತದೆ. ಈ ಸಂಕವು ಹಿಂದೂದೇಶದಲ್ಲಿ ಒಂದು ಮಹತ್ವಾದ ಸಂಕವಾಗುವುದು. ಇದರ ಕಂಟ್ರಾಕ್ಟಿಗೆ ಪಾಶ್ಚಾತ್ಯದೇಶಗಳಿಂದ ಟೆಂಡರುಗಳು ಬಂದಿವೆ. ಆದರೆ, ಬಂಗಾಳ ಸರಕಾರವು ಈ ಕಂಟ್ರಾಕ್ಟನ್ನು ಹಿಂದೂದೇಶದವರಿಗೇನೇ ಕೊಟ್ಟು, ಹಿಂದೂದೇಶದಲ್ಲಿ ತಯಾರಾಗುವ ಉಕ್ಕಿನ ವ್ಯಾಪಾರವು ಅಭಿವೃದ್ಧಿಗೊಳ್ಳುವಂತೆಯೂ, ಹಿಂದೂದೇಶದ ಹಣವು ಹೊರಗೆ ಹೋಗದಂತೆ ಮಾಡಬೇಕೆಂದೂ ಇಂಡಿಯಾ ಸರಕಾರದೊಡನೆ ಮನವಿಮಾಡಿರುವರು.

ಚಾ ಪಾನದ ಪರಿಣಾಮವೇನಾಯಿತು?

ಕಾನ್‌ಪುರದಲ್ಲಿ ಒಂದು ಮನೆಯಲ್ಲಿ ಮದುವೆ. ದಿಬ್ಬಣವು ಬಂದಿತ್ತು. ಸಾಧಾರಣ ೩೫೦ ಜನರು ನೆರೆದಿದ್ದರು. ಬಂದವರಿಗೆ ಚಾ ಪಾನವು ಕೊಡಲಾಯಿತು. ಎಲ್ಲರೂ ಚಾವನ್ನು ಸೇವಿಸಿದರು. ಕೂಡಲೇ ಸಾಧಾರಣ ೨೦೦ ಮಂದಿ ಅಸ್ವಸ್ಥಹೊಂದಿ ಕಾರಲಿಕ್ಕಾರಂಭಿಸಿದರು. ಡಾಕ್ಟರರನ್ನು ಕರೆಯಲಾಗಿ, ಅವರು ಉಪಯೋಗಿಸಿದ ಚಾದಲ್ಲಿ ವಿಷಪ್ರಯೋಗವಾಗಿರುತ್ತದೆಂದು ತಿಳಿದುಬಂತು. ಸರಿಯಾಗಿ ಕಲಾಯಿ ಇಲ್ಲದ ಪಾತ್ರೆಯಲ್ಲಿ ಚಾವನ್ನು ತಯಾರು ಮಾಡಿದ್ದರಂತೆ. ಎಲ್ಲರನ್ನೂ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಎಲ್ಲರೂ ಗುಣಹೊಂದಿದರು. ಮದುವೆಯು ಸಾಂಗವಾಗಿ ನಡೆಯಿತು.

ಡಿಲ್ಲಿಯಲ್ಲಿ ಮುಸ್ಲಿಂ ನಾಯಕರ ಪರಿಷತ್ತು.

ಅಖಿಲ ಭಾರತ ಮುಸ್ಲಿಮ ನಾಯಕರ ಪರಿಷತ್ತು ಡಿಲ್ಲಿಯಲ್ಲಿ ಇದೇ ತಾ. ೧೬ರಲ್ಲಿ ಆಘಾಖಾನರ ಅಧ್ಯಕ್ಷತೆಯಲ್ಲಿ ಜರಗಿತು. "ಹಿಂದೂದೇಶಕ್ಕೆ ಡೊಮಿನಿಯನ್ ಸ್ಟೇಟಸ್ಸಾದರೂ ದೊರಕಬೇಕು. ಭಾರತೀಯರಿಗೆ ಬಹೀರ್ ದೇಶಗಳಲ್ಲಿ ಯೋಗ್ಯ ಮಾನಮರ್ಯಾದೆಗಳು ದೊರಕುವುದಿಲ್ಲ. ಇದು ಅವರ ರಾಜಕೀಯ ಸ್ಥಿತಿಯಿಂದಾಗಿ, ಸ್ವತಂತ್ರ ಸಾಧನೆಕಾರ್ಯದಲ್ಲಿ ಎಲ್ಲಾ ಕೋಮುವಾರು ಬೇಧಗಳನ್ನು ಮರೆಯಬೇಕು. ಹಿಂದೂ ಮುಸ್ಲಿಮರೆಲ್ಲರೂ ಐಕ್ಯದಲ್ಲಿ ಚಳವಳವನ್ನು ನಡೆಸಬೇಕು" ಎಂದು ಆಘಾಖಾನರು ಭಾಷಣಮಾಡಿದರು. ಇದರ ಮೇಲೆ ಹೊಂದಿಕೊಂಡು, ಮುಸ್ಲಿಮರ ಮುಂದಿನ ವರ್ತನೆಯ ಕುರಿತು ಠರಾವುಗಳಾದುವು.

ಕಂದಾಯ ರಿಯಾಯಿತಿ.

ಮದ್ರಾಸು ಸರಕಾರದವರು ಕಳೆದ ವರ್ಷದಂತೆಯೇ ಈ ವರ್ಷವೂ ಕಂದಾಯದಲ್ಲಿ ರಿಯಾಯಿತಿಯನ್ನು ತೋರಿಸಲು ನಿರ್ಧರಿಸಿದ್ದಾರೆ.

ಹಿಂದೂದೇಶದ ಬೆಂಕಿಪೆಟ್ಟಿಗೆಯ ಆಮದು

ಬಹೀರ್ ದೇಶದಿಂದ ಹಿಂದೂದೇಶಕ್ಕೆ ಬಂದ ಬೆಂಕಿಪೆಟ್ಟಿಗೆ

1923	24	ರೂ. 145,92,000
1924	25	88,89000
1925	26	98,45000
1926	27	65,60000
1927	28	39,87000
1928	29	17,22000
1929	30	10.89000
1930	31	4,11000
1931	32	1,05000
1932	33	52000

ಉತ್ತರ ಚೀನಾದೇಶದ ಸ್ವಯಂ ಪ್ರಭುತ್ವ ಚಳವಳ.

ಉತ್ತರ ಚೀನಾದಲ್ಲಿ ಜಪಾನೀಯರ ಪ್ರೇರಣೆಯಿಂದ ಉಂಟಾದ ಸ್ವಯಂಪ್ರಭುತ್ವ ಚಳವಳವು ಮುಂದೆ ಸಾಗುತ್ತಿದೆ. ಚೀನಿಯ ವಿದ್ಯಾರ್ಥಿಗಳು ಜಪಾನೀಯರನ್ನು ಖಂಡಿಸಿ ಪ್ರಚಾರಕಾರ್ಯ ಮಾಡುತ್ತಿದ್ದಾರೆ. ಜಪಾನೀಯರು ತಮ್ಮ ಸಂಗ್ರಾಮ ಬಲದಿಂದ ತಮ್ಮ ಉದ್ದೇಶಗಳನ್ನು ಸಾಧಿಸುತ್ತಿದ್ದಾರೆ. ಆದಷ್ಟು ಬೇಗನೆ, ಇಲ್ಲಿನ ಐದು ಪ್ರಾಂತ್ಯಗಳನ್ನು ತಂತಮ್ಮಲ್ಲಿ ಸೇರಿಸಿಕೊಳ್ಳುವುದು ಅವರ ಮುಖ್ಯ ಉದ್ದೇಶವಾಗಿರುತ್ತದೆ.

ಹಳೆಯ ಕಾಂ। ಅಧ್ಯಕ್ಷರಾದ ಸರ್ ದಿನ್ಶಾ ವಾಚಾರವರು ದಿವಂಗತರಾದರು.

ಅತೀ ಹಳೆಯ ಕಾಂಗ್ರೆಸ್ ಅಧ್ಯಕ್ಷರಾದ ಸರ್ ದಿನ್ಶಾ ವಾಚಾ ಇವರು ತಮ್ಮ ೯೨ನೇ ಪ್ರಾಯದಲ್ಲಿ ಇದೇ ತಾ ೧೮ರಲ್ಲಿ ಸ್ವರ್ಗಸ್ಥರಾದರು. ಕೆಲವು ತಿಂಗಳ ಹಿಂದಿನಿಂದ ಇವರಿಗೆ ದೇಹಾಲಸ್ಯವಾಗಿತ್ತು. ಕಾಂಗ್ರೆಸ್ ಸುವರ್ಣಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಇವರಿಗೆ ಸಾಧ್ಯವಾಗಲಿಲ್ಲ. ಶ್ರೀ। ಬಾಬೂ ರಾಜೇಂದ್ರ ಪ್ರಸಾದರು, ಈ ಸಮಯ ಅವರ ಭೇಟಿಮಾಡಿದ್ದರು. ದೇಶಸೇವಾ ಕಾರ್ಯಗಳಲ್ಲಿ ತುಂಬಾ ಉತ್ಸಾಹವಂತರಾಗಿದ್ದರು. ರಾಜಕೀಯ ರಂಗದಲ್ಲಿ ಭಾರೀ ಸಾಹಸಪಟ್ಟವರು. ಅಲ್ಲದೆ ಬಹಳ ಗೌರವಸ್ಥಾನ ಪಡೆದಿದ್ದರು. ಇವರು ಕಾಂಗ್ರೆಸ್‌ನ ೧೭ನೇ ಅಧಿವೇಶನದ ಅಧ್ಯಕ್ಷರು. ಅನೇಕ ವ್ಯಾಪಾರ ಸಂಸ್ಥೆಗಳಲ್ಲೂ ಬ್ಯಾಂಕಿಂಗ್ ಸಂಸ್ಥೆಗಳಲ್ಲೂ ಡೈರೆಕ್ಟರ್ ಪದವಿಯನ್ನು ಹೊಂದಿದವರು. ಇಂಪೀರಿಯಲ್ ಬ್ಯಾಂಕಿನ ಗವರ್ನರರಾಗಿದ್ದರು. ಸಾರ್ವಜನಿಕ ಕಾರ್ಯಗಳಲ್ಲಿ ಇವರು ಹೆಸರು ಎಲ್ಲೆಲ್ಲೂ ಕಾಣುತ್ತಿತ್ತು. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ೧೮೯೬ರಿಂದ ೧೭ ವರ್ಷಗಳ ವರೆಗೆ ಜನರಲ್ ಸೆಕ್ರೆಟರಿಗಳಾಗಿ ಶ್ರಮಪಟ್ಟವರು. ಸರಕಾರದ ಅನೇಕ ಸಮಿತಿಗಳಲ್ಲಿ ಗೌರವಪದವಿಯನ್ನು ಹೊಂದಿದವರು. ೩೦ ವರ್ಷಗಳ ಸಮಯ ಮುಂಬಾಯಿ ನಗರಸಭೆಯ ಸದಸ್ಯರಾಗಿದ್ದರು. ಕಳೆದ ೪೫ ವರ್ಷಗಳಲ್ಲಿ ಅನೇಕ ಪತ್ರಗಳಿಗೆ ಅನೇಕ ವಿಚಾರಗಳ ಕುರಿತು ಲೇಖನಗಳನ್ನು ಕೊಟ್ಟಿರುವರು.

ಎಥಿಯೋಪಿಯಾದಲ್ಲಿ ಭಾರೀ ಮಳೆ.

ಎಥಿಯೋಪಿಯಾದಲ್ಲಿ ಮಳೆಗಾಲವು ಪ್ರಾರಂಭವಾಗಿರುತ್ತದೆ. ಬಹಳ ಮಳೆಯು ಸುರಿಯುತ್ತದೆ. ಎಲ್ಲ ಮಾರ್ಗೋಪಾಯಗಳೂ ಭಯಂಕರ ಸ್ಥಿತಿಯಲ್ಲಿವೆ. ಅವುಗಳನ್ನು ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಮೋಟಾರು ವಾಹನಗಳ ಚಲಾವಣೆಯು ನಿಲ್ಲಿಸಬೇಕಾಗುವುದು. ಇಟೇಲಿಯಾನರ ಭಾರವಾದ ನವೀನ ಯಂತ್ರೋಪಕರಣಗಳನ್ನು ಅತ್ತ ಇತ್ತ ಸಾಗಿಸಲು ಇದೊಂದು ದೊಡ್ಡ ಆತಂಕವಾಗಿದೆ. ಮಳೆಯು ಹಬಸಿಯರಿಗೆ ದೈವಸಹಾಯವೆನ್ನಬಹುದು.

ಎಡೊವಾ-ಮಕಾಲೆ ರಸ್ತೆಯನ್ನು ಕಡಿದು ಹಾಕಿರುವರು.

ಮಕಾಲೆಯನ್ನು ಭದ್ರಗೊಳಿಸುವ ಇಟೇಲಿಯಾನ ಸೈನಿಕರಿಗೆ ಆಹಾರ ಇತ್ಯಾದಿಗಳು ಎಡೋವಾದಿಂದ ಬರಬೇಕಾಗಿತ್ತು. ಆದರೆ, ಹಬಸಿಗಳು ಈ ಮಾರ್ಗವನ್ನು ಕಡಿದು ಹಾಕಿರುವರು. ವಾಹನಗಳಿಗೆ ಈ ರಸ್ತೆಯ ಉಪಯೋಗವನ್ನು ಮಾಡಲು ಸಾಧ್ಯವಿಲ್ಲ. ಮಕಾಲೆಗೆ ಹೋಗುವ ಇತರ ಹಾದಿಗಳಲ್ಲಿ ಹಬಸಿಸೈನಿಕರು ತುಂಬಾ ಇದ್ದಾರೆ. ಮಕಾಲೆಯಲ್ಲಿದ್ದ ಸೈನಿಕರಿಗೆ ಈಗ ವಿಮಾನಗಳಿಂದ ಆಹಾರಗಳನ್ನು ಚೆಲ್ಲಬೇಕಾಗಿದೆ.

10,000 ಜನರು ಇಟೇಲಿಯಾನರನ್ನು ತ್ಯಜಿಸಿದರು.

೪೦೦೦ ಇಟೇಲಿಯಾನರ ಇರಿಟ್ರಿಯನ್ ದೇಶಿ ಸೈನಿಕರು ಇಟೇಲಿಯಾನರನ್ನು ತ್ಯಜಿಸಿ ಪಲಾಯನ ಮಾಡಿರುವರು. ಅವರನ್ನು ಹಿಡಿಯಲು ಮಾಡಿದ ಇಟೇಲಿಯಾನರ ಪ್ರಯತ್ನಗಳು ನಿಷ್ಫಲವಾಗಿವೆ. ಇವರು ಪಲಾಯನ ಮಾಡಿ ಕೆನ್ಯಾ ಪ್ರದೇಶವನ್ನು ಸೇರಿರುವರು. ಒಟ್ಟಾರೆ ಇಟೇಲಿಯಾನರನ್ನು ತ್ಯಜಿಸಿದ ಇರಿಟ್ರಿಯಾನರ ಸಂಖ್ಯೆ ೧೦,೦೦೦ವಾಗಬಹುದು.

೧೧ನೇ ಪುಟದಿಂದ ಮುಂದರಿಸಿದುದು.

ತಾಪತ್ರಯಗಳಿಗಾಗಿ ಬೆಂಗಳೂರು ಅತ್ತಕಡೆ ತೆರಳುವವರಾಗಿ ತಿಳಿದು ಹಿಂದೀ ಪ್ರೇಮಿಗಳಿಗೆ ತುಂಬಾ ಬೇಸರವಾಗಿದೆ. ಆದರೂ ಶ್ರೀಯುತರು ಈ ವರೆಗೆ ಹಿಂದೀ ಭಾಷೆಯನ್ನು ಕಲಿಸಿ ಕೆಲವರನ್ನಾದರೂ ತರಬೇತು ಪಡಿಸಿದ ಬಗ್ಗೆ ಊರವರು ಆಭಾರಿಗಳಾಗಿರುವರು. ಊರ ಪ್ರಮುಖರು ಇನ್ನು ಮುಂದಕ್ಕೂ ಹಿಂದೀ ಭಾಷೆಯ ಸೇವೆ ನಡೆಯುವಂತೆ ನೋಡಿಕೊಳ್ಳುವರೆಂದು ಆಶಿಸಲಾಗಿದೆ.

ಮಿತ್ತೂರು: — ಸ್ಥಳೀಯ ಬೋರ್ಡ್ ಶಾಲೆಯಲ್ಲಿ ಆಗಾಗ್ಗೆ "ಯಕ್ಷಗಾನ" ಕೂಟವು ಜರಗುತ್ತದೆಂದು ಈ ಮೊದಲೇ ತಿಳಿಸಿರುತ್ತದೆ. ಆ ಪ್ರಕಾರ ಆರನೆಯ ಕೂಟವು ಕಳೆದ ತಾ. ೧೫—೨—೩೬ನೇ ಶನಿವಾರ ರಾತ್ರಿ ಶ್ರೀಯುತ ಪತ್ತಿ ಈಶ್ವರ ಭಟ್ಟರ ಭಾಗವತಿಕೆಯಿಂದ "ಪಾದುಕಾ ಪಟ್ಟಾಭಿಷೇಕ" ಎಂಬ ಪ್ರಸಂಗವು ಜರಗಿತು. ಜನಸಮೂಹವು ಸಾಧಾರಣ ೧೦೦ರಷ್ಟಿತ್ತು.

ಉಡುಪಿ ಬೇಂಕ್ ಲಿಮಿಟೆಡ್.

ಪ್ರಾಮಾಣಿಕರೂ ಉತ್ಸಾಹಿಗಳೂ ಆದ ಆಡಳಿತಗಾರರಿಂದ ಎಂತಹ ಅದ್ಭುತಕರ ಮಾರ್ಪಾಟನ್ನು ಕಾಣಬಹುದೆಂಬುದಕ್ಕೆ ಮೇಲಿನ ಸಂಸ್ಥೆಯೇ ಉದಾಹರಣೆ. ಮೂರು ವರ್ಷಗಳ ಹಿಂದೆ, ಹಿಂದಣ ಅವ್ಯವಸ್ಥಿತ ಆಡಳಿತದ ದೆಸೆಯಿಂದ ಪಾಲುಗಾರರಿಗೆ ಲಾಭಾಂಶವನ್ನೇನೂ ತೆರಲಿಕ್ಕಿಲ್ಲದ ಈ ಸಂಸ್ಥೆಯು, ಕಳೆದ ವರ್ಷ ನಿವ್ವಳ ಲಾಭಾಂಶವಾಗಿ ದೊರೆತ ರೂ. ೧೧೩—೬—೧೧ನ್ನು ಹಂಚಲಾಸ್ಪದವಿಲ್ಲದೆ, ಈ ವರ್ಷ ಹತ್ತು ಮಡಿ ಲಾಭಗಳಿಸಿ, ಕ್ಷೇಮನಿಧಿ ಮೊದಲಾದುವುಗಳಿಗೆ ಹೇರಳ ಹಣವನ್ನು ತೆಗೆದಿಟ್ಟು ೭½ ಡಿವಿಡೆಂಡು ಹಂಚಿರುವುದು! ಇದು ಸ್ತುತ್ಯ! ಈ ಸಂಸ್ಥೆಗೆ ಜನಾದರವು ಹೆಚ್ಚುತ್ತಿರುವುದು ಈಗಣ ಸಮರ್ಪಕ ಆಡಳಿತದ ಫಲವೆನ್ನಬಹುದು. ಈಗಣ ಮೆನೇಜರರಾದ ಶ್ರೀ। ಎಲ್. ಎಸ್. ನಾಯಕರು ಸರ್ವಜನ ಪ್ರಿಯರು; ಕಾರ್ಯೋತ್ಸಾಹಿಗಳು। ಇವರ ಸಂಚಾಲಕತ್ವದಲ್ಲಿ ಬೇಂಕಿನ ಅಭಿವೃದ್ಧಿಯು ಶೀಘ್ರಗತಿಯಲ್ಲಾಗುತ್ತಿರುವುದು ಆಶ್ಚರ್ಯವಲ್ಲ; ಆದರೆ ಆನಂದದ ವಿಷಯ.

WANTED

A manager for the Srimad Ananthesbwar Temple, Manjeshwar. Pay according to qualifications. Security for Rs. 3000 essential. Applications to reach the undersigned by the 15th of March 1936.

K. P. Madhav Rau, M. L.
Trustee, Srimad Anantheshwar Temple,
MANJESHWAR.



HASAG

ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು. ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಲ್ಲವೂ ಹೊಸ ಮಾದರಿ. ಈಗಾಗಲೆ ಸಾವಿರ ಗಟ್ಟಳೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ. ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚು ಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಸಿಕ್ಕೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR



ಎಫಾರ್

ಎಂಬುದು ಇನ್ನೊಂದು ಅಮೋಘ ದೀಪ ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಮನೆಯ ಶೃಂಗಾರಕ್ಕೆ ಬಹಳ ಯೋಗ್ಯವಾಗಿರುವದು

Sole Representatives F Racek & Co.,

Bombay	Calcutta	Madras	Colombo
P O Box	P O Box	P O Box	P O Box
2006	2121	1248	89

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA—AND—MANGALORE.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂಚಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನೂ ಪರಿಹಾರಮಾಡುವ ಟೋನಿಕ್ಕು.

24 ಔನ್ಸ್ ರೂ 2 16 ಔನ್ಸ್ ರೂ. 1-8-0 8 ಔನ್ಸ್ ರೂ. 0-14-0.

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಆಯೊಡ್ಯಾಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ.

4 ಔನ್ಸ್ ರೂ. 1—0—0 8 ಔನ್ಸ್ ರೂ. 1—8—0.

ದಕ್ಷಿಣ ಕನ್ನಡದ ಏಜಂಟರು—ಪ್ರೊಪ್ಯುಲರ ಸ್ಟೋರ್ಸ್, ಮಂಗಳೂರು.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds, Cuts, Colds, Headache. It is a complete substitute for the domestic medicine chest Try once this unequalled remedy In ¼oz tin As 3/- In dz. jar As. 12/-

Superior Red Balm For relieving pains in muscles and on skin. Directions for use with the bottle Price As 12/- only

Wurmteufel Is a soverign remedy against all sorts of worms in stomach and in the intestines Physicians enjoying authoritativeness describe it as redical remedy and warmly recommed it. All those who suffer from worms, children and adults, try this unique remedy and be freed from your ailment. Price As 10 per packet.

Pocket-Inhaler For coughs and hoarseness, headache catarrch, colds, use this inhaler and you will be relieved immediately. Price per inhaler As. 6/- & As 8/-

'Po-Ho Fluid' For Asthma, colds, indigestion, toothache lumbago, a sure remedy in all cases Price As. 6/- and Re. 1/- per phial

Cough Cure An infallible remedy for coughs of all kinds bronchitis, hoarseness. Particulars in bottle. Price As. 12/- for 3 oz bottle

The New Curative Earth A Radium cure for incurable diseases

Mithra Toilet Soaps—Scientifically prepared German soaps excellent for health. Price As. 1/3; 2/6, 3/-; 4;

Basel Mission Book Depot

Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ವನಿತಾ ವಿಭಾಗ.

ಅಖಿಲಭಾರತ ಸ್ತ್ರೀ ಸಮ್ಮೇಳನದ ಸಂಕ್ಷೇಪ ಚರಿತ್ರೆ.

(ಶ್ರೀಮತಿ ಅರುಣ ಅಸಾಫ್ ಅಲಿ ಎಂಬವರ ಲೇಖನದ ಆಧಾರದಿಂದ)

ಒಂಭತ್ತು ವರುಷಗಳ ಹಿಂದೆ ಬಂಗಾಳ ದೇಶದ ವಿದ್ಯಾಖಾತೆಯ ಡೈರೆಕ್ಟರರು ಹಿಂದೂದೇಶದ ಮಹಿಳೆಯರನ್ನುದ್ದೇಶಿಸಿ ಭಾಷಣ ಕೊಡುತ್ತಿರುವಾಗ "ನೀವೆಲ್ಲರೂ ಏಕಕಂಠದಿಂದಲೂ ಒಮ್ಮನಸ್ಸಿನಿಂದಲೂ ಕಾರ್ಯಾಸಕ್ತರಾಗಬೇಕೆಂದು" ಎಂದು ಹೇಳಿದುದರ ಪರಿಣಾಮವಾಗಿ ವಿದ್ಯಾಭಿಮಾನಿಗಳಾದ ಸ್ತ್ರೀಯರೆಲ್ಲರೂ ಒಟ್ಟುಗೂಡಿ ಒಂದು ಸಂಘವನ್ನು ಸ್ಥಾಪಿಸಿದರು. ಅದೇ ಅಖಿಲ ಭಾರತ ಮಹಿಳಾ ಸಮ್ಮೇಳನವೆಂದಾಯಿತು.

ಕಾಂಗ್ರೆಸಿನ ಮುಂದಾಳುಗಳು ಹೆಂಗಸರನ್ನು ಕಾಂಗ್ರೆಸ ಪಕ್ಷವಾಗಿ ಹೆಣಗಾಡಲು ಹುರಿದುಂಬಿಸಿದರು. ಇದರಿಂದ ಪುರುಷಾರ್ಥವೇನಾಗಲಿಕ್ಕಿಲ್ಲವೆಂದು ಎಣಿಸಿದ ಕಾಂಗ್ರೆಸ್ ಮುಂದಾಳುಗಳು ಲಲನೆಯರು ತಂಡತಂಡವಾಗಿ ಮುಂದೊತ್ತಿ ತಮ್ಮ ಶಕ್ತಿಸಾಹಸಗಳನ್ನು ದೇಶಕ್ಕೆ ತೋರಿದರು. ಇದರಿಂದೆಲ್ಲವೂ ವ್ಯಕ್ತವಾಗುವುದೇನೆಂದರೆ ಮಹಿಳೆಯರಿಗೆ ಸಾಕಷ್ಟು ಉತ್ತೇಜನವು ಪುರುಷರಿಂದ ದೊರಕಿದ್ದಲ್ಲಿ ಅವರು ಯಾವ ಕಷ್ಟತರವಾದ ಕಾರ್ಯವನ್ನಾದರೂ ಸಾಧಿಸಬಲ್ಲರು. ಅವರಲ್ಲಿ ಅಂತಹ ಅಮೋಘಶಕ್ತಿಯು ಅಡಕವಾಗಿದೆ. ಇಷ್ಟರವರೆಗೆ ಸಮ್ಮೇಳನಗಳು ಕೂಡಿ ಪ್ರತಿಸಲವೂ ಸ್ತ್ರೀಯರ ಮೇಲ್ಮೆಯನ್ನು ಬಯಸುವ ಹಲವು ಠರಾವುಗಳನ್ನು ಜಾರಿಗೆ ತಂದವು. ಇವರ ೧೯೨೭ನೇ ವರ್ಷದಲ್ಲಿ ನಡೆದ ಮೊದಲನೆ ಸಮ್ಮೇಳನದ ಅಧ್ಯಕ್ಷೆಯು ಬರೋಡಾದೇಶದ ಮಹಾರಾಣಿಯವರು. ಅಂದಿನಿಂದ ಪ್ರತಿ ವರುಷವೂ ಇಂತಹ ಸಮ್ಮೇಳನಗಳು ಅಗಣಿತ ಉತ್ಸಾಹದಿಂದ ಕೂಡಿ ಲಲನೆಯರ ಹಲಕೆಲವು ಕಷ್ಟ ಪರಂಪರೆಗಳನ್ನು ನಾಶಗೊಳಿಸಿದವೆಂದರೆ ಅತಿಶಯೋಕ್ತಿಯಾಗಲಾರದು. ಸಮಾಜ ಸುಧಾರಣೆಯ ವಿಷಯ ಈ ಸಮ್ಮೇಳನವು ಒಳ್ಳೇ ಕೆಲಸವನ್ನು ಮಾಡಿದೆ. ಯಾವ ಮಹಿಳೆಗೆ ದೇಶದ ಸೇವೆಯನ್ನು ಮಾಡಲು ಇಷ್ಟವಿದೆಯೋ ಅಂತವಳು ಇದರಲ್ಲಿ ಭರ್ತಿಯಾಗಬಹುದು. ಪ್ರತಿಯೊಂದೂ ಸಂಸ್ಥಾನ, ಜಿಲ್ಲೆ, ತಾಲೂಕುಗಳಿಂದ ಪ್ರತಿನಿಧಿಗಳನ್ನು ಕರೆಸಿಕೊಳ್ಳುತ್ತಾರೆ. ಕೇವಲ ೯ ವರುಷಗಳಲ್ಲಿ ಈ ಸಮ್ಮೇಳನದ ಶಾಖೆಗಳು ಪುನಃ ಕವಲುಗಳಾಗಿ ಒಡೆದು ಹಿಂದೂದೇಶದ ಪ್ರತಿಯೊಂದು ಎಡೆಯಲ್ಲೂ ಅದಕ್ಕೆ ಉತ್ತಮವಾದ ಮಾನ ಮರ್ಯಾದೆಯು ದೊರೆಯಿತು. ಮತ್ತೊಂದು ಶ್ಲಾಘನೀಯವಾದ ಸಂಗತಿಯೆಂದರೆ ಎಲ್ಲಾ ಜಾತಿಯವರೂ ಏನೊಂದು ಜಾತಿಭೇದದ ಪಕ್ಷಪಾತವಿಲ್ಲದೆ ಇದರಲ್ಲಿ ಮಿಶ್ರಿತವಾಗಿ ಮಾಡಿದ ಕೆಲಸ. ವಿಮರ್ಶಕರೂ ದ್ವೇಷಾಸೂಯೆಯಿಂದ ಈ ಸ್ತ್ರೀಸಮ್ಮೇಳನಗಳು ಕೇವಲ ಧನಾಢ್ಯ ಸ್ತ್ರೀಯರಿಗೆ ಹೊಂತು ಇತರರಿಗೆ ಇದರಲ್ಲಿ ಪ್ರವೇಶವಿಲ್ಲವೆಂದೂ ಅದ್ದರಿಂದ ಅವರ ಕಷ್ಟಗಳಲ್ಲಿದ್ದ ಅವರಿಗೆ ಬಡ ಗರೀಬರು ಪಡುವಂತ ಸಂಕಷ್ಟಗಳು ಅವರ ಅವರ ತಿಳಿವಳಿಕೆ ಬರುವುದಿಲ್ಲವೆಂದೂ ಒಟಗುಟ್ಟುತ್ತಿರುವರು. ಇದು ಶುದ್ಧ ದುರ್ಭಾವನೆಯೆಂದೇ ಪರಿಗಣಿಸಬೇಕಾಗಿದೆ. ಮೊತ್ತಮೊದಲು ಈ ಸಮ್ಮೇಳನದ ಸದಸ್ಯೆಯರು ತಮ್ಮ ಕೆಲಸಗಳಲ್ಲಿ ಕೃತಕಾರ್ಯಶಾಲಿಗಳಾಗದಿದ್ದರೂ ಅನಂತರ ತಮ್ಮ ಪರಿಶ್ರಮದಿಂದ ಎಲ್ಲವನ್ನೂ ಮನಗಂಡವರಿಗೂ ಸಮ್ಮೇಳನದಲ್ಲಿ ಪ್ರತಿ ಹಳ್ಳಿಗಳಿಂದ ಬರುವ ಸ್ತ್ರೀಗೂ ಸ್ಥಳವನ್ನು ಏರ್ಪಡಿಸಿ ಅವರಿಂದ ತಮಗೆ ಬೇಕಾಗಿರುವ ಸಂಗತಿ ಸಲಹೆಗಳನ್ನು ತೆಗೆದುಕೊಂಡು ಅದಕ್ಕನುಸರಿಸಿ ಸಮಾಜದ ಏಳಿಗೆಯನ್ನು ಈ ಸಮ್ಮೇಳನವು ಸರಾಗವಾಗಿ ಸಾಧಿಸಿದೆ. ಇದೆಲ್ಲವನ್ನೂ ಈ ಸ್ತ್ರೀ ಸಮ್ಮೇಳನದ ಪುಸ್ತಕದ ಪಾನುಗಳನ್ನು ಒಂದೊಂದಾಗಿ ಮಗುಚಿದರೆ ಆದ್ಯಂತವಾಗಿ ತಿಳಿಯಬಹುದು. ವರ್ಷಂಪ್ರತಿ ಜರಗುವ ಈ ಸಮ್ಮೇಳನವು ಸ್ತ್ರೀವಿದ್ಯಾಭ್ಯಾಸ, ಸಮಾಜದಲ್ಲಿ ಸ್ತ್ರೀಯರ ಸ್ಥಾನ, ಚಳವಳಿಯಲ್ಲಿ ಅವರ ಕಾರ್ಯಕಲಾಪಗಳು, ದೇಶೋದ್ಧಾರ ಅವರು ಹೇಗೆ ಸಾಧಿಸಬಹುದು, ಹಿಂದುಳಿದಿರುವ ತಮ್ಮ ಭಗಿನಿವೃಂದವನ್ನು ಪ್ರಂದಕ್ಕೆ ತರುವ ವಿಧಾನವೆಂತು ಇವೆಲ್ಲಾ ಪ್ರಶ್ನೆಗಳನ್ನು ಸಮರ್ಪಕವಾಗಿ ಉತ್ತರಿಸಿ ಅವುಗಳ ಅನುಕರಣೆಯನ್ನು ಯಥಾಪ್ರಕಾರ ಮಾಡಿರುವರು.

ಹೆಣ್ಮಕ್ಕಳ ಮದುವೆಯ ಕುರಿತು ಈ ಸಂಸ್ಥೆಯು ಒಳ್ಳೆ ಕಾರ್ಯವನ್ನೆಸಗಿದೆ. ಸಂಸಾರದ ಸಾರವನ್ನರಿಯದ ಬಾಲ್ಯವಿವಾಹವು ದೇಹಕ್ಕೂ ದೇಶಕ್ಕೂ ಎಷ್ಟೋ ಹಾನಿಕರವಾಗಿದೆ ಎಂದು ಕಣ್ಣಾರೆ ಕಂಡ ಅವರು ಅದರ ನಿಷಿದ್ಧಾರ್ಥವಾಗಿ ಒಂದು ಠರಾವನ್ನು ಮಂಜೂರು ಮಾಡಿ ಅದನ್ನು ಸರಕಾರದ ವಿಮರ್ಶೆಗಾಗಿ ಇಟ್ಟರು. ಮಾನ್ಯ ಸರಕಾರದವರು ಅದನ್ನು ಆಮೂಲಾಗ್ರವಾಗಿ ಓದಿ ಇಡೀ ದೇಶದಲ್ಲಿ ಅದು ಪ್ರಚಾರಕ್ಕೆ ಬರುವಂತೆ ಮಾಡಿದರು.

ಶಾಲಾ ಉಪಾಧ್ಯಾಯಿನಿಯರ ತರಬೇತಿಗಾಗಿ ಒಂದು ವಿಶ್ವವಿದ್ಯಾಲಯವನ್ನೂ ವಿಜ್ಞಾನಶಾಸ್ತ್ರದ ಪ್ರಸರಣೆಗಾಗಿ ಒಂದು ವೈಜ್ಞಾನಿಕ ವಿಶ್ವವಿದ್ಯಾಲಯವನ್ನೂ ಏರ್ಪಡಿಸಿ, ಇದರಲ್ಲಿ ತರಬೇತಿ ಹೊಂದಿದವರನ್ನೂ ಆಯಾಯ ಶಾಲೆಗಳಿಗೆ ಕಳುಹಿಸಿ ವಿದ್ಯಾ ಪ್ರಸರಣೆಯು ಯೋಗ್ಯ ರೀತಿಯಲ್ಲಿ ಸಾಗುವಂತೆ ಮಾಡಿದ್ದು ಈ ಸ್ತ್ರೀ ಸಮ್ಮೇಳನವು.

ಸಮಾಜದಲ್ಲಿ ಹೆಂಗಸರಿಗೂ ಗಂಡಸರಿಗೂ ಏಕವಿಧವಾದ ಹಕ್ಕುಗಳಿರಬೇಕೆಂದೂ, ಜಾತಿಮತ ಭೇದಗಳು ಸಮಾಜದಲ್ಲಿ ಇರಬಾರದೆಂದು ಯಾವ ಸಭೆಗಳಲ್ಲೂ ಸ್ತ್ರೀಯರಿಗೆಂದು ಪ್ರತ್ಯೇಕ ಸೀಟು ಏರ್ಪಡಿಸಿಂದೆ ಅವರಿಗೂ ಗಂಡಸರಂತೆ ಸೀಟುಗಳನ್ನು ಪಡೆಯುವಂತೆ ಸರಿಸಮಾನ ಬಾಧ್ಯತೆಯು ಇರಬೇಕೆಂದೂ ಅವರು ಇಷ್ಟರವರೆಗೆ ಹೆಣಗಾಡುತ್ತಿದ್ದುವರು. ಇದಕ್ಕಾಗಿ ಈ ವಿಷಯ ಲಂಡನಿನ ಎಸೆಂಬ್ಲಿಗೆ ಪ್ರತಿನಿಧಿಯಾಗಿ ಕಳುಹಿಸಲ್ಪಟ್ಟ ಓರ್ವ ಸ್ತ್ರೀಯು ಕೊಟ್ಟ ಭಾಷಣದಿಂದ ತಿಳಿದು ಬರುತ್ತದೆ. ಅಲ್ಲಿಯವರು ಹಿಂದೂ ಸ್ತ್ರೀಯ ವಿಚಿತ್ರ ಚಾತುರ್ಯವನ್ನೂ ವಿಷಯಗರ್ಭಿತ ಭಾಷಣವನ್ನೂ ಕೇಳಿ ದಿಗ್ಭ್ರಾಂತರಾದರಂತೆ.

ದಿಗ್ದರ್ಶಿಗಳು ಈ ಸ್ತ್ರೀ ಸಮ್ಮೇಳನದ ಧ್ಯೇಯಗಳನ್ನೆಲ್ಲಾ ಕ್ರಮಾತ ಓದಿದ ನಂತರ, ಇದು ಬಹುಶಃ ಮಾನವನ ಎದೆ ಮೆಟ್ಟಲು ಸ್ತ್ರೀಯರು ಹೂಡಿದ ವಿಚಿತ್ರವಾದ ಭಾಷಣದ ಬಕ್ತಳಿಕೆಯೆಂದು ಊಹಿಸಬಹುದು. ಆದರೆ ಇದು ಶುದ್ಧ ತಪ್ಪು. ಇದರ ವ್ಯಂಗ್ಯ ತಾತ್ಪರ್ಯವೆಂದರೆ ಸ್ತ್ರೀಯು ಮಾನವನ ಸಹಧರ್ಮಿಣಿಯಾಗಿ ಸಂಸಾರವನ್ನು ಹೇಗೆ ಸುಖಮಯವಾಗಿ ಸಾಗಿಸಬೇಕು, ಜಗತ್ತಿಗೆ ಅವಳು ಹೇಗೆ ದಿವ್ಯ ಜ್ಯೋತಿಯಾಗಿ ಪ್ರಕಾಶಿತವಾಗಬೇಕು ಎಂಬುದನ್ನೇ. ಅದು ಅವರಿಗೆಲ್ಲ ಕಾರ್ಯತಃ ತೋರ್ಪಡಿಸುತ್ತದೆ. ಅದ್ದರಿಂದ ಇದು ಇನ್ನೂ ಯಶಸ್ವಿಯಾಗಿ ತನ್ನ ಕಾರ್ಯಾಂಗಗಳನ್ನು ಸಾಗಿಸಲಿ ಎಂದೆ ಪ್ರಾರ್ಥಿಸಿ ಈ ಲೇಖನವನ್ನು ಕೊನೆಗಾಣಿಸುವ.

ಅಬಿಸೀನಿಯದಲ್ಲಿ ವಿವಾಹ ಶಾಸನ.

ಇದುವರೆಗೂ ಅಬಿಸೀನಿಯಾ ಮಾತೆತ್ತಿದ್ದರೆ ಯುದ್ಧದ ಮಾತೇ ಹೊರತು ಮತ್ತೇನೂ ಇರಲೇ ಇಲ್ಲ. ಅಲ್ಲಿ ಇಷ್ಟು ಮಾತ್ರವಲ್ಲ, ಇನ್ನೂ ಅನೇಕ ಸಂಗತಿಗಳನ್ನು ಆ ದೇಶದಿಂದ ತಿಳಿದುಕೊಳ್ಳಬೇಕಾಗಿದೆ. ಆ ದೇಶದಲ್ಲಿನ ವಿವಾಹ ಶಾಸನಗಳು ಬಹಳ ವಿಚಿತ್ರವಾಗಿ ನಮಗೆ ಕಾಣಬರುತ್ತವೆ.

ಇಷ್ಟಬಂದಾಗ ಮದುವೆಯಾಗಬಹುದು; ಇಷ್ಟಬಂದಾಗ ಡೈವೋರ್ಸ್' ದಾಂಪತ್ಯ ವಿಚ್ಛೇದನವಾಗಬಹುದು. ದಾಂಪತ್ಯ ವಿಚ್ಛೇದನ ತೀರ್ಮಾನ ಪಡೆಯಬೇಕಾದರೆ ಸತಿಪತಿಯರು ಅಗವ್ಯಾಗವಾನ ಅಪವಾದನೆ ಸ್ಥಾಪನೆ ಮಾಡಬೇಕಾದ ಅಗತ್ಯವೇ ಇಲ್ಲ!

ಆ ದೇಶದಲ್ಲಿ ಧರ್ಮವಿವಾಹಗಳಿವೆ, ಶಾಸನಸಮ್ಮತವಾದ ವಿವಾಹಗಳಿವೆ, ಕೂಡಿಕೆಗಳಿವೆ. ಅಲ್ಲಿನ ಕಾನೂನುಗಳು ಆಚಾರಗಳು ಮಾನವನ ದೌರ್ಬಲ್ಯವನ್ನು ಚೆನ್ನಾಗಿ ಅರಿತು ರೂಪುಗೊಂಡವುಗಳಾಗಿವೆ. ಯಾರೊಬ್ಬ ಗಂಡಸಿಗೂ ಗಂಟುಬೀಳದೆ ಹೆಂಗಸು ಒಬ್ಬ ಪುರುಷನೊಂದಿಗೆ ಸಹವಾಸಮಾಡಿ ಸಂತಾನ ಪಡೆಯಬಹುದು. ಧರ್ಮವಿವಾಹಕ್ಕೆ ಬದ್ಧರಾದವರು ಆ ಜನ್ಮ ಸತಿಪತಿಗಳು. ಅವರಲ್ಲಿ ವಿಧವೆಯರಿಗೂ ವಿಧುರರಿಗೂ ವಿವಾಹವಿಲ್ಲ! ಇದು ಚರ್ಚುಗಳಲ್ಲಿ ಪುರೋಹಿತರ ಮೂಲಕ ನಡೆಯುವ ಮದುವೆಗಳು. ಈ ಮದುವೆ ಆ ದೇಶದಲ್ಲಿ ಕಡಿಮೆ.

ಎರಡನೆಯದು ಸಿವಿಲ್ ವಿವಾಹ. ಪ್ರಭುತ್ವ ಶಾಸನವೊಂದಿದೆ. ಪತಿಯು ಸತಿಯ ಸಂರಕ್ಷಣೆಗಾಗಿ ಜಾಮೀನು ಕೊಡಬೇಕು. ಅದರಿಂದ್ದರೂ ಸಂಸಾರ ನಡೆಸುವ ಕಾಲದಲ್ಲಿ ಸಂಪಾದಿಸಿದ ಆಸ್ತಿಗೆ ಇಬ್ಬರೂ ಸಮನಾಗಿ ಪಾಲುಗಾರರು. ದಾಂಪತ್ಯ ವಿಚ್ಛೇದನ ಕಾಲದಲ್ಲಿ ಈ ಆಸ್ತಿ ಸಮವಾಗಿ ಹಂಚಿಕೆಯಾಗುವುದು. ಈ ಕಾಲದಲ್ಲಿ ದೊಡ್ಡವರಾದ ಮಕ್ಕಳೆಲ್ಲ ಅಪ್ಪನ ಆಸ್ತಿ, ಕಿರಿಯ ಕೂಸುಗಳೆಲ್ಲ ಅಮ್ಮನ ಆಸ್ತಿ.

ಮೂರನೆಯದು ಕೂಡಿಕೆ. ನಾಲ್ಕನೆಯದು ಸಂತಾನಕ್ಕಾಗಿ ಮಾಡಿಕೊಳ್ಳುವ ಮದುವೆ!

ಹಾಲೆಂಡಿನ ಹೆಂಗಸರ ಗೋಳಾಟ.

ನಮಗೇನೋ ಗಂಡಸರಿಗಿರುವಂತೆಯೇ ರಾಜಕೀಯವಾದ ಹಕ್ಕುಗಳಿವೆ. ಆದರೆ ನಮಗೆ ಆರ್ಥಿಕ ವಿಚಾರಗಳಲ್ಲಿ ಪೂರ್ಣ ಸ್ವಾತಂತ್ರ್ಯವಿಲ್ಲ. ನ್ಯಾಯ ಶಾಸ್ತ್ರದಲ್ಲಿ ನಮಗೂ ಪುರುಷರಿಗೂ ಪಕ್ಷಪಾತವಿದೆ. ಕೆಲಸಗಾರರ ಸ್ತ್ರೀಯರ ವಿವಾಹ ಸಂಬಂಧವಾದ ಶಾಸನಗಳಂತೂ ಸ್ತ್ರೀ ಕುಲಕ್ಕೆ ಅಪಮಾನಕರವಾಗಿವೆ."

ಈ ಗೋಳು ಹಾಲೆಂಡ್ ದೇಶದ ಸ್ತ್ರೀಯರ ಬಾಯಿಂದ ಕೇಳಬರುತ್ತಿದೆ. ಆ ದೇಶದಲ್ಲಿ ೧ ಮಕ್ಕಳ ವಿಚಾರಣೆಗಾಗಿ ಏರ್ಪಟ್ಟಿರುವ ನ್ಯಾಯ ಸ್ಥಾನಗಳಲ್ಲಿ ಹೆಂಗಸರು ಕೂತು ತೀರ್ಮಾನಕೊಡಲು ಸಮರ್ಥರು. ಇನ್ನೂ ಕೆಲವು ಶಾಖೆಗಳಲ್ಲಿ ಹೆಂಗಸರು ಕೆಲಸಕ್ಕೆ ಅರ್ಹರಲ್ಲ. ೨ ಆರ್ಥಿಕ ಮುಗಟ್ಟಿನಿಂದ ಯಾವಾಗ ಉದ್ಯೋಗಗಳ ಸಂಖ್ಯೆ ಕಡಿಮೆ ಮಾಡಬೇಕಾಗಿ ಬಂದರೂ ಮೊದಲು ಕತ್ತರಿ ಏಟು ಬೀಳುವುದು ಹೆಂಗಸರ ಮೇಲೆ. ೩ ಗಂಡಸರಿಗೆ ಕೊಡುವ ಕೂಲಿ ದರ ಬೇರೆ, ಹೆಂಗಸರಿಗೆ ಕೊಡುವ ಕೂಲಿದರ ಬೇರೆ.

ಕುಲಕ್ಷಯವಾಗಿ ಹೋಯಿತು

ಕಲಿಕತ್ತೆಯ ಮಹಾ ನಗರ. ಅಲ್ಲಿ ಕಿಶೋರ ಮುಜುಂದಾರನೆಂಬ ೭೦ ವರ್ಷದ ಹಣ್ಣು ಹಣ್ಣು ಮುದುಕ ಬಂಗಾಳಾ ಸರಕಾರದ ನಾಲಾ ಶಾಖೆಯ ಒಂದು ಸಣ್ಣ ಉದ್ಯೋಗದಲ್ಲಿದ್ದು ನಿವೃತ್ತನಾದವ. ಆತನಿಗೆ ೭ ಮಂದಿ ಹೆಣ್ಣು ಮಕ್ಕಳು ಒಬ್ಬ ಮಗ. ಮೂರು ಮಂದಿ ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ. ಅದರ ಮೂವರೂ ತಮ್ಮ ತಮ್ಮ ಪತಿಗೃಹಗಳಲ್ಲಿದ್ದಾರೆ.

ಕೆಲವು ತಿಂಗಳ ಹಿಂದೆ ವೃದ್ಧ ಮುಜುಂದಾರನ ಒಬ್ಬನೇ ಮಗ ಸುಶೀಲನು ಥಾಕೂರಿಯ ಸರೋವರದಲ್ಲಿ ಬಿದ್ದು ನೀರು ಪಾಲಾದ.

ನಾಲ್ಕು ಮಂದಿ ಹೆಣ್ಣು ಮಕ್ಕಳಲ್ಲಿ ಯಾರಿಗೂ ಇನ್ನೂ ಮದುವೆಯಿಲ್ಲ. ೨೪, ೨೨, ೨೦, ೧೮ ಇದು ಆ ನಾಲ್ವರ ವಯಸ್ಸು. ವೃದ್ಧನು ಇವರಿಗೆ ಮದುವೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದ. ಸರಿಯಾದ ವರಗಳಿಲ್ಲ. ಯಾರೂ ಮದುವೆಯಾಗಲೊಲ್ಲರು. ಬೆಳೆದ ಹೆಣ್ಣು ಮಕ್ಕಳನ್ನು ಕಂಡು ಮುದುಕನು ದಿಕ್ಕು ಕಾಣದೆ ತಹತಹ ಪಡುತ್ತಿದ್ದ. ನಾಲ್ವರು ಹೆಣ್ಣು ಮಕ್ಕಳಿಗೂ ತಂದೆಯ ಮೇಲೆ ಬಹಳ ಪ್ರೇಮ. ಆತನ ದುಃಖ ಕಂಡು ಅವರು ಸಹಿಸಲಾರರು.

ಜನೇ ತಾರೀಕಿನ ದಿನ ರಾತ್ರಿ ನಾಲ್ವರೂ ಹೋಗಿ ಅವರವರ ಹಾಸಿಗೆಗಳಲ್ಲಿ ಮಲಗಿದರು. ಬೆಳಗ್ಗೆ ನೋಡಲಾಗಿ ನಾಲ್ವರೂ ಅಗಲೋ ಅಗಲೋ ಪ್ರಾಣಬಿಡುವುದರಲ್ಲಿದ್ದಾರೆ. ತಕ್ಷಣ ನಾಲ್ವರನ್ನೂ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ಚಿಕಿತ್ಸೆಗಾಗಿ ಒಯ್ದರು. ದಾರಿಯಲ್ಲಿ ಇಬ್ಬರು ಸತ್ತರು. ಆಸ್ಪತ್ರೆ ಸೇರುತ್ತಲೇ ಮೂರನೆಯವಳು ಸತ್ತಳು. ನಾಲ್ಕನೆಯವಳು ಕೊರಗುತ್ತಿದ್ದಾಳೆ.

ಕಥೆ ಸಣ್ಣದು ನಾಲ್ವರು ಹೆಣ್ಣು ಮಕ್ಕಳು.

"ನಮಗೆ ಮದುವೆ ಮಾಡಲಾರದೆ ಅಪ್ಪನು ದುಃಖಪಡುತ್ತಿದ್ದಾನೆ. ನಾವು ಅವನ ದುಃಖವನ್ನು ನೆಟ್ಟಿಸುತ್ತಿದ್ದೇವೆ. ಆದುದರಿಂದ ಅಪ್ಪನಿಗೆ ವರಗಳನ್ನು ಹುಡುಕುವ ಕಷ್ಟ, ಹಣವನ್ನೊದಗಿಸುವ ಕಷ್ಟ ಇದನ್ನೆಲ್ಲ ಇಲ್ಲದಂತೆ ಮಾಡೋಣ" ಎಂದು ಸಂಕಲ್ಪ ಮಾಡಿದರು. ನಾಲ್ವರೂ ಅಫೀಮನ್ನು ಸೇವಿಸಿದರು, ಬಿದ್ದರು.

ಕುಲಕ್ಷಯವಾಗಿ ಹೋಯಿತು! ಹಿಂದೂ ಸಮಾಜವೇತಿಷ್ಟು ಕುಲಗೆಟ್ಟು ಹೋಯಿತೋ ಹೇಳಬಲ್ಲವರು ಯಾರು ಯಾರು? ಕಲಿತವರಿಗೆ ಉದ್ಯೋಗಗಳಿಲ್ಲ. ಹೆಣ್ಣು ಮಕ್ಕಳನ್ನು ಮದುವೆಯಾಗುವವರಿಲ್ಲ. ಹಳೆಯ ಆಚಾರಗಳಿಗೆ ಜೀವವಿಲ್ಲ, ಹೊಸ ಪದ್ಧತಿಗಳು ನಮ್ಮ ಜೀವನಕ್ಕೆ ಹೊಂದಲಿಲ್ಲ. ಹೀಗೆ ಎಲ್ಲ ಅಸ್ತವ್ಯಸ್ತವಾಗಿ ಹೋಗಿದೆ. ಸಮಾಜ ಮುಖ್ಯರು ಕರ್ತವ್ಯಪರರಾಗಬೇಕು. ಸುಮ್ಮನೆ ಕೂಡ್ರಲಾಗದು.

ಅನುಕೂಲ ದಾಂಪತ್ಯ?

ಷೆಲ್ಲಿ ಎಂಬುವನ ಹೆಸರು ಆಂಗ್ಲ ಸಾಹಿತ್ಯದಲ್ಲಿ ಸ್ಥಿರವಾದುದು. ಆತನು ಮಹಾಕವಿಗಳಲ್ಲಿ ಒಬ್ಬ. ಆತನು ಶ್ರೀಮತಿ ಹ್ಯಾರಿಯಟ್ ಎಂಬಾಕೆಯನ್ನು ಒಲಿದು ಮದುವೆಯಾದ. ಯಾರೋ ಅವನ ಗೆಳೆಯರೊಬ್ಬರು "ಈಕೆಯನ್ನು ವರಿಸಲು ನೀವು ಕೊಡುವ ಕಾರಣಗಳೇನು" ಎಂದು ಕೇಳಿದರು. ಆಗ ಷೆಲ್ಲಿಯು "ನೋಡಲು ರಮಣೀಯವಾಗಿದ್ದಾಳೆ. ಗಾಂಭೀರ್ಯವಿದೆ, ಧ್ವನಿ ಮನೋಹರವಾಗಿದೆ, ಮಾತು ಮಧುರವಾಗಿದೆ, ಚಿತ್ತವೃತ್ತಿಯೂ ಉಲ್ಲಾಸಕರವಾಗಿದೆ. ಶುಭ್ರವೂ ಸರಳವೂ ಆದ ಉಡಿಗೆ ತೊಡಿಗೆಗಳು. ಹಿತವಾದ ನಡತೆ, ವಿದ್ಯಾವತಿ. ಹಾಡಬಲ್ಲಳು. ಇನ್ನೇನು ಬೇಕು? ಅಂದ!

ಕೊಂಚ ಕಾಲದ ಮೇಲೆ ಅದೇ ಷೆಲ್ಲಿಯು "ಇವಳಿಗೆ ಕವಿತಾ ಸಾಮರ್ಥ್ಯವಿಲ್ಲ, ವೈರಾಗ್ಯವಿಲ್ಲ" ಎಂಬದಾಗಿ ಹೇಳಿದ. ಹ್ಯಾರಿಯಟ್ ಸತೀಮಣಿಯು ಆತ್ಮಹತ್ಯೆ ಮಾಡಿಕೊಂಡಳು.

ವಿಧವಾ ವಿವಾಹ.

ಶ್ರೀಮತಿ ಅಹಲ್ಯಾಬಾಯಿಯವರು ೯-೨-೩೬ರಲ್ಲಿ ಚನ್ನಪಟ್ಟಣದಲ್ಲಿ ಭಾಷಣಮಾಡುತ್ತ "ನಾನು ಹತ್ತು ವರ್ಷದ ಹುಡುಗಿ. ಆಗ ನನ್ನ ಗಂಡ ಸತ್ತುಹೋದ. ಸುಂದರವಾದ ನನ್ನ ಕೂದಲನ್ನು ಹೇಗೆ ಕತ್ತರಿಸಲಿ? ಅರಸಿನ ಕುಂಕುಮ ಹೇಗೆ ಬಿಡಲಿ? ಕೈಬಳೆಗಳನ್ನು ಹೇಗೆ ಬಿಚ್ಚಿಹಾಕಲಿ? ಹೀಗೆ ಅತ್ತು ಅತ್ತು ಕಣ್ಣೀರಿಟ್ಟೆ. ಪತ್ರಿಕೆಗಳಲ್ಲಿ ಬಾಲವಿಧವೆಯರ ಗೋಳು ಎಂಬ ಲೇಖನಗಳನ್ನೂ ಓದುತ್ತ ಬಂದೆ. ನನಗೆಲ್ಲ ವಿಶದವಾಗುತ್ತ ಬಂತು. ವಿಧವೆಯೆಂಬ ವ್ಯವಸ್ಥೆಯಿಂದ ಸಮಾಜದಲ್ಲಿ ನೀತಿ ಕೆಡುತ್ತಿದೆ. ಇದು ಹೋಗಬೇಕು. ವಿಧವೆಯರಿಗೆ ವಿವಾಹವಾಗಬೇಕು. ಶಾಸನ ಒಂದಾಗಬೇಕು. ಶ್ರೀ ಕೆ ಟಿ ಬಾಷ್ಯಂ ಶ್ರೀ ರಾಮಚಂದ್ರನ್‌ರವರು ಒಂದು ಮಸೂದೆ ತಂದಿದ್ದಾರೆ. ಅದಕ್ಕೆಲ್ಲ ನೀವು ಬೆಂಬಲ ಕೊಡಬೇಕು" ಎಂಬದಾಗಿ ಹೇಳಿದರು. ಸಿವಿಕ್ ಅಂಡ್ ಸೋಷಿಯಲ್ ಸರ್ವಿಸ ಸಂಸ್ಥೆಯ ಪರವಾಗಿ ಶ್ರೀಮತಿಯವರು ವಿಧವಾ ವಿವಾಹ ಮಸೂದೆಯ ಪ್ರಚಾರ ಕಾರ್ಯವನ್ನು ಕೈಕೊಂಡಿದ್ದಾರೆ.

ಮಾರ್ಗರೇಟ್ ಸ್ಯಾಂಗರೂ ಭಾರತ ಮಹಿಳೆಯರೂ

ಸಂತಾನ ನಿರೋಧ ಪ್ರಚಾರಕಳಾದ ಶ್ರೀಮತಿ ಮಾರ್ಗರೇಟ್ ಸ್ಯಾಂಗರ್ ಎಂಬಾಕೆಯು ದೇಶದಲ್ಲೆಲ್ಲಾ ಓಡಾಡಿದಳಷ್ಟೆ. ಬೆಂಗಳೂರು ಮೈಸೂರು ನಗರಗಳಿಗೂ ಬಂದು ಹೋದಳು. ಭಾರತ ಮಹಿಳೆಯರನ್ನು ಕಂಡು ಆಕೆಯು "ಭಾರತ ಮಹಿಳೆಯರ ರೂಪಲಾವಣ್ಯಗಳು ಜಗತ್ತಿನ ಮತ್ತೆ ಯಾವ ಜನಾಂಗದಲ್ಲೂ ಇಲ್ಲ. ಅವರ ಸ್ನಾನ ಮಾನಗಳ ಮಾತು ಹಾಗಿರಲಿ, ಅವರ ದುಃಖ ದಾರಿದ್ರ್ಯದಲ್ಲಿ ನೋಬಗಿದ ಕೂಲಿಗಾರ ಕೊಂಪೆಗಳ ಸ್ತ್ರೀಯರಲ್ಲಿ ಸಹ ಸೌಂದರ್ಯ ಕಂಡೆ" ಎಂಬುದಾಗಿ ಹೇಳಿದಳು.

ಭಾರತ ಮಹಿಳೆಯರು ಹಿಂದುಳಿದವರ, ಅಂಧಶ್ರದ್ಧೆಯುಳ್ಳವರು, ಗುಲಾಮರು. ಸಂತಾನ ನಿರೋಧ ಸಲಕರಣೆಗಳ ಹೆಸರುಗಳನ್ನೇ ಅರಿಯದವರು.

ನಿಷೇಧ.

ಮಾರ್ಗರೆಟ್ ಸ್ಯಾಂಗರು ಭರತಖಂಡದ ಸಂತಾನ ಹೆಚ್ಚು ಹಾಳಾಗುತ್ತದೆ. ಹೊಟ್ಟೆಗಿಲ್ಲದೆ ಜನರು ಹುಳು ಹುಪ್ಪಟೆಗಳಂತಾಗಿ ಇಲ್ಲದಾಗಬೇಕಾಗುತ್ತದೆ. ಆದ ಕಾರಣ ಸಂತಾನ ನಿರೋಧ ಮಾಡಬೇಕ. ಮಕ್ಕಳಾಗದಂತೆ ತಡೆಯುವ ಸಾಧನಗಳನ್ನು ಉಪಯೋಗಿಸಬೇಕು. ಎಂಬದಾಗಿ ಉಪದೇಶ ಮಾಡಿದರು.

ವಿ ಕ

ಬೀಜಗಳು

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ರೂ ೪
೨೫ ಯುರೋಪ ೫
೨೫ ಹೂವಿನ ಬೀಜಗಳು ೫

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ರೂ ೧೦

ನಿಂಬೆ ಕೊಡಗು ಕಿತ್ತಳೆ ಚೇಪೆ ಪನ್ನೇರಳೆ ದಾಳಿಂಬರ ಚಕ್ರವರ್ತಿ ಕೇವು ಪಿಟ್ಟೀಸ್ ಅಂಜೂರ ದ್ರಾಕ್ಷಿ ಗಿಡಗಳು ಡಜನ್ ೧ಕ್ಕೆ ರೂ ೯
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ರೂ ೧೨
ಪಾರಿಜಾತ ನಂದಿವರ್ಧನ, ದಾಸವಾಳ ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ರೂ ೬

ನಮ್ಮಲ್ಲಿ ದೊರೆಯುವ ಗಿಡ ಬೀಜ, ತರಕಾರಿ, ಹೂವು ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕೆಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್

ಇಂಟರ್‌ನ್ಯಾಷನಲ್ ಸೀಡ್ ಕಂಪೆನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರು ಸಿಟಿ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ—(ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ).
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ



Distributors for South Kanara —

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ

ಕಾಫಿ ಎಸ್ಟೇಟುಗಳಿಗೆ

ಬೇಕಾಗಿರುವ

ಚಕ್ ರೋಲು,

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆಗೆ

ಬರೆಯಿರಿ,

ಅಥವಾ

...

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟುಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ಸಾಮಾನ್ಯ ವಿಜ್ಞಾನ.			
				ಎರಡನೇ ದರ್ಜೆ	0	8	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	8	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜಿ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೊಲಸಿನ ಕಾಳಪ್ಪ
ಅಗಸನ ಮುದ್ದೆ
ಇಲಿಗಳ ಪಳ್ಳಿ ಧೈ
ಅಂಗಳ ಮಗ್ಗ.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ. 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ತಯಾರಾಗಿದೆ!

ಗ್ರೇ ಟು ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೊಸಿಯೊಲೊಜಿ.

ಟೆಕ್ಸ್ಟುಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ ರೂ. 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಅದನ್ನು ಹೊಸ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗಲಿದೆ

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ
ಮಂಗಳೂರು

ರೈಲು ಬಂಡಿಗಳ ಸಮಯ

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12-45	ಮ 2 40
ಶಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್		
ಪೆಸೆಂಜರು	ಬೆ 8 25	ಮ 1 20
ಕಾಸರಗೋಡು		
ಪೆಸೆಂಜರು	ಸಂಜೆ 3 20	ಸಂಜೆ 6 15

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

! ನಿಮಗೆ ತಿಳಿದಿರುವುದೆ? ?

ವಿಜ್ಞಾನದ ಅರಿವು

ನೀರಿನಲ್ಲಿ ನೋಡಲು ಯಾಕೆ ಸಾಧ್ಯವಾಗುವುದಿಲ್ಲ?

ಗಾಳಿಯಲ್ಲಿ ನೋಡಿದಂತೆ ಕಣ್ಣುಗಳಿಗೆ ನೀರಿನಲ್ಲಿ ನೋಡಲು ಸಾಧ್ಯವಾಗುವುದಿಲ್ಲ. ನಾವು ಈಜಾಡುತ್ತಿರುವ ಸಮಯ ಅಥವಾ ತಲೆಯನ್ನು ನೀರಿನಲ್ಲಿ ಮುಳುಗಿಸುವ ಸಮಯ ಕಣ್ಣುಗಳನ್ನು ಮುಚ್ಚಬೇಕಾಗುತ್ತದೆ. ಇಲ್ಲದಿದ್ದರೆ ನೀರು ನಮ್ಮ ಕಣ್ಣುಗಳನ್ನು ಸೇರಿ ಒಂದು ಭಯಂಕರ ನೋವನ್ನು ಉಂಟುಮಾಡುವುದು. ಇದಕ್ಕೆ ಕಾರಣವೇನು? ಕಣ್ಣಿನಲ್ಲಿರುವ ನಮ್ಮ ದೃಷ್ಟಿಗೆ ಕಾರಣವಾಗಿರುವ ಗುಂಡುವು ನೀರು ತಗಲಿದ ಕೂಡಲೇ ನೋಯುತ್ತದೆ. ಮತ್ತೆ ಯಾವುದನ್ನೂ ನೋಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಕಣ್ಣು ಮುಚ್ಚಬೇಕಾಗುತ್ತದೆ ಹಾಗೆಯೇ ಗಾಳಿಯಲ್ಲಿ ನೀರಿನ ಪಸೆ ಇದ್ದರೆ ನಮ್ಮ ಕಣ್ಣುಗಳು ನೋಯಿಸುವುವು. ಇದರಿಂದಲೇ ಮಳೆಯಲ್ಲಿ ನಡೆಯುತ್ತಿರುವಾಗ ನಮಗೆ ಸರಿಯಾಗಿ ಗೋಚರಿಸಲು ಸಾಧ್ಯವಾಗುವುದಿಲ್ಲ

* * *

ವಿಚಿತ್ರ ಮಗು!

ಎಲ್ಲಾ ಪ್ರಾಣಿಗಳೂ ಜನನಕ್ಕೆ ಬರುವುದು ಬತ್ತಲೆ ಸ್ಥಿತಿಯಲ್ಲಿ. ಮನುಷ್ಯನು ಕೂಡ ಹಾಗೆಯೇ. ಆದರೆ, ಕೊಂಗೇರಿಯವಿನ ಮಗುವು ಬಹಳ ವಿಚಿತ್ರಕರ! ಜನನದ ಸಮಯ ಇದು ಒಂದು ಇಂಚು ಉದ್ದವಿರುತ್ತದೆ ನಂತರ ಅಘಾತವಾಗಿ ಬೆಳೆಯುತ್ತವೆ ಇವುಗಳು ಜನಿಸುವ ಸಮಯ ಚಿಕ್ಕನ ಮರಿಗಳಂತೆ ಕುರುಡಾಗಿರುತ್ತವೆ.

* * *

ಓದಲಿಕ್ಕಾಗದ ಹಳೇ ರಿಕಾರ್ಡುಗಳನ್ನು ಓದುವ ಉಪಾಯ

ನಮ್ಮಲ್ಲಿ ಅನೇಕರಲ್ಲಿ ಮುಖ್ಯವಾದ ಅನೇಕ ಹಳೇ ರಿಕಾರ್ಡುಗಳು ಇವೆ. ಈಗ ಇವುಗಳನ್ನು ಓದಲು ಸಾಧ್ಯವಾಗುವುದಿಲ್ಲ ಎಲ್ಲವೂ ಮಾಸಿ ಹೋದಂತೆ ಕಾಣುತ್ತದೆ ಇಂಥಾ ರಿಕಾರ್ಡುಗಳನ್ನು ಸರಿಯಾಗಿ ಓದುವ ಒಂದು ಉಪಾಯವನ್ನು ಕಂಡುಹಿಡಿದಿರುವರು ಹ್ಯಾಡ್ರೊಜನ್ ಸಲಪ್ಫ್ಯಾಡಿನ ಒಂದು ದ್ರಾವಕವನ್ನು ಸಿದ್ಧಪಡಿಸಿ ಆ ಹಳೇ ರಿಕಾರ್ಡನ್ನು ಅದರಲ್ಲಿ ತೊಳೆದರೆ ಅಕ್ಷರದ ಗುರುತುಗಳು ಅದರಲ್ಲಿ ಸರಿಯಾಗಿ ಕಾಣುತ್ತವೆ ಅವುಗಳ ಮೇಲೆ ಕಪ್ಪು ಶಾಯಿಯಿಂದ ಜಾಗ್ರತೆಯಲ್ಲಿ ಬರೆದರೆ ಆ ಹಳೇ ರಿಕಾರ್ಡು ಸ್ಪಷ್ಟವಾಗುವುದು.

* * *

ಈ ಭೂಮಿಯ ನೀರಿನಾಂಶವು ಸಮುದ್ರವಂತೆ.

ಆದರೆ, ನೆಲಪ್ರದೇಶಗಳಲ್ಲಿ ಜನಿಸಿದ ಅನೇಕ ನದಿಗಳು ಸಮುದ್ರಗಳಿಗೆ ಧಾರಾಳ ನೀರನ್ನು ಒಗಿಸುತ್ತವೆ ಮಳೆಯು ನೀರಿನ ಹೆಚ್ಚಿನಂಶವು ಸಮುದ್ರದಲ್ಲಿ ಬೀಳುತ್ತಿದೆ ನಿಜ. ಆದರೆ, ಬೆಟ್ಟ, ಪರ್ವತಗಳಲ್ಲಿ ಜನಿಸಿದ ನದಿಗಳಿಂದ ಸಮುದ್ರಕ್ಕೆ ಧಾರಾಳ ನೀರು ಸಲ್ಲುತ್ತಿದೆ ಅಟ್ಲಾಂಟಿಕ್ ಸಾಗರಕ್ಕೆ ನದಿಗಳಿಂದ ಒಂದು ದಿವಸದಲ್ಲಿ ೯೹ ಕ್ಯೂಬಿಕ್ ಮೈಲು ನೀರು ಸೇರುತ್ತಿದೆ

* * *

ಶುದ್ಧ ರೂಪದಲ್ಲಿ ಸಿಗುವ ಲೋಹಗಳು.

ನಾವು ಉಪಯೋಗ ಮಾಡುತ್ತಿರುವ ಲೋಹಗಳನ್ನು ಭೂಮಿಯಿಂದ ಅಗೆಯುತ್ತಿದ್ದಾರೆ. ಅವುಗಳು ಶುದ್ಧ ರೂಪದಲ್ಲಿ ಸಿಗುತ್ತವೆಂದು ಕೆಲವರ ಅಭಿಪ್ರಾಯ ಎರಡು ಲೋಹಗಳ ಹೊರತು ಮಿಕ್ಕವುಗಳು ಮಿಶ್ರಿತ ರೂಪದಲ್ಲಿ ಸಿಗುತ್ತವೆ. ಇವುಗಳನ್ನು ಸುಟ್ಟು ವಿಂಗಡಿಸ ಬೇಕಾಗುತ್ತದೆ ಭಂಗಾರ ಮತ್ತು ಪ್ಲೆಟಿನಮ್ ಶುದ್ಧವಾದ ರೀತಿಯಲ್ಲಿ ಸಿಕ್ಕುವ ಲೋಹಗಳು.

* * *

ವಿಟೆಮಿನ್‌ಗಳು.

ವಿಟೆಮಿನ್‌ಗಳು ಮನುಷ್ಯನ ಬೆಳವಣಿಗೆಗೂ, ಆರೋಗ್ಯಕ್ಕೂ ಅತೀ ಅಗತ್ಯವಾದವುಗಳೆಂದು ಕಂಡುಹಿಡಿದಿರುವರು ಒಂದು ಕುಟುಂಬದ ರಕ್ಷಣೆ ಮಾಡುವಾತನಿಗೆ ಇವುಗಳ ಜ್ಞಾನವು ಇರಲೇ ಬೇಕು

ವಿಟೆಮಿನ್‌ಗಳಲ್ಲಿ ನಾಲ್ಕು ತರದವುಗಳಿವೆ—A B C D. ಇವುಗಳ ಶೋಧೆಯಿಂದ ಅನೇಕರಿಗೆ ನವಜೀವನವು ದೊರಕಿರುತ್ತದೆ

ನಮ್ಮಲ್ಲಿ ಶಿಶುಗಳು ಗ್ರಾಣಿ ರೋಗ ಪೀಡಿತರಾಗುವುದು ಬಹಳ. ಅವುಗಳಲ್ಲಿ ಹೆಚ್ಚಿನವುಗಳು ಮೃತವಾಗುವುವು ಈ ಗ್ರಾಣಿ ರೋಗಕ್ಕೆ (Rickets) ಕಾರಣವೇನು? ಅವುಗಳಿಗೆ ಬೇಕಾದ ಸೂರ್ಯನ ಪ್ರಕಾಶವು ಸಿಕ್ಕದುದರಿಂದ ಆದರೆ, ಗ್ರಾಣಿರೋಗಕ್ಕೆ ಇದೊಂದೆ ಕಾರಣವಲ್ಲ ಇನ್ನೂ ಹಲವು ಕಾರಣಗಳಿವೆ ವಿಟೆಮಿನ್ನುಗಳು ಸರಿಯಾಗಿ ಅವರ ದೇಹಗಳನ್ನು ಸೇರದಿರುವುದು ಗ್ರಾಣಿ ರೋಗಕ್ಕೆ ಒಂದು ಮಹಾ ಕಾರಣವಾಗಿರುತ್ತದೆ ಶಿಶುಗಳನ್ನು ಗ್ರಾಣಿರೋಗದಿಂದ ದೂರ ಮಾಡಬೇಕಾದರೆ ಅವುಗಳಿಗೆ ವಿಟೆಮಿನ್ D ಯನ್ನು ಕೊಡಬೇಕು ಇದು ಕೊಡ್ಲಿವರ್ ಎಣ್ಣೆಯಲ್ಲಿದೆ ಕೆಲವು ಮೀನುಗಳಲ್ಲಿದೆ

ವಿಟೆಮಿನ್ A

ಇದು ನಾವು ಉಪಯೋಗ ಮಾಡುತ್ತಿರುವ ಎಲ್ಲಾ ಕಾಯಿಪಲ್ಯಗಳಲ್ಲಿದೆ ತುಪ್ಪದಲ್ಲೂ ಇದೆ ಈ ವಿಟೆಮಿನ್ನುಗಳನ್ನು ನಾವು ಬೇಕಾದಷ್ಟು ಸೇವಿಸಿದರೆ ನಮಗೆ ಶೀತ, ಕೆಮ್ಮು ಇತ್ಯಾದಿಗಳು ದೂರವಾಗುವುವು ವಿಟೆಮಿನ್ನ Aಯು ನಮ್ಮ ದೇಹವನ್ನು ಸೇರದಿದ್ದರೆ ಅದು ಬತ್ತಿಹೋಗುವುದು. ಚರ್ಮ ರೋಗಗಳು ಪರಿಣಮಿಸುವುವು ದೃಷ್ಟಿ ಮಾಂದ್ಯವಾಗುವುದು ಕುರುಡರಾಗಲೂ ಬಹುದು

ವಿಟೆಮಿನ್ B

ಇದು ನಾವು ಸೇವಿಸುವ ಅನೇಕ ಆಹಾರ ಪದಾರ್ಥಗಳಲ್ಲಿದೆ ಇದು ನಾವು ಸೇವಿಸದಿದ್ದರೆ ನಮ್ಮ ದೇಹದಲ್ಲಿ ಲೆಕ್‌ಟಿಕ್ ಎಸಿಡ್ ಎಂಬ ಹಾನಿಕರ ದ್ರಾವಕವು ಹೆಚ್ಚಾಗುವುದು ಈ ದ್ರಾವಕವು ನಮ್ಮ ಸ್ನಾಯುಗಳಲ್ಲಿ ಉಂಟಾಗುತ್ತದೆ ನಾವು ಕೆಲಸ ಮಾಡುತ್ತಿರುವಾಗ. ವಿಟೆಮಿನ್ Bಯು ಇದನ್ನು ನಮ್ಮ ದೇಹದಿಂದ ತೆಗಿಯುತ್ತದೆ ಈ ದ್ರಾವಕವನ್ನು ಸ್ನಾಯುಗಳಿಂದ ಹೊರಮಾಡದಿದ್ದರೆ ಪಕ್ಷವಾತವು ಪರಿಣಮಿಸುವುದು

ವಿಟೆಮಿನ್ C

ಇದು ಹಾಲಿನಲ್ಲಿಯೂ, ಕಾಯಿಪಲ್ಯಗಳಲ್ಲಿಯೂ ಇರುತ್ತದೆ ಇದರ ಅಭಾವದಿಂದ ಮನುಷ್ಯನಲ್ಲಿ 'ಸ್ಕ್ರುವೀ' ಎಂಬ ಭಯಂಕರ ರೋಗವು ಬರುವುದು ಇದರಲ್ಲಿ ನಾವು ಖಚಿತ ಯುದ್ಧದ ಸಮಯ ಈ ರೋಗವು ಸೈನಿಕರನ್ನು ಕಾಡಿರುತ್ತದೆ ಸೈನಿಕರಿಗೆ ವಿಟೆಮಿನ್C ಸಿಗದಿರುವುದೆ ಇದಕ್ಕೆ ಮುಖ್ಯ ಕಾರಣ ಬಾಡದ ತರಕಾರಿಯಲ್ಲಿಯೂ, ಹಣ್ಣುಹಂಪಲಗಳಲ್ಲಿಯೂ, ಇದುತುಂಬಾ ಇದೆ ಇವುಗಳು ನಮಗೆ ತುಂಬಾ ದೊರಕುವುದರಿಂದ, ನಮ್ಮಲ್ಲಿ ಮೇ[illegible] ರೋಗ ಬಹಳ ಕಡಿಮೆ. (ಸ್ಕ್ರುವೀ ಎಂದ[illegible] ಕಾಲು ಮುಖ, ಇಡೀ ದೇಹವು ಬಾತುಹೋಗುವುದು, ಹೃದಯದ ಶಕ್ತಿಯು ಕಡಿಮೆಯಾಗುವುದು, ಕೊನೆಗೆ ಹೃದಯದ ಚಲನೆಯು ನಿಲ್ಲುವುದು)

ನಮ್ಮಲ್ಲಿ ಹಾಲಿನ ವಿಚಾರವನ್ನು ಯಾರೂ ಹೆಚ್ಚು ಗಮನ ಮಾಡುವುದಿಲ್ಲ. ತಾಯಂದಿರು ತುಂಬಾ ಹಾಲನ್ನು ಸೇವಿಸಬೇಕು. ಎಲ್ಲರೂ ಹಾಲನ್ನು ಧಾರಾಳ ಸೇವಿಸಬೇಕು ಅಂತೆಯೆ ಬಾಡದ ಹಂಪಲಗಳನ್ನೂ ಕಾಯಿಪಲ್ಯಗಳನ್ನೂ ಸೇವಿಸಬೇಕು ಹಾಗಾದರೆ ನಾವು ಆರೋಗ್ಯವಂತರಾಗಿ ಬಾಳುವೆವು

ವಿಟೆಮಿನ್ A

ನಿರ್ಮಲವಾದ ಚರ್ಮ, ಶಕ್ತಿಯುಕ್ತ ಮಾಂಸಗಳು (cells) ಶೀತ ಮತ್ತು ಕೆಮ್ಮಿನ ಬಾಧೆಯಿಂದ ಹೊರಗಾಗುವದು, ದೃಷ್ಟಿ ಒಳ್ಳೇದಾಗುವುದು ಇದು ಮುಳ್ಳಂಗಿಯಲ್ಲೂ, ಮೃಗಗಳ ಕೊಬ್ಬಿನಲ್ಲೂ, ಹಸಿ ತರಕಾರಿಯಲ್ಲಿಯೂ, ಕೊಡ್ಲಿವರ್ ಎಣ್ಣೆಯಲ್ಲಿಯೂ ಇದೆ

ವಿಟೆಮಿನ್ B.

ದೇಹದ ಬೆಳವಣಿಗೆಗೆ ಯೋಗ್ಯವಾದುದು ಹೃದಯ ಕಮಲಕ್ಕೆ ಶಕ್ತಿಕೊಡುವುದು ನರಗಳನ್ನು ಬಲಪಡಿಸುವುದು, ಸ್ನಾಯುಗಳು ಚೆನ್ನಾಗಿ ಬೆಳೆಯುವುವು ಕೋಳಿ ಮೊಟ್ಟೆಯಲ್ಲಿಯೂ ಹಾಲಿನಲ್ಲಿಯೂ ಮಾಂಸದಲ್ಲಿಯೂ, ರಂದು ಬಣ್ಣದ ಬ್ರೆಡ್ಡಿನಲ್ಲಿಯೂ ಕೆಲವು ಕಾಯಿಗಳಲ್ಲೂ, ಬೀಜಗಳಲ್ಲೂ ದವಸ ಧಾನ್ಯಗಳಲ್ಲೂ ಇದೆ

ವಿಟೆಮಿನ್ C

ಒಳ್ಳೆ ಹಲ್ಲುಗಳು ಆರೋಗ್ಯವಂತ ರಕ್ತ, ಬಾಡದ ಹಣ್ಣುಹಂಪಲಗಳಲ್ಲೂ, ಕಿತ್ತಳೆ ಹಣ್ಣಿನಲ್ಲೂ, ಫ್ರೂಟ್ ಸಾಲಡ್‌ನಲ್ಲಿಯೂ ಕಾಯಿಪಲ್ಯಗಳಲ್ಲೂ ಇದೆ

ವಿಟೆಮಿನ್ D

ಗಟ್ಟಿಯಾದ ಎಲುಬುಗಳು ಮತ್ತು ಹಲ್ಲುಗಳು. ಕೊಡ್‌ಲಿವರ್ ಎಣ್ಣೆಯಲ್ಲಿಯೂ ಮೀನುಗಳಲ್ಲಿಯೂ, ಸೂರ್ಯ ಪ್ರಕಾಶದಲ್ಲೂ ಇದೆ

\+ \+ \+ \+

'ಕೆನ್ಸರ್' ಎಂಬ ಮಹಾ ರೋಗ

ಈ ರೋಗಕ್ಕೆ ಹಲವು ಕಾರಣಗಳಿವೆ ಆದರೆ, ಈ ಕೆಳಗಿನದು, ಬಹಳ ಶೋಧೆ ನಡಿಸಿ ಕಂಡುಹಿಡಿದ ಕಾರಣವಾಗಿರುತ್ತದೆ

ಸ್ತ್ರೀ ಗರ್ಭದಲ್ಲಿ ಕೆಲವು 'ಟಿಶ್ಯೂ'ಗಳಿಂದ ಮನುಷ್ಯನ ವಿವಿಧ ಅಂಗಾಂಗಗಳು ಸಿದ್ಧವಾಗುತ್ತವೆ ಚರ್ಮವು ಒಂದು 'ಟಿಶ್ಯೂ'ವಿನಿಂದ ಸಿದ್ಧವಾಗುತ್ತದೆ ಹೀಗೆ ಒಂದೊಂದು ಅಂಗಕ್ಕೆ ಬೇರೆ ಬೇರೆ ಟಿಶ್ಯೂಗಳು ಕಾರಣವಾಗಿವೆ ಕೆಲವರಲ್ಲಿ 'ಕೆನ್ಸರ್'ನ್ನು ಸಿದ್ಧಪಡಿಸುವ ಟಿಶ್ಯೂವು ಅಡಕವಾಗಿರುತ್ತದೆ ಇಂಥಾ ಒಂದು ಟಿಶ್ಯೂವಿನಿಂದ ಮನುಷ್ಯನಲ್ಲಿ ಸಾಧಾರಣ ೩೦ ಯಾ ೪೦ ವರ್ಷ ಪ್ರಾಯದ ನಂತರ 'ಕೆನ್ಸರ್' ಎಂಬುದು ಬೆಳೆಯಲಾರಂಭಿಸುತ್ತದೆ ಇದು ದೇಹದ ಯಾವ ಭಾಗದಲ್ಲೂ ಬೆಳೆಯುತ್ತದೆ ಇದು ಬೆಳೆದರೆ ಮನುಷ್ಯನನ್ನು ಬದುಕಿಸುವುದು ಅಸಾಧ್ಯ ಆತನ ದೇಹದ ಸಂಪೂರ್ಣ ಶಕ್ತಿಯು ಈ ಕೆನ್ಸರಿನ ಬೆಳವಣಿಗೆಗೆ ಹೋಗುವುದು 'ಕೆನ್ಸರ'ನ್ನು ಕಡಿದ ಮನುಷ್ಯನು ಬದುಕಿಸುವುದು ಕಷ್ಟ ಯಾಕೆಂದರೆ ಕೆನ್ಸರ'ನ್ನು ಬೆಳೆಯಿಸುವ ಟಿಶ್ಯೂ ಮನುಷ್ಯನ ಸಂಪೂರ್ಣ ದೇಹದಲ್ಲಿ ಹರಡಿಕೊಂಡಿರುತ್ತದೆ. ಆದರೆ ಕೆಲವು ಟಿಶ್ಯೂಗಳು ಕೆನ್ಸರಿನಂತೆ 'ಟ್ಯೂಮರ್'ಗಳನ್ನು ಬೆಳೆಯಿಸುತ್ತವೆ ಇವುಗಳು ಅಷ್ಟು ಅಪಾಯಕರವಲ್ಲ. ಇವುಗಳನ್ನು ಕಡಿದು ಮನುಷ್ಯರನ್ನು ಬದುಕಿಸಬಹುದು. ಈ ಕೆನ್ಸರ ಮಹಾ ವ್ಯಾಧಿಯನ್ನು 'ರೆಡಿಯಮ್' ಎಂಬ ನವೀನ ವಸ್ತುವಿನಿಂದ ಗುಣಪಡಿಸಲು ಸಾಧ್ಯವಾಗುವುದಂತೆ

ಉದರವೇದನೆಯಿಂದ ಜೀವದ ಆಶೆಯನ್ನೇ ತೊರೆದನು

ಮಿ। D ಎಂಬವನು ಕಳೆದ ಯುದ್ಧಕಾಲದಿಂದ ಉದರವೇದನೆಯಿಂದ ನರಳುತ್ತಿದ್ದನು ವೇದನೆಯನ್ನು ನೀಗಿಸಲು ನಾನಾ ನಮೂನೆಯ ಮದ್ದುಗಳನ್ನು ಸೇವಿಸಿ ಹಣವನ್ನು ನೀರಿನಂತೆ ಸುರಿದನು ಆದರೂ ಫಲಕಾರಿಯಾಗಲಿಲ್ಲ ಕಡೆಗೆ ಚಿಂತಿಸಿ ಇನ್ನೂ ಸಾಯುವ ತನಕ ಇದು ಶಮನವಾಗುವ ಬಗೆಯಿಲ್ಲವೆಂದು ಭಾವಿಸಿದನು. ಕಡೆಗೆ ಒಬ್ಬರು ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನ ಒಂದು ಬಾಟ್ಲಿಯನ್ನು ಶಿಫಾರಸು ಮಾಡಿದರು ಅಂತೆಯೆ ಅದನ್ನು ಎರಡುಮೂರಾವರ್ತಿ ಸೇವಿಸಲು ಅವನ ಉದರಶೂಲೆಯು ಗುಣವಾಯಿತು ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಗಳಿಗೆ ದೇವರೆ ಕಳುಹಿಸಿದ್ದು ಎಂತ ಅವನ ಭಾವನೆ ಮಿ। Dಯು ಸ್ವತಃ ಬರೆದ ಪತ್ರವನ್ನು ಓದಿ

"ನನಗೆ ಯುದ್ಧಕಾಲದಿಂದಲೂ ಭಯಂಕರ ಉದರ ಶೂಲೆಯಿತ್ತು ಎಷ್ಟೆಷ್ಟು ಪ್ರಯತ್ನಪಟ್ಟರೂ ಅದು ಶಮನವಾಗಲಿಲ್ಲ ಕಡೆಗೊಬ್ಬರು ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಶಿಫಾರಸು ಮಾಡಿದರು. ಅದನ್ನು ಎರಡುಮೂರು ಸಲ ಸೇವಿಸಿದ ಒಡನೆ ನನಗೆ ಉದರವೇದನೆಯು ನಿಂತಿತು ನಿಮ್ಮ ಮದ್ದಿನಿಂದಲೆ ನನಗೆ ಗುಣವಾಯಿತೆನ್ನುವುದರಲ್ಲಿ ಸಂಶಯವಿಲ್ಲ ನನಗೆ ಮೊದಲೆ ತಿಳಿದಿದ್ದರೆ ನಾನಿಷ್ಟರ ವರೆಗೆ ಇಷ್ಟೆಲ್ಲಾ ಕಷ್ಟಗಳನ್ನು ಸಹಿಸಬೇಕಾಗಿರುತ್ತಿದ್ದಿಲ್ಲ ಉದರ ಶೂಲೆಯುಳ್ಳವರಿಗೆ ಇದು ದಿವ್ಯ ಔಷಧ"

ನಿಮಗೂ ಉದರವೇದನೆಯಿದ್ದರೆ ನಮ್ಮ ಪೌಡರನ್ನು ಸೇವಿಸಿ ಮಿ Dಯು ಪಡೆದ ಸುಖವನ್ನು ನೀವು ಪಡೆಯಿರಿ ಕೆಂಪು ಮುದ್ರೆಯುಳ್ಳ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ಕೆಮಿಸ್ಟರಿಂದ ಪಡೆಯುವಂತೆ ಎಚ್ಚರಿರಿ



ಎಂಬ ದಸ್ಕತು ಇದೆ ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ.



ಅಲಭ್ಯ ಲಾಭ! ಸುವರ್ಣ ಸಂದರ್ಭ!

ಪ್ರಥಮ ಬಹುಮಾನ ರೂ. 5000 ಎರಡನೇ ಬಹುಮಾನ ರೂ. 2500

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ"

ತೆಗೆಯುವ ತಾರೀಖು 8-6-1936 ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ.

ಸೋಡ್ತಿಯ ಮೊಬಲಗು: ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ಸಂಪೂರ್ಣ ಪುಸ್ತಕಗಳನ್ನು ಮಾರುವವರಿಗೆ ಯಾ ಕೊಂಡುಕೊಳ್ಳುವವರಿಗೆ ವಿಶೇಷ ಬಹುಮಾನಗಳಿವೆ

ಸಂಪೂರ್ಣ ಪುಸ್ತಕಗಳನ್ನು ಮಾರಾಟ ಮಾಡುವವರಿಗೆ ಪ್ರತ್ಯೇಕ ನಗದಿ ಕಮಿಶನ್ ಕೂಡಾ ಇದೆ.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಟಿಕೇಟು ಪುಸ್ತಕಗಳ ಮಾರಾಟಕ್ಕಾಗಿ ದಕ್ಷರೂ ಉತ್ಸಾಹಿಗಳೂ ಆದ ಏಜಂಟರು ಬೇಕಾಗಿದೆ.

ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

WANTED.

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Government-New session opens in June,

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿರುವ)
ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and inusre against unemployment. Datails may be had on application to the Manager.

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc, in guaranteed colours. Silk Sarees & Coatings a Speciality. Work is conducted under the supervision of Textile experts. We undertake special orders to suit individual tastes.

Please inspect our goods at:—

Raghavendra Ranga Pai, Car Street, Mangalore.

We deal in grey & Coloured Yarns, Dyes, Chemicals & Handloom accessories.

M. Venkatesha Ranga Pai,
Proprietor

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಡ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳ್ವರಿ
ಡಾ॥ ಗೌತಮ ರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅಶಕ್ತತೆ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ ಮುಂಬಾಯಿ ೨
ಏಜೆಂಟ್ಸ್ ಪಾ ಕಂಪೆನಿ ಮಂಗಳೂರು
[ರಕ್ತದೃಷ್ಟಿಹಾರ ಇಂಗ್ಲಿಷ್ ಅಥವಾ ಮರಾಠಿಯು].

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.



ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 8 – 0 — 0.

ಚ್ಯವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ. 2–8–0. ½ಕ್ಕೆ ರೂ. 1-5–0.

ಕಸ್ತೂರಿ ಮಿಶ್ರಿತ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ. 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲೂಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1 - 8 — 0.

ಮೇಹ ಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು, ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0–2–6. 12ಕ್ಕೆ ರೂ. 1–12–0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು. 4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

The Canara Banking Corporation Udipi Ltd

Head office:—UDIPI, S. K., (Incorporated in British India) Tel.-'BANKING' **ESTD. 1906.**

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras (George Town), **6. Bunder Mangalore, 7. Mercara** (North Coorg), **& 8. Virarajendrapet** (South Coorg

DEPOSITS:

1922	1926	1930	1934	30 11 '35
ರೂ. 2,28,419/	6,43,940/	20,23,887/	24,95,329/	**27,40,312/-**

SAVINGS BANK ACCOUNTS

INTEREST allowed at 3½ %

Facilities } 1 Withdrawal by **CHEQUES.** 2 Production of pass books unnecessary at the time of withdrawal 3 Accounts transferred **FREE** of charge from one office to another

TO INSURE OR TO REPRESENT

CONSULT—

The Bombay Life Assurance Company Ltd

ESTD 1908

Offers
(1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for large assurances
(4) Permanent Disability Benefits without extra
(5) Increased rate of Bonuses
(6) Accident Risk on a small extra payment

Attractive Rates of Commission & Bonuses to Agents

For particulars apply to any of our Offices

Kochikar Brothers. Branch Secretaries

OFFICES 1 'Gautam Nivas' Charni Rd, Girgaum, Bombay No 4 (2 P B 337 Mount Road Madras (3) Visveshwarapuram Circle, Bangalore City (4) Hazur Road Calicut (5) Car Street, Mangalore, S K. (6) Udipi (S India)

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ ಉಳುಕು ಕುತ್ತಿಗೆ ಭುಜ, ಹಲ್ಲುವೇದನೆಗಳಿಗೂ, ಎದೆನೋವು ಗಾಯಗಳು, ವಾತು ಕೊಳ್ಳುವುದು, ಚೇಳು ವಿಷ ಮುತಾದ ಬೇನೆ ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತಲೆಕಜ್ಜಿ ಹುಳುಕಡ್ಡಿ ಪಿತ್ತ ಉಪದ್ರವ, ತಲೆಹುಣ್ಣು, ವಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿ

ಮೊದಲನೇ 5 ವರ್ಷಗಳ ಮೌಲ್ಯಪರೀಕ್ಷಣದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. —— ಯಥೋಚಿತವಾದ ಪುರಸ್ಕಾರಗಳಿವೆ —— ತಪ್ಪದೆ ವ್ಯವಹಾರ ಬೆಳೆ

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವಾರ್ಷಿಕ ಚಂದಾ ೩ ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M.3406

ಟಪ್ಪಾಲು ಹಾಸಲು ಸೇರಿ ರೂ. ೩-೧೨-0

for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR:—
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY.
Buy a policy in THE BOMBAY LIFE
Madras Branch Secretaries
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮುಕ್ಕೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ಕೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೨ ॥

ಪುಸ್ತಕ ೩೦. ಮಂಗಳೂರು ತಾ. ೨೮ನೇ ಶುಕ್ರವಾರ ಫೆಬ್ರವರಿ ೧೯೩೬. (28-2-'36) ಸಂಚಿಕೆ ೯

ಜರ್ಮನಿಯ ಯುದ್ಧಸಿದ್ಧತೆಗಳು:

ಜರ್ಮನಿಯ ಏಕಾಧಿಪತಿಯಾದ ಹಿಟ್ಲರನೂ, ಮತ್ತು ಸಂಗ್ರಾಮ ನಾಯಕರಾದ ಜನರಲ್ ಗೋವರಿಂಗರೂ, ಜರ್ಮನಿಯ ವಾಯುಬಲದ ಪರೀಕ್ಷೆಯನ್ನು ಮಾಡುತ್ತಿದ್ದಾರೆ. ಸಮಸ್ತ ಜರ್ಮನಿಯು ಯುದ್ಧಸಿದ್ಧತೆಯ ಚಟುವಟಿಕೆಯಲ್ಲಿ ಮಗ್ನವಾಗಿರುತ್ತದೆ. ವಾಯುಬಲವನ್ನು ಜಗತ್ತಿನಲ್ಲಿ ಅತಿ ಶ್ರೇಷ್ಠತರದ್ದಾಗಿ ನಿರ್ಮಿಸಬೇಕೆಂದೂ. ನಾಜಿ ಸರಕಾರದ ಧ್ಯೇಯ. ಇತ್ತೀಚೆಗೆ, ಬ್ರಿಟಿಷರ ವಾಯುಬಲರಚನೆಯನ್ನು ಗುಟ್ಟಿನಿಂದ ತಿಳಿಯಲು ಹೋದ ಜರ್ಮನಿ ಗೂಢಾಚಾರನನ್ನು ಸೆರೆಹಿಡಿದಿರುತ್ತಾರೆ. ಈ ಬಾರಿಯ ಮಹಾಯುದ್ಧವು ಈ ವಿಮಾನಗಳಿಂದಾಗಿ, ಭಯಂಕರವಾಗಿ ಪರಿಣಮಿಸುವುದು. ಅನೇಕ ದೇಶಗಳು ಭಯಂಕರ ಭೂಕಂಪಗಳ ಪ್ರಭಾವಗಳಿಗೆ ಸಿಲುಕಿದಂತೆ, ನುಚ್ಚುನೂರಾಗಿ ಹೋಗುವ ಸಂಭವಗಳಿವೆ.

ಇವರು ಆಫ್ರಿಕಾದ ಜಂಜಿಬಾರಿನ ಪ್ರಸಿದ್ಧ ಎಡ್ವೋಕೇಟರು. ಈಗ ಹಿಂದೂದೇಶಕ್ಕೆ ಬಂದಿರುವರು. ಭಾರತೀಯರಿಗೆ; ಜಂಜಿಬಾರಿನಲ್ಲಿ ಅನೇಕ ಅನುಸಂಕಟಗಳು ಒದಗಿವೆ. ಇವುಗಳನ್ನು ಇಂಡಿಯಾ ಸರಕಾರಕ್ಕೆ ತಿಳಿಸಲು ಇವರು ಇಲ್ಲಿಗೆ ಬಂದಿರುವರು.

ಶ್ರೀ। ತ್ಯಾಬ ಅಲಿಗಳವರು.

REEL-14

SWADESHA BHIMANI

CONTD FROM:

15 FEBRUARY-1935

TO

21 FEBRUARY-1936

CONTD IN NEXT REEL

D.V.
31.3.80

MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI